೮೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ
ದಿನಾಂಕ ೨೪,೨೫ ಮತ್ತು ೨೬ ನವೆಂಬರ್, ೨೦೧೭
ಸ್ಥಳ : ಮಹಾರಾಜ ಕಾಲೇಜು ಮೈದಾನ, ಮೈಸೂರು

ಮನುಷ್ಯ ಜಾತಿ ತಾನೊಂದೆ ವಲಂ

ಪ್ರಧಾನ ಸಂಪಾದಕರು
ನಾಡೋಜ ಡಾ. ಮನು ಬಳಿಗಾರ್

# ನುಡಿಗಂಧ

ಸಂಪಾದಕರು
...ಯ್ಯ ಪೂಜಾರ್

ನುಡಿಗಂಧ

JNANA001617



# ನುಡಿಗಂಧ

## ೮೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

## ದಿನಾಂಕ ೨೪,೨೫ ಮತ್ತು ೨೬ ನವೆಂಬರ್, ೨೦೧೭

## ಸ್ಥಳ : ಮಹಾರಾಜ ಕಾಲೇಜು ಮೈದಾನ, ಮೈಸೂರು


ಪ್ರಧಾನ ಸಂಪಾದಕರು

**ನಾಡೋಜ ಡಾ. ಮನು ಬಳಿಗಾರ್**

ಸಂಪಾದಕರು

**ಡಾ. ಬೈರಮಂಗಲ ರಾಮೇಗೌಡ**

**ಡಾ. ಡಿ.ಕೆ. ಚಿತ್ತಯ್ಯ ಪೂಜಾ**



**ಕನ್ನಡ ಸಾಹಿತ್ಯ ಪರಿಷತ್ತು**

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು- ೫೬೦೦೧೮

NUDI GANDHA (A collection of papers submitted at 83th Akhila Bharatha Kannada Sahitya Sammelana, Mysore) Edited by: Dr. Byramangala Ramegowda, Dr. D.K. Chittaiah Poojar Published by: Nadoja Dr. Manu Baligar, President, Kannada Sahitya Parishattu, Pampa Mahakavi Road, Chamarajapete, Bengaluru - 560018 Pages: x + 420 Price: Rs. 260-00: 2020

ಪ್ರಥಮ ಮುದ್ರಣ : ೨೦೨೦

ಪ್ರತಿಗಳು : ೫೦೦

ಬೆಲೆ : ಇನ್ನೂರ ಅರವತ್ತು ರೂಪಾಯಿಗಳು

© ಹಕ್ಕುಗಳನ್ನು ಕಾಯ್ದಿರಿಸಿದೆ.

ಸಮ್ಮೇಳನಾಧ್ಯಕ್ಷರು

**ಪ್ರಕಟಣಾ ಸಮಿತಿ**

**ನಾಡೋಜ ಡಾ. ಮನು ಬಳಿಗಾರ್**

**ಅಧ್ಯಕ್ಷರು**

ಸಮ್ಮೇಳನಾಧ್ಯಕ್ಷರು ಡಾ. ಎಚ್.ಎಸ್. ವೆಂಕಟೇಶಮೂರ್ತಿ

೮೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

ಸಂಚಾಲಕರು, ಪ್ರಕಟಣಾ ವಿಭಾಗ ಡಾ. ಪದ್ಮರಾಜ ದಂಡಾವತಿ

**ಸದಸ್ಯರು**

ಶ್ರೀ ಜರಗನಹಳ್ಳಿ ಶಿವಶಂಕರ್ ಶ್ರೀ ಎ.ಆರ್. ಉಜ್ಜನಪ್ಪ

ಡಾ. ಮೂಡಾಕೂಡು ಚಿನ್ನಸ್ವಾಮಿ ಶ್ರೀ ಸಂಜಯ ಅಡಿಗ

ಪ್ರೊ ಧರಣೇಂದ್ರ ಕುರಕುರಿ ಶ್ರೀ ಪಾರಂಪಳ್ಳಿ ನರಸಿಂಹ ಐತಾಳ್

ಶ್ರೀ ರಂಜಾನ್ ದರ್ಗಾ **ಗೌರವ ಕಾರ್ಯದರ್ಶಿಗಳು**

ಡಾ. ಬಿ.ಕೆ. ರವಿ

ಡಾ. ತಮಿಳ್ ಸೆಲ್ವಿ

ಡಾ. ದೊಡ್ಡಮಲ್ಲಯ್ಯ

ಡಾ. ಎಚ್.ಎಲ್. ಪುಷ್ಪ

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಡಾ. ರಾಜಶೇಖರ ಹತಗುಂದಿ

ಶ್ರೀ ವ.ಚ. ಚನ್ನೇಗೌಡ

**ಗೌರವ ಕೋಶಾಧ್ಯಕ್ಷರು**

ಶ್ರೀ ಪಿ. ಮಲ್ಲಿಕಾರ್ಜುನಪ್ಪ

ಮುದ್ರಣ : ಬಿ.ಎಂ.ಶ್ರೀ. ಆಫ್‌ಸೆಟ್ ಅಚ್ಚುಕೂಟ, ಕನ್ನಡ ಸಾಹಿತ್ಯ ಪರಿಷತ್ತು

# ಅಧ್ಯಕ್ಷರ ಮಾತು

ಕರ್ನಾಟಕ ಏಕೀಕರಣ ಸಾಧನೆಯ ಜೊತೆಗೆ ಕನ್ನಡ ಭಾಷೆ ಮತ್ತು ಸಾಹಿತ್ಯ ಹಾಗೂ ಸಂಸ್ಕೃತಿಗಳ ಸಂವರ್ಧನೆಯನ್ನೂ ಧ್ಯೇಯವಾಗಿಸಿಕೊಂಡು ಕನ್ನಡ, ಕನ್ನಡಿಗ, ಕರ್ನಾಟಕದ ಏಳಿಗೆಯನ್ನು ಗುರಿಯಾಗಿಸಿಕೊಂಡಿರುವ ಕನ್ನಡ ಸಾಹಿತ್ಯ ಪರಿಷತ್ತಿಗೆ ಇದೀಗ ೧೦೫ ವರ್ಷಗಳು ತುಂಬುತ್ತಿವೆ. ಶತಮಾನವನ್ನು ದಾಟಿ ಹೊಸಕಾಲ ಮಾನಗಳಿಗೆ ಅನುಗುಣವಾಗಿ 'ಕನ್ನಡ-ಕನ್ನಡಿಗ-ಕರ್ನಾಟಕತ್ವ'ವನ್ನು ಬಲಿಷ್ಠಗೊಳಿಸುವ ಸವಾಲುಗಳನ್ನು ಸ್ವೀಕರಿಸುತ್ತಲೇ ಹೊಸ ಹೊಸ ಕಾರ್ಯಯೋಜನೆ ಗಳನ್ನು ರೂಪಿಸಿಕೊಳ್ಳುತ್ತಾ, ಅವುಗಳನ್ನು ಕಾರ್ಯರೂಪಕ್ಕೆ ತರುತ್ತಾ, ಮುನ್ನಡೆಯುತ್ತಿರುವ ಪರಿಗೆ ವಿಶ್ವದಾದ್ಯಂತ ಇರುವ ಕನ್ನಡಿಗರು ಸ್ಪಂದನೆ ನೀಡುತ್ತಿರುವುದು ನಮಗೆ ಹರ್ಷ ತಂದಿದೆ. ಇನ್ನಷ್ಟು ಇಂಥ ಕಾರ್ಯಯೋಜನೆಗಳನ್ನು ಕೈಗೊಳ್ಳಲು ಹುರುಪು ತುಂಬುತ್ತಿದೆ ಎಂಬುದು ನನ್ನ ಭಾವನೆ.

ಮೊದಲಿನಿಂದ ಕನ್ನಡ ಸಾಹಿತ್ಯ ಪರಿಷತ್ತು ಅಖಿಲ ಭಾರತ ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನಗಳನ್ನು ಆಯೋಜಿಸಿಕೊಂಡು ಬರುತ್ತಿರುವುದು ನಿಮ್ಮೆಲ್ಲರಿಗೂ ತಿಳಿದಿರುವ ಸಂಗತಿ, ಮೈಸೂರಿನಲ್ಲಿ ನಡೆದ ಸಮ್ಮೇಳನದಲ್ಲಿ ಕನ್ನಡ ನಾಡು, ನುಡಿ, ಗಡಿ, ಶಿಕ್ಷಣ, ದಲಿತ ಲೋಕ, ಮಾಧ್ಯಮ, ಮಹಿಳೆ, ವಿಮರ್ಶೆ, ಸಂಶೋಧನೆ, ನ್ಯಾಯ, ಬಹುತ್ವದ ಸವಾಲುಗಳು, ಮೈಸೂರು ರಾಜರ ಕೊಡುಗೆ, ಕರ್ನಾಟಕದ ಏಕೀಕರಣ, ಅಲಕ್ಷಿತ ಜನಸಮುದಾಯಗಳು, ಯುವಜನತೆ, ತಂತ್ರಜ್ಞಾನ, ಮಕ್ಕಳ ಸಾಹಿತ್ಯ, ಜಲ, ಕೃಷಿ, ವಿಜ್ಞಾನ ಮುಂತಾದ ಸಾಂಸ್ಕೃತಿಕ ಸಂಗತಿಗಳನ್ನು ಕುರಿತಂತೆ ನಾಡಿನ ಖ್ಯಾತ ವಿದ್ವಾಂಸರು, ತಜ್ಞರು ಮಂಡಿಸುವ ವಿಚಾರಗಳನ್ನು ಕನ್ನಡ ಜನಸ್ತೋಮ ಆಲಿಸಿ ತಲೆದೂಗಿ ಮೆಚ್ಚುಗೆ ವ್ಯಕ್ತಪಡಿಸಿರುವುದೂ ಉಂಟು. ಆದರೆ ಆ ರೀತಿಯ ಚರ್ಚೆ, ಸಂವಾದಗಳು ಗಾಳಿಯಲ್ಲಿ ತೇಲಿ ಮಾಯವಾಗ ಬಾರದು ಎಂಬುದು ನಮ್ಮ ಅಂಬೋಣ. ಸಮ್ಮೇಳನದಲ್ಲಿ ಮಂಡಿತವಾದ ವಿಚಾರಗಳನ್ನು ಲೇಖನಗಳಾಗಿಸಿ ಪುಸ್ತಕ ರೂಪದಲ್ಲಿ ಹೊರತರುವ ಸಂಪ್ರದಾಯವನ್ನು ಪರಿಷತ್ತು ಅನುಸರಿಸಿಕೊಂಡು ಬರುತ್ತಿದ್ದು, ಇತ್ತೀಚಿನ ವರ್ಷಗಳಲ್ಲಿ ನಿಂತು ಹೋಗಿದ್ದ ಆ ಪರಿಪಾಠವನ್ನು ಪುನರಾರಂಭಿಸಿ ಪ್ರಬಂಧಗಳನ್ನು ಸಂಕಲಿಸಿ ಪ್ರಕಟಿಸಿ ಸಹೃದಯರಿಗೆ ನೀಡುವ ಕಾರ್ಯ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಇದರ ಮೂಲಕ ಸಮ್ಮೇಳನಗಳಲ್ಲಿ ಕಂಡುಕೊಂಡ ಫಲಿತವನ್ನು ಶಾಶ್ವತಗಳಿಸುವ ಉದ್ದೇಶ ನಮ್ಮದು.

ಮೈಸೂರಿನಲ್ಲಿ ಜರುಗಿದ ೮೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಮ್ಮ ನಿರೀಕ್ಷೆಗೂ ಮೀರಿ ಯಶಸ್ಸು ಕಂಡಿದೆ. ಕನ್ನಡ ಸಾಹಿತ್ಯ, ಸಂಸ್ಕೃತಿ, ನೆಲ, ಜಲ, ಭಾಷೆ ಕುರಿತಾದ ಗೋಷ್ಠಿಗಳಿಗೆ ಜನಸಾಮಾನ್ಯರು ಸ್ಪಂದಿಸಿದ ರೀತಿ ಅನನ್ಯವಾದದ್ದು.

ಸಮ್ಮೇಳನದ ಮುಖ್ಯ ವೇದಿಕೆ ಹಾಗೂ ಸಮಾನಾಂತರ ವೇದಿಕೆಗಳಲ್ಲಿನ ಗೋಷ್ಠಿಗಳು ಜನಮನವನ್ನು ಆಕರ್ಷಿಸಿದವು. ಅರ್ಥಪೂರ್ಣ ಸಂವಾದಕ್ಕೆ ಹಾದಿಮಾಡಿಕೊಟ್ಟ ಕನ್ನಡದ ಜಾತ್ರೆ, ಜನಸಾಮಾನ್ಯರ ಕ್ರಿಯಾಶೀಲ ಭಾಗವಹಿಸುವಿಕೆಯ ಮೂಲಕ ಕನ್ನಡದ ಬಗೆಗಿನ ನಮ್ಮ ಗೌರವಾಭಿಮಾನಗಳು ಮತ್ತಷ್ಟು ಹೆಚ್ಚುವಂತೆ ಮಾಡಿತು. ಸಾಹಿತ್ಯ ಸಮ್ಮೇಳನದ ಯಶಸ್ಸಿಗೆ ಕರ್ನಾಟಕ ಸರ್ಕಾರದ ಆರ್ಥಿಕ ನೆರವು, ಮೈಸೂರು ಜಿಲ್ಲಾಡಳಿತದ ತೊಡಗಿಸಿಕೊಳ್ಳುವಿಕೆ ಕಾರಣವಾಯಿತು. ಇಂಥ ಅಭೂತಪೂರ್ವ ಸಮಾರಂಭಕ್ಕೆ ಕಾರಣವಾದವರೆಲ್ಲರನ್ನೂ ಕನ್ನಡ ಸಾಹಿತ್ಯ ಪರಿಷತ್ತು ಕೃತಜ್ಞತಾಪೂರ್ವಕವಾಗಿ ನೆನಪಿಸಿಕೊಳ್ಳುತ್ತದೆ.

ಸಮ್ಮೇಳನದಲ್ಲಿ ಆಯೋಜಿಸಿದ್ದ ೧೮ ಗೋಷ್ಠಿಗಳಲ್ಲಿ ಐವತ್ತಕ್ಕೂ ಹೆಚ್ಚು ಮಂದಿ ಕನ್ನಡ ನಾಡಿನ ಖ್ಯಾತ ವಿದ್ವಾಂಸರೂ, ಸಾಹಿತಿಗಳೂ, ಹೋರಾಟಗಾರರೂ, ಕೃಷಿ ತಜ್ಞರೂ, ಸಂಸ್ಕೃತಿ ಚಿಂತಕರೂ ವಿದ್ವತ್ಪೂರ್ಣವಾದ ಪ್ರಬಂಧ ಮಂಡಿಸಿದ್ದಾರೆ. ಇವೆಲ್ಲವೂ ಕನ್ನಡ ಹಾಗೂ ಕರ್ನಾಟಕದ ಜನರ ಬದುಕಿಗೆ ದಿಕ್ಸೂಚಿಯಾಗಬಲ್ಲಂಥವು.

ಹೀಗೆ ಶ್ರಮವಹಿಸಿ ನಡೆಸಿದ ಮಹತ್ವಪೂರ್ಣವಾದ ಚಿಂತನ, ಮಂಥನದ ಸಾರ ವ್ಯರ್ಥ ವ್ಯಯವಾಗಬಾರದು. ಅಲ್ಲಿ ಆಡಿದ ಮಾತುಗಳನ್ನು, ಮಂಡಿಸಲಾದ ವಿಚಾರಗಳನ್ನು ಚಪ್ಪಾಳೆ, ಮೆಚ್ಚುಗೆಗಳಿಗೆ ಮಾತ್ರ ಸೀಮಿತವಾಗಿಸದೆ ಅವುಗಳನ್ನು ಮತ್ತೆ ಮತ್ತೆ ಮೆಲುಕು ಹಾಕುತ್ತಿರಬೇಕು, ಉಲ್ಲೇಖಿಸುತ್ತಿರಬೇಕು ಮತ್ತು ಅವುಗಳಿಂದ ಎಚ್ಚರಗೊಳ್ಳುತ್ತಿರಲೂ ಇರಬೇಕು ಎನ್ನುವ ಉದ್ದೇಶದಿಂದ ಕೃತಿ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ತಮ್ಮೆಲ್ಲ ಒತ್ತಡಗಳ ಮಧ್ಯೆ ಸಕಾಲಕ್ಕೆ ಪ್ರಬಂಧಗಳನ್ನು ಕಳಿಸಿಕೊಟ್ಟು ಕೃತಿ ಹೊರಬರಲು ಕಾರಣಕರ್ತರಾದ ಎಲ್ಲಾ ವಿದ್ವಾಂಸರಿಗೂ ನಾನು ಆಭಾರಿಯಾಗಿದ್ದೇನೆ.

೮೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿಚಾರ ಮಂಡನೆ ಮಾಡಿ ಅದನ್ನು ಯಶಸ್ವಿಯಾಗಿಸಿದ ಎಲ್ಲರಿಗೂ ಹಾಗೂ ಸಮ್ಮೇಳನದ ಮಾತು, ಚರ್ಚೆ, ವಿಚಾರ ನಿರೂಪಣೆಗಳಿಗೆ ಕೃತಿರೂಪಧಾರಣೆ ಮಾಡಿದ ಡಾ. ಬೈರಮಂಗಲ ರಾಮೇಗೌಡ ಮತ್ತು ಡಾ. ಡಿ.ಕೆ. ಚಿತ್ತಯ್ಯ ಪೂಜಾರ್ ಅವರಿಗೂ ಪರಿಷತ್ತು ಕೃತಜ್ಞವಾಗಿದೆ.

೨೫-೮-೨೦೨೦ **ನಾಡೋಜ ಡಾ. ಮನು ಬಳಿಗಾರ್**

ಅಧ್ಯಕ್ಷರು

# ಸಂಪಾದಕರ ಮಾತು

ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ೨೦೧೭ ಡಿಸೆಂಬರ್ ೨೪ ರಿಂದ ೨೬ರ ವರೆಗೆ ನಡೆದ ೮೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಧಾನ ವೇದಿಕೆ ಮತ್ತು ಸಮಾನಾಂತರ ವೇದಿಕೆಗಳ ವಿವಿಧ ಗೋಷ್ಠಿಗಳಲ್ಲಿ ಮಂಡಿಸಲಾದ ವಿಚಾರಗಳ ಲೇಖನ ರೂಪವನ್ನು ಈ ಕೃತಿಯಲ್ಲಿ ಸಂಕಲಿಸಲಾಗಿದೆ. ಶಿಕ್ಷಣ, ದಲಿತ ಲೋಕ, ಮಾಧ್ಯಮ, ಮಹಿಳೆ, ಕೃಷಿ, ವಿಮರ್ಶೆ, ಸಂಶೋಧನೆ, ಸಾಮಾಜಿಕ ನ್ಯಾಯ, ಬಹುತ್ವದ ಸವಾಲುಗಳು, ಮೈಸೂರು ರಾಜರ ಕೊಡುಗೆ ಕರ್ನಾಟಕ ಏಕೀಕರಣ, ಅಲಕ್ಷಿತ ಜನ ಸಮುದಾಯಗಳು, ಕರ್ನಾಟಕ ನೀರಾವರಿ, ಯುವಜನತೆ, ಜನಪರ ಚಳವಳಿಗಳು, ಕನ್ನಡ ತಂತ್ರಜ್ಞಾನ, ಕನ್ನಡದ ಬಳಕೆ, ಮಕ್ಕಳ ಸಾಹಿತ್ಯ, ಕಲಾ ಜಗತ್ತು ಹೀಗೆ ೧೮ ಗೋಷ್ಠಿಗಳಲ್ಲಿ ಮಾತಾಡಿದವರು, ಸಂವಾದಿಸಿದವರು, ಪ್ರತಿಕ್ರಿಯಿಸಿದವರು ನೂರ ಹತ್ತಕ್ಕೂ ಹೆಚ್ಚು ವಿದ್ವಾಂಸರು, ನಿರ್ದಾಕ್ಷಿಣ್ಯ ವ್ಯಕ್ತಿತ್ವದ, ಮೊನಚು ಮಾತಿನ, ವಿಡಂಬನಾ ಚಾತುರದ ಬಂಡಾಯ ಸಾಹಿತಿ ಪ್ರೊ. ಚಂದ್ರಶೇಖರ ಪಾಟೀಲರು ಸಮ್ಮೇಳನಾಧ್ಯಕ್ಷರಾಗಿದ್ದರಿಂದ ಸ್ಫೂರ್ತಿಗೊಂಡವರಂತೆ ವಿಚಾರ ಮಂಡನೆ ಮಾಡಿದ ಎಲ್ಲರೂ ಉತ್ಸಾಹದಿಂದ ಮಾತಾಡಿದರು. ವಿಚಾರದ ಆಳಕ್ಕೆ ಇಳಿದರು. ಮತ್ತು ಇಳಿಯುವ ಪ್ರಯತ್ನ ಮಾಡಿದರು. ಸಮ್ಮೇಳನದ ಗೋಷ್ಠಿಗಳಲ್ಲಿ ನಿಗದಿಪಡಿಸುವ ಸಮಯದ ಮಿತಿಯಲ್ಲಿ ಮಾತನಾಡಲು ಒಪ್ಪಿಕೊಂಡ ವಿಷಯಕ್ಕೆ ಸಂಪೂರ್ಣ ನ್ಯಾಯ ದೊರಕಿಸುವುದು ಕಷ್ಟವೇ. ಪ್ರಜ್ಞಾವಂತ ಶ್ರೋತೃಗಳು ಇದನ್ನು ಚೆನ್ನಾಗಿ ಗ್ರಹಿಸಬಲ್ಲರು. ವಿಚಾರ ಮಂಡನೆ ಮಾಡಿದವರಿಗೂ ಇನ್ನೂ ಹೇಳುವುದು ಬಹಳಷ್ಟಿತ್ತು ಎನ್ನಿಸುತ್ತದೆ. ಈ ಕೊರತೆಯನ್ನು ತಪ್ಪಿಸಿ, ಒಂದೊಂದೂ ವಿಷಯದ ಸಮಗ್ರ ನೋಟವನ್ನು ಸಹೃದಯರಿಗೆ ಒದಗಿಸಿ ಕೊಡಬೇಕೆನ್ನುವ ಉದ್ದೇಶದಿಂದಲೇ ಸಮ್ಮೇಳನದ ಎಲ್ಲ ಗೋಷ್ಠಿಗಳಲ್ಲಿ ಮಂಡನೆಯಾದ ವಿಚಾರಗಳನ್ನು ಮಂಡಿಸಿದವರಿಗೆ ತೃಪ್ತಿಯಾಗುವಂತೆ ವಿವರವಾಗಿ ಬರೆದುಕೊಡಲು ಅವಕಾಶ ಕಲ್ಪಿಸಿ, ಅವುಗಳನ್ನು ಪುಸ್ತಕ ರೂಪದಲ್ಲಿ ದಾಖಲಿಸಿದಾಗ ಅದಕ್ಕೆ ಹೆಚ್ಚಿನ ಮಹತ್ವ ಬರುತ್ತದೆ. ಈ ಬಗೆಯ ಪುಸ್ತಕ ಪ್ರಕಟಣೆಯನ್ನು ಕನ್ನಡ ಸಾಹಿತ್ಯ ಪರಿಷತ್ತು ಹಿಂದಿನಿಂದಲೂ ಮಾಡುತ್ತ ಬಂದಿತ್ತು. ಯಾಕೋ ಏನೋ ಅದು ಇತ್ತೀಚಿನ ವರ್ಷಗಳಲ್ಲಿ ನಿಂತು ಹೋಗಿತ್ತು. ಅದರ ಅಗತ್ಯವನ್ನು ಮನಗಂಡು ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರರು ಮರುಚಾಲನೆಗೆ ತಂದಿದ್ದು, ಅವರ ಅವಧಿಯಲ್ಲಿ ರಾಯಚೂರಿನಲ್ಲಿ ನಡೆದ ಮೊದಲ, ಅಂದರೆ ೮೨ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಎಲ್ಲ ಗೋಷ್ಠಿಗಳ ವಿಚಾರ ಮಂಡನೆಯನ್ನು ಪುಸ್ತಕ ರೂಪದಲ್ಲಿ ಹೊರತರಲಾಗಿದೆ.

ಸಾಹಿತ್ಯ ಜಾತ್ರೆ, ನುಡಿಹಬ್ಬ ಎಂದೇ ಪ್ರಸಿದ್ಧವಾಗಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಮೂರು ದಿನಗಳ ಅವಧಿಯಲ್ಲಿ ಉದ್ಘಾಟನೆ, ಸಮಾರೋಪ, ಸನ್ಮಾನಗಳನ್ನು ಹೊರತುಪಡಿಸಿದರೆ ಕವಿಗೋಷ್ಠಿಗಿಂತ ವಿಚಾರ ಗೋಷ್ಠಿಗಳದ್ದೇ ಮೇಲುಗೈ. ಕನ್ನಡ ಸಾಹಿತ್ಯ ಸಂಸ್ಕೃತಿಯ ಪರಂಪರೆಯ ಮೇಲೂ ಕಣ್ಣಿರಿಸಿ, ಇಕ್ಕಟ್ಟು ಬಿಕ್ಕಟ್ಟುಗಳನ್ನು ಬಿಡದೆ, ವರ್ತಮಾನಕ್ಕೂ ಸ್ಪಂದಿಸುವಂತೆ ಗೋಷ್ಠಿಗಳಲ್ಲಿ ಮಾತಾಡಲು ವಿಷಯಗಳನ್ನು ಗೊತ್ತುಪಡಿಸುವ, ಆಯಾ ವಿಷಯಗಳನ್ನು ಕುರಿತು ಮಾತಾಡಲು ಸಮರ್ಥರನ್ನು ಹಳೆಬೇರು ಹೊಸ ಚಿಗುರಿನಿಂದ ಆಯ್ಕೆ ಮಾಡುವ ಕೆಲಸ ತುಂಬಾ ಜವಾಬ್ದಾರಿಯುತವಾದದ್ದು, ಅಷ್ಟೇ ಎಚ್ಚರಿಕೆಯಿಂದ ಮಾಡಬೇಕಾದ್ದು, ಈ ಜವಾಬ್ದಾರಿ ಮತ್ತು ಎಚ್ಚರಿಕೆಗಳ ಸಮರ್ಪಕ ನಿರ್ವಹಣೆಯಿಂದಾಗಿ ೪೪೦ ಪುಟಗಳನ್ನು ದಾಟಿ ನಡೆದಿರುವ ಈ ಪುಸ್ತಕ ಅತ್ಯುತ್ತಮ ಎನಿಸುವಂಥ, ವಿಚಾರಪೂರಿತ ಲೇಖನಗಳನ್ನು ಒಳಗೊಳ್ಳುವುದು ಸಾಧ್ಯವಾಗಿದೆ. ಅದರಿಂದಲೇ ಪ್ರಾಥಮಿಕ ಶಿಕ್ಷಣದಿಂದ ದೂರವಾಗುತ್ತಿರುವ ಕನ್ನಡವನ್ನು ಕುರಿತು ಹೇಳುವಾಗ ಅಂತಾರಾಷ್ಟ್ರೀಯ ಪಠ್ಯಕ್ರಮದ ಶಾಲೆಗಳ ಅವೈಜ್ಞಾನಿಕ ಬೆಳವಣಿಗೆ ಸಮಾಜವನ್ನು ಎರಡು ಧ್ರುವಗಳಾಗಿ ಇಬ್ಭಾಗಿಸಿದ್ದು ಈ ವ್ಯವಸ್ಥೆ ದುರಸ್ತಿಯಾಗುವುದು ಯಾವ ಕಾಲಕ್ಕೆ? ಅಲ್ಲಿಯವರೆಗೆ ವಂಚಿತರು ಮೌನವಾಗಿಯೇ ಸಹಿಸಿಕೊಳ್ಳಬೇಕೇ? ಎಂದು ಪ್ರಶ್ನಿಸುವುದು ಸಾಧ್ಯವಾಗಿದೆ. ಉನ್ನತ ಶಿಕ್ಷಣದ ಸವಾಲುಗಳನ್ನು ಕುರಿತು ಹೇಳುವಾಗ ಶಿಕ್ಷಣವೆಂದರೆ ಹೊರಗಿನ ಹೇರಿಕೆಯಲ್ಲ, ಒಳಗಿನ ಅರಳುವಿಕೆ. ಅದು ಬರಿಯ ಕಲಿಯುವಿಕೆ ಅಲ್ಲ, ಬದುಕನ್ನು ಕಾಣುವಿಕೆ ಎಂದು ಹೇಳಲು ಸಾಧ್ಯವಾಗಿದೆ. ಶೋಷಿತ ಮಹಿಳೆಯರು ಶೋಷಣೆಯ ಛದ್ಮವೇಷಗಳನ್ನು ಗುರುತಿಸಿ ಸಂಬಂಧಗಳ ಮೋಹ ಮತ್ತು ಅಧೀನತ್ವದಿಂದ ತಮ್ಮತನವನ್ನು ದಕ್ಕಿಸಿಕೊಂಡು ಒಳಗಿನ ಆತ್ಮವಿಶ್ವಾಸ, ಕರ್ತೃತ್ವ ಶಕ್ತಿ, ಲೋಕದೃಷ್ಟಿಗಳನ್ನು ವಿಕಸನಗೊಳಿಸಿಕೊಂಡಾಗ ಶೋಷಣೆ ಮುಕ್ತವಾದ ವಾತಾವರಣ ನಿರ್ಮಾಣ ವಾಗುತ್ತದೆ ಎಂದು ಹೇಳಲು ಸಾಧ್ಯವಾಗುತ್ತದೆ. ಸಂಶೋಧನೆಯನ್ನು ಗಂಭೀರವಾಗಿ ಪರಿಗಣಿಸದ ಸಂಶೋಧಕರು ಈ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದಿದ್ದರೆ ಮುಂದಿನ ದಿನಗಳಲ್ಲಿ ನಮ್ಮ ಸಂಶೋಧನೆಗಳಿಗೆ ಯಾವ ಬೆಲೆಯೂ ಇರಲಾರದು ಎನ್ನಲು ಸಾಧ್ಯವಾಗುತ್ತದೆ. ಮಾನಸಿಕ ಸಂಕೀರ್ಣತೆಗೆ ಒಳಗಾದವರು ರೂಪಿಸುವ ಷಡ್ಯಂತ್ರ, ಕುತಂತ್ರ, ಹತ್ಯೆ ಈ ಮುಂತಾದವೆಲ್ಲ ಅಸಹಿಷ್ಣುತೆಯ ಅಭಿವ್ಯಕ್ತಿಗಳೆಂದು ಹೇಳಲು ಸಾಧ್ಯವಾಗುತ್ತದೆ. ಕಾವೇರಿ ನದಿಗೆ ಸಂಬಂಧಿಸಿದ ಇತ್ತೀಚಿನ ಬೆಳವಣಿಗೆಗಳನ್ನು ಕುರಿತ ಅಂಕಿ ಅಂಶ ಸಮೇತವಾದ ಸುದೀರ್ಘ ಲೇಖನ ನಾಡಿನ ಜನತೆಗೆ ಗೊತ್ತಿಲ್ಲದ, ಆದರೆ ತಿಳಿದುಕೊಳ್ಳಲೇ ಬೇಕಾದ ಬಹುಮುಖ್ಯ ಸಂಗತಿಗಳನ್ನು ಪ್ರಸ್ತಾಪಿಸುತ್ತದೆ.

“ನನ್ನ ಹಾಡು ನನ್ನದು' ಎನ್ನುವ ಶೀರ್ಷಿಕೆಯಲ್ಲಿ ಯುವಗೋಷ್ಠಿಯನ್ನು, ಅದರೊಂದಿಗೆ ಮಕ್ಕಳ ಸಾಹಿತ್ಯ ಗೋಷ್ಠಿಯನ್ನು ಏರ್ಪಡಿಸಿ ಹಿರಿಯರೊಂದಿಗೆ ವೇದಿಕೆಯಲ್ಲಿ ಕುಳಿತು ಮಾತನಾಡಲು ಅವಕಾಶ ಕಲ್ಪಿಸಿರುವುದು ಉಲ್ಲೇಖನೀಯ

ಸಂಗತಿಗಳಾಗಿವೆ. ನಾವೆಲ್ಲ ನೋಡುತ್ತಿರುವಂತೆಯೇ ಬಾಲಕವಿಯಾಗಿ ಕಾಣಿಸಿಕೊಂಡು, ಕಥೆ ಲೇಖನಗಳನ್ನೂ ಬರೆಯತೊಡಗಿ, ತಾನೇ ಪತ್ರಿಕೆಯೊಂದರ ಸಂಪಾದಕನಾಗಿ, ಅಂಕಣಕಾರನಾಗಿ, ಪುಸ್ತಕಗಳನ್ನು ಪ್ರಕಟಿಸುತ್ತ, ಸಭೆ ಸಮಾರಂಭಗಳಲ್ಲೂ ಭಾಗವಹಿಸಿ ಭಾಷಣ ಮಾಡುತ್ತ ಬೆರಗು ಮೂಡಿಸಿದ ಅಂತಃಕರಣ 'ನನ್ನ ನಾಳೆ-ನನ್ನ ಕನಸು' ಶೀರ್ಷಿಕೆಯಲ್ಲಿ ಮಾತಾಡುವಾಗ ಕಂಡಿರುವ ಕನಸು ಅಸಾಮಾನ್ಯವಾದುದು. ಅದು ಕೇವಲ ಬಾಲಕನೊಬ್ಬನ ಕನಸಲ್ಲ. ಶಿಕ್ಷಣತಜ್ಞರ ಕನಸೂ ಆಗಿದೆಯೆನ್ನುವುದನ್ನು ಓದಿಯೇ ತಿಳಿಯಬೇಕು.

ಜ್ಞಾನ ಭಂಡಾರವನ್ನೇ ತುಂಬಿಕೊಂಡಿರುವ ವೈವಿಧ್ಯಮಯ ವಿಷಯಗಳನ್ನು ಕುರಿತ ಲೇಖನಗಳನ್ನು ಸಂಪಾದಕರಾಗಿ ಒಂದೇ ಕಡೆ ಓದಲು ಸಾಧ್ಯವಾದ್ದರಿಂದ ನಮ್ಮ ತಿಳುವಳಿಕೆಯನ್ನು ವಿಸ್ತರಿಸಿಕೊಂಡಿದ್ದೇವೆಂದು, ವರ್ತಮಾನದ ಸ್ಪಂದನೆಗೆ ಸಜ್ಜುಗೊಳಿಸಿಕೊಂಡಿದ್ದೇವೆಂದು ಹೇಳಲು ನಮಗೆ ಯಾವುದೇ ಬಗೆಯ ಮುಜುಗರವಿಲ್ಲ. ಸಂಪಾದನೆಯ ಕೆಲಸ ಎನ್ನುವುದು ಬೌದ್ಧಿಕವಾಗಿ ಬೆಳೆಯುವುದೂ ಆಗಿರುತ್ತದೆಂದು ಇಂಥದೊಂದು ಅವಕಾಶವನ್ನು ನಮಗೆ ಪ್ರೀತಿಯಿಂದ ಒದಗಿಸಿಕೊಟ್ಟ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ನಾಡೋಜ ಡಾ. ಮನು ಬಳಿಗಾರರಿಗೆ ನಮ್ಮ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. ಜನ ಓದಿ ಹೆಚ್ಚಿನ ಪ್ರಮಾಣದಲ್ಲಿ ಇದರ ಉಪಯೋಗವನ್ನು ಪಡೆದುಕೊಳ್ಳಲೆಂದು ಆಶಿಸುತ್ತೇನೆ.

**ಡಾ. ಬೈರಮಂಗಲ ರಾಮೇಗೌಡ**

**ಡಾ. ಡಿ.ಕೆ. ಚಿತ್ತಯ್ಯ ಪೂಜಾರ್**

# ಪರಿವಿಡಿ


**ಪ್ರಧಾನ ವೇದಿಕೆ :**

ಗೋಷ್ಠಿ : ೧ - ಶಿಕ್ಷಣ : ವರ್ತಮಾನದ ಸವಾಲುಗಳು

೧. ಪ್ರಾಥಮಿಕ ಶಿಕ್ಷಣ - ದೂರವಾಗುತ್ತಿರುವ ಕನ್ನಡ

* ಟಿ.ಎಂ. ಕುಮಾ

೨. ಉನ್ನತ ಶಿಕ್ಷಣ : ಗುಣಮಟ್ಟದ ಸವಾಲುಗಳು

* ಡಾ. ಜಯಪ್ರಕಾಶ ಮಾವಿನಕುಳಿ

೩. ಕೌಶಲ್ಯ ಆಧಾರಿತ ಉದ್ಯೋಗಮುಖಿ ಶಿಕ್ಷಣ

* ಡಾ. ವಿಷ್ಣುಕಾಂತ ಚಟಪಲ್ಲಿ

**ಗೋಷ್ಠಿ : ೪ ಮಹಿಳೆ : ಹೊಸಲೋಕ ಮೀಮಾಂಸ**

೧. ಶೋಷಣೆಯ ಛದ್ಮದೇಷಗಳು ೨೫

ಪ್ರೊ. ಸಬಿಹಾ ಭೂಮಿಗೌಡ

ಗೋಷ್ಠಿ : ೫ ಕರ್ನಾಟಕ ಕೃಷಿ : ಸಂಕ್ರಮಣ ಸ್ಥಿತಿ

೧. ಪರ್ಯಾಯ ಕೃಷಿ ಮಾದರಿಗಳು ಮತ್ತು ಸಾಧ್ಯತೆಗಳು ೩೭

ಡಾ. ಕು. ನಾರಾಯಣಗೌಡ

9. ಕೃಷಿ ಮಾರುಕಟ್ಟೆಯ ಸವಾಲುಗಳು ೪೯

ಡಾ. ಸಿದ್ದನಗೌಡ ಪಾಟೀಲ

ಗೋಷ್ಠಿ : ೬ ಕನ್ನಡ ಸಂಶೋಧನೆ ಮತ್ತು ವಿಮರ್ಶೆ

೧. ಕನ್ನಡ ಸಂಶೋಧನೆ : ಮುಂದಿನ ಹೆಜ್ಜೆಗಳು

* ಡಾ. ಪುರುಷೋತ್ತಮ ಬಿಳಿಮಲೆ

ಗೋಷ್ಠಿ : ೮-ಸಮಕಾಲೀನ ಸಂದರ್ಭ : ಬಹುತ್ವದ ಸವಾಲುಗಳು

೧. ನವ ರಾಷ್ಟ್ರೀಯತೆ - ಧಾರ್ಮಿಕ ಮೂಲಭೂತವಾದ ೧೧೩

ಡಾ. ಪ್ರಧಾನ್ ಗುರುದತ್ತ

೨. ಅಸಹಿಷ್ಣುತೆ - ವಿಷಮ ವಿಸ್ತಾರ

* ಡಾ. ವೀರಣ್ಣ ದಂಡೆ

ಸಮಾನಾಂತರ ಗೋಷ್ಠಿ ೧೨೬

ಗೋಷ್ಠಿ : ೧ -ಆಧುನಿಕ ಕರ್ನಾಟಕ ನಿರ್ಮಾಣ : ಮೈಸೂರು ರಾಜರ ಕೊಡುಗೆ

೧. ಅಧ್ಯಕ್ಷ ಭಾಷಣ

ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ

೨. ಮೈಸೂರು ಸಂಸ್ಥಾನದ ಅಭಿವೃದ್ಧಿಯಲ್ಲಿ ದಿವಾನರ ಪಾತ್ರ

ಡಾ.ಡಿ.ಎಸ್.ಜಯಪ್ಪಗೌಡ

ಗೋಷ್ಠಿ : ೨ ಕರ್ನಾಟಕ ಏಕೀಕರಣ

೧. ಪ್ರಾದೇಶಿಕ ಅಸಮಾನತೆ : ಸವಾಲು ಮತ್ತು ಪರಿಹಾರ ೧೬೫

ಡಾ. ಕೆ.ಎನ್.ಇಂಗಳಗಿ

೨. ಏಕೀಕರಣಕ್ಕೆ ಬದ್ಧತೆ ಬೇಕು (ಪ್ರತಿಕ್ರಿಯೆ) ೧೭೯

* ಸ.ರಾ. ಸುಳಕೂಡ

ಗೋಷ್ಠಿ : ೩-ಅಲಕ್ಷಿತ ಜನಸಮುದಾಯಗಳು

೧. ವಿಶೇಷ ಚೇತನರು ೧೯೩

* ಜಿ.ಕೆ. ಮಹಾಂತೇಶ್

9. ಬುಡಕಟ್ಟು ಸಮುದಾಯ ೨೦೨

ಪ್ರೊ. ಎಂ. ಕೆ. ಗುರುಲಿಂಗಯ್ಯ

ಗೋಷ್ಠಿ : ೪- ಕರ್ನಾಟಕ ನೀರಾವರಿ

೧. ಕಾವೇರಿ : ಇತ್ತೀಚಿನ ವಿದ್ಯಮಾನಗಳು ೨೨೭

* ಕ್ಯಾಪ್ಟನ್ ಎಸ್. ರಾಜಾರಾವ್

೨. ನದಿ ಪಾತ್ರಗಳ ಯೋಜನೆಗಳು (ಪ್ರತಿಕ್ರಿಯೆ) ೨೭೬

* ಎಸ್.ಎಲ್. ಶಿವಪ್ರಸಾದ್

ಗೋಷ್ಠಿ : ೫ ಯುವ ಗೋಷ್ಠಿ - ನನ್ನ ಹಾಡು ನನ್ನದು

೧. ಅಧ್ಯಕ್ಷ ಭಾಷಣ ೨೮೧

* ಡಾ. ಡಿ.ಕೆ. ಚಿತ್ತಯ್ಯ ಪೂಜಾರ್

9. ಯುವ ಸಾಹಿತ್ಯ : ಪ್ರೇರಣೆ ಮತ್ತು ಪ್ರಭಾವ ೨೯೦

* ಡಾ. ಎಂ. ಎನ್. ರಘು

೩. ನನ್ನ ಓದು - ನನ್ನ ಭಾಷೆ ೧೯೮

* ಕು. ಮಿಸ್ಬಾ ಮೆಹರೀನ್

ಗೋಷ್ಠಿ : ೭-ಜನಪರ ಚಳವಳಿಗಳು

೧. ಅಧ್ಯಕ್ಷ ಭಾಷಣ ೨೦೭

ಸತೀಶ ಕುಲಕರ್ಣಿ

೧. ರೈತ ಚಳುವಳಿ ನಡೆದುಬಂದ ದಾರಿ ೨೧೨

ಚಾಮರಸ ಮಾಲಿಪಾಟೀಲ

೨. ಕನ್ನಡ ಚಳುವಳಿಗಳು ೨೧೦

* ರಾ.ನಂ. ಚಂದ್ರಶೇಖರ

೪. ಕಾರ್ಮಿಕ ಚಳವಳಿಗಳು

* ಶ್ರೀಮತಿ ವರಲಕ್ಷ್ಮೀ

ಗೋಷ್ಠಿ : ೮ - ಕನ್ನಡ ತಂತ್ರಜ್ಞಾನ

೧. `ಕನ್ನಡ ಗ್ರಂಥಗಳ ಡಿಜಿಟಲಿಸುವಿಕೆ

*ವಸಂತ ಶೆಟ್ಟಿ

೨. ಕನ್ನಡ ತಂತ್ರಜ್ಞಾನದ ಸವಾಲುಗಳು (ಪ್ರತಿಕ್ರಿಯೆ)

* ಪ್ರೊ ಎಂ.ವೈ. ಶಿವರಾಮು

ಗೋಷ್ಠಿ : ೯ - ವಿಜ್ಞಾನ ತಂತ್ರಜ್ಞಾನ : ಕನ್ನಡದ ಬಳಕೆ

೧. ಅಧ್ಯಕ್ಷ ಭಾಷಣ

ನಾಡೋಜ ಡಾ.ಪಿ.ಎಸ್.ಶಂಕರ್

೨. ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡದ ಬಳಕೆ

ಉದಯಶಂಕರ ಪುರಾಣಿಕ

ಸಮಾನಾಂತರ ಗೋಷ್ಠಿ

ಗೋಷ್ಠಿ : ೧ - ಮಕ್ಕಳ ಸಾಹಿತ್ಯ ಗೋಷ್ಠಿ

೧. ಅಧ್ಯಕ್ಷ ಭಾಷಣ

* ಜಯವಂತ ಕಾಡದೇವರ

೨. ನನ್ನ ದೇಶ - ನನ್ನ ನಾಡು

ಸಾನಿಯಾ ಜೆ. ಧನ್ನೂರ

೩. ನನ್ನ ನಾಳೆ - ನನ್ನ ಕನಸು ೩೮೪

ಅಂತಃಕರಣ

ಗೋಷ್ಠಿ : ೨ - ಕರ್ನಾಟಕ ಕಲಾ ಜಗತ್ತು

೧. ಕನ್ನಡ ರಂಗಭೂಮಿ ೩೯೭

*ಡಾ. ನಾ.ದಾಮೋದರ ಶೆಟ್ಟಿ

9. ಸಂಗೀತ ೪೦೪

ಡಾ. ಆರ್.ಎನ್. ಶ್ರೀಲತಾ

೩. ಯಕ್ಷಗಾನ ೪೦೮

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ

ಲಲಿತಕಲೆಗಳಿಗೆ ಪ್ರಾಮುಖ್ಯತೆ ದೊರೆಯಬೇಕು (ಪ್ರತಿಕ್ರಿಯೆ) ೪೧೨

ಡಾ. ಜಿ.ಎಸ್. ಭೂಸಗೊಂಡ

****

# ಪ್ರಾಥಮಿಕ ಶಿಕ್ಷಣ - ದೂರವಾಗುತ್ತಿರುವ ಕನ್ನಡ

**- ಟಿ.ಎಂ. ಕುಮಾರ್**

ಮೊದಲು ಪ್ರಾಥಮಿಕ ಶಿಕ್ಷಣ ವಿಷಯವನ್ನು ಗೋಷ್ಠಿಯ ವಿಷಯವಾಗಿ ಆಯ್ಕೆಮಾಡಲು ಕಾರಣವಾದ ಎಲ್ಲರನ್ನೂ ನಾನು ಅಭಿನಂದಿಸುತ್ತೇನೆ. ಈ ಹಿಂದೆ ಪ್ರಾಥಮಿಕ ಶಿಕ್ಷಣ, ಸಾಹಿತ್ಯ ಸಮ್ಮೇಳನದ ಚರ್ಚೆಗಳ ಭಾಗವಾಗಿ ಕಂಡದ್ದು ತುಮಕೂರಿನಲ್ಲಿ ನಡೆದ ಸಮ್ಮೇಳನದಲ್ಲಿ. 'ಱ' ಅಕ್ಷರ ವರ್ಣಮಾಲೆಯಿಂದ ಕೈಬಿಡಲಾಗಿದೆ ಎಂದು ಖಂಡಿಸಿ, ಮರು ಸೇರ್ಪಡೆಗಾಗಿ ನಿರ್ಣಯ ಕೈಗೊಳ್ಳಲಾಯಿತು. ಮಾಧ್ಯಮ ಕನ್ನಡವಾಗಬೇಕೆಂಬ ಒತ್ತಾಸೆ ಬಿಟ್ಟರೆ ಪ್ರಾಥಮಿಕ ಶಿಕ್ಷಣದ ಚರ್ಚೆ ಇಂತಹ ಸಂಭ್ರಮಗಳ ಭಾಗವಾಗಿ ಇರಲಿಲ್ಲ. ಇಂದು ನಾನು ಪ್ರಾಥಮಿಕ ಶಿಕ್ಷಣ ಹಾಗೂ ಕನ್ನಡದ ಸಂಬಂಧಗಳ ಬಗ್ಗೆ ಈ ಗೌರವಾನ್ವಿತ ಸಭೆಯಲ್ಲಿ ಕೆಲವು ವಿಚಾರಗಳನ್ನು ನಿವೇದಿಸಲಿದ್ದೇನೆ. ಕಾಕತಾಳೀಯ ಅನ್ನುವಂತೆ ಈ ಎರಡು ವಿಷಯಗಳಲ್ಲಿ ನನ್ನ ವೈಯಕ್ತಿಕ ಭಾಗವಹಿಸುವಿಕೆ ಇದೆ. 'ಱ' ಅಕ್ಷರ ಕೈಬಿಡುವ ಪ್ರಕರಣದಲ್ಲಿ ನಾನು ಪಠ್ಯಪುಸ್ತಕ ಇಲಾಖೆಯಲ್ಲಿ ಮುಖ್ಯಸ್ಥನಾಗಿ ಇದ್ದುದರಿಂದ ಹೊಣೆ ಹೊರುವುದು ಅನಿವಾರ್ಯವಾಗಿತ್ತು. 'ಱ' ಅಕ್ಷರ ಕೈಬಿಡಲು ಇದ್ದ ಕಾರಣಗಳೇನು? ಎಂಬುದನ್ನು ಚರ್ಚಿಸಲು ಸಮಯವಿಲ್ಲ. ಅಲ್ಲದೆ ಮುಖ್ಯಸ್ಥರಾದ್ದ ಪ್ರೊ.ರಾಮಚಂದ್ರ ಅವರೂ ಸಹ ಈಗ ಇಲ್ಲ. ಆದರೆ ಭಾಷೆಯ ಕಲಿಕೆಯ ಸರಳವಾಗಬೇಕು ಎನ್ನುವವರು ವಿಚಾರ ಮಾಡಬೇಕಾಗುತ್ತಿದೆ.

ಪ್ರಾಥಮಿಕ ಶಿಕ್ಷಣದಿಂದ ಕನ್ನಡ ದೂರವಾಗುತ್ತಿದೆ ಎಂಬುದು ಈಗಾಗಲೇ ನಿರ್ಣಯಿಸಿದ ವಿಷಯ, ಆ ವಿಷಯಕ್ಕೆ ಸೀಮಿತವಾಗಿ ನಾನು ನನ್ನ ಅಭಿಪ್ರಾಯಗಳನ್ನು ಮಂಡಿಸುವುದು ಸೂಕ್ತ ಎಂದು ಭಾವಿಸುತ್ತೇನೆ. ರೆವರೆಂಡ್ ಕಿಟಲ್‌ರವರು ತಮ್ಮ ನಿಘಂಟನ್ನು ಬಿಡುಗಡೆ ಮಾಡುವಾಗ ಕೆಲವು ಪ್ರಾಸ್ತಾವಿಕ ನುಡಿಗಳನ್ನು ದಾಖಲಿಸಿದ್ದಾರೆ. ಕನ್ನಡ ಭಾಷೆಯ ಒಂದರಿಂದ ಐದನೇ ತರಗತಿಯ ಪಠ್ಯಪುಸ್ತಕಗಳು ೧೮೬೮ರಲ್ಲಿ ಪ್ರಥಮವಾಗಿ ಮುದ್ರಿಸಲ್ಪಟ್ಟವು.

ಬಾಸೆಲ್ ಮಿಷನ್ ಸಂಘದವರು ಮೈಸೂರಿನಲ್ಲಿ ೫ನೇ ತರಗತಿಯ ಕನ್ನಡ ಪಠ್ಯಪುಸ್ತಕಗಳನ್ನು ೧೮೬೮ ರಲ್ಲಿ ಪ್ರಥಮವಾಗಿ ಮುದ್ರಿಸಿ ಬಿಡುಗಡೆ ಮಾಡಿದರು. ಈಗ ೧೫೦ ವರ್ಷಗಳಾಗಿವೆ. ಅಂತಹ ಇತಿಹಾಸವಿರುವ ಕನ್ನಡ ಭಾಷಾ ಪಠ್ಯಪುಸ್ತಕಗಳು ಆಗೇನೂ ಸಮಸ್ಯೆಗಳನ್ನು ಎದುರಿಸಿರಲಿಲ್ಲ ಎಂದೇನಿಲ್ಲ. ಆಗ ತಾನೇ ಆಡಳಿತದ ಸಂಪೂರ್ಣ ಬೆಂಬಲವಿದ್ದ ಇಂಗ್ಲಿಷ್ ಭಾಷೆ ಹಾಗೂ ಆಳುವವರ ಆಶೀರ್ವಾದವಿದ್ದ ಸಂಸ್ಕೃತ ಭಾಷೆಗಳ ಮಧ್ಯೆ ಕನ್ನಡ ತನ್ನದೇ ಅಸ್ತಿತ್ವ ಹೊಂದಿತ್ತು. ಆ ಅಸ್ತಿತ್ವದ ಬಗ್ಗೆ ಈಗ ಸಂಶಯ ಬೇಡ.

ಜಾಗತೀಕರಣ ಎಂಬುದು ನಮ್ಮ ಮೌಲ್ಯಗಳು, ಅವುಗಳನ್ನು ಪ್ರತಿನಿಧಿಸುವ ಸಾಮಾಜಿಕ ಅಸ್ತಿತ್ವ, ಇವುಗಳ ಮೇಲೆ ಮಾಡಿರುವ ಪ್ರಹಾರ. ಇದನ್ನು ನಾವು ಅರಗಿಸಿಕೊಂಡಿಲ್ಲ. ಆದರೆ ಎಲ್ಲಿಯವರೆಗೆ ಜನಸಾಮಾನ್ಯರಲ್ಲಿ ಕನ್ನಡ ಸ್ಫುಟವಾದ ಬಳಕೆಯಲ್ಲಿ ಇರುತ್ತದೆಯೋ ಅಲ್ಲಿಯವರೆಗೆ ಭಾಷೆಯ ಅವನತಿಯ ಕಲ್ಪನೆಯೇ ಹುಚ್ಚುತನ. ಸೂಕ್ಷ್ಮವಾಗಿ ಗಮನಿಸಿದರೆ ಅವಗಣನೆಗೆ ಗುರಿಯಾಗಿರುವುದು ಪ್ರಾಥಮಿಕ ಶಿಕ್ಷಣ ಕ್ಷೇತ್ರ ಎಂಬುದನ್ನು ಅರಿಯಬಹುದು. ಭಾಷೆ ಶಿಕ್ಷಣದ ಒಂದು ಭಾಗ ಅಷ್ಟೇ ಎಂಬುದನ್ನು ನಾವು ಗಮನಿಸಬೇಕು. ಆದ್ದರಿಂದ ಕನ್ನಡವು ಅವಕೃಪೆಗೆ ಒಳಗಾಗಿದೆ ಎಂಬುದು ಸತ್ಯ. ವಸಾಹತುಶಾಹಿಯಿಂದ ಬಿಡುಗಡೆಯಾದ ರಾಷ್ಟ್ರ ಗಹನವೆನಿಸುವ ನಿರ್ಣಯಗಳನ್ನು ಭವಿಷ್ಯದ ದೃಷ್ಟಿಯಿಂದ ೧೯೫೦ರ ಅಸುಪಾಸಿನಲ್ಲಿ ತೆಗೆದುಕೊಂಡಿತು. ಶಿಕ್ಷಣ ಕ್ಷೇತ್ರದಲ್ಲಿ ಸ್ವಾಭಾವಿಕವಾಗಿಯೇ ನಿರೀಕ್ಷೆ ಇದ್ದರೂ ಬುನಾದಿ ಎನಿಸಿದ, ಪ್ರಾಥಮಿಕ ಶಿಕ್ಷಣದ ಪರಿಗಣನೆ ಆದ್ಯತೆಯ ಮೇಲೆ ಆಗುತ್ತದೆ ಎಂಬ ನಿರೀಕ್ಷೆ ಹುಸಿಯಾಯಿತು. ೧೯೪೮ ರಲ್ಲಿಯೇ ಉನ್ನತ ಶಿಕ್ಷಣಕ್ಕಾಗಿ ಡಾ. ರಾಧಾಕೃಷ್ಣನ್‌ರವರ ಅಧ್ಯಕ್ಷತೆಯಲ್ಲಿ ಆಯೋಗವನ್ನು ರಚಿಸಲಾಯಿತು. ಇದರ ಫಲಶೃತಿಯಂತೆ ೧೯೫೨ ರಲ್ಲಿ ಯು.ಜಿ.ಸಿ.ಯು ಉದಯವಾಯಿತು. ಪ್ರಾಥಮಿಕ ಶಿಕ್ಷಣಕ್ಕಾಗಿ ತಲೆ ಕೆಡಿಸಿಕೊಳ್ಳುವ ವ್ಯವಧಾನ ಆ ಸಮಯದಲ್ಲಿ ಕಂಡುಬಂದಿಲ್ಲ. ಅನೇಕ ಆಯೋಗಗಳ ವರದಿಗಳನ್ನು ಕಂಡಿದ್ದೇವೆ. ಆದರೆ ಈವರೆಗೆ ಪ್ರಾಥಮಿಕ ಶಿಕ್ಷಣಕ್ಕಾಗಿ ಆಯೋಗ ರಚಿಸಬೇಕು ಎಂದು ನಮಗೆ ಅನಿಸದಿರುವುದು ಶೋಚನೀಯ.

ಆಗಿನಿಂದಲೂ ನಿರ್ಲಕ್ಷ್ಯಕ್ಕೆ ಒಳಗಾದ ಪ್ರಾಥಮಿಕ ಶಿಕ್ಷಣ ಈಗಂತೂ ಅಪಮೌಲ್ಯದ ಗರಿಷ್ಠತೆಯನ್ನು ಕಂಡಿದೆ. ಸ್ವಾತಂತ್ರ್ಯ ಪಡೆದಾಗಿನಿಂದಲೂ ಹಲವು ಅರ್ಪಣಾ ಮನೋಭಾವದ ಸಮಾಜವಾದಿ ಬುದ್ಧಿಜೀವಿಗಳು, ರಾಷ್ಟ್ರವ್ಯಾಪಿ ಏಕರೂಪ ಶಿಕ್ಷಣ ವ್ಯವಸ್ಥೆಯ ಬಗ್ಗೆ ಹೋರಾಟ ನಡೆಸುತ್ತಲೇ ಬಂದಿದ್ದಾರೆ. ಸಮತೆ, ಸಮಾನತೆಯ ತತ್ವಗಳು ನಮ್ಮ ಬುನಾದಿಯೆಂದು ಹೇಳಿಕೊಳ್ಳುವವರು ನಾವು. ಆದರೆ ಸಂವಿಧಾನ ರಚನೆಯಾದಾಗ ಪ್ರಾಥಮಿಕ ಶಿಕ್ಷಣವನ್ನು ಮೂಲಭೂತ ಹಕ್ಕಾಗಿ ಸೇರ್ಪಡೆ ಮಾಡಲಿಲ್ಲ. ಬದಲಿಗೆ ನಿರ್ದೇಶನಾತ್ಮಕ ತತ್ವಗಳಲ್ಲಿ ಇದನ್ನು ಸೇರಿಸಿದರು. ಆಗ ನಮ್ಮ ಶೈಕ್ಷಣಿಕ ಭವಿಷ್ಯದ ಚಿಂತನೆಯಲ್ಲಿ ಕಳೆದುಹೋದ ಸಮತೋಲನ, ಈಗಲೂ ಸರಿಪಡಿಸಲು ಸಾಧ್ಯವಾಗಿಲ್ಲ. ೬ ದಶಕಗಳಿಗೂ ಮೀರಿದ ಹೋರಾಟದ ನಂತರ ೨೦೧೪ ರಲ್ಲಿ ಮೂಲಭೂತ ಹಕ್ಕಾಗಿ ಶಿಕ್ಷಣ (ಆರ್.ಟಿ.ಇ.) ಕಾಯ್ದೆಯನ್ನು ಪಾರ್ಲಿಮೆಂಟ್ ಜಾರಿಗೆ ತಂದಿದೆ. ಆದರೆ ಅಷ್ಟರಲ್ಲಿ ನಮ್ಮ ನಾಡು ಹಿಂದೆಂದೂ ಕಾಣದ ಧೃವೀಕರಣವನ್ನು ಸಮಾಜದಲ್ಲಿ, ಶಿಕ್ಷಣ ಕ್ಷೇತ್ರ ಹುಟ್ಟುಹಾಕಿ ಬೆಳೆಸಿಬಿಟ್ಟಿದೆ. ಈಗ ಏಕರೂಪತೆಯ ಬಗ್ಗೆ ಮಾತನಾಡುವುದೇ ಅಸಂಗತವೆನಿಸಿಬಿಟ್ಟಿದೆ. ಹೋಗಲಿ ಆರ್.ಟಿ.ಇ. ಬಂದ ಮೇಲೆ ಪರಿಸ್ಥಿತಿ ಬದಲಾಗಿದೆಯೇ? ಸಮಾಜದಲ್ಲಿ ವಂಚಿತ, ಶೋಷಣೆಗೆ ಒಳಗಾದ ವರ್ಗಗಳಿಗಾಗಿ ತಂದ ಈ ಸಂವಿಧಾನ ತಿದ್ದುಪಡಿಯನ್ನು ಈಗ ಎಲ್ಲರೂ

ಅರ್ಥೈಸಿಕೊಂಡಿರುವುದು ವಿಧಿ ೧೨ರಂತೆ ಶೇ.೨೫% ರಷ್ಟು ಸೀಟ್‌ಗಳನ್ನು ಖಾಸಗಿ ಶಾಲೆಗಳಲ್ಲಿ ಮೀಸಲಿಡುವ ಬಗ್ಗೆ ಮಾತ್ರ ಆರ್.ಟಿ.ಇ. ಎಂದರೆ ಖಾಸಗಿ ಶಾಲೆಗಳಲ್ಲಿ ಸೀಟು ಪಡೆಯುವ ಕಾನೂನು ಎಂದು ಅಪಮೌಲ್ಯ ಮಾಡಲಾಗಿದೆ. ಸಮಾನತೆ, ಸಮತೆಗಾಗಿ ಅವಕಾಶಗಳ ಕಲ್ಪಿಸುವಿಕೆ, ಪಠ್ಯಕ್ರಮದ ಅನುಷ್ಠಾನಕ್ಕಾಗಿ ನೀತಿ-ನಿಯಮಗಳು, ಶಾಲಾ ಶಿಕ್ಷಣದಲ್ಲಿ ಸಮಾಜದ ಪಾಲ್ಗೊಳ್ಳುವಿಕೆ ಹಾಗು ಕರ್ತವ್ಯಗಳು, ಶಿಕ್ಷಕರ ಕ್ರಮಬದ್ಧ ಕಾರ್ಯನಿರ್ವಹಣೆಯ ಮಾರ್ಗಸೂಚಿಗಳು, ಶೈಕ್ಷಣಿಕ ನೀತಿ ನಿರೂಪಣೆಯ ಆಯಾಮಗಳು ಇದೆಲ್ಲ ಆರ್.ಟಿ.ಇ. ಯಲ್ಲಿ ಅಡಕವಾಗಿದ್ದರೂ ಕೇಳುವವರೇ ಇಲ್ಲದಂತಾಗಿದೆ.

ಆಂಗ್ಲ ಮಾಧ್ಯಮದ ಲಂಗುಲಗಾಮಿಲ್ಲದ ನಾಗಾಲೋಟ, ಜಾಗತೀಕರಣದ ಸೋಗಿನಲ್ಲಿ ನಮ್ಮ ಪಾರಂಪರಿಕ ಮೌಲ್ಯಗಳನ್ನು ಹೊಸಕಿ ಹಾಕಿವೆ. ಅನ್ನ ಗಳಿಸುವ ಮಾರ್ಗ ಎಂಬ ವಿಕೃತ ವಾತಾವರಣ ಸೃಷ್ಟಿಮಾಡಿರುವ ಆಂಗ್ಲ ಮಾಧ್ಯಮದ ವೈಭವೀಕರಣದಿಂದ, ಪ್ರತಿವರ್ಷ ಸರ್ಕಾರಿ ಶಾಲೆಗಳು ಶೇ.೨೫ ರಷ್ಟು ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳೆದುಕೊಳ್ಳುತ್ತಿವೆ. ಅಂದಾಜು ೩೫೦ ರಿಂದ ೪೫೦ ಕೋಟಿ ರೂಪಾಯಿಗಳನ್ನು ಸರ್ಕಾರವೇ ಈ ಖಾಸಗಿ ಶಾಲೆಗಳಿಗೆ ಪಾವತಿಸುವ ಅಸಹಾಯಕ ಪರಿಸ್ಥಿತಿಗೆ ಸರ್ಕಾರ ದೂಡಲ್ಪಟ್ಟಿದೆ. ಇನ್ನೆಷ್ಟು ದಿನ ನಾವು ಸರ್ಕಾರಿ ಶಾಲೆಗಳನ್ನು ಇಂತಹ ಆಕ್ರಮಣದಿಂದ ಬಚಾವು ಮಾಡಿಕೊಳ್ಳಲು ಸಾಧ್ಯ ಎಂಬುದನ್ನು ಚಿಂತಕರು ಯೋಚಿಸಬೇಕು.

ನಮ್ಮ ನಾಡಿನಲ್ಲಿ ನಾವು ಗಣರಾಜ್ಯದ ಉದಯವನ್ನು ಸೂಚಿಸುವ ಮೊದಲೇ ಉನ್ನತ ಶಿಕ್ಷಣವನ್ನು ಆದ್ಯತೆಯಾಗಿ ಪರಿಗಣಿಸಿದೆವು. ೧೯೪೮ರಲ್ಲೇ ಡಾ.ರಾಧಾಕೃಷ್ಣನ್ ಅವರ ಅಧ್ಯಕ್ಷತೆಯಲ್ಲಿ ಉನ್ನತ ಶಿಕ್ಷಣಕ್ಕಾಗಿ ಆಯೋಗ ರಚಿಸಿದೆವು. ೧೯೫೨ರಲ್ಲಿ ಯು.ಜಿ.ಸಿ.ಯ ಉಗಮವಾಯಿತು. ವಿಶ್ವಮಾನ್ಯ ಐಐಎಂ ಹಾಗೂ ಐಐಟಿ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅಂದಿನ ಚಿತ್ರ ತುಂಬ ನಿರಾಶಾದಾಯಕ. ಫಿಲಿಫ್ ಕೂಂಬ್ ಎಂಬ ಶಿಕ್ಷಣತಜ್ಞಈ ಬಗ್ಗೆ ಹೇಳಿರುವ ಮಾತುಗಳು ತುಂಬಾ ಅರ್ಥಪೂರ್ಣ. 'ಶೈಕ್ಷಣಿಕ ಕಾರ್ಯಕ್ರಮಗಳು ಘೋಷಣೆಗಳ ಮೇಲಾಗಲಿ ಅಥವಾ ಸದ್ಭಾವನೆಗಳ ಮೇಲಾಗಲಿ ನಡೆಯುವುದಿಲ್ಲ. ಅವು ಅನುಷ್ಠಾನವಾಗುವುದು ಹೂಡುವ ಬಂಡವಾಳದಿಂದ' (Educational Programmes do not run on good intentions and slogans, they run on money).

ನಾವು ಉನ್ನತ ಶಿಕ್ಷಣಕ್ಕಾಗಿ ಕೊಡಮಾಡುವ ಬಂಡವಾಳವನ್ನು ಪ್ರಾಥಮಿಕ ಶಿಕ್ಷಣಕ್ಕೆ ಒದಗಿಸುವ ಪ್ರಶ್ನೆಯೇ ಇರಲಿಲ್ಲ. ಏಕೆಂದರೆ ಶಾಲಾ ಶಿಕ್ಷಣ, ಸಂವಿಧಾನದ ರಾಜ್ಯಪಟ್ಟಿಯಲ್ಲಿ ಸೇರ್ಪಡೆಯಾಗಿತ್ತು. ರಾಜ್ಯಗಳಿಗೆ ಆರ್ಥಿಕವಾಗಿ ಆ ಚೈತನ್ಯ ಇರಲಿಲ್ಲ. ಕೊನೆಗೆ ದೊರೆತದ್ದು ಭಾವೋದ್ವೇಗದ ಘೋಷಣೆಗಳು, ಆವೇಶಭರಿತ ಆಶ್ವಾಸನೆಗಳು, ಇನ್ನು ಹತ್ತು ವರ್ಷಗಳಲ್ಲಿ ಅರ್ಹ ವಯಸ್ಸಿನ ಎಲ್ಲಾ ಮಕ್ಕಳನ್ನು ಶಾಲೆಗೆ ದಾಖಲು

ಮಾಡಲಾಗುವುದು ಎಂದು ಆಗ ಹೇಳಿದ ನಾವು ೨೦೧೭ರಲ್ಲೂ ಇನ್ನೂ ಶೇ.೧೦೦ ರಷ್ಟು ದಾಖಲಾತಿ ಸಾಧಿಸಿಲ್ಲ. ೧೯೭೭ ರಲ್ಲಿ ಶಾಲಾ ಶಿಕ್ಷಣವನ್ನು ಸಮನ್ವಯ ಪಟ್ಟಿಗೆ ಸೇರ್ಪಡೆ ಮಾಡಲಾಯ್ತು. ಆದರೂ ೧೯೮೭ ರವರೆಗೆ ಕೇಂದ್ರವು ದೊಡ್ಡ ಪ್ರಮಾಣದಲ್ಲಿ ಆರ್ಥಿಕವಾಗಿ ಶಾಲಾ ಶಿಕ್ಷಣದಲ್ಲಿ ಭಾಗವಹಿಸಲಿಲ್ಲ. ೧೯೮೭ ರಲ್ಲಿ ಕಪ್ಪು ಹಲಗೆ ಕಾರ್ಯಕ್ರಮ ಜಾರಿಗೆ ಬಂದಿತು. ಸ್ವಾತಂತ್ರ್ಯ ಬಂದ ೪೦ ವರ್ಷಗಳಾದ ಮೇಲೆ ಕಪ್ಪುಹಲಗೆ ಕಾರ್ಯಕ್ರಮದ ಭಾಗವಾಗಿ ಪ್ರಾಥಮಿಕ ಶಾಲೆಗಳಲ್ಲಿ ಏನು ಕನಿಷ್ಟ ಸೌಲಭ್ಯಗಳಿರಬೇಕು ಎಂಬುದನ್ನು ಪಟ್ಟಿ ಮಾಡಲಾಯ್ತು. ಇನ್ನು ಮುಂದೆ ಏಕೋಪಾಧ್ಯಾಯ ಶಾಲೆಗಳು ಇರುವುದಿಲ್ಲ. ಪ್ರತಿ ಶಾಲೆಗೆ ಇಬ್ಬರು ಶಿಕ್ಷಕರಿರಬೇಕು, ಎರಡು ಕೊಠಡಿಗಳಿರಬೇಕು, ಪ್ರತಿ ಕೊಠಡಿ ಕನಿಷ್ಟ ೧೭ X ೨೧ ವಿಸ್ತೀರ್ಣವಿರಬೇಕು, ಕನಿಷ್ಟ ಇರಬೇಕಾದ ಬೋಧನೋಪಕರಣಗಳು, ಉಚಿತವಾಗಿ ನೀಡಬೇಕಾದ ಪಠ್ಯಪುಸ್ತಕಗಳು ಇವೆಲ್ಲಾ ನಿಯಮಗಳಲ್ಲಿ ಅಳವಡಿಸಲ್ಪಟ್ಟವು.

ಆದರೆ ಅಷ್ಟರಲ್ಲಿ ಕೇಂದ್ರ ಸ್ವಾಮ್ಯದ ನೌಕರರಿಗೆಂದು ೧೯೫೦ ರಲ್ಲಿಯೇ ಪ್ರಾರಂಭಿಸಲ್ಪಟ್ಟ ಕೇಂದ್ರೀಯ ವಿದ್ಯಾಲಯಗಳು ಸಿಬಿಎಸ್‌ಸಿ ಸಂಸ್ಥೆಯ ಭಾಗವಾಗಿ ಒಂದು ವಿಪರೀತವನ್ನೇ ಸೃಷ್ಟಿ ಮಾಡಿ ೪೦ ವರ್ಷಗಳ ಅಸ್ತಿತ್ವವನ್ನು ಕಂಡಿದ್ದವು. ಈ ಸಿಬಿಎಸ್ಸಿ / ಐಸಿಎಸ್‌ಸಿ ಸಂಸ್ಥೆಗಳು ತಮ್ಮದೇ ಭಾಷಾ ನೀತಿ, ಪಠ್ಯಕ್ರಮ, ಕೋಟ್ಯಂತರ ರೂಪಾಯಿಗಳ ಬಂಡವಾಳದ ಅವಕಾಶಗಳೊಂದಿಗೆ ಇನ್ನೆಂದೂ ಸರಿಪಡಿಸಲಾಗದ ಅಸಮಾನತೆಯನ್ನು ಸೃಷ್ಟಿಸಿಬಿಟ್ಟಿದ್ದವು. ಸಮತೆ, ಸಮಾನತೆಯ ಘನ ಉದ್ದೇಶಗಳನ್ನು ಶಿಕ್ಷಣಕ್ಕೆ ನಾವು ಆರೋಪಿಸುತ್ತೇವೆ. ಆದರೆ ಅದೇ ಶಿಕ್ಷಣ ವ್ಯವಸ್ಥೆ ನಮ್ಮ ನಾಡು ಹಿಂದೆಂದೂ ಕಂಡರಿಯದಂತಹ ಧೃವೀಕರಣಕ್ಕೆ ನಾಂದಿ ಹಾಡಿದ್ದು ವಿಪರ್ಯಾಸ. ಈ ಸಿಬಿಎಸ್ಸಿ / ಐಸಿಎಸ್ ಸಂಸ್ಥೆಯ ಶಾಲೆಗಳಲ್ಲಿ ಇತ್ತೀಚಿನವರೆಗೆ ರಾಜ್ಯ ಭಾಷೆಯಾದ ಕನ್ನಡಕ್ಕೆ ಪ್ರವೇಶವೇ ಇರಲಿಲ್ಲ. ಇಂಗ್ಲಿಷ್ ಹಾಗೂ ಹಿಂದಿ ಭಾಷೆಗಳು ರಾರಾಜಿಸಿದವು. ಈಗಂತೂ ಕಾಸಿಗೊಂದು ಸಿಬಿಎಸ್ಸಿ ಶಾಲೆಗಳು ಜನ್ಮತಾಳಿ, ಕನ್ನಡ ಮಾಧ್ಯಮ ಶಾಲೆಗಳನ್ನು ಅಪ್ರಸ್ತುತಗೊಳಿಸುವ ವಾತಾವರಣ ಸೃಷ್ಟಿಸಿವೆ. ೨೫ ವರ್ಷಗಳ ಹಿಂದೆಯೇ ಪ್ರೊ, ಯಶಪಾಲ್ ಸಮಿತಿ ತನ್ನ ವರದಿಯಲ್ಲಿ ರಾಜ್ಯಗಳಲ್ಲಿ ಯಾವುದೇ ನಿಯಂತ್ರಣವಿಲ್ಲದೇ ಬೆಳೆಯುತ್ತಿರುವ ಸಿಬಿಎಸ್ಸಿ/ಐಸಿಎಸ್ಸಿ ಶಾಲೆಗಳ ಬಗ್ಗೆ ಆತಂಕ ವ್ಯಕ್ತಪಡಿಸಿತ್ತು. ಹೊರೆ ಇಲ್ಲದ ಕಲಿಕೆ ಎಂಬ ವರದಿ ನಮ್ಮ ಶೈಕ್ಷಣಿಕ ದಾಖಲೆಗಳಲ್ಲಿ ಬಹಳ ಮುಖ್ಯವಾದ ಒಂದು ವರದಿ. ಅಂದು ಉಪೇಕ್ಷಿಸಲಾದ ವರದಿಯ ಪರಿಣಾಮ ಈಗ ಗೋಚರವಾಗುತ್ತಿದೆ. ಸರ್ಕಾರಿ ಶಾಲೆಗಳು ಎದುರಿಸಬೇಕಾದ ಸಮಸ್ಯೆಗಳು, ಸ್ಥಳೀಯ ಭಾಷೆಗಳ ಅವಗಣನೆ ಇಂದು ದೊಡ್ಡ ಪಿಡುಗಾಗಿವೆ.

ಈಗಾಗಲೇ ನಾನು ಪ್ರಸ್ತಾಪಿಸಿದಂತೆ ಕನ್ನಡ ಮಾಧ್ಯಮ ಶಾಲೆಗಳಿಗೂ ಸಿಬಿಎಸ್‌ಸಿ/ ಐಸಿಎಸ್‌ಸಿ ಶಾಲೆಗಳಿಗೂ ದೊಡ್ಡ ಕಂದರ ಇದೆ. ಇದು ಬೋಧನೆಯ ವಿಧಿ ವಿಧಾನಗಳಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ನೋಡಸಿಗುತ್ತದೆ. ಸರ್ಕಾರಿ ಶಾಲೆಗಳಲ್ಲಿ ೧ ರಿಂದ

೩ನೆಯ ತರಗತಿಗಳಿಗೆ ನಲಿಕಲಿ ಎಂಬ ವಿಧಾನದಲ್ಲಿ ಬೋಧಿಸಲಾಗುತ್ತದೆ. ಆದರೆ ಖಾಸಗಿ ಶಾಲೆಗಳಲ್ಲಿ ಸರ್ಕಾರವೇ ತಯಾರಿಸಿ, ಮುದ್ರಣ ಮಾಡಿ, ವಿತರಿಸುವ ಪಠ್ಯಪುಸ್ತಕಗಳನ್ನು ಆಧರಿಸಿ ಬೋಧನೆ ನಡೆಯುತ್ತಿದೆ. ನಲಿಕಲಿಯ ಬಗ್ಗೆ ತೀವ್ರ ಅಸಂತೋಷವಿದೆ. ಹಲವು ಪ್ರತಿಭಟನೆಗಳು ಹಾಗೂ ಸಮ್ಮೇಳನಗಳು ನಡೆದಿವೆ. ಆದರೆ ಏನನ್ನೂ ಕೇಳಲು ಸರ್ಕಾರ ಸಿದ್ಧವಿಲ್ಲ. ಒಂದು ನಿಯೋಗ ಅಂದಿನ ಶಿಕ್ಷಣ ಸಚಿವರಾಗಿದ್ದ ಶ್ರೀ ಕಾಗೇರಿಯವರನ್ನು ಭೇಟಿಯಾಗಿ, ನಲಿಕಲಿ ಬೋಧನಾ ವಿಧಾನ ಅವೈಜ್ಞಾನಿಕವಾಗಿದ್ದು, ಕೂಡಲೇ ರದ್ದುಪಡಿಸುವಂತೆ ಮನವಿ ಸಲ್ಲಿಸಲಾಯಿತು. ಸತ್ಯಾಸತ್ಯತೆಗಳನ್ನು ರುಜುವಾತು ಮಾಡಿಕೊಳ್ಳಲು ಒಂದು ಬಾಹ್ಯ ಮೌಲ್ಯಮಾಪನ ಮಾಡಿಸುವಂತೆಯೂ ಕೋರಲಾಗಿತ್ತು.

ಈ ಸಂಬಂಧ ಸಚಿವರು ನೀಡಿದ ಆಶ್ವಾಸನೆ ಎಂದಿನಂತೆ ಕಸದ ಬುಟ್ಟಿಗೆ ಸೇರಿದೆ. ಸರ್ಕಾರ ನಲಿಕಲಿಯೇ ಶ್ರೇಷ್ಠ ಬೋಧನಾ ವಿಧಾನ ಎನ್ನುವುದಾದಲ್ಲಿ, ಖಾಸಗಿ ಶಾಲೆಗಳಿಗೂ ಅದನ್ನೇ ಏಕೆ ಜಾರಿಗೆ ತಂದಿಲ್ಲ? ಹಲವಾರು ದಶಕಗಳ ಅನುಭವಗಳ ಆಧಾರದ ಮೇಲೆ ವಿಕಾಸಗೊಂಡಿದ್ದ ಬೋಧನೆಯ ವಿಧಿ-ವಿಧಾನಗಳನ್ನು ಕೈಬಿಟ್ಟು ಮತ್ತು ಒಂದು ವೃತ್ತಿಪರ ಬಾಹ್ಯ ಮೌಲ್ಯಮಾಪನವನ್ನೂ (External Evaluation) ಮಾಡದೆ, ಹಟಮಾಡಿ ನಲಿಕಲಿಯನ್ನು ಮುಂದುವರಿಸುವುದು ಎಷ್ಟು ವೈಜ್ಞಾನಿಕ? ಅಂತರರಾಷ್ಟ್ರೀಯ ಸಂಸ್ಥೆಗಳ ಆರ್ಥಿಕ ನೆರವು ಮೊದಲು ಕೊಡಮಾಡಲ್ಪಟ್ಟಿತು ಅನ್ನುವ ಕಾರಣಕ್ಕಾಗಿ ಪ್ರಾರಂಭವಾದ ಈ ನಲಿಕಲಿ ಈಗ ಐಎಎಸ್ ಧಣಿಗಳ ಕೃಪಾಶ್ರಯದಲ್ಲಿ ಭದ್ರವಾಗಿ ತಳವೂರಿದೆ.

ಮುಂದೆ ಆಗಬೇಕಾದ ಕಾರ್ಯಗಳು ಬಹಳವಿದೆ. ನಮ್ಮ ಹಂತದಲ್ಲಿ ಭಾಷೆಯ ಮಾಧ್ಯಮದ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿಲ್ಲ. ಸಂವಿಧಾನದಲ್ಲಿನ ಬದಲಾವಣೆಗಳಿಗೆ ಕೇಂದ್ರ ಮುಂದಾಗಬೇಕು' ಎಂದು ರಾಜ್ಯ ಸರ್ಕಾರ ನಿಲುವು ತಾಳಿದೆ. ಕೇಂದ್ರದೊಡನೆ ತ್ವರಿತಗತಿಯಲ್ಲಿ ಇತರ ರಾಜ್ಯಗಳೊಡನೆ ಸೇರಿ ಸಮಾಲೋಚನೆಗೆ ಮುಂದಾಗಬೇಕಾಗುತ್ತದೆ.

ಭಾಷಾವಾರು ಪ್ರಾಂತ್ಯಗಳು ರಚನೆಯಾದದ್ದು ಆ ರಾಜ್ಯದ ಭಾಷೆಯನ್ನು ಆಧರಿಸಿ. ಹಾಗಿದ್ದಲ್ಲಿ ರಾಜ್ಯಭಾಷೆ ಎಂಬ ಪರಿಕಲ್ಪನೆ ಏಕಿಲ್ಲ? ಆ ಭಾಷೆಗೆ ಸೂಕ್ತ ಸ್ಥಾನಮಾನ ಏಕಿಲ್ಲ? ನ್ಯಾಯಾಲಯಗಳು ಸಂವಿಧಾನದ ವ್ಯಾಖ್ಯಾನ ಮಾಡುವಾಗ ಎಡವಿವೆಯೇ? ಎಂಬ ಪ್ರಶ್ನೆ ಖಂಡಿತಾ ಕಾಡುತ್ತದೆ. ಇದನ್ನು ಹೇಳುವಾಗ ಕೇಂದ್ರ ಸರ್ಕಾರ ಮಧ್ಯಪ್ರವೇಶಮಾಡಿ ರಾಜ್ಯಭಾಷೆಯ ಕಲ್ಪನೆಯನ್ನು ಸಾಕಾರಗೊಳಿಸ ಬೇಕಾಗಿದೆ.

ರಾಜ್ಯಗಳ ಹಿತವನ್ನು ಗೌಣವಾಗಿಸುವಲ್ಲಿ ಕೇಂದ್ರದ ಅನುಶಾಸನಕ್ಕೆ ಒಳಪಡುವ ಸಿ.ಬಿ.ಎಸ್.ಸಿ. ಹಾಗೂ ಐ.ಸಿ.ಎಸ್.ಸಿ. ಶಾಲೆಗಳು ಸಿಂಹಪಾಲು ಜವಾಬ್ದಾರಿಯನ್ನು ಹೊರಬೇಕು. ಸ್ವಾತಂತ್ರ್ಯ ಬಂದ ಹೊಸದರಲ್ಲಿ ಕೇಂದ್ರ

ಸ್ವಾಮ್ಯದ ನೌಕರರ ಮಕ್ಕಳ ಹಿತದೃಷ್ಟಿ ಎಂದು ಕಾರಣ ನೀಡಿ ಸ್ಥಾಪಿತವಾದ ಈ ಶಾಲೆಗಳು ರಾಜ್ಯಗಳ ಸ್ವಾಯತ್ತತೆಯನ್ನು ಕಡೆಗಣಿಸಿ ವಿಜೃಂಭಿಸುತ್ತಿವೆ.



ಇತ್ತೀಚಿನವರೆಗೆ ಈ ಶಾಲೆಗಳಲ್ಲಿ ಇಂಗ್ಲಿಷ್ ಹಾಗೂ ಹಿಂದಿ ಬಿಟ್ಟರೆ ಕನ್ನಡದ ಸೊಲ್ಲೇ ಇರಲಿಲ್ಲ. ಈಗ ಕಾಸಿಗೊಂದು ಸಿಬಿಎಸ್ಸಿ/ಐಸಿಎಸ್ಸಿ ಶಾಲೆಗಳು ಪ್ರಾರಂಭವಾಗಿಬಿಟ್ಟಿವೆ. ಕನ್ನಡ ಮಾಧ್ಯಮ ಶಾಲೆಗಳಿಗೆ ಉಳಿಗಾಲವಿಲ್ಲದಂತಾಗಿದೆ. 'ಹೊರೆಯಿಲ್ಲದ ಕಲಿಕೆ' (Burdenless Learning) ಸಮಿತಿಯ ಮುಖ್ಯಸ್ಥರಾಗಿದ್ದ ಪ್ರೊ, ಯಶ್‌ಪಾಲ್ ಅವರು ತಮ್ಮ ವರದಿಯಲ್ಲಿ ಸಿ.ಬಿ.ಎಸ್.ಸಿ. ಶಾಲೆಗಳ ಸಂಖ್ಯೆ ತೀವ್ರ ಗತಿಯಲ್ಲಿ ಹೆಚ್ಚಳವಾಗುತ್ತಿರುವುದನ್ನು ಖಂಡಿಸಿ ಇದು ರಾಜ್ಯಗಳ ಸ್ವಾಯತ್ತತೆಗೆ ಧಕ್ಕೆಯುಂಟುಮಾಡುತ್ತದೆ ಎಂಬ ಆತಂಕವನ್ನು ಎರಡು ದಶಕಗಳಷ್ಟು ಹಿಂದೆಯೇ ವ್ಯಕ್ತಪಡಿಸಿದ್ದರು. ಇನ್ನು ಈಗ ಯಾವ ಪರಿಸ್ಥಿತಿ ಉಂಟಾಗಿದೆ ಎಂದು ನಾವೇ ಊಹೆ ಮಾಡಿಕೊಳ್ಳಬಹುದು.

ಮುಂಬರುವ ದಿನಗಳಲ್ಲಿ ಕನ್ನಡ ಮಾಧ್ಯಮ ಶಾಲೆಗಳ ಸ್ಥಿತಿಗತಿಗಳ ಬಗ್ಗೆ ತೀವ್ರತರ ಕ್ರಮಗಳ ಅಗತ್ಯವಿದೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಸ್.ಜಿ.ಸಿದ್ಧರಾಮಯ್ಯ ಅವರ ನೇತೃತ್ವದಲ್ಲಿ ನೀಡಲಾದ ವರದಿಯ ಅನುಷ್ಠಾನ ತೀವ್ರಗತಿಯಲ್ಲಿ ಆಗಬೇಕು. 'ನಲಿ-ಕಲಿ' ಎಂಬ ಬೋಧನೆಯ ಮಾರ್ಗ ಕೈಬಿಟ್ಟು ಖಾಸಗಿ ಶಾಲೆಗಳಲ್ಲಿರುವಂತೆಯೇ ಪಠ್ಯಪುಸ್ತಕ ಆಧಾರಿತ ಬೋಧನೆಯನ್ನು ಕೂಡಲೇ ಜಾರಿಗೆ ತರಬೇಕು. ಕನ್ನಡ ಮಾಧ್ಯಮದ ಅನುಷ್ಠಾನದ ಬಗ್ಗೆ ಸಲ್ಲಿಸಲಾಗಿರುವ ಪ್ರಸ್ತಾವನೆಗಳ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕಾದದ್ದು ಆದ್ಯತೆಯಾಗ ಬೇಕು. ನಮ್ಮ ನಾಡಿನಲ್ಲಿ ಕನ್ನಡ ಭಾಷೆಯ ರಾಜ್ಯಭಾಷಾ ಸ್ಥಾನಮಾನ ಸ್ಪುಟವಾಗಿ ಜಾಹೀರಾಗಬೇಕು. ಹೊರಗಿನವರು ಕನ್ನಡ ಕಲಿಯುವ ಅನಿವಾರತೆಯನ್ನು ಮನಗಾಣುವಂತಾಗಬೇಕು.

ಕನ್ನಡ ಭಾಷೆಯನ್ನು ಕಲಿಸುವ ವಿಧಿ-ವಿಧಾನಗಳ ಬಗ್ಗೆ ತೀವ್ರ ಅಧ್ಯಯನ ಅಗತ್ಯ. ವ್ಯಾಕರಣದ ವ್ಯಾಸಂಗ ಸಂಸ್ಕೃತ ಭಾಷೆಯ ನೆರಳಿನಿಂದ ಹೊರಬಂದಿಲ್ಲವೆಂಬ ಅಭಿಪ್ರಾಯಗಳ ಪರಿಶೀಲನೆ, ಶಂಕರ್ ಭಟ್ ಮುಂತಾದವರ ಲೇಖನಗಳ ದಷ್ಟಿಯಿಂದ ಪ್ರಗತಿಪರ ಧೋರಣೆ ತಾಳುವುದು ಮುಖ್ಯ

ಹಾಗೆಯೇ ನಲಿ-ಕಲಿ ಎಂಬ ಬೋಧನಾ ವಿಧಾನದ ಬಗ್ಗೆ ಬಾಹ್ಯ ಮರು ಮೌಲ್ಯಮಾಪನ ಅತ್ಯವಶ್ಯಕ. ದಶಕಗಳಿಂದ ಸಮಯ ಪರೀಕ್ಷಿತ ವಿಧಿವಿಧಾನಗಳನ್ನು ಕೈಬಿಟ್ಟು ಪಾಶ್ಚಾತ್ಯ ಚಿಂತನೆಯ ಬೋಧನಾ ಕ್ರಮವನ್ನು ೧೦-೧೨ ವರ್ಷಗಳಿಂದ ಅನುಸರಿಸುತ್ತಿರುವ ವ್ಯವಸ್ಥೆ, ಈ ಬಗ್ಗೆ ಯೋಚಿಸಬೇಕು.

ಪ್ರೊ. ಸಿದ್ಧರಾಮಯ್ಯನವರ ನೇತೃತ್ವದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಸರ್ಕಾರಿ ಶಾಲೆಗಳ ಪುನರುಜ್ಜೀವನಕ್ಕಾಗಿ ನೀಡಿರುವ ವರದಿಯ ಅನುಷ್ಠಾನ ತೀವ್ರಗತಿಯಲ್ಲಿ ಆಗಬೇಕು. ಸಿಬಿಎಸ್‌ಸಿ/ಐಸಿಎಸ್‌ಸಿ ಹಾಗೂ ಅಂತಾರಾಷ್ಟ್ರೀಯ ಪಠ್ಯಕ್ರಮದ ಶಾಲೆಗಳ ಅವೈಜ್ಞಾನಿಕ ಬೆಳವಣಿಗೆ ನಿಯಂತ್ರಣವಾಗಬೇಕು.



ಇಂಗ್ಲಿಷನ್ನು ಒಂದು ಭಾಷೆಯಾಗಿಯಾದರೂ ಕಲಿಸುವುದಕ್ಕೆ ಈಗ ಇರುವ ವ್ಯವಸ್ಥೆಯನ್ನು ಬಲಗೊಳಿಸಬೇಕು. ಚಿಕ್ಕನಾಯಕನಹಳ್ಳಿ, ಕೆ.ಆರ್.ಪೇಟೆ ಮುಂತಾದ ಭಾಗಗಳಲ್ಲಿ 'ಮಕ್ಕಳಮನೆ' ಎಂಬ ಪ್ರಾಯೋಗಿಕ ಅನುಭವ ತುಂಬ ಉತ್ತೇಜನದ ಫಲಿತಾಂಶಗಳನ್ನು ನೀಡುತ್ತಿದೆ. ತುಮಕೂರು, ಮಂಡ್ಯ ಜಿಲ್ಲೆಗಳ ಈ ಅನುಭವ ಸಾರ್ವತ್ರೀಕರಣಗೊಳ್ಳಬೇಕು.

ನಲಿಕಲಿಯನ್ನು ಪೋಷಿಸಿ, ಏಕಮುಖವಾಗಿ ವ್ಯವಸ್ಥೆಯೊಳಗೆ ತರಲು ಪ್ರಯೋಗಗಳನ್ನು ಮಾಡುವುದನ್ನು ನಿಲ್ಲಿಸಬೇಕು. ಅದೇ ಶ್ರೇಷ್ಠ ಅನ್ನುವುದಾದರೆ ಬಾಹ್ಯ ಮೌಲ್ಯಮಾಪನ ಕೈಗೊಂಡು ಒಂದು ದಶಕಕ್ಕೂ ಮೀರಿ ಸರ್ಕಾರಿ ಶಾಲೆಗಳಲ್ಲಿ ಆಗುತ್ತಿರುವ ನಲಿಕಲಿಯ ಆಮೂಲಾಗ್ರ ಮೌಲ್ಯಮಾಪನ, ಸತ್ಯವನ್ನು ಹೊರಗೆಳೆಯ ಬಹುದಾಗಿದೆ.

ಇಷ್ಟೆಲ್ಲ ಹೇಳಿದ ಮೇಲೆ, ಎರಡು ಧ್ರುವವಾಗಿ ಸಮಾಜವನ್ನು ಇಬ್ಭಾಗಿಸಿರುವ ಈ ವ್ಯವಸ್ಥೆ ದುರಸ್ತಿಯಾಗುವುದು ಯಾವ ಕಾಲಕ್ಕೆ ಎನಿಸುತ್ತದೆ. ಅಲ್ಲಿಯವರೆಗೆ ವಂಚಿತರು ಮೌನವಾಗಿಯೇ ಸಹಿಸಬೇಕೇ ಅಥವಾ ಈ ನಾಡಿನ ಮನಸ್ಸಾಕ್ಷಿಯಂತಿರುವ ಹಲವರು ಕರೆಕೊಟ್ಟಂತೆ ಶಾಲಾ ಶಿಕ್ಷಣದ ರಾಷ್ಟ್ರೀಕರಣ ಮಾಡುವುದು ಇರುವ ಒಂದೇ ದಾರಿಯೇ?

# ಉನ್ನತ ಶಿಕ್ಷಣ : ಗುಣಮಟ್ಟದ ಸವಾಲುಗಳು

**-ಡಾ. ಜಯಪ್ರಕಾಶ ಮಾವಿನಕುಳಿ**

ಭಾರತದ ಚರಿತ್ರೆಯಲ್ಲಿ ೧೮೫೭ ಬಹಳ ಮುಖ್ಯವರುಷ ಯಾಕೆಂದರೆ ಅದೇ ವರುಷ ಭಾರತದ ಸ್ವಾತಂತ್ರ್ಯ ಸಂಗ್ರಾಮ ನಡೆಯಿತು ಮತ್ತು ಅದೇ ವರುಷ ಮೂರು ವಿಶ್ವವಿದ್ಯಾನಿಲಯಗಳು (ಕಲ್ಕತ್ತ, ಮುಂಬಯಿ ಮತ್ತು ಮದ್ರಾಸ್) ಸ್ಥಾಪನೆಗೊಂಡವು. ೧೮೮೨ರಲ್ಲಿ ಲಾಹೋರ್, ೧೮೮೭ರಲ್ಲಿ ಅಲಹಾಬಾದ್ ವಿಶ್ವವಿದ್ಯಾನಿಲಯ ಪ್ರಾರಂಭಗೊಂಡರೂ ಇವೆಲ್ಲವೂ ಲಂಡನ್ ವಿಶ್ವವಿದ್ಯಾನಿಲಯದ ಮಾದರಿಯಲ್ಲಿ ಕೇವಲ ಸಂಯೋಜನೆ ನೀಡುವುದಕ್ಕೆ ಮಾತ್ರ ಸೀಮಿತವಾಗಿದ್ದವು. ೧೯೦೨ರಲ್ಲಿ ಲಾರ್ಡ್ ಕಾರ್ನನ್ ಆದೇಶದಂತೆ ವಿಶ್ವವಿದ್ಯಾನಿಲಯ ಆಯೋಗ ನೇಮಕಗೊಂಡು ಅದರ ಸಲಹೆಯಂತೆ ಮತ್ತು ಬಂಗಾಲದ ಸರ್ ಅಶುತೋಷ್ ಮುಖರ್ಜಿಯವರ ಸ್ವಂತ ಪ್ರಯತ್ನದಿಂದ ವಿಶ್ವವಿದ್ಯಾನಿಲಯ ಕೇಂದ್ರಗಳಲ್ಲೂ ಪಾಠಪ್ರವಚನ, ಸಂಶೋಧನೆ ಆರಂಭಗೊಂಡವು. ಅಲ್ಲಿಯವರೆಗೆ ಕಾಲೇಜುಗಳಲ್ಲೇ ಸ್ನಾತಕೋತ್ತರ ಶಿಕ್ಷಣ ನಡೆಯುತಿತ್ತು. * ಈಗ ಪುನಃ ಸ್ನಾತಕೋತ್ತರ ಶಿಕ್ಷಣವನ್ನು ಕಾಲೇಜುಗಳಲ್ಲಿ ವ್ಯಾಪಕವಾಗಿ ನಡೆಸಲು ಉದಾರವಾಗಿ ಅನುಮತಿ ದೊರೆಯುತ್ತಿದೆ.

ಕರ್ನಾಟಕದಲ್ಲಿ ಸರ್.ಎಂ.ವಿಶ್ವೇಶ್ವರಯ್ಯನವರ ಮುಂದಾಲೋಚನೆಯಿಂದ ೧೯೧೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸ್ಥಾಪನೆಗೊಂಡಿತು. ಅದೊಂದು ಸುವರ್ಣಾಕ್ಷರದಲ್ಲಿ ಬರೆದಿಡಬಹುದಾದ ವರುಷ ಅನಂತರ ಕರ್ನಾಟಕ ವಿಶ್ವವಿದ್ಯಾನಿಲಯ (೧೯೫೦), ಬೆಂಗಳೂರು ವಿಶ್ವವಿದ್ಯಾನಿಲಯ (೧೯೬೪), ಮಂಗಳೂರು (೧೯೮೦), ಗುಲ್ಬರ್ಗಾ (೧೯೮೦), ಕುವೆಂಪು ವಿಶ್ವವಿದ್ಯಾನಿಲಯ (೧೯೮೭) ಸ್ಥಾಪನೆಗೊಂಡು ಈಗ ಕರ್ನಾಟಕದಲ್ಲಿ ಒಂದು ಕೇಂದ್ರ ವಿಶ್ವವಿದ್ಯಾನಿಲಯ, ೨೫ ರಾಜ್ಯಘೋಷಿತ ವಿಶ್ವವಿದ್ಯಾನಿಲಯಗಳು, ಹದಿನಾಲ್ಕು ಡೀಮ್ಡ್ ವಿಶ್ವವಿದ್ಯಾನಿಲಯಗಳು ಮತ್ತು ಹನ್ನೆರಡು ಖಾಸಗಿ ವಿಶ್ವವಿದ್ಯಾನಿಲಯಗಳು ಸೇರಿ ಒಟ್ಟು ಐವತ್ತೆರಡು ವಿಶ್ವವಿದ್ಯಾನಿಲಯಗಳಿವೆ. ಇಡೀ ರಾಷ್ಟ್ರದಲ್ಲಿ ೪೬ ಕೇಂದ್ರ ವಿಶ್ವವಿದ್ಯಾನಿಲಯಗಳು, ೩೫೮ ರಾಜ್ಯ ವಿಶ್ವವಿದ್ಯಾನಿಲಯಗಳು, ೧೨೨ ಡೀಮ್ಡ್ ವಿಶ್ವವಿದ್ಯಾನಿಲಯಗಳು, ೨೫೮ ಖಾಸಗಿ ವಿಶ್ವವಿದ್ಯಾನಿಲಯಗಳು ಸೇರಿ ಒಟ್ಟು ೭೮೪ ವಿಶ್ವವಿದ್ಯಾನಿಲಯಗಳು ಉನ್ನತ ಶಿಕ್ಷಣ ಕ್ಷೇತ್ರದಲ್ಲಿವೆ. ರಾಜಸ್ಥಾನದಲ್ಲಿ ಅತಿಹೆಚ್ಚು ಖಾಸಗಿ ವಿಶ್ವವಿದ್ಯಾನಿಲಯ (೪೨) ಗಳಿವೆ. ನಂತರ ಉತ್ತರ ಪ್ರದೇಶ, ಗುಜರಾತ್ (೨೮), ಗೋವಾದಲ್ಲಿರುವುದು ಒಂದೇ ಒಂದು ರಾಜ್ಯ ವಿಶ್ವವಿದ್ಯಾನಿಲಯ.

೧೯೭೬ರ ವಿಶ್ವವಿದ್ಯಾನಿಲಯದ ಅಧಿನಿಯಮದಲ್ಲಿ ಸಿಂಡಿಕೇಟ್, ಸೆನೆಟ್ ಮತ್ತು ಶಿಕ್ಷಣ ಮಂಡಳಿ ಹೀಗೆ ವಿಶ್ವವಿದ್ಯಾನಿಲಯಕ್ಕೆ ಮೂರು ಅಂಗ ಸಂಸ್ಥೆಗಳಿದ್ದವು. ಈ ಅಂಗಸಂಸ್ಥೆಗಳಲ್ಲಿ ಶಿಕ್ಷಕರು, ಶಿಕ್ಷಣತಜ್ಞರು, ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳು ಎಲ್ಲರೂ ಇರುತ್ತಿದ್ದರು. ಕೆಲವು ಭಾಗ ನಾಮನಿರ್ದೇಶನ ಮತ್ತು ಕೆಲವು ಭಾಗ ಆಯಾ ಕ್ಷೇತ್ರದಿಂದ ಚುನಾವಣೆ ಮೂಲಕ, ಶಿಕ್ಷಕರ ಕ್ಷೇತ್ರ, ಪದವೀಧರ ಕ್ಷೇತ್ರ, ರೀಡರ್ ಕ್ಷೇತ್ರ ಹೀಗೆ...೧೯೭೬ರ ಅಧಿನಿಯಮದಲ್ಲಿ ಸಿಂಡಿಕೇಟ್‌ಗೆ ಮೂವರನ್ನು, ಸೆನೆಟ್‌ಗೆ ೧೫ ಜನರನ್ನು ಮತ್ತು ಶಿಕ್ಷಣ ಮಂಡಳಿಗೆ ಆರು ಜನರನ್ನು ವಿಶ್ವವಿದ್ಯಾನಿಲಯದ ಕುಲಾಧಿಪತಿಗಳಾದ ಮಾನ್ಯ ರಾಜ್ಯಪಾಲರು ಕರ್ನಾಟಕ ಸರ್ಕಾರದ ಸಲಹೆಯ ಮೇರೆಗೆ ಶಿಕ್ಷಣ ತಜ್ಞರನ್ನು ನಾಮನಿರ್ದೇಶನ ಮಾಡಬಹುದಿತ್ತು. ಹೀಗೆ ನಾಮನಿರ್ದೇಶನ ಮಾಡುವಾಗ ಪರಿಶಿಷ್ಟವರ್ಗ, ಪರಿಶಿಷ್ಟಜಾತಿ, ಮಹಿಳೆಯರುಗಳಿಗೆ ಮೀಸಲಾತಿಯು ಜಾರಿಯಲ್ಲಿತ್ತು.

ಕರ್ನಾಟಕದ ಎಲ್ಲ ವಿಶ್ವ ವಿದ್ಯಾನಿಲಯಗಳ ಪದ ನಿಮಿತ್ತ ಕುಲಾಧಿಪತಿಗಳಾದ ಮಾನ್ಯ ರಾಜ್ಯಪಾಲರು ವಿಶ್ವವಿದ್ಯಾನಿಲಯದ ೧೯೭೬ರ ಶಾಸನದ ಅಧಿನಿಯಮ ೬೧ರಲ್ಲಿ ದತ್ತವಾದ ಅಧಿಕಾರ ಚಲಾಯಿಸಿ ರಾಜ್ಯ ಸರ್ಕಾರದ ಒಪ್ಪಿಗೆ ಮೇರೆಗೆ ೧.೪.೧೯೯೨ ರಂದು ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಮಾಜಿ ಕುಲಪತಿಗಳಾದ ಪ್ರೊ, ನವನೀತರಾವ್ ರವರ ಅಧ್ಯಕ್ಷತೆಯಲ್ಲಿ 'ವಿಶ್ವವಿದ್ಯಾನಿಲಯಗಳ ಪುನರಾವಲೋಕನ' ಮಾಡಿ ಸಲಹೆ ನೀಡಲು ಸಮಿತಿಯನ್ನು ರಚಿಸಿದರು. ಅದರಲ್ಲಿನ ನಾಲ್ಕು ಜನರ ಸಮಿತಿಯಲ್ಲಿ ಮೂರು ಜನರು ಮಾಜಿ ಉಪಕುಲಪತಿಗಳು, ಒಂದು ವರುಷದೊಳಗೆ ವರದಿ ನೀಡಬೇಕೆಂದು ಹೇಳಿದ್ದರೂ ತನ್ನ ಕಾಲಾವಧಿಯನ್ನು ವಿಸ್ತರಿಸಿಕೊಂಡು ಸುಮಾರು ಎರಡು ವರ್ಷ ತೆಗೆದುಕೊಂಡು ತನ್ನ ೪೨ ಪುಟಗಳ ಮುದ್ರಿತ ವರದಿಯನ್ನು ೧.೩.೧೯೯೪ರಂದು ಸರ್ಕಾರಕ್ಕೆ ಸಲ್ಲಿಸಿತು.

ಸುಮಾರು ೨೫ ಅಂಶಗಳ ಬಗ್ಗೆ ಈ ವರದಿ ಬೆಳಕು ಚೆಲ್ಲಿದ್ದರೂ ಮುಖ್ಯವಾದವು ಗಳೆಂದರೆ :

೧. ಈಗಿನ ಸಿಂಡಿಕೇಟ್ ಎಂಬ ಹೆಸರನ್ನು ತೆಗೆದು ಎಕ್ಸಿಕ್ಯೂಟಿವ್ ಕೌನ್ಸಿಲ್ ಎಂದು ಕರೆಯಬೇಕು. ಈಗಿದ್ದ ೧೯ ಸದಸ್ಯರ ಬದಲು ೧೪ ಸದಸ್ಯರು ಇರಬೇಕು.

೨. ಈಗ ಇರುವ ಸೆನೆಟ್ ಮತ್ತು ಅಕಾಡೆಮಿಕ್ ಕೌನ್ಸಿಲ್ ಬದಲಿಗೆ ಒಂದೇ ಒಂದು ಅಕಾಡೆಮಿಕ್ ಸೆನೆಟ್' ಇರಬೇಕು.

ದುರಂತವೆಂದರೆ ಈ ಎರಡೂ ಅಂಗಸಂಸ್ಥೆಗಳಲ್ಲಿ ಶಿಕ್ಷಕರು, ಪದವೀಧರರುಗಳು ಆಯ್ಕೆಯಾಗಿ ಬರುವಂತಿಲ್ಲ. ಎಲ್ಲರೂ ನಾಮನಿರ್ದೇಶನಗೊಂಡಿರಬೇಕು ಎಂದು ಹೇಳಿ ತನ್ನ ಪ್ರಜಾಪ್ರಭುತ್ವ ವಿರೋಧಿ ಧೋರಣೆಯನ್ನು ಎದ್ದು ತೋರಿಸಿತು.

ವರದಿಯಲ್ಲಿ ಈಗ ಇರುವ ಶಿಕ್ಷಣ ಸಚಿವರ ಸಹಕುಲಾಧಿಪತಿಗಳ (ಪ್ರೊ. ಛಾನ್ಸಲರ್) ಸ್ಥಾನವನ್ನು ಸಂಪೂರ್ಣವಾಗಿ ಕೈಬಿಡಬೇಕು. ಶಿಕ್ಷಣ ಸಚಿವರಿಗೆ ಯಾವ ಸ್ಥಾನವೂ ಇಲ್ಲ. ಆಗ ಇದ್ದ ಕುಲಪತಿಗಳನ್ನು ಆಯ್ಕೆ ಮಾಡುವ ಸಮಿತಿಯಲ್ಲಿ (ಒಬ್ಬರು ಕುಲಾಧಿಪತಿಗಳಿಂದ, ಒಬ್ಬರು ಸರ್ಕಾರದಿಂದ, ಒಬ್ಬರು ಯು.ಜಿ.ಸಿಯಿಂದ, ಒಬ್ಬರು ಸಿಂಡಿಕೇಟ್‌ನಿಂದ) ನಾಲ್ಕು ಜನರ ಸದಸ್ಯರ ಸಮಿತಿಗೆ ಬದಲು ಮೂರು ಜನರ ಸಮಿತಿ ಮಾಡಲು (ಎಕ್ಸ್‌ಕ್ಯೂಟೀವ್ ಕೌನ್ಸಿಲ್‌ನಿಂದ, ಅಕಾಡೆಮಿಕ್ ಸೆನೆಟ್‌ನಿಂದ ಮತ್ತು ಕುಲಾಧಿಪತಿಗಳಿಂದ ಒಬ್ಬೊಬ್ಬರು) ಶಿಫಾರಸು ಮಾಡಿತ್ತು. ಸರ್ಕಾರ ಕುಲಪತಿಗಳ ಆಯ್ಕೆಯ ಪ್ರಕ್ರಿಯೆಯಲ್ಲಿ ಭಾಗವಹಿಸುವಂತಿರಲಿಲ್ಲ. ಆಗ ಇದ್ದ (ಈಗಲೂ ಇರುವ) ಒಬ್ಬ ಕುಲಪತಿಗೆ ನೆರವಾಗಲು 'ಸಹಕುಲಪತಿ' ಯನ್ನು ವಿಶ್ವವಿದ್ಯಾನಿಲಯದ ಪ್ರೊಫೆಸರ್‌ಗಳಿಂದ ಎಕ್ಸ್‌ಕ್ಯೂಟೀವ್ ಕೌನ್ಸಿಲ್ ನೇಮಿಸಬೇಕು. ಖಾಸಗಿ ಕಾಲೇಜುಗಳಿಗೆ ಸಂಯೋಜನೆ ನೀಡುವ ಪೂರ್ಣಾಧಿಕಾರ ವಿಶ್ವವಿದ್ಯಾನಿಲಯದ್ದು (ಈಗ ಬರಿಯ ಶಿಫಾರಸ್ಸು ಮಾಡಬಹುದು. ಸರ್ಕಾರ ಅಂತಿಮ ನಿರ್ಧಾರ ತೆಗೆದುಕೊಳ್ಳುತ್ತೆ). ಬೋಧಕ / ಬೋಧಕೇತರ ನೌಕರರ ಆಯ್ಕೆಯಲ್ಲಿ ಕುಲಾಧಿಪತಿಗಳದ್ದು ಅಂತಿಮ ತೀರ್ಮಾನವಲ್ಲ, ಆಯ್ಕೆ ಸಮಿತಿಯದ್ದೇ ಅಂತಿಮ ತೀರ್ಮಾನ. ಈಗ ಇರುವ ಒಬ್ಬ ರಿಜಿಸ್ಟ್ರಾರ್ ಬದಲು ಮೂವರು ರಿಜಿಸ್ಟ್ರಾರ್‌ಗಳನ್ನು ನೇಮಿಸಬೇಕು. ಇದರ ಜೊತೆಯಲ್ಲಿ ಕರ್ನಾಟಕದಲ್ಲಿ ಒಂದು ಉನ್ನತ ಶಿಕ್ಷಣ ಕೌನ್ಸಿಲ್ ರಚಿಸಬೇಕು... ಇತ್ಯಾದಿ....ಇತ್ಯಾದಿ.

ಒಟ್ಟಾರೆ ನೋಡಿದರೆ ಈ ವರದಿಯಲ್ಲಿ ಸಂಪೂರ್ಣವಾಗಿ ಸರ್ಕಾರವನ್ನು ಬದಿಗೆ ಸರಿಸಿ ಇಡಲಾಗಿತ್ತು. ವಿಶ್ವವಿದ್ಯಾನಿಲಯದ ಆಡಳಿತದಲ್ಲಿ ಸರ್ಕಾರ ಮೂಗು ತೂರಿಸದಂತೆ ವರದಿ ಹೇಳಿತ್ತು.

೨೦೦೦ನೇ ಇಸವಿಯಲ್ಲಿ ಎಸ್. ಎಂ. ಕೃಷ್ಣ ರವರು ಮುಖ್ಯಮಂತ್ರಿ ಯಾಗಿದ್ದಾಗ ಮತ್ತು ಡಾ.ಜಿ. ಪರಮೇಶ್ವರರವರು ಶಿಕ್ಷಣ ಮಂತ್ರಿಗಳಾಗಿದ್ದಾಗ ಕಾಂಗ್ರೆಸ್ ಪಕ್ಷದ ಸರ್ಕಾರ ವಿಶ್ವವಿದ್ಯಾನಿಲಯಕ್ಕೆ ಹೊಸ ಅಧಿನಿಯಮವನ್ನು ಜಾರಿಗೆ ತಂದಿತು. ಈಗಲೂ ಜಾರಿಯಲ್ಲಿರುವ ಈ ಅಧಿನಿಯಮದಲ್ಲಿ ಕೆಲವು ಒಳ್ಳೆಯ ಅಂಶಗಳಿವೆ.

ವಿಶ್ವವಿದ್ಯಾನಿಲಯದ ಮೂರು ಅಂಗಸಂಸ್ಥೆಗಳಾಗಿದ್ದ ಸಿಂಡಿಕೇಟ್, ಸೆನೆಟ್ ಮತ್ತು ಶಿಕ್ಷಣ ಮಂಡಳಿಗಳ ಪೈಕಿ ಸೆನೆಟ್‌ನ್ನು ರದ್ದುಮಾಡಿತು. ಇದು ಒಳ್ಳೆಯ ಅಂಶ ಯಾಕೆಂದರೆ ಸೆನೆಟ್ ಹಣಕಾಸಿನ ಬಗ್ಗೆ, ಆಯವ್ಯಯ ಒಪ್ಪುವ ಬಗ್ಗೆ, ಶಿಕ್ಷಣಮಂಡಳಿ ತೀರ್ಮಾನ ಮಾಡಿದ್ದೇ ಇಲ್ಲಿ ಚರ್ವಿತಚರ್ವಣವಾಗಿ ಇದೊಂದು ವಿಧಾನಿಸುವ ಸಂಸ್ಥೆಯಾಗಿತ್ತು. ಈ ಅಧಿನಿಯಮದ ಪ್ರಕಾರ ಶಿಕ್ಷಣ ಮಂಡಳಿಗೆ ಅನವಶ್ಯಕವಾಗಿ ಪದನಿಮಿತ್ತ ತುಂಬಿಕೊಳ್ಳುತ್ತಿದ್ದ ವಿಶ್ವವಿದ್ಯಾನಿಲಯದ ಪ್ರೊಫೆಸರ್‌ಗಳನ್ನು ತಪ್ಪಿಸಿ ಕೇವಲ ಐದು ಪ್ರೊಫೆಸರ್‌ಗಳಿಗೆ ಇಳಿಸಿತು. ಹೀಗಾಗಿ ಶಿಕ್ಷಣ ಮಂಡಳಿ ಪ್ರೊಫೆಸರ್ ಮಂಡಳಿಯಾಗುವುದನ್ನು ತಪ್ಪಿಸಿತು. ಇದೇ ರೀತಿಯಲ್ಲಿ ಈ ಹಿಂದಿನ ಅಧಿನಿಯಮದಲ್ಲಿ

ಶೇಕಡಾ ೨೫ ರಷ್ಟು ಪ್ರಿನ್ಸಿಪಾಲರುಗಳು ಶಿಕ್ಷಣಮಂಡಳಿ ಸದಸ್ಯರಾಗಿರುತ್ತಿದ್ದರು. ಇದರ ಪರಿಣಾಮ ಬೆಂಗಳೂರಿನಂಥ ವಿಶ್ವವಿದ್ಯಾಲಯದ ಶಿಕ್ಷಣಮಂಡಳಿಯಲ್ಲಿ ನೂರಕ್ಕೂ ಹೆಚ್ಚು ಪ್ರಿನ್ಸಿಪಾಲರು ಶಿಕ್ಷಣ ಮಂಡಳಿ ಸದಸ್ಯರಾಗಿರುತ್ತಿದ್ದರೆ, ಈ ಅಧಿನಿಯಮದ ಪ್ರಕಾರ ಕೇವಲ ಹತ್ತು ಕಾಲೇಜಿನ ಪ್ರಿನ್ಸಿಪಾಲರು ಶಿಕ್ಷಣ ಮಂಡಳಿ ಸದಸ್ಯರಾಗಿರುತ್ತಾರೆ. ಇದೇ ರೀತಿಯಲ್ಲಿ ಕುಲಾಧಿಪತಿಗಳು ನಾಮನಿರ್ದೇಶನ ಮಾಡುವ ಸಂಖ್ಯೆ ೨೫ ರಿಂದ ಎರಡಕ್ಕೆ ಇಳಿಯಿತು. ಸರ್ಕಾರ ಮಾತ್ರ ತಾನು ನಾಮನಿರ್ದೇಶನ ಮಾಡುವ ೧೫ ಸದಸ್ಯರ ಅಧಿಕಾರವನ್ನು ತಾನೇ ಇಟ್ಟುಕೊಂಡಿತು! ಇದು ಸರಿಯಲ್ಲ.

ಕರ್ನಾಟಕ ಉನ್ನತ ಶಿಕ್ಷಣ ಇತಿಹಾಸದಲ್ಲಿ ಅತ್ಯಂತ ದುಃಖದ ಸಂಗತಿ ಎಂದರೆ ವಿಶ್ವವಿದ್ಯಾನಿಲಯದ ಅಂಗಸಂಸ್ಥೆಗಳಲ್ಲಿ ಸೇವಾನಿರತ ಕಾಲೇಜು ಶಿಕ್ಷಕರು ಯಾವ ಕಾರಣದಿಂದಲೂ ಇರಬಾರದು ಎಂದು ಈ ಅಧಿನಿಯಮ ಹೇಳಿದ್ದು. ಹೀಗಾಗಿ ವಿಶ್ವವಿದ್ಯಾನಿಲಯ ತನ್ನ ತಾಯಿ ಸ್ಪಂದನವನ್ನು ಕಳೆದುಕೊಂಡಿದೆ. ಇನ್ನೊಂದು ಎಂದರೆ ಚುನಾವಣೆಯೇ ಇರಬಾರದು, ಎಲ್ಲವೂ ನಾಮನಿರ್ದೇಶನ, ಅಧಿನಿಯಮದಲ್ಲಿ 'ಶಿಕ್ಷಣತಜ್ಞರನ್ನು ನಾವು ನಿರ್ದೇಶನಮಾಡಬೇಕೆಂದು ಹೇಳಿದ್ದರೂ ವಾಸ್ತವದಲ್ಲಿ ರಾಜಕೀಯ ಪಕ್ಷದ ಪಟಾಲಮ್ಮುಗಳೇ ನಾಮನಿರ್ದೇಶನವಾಗುತ್ತಾರೆ, ಆಗುತ್ತಿದ್ದಾರೆ.

ಇಂತಹ ಬಿಕ್ಕಟ್ಟು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಉದ್ಭವಿಸಿತ್ತು. ಕರ್ನಾಟಕ ಸರ್ಕಾರ ಶಿಕ್ಷಣತಜ್ಞರೆಂದು ಹೆಸರಿಸಿ ೬ ಜನರನ್ನು (ಕೆ.ಎ.ಆನಂದ್, ಕೃಷ್ಣಾನಂದ್, ಸಂಜಯ ಧರಿವಾಲ್, ಎ.ಪಿ.ರಂಗನಾಥ್, ಸಿ.ಆರ್.ಸೋಮಸುಂದರ್ ಮತ್ತು ಪ್ರೊ. ಇಂದುಮತಿ ರಾವ್) ಸಿಂಡಿಕೇಟ್‌ಗೆ ನಾಮನಿರ್ದೇಶನ ಮಾಡಿತು. ಪ್ರೊ ಇಂದುಮತಿ ರಾವ್ ರವರನ್ನು ಬಿಟ್ಟು ಬೇರೆ ಯಾರೂ ಶಿಕ್ಷಣತಜ್ಞರಾಗಿರಲಿಲ್ಲ. ಆಗ ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಪ್ರೊ.ಎಂ.ಎಸ್. ತಿಮ್ಮಪ್ಪನವರು ಸರ್ಕಾರದ ಈ ನಿರ್ದೇಶನವನ್ನು ಜಾರಿಗೆ ತರಲು ನಿರಾಕರಿಸಿದರು. (ಎಷ್ಟು ಜನ ಡಾ. ತಿಮ್ಮಪ್ಪನಂಥವರು ಇರುತ್ತಾರೆ ಬಿಡಿ!). ಶಿಕ್ಷಣ ಇತಿಹಾಸದಲ್ಲಿ ಪ್ರಥಮ ಬಾರಿಗೆ ವಿಶ್ವವಿದ್ಯಾನಿಲಯಕ್ಕೂ ಮತ್ತು ಸರ್ಕಾರಕ್ಕೂ ಸಂಘರ್ಷ ಆರಂಭವಾಯಿತು. ಕುಲಾಧಿಪತಿಗಳು ಮತ್ತು ನ್ಯಾಯಾಂಗ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತು. ಆದರೆ ತಮ್ಮನ್ನು ಪ್ರಶ್ನಿಸಿದವರ ನಡುಮುರಿಯಲು ಅಧಿನಿಯಮಕ್ಕೆ ಐತಿಹಾಸಿಕ (!) ತಿದ್ದುಪಡಿಯನ್ನು ತಂದು ಶಿಕ್ಷಣ ತಜ್ಞರು ಮಾತ್ರವಲ್ಲ, ಶಿಕ್ಷಣಕ್ಷೇತ್ರದಲ್ಲಿ ಕೆಲಸಮಾಡಿದವರೂ ಸೇರುತ್ತಾರೆ ಎಂದು ನಿಯಮಬದಲಿಸಿ ಸುಗ್ರೀವಾಜ್ಞೆಯನ್ನು ಯಾವ ನಾಚಿಕೆಯೂ ಇಲ್ಲದೆ ಧರ್ಮಸಿಂಗ್ ಸರ್ಕಾರ ಕಳುಹಿಸಿಕೊಟ್ಟಿತು. ಆದರೆ ಶಿಕ್ಷಣ ಪಕ್ಷಪಾತಿ ರಾಜ್ಯಪಾಲರಾಗಿದ್ದ ಟಿ.ಎನ್. ಚತುರ್ವೇದಿಯವರು ಈ ಸುಗ್ರೀವಾಜ್ಞೆಗೆ ಸಹಿ ಹಾಕಲು ನಿರಾಕರಿಸಿ ವಾಪಾಸು ಮರುಪರಿಶೀಲನೆಗೆ ಕಳುಹಿಸಿಕೊಟ್ಟರು.

ಇದೇ ಅಧಿನಿಯಮ ೭೨ರ ಪ್ರಕಾರ ಉನ್ನತ ಶಿಕ್ಷಣ ಪಡೆದವರು ಅಧ್ಯಕ್ಷರಾಗಿರುವ 'ಅಂತರ ವಿಶ್ವವಿದ್ಯಾನಿಲಯ ಮಂಡಳಿ'ಯಲ್ಲಿ ಎಲ್ಲಾ ಕುಲಪತಿಗಳು ಸದಸ್ಯರಾಗಿರುತ್ತಾರೆ. ಈ ಮಂಡಳಿಯ ಶಿಫಾರಸನ್ನು ಸರ್ಕಾರ ಒಪ್ಪಿದರೆ ವಿಶ್ವವಿದ್ಯಾನಿಲಯ ತಲೆಬಗ್ಗಿಸಿ ಜಾರಿಗೆ ತರಬೇಕು. ಒಂದು ವಿಶ್ವವಿದ್ಯಾನಿಲಯದ ಸ್ವಾಯತ್ತತೆಯನ್ನು ಕಸಿದುಕೊಂಡು ಸರ್ಕಾರ ಸ್ವಾಹಾ ಮಾಡಿದೆ.

ಕರ್ನಾಟಕ ಸರ್ಕಾರವು ೩೦ ನವೆಂಬರ್ ೨ ರಲ್ಲಿ ಪ್ರೊ. ಎಂ. ಆರ್. ಶ್ರೀನಿವಾಸನ್ ಅವರ ಅಧ್ಯಕ್ಷತೆಯಲ್ಲಿ ೧೬ ಸದಸ್ಯರಿರುವ ಟಾಸ್ಕ್ ಫೋರ್ಸನ್ನು ನೇಮಿಸಿತು. ಇದು ಸುಮಾರು ಎರಡು ವರ್ಷ ತೆಗೆದುಕೊಂಡು ಅನೇಕ ಸಭೆಗಳನ್ನು ನಡೆಸಿ ೧೪ ಆಗಸ್ಟ್ ೨೦೦೪ ರಂದು ಕೊನೆಯ ಸಭೆ ನಡೆಸಿ ೧೧ ಅಧ್ಯಾಯಗಳ ೨೨೪ ಪುಟಗಳ ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿತು. ಮುಖ್ಯವಾಗಿ "ಅಂತರ ವಿಶ್ವವಿದ್ಯಾನಿಲಯ ಮಂಡಳಿ' ಬದಲು ಉನ್ನತ ಶಿಕ್ಷಣ ಕೌನ್ಸಿಲ್ ರಚನೆಯಾಗಿ ಒಬ್ಬ ಶ್ರೇಷ್ಠ ಶೈಕ್ಷಣಿಕ ತಜ್ಞರು ಅಧ್ಯಕ್ಷರಾಗಿ, ಶಿಕ್ಷಣದ ಪಕ್ಷಪಾತಿಗಳು ಇದರ ಸದಸ್ಯರಾಗಬೇಕು. ಇದು ರಾಜ್ಯದ ಉನ್ನತ ಶಿಕ್ಷಣದ ಆಗುಹೋಗುಗಳನ್ನು ನಿರ್ಧರಿಸಬೇಕು. ಕಾಲೇಜುಗಳಲ್ಲಿ ಪ್ರಿನ್ಸಿಪಾಲರನ್ನು ನೇಮಿಸಿಕೊಳ್ಳುವಾಗ ಅವರ ಶೈಕ್ಷಣಿಕ ಅರ್ಹತೆ, ನಾಯಕತ್ವದ ಗುಣ, ಮಾನವೀಯ ಸಂಬಂಧಗಳು ಇನ್ನಿತರ ಗುಣಗಳನ್ನು ಮತ್ತು ೫ ರಿಂದ ೧೦ ವರುಷಗಳವರೆಗೆ ಅವಧಿ ಇರುವವರನ್ನು ಮಾತ್ರ ಪ್ರಿನ್ಸಿಪಾಲರನ್ನಾಗಿ ನೇಮಿಸಿಕೊಳ್ಳಬೇಕು. ಮಹಿಳಾ ವಿಶ್ವವಿದ್ಯಾನಿಲಯ ಮತ್ತು ಮುಕ್ತವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಬೇಕು.

ಕರ್ನಾಟಕದ ಉನ್ನತ ಶಿಕ್ಷಣದ ಸವಾಲುಗಳನ್ನು ರಾಷ್ಟ್ರದ ಚೌಕಟ್ಟಿನಲ್ಲಿ ಇಟ್ಟು ನೋಡೋಣ. ೨೧ನೇ ಶತಮಾನದ ಸವಾಲುಗಳನ್ನು ಎದುರಿಸಲು ಉತ್ಕೃಷ್ಟ ಶಿಕ್ಷಣದ ವ್ಯವಸ್ಥೆ, ವಿವಿಧ ಜ್ಞಾನ ಶಾಖೆಗಳ ಅಭಿವೃದ್ಧಿ, ಬೌದ್ಧಿಕ ಆಸ್ತಿ ಹಕ್ಕು, ಕೃಷಿ ಮತ್ತು ಉದ್ಯಮದಲ್ಲಿ ತಜ್ಞತೆ, ಈ ಮೂಲಕ ಸರ್ಕಾರದ ದಕ್ಷತೆ ಮತ್ತು ಪಾರದರ್ಶಕತೆಯನ್ನು ಹೆಚ್ಚಿಸಲು ಸಹಾಯವಾಗುವಂತೆ ಪ್ರಧಾನಿ ಮನಮೋಹನ್ ಸಿಂಗ್‌ರವರು ಜೂನ್ ೧೩, ೨೦೦೫ ರಂದು ಜ್ಞಾನ ಆಯೋಗ (Knowledge Commission) ವನ್ನು ರಚಿಸಿದರು. ಸ್ಯಾಮ್ ಪಿಟ್ರೋಡ ಅಧ್ಯಕ್ಷರು, ಡಾ. ಪಿವಿನ್ ಭಾರ್ಗವ್ ಉಪಾಧ್ಯಕ್ಷರು ಮತ್ತು ಆರು ಸದಸ್ಯರುಗಳು, ಅದರಲ್ಲಿ ಇನ್ಫೋಸಿಸ್‌ನ ವಂದನ ನೀಟ್ ಸಹ ಒಬ್ಬರು. ಅದರ ಮುಖ್ಯ ಮಾತುಗಳು-

ಉನ್ನತ ಶಿಕ್ಷಣದ ಜೀವಧಾತುಗಳು-ವಿಶ್ವವಿದ್ಯಾನಿಲಯ ಮತ್ತು ಪದವಿ ಕಾಲೇಜುಗಳು, ಹೀಗಾಗಿ ಇವುಗಳನ್ನು ಮೇಲ್ದರ್ಜೆಗೆ ಏರಿಸಬೇಕು. ಯಾಕೆಂದರೆ ಜಗತ್ತಿನ ೫೦ ಶ್ರೇಷ್ಠ ವಿಶ್ವವಿದ್ಯಾನಿಲಯಗಳ ಪೈಕಿ ಭಾರತದ್ದು ಯಾವುದೂ ಇಲ್ಲ. ಇದಕ್ಕೆ ಸಾಮಾನ್ಯವಾದ ಕಾರಣಗಳೇನೆಂದರೆ ಪಠ್ಯ, ಸೃಜನಶೀಲಾತ್ಮಕ ಕಲಿಕೆ, ಘಂಟೆಗಳ ನಡುವೆ ಬಿಗಿಬಂಧ, ಫಲಿತಾಂಶ ಪ್ರಕಟಣೆಯಲ್ಲಿ ಅನಿರ್ದಿಷ್ಟತೆ, ಸೌಕರ್ಯಗಳ ಅತಿಕೊರತೆ, ಅಂತರ್‌ಶಿಸ್ತು

ಅಧ್ಯಯನಕ್ಕೆ ಅಡ್ಡಿ. ಸಂಶೋಧನೆಯಲ್ಲಿ ನಿರಾಸಕ್ತಿ, ಪ್ರಕಟಣೆಯಲ್ಲಿ ನಿರಾಸಕ್ತಿ ಹೀಗೆ ಅನೇಕ ಸಮಸ್ಯೆಗಳನ್ನು ಜ್ಞಾನ ಆಯೋಗ ಪಟ್ಟಿಮಾಡಿದೆ.

ಮುಂದುವರೆಯುತ್ತಾ ೨೦೧೫ರೊಳಗೆ ೧೫೦೦ ವಿಶ್ವವಿದ್ಯಾನಿಲಯಗಳು ಸ್ಥಾಪಿತವಾಗಬೇಕು. (ಈಗ ಇದ್ದುದು ಕೇವಲ ೭೮೪). ನಿರಂತರವಾಗಿ ವಿದ್ಯಾರ್ಥಿಯನ್ನು ಮೌಲ್ಯಮಾಪನ ಮಾಡುವಂತಾಗಬೇಕು, ಸೆಮಿಸ್ಟರ್ ಮಾಡಬೇಕು, ಸಂಶೋಧನೆಗೆ ವಿಶೇಷ ಧನಸಂ ಾಯ ಮಾಡಬೇಕು. ಅದೇ ವಿಶ್ವವಿದ್ಯಾನಿಲಯದವರ ನೇಮಕಾತಿಯಲ್ಲಿ ಗರಿಷ್ಠ ೫೦ ಶೇಕಡಕ್ಕಿಂತ ಮೇಲೇರದಂತೆ ನಿರ್ಬಂಧಿಸಬೇಕು. ಸ್ವಾಯತ್ತತೆ, ಕಮ್ಯುನಿಟಿ ಕಾಲೇಜ್‌ಗಳಿಗೆ ಪ್ರೋತ್ಸಾಹಿಸಬೇಕು, ಖಾಸಗಿ ವಿಶ್ವವಿದ್ಯಾನಿಲಯಗಳು ಹೆಚ್ಚಾಗಬೇಕು, ಯು.ಜಿ.ಸಿ.ಬದಲು 'ನೂತನ ಸ್ವತಂತ್ರ ಉನ್ನತ ಶಿಕ್ಷಣ ಪ್ರಾಧಿಕಾರ' ರಚನೆಯಾಗಬೇಕು. ಈ ಪ್ರಾಧಿಕಾರದಲ್ಲಿ ಒಬ್ಬ ಅಧ್ಯಕ್ಷ ಮತ್ತು ಆರು ತಜ್ಞ ಸದಸ್ಯರಿರುತ್ತಾರೆ. ಆರು ವರ್ಷಗಳ ಅವಧಿಯ ಈ ಪ್ರಾಧಿಕಾರ ಇಡೀ ರಾಷ್ಟ್ರದ ಉನ್ನತ ಶಿಕ್ಷಣವನ್ನು ನಿಯಂತ್ರಿಸಬೇಕು. ನಮ್ಮ ವಿಶ್ವವಿದ್ಯಾನಿಲಯಗಳಿಗೆ ಸ್ಪರ್ಧೆ ನೀಡಲು ವಿದೇಶದ ವಿಶ್ವವಿದ್ಯಾನಿಲಯಗಳನ್ನು ಆಹ್ವಾನಿಸಬೇಕು, ರಾಷ್ಟ್ರೀಯ ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಿ ದೇಶದ ಶ್ರೇಷ್ಠ ವಿಶ್ವವಿದ್ಯಾನಿಲಯಗಳನ್ನಾಗಿಸಬೇಕು.

ನಮ್ಮ ರಾಜ್ಯ ಸರ್ಕಾರದ ಶಿಕ್ಷಣದ ಮಂತ್ರಿಗಳಾದ ಬಸವರಾಜ ರಾಯರೆಡ್ಡಿ ಯವರು ವಿಶ್ವವಿದ್ಯಾನಿಲಯದಲ್ಲಿ ಭ್ರಷ್ಟಾಚಾರ ತೊಡೆದುಹಾಕಿ ಪಾರದರ್ಶಕತೆ ತರುವ ಉದ್ದೇಶವನ್ನು ಹೊಂದಿ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಮಸೂದೆ-೨೦೧೭ನ್ನು ವಿಧಾನಸಭೆಯಲ್ಲಿ ಮಂಡಿಸಿದ್ದಾರೆ ಮತ್ತು ವಿಧಾನಸಭೆ ಅದನ್ನು ಅಂಗೀಕರಿಸಿ ವಿಧಾನಪರಿಷತ್ತಿಗೆ ಕಳುಹಿಸಿದೆ. ತನ್ನ ಸಚಿವ ಕೆಲಸಕ್ಕಾಗಿ ಒಂದು ಪೈಸೆ ಸಂಬಳವನ್ನೂ ಪಡೆಯದಿರುವ ಅಪರೂಪದ ರಾಯರೆಡ್ಡಿಯವರ ಆಶಯದ ಬಗ್ಗೆ ಅನುಮಾನ ವ್ಯಕ್ತಪಡಿಸಬೇಕಾದ್ದಿಲ್ಲ. ಈ ಮಸೂದೆಯನ್ವಯ ಇನ್ನೂ ಮೂರು ವಿಶ್ವವಿದ್ಯಾನಿಲಯಗಳು ಅಸ್ತಿತ್ವಕ್ಕೆ ಬರಲಿವೆ ರಾಯಚೂರು ವಿಶ್ವವಿದ್ಯಾನಿಲಯ, ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾನಿಲಯ, ಮಂಡ್ಯದ ಸರ್ಕಾರಿ ಕಾಲೇಜಲ್ಲಿ ಏಕಾತ್ಮಕ ಸ್ವರೂಪದ ವಿವಿಯನ್ನು ಸ್ಥಾಪಿಸಲಾಗುತ್ತದೆ. ದೇಶದ ೪೬ ಕೇಂದ್ರೀಯ ವಿಶ್ವವಿದ್ಯಾನಿಲಯ ಗಳಿಗೆ ಒಂದೇ ಕೇಂದ್ರೀಯ ವಿಶ್ವವಿದ್ಯಾನಿಲಯ ಕಾಯ್ದೆ - ೨೦೦೯ ಇರುವಂತೆ, ರಾಜ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಿಗೂ ಏಕ ಮಸೂದೆ - ೨೦೧೭ ಅನ್ವಯಿಸುತ್ತದೆ.

ಕುಲಪತಿಗಳಾಗುವವರಿಗೆ ೨೫ ವರ್ಷಗಳ ಬೋಧನೆ ಅನುಭವ, ಹತ್ತು ವರುಷದ ಸಂಶೋಧನೆ ಅನುಭವ ಇರಬೇಕು. ಕುಲಪತಿಗಳ ಅವಧಿ ೪ ವರುಷ ಅಥವಾ ೬೭ ವರುಷಗಳು. ಈಗಿರುವ ಶೋಧನಾ ಸಮಿತಿ (ಕುಲಪತಿಗಳನ್ನು ಆರಿಸಲು) ಸದಸ್ಯರನ್ನು ೪ ರಿಂದ ೫ಕ್ಕೆ ಏರಿಸಿಕೊಂಡು ಸರ್ಕಾರದ ಪ್ರತಿನಿಧಿಗಳು ಮೊದಲು ಒಂದು ಇದ್ದುದು ಈಗ ಎರಡಾಗಿ ಸರ್ಕಾರ ಹೇಳಿದವರ ಕಡೆ ಸಮಿತಿ ವಾಲುವಂತೆ ಕಾಣಿಸುತ್ತದೆ. ಈ

ಶೋಧನಾ ಸಮಿತಿ ಉಲ್ಲೇಖಿಸಿರುವ ಹೆಸರನ್ನೇ ಕುಲಾಧಿಪತಿಗಳು ಒಪ್ಪಿಕೊಳ್ಳಬೇಕಾಗುತ್ತದೆ. ಒಂದೊಮ್ಮೆ ಹಿಂದಿರುಗಿಸಿದರೂ ಎರಡನೇ ಬಾರಿ ಕಳುಹಿಸಿದ ಪಟ್ಟಿಯನ್ನು ರಾಜ್ಯಪಾಲರು ಒಪ್ಪಿಕೊಳ್ಳಲೇಬೇಕಾಗುತ್ತದೆ. ಹಾಲಿ ಇರುವ ಕುಲಾಧಿಪತಿಗಳು ತಿರಸ್ಕರಿಸಬೇಕಾದ ಸಾರ್ವಭೌಮ ಅಧಿಕಾರವನ್ನು ಈ ಮಸೂದೆ ಮೊಟಕುಗೊಳಿಸುತ್ತದೆ. ಬಹಳ ಮುಖ್ಯ ಐತಿಹಾಸಿಕ ತಿದ್ದುಪಡಿ ಎಂದರೆ ವಿಶ್ವವಿದ್ಯಾನಿಲಯದ ಕುಲಪತಿಗಳು ಈ ಮಸೂದೆ ಜಾರಿಗೆ ಬಂದರೆ ಪಾಠಮಾಡುವುದು ಕಡ್ಡಾಯ. ಇದೊಂದು ಸಕಾರಾತ್ಮಕ ಸಲಹೆ. ಯಾಕೆಂದರೆ ವಿದ್ವಾಂಸರಾದ, ಶಿಕ್ಷಣ ಶ್ರೇಷ್ಠರು ಎಂದು ಪರಿಗಣಿಸಿ ನೇಮಕವಾದ ಕುಲಪತಿಗಳ ಜ್ಞಾನ ಮುಂದಿನ ಪೀಳಿಗೆಗೆ ಹೋಗಲು ಅನುಕೂಲವಾಗುತ್ತದೆ. ಇಲ್ಲದಿದ್ದರೆ ಬರಿಯ ಆಡಳಿತದ ನೆವದಲ್ಲಿ ವೈಭವೀಕರಿಸಿದ ಗುಮಾಸ್ತರಾಗಿಬಿಡುವ ಸಂಭವವಿರುತ್ತದೆ. ಇನ್ನೊಂದು ಒಳ್ಳೆಯ ಅಂಶವೇನೆಂದರೆ ಶಾಸಕರನ್ನು ವಿಶ್ವವಿದ್ಯಾನಿಲಯ ಆಡಳಿತದಿಂದ ಹೊರಗೆ ಇಟ್ಟಿದ್ದು ಮತ್ತು ಇದರ ಜೊತೆಯಲ್ಲಿ ಸಿಂಡಿಕೇಟ್ (ಕಾರ್ಯನಿರ್ವಾಹಕ ಪರಿಷತ್) ಗೆ ರಾಜ್ಯ ಸರ್ಕಾರ ನಾಮನಿರ್ದೇಶನ ಮಾಡುವಾಗ ಸದಸ್ಯರು ಸ್ನಾತಕೋತ್ತರ ಪದವಿಯನ್ನು ಪಡೆದಿರಬೇಕು.

ಶಿಕ್ಷಣ ಪಕ್ಷಪಾತಿಯಾದ ಶಿಕ್ಷಣ ಸಚಿವರ ಆಕ್ರೋಶ ಅರ್ಥವಾಗುತ್ತದೆ. ನೇಮಕ ಹಾಗೂ ಕಾಮಗಾರಿಯಲ್ಲಿ ಭ್ರಷ್ಟಾಚಾರ ಎಸಗಿದ ಕಾರಣಕ್ಕೆ ಹತ್ತು ವರುಷಗಳಲ್ಲಿ ಎಂಟು ಕುಲಪತಿಗಳು ಅಮಾನತು ಆಗಿದ್ದಾರೆ. ಆದುದರಿಂದ ಉನ್ನತ ಶಿಕ್ಷಣದ ಮೂಲ ಸೌಕರ್ಯ ಅಭಿವೃದ್ಧಿ ಮಂಡಳಿ' ರಚಿಸಲ್ಪಡುತ್ತದೆ. ವಿಶ್ವವಿದ್ಯಾನಿಲಯದಲ್ಲಿ ನಡೆಯುವ ೧ ಕೋಟಿ ಮೀರಿದ ಕಾಮಗಾರಿಗಳಿಗೆ ಈ ಮಂಡಳಿಯ ಒಪ್ಪಿಗೆ ಪಡೆಯಬೇಕು. ಉನ್ನತ ಶಿಕ್ಷಣ ಸಚಿವರು ಈ ಮಂಡಳಿಯ ಅಧ್ಯಕ್ಷರು, ರಾಜ್ಯ ಸರ್ಕಾರ ನಾಮ ನಿರ್ದೇಶನ ಮಾಡಿರುವ ನಾಲ್ವರು ಸದಸ್ಯರು ಇರುತ್ತಾರೆ. ಜೊತೆಗೆ ಸಂಬಂಧಪಟ್ಟ ವಿ.ವಿ. ಕುಲಪತಿ ಇರುತ್ತಾರೆ. ಇದರ ಜೊತೆಯಲ್ಲಿ ಬೋಧಕ ಮತ್ತು ಬೋಧಕೇತರ ನೌಕರರ ನೇಮಕಾತಿ (ಇಲ್ಲಿಯವರೆಗೆ ಸಿಂಡಿಕೇಟ್ ಮತ್ತು ಆಯ್ಕೆ ಸಮಿತಿ) ಮಾಡಿಕೊಳ್ಳಲು ಸಾಮಾನ್ಯ ನೇಮಕಾತಿ ಮಂಡಳಿ ರಚನೆಯಾಗಲಿದೆ. ಈ ಮಂಡಳಿಯಲ್ಲಿ ಮೂವರು ವಿಶ್ರಾಂತ ಕುಲಪತಿಗಳು ಇರುತ್ತಾರೆ. ಹೀಗಾಗಿ ಕುಲಪತಿಗಳು ಅಕ್ರಮ ನೇಮಕಾತಿ ಮತ್ತು ಕಾಮಗಾರಿಯನ್ನು ಮಾಡದಂತೆ ತಡೆ ತರಲಾಗಿದೆ.

ಕುಲಸಚಿವ (ಮೌಲ್ಯಮಾಪನ) ಮಸೂದೆಯ ಪ್ರಕಾರ 'ಪರೀಕ್ಷಾ ನಿಯಂತ್ರಕ' ಎಂದು ಕರೆದು ಆ ಹುದ್ದೆಗೆ ಹಿರಿಯ ಶಿಕ್ಷಣ ಅಧಿಕಾರಿಯನ್ನು ನೇಮಿಸಲು ಅವಕಾಶವಿದೆ. ಇದೇನು ಹೊಸ ವಿಷಯವಲ್ಲ. ಹಿಂದಿನ ಅನುಭವದಲ್ಲಿ ಹೇಳಿದರೆ ಯಾವ ಅಧಿಕಾರಿಯೂ ಇಂಥ ಹುದ್ದೆಗೆ ಬರಲು ಒಪ್ಪುವುದಿಲ್ಲ. ಒಪ್ಪಿ ಬಂದರೂ ಕೆಲವು ತಿಂಗಳಲ್ಲಿ ವರ್ಗಾವಣೆ ಮಾಡಿಸಿಕೊಳ್ಳುತ್ತಾರೆ.

**ಉಪಸಂಹಾರ**

ಅನೇಕ ವಿಶ್ವವಿದ್ಯಾನಿಲಯಗಳ ಆಡಳಿತ ಸಂಪೂರ್ಣವಾಗಿ ಕುಸಿದುಬಿದ್ದಿದೆ- ಕುಲಪತಿಗಳ ನೇಮಕಾತಿಯಲ್ಲಿ ಜಾತಿ, ಹಣ, ಪ್ರಭಾವ ವಿಶೇಷವಾಗಿ ಕೆಲಸಮಾಡುತ್ತದೆ ಎಂದು ಅದು ಸರ್ಕಾರದ ಮಟ್ಟದಲ್ಲೂ ಮತ್ತು ರಾಜ್ಯಪಾಲರ ಮಟ್ಟದಲ್ಲೂ ಎಂಬ ಮಾತು ದೊಡ್ಡದಾಗಿ ಕೇಳುತ್ತಿರುವ ಈ ಸಂದರ್ಭದಲ್ಲಿ ಈ ಮಸೂದೆ ಅರ್ಥಪೂರ್ಣ ವಾಗಿದೆ. ನೇಮಕಾತಿ (ಅದರಲ್ಲೂ ತಾವು ನಿವೃತ್ತರಾಗುವ ವರ್ಷದಲ್ಲಿ) ಮತ್ತು ಕಾಮಗಾರಿಯಲ್ಲಿ ಕುಲಪತಿಗಳು ವಿಶೇಷವಾಗಿ ಭ್ರಷ್ಟಾಧಿಪತಿಗಳಾಗುವುದನ್ನು ಕೇಳಿ ಶಿಕ್ಷಣಲೋಕ ತಲೆತಗ್ಗಿಸಿದೆ. ಅವುಗಳಿಗೆ ಕಡಿವಾಣ ಹಾಕುವ ಸರ್ಕಾರವೂ ಶಿಕ್ಷಣದ ಪಕ್ಷಪಾತಿಯಾಗಬೇಕು.

ಅನೇಕ ವಿಶ್ವವಿದ್ಯಾನಿಲಯಗಳ (ವಿಷಯವಾರು) ಅಗತ್ಯ ಇದೆಯೇ? ಅವು ಮಾಡುವ ಕೆಲಸವನ್ನು ಈಗಿರುವ ವಿಶ್ವವಿದ್ಯಾನಿಲಯದ ಪೀಠಗಳಿಗೆ ಸಂಪನ್ಮೂಲ ನೀಡಿ ಕಾರ್ಯಗತಗೊಳಿಸಿಕೊಳ್ಳಬಹುದು. ಅನೇಕ ವಿಶ್ವವಿದ್ಯಾನಿಲಯಗಳಿಗೆ ಕುಲಪತಿಗಳಾಗಲು ಜನ ಹೆದರುತ್ತಿದ್ದಾರೆ (ಈಚೆಗೆ ಜಾನಪದ ವಿಶ್ವವಿದ್ಯಾನಿಲಯದ ಕುಲಪತಿಗಳು ನೇಮಕವಾಗಿ ಎರಡು ತಿಂಗಳಲ್ಲಿ ರಾಜೀನಾಮೆ ಕೊಟ್ಟು ಹೊರ ಬಂದಿರುವುದು ಇದೆ). ಇದು ಸರ್ಕಾರಕ್ಕೆ ಶೋಭೆಯನ್ನು ತರುವುದಿಲ್ಲ.

ಇಷ್ಟು ಮಾತ್ರ ಅಲ್ಲದೆ ವಿಶ್ವವಿದ್ಯಾನಿಲಯ ಇಲ್ಲದಿದ್ದರೆ ಉನ್ನತ ಶಿಕ್ಷಣ ಸಂಪೂರ್ಣವಾಗಿ ಕುಲಗೆಟ್ಟುಹೋಗುತ್ತದೆ.

ಬೆಳಕಿದ್ದರೆ ಸಾಲದು, ಅದು ಅನೇಕ ಹಣತೆಗಳನ್ನು ಹಚ್ಚಬೇಕು. ನಮ್ಮ ದೇಶದಲ್ಲಿ ಜಗತ್ತಿನ ಯಾವ ದೇಶದಲ್ಲೂ ಇರಲಾರದಷ್ಟು ಹೆಚ್ಚಿನ ಯುವಕರು ಇದ್ದಾರೆ. ಹೀಗಾಗಿ ಜಗತ್ತು ನಮ್ಮ ಕಡೆ ನೋಡುತ್ತಿದೆ. 'ಮಾನವ ಸಂಪತ್ತು' ಎಂಬ ಅಪಾರ ಸಂಪತ್ತು ನಮ್ಮಲ್ಲಿದೆ. ೨೦೨೦ರ ಹೊತ್ತಿಗೆ ಶೇಕಡಾ ೧೫ರಷ್ಟಾದರೂ ವಿದ್ಯಾರ್ಥಿಗಳನ್ನು ಉನ್ನತ ಶಿಕ್ಷಣದ ಕಕ್ಷೆಯೊಳಗೆ ತರಬೇಕೆಂದು ದೃಢಸಂಕಲ್ಪ ಮಾಡಿದ್ದು ಇನ್ನೂ ಪೂರ್ಣವಾಗಿಲ್ಲ.

ಜಗತ್ತಿನ ೫೦ ಶ್ರೇಷ್ಠ ವಿಶ್ವವಿದ್ಯಾನಿಲಯಗಳ ಪೈಕಿ ಭಾರತದ್ದು ಯಾವುದೂ ಇಲ್ಲ. ಇದಕ್ಕೆ ಸಾಮಾನ್ಯವಾಗಿ ಹೇಳುವ ಕಾರಣಗಳೇನೆಂದರೆ ಪಠ್ಯ, ಸೃಜನಾತ್ಮಕ ಕಲಿಕೆ, ಘಂಟೆಗಳ ನಡುವೆ ಬಿಗಿಬಂಧ, ಫಲಿತಾಂಶ ಪ್ರಕಟಣೆಯಲ್ಲಿ ಅನಿರ್ದಿಷ್ಟತೆ, ಸೌಕರ್ಯಗಳ ಅತೀವ ಕೊರತೆ, ಅಂತರ್‌ಶಿಸ್ತು ಅಧ್ಯಯನಕ್ಕೆ ಅಡ್ಡಿ, ಸಂಶೋಧನೆಯಲ್ಲಿ ನಿರಾಸಕ್ತಿ, ಪ್ರಕಟಣೆಯ ಬಗ್ಗೆ ನಿರಾಸಕ್ತಿ, ಅತೀವ ನಿರ್ಲಕ್ಷ್ಯ...ಇನ್ನೂ ಅನೇಕ ಕಾರಣಗಳನ್ನು ನೀಡಲಾಗುತ್ತಿದೆ. ಇಂಥ ಸವಾಲುಗಳನ್ನು ನಾವು ಕಟಿಬದ್ಧರಾಗಿ ಎದುರಿಸಬೇಕಾಗಿದೆ.

ವಿಶ್ವಬ್ಯಾಂಕಿನ ಉದ್ಧಾರದಿಂದ ರೋಮಾಂಚಿತರಾದ ನಮ್ಮ ದೇಶದ ಬೃಹಸ್ಪತಿಗಳು ಉನ್ನತ ಶಿಕ್ಷಣಕ್ಕೆ ಸಂಪನ್ಮೂಲಗಳನ್ನು ಕ್ರೋಢೀಕರಿಸುವ ಬಗ್ಗೆ ತಿಳಿಸಲು ೧೯೯೩ರಲ್ಲಿ



ನ್ಯಾಯಾಧೀಶರಾದ ಕೆ. ಮುನ್ನಮ್ಯ ಮತ್ತು ತಾಂತ್ರಿಕ ಶಿಕ್ಷಣದ ಬಗ್ಗೆ ತಿಳಿಸಲು ಡಿ. ಸ್ವಾಮಿನಾಥನ್ ರವರುಗಳ ಅಧ್ಯಕ್ಷತೆಯಲ್ಲಿ ಎರಡು ಸಮಿತಿಗಳನ್ನು ನೇಮಿಸಿತು. ಈ ಸಮಿತಿ ಎರಡು ಪ್ರಮುಖ ಅಂಶಗಳನ್ನು ಒತ್ತಿಹೇಳಿತು.

೧. ಯಾವುದೇ ಕಾರಣದಿಂದ ಸರ್ಕಾರವು ಉನ್ನತ ಶಿಕ್ಷಣಕ್ಕೆ ಧನಸಹಾಯ ಕಡಿಮೆ ಮಾಡಬಾರದು.

೨. ಉನ್ನತ ಶಿಕ್ಷಣಕ್ಕೆ ಬೇರೆಬೇರೆ ಮಾರ್ಗಗಳಿಂದ ಸಂಪನ್ಮೂಲವನ್ನು ಸಂಗ್ರಹಿಸ ಬೇಕು.

ಶಿಕ್ಷಣವೆಂದರೆ ಅದೊಂದು ಕಸುಬಿಗೆ ಹೋಗುವ ವೀಸಾ ಅಲ್ಲ. ಲ್ಯಾಟಿನ್ ಅಮೆರಿಕಾದ ಶೈಕ್ಷಣಿಕ ಚಿಂತಕ ಪಾಲ್‌ಫೇರೆ ತನ್ನ Pedugoggy of the oppressed (ದಮನಿತರರ ಶಿಕ್ಷಣ) ಎಂಬ ಗ್ರಂಥದಲ್ಲಿ ಶಿಕ್ಷಣವೆಂದರೆ ಸ್ವಾತಂತ್ರ್ಯಕ್ಕೋಸ್ಕರ ನಡೆಸಲಾಗುವ ಸಾಂಸ್ಕೃತಿಕ ಚಟುವಟಿಕೆ (Education in cultural action for freedom) ಎಂದು ವ್ಯಾಖ್ಯಾನಿಸುತ್ತಾನೆ.

ಉನ್ನತ ಶಿಕ್ಷಣವೆಂದರೆ ಕೊಠಾರಿ ವರದಿ ಹೇಳಿದಂತೆ 'ದೇಶದ ಭವಿಷ್ಯ ತರಗತಿಗಳಲ್ಲಿ ಎಂಬ ಮಾತು ಈಗ ಹಳಸಲಾಗಿದೆ. ಏಕೆಂದರೆ ಶಿಕ್ಷಣ ಮತ್ತು ಮಾಹಿತಿ ತಂತ್ರಜ್ಞಾನದ ನಡುವೆ ಇರುವ ಸಂಬಂಧವನ್ನು ಗಮನಿಸಬೇಕು. ಮೊದಲಿನ ಹಾಗೆ ವಿಷಯಸಂಗ್ರಹ ಮಾಡಲು ಶಿಕ್ಷಕರಾಗಲಿ, ಗ್ರಂಥಭಂಡಾರವಾಗಲಿ ಮೂಲವಾಗಿಲ್ಲ. ಆಕರ, ಮಾಹಿತಿ, ಜ್ಞಾನ ಎಲ್ಲವೂ ಈಗ ಸುಲಭವಾಗಿ ತಂತ್ರಜ್ಞಾನದಿಂದ ದೊರಕುವುದರಿಂದ ಉನ್ನತ ಶಿಕ್ಷಣ ನೀಡುವ ಕಾಲೇಜುಗಳು ಕಲಿಕೆಯ ವಿಧಾನವನ್ನು ಬದಲಿಸಿಕೊಳ್ಳದಿದ್ದರೆ ಮುಂದೆ ಯಾವುದಕ್ಕೂ ಪ್ರಯೋಜನಕ್ಕೆ ಬರುವುದಿಲ್ಲ. ಇಂಥ ಪ್ರಯೋಜನಕ್ಕೆ ಬಾರದ ಶಿಕ್ಷಣವನ್ನು ನೆನೆದೇ ಆಚಾರ್ ರಾಮಮೂರ್ತಿ ವರದಿ (೧೯೭೭) ಯ ಆರಂಭದಲ್ಲಿ ಹೀಗೆ ಉದ್ಧರಿಸಿದರು: “ಇಂಥ ಶಿಕ್ಷಣ ಕೊಡುವುದಕ್ಕಿಂತ ಶಿಕ್ಷಣ ಕೊಡದಿರುವುದು ಒಳ್ಳೆಯದಲ್ಲವೇ” . (Was no Education selter then education).

ಭಾರತದ ಜನಜೀವನವನ್ನು ಅಧ್ಯಯನ ಮಾಡಲು ಬಂದಿದ್ದ ಟಿ.ಬಿ. ಮೆಕಾಲೆ ಭಾರತದ ಜನರ ಬದುಕನ್ನು ಕಂಡು ಮುದಗೊಂಡು ೧೮೩೫ರ ಫೆಬ್ರವರಿ ೨ ರಂದು ಬ್ರಿಟನ್ನಿನ ಸಂಸತ್ತಿನಲ್ಲಿ ಭಾಷಣ ಮಾಡುತ್ತಾ ಹೇಳಿದ ಮಾತು ಈಗ ಅಕ್ಷರಶಃ ನಿಜವಾಗಿದೆ. ಆತ ಅಂದು ಹೇಳಿದ “ನಾನು ಭಾರತದ ಉದ್ದಗಲ ಪ್ರವಾಸ ಮಾಡಿದಾಗ ನನಗೊಬ್ಬನೇ ಒಬ್ಬ ಭಿಕ್ಷುಕನಾಗಲಿ, ಕಳ್ಳನಾಗಲಿ ಕಾಣಲು ಸಾಧ್ಯವಾಗಲಿಲ್ಲ. ಆ ದೇಶ ಅಪಾರ ಸಂಪತ್ತನ್ನು ಹೊಂದಿರುವುದಷ್ಟೇ

ಅಲ್ಲದೆ ಸಂಸ್ಕೃತಿಯ ಉನ್ನತ ಪರಂಪರೆಯ ವೈಭವವೇ ಆ ದೇಶದ ಜನರ ಬೆನ್ನೆಲುಬು ಆಗಿದೆ. ಅವರ ಈ ಪರಂಪರೆಯ ಸ್ಥಾನದಲ್ಲಿ ನಮ್ಮ ಆಂಗ್ಲ ಶಿಕ್ಷಣವನ್ನು ಕೊಡದೆ ಅವರನ್ನು ಆಡಳಿತದ ವ್ಯಾಪ್ತಿಯಲ್ಲಿಡಲು ಸಾಧ್ಯವೇ ಇಲ್ಲ. ಅವರ ಸಂಸ್ಕೃತಿ ಪರಂಪರೆಯ ಬೆನ್ನುಮೂಳೆ ಮುರಿಯಲು ಇರುವ ಒಂದೇ ಮಾರ್ಗ



ಅವರ ಶಿಕ್ಷಣ ಪದ್ಧತಿಗಳನ್ನು ಬದಲಿಸಿ ನಮ್ಮ ಶಿಕ್ಷಣ ನೀತಿಯನ್ನು ಅಲ್ಲಿ ಪ್ರತಿಷ್ಠಾಪಿಸುವುದು. ಆಗ ಕೇವಲ ಮೂವತ್ತು ವರುಷಗಳಲ್ಲಿ ನೋಡಲು ಮಾತ್ರ ಭಾರತೀಯರಂತೆ ಸ್ವಭಾವದಲ್ಲಿ ಇಂಗ್ಲಿಷ್ಂತೆ ಆಗುವುದು ನಿಶ್ಚಿತ" .

ಶಿಕ್ಷಣವೆಂದರೆ ಹೊರಗಿನ ಹೇರಿಕೆಯಲ್ಲ : ಒಳಗಿನ ಅರಳುವಿಕೆ, ಶಿಕ್ಷಣ ಎಂದರೆ ಬರಿಯ ಕಲಿಯುವಿಕೆ ಅಲ್ಲ: ಬದುಕನ್ನು ಕಾಣುವಿಕೆ. ಇಂಥ ಶಿಕ್ಷಣ ಮೂಡಿಬರಲಿ.

# ಕೌಶಲ್ಯ ಆಧಾರಿತ ಉದ್ಯೋಗಮುಖಿ ಶಿಕ್ಷಣ

**- ಡಾ. ವಿಷ್ಣುಕಾಂತ ಚಟಪಲ್ಲಿ**

"ಯೋಗಹ ಕರ್ಮಸು ಕೌಶಲಂ" ಭಗವದ್ಗೀತೆಯಲ್ಲಿ ಸಾರಿದಂತೆ ಯೋಗದ ಮಾರ್ಗದಿಂದ ಕೆಲಸವನ್ನು ಉತ್ಕೃಷ್ಟವಾಗಿ ಮಾಡಲು ಸಹಕಾರಿಯಾಗುತ್ತದೆ. ಕೌಶಲಂ ಅಂದರೆ ಕೆಲಸ ಕಾರ್ಯವನ್ನು ಶ್ರದ್ಧೆಯಿಂದ ಸಕಾರಾತ್ಮಕ ಪ್ರವೃತ್ತಿಯಿಂದ ಮತ್ತು ಮೌಲ್ಯಾಧಾರಿತವಾಗಿ ಮಾಡಿದರೆ ಕೌಶಲ್ಯವನ್ನು ವೃದ್ಧಿಸಬಹುದು. ದೇಹ, ಮನಸ್ಸು, ಬುದ್ಧಿ ಮತ್ತು ಆತ್ಮದ ಸಹಯೋಗ, ಸಮ್ಮಿಶ್ರವಾಗಿ ಮತ್ತು ವ್ಯವಸ್ಥಿತವಾಗಿ ಉಪಯೋಗಿಸಿದರೆ ವ್ಯಕ್ತಿಯಲ್ಲಿ ಕೌಶಲ್ಯ ಅಭಿವೃದ್ಧಿಗೊಳಿಸಿ ವ್ಯಕ್ತಿ ಮತ್ತು ಸಮಾಜಕ್ಕೆ ಒಳಿತಾಗುತ್ತದೆ.

೧೨ನೇ ಶತಮಾನದಲ್ಲಿ ಬಸವಣ್ಣನವರು ತಮ್ಮ ದಿವ್ಯ ಸಂದೇಶದಲ್ಲಿ ಕಾಯಕವೇ ಕೈಲಾಸವೆಂದು ನುಡಿದಿದ್ದಾರೆ. ಕಾಯಕ ಅಂದರೆ ಕೆಲಸ ಮಾಡುವುದರಿಂದ ಒಬ್ಬ ವ್ಯಕ್ತಿ ಮೋಕ್ಷವನ್ನು ಪಡೆಯಬಹುದು, "ಕೈ ಕೆಸರಾದರೆ ಬಾಯಿ ಮೊಸರು, ಕಠಿಣ ಪರಿಶ್ರಮದಿಂದ ಬೆವರು ಸುರಿಸಿ ಕೆಲಸ ಮಾಡುವುದರಿಂದ ವ್ಯಕ್ತಿ ಆನಂದವಾಗಿ ಇರಬಹುದು. ನಮ್ಮಲ್ಲಿ ಹಿಂದೆ ಗಾದೆ ಇತ್ತು "ಊಟ ಬಲ್ಲವನಿಗೆ ರೋಗವಿಲ್ಲ ಮತ್ತು ಮಾತು ಬಲ್ಲವನಿಗೆ ಜಗಳವಿಲ್ಲ" , ಈಗಿನ ಪರಿಭಾಷೆಯಲ್ಲಿ "ಕೌಶಲ್ಯ ಬಲ್ಲವನಿಗೆ ನಿರುದ್ಯೋಗವಿಲ್ಲ" .

ಕೌಶಲ್ಯ, ಜ್ಞಾನದಿಂದ ಆರ್ಥಿಕ ಮತ್ತು ಸಾಮಾಜಿಕ ವಿಕಾಸಕ್ಕೆ ನಾಂದಿಯಾಗುತ್ತದೆ. ಇಂದಿನ ವೈಶ್ವಿಕ ಸನ್ನಿವೇಶದಲ್ಲಿ ಪ್ರತಿಯೊಂದು ರಾಷ್ಟ್ರ ಕೌಶಲ್ಯ ಸಂಪನ್ನವಾಗಿದ್ದರೆ ಅಂತರರಾಷ್ಟ್ರೀಯ ಸವಾಲುಗಳನ್ನು ಎದುರಿಸಲು ಸಾಧ್ಯವಾಗುತ್ತದೆ. ಇಂದು ಔದ್ಯೋಗೀಕರಣದ ಜಗತ್ತಿನಲ್ಲಿ ಕೌಶಲ್ಯಾಧಾರಿತ ಕೊರತೆ ಸರ್ಕಾರಿ, ಖಾಸಗಿ ಮತ್ತು ಇತರೆ ಎಲ್ಲಾ ಕ್ಷೇತ್ರಗಳಲ್ಲಿ ಗಣನೀಯ ಪ್ರಮಾಣದಲ್ಲಿ ಎದ್ದು ಕಾಣುತ್ತಿದೆ. ಈ ಕೊರತೆಯನ್ನು ನಿವಾರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀತಿ ನಿರೂಪಣೆ ಮತ್ತು ವಿಶೇಷ ಕಾರ್ಯಕ್ರಮ, ಯೋಜನೆಗಳ ಮುಖಾಂತರ ನಿರಂತರ ಪ್ರಯತ್ನಿಸುತ್ತಿವೆ. ವಿಶೇಷವಾಗಿ ಕೌಶಲ್ಯಾಧಾರಿತ ಶಿಕ್ಷಣಕ್ಕೆ ಒತ್ತು ನೀಡುತ್ತಿವೆ. ಸಾಮಾನ್ಯವಾಗಿ ರೂಢಿಯಲ್ಲಿ ಅಕ್ಷರಸ್ಥ ಅಂದರೆ ಓದು ಮತ್ತು ಬರಹ ಬಲ್ಲವನು ಎಂದು ಅರ್ಥವಿತ್ತು. ಇಂದು ಒಬ್ಬ ವ್ಯಕ್ತಿ ಗಣಕ, ತಾಂತ್ರಿಕ ಜ್ಞಾನ ಮತ್ತು ಕೌಶಲ್ಯ ಇಲ್ಲದಿದ್ದರೆ ಅನಕ್ಷರಸ್ಥ ಎಂದು ಪರಿಗಣಿಸಲಾಗುತ್ತದೆ. ಶಿಕ್ಷಣ ಉದ್ಯೋಗಮುಖಿ ಮತ್ತು ಸಮಾಜಮುಖಿ ಆಗಬೇಕು. ವ್ಯಕ್ತಿ ತನ್ನ ಜೀವನದಲ್ಲಿ ಶಿಕ್ಷಣ ಮುಗಿದ ಮೇಲೆ ಉದ್ಯೋಗಕ್ಕಾಗಿ ಚಾತಕ ಪಕ್ಷಿಯಂತೆ ಕಾಯುತ್ತಿರುತ್ತಾನೆ. "ಉದ್ಯೋಗಂ ಪುರುಷ ಲಕ್ಷಣಂ" ಎನ್ನುತ್ತಿದ್ದರು, ಈಗ "ಉದ್ಯೋಗಂ ಸ್ತ್ರೀ-ಪುರುಷ

ಗ್ರಾಮೀಣ ಮತ್ತು ಶಿಕ್ಷಣವಂಚಿತ ಯುವಕರಿಗೆ ಕೌಶಲ್ಯ ತರಬೇತಿ ನೀಡಿ ಉದ್ಯೋಗವಕಾಶ ಕಲ್ಪಿಸಲು ಸರ್ಕಾರ ಕಟಿಬದ್ಧವಾಗಿದೆ. ಉದ್ಯೋಗಮೇಳಗಳ ಮುಖಾಂತರ ನಿರುದ್ಯೋಗಿ ಯುವಕರಿಗೆ ಉದ್ಯೋಗ ಕಲ್ಪಿಸಲು ನಿರಂತರ ಪ್ರಯತ್ನಿಸಲಾಗುತ್ತಿದೆ.

ಉದ್ಯೋಗ ಅವಕಾಶವನ್ನು ತಿಳಿದುಕೊಳ್ಳಲು ಇ-ಪೋರ್ಟಲ್ ವೆಬ್‌ಸೈಟ್ ತುಂಬಾ ಸಹಕಾರಿಯಾಗುತ್ತದೆ. ಜಾಹೀರಾತುಗಳು ಮತ್ತು ಸಾಮಾಜಿಕ ಜಾಲ-ತಾಣಗಳ ಮುಖಾಂತರ ಉದ್ಯೋಗ ಅವಕಾಶಗಳನ್ನು ತಿಳಿದುಕೊಂಡು ಅದರ ಪ್ರಯೋಜನವನ್ನು ಕನ್ನಡಿಗರು ಪಡೆಯಬೇಕಾದ ಅಗತ್ಯವಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನೇಕ ಇಲಾಖೆಗಳಲ್ಲಿ ಕನ್ನಡಿಗರು ತಮ್ಮ ಕೌಶಲ್ಯ ಮತ್ತು ಜ್ಞಾನವನ್ನು ಸಮರ್ಪಕವಾಗಿ ಬೆಳೆಸಿಕೊಂಡು ಹೆಚ್ಚಿನ ಪ್ರಮಾಣದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ಮುಖಾಂತರ ಉದ್ಯೋಗಗಳನ್ನು ಪಡೆಯಲು ಪ್ರಯತ್ನಶೀಲರಾಗಬೇಕು.

ಹೆಚ್ಚಿನ ಮಾಹಿತಿಗಳು ಪಡೆಯಲು ಈ ಕೆಳಕಂಡ ಜಾಲತಾಣಗಳು ಸಹಕಾರಿಯಾಗುತ್ತವೆ :-

https://kannada.oneindia.com

https://www.freshersworld.com https://www.shine.com

https://www.quikr.com

https://www.naukri.com

"ಮನಸಿದ್ದರೆ ಮಾರ್ಗದಂತೆ ಕೌಶಲ್ಯವಿದ್ದರೆ ಉದ್ಯೋಗ"

## ಗೋಷ್ಠಿ - ೪

### ಮಹಿಳೆ : ಹೊಸಲೋಕ ಮೀಮಾಂಸೆ

# ಶೋಷಣೆಯ ಛದ್ಮದೇಷಗಳು

**- ಪ್ರೊ ಸಬಿಹಾ ಭೂಮಿಗೌಡ**

ಶೋಷಣೆ ಅನ್ನುವ ಪದವೇ ಹಲವರಿಗೆ ಅಲರ್ಜಿಯಾಗಿ ಕೇಳುತ್ತದೆ. ಏಕೆಂದರೆ ಅವರೆಲ್ಲ ತಾವು ಸುರಕ್ಷಿತ ವಲಯದಲ್ಲಿ (ಸೇಫರ್ ರೋನ್‌ನಲ್ಲಿ) ಇದ್ದೇವೆ ಎಂದು ನಂಬಿರುತ್ತಾರೆ. ಇನ್ನೊಂದು ಗುಂಪಿಗೆ ಇಂಥ ವಿಚಾರಗಳು 'ಮನೆ ಮುರಿಯುವ', 'ಮನ ಮುರಿಯುವ' ವಿಚಾರಗಳು ಮತ್ತು ಅಂತಿಮವಾಗಿ ತಾವು ಅನುಭವಿಸುತ್ತಿರುವ ಅನುಕೂಲಗಳ ಬುಡಕ್ಕೆ ಕೊಡಲಿಯೇಟು ಹಾಕುವಂಥವುಗಳು ಎನ್ನುವ ಕಾರಣಕ್ಕಾಗಿ ಅಲರ್ಜಿಯಾಗಿರುತ್ತವೆ. ಯಾಜಮಾನ್ಯದಲ್ಲಿ ಎರಡು ವಿಧ. ಒಂದು, ಹೇರಿಕೆಯ ಯಾಜಮಾನ್ಯ; ಇನ್ನೊಂದು, ಒಪ್ಪಿತ ಯಾಜಮಾನ್ಯ, ಹೇರಿಕೆಯ ಯಾಜಮಾನ್ಯಕ್ಕೆ ಬಂಡಾಯದ ಧ್ವನಿ ತಕ್ಷಣಕ್ಕೆ ಬರಬಹುದು, ಮತ್ತು ಅದಕ್ಕೆ ಸಂಘಟಿತ ನೆಲೆಯಲ್ಲಿ ಒಂದು ಪ್ರತಿರೋಧ ನೀಡುವುದಕ್ಕೆ ಸಾಧ್ಯ. ಆದರೆ ಒಪ್ಪಿತ ಯಾಜಮಾನ್ಯದ ಸ್ಥಿತಿ ಇದಕ್ಕಿಂತ ಭಿನ್ನವಾಗಿರುತ್ತದೆ. ಶೋಷಣೆಯ ಛದ್ಮವೇಷಗಳ ಬಗ್ಗೆ ಚರ್ಚಿಸುವಾಗ ಇದು ಮುಖ್ಯ ಎಂದು ನಾನು ಭಾವಿಸಿದ್ದೇನೆ. ಕೆಲವು ಶೋಷಣೆಗಳ ಬಗ್ಗೆ ಮಾತನಾಡುವುದಕ್ಕೆ ಬಹುತೇಕರಿಗೆ ಯಾವ ಅಡ್ಡಿಯೂ ಇರುವುದಿಲ್ಲ. ನೂರು ವರ್ಷಗಳ ಹಿಂದೆ ಬಾಲ್ಯ ವಿವಾಹ, ವಿಷಮ ವಿವಾಹ, ವರದಕ್ಷಿಣೆ ಪದ್ಧತಿ, ವಿಧವಾ ಕೇಶವಪನ ಮುಂತಾದುವನ್ನು 'ಶೋಷಣೆ' ಎಂದು ಗುರುತಿಸಿ ಸಾಮೂಹಿಕ ನೆಲೆಯಲ್ಲಿ ಚರ್ಚಿಸಲಾಯಿತು. ದೇವದಾಸಿ ಪದ್ಧತಿಯ ಆಚರಣೆ, ವರದಕ್ಷಿಣೆ ಕಿರುಕುಳ, ಜಾತಿ ನಿಂದನೆ, ಲೈಂಗಿಕ ಕಿರುಕುಳ, ಅತ್ಯಾಚಾರ ಮುಂತಾದ ಶೋಷಣೆಗಳ ಕುರಿತ ಹಾಗೆಯೂ ಕೂಡ ಮಾತನಾಡುವುದಕ್ಕೆ ಇಂದು ಎಲ್ಲರಿಗೂ ಸಹಮತ ಇದೆ. ಇಂತಹವನ್ನು ಕಣ್ಣಿಗೆ ಕಾಣುವ ಶೋಷಣೆಗಳೆಂದು ಗುರುತಿಸಿದ ಹಾಗೆಯೇ ಕಣ್ಣಿಗೆ ಕಾಣದ ಅಥವಾ ಕಂಡೂ ಶೋಷಣೆ ಎಂದು ಒಪ್ಪಿಕೊಳ್ಳಲು ಸಿದ್ಧವಿಲ್ಲದ ವಿದ್ಯಮಾನಗಳನ್ನು ಶೋಷಣೆಯ ಛದ್ಮವೇಷಗಳು ಎಂದು ಗುರುತಿಸಿ ಇಲ್ಲಿ ಚರ್ಚಿಸುವುದಕ್ಕೆ ನಾನು ಉದ್ದೇಶಿಸಿದ್ದೇನೆ.

ಮಹಿಳಾ ತಂಡದ ಜೊತೆ ಶೋಷಣೆಯ ಕುರಿತಂತೆ ಮಾತಾಡುತ್ತಾ ಇದ್ದಾಗ ಎದುರುಗೊಂಡ ಒಂದು ಸನ್ನಿವೇಶವನ್ನು ಮೊದಲು ನಿಮ್ಮೆಲ್ಲರ ಜೊತೆ ಹಂಚಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಆಕೆ ಹೇಳ್ತಾ ಇದ್ಲು- "ಮದುವೆಯಾದ ಒಂದು ವರ್ಷದವರೆಗೆ ಎಲ್ಲವೂ ಚೆನ್ನಾಗಿತ್ತು. ನಾನು ಸುಖವಾಗಿದ್ದೀನಿ ಅಂತ ತಿಳ್ಕೊಂಡಿದ್ದೆ. ಅನಂತ್ರ ನಿಧಾನವಾಗಿ ಹಿಂಸೆ ಆರಂಭವಾಯ್ತು, ನಾನು ಏನೇ ಮಾಡಿದ್ರೂ ತಪ್ಪು ಕಂಡುಹಿಡಿಯುವುದು, ಬೈಯ್ಯುವುದು, ಅವರಿವರ ಎದುರು ಹಂಗಿಸೋದು ನಡೆದೇ ಇತ್ತು. ನನ್ನ ಮನೆಯವರಿಗೆ

ಇದನ್ನು ನಾನು ದಾಟಿಸಲಿಲ್ಲ. ಯಾಕೆ ಅಂತಂದ್ರೆ ಅವ್ರ ಕಷ್ಟ ನನ್ಗೆ ಗೊತ್ತಿತ್ತು. ನಮಗೆ ಮಕ್ಕಳಾದುವು. ಆ ನಂತ್ರ ಗಂಡ ಕುಡಿಯುವುದಕ್ಕೆ ಶುರು ಮಾಡ್ದ, ನಾನು ಬೀಡಿ ಕಟ್ಟುವುದಕ್ಕೆ ಶುರು ಮಾಡ್ದೆ, ಕೂಲಿಗೆ ಹೋಗಿ ಮಕ್ಕಳನ್ನ ಸಾಕುವುದಕ್ಕೆ ಆರಂಭಿಸ್ದೆ. ರಾತ್ರಿ ಎಷ್ಟೋ ಹೊತ್ತಿಗೆ ಬಂದು ಏನಾದ್ರು ನೆಪ ತೆಗೆದುಕೊಂಡು ಹೊಡಿಯೋದಕ್ಕೆ ಶುರು ಮಾಡಿದ ಗಂಡ, ಮಕ್ಕು ಹೆದ್ರಿ ಮೂಲೆ ಸೇಲ್ತಾ ಇದ್ರು, ರಾತ್ರಿ ಅಂದ್ರೆ ನಂಗೆ ದುಃಸ್ವಪ್ನ ಆಗಿತ್ತು. ಹೀಗೆ ಹದಿನೈದು ವರ್ಷಗಳು ಉರುಳಿದ್ವು, ಅದೊಂದು ದಿವ್ಸ  ೧೦-೧೫ ದಿಬ್ಬಗಳಿಂದ ಬಾರದೆ ಇದ್ದ ಗಂಡ ಅಪರಾತ್ರಿಯಲ್ಲಿ ಬಂದು ಬಾಗಿಲು ಬಡಿದ, ಬಾಗಿಲು ತೆಗೀಬೇಕು ಅಂತ ಅನ್ನಿಸ್ತಿಲ್ಲ. ಬಾಗ್ಲು ತೆಗೆಯೋದು ತಡ ಆದಾಗ ಬಾಗಿಲು ಒದಿಯೋದಕ್ಕೆ ಶುರು ಮಾಡಿದ. ಬಾಯಿಗೆ ಬಂದ ಹಾಗೆ ಬೈಯೋದಕ್ಕೆ ಶುರು ಮಾಡಿದ, ಅಕ್ಕಪಕ್ಕದವರು ಏಳ್ತಾರೆ ಅನ್ನುವ ಕಾರಣಕ್ಕಾಗಿ ಬಾಗಿಲು ತೆಗೆದೆ. ಅಷ್ಟರಲ್ಲೇ ಒಳಗಡೆ ಬಂದು ನಾವು ಬದುಕಿದ್ದೀವೋ ಸತ್ತಿದ್ದೀವೋ ಎಂಬುದನ್ನೂ ನೋಡದೆ ಆತ ಹೊಡಿಯೋದಕ್ಕೆ ನಿಂತ. ಅದೆಲ್ಲಿತ್ತೋ ಸಿಟ್ಟು, ನಾನು ಒಂದು ಕಸಬರಿಗೆ ತಗೊಂಡು ಒಂದ್ ಪೆಟ್ ಕೊಟ್ಟೆ, ಗಾಬರಿಗೊಂಡು ಆತ ವಾಪಸ್ ಹೋದ. ಅವನಷ್ಟೇ ಬೆರಗಿನಿಂದ ಗಾಬರಿಯಿಂದ ನಾನೂ ನಿಂತಿದ್ದೆ. ಮರುದಿವ ನನ್ನ ಮತ್ತು ಅವನ ಸಂಬಂಧಿಗಳನ್ನೆಲ್ಲ ಪಂಚಾಯ್ತಿಗೆ ಕರಿದ, ಚರ್ಚೆಯ ಮುಖ್ಯ ವಿಷಯ ನಾನು ಅನ್ನಿಗೆ ಹೊಡ್ದದ್ದು ಆಗಿತ್ತು. ಅದ್ರೆ ಕಾರಣವನ್ನ ಯಾರೂ ಕೇಳಿಲ್ಲ. ಪಂಚಾಯ್ತಿಯ ತೀರ್ಮಾನ "ನಾನು ಅನ್ನ ಕಾಲಿಗೆ ಬಿದ್ದು ಕ್ಷಮೆ ಕೇಳಬೇಕು ಅನ್ನೋದಾಗಿತ್ತು"  ಅಂತ ಆಕೆ ಹೇಳಿದ್ದು.

ಅವತ್ತು ತಾನೊಂದು ದೊಡ್ಡ ಪಾಠ ಕಲಿತೆ ಅಂತ ಅವ್ರು ಹೇಳ್ತಾಳೆ. ೧೫ ವರ್ಷಗಳ ಕಾಲ ತಾನು ಈ ಹಿಂಸೆಯನ್ನು ಅನುಭವಿಸ್ಬೇಕಾಗಿಲ್ಲ. ತಾನು ಮೊತ್ತಮೊದಲು ಮಾಡಬೇಕಾಗಿದ್ದದ್ದು, ಯಾವತ್ತು ತನ್ನ ಮೇಲೆ ಹಿಂಸೆ ಶುರು ಆಯ್ತೋ, ಯಾವತ್ತು ತನ್ನ ಮೇಲೆ ಆತ ಕೈ ಮಾಡಿದ್ರೋ ಆವತ್ತು ತಾನು ಪಂಚಾಯ್ತಿ ಕರೀಬೇಕಾಗಿತ್ತು ಅಂತ ಅನ್ನಿಸ್ತು ಎಂದು ಆ ಹೆಣ್ಣುಮಗು ಹೇಳಿದ್ದು. ಮುಂದೆ ಏನಾಯ್ತು ಎಂಬ ಕೇಳುಗರ ಪ್ರಶ್ನೆಗೆ "ನಾನು ಅವನ ಕ್ಷಮೆ ಕೇಳಲಿಲ್ಲ. ಈಗ ನಾನು ಮತ್ತು ನನ್ನ ಮಕ್ಕಳು ನಮ್ಮಷ್ಟಕ್ಕೆ ಸುಖವಾಗಿ ನೆಮ್ಮದಿಯಿಂದ ಇದ್ದೇವೆ"  ಎಂದಳು. ಒಬ್ಬ ಸಾಮಾನ್ಯಾತಿಸಾಮಾನ್ಯ ಹೆಣ್ಣುಮಗಳು ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾಗಿ ಅದರಿಂದ ಹೊರಬಂದ ಬಗೆ ಇದು.

ಇನ್ನೊಂದು ಪ್ರಕರಣವನ್ನು ನೋಡೋಣ. ರೈತನ ಆತ್ಮಹತ್ಯೆ ವರ್ತಮಾನದ ದುರಂತ ಘಟನೆಗಳಲ್ಲಿ ಒಂದು. ಬೆಳೆನಾಶ, ಬೆಲೆಕುಸಿತ, ಸಾಲಬಾಧೆ, ಸಾಲ ನೀಡಿದವರ ದೌರ್ಜನ್ಯ ಮುಂತಾದ ಕಾರಣಗಳು ರೈತನ ಆತ್ಮಹತ್ಯೆಗಳಿಗೆ ಕಾರಣವಾಗಿರುವುದು ನಮಗೆ ಗೊತ್ತೇ ಇದೆ. ಹೀಗೆ ಬದುಕಿಗೆ ಬೆನ್ನು ಹಾಕಿ ಹೋದ ರೈತನ ನಂತರ ಆ

ಕುಟುಂಬದ ಸ್ಥಿತಿಯತ್ತ ಗಮನಹರಿಸಬೇಕಿದೆ. ಹೊಲ/ಗದ್ದೆಯಲ್ಲಿ ಆ ವರ್ಷ ಯಾವ ಬೆಳೆ ಬೆಳೆಯಬೇಕು, ಎಷ್ಟು ರಸಗೊಬ್ಬರ ಹಾಕಬೇಕು, ಎಲ್ಲಿಂದ ಮತ್ತು ಎಷ್ಟು ಪ್ರಮಾಣದ ಸಾಲ ಪಡೆಯಬೇಕು ಎಂಬಿತ್ಯಾದಿ ಪ್ರಮುಖ ನಿರ್ಣಯಗಳಲ್ಲಿ ಆ ಕುಟುಂಬದ ರೈತ ಮಹಿಳೆಯ ಪಾತ್ರ ಮತ್ತು ಪಾಲು ಏನೇನೂ ಇರುವುದಿಲ್ಲ ಅಥವಾ ಇದ್ದರು ಕನಿಷ್ಟ ಪ್ರಮಾಣದಲ್ಲಿರುತ್ತದೆ. ಹೊರ ಜಗತ್ತಿನ ವ್ಯವಹಾರವನ್ನೆಲ್ಲಾ ತನ್ನ ಅಧೀನದಲ್ಲಿಟ್ಟುಕೊಂಡ ಮನೆಯ ಯಜಮಾನ ದಿಢೀರನೆ ಇಲ್ಲವಾದಾಗ, ಆತ ದುರಂತವನ್ನು ಎದುರುಗೊಂಡಾಗ ತನ್ನನ್ನು, ತನ್ನ ಮಕ್ಕಳು ಮತ್ತು ಅವಲಂಬಿತರನ್ನು ಸಂಬಾಳಿಸುವುದಲ್ಲದೆ, ಗಂಡನ ಸಾಲದ ಮರುಪಾವತಿ ಕುರಿತ ಜವಾಬ್ದಾರಿ ಹೊರುವ ಅನಿವಾರ್ಯತೆ ರೈತ ಮಹಿಳೆಯದ್ದು. ಇಂತಹ ಕುಟುಂಬಗಳ ಅಧ್ಯಯನ ಮಾಡಿದಾಗ ಗಂಡನ ಕಾಲಾನಂತರ ರೈತ ಮಹಿಳೆ ಅತ್ಯಂತ ವಿವೇಕ ಮತ್ತು ಜಾಣೆಯಿಂದ ಮುಂದಿನ ಬದುಕನ್ನು ಕಟ್ಟಿಕೊಂಡ ನಿದರ್ಶನಗಳು ಸಿಗುತ್ತವೆ. ಇಲ್ಲಿ ಶೋಷಣೆಯ ವಿನ್ಯಾಸಗಳು ಬಹು ಸಂಕೀರ್ಣವಾದವುಗಳು ಮತ್ತು ಅಗೋಚರವಾಗಿ ಉಳಿಯುವಂಥವು. ಅವನ್ನು ಮೆಟ್ಟಿ ಬದುಕು ಕಟ್ಟಿಕೊಂಡಾಗಲೂ ರೈತ ಮಹಿಳೆಯ ಪರಿಶ್ರಮಕ್ಕೆ ಸಮಾಜದಲ್ಲಿ ಯಾವ ಮಾನ್ಯತೆಯೂ ದೊರೆಯುವುದಿಲ್ಲ. ಅದು ಅವಳ ಕರ್ತವ್ಯವೆಂದೇ ಪರಿಗಣಿತವಾಗುತ್ತದೆ.

ಇದು ಕಥೆಯಲ್ಲ; ಒಂದು ಬದುಕು. ಇಲ್ಲಿ ನಡೆದ ದೈಹಿಕ ಮತ್ತು ಮಾನಸಿಕ ಶೋಷಣೆ ನಿತ್ಯ ನಮ್ಮ ಸುತ್ತಮುತ್ತ ನಡೆಯುತ್ತಿದ್ದರೂ ನಮಗೆ ಅದು ದೊಡ್ಡ ಸಮಸ್ಯೆ, ಶೋಷಣೆ ಎಂದು ಅನ್ನಿಸುವುದೇ ಇಲ್ಲ. ಕಾರಣ ಅದು ಖಾಸಗಿ ಬದುಕು.ದಂಪತಿಗಳ ಖಾಸಗಿ ಬದುಕಿನಲ್ಲಿ ನಮಗೆ ಪ್ರವೇಶ ಇಲ್ಲ ಎಂದು ನಾವು ಭಾವಿಸಿಕೊಂಡು ಬಿಡುತ್ತೇವೆ. ಇಂಥ ವೈಯಕ್ತಿಕ ಶೋಷಣೆಗಳು ಸಾಮಾಜಿಕರ ಮೌನ ಸಮ್ಮತಿಯನ್ನು ಪಡೆದು ಒಪ್ಪಿತ ಯಾಜಮಾನ್ಯವಾಗಿ ಬಿಡುತ್ತವೆ ಮತ್ತು ಮುಂದಿನ ದಿನಗಳಲ್ಲಿ ಸಾಮಾಜಿಕವಾದ ಪಿಡುಗಾಗಿ, ಅವು ರೂಪಾಂತರಗೊಳ್ಳುತ್ತವೆ. ಪುರುಷಪ್ರಧಾನ ಸಮಾಜದ, ಪುರುಷ ಪ್ರಧಾನ ಚಿಂತನಾ ಸ್ತರವನ್ನು ಒಪ್ಪಿಕೊಂಡ ಎಲ್ಲರಿಗೂ ಇವು ಯಾವುದೂ ಶೋಷಣೆ ಎಂದು ಅನ್ನಿಸುವುದೇ ಇಲ್ಲ. ಬದಲಾಗಿ 'ಹೆಂಡತಿಯನ್ನು ಹದ್ದುಬಸ್ತಿನಲ್ಲಿಡುವುದು' ಎಂಬಂತೆ ವ್ಯಾಖ್ಯಾನ ಮಾಡಲಾಗುತ್ತೆ. ಅಷ್ಟೇ ಅಲ್ಲ, ಈಗಲೂ ನಮ್ಮ ಮನೆಯ ಹೆಣ್ಣುಮಕ್ಕಳನ್ನ ಮದುವೆ ಮಾಡಿಕೊಡುವಾಗ ಕೂಡ 'ಗಂಡ, ಗಂಡನ ಮನೆಯವರ ಜೊತೆ ಹೊಂದಿಕೊಂಡು ಹೋಗಬೇಕು' ಎನ್ನುವ ಉಪದೇಶವನ್ನೇ ಹೆಣ್ಣುಮಕ್ಕಳಿಗೆ ನೀಡಲಾಗುತ್ತ ಇರುವುದು ಕೂಡ ಅದರ ಮುಂದುವರಿಕೆಯಾಗಿ ನನಗೆ ಕಾಣುತ್ತಿದೆ.

ಲಿಂಗತಾರತಮ್ಯವನ್ನು ಒಪ್ಪಿದ ಮನಸ್ಸಿಗೆ ಶೋಷಣೆಯ ಸೂಕ್ಷ್ಮಗಳು ಅರಿವಿಗೇ ಬರುವುದಿಲ್ಲ. ಪುಟ್ಟ ಮಗುವಿಗಿರುವ ಮಾನಾಪಮಾನದ ಪ್ರಶ್ನೆಯನ್ನು ಹೆಣ್ಣುಮಕ್ಕಳು ವಿವಾಹದಲ್ಲಿ ನಿರಸನಗೊಳಿಸಿಕೊಳ್ಳಬೇಕಾಗಿದೆ. ಮನೆಯ ಹಿರಿ-ಕಿರಿಯರ ಎದುರು, ಮಕ್ಕಳ ಎದುರು, ಅಪರಿಚಿತರ ಎದುರು, ಗೆಳತಿಯರೆದುರು-ಹೀಗೆ ಯಾವಾಗೆಂದರೆ

ಆವಾಗ, ನಿರೀಕ್ಷಿತ ಅನಿರೀಕ್ಷಿತ ಸಂದರ್ಭಗಳಲ್ಲಿ ಗದರಿಕೆ, ಬೈಗಳು, ಹೀನಾಯಿಕೆ ಇತ್ಯಾದಿಗಳನ್ನು ಎದುರುಗೊಂಡೂ ಏನೂ ಆಗಿಲ್ಲ ಎಂಬಂತೆ ನೀಗಿಕೊಳ್ಳುವ ಮಹಿಳೆಯರ ಸ್ಥಿತಿ ಪುರುಷಪ್ರಧಾನ ಚಿಂತನೆಯವರಿಗೆ ಶೋಷಣೆ ಎಂದು ಅನ್ನಿಸುವುದೇ ಇಲ್ಲ. ಸಂಸ್ಕೃತಿಯ ಮುಂದುವರಿಕೆಯ ಜವಾಬ್ದಾರಿಯನ್ನು ಹೆಣ್ಣಿನ ಕೈಗೊಪ್ಪಿಸಿ, ಹಿಂದಿನಿಂದ ಸೂತ್ರಧಾರನ ಪಾತ್ರವನ್ನು ವಹಿಸುವ ಗಂಡಸಿನ ಪಾತ್ರ ಯಾರ ಕಣ್ಣಿಗೂ ಕಾಣುವುದಿಲ್ಲ. ಮಕ್ಕಳ ಬೆಳವಣಿಗೆಗಳಲ್ಲಿ ಗಂಡನ ಇಷ್ಟಾನಿಷ್ಟಗಳನ್ನು, ಆದೇಶಗಳನ್ನು ಮಕ್ಕಳಿಗೆ ರವಾನಿಸುವ ಕೆಲಸವನ್ನು ಮಡದಿ ಎಂಬ ಮಾಧ್ಯಮದ ಮೂಲಕ ಮಾಡಿಸಲಾಗುತ್ತದೆ. ಅಂತಹ ಸಂದರ್ಭಗಳಲ್ಲಿ ಹಲವು ಬಾರಿ ಆಕೆ ತನಗೆ ಒಪ್ಪಿತವಲ್ಲದ ವಿಚಾರಗಳನ್ನೂ ಮಕ್ಕಳಿಗೆ ದಾಟಿಸಬೇಕಾಗುತ್ತದೆ; ಅವರನ್ನು ನಿಯಂತ್ರಿಸಬೇಕಾಗುತ್ತದೆ. ಅಲ್ಲಿ ಆಕೆ ಕೆಲವು ಸಲ ಅಸಹಾಯಕಳೂ ಆಗಿರುತ್ತಾಳೆ. ಅಂತಹ ಸಂದರ್ಭಗಳಲ್ಲಿ ಆಕೆಯದು ಆ ಕಡೆ ಮಕ್ಕಳಿಂದ ಮತ್ತು ಈ ಕಡೆ ಗಂಡನಿಂದ ಎರಡೂ ಕಡೆಯಿಂದ ಇಕ್ಕಿಸಿಕೊಳ್ಳುವ ಸ್ಥಿತಿ ಆಗಿರುತ್ತೆ. ತಾಯ್ತನದ ಹೆಸರಲ್ಲಿ ಅದು ಅವಳ ವಿಧಿ ಎಂದು ಭಾವಿಸಲಾಗುತ್ತದೆ ಹೊರತು ಅದೊಂದು ಶೋಷಕ ಸ್ಥಿತಿ ಅನ್ನುವಂಥದ್ದು ಅರಿವಿಗೆ ಬರುವುದಿಲ್ಲ.

ಅದೇ ಮಹಿಳೆ ಮನೆ ಎನ್ನುವ ನಾಲ್ಕು ಗೋಡೆಗಳ ಆಚೆ ಬಂದಾಗ ಒಂದೇ ಕೆಲಸ, ಆ ಕೆಲಸವನ್ನು ಮಾಡುವ ವ್ಯಕ್ತಿ ಯಾರು ಅನ್ನುವುದರ ಮೇಲೆ ನೋಡುವವರ ಅಭಿಪ್ರಾಯಗಳು ಬದಲಾಗುವಂಥ ಸ್ಥಿತಿಗಳು ಇದ್ದಾವೆ. ಉದಾಹರಣೆಗೆ, ಕಚೇರಿಯ ಕೆಲಸದ ಅವಧಿ ಮುಗಿದ ಬಳಿಕವೂ ಕೆಲಸ ಮಾಡುತ್ತ ಇದ್ರೆ, ಮಾಡ್ತಾ ಇರುವಂಥ ವ್ಯಕ್ತಿ ಪುರುಷ ಆಗಿದ್ರೆ, 'ಎಂಥಾ ನಿಷ್ಠಾವಂತ ಕೆಲಸಗಾರ' ಅಂತ ಮೆಚ್ಚುಗೆಯೂ, ಅದೇ ಒಬ್ಬ ಹೆಣ್ಣುಮಗಳು ಮಾಡ್ತಾ ಇದ್ರೆ 'ಮಹತ್ವಾಕಾಂಕ್ಷೆಯ ಹೆಂಗಸು' ಅಂತಲೂ ಅಭಿಪ್ರಾಯಗಳು ಕೇಳಿ ಬರುತ್ತವೆ. ಸಹೋದ್ಯೋಗಿಯ ಜೊತೆ ನಗುಮುಖದಿಂದ ವ್ಯವಹರಿಸಿದ್ರೆ ಆತ ಸರಸಿ, ಸೊಗಸುಗಾರ ವ್ಯಕ್ತಿ' ಎನಿಸಿದರೆ, ಆಕೆ 'ಮೋಡಿ ಮಾಡುವವಳು' ಅಂತ ಕರೆಸಿಕೊಳ್ತಾಳೆ. ಅಧೀನ ಸಿಬ್ಬಂದಿಗಳನ್ನು ನಿಯಂತ್ರಣದಲ್ಲಿ ಇಟ್ಟುಕೊಂಡ್ರೆ ಅವ್ನು ದಕ್ಷ ಅಧಿಕಾರಿ'ಯಾಗಿಯೂ, ಆಕೆ 'ದರ್ಪಿಷ್ಠೆ'ಯಾಗಿಯೂ ಈ ಕಣ್ಣುಗಳಿಗೆ ಕಾಡ್ತಾ ಇದ್ದಾರೆ. ಒಳ್ಳೆಯ ಉಡುಗೆಯಲ್ಲಿ ಕಚೇರಿಗೆ ಬಂದ್ರೆ ಆತನನ್ನು 'ಜಂಟಲ್‌ಮ್ಯಾನ್' ಎಂದು ಗುರುತಿಸಿದ್ರೆ, ಆಕೆಯನ್ನು 'ಬಲೆ ಬೀಸ್ತಾಳೆ' ಎಂದು ಹೇಳುವ ಜನರೂ ನಮ್ಮ ಮಧ್ಯೆ ಇದ್ದಾರೆ. ಕಚೇರಿಯ ಮಧ್ಯೆ ಕೌಟುಂಬಿಕ ಜವಾಬ್ದಾರಿಗಾಗಿ ವಿರಾಮವನ್ನು ಬೇಡಿದ್ರೆ ಆತ 'ಆದರ್ಶ ಗಂಡ' ಆದ್ರೆ, ಈಕೆ ನಿಷ್ಪ್ರಯೋಜಕವಾದ ಹೆಂಗಸಾಗಿ ಪರಿಗಣಿತ ಆಗ್ತಾಳೆ. ಇಂತಹ ವೈರುದ್ಧ ಗಳು, ಒಂದೇ ಕೆಲಸದಲ್ಲಿದ್ದಾಗಲೂ ಮಾಡುವ ವ್ಯಕ್ತಿಯನ್ನು ಅವಲಂಬಿಸಿಕೊಂಡು ನೋಡುವ, ಅದಕ್ಕೆ ವ್ಯಾಖ್ಯಾನ ಮಾಡುವ ಕ್ರಮ ಯಾಕೆ ಬದಲಾಗ್ತವೆ? ಹಾಗೆ ಬದಲಾಗುವುದರ ಹಿಂದೆ ಇರುವಂಥ ಮನಸ್ಥಿತಿ ಏನು ಮತ್ತು ಆ ಮನಸ್ಥಿತಿ ಉಂಟುಮಾಡುವ ಪರಿಣಾಮಗಳೇನು ಎಂದು ಕೇಳಬೇಕು.

ಇದಕ್ಕಿಂತ ಹೊರತಾದ ಇನ್ನು ಕೆಲವು ಸಂಗತಿಗಳತ್ತ ಗಮನಹರಿಸಿಬೇಕಿದೆ. ಮಾಟಗಾತಿ, ಭಾನಾಮತಿ ಮಾಡ್ತಾ ಇದ್ದಾಳೆ ಎನ್ನುವ ಕಾರಣಕ್ಕೆ ಕೆಲವು ಮಹಿಳೆಯರು ಸಾಮಾಜಿಕರಿಂದ ಕ್ರೂರ ಶಿಕ್ಷೆಗೆ ಒಳಗಾಗುವ ವಿದ್ಯಮಾನಗಳನ್ನು ನಾವೆಲ್ಲ ಗಮನಿಸಿದ್ದೀವಿ. ಇವರೆಲ್ಲ ಯಾರು ಎಂಬುದಾಗಿ ನೋಡಿದ್ರೆ ಇವರು ಒಂದೋ ಒಂಟಿ ಮಹಿಳೆಯರಾಗಿದ್ದಾರೆ, ಇಲ್ಲವೇ ಅವರು ಪರಿತ್ಯಕ್ತ ಮಹಿಳೆಯರಾಗಿರುವುದನ್ನು ನಾವು ನೋಡ್ತೀವಿ. ರಾತ್ರಿ-ಅಪರಾತ್ರಿಗಳಲ್ಲಿ ಯಾವ ಭಯವೂ ಇಲ್ಲದೆ ಬೀದಿಯಲ್ಲಿ ಓಡಾಡ್ತಾ ಇದ್ದಾರೆ. ಯಾರೊಂದಿಗೂ ಮಾತನಾಡುವುದಿಲ್ಲ ಅಥವಾ ತಮ್ಮಲ್ಲೇ ತಾವೇ ಏನೋ ಗುನುಗಿಕೊಳ್ತಾರೆ, ಊರಿಂದ ಹೊರಗೆ ಒಂಟಿಯಾಗಿ ಬದುಕ್ತಾ ಇದ್ದಾರೆ ಅನ್ನುವ ಕಾರಣಕ್ಕಾಗಿ ಅವರ ಅಂಥ ವರ್ತನೆಗಳಿಗೆ ಕಾರಣಗಳನ್ನು ತಿಳಿಯದೆ ಅವರನ್ನು ಕಳ್ಳಿ, ಮಕ್ಕಳ ವಂಚಕಿ, ಮಾಟಗಾತಿ ಎನ್ನುವ ಹೆಸರಿನಲ್ಲಿ ಕಲ್ಲು ಹೊಡೆದು ಸಾಯಿಸುವ, ಕಂಬಕ್ಕೆ ಕಟ್ಟಿ ಹೊಡೆದು ಸಾಯಿಸಿದ ಅಥವಾ ಬೆತ್ತಲೆ ಮೆರವಣಿಗೆಯನ್ನು ಮಾಡಿದ, ಕೊಲೆ ಮಾಡಿದ ಪ್ರಕರಣಗಳು ನಡೆದಿದ್ದಾವೆ. ಮುಂದೆಯೂ ನಡೆದಲ್ಲಿ ಅಚ್ಚರಿಯಿಲ್ಲ. ಈ ಸಾಮೂಹಿಕ ಸನ್ನಿಯಲ್ಲಿ ಕಾನೂನನ್ನು ಕೈಗೆ ತೆಗೆದುಕೊಂಡವರ ಬಗ್ಗೆ ಜನರಲ್ಲಿ ಆಕ್ರೋಶ ಇರುವುದಿಲ್ಲ. ಆ ಶಿಕ್ಷೆಗೆ ಆಕೆ ಅರ್ಹಳೆಂದೇ ಜನರ ಭಾವನೆಯಾಗಿರುತ್ತದೆ. ಇದು ಶೋಷಣೆಯ ಛದ್ಮವೇಷ ಅಲ್ಲದೆ ಇನ್ನೇನು?

ಅಭಿವೃದ್ಧಿಯ ಮಾನದಂಡದಲ್ಲಿ ಶೌಚಾಲಯ ವ್ಯವಸ್ಥೆ ಸೇರಿಲ್ಲವೋ ಅಥವಾ ಅದು ಅಷ್ಟು ಮುಖ್ಯವೆಂದು ಪರಿಗಣಿತ ಆಗಿಲ್ಲವೋ ಎನ್ನುವುದಕ್ಕೆ ನಾವು ಉತ್ತರಗಳನ್ನು ಕಂಡುಕೊಳ್ಳಬೇಕಾಗಿದೆ. ಈ ದೇಶದ, ರಾಜ್ಯದ ಯಾವ ಮೂಲೆಮೂಲೆಯ ಹಳ್ಳಿಗಳನ್ನು ನೋಡಿ, ಮನೆಮನೆಗಳಲ್ಲಿ ಟಿವಿ ಇರುತ್ತೆ, ಒಂದೋ ಎರಡೂ ಬೈಕ್ ಇರುತ್ತೆ, ಪ್ರತೀ ಕೈಗೆ ಮೊಬೈಲ್ ಇರುತ್ತೆ, ಆದ್ರೆ ಅದ್ರ ಜೊತೆಗೆ ಸಾಲ ಕೊಡ್ಲಿ, ಅನುದಾನ ಕೊಡ್ಲಿ, ಮನೆಗೊಂದು ಶೌಚಾಲಯವನ್ನು ಕಟ್ಟಿಸುವುದು ಆ ಮನೆಯ ಗಂಡಸರಿಗೆ ಆದ್ಯತೆ ಎಂದು ಅನ್ನಿಸುವುದೇ ಇಲ್ಲ. ಮನೆಯ ಆದಾಯದಲ್ಲಿ ಮಹಿಳೆಯರ ಆದ್ಯತೆ ಗಮನಕ್ಕೆ ಬರುವುದಿಲ್ಲ ಎನ್ನುವುದನ್ನು ನಾವು ಗಮನಿಸಬೇಕಾಗಿದೆ. ಬಯಲು ಶೌಚ ಅವಲಂಬಿಸಿದ ಮಹಿಳೆಯರು ಎದುರಿಸುವ ಅನೇಕ ಆಪತ್ತುಗಳಲ್ಲಿ ಅತ್ಯಾಚಾರ ಒಂದು. ಅತ್ಯಾಚಾರ ಪ್ರಕರಣಗಳಲ್ಲಿ ಶೇ.೪೦ರಷ್ಟು ಪ್ರಕರಣಗಳು ಶೌಚಕ್ಕೆ ಹೋದಾಗಲೇ ಆಗ್ತಾ ಇವೆ ಅನ್ನೋದನ್ನ ಅಧ್ಯಯನಗಳು ತಿಳಿಸಿಕೊಟ್ಟಿವೆ. ಶೌಚಕ್ಕೆ ಹೋಗಲೂ ರಕ್ಷಣೆ ಒದಗಿಸದ ಸ್ಥಿತಿ ಶೋಷಣೆ ಅಲ್ಲದೆ ಮತ್ತೇನು? ಶೌಚಕ್ಕಾಗಿ ಕತ್ತಲಿಗೆ ಕಾಯುತ್ತ ಕೂರುವ, ರಸ್ತೆ ಬದಿ ಕೂತವರು ದೀಪ ಕಂಡು ಏಳುವ ಮತ್ತೆ ಕೂರುವ, ಇಂತಹ ಮುಜುಗರದ ಜೊತೆ ಅತ್ಯಾಚಾರದ ಭಯ ಕೂಡ ಸೇರಿದಲ್ಲಿ ಸೃಷ್ಟಿಯಾಗುವ ನರಕ ಯಾಕೆ ಯಾರ ಗಮನಕ್ಕೂ ಯಾರ ಲಕ್ಷ್ಯಕ್ಕೂ ಬರುವುದಿಲ್ಲ?

ಹೆಣ್ಣು ಎಂಬ ಕಾರಣಕ್ಕಾಗಿಯೇ ನಡೆಯುವ ಇನ್ನೂ ಅಂತಹ ಅನೇಕ ಸಂಗತಿಗಳಲ್ಲಿ ಲೈಂಗಿಕತೆಯಲ್ಲಿ ನಿಷ್ಠೆಯ ಪ್ರಶ್ನೆಯನ್ನು ನಾನು ನೆನಪಿಸುವುದಕ್ಕೆ ಇಷ್ಟಪಡುತ್ತೇನೆ. ದಾಂಪತ್ಯವನ್ನು ನರಕವನ್ನಾಗಿಸಿರುವ, ಶೋಷಣೆಯ ಪರಮಾವಧಿ ಯನ್ನಾಗಿಸಿರುವ ಸಂಗತಿಯ ಕಡೆಗೆ ನಿಮ್ಮ ಗಮನ ಸೆಳೆಯಲು ಇಚ್ಛಿಸುತ್ತಿದ್ದೇನೆ. ದಂಪತಿಗಳ ನಡುವಿನ ಮನಸ್ತಾಪ, ಜಗಳಗಳ ಸುದ್ದಿ ದುರಂತಗಳಲ್ಲಿ ಮುಕ್ತಾಯ ಗೊಳ್ಳುತ್ತಿರುವುದು ದಿನಪತ್ರಿಕೆಯನ್ನು ಓದ್ತಾ ಇರುವ ನಮ್ಮ ಕಣ್ಣಿಗೆ ಕಾಡ್ತಾ ಇರುತ್ತೆ, ಗಂಡ ಹೆಂಡತಿಯ ಜಗಳಗಳು ಅತ್ಯಂತ ಕ್ಷುಲ್ಲಕ ಕಾರಣಗಳಿಗಾಗಿಯೂ ಆಗಿರಬಹುದು. ನಿದರ್ಶನಕ್ಕೆ ಸರಿಯಾಗಿ ಅಡುಗೆ ಮಾಡುವುದಿಲ್ಲ ಎನ್ನುವುದರಿಂದ ಹಿಡಿದು ಬೇರೆ ಬೇರೆ ಕಾರಣಗಳಿಗಾಗಿ ನಡೆಯುವ ಕಲಹಗಳು ಅವು ಪತ್ನಿಯ ಕೊಲೆಯಲ್ಲಿ ಪರಿಸಮಾಪ್ತಿ ಆಗೋದನ್ನ ನೋಡ್ತಾ ಇದ್ದೀವಿ. ದಾಂಪತ್ಯದಲ್ಲಿ ನಿಷ್ಠೆಯ ಪ್ರಶ್ನೆ ಹೆಣ್ಣು ಗಂಡು ಇಬ್ಬರಿಗೆ ಇಬ್ಬಗೆಯಾಗಿದೆ. ಗಂಡನ ಅನ್ಯ ಸಂಬಂಧವನ್ನು ಒಪ್ಪಿಕೊಳ್ಳುವ ಒತ್ತಡವನ್ನು ಅವಳ ಮೇಲೆ ಹಾಕಲಾಗಿದೆ. ಹೆಂಡತಿಯ ಸಂದರ್ಭದಲ್ಲಿ ಅವಳ ಕೊಲೆಯನ್ನು ಶಿಕ್ಷೆ ಎಂಬಂತೆ ಪರಿಭಾವಿಸಲಾಗುತ್ತದೆ. ಇಲ್ಲಿ ದಂಪತಿಗಳು ಗೌರವಯುತವಾಗಿ ಬೇರ್ಪಡೆ ಆಗುವುದನ್ನು ಯಾರೂ ಚರ್ಚಿಸುವುದೇ ಇಲ್ಲ. ಬದಲಾಗಿ ಗಂಡನ ಅಗತ್ಯವನ್ನು ಪೂರೈಸುವುದು ಹೆಣ್ಣಿನ ಕರ್ತವ್ಯ ಎನ್ನುವ ಬುದ್ಧಿವಾದವನ್ನು ಇವತ್ತಿಗೂ ನಾವು ಹೇಳ್ತಾ ಇದ್ದೀವಿ. ಆ ಮೂಲಕ ಬೇಕಿರಲಿ ಬೇಡದಿರಲಿ ಆಕೆಯದು ಗಂಡನ ಅಗತ್ಯಗಳಿಗೆ ಒಡ್ಡಬೇಕಾದಂಥ ದೇಹ ಅನ್ನೋದು ಮಾತ್ರ ಅಲ್ಲಿ ಸೂಚಿತ ಆಗ್ತಾ ಇರುತ್ತದೆ. ಅಷ್ಟೇ ಅಲ್ಲ, ದಾಂಪತ್ಯದೊಳಗೂ ಅತ್ಯಾಚಾರಗಳು ನಡೀತವೆ; ಮಹಿಳೆಗೆ ಅದರಿಂದ ರಕ್ಷಣೆ ಬೇಕು ಎನ್ನುವ ಮಾತುಗಳು ಚಳವಳಿಗಾರರ ಮೂಲಕ ಬಂದಾಗಲೆಲ್ಲ ನಮ್ಮ ಸಮಾಜದ ಪುರುಷರು ತಲ್ಲಣಕ್ಕೆ ಒಳಗಾಗ್ತಾರೆ ಮತ್ತು ಅದರ ಬಗ್ಗೆ ತುಂಬ ತೀವ್ರವಾದ ಕಟುವಾದ ಟೀಕೆಯನ್ನು ಮಾಡುವುದನ್ನು ನಾವು ಕಾಡ್ತಾ ಇದ್ದೇವೆ.

ಆ್ಯಸಿಡ್ ದಾಳಿಗೆ ಸಂಬಂಧಪಟ್ಟಂತೆ ನಡೆದ ಪ್ರಕರಣಗಳನ್ನು ಒಮ್ಮೆ ಮೆಲುಕು ಹಾಕಿದ್ರೂ ಸಾಕು, ಶೋಷಣೆಯ ಛದ್ಮವೇಷ ಅನಾವರಣಗೊಳ್ಳುತ್ತದೆ. ತನಗೆ ತನ್ನ ಅಪೇಕ್ಷೆಗೆ ಸಹಕರಿಸಿಲ್ಲ ಎನ್ನುವ ಕಾರಣಕ್ಕೆ, ತನ್ನ ಪ್ರೀತಿಯನ್ನು ತಿರಸ್ಕರಿಸಿದಳು, ತನ್ನ ಅಧಿಕಾರವನ್ನು ಪ್ರಶ್ನೆ ಮಾಡಿದಳು ಎನ್ನುವ ಕಾರಣಕ್ಕಾಗಿ ಒಬ್ಬ ಹೆಣ್ಣುಮಗಳು ತನ್ನ ಪ್ರೇಮಿಯಿಂದ, ಗಂಡನಿಂದ ಅಥವಾ ಮೇಲಧಿಕಾರಿಯಿಂದ ಯಾರಿಂದಲೂ ಧಾಳಿಗೆ ತುತ್ತಾಗಬಹುದಾದಂತಹ ಸಂದರ್ಭಗಳನ್ನು ನಾವು ನೋಡ್ತಾ ಬಂದಿದ್ದೀವಿ, ಹೆಣ್ಣಿನ ಕೈಯಲ್ಲಿ ಆಯ್ಕೆ ಅನ್ನೋದೇ ಇರಬಾರು ಅನ್ನೋ ಮನಸ್ಥಿತಿಯನ್ನು ಶೋಷಣೆ ಅನ್ನದೆ ಇನ್ನಾವ ಪದದಿಂದ ಗುರುತಿಸೋದಕ್ಕೆ ಸಾಧ್ಯ ಇದೆ? ಹಸೀನ ಎನ್ನುವ ಹೆಣ್ಣುಮಗಳ ಬಗ್ಗೆ ನಿಮಗೆಲ್ಲಾ ಗೊತ್ತಿದೆ ಅಂದುಕೊಂಡಿದ್ದೀನಿ. ೧೯ ವರ್ಷ ವಯಸ್ಸಿನ ಆ ಹೆಣ್ಣುಮಗಳು ಅವತ್ತು ಆ ಸಂದರ್ಭದಲ್ಲಿ ಮೇಲಧಿಕಾರಿಯ ಇಚ್ಛೆಗೆ ಬಾಗದೆ ಇದ್ದಾಗ ಎರಡು ಲೀಟರ್‌ನಷ್ಟು ಆ್ಯಸಿಡ್ ಅನ್ನು ತಂದು ಸುರಿದ ಪ್ರಕರಣ, ನಾವ್ಯಾರೂ

ಮರ್ತಿಲ್ಲ ಅಂತ ನಾನಂದ್ಕೋತೀನಿ. ಆ ಸನ್ನಿವೇಶದಿಂದ ಅವಳು ಪಾರಾಗೋದಕ್ಕೆ ಸುಮಾರು ೩೫ ಶಸ್ತ್ರಚಿಕಿತ್ಸೆಗೆ ಒಳಗಾದಂಥದ್ದು ಮತ್ತು ಅನೇಕ ಬಗೆಯ ಹಿಂಸೆಗಳನ್ನು ಅನುಭವಿಸಿದ್ದನ್ನು ಕೇಳಿದ್ದೇವೆ. ಆಸ್ಪತ್ರೆಯಲ್ಲಿ ಅವಳನ್ನು ನೋಡುವುದಕ್ಕೆ ಬಂದ ಒಬ್ಬ ವ್ಯಕ್ತಿ ಹೇಳ್ತಾನೆ- 'ಎಂದೆಂದಿಗೂ ಮೊದಲಿನ ಹಾಗೆ ಆಗದವಳಿಗೆ ಯುಥನೇಶಿಯಾ ಕೊಟ್ಟು ಸಾಯೋದ್ ಬಿಟ್ಟು, ಯಾಕೆ ಖರ್ಚು ಮಾಡ್ತೀರಿ?' ಅಂತ ಅವ ತಂದೆಯನ್ನ ಕೇಳಿದ. ಇದು ಯಾವ ಬಗೆಯ ಮನಸ್ಥಿತಿ ಅಂತ ಕೇಳೇಕಾಗಿದೆ. ಇಲ್ಲಿ ಅಡಗಿರುವ ಕ್ರೌರ್ಯ, ಈ ತಣ್ಣನೆಯ ಕ್ರೌರ್ಯವನ್ನು ನಾವು ಗ್ರಹಿಸುವುದಾದರೂ ಹೇಗೆ? ಕಾಣದ ತಣ್ಣಗಿನ ಕ್ರೌರ್ಯಗಳ ಬಗ್ಗೆ ಮಾತನಾಡುವುದಕ್ಕೇನೆ ನಮ್ಮಲ್ಲಿ ಸಮಯ ಇಲ್ಲ ಅಥವಾ ಅವುಗಳನ್ನು ಗುರುತಿಸುವುದಕ್ಕೆ ನಮಗೆ ಮನಸ್ಸಿರುವುದಿಲ್ಲ.

ಇಂತಹ ಹಲವು ಪ್ರಕರಣಗಳನ್ನು ಹೇಳಬಹುದಾದರೂ ನಾನು ನನ್ನ ಮಾತುಗಳನ್ನು ಹೀಗೆ ಕೊನೆಗೊಳಿಸುವುದಕ್ಕೆ ಇಷ್ಟಪಡುತ್ತೇನೆ.

- ಇವತ್ತು ಮಹಿಳೆ ಸಂಕೀರ್ಣವಾದ ಸವಾಲುಗಳನ್ನು ಎದುರುಗೊಳ್ತಾ ಇದ್ದಾಳೆ. ಶೋಷಣೆಯನ್ನು ಗ್ರಹಿಸಲಾಗದ ಅಥವಾ ಗ್ರಹಿಸಿಯೂ ಪ್ರತಿಕ್ರಿಯಿಸಲಿಕ್ಕೆ ಆಗದ, ತನ್ನದೇ ಸಮುದಾಯದ ಜೊತೆಗೆ ಸಂವಹನದ ಕೊರತೆಯನ್ನು ಹೊಂದಿರುವಂಥ ಒಂದು ಸ್ಥಿತಿ.
- ತಾನು ನಡೆಸುತ್ತಿರುವ ಶೋಷಣೆಯನ್ನು ತಿದ್ದಿಕೊಳ್ಳಲು ಸಿದ್ಧವಿಲ್ಲದ ಗುಂಪಿನ ಅಸೂಕ್ಷ್ಮತೆಯನ್ನು ಕಳೆದು ಅವರನ್ನು ಸೂಕ್ಷ್ಮ ಗೊಳಿಸುವ, ರೂಪಿಸುವ ಒಂದು ಜವಾಬ್ದಾರಿಯನ್ನು ಅವಳೇ ಹೊತ್ತುಕೊಂಡಿರೋದು.
- ತಾನು ಹೇರಿಕೊಂಡಿರುವಂಥ ಸೂಪರ್‌ಮಾಮ್ ಸಿಂಡ್ರೋಮ್‌ನಿಂದ ತನ್ನನ್ನು ಬಿಡಿಸಿಕೊಂಡು ಬಿಡುಗಡೆ ಹೊಂದುವ ಬಗೆಯನ್ನು ಕಂಡುಕೊಳ್ಳುವಂಥದ್ದು.
- ಮನೆಯ ಹೊರಗೆ ಗಂಡಾಗಿ, ಒಳಗೆ ಹೆಣ್ಣಾಗಿ ಸುಲಲಿತವಾಗಿ ರೂಪಾಂತರ ಗೊಳ್ಳುವ ಮತ್ತು ಅದನ್ನು ನಿಭಾಯಿಸುವ ಸವಾಲನ್ನು ಆಕೆ ಎದುರು ಗೊಳ್ಳಬೇಕಿದೆ.
- ಈ ಎಲ್ಲವನ್ನು ಒಂದೊಂದಾಗಿ ಅಲ್ಲ; ಎಲ್ಲವನ್ನೂ ಏಕಕಾಲಕ್ಕೆ ಆಕೆ ಎದುರುಗೊಳ್ತಾ ಇದ್ದಾಳೆ.

ಒಂದು ಕಡೆ ಮಹಿಳೆಯರನ್ನ ರಕ್ಷಿಸಬೇಕಾದವರು ಎಂಬುದಾಗಿ ಅವಳ ಚಲನವಲನದ ಮೇಲೆ ಸಂಸ್ಕೃತಿಯ ಹೆಸರಿನಲ್ಲಿ ಕಬ್ಬಿಣದ ಬೇಡಿಗಳನ್ನು ಹಾಕಲಾಗುತ್ತಿದೆ. ಅವಳೆಲ್ಲಿಗೆ ಹೋಗಬೇಕು-ಹೋಗಬಾರು: ಯಾರೊಡನೆ ಮಾತಾಡೇಕು-ಮಾತಾಡ್ದಾರ ಅವಳು ಏನು ಓದ್ದೇಕು, ಯಾವ ವೃತ್ತಿ ಅವಳಿಗೆ ಸುರಕ್ಷಿತ, ಯಾವ ಉಡುಗೆ- ತೊಡುಗೆ ಅವ್ರು ಹಾಕ್ಕೊಳ್ಳಬೇಕು, ಯಾರನ್ನ ವಿವಾಹ ಆಗೋಕು.ಅವಳ ಬದುಕಿನ

ಸಾರ್ಥಕತೆ ಯಾವುದರಲ್ಲಿದೆ ಅನ್ನೋದನ್ನ ಯಾರೋ ತೀರ್ಮಾನ ಮಾಡ್ತಾ ಇದ್ದಾರೆ. ಈ ಮುಂಚೆ ಇಂತಹ ತೀರ್ಮಾನಗಳನ್ನು ಅವಳ ಹೆತ್ತವರು ಅಥವಾ ಬಂಧುಗಳು ಮಾಡ್ತಾ ಇದ್ರು. ಈಗ ಪರಿಸ್ಥಿತಿ ಅವರ ಕೈ ದಾಟಿ ಕಾಣದ ಇನ್ನೊಂದು ಗುಂಪಿಗೆ ಹೋಗಿದೆ. ಅವಳಿಗೆ ಸಂಬಂಧವೇ ಇಲ್ಲದ ಉಂಡಾಡಿ ಗುಂಡರ ಗುಂಪು, ಮಾಧ್ಯಮದ ಗುಂಪು, ಧಾರ್ಮಿಕ ಮುಖಂಡರೆಂದು, ಸಂಸ್ಕೃತಿಯ ರಕ್ಷಕರೆಂದು ಕರೆಸಿಕೊಂಡವರು ಅವಳ ಬಗ್ಗೆ ತೀರ್ಮಾನಗಳನ್ನು ಪ್ರಕಟಿಸ್ತಾ ಇದ್ದಾರೆ. ನಿರ್ದಿಷ್ಟ ವಿಚಾರಧಾರೆಯ ಸಣ್ಣಗುಂಪಿನ ನಿರ್ದೇಶನಕ್ಕೆ ಯುವತಿಯರು ತಲೆಬಾಗುವಂತೆ ಫರ್ಮಾನು ಹೊರಡಿಸ್ತಾ ಇರೋದನ್ನ ಶೋಷಣೆ ಅಂತ ಕರೆಯದೆ ಇನ್ನು ಯಾವ ಪದದಿಂದ ಕರೀಬೇಕು. ಮರ್ಯಾದಾಹೀನ ಹತ್ಯೆಗಳು ಒಂದಡೆ, ಲವ್ ಜಿಹಾದ್ ಹಣೆಪಟ್ಟಿ ಹಾಕಿಕೊಂಡಂಥವು ಇನ್ನೊಂದು ಕಡೆ. ಹೆತ್ತವರು, ಮೂಲಭೂತವಾದಿಗಳು ಈ ಪ್ರೇಮಿಗಳನ್ನು ಅಥವಾ ದಂಪತಿಗಳನ್ನು ಬೇಟೆಯಾಡಿ ಎಲ್ಲಿದ್ದರೋ ಅಲ್ಲಿಂದ ಹುಡುಕಿ ಕರೆತಂದು ಕೊಲೆಗೈವ, ಗೃಹಬಂಧನದಲ್ಲಿ ಇರಿಸುವ, ಅವರನ್ನು ಬೇರ್ಪಡಿಸುವ, ಪ್ರತ್ಯೇಕಿಸುವಂಥದ್ದು ಶೋಷಣೆಯೋ ಅಥವಾ ಮರ್ಯಾದೆಯ ಕೆಲಸವೋ?.

ಪಕ್ಕದ ಬುಡಕಟ್ಟು ಸಮುದಾಯಗಳನ್ನೇ ನೋಡೋಣ. ಅಲ್ಲಿಯ ಕುಟುಂಬದಲ್ಲಿ ಮಹಿಳೆಯರದ್ದು ವಿಭಿನ್ನ ಸ್ಥಾನ. ಅವಳು ಅಲ್ಲಿ ನಿರುತ್ಪಾದಕ ವ್ಯಕ್ತಿಯಲ್ಲ. ತವರಿನಲ್ಲಿ ಅವಳ ಸ್ಥಾನ ವಿವಾಹಪೂರ್ವ ಮತ್ತು ಅನಂತರದಲ್ಲಿ ಅಬಾಧಿತ ವಾಗಿರುತ್ತದೆ. ಉತ್ತರಪೂರ್ವ ರಾಜ್ಯಗಳಲ್ಲಿ ಕೃಷಿ, ವ್ಯವಹಾರ, ವ್ಯಾಪಾರ, ದುಡಿಮೆ ಮುಂತಾದ ಆರ್ಥಿಕತೆಯು ಮಹಿಳೆಯ ಕೈಯಲ್ಲೇ ಉಳಿದಿದೆ. ಅಂತೆಯೆ ಆಕೆಯದು ಗಟ್ಟಿಯಾದ ವ್ಯಕ್ತಿತ್ವವಾಗಿದೆ. ವ್ಯಾಪಾರಕ್ಕೆ ಹಗಲು-ರಾತ್ರಿಗಳ ವ್ಯತ್ಯಾಸಗಳಾಗಲಿ, ದೂರದೂರದ ಊರುಗಳಾಗಲಿ, ಬೆಟ್ಟ ಗುಡ್ಡಗಳಾಗಲಿ ಅವಳಿಗೆ ಅಡ್ಡಿಯಾಗಿಲ್ಲ. ಪರ್ವತಾರೋಹಿಗಳಿಗೆ ಬೆಳಗ್ಗಿನ ನಾಲ್ಕುಗಂಟೆಗೆ ಟೀ ಕಾಫಿ ಮಾರಾಟ ಮಾಡಲು ಪ್ಲಾಸ್ಕ್ ಹಿಡಿದು, ವಾಹನದ ಫುಟ್ಬೋರ್ಡ್‌ನಲ್ಲಿ ನೇತಾಡುತ್ತಾ ಹೋಗುವ ಮಹಿಳೆಯರನ್ನು ಕಂಡು ಇಲ್ಲಿನ ನಾವು ಬೆರಗಾಗುತ್ತೇವೆ. ಒರಿಸ್ಸಾದ ಒಂದು ಬುಡಕಟ್ಟು ಸಮುದಾಯ ತನ್ನ ನೆಲ ಜಲ ಉಳಿಸಿಕೊಳ್ಳುವ ಹೋರಾಟಕ್ಕೆ ಅನುವಾದಾಗ ಹುಟ್ಟಿದ ನಾಯಕಿಯೇ ಅಲಾಯಿ, ಖಾಸಗಿ ಕಂಪೆನಿಗಳ ಹಿತ ರಕ್ಷಿಸಲು ಬಂದ ಜಿಲ್ಲಾಧಿಕಾರಿ ಮತ್ತು ಪೋಲಿಸರಿಂದ ತನ್ನ ಹಟ್ಟಿ, ಹಟ್ಟಿಯಲ್ಲಿದ್ದ ಮಕ್ಕಳು, ಎಳೆ ಬಾಣಂತಿಯರನ್ನು ರಕ್ಷಿಸಲು ಅಲಾಯಿ ಕಂಡುಕೊಂಡ ಪ್ರತಿರೋಧ ಬೆಚ್ಚಿಬೀಳುವಂತದ್ದು: "ಇನ್ನೊಂದು ಹೆಜ್ಜೆ ಮುಂದಿಟ್ಟರೆಂದರೆ ಇಗೋ ನನ್ನನ್ನು ಮುಟ್ಟಿ, ನನ್ನನ್ನು ಮೆಟ್ಟಿಯೇ ನೀವು ಮುಂದೆ ಹೋಗಬೇಕು. ಇನ್ನೊಂದು ವಿಷಯ ನೆನಪಿಡಿ ನಮ್ಮ ಸಂಪ್ರದಾಯದಲ್ಲಿ ಒಮ್ಮೆ ನಮ್ಮನ್ನು ಮುಟ್ಟಿದವರು, ನಮ್ಮ ಬೆತ್ತಲೆ ಮೈ ಕಂಡವರು ನಮ್ಮನ್ನು ವಿವಾಹವಾಗಬೇಕು. ಇದಕ್ಕೆ ಒಪ್ಪಿಗೆ ಇದ್ದರೆ ಇಟ್ಟಹೆಜ್ಜೆ ಮುಂದಿಡಿ" ಎಂದು ಉಟ್ಟ ಸೀರೆಯನ್ನು ಸುತ್ತಲಿದ್ದ ಮಹಿಳೆಯರ ಸಮ್ಮುಖದಲ್ಲಿ

ಕಿತ್ತೊಗೆದಳು. ಬಂದ ಅಧಿಕಾರಿ ಪಡೆ ಮಾತಿಲ್ಲದೆ ಹಿಮ್ಮೆಟ್ಟಿತು. ಅಂದೇ ಅವಳು ಇಡೀ ಸಮುದಾಯದ ಎಲ್ಲರ ತಾಯಿಯಾದಳು; ಅವರೆಲ್ಲರ ಗೌರವ ಪಡೆದಳು. ಒಂದೊಮ್ಮೆ ಪುರುಷ ಪ್ರಧಾನ ಸಮಾಜದಲ್ಲಿ ಇಂತಹ ಸನ್ನಿವೇಶವನ್ನು ಕಲ್ಪಿಸಿಕೊಳ್ಳೋಣ. ಸದಾ ತನ್ನ ಉಡುಗೆಯ ಸ್ವರೂಪದ ಬಗ್ಗೆ ಎಚ್ಚೆತ್ತಿರಬೇಕಾದ ಮಹಿಳೆಯಿಂದ ಇಂತಹ ಪ್ರತಿರೋಧವನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ; ಅದಕ್ಕೂ ಮಿಗಿಲಾಗಿ ಆ ಪ್ರತಿರೋಧ ತೋರಿದ ಮಹಿಳೆಗೆ ಸಮಾಜ, ಸಮುದಾಯ ಅಲಾಯಿಗೆ ನೀಡಿದಂತೆ ಸಾಮಾಜಿಕ ಮಾನ್ಯತೆ ಮತ್ತು ಗೌರವವನ್ನೂ ನೀಡುವುದಿಲ್ಲ. ಮಣಿಪುರದಲ್ಲಿ ಸೈನಿಕರಿಗೆ ನೀಡಿದ ವಿಶೇಷಾಧಿಕಾರ ಕಾಯ್ದೆಗೆ ಪ್ರತಿರೋಧ ಪ್ರಕಟಿಸುತ್ತಾ ಉಪವಾಸ ಕೈಗೊಂಡ ಇರೋಮ್ ಶರ್ಮಿಳಳನ್ನು ತುಚ್ಛಮಾತುಗಳಲ್ಲಿ ಸೈನಿಕರು ನಿಂದಿಸಿದ್ದಕ್ಕೆ ಆಕ್ರೋಶಗೊಂಡು ಹನ್ನೆರಡು ಮಹಿಳೆಯರು ಸಾರ್ವಜನಿಕವಾಗಿ "ಬನ್ನಿ ಸೈನಿಕರೆ ನಮ್ಮ ಮೇಲೆ ಅತ್ಯಾಚಾರ ಮಾಡಿ ತಾಕತ್ತಿದ್ದರೆ" ಎಂಬುದಾಗಿ ಬೆತ್ತಲೆ ಮೆರವಣಿಗೆ ಮಾಡಿದ್ದು ಮಹಿಳಾ ಪ್ರಧಾನ ಸಮಾಜವೊಂದರಲ್ಲಿ ಮಾತ್ರ ಸಾಧ್ಯವಾಗುವಂಥದ್ದೆಂಬುದು ಗಮನಾರ್ಹ. ಒಂದೇ ದೇಶದ ಎರಡು ಭಾಗಗಳಲ್ಲಿ ಮಹಿಳೆಯರ ಬದುಕಿನ ಸ್ತರ ಎರಡು ರೀತಿಯಲ್ಲಿ ಯಾಕಿದೆ?

ಯಾವ ಮನೆಯನ್ನು ಮತ್ತು ಕುಟುಂಬವನ್ನು ಹೆಣ್ಣಿಗೆ ಸುರಕ್ಷಿತವೆಂದು ಬೋಧಿಸಲಾಗುತ್ತದೋ, ಯಾರ ಆಶ್ರಯ, ಪ್ರೀತಿ, ಒಡೆತನ ಇವು ಅವಳಿಗೆ ಭದ್ರತೆಯ ಭಾವವನ್ನು ತರುತ್ತದೆ ಎಂದು ಬಿಂಬಿಸಲಾಗುತ್ತದೋ ಅವುಗಳನ್ನು ವಾಸ್ತವದಲ್ಲಿ ನಾವು ಪ್ರಶ್ನೆ ಮಾಡಬೇಕಾಗಿದೆ. ಪ್ರಶ್ನೆ ಮಾಡುತ್ತಲೇ ಮತ್ತೆ ಮತ್ತೆ ಹೊಸ ನಮೂನೆಯ ಶೋಷಣೆಗಳ ಬಗ್ಗೆ ಗಮನ ಹರಿಸಬೇಕಾಗಿದೆ. ಅವೇ ನಾಲ್ಕು ಗೋಡೆಗಳು ಮತ್ತು ಸಂಬಂಧಗಳು ಅವಳ ಶೋಷಣೆಯ ಕೇಂದ್ರಗಳು ಎಂಬುದನ್ನು ಅಧ್ಯಯನಗಳು ಹೇಳ್ತಾ ಇವೆ. ಕಾಲ ಬದಲಾದಂತೆ ಶೋಷಣೆಯ ಸ್ವರೂಪಗಳು ಬದಲಾಗಿದ್ದಾವೆ. ಅದನ್ನೇ ಛದ್ಮವೇಷಗಳು ಎಂದು ಗುರುತಿಸುವ ಪ್ರಯತ್ನ ಇಲ್ಲಿಯದು. ಛದ್ಮವೇಷಗಳು ಕಳಚಿದಾಗ ಕಾಣುವ ಮುಖಗಳು ಅಜ್ಜ, ಅಪ್ಪ, ದೊಡ್ಡಪ್ಪ, ಚಿಕ್ಕಪ್ಪ, ಅಣ್ಣ, ತಮ್ಮ, ಗಂಡ, ಮಾವ, ಕೊನೆಗೆ ಮಗನದೂ ಆಗಿರಬಹುದು. ಈ ಸತ್ಯ ಮಹಿಳೆಯರಿಗೆ ಗೊತ್ತಿಲ್ಲವೆಂದಲ್ಲ, ಗೊತ್ತಿಲ್ಲದಂತೆ ಸೋಗುಹಾಕಿದವರು ಪುರುಷರೇ. ಇಂದು ಮಹಿಳೆಯರು ಇಂತಹ ಶೋಷಣೆಯ ಛದ್ಮವೇಷಗಳನ್ನು ಗುರುತಿಸುವುದು, ಸಂಬಂಧಗಳ ಮೋಹ ಮತ್ತು ಅಧೀನತ್ವದಿಂದ ತಮ್ಮತನವನ್ನು ದಕ್ಕಿಸಿಕೊಳ್ಳುವುದು ಆಗಬೇಕಿರುವ ಕಾರ್ಯ. ಇದು ಹೇಳುವಷ್ಟು ಸುಲಭದ ಮಾತಲ್ಲ. ತಮ್ಮ ಅನುಕೂಲಕರ ವಲಯವನ್ನು ಬಿಟ್ಟುಕೊಟ್ಟು, ಕಲ್ಲುಮುಳ್ಳಿನ ಹಾದಿಯನ್ನು ತುಳಿಯುವುದು ಎಂದೇ ಇದರರ್ಥ. ಶೋಷಿತ ಮಹಿಳೆಯರು ಇಂತಹ ಸವಾಲನ್ನು ಎದುರುಗೊಳ್ಳುವ ನಿರ್ಧಾರಮಾಡಿದ್ದೇ ಆದಲ್ಲಿ ಅವರೊಳಗಿನ ಆತ್ಮವಿಶ್ವಾಸ, ಕರ್ತೃತ್ವಶಕ್ತಿ, ಲೋಕದೃಷ್ಟಿಗಳು ಸಹಜವಾಗಿ ವಿಕಸನಗೊಂಡು, ಶೋಷಣೆಯಿಂದ

ಮುಕ್ತವಾದ ವಾತಾವರಣದ ನಿರ್ಮಾಣ ಸಾಧ್ಯವಾಗುತ್ತದೆ. ಇನ್ನೊಂದೆಡೆ ಸಂಗಾತಿಗಳಾದ ಪುರುಷರು ಪ್ರೀತಿ, ರಕ್ಷಣೆ ಎಂಬ ಹೆಸರಲ್ಲಿ ತಾವು ಮಾಡುತ್ತಿರುವ ಶೋಷಣೆಯ ಸ್ವರೂಪವನ್ನು ಅರಿತುಕೊಂಡು ಹೆಚ್ಚು ಮಾನವೀಯವಾಗುವ ಮೂಲಕ ಕೂಡ ಹೊಸ ಸಮಾಜದ ಅಂದರೆ ಶೋಷಣೆ ಮುಕ್ತ ಸಮಾಜದ ನಿರ್ಮಾಣದಲ್ಲಿ ಪಾಲ್ಗೊಳ್ಳುವುದು ಸಾಧ್ಯವಿದೆ.

## ಗೋಷ್ಠಿ - ೫

### ಕರ್ನಾಟಕ ಕೃಷಿ : ಸಂಕ್ರಮಣ ಸ್ಥಿತಿ

# ಪರ್ಯಾಯ ಕೃಷಿ ಮಾದರಿಗಳು ಮತ್ತು ಸಾಧ್ಯತೆಗಳು

- ಡಾ. ಕು. ನಾರಾಯಣಗೌಡ

ಕರ್ನಾಟಕ ಕೃಷಿ ಪ್ರಧಾನವಾದ ರಾಜ್ಯ, ಕೃಷಿ ಅಭಿವೃದ್ಧಿಯಾದರೆ ಬೇರೆ ಎಲ್ಲಾ ರಂಗದಲ್ಲೂ ಅಭಿವೃದ್ಧಿ ಕಾಣಬಹುದು. ಈಗಲೂ ಶೇ. ೬೩ ಭಾಗ ಜನರು ಕೃಷಿಯನ್ನೇ ಅವಲಂಬಿಸಿದ್ದಾರೆ. ಕರ್ನಾಟಕ ರಾಜ್ಯ ವೈವಿಧ್ಯಮಯ ಕೃಷಿ ವಲಯಗಳನ್ನು ಹೊಂದಿದ್ದು, ರಾಷ್ಟ್ರದಲ್ಲೇ ವಿಶಿಷ್ಟ ಸ್ಥಾನ ಹೊಂದಿರುವ ರಾಜ್ಯ ಹತ್ತು ಕೃಷಿ ವಲಯಗಳಿದ್ದು ರಾಷ್ಟ್ರದಲ್ಲಿ ಹಾಗು ಜಗತ್ತಿನಲ್ಲಿ ಬೆಳೆಯಲು ಸಾಧ್ಯವಿರುವ ಎಲ್ಲಾ ಕೃಷಿ ಹಾಗು ಇತರೆ ಬೆಳೆಗಳನ್ನು ಬೆಳೆಯಲು ಸಾಧ್ಯವಿರುವ ಹವಾಮಾನ ಹಾಗು ಮಣ್ಣನ್ನು ಹೊಂದಿದೆ. ರಾಜ್ಯ ಒಟ್ಟು ೧೯೦.೫ ಲಕ್ಷ ಹೆಕ್ಟೇರ್ ಭೂಪ್ರದೇಶ ಹೊಂದಿದ್ದು (೨೦೧೩-೧೪) ಕೃಷಿಗೆ ಲಭ್ಯವಿರುವ ಭೂಮಿ ೯೯.೨೩ ಲಕ್ಷ ಹೆಕ್ಟೇರ್ ಪ್ರದೇಶ ಮಾತ್ರ. ಇದರಲ್ಲಿ ಶೇ. ೬೪ ಪ್ರದೇಶ ಅಂದರೆ ೬೩.೩೮ ಲಕ್ಷ ಹೆಕ್ಟೇರ್ ಪ್ರದೇಶ ಹೆಚ್ಚು ಮಳೆ ಆಶ್ರಯವನ್ನೇ ಅವಲಂಬಿಸಿದ್ದು, ೩೫.೫೫ ಲಕ್ಷ ಹೆಕ್ಟೇರ್ ಮಾತ್ರ ನೀರಾವರಿ ಪ್ರದೇಶವಿದ್ದು ರಾಜಸ್ಥಾನದ ನಂತರ ಅತಿ ಕಡಿಮೆ ನೀರಾವರಿ ಪ್ರದೇಶ ಹೊಂದಿರುವ ರಾಜ್ಯ ಆದ್ದರಿಂದ ರಾಜ್ಯದ ಕೃಷಿ ಉತ್ಪಾದನೆ, ಆರ್ಥಿಕತೆ ಹಾಗು ಸಾಮಾಜಿಕ ಅಭಿವೃದ್ಧಿ ಹೆಚ್ಚು ಮಳೆ ಆಶ್ರಯದ ಪ್ರದೇಶವನ್ನೇ ಅವಲಂಬಿಸಿದೆ.

ಮಣ್ಣಿನ ಗುಣಧರ್ಮದಲ್ಲಿ ವೈವಿಧ್ಯತೆಯನ್ನು ಹೊಂದಿರುವ ರಾಜ್ಯವಾಗಿದ್ದು, ಹೆಚ್ಚು ಭಾಗ ಕೆಂಪು ಮಣ್ಣು (೩೭.೩೧) ನಂತರ ಕಪ್ಪು ಮಣ್ಣು (೨೭.೭೭%), ಎರೆಮಣ್ಣು (Alluvial soil 15.74%) ಹಾಗು ಇತರೆ ಮಣ್ಣನ್ನು ಸಹ ಕಾಣಬಹುದು.

ಎರಡು ಪ್ರಮುಖ ಮಳೆಗಾಲವಿದ್ದು, ಹೆಚ್ಚಿನ ಮಳೆ ಮುಂಗಾರನ್ನು ಅವಲಂಬಿಸಿದ್ದು (ಜೂನ್-ಸೆಪ್ಟೆಂಬರ್) ಕಡಿಮೆ ಮಳೆ ಹಿಂಗಾರಿನಲ್ಲಿ ಬೀಳುತ್ತದೆ (ಅಕ್ಟೋಬರ್‌ರಿಂದ ಡಿಸೆಂಬರ್‌ವರೆಗೆ). ರಾಜ್ಯದ ಪ್ರಮುಖ ಆಹಾರ ಬೆಳೆಗಳಾದ ರಾಗಿ, ಭತ್ತ, ಮುಸುಕಿನ ಜೋಳ, ಎಣ್ಣೆಕಾಳಿನ ಬೆಳೆಗಳಾದ ಶೇಂಗಾ (ನೆಲಗಡಲೆ) ಹಾಗು ಸೂರ್ಯಕಾಂತಿ, ದ್ವಿದಳಧಾನ್ಯ ಬೆಳೆಗಳಾದ ಅವರೆ, ಹೆಸರು, ಉದ್ದು, ಅಲಸಂದೆ ಹಾಗು ತೊಗರಿ, ವಾಣಿಜ್ಯ ಬೆಳೆಯಾದ ಹತ್ತಿ ಮುಂಗಾರು ಮಳೆಯನ್ನು ಅವಲಂಬಿಸಿವೆ. ಹಿಂಗಾರನ್ನು ಹೆಚ್ಚು ಅವಲಂಬಿಸಿರುವ ಆಹಾರದ ಬೆಳೆ ಜೋಳ ವಾಗಿದ್ದು, ಅತಿ ಹೆಚ್ಚು ಪ್ರದೇಶದಲ್ಲಿ ಹಾಗು ಕಡಿಮೆ ಪ್ರದೇಶದಲ್ಲಿ ಗೋಧಿಯನ್ನೂ ಸಹ ಬೆಳೆಯಲಾಗುತ್ತದೆ. ಇತರೆ ವಾಣಿಜ್ಯ ಬೆಳೆಗಳಾದ ಕಬ್ಬು, ಹತ್ತಿ, ಹಣ್ಣು, ತರಕಾರಿ, ತೆಂಗು, ಅಡಿಕೆ, ಹೂವಿನ ಬೆಳೆಗಳು ನೀರಾವರಿ ಆಶ್ರಯಿಸಿದ್ದು, ಕಾಫಿ, ಟೀ ಹಾಗು ಇತರೆ ಸಾಂಬಾರು ಪದಾರ್ಥಗಳು ಹೆಚ್ಚುವರಿ ಮಳೆ ಬೀಳುವ ಮಲೆನಾಡನ್ನು ಅವಲಂಬಿಸಿವೆ.

ಹೈನುಗಾರಿಕೆ, ಕುರಿ, ಮೇಕೆ, ಕೋಳಿ ಹಾಗು ಇತರೆ ಪ್ರಾಣಿಗಳ ಸಾಕಾಣಿಕೆ ಯಲ್ಲಿಯೂ ಉತ್ತಮ ತಳಿ ಹಾಗು ತಂತ್ರಜ್ಞಾನ ಹೊರತರಲಾಗಿದ್ದು, ಹಾಲಿನ ಉತ್ಪಾದನೆಯಲ್ಲಿ ಉತ್ತಮ ಸಾಧನೆ ಮಾಡಿದೆ ಎಂದು ಹೇಳಲು ಹೆಮ್ಮೆಯೆನಿಸುತ್ತಿದೆ. ಮೀನಿನ ಉತ್ಪಾದನೆಯಲ್ಲೂ ಉತ್ತಮ ಸಾಧನೆ ಮಾಡಿ ಸಮುದ್ರ ಹಾಗು ಒಳನಾಡಿನ ಮೀನಿನ ಉತ್ಪನ್ನವು ಅನೇಕ ಪಟ್ಟು ಹೆಚ್ಚುವರಿಯಾಗಿದೆ. ರೇಷ್ಮೆ ಉತ್ಪಾದನೆಯಲ್ಲಿ ರಾಜ್ಯ ಮೊದಲನೇ ಸ್ಥಾನದಲ್ಲಿದ್ದು ಹೆಚ್ಚು ಬೇಡಿಕೆ ಇರುವ ಬೈವೋಲ್ಟಿನ್ ಉತ್ಪಾದನೆಯಲ್ಲಿ ಗಣನೀಯ ಸಾಧನೆ ಮಾಡಿ ರೇಷ್ಮೆ ಆಮದು ಕಡಿಮೆ ಮಾಡಲಾಗಿದೆ. ರೇಷ್ಮೆ ಒಂದು ಲಾಭದಾಯಕ ಉದ್ದಿಮೆ. ಒಂದು ಎಕರೆ ಹಿಪ್ಪುನೇರಳೆ ಕುಟುಂಬದ ೪-೫ ಜನರಿಗೆ ವರ್ಷಪೂರ್ತಿ ಉದ್ದಿಮೆ ಕೊಡುತ್ತದೆ. ಅರಣ್ಯ ಕೃಷಿಗೆ ಪೂರಕವಾದ ಮರಗಿಡಗಳನ್ನು ಕಡಿಮೆ ಫಲವತ್ತಾದ ಜಮೀನಿನಲ್ಲಿ ಬೆಳೆಯಲಾಗುತ್ತಿದ್ದು ಪ್ರಕೃತಿ ಹಾಗು ಮಳೆ ಏರುಪೇರು ಆದ ಸಂದರ್ಭದಲ್ಲೂ ರೈತರಿಗೆ ಆಸರೆಯಾಗುತ್ತಿದೆ.

ಸ್ವಾತಂತ್ರ್ಯ ಬಂದ ವರ್ಷದಲ್ಲಿ ರಾಷ್ಟ್ರದ ಜನಸಂಖ್ಯೆ ೩೭.೫ ಕೋಟಿ ಇದ್ದು, ಆಹಾರ ಉತ್ಪಾದನೆ ೫೦ ದಶಲಕ್ಷ ಟನ್ ಮಾತ್ರ ಇತ್ತು. ಇದು ದೇಶದ ಜನರಿಗೆ ಸಾಲದೆ ಆಮದು ಮಾಡಿಕೊಳ್ಳುತ್ತಿದ್ದೆವು. ಆದರೆ ಇಂದು ೨೭೩ ದಶಲಕ್ಷ ಟನ್ (೨೦೧೮) ಉತ್ಪಾದನೆ ೧೨೫ ಕೋಟಿಗೂ ಮೀರಿದ ಜನಸಂಖ್ಯೆಯ ಅವಶ್ಯಕತೆ ಭರಿಸಿ ರಫ್ತು ಮಾಡುವ ಹಂತಕ್ಕೆ ತಲುಪಿದ್ದೇವೆ. ಕೃಷಿಯ ಎಲ್ಲಾ ಕ್ಷೇತ್ರದಲ್ಲೂ ಅನೇಕ ಪಟ್ಟು ಇಳುವರಿ ಹೆಚ್ಚುವರಿಯಾಗಿದ್ದು, ಹಸಿರು ಕ್ರಾಂತಿ, ಕ್ಷೀರಕ್ರಾಂತಿ, ಹಳದಿ ಕ್ರಾಂತಿ ಮತ್ತು ನೀಲಿಕ್ರಾಂತಿಗಳಿಂದ ಕೃಷಿಯ ಎಲ್ಲಾ ಕ್ಷೇತ್ರದಲ್ಲೂ ಹೆಮ್ಮೆ ಪಡುವ ಸಾಧನೆ ಮಾಡಿದ್ದೇವೆ. ಆದರೆ ರೈತರು ಇಂದು ಕೃಷಿ ಲಾಭದಾಯಕವಾಗದೇ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದ್ದು, ಕೃಷಿಯಿಂದ ಹೊರಗೆ ನೋಡುತ್ತಿದ್ದಾರೆ. ಈಗಾಗಲೇ ಸಾಕಷ್ಟು ಯುವಕರು ಕೃಷಿಯಿಂದ ಹಾಗು ಹಳ್ಳಿಗಳಿಂದ ವಲಸೆ ಹೋಗಿದ್ದಾರೆ. ಅನೇಕ ಗ್ರಾಮಗಳು ವೃದ್ಧಾಶ್ರಮಗಳಾಗಿವೆ.

ಕೃಷಿಯಲ್ಲಿ ತೊಡಗಿಕೊಂಡವರಿಗೆ ಗ್ರಾಮೀಣ ಜನರೇ ಹೆಣ್ಣು ಕೊಡಲು ಹಿಂಜರಿಯುತ್ತಿದ್ದಾರೆ. ಜೊತೆಗೆ ಹೆಣ್ಣುಮಕ್ಕಳು ಸಹ ಒಪ್ಪುತ್ತಿಲ್ಲ. ಪರಿಸ್ಥಿತಿ ಹೀಗೇ ಮುಂದುವರಿದರೆ, ಆಹಾರದ ಉತ್ಪಾದನೆಯಲ್ಲಿ ಸ್ವಾವಲಂಬನೆ ಹೊಂದಿದ್ದ ರಾಷ್ಟ್ರ ಆಹಾರಕ್ಕೋಸ್ಕರ ಮತ್ತೊಮ್ಮೆ ಕೈ ಚಾಚುವ ಸನ್ನಿವೇಶ ಎದುರಿಸಬೇಕಾಗುತ್ತದೆ. ಭಾರತ ದೇಶ ಏನನ್ನಾದರೂ ಆಮದು ಮಾಡಿಕೊಳ್ಳಬಹುದು, ಆದರೆ ಆಹಾರದಲ್ಲಿ ಸ್ವಾವಲಂಬನೆ ಕಾಪಾಡಿಕೊಳ್ಳುವುದರಿಂದ ದೇಶದ ಸುಭದ್ರತೆ, ಸಾರ್ವಭೌಮತ್ವ ಹಾಗು ಗೌರವ ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ.

**ಪ್ರಸ್ತುತ ಸಮಸ್ಯೆಗಳು**

೧. ಲಾಭದಾಯಕ ಬೆಲೆ ದೊರೆಯದೆ ಸ್ಥಳೀಯವಾಗಿ ಮಾರುಕಟ್ಟೆ ಮಾಡಲು

ಅವಕಾಶವಿಲ್ಲದೆ ಇರುವುದು ಹಾಗೂ ರೈತರು ಬಳಸುವ ಪರಿಕರಗಳ ಬೆಲೆ ನಿರೀಕ್ಷೆಗೂ ಮೀರಿ ನಿರಂತರವಾಗಿ ಏರುತ್ತಿರುವುದು.

೨. ತಂತ್ರಜ್ಞಾನದ ಮಾಹಿತಿ ಕೊರತೆ ಮತ್ತು ಏಕಗವಾಕ್ಷಿಯಲ್ಲಿ ದೊರೆಯದೇ ಇರುವುದು, ಅದರಲ್ಲೂ ಮಾಹಿತಿ ಆಧಾರದ ಮೇಲೆ ಬೆಳೆ ಬೆಳೆಯುವ ಬಗ್ಗೆ ಅಲಭ್ಯತೆ.

೩. ಅಳತೆಗೂ ಮೀರಿ ರಸಾಯನಿಕ ವಸ್ತುಗಳ ಬಳಕೆಯಿಂದ ಮಣ್ಣು, ನೀರು, ಗಾಳಿ, ಎಲ್ಲಾ ಜೀವರಾಶಿಗಳ ಹಾಗು ಆಹಾರದ ಮೇಲೆ ದುಷ್ಪರಿಣಾಮ ಮುಂದುವರಿದು ಮಾನವನ ಆರೋಗ್ಯದಲ್ಲಿ ಅನೇಕ ಸಮಸ್ಯೆಗಳನ್ನು ಕಾಣುತ್ತಿರುವುದು.

೪. ಸರ್ಕಾರದ ಯೋಜನೆಗಳ ಬಗ್ಗೆ ಮಾಹಿತಿ ಕೊರತೆ, ಸುಲಭವಾಗಿ ಹಾಗು ಸಕಾಲದಲ್ಲಿ ದೊರೆಯದೇ ಇರುವುದು.

೫. ಕೂಲಿ ಆಳುಗಳ ಅಲಭ್ಯತೆ ಹಾಗು ದುಬಾರಿ ಬೆಲೆ ಕೂಡ ಬೇಕಾಗಿರುವುದು.

೬. ಪರಿಕರಗಳು ಸ್ಥಳೀಯವಾಗಿ ದೊರೆಯದೇ ಇರುವುದು ಹಾಗು ಗುಣಮಟ್ಟದ ಕೊರತೆ.

೭ ಕೊಯ್ಲು ಮತ್ತು ಕೊಯ್ಲು ನಂತರ ಉತ್ಪನ್ನ ಸಾಕಷ್ಟು ಪೋಲಾಗು ತ್ತಿರುವುದು.

೮. ಕೃಷಿಗೆ ಕೊಡಬೇಕಾದ ಅಧ್ಯತೆಯನ್ನು ಬಂದಂತ ಸರ್ಕಾರಗಳು ಕೊಡದೆ ಇರುವುದು.

೯. ಕೃಷಿ ಉದ್ದಿಮೆಯಲ್ಲಿ ತೊಡಗಿದವರನ್ನು ಬೇರೆಲ್ಲಾ ವರ್ಗದವರು ಅಲಕ್ಷಿಸುತ್ತಿರುವುದು.

**ಶಾಶ್ವತ ಸಮಸ್ಯೆಗಳು**

೧. ಪ್ರತಿ ಕುಟುಂಬದ ಒಟ್ಟು ಹಿಡುವಳಿ ಕಡಿಮೆಯಾಗುತ್ತಾ ಇರುವುದು ಹಾಗು ಹೆಚ್ಚು ತುಂಡು ತುಂಡಾಗುತ್ತಿರುವುದು (Fragmentation of hold-ing).

೨. ಅಂತರ್ಜಲ ಕುಸಿತ ಹಾಗು ಅದರಿಂದ ಹೆಚ್ಚುತ್ತಿರುವ ದುಷ್ಪರಿಣಾಮಗಳು. ೩. ಹೆಚ್ಚುತ್ತಿರುವ ತಾಪಮಾನ ಹಾಗು ಅದರಿಂದ ಆಗುವ ಪರಿಣಾಮಗಳು,

**ಕೃಷಿ ಅಭಿವೃದ್ಧಿಗೆ ಇರುವ ಅವಕಾಶಗಳು**

೧. ಅವಶ್ಯಕತೆ ಹಾಗು ಮಾಹಿತಿ ಆಧಾರದ ಮೇಲೆ ಎಲ್ಲಾ ಉತ್ಪನ್ನಗಳ ಪ್ರಮಾಣವನ್ನು ನಿರ್ಧರಿಸಿ ರೈತರಿಗೆ ಪ್ರೋತ್ಸಾಹಿಸುವುದು.

೨. ಒಟ್ಟು ನೀರಿನ ಆಧಾರದ ಮೇಲೆ (ಮಳೆ ನೀರು, ಬೋರ್‌ವೆಲ್, ಕೆರೆ, ಅಣೆಕಟ್ಟು ಹಾಗು ಇತರೆ ನೀರಿನ ಲಭ್ಯತೆ) ಬೆಳೆ ಯೋಜನೆ ನಿರ್ಧರಿಸುವುದು.



೩. ಸೂಕ್ತ ತಾಂತ್ರಿಕತೆ ಹಾಗು ಸರ್ಕಾರದ ಸೌಲಭ್ಯಗಳ ಬಗ್ಗೆ ಮಾಹಿತಿ ಏಕಗವಾಕ್ಷಿಯಲ್ಲಿ ಹಾಗು ಸಕಾಲದಲ್ಲಿ ಎಲ್ಲಾ ರೈತರಿಗೆ ತಲುಪಲು ಕೃಷಿ ವಿಜ್ಞಾನ ಕೇಂದ್ರಗಳು, ಮೊಬೈಲ್, ಹಾಲಿನ ಸಂಸ್ಥೆ ಹಾಗು ಇತರೆ ಸ್ಥಳೀಯ ಸಂಸ್ಥೆಗಳನ್ನು ಸದ್ಬಳಕೆ ಮಾಡಿಕೊಳ್ಳುವುದು.

೪. ಕೊಯ್ಲು ಮತ್ತು ಕೊಯ್ಲು ನಂತರ ಎಲ್ಲಾ ಉತ್ಪನ್ನಗಳನ್ನು ಪೋಲಾಗದಂತೆ ಸದ್ವಿನಿಯೋಗ ಮಾಡಿಕೊಳ್ಳುವುದು.

೫. ಪ್ರತಿಯೊಬ್ಬ ರೈತರಿಗೂ ಸಮಗ್ರ ಕೃಷಿ ಮಾದರಿಯನ್ನು ಪ್ರೋತ್ಸಾಹಿಸುವುದು.

೬ ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ ಹಾಗು ಸಂಸ್ಕರಣೆ ಮಾಡುವುದರಿಂದ ಹೆಚ್ಚು ಲಾಭ ಪಡೆಯಲು ಸಾಧ್ಯವಾಗುತ್ತದೆ.

೭ ಕೃಷಿ ಉತ್ಪನ್ನ ಆಧಾರಿತ ಉತ್ಪಾದಕರ ಸಂಸ್ಥೆಗಳನ್ನು ಪ್ರೋತ್ಸಾಹಿಸುವುದು.

೮. ಯಂತ್ರೋಪಕರಣಗಳನ್ನು ಬಳಸುವುದರಿಂದ ಕೂಲಿ ಆಳಿನ ಮೇಲೆ ಅವಲಂಬನೆ ಖರ್ಚು ಕಡಿಮೆ ಮಾಡುವುದು ಹಾಗು ಸಕಾಲದಲ್ಲಿ ಕೃಷಿ ಕೆಲಸಗಳನ್ನು ಮಾಡಬಹುದು.

೯. ಆಧುನಿಕ ಕಣಗಳನ್ನು (threshing yard) ಪ್ರತಿ ಗ್ರಾಮಗಳಿಗೆ ಒಂದರಂತೆ ಪ್ರಾರಂಭ ಮಾಡುವುದರಿಂದ ಧಾನ್ಯ ಪೋಲಾಗುವುದನ್ನು ತಡೆಯುವುದರ ಜೊತೆಗೆ ಗುಣಮಟ್ಟದ ಧಾನ್ಯ ಹಾಗು ಗ್ರಾಮೀಣ ಯುವಜನರಿಗೆ ಉದ್ಯೋಗ ಸೃಷ್ಟಿ ಮಾಡಲು ಸಾಧ್ಯವಾಗುತ್ತದೆ.

೧೦. ಪ್ರತಿಯೊಂದು ಪಂಚಾಯ್ತಿ ವ್ಯಾಪ್ತಿಯಲ್ಲಿ ಅವಶ್ಯಕತೆಗನುಗುಣವಾಗಿ ಒಂದು ಉಗ್ರಾಣವನ್ನು ಸ್ಥಾಪಿಸಿ ಸದ್ವಿನಿಯೋಗ ಮಾಡಿಕೊಳ್ಳಲು ರೈತರಿಗೆ ಪೂರಕವಾದ ರೂಪುರೇಷೆಗಳನ್ನು ತರುವುದು ಸೂಕ್ತ.

**ಪರ್ಯಾಯ ಕೃಷಿ ಮಾದರಿಗಳು ಹಾಗು ಸಾಧ್ಯತೆಗಳು**

ಯಾವುದೇ ಒಂದು ಮಾದರಿ ಸುಸ್ಥಿರತೆ ಕಾಪಾಡಿಕೊಂಡು ಎಲ್ಲಾ ರೈತರಿಗೂ ಪೂರಕವಾಗಿದ್ದು ವಿವಿಧ ಕೃಷಿ ವಲಯಗಳಲ್ಲಿಯೂ ಅನ್ವಯಿಸುವಂತಾಗಿರಬೇಕು. ಈ ಹಿನ್ನೆಲೆಯಲ್ಲಿ ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಮೂರು ಪ್ರಮುಖ ಮಾದರಿಗಳನ್ನು ಗುರುತಿಸಿ ಅವುಗಳನ್ನು ಜಾರಿಗೊಳಿಸಲಾಗುತ್ತಿದೆ.

**೧. ಸಮಗ್ರ ಕೃಷಿ :** ಹಿಂದೆ ನಮ್ಮ ಪೂರ್ವಿಕರು ಸಮಗ್ರ ಕೃಷಿಯನ್ನು ಹೆಚ್ಚು ಪ್ರೋತ್ಸಾಹಿಸುತ್ತಾ ಅಳವಡಿಸಿಕೊಂಡು ಬಂದಿದ್ದಾರೆ. ಕಾರಣಾಂತರದಿಂದ ಆಧುನಿಕ ಕೃಷಿಯ ಬಳಕೆಯಲ್ಲಿ ಇದನ್ನು ಕಡೆಗಣಿಸಲಾಗಿತ್ತು. ಇತ್ತೀಚಿನ ವರ್ಷಗಳಲ್ಲಿ ಇದರ ಮಹತ್ವವನ್ನು ಅರಿತು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ೨೦೦೫ರಲ್ಲಿ ೮೩೪೦ ಕುಟುಂಬಗಳಿಗೆ ತೂಬಗೆರೆ ಹೋಬಳಿಯಲ್ಲಿ ಎಲ್ಲಾ ರೈತರಿಗೆ ಸಮಗ್ರ ಕೃಷಿ ಪ್ರೋತ್ಸಾಹಿಸಿ



೨೦೧೦ರಲ್ಲಿ ಅವರ ಆರ್ಥಿಕತೆ ದ್ವಿಗುಣವಾಗಲು ಕಾರಣವಾಯಿತು. ಮುಂದುವರಿದು ೨೦೧೧ರಲ್ಲಿ ಭಾರತೀಯ ಕೃಷಿ ಅನುಸಂಧಾನ ಪರಿಷತ್ತು, ನವದೆಹಲಿ ಸಮಗ್ರ ಕೃಷಿಯನ್ನು ರಾಷ್ಟ್ರದಾದ್ಯಂತ ಕೃಷಿ ವಿಶ್ವವಿದ್ಯಾನಿಲಯಗಳ ಜೊತೆಗೂಡಿ ಹೆಚ್ಚು ಸಂಶೋಧನೆ ಕೈಗೊಂಡು ಅಳವಡಿಸಿಕೊಳ್ಳಲು ಚಾಲನೆ ಕೊಟ್ಟಿದೆ.

ಕರ್ನಾಟಕ ರಾಜ್ಯ ೨೦೧೧ರಲ್ಲಿ ೧,೨೫,೦೦೦ ಕುಟುಂಬಗಳಿಗೆ ಸಮಗ್ರ ಕೃಷಿ ಜಾರಿಗೊಳಿಸಲು ೭೫ ಕೋಟಿ ರೂಪಾಯಿ ಹಣವನ್ನು ಕೊಟ್ಟು ರಾಜ್ಯದ ಕೃಷಿ ವಿಜ್ಞಾನ ಕೇಂದ್ರಗಳ ಹಾಗು ಎಲ್ಲಾ ಕೃಷಿ ವಿಶ್ವವಿದ್ಯಾನಿಲಯಗಳ ಮೂಲಕ ೩ ವರ್ಷಗಳ ಅವಧಿಗೆ ಜಾರಿಗೊಳಿಸಲಾಯಿತು.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯವು ೧೨,೫೦೦ ಪರಿಶಿಷ್ಟ ಜಾತಿ ಹಾಗು ಪಂಗಡದವರಿಗೆ ೨೦೧೦-೨೦೧೧ರಿಂದ ಸಮಗ್ರ ಕೃಷಿಯನ್ನು ೬ ವರ್ಷಗಳ ಅವಧಿಯಲ್ಲಿ ಜಾರಿಗೊಳಿಸಲಾಯಿತು.

ತದನಂತರ ೨೦೧೨ರಿಂದ ನಮ್ಮ ರಾಜ್ಯದ ಎಲ್ಲಾ ಕೃಷಿ ವಿಶ್ವವಿದ್ಯಾನಿಲಯಗಳ ಕೇಂದ್ರಸ್ಥಾನದಲ್ಲಿ ಹಾಗು ಮುಖ್ಯ ಸಂಶೋಧನಾ ಕೇಂದ್ರಗಳಲ್ಲಿ ಮತ್ತು ೩೦ ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ಒಂದು ಹೆಕ್ಟೇರ್ ಪ್ರದೇಶದಲ್ಲಿ ಆಯಾ

ಪ್ರದೇಶಕ್ಕೆ ಸೂಕ್ತವಾದ ಸಮಗ್ರ ಕೃಷಿ ಪ್ರಾತ್ಯಕ್ಷಿಕೆ ಏರ್ಪಡಿಸಿ ಆ ಭಾಗದ ರೈತರಿಗೆ ತೋರಿಸಿ ಮನವರಿಕೆ ಮಾಡಿಕೊಡುವ ಕಾರ್ಯವನ್ನು ನಿರಂತರವಾಗಿ ಮಾಡುತ್ತಾ ಬಂದಿವೆ.

ಕರ್ನಾಟಕದ ಇತಿಹಾಸದಲ್ಲಿ ಪ್ರಪ್ರಥಮವಾಗಿ ೨೦೧೬ರಲ್ಲಿ ಒಬ್ಬ ಸಮಗ್ರ ಕೃಷಿ ಅಳವಡಿಸಿದ ಹೆಚ್.ಡಿ. ಕೋಟೆ ತಾಲ್ಲೂಕಿನ ವಿ.ಪುಟ್ಟಯ್ಯರವರಿಂದ ನಾಡಹಬ್ಬವಾದ ದಸರಾ ಮಹೋತ್ಸವವನ್ನು ಉದ್ಘಾಟನೆ ಮಾಡಿಸಲಾಯಿತು.

ಡಾ. ಜಿ.ಕೆ. ವೀರೇಶ್‌ರವರು ಹೆಸರಾಂತ ಕೀಟಶಾಸ್ತ್ರ ತಜ್ಞರು, ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳು. ೧೯೯೦ರಿಂದಲೂ ಸಾವಯವ ಕೃಷಿಯನ್ನು ರಾಜ್ಯ, ರಾಷ್ಟ್ರ ಹಾಗು ಅಂತರರಾಷ್ಟ್ರೀಯ ಮಟ್ಟದಲ್ಲಿ ಸುಮಾರು ೨೫ ವರ್ಷಗಳು ನಿರಂತರವಾಗಿ ಪ್ರೋತ್ಸಾಹಿಸುತ್ತಾ ಬಂದವರು. ೨೦೧೬ರಲ್ಲಿ ಅವರೊಂದು ಮಹತ್ವದ ತೀರ್ಮಾನ ತೆಗೆದುಕೊಂಡು ಅಲ್ಯುಮ್ನಿ ಸಂಘದಲ್ಲಿ ೧೫ ಲಕ್ಷ ಹಣ ದತ್ತಿ ಇಟ್ಟು, ಅದರಲ್ಲಿ ಬರುವ ಬಡ್ಡಿ ಹಣದಿಂದ ಪ್ರತಿವರ್ಷ ೪ ಶ್ರೇಷ್ಠ ಸಮಗ್ರ ಕೃಷಿ ಅಳವಡಿಸಿಕೊಂಡ ಪ್ರತಿಯೊಬ್ಬ ರೈತರಿಗೆ ೨೫,೦೦೦ ರೂ. ಪ್ರಶಸ್ತಿ ಪ್ರದಾನ ಮಾಡುವುದರ ಜೊತೆಗೆ ಅವರ ತಾಕಿನಲ್ಲಿ ಒಂದು ದಿನದ ಕ್ಷೇತ್ರ ವೀಕ್ಷಣೆ ಹಾಗು ಅವರ ಅನುಭವ ಹಂಚಿಕೊಳ್ಳುವ ಕಾರ್ಯಕ್ರಮವನ್ನು ರಾಜ್ಯದ ನಾಲ್ಕು ಕೃಷಿ ವಲಯಗಳಲ್ಲಿ ಏರ್ಪಡಿಸುತ್ತಾ ಬಂದಿದೆ.

ಈ ವರ್ಷ (೨೦೦೭) ಪ್ರಶಸ್ತಿಗೆ ಭಾಜನರಾದ ನಾಲ್ಕು ಸಮಗ್ರ ಕೃಷಿ ಅಳವಡಿಸಿಕೊಂಡ ರೈತರ ಸಾಧನೆಯನ್ನು ಈ ಕೆಳಗೆ ನಮೂದಿಸಲಾಗಿದೆ.



**ರೈತರ ವಿಳಾಸ ಹಾಗು ಅವರ ಸಂಕ್ಷಿಪ್ತ ಸಾಧನೆ**

ಅ.ಶ್ರೀ ಹೆಚ್. ಸದಾನಂದ

ತಪಸೀಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು

ಬೆಂಗಳೂರು ಗ್ರಾಮಾಂತರ ಜಿಲ್ಲೆ

ಕೆಂಪು ಮಣ್ಣಿನ ಪ್ರದೇಶ

ಒಟ್ಟು ಹಿಡುವಳಿ : ೨ ಎಕರೆ ೧೪ ಗುಂಟೆ

೨೦೧೯ರ ನಿವ್ವಳ ಆದಾಯ :೧೬೩೫,೦೦೦ ಸಾವಿರ ರೂ.ಗಳು.

**ಆ.** **ಶ್ರೀ ರಾಮಕೃಷ್ಣ ಶಾವಟ್ಟಿ,**

ರಾಯಚೂರು ತಾಲ್ಲೂಕು ಮತ್ತು ಜಿಲ್ಲೆ

ಕಪ್ಪುಮಣ್ಣಿನ ಪ್ರದೇಶ,

ಒಟ್ಟು ಹಿಡುವಳಿ: ೨೦ ಎಕರೆ

ವಾರ್ಷಿಕ ವರಮಾನ: ೧೨ ಲಕ್ಷ ರೂ. ನಿವ್ವಳ ಆದಾಯ

**ಇ.** **ಶ್ರೀ ದುರ್ಗಪ್ಪ ಅಂಗಡಿ**

ಮಲೆನಾಡು ಪ್ರದೇಶ

ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ

ಒಟ್ಟು ಹಿಡುವಳಿ ೨ ಎಕರೆ ೨೦ ಗುಂಟೆ

ವಾರ್ಷಿಕ ವರಮಾನ ೫ ಲಕ್ಷ ರೂ.ಗಳ ನಿವ್ವಳ ಆದಾಯ

**ಈ** **ಶ್ರೀ ಶಬರಿ ಸುವರ್ಣ**

ಉಡುಪಿ ತಾಲ್ಲೂಕು ಮತ್ತು ಜಿಲ್ಲೆ

ಕರಾವಳಿ ಪ್ರದೇಶ

ಒಟ್ಟು ಹಿಡುವಳಿ: ೧೦ ಎಕರೆ

ವಾರ್ಷಿಕ ವರಮಾನ; ೨೦ ಲಕ್ಷ ರೂ.ಗಳ ನಿವ್ವಳ ಆದಾಯ

ಸಮಗ್ರ ಕೃಷಿಯಲ್ಲಿ ಒಂದು ಕುಟುಂಬದಲ್ಲಿರುವ ಎಲ್ಲಾ ಸಂಪನ್ಮೂಲಗಳ ಸದ್ವಿನಿಯೋಗ ಹಾಗು ಲಾಭದಾಯಕ ಮಾರುಕಟ್ಟೆ ಮಾಡಲು ಅವಕಾಶಗಳನ್ನು ಗಮನದಲ್ಲಿಟ್ಟುಕೊಂಡು, ಭೂಮಿ ಫಲವತ್ತತೆ, ಅಂತರ್ಜಲ, ವಾಯುಮಾಲಿನ್ಯ ಹಾಗು ಪ್ರಕೃತಿಯ ಗುಣಮಟ್ಟವನ್ನು ಕಾಪಾಡಿಕೊಂಡು ಪ್ರತಿನಿತ್ಯವೂ, ವಾರಕ್ಕೊಮ್ಮೆ, ತಿಂಗಳಿಗೆ, ಆರು ತಿಂಗಳಿಗೆ, ವರ್ಷಕ್ಕೆ ಹಾಗು ಕೆಲವು ಧ್ರುವ ಫಸಲುಗಳಿಂದ ೧೦-೧೫ ವರ್ಷಕ್ಕೊಮ್ಮೆ ಕಡಿಮೆ ಖರ್ಚಿನಿಂದ ಹೆಚ್ಚುವರಿ ನಿರಂತರ ಆದಾಯ ಪಡೆಯಲು ಸಾಧ್ಯವಿರುವ ಮಾದರಿಗೆ ಸಮಗ್ರ ಕೃಷಿ ಎಂದು ಕರೆಯುತ್ತೇವೆ.

ಈ ಉಪಯುಕ್ತ ಮಾದರಿಯನ್ನು ರಾಜ್ಯದ ಎಲ್ಲಾ ರೈತರಿಗೆ (೮೦ ಲಕ್ಷ ಕೃಷಿಕರಿಗೆ) ವಿಸ್ತರಿಸುವುದರಿಂದ ರೈತರು ಸುಸ್ಥಿರ ಲಾಭದಾಯಕ ಹಾಗು ಆರೋಗ್ಯಕರ ನೆಮ್ಮದಿ ಜೀವನ ಕಂಡುಕೊಳ್ಳಲು ಖಂಡಿತ ಸಾಧ್ಯವಾಗುತ್ತದೆ.

**೧. ಉತ್ಪಾದಕರ ಸಂಸ್ಥೆಗಳು :** ಲಾಭದಾಯಕ ಮಾರುಕಟ್ಟೆ ದೊರೆಯದೇ ಇರು ರೈತ ಕಂಗಾಲಾಗಿದ್ದಾನೆ. ಹಾಲಿನ ಉತ್ಪಾದನೆಗೆ ಮಾತ್ರ ಇಂದು ಒಂದು ನಿರ್ದಿಷ್ಟ ಬೆಲೆ ಹಾಗು ಸ್ಥಳೀಯವಾಗಿ ಮಾರುಕಟ್ಟೆ ಮತ್ತು ಪಾವತಿ ಇರುವುದನ್ನು ಬಿಟ್ಟರೆ ಇನ್ನಾವುದೇ ಕೃಷಿ ಉತ್ಪನ್ನಗಳಿಗೆ ಸ್ವಾತಂತ್ರ್ಯ ಬಂದು ೭೦ ವರ್ಷಗಳಾಗಿದ್ದರೂ ಸೂಕ್ತ ವ್ಯವಸ್ಥೆ ಇಲ್ಲದೆ ರೈತರು ಹತಾಶರಾಗಿದ್ದಾರೆ.

ಈ ಎಲ್ಲಾ ಸಮಸ್ಯೆ ಹಿನ್ನೆಲೆಯಲ್ಲಿ ಪರ್ಯಾಯ ಮಾರ್ಗ ಹುಡುಕುತ್ತಾ ಹೋದಾಗ ಉತ್ಪಾದಕರ ಸಂಘಟನೆಯಿಂದ ಮಾತ್ರ ಸಾಧ್ಯ ಎಂದು ಮನವರಿಕೆಯಾದ ಮೇಲೆ ೨೦೦೬-೦೭ರಲ್ಲಿ ೧೦ ಬೆಳೆವಾರು/ಉದ್ದಿಮೆವಾರು ಉತ್ಪಾದಕರ ಸಂಸ್ಥೆಗಳನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ತೂಬಗೆರೆ ಹೋಬಳಿಯಲ್ಲಿ ಪ್ರಾರಂಭಿಸಿ ಅವುಗಳಿಗೆ ಬೇಕಾದ ಎಲ್ಲಾ ಸವಲತ್ತು ಹಾಗು ಮಾರ್ಗದರ್ಶನ ಕೊಡಲಾಯಿತು. ಈ ಎಲ್ಲಾ ಸಂಸ್ಥೆಗಳು ಮಧ್ಯವರ್ತಿಗಳನ್ನು ಹೊರತುಪಡಿಸಿ ನೇರವಾಗಿ ಮಾರಾಟ ಮಾಡಿ ಲಾಭ ಮಾಡುವುದರ ಜೊತೆಗೆ ಸಕಾಲದಲ್ಲಿ ಬೇಕಾದ ಪರಿಕರಗಳು ಹಾಗು ಸರ್ಕಾರದ ಸೌಲಭ್ಯಗಳನ್ನು ಮತ್ತು ಪ್ರಸ್ತುತ ಎದುರಿಸುತ್ತಿರುವ ಪ್ರತಿಯೊಂದು ಸಮಸ್ಯೆಗೆ ಉತ್ತರ ಕಂಡುಕೊಳ್ಳಲು ಯಶಸ್ವಿಯಾಗಿದ್ದಾರೆ. ಒಂದು ಸಂಸ್ಥೆಯ ಯಶೋಗಾಥೆಯನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ.

ಜೈವಿಕ ಇಂಧನ ಬೆಳೆಗಳಾದ ಹೊಂಗೆ, ಬೇವು, ಹಿಪ್ಪೆ ಹಾಗು ಇತರೆ ಕೆಲವು ಬೆಳೆಗಳ ಉತ್ಪಾದನೆ ಅನೇಕ ತಲೆಮಾರುಗಳಿಂದಲೂ ಮಧ್ಯವರ್ತಿಯ ಕೈಯಲ್ಲಿದ್ದು, ರೈತರಿಗೆ ಒಂದು ಲಾಭದಾಯಕ ಬೆಲೆ ಕೊಡುವ ಉದ್ದೇಶದಿಂದ ೨೦೦೬-೦೭ರಲ್ಲಿ ಜೈವಿಕ ಇಂಧನ ಬೆಳೆಗಾರರ ಉತ್ಪಾದನಾ ಸಂಘವನ್ನು ದೊಡ್ಡಬಳ್ಳಾಪುರದ ತೂಬಗೆರೆ ಹೋಬಳಿಯಲ್ಲಿ ಪ್ರಾರಂಭ ಮಾಡಲಾಯಿತು.

೨೦೦೭ರಲ್ಲಿ ಪ್ರತಿ ಕೆ.ಜಿ.ಗೆ ೫ ರಿಂದ ೮ ರೂ. ದರ ಮೇಲೆ ತಿಳಿಸಿದ ಜೈವಿಕ ಇಂಧನ ಉತ್ಪನ್ನಗಳಿಗೆ ದೊರೆಯುತ್ತಿದ್ದು, ೨೦೦೮ರಲ್ಲಿ ಸಂಸ್ಥೆ ಪ್ರಾರಂಭವಾದ ವರ್ಷ ೧೫ರಿಂದ ೨೦ ರೂ. ದರವನ್ನು ಹಾಲಿನ ಸಹಕಾರ ಸಂಘಗಳ ಮೂಲಕ ಉತ್ಪನ್ನಗಳನ್ನು ಕ್ರೋಢೀಕರಿಸುವುದರ ಜೊತೆಗೆ ಆ ಸಂಸ್ಥೆಯ ಮೂಲಕ ಹಣವನ್ನು ವಿತರಿಸುವ ವ್ಯವಸ್ಥೆಯನ್ನು ಮಾಡಲಾಯಿತು. ಇಂದು (೨೦೧೭) ೩೦ ರಿಂದ ४೦ರೂ. ಗಳನ್ನು ಕೊಡುತ್ತಿದ್ದು ४ ಗ್ರಾಮೀಣ ಯುವಕರಿಗೆ ಉದ್ಯೋಗವನ್ನು ಕಲ್ಪಿಸಲಾಗಿದೆ. ಈ ಮಾದರಿಯನ್ನು ರಾಜ್ಯದ, ಹೊರರಾಜ್ಯದ ಹಾಗೂ ಹೊರ ದೇಶದ ಅನೇಕ ಸಂಸ್ಥೆಗಳ ಪ್ರತಿನಿಧಿಗಳು ಬಂದು ನೋಡಿ ಶ್ಲಾಘಿಸುವುದರ ಜೊತೆಗೆ ಅಳವಡಿಸಿಕೊಂಡಿದ್ದಾರೆ. ಅತಿ

ಕಡಿಮೆ ಲಾಭ ಕೊಡುವ ಜೈವಿಕ ಇಂಧನ ಬೆಳೆಗಳಿಗೆ ಸಂಸ್ಥೆ ಪ್ರಾರಂಭ ಮಾಡಿ ಹೆಚ್ಚುವರಿ ಲಾಭ ಹಾಗು ಉದ್ಯೋಗ ಸೃಷ್ಟಿಯಾಗಲು ಸಾಧ್ಯವಾದರೆ ಉಳಿದ ಎಲ್ಲಾ ಕೃಷಿ ಉತ್ಪನ್ನಗಳಿಗೆ ಇದೇ ಮಾದರಿಯಲ್ಲಿ ಸಂಸ್ಥೆ ಸ್ಥಾಪಿಸಲು ಸರ್ಕಾರ ಪ್ರೋತ್ಸಾಹಿಸಿದರೆ ರೈತರು ಖಂಡಿತ ಹೆಚ್ಚು ಆತ್ಮವಿಶ್ವಾಸದಿಂದ ಕೃಷಿಯಲ್ಲಿ ತೊಡಗಿಕೊಂಡು ಯುವಕರು ವಲಸೆ ಹೋಗುವುದನ್ನು ಬಿಟ್ಟು ಹಳ್ಳಿಗಳಲ್ಲಿ ಉಳಿಯಲು ಮನಸ್ಸು ಬದಲಾಯಿಸುತ್ತಾರೆ. ಮುಂದಿನ ವರ್ಷಗಳಲ್ಲಿ ಆಹಾರ ಉತ್ಪನ್ನದ ಮೇಲೆ ಆಗುವ ಪರಿಣಾಮವನ್ನು ಹತೋಟಿಗೆ ತರಲು ಸಾಧ್ಯವಾಗುತ್ತದೆ. ಸೂಕ್ತ ಮಾಹಿತಿ ಹಾಗೂ ಹೆಚ್ಚುವರಿ ಹಣವನ್ನು ಸರ್ಕಾರ ಭರಿಸಬೇಕಾಗುತ್ತದೆ.

**೩. ಮೌಲ್ಯವರ್ಧನೆ ಹಾಗು ಸಂಸ್ಕರಣೆ**

ರೈತರ ಆರ್ಥಿಕತೆ ಹಾಗು ಗ್ರಾಮೋದ್ಯೋಗಕ್ಕೆ ಉಜ್ವಲ ಅವಕಾಶ ಇರುವುದು ಮೌಲ್ಯವರ್ಧನೆ ಹಾಗು ಸಂಸ್ಕರಣೆಯಿಂದ ಹೆಚ್ಚುತ್ತಿರುವ ಗಂಡ-ಹೆಂಡತಿ ಕೆಲಸದ ಒತ್ತಡ, ತಯಾರಿಸಿದ ಹಾಗು ಅಡುಗೆ ಮಾಡಲು ತಯಾರಾದ ಆಹಾರದ ಮೇಲೆ ಅವಲಂಬನೆಯಾಗುತ್ತಾ ಬಂದಿದ್ದು, ಅವುಗಳ ಅವಶ್ಯಕತೆ ಹೆಚ್ಚಾಗುತ್ತಾ ಹೋಗುತ್ತಿದೆ. ಆದರೆ ಇಂದು ರಾಜ್ಯದಲ್ಲಿ ಇವುಗಳ ಉತ್ಪನ್ನಗಳು ಶೇ. ೭ಕ್ಕಿಂತ ಕಡಿಮೆ ಇದ್ದು, ಇರುವ ಅವಕಾಶಗಳನ್ನು ಸದ್ವಿನಿಯೋಗ ಮಾಡಿಕೊಳ್ಳಬೇಕಾಗುತ್ತದೆ. ಗ್ರಾಮದ ವ್ಯಾಪ್ತಿಯಲ್ಲಿ ಈ ಪ್ರಕ್ರಿಯೆಗಳನ್ನು ಪ್ರೋತ್ಸಾಹಿಸುವುದರಿಂದ ಗ್ರಾಮೀಣ ಯುವಕರಿಗೆ ಹಾಗು ಮಹಿಳೆಯರಿಗೆ ಉದ್ದಿಮೆ ಸೃಷ್ಟಿ ಮಾಡಲು ಸಾಧ್ಯವಾಗುತ್ತದೆ. ಅನೇಕ ಗ್ರಾಮೀಣ ಮಧ್ಯಮ ಹಾಗು ಕೆಳವರ್ಗಗಳ ಹೆಣ್ಣುಮಕ್ಕಳು ಗಾರ್ಮೆಂಟ್ ಕಾರ್ಖಾನೆಗಳಿಗೆ ಉದ್ಯೋಗ ಅರಸಿಕೊಂಡು ಹೋಗುವುದನ್ನು ತಪ್ಪಿಸಲು ಸಾಧ್ಯವಾಗುತ್ತದೆ.

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯ ಹೊರತಂದ 'ಆರ್ಯ' ಎಂಬ ಯೋಜನೆಯನ್ನು (ARYA: Attracting and Retaining of Youth in Agri- culture) ಭಾರತೀಯ ಕೃಷಿ ಅನುಸಂಧಾನ ಪರಿಷತ್ತು, ನವದೆಹಲಿ, ಕೃಷಿ ವಿಜ್ಞಾನ ಕೇಂದ್ರಗಳ ಮೂಲಕ ೨೫ ಕೇಂದ್ರಗಳಲ್ಲಿ ಮೌಲ್ಯವರ್ಧನೆ ಹಾಗು ಸಂಸ್ಕರಣೆಯನ್ನು ೨೦೧೫ರಿಂದ ರಾಷ್ಟ್ರದಾದ್ಯಂತ ಜಾರಿಗೊಳಿಸಲಾಗುತ್ತಿದೆ.

ತರಬೇತಿ ಹಾಗು ಅವಶ್ಯಕತೆಗನುಗುಣವಾಗಿ ಹಣ ತೊಡಗಿಸುವುದರಿಂದ ಮೌಲ್ಯವರ್ಧನೆ ಹಾಗು ಸಂಸ್ಕರಣೆ ಮಾಡಿದ ಉತ್ಪನ್ನಗಳನ್ನು ರಫ್ತು ಮಾಡಲು ಉಜ್ವಲ ಅವಕಾಶವಿದೆ.

**ಸಂಕ್ಷೇಪ**

ಕರ್ನಾಟಕ ರಾಜ್ಯ ಹಾಗು ಭಾರತ ದೇಶ ಅತ್ಯಂತ ಸಂಪನ್ಮೂಲ ಸಮೃದ್ಧಿಯ ರಾಜ್ಯ ಹಾಗು ದೇಶ. ಹಿರಿಯ ಸಾಹಿತಿಗಳು ಹಾಗು ಅನುಭವಿಗಳೂ ಆದ ಡಾ. ಪಾಟೀಲ ಪುಟ್ಟಪ್ಪನವರು ೧೯೯೦ರ ಹಾದಿಯಲ್ಲಿ ಹೇಳಿದ ಮಾತು "ಸಮೃದ್ಧಿಯಾದ ಬಡದೇಶ ಭಾರತ" ಇಂದಿಗೂ ಸ್ವಲ್ಪ ಮಟ್ಟಿಗಾದರೂ ಒಪ್ಪಲೇಬೇಕಾಗಿದೆ.



ಕೃಷಿ ಕ್ಷೇತ್ರದಲ್ಲಿ ಇಡೀ ಪ್ರಪಂಚದಲ್ಲೇ ಪ್ರಥಮ ಸ್ಥಾನದಲ್ಲಿರುವ ಇಸ್ರೇಲ್ ದೇಶದಲ್ಲಿ, ಭಾರತದಲ್ಲಿ ಲಭ್ಯವಿರುವ ನೀರಿಗಿಂತ ೧೧ನೇ ಒಂದು ಭಾಗದಷ್ಟು ನೀರು ಲಭ್ಯವಿದ್ದು, ಕೃಷಿಯಲ್ಲಿ ಅವರು ಅಂತಾರಾಷ್ಟ್ರೀಯ ಮಟ್ಟದಲ್ಲಿ ಅಮೋಘ ಸಾಧನೆಗೈದಿರುವುದಕ್ಕೆ ಮುಖ್ಯ ಕಾರಣ, ಕೃಷಿಯಲ್ಲಿ ಅಳವಡಿಸಿಕೊಂಡಂತಹ ತಂತ್ರಜ್ಞಾನ ಹೊರತು ನೀರಿನ ಕೊರತೆ ಅಲ್ಲ ಎಂಬುದು ಎಲ್ಲರ ಗಮನ ಸೆಳೆಯುವಂತಹದ್ದು.

ಕರ್ನಾಟಕ ರಾಜ್ಯ ಸಂಪದ್ಭರಿತ ರಾಜ್ಯವನ್ನಾಗಿ ಮಾಡಲು ಹಾಗೂ ರೈತರು ಕೃಷಿಯಲ್ಲಿ ಸುಸ್ಥಿರವಾಗಿ ನಿಲ್ಲಲು ಸಮಗ್ರ ಕೃಷಿ ಉತ್ಪಾದಕರ ಸಂಘಗಳು ಮೌಲ್ಯವರ್ಧನೆ ಹಾಗು ಸಂಸ್ಕರಣೆಯನ್ನು ಅಳವಡಿಸಿಕೊಳ್ಳಲು ಸಕಾಲದಲ್ಲಿ ಮಾಹಿತಿ ಅದರಲ್ಲೂ ಏಕಗವಾಕ್ಷಿಯಲ್ಲಿ ಇವುಗಳನ್ನು ಅಳವಡಿಸಿಕೊಳ್ಳಲು ಬೇಕಾದ ಹಣವನ್ನು ಸರ್ಕಾರ ಅವಕಾಶ ಮಾಡಿಕೊಟ್ಟರೆ ರೈತರ ಹಾಗು ಗ್ರಾಮೀಣ ಜನರ ಜೀವನ ಹಸನು ಮಾಡುವುದರ ಜೊತೆಗೆ ರಾಷ್ಟ್ರ ಆಹಾರ ಉತ್ಪನ್ನದಲ್ಲಿ ಸುಸ್ಥಿರತೆ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ.

**"ಕೃಷಿತೋ ನಾಸ್ತಿಂ, ದುರ್ಭಿಕ್ಷ:"**

# ಕೃಷಿ ಮಾರುಕಟ್ಟೆಯ ಸವಾಲುಗಳು

## ಡಾ. ಸಿದ್ದನಗೌಡ ಪಾಟೀಲ

ರೈತರ ಆತ್ಮಹತ್ಯೆಗಳು ದಿನನಿತ್ಯದ ಸುದ್ದಿಗಳಾಗುತ್ತಿರುವ ಸಂದರ್ಭದಲ್ಲಿ, ಸರಕಾರಗಳು ರೈತನ ಸಾಲ ಮನ್ನಾ ಕುರಿತು ಮಾತನಾಡುವ ದಿನಗಳಲ್ಲಿ, ದೇಶದ ಶೇಕಡಾ ೪೪ ಅಂದರೆ ಅರ್ಧಕ್ಕಿಂತ ಹೆಚ್ಚಿನ ರೈತರು ಕೃಷಿಯನ್ನೇ ತೊರೆಯುವುದಾಗಿ ಹೇಳಿದ್ದಾರೆಂದು ಸರಕಾರಿ ದಾಖಲೆಗಳೇ ಹೇಳುತ್ತಿರುವ ಸನ್ನಿವೇಶದಲ್ಲಿ ನಾಳಿನ ಭಾರತದಲ್ಲಿ 'ಉಳುವ ಯೋಗಿ' ಹೇಗಿರಬಹುದು ಎಂದು ಯೋಚಿಸಬೇಕಾಗಿದೆ. ಕುವೆಂಪು ಅವರು ಹೇಳುವ ಹಾಗೆ ರಾಜ್ಯಗಳು ಉಳಿಯಲಿ, ಅಳಿಯಲಿ, ಸೈನಿಕರೆಲ್ಲಾ ಮುತ್ತಿಗೆ ಹಾಕಲಿ, ಉಳುವುದನ್ನು ನಮ್ಮ ರೈತ ಬಿಡುವುದಿಲ್ಲ ಎಂಬ ಆಶಯ ನಿಜವಾಗುವುದೇ?- ಎಂಬ  ಪ್ರಶ್ನೆ ಕಾಡುತ್ತಿದೆ. ನಾನು ಕೃಷಿ ಪರಿಣತ, ವಿಜ್ಞಾನಿ, ತಜ್ಞನಲ್ಲ. ಆದರೆ ಒಬ್ಬ ಕೃಷಿಕನ ಮಗ, ಬಾಲ್ಯದಿಂದಲೂ ಕೃಷಿಯನ್ನು ನೋಡುತ್ತ ವಿದ್ಯಾಭ್ಯಾಸದ ಜೊತೆಗೇ ಕೃಷಿ ಚಟುವಟಿಕೆಯಲ್ಲಿ ಭಾಗವಹಿಸುತ್ತ ನಂತರ ರೈತ ಸಂಘಟನೆಗಳ ಹೋರಾಟಗಳಲ್ಲಿ ಒಂದಾಗಿ ಬೆಳೆದವನು. ಹಾಗಾಗಿ ನನಗೆ ನಾಳಿನ ಭಾರತದಲ್ಲಿ ಕೃಷಿ ಹೇಗಿರುತ್ತದೆ ಎನ್ನುವುದಕ್ಕಿಂತ ಕೃಷಿಕ ಅಂದರೆ ನಮ್ಮ ನೇಗಿಲ ಯೋಗಿ ಹೇಗಿರುತ್ತಾನೆ ಎಂಬುದೇ ಕಾಳಜಿ, ನಾಳಿನ ಭಾರತದ ಕೃಷಿಯ ಕುರಿತು ಇಂದಿನ ನಮ್ಮ ಸರಕಾರಗಳು ಕೊಡುತ್ತಿರುವ ಘೋಷಣೆಗಳು ಆಕರ್ಷಕವಾಗಿವೆ. ಪ್ರಧಾನಿ ನರೇಂದ್ರ ಮೋದಿಯವರು ೨೦೨೨ನೇ ವರ್ಷಕ್ಕೆ, ಅಂದರೆ ನಮ್ಮ ದೇಶ ಸ್ವಾತಂತ್ರ್ಯ ಪಡೆದ ೭೫ನೇ ವರ್ಷದ ಹೊತ್ತಿಗೆ ದೇಶದ ಕೃಷಿಕರ ಆದಾಯವನ್ನು ದ್ವಿಗುಣಗೊಳಿಸುತ್ತೇವೆ ಎಂದು ಹೇಳಿದ್ದಾರೆ.

ವಿತ್ತ ಮಂತ್ರಿ ಅರುಣ ಜೇಟ್ಲಿಯವರೂ ಬಜೆಟ್ ಮಂಡನೆಯ ಸಂದರ್ಭದಲ್ಲಿ ಪ್ರಧಾನಿಯವರ ಆಶಯವನ್ನು ಪುನರುಚ್ಚರಿಸಿದ್ದಾರೆ.

ಇನ್ನೂ ಒಂದು ಹೆಜ್ಜೆ ಮುಂದೆ ಹೋದ ಕೇಂದ್ರದ ಕೃಷಿ ಸಚಿವರಾದ ರಾಧಾ ಮೋಹನ್ ಸಿಂಗ್ ಅವರು ಇದೇ ವರ್ಷದ ಆರಂಭದಲ್ಲಿ ಜಬಲ್‌ಪುರದಲ್ಲಿ ನಡೆದ ಕೃಷಿ ಸವಾಲುಗಳ ಕುರಿತ ರಾಷ್ಟ್ರೀಯ ಸಮ್ಮೇಳನದಲ್ಲಿ '೨೦೩೦ರ ಹೊತ್ತಿಗೆ ಶೇಕಡಾ ೯೧ರಷ್ಟು ಕೃಷಿ ಹಿಡುವಳಿಗಳು ಸಣ್ಣ ಮತ್ತು ಅತಿ ಸಣ್ಣ ರೈತರ ಕೈಯಲ್ಲಿರುತ್ತವೆ' ಎಂದು ಹೇಳಿದ್ದಾರೆ. ನಾಳಿನ ಭಾರತದಲ್ಲಿ ನಮ್ಮ ರೈತ ಈ ದೇಶದ ಆಗುಹೋಗು ಗಳನ್ನು ನಿರ್ಧರಿಸುತ್ತಾನೆ. ಯಾಕೆಂದರೆ ದೇಶದ ಶೇಕಡಾ ೮೭ರಷ್ಟು ರೈತರು ಸಣ್ಣ ಮತ್ತು ಅತಿ ಸಣ್ಣ ರೈತರ ವ್ಯಾಪ್ತಿಗೆ ಬರುತ್ತಾರೆ. ಈಗ ಈ ರೈತ ಸಮೂಹದ (೦.೧ರಿಂದ ೨ ಹೆಕ್ಟೇರ್ ಅಂದರೆ ೮ ಎಕರೆ ಒಳಗಿನ ರೈತರ) ಸಂಖ್ಯೆ ಅಗಾಧವಾಗಿದೆ. ಅಷ್ಟಿದ್ದರೂ ಅವರು ಉಳುತ್ತಿರುವ ಭೂಮಿ ಶೇಕಡ ೪೦ರಿಂದ ೪೪ ಮಾತ್ರ ಹೀಗಿದ್ದಾಗ ಕೃಷಿ ಸಚಿವ ರಾಧಾ ಮೋಹನ್ ಸಿಂಗ್ ಅವರ ಹೇಳಿಕೆ ರೈತರಿಗೆ ಸಂತೋಷ ತರಲೇಬೇಕು.

ಕೇಂದ್ರ ಸರಕಾರ ಇನ್ನೂ ಒಂದು ಕ್ರಾಂತಿಕಾರಿ ಬದಲಾವಣೆಯನ್ನು ಕೃಷಿ ಕ್ಷೇತ್ರದಲ್ಲಿ ತರುತ್ತೇನೆಂದು ಹೇಳಿದೆ. ಅದಕ್ಕಾಗಿ ಒಂದು ಮಾದರಿ ಕಾನೂನನ್ನು ದೇಶದ ಎಲ್ಲ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗಾಗಿ ಸಿದ್ಧಪಡಿಸಿದೆ. ಇದರ ಹೆಸರು 'ಅಗ್ರಿಕಲ್ಚರಲ್ ಪ್ರೊಡ್ಯೂಸ್ ಆ್ಯಂಡ್ ಲೈವ್ ಸ್ಟಾಕ್ ಮಾರ್ಕೆಟಿಂಗ್ (ಪ್ರಮೋಶನ್ ಆ್ಯಂಡ್ ಫೆಸಿಲಿಟೇಶನ್) ಆ್ಯಕ್ಟ್-೨೦೧೭'. ಇದಕ್ಕಾಗಿ ರಚನೆಯಾದ ಸಮಿತಿಯ ಕೇಂದ್ರದ ಕೃಷಿ ಅಧಿಕಾರಿ ಹೇಳುತ್ತಾರೆ: 'ದೇಶದ ಕೃಷಿ ವಲಯದಲ್ಲಿ ದೊಡ್ಡ ಸ್ಥಿತ್ಯಂತರ ನಡೆಯಲಿದೆ, ಕೃಷಿ ಕ್ಷೇತ್ರದಲ್ಲಿ ಆಟ ಬದಲಾಗುವ (ಗೇಮ್ ಚೇಂಜರ್) ಪ್ರಕ್ರಿಯೆ ಇದು' ಎಂದು. ಅವರ ಪ್ರಕಾರ ಈಗಿರುವ ಎ.ಪಿ.ಎಂ.ಸಿ. ಕಾನೂನಿನ ಬದಲಾಗಿ ಈ ಹೊಸ ಕಾನೂನು ಬರುತ್ತಿದೆ. ಕೃಷಿ ರಾಜ್ಯದ ಪಟ್ಟಿಯಲ್ಲಿದ್ದರೂ ಇತ್ತೀಚೆಗೆ ಒಂದು ದೇಶ, ಒಂದು ತೆರಿಗೆ, ಒಂದು ಭಾಷೆ, ಒಂದು ಸಂಸ್ಕೃತಿಯ ಜೊತೆಗೆ ಒಂದು ದೇಶಕ್ಕೆ ಒಂದು ಕೃಷಿ ನೀತಿ ಎಂಬ ಘೋಷಣೆ ಬಂದು ಕೃಷಿ ಕೇಂದ್ರ ರಾಜ್ಯಗಳ ಸಹವರ್ತಿ (ಕರಂಟ್) ಲಿಸ್ಟ್‌ಗೆ ಸೇರಿದೆ. ಈ ಹೊಸ ಕಾನೂನಿನ ಇತರೆ ವಿಷಯಗಳನ್ನು ಬೇರೆ ಸಂದರ್ಭದಲ್ಲಿ ವಿಶ್ಲೇಷಿಸಬಹುದು. ಅದರಲ್ಲಿರುವ ಒಂದು ಮುಖ್ಯ ಸಂಗತಿಯನ್ನು ಈ ಸಂದರ್ಭದಲ್ಲಿ ಗಮನಿಸಬೇಕು. ಆ ಕಾನೂನಿನ ಮೊದಲನೇ ಅಧ್ಯಾಯದ ೧೮ನೇ ವಿಷಯ 'ಫಾರರ್ ಪ್ರೊಡ್ಯೂಸರ್ ಕಂಪನಿ' ಕುರಿತು ಹೇಳುತ್ತದೆ. ಈ ಕಂಪನಿ ೧೯೫೬ರ ಕಂಪನಿಗಳ ಕಾನೂನು ಪ್ರಕಾರ ನೋಂದಣಿ ಆಗುತ್ತದೆ ಅಂತ ಹೇಳುತ್ತದೆ. ಅಂದರೆ ಒಕ್ಕಲುತನಗಳ ಕಂಪನಿಗಳು ಇನ್ನು ಮುಂದೆ ಜಾರಿಗೆ ಬರುತ್ತವೆ. ನಮ್ಮ ನೇಗಿಲ ಯೋಗಿಗಳು ಕೃಷಿ ಕಂಪನಿಗಳ ಒಡೆಯರಾಗುತ್ತಾರೆ. ಅದೇ ಮಾದರಿ ಕಾನೂನಿನ ಮುನ್ನುಡಿಯಲ್ಲಿ ಈ ಕಾನೂನಿನ ಮಹತ್ವ ಕುರಿತು ಹೀಗೆ ಹೇಳಲಾಗಿದೆ. 'ಮೈದಾನವನ್ನು (ಕೃಷಿ ಕ್ಷೇತ್ರವನ್ನು) ಸಮತಟ್ಟಾಗಿಸಿ ಸಾರ್ವಜನಿಕ ಹಾಗೂ ಖಾಸಗಿ ಕ್ಷೇತ್ರದ ಆಟಗಾರರನ್ನು ಆಡಲು ಬಿಡುವುದು.' ಅವರ ಪ್ರಕಾರ ನಮ್ಮ ನೇಗಿಲ ಯೋಗಿಯ ಕಂಪನಿ ಈ ಮೈದಾನದಲ್ಲಿ ಭಾಗವಹಿಸಿ ಆಟವಾಡಿ, ಗೆದ್ದು ಅವನ ಆದಾಯ ದ್ವಿಗುಣಗೊಳ್ಳುತ್ತದೆ. ಅಲ್ಲಿಗೆ ೨೦೨೨ರ ಹೊತ್ತಿಗೆ, ಅಂದರೆ ನಮ್ಮ ೭೫ನೇ ಸ್ವಾತಂತ್ರ್ಯೋತ್ಸವ ಸಂದರ್ಭದಲ್ಲಿ ನಮ್ಮ ರೈತ ಕಾರಿನಿಂದಿಳಿದು, ದೊಡ್ಡ ಕಂಪನಿ ಒಡೆಯನಾಗಿದ್ದರೆ ಹೆಲಿಕಾಪ್ಟರ್‌ನಿಂದಿಳಿದು ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾನೆ. ಎಂಥಾ ಸುಂದರ ಕನಸು... ಈ ಸುಂದರ ಕನಸಿಗೆ ಮುನ್ನುಡಿ ಬರೆದದ್ದು ನಮ್ಮ ಪ್ರಧಾನಿಯವರು ಯೋಜನಾ ಆಯೋಗದ ಬದಲಾಗಿ ರೂಪಿಸಿದ ನೀತಿ ಆಯೋಗ, ನೀತಿ ಆಯೋಗದ ೨೦೧೫ರ ಸಭೆಯಲ್ಲಿ ಒಂದು ಪ್ರಮುಖ ವಿಷಯ ಕಾರ್ಯಸೂಚಿಯಲ್ಲಿತ್ತು. ಕುಸಿಯುತ್ತಿರುವ ಕೃಷಿ ಉತ್ಪಾದಕತೆ ಕುರಿತು ಅಲ್ಲಿನ ಪಂಡಿತರು ಕೇಂದ್ರ ಸರಕಾರಕ್ಕೆ ಕೊಟ್ಟ ಶಿಫಾರಸ್ಸು ಏನೆಂದರೆ ದೇಶದಲ್ಲಿ 'ತುಂಡು ಭೂಮಿ' ಕೃಷಿ ಅಭಿವೃದ್ಧಿಗೆ ಅಡೆತಡೆಯಾಗಿದೆ ಎಂಬುದು. ಅವರ ಪ್ರಕಾರ ಅಭಿವೃದ್ಧಿಗೆ ಅಡ್ಡಿಯಾಗಿರುವ ಈ ತುಂಡು ಭೂಮಿ ಹಿಡುವಳಿಗಳನ್ನು ನಿರ್ನಾಮ ಮಾಡುವ ಸೂಚನೆಯ ಆಧಾರದ ಮೇಲೆಯೇ ಈ ಹೊಸ ಮಾದರಿ ಕಾನೂನು ಸಿದ್ಧವಾಗಿದೆ. ಕೃಷಿ ಕ್ಷೇತ್ರದಲ್ಲಿ ಕಂಪನಿ ಕೃಷಿ, ಒಪ್ಪಂದದ ಕೃಷಿ, ಗುತ್ತಿಗೆ ಕೃಷಿ, ಅಂತಿಮವಾಗಿ ಕಾರ್ಪೊರೇಟ್ ಕೃಷಿಯನ್ನು ಜಾರಿಗೆ ತಂದು ಕೃಷಿಯನ್ನು ಕೈಗಾರಿಕೆಯನ್ನಾಗಿ

ಪರಿವರ್ತಿಸುವ ಮಾರ್ಗ ಇದು. ಕೇವಲ ಮಾರುಕಟ್ಟೆ ಮಾತ್ರವಲ್ಲ, ಕೃಷಿ ಉತ್ಪಾದನಾ ಕ್ಷೇತ್ರದಲ್ಲಿಯೂ ಬೃಹತ್ ಕೃಷಿ ಉದ್ದಿಮೆಗಳು ಆಟವಾಡಲು ಸಿದ್ಧಪಡಿಸಿದ ಮೈದಾನವಿದು. ಇಂಥ ನೀತಿಗೆ ಇಂದಿನ ಕೇಂದ್ರ ಸರಕಾರದ ಆಡಳಿತ ಪಕ್ಷವಾದ ಬಿಜೆಪಿಯನ್ನು ಮಾತ್ರ ಹೊಣೆಗಾರರನ್ನಾಗಿ ಮಾಡಿದರೆ ಅದು ಕ್ಷುಲ್ಲಕ ರಾಜಕಾರಣ ವಾಗುತ್ತದೆ. ೧೯೯೧ರಲ್ಲಿ ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ನೀತಿಗಳನ್ನು ಜಾರಿಗೆ ತಂದ ಕಾಂಗ್ರೆಸ್ ಪಕ್ಷವೂ ಹೊಣೆ ಹೊರಬೇಕಾಗುತ್ತದೆ. ಅಂದು ಆರಂಭಿಸಲಾದ ಈ ನೀತಿಗಳು ಇಂದು ತೀವ್ರ ವೇಗವನ್ನು ಪಡೆದಿವೆ. ಪಕ್ಷ ಬದಲಾಗಿರಬಹುದು, ನೀತಿ ಒಂದೇ.

ಮೇಲಿನ ಬೆಳವಣಿಗೆಗಳನ್ನು ಹೀಗೆ ನೋಡಬೇಕು ಎಂದು ನನ್ನ ಅನಿಸಿಕೆ. ಕೃಷಿಯನ್ನು, ಕೃಷಿ ಆರ್ಥಿಕತೆಯನ್ನು ಕೃಷಿಕ ಮತ್ತು ದೇಶದ ಆಹಾರ ಉತ್ಪಾದನಾ ವಲಯ ಕೇಂದ್ರಿತವಾಗಿ ನೋಡುವ ಬದಲಾಗಿ ಕೃಷಿಯನ್ನು ಮಾರುಕಟ್ಟೆ ಕೇಂದ್ರಿತವಾಗಿ ನೋಡಲಾಗುತ್ತಿದೆ. ಕೃಷಿಯನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆಯಲ್ಲಿ ಮಾರುಕಟ್ಟೆ ಶಕ್ತಿಗಳು ಪ್ರಧಾನ ಪಾತ್ರ ವಹಿಸುತ್ತವೆ ಮತ್ತು ಅವುಗಳ ಹಿತಾಸಕ್ತಿ ಅಡಗಿರುತ್ತದೆ. ಈ ಬೆಳವಣಿಗೆಯಲ್ಲಿ ಕೃಷಿಕ ಕೃಷಿಯಿಂದ ಹೊರಬೀಳುತ್ತಾನೆ. ಮಾತ್ರವಲ್ಲ, 'ಆಹಾರ ಧಾನ್ಯ' ಮಾರುಕಟ್ಟೆಯ 'ಸರಕಾ'ಗುತ್ತದೆ. ದೇಶದ ಪ್ರಜೆ ಕೇವಲ 'ಗ್ರಾಹಕ'ನಾಗಿ ಪರಿವರ್ತನೆ ಹೊಂದುತ್ತಾನೆ. ಈ ಪ್ರಕ್ರಿಯೆಯಲ್ಲಿ ಸರಕಾರದ ಮಧ್ಯಪ್ರವೇಶ ಇರುವುದಿಲ್ಲ ಮತ್ತು ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ ಸಾರ್ವಜನಿಕ ವಲಯಗಳು ನಾಶವಾಗುತ್ತವೆ. ಈಗಾಗಲೇ ಇತರ ಕ್ಷೇತ್ರಗಳಲ್ಲಿ ಆದಂತೆ ಸಾರ್ವಜನಿಕ ವಲಯವನ್ನು ನಿಷ್ಕ್ರಿಯಗೊಳಿಸಿ ಖಾಸಗಿ ವಲಯವನ್ನು ಬಲಪಡಿಸುತ್ತಿರುವಂತೆ ಕೃಷಿ ಕ್ಷೇತ್ರದಲ್ಲಿಯೂ ಖಾಸಗಿ ವಲಯಕ್ಕೆ ಆದ್ಯತೆ ನೀಡುವ ಹುನ್ನಾರವೇ 'ಫಾರ್ಮರ್ ಪ್ರೊಡ್ಯೂಸರ್ ಕಂಪನಿ' ಸ್ಥಾಪನೆಯ ಹಿಂದಿದೆ.

ಭಾರತದ ಈಗಿನ ಕೃಷಿಯನ್ನು ಮಾರುಕಟ್ಟೆ ದೃಷ್ಟಿಯಿಂದ ನೋಡಿದರೂ ಅಲ್ಲಿ ಕೃಷಿಕ ಮತ್ತು ಮಾರಾಟಗಾರ ಒಬ್ಬನೇ. ನಾವು ಈಗ ಕಾಳಜಿ ವಹಿಸಬೇಕಾದ ಶೇಕಡ ೮೭ರಷ್ಟಿರುವ ಕೃಷಿಕರಲ್ಲಿ ಬಹುತೇಕ ರೈತರು ತಮ್ಮ ಉತ್ಪನ್ನಗಳನ್ನು ಸಂತೆ ಗಳಲ್ಲಿ, ಜಾತ್ರೆಗಳಲ್ಲಿ, ನಗರ, ಪಟ್ಟಣಗಳ ಬಡಾವಣೆಗಳ ಬೀದಿಗಳಲ್ಲಿ, ತಾವೇ ಹೊತ್ತುಕೊಂಡು ಹೋಗಿ ಮಾರಾಟ ಮಾಡುತ್ತಾರೆ. ಅವರಿಗಿರುವ ಭೂಮಿಯ ಸೈಜಿನಲ್ಲಿ ಬರುವ ಉತ್ಪನ್ನಗಳು ಟ್ರಾಕ್ಟರ್‌ನಲ್ಲಿಯೋ, ಲಾರಿಗಳಲ್ಲಿಯೋ ಕೊಂಡೊಯ್ಯುವಷ್ಟಿರುವುದಿಲ್ಲ. ಹೀಗಾಗಿ ನಮ್ಮ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಉತ್ಪಾದನಾ ಕ್ಷೇತ್ರಕ್ಕೆ ಸಮೀಪವಿರುವ ಸಂತೆಗಳು, ನಗರ - ಪಟ್ಟಣಗಳ ಬಡಾವಣೆಗಳ ಸಂದುಗೊಂದುಗಳೇ ಅವರ ಉತ್ಪನ್ನಗಳ ಮಾರಾಟಕ್ಕೆ ಇರುವ ಮಾರುಕಟ್ಟೆಗಳು, ಹೆಚ್ಚೆಂದರೆ ಪಟ್ಟಣಗಳಲ್ಲಿನ ಭಾಗವಾದರು. ಮಧ್ಯವರ್ತಿ, ವ್ಯಾಪಾರಿಗಳ ಹಿಡಿತದಿಂದ ತಪ್ಪಿಸಲೆಂದೇ ೧೯೫೦ರಲ್ಲಿ ಕಾನೂನಾತ್ಮಕ ವಾಗಿಯೇ ಆರಂಭಿಸಲಾದ ಕೃಷಿ ಮಾರುಕಟ್ಟೆಗಳಿಗೂ (ಎ.ಪಿ.ಎಂ.ಸಿ.) ಈ ಸಣ್ಣ ಅತಿಸಣ್ಣ ರೈತರು ಬಹುತೇಕ ಅಪರಿಚಿತರೇ.

ಇಂಥ ಸ್ಥಿತಿಯಲ್ಲಿ ಸಗಟು ಮಾರುಕಟ್ಟೆಗಳು, ಟರ್ಮಿನಲ್ ಮಾರುಕಟ್ಟೆಗಳು, ಈಗ ಜಾರಿಗೆ ತಂದಿರುವ ಇ-ನಾಮ್ (ವಿದ್ಯುನ್ಮಾನ - ರಾಷ್ಟ್ರೀಯ ಕೃಷಿ ಮಾರುಕಟ್ಟೆ) ಎಲ್ಲವೂ ಅವನಿಗೆ ಅಪರಿಚಿತವೇ. ಹೀಗಿರುವಾಗ ನಮ್ಮ



ಆಧುನಿಕ ಕೃಷಿ ತಜ್ಞರು ಒಂದು ಪ್ರಶ್ನೆ ಎತ್ತಬಹುದು: 'ನಮ್ಮ ರೈತರು ಇನ್ನೂ ಬೀದಿ ಬದಿಯ ಸಂತೆಗಳಲ್ಲೇ ಇರಬೇಕೇ?' ಎಂದು, ಖಂಡಿತ ಪರಿವರ್ತನೆ ಬೇಕು. ಆದರೆ ಆ ಪರಿವರ್ತನೆ ಈ ದೇಶದ ಪ್ರಜೆಗಳೇ ಆಗಿರುವ ಕೃಷಿಕರ, ಅದರಲ್ಲೂ ಹೆಚ್ಚಿನ ಸಂಖ್ಯೆಯಲ್ಲಿರುವ ಸಣ್ಣ ಮತ್ತು ಅತಿ ಸಣ್ಣ ರೈತರನ್ನೂ ಒಳಗೊಳ್ಳುವ ಪರಿವರ್ತನೆ ಆಗಿರಬೇಕು. ಆದರೆ ಈಗ ಹೊಸ ಕಾನೂನುಗಳ ಮತ್ತು ನೀತಿಗಳ ಮೂಲಕ ಆಗುತ್ತಿರುವ ಪರಿವರ್ತನೆಗಳು ಕೃಷಿ ಕ್ಷೇತ್ರದಿಂದ ಕೃಷಿಕನನ್ನು ಹೊರತಳ್ಳಿ ಕೇವಲ ಮಾರುಕಟ್ಟೆ ಪ್ರೇರಿತ, ಮಾರುಕಟ್ಟೆಯನ್ನು ನಿಯಂತ್ರಿಸುವ ಕಂಪನಿಗಳ ಹಿತಾಸಕ್ತಿಗಳನ್ನು ಕಾಪಾಡುವ ಗುರಿಯನ್ನು ಹೊಂದಿವೆ. ಇನ್ನೊಂದು ಕಡೆ ನಮ್ಮ ಕೃಷಿಕರ ಉತ್ಪನ್ನಗಳು ಜನತೆಯ ಉಪಭೋಗಕ್ಕೂ ಅಡ್ಡಿಯಾಗಿ ಕೇವಲ ವ್ಯಾಪಾರಿಗಳು ನಿರ್ಧರಿಸುವ ಮಾರುಕಟ್ಟೆ ಮೌಲ್ಯವನ್ನು ಪಡೆದು ಖರೀದಿಸಲು ಶಕ್ತರಾದ ಗ್ರಾಹಕರಿಗೆ ಮಾತ್ರ ಲಭ್ಯವಾಗುವ ಸರಕುಗಳಾಗಿ ಮಾರ್ಪಡುತ್ತವೆ. ಕೃಷಿ ಹಾಗೂ ಕೃಷಿ ಮಾರುಕಟ್ಟೆಯ ಕಂಪನೀಕರಣ ಮತ್ತು ಖಾಸಗೀಕರಣ ನಿಸರ್ಗ ಮತ್ತು ಸಮಾಜದ ನಡುವಿನ ಸಹಜ ಅಂತ ಸಂಬಂಧಗಳನ್ನು ಕಡಿದುಹಾಕುತ್ತವೆ. ನಮ್ಮ ದೇಶದ ಕೃಷಿ ವ್ಯವಸ್ಥೆಯಲ್ಲಿ ಹಲವಾರು ಪರಿವರ್ತನೆಗಳಾಗಿವೆ. ಅವು ಎಂಥ ಪರಿವರ್ತನೆಗಳು ಎಂಬುದನ್ನು ತಿಳಿಯಲು 'ನಿನ್ನೆಯ ಭಾರತ'ದ ಮೇಲೆ ಒಂದು ಪಕ್ಷಿನೋಟ ಬೀರಬೇಕು.

**ಭಾರತದ ನಿನ್ನೆಗಳು**

ಕೃಷಿ ಮತ್ತು ಕೃಷಿಕನ ಮಧ್ಯೆ ಸಹಜ ಸಂಬಂಧಗಳೂ, ಸಹಜಕೃಷಿ ವಿಧಾನವೂ ಇರುವಾಗ ಕೃಷಿಯ ಪ್ರಧಾನ ಉದ್ದೇಶ ಆಹಾರೋತ್ಪಾದನೆಯಾಗಿತ್ತು. ಆ ಸಂದರ್ಭದ ಕೃಷಿ ಭೂಮಿಯ ಮಾಲೀಕತ್ವದ ವಿಷಯ ಒಂದು ಪ್ರತ್ಯೇಕ ಅಧ್ಯಯನವಾಗುತ್ತದೆ. ಕೃಷಿಯನ್ನು ಕಂಪನೀಕರಣಗೊಳಿಸುವ ಪ್ರಭುತ್ವಗಳ ಉದ್ದೇಶ ಇಂದಿನದಲ್ಲ. ವ್ಯಾಪಾರಕ್ಕಾಗಿಯೇ ಭಾರತಕ್ಕೆ ಬಂದ ಸಾಮ್ರಾಜ್ಯಶಾಹಿಗಳು ತಮ್ಮ ಲಾಭಕ್ಕಾಗಿ ಕೃಷಿ ಕಂಪನಿ ಮತ್ತು ಎಸ್ಟೇಟುಗಳನ್ನು ಸ್ಥಾಪಿಸಿದರು. ಬ್ರಿಟಿಷರು ಭಾರತದಲ್ಲಿ ಸಾಮ್ರಾಜ್ಯ ಸ್ಥಾಪನೆ ಮತ್ತು ವಿಸ್ತರಣೆ ಮಾಡುವ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೂ ಮುಂಚೆಯೇ ದೇಶದ ಗ್ರಾಮೀಣ ಜನರಿಂದ ತೀವ್ರವಾದ ಪ್ರತಿರೋಧಗಳನ್ನು ಎದುರಿಸಿದ್ದಾರೆ. ಆ ಪ್ರತಿರೋಧಗಳು ಮೂರು ವಿಧದಲ್ಲಿವೆ:

(೧) ಭೂಮಿಯ ಒಡೆತನ, (೨) ಬೆಳೆ ವಿಧಾನ, (೩) ತೆರಿಗೆ ನೀತಿ,

ಬ್ರಿಟಿಷರು ಬರುವ ಮುಂಚೆಯೇ ಭಾರತದಲ್ಲಿನ ಭೂಮಿ ಸಂಬಂಧಗಳು ನಿರ್ಧಾರವಾಗಿದ್ದವು. ಬಹುತೇಕ ಭೂಮಿ ರಾಜಮಹಾರಾಜರು, ಅವರ ಸಹಾಯಕರಾದ ಸ್ಥಳೀಯ ಆಡಳಿತಗಾರ, ದೇವಸ್ಥಾನಗಳ ನಿಯಂತ್ರಣದಲ್ಲಿತ್ತು. ರೈತ ಅಲ್ಲಿ ಜೀತಗಾರ, ಕೂಲಿಕಾರ, ಹೆಚ್ಚೆಂದರೆ ಗೇಣಿದಾರ, ಸ್ವಾತಂತ್ರ್ಯಾನಂತರ ನಡೆದ 'ಉಳುವವನಿಗೆ ಭೂಮಿ' ಎನ್ನುವ ಹೋರಾಟದ ಪರಿಕಲ್ಪನೆ ಆಗ ಇರಲೇ ಇಲ್ಲ. ಆದರೆ ಆದಿವಾಸಿಗಳು ಮಾತ್ರ ತಮ್ಮ ನೆಲಕ್ಕಾಗಿ ಧೀಮಂತ ಹೋರಾಟ ನಡೆಸಿದ ಘಟನೆಗಳು ಸಾಕಷ್ಟಿವೆ. ೧೮ನೇ



ಶತಮಾನದ ಕೊನೆಯ ದಶಕಗಳಲ್ಲಿ ಆರಂಭವಾದ ಆದಿವಾಸಿ ದಂಗೆಗಳು ಅರಣ್ಯಗಳ ಮೇಲಿನ ತಮ್ಮ ಹಕ್ಕಿಗಾಗಿ ಸಾಮ್ರಾಜ್ಯಶಾಹಿಗಳ ಅನ್ಯಾಯದ, ಅತಿಕ್ರಮಣದ ವಿರುದ್ಧ ಆರಂಭವಾದವು. ಬಂಗಾಳ ಪ್ರಾಂತದಲ್ಲಿ ಸಂತಾಲರು ತಮ್ಮ ಹಕ್ಕಿಗಾಗಿ ನಡೆಸಿದ ಪ್ರತಿರೋಧದ ತೀವ್ರತೆ ಎಷ್ಟಿತ್ತೆಂದರೆ ಭಾಗಲ್ಪುರದ ಕಲೆಕ್ಟರ್ ಕ್ಲಿವ್ ಲ್ಯಾಂಡ್‌ನನ್ನು ಆದಿವಾಸಿ ಹೋರಾಟಗಾರರು ಕೊಂದುಹಾಕಿದರು. ಪ್ರತಿಯಾಗಿ ಬ್ರಿಟಿಷರು ೧೭೮೫ರಲ್ಲಿ ಆದಿವಾಸಿಗಳ ನಾಯಕ ತಿಲಕಾ ಮಾಝಿಯನ್ನು ಗಲ್ಲಿಗೇರಿಸಿದರು. ಮುಂದೆ ಭೂ ಒಡೆತನದ ಹಕ್ಕಿಗಾಗಿ ಹಲವಾರು ಆದಿವಾಸಿ ಹೋರಾಟಗಳು ನಡೆದಿವೆ. ಈ ಹೋರಾಟಗಳು ಸಾಮ್ರಾಜ್ಯಶಾಹಿಗಳ ವಾಣಿಜ್ಯಕರಣಕ್ಕಾಗಿ ಅರಣ್ಯಗಳ ಸ್ವಾಧೀನ ನೀತಿಯ ವಿರುದ್ಧ ನಡೆದ ಹೋರಾಟಗಳೆಂದೇ ಪರಿಗಣಿಸಬೇಕು.

ವಾಣಿಜ್ಯ ಬೆಳೆ ನೀತಿ ವಿರೋಧಿ ಹೋರಾಟಗಳ ದೊಡ್ಡ ಪರಂಪರೆಯೇ ನಮ್ಮಲ್ಲಿದೆ. ಅದು ಮೊದಲು ಆರಂಭವಾದದ್ದು ಬಂಗಾಲ ಪ್ರಾಂತದಲ್ಲಿಯೇ, ಮಾರುಕಟ್ಟೆಗಾಗಿ ನೀಲಿ ಬೆಳೆ ಕಡ್ಡಾಯ ಮಾಡಿದ ಬ್ರಿಟಿಷ್ ಆಡಳಿತದ ವಿರುದ್ಧ ೧೮೫೯ರಲ್ಲಿಯೇ ಆರಂಭವಾದ ರೈತರ ಹೋರಾಟ ವಿವಿಧ ರೀತಿಯ ರೈತ ಚಳುವಳಿಗಳಿಗೆ ಚಾಲನೆ ಒದಗಿಸಿತು. ಹೋರಾಟದ ಪರಿಣಾಮವಾಗಿ ಸಾಮ್ರಾಜ್ಯಶಾಹಿಗಳು ವಾಣಿಜ್ಯ ಬೆಳೆ ನೀಲಿ ಬೆಳೆಯುವ ಕಡ್ಡಾಯದ ನೀತಿಯನ್ನು ಹಿಂತೆಗೆದುಕೊಂಡರು. ಹೋರಾಟದ ತೀವ್ರತೆಗೆ ಹೆದರಿ ಗೇಣಿದಾರರ ಹಕ್ಕನ್ನು ಮಾನ್ಯ ಮಾಡುವ ಕಾನೂನು ತರುವ ಅನಿವಾರ್ಯತೆಗೆ ಬ್ರಿಟಿಷ್ ಸರಕಾರ ಒಳಗಾಯಿತು. ಇಂಥ ಹೋರಾಟಗಳನ್ನು ಮಾರುಕಟ್ಟೆ ಅಥವಾ ಕಂಪನಿ ಕೃಷಿ ನೀತಿಯ ವಿರೋಧಿ ಹೋರಾಟಗಳೆಂದೇ ಪರಿಗಣಿಸಬೇಕು.

ಇತಿಹಾಸದುದ್ದಕ್ಕೂ ರಾಜ-ಮಹಾರಾಜರಿಗೆ, ಸಾಮಂತರಿಗೆ ತೆರಿಗೆ ಕೊಡುತ್ತಲೇ ಬಂದ ಗೇಣಿದಾರರು, ರೈತರು ತಮ್ಮ ಪ್ರತಿರೋಧ ವ್ಯಕ್ತಪಡಿಸುತ್ತಲೇ ಬಂದಿದ್ದಾರೆ. ಬ್ರಿಟಿಷರ ಆಡಳಿತದ ಕಾಲದಲ್ಲಿ ೧೮೩೦ರಲ್ಲಿ

ಕರ್ನಾಟಕದಲ್ಲಿ ನಡೆದ ನಗರ ಬಂಡಾಯ ರೈತರ ಸಂಘಟಿತ ಹೋರಾಟದ ಒಂದು ಮಾದರಿ. ಭಾರತದಲ್ಲಿ ಆಗಲೇ ಸರಕಾರದ ತೆರಿಗೆ ನೀತಿ, ಲೇವಾದೇವಿಗಾರರ ಕಿರುಕುಳ, ಭೂಮಾಲೀಕರ ದೌರ್ಜನ್ಯ, ಇವೆಲ್ಲದರ ವಿರುದ್ಧ ರೈತರು ಬಂಡೆದಿದ್ದಾರೆ. ರೈತರು ಸಾಲ ಮಾಡುವ ಅನಿವಾರತೆ ಆಗಲೂ ಇತ್ತು. ಆಗಲೇ ಬ್ರಿಟಿಷ್ ಸರಕಾರ ನೇಮಿಸಿದ ರಾಯಲ್ ಕಮಿಟಿ ವರದಿ ಭಾರತದ 'ರೈತರು ಸಾಲದಲ್ಲಿ ಹುಟ್ಟಿ, ಸಾಲದಲ್ಲಿ ಬದುಕಿ, ಸಾಲದಲ್ಲಿಯೇ ಸಾಯುತ್ತಾರೆ' ಎಂದು ಹೇಳಿದೆ. ಆ ಪರಿಸ್ಥಿತಿ ಈಗಲೂ ನಿಂತಿಲ್ಲ. ಇಂದು ನಮ್ಮ ದೇಶದಲ್ಲಿ ೧೦೨೨೮೯ ಸಾರ್ವಜನಿಕ ಬ್ಯಾಂಕ್‌ಗಳ ಶಾಖೆಗಳಿದ್ದರೂ ಶೇಕಡ ೬೦ರಷ್ಟು ರೈತರು (ಸಣ್ಣ- ಅತಿಸಣ್ಣ) ಖಾಸಗಿ ಲೇವಾದೇವಿಗಾರರಿಂದಲೇ ಸಾಲ ಪಡೆದಿದ್ದಾರೆ.

ಬ್ರಿಟಿಷ್ ಕಾಲದಲ್ಲೂ ಸಾಲಗಾರರಾಗಿದ್ದ ರೈತರು ಅನ್ಯಾಯದ ತೆರಿಗೆ ವಿರುದ್ಧ ನಿರಂತರ ಹೋರಾಡಿದ್ದಾರೆ. ಮೈಸೂರು ರಾಜ್ಯದ ರೈತ ಬಂಡಾಯ, ಮಹಾರಾಷ್ಟ್ರದಲ್ಲಿ ನಡೆದ ದಖನ್ ರೈತ ದಂಗೆಗಳು, ಬಂಗಾಲದ ತೇಬಾಗ್ ಚಳುವಳಿ ಇಂಥ ನೂರಾರು



ಚಳುವಳಿಗಳು ನಡೆದಿವೆ. ಇಂದು ನಮ್ಮ ಸರಕಾರಗಳು ತರುತ್ತಿರುವ ಕಾರ್ಪೊರೇಟ್ ಕೃಷಿ ರೈತರ ಭೂ ಒಡೆತನ, ಬೆಳೆ ಆಯ್ಕೆ, ಬೆಲೆ ನಿಗದಿ ಹಕ್ಕನ್ನು ಕಸಿದುಕೊಳ್ಳುವ ಅಪಾಯಗಳಿವೆ. ಯಾಕೆಂದರೆ ಪ್ರಭುತ್ವಗಳು ಕಂಪನಿ ಜೊತೆಗಿವೆ. ಕೃಷಿಕನ ಜೊತೆಗಿಲ್ಲ. ಭಾರತ ಸರಕಾರ ಯಾವತ್ತೂ ರೈತರ ಪರವಾಗಿಲ್ಲ ಎಂಬ ಸಿನಿಕತನ ನನ್ನದಲ್ಲ. ಆರಂಭದ ದಶಕಗಳಲ್ಲಿ ಸ್ವತಂತ್ರ ಭಾರತದ ಪ್ರಭುತ್ವ ಕೈಗಾರಿಕೆಯಷ್ಟೇ ಕೃಷಿಗೂ ಆದ್ಯತೆ ಕೊಟ್ಟಿದೆ.

**ಸ್ವಾತಂತ್ರ್ಯಾನಂತರದ ಮೂರು ದಶಕಗಳು**

ಬ್ರಿಟಿಷ್ ಆಡಳಿತದ ಆರಂಭದಲ್ಲಿ ಸ್ವಯಂಪ್ರೇರಿತವಾಗಿ ನಡೆದ ರೈತ ಹೋರಾಟಗಳು ೧೯೩೬ರಲ್ಲಿ ಅಖಿಲ ಭಾರತ ಕಿಸಾನ ಸಭಾ ಎಂಬ ಸಂಘಟನೆ ಸ್ಥಾಪನೆಯಾಗುವುದರ ಮೂಲಕ ರಾಷ್ಟ್ರೀಯ ಸಂಘಟನಾ ರೂಪ ಪಡೆದವು. ಅಲ್ಲಿಯವರೆಗೆ ಪ್ರತಿರೋಧದ ನೆಲೆಯಿಂದ ನಡೆದ ಹೋರಾಟಗಳು ಪರಾಯ ಪ್ರಭುತ್ವದ ಆಶಯಗಳನ್ನು ಹೊಂದಿದ್ದವು. ಕೇವಲ ಅನ್ಯಾಯ ಅಕ್ರಮಗಳ ವಿರುದ್ಧ ನ್ಯಾಯಕ್ಕಾಗಿ, ಅವಶ್ಯಕ ಸೌಲಭ್ಯಗಳಿಗಾಗಿ ಮಾತ್ರ ಸೀಮಿತವಾಗದೆ ಉಳುವವನಿಗೆ ಭೂಮಿ ಮತ್ತು ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನು ಮುಂದುವರೆಸಿದವು. ಕಯ್ಯುರು ರೈತ ಹೋರಾಟ, ತೆಲಂಗಾಣ ರೈತರ ಸಶಸ್ತ್ರ ಹೋರಾಟ ಮುಂತಾದವು ಕಮ್ಯುನಿಸ್ಟರ ನಾಯಕತ್ವದಲ್ಲಿ, ಅಂಬೇಡ್ಕರ್ ಅವರ ನಾಯಕತ್ವದಲ್ಲಿ ಮಹಾರಾಷ್ಟ್ರದ ಖೋತಿ ವ್ಯವಸ್ಥೆ ವಿರೋಧಿ ಹೋರಾಟ, ಸಮಾಜವಾದಿಗಳ

ನಾಯಕತ್ವದಲ್ಲಿ ಕರ್ನಾಟಕದ ಕಾಗೋಡು ಗೇಣಿದಾರರ ಸತ್ಯಾಗ್ರಹ ಇಂಥ ಹಲವಾರು ಚಳುವಳಿಗಳು ಸ್ವತಂತ್ರ ಭಾರತದ ಪ್ರಭುತ್ವ ಕೃಷಿ ಮತ್ತು ಕೃಷಿಕರ ಹಿತಾಸಕ್ತಿಯನ್ನು ಆದ್ಯತೆಯ ಮೇಲೆ ಪರಿಗಣಿಸುವಂತೆ ಮಾಡಿದವು.

ಕೃಷಿ ಅಂದರೆ ಕೇವಲ ಕೃಷಿಕನ ಬದುಕಿನ ಜೀವನೋಪಾಯದ ಮಾರ್ಗವಲ್ಲ. ಅದು ದೇಶದ ಆಹಾರ ಭದ್ರತೆಯ ಸಂಗತಿ. ಎರಡನೇ ಜಾಗತಿಕ ಮಹಾಯುದ್ಧದ ನಂತರ ದೇಶದ ಹಲವಾರು ಭಾಗದಲ್ಲಿ ಭೀಕರ ಬರಗಾಲ ವ್ಯಾಪಿಸಿದ ಸಂದರ್ಭದಲ್ಲಿಯೇ ಭಾರತ ಸ್ವಾತಂತ್ರ್ಯ ಪಡೆಯಿತು. ಸ್ವತಂತ್ರ ಭಾರತದ ಮುಂದೆ ತಕ್ಷಣದ ಎರಡು ಸಮಸ್ಯೆಗಳಿದ್ದವು. ದೇಶ ವಿಭಜನೆಯಿಂದ ಉಂಟಾದ ಕೋಮು ಗಲಭೆಗಳನ್ನು ನಿಯಂತ್ರಿಸಿ ಶಾಂತಿ ಕಾಪಾಡುವುದು ಮತ್ತು ದೇಶದ ಆಹಾರ ಕೊರತೆಯನ್ನು ನಿವಾರಿಸಿ ಜನರ ಹಸಿವನ್ನು ನೀಗಿಸುವುದು. ಅಂಥ ಸಂದರ್ಭದಲ್ಲಿ ನಮ್ಮ ಸರಕಾರ ಅಮೆರಿಕದಿಂದ ಪಿ.ಎಲ್. ೪೮೦ ಎಂಬ ಯೋಜನೆಯಡಿ ಗೋಧಿಯನ್ನು ತಂದು ಅಲ್ಪ ಪ್ರಮಾಣದಲ್ಲಿ ಹಸಿವನ್ನು ನೀಗಿಸಲು ಯತ್ನಿಸಿತು. ಐವತ್ತರ ದಶಕದಲ್ಲಿ ನಮ್ಮ ದೇಶದಲ್ಲಿನ ಆಹಾರ ಉತ್ಪಾದನೆ ಕೇವಲ ೫೦ ಮಿ. ಟನ್ ಆಗಿತ್ತು. ಕೃಷಿ ಕ್ಷೇತ್ರ ಬ್ರಿಟಿಷರ ಕಾಲದಲ್ಲಿ ಅವರ ಕೈಗಾರಿಕೆಗೆ ಮತ್ತು ವಾಣಿಜ್ಯಕ್ಕೆ ಮಾತ್ರ ಪೂರಕವಾಗಿ ಬೆಳೆದಿತ್ತು. ಸ್ವತಂತ್ರ ಭಾರತದ ಪ್ರಭುತ್ವ ಕೈಗಾರಿಕೆ ಜೊತೆಗೆ ಕೃಷಿಯನ್ನೂ ಅಭಿವೃದ್ಧಿಪಡಿಸುವ ಅವಶ್ಯಕತೆ ಇತ್ತು. ಕೃಷಿ ಅಭಿವೃದ್ಧಿಯೆಂದರೆ ಸರಕಾರ ಕೃಷಿ ಕ್ಷೇತ್ರದಲ್ಲಿ ಮಧ್ಯಪ್ರವೇಶ ಮಾಡಬೇಕು. ಭೂಸುಧಾರಣೆ



ಮೂಲಕ ದುಡಿವವರಿಗೆ ಭೂಮಿಯನ್ನು ಕೊಟ್ಟು ಗೈರು ಭೂಮಾಲೀಕತ್ವವನ್ನು ನಿರ್ನಾಮ ಮಾಡಬೇಕು. ಒಂದರ್ಥದಲ್ಲಿ ಭೂಮಿ ರಾಷ್ಟ್ರೀಕರಣ, ಅಂದರೆ ನಿಜವಾದ ರೈತನಿಗೆ ಭೂಮಿ ಕೊಡುವುದು. ಉಳುವ ರೈತನಿಗೆ ಪೂರಕವಾದ ವಾತಾವರಣ ನಿರ್ಮಾಣ ಮಾಡುವುದು. ಅಂದರೆ: ಬೀಜ, ಮಣ್ಣು ಪರೀಕ್ಷೆ, ವಿದ್ಯುತ್, ನೀರಾವರಿ, ಗೊಬ್ಬರ, ಕೀಟನಾಶಕ, ಕೃಷಿ ಸಲಕರಣೆ, ಆಧುನಿಕ ಯಂತ್ರಜ್ಞಾನ, ಕೃಷಿ ಶಿಕ್ಷಣ, ಸಂಶೋಧನೆ, ಉಗ್ರಾಣ, ಶೈತ್ಯಾಗಾರ, ಮಾರುಕಟ್ಟೆ, ಸಾಲ ಮತ್ತು ವೈಜ್ಞಾನಿಕ ಬೆಲೆ (ಬೆಂಬಲ ಬೆಲೆ ಅಲ್ಲ) ಇಂಥ ಎಲ್ಲ ಸೌಲಭ್ಯಗಳೂ ಸರಕಾರದ ಆದ್ಯತೆಯ ವಿಷಯವಾಗಬೇಕು. ಅದೇ ಸಂದರ್ಭದಲ್ಲಿ ರೈತ ಸಮುದಾಯದ ಆರೋಗ್ಯ, ವಸತಿ, ಶಿಕ್ಷಣ ಮುಂತಾದ ಅವಶ್ಯಕತೆಗಳನ್ನು ಸರಕಾರ ಪೂರೈಸಬೇಕು. ಆಗ ಮಾತ್ರ ಕೃಷಿ ಕ್ಷೇತ್ರ ಅಭಿವೃದ್ಧಿ ಹೊಂದಲು ಸಾಧ್ಯ. ಈ ನಿಟ್ಟಿನಲ್ಲಿ ಭಾರತದ ಪ್ರಭುತ್ವ ಆರಂಭದ ಮೂರು ದಶಕದಲ್ಲಿ ಪ್ರಯತ್ನವನ್ನಂತೂ ಮಾಡಿದೆ.

ಸ್ವತಂತ್ರ ಭಾರತದ ಪ್ರಭುತ್ವದ ಮೊದಲ ಮೂರು ದಶಕಗಳ ಅವಧಿ ಕಲ್ಯಾಣ ರಾಜ್ಯದ ಗುರಿಯನ್ನೇ ಹೊಂದಿತ್ತು ಎಂದು ಹೇಳಬಹುದು. ಕೈಗಾರಿಕಾ ಕ್ಷೇತ್ರದಲ್ಲಿ ಸಾರ್ವಜನಿಕ ವಲಯವನ್ನು ಬಲಪಡಿಸಿದ್ದು ಪ್ರಮುಖ ಸಾಧನೆ. ಹಾಗೇ ಕೃಷಿ ಕ್ಷೇತ್ರದಲ್ಲಿ ಉಳುವವನಿಗೆ ಭೂಮಿ ಕಾನೂನು ತಂದದ್ದು ನಿರೀಕ್ಷಿಸಿದಷ್ಟು

ಯಶಸ್ವಿಯಾಗದಿದ್ದರೂ ಅದು ಗಣನೀಯ ಸಾಧನೆಯೆ, ಬರ, ಗೇಣಿ ಸಮಸ್ಯೆ, ಆರ್ಥಿಕ ದುಸ್ಥಿತಿ ಹಲವಾರು ಪ್ರತಿಕೂಲ ವಾತಾವರಣದ ಮಧ್ಯೆಯೂ ೧೯೬೦ರಲ್ಲಿ ಕೃಷಿ ಕ್ಷೇತ್ರ ದೇಶದ ಒಟ್ಟು ಆಂತರಿಕ ಉತ್ಪನ್ನಕ್ಕೆ (ಜಿಡಿಪಿ) ಶೇಕಡ ೫೧.೪ರಷ್ಟು ಕೊಡುಗೆ ಕೊಟ್ಟಿದೆ. (ಇಂದು ಅದು ಶೇಕಡಾ ೧೩ಕ್ಕಿಳಿದಿದೆ). ಪಂಚವಾರ್ಷಿಕ ಯೋಜನೆಗಳು ದೇಶದ ಅಭಿವೃದ್ಧಿಗೆ ಪೂರಕವಾದವು. ಈ ಯೋಜನೆಗಳಲ್ಲಿ ಕೃಷಿ ಮತ್ತು ಗ್ರಾಮೀಣ ವಲಯಕ್ಕೆ ಆದ್ಯತೆ ಕೊಡಲಾಗಿತ್ತು. ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಯೋಜನಾ ಗಾತ್ರದ ಶೇಕಡಾ ೧೬.೪ರಷ್ಟು ಕೃಷಿಗೆ ವಿನಿಯೋಗಿಸಲಾಗಿತ್ತು. (ಇನ್ನೂ ಹೆಚ್ಚಿಸಬೇಕೆಂಬ ಬೇಡಿಕೆ ಆಗಲೂ ಇತ್ತು) ನಂತರದ ವರ್ಷಗಳಲ್ಲಿ ಗ್ರಾಮೀಣವಲಯ ನಿರ್ಲಕ್ಷ್ಯಕ್ಕೊಳಗಾಗಿ ೧೨ನೇ ಪಂಚವಾರ್ಷಿಕ ಯೋಜನೆ ಹೊತ್ತಿಗೆ ಅದು ಶೇಕಡಾ ೪.೭ಕ್ಕಿಳಿದು ಈಗ ಇನ್ನೂ ಕೆಳಕ್ಕೆ ಬಂದಿದೆ.

೧೯೬೯ರ ನಂತರ ಬ್ಯಾಂಕ್ ಮತ್ತು ವಿಮಾದಂಥ ಆರ್ಥಿಕ ವಲಯಗಳನ್ನು ರಾಷ್ಟ್ರೀಕರಿಸಿದ್ದು ಕೃಷಿ ವಲಯಕ್ಕೆ ಅನುಕೂಲವಾಗಿತ್ತು. ಬಡರೈತರಿಗಲ್ಲದಿದ್ದರೂ ಮಧ್ಯಮ ಮತ್ತು ದೊಡ್ಡ ಹಿಡುವಳಿದಾರರಿಗೆ ಸಾಂಸ್ಥಿಕ ಹಣಕಾಸು ನೆರವು ದೊರೆತು ಕೃಷಿ ಕ್ಷೇತ್ರ ಮುಂದಡಿ ಇಡಲು ಸಾಧ್ಯವಾಯಿತು. ಭಾರತ ಸರಕಾರ ರೂಪಿಸಿದ ಪಂಚವಾರ್ಷಿಕ ಯೋಜನೆ ಮತ್ತು ಹಸಿರು ಕ್ರಾಂತಿ ಭಾರತ ಸ್ವಾವಲಂಬನೆಯೆಡೆಗೆ ಚಲಿಸಲು ಮಹತ್ವದ ಕೊಡುಗೆಗಳು. ಹಸಿರು ಕ್ರಾಂತಿಯ ಕುರಿತು ಭಿನ್ನಮತಗಳೂ ಇವೆ. ಕೃಷಿ ಯೋಜನೆಯ ಅವಧಿಯನ್ನು ಹೀಗೆ ನೋಡಬಹುದು:

ಹಸಿರು ಕ್ರಾಂತಿ ಪೂರ್ವದ ಕಾಲ - ೧೯೫೦-೧೯೬೦

ಹಸಿರು ಕ್ರಾಂತಿಯ ಕಾಲ - ೧೯೬೦-೧೯೭೦ (ಮಧ್ಯ)

ಹಸಿರು ಕ್ರಾಂತಿಯ ನಂತರದ ಕಾಲ - ೧೯೮೦-೧೯೯೧

ಉದಾರೀಕರಣದ ನಂತರದ ಕಾಲ - ೧೯೯೧ರ ನಂತರ

ಭಾರತದ ಪ್ರಭುತ್ವ ಬಂಡವಾಳಶಾಹಿಪರ ಎಂಬ ವಾದವಿದ್ದರೂ ಎಂಬತ್ತರ ದಶಕದವರೆಗೆ ನಿರೀಕ್ಷಿತವಲ್ಲದಿದ್ದರೂ ತಕ್ಕಮಟ್ಟಿಗೆ ಗ್ರಾಮೀಣ ಅಭಿವೃದ್ಧಿ ಮತ್ತು ಕೃಷಿ ವ್ಯವಸ್ಥೆ ಸುಧಾರಣೆಯ ಪರವಾಗಿತ್ತು. ೧೯೬೯ರಲ್ಲಿ ಆಳುವ ಪಕ್ಷವಾದ ಕಾಂಗ್ರೆಸ್‌ನಲ್ಲಿ ಒಡಕುಂಟಾದಾಗ ಆಳುವ ವರ್ಗ ಸುಧಾರಣಾವಾದಿ ನಿಲುವು ತಳೆಯುವುದು ಅನಿವಾರವಾಗಿತ್ತು. ಹಲವಾರು ಜನಪರ ಯೋಜನೆಗಳು ಜಾರಿಯಾದವು. ಎಪ್ಪತ್ತರ ದಶಕದ ಕೊನೆಗೆ ಬದಲಾದ ಆಡಳಿತ ವರ್ಗ ಪ್ರಭುತ್ವವನ್ನು ಬಲಮುಖಿಯಾಗಿ ನಿಲ್ಲಿಸಿತು. ಹಸಿರುಕ್ರಾಂತಿಯ ನಂತರದ ೧೯೮೦ರಿಂದ ೧೯೯೦ ಒಂದು ರೀತಿಯಲ್ಲಿ ಸ್ಥಿತ್ಯಂತರದ, ಬಂಡವಾಳಶಾಹಿ ವ್ಯವಸ್ಥೆ ಮೇಲುಗೈ ಪಡೆದ ಕಾಲ. ಹೊಸ ಆರ್ಥಿಕ ನೀತಿಯ ಹೆಸರಿನಲ್ಲಿ ಉದ್ಯಮ ಮತ್ತು ಉದ್ಯಮಿಗಳ ಹಿತಾಸಕ್ತಿಗೆ ಪೂರಕವಾಗಿ ಭಾರತದ ಪ್ರಭುತ್ವ ವಾಲಿತು. ೧೯೯೧ರ ಉದಾರೀಕರಣದ ನಂತರ ಭಾರತದ ಪ್ರಭುತ್ವ ವಿಶ್ವ ವಾಣಿಜ್ಯ ಸಂಸ್ಥೆಯ ನಿರ್ದೇಶನಕ್ಕೊಳಪಟ್ಟು ಸಂಪೂರ್ಣವಾಗಿ ಕಲ್ಯಾಣ ರಾಜ್ಯದಿಂದ ಮತ್ತೆ ಕಂಪನಿ ರಾಜ್ಯವಾಗಿ ಪರಿವರ್ತನೆಯಾಯಿತು.

ಜಾಗತೀಕರಣ, ಖಾಸಗೀಕರಣ, ಉದಾರೀಕರಣ ಈ ತ್ರಿಕರಣದ ನೀತಿಗಳು ನವಸಾಮ್ರಾಜ್ಯಶಾಹಿ ಶಕ್ತಿಗಳು ಹೆಣೆದ ಬಲೆಗಳು. ಬ್ರಿಟಿಷರು ಹೋದಮೇಲೆ ಬಹುರಾಷ್ಟ್ರೀಯ ಕಂಪನಿಗಳು ಮತ್ತೆ ಭಾರತದ ಪ್ರಭುತ್ವವನ್ನು ನಿಯಂತ್ರಣಕ್ಕೆ ತೆಗೆದುಕೊಂಡವು. ಕಾಂಗ್ರೆಸ್ ಪಕ್ಷ ಸ್ವಾತಂತ್ರ್ಯ ಹೋರಾಟದಲ್ಲಿ ಮುಂಚೂಣಿ ಪಾತ್ರ ವಹಿಸಿದ್ದರೆ, ಅದೇ ಕಾಂಗ್ರೆಸ್ ಪಕ್ಷ ೧೯೯೧ರಲ್ಲಿ ಜಾಗತೀಕರಣದ ನೀತಿಗೆ ಮಣೆ ಹಾಕಿ ಸ್ವಾತಂತ್ರ್ಯ, ಸ್ವಾವಲಂಬನೆಯನ್ನು ನಾಶಮಾಡಿತು. ಕಾಂಗ್ರೆಸ್ ನೀತಿಗಳನ್ನು ಖಂಡಿಸಿ ಇಂದು ಅಧಿಕಾರಕ್ಕೆ ಬಂದ ಬಿಜೆಪಿ ಅದೇ ನೀತಿಗಳನ್ನು ಇನ್ನೂ ತೀವ್ರವಾಗಿ ಜಾರಿ ಮಾಡುತ್ತಿದೆ. ಅಂದು ನರಸಿಂಹರಾವ್, ಮನಮೋಹನ ಸಿಂಗ್ ಅವರಿಂದ ಆರಂಭವಾದ ಭಾರತದ 'ನವ ಗುಲಾಮಗಿರಿ'ಯ ಪ್ರಭುತ್ವ ಇಂದು ನರೇಂದ್ರ ಮೋದಿಯವರಿಂದ ವೈಭವೀಕರಿಸಲ್ಪಡುತ್ತಿದೆ. ೧೯೯೧ರಿಂದ ಇಂದಿನವರೆಗೆ, ಅಂದರೆ ಅಂದಿನ ಪ್ರಧಾನಿ ನರಸಿಂಹರಾಯರಿಂದ ಇಂದಿನ ಪ್ರಧಾನಿ ನರೇಂದ್ರ ಮೋದಿಯವರ ವರೆಗಿನ ಆಡಳಿತದಲ್ಲಿ, ನೇಗಿಲಯೋಗಿಯ ಗತಿ ಏನಾಗಿದೆ ಎಂದು ಗಮನಿಸಬೇಕು.

**ಅಳುವಾ ಯೋಗಿಯ ನೋಡಲ್ಲಿ**

ಉದಾರೀಕರಣದ ನೀತಿಯ ಪರಿಣಾಮವಾಗಿ ೧೯೯೫ರಿಂದ ಇಂದಿನವರೆಗೆ ಮೂರೂವರೆ ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ೧೯೯೮ರಲ್ಲಿ ಬೀಜೋತ್ಪಾದನೆ ಕ್ಷೇತ್ರವನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಮುಕ್ತವಾಗಿಸಲಾಯಿತು. ಆ ವರ್ಷ ಭಾರತದಲ್ಲಿ ೧೩೬೨೨ ರೈತರು ಆತ್ಮಹತ್ಯೆ ಮಾಡಿಕೊಂಡರು. ಅದು ಕಾಕತಾಳೀಯವಲ್ಲ. ಆತ್ಮಹತ್ಯೆಯ



ವರದಿಗಳು ಮುಂದುವರೆದಿವೆ. ನಮ್ಮ ಈಗಿನ ಪ್ರಧಾನಿ ನರೇಂದ್ರ ಮೋದಿಯವರು ರೈತರ ಸಾಲ ಮನ್ನಾ ಮಾಡುವುದಿಲ್ಲ ಎಂದು ಘೋಷಿಸಿದ್ದಾರೆ. ಆದರೆ ಉದ್ಯಮಿಗಳು ಸಾರ್ವಜನಿಕ ಬ್ಯಾಂಕ್‌ನಲ್ಲಿಟ್ಟ ಜನರ ಹಣವನ್ನು ಸಾಲ ಪಡೆದು ಮರುಪಾವತಿ ಮಾಡದೇ ಇದ್ದಾಗ ಅದನ್ನು ಮನ್ನಾ ಮಾಡುತ್ತಾರೆ, ಅದೂ ಲಕ್ಷ ಕೋಟಿಗಳಲ್ಲಿ, ರೈತ ಬಳಸುವ ಕೃಷಿ ಸಲಕರಣೆಗಳ ಮೇಲೆ, ಉತ್ಪನ್ನಗಳ ಮೇಲೆ ಟ್ಯಾಕ್ಸ್ ಹೆಚ್ಚಿಸುತ್ತಾರೆ. ಕಾರ್ಪೊರೇಟ್ ಕಂಪನಿಗಳಿಗೆ ಐದು ಲಕ್ಷ ಕೋಟಿಯಷ್ಟು ತೆರಿಗೆ ರಿಯಾಯಿತಿ ಕೊಡುತ್ತಾರೆ. ಕೃಷಿ ಕ್ಷೇತ್ರಕ್ಕೆ ನಿಗದಿತವಾದ ೧೦ ಲಕ್ಷ ಕೋಟಿ ಸಾಲದ ಮೊತ್ತದಲ್ಲಿ ಶೇ. ೬೦ರಷ್ಟು ಕೃಷಿ ಉದ್ಯಮಿಗಳಿಗೆ ನಿಯಮ ಬಾಹಿರವಾಗಿ ಕೊಡುತ್ತಾರೆ. ಈ 'ಬಡ' ಉದ್ಯಮಿಗಳು ಯಾರೆಂದರೆ ಗೋದ್ರೇಜ್, ಐಟಿಸಿ, ಪೆಪ್ಸಿ, ಟಾಟಾ ಮುಂತಾದವರು. ಮುಂದೆ ಆ ಸಾಲವನ್ನೂ ಮನ್ನಾ ಮಾಡುತ್ತಾರೆ. ಅಮೆರಿಕ ನಾಯಕತ್ವದ ವಿಶ್ವವ್ಯಾಪಾರಿ ಸಂಘಟನೆಯ ಅಪ್ಪಣೆಯಂತೆ ಭಾರತದ ರೈತನಿಗೆ ಸಹಾಯಧನ ಕಡಿಮೆ ಮಾಡುತ್ತಾರೆ. ಈಗ ನಮ್ಮ ರೈತನಿಗೆ ಸಿಗುವ ಸಹಾಯಧನ ತಲಾ ರೂ. ೧೫,೩೩೯. ಈ ಸಹಾಯಧನವೂ ಕಂಪನಿಗಳ ಪಾಲಾಗುತ್ತದೆ. ಭಾರತದ ರೈತನಿಗೆ ಸಹಾಯಧನ ಕಡಿಮೆ ಮಾಡಲು ಹೇಳುವ ಅಮೆರಿಕ ತನ್ನ ರೈತರಿಗೆ ತಲಾ ೬ ಲಕ್ಷ ೪೧ ಸಾವಿರ ಸಹಾಯಧನ ಕೊಡುತ್ತದೆ. ಯೂರೋಪ್ ದೇಶಗಳಲ್ಲಿ ಈ ಸಹಾಯಧನ ಸರಾಸರಿ ತಲಾ ೧ ಲಕ್ಷ ೩೨ ಸಾವಿರ ಇದೆ. ಭಾರತದ ಬ್ಯಾಂಕುಗಳಲ್ಲಿರುವುದು ಸಾಮಾನ್ಯ ಜನರ ಹಣ. ಆ ಹಣವನ್ನು ಟಾಟಾ, ಅದಾನಿ, ಅಂಬಾನಿ, ಮಲ್ಯ, ನೀರವ್ ಮೋದಿಯಂಥ ಕಾರ್ಪೊರೇಟ್ ಕುಳಗಳು ಸುಲಭವಾಗಿ ಲಪಟಾಯಿಸುತ್ತಾರೆ. ೨೦೧೪ರ ವಿಶ್ವ ಬ್ಯಾಂಕ್ ವರದಿ ಹೇಳುತ್ತದೆ: 'ಭಾರತದಲ್ಲಿ ಶೇಕಡಾ ೮೩ ರೈತರಿಗೆ ಸಾಂಸ್ಥಿಕ ಮೂಲಗಳ ಸಾಲ ಸಿಗುವುದಿಲ್ಲ' ಎಂದು. ಬೆಳೆ ವಿಮೆ ಎನ್ನುವುದೊಂದು ಭ್ರಮೆ. ಪ್ರಧಾನಮಂತ್ರಿ ಫಸಲ್ ಬಿಮಾ ಯೋಜನೆ ವಿಮಾ ಕಂಪನಿಗಳ ಅದರಲ್ಲೂ ಖಾಸಗಿ ವಿಮಾ ಕಂಪನಿಗಳ ತಿಜೋರಿ ತುಂಬಿಸಿದ್ದು ನಮ್ಮ ಕಣ್ಣ ಮುಂದಿದೆ. ಪ್ರೀಮಿಯಂ ತುಂಬಿದ ರೈತರಿಗೆ ಅವರು ಕಟ್ಟಿದಷ್ಟೂ ಹಣ ಬರಲಿಲ್ಲ. ಕೈಗಾರಿಕೆಗಳಿಗೆ ನಿರಂತರ ಹರಿಯುವ ವಿದ್ಯುತ್ ಕೃಷಿಗೆ ಸಿಗುವುದು ಶೇಕಡಾ ೨೧ರಿಂದ ಶೇಕಡಾ ೨೪ ಮಾತ್ರ ಕಳೆದ ಹತ್ತು

ವರ್ಷಗಳಲ್ಲಿ ಗ್ರಾಮೀಣ ಅಭಿವೃದ್ಧಿಗಾಗಿನ ವೆಚ್ಚ ಶೇಕಡಾ ೬೦ ಕುಸಿತಗೊಂಡಿದೆ. ಆತ್ಮಹತ್ಯೆ ಮಾಡಿಕೊಂಡ ಮೂರೂವರೆ ಲಕ್ಷ ರೈತರಲ್ಲಿ ಶೇಕಡಾ ೭೮ ಸಣ್ಣ ಅತಿಸಣ್ಣ ರೈತರು (ಇವರಲ್ಲಿ ಶೇಕಡಾ ೭೦ರಷ್ಟು ಜನ ೩೦ರಿಂದ ೫೦ರ ವಯೋಮಾನದವರು). ಅವರು ಕೃಷಿಭೂಮಿಯಿಂದ ಹೊರಬೀಳುವ ಅಪಾಯದಲ್ಲಿದ್ದಾರೆ. ರೈತರ ಆತ್ಮಹತ್ಯೆಗೆ ಕಾರಣಗಳನ್ನು ಕೃಷಿ ಸಾಲದ ಜೊತೆಗೆ ಸಾಮಾಜಿಕ ಸಮಸ್ಯೆಗಳೂ ಇವೆಯೆಂದು ನಮ್ಮ ಪಂಡಿತರು ಹೇಳುತ್ತಾರೆ. ಅಂದರೆ ನಮ್ಮ ರೈತ ಕೃಷಿಯನ್ನು ನಂಬಿ ಸಾಮಾಜಿಕವಾಗಿ ತಲೆಯೆತ್ತಿ ನಿಲ್ಲಲಾಗದಂಥ ಸ್ಥಿತಿಯಲ್ಲಿದ್ದಾನೆ. ಆ ಕಾರಣಕ್ಕೆ ಅವನು ಕೃಷಿಯನ್ನು ತೊರೆಯಲು ಸಿದ್ಧನಾಗಿದ್ದಾನೆ. ಸಾರ್ವಜನಿಕ ಬ್ಯಾಂಕ್‌ಗಳಲ್ಲಿ ಜನರಿಟ್ಟ ಹಣವನ್ನು ಸಾಲವಾಗಿ ಪಡೆದು, ಸಾಲ ಮರುಪಾವತಿಸದೆ ಮೋಸ ಮಾಡಿದ ಅದಾನಿ, ಅಂಬಾನಿಯಂಥವರು ಜಗತ್ತಿನ ಸಿರಿವಂತರ ಪಟ್ಟಿಯಲ್ಲಿದ್ದಾರೆ. ಇಷ್ಟೆಲ್ಲ ಆದರೂ ದೇಶದ ಉದ್ಯೋಗಗಳಲ್ಲಿ ಕೃಷಿಕ್ಷೇತ್ರ



ಶೇಕಡಾ ೫೨ರಷ್ಟು ಉದ್ಯೋಗಗಳನ್ನು ಕೊಟ್ಟಿದೆ. ಆದರೆ ಇದ್ದ ಆ ನೆಲವನ್ನೂ ಕಳೆದುಕೊಂಡು ರೈತ ವಲಸೆ ಹೋಗುತ್ತಿದ್ದಾನೆ.

ಭಾರತದ ಕೃಷಿಭೂಮಿ ೧೯೮೦-೮೧ರಲ್ಲಿ ೧೮೫.೦೯ ಮಿಲಿಯನ್ ಹೆಕ್ಟೇರ್ ಇತ್ತು. ಇಂದು ಅದು ೧೫೦ ಮಿಲಿಯನ್ ಹೆಕ್ಟೇರ್‌ಗೆ ಇಳಿದಿದೆ. ಹೆಚ್ಚಿನ ಭೂಮಿ ಉದ್ಯಮಿಗಳಿಗೆ, ನಗರಾಭಿವೃದ್ಧಿಗೆ ಹೋಗಿದೆ. ಒಂದು ಕಡೆ ರೈತ ಭೂಮಿ ಕಳೆದುಕೊಂಡು ಬೀದಿಗೆ ಬರುತ್ತಿದ್ದಾನೆ. ಇನ್ನೊಂದು ಕಡೆ ಕಂಪನಿ ಕೃಷಿಗಾಗಿ ಸಿದ್ಧತೆ ನಡೆದಿದೆ. ಅಂದು ಉಳುವವನಿಗೆ ಭೂಮಿ, ಇಂದು ಆಳುವವನಿಗೆ ಭೂಮಿ. ಆಳುವವನು ಭೂಸ್ವಾಧೀನದ ಮೂಲಕ ಆ ಭೂಮಿಯನ್ನು ಕಂಪನಿಗಳಿಗೆ ಕೊಡುತ್ತಾನೆ. ಅದಕ್ಕಾಗಿ ಮೋದಿಯವರು ಹೊಸ ಭೂಸ್ವಾಧೀನ ಕಾಯ್ದೆಯನ್ನು ಸಿದ್ಧಪಡಿಸಿದ್ದಾರೆ. ಅದನ್ನಿನ್ನೂ ಜಾರಿಗೆ ತರಲಾಗಿಲ್ಲ ಎಂಬ ಬೇಸರ ಇದೆ ಅವರಿಗೆ ಇದನ್ನೇ ಕಲ್ಯಾಣ ರಾಜ್ಯ ಬದಲಾಗಿ ಕಂಪನಿ ರಾಜ್ಯ ನಿರ್ಮಾಣ ಎನ್ನುವುದು. ಈಗ ಹಾಡಬೇಕಿದೆ.... "ಅಳುವಾ ಯೋಗಿಯ ನೋಡಲ್ಲಿ.'

**ನಾಳಿನ ಭಾರತ**

ನಮ್ಮ ನೇಗಿಲ ಯೋಗಿಯ ನೇಗಿಲನ್ನೂ ಕಸಿದು, ಭೂಮಿಯನ್ನೂ ಕಸಿದು ಅವನನ್ನು 'ಫಾರ್ಮರ್ ಪ್ರೊಡ್ಯೂಸರ್ ಕಂಪನಿ' ಮಾಲೀಕನನ್ನಾಗಿ ಮಾಡಲು ಹೊರಟಿದ್ದಾರೆ ನಮ್ಮ ಪ್ರಧಾನಿಗಳು. ಅವರು ಹೇಳಿದ ಪ್ರಕಾರ ೨೦೨೨ಕ್ಕೆ ನಮ್ಮ ರೈತರ ಆದಾಯ ದ್ವಿಗುಣವಾಗುತ್ತದೆ ಎಂದರೆ ಮುಂದೆ ಕೃಷಿಕ್ಷೇತ್ರಕ್ಕೆ ಬರುವ ಕಾರ್ಪೊರೇಟ್

ಕಂಪನಿಗಳ ಆದಾಯ ದ್ವಿಗುಣ ಎಂದರ್ಥ. ಈಗಾಗಲೇ ಅಂಬಾನಿ ಕೊತ್ತಂಬರಿ, ಕರಿಬೇವು ಮಾರುತ್ತಿದ್ದಾನೆ (ರಿಲಯನ್ಸ್ ಫ್ರೆಶ್), ಐಟಿಸಿ ಕಂಪನಿ ಗೋಧಿ ಹಿಟ್ಟು (ಆಶೀರ್ವಾದ) ಮಾರುತ್ತಿದೆ, ಪೆಪ್ಸಿಯವನು ಚಿಪ್ಸ್ ಮಾರುತ್ತಿದ್ದಾನೆ. ಗೋದ್ರೆಜ್, ಕಾರ್ಗಿಲ್, ಮನ್ಸಾಂಟೋ, ವಾಲ್ ಮಾರ್ಟ್.... ಇಂಥ ರೈತರ ದೊಡ್ಡ ಗುಂಪೇ ಸಿದ್ಧವಾಗಿ ನಿಂತಿದೆ. ಭಾರತದಲ್ಲಿ ಒಕ್ಕಲುತನ ಮಾಡಲು, ಕೃಷಿ ಅಭಿವೃದ್ಧಿ ಪಡಿಸಲು ಅವರನ್ನೆಲ್ಲಾ ಆಹ್ವಾನಿಸಿ, ಅಡೆತಡೆ ತೆಗೆದು, ಮೈದಾನ ನೆಲಸಮ ಮಾಡಿ ನಮ್ಮ ನೇಗಿಲಯೋಗಿಯನ್ನು ಅವರೊಡನೆ ಕುಸ್ತಿಯಾಡಲು, ಅಂತರರಾಷ್ಟ್ರೀಯ ಕೃಷಿ ಕ್ರೀಡಾಕೂಟ ನಡೆಸಲು ಅನುವಾಗುವಂತೆ ನಮ್ಮ ಪ್ರಧಾನಿಗಳು ಹೊಸ ಕಾನೂನು ತರುತ್ತಿದ್ದಾರೆ.

ಅಮೆರಿಕದಲ್ಲಿ ಕಾರ್ಪೊರೇಟ್ ಕಂಪನಿಗಳು ಕೃಷಿಕ್ಷೇತ್ರಕ್ಕೆ ನುಗ್ಗುವಾಗ ೧೮೩೦ರಲ್ಲಿಯೇ ಅಲ್ಲಿ ರೈತರ ರಕ್ಷಣೆಗಾಗಿ ಕಾನೂನು ತರಲಾಯಿತು. ಕಾಲಕಾಲಕ್ಕೆ ಹೊಸ ಕಾನೂನು ತರಲಾಗುತ್ತಿದೆ. ಆದರೆ ನಮ್ಮ ದೇಶದಲ್ಲಿ 'ಕಂಪನಿ ಕೃಷಿ'ಯನ್ನು ತರಲು ರೈತನನ್ನು ಭೂಮಿಯಿಂದ ಹೊರದಬ್ಬಲು ಕಾನೂನು ತರಲಾಗುತ್ತಿದೆ. ಅಮೆರಿ ಪ್ರಭುತ್ವ ಜಗತ್ತನ್ನೇ ಲೂಟಿ ಮಾಡಿದರೂ ತನ್ನ ಪ್ರಜೆಗಳಿಗೆ ಹೆದರುತ್ತದೆ. ಲೂಟಿಯ ಒಂದಷ್ಟು ಪಾಲನ್ನು ಚೆಲ್ಲಿ ಅವರನ್ನು ಸಂತೈಸುತ್ತದೆ. ಆದರೆ ನಮ್ಮಲ್ಲಿ ಒಂದು ಬಣ ಹಿಂದುತ್ವದ ಘೋಷಣೆ ಹೇಳಿ ಅಧಿಕಾರ ಹಿಡಿಯುತ್ತದೆ, ಇನ್ನೊಂದು ಬಣ ಸೆಕ್ಯೂಲರಿಸಂ ಹೆಸರು ಹೇಳಿ ಅಧಿಕಾರ ಹಿಡಿಯಲು ಯತ್ನಿಸುತ್ತದೆ. ಇವರಿಬ್ಬರ ಗುರಿ ಒಂದೇ,



ಕಾರ್ಪೊರೇಟ್ ಕಂಪನಿಗಳ ಗುಲಾಮಗಿರಿ. ಕೆಂಪು ಕೋಟೆಯನ್ನು ಕೊಟ್ಟಾಯ್ತು. ಇನ್ನುಳಿದಿರುವುದು ಪಾರ್ಲಿಮೆಂಟ್ ಭವನ, ಇವರನ್ನು ಆಯ್ಕೆಮಾಡುವ ರೈತರಾದಿಯಾಗಿ ಸಮಗ್ರ ಪ್ರಜೆಗಳು ರಾಮಮಂದಿರ ಬೇಕಾ ಬೇಡವಾ, ಮಾಂಸ ತಿನ್ನೋದು ಸರೀನಾ ತಪ್ಪಾ, ಮೋದಿ ಬೆಸ್ಟಾ, ರಾಹುಲ್ ಬೆಸ್ಟಾ, ಗಂಭೀರ ಚರ್ಚೆಯಲ್ಲಿದ್ದಾರೆ.

**ಅಗ್ರಿ ಬಿಸಿನೆಸ್ ಬದಲು ಅಗ್ರಿಕಲ್ಚರ್**

ರೈತ ಸಮುದಾಯ, ದೇಶದ ಜನತೆ, ಜನಪರ ಹೋರಾಟಗಾರರು, ರಾಜಕೀಯ ಚಿಂತಕರು, ಕೃಷಿ ತಜ್ಞರು, ಅರ್ಥಶಾಸ್ತ್ರಜ್ಞರು, ವಿಜ್ಞಾನಿಗಳು ಗಂಭೀರವಾಗಿ ಚಿಂತಿಸಬೇಕಿದೆ. ಭಾರತ ತನ್ನ ಇತಿಹಾಸದಲ್ಲಿ ಭೀಕರ ಬರಗಾಲಗಳನ್ನು ಕಂಡಿದೆ. ಡೋಗಿ ಬರ, ಸಜ್ಜೆಬರ, ಹಸಿಬರ, ಒಣಬರ ಎಂಥ ಬರಗಾಲ ಬಂದರೂ ನಮ್ಮ ರೈತರು ಬದುಕಲು ಹೋರಾಡಿದ್ದಾರೆ, ವಲಸೆ ಹೋಗಿದ್ದಾರೆ, ಹುಲ್ಲು ತಿಂದಿದ್ದಾರೆ, ಸತ್ತ ಪಕ್ಷಿ, ಪ್ರಾಣಿಗಳನ್ನು, ಅಷ್ಟೇ ಏಕೆ ಹಸಿವಿನಿಂದ ಸತ್ತ ಮನುಷ್ಯರನ್ನೂ ಸಹ ತಿಂದು ಬದುಕಲು ಪ್ರಯತ್ನಿಸಿದ್ದಾರೆ. ೭೦ರ ದಶಕದವರೆಗೂ ನಮ್ಮ

ಪೀಳಿಗೆಯವರು ಭೀಕರ ಬರಗಾಲವನ್ನು ನೋಡಿದ್ದೇವೆ. ಅಂಥ ಸಂದರ್ಭದಲ್ಲಿಯೂ ನಮ್ಮ ರೈತರು ಸರಕಾರಗಳ ಸಹಾಯವನ್ನೂ ನಿರೀಕ್ಷಿಸದೆ ಬದುಕಿಗಾಗಿ ಹೋರಾಡಿದ್ದಾರೆ. ಆತ್ಮಹತ್ಯೆ ಮಾಡಿಕೊಂಡಿರಲಿಲ್ಲ. ಆದರೆ ಈಗ ಎರಡೂವರೆ ದಶಕದಲ್ಲಿ ಅಂಥ ಬರಗಾಲ ಗಳಿಲ್ಲದಿದ್ದರೂ ಮೂರೂವರೆ ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದಕ್ಕೆ ಕಾರಣ 'ಅಗ್ರಿಕಲ್ಚರ್' ಎನ್ನುವ ಪದ, ವಿಧಾನ ಹೋಗಿ ಈಗ 'ಅಗ್ರಿ ಬಿಸಿನೆಸ್' ಎಂಬ ಪದ, ವಿಧಾನ ಜಾರಿಯಾಗಿರುವುದು ಮತ್ತು ವಾಣಿಜ್ಯ ನೀತಿ ಕೃಷಿಯ ಪ್ರಮುಖ ನೀತಿಯಾಗಿರುವುದು. 'ಕೃಷಿ ಸಂಸ್ಕೃತಿ' ಸಮಾಜಮುಖಿಯಾಗಿರುತ್ತದೆ, ಜನಪರವಾಗಿರುತ್ತದೆ. 'ಕೃಷಿ ವ್ಯಾಪಾರ' ಮಾರುಕಟ್ಟೆ ಮುಖಿಯಾಗಿರುತ್ತದೆ. ಉದ್ಯಮಿಗಳ ಪರವಾಗಿರುತ್ತದೆ. ಕೃಷಿ ವ್ಯಾಪಾರ ಕೃಷಿಕನ ಬದುಕಿನ ಒಂದು ಭಾಗವೇ ಹೊರತು ವ್ಯಾಪಾರವೇ ಕೃಷಿಕನ ಬದುಕಿನ ಗುರಿಯಲ್ಲ. ಕೃಷಿ ವೈಜ್ಞಾನಿಕ, ತಾಂತ್ರಿಕ, ಹೊಸ ಸಂಶೋಧನೆಗಳ ಪರಿಣಾಮವಾಗಿ ಕೈಗಾರಿಕೆಗಳ ರೀತಿ ಬೆಳೆಯಲೇಬೇಕು, ನಿಜ. ಆದರೆ ಅದನ್ನು ಬೆಳೆಸುವವನು ನಮ್ಮ ರೈತನೇ ಆಗಬೇಕು, ದೇಶ ವಿದೇಶದ ಬಹುರಾಷ್ಟ್ರೀಯ ಕಂಪನಿಗಳಲ್ಲ.

ನಮ್ಮ ರೈತರು ಜಾತಿ, ಧರ್ಮ, ಕಾರ್ಪೊರೇಟ್ ಕಂಪನಿಗಳ ಪರವಾಗಿರುವ ರಾಜಕೀಯ ಪಕ್ಷಗಳನ್ನು ಧಿಕ್ಕರಿಸಿ 'ಅಗ್ರಿಕಲ್ಚರ್' (ಕೃಷಿ ಸಂಸ್ಕೃತಿ) ಉಳಿಸಬೇಕಿದೆ. ಆ ಮೂಲಕ ನಮ್ಮ ನೇಗಿಲಯೋಗಿ ಬೆಳೆಯಬೇಕಿದೆ. ಈ ಕೆಲಸವನ್ನು ಸಂತಾಲ ಆದಿವಾಸಿಗಳು, ನೀಲಿ ಬೆಳೆಗಾರರು, ರೈತ ಬಂಡಾಯಗಾರರು ಆರಂಭಿಸಿದ ದಾಖಲೆ ನಮ್ಮ ಇತಿಹಾಸದಲ್ಲಿಯೇ ಇದೆ. ಅವರು ಮಾಡಿದ ತ್ಯಾಗ - ಬಲಿದಾನಗಳನ್ನು ನೆನೆಯಬೇಕು. ನಾವು ಅವರಿಗಿಂತ 'ಬುದ್ದಿವಂತರು' ಎಂದುಕೊಂಡಿದ್ದೇವೆ. ಹಾಗಂದುಕೊಂಡಿದ್ದರೆ ನಿಂತ ನೆಲ ಕುಸಿಯುತ್ತಿರುವುದನ್ನು ಅರ್ಥಮಾಡಿಕೊಳ್ಳಬೇಕು. ಅವರಿಗಿದ್ದ ಕನಿಷ್ಟ ತಿಳುವಳಿಕೆಯನ್ನಾದರೂ ನಾವು ಪಡೆಯಬೇಕು.

**ಗೋಷ್ಠಿ - ೬**

## ಕನ್ನಡ ಸಂಶೋಧನೆ ಮತ್ತು ವಿಮರ್ಶೆ

# ಕನ್ನಡ ಸಂಶೋಧನೆ : ಮುಂದಿನ ಹೆಜ್ಜೆಗಳು

**ಡಾ. ಪುರುಷೋತ್ತಮ ಬಿಳಿಮಲೆ**

**ಭಾಗ ಒಂದು : ಹಿನ್ನೋಟ**

**ಪತನಮುಖಿಯಾಗುತ್ತಿರುವ ಮಾನವಿಕಗಳು :**

ಕೆಲವು ಉನ್ನತ ಶಿಕ್ಷಣ ಕೇಂದ್ರಗಳೂ ಸೇರಿದರೆ ಕರ್ನಾಟಕದಲ್ಲಿ ಸುಮಾರು ೪೩ ಪ್ರಮುಖ ಸಂಶೋಧನಾ ಸಂಸ್ಥೆಗಳಿವೆ. ಇಲ್ಲಿ ಸಂಶೋಧನೆ ಮಾಡುತ್ತಿರುವವರ ಸಂಖ್ಯೆ ಸುಮಾರು ೫೦೦೦. ಇದು ಕರ್ನಾಟಕದ ಒಟ್ಟು ಜನಸಂಖ್ಯೆಯ ಶೇಕಡಾ ೦.೦೦೮ ಆಗಿದೆ. ಈ ವಿಷಯದಲ್ಲಿ ರಾಷ್ಟ್ರೀಯ ಸರಾಸರಿ ೦.೬ ಆಗಿದ್ದು ಕರ್ನಾಟಕ ರಾಜ್ಯವು ರಾಷ್ಟ್ರೀಯ ಸರಾಸರಿಗಿಂತ ಬಹಳ ಹಿಂದಿದೆ. ಹೀಗೆ ಸಂಖ್ಯಾ ದೃಷ್ಟಿಯಿಂದ ಹಿಂದೆ ಬಿದ್ದಿರುವ ಕರ್ನಾಟಕವು ಸಂಶೋಧನೆಯ ಗುಣಮಟ್ಟದ ದೃಷ್ಟಿಯಿಂದಲೂ ಮಹತ್ವದ್ದೇನನ್ನೂ ಸಾಧಿಸುತ್ತಿಲ್ಲ. ಒಂದೆರಡು ಅಪವಾದಗಳನ್ನು ಹೊರತುಪಡಿಸಿದರೆ, ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯದ ಕುರಿತಾದ ನಮ್ಮ ಸಂಶೋಧನೆಗಳು ರಾಷ್ಟ್ರೀಯ ಮಟ್ಟದಲ್ಲಾಗಲೀ ಅಂತಾರಾಷ್ಟ್ರೀಯ ಮಟ್ಟದಲ್ಲಾಗಲೀ ಮಹತ್ವದ ಚರ್ಚೆಗಳಿಗೆ ಎಡೆ ಮಾಡಿಕೊಟ್ಟದ್ದನ್ನು ನಾವು ಇತ್ತೀಚಿನ ದಿನಗಳಲ್ಲಿ ಕಂಡಿಲ್ಲ.

ಇದರ ಜೊತೆಗೆ, ಕನ್ನಡ ಸಂಶೋಧನೆಯೂ ಸೇರಿದಂತೆ ಒಟ್ಟಾರೆಯಾಗಿ ಭಾರತದಲ್ಲಿ ಮಾನವಿಕಗಳು ಇಂದು ತಮ್ಮ ಹಿರಿಮೆಯನ್ನು ನಿರ್ವಿವಾದವಾಗಿ ಕಳೆದುಕೊಳ್ಳುತ್ತಿವೆ. ಸರಕಾರ ಮತ್ತು ವಿಶ್ವವಿದ್ಯಾಲಯಗಳ ಆಡಳಿತಾಂಗಗಳು ಜೊತೆ ಸೇರಿಕೊಂಡು ಮಾನವಿಕಗಳನ್ನು ಅನುತ್ಪಾದಕ' ಎಂದು ಭಾವಿಸಲು ಸುರುಮಾಡಿವೆ. ಮಾನವಿಕಗಳನ್ನು ಶುದ್ಧ ವಿಜ್ಞಾನದೊಂದಿಗೆ ಹೋಲಿಸಿ ತಕ್ಷಣದ ಫಲಿತಾಂಶಕ್ಕಾಗಿ ಕಾಯುವ, ಯುವಕರಿಗೆ ಕೆಲವು ಕೌಶಲ್ಯಗಳನ್ನು ಕಲಿಸಿ, ಅವರಿಗೆ ಉದ್ಯೋವಕಾಶ ಕಲ್ಪಿಸುವ ಇಲ್ಲವೇ ಅವರನ್ನು ವಿದೇಶಕ್ಕೆ ರಫ್ತು ಮಾಡುವ ( ೧೨ನೇ ಪಂಚವಾರ್ಷಿಕ ಯೋಜನೆಯು ಕುಶಲ ಕರ್ಮಿಗಳನ್ನು ೨೦೨೦ನೇ ಇಸವಿಯಲ್ಲಿ ಚೀನಾ ದೇಶಕ್ಕೆ ಕಳಿಸುವ ಬಗ್ಗೆ ಉತ್ಸಾಹದಿಂದ ಮಾತಾಡುತ್ತದೆ) ಬಗ್ಗೆ ಇದೀಗ ಸರಕಾರ ಯೋಚಿಸುತ್ತಿದೆ. ಸ್ಪರ್ಧಾತ್ಮಕ ಆರ್ಥಿಕತೆಯ ಹಿಂದೆ ಬಿದ್ದಿರುವ ಜಗತ್ತಿಗೆ ಇವತ್ತು ಮಾನವಿಕಗಳು ಬೇಡವಾಗಿವೆ. ಇಂಥಲ್ಲಿ ಸಹಜವಾಗಿಯೇ ಪ್ರಶ್ನಿಸುವುದನ್ನು ಕಲಿಸುವ, ಇತಿಹಾಸವನ್ನು ಶೋಧಿಸುವ, ರಾಜಕೀಯ ವಿನ್ಯಾಸಗಳನ್ನು ವಿಶ್ಲೇಷಿಸುವ, ಮಾನವೀಯ ಸಂಬಂಧಗಳನ್ನು ಪರಿಶೋಧಿಸುವ ಮಾನವಿಕಗಳಿಗೆ ಮಹತ್ವ ಕಡಿಮೆಯಾಗುತ್ತದೆ. ಈ ನಡುವೆ, ಇಂಥ ವಿಷಯಗಳ ಕುರಿತು ಮುಕ್ತಚಿಂತನೆಗೆ ಮತ್ತು ವಿಮರ್ಶೆಗೆ ಪೂರ್ಣ ಅವಕಾಶ ಕೊಡುವುದು

ಪ್ರಜಾಪ್ರಭುತ್ವವಾದಿ ಸರಕಾರಗಳ ಅತಿ ದೊಡ್ಡ ಜವಾಬ್ದಾರಿ ಎಂಬುದನ್ನು ಸರಕಾರಗಳೇ ಮರೆತಂತಿವೆ. ಜನರ ನೈತಿಕತೆಯನ್ನು ಹೆಚ್ಚಿಸಲು, ಸಮಾಜದ ಸ್ವಾಸ್ಥ್ಯವನ್ನು ಕಾಪಾಡಲು, ಪ್ರಜಾಪ್ರಭುತ್ವದ ಬೇರುಗಳನ್ನು ಬಲಗೊಳಿಸಲು ಮತ್ತು ಜೊತೆಗಿರುವ ಜನರ ಯೋಚನಾ ಶಕ್ತಿಯನ್ನು ತೀಕ್ಷ್ಣಗೊಳಿಸಲು ಸರಕಾರಗಳು ಬೌದ್ಧಿಕ ಸಂವಾದಗಳನ್ನು ಪ್ರೋತ್ಸಾಹಿಸುತ್ತಿರಬೇಕು. ಈಗ ಅಂಥ ಬೌದ್ಧಿಕತೆ ಕಳೆಗುಂದುತ್ತಿದೆ.

ಸಮಕಾಲೀನ ರಾಜಕಾರಣವು ಹೀಗೆ ಮಾನವಿಕಗಳನ್ನು ಗೌಣ ಗೊಳಿಸುತ್ತಿರುವಾಗ ಅದನ್ನು ದಿಟ್ಟವಾಗಿ ಇದಿರಿಸುವ ಎಚ್ಚರವನ್ನು ಮಾನವಿಕಗಳಲ್ಲಿ ಕೆಲಸ ಮಾಡುತ್ತಿರುವ ಸಂಶೋಧಕರು ತೋರಿಸುತ್ತಿಲ್ಲ. ಕನ್ನಡ ಸಂಶೋಧನೆಯನ್ನೇ ಗಮನಿಸಿದರೂ ಸಾಕು. ಅಲ್ಲಿ ಸಂಶೋಧನೆಯ ಭಾಷೆಯು ಜಡವಾಗಿದೆ. ಸಂಶೋಧನಾ ವಿಧಾನಗಳು ವರ್ತಮಾನದ ಅಗತ್ಯಗಳಿಗೆ ಪೂರಕವಾಗಿ ತನ್ನನ್ನು ಹೊಸದುಗೊಳಿಸಿಕೊಳ್ಳದೆ ನಿರ್ಜೀವವಾಗಿವೆ. ಸಂಶೋಧನೆಗೆ ಆಯ್ದುಕೊಳ್ಳುವ ವಸ್ತುಗಳು ಯಾವುದೇ ಸವಾಲುಗಳನ್ನು ಸ್ವೀಕರಿಸದೆ ಸರಳವಾಗಿದ್ದು ನಮ್ಮ ಅರಿವಿನ ವಲಯಗಳನ್ನು ವಿಸ್ತರಿಸುತ್ತಿಲ್ಲ. ಎಲ್ಲಕ್ಕಿಂತ ಮಿಗಿಲಾಗಿ ಸಂಶೋಧನೆಗಳು ಪತನಮುಖಿ ಯಾಗುತ್ತಿರುವುದರ ಬಗ್ಗೆ ಗಂಭೀರವಾದ ಚರ್ಚೆಗಳೂ ನಡೆಯುತ್ತಿಲ್ಲ. ನನಗೆ ಮೌಲ್ಯಮಾಪನಕ್ಕೆ ಬರುವ ಪಿಎಚ್.ಡಿ. ಮಹಾಪ್ರಬಂಧಗಳಲ್ಲಿ ಸಾಮಾನ್ಯವಾಗಿ ಪುಟಕ್ಕೆರಡರಂತೆ ಅಕ್ಷರ ತಪ್ಪುಗಳಿರುತ್ತವೆ. ಲೇಖಕರ ಹೆಸರುಗಳನ್ನೇ ಸರಿಯಾಗಿ ಬರೆದಿರುವುದಿಲ್ಲ. ಉಲ್ಲೇಖಗಳನ್ನು ಹೇಗೆ ಮಾಡಬೇಕೆಂಬ ತಿಳುವಳಿಕೆ ಇರುವುದಿಲ್ಲ. ಆರಿಸಿಕೊಂಡ ವಿಷಯಕ್ಕೆ ಸಂಬಂಧಿಸಿದಂತೆ ನಡೆದ ಅಧ್ಯಯನಗಳ ಓದು ಮತ್ತು ಅವುಗಳ ವಿಮರ್ಶಾತ್ಮಕ ವಿಶ್ಲೇಷಣೆ ಬಹುಮಟ್ಟಿಗೆ ಕಾಣೆಯಾಗಿರುತ್ತವೆ. ಪಾರಿಭಾಷಿಕ ಪದಗಳ ಬಳಕೆಯಲ್ಲಿ ಅಸ್ಪಷ್ಟತೆ ಹಾಗೂ ಗೊಂದಲ ಎಲ್ಲೆಂದರಲ್ಲಿ ಕಂಡುಬರುತ್ತದೆ. ಅತ್ಯಂತ ಅವೈಜ್ಞಾನಿಕವಾದ ರೀತಿಯಲ್ಲಿ ಆಕರಸೂಚಿಗಳನ್ನು ಕೊಡಲಾಗುತ್ತದೆ. ಇವಕ್ಕೆಲ್ಲ ಕಲಶವಿಟ್ಟಂತೆ ವಿದ್ಯಾರ್ಥಿಗಳಲ್ಲಿ ಕಂಡುಬರುವ ಅಸಡ್ಡೆ, ಆಲಸ್ಯ ಮತ್ತು ದುರಹಂಕಾರ ಯಾವುದೇ ಬಗೆಯ ಗಂಭೀರ ಚರ್ಚೆಗಳನ್ನು ಕೂಡಾ ಸಾಧ್ಯ ಮಾಡುತ್ತಿಲ್ಲ. ನಮ್ಮ ಶಿಕ್ಷಣ ಕ್ರಮದ ಯಾವ ಹಂತದಲ್ಲೂ ಸಂಶೋಧನೆಯನ್ನು ಪ್ರೋತ್ಸಾಹಿಸುವ ಪಠ್ಯಕ್ರಮವಿಲ್ಲ. ಮದರಾಸು, ಮುಂಬಯಿ ಮತ್ತು ಕೊಲ್ಕತ್ತಾದಂತಹ ಹಳೆಯ ವಿಶ್ವವಿದ್ಯಾಲಯಗಳಲ್ಲಿ ೧೯೭೦ರ ದಶಕದ ಕೊನೆಯವರೆಗೆ ಎಂ.ಎ. ಪಠ್ಯಕ್ರಮದಲ್ಲಿ ಪುಟ್ಟ ಸಂಶೋಧನಾ ಪ್ರಬಂಧವನ್ನು ಬರೆಯುವುದು ಕಡ್ಡಾಯವಾಗಿತ್ತು. ಆಮೇಲೆ ಅದು ಯಾಕೋ ನಿಂತುಹೋಯಿತು. ಎಂ.ಎ. ಮುಗಿಸಿದ ತಕ್ಷಣ ಸಂಶೋಧನೆಗೆ ನೇರವಾಗಿ ಧುಮುಕುವ ವಿದ್ಯಾರ್ಥಿಗಳಿಗೆ ಸಂಶೋಧನೆಯ ಪ್ರಾಥಮಿಕ ತಿಳುವಳಿಕೆಗಳು ಇರುವುದಾರೂ ಹೇಗೆ? ಇತ್ತೀಚಿನ ದಿನಗಳಲ್ಲಿ ವಿಶ್ವವಿದ್ಯಾಲಯ ಅನುದಾನ ಆಯೋಗವು (ಯು ಜಿ ಸಿ) ಜಾರಿಗೆ ತಂದಿರುವ ಪರೀಕ್ಷಾ ವಿಧಾನದಲ್ಲಿ ಅಭ್ಯರ್ಥಿಯೊಬ್ಬನ ಭಾಷೆ ಮತ್ತು ವಿಶ್ಲೇಷಣಾ ಸಾಮರ್ಥ್ಯವನ್ನು ಪರೀಕ್ಷಿಸಲು ಅವಕಾಶವೂ ಕಡಿಮೆಯಾಗಿದೆ. ಭಾರತದ ಕೆಲವು ವಿಶ್ವವಿದ್ಯಾಲಯಗಳಲ್ಲಿ ಪಿಎಚ್.ಡಿ. ಅಧ್ಯಯನಕ್ಕೆ ಗರಿಷ್ಠ ಐದು

ವರ್ಷಗಳನ್ನು ನಿಗದಿ ಮಾಡಿ ಅದರಲ್ಲಿ ಎರಡು ವರ್ಷಗಳನ್ನು ಎಂ. ಫಿಲ್. ಅಧ್ಯಯನಕ್ಕೆ ನಿಗದಿಪಡಿಸಿರುತ್ತಾರೆ. ಈ ಎರಡು ವರ್ಷಗಳಲ್ಲಿ ಸಂಶೋಧನಾ ವಿಧಾನಗಳನ್ನು ಗಂಭೀರವಾಗಿ ಅಭ್ಯಾಸ ಮಾಡುವ ವಿದ್ಯಾರ್ಥಿಯೊಬ್ಬ ತನ್ನ ಅಧ್ಯಯನ ಕ್ಷೇತ್ರದ ಕುರಿತು ಸಾಕಷ್ಟು ತಿಳುವಳಿಕೆಯನ್ನು ಪಡೆದಿರುತ್ತಾನೆ. ಕೆಲವು ಮಾದರಿ ಸಂಪ್ರಬಂಧಗಳನ್ನು ಬರೆಯುತ್ತಾನೆ. ಒಂದೆರಡು ವಿಚಾರ ಸಂಕಿರಣಗಳಲ್ಲಿ ಇತರ ವಿದ್ಯಾರ್ಥಿಗಳೆದುರು ತಾನು ಬರೆದ ಪ್ರಬಂಧಗಳನ್ನು ಮಂಡಿಸುತ್ತಾನೆ. ಇಷ್ಟೆಲ್ಲಾ ಆದಮೇಲೆ ಸಂಶೋಧನೆ ತನ್ನ ಮನೋಸ್ಥಿತಿಗೆ ಒಗ್ಗುವುದಿಲ್ಲವೆಂದು ಕಂಡರೆ ಅದನ್ನು ಬಿಟ್ಟು ಬೇರೆಡೆಗೆ ತೆರಳಲು ಒಂದು ಅವಕಾಶವೂ ಅವನಿಗೆ ಒದಗುತ್ತದೆ. ಇದು ನಿರ್ವಿವಾದವಾಗಿ ಸಂಶೋಧನೆಯ ಗುಣಮಟ್ಟವನ್ನು ಹೆಚ್ಚಿಸುತ್ತದೆ. ಆದರೆ ಕನ್ನಡದ ಸಂದರ್ಭದಲ್ಲಿ ಈ ಬಗೆಯ ಕೆಲಸಗಳು ಸಮರ್ಪಕವಾಗಿ ನಡೆಯುತ್ತಿಲ್ಲ. ಜೊತೆಗೆ ಎಂ. ಫಿಲ್‌ನ್ನು ಉದ್ಯೋಗದ ಜೊತೆಗೆ ತಳಕುಹಾಕಲಾಗಿದೆ. ಎಂ. ಫಿಲ್‌ನ್ನು ನಾವು ಜೋಡಿಸಬೇಕಾದದ್ದು ಸಂಶೋಧನೆಯ ಜೊತೆಗೇ ಹೊರತು ಉದ್ಯೋಗದೊಂದಿಗೆ ಅಲ್ಲ,

ಈ ವಿಷಯದಲ್ಲಿ ಸಂಶೋಧನಾ ವಿದ್ಯಾರ್ಥಿಗಳಿಗೆ ಸರಿಯಾಗಿ ಮಾರ್ಗದರ್ಶನ ಮಾಡಬಲ್ಲ ಯೋಗ್ಯತೆ ಇರುವ ಅಧ್ಯಾಪಕರ ಸಂಖ್ಯೆಯೂ ದಿನದಿಂದ ದಿನಕ್ಕೆ ಕ್ಷೀಣಿಸುತ್ತಿದೆ.ತಾವು ಕೆಲಸ ಮಾಡಬಯಸುವ ಕ್ಷೇತ್ರದಲ್ಲಿ ಯಾವ ಬಗೆಯ ಸಂಶೋಧನೆಗಳು ನಡೆದಿವೆ ಮತ್ತು ನಡೆಯುತ್ತಿವೆ? ನಮ್ಮ ಇಂದಿನ ತುರ್ತು ಅಗತ್ಯಗಳೇನು? ಎಂಬುದನ್ನು ವಿಸ್ತಾರವಾದ ಓದಿನ ಮೂಲಕ ಗ್ರಹಿಸಿ ಅದನ್ನು ತನ್ನ ಸಂಶೋಧನಾ ವಿದ್ಯಾರ್ಥಿಗೆ ಸಮರ್ಥವಾಗಿ ವಿವರಿಸಿ ಹೇಳಬಲ್ಲ ಅಧ್ಯಾಪಕರ ಸಂಖ್ಯೆ ಇವತ್ತು ಬೆರಳೆಣಿಕೆಯಲ್ಲಿದೆ. ಈ ನಡುವೆ ಅಧ್ಯಾಪಕರ ನಡುವಣ ಪರಸ್ಪರ ಶೈಕ್ಷಣಿಕ ಸಂಬಂಧಗಳು ಎಷ್ಟು ಕುಸಿದುಹೋಗಿವೆಯೆಂದರೆ ಸಮಾನಾಸಕ್ತಿಯ ವಿದ್ವಾಂಸರ ಜೊತೆಗೆ ಕೂಡಾ ಯಾವುದೇ ಬಗೆಯ ಅರ್ಥಪೂರ್ಣವಾದ ಸಂವಾದಗಳೂ ನಡೆಯುತ್ತಿಲ್ಲ. ತಮ್ಮ ವಿಶ್ವವಿದ್ಯಾಲಯದ ಪರಿಧಿಗಳನ್ನು ವಿಸ್ತರಿಸಿಕೊಂಡು ಬೇರೆಡೆಗೆ ಇರುವ ಸಂಶೋಧನಾ ಸಂಸ್ಥೆಗಳಿಗೆ ಭೇಟಿ ನೀಡುವ ಸಂಶೋಧಕರ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿದೆ. ತಾನು ಕೆಲಸ ಮಾಡುತ್ತಿರುವ ಸಂಶೋಧನಾ ಕ್ಷೇತ್ರದ ಭವಿಷ್ಯವೇನು? ಅದನ್ನು ತನ್ನ ಸಂಶೋಧನೆಯ ಮೂಲಕ ಹೇಗೆ ವಿಸ್ತರಿಸಿಕೊಳ್ಳಬಹುದು ಎಂಬ ಪ್ರಶ್ನೆಗಳನ್ನು ಕೇಳಿಕೊಳ್ಳದ ಹೊರತು ತನ್ನ ಸಂಶೋಧನೆಯ ಬಗೆಗೆ ಸಂಶೋಧಕನಿಗೇ ಗೌರವ ಹುಟ್ಟಲಾರದು. ಹೀಗೆ ನೂರಾರು ಪ್ರಶ್ನೆಗಳ ಮೂಲಕ ಮತ್ತು ನಿರಂತರವಾದ ಸಂವಾದಗಳ ಮೂಲಕ ಬೆಳೆಯಬೇಕಾದ ಸಂಶೋಧನೆಗಳು ಏಕಪಕ್ಷೀಯವಾದ ಹಾದಿ ಹಿಡಿಯುತ್ತಾ ಸೊರಗುತ್ತಿವೆ. ವಸಾಹತು ಕಾಲದಲ್ಲಿ ನಾವೇ ಕಟ್ಟಿಕೊಂಡ ಗೋಡೆಗಳನ್ನು ಒಡೆಯಬೇಕಾಗಿರುವ ತುರ್ತು ಸಂದರ್ಭದಲ್ಲಿ ಅದಕ್ಕೆ ವ್ಯತಿರಿಕ್ತವಾಗಿ ಗೋಡೆಗಳನ್ನು ಇನ್ನಷ್ಟು ಭದ್ರಗೊಳಿಸಿಕೊಂಡು ಮುಂದುವರಿಯುತ್ತಿರುವುದು ಸಂಶೋಧನೆಯ ಉಪಯುಕ್ತತೆಯನ್ನು ಕಡಿಮೆ ಮಾಡಿದೆ.

ಈ ಕ್ಷೇತ್ರದ ಇನ್ನೊಂದು ಸಮಸ್ಯೆಯೆಂದರೆ ಕೆಲವರು ಯಾವುದೋ ಕಾರಣಕ್ಕೆ ಸಂಶೋಧನೆಯನ್ನು ಆರಂಭಿಸುತ್ತಾರೆ. ಅದಕ್ಕಾಗಿ ಶ್ರಮ ಪಟ್ಟು ಕೆಲಸವನ್ನೂ ಮಾಡುತ್ತಾರೆ. ಆನಂತರ ಇದ್ದಕ್ಕಿದ್ದಂತೆ ಸಂಶೋಧನಾ ಕ್ಷೇತ್ರವನ್ನೇ ಬಿಟ್ಟು ಮೌನವಾಗಿಬಿಡುತ್ತಾರೆ. ನನ್ನದೇ ಕೆಲವು ಸಂಶೋಧನಾ ವಿದ್ಯಾರ್ಥಿಗಳಿಗೆ ನಾನು ಸಾಕಷ್ಟು ಸಮಯ ನೀಡಿದ್ದುಂಟು. ಪುಸ್ತಕಗಳನ್ನು ಒದಗಿಸಿದ್ದುಂಟು. ಆದರೆ ಪದವಿ ದೊರಕಿದ ಮೇಲೆ ಅವರು ಒಂದು ಲೇಖನವನ್ನೂ ಬರೆಯದೇ ಹೋದರು. ಸಂಶೋಧನೆಯೆಂಬುದು ನಿರಂತರವಾದ ಒಂದು ಪ್ರಕ್ರಿಯೆ ಎಂಬ ತಿಳುವಳಿಕೆ ನಮ್ಮಲ್ಲಿ ಮೂಡದ ಹೊರತು ಆ ಕ್ಷೇತ್ರ ಅಭಿವೃದ್ಧಿಯಾಗದು.

**ಕನ್ನಡ ಸಂಶೋಧನೆಯ ಹಿನ್ನೆಲೆ :**

ಹಾಗೆ ನೋಡಿದರೆ ಕನ್ನಡ ಸಂಶೋಧನೆಗೆ ಒಳ್ಳೆಯ ತಳಹದಿಯೇನೋ ಇದೆ. ಈಸ್ಟ್ ಇಂಡಿಯಾ ಕಂಪನಿಯ ನೌಕರನಾಗಿ ೧೭೬೨ರಲ್ಲಿ ಭಾರತಕ್ಕೆ ಬಂದ ಬುಕ್‌ನನ್, ೧೭೮೩ರಲ್ಲಿ ಕರ್ನಾಟಕ ಪ್ರವೇಶಿಸಿದ ಲೆ.ಕ. ಮೆಕೆಂಜಿ, ಶ್ರೀರಂಗಪಟ್ಟಣದ ಪತನದ ಅನಂತರ, ಆ ಘಟನೆಯ ಬಗ್ಗೆ ಹುಟ್ಟಿಕೊಂಡ ಲಾವಣಿಯೊಂದನ್ನು ೧೮೦೩ರಲ್ಲಿ ಸಂಗ್ರಹಿಸಿದ ಜಾನ್‌ಲೇಡನ್, ೧೮೧೬ರಲ್ಲಿ ಕನ್ನಡ ಗಾದೆ, ಒಗಟು, ಮತ್ತು ನಂಬಿಕೆಗಳನ್ನು ಸಂಗ್ರಹಿಸಿದ ಅಬ್ಬೆ ದುಬಾಯಿ, ೩,೦೦೦ ಕನ್ನಡ ಗಾದೆಗಳಿರುವ ಬೃಹತ್ ಸಂಪುಟವನ್ನು ೧೮೪೭ರಲ್ಲಿ ಪ್ರಕಟಿಸಿದ ಮೋಗ್ಲಿಂಗ್, ದಾಸರ ಪದಗಳ ಮೌಖಿಕ ರೂಪಗಳನ್ನು ೧೮೩೧ರಷ್ಟು ಹಿಂದೆ ಸಂಗ್ರಹಿಸಿದ ಗ್ರೂವರ್, ೧೮೭೩ ರಲ್ಲಿಯೇ ಕನ್ನಡಕ್ಕೊಂದು ನಿಘಂಟು ನೀಡಿದ ಕಿಟೆಲ್, ೧೮೮೫ ರಲ್ಲಿ ೧೭ ಐತಿಹಾಸಿಕ ಲಾವಣಿಗಳನ್ನು, ನಾಲ್ಕು ದಂಡಕಗಳನ್ನು, ನಾಲ್ಕು ಜೋಗುಳದ ಹಾಡುಗಳನ್ನು ಸಂಗ್ರಹಿಸಿದ ಜೆ.ಎಫ್. ಫ್ಲೀಟ್, ಜನಪದ ಕತೆಗಳ ಕಡೆಗೆ ೧೮೮೧ರಲ್ಲಿಯೇ ಮುಖ ಮಾಡಿದ ಮೇರಿ ಫ್ರಿಯರೆ, ೧೮೭೫ರಲ್ಲಿ ಭೂತಾರಾಧನೆಯ ಬಗೆಗೆ ಲೇಖನ ಪ್ರಕಟಿಸಿದ ವಾಲ್‌ಹೌಸ್, ೧೮೯೨ರಲ್ಲಿ ಇಪ್ಪತ್ತೊಂದು ಪಾಡ್ದನಗಳನ್ನು ಸಂಕಲಿಸಿ ಪ್ರಕಟಿಸಿದ ಎ.ಸಿ. ಬರ್ನೆಲ್ ಮೊದಲಾದ ಪಾಶ್ಚಾತ್ಯ ವಿದ್ವಾಂಸರು ಮಾಡಿದ ಕೆಲಸಗಳು ಇಂದಿಗೂ ನಮಗೆ ಸಂಶೋಧನೆಯ ಮೂಲ ಆಕರಗಳಾಗಿ ಸಹಕರಿಸುತ್ತಲಿವೆ. ಅವರ ಕೆಲಸಗಳ ಮೂಲ ಉದ್ದೇಶಗಳು ಏನೇ ಇದ್ದಿರಲಿ, ಇವತ್ತು ಅವು ಆ ಮೂಲ ಉದ್ದೇಶಗಳನ್ನೂ ಮೀರಿ ಕನ್ನಡ ಸಂಶೋಧನೆಗೆ ಭದ್ರ ತಳಪಾಯವನ್ನು ನಿರ್ಮಿಸಿಕೊಟ್ಟಿವೆ.

ಮೆಕೆಂಜಿಯೊಬ್ಬನೇ ೧೫೬೮ ಹಸ್ತಪ್ರತಿಗಳನ್ನು ಸಂಗ್ರಹಿಸಿದನೆಂದು ದಾಖಲೆಗಳಿವೆ (ಪುರುಷೋತ್ತಮ ಬಿಳಿಮಲೆ ೧೯೮೫), ಹಳಗನ್ನಡ ಮತ್ತು ನಡುಗನ್ನಡದ ಅನೇಕ ಪಠ್ಯಗಳು ವಿದೇಶೀ ವಿದ್ವಾಂಸರ ಸತತ ಪ್ರಯತ್ನಗಳಿಂದ ಬೆಳಕಿಗೆ ಬಂದುವು. ೧೯ನೇ ಶತಮಾನದ ಕೊನೆಯ ಭಾಗ ಮತ್ತು ೨೦ನೆಯ ಶತಮಾನದ ಮೊದಲ ಭಾಗದಲ್ಲಿ ಈ ವಿದ್ವಾಂಸರುಗಳು ಆರಂಭ ಮಾಡಿದ ನಿಘಂಟು ಶಾಸ್ತ್ರ, ಶಾಸನ ಶಾಸ್ತ್ರ, ಹಸ್ತಪ್ರತಿ

ಸಂಗ್ರಹ, ಗ್ರಂಥ ಸಂಪಾದನೆ ಮತ್ತು ಜಾನಪದ ಕೆಲಸಗಳು ನಮ್ಮ ಮುಖ್ಯ ಸಂಶೋಧನೆಗಳ ವಸ್ತು ಮತ್ತು ವಿಧಾನಗಳನ್ನು ನಿರ್ವಚಿಸಿದುವು. ಈ ಕೆಲಸಗಳು ವಸಾಹತು ಕಾಲದ ಧೋರಣೆಗಳಿಗೆ ಅನುಗುಣ ವಾಗಿಯೇ ಇರುವುದು ಸಹಜವಾಗಿತ್ತು, ಮತ್ತು ನಮಗೆ ಅದರಿಂದ ಆ ಕಾಲದಲ್ಲಿ ಬಿಡುಗಡೆಯಿರಲಿಲ್ಲ.

ಈ ಆರಂಭಿಕ ಕೆಲಸಗಳನ್ನು ೨೦ನೇ ಶತಮಾನದಲ್ಲಿ ಅರ್ಥಪೂರ್ಣವಾಗಿ ಮತ್ತು ವಿದ್ವತ್ಪೂರ್ಣವಾಗಿ ಮುಂದುವರಿಸಲಾಯಿತು. ಈ ಕೆಲಸಗಳ ಸಮೀಕ್ಷೆಯು ಪ್ರಸ್ತುತ ಪ್ರಬಂಧದ ಉದ್ದೇಶಕ್ಕೆ ಹೊರತಾದುದು. ಶ್ರೀಗಳಾದ ಕೆ ಬಿ ಪಾಠಕ್, ಪಿ ಬಿ ದೇಸಾಯಿ, ಕೆ ಜಿ ಕುಂದಣಗಾರ, ಟಿ ಎಸ್ ವೆಂಕಣಯ್ಯ, ಮಂಜೇಶ್ವರ ಗೋವಿಂದ ಪೈ, ಮುಳಿಯ ತಿಮ್ಮಪ್ಪಯ್ಯ, ಸೇಡಿಯಾಪು ಕೃಷ್ಣಭಟ್, ರಾ. ನರಸಿಂಹಾಚಾರ್, ಡಿ ಎಲ್ ನರಸಿಂಹಾಚಾರ್, ಎಲ್ ಬಸವರಾಜು, ಶಂಬಾ ಜೋಷಿ, ಫ ಗು ಹಳಕಟ್ಟಿ, ಚನ್ನಪ್ಪ ಉತ್ತಂಗಿ ಮೊದಲಾದವರ ಕೆಲಸಗಳು ಕನ್ನಡ ಸಂಶೋಧನೆಯ ಮಹತ್ವದ ಘಟ್ಟವೊಂದನ್ನು ಸೂಚಿಸುತ್ತವೆ ಇವರಲ್ಲಿ ಪ್ರತಿಯೊಬ್ಬರೂ ಹೊಸ ಹಾದಿ ಹಿಡಿಯಲು ಪ್ರಯತ್ನಪಟ್ಟವರು. ಕೆಲವರು ಸಂಶೋಧನೆಗೆ ಭಾಷಾಶಾಸ್ತ್ರದ ಮೂಲಕ ಪ್ರವೇಶಿಸಿದರೆ, ಮತ್ತೆ ಕೆಲವರು ಶಾಸನಗಳ ಮೂಲಕ ಪ್ರವೇಶಿಸಿದರು. ಐತಿಹಾಸಿಕ ಪ್ರಜ್ಞೆಯಿಂದ ಸಂಶೋಧನೆಗೆ ಘನತೆ ತಂದವರು ಹಲವರು. ಹಳಕಟ್ಟಿಯವರ ಅಸಾಮಾನ್ಯ ವಚನ ಸಂಪುಟಗಳು, ೩೦ ವರ್ಷ ದುಡಿದು ಸಿದ್ಧಪಡಿಸಿದ ಆರ್ ನರಸಿಂಹಾಚಾರ್ಯರ ಕವಿಚರಿತೆ ಸಂಪುಟಗಳು ಇಂದಿಗೆ ನಮಗೊಂದು ವಿಸ್ಮಯದ ಹಾಗೆ ತೋರುತ್ತವೆ. ಡಿ ಎಲ್ ನರಸಿಂಹಾಚಾರ್ಯರು ಭಿನ್ನ ಪಠ್ಯಗಳ ಸಮೇತ ಸಂಪಾದಿಸಿ ಕೊಟ್ಟ ಪ್ರಾಚೀನ ಗ್ರಂಥಗಳು ಹಾಗೂ ಬರೆದ ಲೇಖನಗಳು ಕನ್ನಡ ಪಂಡಿತ ಪರಂಪರೆಯು ತಲುಪಬಹುದಾದ ಎತ್ತರವನ್ನು ಸಂಕೇತಿಸುತ್ತವೆ. ಆ ಕಾಲದ ವಿದ್ವಾಂಸರ ಹಟ, ಕಠಿಣ ಶ್ರಮ, ವಿದ್ವತ್ತು ಮತ್ತು ಸಂಶೋಧನೆಯ ಮೇಲಣ ಬದ್ಧತೆಯನ್ನು ಇಂದು ನಮಗೆ ಊಹಿಸಿಕೊಳ್ಳುವುದೂ ಕಷ್ಟವಾಗುತ್ತಿದೆ. ಸಂಶೋಧನೆಯ ಪರಿಕರಗಳು ಏನೇನೂ ಇಲ್ಲದ ಕಾಲದಲ್ಲಿ ಇವರೆಲ್ಲ ಮಾಡಿದ ಕೆಲಸಗಳು ಅಸಾಮಾನ್ಯವಾದುವು.

ಈ ತಲೆಮಾರಿನ ವಿದ್ವಾಂಸರ ಕೈಕೆಳಗೆ ಕೆಲಸ ಮಾಡಿ ಇಲ್ಲವೇ ಶಿಷ್ಯರುಗಳಾಗಿ ತರಬೇತು ಪಡೆದು, ಆನಂತರದ ಕಾಲಘಟ್ಟದ ಸಂಶೋಧನಾ ಕ್ಷೇತ್ರದಲ್ಲಿ ದುಡಿದ ವಿದ್ವಾಂಸರ ಕೊಡುಗೆ ಕೂಡಾ ಮಹತ್ತರವಾದುದು. ಇವರೆಲ್ಲ ಸ್ವಾತಂತ್ರ್ಯೋತ್ತರ ಭಾರತದ ಶೈಕ್ಷಣಿಕ ಅಗತ್ಯಗಳಿಗನುಗುಣವಾಗಿ ಕನ್ನಡ ಸಂಶೋಧನೆಯ ಸ್ವರೂಪ ಮತ್ತು ವಿಧಾನಗಳನ್ನು ಪುನಾರಚಿಸಿಕೊಂಡು, ಅದರ ಕ್ಷಿತಿಜಗಳನ್ನು ಗಮನಾರ್ಹವಾಗಿ ವಿಸ್ತರಿಸಿದರು. ಮುಖ್ಯವಾಗಿ ಮೈಸೂರು, ಬೆಂಗಳೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳಲ್ಲಿ ಆ ಕಾಲಕ್ಕೆ ದೊರಕಿದ ಸಾಂಸ್ಥಿಕ ಬೆಂಬಲ ಮತ್ತು ಸಂಶೋಧನಾ ಸವಲತ್ತುಗಳನ್ನು ಉಪಯೋಗಿಸಿಕೊಳ್ಳುವಲ್ಲಿ ಈ ವಿದ್ವಾಂಸರು ಹಿಂದೆ ಬೀಳಲಿಲ್ಲ.

ಶ್ರೀಗಳಾದ ಆರ್ ಸಿ ಹಿರೇಮಠ, ರಂ ಶ್ರೀ ಮುಗಳಿ, ಎಂ ಚಿದಾನಂದಮೂರ್ತಿ, ಎಂ ಎಂ ಕಲಬುರ್ಗಿ, ಸಾ ಶಿ ಮರುಳಯ್ಯ, ಎಸ್ ವಿದ್ಯಾಶಂಕರ, ಎಂ ಬಿ ನೇಗಿನಹಾಳ, ಆರ್ ವೈ ಧಾರವಾಡಕ, ವೃಷಭೇಂದ್ರಸ್ವಾಮಿ, ವರದರಾಜ ರಾವ್, ಶ್ರೀನಿವಾಸ ಹಾವನೂರು, ಹಂ ಪ ನಾಗರಾಜಯ್ಯ, ಹಾ ಮಾ ನಾಯಕ, ಟಿ ವಿ ವೆಂಕಟಾಚಲಶಾಸ್ತ್ರಿ, ಆರ್ ವಿ ಎಸ್ ಸುಂದರಂ, ಕೆ ಕುಶಾಲಪ್ಪಗೌಡ, ಎಚ್ ಎಸ್ ಗೋಪಾಲರಾವ್, ದೇವರ ಕೊಂಡಾರೆಡ್ಡಿ, ಜಿ ವೆಂಕಟಸುಬ್ಬಯ್ಯ, ಜಿ ಎಸ್ ಶಿವರುದ್ರಪ್ಪ ಮೊದಲಾದ ಘನ ವಿದ್ವಾಂಸರು ತಾವೇ ಅತ್ಯುತ್ತಮವಾದ ಮಹಾಪ್ರಬಂಧಗಳನ್ನು ಬರೆದು ಪ್ರಕಟಿಸಿದ್ದಲ್ಲದೆ, ತಮ್ಮ ವಿದ್ಯಾರ್ಥಿಗಳೂ ಅಂಥ ಮಹತ್ವದ ಕೆಲಸಗಳನ್ನು ಮಾಡಲು ಪ್ರಚೋದನೆ ನೀಡಿದರು. ಕನ್ನಡ ಸಂಶೋಧನೆಗೆ ಶೈಕ್ಷಣಿಕ ಆಯಾಮ ದೊರಕಿದ ಮಹತ್ವದ ಕಾಲವಿದು. ೧೯೬೦ರಿಂದ ಸುಮಾರಾಗಿ ೧೯೯೦ರ ವರೆಗಣ ಕಾಲದಲ್ಲಿ ನಡೆಯುತ್ತಿದ್ದ ವಿಚಾರಸಂಕಿರಣಗಳಲ್ಲಿ ಮಂಡಿತವಾಗುತ್ತಿದ್ದ ಪ್ರಬಂಧಗಳ ಗುಣಮಟ್ಟ ಮಿಗಿಲಾದುದು. ಮುಂದೆ ಅವು ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾಗುತ್ತಿದ್ದ ಪ್ರಬುದ್ಧ ಕರ್ನಾಟಕದಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದಿಂದ ಪ್ರಕಟವಾಗುತ್ತಿದ್ದ ಕರ್ನಾಟಕ ಭಾರತಿಯಲ್ಲಿ ಮತ್ತು ಬೆಂಗಳೂರು ವಿಶ್ವವಿದ್ಯಾಲಯದಿಂದ ಪ್ರಕಟವಾಗುತ್ತಿದ್ದ ಸಾಧನೆಯಲ್ಲಿ ತಪ್ಪದೆ ಪ್ರಕಟವಾಗಿ ರಾಜ್ಯದಾದ್ಯಂತ ಕೆಲಸ ಮಾಡುತ್ತಿದ್ದ ತರುಣ ಸಂಶೋಧಕರಿಗೆ ತಲುಪುತ್ತಿದ್ದುವು. ಈ ಮೂರು ಪತ್ರಿಕೆಗಳು ಪ್ರಕಟಿಸುತ್ತಿದ್ದ ಸಂಶೋಧನಾ ಲೇಖನಗಳ ಬಗ್ಗೆ ಹಾಗೂ ಆಗ ನಡೆಯುತ್ತಿದ್ದ ವಿಚಾರ ಸಂಕಿರಣಗಳ ಗುಣಮಟ್ಟಗಳ ಬಗ್ಗೆ ನಾವೀಗ ನಮ್ಮ ತಿಳುವಳಿಕೆಗಳನ್ನು ಹೆಚ್ಚಿಸಿಕೊಳ್ಳಬೇಕಾಗಿದೆ. ಇದೇ ಹೊತ್ತಿನಲ್ಲಿ ಜಾನಪದವೂ ತನ್ನ ಆರಂಭಿಕ ಸಂಗ್ರಹದ ಕೆಲಸಗಳನ್ನು ದಾಟಿಕೊಂಡು ಕನ್ನಡ ಸಂಶೋಧನೆಯ ಮುಖ್ಯ ವಸ್ತುವಾಗಿ ಕಾಣಿಸಿಕೊಂಡಿತು. ೧೯೫೫ರಷ್ಟು ಹಿಂದೆ ಉತ್ತರ ಕರ್ನಾಟಕದ ಜನಪದ ಸಾಹಿತ್ಯದ ಬಗ್ಗೆ ಮಹಾಪ್ರಬಂಧವನ್ನು ಬರೆದು ಕರ್ನಾಟಕ ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ಪದವಿಯನ್ನು ಪಡೆದ ಬಿ.ಎಸ್. ಗದ್ದಗೀಮಠರ 'ಕನ್ನಡ ಜಾನಪದ ಗೀತೆಗಳು ಕೃತಿಯ ೧೯೬೩ರಲ್ಲಿ ಪ್ರಕಟವಾಯಿತು. ದಕ್ಷಿಣ ಕರ್ನಾಟಕದಿಂದ ಜೀ.ಶಂ.ಪರಮಶಿವಯ್ಯ ಅವರು ೧೯೭೨ ರಲ್ಲಿ ದಕ್ಷಿಣ ಕರ್ನಾಟಕದ ಜನಪದ ಕಾವ್ಯಪ್ರಕಾರಗಳು' ಎಂಬ ತಮ್ಮ ಉತ್ಕೃಷ್ಟ ಮಹಾಪ್ರಬಂಧವನ್ನು ಕ್ಷೇತ್ರಕಾರ್ಯಾ ಧರಿತವಾಗಿ ಮಾಡಿದರೆ, ಕರಾವಳಿ ಕರ್ನಾಟಕದಿಂದ ಬಿ.ಎ.ವಿವೇಕ ರೈ ಅವರು ತಮ್ಮ ತುಳು ಜನಪದ ಸಾಹಿತ್ಯ' ಎನ್ನುವ ಹೆಸರಿನ ಮಹಾಪ್ರಬಂಧವನ್ನು ೧೯೮೫ರಲ್ಲಿ ಪ್ರಕಟಿಸಿದರು. ಈ ಮೂರೂ ಮಹಾಪ್ರಬಂಧಗಳು ಮುಂದೆ ಆಯಾ ಪ್ರದೇಶಗಳಲ್ಲಿ ಜಾನಪದ ಸಂಶೋಧನೆಗಳಿಗೆ ನಿರ್ಣಾಯಕ ಪ್ರೇರಣೆ ನೀಡಿದುವು. ೧೯೬೬ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಸುವರ್ಣ ಮಹೋತ್ಸವದ ಆಚರಣೆಯ ಸಂದರ್ಭದಲ್ಲಿ 'ಜನಪದಸಾಹಿತ್ಯ - ಅದರ ಸ್ವರೂಪ' ಎನ್ನುವ ವಿಷಯದ ಕುರಿತು ಪ್ರಬಂಧ ಮಂಡಿಸಿದ ಹಾ.ಮಾ.ನಾಯಕರು 'ಜನಪದ'- 'ಜಾನಪದ' ಪರಿಕಲ್ಪನೆಗಳನ್ನು ಮೊದಲ ಬಾರಿಗೆ ಸ್ಪಷ್ಟಪಡಿಸಿ, ಕನ್ನಡ

ಜಾನಪದ ಅಧ್ಯಯನವು ಆಧುನಿಕವೂ ವೈಜ್ಞಾನಿಕವೂ ಆಗಬೇಕಾದ್ದರ ಕಡೆಗೆ ನಾಡಿನ ವಿದ್ವಾಂಸರ ಗಮನ ಸೆಳೆದರು. ಅದೇ ವರ್ಷ ಮೈಸೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಶಿಕ್ಷಣದಲ್ಲಿ ಜಾನಪದವೂ ಸೇರ್ಪಡೆಯಾಯಿತು. ೧೯೭೨ ರಿಂದ ಅಲ್ಲಿ ಸ್ನಾತಕೋತ್ತರ ಜಾನಪದ ಡಿಪ್ಲೋಮಾ ಶಿಕ್ಷಣ ಜಾರಿಗೆ ಬಂತು. ೧೯೭೪ ರಿಂದ ಸ್ನಾತಕೋತ್ತರ ಪದವಿ ಶಿಕ್ಷಣವೂ ಅಲ್ಲಿ ಆರಂಭವಾಯಿತು. ಚಂದ್ರಶೇಖರ ಕಂಬಾರ, ಡಿ.ಕೆ. ರಾಜೇಂದ್ರ, ಕೆ. ಆರ್. ಸಂಧ್ಯಾರೆಡ್ಡಿ, ನಂ ತಪಸ್ವೀಕುಮಾರ, ತೀ ನಂ ಶಂಕರನಾರಾಯಣ. ಬಸವರಾಜ ಮಲಶೆಟ್ಟಿ, ದೇವೇಂದ್ರಕುಮಾರ ಹಕಾರಿ, ಎನ್.ಆರ್. ನಾಯಕ, ಎಸ್.ಪಿ. ಪದ್ಮಪ್ರಸಾದ, ಟಿ ಎಸ್ ಸತ್ಯನಾಥ್, ಕೃಷ್ಣಮೂರ್ತಿ ಹನೂರ, ಕೆ. ಚಿನ್ನಪ್ಪಗೌಡ, ಶ್ರೀರಾಮ ಇಟ್ಟಣ್ಣವರ, ಪಿ.ಕೆ. ಖಂಡೋಬ, ಕೆ ಆರ್ ದುರ್ಗಾದಾಸ್, ಹಿ ಚಿ ಬೋರಲಿಂಗಯ್ಯ, ಸೋಮಶೇಖರ ಇಮ್ರಾಪೂರ, ಡಿ. ಆರ್. ಪಾಂಡುರಂಗ, ಆನಂದರಾಮ ಉಪಾಧ್ಯಾಯ, ನಿಂಗಣ್ಣ ಸಣ್ಣಕ್ಕಿ, ಅಂಬಳಿಕೆ ಹಿರಿಯಣ್ಣ, ಹಿ.ಶಿ. ರಾಮಚಂದ್ರೇಗೌಡ, ಶ್ರೀಕಂಠ ಕೂಡಿಗೆ, ಪಿ.ಕೆ. ರಾಜಶೇಖರ, ವೀರಣ್ಣ ದಂಡೆ, ಕಾಳೇಗೌಡ ನಾಗವಾರ, ಎಂ.ಜಿ. ಈಶ್ವರಪ್ಪ, ವಾಮನ ನಂದಾವರ ಮೊದಲಾದವರು ತಮ್ಮ ಪಿಎಚ್.ಡಿ. ಪದವಿಯನ್ನು ಜಾನಪದವನ್ನು ಅಧ್ಯಯನ ಮಾಡುವುದರ ಮೂಲಕವೇ ಪಡೆದುಕೊಂಡರು. ಕರ್ನಾಟಕದಲ್ಲಿರುವ ಎಲ್ಲ ವಿಶ್ವವಿದ್ಯಾಲಯಗಳೂ ಕರ್ನಾಟಕ ಜಾನಪದ ಅಧ್ಯಯನವನ್ನು ಪ್ರೋತ್ಸಾಹಿಸಿದುವು. ಡಾ. ಪೀಟರ್ ಕ್ಲಾಸ್, ಲಾರೀ ಹಾಂಕೋ, ಮಾರ್ಥಾ ಆಕ್ಸನ್ ಅವರಂಥ ವಿದ್ವಾಂಸರು ಕರಾವಳಿ ಕರ್ನಾಟಕದಲ್ಲಿ ಅನೇಕ ವರ್ಷಗಳ ಕಾಲ ನೆಲೆ ನಿಂತು ತುಳು ಜಾನಪದ ಅಧ್ಯಯನಗಳಿಗೆ ಪ್ರೇರಣೆ ನೀಡಿದ್ದಲ್ಲದೆ ಆ ಭಾಗದ ಜಾನಪದ ಅಧ್ಯಯನಗಳಿಗೆ ಅಂತಾರಾಷ್ಟ್ರೀಯವಾದ ಆಯಾಮವನ್ನೂ ತಂದುಕೊಟ್ಟರು, ನೀಡಿದರು. ಭಾರತದ ಇತರ ಪ್ರದೇಶಗಳಿಗೆ ಹೋಲಿಸಿದರೆ ಕರ್ನಾಟಕ ಜಾನಪದ ಅಧ್ಯಯನವು ಸಾಕಷ್ಟು ವಿಸ್ತ್ರತವೂ ಗಂಭೀರವೂ ಆಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ.

ಹೀಗೇ ಕನ್ನಡ ಸಂಶೋಧನೆಯ ಚರಿತ್ರೆ ಸಾಕಷ್ಟು ಸುದೀರ್ಘವಾಗಿದೆ ಮತ್ತು ಅದರ ತಳಹದಿ ಭದ್ರವಾಗಿದೆ. ಆದರೆ ಈಗ ಆ ಕ್ಷೇತ್ರಕ್ಕೆ ಏನಾಗಿದೆ ಎಂದು ಯೋಚಿಸಿದಾಗ ತುಂಬಾ ನಿರಾಶೆಯಾಗುತ್ತದೆ. ಪ್ರೊ. ಟಿ ವಿ ವೆಂಕಟಾಚಲಶಾಸ್ತ್ರಿ, ಪ್ರೊ. ಆರ್ ವಿ ಎಸ್ ಸುಂದರಂ, ಪ್ರೊ. ಎಸ್ ಶೆಟ್ಟರ್, ಹಂಪ ನಾಗರಾಜಯ್ಯ, ಪ್ರೊ. ಬಿ ಎ ವಿವೇಕ ರೈ, ಪ್ರೊ. ರಹಮತ್ ತರೀಕೆರೆ ಮೊದಲಾದ ಬೆರಳೆಣಿಕೆಯ ಕೆಲವು ಹಿರಿಯರ ಕೆಲಸಗಳನ್ನು ಬಿಟ್ಟರೆ ಕನ್ನಡ ಸಂಶೋಧನೆಯು ಇಂದು ತನ್ನ ನೆಲೆಯನ್ನು ಕಳಕೊಂಡಂತೆ ಭಾಸವಾಗುತ್ತದೆ. ಕಳೆದ ಸುಮಾರು ೨೫ ವರ್ಷಗಳಲ್ಲಿ ಪ್ರಕಟವಾದ ನಾಲ್ಕಾರು ಪುಸ್ತಕಗಳನ್ನು ಹೊರತುಪಡಿಸಿದರೆ, ಯಾವುದೇ ಮಹತ್ವದ ಸಂಶೋಧನಾ ಗ್ರಂಥ ಪ್ರಕಟವಾದದ್ದು ನನ್ನ ಗಮನಕ್ಕೆ ಬಂದಿಲ್ಲ. ಈ ಪರಿಸ್ಥಿತಿಯಿಂದ ಸಂಶೋಧನೆಯನ್ನು ಪಾರುಮಾಡುವ ಜವಾಬ್ದಾರಿಯನ್ನು ವಿಶ್ವವಿದ್ಯಾಲಯಗಳು ಹೊರದೆ ಬೇರೆ ಹಾದಿಯಿಲ್ಲ. ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ ( ೨೦೦೭), ಹಳಗನ್ನಡ -ಲಿಪಿ ಲಿಪಿಕಾರ, ಲಿಪಿ

ವ್ಯವಸಾಯ ( ೨೦೧೪) ಗಳಂಥ ಅತ್ಯಂತ ಉದ್ಬೋಧಕ ಕೃತಿಗಳನ್ನು ರಚಿಸಿದ ಷ. ಶೆಟ್ಟರ್ ಅವರು ಬೇರೆ ಶಿಸ್ತಿನಿಂದ ಬಂದವರು ಎಂಬುದನ್ನು ನೆನಸಿಕೊಂಡರೆ ಕನ್ನಡದ ಕರುಣಾಜನಕ ಸ್ಥಿತಿ ಕಣ್ಣಮುಂದೆ ಬಂದು ನಿಲ್ಲುತ್ತದೆ. ನಾವು ಈ ಪರಿಸ್ಥಿತಿಯಿಂದ ಪಾರಾಗಲು ಹಾದಿಗಳನ್ನು ಕಂಡುಕೊಳ್ಳುವುದು ಇಂದಿನ ತುರ್ತು ಅಗತ್ಯಗಳಲ್ಲಿ ಒಂದಾಗಿದೆ.

**ಭಾಗ ಎರಡು : ಮುನ್ನೋಟ**

ನಮ್ಮ ಹಿರಿಯರು ತಮ್ಮ ಸಂಶೋಧನೆಗಳ ಮೂಲಕ ಅವರ ಕಾಲದ ಅಗತ್ಯಗಳನ್ನು ಸಮರ್ಪಕವಾಗಿ ಪೂರೈಸಿದರು. ಸಂಶೋಧನೆಯೇ ಇಲ್ಲದ ಕಾಲದಲ್ಲಿ ಪಾಶ್ಚಾತ್ಯ ವಿದ್ವಾಂಸರು ಅಮೂಲ್ಯ ಮಾಹಿತಿಗಳನ್ನು ಕಲೆಹಾಕಿದರು. ಆನಂತರ ಕೆಲಸ ಮಾಡಿದ ಆರಂಭಿಕ ಹಂತದ ದೇಸೀ ವಿದ್ವಾಂಸರು ಕನ್ನಡ ಸಂಶೋಧನೆಗೆ ಬೇಕಾಗಿದ್ದ ಬಲವಾದ ತಳಹದಿಯನ್ನು ನಿರ್ಮಿಸಿಕೊಟ್ಟರು. ಸ್ವಾತಂತ್ರ್ಯೋತ್ತರ ಕಾಲದ ಶೈಕ್ಷಣಿಕ ಹಂತದ ವಿದ್ವಾಂಸರು ಕನ್ನಡ ಸಂಶೋಧನೆಗೆ ವೈಜ್ಞಾನಿಕವಾದ ನೆಲೆಗಟ್ಟನ್ನು ಒದಗಿಸಿಕೊಟ್ಟರು. ಈಗ ನಾವು ಸಂಶೋಧನೆಯ ಕೆಲಸಗಳನ್ನು ಮುಂದುವರಿಸುವುದು ಹೇಗೆ ಎಂಬ ಪ್ರಶ್ನೆಯನ್ನು ಗಂಭೀರವಾಗಿ ಕೇಳಿಕೊಳ್ಳಬೇಕು.

ಮುಖ್ಯವಾಗಿ ಇವತ್ತು ಸಂಶೋಧನೆಯ ವಾತಾವರಣ ಗಮನಾರ್ಹವಾಗಿ ಬದಲಾಗಿದೆ. ನಮಗೆಲ್ಲ ಈಗಾಗಲೇ ತಿಳಿದಿರುವಂತೆ, ಇದು ಜಾಗತೀಕರಣದ ಕಾಲ. ತೊಂಬತ್ತರ ದಶಕದಿಂದೀಚೆಗಣ ಉದಾರೀಕರಣ, ಜಾಗತೀಕರಣ, ಖಾಸಗೀಕರಣ, ವ್ಯಾಪಾರೀಕರಣ ಹಾಗೂ ಮಾರುಕಟ್ಟೆಯ ನೀತಿಗಳು ಜಗತ್ತನ್ನು ಆಮೂಲಾಗ್ರವಾಗಿ ಬದಲಾಯಿಸಿವೆ. ಮೇಲಿನ ಪರಿಭಾಷೆಗಳು ಮೂಲತಹ ಆರ್ಥಿಕ ಕ್ಷೇತ್ರಕ್ಕೆ ಸಂಬಂಧಿಸಿವೆಯಾದರೂ ಇಂದು ಅವು ನಮ್ಮ ಸಮಾಜವನ್ನು ಪೂರ್ತಿಯಾಗಿ ಆಕ್ರಮಿಸಿಕೊಂಡಿವೆ. ಅದೇ ಪ್ರಕಾರ ಅವು ಉನ್ನತ ಶಿಕ್ಷಣ ಕ್ಷೇತ್ರವನ್ನೂ ಆಮೂಲಾಗ್ರವಾಗಿ ಬದಲಾಯಿಸಲು ಒತ್ತಾಯಿಸುತ್ತಿವೆ. ಪರಿಣಾಮವಾಗಿ ಉನ್ನತ ಶಿಕ್ಷಣದ ಅಂತಾರಾಷ್ಟ್ರೀಯಕರಣ (Internationalization of higher education) ಇಂದಿನ ತೀವ್ರವಾದ ಪ್ರಕ್ರಿಯೆಗಳಲ್ಲಿ ಒಂದಾಗಿದೆ. ವಿಶ್ವದ ಕುರಿತಾದ ಭಾರತದ ತಿಳುವಳಿಕೆಗಳಿಗಾಗಿ ಹಾಗೂ ಭಾರತದ ಕುರಿತಾಗಿ ವಿಶ್ವದ ತಿಳುವಳಿಕೆಗಾಗಿ ಈ ಅಂತಾರಾಷ್ಟ್ರೀಯಕರಣ ಪ್ರಕ್ರಿಯೆ ಅಗತ್ಯ ಎಂದು ಭಾವಿಸಲಾಗುತ್ತಿದೆ. ಉನ್ನತ ಶಿಕ್ಷಣದ ಜಾಗತೀಕರಣದ Town awrige (United Nations Educational, Scientific and Cul- tural Organization-UNESCO) ಮತ್ತು ವಿಶ್ವವಿದ್ಯಾಲಯಗಳ ಅಂತಾರಾಷ್ಟ್ರೀಯ ಸಂಸ್ಥೆಯು (International Association of Universities-IAU) ಜಂಟಿಯಾಗಿ ಪ್ರಬಲವಾದ ವಾದ ಮಂಡಿಸಿವೆ. ಇದಕ್ಕೆ ಮುಖ್ಯ ಕಾರಣ ಸರಕಾರಗಳ ಪಾಲಿಗೆ 'ಅನುತ್ಪಾದಕ' ವಸ್ತುವಾಗಿದ್ದ ಉನ್ನತ ಶಿಕ್ಷಣವು ಜಾಗತೀಕರಣ ಪ್ರಕ್ರಿಯೆಯೊಂದಿಗೆ ಹಣ ಮಾಡಲು ಆರಂಭಿಸಿದ್ದು, ಸರಕಾರಗಳು ಉನ್ನತ ಶಿಕ್ಷಣ ಕ್ಷೇತ್ರದಿಂದ ಹಿಂದೆ ಸರಿಯುತ್ತಿದ್ದಂತೆ

ಖಾಸಗಿ ವಿಶ್ವವಿದ್ಯಾಲಯಗಳು, ಡೀಮ್ಡ್ ವಿಶ್ವವಿದ್ಯಾಲಯಗಳು ಮತ್ತು ವಿದೇಶಿ ವಿಶ್ವವಿದ್ಯಾಲಯಗಳು ಆರ್ಥಿಕ ಭದ್ರತೆಗಾಗಿ ನಯವಾದ ಬಗೆಯಲ್ಲಿ 'ತಲೆಗಂದಾಯ' ವಸೂಲು ಮಾಡಲು ಹೊರಟವು. ಇನ್ಸಿಟ್ಯೂಟ್ ಆಫ್ ಇಂಟರ್‌ನೇಶನಲ್ ಎಜುಕೇಶನ್ (IIE) ಎಂಬ ಹೆಸರಿನ ಸಂಸ್ಥೆಯು ಬಿಡುಗಡೆ ಮಾಡಿದ ವರದಿಯ ಪ್ರಕಾರ ೨೦೦೩- ೦೪ ರಲ್ಲಿ ಅಮೆರಿಕಾ ದೇಶದಲ್ಲಿ ಹೊರದೇಶದಿಂದ ಆಗಮಿಸಿದ ೦೨,೮೩,೦೦೦ ವಿದ್ಯಾರ್ಥಿಗಳು ಅಧ್ಯಯನ ಮಾಡಿದ್ದು ಅದರಿಂದ ಆ ದೇಶಕ್ಕೆ ೨೦.೯೫ ಬಿಲಿಯನ್ ಡಾಲರ್ ಆದಾಯವಾಗಿದ್ದು. ಈ ಆದಾಯವು ೨೦೦೬-೦೭ ರಲ್ಲಿ ೨೩ ಬಿಲಿಯನ್ ಡಾಲರ್‌ಗೆ ಏರಿದೆ. ಆಸ್ಟ್ರೇಲಿಯಾದಲ್ಲಿ ೨೦೦೩-೨೦೦೪ರಲ್ಲಿ ಸುಮಾರು ೪ ಲಕ್ಷ ಹೊರದೇಶದ ವಿದ್ಯಾರ್ಥಿಗಳು ಅಭ್ಯಸಿಸುತ್ತಿದ್ದು ಆಗ ಆ ದೇಶದ ಆದಾಯ ೮.೨ ಬಿಲಿಯನ್ ಆಸ್ಟ್ರೇಲಿಯನ್ ಡಾಲರ್ ಆಗಿತ್ತು. ಜಾಗತೀಕರಣದ ಪರಿಣಾಮವಾಗಿ ಈ ಆದಾಯವು ೨೦೦೬-೦೭ ರಲ್ಲಿ ೦೬ ಬಿಲಿಯನ್ ಡಾಲರ್‌ಗೆ ಏರಿತು. ಸಣ್ಣ ದೇಶ ನ್ಯೂಜಿಲೆಂಡ್ ನಲ್ಲಿ ೨೦೦೬-೨೦೦೭ರಲ್ಲಿ ಸುಮಾರು ಎರಡು ಲಕ್ಷ ವಿದೇಶೀ ವಿದ್ಯಾರ್ಥಿಗಳು ಅಭ್ಯಾಸ ಮಾಡಿದ್ದು ಆ ದೇಶದ ಬೊಕ್ಕಸಕ್ಕೆ ೨.೭ ಬಿಲಿಯನ್ ಡಾಲರ್ ಆದಾಯವಾಗಿದ್ದು ೨೦೦೬-೦೭ ರಲ್ಲಿ ಅದು ೭ ಬಿಲಿಯನ್ ಡಾಲರ್‌ಗಳಿಗೆ ಏರಿತು. ಈ ಬಗೆಯ ಆದಾಯದ ಕುರಿತು ಇತರ ದೇಶಗಳು ಕಣ್ಣುಮುಚ್ಚಿ ಕುಳಿತಿರಲು ಸಾಧ್ಯವಿರಲಿಲ್ಲ. ಏಕೆಂದರೆ ೨೦ನೇ ಶತಮಾನದ ಆರಂಭಕ್ಕೆ ಉನ್ನತ ಶಿಕ್ಷಣವು ಬಿಲಿಯನ್ ಡಾಲರ್ ಆದಾಯದ ಪ್ರಶ್ನೆಯಾಗಿದೆ.

ಭಾರತದಲ್ಲಿ ಶಿಕ್ಷಣದ ಅಂತಾರಾಷ್ಟ್ರೀಕರಣ ಪ್ರಕ್ರಿಯೆಯು ಗ್ಯಾಟ್ ( General Agreement of Trade in Services ಹಾಗೂ ಡಬ್ಲ್ಯುಟಿಒ (World Trade Orga- nizations) ಒಪ್ಪಂದದ ಮೇರೆಗೆ ಆರಂಭವಾಯಿತು. ಎಪ್ರಿಲ್ ೦, ೨೦೦೫ ರಂದು ಜಾರಿಗೆ ಬಂದ ಈ ಒಪ್ಪಂದದ ಅನುಸಾರವಾಗಿ, ೦೦ನೇ ಪಂಚವಾರ್ಷಿಕ ಯೋಜನೆಯಲ್ಲಿ ಉನ್ನತ ಶಿಕ್ಷಣವನ್ನು “Educational Services as sector of industry under GATS' ಎಂದು ಇತರ ೦೨ ವಿಷಯಗಳೊಂದಿಗೆ ಸೇರಿಸಿ ಘೋಷಿಸಿತು. ಇಂದು ನಾವು ಶಿಕ್ಷಣದ ವ್ಯಾಪಾರೀಕರಣದ ಬಗ್ಗೆ ಆಗಾಗ ಅಸಹನೆ ಪ್ರಕಟಿಸುತ್ತೇವೆ, ಆದರೆ ಅದು ಸರಕಾರದ ಒಂದು ಅಂಗೀಕೃತ ಯೋಜನೆಯಾಗಿದೆ ಎಂಬುದನ್ನು ಮರೆಯಬಾರದು.

ಹೀಗೆ ಉನ್ನತ ಶಿಕ್ಷಣವನ್ನು ಕೈಗಾರಿಕೆಗಳ ಭಾಗವಾಗಿ ಪರಿಗಣಿಸಿದ ಆನಂತರ ಭಾರತವೂ ಸೇರಿದಂತೆ ಅನೇಕ ದೇಶಗಳು ಉನ್ನತ ಶಿಕ್ಷಣದ ಅಂತಾರಾಷ್ಟ್ರೀಕರಣಕ್ಕೆ ಸಜ್ಜಾಗಿವೆ. ಯುಜಿಸಿಯು ಇದೇ ಸಂದರ್ಭದಲ್ಲಿ PIHEAD (promotion of In dian higher education abroad) ಎಂಬ ಹೆಸರಿನ ಸಮಿತಿಯೊಂದನ್ನು ಸ್ಥಾಪಿಸಿತು. ಕ್ಷಿಪ್ರವಾಗಿ ಕಾರ್ಯನಿರ್ವಹಿಸಲಾರಂಭಿಸಿದ ಈ ಸಮಿತಿಯು ಯುಜಿಸಿಗೆ ಮಾಡಿದ

ಶಿಫಾರಸುಗಳಲ್ಲಿ ಈ ಕೆಳಗಿನ ಮೂರನ್ನು ಇದೀಗ ಜಾರಿಗೆ ತರಲು ಸರಕಾರ ತೀವ್ರವಾಗಿ ಪ್ರಯತ್ನಿಸುತ್ತಿದೆ-

ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳ ಹಾಜರಾತಿ : ಈ ಶಿಫಾರಸಿನ ಪ್ರಕಾರ ೨೦೨೦ನೇ ಇಸವಿಯ ಹೊತ್ತಿಗೆ ಭಾರತದ ಬಹುತೇಕ ವಿಶ್ವವಿದ್ಯಾಲಯಗಳಲ್ಲಿ ವಿದೇಶೀ ವಿದ್ಯಾರ್ಥಿಗಳು ವ್ಯಾಸಂಗ ಮಾಡಲಿದ್ದಾರೆ. ಈ ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ನಾವು ಪಠ್ಯಕ್ರಮ, ಅಧ್ಯಯನದ ಅವಧಿ ಮತ್ತು ಮೌಲ್ಯಮಾಪನ ವಿಧಾನಗಳಲ್ಲಿ ಸೂಕ್ತವಾದ ಬದಲಾವಣೆಗಳನ್ನು ಮಾಡಿಕೊಳ್ಳಲು ತಯಾರಾಗಬೇಕಾಗಿದೆ. ಕ್ರೆಡಿಟ್ ವ್ಯವಸ್ಥೆಯನ್ನು ಜಾರಿಗೆ ತರುವುದು ಅನಿವಾರ್ಯವಾಗಲಿದೆ. ಜೊತೆಗೆ ಒಂದು ವಿಷಯಕ್ಕೆ ಸಂಬಂಧಿಸಿದ ಹಾಗೆ ಅಧ್ಯಯನ ಮಾಡಲು ಆಗಮಿಸುವ ವಿದ್ಯಾರ್ಥಿಗಳು ವಿಭಾಗಗಳ ಗೋಡೆಗಳನ್ನು ನಿಧಾನವಾಗಿ ಒಡೆಯಲಿದ್ದಾರೆ. ಒಂದು ಸೆಮೆಸ್ಟರ್‌ನಲ್ಲಿ ಕನ್ನಡ ಜಾನಪದವನ್ನು ಕರ್ನಾಟಕದಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಯು ಇನ್ನೊಂದು ಸೆಮೆಸ್ಟರ್‌ನಲ್ಲಿ ತಮಿಳು ಜಾನಪದವನ್ನು ಅಭ್ಯಸಿಸಲು ತಮಿಳುನಾಡಿಗೆ ಹೋಗುವ ದಿನ ದೂರವಿಲ್ಲ.

ದೇಶೀಯ ಮತ್ತು ವಿದೇಶೀಯ ವಿದ್ಯಾಲಯಗಳು ಒಟ್ಟಿಗೆ ಕೆಲಸ ಮಾಡುವ ಅವಳಿ ಕಾರ್ಯಕ್ರಮಗಳು (twinning programs) ಹಾಗೂ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಗಳು (exchange programs): ಈ ಯೋಜನೆಯಲ್ಲಿ ಖಾಸಗಿ ವಿಶ್ವವಿದ್ಯಾಲಯಗಳು ವಿದೇಶಿ ವಿಶ್ವವಿದ್ಯಾಲಯಗಳೊಂದಿಗೆ ಸಂಬಂಧ ಸ್ಥಾಪಿಸಿಕೊಳ್ಳುತ್ತವೆ. ಆ ಮೂಲಕ ಪರಸ್ಪರ ಮಾಹಿತಿ ಹಾಗೂ ಪರಿಣತರ ವಿನಿಮಯ ಸಾಧ್ಯವಾಗುತ್ತದೆ. ದೆಹಲಿಯ ಅನೇಕ ಶಿಕ್ಷಣ ಸಂಸ್ಥೆಗಳಲ್ಲಿ ಈಗಾಗಲೇ ವಿದೇಶೀ ಅಧ್ಯಾಪಕರು ಪಾಠ ಮಾಡುತ್ತಿದ್ದಾರೆ. ಈ ಬಗೆಯ ಸಹಭಾಗಿತ್ವದಿಂದ ಅನಿವಾಸಿ ಭಾರತೀಯರು ಇಲ್ಲಿ ವಿಶ್ವವಿದ್ಯಾಲಯಗಳನ್ನು ಆರಂಭಿಸಬಹುದು ಮತ್ತು ಅನಿವಾಸಿ ಭಾರತೀಯ ವಿದ್ಯಾರ್ಥಿಗಳು ಭಾರತದ ವಿವಿಗಳಲ್ಲಿ ಕಲಿಯಲು ದೊಡ್ಡ ಪ್ರಮಾಣದಲ್ಲಿ ಮುಂದೆ ಬರಬಹುದು. ಇದರಿಂದಾಗಿ ವಿವಿಗಳ ಸಂಪತ್ತಿನ ಸ್ಥಿತಿಗತಿಗಳು ಸುಧಾರಿಸುತ್ತವೆ. ಪರಿಣಾಮವಾಗಿ ಪಾಠಪ್ರವಚನಗಳು, ಅಧ್ಯಯನ, ಸಂಶೋಧನಾ ಕಾರ್ಯ, ಮೂಲಭೂತ ಸೌಲಭ್ಯಗಳ ಗುಣಮಟ್ಟ ವರ್ಧಿಸಲಿದೆ. ವಿದೇಶಿ ವಿಶ್ವವಿದ್ಯಾಲಯಗಳ ಸಹಯೋಗದಿಂದಾಗಿ ನಮ್ಮ ವಿಶ್ವವಿದ್ಯಾಲಯಗಳು ತುಲನಾತ್ಮಕವಾಗಿ ಅಂತರರಾಷ್ಟ್ರೀಯ ಮನ್ನಣೆಗೆ ಪಾತ್ರವಾಗುತ್ತವೆ. ಸರಕಾರದ ಹಸ್ತಕ್ಷೇಪ ಕಡಿಮೆಯಿರುವುದರಿಂದ ನಿರ್ಬಂಧ ನಿಯಮಗಳೂ ಕಡಿಮೆಯಾಗಿ ಖಾಸಗಿ ವಿಶ್ವವಿದ್ಯಾಲಯಗಳು ಹೊಸ ಹೊಸ ವ್ಯಾಸಂಗ ವಿಭಾಗಗಳನ್ನು ಆರಂಭಿಸಬಹುದು. ಹೆಚ್ಚಿನ ಸ್ವಾಯತ್ತೆಯಿಂದಾಗಿ ತಮ್ಮದೇ ಆದ ರೀತಿಯಲ್ಲಿ ಗುಣಮಟ್ಟ ಕಾಯ್ದುಕೊಳ್ಳುವ ಕ್ರಮಗಳನ್ನು ಕೈಗೊಳ್ಳಬಹುದು. ಒಟ್ಟಿನಲ್ಲಿ ಈ ಬದಲಾವಣೆಯು ಮುಂದಿನ ದಿನಗಳಲ್ಲಿ ಉನ್ನತ ಶಿಕ್ಷಣದ ಕ್ರಮಗಳನ್ನು ಆಮೂಲಾಗ್ರವಾಗಿ ಬದಲಾಯಿಸಲಿವೆ.

ಪಾಶ್ಚಾತ್ಯ ಮಾದರಿಯ ವಿಶ್ವವಿದ್ಯಾಲಯಗಳು ಮತ್ತು ಅಲ್ಲಿಯ ಬೋಧನೆಯ ಕಲಿಕೆಯ ಗುಣಮಟ್ಟ ಇತ್ಯಾದಿಗಳು ಮುಂದಿನ ದಿನಗಳಲ್ಲಿ ನಮಗೊಂದು ಸವಾಲಾಗುವುದಂತೂ ನಿರ್ವಿವಾದ.

ಅತ್ಯುತ್ತಮ ಶಿಕ್ಷಣದ ರಫ್ತಿಗಾಗಿ ವಿಶೇಷ ವಲಯಗಳ ಸ್ಥಾಪನೆ( Special edu- cational excellence and export zones - SEEEZ) : 03 Best Ngo, ಪೂರ್ವ, ಪಶ್ಚಿಮ ಮತ್ತು ದಕ್ಷಿಣದಲ್ಲಿ ಆರಂಭವಾಗಲಿರುವ ಈ ವಿಶೇಷ ಶಿಕ್ಷಣ ವಲಯಗಳಲ್ಲಿ ಭಾರತೀಯ ಮತ್ತು ವಿದೇಶೀಯ ವಿಶ್ವವಿದ್ಯಾಲಯಗಳು ಜಂಟಿಯಾಗಿ ಕೆಲಸ ಮಾಡುತ್ತವೆ. ಇಲ್ಲಿನ ಪಠ್ಯಕ್ರಮಗಳನ್ನು ಎರಡೂ ದೇಶಗಳ ವಿಶ್ವವಿದ್ಯಾಲಯಗಳು ಜಂಟಿಯಾಗಿ ರೂಪಿಸುತ್ತವೆ. ಹಾಗೆಯೇ ಎರಡು ದೇಶಗಳ ಅಧ್ಯಾಪಕರು ಈ ವಲಯಗಳಲ್ಲಿ ಜಂಟಿಯಾಗಿ ಕೆಲಸಮಾಡುತ್ತಾರೆ. ಜಾಗತೀಕರಣದ ಇಂದಿನ ಸಂದರ್ಭದಲ್ಲಿ ಇಂಥ ಯೋಜನೆಗಳು ಕಾರ್ಪೋರೇಟ್ ಜಗತ್ತಿಗೆ ಬೇಕಾದ ಬುದ್ಧಿವಂತರನ್ನು ಸೃಷ್ಟಿಸಿಕೊಡುವಲ್ಲಿ ಸಫಲವಾಗುತ್ತವೆ.

ಮೇಲಿನ ಮೂರೂ ಶಿಫಾರಸುಗಳು ಇದೀಗ ಉನ್ನತ ಶಿಕ್ಷಣದ ಸ್ವರೂಪವನ್ನು ಆಮೂಲಾಗ್ರವಾಗಿ ಬದಲಾಯಿಸುತ್ತಿವೆ.

ಇದರ ಪರಿಣಾಮವಾಗಿ ಇಂದು ಶಿಕ್ಷಣವು ಒಂದು ರಾಜ್ಯದ, ಒಂದು ವಿಶ್ವವಿದ್ಯಾಲಯದ ಅಥವಾ ಒಂದು ದೇಶದ ಗಡಿಗೆ ಸೀಮಿತವಾಗಿ ಉಳಿಯುತ್ತಿಲ್ಲ. ಉನ್ನತ ಶಿಕ್ಷಣವು ಇದೀಗ 'ಸೀಮಾತೀತ' (Borderless) ವಾಗುತ್ತಿದೆ. ಶಿಕ್ಷಣದ ಅಂತಾರಾಷ್ಟ್ರೀಕರಣದ ಪ್ರಕ್ರಿಯೆಯು ಸ್ಥಳೀಯ ಸಾಂಸ್ಕೃತಿಕ ಮತ್ತು ಪ್ರಾದೇಶಿಕ ವಿಶಿಷ್ಟತೆಗಳೆಲ್ಲ ಮರೆಸಿ, 'ವಾಸನೆ ಬಣ್ಣ ರಹಿತವಾದ' ಏಕರೂಪದ ವ್ಯವಸ್ಥೆಯೊಂದನ್ನು ಆಗುಮಾಡುತ್ತಿದೆ. ಮುಂದುವರಿದ ಅದರಲ್ಲೂ ಮುಖ್ಯವಾಗಿ ದೊಡ್ಡಣ್ಣ ಅಮೇರಿಕಾಕ್ಕೆ ಅನುಕೂಲವಾಗುವಂಥ ಕ್ರೆಡಿಟ್ ವ್ಯವಸ್ಥೆ, ಸೆಮಿಸ್ಟರ್‌ರ, ಸ್ವಾಯತ್ತೆ, ಸ್ವಧನ ಸಹಾಯದ ಕಾಲೇಜುಗಳು ಮತ್ತು ಖಾಸಗಿ ವಿಶ್ವವಿದ್ಯಾಲಯಗಳ ಸ್ಥಾಪನೆಗಳು ಈಗ ಸುಲಭ ಸಾಧ್ಯವಾಗಿದೆ. ಇವುಗಳ ಪರಿಣಾಮವೋ ಎಂಬಂತೆ ನಿಂತ ನೆಲದ ಬಗ್ಗೆ ಗೌರವವಿಲ್ಲದ, ಮಣ್ಣಿನ ವಾಸನೆಯ ಅರಿವಿಲ್ಲದ ಅಂತರರಾಷ್ಟ್ರೀಯ ಪ್ರಜೆಗಳು ನಿರ್ಮಾಣವಾಗುತ್ತಿದ್ದಾರೆ. ಇದರಿಂದಾಗಿ ನಮ್ಮ ರಾಷ್ಟ್ರೀಯ ಪರಿಕಲ್ಪನೆಗಳೇ ಬದಲಾಗುತ್ತಿವೆ.

ಇಂಥ ಬದಲಾದ ಪರಿಸ್ಥಿತಿಯಲ್ಲಿ ಕನ್ನಡ ಸಂಶೋಧನೆಯು ಯಾವ ಹಾದಿ ಹಿಡಿಯಬೇಕು ಎಂಬುದು ಬಹಳ ದೊಡ್ಡ ಪ್ರಶ್ನೆ, ಮಾರುಕಟ್ಟೆಯ ಧ್ಯೆಯ ಧೋರಣೆಗಳು ಉನ್ನತ ಶಿಕ್ಷಣವನ್ನು ನಿಯಂತ್ರಿಸುತ್ತಿರುವಾಗ ಸ್ಥೂಲವಾಗಿ ಮಾನವಿಕಗಳನ್ನು, ನಿಖರವಾಗಿ ಕನ್ನಡ ಸಂಶೋಧನೆಯನ್ನು ಮುಂದುವರಿಸಬೇಕಾದ ರೀತಿ ಯಾವುದು?

ಇದೊಂದು ದೊಡ್ಡ ಪ್ರಶ್ನೆ, ವಿಸ್ತಾರವಾದ ಉತ್ತರವನ್ನು ಅದು ಬೇಡುತ್ತದೆ. ಒಟ್ಟು ಕನ್ನಡ ಸಂಸ್ಕೃತಿಯನ್ನು ಜಾಗತಿಕ ಚೌಕಟ್ಟಿನಲ್ಲಿರಿಸಿ ನಡೆಸುವ ಸಂಶೋಧನೆಯು ಇಂದಿನ

ಅಗತ್ಯ ಹೌದಾದರೂ ಅದನ್ನು ನಡೆಸಲು ಬೇಕಾದ ಸಿದ್ಧತೆಗಳು ನಮ್ಮಲ್ಲಿ ಇನ್ನೂ ಇಲ್ಲ. ಈ ಮಿತಿಯಲ್ಲಿ ಕನ್ನಡದಲ್ಲಿ ಇದೀಗ ಕೆಲಸ ಮಾಡುತ್ತಿರುವ ಹೊಸ ತಲೆಮಾರಿನ ಸಂಶೋಧಕರು ಈ ಕೆಳಗಿನ ಮೂರು ಅಂಶಗಳ ಬಗೆಗೆ ಗಮನ ನೀಡುವುದರಿಂದ ಕನ್ನಡ ಸಂಶೋಧನೆಗೆ ತುಂಬ ಲಾಭವಿದೆಯೆಂದು ನಾನು ಭಾವಿಸುತ್ತೇನೆ:

೧. ಬಹು ಪಠ್ಯಗಳ ಅಧ್ಯಯನ

೨. ಪಠ್ಯಗಳ ವಿಸ್ತರಣೆಯ ವಿಶ್ಲೇಷಣೆ

೩. ಬಹು ಆಕರಗಳ ಕಡೆಗೆ ಗಮನ

೪. ಪರ್ಯಾಯ ಸಂಸ್ಕೃತಿಗಳ ಹುಡುಕಾಟ

ಒಂದೆರಡು ಉದಾಹರಣೆಗಳ ಮೂಲಕ ಇದನ್ನು ಇನ್ನಷ್ಟು ಸ್ಪಷ್ಟಪಡಿಸ ಬಯಸುತ್ತೇನೆ.

**೨.೧: ಬಹುಪಠ್ಯಗಳ ಅಧ್ಯಯನ :**

ಜಾಗತೀಕರಣವು ಜಗತ್ತನ್ನು ಏಕಾಕೃತಿ ಮಾದರಿಯಲ್ಲಿ ಗ್ರಹಿಸಿ ವಿವರಿಸುವ ಹೊತ್ತಲ್ಲಿ ಸಂಶೋಧಕರು ಜಗತ್ತಿನ ಬಹುರೂಪಗಳ ಕುರಿತು ಕೆಲಸ ಮಾಡುವುದರಿಂದ ತುಂಬ ತುಂಬ ಪ್ರಯೋಜನವಿದೆ. ಕರ್ನಾಟಕವನ್ನೇ ಗಮನಿಸೋಣ.

ಭಾರತ ದೇಶದ ಇತರ ಅನೇಕ ಭಾಷೆಗಳಿಗಿಂತ ತುಂಬಾ ಭಿನ್ನವಾದ ಚರಿತ್ರೆಯನ್ನು ಕನ್ನಡವು ಹೊಂದಿದೆ. ಕ್ರಿ. ಶ. ೮೪೦ರಲ್ಲಿ ರಚಿತವಾಗಿದೆ ಎನ್ನಲಾದ 'ವಡ್ಡಾರಾಧನೆ' ಎಂಬ ಗದ್ಯ ಕೃತಿಯಲ್ಲಿನ ಭದ್ರಬಾಹು ಭಟಾರರ ಕತೆಯ ಪ್ರಕಾರ ಸಂಪ್ರತಿ ಚಂದ್ರಗುಪ್ತನ ಕಾಲದಲ್ಲಿ ಉತ್ತರ ಭಾರತದಲ್ಲಿ ೧೨ ವರ್ಷಗಳ ಕಾಲ ಭೀಕರ ಬರಗಾಲ ಬರುತ್ತದೆ. 'ಹನ್ನೆರಡು ವರ್ಷಗಳವರೆಗೆ ಈ ನಾಡೊಳು ಅನಾವೃಷ್ಟಿಯಾಗಿ ಮಹಾರೌದ್ರ ಪ್ರಸವವಾಗಿ ಮಧ್ಯದೇಶವೆಲ್ಲವೂ ಪಾಳುಬಿದ್ದು, ನಾಡೊಳಿರುವ ಋಷಿಗಳಿಗೆ ವ್ರತ ಭಂಗವಾಗುವುದರಿಂದಾಗಿ ದಕ್ಷಿಣಾಪಥಕ್ಕೆ ಹೋಗೋಣ' ಎಂದು ಹೇಳುವ ಭದ್ರಬಾಹು ಭಟಾರರು ಮುಂದೆ ಸಂಪ್ರತಿ ಚಂದ್ರಗುಪ್ತರ ಜೊತೆ ದಕ್ಷಿಣಾಪಥಕ್ಕೆ ತೆರಳುತ್ತಾರೆ. ದಕ್ಷಿಣಾಪಥದಲ್ಲಿ ಅತ್ಯಂತ ಪ್ರಶಸ್ತವಾದ 'ಕಪ್ಪು ನಾಡು " (ಈಗಣ ಶ್ರವಣಬೆಳಗೊಳ) ವಿಗೆ ಬಂದು ಅಲ್ಲಿಯೇ ನೆಲೆ ನಿಲ್ಲುತ್ತಾರೆ. ಈ ಘಟನೆ ನಡೆದಿರಬಹುದಾದ ಕಾಲ ಸುಮಾರು ಕ್ರಿಸ್ತಶಕ ಪೂರ್ವ ೩ ನೇ ಶತಮಾನ. ಆ ಕಾಲದ ದಕ್ಷಿಣ ಭಾರತದ ಚರಿತ್ರೆಯನ್ನು ಅವಲೋಕಿಸಿದರೆ, ಕರ್ನಾಟಕದ ಈ ಭೂಭಾಗಕ್ಕಿಂತ ತಮಿಳುನಾಡಿನ ಚೋಳ ಮಂಡಲದ ತಂಜಾವೂರು ಪ್ರದೇಶ ಹೆಚ್ಚು ಫಲವತ್ತಾಗಿತ್ತು, ಬದುಕುವುದಕ್ಕೆ ಅನುಕೂಲವಾಗಿದ್ದ ಸ್ಥಳವಾಗಿತ್ತು. ಆದರೆ ಸಂಪ್ರತಿ ಚಂದ್ರಗುಪ್ತ ಮತ್ತು ಭದ್ರಬಾಹು ಭಟಾರರು ತಮ್ಮ ದಕ್ಷಿಣಾಪಥದ ವಲಸೆಗೆ ಆಯ್ದುಕೊಂಡದ್ದು ತಮಿಳುನಾಡಿನ ಆ

ಫಲವತ್ತಾದ ಭೂ ಭಾಗವನ್ನಲ್ಲ, ಬದಲು ಕರ್ನಾಟಕದ ಕನ್ನಡ ಭಾಷಾ ಪ್ರದೇಶವನ್ನು. ಹಾಗೆ ಬಂದು ನೆಲೆ ನಿಂತ ಜೈನರು ಮುಂದೆ ಕರ್ನಾಟಕವನ್ನು "ಜಿನ ಧರ್ಮದ



ಆಡುಂಬೊಲಂ' ಮಾಡಿಕೊಂಡರು. ಕನ್ನಡಕ್ಕೆ ಪಂಪ, ಪೊನ್ನ, ರನ್ನ, ಚಾವುಂಡರಾಯ, ನಾಗಚಂದ್ರ, ನಾಗವರ್ಮ, ಅತ್ತಿಮಬ್ಬೆ, ನಯಸೇನ, ಬ್ರಹ್ಮಶಿವ, ಜನ್ನ ಮೊದಲಾದ ಅತ್ಯಂತ ಮಹತ್ವದ ಕವಿಗಳನ್ನು ಕೊಟ್ಟ ಜೈನರು, ಕನ್ನಡ ಸಂವೇದನೆಯನ್ನು ಅದರ ಆರಂಭಿಕ ಹಂತದಲ್ಲಿಯೇ ಅತ್ಯಂತ ನವಿರಾಗಿ ರೂಪಿಸಿದರು. ಜೈನರ ಪ್ರಾಬಲ್ಯಕ್ಕೂ ಮುನ್ನ ಕರ್ನಾಟಕಕ್ಕೆ ಆಗಮಿಸಿದ ಬೌದ್ಧರು ಕೂಡಾ ಮಧ್ಯ ಕರ್ನಾಟಕವನ್ನು ತಮ್ಮ ಧರ್ಮ ಪ್ರಸಾರದ ಕೇಂದ್ರವನ್ನಾಗಿ ಮಾಡಿಕೊಂಡು ಸನ್ನತಿ, ಡಂಬಳ, ಕದರಿ, ಕೊಪ್ಪಳ, ಬ್ರಹ್ಮಗಿರಿ, ಮಸ್ಕಿ ಮೊದಲಾದ ಪ್ರದೇಶಗಳಲ್ಲೆಲ್ಲ ವಾಸಿಸಿ ಕನ್ನಡ ಸಂಸ್ಕೃತಿಯ ಆದಿಮ ಗುಣಗಳ ರೂಪುಗೊಳ್ಳುವಿಕೆಯಲ್ಲಿ ಗಮನಾರ್ಹವಾಗಿ ಪಾಲ್ಗೊಂಡರು. ಮೇಲುನೋಟಕ್ಕೆ ಕಾಣೆಯಾದಂತಿರುವ ಬೌದ್ಧ ಧರ್ಮವು ಕರ್ನಾಟಕದ ಅನೇಕ ಜನಪದ ಆಚರಣೆಗಳಲ್ಲಿ ಸೂಕ್ಷ್ಮವಾಗಿ ಇಂದಿಗೂ ಉಳಿದು ಬಂದಿದೆ. ಇಂದು ನಾವು ಕನ್ನಡದ್ದೇ ಎಂದು ಹೇಳುವ ವಚನ ಚಳುವಳಿಯ ಕಾಲದಲ್ಲಿ ಉತ್ತರದ ಕಾಶ್ಮೀರದಿಂದ ಕಲ್ಯಾಣಕ್ಕೆ ಬಂದ ಜನರು ತಮ್ಮ ಅರಿವಿನ ನೆಲೆಗಳನ್ನು ಕನ್ನಡಕ್ಕೆ ಒದಗಿಸಿಕೊಟ್ಟರು, ತಮಿಳುನಾಡಿನಲ್ಲಿ ಬಗೆಬಗೆಯ ಒತ್ತಡಗಳಿಗೆ ಗುರಿಯಾದ ರಾಮಾನುಜಾಚಾರ್ಯರು ಕೊನೆಗೂ ಕನ್ನಡದ ಮಣ್ಣಿಗೇ ಬಂದಾಗ ಕನ್ನಡಿಗರು ಅವರನ್ನು ತಿರಸ್ಕರಿಸಲಿಲ್ಲ. ಕ್ರಿಸ್ತಶಕ ಪೂರ್ವದಲ್ಲಿಯೇ ಕರಾವಳಿಗೆ ಆಗಮಿಸಿದ ಮುಸ್ಲಿಮರು ಮುಂದೆ ಬಿಜಾಪುರದಿಂದ ನಾಡನ್ನು ಆಳಿದರು. ಕರಾವಳಿಯಲ್ಲಿ ಆಲಿ ಭೂತ, ಬಬ್ಬರ್ಯ ಭೂತಗಳು ಸೃಷ್ಟಿಯಾದುವು. ಇಡೀ ಉತ್ತರ ಕರ್ನಾಟಕವು ಸೂಫಿ ಸಂತರ ನೆಲೆವೀಡಾಯಿತು. ಸಾವಿರಾರು ಮೈಲುಗಳ ದೂರದಲ್ಲಿ ಬಾಯಿಗೆ ನೀರಿಲ್ಲದೆ ಸತ್ತ ಅಸಗರನನ್ನು ಅಭಿಮನ್ಯುಗೆ ಹೋಲಿಸಿ ಕನ್ನಡ ಕಣ್ಣೀರಿಟ್ಟಿತು. ವಸಾಹತು ಕಾಲಘಟ್ಟದಲ್ಲಿ ಕ್ರಿಶ್ಚಿಯನ್ ಮಿಷನರಿಗಳು ಮಂಗಳೂರು, ಬಳ್ಳಾರಿ, ಧಾರವಾಡಗಳಲ್ಲಿ ಯಾವ ತೊಂದರೆಗಳಿಲ್ಲದೇ ಕೆಲಸಮಾಡಿದರು. ೧೯-೨೦ನೇ ಶತಮಾನದಲ್ಲಿ ಕನ್ನಡವು ಪಶ್ಚಿಮದ ವಿಚಾರಧಾರೆಗೆ ತನ್ನನ್ನು ಮುಕ್ತವಾಗಿ ತೆರೆದುಕೊಂಡು ಕಾದಂಬರಿ, ಸಣ್ಣಕತೆ, ಭಾವಗೀತೆಯೇ ಮೊದಲಾದ ಅನೇಕ ಪ್ರಕಾರಗಳನ್ನು ಪ್ರತೀತಗೊಳಿಸಿಕೊಳ್ಳುತ್ತಾ ಬೆಳೆದದ್ದು ನಮಗೆಲ್ಲ ತಿಳಿದೇ ಇದೆ.

ಚಾರಿತ್ರಿಕವಾಗಿ ಕನ್ನಡದ ಮಣ್ಣು ಬರಮಾಡಿಕೊಂಡ ಜನಸಮುದಾಯಗಳ ನಿಖರವಾದ ಅಧ್ಯಯನ ಇದುವರೆಗೆ ನಡೆದಿಲ್ಲ. ಇಥಿಯೋಪಿಯಾದಿಂದ ಕ್ರಿಸ್ತ ಶಕದಾರಂಭದಲ್ಲಿ ಗುಜರಾತಿನ ಮೂಲಕ ಭಾರತಕ್ಕೆ ಆಗಮಿಸಿದ 'ಹಬಶಿ' ಗುಂಪಿನ ಯೋಧರು, ದೆಹಲಿ ಸುಲ್ತಾನರ ಕೈಕೆಳಗೆ ಕೆಲಸ ಮಾಡಿ, ೧೪೫೯ರ ಹೊತ್ತಿಗೆ ದೆಹಲಿಯಿಂದ

ಬಂಗಾಳದವರೆಗೆ ವ್ಯಾಪಿಸಿಕೊಂಡು, ಕೊನೆಗೆ ಕರ್ನಾಟಕದ ಬಹುಮನಿ ಸುಲ್ತಾನರ ಕೈಕೆಳಗೆ ಮಿಲಿಟರಿ ಅಧಿಕಾರಿಗಳಾಗಿ ಕೆಲಸ ಮಾಡಿ, ಅಂತಿಮವಾಗಿ ಕರ್ನಾಟಕದಲ್ಲಿಯೇ ನೆಲೆನಿಂತರು. ಮುಂದೆ ಲಂಬಾಣಿಗಳು, ಸಿದ್ದಿಯರು, ಮತ್ತಿತರ ನೂರಾರು ಸಮುದಾಯಗಳು ಕರ್ನಾಟಕವನ್ನು ತಮ್ಮ ನೆಲೆವೀಡಾಗಿ ಆರಿಸಿಕೊಂಡು ಕನ್ನಡ ಸಂಸ್ಕೃತಿಯ ಭಾಗವಾಗಿ ಬೆಳೆದರು. ಯಾರನ್ನೂ ತಿರಸ್ಕರಿಸದ ಅಥವಾ



ಹೊರಹಾಕದ ಕರ್ನಾಟಕವು ಎಲ್ಲ ಧರ್ಮಗಳನ್ನೂ, ಸಮುದಾಯಗಳನ್ನೂ ಒಳಗೊಳ್ಳುವ ವಿಶಿಷ್ಟತೆಯನ್ನು ಮೆರೆಯಿತು. ಇಂದಿಗೂ ಉತ್ತರ ಭಾರತದ ಲಕ್ಷಾಂತರ ಜನರು ಬೆಂಗಳೂರನ್ನು ತಮ್ಮ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡಿದ್ದಾರೆ. ಅಸಹನೆ, ತಿರಸ್ಕಾರ ಕನ್ನಡದ ಗುಣವಲ್ಲ.

ಹೀಗೆ ರೂಪುಗೊಂಡ ಮತ್ತು ರೂಪುಗೊಳ್ಳುತ್ತಿರುವ ಕನ್ನಡವನ್ನು ನಾವು ಬಹಳ ಎಚ್ಚರದಿಂದ ಮತ್ತು ಸೂಕ್ಷ್ಮವಾಗಿ ಅಧ್ಯಯನ ಮಾಡಬೇಕು, ಅದರಲ್ಲೂ ಚಾರಿತ್ರಿಕ ಕಾರಣಗಳಿಗಾಗಿ ಕರ್ನಾಟಕ ಸೃಷ್ಟಿಸಿಕೊಂಡ ಬಹು ಪಠ್ಯಗಳ ಅಧ್ಯಯನದ ಕಡೆಗೆ ನಮ್ಮ ಗಮನ ಹರಿಯಬೇಕು. ಈ ಬಗೆಯ ಕೆಲಸಗಳು ಅಂತಿಮವಾಗಿ ನಾವು ನಿರ್ವಸಾಹತೀಕರಣದ ಕಡೆಗೆ ಹಾಕುವ ಹೆಜ್ಜೆಯೂ ಹೌದು, ಸಮಕಾಲೀನ ಒತ್ತಡಗಳು ನಿರ್ಮಿಸುತ್ತಿರುವ ಏಕಾಕೃತಿ ಮಾದರಿಗಳಿಗೆ ತೋರುವ ಪ್ರತಿಭಟನೆಯೂ ಹೌದು.

ಬಹುಪಠ್ಯಗಳ ಅಧ್ಯಯನದ ನಿರಾಕರಣೆ ಮತ್ತು ಏಕಾಕೃತಿ ಮಾದರಿಗಳ ನಿರ್ಮಾಣವು ನಮಗೆ ವಸಾಹತು ಅಧ್ಯಯನ ಕ್ರಮಗಳ ಕೊಡುಗೆಯೇ ಆಗಿದೆ. ಭಾರತದಲ್ಲಿ ಮೊದಲಿಂದಲೂ ಬೇಕಾದಷ್ಟು ನಮೂನೆಯ ಪಠ್ಯಗಳಿದ್ದುವು. ಕೆಲವು ಲಿಖಿತ ಪಠ್ಯಗಳಾಗಿದ್ದರೆ ಹಲವು ಅಲಿಖಿತ ಪಠ್ಯಗಳು ಅಥವಾ ಮೌಖಿಕ ಪಠ್ಯಗಳು. ವಸಾಹತು ಶಕ್ತಿಗಳು ಭಾರತಕ್ಕೆ ಕಾಲಿರಿಸಿದಾಗ ಅವರಿಗೆ ಈ ವೈವಿಧ್ಯಮಯ ಪಠ್ಯಗಳು ದೊಡ್ಡ ಸಮಸ್ಯೆಗಳಾಗಿ ಕಾಡಿದುವು. ಸಾವಿರಾರು ಭಾಷೆಗಳು, ನೂರಾರು ಸಮುದಾಯಗಳು, ವಿಭಿನ್ನ ಆಚರಣೆಗಳು, ವಿಸ್ತಾರವಾದ ಭೌಗೋಳಿಕತೆ ಇತ್ಯಾದಿಗಳನ್ನೆಲ್ಲ ಒಂದು ಬಲವಾದ ಮತ್ತು ವಿವರಿಸಿಕೊಳ್ಳಬಹುದಾದ ಚೌಕಟ್ಟಿನೊಳಗೆ ತಾರದ ಹೊರತು ಸ್ಥಿರವಾದ ಆಳ್ವಿಕೆ ಕೊಡುವುದು ಅಸಾಧ್ಯ ಎಂಬುದನ್ನು ವಸಾಹತುಗಾರರು ಮನಗಂಡಿದ್ದರು. ಭಾರತವನ್ನು ಯಾವುದಾದರೂ ಒಂದು ವ್ಯಾಖ್ಯಾನಿಸಿಕೊಳ್ಳಬಹುದಾದ ಪರಿಭಾಷೆಯಲ್ಲಿ ವಿವರಿಸಲು ಅವರು ಹೆಣಗುತ್ತಿದ್ದರು. ಇಂಥ ಒಂದು ಪ್ರಯತ್ನದ ಪರಿಣಾಮವಾಗಿ ಸಾಹಿತ್ಯ ಕ್ಷೇತ್ರದಲ್ಲಿ ಅವರು ಗ್ರಂಥ ಸಂಪಾದನಾ ಶಾಸ್ತ್ರವನ್ನು ಬೆಳೆಸಿದರು. ಈ ಶಾಸ್ತ್ರದ ಮುಖ್ಯ ಕೆಲಸವೆಂದರೆ ಒಂದು ಪಠ್ಯದ ಹಲವು ಪಾಠಾಂತರಗಳನ್ನು ಸಂಗ್ರಹಿಸಿ ಅದರಿಂದ ಒಂದು ಪಠ್ಯವನ್ನು ಪ್ರತೀತಗೊಳಿಸಿ, ಅದನ್ನು ಅಧಿಕೃತಗೊಳಿಸುವುದು. ವಸಾಹತು ಕಾಲದ ಗ್ರಂಥ ಸಂಪಾದನಾ ಶಾಸ್ತ್ರದ ಈ ಮುಖ್ಯ

ಕೆಲಸವನ್ನು ೨೦ನೇ ಶತಮಾನದ ಅನೇಕ ಗ್ರಂಥ ಸಂಪಾದನಾಕಾರರು ಅನುಸರಿಸಿ ನಮಗೆ ಇಂದಿಗೆ ಅಗತ್ಯವಾಗಿರುವ ಒಂದು 'ಅಧಿಕೃತ ಪಠ್ಯವನ್ನು ಸಿದ್ಧಪಡಿಸಿಕೊಟ್ಟರು. ಆ ಕ್ರಮವನ್ನು ನಾವು ಈಗಲೂ ಮುಂದುವರೆಸಿಕೊಂಡು ಬರುತ್ತಿದ್ದೇವೆ.

ಒಂದು ಉದಾಹರಣೆಯನ್ನು ಗಮನಿಸೋಣ, ಬ್ರಿಟಿಷರು ಭಾರತಕ್ಕೆ ಬರುವ ಹೊತ್ತಿನಲ್ಲಿ ವೇದವ್ಯಾಸರು ಬರೆದ ಮಹಾಭಾರತದ ಸಾವಿರಾರು ಪಠ್ಯಗಳು ನಮ್ಮಲ್ಲಿ ಲಭ್ಯವಿದ್ದುವು. ಇವುಗಳಲ್ಲಿ ಯಾವುದು ಮೂಲ ಅಥವಾ ಕನಿಷ್ಟ ಮೂಲಕ್ಕೆ ಹತ್ತಿರವಾದ್ದು



ಎಂಬುದನ್ನು ಹೇಳಲು ಯಾರಿಗೂ ಸಾಧ್ಯವಿರಲಿಲ್ಲ. ಅವುಗಳಿಂದ 'ಒಂದು ಅಧಿಕೃತ' ಮಹಾಭಾರತವನ್ನು ಸಿದ್ಧಪಡಿಸಿಕೊಡಲು ಬ್ರಿಟಿಷರು ಪ್ರಖ್ಯಾತ ಸಂಸ್ಕೃತ ವಿದ್ವಾಂಸರಾಗಿದ್ದ ಶ್ರೀ ವಿಷ್ಣು ಎಸ್. ಸೂಕ್ತಂಕರ್ ಅವರನ್ನು ೧೯೧೯ರಲ್ಲಿ ಕೇಳಿಕೊಂಡರು. ಸೂಕ್ತಂಕ ಅವರು ಪಿ.ವಿ ಕಾಣೆ, ಎಸ್ ಕೆ ಬೆಳವಲ್ಕರ್, ಎಸ್ ಕೆ ಡೇ, ಆರ್ ಎನ್ ದಾಂಡೇಕರ್, ಆರ್ ಡಿ.ಕರಮರ, ವಿ.ಜಿ.ಪರಾಂಜಪೆ, ಎಂಟರ್‌ಟ್ಟ ಮೊದಲಾದ ಸಮರ್ಥ ವಿದ್ವಾಂಸರ ತಂಡದೊಂದಿಗೆ ಎಪ್ರಿಲ್ ೧೯೧೯ರಲ್ಲಿ ಯೋಜನೆಯನ್ನು ಆರಂಭಿಸಿ ಸೆಪ್ಟೆಂಬರ್ ೧೯೬೬ಕ್ಕೆ ಯೋಜನೆಯನ್ನು ಮುಗಿಸಿದರು. ಸುಮಾರು ೪೫ ವರ್ಷಗಳ ಕಾಲ ದುಡಿದ ಅವರ ತಂಡ ಸಂಗ್ರಹಿಸಿದ ಮಹಾಭಾರತದ ಹಸ್ತಪ್ರತಿಗಳ ಒಟ್ಟು ಸಂಖ್ಯೆ ೧೨೫೯. ಈ ಹಸ್ತಪ್ರತಿಗಳನ್ನು ದೇಶದಾದ್ಯಂತದಿಂದ ಸಂಗ್ರಹಿಸಲಾಯಿತು. ಪಣೆಯ ಭಂಡಾರ್‌ಕಾ ಓರಿಯೆಂಟಲ್ ಮ್ಯಾನುಸ್ಕ್ರಿಪ್ಟ್ ಲೈಬ್ರರಿ ಅದನ್ನು ೧೯೬೬ರಲ್ಲಿ ಪ್ರಕಟಿಸಿದಾಗ ಅದರಲ್ಲಿ ೮೯ ಸಾವಿರ ಶ್ಲೋಕಗಳಿದ್ದುವು. ಹಾಗೆ ಪ್ರಕಟಿಸುವಾಗ ಸೂಕ್ತಂಕ ಅವರು "ವ್ಯಾಸರು ಬರೆದ ಮೂಲ ಪಠ್ಯ ಹೇಗಿದ್ದಿರಬಹುದೆಂದು ಸಾಧಿಸುವುದು ಸಾಧ್ಯವಿಲ್ಲದ ಕೆಲಸ, ಈಗ ನಾವು ಸಿದ್ಧಪಡಿಸಿದ್ದು ಮಹಾಭಾರತದ ಇನ್ನೊಂದು ಪಠ್ಯ ಅಷ್ಟೆ' ಎಂಬ ಅರ್ಥ ಬರುವ ಮಾತನ್ನು ಬರೆದುಬಿಟ್ಟರು. ಬಹುಪಠ್ಯಗಳ ಅಭ್ಯಾಸಕ್ರಮದ ಬಗ್ಗೆ ಆಸಕ್ತಿ ಇರುವ ಯಾರೇ ಆದರೂ ಸೂಕ್ತಂಕರ್ ಅವರು ತಾವು ಸಂಪಾದಿಸಿದ ಮಹಾಭಾರತ ಕೃತಿಗೆ ಬರೆದ ಮುನ್ನುಡಿಯನ್ನೊಮ್ಮೆ ಓದಬೇಕು. ವಸಾಹತು ಕಾಲದ ಅತ್ಯುನ್ನತ ಮತ್ತು ಅತ್ಯುತ್ತಮ ಪ್ರತಿಭೆಯದು.

ಇವತ್ತು ವಿ.ಎಸ್. ಸೂಕ್ತಂಕರ್ ಅವರ ಅಸಾಮಾನ್ಯ ಕೆಲಸದಿಂದ ನಾವೆಲ್ಲ ಕಲಿಯಬಹುದಾದ ಪಾಠ ಬಹಳ ದೊಡ್ಡದು ಮತ್ತು ಭಿನ್ನವಾದುದು. ಅವರ ಅಧಿಕೃತ ಪಠ್ಯ'ವನ್ನು ಆಧರಿಸಿ ನಾವು ಬೇರೆಯದೇ ಆದ ಪ್ರಶ್ನೆಯೊಂದನ್ನು ಕೇಳಿಕೊಳ್ಳುವು ದಾದರೆ, ಅದು- ವ್ಯಾಸರು ಬರೆದ ಒಂದು ಪಠ್ಯವು ಯಾಕೆ ೧೨೫೯ ಪಠ್ಯಗಳಾಗಿ ಒಡೆಯಿತು?' ಎಂದಾಗಿರುತ್ತದೆ. ಈ ಪ್ರಶ್ನೆಯು ವಸಾಹತು ಕಾಲದ ಅಧ್ಯಯನ ಕ್ರಮಗಳಿಗೆ ಹಾಕುವ ಪ್ರಶ್ನೆಯೂ ಹೌದು, ನಮ್ಮನ್ನು

ಆ ವಿಧಾನಗಳಿಂದ ಬಿಡಿಸಿಕೊಳ್ಳುವ ಪ್ರಯತ್ನವೂ ಹೌದು. ಹೀಗಾಗಿ ಇವತ್ತಿನ ಸಂಶೋಧನೆಗಳು ಒಂದು ಪಠ್ಯವು ಅನೇಕ ಪಠ್ಯಗಳಾಗಿ ಒಡೆಯುವ ಕ್ರಮಗಳತ್ತ ತುರ್ತಾಗಿ ಗಮನ ಹರಿಸಬೇಕಾಗಿದೆ.

ಈ ಹಂತದಲ್ಲಿ ಸಂಶೋಧಕರು ಕೆಳಗಿನ ನಾಲ್ಕು ಅಂಶಗಳನ್ನು ಗಂಭೀರವಾಗಿ ಅಭ್ಯಸಿಸಬೇಕು-

೧. ಸಮುದಾಯಗಳ ಸೃಜನಶೀಲ ಪ್ರಕ್ರಿಯೆ

೨. ಪ್ರಾದೇಶಿಕತೆಯ ಪ್ರಭಾವಗಳು

೩. ಕಾಲದ ಅಗತ್ಯಗಳು

೪. ನಿರೂಪಕನ ಸೃಜನಶೀಲ ಪ್ರಕ್ರಿಯೆ.



ಭಾರತದಲ್ಲಿರುವ ಅನೇಕ ಸಮುದಾಯಗಳು ಕಾವ್ಯಗಳನ್ನು ತಮಗೆ ಮತ್ತು ತಮ್ಮ ಸಮುದಾಯದ ಸದಸ್ಯರ ಅಗತ್ಯಗಳಿಗೆ ಅನುಗುಣವಾಗಿ ಮತ್ತೆ ಮತ್ತೆ ಬರೆದುಕೊಳ್ಳುತ್ತಲೇ ಬಂದಿವೆ. ಬಡಗರು, ಬೈಗಾಗಳು, ಭಿಲ್ಲರು, ಚಕ್ಮಾಗಳು, ಚೆಂಚುಗಳು, ಗಡ್ಡಿಗಳು, ಗಾರೋಗಳು, ಗೊಂಡರು, ಗುಜ್ಜರರು, ಜಾಗಳು, ಖಾಸಿಗಳು, ಕೋಲ್, ಕುಕಿ, ನಾಗಾ, ಲೆಪಚಾ ಮೊದಲಾದ ನೂರಾರು ಬುಡಕಟ್ಟುಗಳು ತಮ್ಮದೇ ಮಹಾಭಾರತಗಳನ್ನು ಹೊಂದಿವೆ. ಉದಾಹರಣೆಗೆ ಮಧ್ಯಪ್ರದೇಶದ ಗೊಂಡಾ ಸಮುದಾಯವು ಭೀಮ ಕೇಂದ್ರಿತ ಮಹಾಭಾರತವನ್ನು ಕಟ್ಟಿಕೊಂಡರೆ ಹಿಮಾಚಲ ಪ್ರದೇಶದ ಗಡ್ಡಿ ಸಮುದಾಯವು ಹಿಡಿಂಬಿ ಕೇಂದ್ರಿತ ಪಠ್ಯವನ್ನು ರಚಿಸಿಕೊಂಡಿದೆ. ಮಧ್ಯಬಾರತದ ಮಹಾಭಾರತ ಕಥನಗಳಲ್ಲಿ ಭೀಮನೇ ನಾಯಕ, ಕೊಂಡ ಬುಡಕಟ್ಟಿನ ಜನರಲ್ಲಿ ಬಹಳ ಪ್ರಸಿದ್ಧವಾಗಿರುವ 'ಭೀಮಸಿದೆ' ಎಂಬ ಕಥನ ಕಾವ್ಯದಲ್ಲಿ ಭೀಮನೇ ವಸ್ತ್ರಾಪಹಾರಕ. ಚೆಂದದ ಹುಡುಗಿಯರನ್ನು ನೋಡಿದಾಗ ಆತ ತನ್ನ ತಂದೆ ಪವನಾ ದೇವನನ್ನು ಪ್ರಾರ್ಥಿಸುತ್ತಾನೆ. ಪವನಾರ್‌ನು ಜೋರಾಗಿ ಬೀಸಿ ಹುಡುಗಿಯರ ಬಟ್ಟೆ ಹಾರಿಸುತ್ತಾನೆ. ಭೀಮನು ಅಲ್ಲಿ ಮಳೆ ತರುವ ದೈವವೂ ಆಗಿರುವುದು ಇದಕ್ಕೆ ಪೂರಕವಾದ ವಿಚಾರ. ಗೊಂಡರಿಗೆ ಭೀಮನು ಫಲವಂತಿಕೆಯ ದೈವವೂ ಹೌದು. ಬಿಂಜಾಲ್ ಬುಡಕಟ್ಟಿನವರಿಗೆ ಕೀಚಕನೆಂದರೆ ಇಷ್ಟ. ಈಗಿನ ಉತ್ತರಾ ಖಂಡದಾದ್ಯಂತ ಇರುವ ಗಡ್ಡಿ ಬುಡಕಟ್ಟಿನ ಜನರಿಗೆ ಜರಾಸಂಧನೇ ದೈವ. ಅವರ ನಂಬಿಕೆಯ ಪ್ರಕಾರ ಜರಾಸಂಧನು ಕಲಿಯುಗವನ್ನು ಬಂಧಿಸಿಟ್ಟು, ಜನರನ್ನು ಅನಾಹುತಗಳಿಂದ ರಕ್ಷಿಸಿದ್ದ, ಆದರೆ ಭೀಮನೆಂಬ ದ್ರೋಹಿಯು ಮೋಸದಿಂದ ಜರಾಸಂಧನನ್ನು ಕೊಂದು ಕಲಿಯುಗವನ್ನು ಸೆರೆಯಿಂದ ಬಿಡಿಸಿದ್ದರಿಂದ ಈಗ ಕೆಟ್ಟ ಘಟನೆಗಳೆಲ್ಲ ನಡೆಯುತ್ತಿವೆ. ಇಂಥ ನೂರಾರು ಪಠ್ಯಗಳ ಕಡೆಗೆ ನಮ್ಮ ಗಮನ ಹರಿಯಬೇಕಾದ್ದು ಬಹಳ ಅಗತ್ಯ. ಏಕೆಂದರೆ ಈ ಸಮುದಾಯಗಳನ್ನು ನಾವು ಇದುವರೆಗೆ

ಸೃಜನಾತ್ಮಕವಾಗಿ ಕನಿಷ್ಠ ಎಂದು ಭಾವಿಸಿದ್ದೇವೆ. ಇದು ಭಾರತದ ಶ್ರೇಣೀಕೃತ ಜಾತಿ ವ್ಯವಸ್ಥೆಯ ಮೇಲ್ತುದಿಯಲ್ಲಿ ನಿಂತಾಗ ಕಾಣುವ ನೋಟ. ಇದನ್ನು ಬದಿಗಿಟ್ಟು ಆಯಾ ಸಮುದಾಯಗಳ ನೆಲೆಯಿಂದಲೇ ನಿಂತು ನೋಡಿದಾಗ, ಅವುಗಳ ಅದ್ಭುತ ಸೃಜನಶೀಲ ಪ್ರಕ್ರಿಯೆಯ ಒಂದು ನೋಟ ನಮಗೆ ದೊರಕುತ್ತದೆ. ಈ ಕೆಲಸಗಳು ಸಮುದಾಯಗಳ ಆತ್ಮಾಭಿಮಾನ ವೃದ್ಧಿಸುವ ಕೆಲಸವೂ ಹೌದು.

ಪ್ರಾದೇಶಿಕವಾಗಿಯೂ ಬೃಹತ್ ಭಾರತದ ಬೇರೆ ಬೇರೆ ಭಾಗಗಳು ನಿರಂತರವಾಗಿ ತಮ್ಮ ಅನನ್ಯತೆಯನ್ನು ಕಾಪಾಡಿಕೊಳ್ಳುತ್ತಲೇ ಬಂದಿವೆ. ಉದಾಹರಣೆಗೆ, ನೆರೆಯ ತಮಿಳುನಾಡಿನಲ್ಲಿ ಕರಗ ಮತ್ತು ಅರವನ್ ಜಾತ್ರೆಗಳಿವೆ. ಅವು ದ್ರೌಪದಿಯನ್ನು ಆಧರಿಸಿದ ಆಚರಣೆಗಳು. ಪ್ರತಿವರ್ಷ ಎಪ್ರಿಲ್ ತಿಂಗಳ ಹುಣ್ಣಿಮೆಯ ಹಿಂದು ಮುಂದಿನ ದಿನಗಳಲ್ಲಿ ನಡೆವ ಅರವನ್ ಜಾತ್ರೆ ನಮ್ಮ ಕಾಲದಲ್ಲಿ ನಡೆಯುತ್ತಿರುವ ವಿಸ್ಮಯಗಳಲ್ಲಿ ಒಂದು. ಕಾವ್ಯ, ಸಾಹಿತ್ಯ ಮತ್ತು ಜಾನಪದಗಳ ನಡುವಣ ಗಡಿರೇಖೆಗಳು ಅಳಿದು, ಹೊಸದು ಹುಟ್ಟುವ ಲೋಕವದು. ಅರವನ್ ಜಾತ್ರೆ ಒಟ್ಟಿಗೆ ೧೮ ದಿವಸ ನಡೆಯುತ್ತದೆ. ಹದಿನಾರನೇ



ದಿವಸ ಅಲ್ಲಿನ ಪುಟ್ಟ ದ್ರೌಪದಿ ಗುಡಿಯಲ್ಲಿ ಇರಿಸಲಾದ ವಿಗ್ರಹದ ತಲೆಯ ಮೇಲೆ ಅರವನ್ ಆವಾಹನೆಗೊಳ್ಳುತ್ತಾನೆ. ಮರದಿಂದ ಮಾಡಲಾದ ಸುಮಾರು ೧೩ ಅಡಿ ಎತ್ತರದ ಅರವನ್ ತಲೆಯ ಮೇಲ್ಭಾಗದಲ್ಲಿ ಹಾವಿನ ಚಿತ್ರ ವೊಂದಿದ್ದು, ಅದು ಅರವನ್ ದೈವದ ಪ್ರತೀಕವಂತೆ, ಅರವನ್ ಆವಾಹನೆಗೊಳ್ಳುತ್ತಲೇ ದೈವದ ಆಶೀರ್ವಾದ ಪಡೆಯಲು ಮತ್ತು ಪ್ರಸಾದ ಸ್ವೀಕರಿಸಲು ಸಾವಿರಾರು ಜನ ಆಗಮಿಸುತ್ತಾರೆ. ಮರುದಿನ ಅಂದರೆ, ೧೭ನೇ ದಿನ ಅರವನ್‌ಗೆ ಮದುವೆ. ಆ ದಿನ ಶ್ರೀಕೃಷ್ಣನು ಮೋಹಿನಿಯ ರೂಪದಲ್ಲಿ ಬಂದು ಅರವನ್‌ನನ್ನು ಮದುವೆ ಯಾಗುತ್ತಾನೆ. ಇದರ ಜೊತೆಗೆ ಸಾವಿರಾರು ಜನರು (ಮುಖ್ಯವಾಗಿ ಉಭಯಲಿಂಗಿಗಳು ಅಥವಾ ನಿರ್ಲಿಂಗಿಗಳು) ತಾವು ಅರವನ್ ದೈವವನ್ನು ಮದುವೆಯಾದೆವು ಎಂದು ಸಂಭ್ರಮಿಸುತ್ತಾರೆ. ೧೮ನೇ ದಿವಸ ಅರವನ್‌ನನ್ನು ಕಾಳಿಗೆ ಬಲಿಕೊಡುವ ಕೆಲಸ ನಡೆಯುತ್ತದೆ. ಹಿಂದಿನ ದಿನ ಅರವನ್‌ನನ್ನು ಮದುವೆಯಾದವರೆಲ್ಲ ಈ ದಿವಸ ವಿಧವೆಯರಾಗುತ್ತಾರೆ. ಸಾಯಂಕಾಲದ ಹೊತ್ತಿಗೆ ಊರು ತುಂಬಾ ಮೆರವಣಿಗೆ ಸಾಗುವ ಅರವನ್ ತಲೆಯನ್ನು ಒಂದು ಕಂಭದ ತುದಿಗೆ ಕಟ್ಟಿ, ದ್ರೌಪದಿ ಗುಡಿಗೆ ಮತ್ತೆ ಸೇರಿಸುವಲ್ಲಿಗೆ ಜಾತ್ರೆ ಮುಗಿಯುತ್ತದೆ.

ದ್ರೌಪದಿ ಗುಡಿಯಲ್ಲಿ ಸ್ಥಾನ ಪಡೆದಿರುವ ಅರವನ್ ಮೂಲತಹ ವ್ಯಾಸ ಭಾರತದಲ್ಲಿ ಕಾಣಿಸಿಕೊಳ್ಳುವ ಒಂದು ಪುಟ್ಟ ಪಾತ್ರ ಅರ್ಜುನನು ಸನ್ಯಾಸಿಯಾಗಿ ದೇಶ ಸುತ್ತುತ್ತಿದ್ದಾಗ ಪರಿಚಯವಾದ ನಾಗಕನ್ಯ ಉಲೂಪಿಯಲ್ಲಿ ಜನಿಸಿದ ಇರಾವಂತನೇ ಈ ಅರವನ್ ಎಂದು ವಿದ್ವಾಂಸರು ತರ್ಕಿಸಿದ್ದಾರೆ. ಅರವನ್ ವಿಗ್ರಹಗಳಲ್ಲಿ ಕಾಣಿಸಿಕೊಳ್ಳುವ ಹಾವಿನ

ಚಿತ್ರ (ತೆರುಕೂತ್ತುವಿನಲ್ಲಿ ಅದು ಭುಜದಲ್ಲಿ ಕಾಣಿಸಿಕೊಳ್ಳುತ್ತದೆ) ಆತನು ನಾಗ ಕುಲದವನು ಎಂಬುದನ್ನು ಸ್ಥಾಪಿಸುತ್ತದೆ. ಕರ್ನಾಟಕದ ಸವದತ್ತಿ ಎಲ್ಲಮ್ಮನ ಜಾತ್ರೆಯಲ್ಲಿರುವಂತೆ ಉಭಯ ಲಿಂಗಿಗಳೇ ಅರವನ್ ಜಾತ್ರೆಯಲ್ಲಿಯೂ ಪ್ರಧಾನ ಪಾತ್ರ ವಹಿಸುತ್ತಾರೆ. ಇವರನ್ನು ಅರವನಿಗಳೆಂದೂ ಅಲಿಗಳೆಂದೂ ತಮಿಳಿನಾಡಿನಾದ್ಯಂತ ಕರೆಯುತ್ತಾರೆ. ಅರ್ಜುನ, ಉಲೂಪಿ, ಅರವನ್, ದ್ರೌಪದಿ, ಉಭಯಲಿಂಗಿಗಳು, ೧೮ ದಿನಗಳ ಆಚರಣೆ ಎಂದೆಲ್ಲಾ ಯೋಚಿಸುವಾಗ ನಮ್ಮ ಸಮಾಜ ಸಾಧಿಸಿಕೊಂಡು ಬಂದಿರುವ ಸಂಕೀರ್ಣತೆಯ ಬಗೆಗೆ ಇನ್ನಷ್ಟು ಕುತೂಹಲ ಹುಟ್ಟುತ್ತದೆ ಮಾತ್ರವಲ್ಲ ಜನಪದ- ಶಿಷ್ಟಗಳ ಸಂಬಂಧದ ಕುರಿತು ಇನ್ನಷ್ಟು ಯೋಚಿಸುವಂತೆ ಅವು ಒತ್ತಾಯಿಸುತ್ತವೆ.

ಮಹಾಭಾರತದಲ್ಲಿನ ಉಲ್ಲೇಖದ ಪ್ರಕಾರ ಅರ್ಜುನ ಉಲೂಪಿಯರ ಮಗನಾದ ಇರಾವಂತನು ಕುರುಕ್ಷೇತ್ರ ಯುದ್ಧದ ೧೮ ನೇ ದಿನ ಆರ್ಶ್ಯಶೃಂಗಿ ಎಂಬ ರಾಕ್ಷಸನಿಂದ ಹತನಾಗುತ್ತಾನೆ. ಆದರೆ ಅರವನ್ ಜಾತ್ರೆಯಲ್ಲಿ ಕೇಳಿಬರುವ ನಿರೂಪಣೆಗಳ ಪ್ರಕಾರ ಕುರುಕ್ಷೇತ್ರ ಯುದ್ಧದಲ್ಲಿ ಪಾಂಡವರ ಯಶಸ್ಸಿಗಾಗಿ ಹಾರೈಸಿ ಅರವನ್ ತಾನೇ ಕಾಳಿಗೆ ಬಲಿಯಾಗಲು ನಿಶ್ಚಯಿಸುತ್ತಾನೆ. ಕೂತ್ತಾಂಡವ ಆಚರಣೆಗಳ ಪ್ರಕಾರ ಅರವನ್‌ನ ಈ ತ್ಯಾಗಕ್ಕೆ ಮೆಚ್ಚಿದ ಕೃಷ್ಣನು ಆತನಿಗೆ ಮೂರು ವರಗಳನ್ನು ಕೊಡುತ್ತಾನೆ. ಅದರಲ್ಲಿ



ಒಂದನ್ನು ಆಯ್ದು ಕೊಂಡ ಅರವನ್ನನು ತಾನು ಸಾಯುವ ಮೊದಲು ಮದುವೆಯಾಗಬೇಕೆಂದು ಬಯಸುತ್ತಾನೆ. ಆದರೆ ಸಾಯಲಿರುವ ಆತನನ್ನು ಯಾರೂ ಮದುವೆಯಾಗಲು ಒಪ್ಪದಿದ್ದಾಗ ಕೃಷ್ಣನೇ ಮೋಹಿನಿಯಾಗಿ ಬಂದು ಮದುವೆಯಾಗುತ್ತಾನೆ. ಕೂವಗಂನಲ್ಲಿ ನಡೆಯುವ ಅರವನ್ ಜಾತ್ರೆಯಲ್ಲಿ ಅರವನ್ ಮದುವೆಯಾಗುವ ಬಗೆಯನ್ನು ಅದ್ಭುತವಾಗಿ ಪುರಭಿನಯಿಸಲಾಗುತ್ತದೆ ಹಾಗೂ ಅರವನ್ ಸತ್ತಾಗ ಆತನನ್ನು ಮದುವೆಯಾದವರೆಲ್ಲ ಕುಂಕುಮ ಅಳಿಸಿ, ಬಳೆ ಒಡೆದುಕೊಂಡು, ವಿಧವೆಯರಾಗುವ ಪ್ರಸಂಗವನ್ನು ಆಚರಿಸಲಾಗುತ್ತದೆ. ಈ ಪ್ರಕ್ರಿಯೆಯು ಸವದತ್ತಿ ಎಲ್ಲಮ್ಮನ ಜಾತ್ರೆಗಿಂತ ಬೇರೆಯಲ್ಲ. ಎರಡೂ ಕಡೆ ಉಭಯಲಿಂಗಿಗಳದೇ ನಿರ್ಣಾಯಕ ಪಾತ್ರ

ಆದರೆ ದ್ರೌಪದಿಗೆ ಸಂಬಂಧಿಸಿದ ಆಚರಣೆಗಳಲ್ಲಿ ಅರವನ್ ಕಾಣಿಸುವ ರೀತಿಯೇ ಬೇರೆ. ಇಲ್ಲಿ ಅರವನ್ ಕೃಷ್ಣ ಕೊಟ್ಟ ವರಗಳಲ್ಲಿ ಮತ್ತೊಂದನ್ನು ಆರಿಸಿಕೊಂಡು, ತಾನು ಸತ್ತರೂ ತನ್ನ ತಲೆ ಇಡೀ ಕುರುಕ್ಷೇತ್ರ ಯುದ್ಧವನ್ನು ನೋಡುವಂತಾಗಬೇಕು ಎಂದು ಅಪೇಕ್ಷಿಸುತ್ತಾನೆ. ಆಚರಣೆಗಳಲ್ಲಿ ಅರವನ್ ತಲೆಯನ್ನು ಕಂಬವೊಂದಕ್ಕೆ ಕಟ್ಟುವುದೇ ಈ ಕಾರಣಕ್ಕೆ. ಕುತೂಹಲವೆಂದರೆ, ತುಂಡಾದ ತಲೆಯೊಂದು ೧೮ ದಿನಗಳ ಘನಘೋರ ಯುದ್ಧಕ್ಕೆ ಸಾಕ್ಷಿಯಾಗುವ

ವಿವರ ಮಹಾಭಾರತದಲ್ಲೂ ಇದೆ, ಆದರೆ ಅದು ಅರವನ್‌ಗೆ ಸಂಬಂಧಿಸದೆ, ಭೀಮನ ಮೊಮ್ಮಗನಾದ (ಘಟೋತ್ಕಜ ಮತ್ತು ಕಾಮಕಟಂಕಟೆಯರ ಮಗ) ಬರ್ಬರೀಕನಿಗೆ ಸಂಬಂಧಿಸಿದೆ.

ಹೀಗೆ ನೋಡಿದಾಗ ಮಹಾಭಾರತದ ಇರಾವಂತ ಮತ್ತು ಬರ್ಬರೀಕನ ಕತೆಯು ಅರವನ್ ಜಾತ್ರೆಯಲ್ಲಿ ಒಟ್ಟಾದಂತೆ ಕಾಣಿಸುತ್ತದೆ. ಇರಾವನ್ ಎಂಬ ಪದಕ್ಕೆ ಎಡೆ ಅಥವಾ ಮೀಸಲಿಟ್ಟ ಆಹಾರ ಎಂಬ ಅರ್ಥವಿದೆ ಎಂದು ವಾದಿಸುವ ಆಲ್ಫ್ ಹಿಲ್ಟ್ ಬೀಟಲ್, ಮೆಡಿಲೈನ್ ಮೊದಲಾದವರು ಇರಾವಂತ ಎಂದರೆ 'ಸಾವಿಗಾಗಿ ಮೀಸಲಿಟ್ಟ ವ್ಯಕ್ತಿ' ಎಂಬ ವಾದ ಮಂಡಿಸಿದ್ದಾರೆ.

ಅರವನ್ ತಲೆಯಲ್ಲಿ ಎದ್ದು ಕಾಣುವ ಅಂಶವೆಂದರೆ ಆತನ ತೆರೆದ ಎರಡು ದೊಡ್ಡ ಕಣ್ಣುಗಳು ಮತ್ತು ಉಗ್ರವಾದ ಮುಖ. ಈ ತಲೆಯನ್ನು ಜಾತ್ರೆಯ ಕೊನೆಯ ದಿವಸ ಊರು ತುಂಬಾ ಮೆರವಣಿಗೆ ಮಾಡುತ್ತಾರೆ. ಈ ಮೆರವಣಿಗೆಯು ಕೊಪ್ಪಳ ಸಮೀಪದ ಕುಮ್ಮಟ ಬೆಟ್ಟದಲ್ಲಿ ಪ್ರತಿವರ್ಷ ನಡೆಯುವ ಕುಮಾರರಾಮನ ಜಾತ್ರೆಯನ್ನು ನೆನಪಿಸುತ್ತದೆ. ಎರಡೂ ಕಡೆಗಳಲ್ಲಿಯೂ ತಲೆಗಳಿಗೆ ಕೋಳಿ- ಕುರಿ ಬಲಿ ನೀಡಿ, ರಕ್ತವನ್ನು ಜೋಳದ ನುಚ್ಚಿನಲ್ಲಿ ಬೆರೆಸಿ, ಭಕ್ತರಿಗೆ ಪ್ರಸಾದ ರೂಪದಲ್ಲಿ ಹಂಚುತ್ತಾರೆ. ಕುಮಾರರಾಮ-ಅರವನ್ ಇಬ್ಬರೂ ಫಲವಂತಿಕೆಯ ದೈವಗಳು.

ವ್ಯಾಸರಿಗೆ ದ್ರೌಪದಿಯು ಮಹಾಭಾರತದ ಒಂದು ಪ್ರಮುಖ ಪಾತ್ರ ಆದರೆ ತಮಿಳರಿಗೆ ಆಕೆ ಕೇವಲ ಒಂದು ಪಾತ್ರವಲ್ಲ, ಬದಲು ದೈವವೂ ಹೌದು. ಹಾಗಾಗಿ ತಮಿಳುನಾಡಿನ ಮಹಾಭಾರತಗಳೆಲ್ಲ ದ್ರೌಪದಿಕೇಂದ್ರಿತವಾಗಿಯೇ ಬೆಳೆದವು. ತೆರುಕೂತ್ತುವಿನ

ದ್ರೌಪದಿ ವಸ್ತ್ರಾಪಹಾರ ಪ್ರಸಂಗದಲ್ಲಿ ದುಶ್ಯಾಸನನು ಆಕೆಯ ವಸ್ತ್ರಾಪಹಾರ ಮಾಡುವ ಮೊದಲು ದ್ರೌಪದಿಯ ಕಾಲಿಗೆ ದೊಪ್ಪನೆ ಬಿದ್ದು - ಅಮ್ಮಾ ತಾಯಿ, ನೀನು ನಮ್ಮ ದೈವ, ನಿನ್ನನ್ನು ಮುಟ್ಟಬಾರದು, ನಿನ್ನ ಸೆರಗಿಗೆ ಕೈಹಾಕಬಾರದು, ಆದರೆ, ನಾನು ಒಬ್ಬ ನಟ, ಇದನ್ನು ಈಗ ಮಾಡಲೇಬೇಕಾಗಿದೆ, ನನ್ನ ತಪ್ಪನ್ನು ಮನ್ನಿಸು' ಎಂದುಹೇಳಿ ಆಕೆಯ ಕಾಲು ಮುಟ್ಟಿ ನಮಸ್ಕರಿಸಿ, ಮತ್ತೆ ಎದ್ದು ನಿಂತು ವಸ್ತ್ರಾಪಹಾರಕ್ಕೆ ಮುಂದಾಗುವುದುಂಟು. ಕನ್ನಡದ ಕುಮಾರವ್ಯಾಸನಿಗಾಗಲೀ, ಸಂಸ್ಕೃತದ ವ್ಯಾಸನಿಗಾಗಲೀ ಇಂಥ ಒಂದು ಸ್ಥಿತಿಯನ್ನು ಊಹಿಸಿ ಕೊಳ್ಳುವುದೂ ಕಷ್ಟ ಆದರೆ ಜನ ಕಲ್ಪಿಸಿಕೊಂಡಿದ್ದಾರೆ. ತೆಲುಗು ಭಾಷೆಯಲ್ಲಿ ದೊರೆಯುವ ಅನೇಕ ಮಹಾಭಾರತಗಳಲ್ಲಿ ಪಾಂಡುವಿನ ಹೆಣವನ್ನು ಅವನ ಮಕ್ಕಳು ತಿನ್ನುವ ಪ್ರಸಂಗ ಬರುತ್ತದೆ. ಅಪ್ಪನ ಹೆಣವನ್ನು ಮಕ್ಕಳು ತಿಂದರೆ, ಮಕ್ಕಳು ಅಜರಾಮರವಾಗುತ್ತಾರೆ ಎಂಬ ನಂಬಿಕೆಯಲ್ಲಿ ಹಾಗೆ ಮಾಡಲಾಗುತ್ತದೆ. ಆದರೆ ಕೃಷ್ಣ ಅದನ್ನು ತಪ್ಪಿಸಿ ಪಾಂಡವರಿಗೂ ಮರಣ ಬರುವಂತೆ ಮಾಡುತ್ತಾನೆ. ಕೌರವನೊಡನೆ ಕಾಲ ಬೆರಳಲ್ಲಿ ಪಗಡೆಯಾಡುವ ದ್ರೌಪದಿಯ ಕಲ್ಪನೆ ಮೂಲತಹ ತೆಲುಗು ಭಾಷೆಯದ್ದು.ಮಲೆಯಾಳಂ ಭಾಷೆಯಲ್ಲಿ ಲಭ್ಯವಿರುವ ಮಹಾಭಾರತಗಳಲ್ಲಿ ಕೌರವ ಪಾಂಡವರ ದ್ವೇಷವೇ ವಿಜೃಂಭಿಸಿದೆ.ನಿಶಾಲಕೂತ್ತುವಿನಲ್ಲಿ ಕೌರವರು ಪಾಂಡವರನ್ನು ಮಾಟದ ಮೂಲಕ ಕೊಲ್ಲಲು ಮಾಡುವ ಅಪೂರ್ವ ವಿವರಗಳಿವೆ.ಸಂಸ್ಕೃತ ಓದಲಾಗದ ನನಗೆ ವೈಯಕ್ತಿಕವಾಗಿ ಗೊತ್ತಿರುವ ಮಹಾಭಾರತವು ಯಕ್ಷಗಾನ, ತಾಳಮದ್ದಳೆ ಮತ್ತು ಹರಿಕಥೆಗಳಿಂದ ಬಂದದ್ದು. ಬಿಡಿಬಿಡಿಯಾಗಿ ಬೇರೆ ಬೇರೆ ಸಂದರ್ಭಗಳಲ್ಲಿ ಕೇಳಿದ ಅನೇಕ ಪ್ರಸಂಗಗಳಿಂದ ನಾವು ನಮ್ಮದೇ ಆದ ಮಹಾಭಾರತವೊಂದನ್ನು ಕಂಡರಿಸಿಕೊಳ್ಳುತ್ತೇವೆ. ಆ ಮಹಾಭಾರತದಲ್ಲಿ ಭದ್ರಗಿರಿ ಕೇಶವದಾಸರಿದ್ದಾರೆ, ಅಚ್ಯುತ ದಾಸರಿದ್ದಾರೆ, ಮಲ್ಪೆ ಶಂಕರನಾರಾಯಣ ಸಾಮಗರೋ, ಶೇಣಿ ಗೋಪಾಲಕೃಷ್ಣ ಭಟ್ಟರೋ ಇದ್ದಾರೆ. ಎಲ್ಲೋ ಒಂದೆಡೆ ಕುಮಾರವ್ಯಾಸ ಕಾವ್ಯದ ಗಮಕವೂ ಇದೆ. ಕಲಾವಿದರು ಮಹಾಭಾರತದ ಕತೆಯನ್ನು ಎಲ್ಲಿಂದಲೇ ಸುರು ಮಾಡಲಿ, ಪೀಠಿಕಾ ರೂಪದ ಮಾತುಗಳಲ್ಲಿ ಹಿಂದಿನ ಕತೆಯನ್ನು ಹೇಳಿ, ಕತೆಯ ಎಳೆ ಕಡಿಯದಂತೆ ನೋಡಿಕೊಳ್ಳುತ್ತಾರೆ.

ಕಳೆದ ಸುಮಾರು ೧೦ ವರ್ಷಗಳಿಂದ ನಾನು ಉತ್ತರ ಭಾರತದಲ್ಲಿ ಓಡಾಡುತ್ತಿದ್ದೇನೆ. ಅಲ್ಲಿನ ಮೌಖಿಕ ನಿರೂಪಣೆಗಳನ್ನು ಅರ್ಥಮಾಡಿಕೊಳ್ಳಲು ಹಿಂದಿ ಭಾಷೆಯ ಪ್ರಾದೇಶಿಕ ಪ್ರಭೇದಗಳು ಒಂದು ತೊಡಕಾದರೂ ಪಂಡ್ವಾನಿ, ಪಾಂಡವಲೀಲಾ ಮೊದಲಾದ ಪ್ರದರ್ಶನಗಳನ್ನು ಕಂಡು ಸಂತಸಪಟ್ಟಿದ್ದೇನೆ. ಹಿಮಾಲಯದ ತಪ್ಪಲಿನಲ್ಲಿರುವ ಜನರಿಗೆ ಮಹಾಭಾರತ ಎಂದರೆ ಅದು ಹಿಡಿಂಬೆಯ ಕತೆ. ಹಿಮಾಚಲ ಪ್ರದೇಶದ ಮಂಡಿಯಲ್ಲಿ ಹಿಡಿಂಬಾ ದೇವಸ್ಥಾನವೂ ಇದೆ. ನನ್ನ ಅಮೇರಿಕನ್ ವಿದ್ಯಾರ್ಥಿಯೊಬ್ಬನ ಸಂಶೋಧನಾ ವಿಷಯವೇ ಹಿಡಿಂಬೆ. ಆತ ಆಕೆಯ ಬಗ್ಗೆ ಸಂಗ್ರಹಿಸಿದ ವಿವರಗಳು ನನ್ನ ಊಹೆಗೂ ನಿಲುಕದು. ಕಾಂಗ್ರಾ ಪ್ರದೇಶದಲ್ಲಿ ದೊರೆಯುವ ನಿರೂಪಣೆಗಳ ಪ್ರಕಾರ ಪಾಂಡು ಸತ್ತ

೧೨ ವರ್ಷಗಳ ಅನಂತರ ಕುಂತಿಗೆ ಮಾಂಸ ತಿನ್ನುವ ಬಯಕೆಯಾಗುತ್ತದೆ.ಆಗ ಭೀಮಾರ್ಜುನರು ಜೊತೆಯಾಗಿ ಬೇಟೆಯಾಡುತ್ತಾರೆ.ಈಗಿನ ಹಿಮಾಚಲ ಪ್ರದೇಶದ ಕಿನ್ನೂರ್ ಪ್ರದೇಶದಲ್ಲಿ ಜನಪ್ರಿಯವಾಗಿರುವ ನಿರೂಪಣೆಗಳ ಪ್ರಕಾರ ಮರಿಗಳೊಡನೆ ಆಡುವ ಮಂಗಗಳನ್ನು ನೋಡಿದ ಕುಂತಿಗೆ ಮಗುವಿನ ಬಯಕೆ ಮೂಡಿ, ೧೨ ವರ್ಷಗಳ ವರೆಗೆ 'ಋಷಿಮಾಮ'ನ ಸೇವೆಮಾಡಿ, ಮಕ್ಕಳನ್ನು ಪಡೆಯುತ್ತಾಳೆ. ಗಢವಾಲದ ಜನಪ್ರಿಯ ಪಾಂಡವಲೀಲಾದಲ್ಲಿ ಐವರು ಪಾತ್ರಧಾರಿಗಳ ಮೇಲೆ ಪಾಂಡವರು ಆವೇಶಿತರಾಗಿ ಬಂದು ಜನರನ್ನು ಹರಸುತ್ತಾರೆ. ಜಮ್ಮು ಪ್ರದೇಶದ ಜನರು ತಮ್ಮನ್ನು ಶಲ್ಯ ಮಹಾರಾಜನ ವಂಶಸ್ಥರೆಂದು ಹೇಳಿಕೊಳ್ಳುತ್ತಾರೆ. ವನವಾಸದ ಸಂದರ್ಭದಲ್ಲಿ ಪಾಂಡವರು ಅಲ್ಲಿಯೇ ತಂಗಿದ್ದರಂತೆ.ಸ್ಥೂಲವಾಗಿ ಉತ್ತರ ಭಾರತೀಯ ಜನಪದರ ಪ್ರಕಾರ ಕೌರವರ ಒಟ್ಟು ಸಂಖ್ಯೆ ೬೦, ಪಾಂಡವರ ಸಂಖ್ಯೆ ಐದು. ಪಾಂಡವರ ತಾಯಿ ಕಾತಮ, ಕೌರವರ ತಾಯಿ ನಿತಿನಿ.

ಭಾರತದ ಈಶಾನ್ಯ ಭಾಗಗಳಿಗೆ ಹೋದರೆ ಅಲ್ಲಿ ಕೌರವನ ಪಕ್ಷದವರೇ ಹೆಚ್ಚು ಪ್ರಸಿದ್ಧರು. ಭಗದತ್ತ, ಬಾಣಾಸುರ, ರುಕ್ಮ, ಬಭ್ರುವಾಹನರನ್ನು ಅಸ್ಸಾಮಿನ ಜನರು ತಮ್ಮ ಪೂರ್ವಜರೆಂದು ಭಾವಿಸುತ್ತಾರೆ. ಬೋಡೋಗಳ ಪ್ರಕಾರ ಕೃಷ್ಣನ ಹೆಂಡತಿ ರುಕ್ಮಿಣಿಯು ಬೋಡೋ ಕನ್ಯ, ದ್ರೌಪದಿ ಮತ್ತು ಕೃಷ್ಣರ ನಡುವಣ ಸಂಬಂಧವೂ ಬೇರೆ ಬೇರೆ ಭಾರತೀಯ ಭಾಷೆಗಳಲ್ಲಿ ಕುತೂಹಲ ಹುಟ್ಟಿಸುವ ರೀತಿಯಲ್ಲಿ ಪ್ರತೀತಗೊಂಡಿದೆ. ಛತ್ತೀಸಗಢ ಪರಿಸರದಲ್ಲಿ ಪ್ರಚಲಿತದಲ್ಲಿರುವ ಪುಟ್ಟ ಕಥನಕಾವ್ಯವೊಂದರಲ್ಲಿ ಬಾಣದ ಮೊನೆಯನ್ನು ಕೃಷ್ಣನು ಹರಿತಗೊಳಿಸುತ್ತಿರುವಾಗ ಕೈಗೆ ಗಾಯ ಮಾಡಿಕೊಳ್ಳುತ್ತಾನೆ. ಆಗ ದ್ರೌಪದಿಯು ತನ್ನ ಸೆರಗಿಂದ ಹರಿದ ಬಟ್ಟೆಯ ತುಂಡೊಂದನ್ನು ಕೃಷ್ಣನ ಬೆರಳಿಗೆ ಕಟ್ಟಿ, ರಕ್ತ ಒಸರುವುದನ್ನು ನಿಲ್ಲಿಸುತ್ತಾಳೆ.ಅದೇ ಪ್ರದೇಶದ ಇನ್ನೊಂದು ನಿರೂಪಣೆಯ ಪ್ರಕಾರ, ಒಮ್ಮೆ ಕೃಷ್ಣನು ಪಾಂಡವರೊಡನೆ ಕೆರೆಯೊಂದರಲ್ಲಿ ಈಜುತ್ತಿರುವಾಗ ಆತನ ಲಂಗೋಟಿ ಕಳೆದುಹೋಗುತ್ತದೆ. ಪಾಂಡವರು ಸ್ನಾನದ ನಂತರ ಮೇಲೆ ಬಂದರೂ ಕೃಷ್ಣ ಬರದಾದ. ಆಗ ಪಕ್ಕದ ಕೆರೆಯಲ್ಲಿ ಗೆಳತಿಯರೊಂದಿಗೆ ಈಜಾಡುತ್ತಿದ್ದ ದ್ರೌಪದಿಗೆ ಅದು ಗೊತ್ತಾಗುತ್ತದೆ.ಅವಳು ಸೆರಗಿನಿಂದ ಹರಿದ ಸೀರೆಯ ತುಣುಕನ್ನು ಕೃಷ್ಣನೆಡೆಗೆ ಎಸೆಯುತ್ತಾಳೆ. ಅದನ್ನು ಲಂಗೋಟಿ ಮಾಡಿಕೊಂಡ ಕೃಷ್ಣನು ಮೇಲೆ ಬಂದು 'ನನ್ನ ಕಷ್ಟಕ್ಕೆ ಆದೆ. ನಿನ್ನ ಕಷ್ಟಕ್ಕೆ ಸಹಾಯ ಮಾಡುತ್ತೇನೆ' ಅನ್ನುತ್ತಾನೆ. ಹೀಗೆ ದ್ರೌಪದಿ ಕೊಟ್ಟ ಒಂದು ತುಂಡು ಬಟ್ಟೆಯನ್ನು ಮುಂದೆ ಕೃಷ್ಣನು ಅಕ್ಷಯಾಂಬರಮಾಡಿ ಕೃತಜ್ಞತೆ ಸಲ್ಲಿಸುತ್ತಾನೆ. ಏನಿದ್ದರೂ ಬೆರಳು, ರಕ್ತ, ಸೆರಗು ಮತ್ತು ಲಂಗೋಟಿಗಳ ಸುತ್ತ ಹೆಣೆಯಲಾದ ಈ ಕತೆಯು ಮತ್ತಷ್ಟು ವಿಶ್ಲೇಷಣೆಗೆ ಅರ್ಹವಾದುದು. ಅದೇನಿದ್ದರೂ ಒಂದು ನಿರ್ದಿಷ್ಟ ಭೂಭಾಗವು ಸಾಹಿತ್ಯಕ ಪಠ್ಯಗಳ ಮೇಲೆ ಬೀರುವ ಪರಿಣಾಮಗಳು ಅಧ್ಯಯನ ಯೋಗ್ಯವಾಗಿವೆ.

ಯಾವ ಪಠ್ಯವೂ ಸ್ಥಿರವಾಗಿರುವುದಿಲ್ಲ. ಕಾಲ ಬದಲಾಗುತ್ತಿದ್ದಂತೆ ಅವುಗಳನ್ನು ಓದುವ ಕ್ರಮಗಳೂ ಬದಲಾಗುತ್ತವೆ. ಬರೆಯುವ ಕ್ರಮಗಳೂ ಬದಲಾಗುತ್ತವೆ. ೧೦ನೇ ಶತಮಾನದ ವೀರಯುಗದ ಅಗತ್ಯಗಳಿಗೆ ಅನುಗುಣವಾಗಿ ಪಂಪನು ಕೃಷ್ಣನಿಲ್ಲದ ಕಾವ್ಯವನ್ನು ಬರೆದ. ಅವನಿಗೆ ಛಲ, ನನ್ನಿ, ಔನ್ನತ್ಯ ಮೊದಲಾದ ಗುಣಗಳೇ ಬೇಕಾದ ಮಹಾಭಾರತ ಬೇಕಾಯಿತು. ಆದರೆ ಈ ಭಾರತವು ಭಕ್ತಿಯುಗದ ಅಗತ್ಯಗಳಿಗೆ ಸಾಲದಾಯಿತು. ಕಾರಣ ಕೃಷ್ಣನೇ ಪ್ರಧಾನವಾದ ಮಹಾಭಾರತವನ್ನು ಕುಮಾರವ್ಯಾಸ ಬರೆದ.

ಕನ್ನಡ ಸಾಹಿತ್ಯದ ವಿದ್ಯಾರ್ಥಿಗಳಿಗೆಲ್ಲ ತಿಳಿದಿರುವಂತೆ, ಕುಮಾರರಾಮನ ಬಗೆಗೆ ಮೂರು ಲಿಖಿತ ಮಹಾಕಾವ್ಯಗಳು ಸುಮಾರು ನೂರು ವರ್ಷಗಳ ಅಂತರದಲ್ಲಿ ಸೃಷ್ಟಿಯಾದುವು. ೧೫೯೧ರಲ್ಲಿ ನಂಜುಂಡ ಕವಿಯು 'ಕುಮಾರರಾಮ ಚರಿತೆ'ಯನ್ನು ಬರೆದರೆ ೧೬೫೦ರಲ್ಲಿ ಪಾಂಚಾಳಗಂಗನು 'ಚೆನ್ನರಾಮನ ಸಾಂಗತ್ಯ'ವನ್ನು ಮತ್ತು ೧೭೫೦ರಲ್ಲಿ ಮಹಲಿಂಗಸ್ವಾಮಿಯು ಬಾಲರಾಮನ ಸಾಂಗತ್ಯ'ವನ್ನು ಬರೆದರು. ಈ ಕಾವ್ಯಗಳ ಸುಮಾರು ಲ೦ಕ್ಕೂ ಹೆಚ್ಚು ಹಸ್ತಪ್ರತಿಗಳು ಲಭಿಸುತ್ತಿರುವುದು ಅವುಗಳ ಜನಪ್ರಿಯತೆಯನ್ನು ಸಂಕೇತಿಸುತ್ತದೆ. ನಂಜುಂಡನ ಕಾವ್ಯವು ವಿದ್ವಜ್ಜನ ಪ್ರಿಯವಾಗಿದೆ. ಆತ ಕುಮಾರರಾಮನನ್ನು ರಾಮನೊಡನೆ ಮತ್ತು ಅರ್ಜುನನೊಡನೆ ಸಮೀಕರಿಸಿ, ಅವನನ್ನು ಭಾರತೀಯ ಸಂಸ್ಕೃತ ಪರಂಪರೆಗೆ ಜೋಡಿಸುತ್ತಾನೆ. ಪಾಂಚಾಳಗಂಗನು ಕುಮಾರರಾಮನನ್ನು ಜಾನಪದ ಲೋಕಕ್ಕೆ ಅನುಸಂಧಾನ ಗೊಳಿಸಿದ್ದಾನೆ. ಮಾತಂಗಿ ಮತ್ತು ಕಳ್ಳರಾಮನ ಕುರಿತಾಗಿ ಅವನು ನೀಡುವ ವಿವರಗಳೇ ಇದಕ್ಕೆ ಸಾಕ್ಷಿ. ಮಹಲಿಂಗಸ್ವಾಮಿಯ ಕಾವ್ಯವು ಭಕ್ತಿಯುಗದಲ್ಲಿ ಹುಟ್ಟಿಕೊಂಡ ಹರಿಕಥೆ ಪರಂಪರೆಗೆ ಹತ್ತಿರವಾಗಿದ್ದು ಬಹುಜನರನ್ನು ತಲುಪುವ ಇರಾದೆಯನ್ನು ಪ್ರಕಟಪಡಿಸುತ್ತದೆ. ಆತನ ಕಾವ್ಯದುದ್ದಕ್ಕೂ ಕಂಡುಬರುವ ಉಪಕಥೆಗಳು ವಾಸ್ತವವಾಗಿ ಹರಿಕಥಾ ಪರಂಪರೆಯ ಹೊಸ ಆವೃತ್ತಿಗಳಾಗಿವೆ. ಜೊತೆಗೆ ಮಹಲಿಂಗಸ್ವಾಮಿಯು ಕುಮಾರರಾಮನನ್ನು ಮಾತಂಗಿ ಪರಂಪರೆಗೆ ಜೋಡಿಸಿ, ಹೊಸ ತಿರುವು ನೀಡಿದ್ದಾನೆ. ಈ ಎಲ್ಲಾ ರಚನೆಗಳೂ ಆಯಾ ಕಾಲದ ಅಗತ್ಯಗಳನ್ನು ಪೂರೈಸಿವೆ. ಈಗ ನಮ್ಮ ಸಂಶೋಧನೆಗಳು ಕಾಲದ ಅಗತ್ಯಗಳೇನಿದ್ದುವು ಎಂಬುದರ ಕಡೆಗೆ ಬೆಳಕು ಚೆಲ್ಲಬೇಕಾಗಿದೆ.

ಯಾವುದೇ ಪಠ್ಯದ ನಿರೂಪಕನು ಮೌಖಿಕ ಅಭಿವ್ಯಕ್ತಿಗಳಲ್ಲಿ ತನ್ನ ಸೃಜನ ಶೀಲತೆಯನ್ನು ತೋರಿಸದೇ ಇರುವುದಿಲ್ಲ. ಕತೆಯ ಸ್ಥೂಲ ಓಟ ಸುಮಾರಾಗಿ ಒಂದೇ ರೀತಿ ಇರುವುದು ಹೌದಾದರೂ ಅವುಗಳು ಪ್ರದರ್ಶನಗಳಲ್ಲಿ ಅನನ್ಯವಾದ ರೂಪವನ್ನು ಪಡೆದುಕೊಳ್ಳುತ್ತವೆ ಮತ್ತು ಸಮಕಾಲೀನವಾಗುತ್ತಾ ಹೋಗುತ್ತವೆ. ಇದಕ್ಕೆ ಅತ್ಯುತ್ತಮ ಉದಾಹರಣೆಯೆಂದರೆ ಕರಾವಳಿಯ ಯಕ್ಷಗಾನಗಳು.ಈ ಕಲೆಯ ಸೌಭಾಗ್ಯ ಎಂದರೆ ಅದಕ್ಕಿರುವ ವಿದ್ಯಾವಂತ ಕಲಾವಿದರು ಹಾಗೂ ಪ್ರೇಕ್ಷಕರು. ವೈದ್ಯರು, ಉಪನ್ಯಾಸಕರು, ವಕೀಲರು, ಪತ್ರಕರ್ತರು, ವಿದ್ಯಾರ್ಥಿಗಳು, ಚಾಲಕರು, ಕೃಷಿಕರು, ಕ್ಷೌರಿಕರು, ಗಾಣಿಗರು

ಹೀಗೆ ಅನೇಕ ಸಮುದಾಯಗಳಿಗೆ ಸೇರಿದ ಜನರೆಲ್ಲ ಯಕ್ಷಗಾನದಲ್ಲಿ ವೇಷ ಮಾಡುತ್ತಿದ್ದಾರೆ. ಹಾಗೆಯೇ ಸಮಾಜದ ಎಲ್ಲ ವರ್ಗದ ಜನರೂ ಯಕ್ಷಗಾನ ನೋಡುತ್ತಾರೆ. ಜೊತೆಗೆ ಈಚೆಗೆ ಪ್ರೇಕ್ಷಕ ವರ್ಗವೂ ಪ್ರೌಢವಾಗಿದೆ. ಯಕ್ಷಗಾನ ಪ್ರದರ್ಶಿಸುವಾಗ ಎಲ್ಲ ಕಲಾವಿದರೂ ಈ ಪ್ರೌಢ ಪ್ರೇಕ್ಷಕರನ್ನು ಗಮನದಲ್ಲಿರಿಸಿಕೊಂಡಿರುತ್ತಾರೆ. ಇದರಿಂದಾಗಿ ಪ್ರಸಂಗವೊಂದರ ಪಾತ್ರ ಚಿತ್ರಣದಲ್ಲಿ ಪ್ರತಿ ಕಲಾವಿದರೂ ತಮ್ಮತನವನ್ನು ಅದ್ಭುತವಾಗಿ ಮೆರೆಯುತ್ತಾರೆ. ಭಾಗವತರೂ ಕೂಡಾ ಈ ಮರುಸೃಷ್ಟಿ ಕ್ರಿಯೆಯಲ್ಲಿ ತಮ್ಮನ್ನು ಪೂರ್ಣವಾಗಿ ತೊಡಗಿಸಿ ಕೊಂಡಿರುತ್ತಾರೆ ಮತ್ತು ಭಾಗವತಿಕೆಯಲ್ಲಿ ಬಗೆ ಬಗೆಯ ಪ್ರಯೋಗಗಳನ್ನು ಮಾಡುತ್ತಲೇ ಇರುತ್ತಾರೆ. ಬಲಿಪ ನಾರಾಯಣ ಭಾಗವತರು, ದಾಮೋದರ ಮಂಡೆಚ್ಚರು, ಕಡತೋಕ ಮಂಜುನಾಥ ಭಾಗವತರು, ಅಗರಿ ಶ್ರೀನಿವಾಸ ಭಾಗವತರು, ಉಳ್ಳೂರು ನಾರಾಯಣ ಭಾಗವತರು, ಗುಂಡಿ ಕಾಳಿಂಗ ನಾವಡರು, ಪಟ್ಲ ಸತೀಶ್ ಶೆಟ್ಟಿ ಮೊದಲಾದ ಮಹಾನ್ ಪ್ರತಿಭೆಗಳೆಲ್ಲ ತಮ್ಮ ಹೆಸರಿನಲ್ಲಿಯೇ ಒಂದು ಶೈಲಿಯನ್ನು ಸೃಷ್ಟಿಸಿಕೊಂಡಿದ್ದಾರೆ. ಹಾಡುಗಾರಿಕೆಯ ಆರಂಭ-ಬಿಡ್ತಿಗೆ-ಮುಕ್ತಾಯಗಳ ನಡುವಣ ಅಂತರ ಹೆಚ್ಚಾಗಿ, ನಟರ ಭಾವಾಭಿವ್ಯಕ್ತಿಗೆ ಹೆಚ್ಚಿನ ಅವಕಾಶ ದೊರಕಿ, ಅಭಿನಯ ವಿಧಾನದಲ್ಲಿ ವ್ಯತ್ಯಾಸ ಕಂಡುಬರುವಂತಾಗಿದೆ. ಅರ್ಥಗಾರಿಕೆಯಲ್ಲಿ ತೀವ್ರವಾದ ಬದಲಾವಣೆ ಗೋಚರಿಸಿದೆ. ವಿದ್ಯಾವಂತರ ಪ್ರವೇಶದಿಂದಾಗಿ ಅರ್ಥಗಾರಿಕೆಯ ಬೌದ್ಧಿಕತೆಯು ಇನ್ನಿಲ್ಲದ ಎತ್ತರಕ್ಕೆ ಏರಿದೆ. ಶೇಣಿ ಗೋಪಾಲಕೃಷ್ಣ ಭಟ್ಟ, ಶಂಕರನಾರಾಯಣ ಸಾಮಗರು, ನಾರಾಯಣ ಕಿಲ್ಲೆ, ಪೆರ್ಲ ಕೃಷ್ಣಭಟ್ಟ, ಕೋಳ್ಯೂರು ರಾಮಚಂದ್ರರಾವ್, ಪ್ರಭಾಕರ ಜೋಷಿ, ರಾಮದಾಸ ಸಾಮಗ, ಕುಂಬಳೆ ಸುಂದರರಾವ್ ಮೊದಲಾದವರ ಮಾತುಗಾರಿಕೆಯು ಅರ್ಥದ ಕ್ಷಿತಿಜಗಳನ್ನು ವಿಸ್ತರಿಸಿದೆ. ಧಾರ್ಮಿಕ ವಿಚಾರಗಳ ಬಗೆಗಣ ಆಸಕ್ತಿಯು ಕಡಿಮೆಯಾಗಿ, ಲೌಕಿಕ ವಿಚಾರಗಳ ಮಥನ ಹೆಚ್ಚಾಗಿದೆ. ಸಮಕಾಲೀನ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ವಿಚಾರಗಳನ್ನು ಕಲಾವಿದರು ಯಾವ ಭಯವೂ ಇಲ್ಲದೆ ರಂಗದ ಮೇಲೆ ನಿರ್ಭಯವಾಗಿ ಚರ್ಚಿಸುತ್ತಿದ್ದಾರೆ. ಒಂದು ಪಠ್ಯವನ್ನು ಕಲಾವಿದರು ತಮ್ಮ ಸ್ವಂತ ಪ್ರತಿಭೆಯಿಂದ ಮರು ಕಟ್ಟುವ ಬಗೆಗೆ ನಮ್ಮ ಗಮನ ಹರಿಯಬೇಕು. ಜನಪದ ನಿರೂಪಣೆಗಳನ್ನು ತಲೆಮಾರಿನಿಂದ ತಲೆಮಾರಿಗೆ ಸಾಗಿಸುವ ಕಲಾವಿದರು ಬಹುಮಟ್ಟಿಗೆ ಹಿಂದುಳಿದ ಸಮುದಾಯಗಳಿಗೆ ಸೇರಿದವರೇ ಆಗಿರುವುದರಿಂದ ಈ ಕೆಲಸಗಳು ಹಿಂದುಳಿದ ವರ್ಗಗಳ ಜನರ ಸೃಜನಶೀಲತೆಯನ್ನು ಮುಖ್ಯವಾಹಿನಿಗೆ ತರುವ ಕೆಲಸವೂ ಆಗುತ್ತದೆ.

ಇದು ಇಂದಿನ ದಿನಗಳಲ್ಲಿ ಬಹಳ ಮುಖ್ಯವಾದ ಕೆಲಸ ಏಕೆಂದರೆ, ಈ ಕಾಲದ ಕೆಲವು ಬೆಳವಣಿಗೆಗಳು ಭಿನ್ನ ಪಾಠಗಳ ಅಧ್ಯಯನಕ್ಕೆ ಪೂರಕವಾಗಿಯೇನೂ ಇಲ್ಲ. ನಮ್ಮ ಇಂದಿನ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಯು ಜಗತ್ತಿನ ವ್ಯಾಪಕತೆಯನ್ನು ಕಿರಿದುಗೊಳಿಸಿ, ಎಲ್ಲವನ್ನೂ ಏಕಾಕೃತಿ ಮಾದರಿಯಲ್ಲಿಯೇ ಗ್ರಹಿಸುವ, ವಿವರಿಸುವ ಸ್ಥಿತಿಗೆ ನಮ್ಮನ್ನು ತಂದುನಿಲ್ಲಿಸಿದೆ. ಕಂಪ್ಯೂಟರ್‌ಗಳ ಮುಖ್ಯ ಕೆಲಸವೇ ಅದು. ಅದು

ಎಲ್ಲವನ್ನೂ ವ್ಯವಸ್ಥಿತಗೊಳಿಸುತ್ತದೆ, ವರ್ಗೀಕರಿಸುತ್ತದೆ, ಕಚ್ಚಾ ವಸ್ತುಗಳನ್ನು ಸಿದ್ಧವಸ್ತುವನ್ನಾಗಿ ಮಾರ್ಪಡಿಸಿ ನಮ್ಮ ಮುಂದಿಡುತ್ತದೆ. ಇಂಥ ಸಮಕಾಲೀನ ಬೆಳವಣಿಗೆಗಳನ್ನು ನಿರಾಕರಿಸಿ, ಏಕಾಕೃತಿ ಮಾದರಿಗಳಿಗೆ ವಿರುದ್ಧವಾಗಿ ಬಹುರೂಪಿಗಳನ್ನು ನಿಲ್ಲಿಸುವ ಕೆಲಸವನ್ನು ನಾವೀಗ ಮಾಡಬೇಕಾಗಿದೆ. ಇಷ್ಟಿದ್ದರೂ ನಮ್ಮ ವಿಮರ್ಶೆಯು ಈ ಬಗೆಯ ಸಾಮುದಾಯಿಕ ರಚನೆಗಳತ್ತ ಹೆಚ್ಚು ಗಮನಹರಿಸಿಲ್ಲ. ಹಾಗೆ ಗಮನ ಹರಿಸದ್ದರಿಂದ ನಮ್ಮಲ್ಲಿ ಭಿನ್ನ ಪಠ್ಯಗಳ ಅಧ್ಯಯನ ನಡೆಯಲೇ ಇಲ್ಲ. ನಾನು ಈ ಲೇಖನದ ಆರಂಭದಲ್ಲಿ ಹೇಳಿದ ೨೦ನೇ ಶತಮಾನದ ಆರಂಭಿಕ ಹಂತದಲ್ಲಿ ಕನ್ನಡ ಗ್ರಂಥಗಳನ್ನು ಸಂಪಾದಿಸಿಕೊಟ್ಟ ಹಿರಿಯರು ಮುಖ್ಯ ಪಠ್ಯ ಅಂತ ತಾವು ಗ್ರಹಿಸಿದ ಪಾಠಗಳ ಬುಡದಲ್ಲಿ ಅಡಿ ಟಿಪ್ಪಣಿಯಾಗಿಯಾದರೂ ಭಿನ್ನ ಪಠ್ಯಗಳನ್ನು ನೀಡುತ್ತಿದ್ದರು. ಈಗ ಅದೂ ನಿಂತಿದೆ. ಬಹುರೂಪಿಗಳಾಗಿದ್ದ ಪಠ್ಯಗಳನ್ನು ಏಕರೂಪಗೊಳಿಸುವ ಆಧುನಿಕ ರಾಜಕಾರಣ ಮತ್ತು ಬೌದ್ಧಿಕತೆಯನ್ನು ಇಂಥ ಕೆಲಸಗಳ ಮೂಲಕ ಪರೀಕ್ಷಿಸಲು ನಮಗೆ ಸಾಧ್ಯವಿದೆ.

**ವಚನ ಪಠ್ಯಗಳು :**

ಇನ್ನೊಂದು ಉದಾಹರಣೆಯನ್ನು ಇಲ್ಲಿಯೇ ಗಮನಿಸಿಬಹುದು. ಕನ್ನಡಕ್ಕೆ ಬಹಳ ಅನನ್ಯವಾದ ವಚನಗಳನ್ನು ನಾವು 'ಸಾಮೂಹಿಕ ಸೃಷ್ಟಿ' ಎಂದೇನೋ ಕರೆದಿದ್ದೇವೆ. ಆದರೆ ವಚನಗಳನ್ನು ಸಂಪಾದನೆ ಮಾಡುವಾಗ ಇದು ಬಸವಣ್ಣನ ವಚನ, ಅದು ಅಕ್ಕನ ವಚನ' ಎಂಬಿತ್ಯಾದಿಯಾಗಿ ಗುರುತಿಸಿ, ಬೇರ್ಪಡಿಸಿ, ಸಂಕಲಿಸಿ ಪ್ರಕಟಿಸಿದ್ದೇವೆ; ಚರ್ಚಿಸಿದ್ದೇವೆ. ಅಂದರೆ ತಮ್ಮ ಪಠ್ಯಗಳ ಮೇಲೆ ಹಕ್ಕು ಸ್ಥಾಪಿಸ ಬಯಸದ ವಚನಕಾರರನ್ನು ಹಕ್ಕು ಸ್ಥಾಪಿಸಿಕೊಳ್ಳಲು ನಾವು ಒತ್ತಾಯಿಸಿದ್ದೇವೆ. ಬಸವಣ್ಣನವರ ಪ್ರಖ್ಯಾತ ವಚನವೊಂದು ಇಂತಿದೆ

"ಉಳ್ಳವರು ಶಿವಾಲಯ ಮಾಡುವರು

ನಾನೇನ ಮಾಡುವೆ ಬಡವನಯ್ಯ

ಎನ್ನ ಕಾಲೇ ಕಂಬ ದೇಹವೆ ದೇಗುಲ

ಶಿರ ಹೊನ್ನ ಕಳಸವಯ್ಯ"

ಪ್ರಭುದೇವರ ಈ ಕೆಳಗಿನ ವಚನವನ್ನು ಗಮನಿಸಿ :

''ಕಾಲೇ ಕಂಭಗಳಾದುವೆನ್ನ

ದೇಹವೇ ದೇಗುಳಾದುವೆನ್ನ

ದೇಹವೇ ದೇಗುಲವಾಯಿತ್ತಯ್ಯ

ಎನ್ನ ನಾಲಿಗೆಯೆ ಗಂಟೆ

ಶಿರ ಸುವರ್ಣದ ಕಲಶ-ಇದೇನಯ್ಯ



ಮೇಲಿನ ಎರಡೂ ವಚನಗಳಲ್ಲಿ ಅನೇಕ ಸಾಮ್ಯಗಳಿವೆ. ಈಗ ನಾವು ಇವನ್ನು 'ಇದು ಮೂಲತಃ ಯಾರದಿರಬಹುದು" ಎಂದು ಕೇಳಿಕೊಂಡು ಮುಂದುವರೆಯುವುದ ಕ್ಕಿಂತ, ಬೇರೆ ಬೇರೆಯವರ ವಚನಗಳನ್ನು ಜನರು ಹೇಗೆ ಸಂಮಿಶ್ರ ಮಾಡಿಕೊಂಡು ತಮಗೆ ಬೇಕಾದ ಪಠ್ಯಗಳನ್ನು ಸೃಷ್ಟಿ ಮಾಡಿಕೊಂಡರು ಎಂಬ ಅರಿವಿನಲ್ಲಿ ಮುಂದುವರೆದರೆ ನಮಗೆ ನಮ್ಮ ಸಾಹಿತ್ಯವನ್ನು ಮತ್ತು ಸಮಾಜವನ್ನು ಇನ್ನಷ್ಟು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯ ಎಂದು ನಾನು ಭಾವಿಸುತ್ತೇನೆ. ಸರ್ವಜ್ಞನ ಜನಪ್ರಿಯ ವಚನಗಳಲ್ಲಿ ಒಂದಾದ "ಅನ್ನವನು ಇಕ್ಕುವುದು, ನನ್ನಿಯನು ನುಡಿಯುವುದು" ಎಂಬ ಸಾಲು ಪ್ರಭುದೇವರ 'ಅನ್ನವನಿಕ್ಕಿ ನನ್ನಿಯ ನುಡಿದು' ಎಂಬ ಸಾಲನ್ನು ನೆನಪಿಗೆ ತರುತ್ತದೆ.

ನಾನು ಕನ್ನಡ ವಿಶ್ವವಿದ್ಯಾಲಯದಲ್ಲಿ ಕೆಲಸ ಮಾಡುತ್ತಿದ್ದಾಗ ಶ್ರೀ ಲಕ್ಷ್ಮಣದಾಸ ಎಂಬ ಹಾಡುಗಾರರೊಬ್ಬರು ಪರಿಚಯವಾಗಿದ್ದರು. ಹಂಪಿಯ ಬೀದಿಗಳಲ್ಲಿ ಅವರು ಹಾಡು ಹೇಳುತ್ತಾ ತಿರುಗಾಡುತ್ತಿದ್ದರು. ಬಿಡುವಿದ್ದಾಗಲೆಲ್ಲ ಅವರು ನನ್ನ ಮನೆಗೂ ಬರುತ್ತಿದ್ದರು, ಹಾಡು ಹೇಳುತ್ತಿದ್ದರು. ಅವರ ಹಾಡು ಕೇಳಿದಾಗಲೆಲ್ಲ ನಾನು ಬೆಚ್ಚಿ ಬೀಳುತ್ತಿದ್ದೆ. ಏಕೆಂದರೆ ಅವರ ಎಷ್ಟೋ ಹಾಡುಗಳು ಶಿಶುನಾಳ ಶರೀಫರ ತತ್ವಪದಗಳಿಂದ ಆರಂಭವಾಗಿ, ಪುರಂದರದಾಸರ ಕೀರ್ತನೆಯ ಸಾಲಿನೊಂದಿಗೆ ಮುಂದುವರೆದು 'ಕೂಡಲ ಸಂಗಮದೇವಾ' ಎಂದು ಕೊನೆಗೊಳ್ಳುತ್ತಿತ್ತು. ಸುಮಾರು ಏಳು ನೂರು ವರ್ಷಗಳ ಅವಧಿಯಲ್ಲಿ ರಚಿತವಾದ ಪಠ್ಯಗಳಿಂದ ತಮಗೆ ಬೇಕಾದ ಸಾಲುಗಳನ್ನು ಆರಿಸಿಕೊಂಡು ೨೦ನೇ ಶತಮಾನಕ್ಕೆ ಬೇಕಾದ ಪಠ್ಯವೊಂದನ್ನು ಅವರು ಸೃಜಿಸುತ್ತಿದ್ದರು. ನನ್ನ ವೈಯಕ್ತಿಕ ಸಂಗ್ರಹದಲ್ಲಿರುವ ಲಕ್ಷ್ಮಣದಾಸರ ಹಾಡೊಂದರ ಕೊನೆಯ ಸಾಲುಗಳು ಇಂತಿವೆ-

"ಹೀನ ಕೃತ್ಯಗಳ ಮಾಡುತ ನದಿಯಲಿ

ಸ್ನಾನವ ಮಾಡಿದರೇನು ಫಲ

ಶ್ರೀನಿಧಿ ಕೂಡಲ ಸಂಗನ ನೆನೆಯದೆ

ಮೌನವ ಮಾಡಿದರೇನು ಫಲ?"

ಪುರಂದರದಾಸರ 'ಬೇವು ಬೆಲ್ಲದೊಳಿಡಲೇನು ಫಲ ಕೀರ್ತನೆಯು ಬಸವಣ್ಣನ ಅಂಕಿತನಾಮದೊಂದಿಗೆ ಕೊನೆಯಾದಾಗ ನಾನು ಅವಾಕ್ಕಾಗಿದ್ದೆ.

ಉತ್ತರ ಕರ್ನಾಟಕದಾದ್ಯಂತ ಅತ್ಯಂತ ವೈಭವದಿಂದ ಜರುಗುವ ಹಂಪಿ ಜಾತ್ರೆ, ಮೈಲಾರನ ಜಾತ್ರೆ, ಬದಾಮಿಯ ಬನಶಂಕರಿ ಜಾತ್ರೆ ಕುಮಾರರಾಮನ ಜಾತ್ರೆ, ತಿಂಥಿಣಿ ಜಾತ್ರೆ, ಹುಲಿಗೆಮ್ಮನ ಜಾತ್ರೆ, ಕೊಡೆಕಲ್ಲು ಜಾತ್ರೆ ಮೊದಲಾದೆಡೆಗಳಲ್ಲಿ ಲಕ್ಷ್ಮಣದಾಸರ ಹಾಗೆ ಹಾಡುವ ನೂರಾರು ಕಲಾವಿದರನ್ನು ನಾವು ಇಂದಿಗೂ ಕಾಣಬಹುದು. ಇವರುಗಳು ಹಾಡುವ ವಚನಗಳನ್ನು, ಕೀರ್ತನೆಗಳನ್ನು ಮತ್ತು ತತ್ವಪದಗಳನ್ನು ಇದೀಗ ನಾವು ಸಂಗ್ರಹಿಸಬೇಕು. ಅವು ೨೧ನೇ ಶತಮಾನದ ಆರಂಭದ ಕಾಲದ ಪಠ್ಯಗಳಾಗಿ



ಕನ್ನಡ ಸಂಸ್ಕೃತಿಯ ಬಗೆಗಣ ನಮ್ಮ ತಿಳುವಳಿಕೆಯನ್ನು ಅಗಾಧವಾಗಿ ವಿಸ್ತರಿಸಬಲ್ಲುವು. ನಮ್ಮ ಸಾಹಿತ್ಯ ಪರಂಪರೆಯಲ್ಲಿ ಪಠ್ಯದ ಹಕ್ಕನ್ನು ಯಾರೂ ಕಾದಿರಿಸಿಲ್ಲ. ಹಾಗಾಗಿ ಪಠ್ಯಗಳೆಲ್ಲ ಒಂದರೊಡನೊಂದು ಸೇರಿಕೊಂಡು, ಒಬ್ಬರ ಸೃಷ್ಟಿ ಎಲ್ಲರ ಸೃಷ್ಟಿಯಾಗಿ ಮಾರ್ಪಟ್ಟು, ಕಾಲಾತೀತವಾದ ಪಠ್ಯಗಳು ನಿರ್ಮಾಣಗೊಂಡಿವೆ. ಇದರ ಕಡೆಗೆ ನಮ್ಮ ಸಂಶೋಧಕರ ಗಮನಹರಿಯಬೇಕಾದ್ದು ಇಂದಿನ ಅಗತ್ಯಗಳಲ್ಲೊಂದಾಗಿದೆ.

**ಐತಿಹ್ಯವೊಂದರ ಭಿನ್ನ ಪಠ್ಯಗಳು :**

ಒಂದೇ ಪಠ್ಯದ ಹಲವು ಪಾಠಗಳು ಲಭ್ಯವಿದ್ದಾಗ, ಅವನ್ನು 'ಪಾಠಾಂತರ' ಗಳೆಂದೋ, 'ಭಿನ್ನಪಾಠ'ಗಳೆಂದೋ ಕರೆದು ತೊಡಕನ್ನು ನಿವಾರಿಸಿಕೊಳ್ಳಲಾಗುತ್ತದೆ. ಈ 'ಪಾಠಾಂತರಗಳ' ಬಗೆಗೆ ಇಲ್ಲವೇ 'ಭಿನ್ನಪಾಠ'ಗಳ ಬಗೆಗೆ ಸ್ವತಂತ್ರವಾದ ಅಧ್ಯಯನಗಳು ನಡೆದದ್ದು ಇಲ್ಲವೆಂಬಷ್ಟು ಕಡಿಮೆ. ಕಾರಣ, ಸಾಹಿತ್ಯ ಮತ್ತು ಜಾನಪದ ಈ ಎರಡೂ ಕ್ಷೇತ್ರಗಳಲ್ಲಿ ಈ ಬಗೆಯ ಕೆಲಸಗಳನ್ನು ಸುರು ಮಾಡಬೇಕಾಗಿದೆ. ಒಂದೇ ಎಂದು ಮೇಲ್ನೋಟಕ್ಕೆ ಕಾಣುವ ಪಠ್ಯಗಳಲ್ಲಿ ಎಷ್ಟೊಂದು ಒಳಸುಳಿವುಗಳಿವೆ. ಅವು ಮತ್ತೆ ಮತ್ತೆ ಪುನರ್-ಸಂಘಟನೆಗೊಂಡು ಎಷ್ಟೊಂದು ಪಠ್ಯಗಳನ್ನು ಸೃಷ್ಟಿಸಿಬಿಟ್ಟಿವೆ ಎಂದು ವಿವರಿಸುವುದಕ್ಕೆ ನಮಗಿಂದು ಸಾಧ್ಯವಾಗಬೇಕು. ಒಂದು ಉದಾಹರಣೆಯಿಂದ ಇದನ್ನು ವಿವರಿಸಬಯಸುತ್ತೇನೆ.

'ಹುತ್ತಕ್ಕೆ ಹಾಲೆರೆವ ಹಸು' ಎಂಬ ಜನಪ್ರಿಯ ಐತಿಹ್ಯವನ್ನು ಗಮನಿಸಬೇಕು. ಈ ಕತೆ ಅಥವಾ ಐತಿಹ್ಯ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಪ್ರಚಲಿತದಲ್ಲಿದೆ. ಆರ್ಥಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಭಿನ್ನವಾಗಿರುವ ಕರಾವಳಿ ಕರ್ನಾಟಕ, ದಕ್ಷಿಣ ಕರ್ನಾಟಕ, ಉತ್ತರ ಕರ್ನಾಟಕ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಈ

ಐತಿಹ್ಯವು ಸ್ಥಳಪುರಾಣಗಳ ರೂಪದಲ್ಲಿ ಜನಪ್ರಿಯವಾಗಿದೆ. ಗ್ಯಾಬ್ರಿಯಲಾ ಐಶಿಂಗರ್ ಅವರು ಹುತ್ತಕ್ಕೆ ಹಾಲೆರೆಯುವ ಹಸು ಕುರಿತಾದ ಸುಮಾರು ೧೫೦ಕ್ಕೂ ಹೆಚ್ಚು ಪಠ್ಯಗಳನ್ನು ತಮಿಳುನಾಡು, ಆಂಧ್ರಪ್ರದೇಶ, ಕೇರಳ, ರಾಜಾಸ್ಥಾನ ಹಾಗೂ ಉತ್ತರಪ್ರದೇಶಗಳಿಂದ ವರದಿ ಮಾಡಿದ್ದಾರೆ. ಓ ಫ್ಲೇಹರ್ಟಿ ಅವರು ಈ ಐತಿಹ್ಯವನ್ನು ಮನಶಾಸ್ತ್ರೀಯವಾಗಿ ವಿಶ್ಲೇಷಿಸುವ ಸಾಹಸ ಮಾಡಿದ್ದಾರೆ. (Eichinger 1987, O'Flaherty 1973) ಭಾರತದ ದೇಶದ ವಿವಿಧ ರಾಜ್ಯಗಳ ಗೆಜೆಟಿಯರ್‌ಗಳಲ್ಲಿ, ಸೆನ್ಸಸ್ ಆಫ್ ಇಂಡಿಯಾದ ವಿವಿಧ ಸಂಪುಟಗಳಲ್ಲಿ ಈ ಐತಿಹ್ಯದ ವಿವಿಧ ಪಠ್ಯಗಳನ್ನು ಕಾಣಬಹುದು. ವಿಲಿಯಂ ಕ್ರೂಕ್ (೧೯೧೨), ಡೇವಿಡ್ ಶುಲ್ಮನ್ (೧೯೭೮). ಮೊದಲಾದ ವಿದ್ವಾಂಸರೂ ಪ್ರಾಸಂಗಿಕವಾಗಿ ಪ್ರಸ್ತುತ ಐತಿಹ್ಯಕ್ಕೆ ಪ್ರತಿಕ್ರಿಯಿಸಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಎಡಮಂಗಲ ಎಂಬಲ್ಲಿ 'ನಾಕೂರುಗಯ ಎಂಬ ಸ್ಥಳವೊಂದಿದೆ. ಅಲ್ಲಿ ಜನಪ್ರಿಯವಾಗಿರುವ ಈ ಐತಿಹ್ಯದ ವಿವರ ಇಂತಿದೆ.



“ಬಹಳ ಹಿಂದೆ ನಾಕೂರಿನ ಬಳಿ ದನ ಕಾಯುವ ಹುಡುಗನೊಬ್ಬನಿದ್ದ. ದನಗಳನ್ನು ಚೆನ್ನಾಗಿ ಮೇಯಿಸಿ ಸಾಯಂಕಾಲ ಹಟ್ಟಿಗೆ ಹೊಡೆದುಕೊಂಡು ಬರುವುದು ಅವನ ದಿನನಿತ್ಯದ ಕೆಲಸ. ಒಂದುದಿನ ದನಗಳ ಯಜಮಾನ ಕಾವಲಿನ ಹುಡುಗನನ್ನು ಗದರಿಸಿದ-'ಕಪಿಲೆ ದನದ ಕೆಚ್ಚಲು ಬರಿದಾಗಿದೆ. ಕಾಡಿನಲ್ಲಿ ದನಗಳನ್ನು ಮೇಯಿಸುವುದು ಬಿಟ್ಟು ಕೆಚ್ಚಲಿನಿಂದ ಹಾಲು ಕುಡಿಯಲು ಕಲಿತಿದ್ದೀಯಾ...?'ಹುಡುಗ ತಾನು ಹಾಗೆ ಮಾಡಿಲ್ಲವೆಂದು ಪ್ರಮಾಣ ಮಾಡಿ ಹೇಳಿದ. ಘಟನೆ ಮರುದಿನವೂ ಪುನರಾವರ್ತನೆಗೊಂಡಿತು. ಈ ಸಲ ಹುಡುಗ ಒಂದೆರಡು ಪೆಟ್ಟುಗಳನ್ನೂ ತಿನ್ನಬೇಕಾಯಿತು. ಪರಿಣಾಮವಾಗಿ ಮೂರನೇ ದಿವಸ ಹುಡುಗ ಕಪಿಲೆ ದನದ ಬೆನ್ನು ಹಿಡಿದ. ಕಪಿಲೆ ಕಾಡೊಳಕ್ಕೆ ನುಗ್ಗಿ ಕ್ಷಣಮಾತ್ರದಲ್ಲಿ ಮರೆಯಾಯಿತು. ಹುಡುಗ ಅನುಸರಿಸಿದ. ಆತ ನೋಡುತ್ತಿರುವಂತೆ ಕಪಿಲೆ ಕಾಡೊಳಗೆ ಮೊದರಿನಲ್ಲಿ ಅವಿತಿದ್ದ ಹುತ್ತವೊಂದಕ್ಕೆ ಹಾಲೂಡಿಸತೊಡಗಿತು. ಥಂಗನೆ ನೆಗೆದ ಹುಡುಗ ಕಪಿಲೆಯ ಬಾಲ ಹಿಡಿದ. ಈಗ ನೆಗೆದೋಡಿದ ಕಪಿಲೆಯು ನೇರವಾಗಿ ನಾಕೂರು ಹೊಳೆಗೆ ಹಾರಿತು. ಜೊತೆಗೆ ಹುಡುಗನನ್ನೂ ಕೊಂಡೊಯ್ದಿತು. ಹಾಗೆ ಕಪಿಲೆ ದನವು ಹುಡುಗನೊಡನೆ ಮರೆಯಾದ ಜಾಗದಲ್ಲಿ ಲಿಂಗರೂಪೀ ದೈವವೊಂದಿತ್ತು. ಆ ದೈವಕ್ಕೆ ಒಂದು ಚಾವಡಿ (ಗುಡಿ)ಯೂ ಇತ್ತು. ಈಗ ಅದು ನದಿಯ ನಡುವೆ ಮುಳುಗಿಹೋಗಿರುವುದರಿಂದ ಬೇರೆಯವರಿಗೆ ಕಾಣಿಸುವುದಿಲ್ಲ. ಆದರೆ ನದಿಯಲ್ಲಿ ನೀರು ಕಡಿಮೆ ಆದಾಗ, ಮಡಿವಂತರಿಗೆ ದೇವಳದ ಕಳಶ ಕಾಣಿಸುವುದುಂಟು.

ಈ ಐತಿಹ್ಯವನ್ನು ನಿರೂಪಿಸುವ ನಿರೂಪಕನು 'ನಾಕೂರುಗಯ'ವನ್ನು ಬೆರಳಿಂದ ತೋರಿಸಿ, ಲಿಂಗ-ಕಳಶ ಇರುವ ಸ್ಥಳವನ್ನು ನಿಸ್ಸಂಶಯವಾಗಿ ತೋರಿಸುತ್ತಾನೆ, ನಾವೂ ನೋಡುತ್ತೇವೆ. ಕಪಿಲೆ, ಕೆಚ್ಚಲು, ಹಾಲು, ಹುಡುಗ,

ಲಿಂಗ, ನೀರು, ಕಳಶಗಳ ಸುಂದರ ಕಟ್ಟೋಣದಲ್ಲಿ ತಲ್ಲೀನರಾಗುತ್ತೇವೆ. ನಮ್ಮ ಎಂದಿನ ಬೌದ್ಧಿಕ ವ್ಯಾಖ್ಯಾನದ ಪರಿಧಿಯೊಳಗೆ ಇವಕ್ಕೆಲ್ಲ ಹೊಸ ಅರ್ಥ ಹುಡುಕುವ ಚಟುವಟಿಕೆಯಲ್ಲಿ ಮಗ್ನರಾಗಿಬಿಡುತ್ತೇವೆ. ಇಂಥ ಆಕರ್ಷಣೆಯಿಂದ ತಪ್ಪಿಸಿಕೊಂಡು ಈ ಐತಿಹ್ಯದ ಬಹುಮುಖತೆಯ ಕಡೆಗೆ ಸಾಗುವುದು ಸುಲಭದ ಕೆಲಸವೇನೂ ಅಲ್ಲ. ಹಾವೇರಿ ಪರಿಸರದಲ್ಲಿ ಲಭ್ಯ ಇರುವ ಹಸುವಿನ ಐತಿಹ್ಯ ಇಂತಿದೆ:

"ಕಪಿಲೆ ದನವೊಂದು ಮೇಯಲು ಹೋದಾಗ, ಕಾಡಿನಲ್ಲಿ ತನ್ನ ಕೆಚ್ಚಲನ್ನು ಹುತ್ತವೊಂದಕ್ಕೆ ಒಡ್ಡುತ್ತದೆ. ಹುತ್ತದಲ್ಲಿದ್ದ ಕರಿನಾಗರವೊಂದು ಹಸುವಿನ ಕೆಚ್ಚಲಿನಿಂದ ಹಾಲು ಕುಡಿಯುತ್ತದೆ. ಈ ಮಹಿಮೆಯನ್ನು ತಿಳಿದ ಜನರು ನಾಗಪ್ಪನಿಗೊಂದು ಗುಡಿ ಕಟ್ಟಿಸುತ್ತಾರೆ. ಆ ಗುಡಿಯೇ ಅಲ್ಲಿರುವುದು. ಗುಡಿಯೊಳಗೆ ಈಗಲೂ ಕರಿಯಪ್ಪ ದೈವ ವಾಸವಾಗಿದ್ದಾನೆ" .

ಹಾವು, ಹುತ್ತ, ದನ ಮತ್ತು ಹಾಲಿನ ಸಂಯೋಜನೆಗಳಿಂದ ಹಾವೇರಿಯ ಐತಿಹ್ಯವು ಮೊದಲು ಹೇಳಿದ ಐತಿಹ್ಯದಿಂದ ಭಿನ್ನವಾಗಿರುವುದು ತಿಳಿಯುತ್ತದೆ. ಉತ್ತರ



ಕನ್ನಡ ಜಿಲ್ಲೆಯ ಸಿದ್ಧಾಪುರದ ಬಳಿಯ ದೊಡ್ಡಮನೆ ಎಂಬಲ್ಲಿ ದೊರೆತ ಐತಿಹ್ಯದಲ್ಲಿ "ಕರು ಹಾಕದ, ಗರ್ಭ ಧರಿಸದ ಎಳೆಯ ಹೆಣ್ಣುಕರುವೊಂದು ಕಾಡಿನಲ್ಲಿರುವ ಹುತ್ತದ ಬಳಿ ಸುಳಿದಾಡುತ್ತದೆ. ಆಗ ಇದ್ದಕ್ಕಿದ್ದಂತೆ ಅದರ ಕೆಚ್ಚಲು ತುಂಬುತ್ತದೆ. ಅದು ಕೆಚ್ಚಲ ಹಾಲನ್ನು ಹುತ್ತಕ್ಕೆ ಎರೆಯುತ್ತದೆ. ಮಹಿಮೆ ತಿಳಿದ ಊರಿನ ಜನರು ಹುತ್ತವನ್ನು ಅಗೆಸಿದಾಗ ಅದರಲ್ಲಿ ಲಿಂಗರೂಪಿ ದೈವವೊಂದು ಇರುವುದು ತಿಳಿಯುತ್ತದೆ. ಜನರು ಅದಕ್ಕೆ ಗುಡಿ ಕಟ್ಟಿಸಿ ಪೂಜೆ ಮಾಡುತ್ತಾರೆ" . ಇಲ್ಲಿ ಎಳೆಯ ಕರು ಹಾಲೂಡಿಸುವ ಪವಾಡ ನಡೆದಿದೆ. ಕರುವನ್ನು 'ಕನ್ಯ' ಯಾಗಿಸುವುದರ ಮೂಲಕ ಅದರ ಲೈಂಗಿಕ ಪಾವಿತ್ರ್ಯವನ್ನು ಕಾಪಾಡಲಾಗಿದೆ. ಈ ಬಗೆಯ ಕನ್ಯತ್ವ ರಕ್ಷಣೆ'ಯ ಪ್ರತಿಕ್ರಿಯೆಯ ಇನ್ನೊಂದು ರೂಪ, ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲೂಕಿನ ಬಿಳಿನೆಲೆಯಲ್ಲಿ ಲಭ್ಯವಿದೆ. ಅಲ್ಲಿರುವ ಐತಿಹ್ಯದ ಪ್ರಕಾರ, "ಕರುವನ್ನೇ ಹಾಕಲಾಗದ ಗೊಡ್ಡಿ ದನವೊಂದು ಕಾಡಿನಲ್ಲಿರುವ ಲಿಂಗಕ್ಕೆ ಕ್ಷೀರಾಭಿಷೇಕ ಮಾಡುತ್ತದೆ. ಅಚ್ಚರಿಗೊಂಡ ಜನರು ಲಿಂಗದ ಮಹಿಮೆಗೆ ಮೆಚ್ಚಿ ಅದಕ್ಕೊಂದು ಗುಡಿ ಕಟ್ಟಿಸುತ್ತಾರೆ" . ಇಲ್ಲಿ ಗೊಡ್ಡಿ ದನದ ಕೆಚ್ಚಲಿನಿಂದ ಹಾಲು ಒಸರುವ ಪವಾಡ ನಡೆದಿದೆ. ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಕೂಡುರಸ್ತೆ ಎಂಬಲ್ಲಿ ಜನಜನಿತವಾಗಿರುವ ಐತಿಹ್ಯದ ಪ್ರಕಾರ, 'ಗೊಡ್ಡಿದನ ಹುತ್ತಕ್ಕೆ ಹಾಲೆರೆದ ಆನಂತರ ಹಟ್ಟಿಗೆ ಹಿಂದಿರುಗಿ, ತನ್ನ ಯಜಮಾನನಿಗೂ ಹಾಲು ಕೊಡುತ್ತದೆ. ಈ ಮೂಲಕ ಅದು ಯಜಮಾನ ಸಂಪತ್ತಿನ ಸಂವರ್ಧನೆಗೆ ಕಾರಣವಾಗುತ್ತದೆ.

ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನ ಐಗೂರು ಎಂಬಲ್ಲಿ ಪ್ರಚಲಿತದಲ್ಲಿರುವ ಹೇಳಿಕೆಯ ಪ್ರಕಾರ “ಹಸುವೊಂದು ಹಟ್ಟಿಯಲ್ಲಿ ಕರುವಿಗೆ ಹಾಲೂಡಿಸುವುದೇ ಇಲ್ಲ. ಅದು ತನ್ನ ಕರುವನ್ನು ಕರೆದುಕೊಂಡು ಕಾಡಿಗೆ ಹೋಗುತ್ತದೆ. ಕಾಡಿನಲ್ಲಿ ಕರು ಹಾಲು ಕುಡಿಯುವಾಗ, ಅದರ ದವಡೆಯಿಂದ ಹಾಲು ತೊಟ್ಟಿಕ್ಕುತ್ತದೆ. ಹೀಗೆ ತೊಟ್ಟಿಕ್ಕಿದ ಹಾಲು ಹುತ್ತದೊಳಗಣ ಲಿಂಗಕ್ಕೆ ಸೇರುತ್ತದೆ. ವಿಷಯ ತಿಳಿದ ಜನರು ಲಿಂಗಕ್ಕೆ ಗುಡಿ ಕಟ್ಟಿಸುತ್ತಾರೆ” . ಈ ಐತಿಹ್ಯದಲ್ಲಿ ಎಂಜಲಿನ (ಮೈಲಿಗೆ) ಕಲ್ಪನೆ ಇಲ್ಲದಿರುವುದು ಕುತೂಹಲಕರ. ಬೆಳಗಾವಿ ಜಿಲ್ಲೆಯ ಕಿತ್ತೂರಿನಲ್ಲಿರುವ ಐತಿಹ್ಯದ ಪ್ರಕಾರ “ಹಸು ಕಾಡಿಗೆ ಹೋಗಿ ಲಿಂಗಕ್ಕೆ ಹಾಲೂಡಿಸಿದ ಆನಂತರ ಹಟ್ಟಿಗೆ ಹಿಂದಿರುಗಿ ಬಂದು ತನ್ನ ಕರುವಿಗೆ ಹಾಲೂಡಿಸುತ್ತದೆ” .

ಹುತ್ತದೊಳಗೆ ಕರಿಯಪ್ಪ ಲಿಂಗಪ್ಪರು ವಾಸವಾಗಿರುವಂತೆ, ಮುನಿಗಳೂ, ವೆಂಕಟೇಶ್ವರ, ಶ್ರೀಕೃಷ್ಣ ವಾಸವಾಗಿರುವ ಕುರಿತು ಮಾಹಿತಿಗಳು ಲಭಿಸುತ್ತವೆ. ಪ್ರಖ್ಯಾತವಾದ ಶ್ರೀ ಎಡೆಯೂರಿನಲ್ಲಿ ಬಿಳಿದನವೊಂದು ಹುತ್ತದೊಳಗೆ ಧ್ಯಾನಸ್ಥನಾಗಿದ್ದ ಸಿದ್ದಲಿಂಗ ಯತಿಗೆ ಹಾಲು ಕುಡಿಸುತ್ತದೆ. ಕೋಲಾರ ಜಿಲ್ಲೆಯ ಬಂಗಾರಪೇಟೆಯ ತಮಿಳರ ನಡುವೆ ಪ್ರಚಲಿತದಲ್ಲಿರುವ ನಂಬಿಕೆಯಂತೆ, ಶ್ರೀ ವಿಷ್ಣುವೇ ಕರುವಿನ ರೂಪದಲ್ಲಿ ಬಂದು ಕಪಿಲೆಯ ಹಾಲು ಕುಡಿಯುತ್ತಾನೆ. ಅದೇ ಪ್ರದೇಶದಲ್ಲಿರುವ ಇನ್ನೊಂದು

5 ನುಡಿಗಂಧ

ಐತಿಹ್ಯದ ಪ್ರಕಾರ “ವಿಷ್ಣು ಹುತ್ತದೊಳಗೆ ಪವಡಿಸಿರುತ್ತಾನೆ. ಆ ಹುತ್ತಕ್ಕೆ ಕಪಿಲೆ ದನ ಹಾಲೆರೆಯುತ್ತದೆ. ವಿಷಯ ತಿಳಿಯದ ಯಜಮಾನನು 'ಬುದ್ಧಿಗೇಡಿ ದನವು ಹುತ್ತಕ್ಕೆ ಹಾಲೆರೆದು ತನಗೆ ಅನ್ಯಾಯ ಮಾಡುತ್ತಿದೆ' ಎಂದು ಭಾವಿಸಿ, ಹುತ್ತಕ್ಕೆ ಹಾಲೂಡಿಸುತ್ತಿರುವ ದನವನ್ನು ಕೊಲ್ಲಲು ಕತ್ತಿ ಎತ್ತುತ್ತಾನೆ. ಆದರೆ ಕತ್ತಿ ದನವನ್ನು ಕತ್ತರಿಸುವ ಮುನ್ನ ಹುತ್ತದೊಳಗಿಂದ ವೆಂಕಟೇಶ್ವರ ಎದ್ದು ಬಂದು ತಡೆಯುತ್ತಾನೆ. ಜ್ಞಾನೋದಯವಾಗಿ ಯಜಮಾನನು ಹಸುವಿಗೂ ವೆಂಕಟೇಶ್ವರನಿಗೂ ಒಟ್ಟು ಸೇರಿಸಿಯೇ ಗುಡಿ ಕಟ್ಟುತ್ತಾನೆ. ಈ ಐತಿಹ್ಯವು ತಿರುಪತಿಯಲ್ಲಿಯೂ ಪ್ರಚಲಿತದಲ್ಲಿದೆ ಎಂದು ವರದಿಯಾಗಿದೆ.

ಬಳ್ಳಾರಿ ಜಿಲ್ಲೆಯ ಹಂಪಿಯಲ್ಲಿರುವ ನಂಬಿಕೆಯ ಪ್ರಕಾರ, “ಹಸುವೊಂದು ಪ್ರತಿ ದಿನ ನೀರು ಕುಡಿಯಲೆಂದು ಹಂಪಿಹೊಳೆ (ತುಂಗಭದ್ರಾ)ಗೆ ಬರುತ್ತದೆ. ಆದರೆ ಅದು ನಿಜವಾಗಲೂ ಹೊಳೆಯ ನೀರನ್ನು ಕುಡಿಯುವುದಿಲ್ಲ, ಬದಲು ಬೃಹತ್ತಾದ ಬಂಡೆಯನ್ನು ಕೊರೆದು ಅದರಿಂದ ನೀರು ಕುಡಿಯುತ್ತದೆ. ಈ ವಿಚಿತ್ರ ಕಂಡ ಜನರು ಒಡ್ಡರನ್ನು ಕರೆಸಿ ಬಂಡೆಯನ್ನು ಒಡೆಸುತ್ತಾರೆ. ಆಗ ಅದರೊಳಗೊಂದು ಲಿಂಗ ಇರುವುದು ಕಂಡುಬರುತ್ತದೆ. ಜನರು ಅಲ್ಲೊಂದು ಮಂಟಪ ಕಟ್ಟಿಸುತ್ತಾರೆ” . ಈ ಐತಿಹ್ಯದಲ್ಲಿ ಹಾಲೂಡಿಸುವ ವಿವರ ಇಲ್ಲ. ಉಳಿದಂತೆ ಪವಾಡ, ಗುಡಿ, ನೀರು ಮತ್ತಿತರ

ವಿಷಯಗಳೆಲ್ಲ ಇವೆ. ಮಂಗಳೂರು ತಾಲ್ಲೂಕಿನ ಮುಡಿಪು ಎಂಬಲ್ಲಿರುವ ಐತಿಹ್ಯದ ಪ್ರಕಾರ 'ಹೊಲೆಯ ಹೆಂಗಸೊಬ್ಬಳು ನೇಜಿ ನೆಡುತ್ತಿರುವಾಗ ಮಗುವಿನ ಅಳುವನ್ನು ಆಲಿಸುತ್ತಾಳೆ. ತಕ್ಷಣ ಆಕೆಯ ಮೊಲೆಯಿಂದ ಹಾಲು ಒಸರಲು ಆರಂಭವಾಗುತ್ತದೆ. ಆಕೆ ಓಡೋಡಿ ಬಂದು ಮಗುವನ್ನು ಎತ್ತಿಕೊಂಡು ಅದಕ್ಕೆ ಹಾಲೂಡಿಸುತ್ತಾಳೆ. ಆಗ ಏಳು ಹೆಡೆಯ ಸರ್ಪವೊಂದು ತಾಯಿ-ಮಗುವಿಗೆ ನೆರಳಾಗುತ್ತದೆ. ಈ ಅದ್ಭುತವನ್ನು ಕಂಡ ಜನರು ಅಲ್ಲಿ ಗುಡಿ ಕಟ್ಟಿಸುತ್ತಾರೆ. ಇಲ್ಲಿ ದನದ ಪ್ರಸ್ತಾಪವಿಲ್ಲ. ದನದ ಜಾಗವನ್ನು ದಲಿತ ಮಹಿಳೆಯೊಬ್ಬಳು ಆಕ್ರಮಿಸಿಕೊಂಡಂತೆ ಭಾಸವಾಗುತ್ತದೆ. ತುಮಕೂರು ಜಿಲ್ಲೆಯಿಂದ ವರದಿಯಾದ ಐತಿಹ್ಯವೊಂದರಲ್ಲಿ "ಹಾಲು ಮಾರಲು ಹೋಗುತ್ತಿದ್ದ ಗೊಲ್ಲತಿಯೊಬ್ಬಳಿಗೆ ಮಗುವಿನ ಅಳು ಕೇಳಿಸುತ್ತದೆ. ಆಕೆ ಸುತ್ತಲೂ ನೋಡಿದಾಗ ಹುತ್ತವೊಂದು ಬಿಟ್ಟರೆ ಅಲ್ಲಿ ಬೇರೇನೂ ಇರುವುದಿಲ್ಲ. ಆಕೆ ಸೂಕ್ಷ್ಮವಾಗಿ ಗಮನಿಸಿದಾಗ, ಹುತ್ತದೊಳಗಿನಿಂದಲೇ ಮಗುವಿನ ಅಳು ಕೇಳಿಸುತ್ತದೆ. ಆಗ ಆಕೆ ಹಾಲನ್ನು ಹುತ್ತಕ್ಕೆ ಎರೆಯುತ್ತಾಳೆ. ಮಗುವಿನ ಅಳುವೇನೋ ನಿಲ್ಲುತ್ತದೆ. ಆದರೆ ಈಗ ಗೊಲ್ಲತಿಗೆ ಅಳು ಬರುತ್ತದೆ. ಮನೆಯಲ್ಲಿ ಗಂಡ ಹಾಲು ಮಾರಿದ ಹಣವೆಲ್ಲಿ ಎಂದು ಕೇಳಿದರೆ ಏನು ಉತ್ತರಿಸುವುದೆಂದು ಆಕೆ ಕಂಗಾಲಾಗುತ್ತಾಳೆ. ಆಗ ಹುತ್ತದೊಳಗಿನ ಮಗು ಶ್ರೀಕೃಷ್ಣ ಹೇಳುತ್ತಾನೆ-'ಹೆದರಬೇಡ, ಮಡಕೆಯಲ್ಲಿ ಮರಳು ತುಂಬಿಸಿಕೊಂಡು ಹೋಗು. ಗೊಲ್ಲತಿ ಹಾಗೆಯೇ ಮಾಡುತ್ತಾಳೆ. ಮನೆ ತಲುಪಿದಾಗ ಮರಳೆಲ್ಲ ಚಿನ್ನವಾಗಿರುತ್ತದೆ. ಸಂತುಷ್ಟಗೊಂಡ ಗಂಡ ಶ್ರೀ ಕೃಷ್ಣನಿರುವ ಹುತ್ತಕ್ಕೆ ಗುಡಿ ಕಟ್ಟಿಸುತ್ತಾನೆ. ಈ ಐತಿಹ್ಯದಲ್ಲಿ ಕೂಡ ಮುಡಿಪು ಐತಿಹ್ಯದಲ್ಲಿರುವಂತೆ ಹೆಂಗಸೇ ಹಾಲೂಡಿಸುತ್ತಾಳೆ. ಇವೆರಡರಲ್ಲೂ ಹಸುವಿನ ಉಲ್ಲೇಖ ಇಲ್ಲ. ದಕ್ಷಿಣ



ಕನ್ನಡ ಜಿಲ್ಲೆಯ ಗುತ್ತಿಗಾರು ಗ್ರಾಮದ ವಳಲಂಬೆ ಎಂಬಲ್ಲಿ ದೊರಕುವ ಐತಿಹ್ಯವು ಇನ್ನೂ ರೋಚಕವಾಗಿದೆ. ಅದರ ಪ್ರಕಾರ "ಬ್ರಾಹ್ಮಣ ಹುಡುಗಿಯೊಬ್ಬಳು ಮದುವೆಗೆ ಮುನ್ನ ಮುಟ್ಟಾಗುತ್ತಾಳೆ. ಇದು ಸಂಪ್ರದಾಯಕ್ಕೆ ವಿರುದ್ಧವಾಗಿರುವುದರಿಂದ, ನಿಯಮದಂತೆ ತಂದೆ ಆಕೆಯನ್ನು ನದಿಯ ಮಧ್ಯದಲ್ಲಿ ನಿಲ್ಲಿಸಿ, ಹೊಳೆ ಕೊಚ್ಚಿಕೊಂಡು ಹೋಗಲಿ ಎಂದು ಪ್ರಾರ್ಥಿಸಿ ಹಿಂದಿರುಗುತ್ತಾನೆ. ಆದರೆ ಹೊಳೆ ಕೊಚ್ಚಿಕೊಂಡು ಹೋಗುವುದಿಲ್ಲ. ನಿಧಾನವಾಗಿ ಹುಡುಗಿಯ ಸುತ್ತ ಹುತ್ತ ಬೆಳೆಯುತ್ತದೆ. ಹುತ್ತದೊಳಗೊಂದು ಲಿಂಗ ಮೂಡುತ್ತದೆ. ಹುಡುಗಿ ಲಿಂಗಕ್ಕೆ ಹಾಲೂಡಿಸುತ್ತಾಳೆ. ವಿಷಯ ತಿಳಿದ ಜನರು ನದಿಯ ನಡುವೆಯೇ ಆಕೆಗೆ ಗುಡಿಕಟ್ಟಿಸುತ್ತಾರೆ" . ಇದುವರೆಗಣ ಐತಿಹ್ಯಗಳಲ್ಲಿ ಹಾಲೂಡಿಸುವಿಕೆ ಹುತ್ತದ ಹೊರಗಿನಿಂದ ನಡೆದರೆ, ಈ ಐತಿಹ್ಯದಲ್ಲಿ ಕನ್ಯೆಯೊಬ್ಬಳಿಂದ ಹುತ್ತದೊಳಗಡೆಯೇ ನಡೆಯುತ್ತದೆ. ರಾಯಚೂರು ಜಿಲ್ಲೆಯ ಲಿಂಗಸುಗೂರು ಎಂಬಲ್ಲಿನ ಐತಿಹ್ಯದಂತೆ "ಹುಡುಗಿಯೊಬ್ಬಳು ತನ್ನ ಅಣ್ಣಂದಿರ ಇದಿರಿಗೆ ನಗ್ನಳಾಗಿ ನಿಲ್ಲುತ್ತಾಳೆ. ಕೋಪಗೊಂಡ ಅಣ್ಣಂದಿರು ಆಕೆಯ ಎರಡೂ ಮೊಲೆಗಳನ್ನು ಕತ್ತರಿಸಿ ಕಳ್ಳಿ ಗಿಡದತ್ತ ಎಸೆದುಬಿಡುತ್ತಾರೆ. ತುಂಡಾದ ಮೊಲೆಗಳು ಕಳ್ಳಿ ಗಿಡದ ಬುಡದಲ್ಲಿರುವ ಲಿಂಗಕ್ಕೆ

ಕ್ಷೀರಾಭಿಷೇಕ ಮಾಡುತ್ತವೆ. ಹಾಲು ಉಕ್ಕಿ ಹರಿಯುತ್ತದೆ. ಹೆದರಿದ ಅಣ್ಣಂದಿರು ಆಕೆಗೊಂದು ಗುಡಿಕಟ್ಟಿಸುತ್ತಾರೆ" . ಇದೇ ಊರಿನ ಪಕ್ಕದ ಮಸ್ಕಿಯಲ್ಲಿರುವ ನಂಬಿಕೆಯಂತೆ "ಮರವೊಂದಕ್ಕೆ ಕಟ್ಟಿಹಾಕಿದ ಹಸುವಿನ ಕೆಚ್ಚಲು ಮರುದಿನ ಬರಿದಾಗಿರುತ್ತದೆ. ಮರದ ಬುಡವನ್ನು ಅಗೆದಾಗ ಅಲ್ಲೊಂದು ಶಿವಲಿಂಗ ಇರುವುದು ಕಂಡುಬರುತ್ತದೆ" . ಗದಗಿನ ಕಡೆ ಜನರು ಹೇಳುವಂತೆ "ಹುತ್ತಕ್ಕೆ ಹಾಲೆರೆಯುವ ಹಸುವಿನ ಬಗೆಗೆ ಅರಸನೊಬ್ಬನಿಗೆ ಕನಸು ಬೀಳುತ್ತದೆ. ಆತ ಮರುದಿನ ಹುತ್ತವಿರುವಲ್ಲಿ ಗುಡಿ ಕಟ್ಟಿಸುತ್ತಾನೆ" . ಬಳ್ಳಾರಿ ಜಿಲ್ಲೆಯ ಹಡಗಲಿಯಲ್ಲಿ ಮಾತ್ರ ಹಸು ಹಾಲೂಡಿಸುವ ಬದಲು ಕುರಿ ಹಾಲೂಡಿಸುವ ನಿರೂಪಣೆ ಇದ್ದರೆ, ಕೊಳ್ಳೇಗಾಲ ತಾಲೂಕಿನಲ್ಲಿ ಹುತ್ತಕ್ಕೆ ಎಮ್ಮೆಯೊಂದು ಹಾಲೂಡಿಸುವ ಕತೆ ಪ್ರಚಲಿತದಲ್ಲಿದೆ.

ಇಂಥ ಅನೇಕ ಐತಿಹ್ಯಗಳನ್ನು ನಾವು ಕರ್ನಾಟಕದಾದ್ಯಂತ ಸಂಗ್ರಹಿಸಬಹುದು. ಆದರೆ ಇದು ಎಂದಾದರೂ ಮುಗಿಯುವ ಕೆಲಸ ಎಂದು ಅನ್ನಿಸುತ್ತಿಲ್ಲ. ಜೊತೆಗೆ ಈ ಐತಿಹ್ಯದ ಸುತ್ತ ಇನ್ನಷ್ಟು ನಂಬಿಕೆಗಳೂ ಆಚರಣೆಗಳೂ ಸೇರಿಕೊಂಡು ತುಂಬ ಸಂಕೀರ್ಣವಾದ ಮತ್ತು ವೈವಿಧ್ಯಮಯವಾದ ರಚನೆಯೊಂದು ಪ್ರತೀತ ಗೊಂಡಿದೆ. ಚಿತ್ರದುರ್ಗ ಜಿಲ್ಲೆಯ ಜನರು ಗಾಢವಾಗಿ ನಂಬುವಂತೆ "ಶಿವಲಿಂಗದ ಸುತ್ತ ಹಸು ಮೇಯ್ದು ಬಂದರೆ ಅದರ ಕೆಚ್ಚಲಲ್ಲಿ ಹಾಲು ಕಡಿಮೆ ಆಗುತ್ತದೆ" .

ಹೀಗೆ ಈ ಹಾಲು-ಹುತ್ತಗಳ ಲೋಕ ವಿಸ್ಮಯಕರವಾಗಿದೆ. ಲಿಂಗವು ಹಸುವಿನ ಮೂಲಕ ತನ್ನ ಇರುವಿಕೆ ಪ್ರಕಟಪಡಿಸುತ್ತದೆ ಅಥವಾ ಹಸುವೊಂದು ತನ್ನಲ್ಲಿರುವ ಅತೀಂದ್ರಿಯ ಶಕ್ತಿಯಿಂದ ಲಿಂಗವನ್ನು ಪ್ರಕಟಪಡಿಸುತ್ತದೆ. ಇವೆರಡರಲ್ಲಿ ಯಾವುದೋ ಒಂದು ನಿಜವಿರಬೇಕು ಅಥವಾ ಎರಡೂ ನಿಜವಿರಬಹುದು. 'ನಿಜ' ಒಂದೇ ಆಗಿರಬೇಕೆಂಬ ಹಟ ಇಲ್ಲಿ ಅಗತ್ಯವಿಲ್ಲ.

'ಹುತ್ತಕ್ಕೆ ಹಾಲೆರೆಯುವ ಹಸು'ವಿನ ಕತೆಯು ರಕ್ತ ಒಸರುವ ಲಿಂಗದ ಐತಿಹ್ಯದೊಂದಿಗೂ ಸೇರಿಕೊಂಡಿರುವುದರಿಂದ ಅದನ್ನಿಲ್ಲಿಪರಿಶೀಲಿಸುವುದು ಅಗತ್ಯವಾಗಿದೆ. ರಾಯಚೂರು ಜಿಲ್ಲೆಯ ಮುದ್ದಲ್‌ನಲ್ಲಿ ದೊರೆತ ಐತಿಹ್ಯವೊಂದು ಇಂತಿದೆ :

“ಹಸುವೊಂದು ಲಿಂಗಕ್ಕೆ ಹಾಲೆರೆಯುವ ವಿಷಯ ಮುದ್ಗಲ್ಲಿನ ಆಳರಸನಿಗೆ ತಿಳಿಯುತ್ತದೆ. ನಿಜವನ್ನು ತಿಳಿಯಲೆಂದು ಅರಸ ತನ್ನ ಭಟರೊಡಗೂಡಿ ಕಾಡಿಗೆ ತೆರಳುತ್ತಾನೆ. ಹುತ್ತಕ್ಕೆ ಹಾಲೆರೆದ ಹಸು ಹಿಂದಿರುಗಿದ ಆನಂತರ ಅರಸನು ಹುತ್ತದ ಸುತ್ತ ಹಬ್ಬಿದ್ದ ಮೊದರನ್ನು ಸವರಲೆಂದು ಖಡ್ಗವನ್ನು ಬೀಸುತ್ತಾನೆ. ಚಿಲ್ಲನೆ ರಕ್ತ ಚಿಮ್ಮುತ್ತದೆ. ಅಚ್ಚರಿಗೊಂಡ ಅರಸನು ದಿಟ್ಟಿಸಿ ನೋಡಲಾಗಿ ಅಲ್ಲೊಂದು ಶಿವಲಿಂಗ ಇರುವುದು ಕಂಡುಬರುತ್ತದೆ. ಆತ ಭಕ್ತಿಯಿಂದ ವಂದಿಸಿ, ಅಲ್ಲೊಂದು ಗುಡಿ ಕಟ್ಟಲು ಆಣತಿ ನೀಡುತ್ತಾನೆ. ಹಾಗೆ ಕಟ್ಟಿಸಿದ ಗುಡಿಯೇ ಈಗಲೂ ಇರುವುದು. ಅರಸನ ಖಡ್ಗ ತಾಗಿದಾಗ ಲಿಂಗದ ಮೇಲೆ ಉಂಟಾದ ಗುರುತನ್ನು ಈಗಲೂ ಕಾಣಬಹುದು. “ಈ ಐತಿಹ್ಯದ ಅನೇಕ ಪಾಠಗಳು ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿಯೂ ಪ್ರಚಲಿತದಲ್ಲಿವೆ. ಕೆಲವೆಡೆಗಳಲ್ಲಿ ರಕ್ತಸೋರುವ ಲಿಂಗದ ಮೊದಲ ಭಾಗದಲ್ಲಿ ಹುತ್ತಕ್ಕೆ ಹಾಲೆರೆಯುವ ಹಸುವಿನ ಕತೆ ಸೇರಿಕೊಂಡಿರುವುದಿಲ್ಲ. ಉದಾಹರಣೆಗೆ ಗುಂಡ್ಲುಪೇಟೆಯಲ್ಲಿನ ಐತಿಹ್ಯ ಇಂತಿದೆ:

“ದಲಿತ ಮಹಿಳೆಯೊಬ್ಬಳು ಸೊಪ್ಪು ತರಲು ಕಾಡಿಗೆ ಹೋಗುತ್ತಾಳೆ. ಅಲ್ಲಿ ಮೊದರೊಂದನ್ನು ಕಡಿಯುವಾಗ ಆಕೆಯ ಕತ್ತಿ ಕಲ್ಲೊಂದಕ್ಕೆ ತಾಗುತ್ತದೆ. ತಕ್ಷಣ ಕಲ್ಲಿನಿಂದ ರಕ್ತ ಒಸರುತ್ತದೆ. ಗಾಬರಿಗೊಂಡ ಹೊಲತಿ ತನ್ನ ಸೆರಗನ್ನು ಹರಿದು, ಕಲ್ಲಿಗೆ ಕಟ್ಟಿ ರಕ್ತ ಒಸರುವುದನ್ನು ನಿಲ್ಲಿಸುತ್ತಾಳೆ. ವಿಷಯ ತಿಳಿದ ಊರ ಗೌಡನು ಅಲ್ಲಿಗೆ ಬಂದು, ಅಲ್ಲೊಂದು ಶಿವಲಿಂಗ ಇರುವುದನ್ನು ಗಮನಿಸಿ, ಲಿಂಗಕ್ಕೊಂದು ಗುಡಿ ಕಟ್ಟಿಸುತ್ತಾನೆ. “ಈ ಬಗೆಯ ಐತಿಹ್ಯವು ಶಿವಮೊಗ್ಗ ಜಿಲ್ಲೆಯ ಶಿರಾಳಕೊಪ್ಪ, ಉತ್ತರ ಕನ್ನಡ ಜಿಲ್ಲೆಯ ಹಳಿಯಾಳ, ಬೆಳಗಾಂ ಜಿಲ್ಲೆಯ ಕೊಕಟನೂರು, ಬೀದರ ಜಿಲ್ಲೆಯ ಹುಮನಾಬಾದ್ ಮೊದಲಾದೆಡೆಗಳಲ್ಲಿ ಪ್ರಚಲಿತದಲ್ಲಿದೆ. ಬೆಂಗಳೂರು ಜಿಲ್ಲೆಯ ಮಾಗಡಿ ಬಳಿಯಲ್ಲಿರುವ ಐತಿಹ್ಯದ ಪ್ರಕಾರ-ಯುದ್ಧದಲ್ಲಿ ಗೆಲವು ಸಾಧಿಸಿ ಬಂದ ಅರಸನು, ಕುದುರೆಯ ಮೇಲೆ ಕುಳಿತು ತನ್ನ ಕತ್ತಿಯನ್ನು ಬೀಸುತ್ತ ಉನ್ಮಾದಲ್ಲಿರುತ್ತಾನೆ. ಆಗ ಆತನ ಕತ್ತಿಗೆ ತಾಗಿದ ಲಿಂಗದಿಂದ ರಕ್ತ ಚಿಮ್ಮುತ್ತದೆ” . ಧಾರವಾಡ ಜಿಲ್ಲೆಯ ಗುತ್ತಲಿನಲ್ಲಿ ಜನಪ್ರಿಯವಾಗಿರುವ ಪ್ರಕಾರ “ಕಾಡಿನಲ್ಲಿ ಅಡ್ಡಾಡಿ ಬಂದ ಕುದುರೆಯೊಂದು ಅಸಾಮಾನ್ಯವಾಗಿ ವರ್ತಿಸುತ್ತದೆ. ನೆಗೆದಾಡುತ್ತದೆ. ಗೌಡನು ಜ್ಯೋತಿಷಿಗಳಲ್ಲಿ ಕೇಳಿದಾಗ ಕುದುರೆಯ ಕಾಲಿಗೆ ಲಿಂಗ ತಗುಲಿ, ಲಿಂಗಕ್ಕೆ ಏಟಾಗಿದೆ. ಅದರಿಂದ ರಕ್ತ ಬರುತ್ತಿದೆ. ಅದಕ್ಕೆ ಏನಾದರೂ ಮಾಡಬೇಕು” ಎನ್ನುತ್ತಾರೆ. ಆ ಪ್ರಕಾರ ಗೌಡನು ಕಾಡೆಲ್ಲ ಹುಡುಕಾಡಿಸಿದಾಗ, ಕಾಡಲ್ಲಿ ರಕ್ತ ಸೋರುವ ಲಿಂಗ ದೊರೆಯುತ್ತದೆ. ಗೌಡ ಅಲ್ಲೊಂದು ಗುಡಿ ಕಟ್ಟಿಸುತ್ತಾನೆ” . ಚಿತ್ರದುರ್ಗ ಜಿಲ್ಲೆಯ

ಕರ್ನಾಟಕದಲ್ಲಿ ಅದು 'ಪರಶುರಾಮ'ನನ್ನು ಸಂಕೇತಿಸುತ್ತದೆ. ಆಂಧ್ರ ಕರ್ನಾಟಕ ಗಡಿಭಾಗದಲ್ಲಿ ಲಿಂಗವು 'ವೆಂಕಟೇಶ್ವರ'ನನ್ನು ಪ್ರತಿಬಿಂಬಿಸಿದರೆ, ಮೈಸೂರು ಭಾಗದಲ್ಲಿ ಅದು 'ರಾಮಲಿಂಗೇಶ್ವರ' ಆಗಿರುತ್ತದೆ. ತುಂಗಭದ್ರಾ ನದಿಯ ಎಡ-ಬಲಗಳಲ್ಲಿ ಶಿಲ್ಪವೇನೋ ಲಿಂಗರೂಪದಲ್ಲಿರುತ್ತದೆ. ಆದರೆ ಜನ ಅದನ್ನು 'ಕರಿಯಪ್ಪ ದೈವ' ಎಂದು ಕರೆಯುತ್ತಾರೆ. ಪ್ರಖ್ಯಾತವಾದ ಕುಮ್ಮಟದುರ್ಗದಲ್ಲಿ (ಕೊಪ್ಪಳ ಜಿಲ್ಲೆ) ಲಿಂಗವು 'ಕುಮಾರರಾಮ'ನನ್ನು ಸಂಕೇತಿಸುತ್ತದೆ. ಕ್ವಚಿತ್ತಾಗಿ ಲಿಂಗವು ಭರತ, ಲಕ್ಷಣ, ಶತ್ರುಘ್ನರನ್ನು ಸಂಕೇತಿಸುವುದೂ ಇದೆ. ಹಂಪಿಯ ಹಲವು ಗುಡಿಗಳ ಒಳಗಿನ ಪ್ರದಕ್ಷಿಣಾ ಪಥದಲ್ಲಿ ಕಂಡುಬರುವ ಒಂಬತ್ತು ಲಿಂಗಗಳೂ 'ನವಗ್ರಹ'ಗಳನ್ನು ಸೂಚಿಸುತ್ತವೆ.

ಆಶ್ಚರ್ಯದ ಸಂಗತಿ ಎಂದರೆ, ಲಿಂಗವು 'ಪುರುಷ'ನೇ ಆಗಿರಬೇಕಾಗಿಲ್ಲ ಎನ್ನುವುದು. ಅದು'ಸ್ತ್ರೀ'ಯನ್ನೂ ಪ್ರತಿನಿಧಿಸುತ್ತದೆ. ಪ್ರಖ್ಯಾತವಾದ ಕೊಲ್ಲೂರು ಮೂಕಾಂಬಿಕಾ ದೈವವೂ ಲಿಂಗರೂಪದಲ್ಲಿದೆ. ಮಲೆನಾಡಿನಲ್ಲಿ ಮಾರಿಯಮ್ಮ, ದುರ್ಗಾದೇವಿ, ಹೊಲೇರಮ್ಮ, ಮಹಾಂಕಾಳಿಯಮ್ಮಂದಿರನ್ನು ಲಿಂಗದ ರೂಪದಲ್ಲಿ ಕಲ್ಪಿಸಿ ಆರಾಧಿಸಲಾಗುತ್ತದೆ. ಈ ಅರ್ಥದಲ್ಲಿ 'ಲಿಂಗ ಎಂದರೆ ಪುರುಷ ಜನನಾಂಗ, ಶಿವನ ಜನನಾಂಗ' ಎಂಬಿತ್ಯಾದಿ ಸಾಂಪ್ರದಾಯಿಕ ಹೇಳಿಕೆಗಳಿಂದ ನಾವೀಗ ಈಚೆ ಬರಬೇಕಾಗಿದೆ.

ಹೀಗೆ 'ಹುತ್ತಕ್ಕೆ ಹಾಲೆರೆಯುವ ಹಸು' ಮತ್ತು 'ನೆತ್ತರು ಒಸರುವ ಲಿಂಗದ ನಿರೂಪಣೆಗಳು ವೈವಿಧ್ಯಮಯವಾಗಿವೆ. ಬಿಳಿಹಾಲು ಮತ್ತು ಕೆಂಪು ರಕ್ತಗಳ ನಡುವಣ ವೈರುಧ್ಯಗಳನ್ನು ಬೆಸೆದು ಕಟ್ಟಲಾದ ಈ ಐತಿಹ್ಯಕ್ಕೆ ಮಾನವನ ಮನಸ್ಸಿನ ಮೇಲೆ ಆಳವಾದ ಪರಿಣಾಮ ಬೀರುವ ಶಕ್ತಿ ಇದೆ. ಕರ್ನಾಟಕದ ಮಟ್ಟಿಗೆ ಈ ಐತಿಹ್ಯದ ಬಹುಮುಖತೆ ಅಸಾಧಾರಣವಾದುದು. ಇದರ ಬಹುರೂಪತೆಯನ್ನು ನಿರಾಕರಿಸಿ ನಾವು ಮಾಡುವ ಅಧ್ಯಯನಗಳು ಈ ಐತಿಹ್ಯದ ಬಗೆಗೆ ಪೂರ್ಣ ಬೆಳಕು ಚೆಲ್ಲಲಾರದು. ನಮ್ಮ ಸಂಶೋಧನೆಗಳು ಈ ನಿಟ್ಟಿನಲ್ಲಿ ಗಂಭೀರವಾಗಿ ಮುಂದುವರಿಯಬೇಕಾಗಿವೆ.

**೧.೨ ಪಠ್ಯ ವಿಸ್ತರಣೆಯ ಕ್ರಮಗಳು:**

ನಾವು ಸಾಹಿತ್ಯಕ ಪಠ್ಯಗಳನ್ನು ಹೇಗೆ ಓದಬೇಕೆಂಬುದನ್ನು ನಮ್ಮ ಸಾಹಿತ್ಯ ಚರಿತ್ರೆಗಳೇ ನಿರ್ಧರಿಸಿವೆ. ರಂ. ಶ್ರೀ. ಮುಗಳಿ, ತ. ಸು. ಶಾಮರಾಯ, ಎಂ. ಮರಿಯಪ್ಪ ಭಟ್, ಸಿ. ವೀರಣ್ಣ ಮೊದಲಾದವರು ಬರೆದ ಬಗೆ ಬಗೆಯ ಸಾಹಿತ್ಯ ಚರಿತ್ರೆಗಳು ನಮ್ಮ ಮುಂದಿವೆ. ಬೆಂಗಳೂರು ಮತ್ತು ಮೈಸೂರು ವಿಶ್ವವಿದ್ಯಾಲಯಗಳು ಸಿದ್ಧಪಡಿಸಿದ ಸಾಹಿತ್ಯ ಚರಿತ್ರೆಯ ಬೃಹತ್ ಸಂಪುಟಗಳೂ ನಮ್ಮ ಅರಿವಿನ ವಲಯಗಳನ್ನು ವಿಸ್ತರಿಸಿವೆ. ಆದರೆ ಯಾಕೋ ಈಚೆಗೆ ಸಾಹಿತ್ಯ ಚರಿತ್ರೆಯ ಸಂಪುಟಗಳೇ ಬರುತ್ತಿಲ್ಲ. ಇದುವರೆಗೆ ಪ್ರಕಟವಾದ ಸಾಹಿತ್ಯ ಚರಿತ್ರೆಯ ಸಂಪುಟಗಳು ಒಂದೇ ಬಗೆಯಲ್ಲಿ ರಚಿತವಾಗಿವೆ ಎಂಬುದು ಮೇಲ್ನೋಟಕ್ಕೆ ಕಂಡುಬರುವ ಸಂಗತಿಯಾಗಿದೆ. ಅವು ಕವಿಯ ಕಾಲ, ದೇಶ, ಕುಟುಂಬದ ವಿವರಗಳನ್ನು ನೀಡುವುದರ ಜೊತೆಗೆ ಕವಿಯ ಕೃತಿಗಳ ಬಗೆಗೆ

ಸಂಕ್ಷಿಪ್ತವಾಗಿಯೋ ಇಲ್ಲ ಸವಿವರವಾಗಿಯೋ ಮಾಹಿತಿ ನೀಡುತ್ತವೆ. ಬಹುಮಟ್ಟಿಗೆ ವಡ್ಡಾರಾಧನೆಯಿಂದ ಆರಂಭವಾಗುವ ಕನ್ನಡ ಸಾಹಿತ್ಯ ಚರಿತ್ರೆಯು ಮೈಸೂರು ಅರಸರ ಕಾಲದಲ್ಲಿ ರಚಿತವಾದ ಕೃತಿಗಳನ್ನು ವಿವರಿಸುವುದರೊಂದಿಗೆ ಮುಕ್ತಾಯವಾಗುತ್ತದೆ. ಹೊಸಗನ್ನಡ ಸಾಹಿತ್ಯ ಚರಿತ್ರೆಯನ್ನು ಬರೆಯುವವರು ನವೋದಯದಿಂದ ಆರಂಭಿಸಿ ದಲಿತ - ಬಂಡಾಯ ಸಾಹಿತ್ಯಗಳನ್ನು ಪರಿಚಯಿಸುವದರೊಂದಿಗೆ ಕೊನೆಗೊಳ್ಳುತ್ತದೆ. ಅಂದರೆ ಬಹುಮಟ್ಟಿಗೆ ನಮ್ಮ ಸಾಹಿತ್ಯ ಚರಿತ್ರೆಗಳು ಕೃತಿಯೊಂದನ್ನು ಅಂತಿಮವೆಂದು ಪರಿಭಾವಿಸಿಕೊಂಡು ಬೆಳೆದಿವೆ. ಸಾಹಿತ್ಯದ ಕುರಿತಾದ ನಮ್ಮ ಇಂದಿನ ಸಂಶೋಧನೆಗಳು ಇದೇ ಹಾದಿಯಲ್ಲಿ ಹೊರಟಿವೆ. ನನಗೆ ಮೌಲ್ಯಮಾಪನಕ್ಕೆ ಬರುವ ಮಹಾಪ್ರಬಂಧಗಳು ಕವಿ, ಕಾಲ ಕೃತಿಗಳನ್ನು ಪರಿಚಯಿಸುವ ಮಾದರಿಯನ್ನು ಬಿಟ್ಟುಕೊಟ್ಟಿಲ್ಲ. ಒಂದು ಪ್ರದೇಶದ ಲೇಖಕರನ್ನು ಅಧ್ಯಯನ ಮಾಡಿದಾಗಲೂ ಇದುವೇ ವಿಧಾನ. ಈಗ ಈ ಬಗೆಯ ಬರೆಹದ ಕ್ರಮಗಳಿಂದ ನಮ್ಮನ್ನು ಬಿಡಿಸಿಕೊಂಡು, ಬೇರೆ ಬಗೆಯ ಸಂಶೋಧನಾ ಕ್ರಮಗಳತ್ತ ಸಾಗಲು ಸಾಧ್ಯವೇ ಎಂದು ಯೋಚಿಸಬೇಕಾಗಿದೆ. ಸರಳವಾದ ಒಂದು ಉದಾಹರಣೆಯೊಂದಿಗೆ ಇದನ್ನು ಸ್ವಲ್ಪ ವಿಸ್ತರಿಸಬಯಸುತ್ತೇನೆ.

ಕನ್ನಡದಲ್ಲಿ ಪ್ರಕಟವಾಗಿರುವ ರಾಮಾಯಣ ಕಾವ್ಯ ಪರಂಪರೆಯನ್ನು ಗಮನಿಸೋಣ. ಜೈನರು ಮೊದಲು ಕನ್ನಡದಲ್ಲಿ ರಾಮಾಯಣ ಬರೆದರು. ಹೊನ್ನನ 'ಭುವನೈಕ ರಾಮಾಭ್ಯುದಯ' (ಕ್ರಿ. ಶ. ಸು ೯೫೦), ನಾಗಚಂದ್ರನ 'ರಾಮಚಂದ್ರ ಚರಿತ ಪುರಾಣ' (ಕ್ರಿ. ಶ. ಸು ೧೧೦೦), ಕುಮುದೇಂದುವಿನ 'ಕುಮುದೇಂದು ರಾಮಾಯಣ' (೧೨೭೦), ನಾಗರಾಜನ 'ಪುಣ್ಯಾಸ್ರವ' (೧೨೭೦), ದೇವಪ್ಪನ 'ರಾಮವಿಜಯ' (೧೩೩೧), ಚಂದ್ರಶೇಖರನ 'ರಾಮಚಂದ್ರ ಚರಿತ' (೧೭೦೦), ದೇವಚಂದ್ರನ 'ರಾಮಕಥಾವತಾರ' (೧೮೦೦) ಮೊದಲಾದುವು ಜೈನ ರಾಮಾಯಣಗಳು. ಈ ಕವಿಗಳು ವಿಮಲಸೂರಿ ಮತ್ತು ಗುಣಭದ್ರರು ಆರಂಭಿಸಿದ ಜೈನ ರಾಮಾಯಣದ ಎರಡು ಪರಂಪರೆಗಳನ್ನು ಕನ್ನಡದಲ್ಲಿ ಮುನರ್‌ಸೃಷ್ಟಿಸಿದರು. ಇವೆಲ್ಲ ಬಹುಮಟ್ಟಿಗೆ ಓದುಗ ಕೇಂದ್ರಿತ ಕಾವ್ಯಗಳೆಂಬುದನ್ನು ಗಮನಿಸಬೇಕು. ವಿವಿಧ ಛಂದೋಪ್ರಕಾರಗಳಲ್ಲಿ ರಚಿತವಾದ ಈ ಕಾವ್ಯಗಳು ಕಾವ್ಯ-ಶಾಸ್ತ್ರ ಪರಿಣತರಿಗೆ ತುಂಬ ಸಂತೋಷವನ್ನು ನೀಡಬಲ್ಲುವು.

ಇಂಥ ಓದುಗ ಕೇಂದ್ರಿತ ಕಾವ್ಯಗಳಿಂದ ಭಿನ್ನವಾದ ರಾಮಾಯಣ ಕಾವ್ಯಗಳನ್ನು ಹದಿನಾಲ್ಕನೇ ಶತಮಾನದ ಆನಂತರ ಬ್ರಾಹ್ಮಣ ಕವಿಗಳು ಬರೆಯಲು ಆರಂಭಿಸಿದರು. ಈ ಬ್ರಾಹ್ಮಣ ಕವಿಗಳು ತಮಗಿಂತ ಪೂರ್ವದಲ್ಲಿ ಬಂದಿದ್ದ ಜೈನ ರಾಮಾಯಣಗಳತ್ತ ನೋಡದೆ ಸಂಸ್ಕೃತದಲ್ಲಿದ್ದ ವಾಲ್ಮೀಕಿ ರಾಮಾಯಣದತ್ತ ತಿರುಗಿಕೊಂಡರು. ಕುಮಾರ ವಾಲ್ಮೀಕಿಯ 'ತೊರವೆ ರಾಮಾಯಣ' (ಕ್ರಿ.ಶ. ೧೫೦೦), ಚಾಮರಾಜನ 'ರಾಮಾಯಣ' (ಕ್ರಿ. ಶ. ೧೬೩೦), ತಿಮ್ಮರಸನ 'ಮಾರ್ಕಾಂಡೇಯ ರಾಮಾಯಣ' (೧೬೫೦), ಮಲ್ಲರಸನ 'ದಶಾವತಾರ ಚರಿತೆ' (೧೬೮೦), ಶಂಕರನಾರಾಯಣನ 'ಅಧ್ಯಾತ್ಮ

ರಾಮಾಯಣ' (೧೭೦೦) ಮತ್ತಿತರ ಕೃತಿಗಳು ಮಧ್ಯಕಾಲೀನ ಕರ್ನಾಟಕದ ಭಕ್ತಿಯುಗದಲ್ಲಿ ರಚಿತವಾದುವು. ಈ ಕಾವ್ಯ ಕೃತಿಗಳು ಮುಖ್ಯವಾಗಿ ಷಟ್ಪದಿಯಲ್ಲಿ ರಚಿತವಾದುವು ಎಂಬುದನ್ನು ಮುಖ್ಯವಾಗಿ ಗಮನಿಸಿದರೆ, ಅವು 'ಕೇಳುಗ' ಕೇಂದ್ರಿತವಾಗಿ ಬೆಳೆದುವು ಎಂಬುದು ಗೊತ್ತಾಗುತ್ತದೆ. ಅಂದರೆ ಈ ಕಾವ್ಯವನ್ನು ಒಬ್ಬ ರಾಗವಾಗಿ ಹಾಡಿದರೆ ನೂರಾರು ಜನ ಅದನ್ನು ಕೇಳಬಹುದಾಗಿತ್ತು. ಹಾಗೆ ಕುಳಿತು ಕೇಳುವುದಕ್ಕೆ ಅಕ್ಷರಸ್ಥ ಮತ್ತು ಅನಕ್ಷರಸ್ಥ ಎಂಬ ಭೇದವೂ ಇಲ್ಲ. ಕಾರಣ ಈ ಕಾವ್ಯಗಳು 'ಗಮಕ' ಎಂಬ ಹೊಸ ರೂಪದ ಸೃಷ್ಟಿಗೆ ಕಾರಣವಾದುವು. ಗಮಕವು ಮುಂದೆ 'ಹರಿಕಥೆ' ಎಂಬ ಇನ್ನೊಂದು ನವೀನ ಪ್ರಕಾರದೊಡನೆಯೂ ಸೇರಿಕೊಂಡು ಇನ್ನಷ್ಟು ವಿಸ್ತಾರವಾಗತೊಡಗಿತು. ಗಮಕವು ಕುಳಿತು ಹಾಡುವ ಪರಂಪರೆಗೆ ಸೇರಿದರೆ, ಹರಿಕಥೆಯು ನಿಂತು ಹಾಡುವ ಮತ್ತು ಇನ್ನಷ್ಟು ಉಪಕರಣಗಳನ್ನು ಮತ್ತು ಗಾಯಕರನ್ನು ಒಳಗೊಂಡು ಗಮಕ್ಕಿಂತಲೂ ವಿಸ್ತಾರವಾದ ಪ್ರೇಕ್ಷಕ ವರ್ಗವನ್ನು ಹುಟ್ಟುಹಾಕಿಕೊಂಡಿತು. ಈ ಗಮಕ ಮತ್ತು ಹರಿಕಥೆಗಳಿಗೆ ದೇವಸ್ಥಾನ ಮತ್ತಿತರ ಕಡೆಗಳಲ್ಲಿ ಅಭಿವ್ಯಕ್ತಿಗೆ ಅವಕಾಶ ದೊರೆಯುತ್ತಿದ್ದಂತೆ ಅವು ಅಲ್ಲಿನ ವಾಸ್ತು ಮತ್ತು ಶಿಲ್ಪಗಳ ಮೇಲೂ ಪರಿಣಾಮ ಬೀರತೊಡಗಿದವು. ರಾಮಾಯಣ ಸಂಬಂಧಿ ಅನೇಕ ಘಟನೆಗಳು ಸಭಾಂಗಣದ ಸುತ್ತೆಲ್ಲ ಶಿಲ್ಪಗಳಾಗಿ, ಗೋಡೆಗಳ ಮೇಲೆ ವರ್ಣಚಿತ್ರಗಳಾಗಿ ಮರುಸೃಷ್ಟಿಗೊಂಡವು.ದೊಡ್ಡ ಪ್ರೇಕ್ಷಕವರ್ಗ ವನ್ನು ಒಳಗೊಳ್ಳುವ ಹಾಗೆ ನವರಂಗಗಳೂ ವಿಸ್ತಾರವಾದುವು. ಹೀಗೆ ಓದುಗ ಕೇಂದ್ರಿತ ಸಾಹಿತ್ಯ ಪಠ್ಯಗಳು ಮಧ್ಯಕಾಲೀನ ಕರ್ನಾಟಕದಲ್ಲಿ ಕೇಳುಗ ಕೇಂದ್ರಿತ ಪಠ್ಯಗಳಾಗಿ ಮಾರ್ಪಟ್ಟು ಜನ ಸಮುದಾಯವನ್ನು ತಲುಪಲು ಪ್ರಯತ್ನಿಸಿದ್ದು ತುಂಬ ಕುತೂಹಲಕರ ವಿಷಯವಾಗಿದೆ.

ನಿಧಾನವಾಗಿ ಈ 'ಕೇಳುಗ ಕೇಂದ್ರಿತ ಪಠ್ಯಗಳು ೧೬-೧೭ ನೇ ಶತಮಾನದಲ್ಲಿ 'ನೋಡುಗ' ಕೇಂದ್ರಿತ ಪಠ್ಯಗಳಾಗಿ ಬೆಳೆದದ್ದು ಕೂಡಾ ಇಲ್ಲಿ ಉಲ್ಲೇಖಾರ್ಹ. ಕುಂಬಳೆಯ ಪಾರ್ತಿಸುಬ್ಬ (೧೬೨೦), ಮುದ್ದಣ, ಗೆರೆಸೊಪ್ಪೆ ಶಾಂತಪ್ಪಯ್ಯ, ಅಳಿಯ ಲಿಂಗರಾಜ, ಕಡಂದಲೆ ರಾಮರಾವ್, ದೇವಿದಾಸ, ಹಳೆಮಕ್ಕಿ ರಾಮ, ಹಟ್ಟಿಯಂಗಡಿ ರಾಮಭಟ್ಟ, ಕಿರಿಕ್ಕಾಡು ಮಾಸ್ತ ವಿಷ್ಣುಭಟ್, ಹಲಸಿನಹಳ್ಳಿ ನರಸಿಂಹಶಾಸ್ತ್ರಿ ಮೊದಲಾದ ಯಕ್ಷಗಾನ ಕವಿಗಳು ತೊರವೆ ರಾಮಾಯಣ, ದಶಾವತಾರ ಚರಿತ್ರೆ, ಹನುಮದ್ ರಾಮಾಯಣ ಮತ್ತಿತರ ಕೇಳುಗ ಕೇಂದ್ರಿತ ಪಠ್ಯಗಳನ್ನು ಯಕ್ಷಗಾನ ಪ್ರಸಂಗಗಳಾಗಿ ಮಾರ್ಪಡಿಸಿದಾಗ 'ನೋಡುಗ' ಕೇಂದ್ರಿತ ಪಠ್ಯಗಳು ಸೃಷ್ಟಿಯಾದುವು. ಯಕ್ಷಗಾನ ರಂಗಭೂಮಿಯ ಸೂಕ್ಷ್ಮಗಳನ್ನು ಬಹಳ ಚೆನ್ನಾಗಿ ತಿಳಿದಿದ್ದ ಪಾರ್ತಿ ಸುಬ್ಬ (೧೬೨೦) ನಂತೂ ತೊರವೆ ರಾಮಾಯಣವನ್ನು ಮುಖ್ಯವಾಗಿ ಆಧರಿಸಿ ರಾಮಾಯಣಕ್ಕೆ ಸಂಬಂಧಿಸಿದ ಸುಮಾರು ಎಂಟು ಪ್ರಸಂಗಗಳನ್ನು ಬರೆದುಬಿಟ್ಟ. ಆತನ ಪಠ್ಯಗಳು ಸಂಗೀತ, ಕುಣಿತ, ವೇಷಭೂಷಣ ಮತ್ತು ಮಾತುಗಾರಿಕೆಗಳೆಂಬ ನಾಲ್ಕು ಅಂಗಗಳ ಮೂಲಕ ಯಕ್ಷಗಾನವಾಗಿ ರಂಗಭೂಮಿಯಲ್ಲಿ ಪ್ರತ್ಯಕ್ಷವಾದಾಗ ಅವನ್ನು ಲಕ್ಷಾಂತರ ಜನ ನೋಡುವಂತಾಯಿತು.

ಈ ಪರಂಪರೆ ಇಂದಿಗೂ ಮುಂದುವರಿದುಕೊಂಡು ಬರುತ್ತಿದೆ. ಯಕ್ಷಗಾನ ಕಲಾವಿದರನೇಕರು ತೊರವೆ ರಾಮಾಯಣದ ಪದ್ಯಗಳನ್ನು ಎಲ್ಲೆಂದರಲ್ಲಿ ಗುನುಗುನುಸಿ ಕೊಂಡು ಓಡಾಡುತ್ತಿರುವುದನ್ನು ಯಾರಾದರೂ ಗಮನಿಸಬಹುದು.

ರಾಮಾಯಣದ ಹಾಗೆ ಭಾರತ ಪರಂಪರೆಯೂ ಕನ್ನಡದಲ್ಲಿ ವಿಸ್ತಾರಗೊಂಡಿದೆ. ಪಂಪನ ವಿಕ್ರಮಾರ್ಜುನ ವಿಜಯವು ಓದುಗ ಕೇಂದ್ರಿತ ಕಾವ್ಯ, ಕುಮಾರವ್ಯಾಸನದ್ದು ಕೇಳುಗ ಕೇಂದ್ರಿತ ಕಾವ್ಯ. ಕುಮಾರವ್ಯಾಸ ಭಾರತದ ಉದ್ಯೋಗಪರ್ವವನ್ನಾಧರಿಸಿದ, 'ಕೃಷ್ಣ ಸಂಧಾನ' ಲಕ್ಷಾಂತರ ಪ್ರಯೋಗಗಳನ್ನು ಕಂಡ ನೋಡುಗ ಕೇಂದ್ರಿತ ಪಠ್ಯ ಹೀಗೆ ಪಠ್ಯಗಳು ಬಹುರೂಪಿಗಳಾಗಿ ವಿಸ್ತಾರಗೊಂಡಿವೆ, ಹಾಗೆ ವಿಸ್ತಾರಗೊಂಡು ಬದುಕುಳಿದಿವೆ. ಸಾಹಿತ್ಯಕ ಪಠ್ಯಗಳ ಅನನ್ಯತೆಯನ್ನು ಬಿಡದೇ ಅವು ವಿಸ್ತಾರಗೊಂಡ ಬಗೆಯನ್ನು ಅಧ್ಯಯನ ಕ್ರಮಗಳಿಗೆ ಜೋಡಿಸಿದರೆ ನಮ್ಮ ಸಂಶೋಧನೆಗಳಿಗೆ ಹೊಸ ಶಕ್ತಿ ಮತ್ತು ಆಯಾಮ ದೊರೆಯುವುದರಲ್ಲಿ ಸಂಶಯವಿಲ್ಲ. ಈ ಭಿನ್ನ ಭಿನ್ನ ಅಭಿವ್ಯಕ್ತಿ ಕ್ರಮಗಳು ಒಂದು ಇನ್ನೊಂದನ್ನು ನಾಶ ಮಾಡದೆ, ಒಂದರಿಂದ ಇನ್ನೊಂದು ಪ್ರಭಾವಿತಗೊಂಡು ಉಳಿದು ಬೆಳೆದುಬಂದ ಬಗೆಯೇ ರೋಚಕವಾದುದು. ನಮ್ಮ ಸಂಶೋಧನೆಗಳು ಈ ಕಡೆಗೆ ಗಮನ ಹರಿಸಬೇಕೆಂದು ನಾನು ಬಯಸುತ್ತೇನೆ.

**೧.೩ ಭಿನ್ನ ಭಿನ್ನ ಆಕರಗಳು :**

ವಸಾಹತು ಕಾಲದಲ್ಲಿ ರೂಪುಗೊಂಡ ನಮ್ಮ ಅಧ್ಯಯನ ಕ್ರಮಗಳು ನಾವು ಬದುಕುತ್ತಿರುವ ಸಮಾಜವನ್ನು ಒಡೆದು, ಬಹಳ ಸೂಕ್ಷ್ಮವಾಗಿ ನೋಡಲು ಹೇಳಿ ಕೊಟ್ಟಿದ್ದರಿಂದ ಸಾಕಷ್ಟು ಲಾಭವೂ ಆಗಿದೆ, ನಷ್ಟವೂ ಅಗಿದೆ. ಇವತ್ತು ನಮ್ಮ ಅಧ್ಯಯನ ಕ್ರಮಗಳೆಲ್ಲ ತುಂಬಾ ಸೀಮಿತವಾದ ಚೌಕಟ್ಟಿನೊಳಗೆ ಕೆಲಸ ಮಾಡಲೇ ಬೇಕಾದ ವಾತಾವರಣವನ್ನು ಸೃಷ್ಟಿಸಿವೆ. ಈ ಅಧ್ಯಯನ ಕ್ರಮಗಳ ಚೌಕಟ್ಟುಗಳನ್ನು ಒಡೆದು ಬಹುಶಿಸ್ತೀಯವಾದ ಒಂದು ವೈಧಾನಿಕತೆಯನ್ನು ನಾವಿಂದು ರೂಪಿಸಿಕೊಳ್ಳ ಬೇಕಾದ್ದು ಬಹಳ ಅಗತ್ಯ. ಇದರಿಂದ ನಮ್ಮ ಸಂಶೋಧನೆಗೆ ಹೊಸ ಕಸುವು ದೊರಕಲು ಸಾಧ್ಯ ಎಂದು ನಾನು ಭಾವಿಸುತ್ತೇನೆ.

ಉದಾಹರಣೆಗೆ ಕುಮಾರರಾಮನ ಬಗೆಗೆ ನಡೆದ ಅಧ್ಯಯನಗಳನ್ನೇ ಗಮನಿಸೋಣ. ಡಾ. ವರದರಾಜರಾವ್ ಅವರು 'ಕುಮಾರರಾಮನ ಸಾಂಗತ್ಯಗಳು ಎಂಬ ಬಹಳ ಒಳ್ಳೆಯ ಮಹಾಪ್ರಬಂಧ ಬರೆದ ಮೇಲೆ ನಮ್ಮ ಸಂಶೋಧನೆಗಳು ಅಲ್ಲಿಗೇ ನಿಂತುಹೋದುವು. ಸಂಶೋಧನಾ ವಿದ್ಯಾರ್ಥಿಗಳನ್ನು ಕೇಳಿದರೆ- "ಒಂದು ಪುಸ್ತಕ ಬಂದುಬಿಟ್ಟಿದೆಯಲ್ಲಾ?'ಎಂದು ನಿಟ್ಟುಸಿರು ಬಿಡುತ್ತಾರೆ. ಇಪ್ಪತ್ತನೇ ಶತಮಾನದ ಉತ್ತರಾರ್ಧದಲ್ಲಿ ನಡೆದ ಸಂಶೋಧನೆಗಳನ್ನು ಇಪ್ಪತ್ತೊಂದನೇ ಶತಮಾನದ ಅಗತ್ಯಗಳಿಗನುಗುಣವಾಗಿ ಹೇಗೆ ಮತ್ತೆ ಮುಂದುವರಿಸಬಹುದು

ಎಂಬ ಕುರಿತು ನಮಗೆ ತಿಳುವಳಿಕೆಯಿಲ್ಲ. ಈ ಹಿನ್ನೆಲೆಯಲ್ಲಿ ಕುಮಾರರಾಮನ ಕುರಿತಾದ ಕೆಲವು ಮಾಹಿತಿಗಳನ್ನು ಕಲೆಹಾಕಿ ಕೆಳಗೆ ಮಂಡಿಸಲಾಗಿದೆ.



ರಾಜಕೀಯವಾಗಿ ಕುಮಾರರಾಮನು ಕರ್ನಾಟಕದ ಮಹತ್ವದ ಅರಸನೇನೂ ಅಲ್ಲ. ಅವನಿಗಿಂತ ಶ್ರೇಷ್ಠರಾದ ಅನೇಕ ಅರಸರು ಕರ್ನಾಟಕದಲ್ಲಿ ಆಗಿಹೋಗಿರು ವುದನ್ನು ನಮ್ಮ ಚರಿತ್ರೆಕಾರರು ಈಗಾಗಲೇ ಗುರುತಿಸಿದ್ದಾರೆ. ಹೀಗಿದ್ದರೂ ಕರ್ನಾಟಕದ ಜನಸಾಮಾನ್ಯರ ನಡುವೆ ಇಂದಿಗೂ ಜನಪ್ರಿಯನಾಗಿರುವವನೆಂದರೆ ಕುಮಾರ ರಾಮನೇ ಆಗಿದ್ದಾನೆ. ಆತ ರಾಜ್ಯ ವಿಸ್ತರಣೆ ಮಾಡಿಲ್ಲ. ಶಾಶ್ವತವಾಗಿ ನೆನಪಿಟ್ಟು ಕೊಳ್ಳಬಲ್ಲಂಥ ಬೃಹತ್ ದೇವಾಲಯಗಳನ್ನು ಕಟ್ಟಿಲ್ಲ. ಧಾರ್ಮಿಕ ಆಂದೋಲನವನ್ನು ಹುಟ್ಟುಹಾಕಿಲ್ಲ. ಇಂಥ ಯಾವುದೇ ಮಹಾನ್ ಸಾಧನೆಗಳನ್ನು ಮಾಡದ ವ್ಯಕ್ತಿತ್ವವೊಂದು ಕರ್ನಾಟಕದ ಜನತೆಗೆ ಇಷ್ಟವಾಗಲು ಕಾರಣಗಳೇನೆಂಬುದನ್ನು ನಾವೀಗ ಶೋಧಿಸಿಕೊಳ್ಳಬೇಕಾದರೆ ಅವನ ಕುರಿತಾಗಿ ಹುಟ್ಟಿಕೊಂಡ ಎಲ್ಲ ಬಗೆಯ ನಿರೂಪಣೆಗಳನ್ನು ಸಂಗ್ರಹಿಸಿ ಅಧ್ಯಯನ ಮಾಡಬೇಕಾಗಿದೆ.

ಈಗ ನಮಗೆ ಲಭ್ಯ ಇರುವ ಮಾಹಿತಿಗಳನ್ನು ಆಧರಿಸಿ ಹೇಳುವುದಾದರೆ, ಕನ್ನಡ ಸಂಸ್ಕೃತಿಯು ಕುಮಾರರಾಮನನ್ನು ಕನಿಷ್ಟ ಹನ್ನೆರಡು ರೀತಿಗಳಲ್ಲಿ ಪುನಾರಚಿಸಿಕೊಂಡಿದೆ. ಅಂದರೆ ಕ್ರಿಶ. ಸುಮಾರು ೧೩೨೩ರಲ್ಲಿ ಸರಿಸುಮಾರಿನಲ್ಲಿ ಬದುಕಿದ್ದ ಕುಮಾರರಾಮನು ಮುಂದಿನ ಸುಮಾರು ಏಳುನೂರು ವರ್ಷಗಳಲ್ಲಿ ಬಗೆಬಗೆಯಾಗಿ ಪುನರ್‌ಸೃಷ್ಟಿಗೊಂಡು, ಕನ್ನಡ ಸಂಸ್ಕೃತಿಯೊಡನೆ ಒಂದು ಬಗೆಯ ನಿರಂತರ ಅನುಸಂಧಾನವನ್ನು ಏರ್ಪಡಿಸಿಕೊಂಡು ಬಂದಿದ್ದಾನೆ. ಕುಮಾರರಾಮನೆಂಬ ಚರಿತ್ರೆಯ ಒಂದು ಪಠ್ಯವು ಹೀಗೆ 'ಬಹುಪಠ್ಯವಾಗಿ ಒಡೆದು, ಸಮಕಾಲೀನ ಗೊಳ್ಳುತ್ತಾ ಬರುತ್ತಿರುವುದು ತುಂಬ ಕುತೂಹಲಕರ ವಿಷಯವಾಗಿದೆ.

ನಾನು ಈಗಾಗಲೇ ಮೇಲೆ ಹೇಳಿರುವಂತೆ ಕುಮಾರರಾಮನ ಬಗೆಗೆ ಮೂರು ಲಿಖಿತ ಮಹಾಕಾವ್ಯಗಳು ಸುಮಾರು ನೂರು ವರ್ಷಗಳ ಅಂತರದಲ್ಲಿ ಸೃಷ್ಟಿಯಾಗಿವೆ. ಇವುಗಳ ಜೊತೆಗೆ ಈ ಲಿಖಿತ ಕಾವ್ಯಗಳಿಗಿಂತ ಭಿನ್ನವಾದ ಪಠ್ಯಗಳನ್ನು ಜಾನಪದಲೋಕ ಸೃಷ್ಟಿಸಿಕೊಂಡಿದೆ. ಬಿ ಎಸ್ ಗದ್ದಗೀಮಠರು ಸಂಗ್ರಹಿಸಿದ 'ಕುಮಾರರಾಮನ ದುಂದುಮೆ', ಜಯಪ್ರಕಾಶ ಮಾವಿನಕುಳಿಯವರು ಸಂಗ್ರಹಿಸಿದ 'ತಂಪಿನ ರಾಜನ ಪದಗಳು' (೧೯೯೨), ಎ.ಗ. ನಾಯಕರು ಬರೆದ 'ಹರಿಕಾಂತರ ಸಂಸ್ಕೃತಿ' (೧೯೯೩), ಕ.ರಾ. ಕೃಷ್ಣಸ್ವಾಮಿಯವರು ಸಂಪಾದಿಸಿದ 'ಧೀರ ಕುಮಾರರಾಮ', ಜೀ.ಶಂ. ಪರಮಶಿವಯ್ಯನವರು ವಿವರಿಸಿದ 'ಚೆನ್ನಿಗರಾಮ', ಡಿ. ಲಿಂಗಯ್ಯನವರು ಮರುಸೃಷ್ಟಿಸಿದ 'ಚೆನ್ನಿಗರಾಮ', ಅಂಬಳಿಕೆ ಹಿರಿಯಣ್ಣನವರು ಸಂಪಾದಿಸಿದ 'ಚೆನ್ನಿಗರಾಮ ಕಾಟುಗರಾಮ, ಡಾ. ಕೆ.ಎಂ. ಮೈತ್ರಿಯವರು ಸಂಪಾದಿಸಿದ 'ಕೃಷ್ಣಗೊಲ್ಲರ ಕಾವ್ಯ'ಗಳಲ್ಲಿ ಕುಮಾರಾಮನ ಕುರಿತು ಹೇರಳ ಮಾಹಿತಿಗಳಿವೆ.

ಹಡಗಲಿಯಲ್ಲಿರುವ ಬುಡೇನಾಬಿ ಎಂಬವರು ರಾಮಕಥೆಯನ್ನು ಹಾಡಿದ್ದನ್ನು ನಾನು ಕೇಳಿದ್ದೇನೆ. ಕಂಪ್ಲಿ ಪರಿಸರದ ಗೊಂದಲಿಗರು ಮತ್ತು ವೆಂಕಟಾಪುರದ ವೇಷಗಾರರು ಕುಮಾರರಾಮನ ಬಗ್ಗೆ ನಿರೂಪಿಸುವ ಕತೆಗಳನ್ನು ಕು.ಎಸ್. ಎಂ. ಸಾವಿತ್ರಿಯವರು ಸಂಗ್ರಹಿಸಿದ್ದಾರೆ. ಮರಿಯಮ್ಮನಹಳ್ಳಿಯ ಸುತ್ತ 'ಹರಲಿ



ರಾಮ'ನ ಕತೆ ಪ್ರಚಲಿತದಲ್ಲಿದೆ. ಹೀಗೆ ಇದೊಂದು ಮುಕ್ತಾಯವಿಲ್ಲದ ಬೃಹತ್ಕಲೋಕ. ಕುಮಾರರಾಮನು ಜನಪದ ನಾಯಕರ ಕಣ್ಮಣಿ.

ಕರ್ನಾಟಕದ ವಿವಿಧೆಡೆಗಳಲ್ಲಿ ಕುಮಾರರಾಮನನ್ನು ದೈವವಾಗಿ ಪೂಜಿಸ ಲಾಗುತ್ತಿದೆ. ಕುಮಾರರಾಮ ವಾಸಿಸಿದ್ದ ಎನ್ನಲಾದ ಕುಮ್ಮಟದುರ್ಗದಲ್ಲಿ ಕುಮಾರರಾಮನು 'ರಾಮಸ್ವಾಮಿ'ಯಾಗಿ ಆರಾಧನೆಗೊಳ್ಳುತ್ತಿದ್ದಾನೆ. ಆತನ ಮತ್ತು ಪೋಲಿಕೆ ರಾಮನ ಕತೆಗಳನ್ನು ಹಿಡಿದುಕೊಂಡು ನಡೆವ ಕುಮ್ಮಟ ಜಾತ್ರೆಯು ಅತ್ಯದ್ಭುತವಾದುದು. ಉತ್ತರಕನ್ನಡ ಜಿಲ್ಲೆಯ ಹೊನ್ನಾವರ, ಅಂಕೋಲಗಳಲ್ಲಿ ಕುಮಾರರಾಮನು 'ಹಸರಾಯ ಎಂಬ ಹೆಸರಿನಲ್ಲಿ ಆರಾಧನೆಗೊಳ್ಳುತ್ತಿದ್ದರೆ, ಶಿವಮೊಗ್ಗ ಜಿಲ್ಲೆಯ ಸಾಗರ ಮತ್ತು ಸೊರಬ ತಾಲೂಕುಗಳಲ್ಲಿ ಈತ 'ಕುಮಾರ' ಮತ್ತು 'ಗಾಮದೇವರು' ಆಗಿದ್ದಾನೆ. ತೀರ್ಥಹಳ್ಳಿ ಮತ್ತು ಹೊಸನಗರ ತಾಲೂಕುಗಳಲ್ಲಿ ಕುಮಾರರಾಮನು 'ಗಾಮೇಶ್ವರ ಆಗಿದ್ದಾನೆ. ಸಾಮಾನ್ಯವಾಗಿ ಸುಗ್ಗಿ ತಿಂಗಳಿನಲ್ಲಿ ಈ ದೈವದ ಜಾತ್ರೆ ನಡೆಯುತ್ತದೆ. ಜಾತ್ರೆಯಲ್ಲಿ ಕುಮಾರರಾಮನನ್ನು ಸಂಕೇತಿಸುವ ಉರುಟಾದ ಕಲ್ಲುಗುಂಡುಗಳನ್ನು ಮೆರವಣಿಗೆ ಮಾಡಿಸಲಾಗುತ್ತದೆ. ಉತ್ತರಕನ್ನಡದ ಅಣಿಲಗೋಡು' ವಿನಲ್ಲಿ ನಡೆಯುವ 'ಕಳ್ಳರಾಮನ ಜಾತ್ರೆ' ವಿಶೇಷ ಉಲ್ಲೇಖಕ್ಕೆ ಅರ್ಹವಾಗಿದೆ. ಹೀಗೆ ಕುಮ್ಮಟದುರ್ಗದಿಂದ ಪಶ್ಚಿಮಕ್ಕೆ ಸರಿದರೆ ಅರಬ್ಬಿ ಸಮುದ್ರದವರೆಗೂ ಕುಮಾರರಾಮನು ದೈವಿಕಪುರುಷನಾಗಿ ಇಂದಿಗೂ ಆರಾಧನೆಗೊಳ್ಳುತ್ತಿರುವುದನ್ನು ಕಾಣಬಹುದು.

ಡಾ. ಎಂ.ಎಂ. ಕಲಬುರ್ಗಿಯವರು ಸಂಪಾದಿಸಿ ಪ್ರಕಟಿಸಿದ ಮೆಕೆಂಜಿ ಕೈಫಿಯತ್ತುಗಳಲ್ಲಿ ಕನಿಷ್ಟ ಆರು ಕೈಫಿಯತ್ತುಗಳು ಕುಮಾರರಾಮನಿಗೆ ಸಂಬಂಧಿಸಿವೆ. ಅವುಗಳೆಂದರೆ:

೧. ತಾಲೂಕು ಕಂಪಲಿ ಕೈಫಿಯತ್ತು

೨. ಕಂಪಲಿರಾಯನ ಮಗ ಕುಮಾರರಾಮನ ಆದಿ ವೃತ್ತಾಂತ

೩. ಕುಮಾರರಾಮನ ಕತೆ

೪. ಕಂಪಲಿ ಗುತ್ತಿ ಮುಂತಾದ ಕೈಫಿಯತ್ತು

೫. ಸಂಡೂರು ಕೈಫಿಯತ್ತು

೬. ಕುಮಾರರಾಮನಿಗೆ ಭಟ್ಟರು ಹೊಗಳುವಂತಹ ಭಟಾಂಗಿನಿ.

೧೭೯೦-೧೭೯೬ರ ನಡುವಿನಲ್ಲಿ ಸಂಗ್ರಹಿಸಲಾದ ಈ ಕೈಫಿಯತ್ತುಗಳು ಮೌಖಿಕ ಮತ್ತು ಲಿಖಿತ ನಿರೂಪಣೆಗಳ ಮಿಶ್ರ ರೂಪಗಳಾಗಿದ್ದು, ಕುತೂಹಲಕರ ವಾಗಿವೆ.

ಹೊಸಪೇಟೆ, ಸಂಡೂರು, ಕಂಪ್ಲಿ, ಮರಿಯಮ್ಮನಹಳ್ಳಿ, ಹರಪನಹಳ್ಳಿ, ಸಾಗರ, ಭಟ್ಕಳ ಮೊದಲಾದ ಪ್ರದೇಶಗಳಲ್ಲಿ ಕುಮಾರರಾಮನ ಕುರಿತು ವಿವಿಧ ಬಗೆಯ ಕತೆಗಳು ಐತಿಹ್ಯಗಳು ಲಭಿಸುತ್ತವೆ. ಉದಾಹರಣೆಗೆ ಉತ್ತರಕನ್ನಡ ಜಿಲ್ಲೆಯಲ್ಲಿ ಪ್ರಚಲಿತದಲ್ಲಿರುವ ನಂಬಿಕೆಗಳಂತೆ, ಕುಮಾರರಾಮನಿಗೆ ಮಾಳಮಹಾಸತಿ, ನಾಗಮಹಾಸತಿ,



ಹೊನ್ನಮಹಾಸತಿ ಮತ್ತು ಕೆಂಡಮಹಾಸತಿ ಎಂದು ನಾಲ್ವರು ಹೆಂಡತಿಯರಿದ್ದರು. ಅಣಿಲಗೋಡು ಪರಿಸರದ ಜನರು ನಿರೂಪಿಸುವ ಪ್ರಕಾರ ಆತ 'ಕಳ್ಳ, ಹೊನ್ನಾಳಿ ಪರಿಸರದ ಜನರು ನಂಬುವ ಪ್ರಕಾರ ಆತಏಕಪವ್ರತಸ್ಥನಲ್ಲ'. ಸಿದ್ದಾಪುರದ ಕಡೆಯ ಜನರ ಪ್ರಕಾರ ಕುಮಾರರಾಮನು ಕಾಳಿಕಾಭವಾನಿಯ ಭಕ್ತ, ಆತನು ನಾಡರುಶೆಟ್ಟಿ ಎಂಬ ಕ್ರೂರಿಯನ್ನು ಕೊಲ್ಲುತ್ತಾನೆ. ದಕ್ಷಿಣಕನ್ನಡ, ಉತ್ತರಕನ್ನಡ, ಶಿವಮೊಗ್ಗ ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಕಡುಗಲಿ ಕುಮಾರರಾಮ' ಎಂಬ ಹೆಸರಿನ ಯಕ್ಷಗಾನ ಪ್ರಸಂಗವೊಂದು ಅಪಾರ ಜನಪ್ರಿಯತೆಯನ್ನು ಪಡೆದಿದೆ. ಶ್ರೀ ಮಧುಕುಮಾರ ಎಂಬವರು ಬರೆದ ಈ ಪ್ರಸಂಗವನ್ನು ದಕ್ಷಿಣಕನ್ನಡ ಜಿಲ್ಲೆಯ ಸುರತ್ಕಲ್ ಮೇಳದವರು ಅದ್ಭುತವಾಗಿ ರಂಗಕ್ಕೆ ತಂದಿದ್ದರು. ಮೋರನಾಳ ಮತ್ತು ಹಡಗಲಿ ಪ್ರದೇಶದಲ್ಲಿ ಕಿಳ್ಳಿಕ್ಯಾತರು ಕುಮಾರರಾಮನ ಕತೆಯನ್ನು ತೊಗಲು ಬೊಂಬೆಯಾಟದಲ್ಲಿ ತೋರಿಸುತ್ತಿದ್ದರು ಎನ್ನಲಾಗಿದೆ. ಬಹುಶಃ ದೊಡ್ಡಾಟಗಳಲ್ಲೂ ಇದು ಜನಪ್ರಿಯ ಆಗಿದ್ದಿರಬೇಕು. ಗದಗ ಪರಿಸರದಲ್ಲಿ 'ಕುಮಾರರಾಮ'ನಾಟಕ ಅಪಾರ ಜನಪ್ರಿಯತೆ ಪಡೆದಿದೆ.

೨೦ನೇ ಶತಮಾನದುದ್ದಕ್ಕೂ ವಿವಿಧ ಬರೆಹಗಾರರು ಕುಮಾರರಾಮನ ಕತೆಯನ್ನು ಗದ್ಯದಲ್ಲಿ ಪುನರ್ ಸೃಷ್ಟಿಸಿಕೊಂಡು ಬಂದಿದ್ದಾರೆ. ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಕುಮಾರರಾಮನನ್ನು ದೇಶಪ್ರೇಮಿ ಎಂಬಂತೆ ಮನಾರೂಪಿಸಿ ಕೊಳ್ಳಲಾಯಿತು. ಜಿ.ವರದರಾಜರಾಯರ 'ಕುಮ್ಮಟ ಕೇಸರಿ', ವರದರಾಯ ಹುಯಿಲಗೋಳರ 'ರತ್ನಾಜೀ' ಕೃತಿಯನ್ನು ಇದಕ್ಕೆ ಉದಾಹರಣೆಯಾಗಿ ನೀಡಬಹುದು. ಪ್ರಖರ ವಿಚಾರವಾದಿಯೂ, ನಾಸ್ತಿಕರೂ ಆಗಿದ್ದ

ವಸುದೇವ ಭೂಪಾಲಂ ಅವರ 'ಕುಮ್ಮಟ ವಲ್ಲಭ' ಕೃತಿಯಲ್ಲಿ ಕುಮಾರರಾಮನ ಶೌರ್ಯಕ್ಕೆ ಆದ್ಯತೆ ನೀಡಲಾಗಿದೆ. ಇವಲ್ಲದೆ ಆಲೂರು ವೆಂಕಟರಾಯರ 'ರಣರಂಗಸಿಂಗ ಕುಮಾರರಾಮ', ರಾಮಾಶಾಸ್ತ್ರಿಗಳ ಕೊಮರ ರಾಮ', ಸಿ.ಆರ್. ಹೊಸಳ್ಳಯ್ಯನವರ 'ಅಮರ ಕೀರ್ತಿ', ದೇ. ಜವರೇಗೌಡರ 'ಕಡುಗಲಿ ಕುಮಾರರಾಮ, ಚದುರಂಗರ 'ಕುಮಾರರಾಮ' ಕೃತಿಗಳಲ್ಲಿ ಕುಮಾರರಾಮನ ವ್ಯಕ್ತಿತ್ವದ ವಿವಿಧ ಅಂಶಗಳಿಗೆ ವಿಶೇಷ ಒತ್ತು ನೀಡಲಾಗಿದೆ. ಪಾಂಡುರಂಗ ದೇಸಾಯಿಗಳ 'ಕಂಪಿಲ ಕುಮಾರರಾಮ, ರಾಜ ಪುರೋಹಿತರ 'ಗಂಡುಗಲಿ ಕುಮಾರರಾಮ' ಮತ್ತು ಹುಲ್ಲೂರು ಶ್ರೀನಿವಾಸ ಜೋಯಿಸರ ೧೩ ಲೇಖನಗಳಲ್ಲಿ ಕಾಲ್ಪನಿಕತೆಗಿಂತ ಚರಿತ್ರೆಗೆ ಹೆಚ್ಚು ಒತ್ತು ನೀಡಲಾಗಿದೆ. ಈಗಲೂ ಬರಹಗಾರರು ಕುಮಾರರಾಮನ ವ್ಯಕ್ತಿತ್ವಕ್ಕೆ ಪ್ರತಿಕ್ರಿಯಿಸುತ್ತಲೇ ಇದ್ದಾರೆ. ಅವನ ಬಗ್ಗೆ ಚಲನಚಿತ್ರಗಳು ತಯಾರಾಗುತ್ತಿವೆ. ಗಿಣಿಗೇರಾದ ಮಿತ್ರರಾದ ಬಿ.ಆರ್. ತುಬಾಕಿಯವರು ತಮ್ಮ ಮಗನಿಗೆ ಕುಮಾರರಾಮ ಎಂದೇ ಹೆಸರಿಟ್ಟಿದ್ದಾರೆ.

ತೆಲುಗು ಭಾಷೆಯಲ್ಲಿ ಕೂಡಾ ಕುಮಾರರಾಮನ ಬಗ್ಗೆ ಯಥೇಚ್ಛ ಮಾಹಿತಿಗಳಿವೆ. ಬುರಕತೆಯಂತೂ ಆಂಧ್ರ ಕರ್ನಾಟಕ ಗಡಿಪ್ರದೇಶದಲ್ಲಿ ತುಂಬ ಜನಪ್ರಿಯವಾಗಿದೆ. ವಿಸ್ಕಾನ್ಸಿನ್ ವಿಶ್ವವಿದ್ಯಾಲಯದ ಪ್ರೊ ನಾರಾಯಣರಾವ್ ಮತ್ತು ಹಿಬ್ರೂ ವಿಶ್ವವಿದ್ಯಾಲಯದ



ಪ್ರೊ. ಡೇವಿಡ್ ಶುಲ್ಮನ್ ಅವರು ಜೊತೆಯಾಗಿ ತೆಲುಗಿನಲ್ಲಿರುವ ಕುಮಾರರಾಮನ ಕುರಿತಾದ ಮಾಹಿತಿಗಳನ್ನು ಸಂಗ್ರಹಿಸಿ ವ್ಯಾಖ್ಯಾನಿಸಿದ್ದಾರೆ. ಯಾಕೆ ಹೀಗೆ ನಮ್ಮ ಜನರಿಗೆ ಕುಮಾರರಾಮ ಇಷ್ಟವಾದ ? ಎಂಬ ಪ್ರಶ್ನೆಗೆ ಗಂಭೀರವಾದ ಸಂಶೋಧನೆಗಳಷ್ಟೇ ಉತ್ತರ ನೀಡಬಲ್ಲವು. ಆದರೆ ಯಾಕೋ ನಮ್ಮ ಹೊಸತಲೆಮಾರಿನ ಸಂಶೋಧಕರ ಗಮನ ಆಕಡೆ ಹರಿಯುತ್ತಿಲ್ಲ.

ಹೀಗೆ ಭಿನ್ನ ಆಕರಗಳ ಕಡೆಗೆ ನಮ್ಮ ಗಮನ ಹರಿಯಬೇಕು. ಜೊತೆಗೆ ಭಿನ್ನ ಆಕರಗಳನ್ನು ಒಂದು ಕೇಂದ್ರ ಉದ್ದೇಶಕ್ಕೆ ಜೋಡಿಸಿ ನಿರ್ದಿಷ್ಟವಾದ ಉತ್ತರವನ್ನು ಹೊರಡಿಸುವ ವಿಧಾನವನ್ನೂ ನಮ್ಮ ಸಂಶೋಧನೆಗಳು ಕಂಡುಕೊಳ್ಳಬೇಕು.

ಉದಾಹರಣಗೆ ಮೈಲಾರನ ಬಗ್ಗೆ ಹಿಂದೆ ನಾನು ನಡೆಸಿದ ಸಂಶೋಧನೆ ಯೊಂದರಲ್ಲಿ ಈ ಕೆಳಗಿನ ಪ್ರಶ್ನೆಗಳನ್ನು ಕೇಳಿಕೊಂಡಿದ್ದೆ-

೧. ಮೈಲಾರನಿಗೆ ಸಂಬಂಧಿಸಿದ ಖಂಡಕಾವ್ಯಗಳಲ್ಲಿ ಆತ ಮೂರು ಹುಡುಗಿಯರನ್ನು ಮೂರು ರೀತಿಯಲ್ಲಿ ಮದುವೆಯಾಗುತ್ತಾನೆ. ಯಾಕೆ?

೨. ಮೈಲಾರದೇವನಿಗೆ ಬೇರೆ ಬೇರೆ ಕಾಲದಲ್ಲಿ ಕಟ್ಟಲಾದ ಗುಡಿಗಳಲ್ಲಿ ಆತನ ಈ ಮೂವರು ಹೆಂಡತಿಯರಿಗೆ ಪ್ರತ್ಯೇಕ ಸ್ಥಾನಗಳನ್ನು ಕಲ್ಪಿಸಲಾಗಿದೆ, ಜೊತೆಗೆ ಆ ಮೂವರಿಗೆ ಬೇರೆ ಬೇರೆ ರೀತಿಯ ಶಿಲ್ಪಗಳನ್ನೂ ಕಂಡರಿಸಲಾಗಿದೆ. ಯಾಕೆ?

೩. ಪ್ರತಿವರ್ಷ ನಡೆಯುವ ಮೈಲಾರನ ಕಾರಣಿಕೋತ್ಸವದಲ್ಲಿ, ಮೈಲಾರನ ಕುರಿತಾಗಿರುವ ಕಾವ್ಯದ ಯಾವ ಕೆಲವು ಭಾಗಗಳನ್ನು ಪುನರಭಿನಯಿಸಿ ತೋರಿಸಲಾಗುತ್ತದೆ? ಮತ್ತು ಅದೇ ಭಾಗಗಳನ್ನು ನಿರೂಪಕರು ಯಾಕೆ ಹಾಡಲು ಅಯ್ದುಕೊಳ್ಳುತ್ತಾರೆ.

ಈ ಮೂರು ಪ್ರಶ್ನೆಗಳ ಮೂಲಕ ಮೈಲಾರನ ಮದುವೆ, ವಾಸ್ತುಶಿಲ್ಪ, ಮತ್ತು ಆಚರಣೆಗಳ ನಡುವೆ ಇರಬಹುದಾದ ಸಂಬಂಧವನ್ನು ಅದರ ಚಾರಿತ್ರಿಕ ಸಂದರ್ಭದಲ್ಲಿರಿಸಿ ವಿವರಿಸಲು, ವ್ಯಾಖ್ಯಾನಿಸಲು ಅಲ್ಲಿ ಪ್ರಯತ್ನಿಸಲಾಗಿತ್ತು. ಈ ಅರ್ಥದಲ್ಲಿ ಇದು ಬೇರೆ ಬೇರೆ ಅಧ್ಯಯನ ಶಿಸ್ತುಗಳನ್ನು ಒಂದೆಡೆಗೆ ತರುವ ಪ್ರಯತ್ನವೂ ಹೌದು, ಆ ಶಿಸ್ತುಗಳ ಗೋಡೆಗಳನ್ನು ಒಡೆದು ಹೊಸದೆರೆಡೆಗೆ ನಡೆಯುವ ಪ್ರಯತ್ನವೂ ಹೌದು, ಚೂರು ಚೂರಾಗಿ ಬೇರೆ ಬೇರೆ ಕಡೆ ಹರಡಿ ಹೋಗಿರುವ ವಿಷಯಗಳನ್ನು ಸಂಗ್ರಹಿಸಿಕೊಡುವ ಕೆಲಸವೂ ಹೌದು. ಈ ಅಧ್ಯಯನದ ಕೊನೆಯಲ್ಲಿ 'ಮೈಲಾರನಿಗೆ ಸಂಬಂಧಿಸಿದ ಮೂರು ಮದುವೆಗಳು ಚರಿತ್ರೆಯ ವಿವಿಧ ಘಟ್ಟಗಳಲ್ಲಿ ಆ ಪರಂಪರೆಯು ಮೂರು ಭಿನ್ನ ಭಿನ್ನ ಜನಸಮುದಾಯಗಳೊಂದಿಗೆ ನಡೆಸಿದ ಸಂಘರ್ಷ ಮತ್ತು ಏರ್ಪಡಿಸಿಕೊಂಡ ಸಮನ್ವಯ ಎಂದು ತೋರುತ್ತದೆ. ಈ ಮೂರು ಸಮುದಾಯಗಳೆಂದರೆ- ಕೊಮಾಲಿಯ ಮೂಲಕವಾಗಿ ಮೂಲನಿವಾಸಿಗಳಾದ ದಲಿತವರ್ಗ, ಕುರುಬತ್ತೆವ್ವನ ಮೂಲಕ ವಲಸೆಗಾರ

ಕುರುಬರ ವರ್ಗ ಮತ್ತು ಗಂಗಮ್ಮನ ಮೂಲಕವಾಗಿ ಆರ್ಥಿಕಾಭಿವೃದ್ಧಿ ಸಾಧಿಸಿದ ವರ್ತಕ ವರ್ಗ. ಇದನ್ನು ಚಾರಿತ್ರಿಕವಾಗಿ ನೋಡಿದರೆ ದಲಿತರೊಡನೆ ಏರ್ಪಟ್ಟ ಸಂಘರ್ಷ ಮತ್ತು ಸಮನ್ವಯಗಳು ಮೊದಲ ಹಂತದಲ್ಲೂ, ಕುರುಬರೊಡನೆ ಏರ್ಪಟ್ಟ ಸಂಘರ್ಷ ಮತ್ತು ಸಮನ್ವಯಗಳು ಎರಡನೆಯ ಹಂತದಲ್ಲೂ, ಕೊನೆಯ ಹಂತದಲ್ಲಿ ವರ್ತಕ ವರ್ಗದೊಡನೆ ಸಂಘರ್ಷ ಮತ್ತು ಸಮನ್ವಯಗಳು ಏರ್ಪಟ್ಟವೆಂದೂ ಹೇಳಬಹುದು. ಸಮಾಜವೊಂದರ ಆರ್ಥಿಕ ವಿಕಾಸದ ಬೇರೆ ಬೇರೆ ಹಂತದಲ್ಲಿ ಹೀಗಾಗುವುದು ಕೂಡಾ ಸಹಜವೇ ಆಗಿದೆ. ಈ ಅರ್ಥದಲ್ಲಿ ಮೈಲಾರನ ಮದುವೆಯು ಕೇವಲ ಧಾರ್ಮಿಕ ಅರ್ಥವುಳ್ಳದ್ದಲ್ಲ, ಬದಲು ಭಿನ್ನ ಸಮುದಾಯಗಳು ಕೆಲವು ನಿರ್ದಿಷ್ಟ ಕಾರಣಗಳಿಗಾಗಿ ಒಂದರೊಡನೊಂದು ಬೆರೆತು ಬೆಳೆದುಬಂದದ್ದರ ಪರಿಣಾಮವಾಗಿದೆ' (ಪುರುಷೋತ್ತಮ ಬಿಳಿಮಲೆ ೧೯೯೮) ಎಂದು ಹೇಳಲು ನನಗೆ ಸಾಧ್ಯವಾಯಿತು.

ಈ ಹಂತದಲ್ಲಿ ನಾವು ಕೆಲವು ಪ್ರಕಾರಗಳನ್ನು ಸ್ವತಂತ್ರ ಪ್ರಕಾರಗಳೇನೋ ಎಂಬಂತೆ ಭಾವಿಸಿ ಅಧ್ಯಯನ ಮಾಡುವ ರೀತಿಯನ್ನು ಬದಿಗೆ ಸರಿಸಬೇಕು. ಮೇಲಿನ ವಿವರಣೆಯಲ್ಲಿ ಅದು ಸ್ಪಷ್ಟವಾಗಿದೆ ಎಂದು ಭಾವಿಸುತ್ತೇನೆ. ಇದರ ಜೊತೆಗೆ ಈ ಎಲ್ಲಾ ನಿರೂಪಣೆಗಳು ಒಂದರೊಡನೊಂದು ಸೇರಿಕೊಂಡು ನಿರ್ಮಿತವಾಗುವ ಸಂಕೀರ್ಣ ಪರಿಸ್ಥಿತಿಯನ್ನು ಗಂಭೀರವಾಗಿ ಅರ್ಥಮಾಡಿಕೊಳ್ಳ ಬೇಕಾಗಿದೆ. ಉದಾಹರಣೆಗೆ ಮೇಲೆ ಉಲ್ಲೇಖಿಸಿದ ಮೈಲಾರದೇವನ ಒಂದು ಮದುವೆಯನ್ನು ಸೂಕ್ಷ್ಮವಾಗಿ ಗಮನಿಸೋಣ. ಅವನಿಗೆ ಮದುವೆ ಆಗಬೇಕೆಂಬ ಆಸೆ ಹುಟ್ಟುತ್ತದೆ. ಹೆಣ್ಣು ಹುಡುಕುತ್ತಾ ಊರೂರು ಅಲೆಯುತ್ತಾನೆ. ಜನರು 'ತಿರುಪತಿ ತಿಮ್ಮಶೆಟ್ಟಿ'ಯ ಕಡೆಗೆ ಬೆರಳು ತೋರಿಸುತ್ತಾರೆ. ಮೈಲಾರನು ತಿರುಪತಿ ತಲುಪಿದಾಗ ತಿಮ್ಮಶೆಟ್ಟಿಯು ಮಲಗಿದ್ದ. ಮೈಲಾರನು ಢಮರುಗವನ್ನು ಬಾರಿಸಿ ಶೆಟ್ಟಿಯನ್ನು ಎಬ್ಬಿಸುತ್ತಾನೆ. ಏಳು ಉಪ್ಪರಿಗೆಯ ಕಿಟಕಿಯಿಂದ ಶೆಟ್ಟಿ ಇಣುಕುತ್ತಾನೆ, 'ಭಿಕ್ಷೆ ಕೊಟ್ಟು ಕಳಿಸಿ' ಎಂದು ಹೇಳಿ ಮತ್ತೆ ಮಲಗುತ್ತಾನೆ. ಆಗ ಶೆಟ್ಟಿಯ ದೊಡ್ಡಮಗಳು ಗಂಗಮ್ಮಳು ಮೈಲಾರನೆಂಬ ಗೊರವನಿಗೆ ಭಿಕ್ಷೆ ನೀಡಲು ಉಪ್ಪರಿಗೆ ಮೆಟ್ಟಿಲಿಳಿದು ಅಂಗಳಕ್ಕೆ ಬರುತ್ತಾಳೆ. ಗೊರವನ ಜೋಳಿಗೆಗೆ ಭಿಕ್ಷೆ ಸುರಿಯುವಾಗ ಅವಳ ಚೆಲುವಿಗೆ ಮನಸೋತ ಮೈಲಾರನು ಆಕೆಯ ಕೈಹಿಡಿದುಕೊಳ್ಳುತ್ತಾನೆ. ಗಂಗಮ್ಮ ಏಳು ಉಪ್ಪರಿಗೆಯ ಜನರಿಗೂ ಕೇಳುವಂತೆ ಚೀರುತ್ತಾಳೆ. ಗಾಬರಿಯಾದ ತಿಮ್ಮಶೆಟ್ಟಿಯು ಮಗಳ ಕೈ ಹಿಡಿದ ಗೊರವನ ಕಂಡು ದಂಗಾಗುತ್ತಾನೆ. ಮೆಟ್ಟಿಲಿಳಿದು ಬಂದು “ಏಳು ಕೋಟಿ ಹೊನ್ನು ಕೊಟ್ಟು ಮಗಳನ್ನು ಮದುವೆಯಾಗು” ಎನ್ನುತ್ತಾನೆ. ಶೆಟ್ಟಿಯ ಹಣದಾಸೆ ಕಂಡು ಮೈಲಾರನಿಗೆ ನಗು ಬರುತ್ತದೆ. 'ಮದುವೆ ಮಾಡಿಕೊಡು, ಊರಿಗೆ ಹೋದಮೇಲೆ ಏಳುಕೋಟಿ ಕಳಿಸಿಕೊಡುತ್ತೇನೆ' ಎನ್ನುತ್ತಾನೆ. ತಿಮ್ಮಶೆಟ್ಟಿಯು, “ಮದುವೆ ಖರ್ಚು ನಿನ್ನದೇ” ಎಂದಾಗ, ಅದಕ್ಕೆ ಒಪ್ಪದ ಗೊರವನು “ದುಡ್ಡು ತಂದಿಲ್ಲ, ಈಗ ಖರ್ಚು ನೀನೇ ಮಾಡಬೇಕು, ಅದಕ್ಕೆ ಒಳ್ಳೆಯ ಬಡ್ಡಿ ಸೇರಿಸಿ ಆನಂತರ ಹಿಂದೆ ಕೊಡುತ್ತೇನೆ” ಎನ್ನುತ್ತಾನೆ. ಈ ಸಲ ಬಡ್ಡಿಯಾಸೆಗೆ ಬಲಿಬಿದ್ದ ತಿಮ್ಮನ್ನು ಅದಕ್ಕೂ ಒಪ್ಪುತ್ತಾನೆ. ಮಗಳನ್ನು ಮೈಲಾರನಿಗೆ

ಮದುವೆ ಮಾಡಿಕೊಡುತ್ತಾನೆ. ಮದುವೆಗೆ ಬಂದವರ ಮುಯ್ಯಿಹಣ ತಿಮ್ಮನಿಗೆ ಸೇರದಂತೆ ಮೈಲಾರ ಮಾಡುತ್ತಾನೆ. ದಿಬ್ಬಣ ಸಹಿತ ಮೈಲಾರ ಹಿಂದಿರುವಾಗ, ತಗುಲಿದ ಹಾದಿ ಖರ್ಚನ್ನೂ ತಿಮ್ಮನೇ ವಹಿಸಿಕೊಳ್ಳುತ್ತಾನೆ. ಹೀಗೆ ಪೈಸೆ ಖರ್ಚಿಲ್ಲದೆ ಮೈಲಾರನು ಗಂಗಮ್ಮನನ್ನು ಮದುವೆ ಮಾಡಿಕೊಳ್ಳುತ್ತಾನೆ.

ಆದರೆ ಮದುವೆ ಕಳೆದು ಬಹಳ ಕಾಲವಾದರೂ ಮೈಲಾರನು ಯಾವ ಹಣವನ್ನೂ ತಿಮ್ಮಪ್ಪನಿಗೆ ಹಿಂದಿರುಗಿಸುವುದಿಲ್ಲ. ತಿಮ್ಮಶೆಟ್ಟಿ ಸಾಲ ವಸೂಲಿಗೆ ಜನ ಕಳಿಸಿದಾಗ "ಭಾರತಹುಣ್ಣಿಮೆಯಲ್ಲಿ ಕಾರಣಿಕ ನಡೆಯುತ್ತದೆ. ಆಗ ಬೀಳುವ ಕಾಣಿಕೆ ಹಣದಿಂದ ಸಾಲ ಮುರಿದುಕೋ" ಎಂದು ಹೇಳಿಕಳಿಸುತ್ತಾನೆ. ಆ ಪ್ರಕಾರ ತಿಮ್ಮನು ಕಾರಣಿಕಕ್ಕೆ ಬರುತ್ತಾನೆ. ಆದರೆ ಈ ಸಲ ಮೈಲಾರನು ಮಾಯದ ಭಂಡಾರ ತೂರಿ ಕಾಣಿಕೆ ಹಣವನ್ನು ಮಾಯ ಮಾಡುತ್ತಾನೆ. "ಅಸಲೂ ಇಲ್ಲ, ಬಡ್ಡಿಯೂ ಇಲ್ಲ" ಎಂದು ತಿಮ್ಮ ಗೋಳಾಡುತ್ತಾನೆ. ಜನರು ನ್ಯಾಯ ಮಾಡುತ್ತಾರೆ. ತಪ್ಪು ಮೈಲಾರನದಲ್ಲ' ಎಂದು ತೀರ್ಮಾನಿಸುತ್ತಾರೆ. ಆದರೂ ಮೈಲಾರನಿಗೆ ಸೇರಿದ ಹುಣಿಸೆ ತೋಪನ್ನು ಒಂದು ವರುಷದ ಮಟ್ಟಿಗೆ ತಿಮ್ಮನಿಗೆ ಒಪ್ಪಿಸುವುದೆಂದೂ, ಅದರಿಂದ ಬಂದ ಉತ್ಪತ್ತಿಯಿಂದ ತಿಮ್ಮಶೆಟ್ಟಿಯು ತನ್ನ ಸಾಲವನ್ನು ತೀರಿಸಿಕೊಳ್ಳಬೇಕೆಂದೂ ನ್ಯಾಯದ ಜನರು ಆದೇಶಿಸುತ್ತಾರೆ. ಆ ಪ್ರಕಾರ ಹುಣಿಸೆ ತೋಪಿನ ಮೇಲ್ವಿಚಾರಣೆಯ ಅಧಿಕಾರವನ್ನು ತಿಮ್ಮ ವಹಿಸಿಕೊಳ್ಳುತ್ತಾನೆ. ತೋಪಿನಲ್ಲಿ ಚೆನ್ನಾಗಿ ಹಣ್ಣು ಬೆಳೆಯುತ್ತದೆ. ತಿಮ್ಮ ಕಣ್ಣಲ್ಲಿ ಕಣ್ಣಿಟ್ಟು ಕಾಯುತ್ತಾನೆ. ಹಣ್ಣು ಕೊಯ್ಯುವ ದಿವಸ ಗಂಗಮ್ಮ ಅಪ್ಪನಿಗೆ ಬಿಸಿ ನೀರಿನ ಸ್ನಾನ ಮಾಡಿಸುತ್ತಾಳೆ. ಒಳ್ಳೆಯ ಊಟ ಹಾಕುತ್ತಾಳೆ. ಶೆಟ್ಟಿಯ ಹೊಟ್ಟೆ ತಣ್ಣಗಾಗುತ್ತದೆ. ಚೆನ್ನಾಗಿ ನಿದ್ದೆ ಮಾಡುತ್ತಾನೆ. ಕಾಯುತ್ತಾ ಕುಳಿತಿದ್ದ ಮೈಲಾರ ಹುಣಿಸೆ ಹಣ್ಣನ್ನೆಲ್ಲ ಹೊಡೆದುಕೊಳ್ಳುತ್ತಾನೆ. ತಿಮ್ಮನಿಗೆ ಎಚ್ಚರವಾಗಿ ನೋಡಿದಾಗ ತೋಪೆಲ್ಲಾ ಖಾಲಿ ಆಕಾಶ ಭೂಮಿ ಒಂದು ಮಾಡುವಂತೆ ಆತ ಗೋಳಾಡುತ್ತಾನೆ. ಮತ್ತೆ ಊರಿನ ಜನ ಸೇರಿ ನ್ಯಾಯ ಮಾಡುತ್ತಾರೆ. ಈ ಸಲವೂ ಅವರು 'ಮೈಲಾರನದು ತಪ್ಪಿಲ್ಲ' ಎನ್ನುತ್ತಾರೆ. ಕೋಪಗೊಂಡ ತಿಮ್ಮನು "ಇನ್ನು ಮುಂದೆ ನಿನ್ನ ಸಹವಾಸ ಬೇಡ, ನಿನ್ನ ಜನರು ಏಳುಕೋಟಿ, ಏಳುಕೋಟಿ ಎಂದು ಹೇಳುತ್ತಾ ತಿರುಗುತ್ತಿರಲಿ, ಅವರಿಗೆ ಬಡತನ ತಪ್ಪದಿರಲಿ" ಎಂದು ಶಾಪ ಕೊಡುತ್ತಾನೆ. ಮೈಲಾರ ನಕ್ಕು ಸುಮ್ಮನಾಗುತ್ತಾನೆ. ಹೀಗೆ ಜನಪ್ರಿಯ ದೈವವಾದ ತಿರುಪತಿ ತಿಮ್ಮಪ್ಪನನ್ನು ಅವನಷ್ಟು ಜನಪ್ರಿಯವೂ ಶಕ್ತಿಶಾಲಿಯೂ ಅಲ್ಲದ, ಕೆಳವರ್ಗಕ್ಕೆ ಸೇರಿದ ಮೈಲಾರನು ಮತ್ತೆ ಮತ್ತೆ ವಂಚಿಸಿ ಸೋಲಿಸುತ್ತಾನೆ.

ಮಧ್ಯ ಕರ್ನಾಟಕದಿಂದ ಕರಾವಳಿ ಕಡೆಗೆ ಬಂದರೆ, ಅಲ್ಲಿ ನೂರಾರು ದೈವಗಳು ಕಣ್ಣಿಗೆ ಬೀಳುತ್ತವೆ. ಈ ದೈವಗಳಲ್ಲಿ ಕೋಟಿ ಚೆನ್ನಯರೆಂಬ ಅವಳಿ ದೈವಗಳು ತುಂಬ ಪ್ರಭಾವಶಾಲಿಯಾಗಿವೆ. ಇದೀಗ ಬಿಲ್ಲವ ಸಮುದಾಯದ ಅಧಿದೈವಗಳಾಗಿ ಕಾಣಿಸಿಕೊಳ್ಳುತ್ತಿರುವ ಕೋಟಿ ಚೆನ್ನಯರು ಮೂಲತಹ ಅನ್ಯಾಯದ ವಿರುದ್ಧ ಹೋರಾಡಿದ

ಯಮಳ ವೀರ. 'ಸತ್ಯದಲ್ಲಿ ಬಂದವರಿಗೆ ಎದೆಯಲ್ಲಿ ಹಾದಿ ನೀಡುತ್ತೇವೆ, ಅನ್ಯಾಯದಲ್ಲಿ ಬಂದವರಿಗೆ ಖಡ್ಗದಲ್ಲಿ ದಾರಿ ತೋರಿಸುತ್ತೇವೆ' ಎನ್ನುವ ಅವರು ಭೂಮಾಲೀಕರ ಮತ್ತು ಜಾತಿ ಪದ್ಧತಿಯ ವಿರುದ್ಧ ಅಸಹನೆಯನ್ನು ಪ್ರಕಟಿಸಿದ್ದಾರೆ. ಈ ಪ್ರಸಿದ್ಧ ಅವಳಿಗಳು ಒಮ್ಮೆ ಮುದ್ದ ಮತ್ತು ಕಳಲ ಎಂಬ ದಲಿತ ವರ್ಗಕ್ಕೆ ಸೇರಿದ ಮುಗ್ಗಲ್ಲು ದೈವಗಳ ಜೊತೆ ಯಾತ್ರೆ ಹೋಗುತ್ತಾರೆ. ಮೇರ ಎಂಬ ಅಸ್ಪೃಶ್ಯ ಸಮುದಾಯಕ್ಕೆ ಸೇರಿದ ಮುದ್ದ ಕಳಲರೂ ಅಪ್ರತಿಮ ವೀರರೇ. ಯಾತ್ರೆಯ ಹಾದಿಯಲ್ಲಿ ಮನ್ನ ಎಂಬ ಅತ್ಯಂತ ಕೆಳ ಹಂತದ ದಲಿತ ಸಮುದಾಯಕ್ಕೆ ಸೇರಿದ ಕಾಣದ ಮತ್ತು ಕಾಟದ ಎಂಬ ಹೆಸರಿನ ಮತ್ತೆರಡು ಅವಳಿ ದೈವಗಳೂ ಸೇರಿಕೊಳ್ಳುತ್ತವೆ. ಹಾದಿಯಲ್ಲಿ ಈ ವೀರರಿಗೆ ಬಾಯಾರಿಕೆಯಾಗುತ್ತದೆ. ಅವರು ನೆಲದಿಂದ ನೀರು ತೆಗೆಯಲು ಯೋಚಿಸುತ್ತಾರೆ. ಕಾಣಿಸುವ ಬಂಡೆಯೊಂದಕ್ಕೆ ಕೋಟಿ ಚೆನ್ನಯರು ತಮ್ಮ ಖಡ್ಗದಿಂದ ಅಪ್ಪಳಿಸುತ್ತಾರೆ, ಆದರೆ ಕಬ್ಬಿಣದ ಖಡ್ಗ ಮೊಂಡಾಗುತ್ತದೆ. ಆನಂತರ ಮುಗೇರರ ದೈವಗಳಾದ ಮುದ್ದ ಕಳಲರು ಮರದಿಂದ ಮಾಡಿದ ತಮ್ಮ ಬಾಣದಿಂದ ಬಂಡೆಗೆ ಗುರಿಯಿಟ್ಟು ಹೊಡೆಯುತ್ತಾರೆ. ಬಾಣ ತುಂಡಾಗುತ್ತದೆ. ಕೊನೆಗೆ ಮನ್ನರ ದೈವಗಳಾದ ಕಾಣದ ಕಾಟದರು 'ತುಂಬ ಮೃದುವಾದ ಆಲಂಬುಡ ಎಂಬ ಗಿಡದ ದಂಡಿನಿಂದ ಬಂಡೆಗೆ ಹೊಡೆದಾಗ ಬಂಡೆ ಒಡೆದು ನೀರು ಚಿಮ್ಮುತ್ತದೆ. ಸಾಮಾಜಿಕ ಶ್ರೇಣೀಕರಣದ ಅತ್ಯಂತ ಕೆಳಗಿರುವ ಅವಳಿ ವೀರರು, ಅವರಿಗಿಂತ ಮೇಲಿರುವವರನ್ನು ಸುಲಭವಾಗಿ ಸೋಲಿಸಿದ ಕತೆಯಿದು. ಕೋಟಿ ಚೆನ್ನಯರನ್ನು ನಂಬುವ ಬಿಲ್ಲವರು ಅಸ್ಪೃಶ್ಯರಲ್ಲ, ಅದರೆ ನಿರೂಪಣೆಯಲ್ಲಿ ಕಾಣಬರುವ ಮೂರು ಸಮುದಾಯಗಳಲ್ಲಿ ಎಲ್ಲರಿಗಿಂತ ಮೇಲೆ ಇರುವವರು. ಮುಗೇರು ದಲಿತರಾಗಿದ್ದು ಕೆಳಗಿನ ಹಂತದಲ್ಲಿದ್ದರೆ, ಅವರಿಗಿಂತಲೂ ಕೆಳಗಿರುವ ಮನ್ನರು ಅಸ್ಪಶ್ಯರು ಮಾತ್ರವಲ್ಲ ಅದೃಶ್ಯರೂ ಹೌದು. ಆದರೆ ಕಥನಗಳಲ್ಲಿ ಗೆಲ್ಲುವವರು ಅತ್ಯಂತ ಕೆಳಗಿನವರು.

ಈ ಬಗೆಯ ಕಥನಗಳು ಜಾತಿ ಸಮಾಜದಲ್ಲಿ ನಿರ್ವಹಿಸುವ ಕಾರ್ಯಗಳೇನು ಎಂಬ ಕುರಿತು ನಮ್ಮಲ್ಲಿ ಸರಿಯಾದ ಅಧ್ಯಯನಗಳು ನಡೆದಿಲ್ಲ. ಜೊತೆಗೆ ಇವು ಒಂದರೊಡನೊಂದು ಹೆಣೆದುಕೊಂಡು, ಒಂದರ ಅಸ್ತಿತ್ವ ಇನ್ನೊಂದರೊಳಗೆ ಕಾಣಿಸಿಕೊಂಡಾಗ ಉಂಟಾಗುವ ಸಂಕೀರ್ಣ ಸನ್ನಿವೇಶದ ಬಗ್ಗೆಯೂ ನಮ್ಮ ಅಧ್ಯಯನಗಳು ಬೆಳಕು ಚೆಲ್ಲಿಲ್ಲ. ವಂಚಿಸಲು ಮೈಲಾರನಿಗೆ ತಿರುಪತಿ ತಿಮ್ಮ ಶೆಟ್ಟಿಯೇ ಬೇಕು, ಸೋತು ಹೋಗಲು ಕೋಟಿ ಚೆನ್ನಯರಿಗೆ ಕಾಣದ ಕಾಟದರೇ ಬೇಕು, ಮುದ್ದ ಕಳಲರೂ ಬೇಕು. ನಮ್ಮ ಸಂಶೋಧನೆಗಳು ಇಂಥ ನಿರೂಪಣೆಗಳನ್ನು ಅಭ್ಯಾಸ ಮಾಡಿದ್ದಾದರೆ ಅವಕ್ಕೆ ಲವಲವಿಕೆ ಪ್ರಾಪ್ತಿಸುವುದಂತೂ ನಿಜ.

**೨.೪ ಪರ್ಯಾಯ ಸಂಸ್ಕೃತಿಗಳ ಹುಡುಕಾಟ :**

ಕೊನೆಯದಾಗಿ ಇನ್ನೊಂದು ಅಂಶವನ್ನು ತಮ್ಮ ಗಮನಕ್ಕೆ ತಂದು ಈ ಭಾಗವನ್ನು ಮುಗಿಸುತ್ತಿದ್ದೇನೆ.

ಕರ್ನಾಟಕ ಸಂಸ್ಕೃತಿಯೂ ಸೇರಿದಂತೆ ಭಾರತೀಯ ಸಂಸ್ಕೃತಿಯ ಕುರಿತು ಸಂಶೋಧನಾತ್ಮಕ ಬರವಣಿಗೆಗಳು ಆರಂಭವಾದ್ದು ವಸಾಹತು ಕಾಲಘಟ್ಟದಲ್ಲಿ ಎಂಬುದು ಈಗಾಗಲೇ ಸ್ಥಾಪಿತಗೊಂಡ ಸತ್ಯ. ವಸಾಹತು ಕಾಲದ ಲೇಖಕರು ತಮ್ಮ ಬರವಣಿಗೆಗಳಿಗೆ ಲಿಖಿತ ಸಾಮಗ್ರಿಗಳನ್ನೇ ಆಧಾರವಾಗಿರಿಸಿಕೊಂಡಿದ್ದರು. ಈ ಲಿಖಿತ ಸಾಮಗ್ರಿಗಳು ಚಾರಿತ್ರಿಕ ಕಾರಣಗಳಿಂದಾಗಿ ವೈದಿಕ ಪರಂಪರೆಯನ್ನೇ ಕೇಂದ್ರವಾಗಿರಿಸಿಕೊಂಡು ಬೆಳೆದದ್ದರಿಂದ ಸಹಜವಾಗಿ ಸಂಸ್ಕೃತಿ ವಿವರಣೆಯಲ್ಲಿ ವೈದಿಕ ಚಿಂತನೆಗೆ ಪ್ರಾಶಸ್ತ್ರ ದೊರಕಿತು. ೧೯ನೇ ಶತಮಾನದ ವಿದೇಶೀ ವಿದ್ವಾಂಸರಿಗೆ ಕರ್ನಾಟಕದಲ್ಲಿ ಅನೇಕ ಸಂಶೋಧನಾ ಸಹಾಯಕರಿದ್ದರು. ಈ ಸಹಾಯಕರುಗಳು ಬಹುಮಟ್ಟಿಗೆ ಬ್ರಾಹ್ಮಣರಾಗಿದ್ದುದು ಚಾರಿತ್ರಿಕವಾಗಿ ಅನಿವಾರ್ಯವಾಗಿತ್ತು. ೧೭೮೩ ರಿಂದ ೧೮೧೦ ರ ವರೆಗಣ ಅವಧಿಯಲ್ಲಿ ಕೆಲಸ ಮಾಡಿದ ಕರ್ನಲ್ ಮೆಕೆಂಜಿಯ ಸಹಾಯಕರಾಗಿದ್ದ ಪುಲಿಗಡ್ಡ ಮಲ್ಲಯ್ಯ, ವೆಂಕಟರಾವ್, ನಾರಾಯಣರಾವ್, ವಿಠಲರಾವ್, ಬಾಬೂರಾವ್, ಆನಂದರಾವ್, ಕಾವಲಿ ವೆಂಕಟಬೋರಯ್ಯ, ವೆಂಕಟಲಕ್ಷ್ಮಯ್ಯ, ವೆಂಕಟರಾಮಸ್ವಾಮಿ- ಎಲ್ಲರೂ ಬ್ರಾಹ್ಮಣರಾಗಿದ್ದರು. ಈ ವಿದೇಶೀ ಮತ್ತು ಬ್ರಾಹ್ಮಣ ಸಂಯೋಜನೆಯು ಪಠ್ಯಗಳನ್ನು ಓದಿದ, ಪರಿಷ್ಕರಿಸಿದ, ಸಂಯೋಜಿಸಿದ ಕ್ರಮಗಳನ್ನು ನಾವೀಗ ಮರುಪರಿಶೀಲನೆಗೆ ಒಳಪಡಿಸಲು ಸಾಧ್ಯವಿದೆ.

ಈ ಮಿತಿಗಳನ್ನು ಮೀರಿ ಭಾರತೀಯ ಸಂಸ್ಕೃತಿಯ ಎಲ್ಲಾ ಮುಖಗಳನ್ನು ಗಂಭೀರವಾಗಿ ಅಧ್ಯಯನ ಮಾಡುವ ಮೂಲಕ ನಾವಿಂದು ಈ ದೇಶದ ಕುರಿತಾದ ನಮ್ಮ ತಿಳುವಳಿಕೆಗಳನ್ನು ವಿಸ್ತರಿಸಿಕೊಳ್ಳಬೇಕಾಗಿದೆ. ಇಡೀ ದೇಶದಲ್ಲಿನ ನೂರಾರು ಭಾಷೆಗಳಲ್ಲಿ ಲಭಿಸುವ ಮಹಾಕಾವ್ಯಗಳು, ಕತೆಗಳು, ಗಾದೆಗಳು, ಒಗಟುಗಳು, ನಂಬಿಕೆಗಳು, ಹಾಡುಗಳು, ಸಾಮಾಜಿಕ ಮತ್ತು ಧಾರ್ಮಿಕ ಆಚರಣೆಗಳು, ಪ್ರದರ್ಶಕ ಕಲೆಗಳು ಇತ್ಯಾದಿಗಳನ್ನು ಸರಿಯಾಗಿ ಇದುವರೆಗೆ ಲೆಕ್ಕ ಹಾಕಿದವರಿಲ್ಲ. ಅವುಗಳನ್ನು ಗಂಭೀರವಾಗಿ ಅಧ್ಯಯನ ಮಾಡಿದವರಿಲ್ಲ. ಮಲೆಯ ಮಾದೇಶ್ವರ, ಜುಂಜಪ್ಪ, ಸಿರಿ, ಕೋಟಿ- ಚೆನ್ನಯ್ಯ, ಮೈಲಾರಲಿಂಗ, ದೇವನಾರಾಯಣ ಮೊದಲಾದುವು ನಮ್ಮ ಪ್ರಸಿದ್ಧ ಜನಪದ ಕಾವ್ಯಗಳು. ಇವುಗಳನ್ನು ಒಬ್ಬ ಲೇಖಕ ಬರೆಯುವುದಿಲ್ಲ, ಬದಲು ಇಡೀ ಸಮುದಾಯವೇ ಮತ್ತೆ ಮತ್ತೆ ಇವುಗಳನ್ನು ಬರೆಯುತ್ತಿರುತ್ತದೆ. ಮೌಖಿಕವಾಗಿ ಇವು ಪ್ರಸರಣ ಹೊಂದುತ್ತಿರುತ್ತವೆ. ಹಾಗಾಗಿ ಇವುಗಳ ಒಡೆತನ ಇಡೀ ಸಮುದಾಯಕ್ಕೆ ಸೇರುತ್ತದೆ ಮತ್ತು ಇದರ ಪಠ್ಯಗಳು ಸ್ಥಿರವಾಗಿರದೆ ತುಂಬ ಚಲನಶೀಲವಾಗಿರುತ್ತವೆ. ಈ ಬಗೆಯ ಮೌಖಿಕ ನಿರೂಪಣೆಗಳು ಶಿಷ್ಟ ನಿರೂಪಣೆಗಳಿಗಿಂತ ಹೇಗೆ ತುಂಬಾ ಭಿನ್ನವಾಗಿರುತ್ತವೆ ಎಂಬುದನ್ನು ತೋರಿಸಲು ಇಂದಿನ ಸಂಶೋಧನೆಗಳು ಕೆಲಸ ಮಾಡಬೇಕು. ಉದಾಹರಣೆಗೆ ಕೆಲವೇ ಕೆಲವು ಅಪವಾದಗಳನ್ನು ಬಿಟ್ಟರೆ ಜನಪದ ನಿರೂಪಣೆಗಳಲ್ಲಿರುವ ನಾಯಕರು ತಮ್ಮ ಮಧ್ಯವಯಸ್ಸಿನಲ್ಲಿ ಮಹತ್ ಸಾಧನೆ ಮಾಡಿ ಸತ್ತುಹೋಗುತ್ತಾರೆ. ತುಳುನಾಡಿನ ಜನಪ್ರಿಯ ದೈವ 'ಕಲ್ಕುಡ'ನಿಗೆ ಸಂಬಂಧಿಸಿದ ಪುರಾಣವೊಂದರಲ್ಲಿ ಆತ

ಗೊಮ್ಮಟನನ್ನು ಪ್ರತಿಷ್ಠಾಪಿಸಿ, ಅರಸನ ಅವಕೃಪೆಗೆ ತುತ್ತಾಗಿ ಸಾಯುತ್ತಾನೆ. ಕದರಿ ದೇವಸ್ಥಾನದ ಛಾವಣಿಯ ಮೇಲಿದ್ದ ಹಣ್ಣನ್ನು ತಿನ್ನಲು ಹೋದ ಅಸ್ಪೃಶ್ಯ ಕೊರಗ ತನಿಯನು, ಅದೇ ಕಾರಣಕ್ಕೆ ಮಾಯವಾಗುತ್ತಾನೆ. ಸ್ವಾಭಿಮಾನಿಗಳಾದ ಕೋಟಿ- ಚೆನ್ನಯರು ರಣರಂಗದಲ್ಲಿ ಹೋರಾಡಿ ಸಾಯುತ್ತಾರೆ. ಗಂಡಸರ ಅನ್ಯಾಯವನ್ನು ನಿರಂತರವಾಗಿ ಪ್ರತಿಭಟಿಸಿದ ಸಿರಿಯು ಸತ್ತು ದೈವವಾಗುತ್ತಾಳೆ. ಲಿಖಿತ ಪರ್ವಗಳಲ್ಲಿ ನಾಯಕರು ಸಾಯಲಾರರು, ಸಾಯಬಾರದು. ವಸ್ತುವಿನ ನಿರ್ವಹಣೆಯ ದೃಷ್ಟಿಯಿಂದಲೂ ಮೌಖಿಕ ನಿರೂಪಣೆಗಳಲ್ಲಿನ ನಾಯಕನು ತೋರುವ ವೀರತ್ವದಲ್ಲಿ ಒಂದು ಬಗೆಯ ಕ್ರಿಯಾತ್ಮಕ ಗುಣ-ಧರ್ಮ ನೆಗೆದು ತೋರುತ್ತದೆ. ಇಲ್ಲಿಯ ವೀರರು, ವೀರರಾಗಲು ಕಾರಣ ಅವರು ದೈವದ ಅವತಾರವಾಗಿರುವುದು ಅಲ್ಲ. ಅವರಿಗೆ ಯಾವುದೇ ಪೂರ್ವಜನ್ಮದ ಪುಣ್ಯವಿಶೇಷಗಳಿಲ್ಲ. ಅವರ ತಾಯಂದಿರು ಗರ್ಭ ಧರಿಸುವಾಗ ಯಾವುದೇ ಶುಭ ಶಕುನಗಳು ಸಂಭವಿಸುವುದಿಲ್ಲ ಅಥವಾ ಅವರು ಜನಿಸುವಾಗ ದೇವತೆಗಳು ಪುಷ್ಪವೃಷ್ಟಿ ಮಾಡುವುದಿಲ್ಲ. ಅವರ ಸಾಮಾಜಿಕ ಸ್ಥಾನಮಾನಗಳು (ಉದಾ: ಬ್ರಾಹ್ಮಣನಾಗಿರುವುದು, ಅರಸುಕುಮಾರನಾಗಿರುವುದು) ಅವರ ವೀರತ್ವವನ್ನು ನಿರ್ಧರಿಸುವುದಿಲ್ಲ. ಜನಪದ ನಿರೂಪಣೆಗಳ ನಾಯಕನು ಎಲ್ಲರಂತೆ ಜನಿಸುತ್ತಾನೆ. ಆದರೆ ಬೆಳೆಯುತ್ತಾ ಬೆಳೆಯುತ್ತಾ ಒತ್ತಡಕ್ಕೆ ಒಳಗಾಗುತ್ತಾನೆ. ತನ್ನ ಪ್ರಾಮಾಣಿಕತೆ, ಬುದ್ಧಿಮತ್ತೆ ಮತ್ತು ಸಾಹಸಗಳಿಂದ ಜನಾನುರಾಗಿಯಾದ ನಾಯಕನು ಬದುಕಿನಲ್ಲಿ ಎದುರಾಗುವ ಸವಾಲುಗಳಿಗೆ ದಿಟ್ಟವಾಗಿ ಉತ್ತರಿಸುತ್ತಾನೆ ಮತ್ತು ಅದೇ ಕಾರಣಕ್ಕೆ ಸಾಯುತ್ತಾನೆ. ಜೀವನದ ಅತ್ಯಂತ ಕ್ಲಿಷ್ಟಕರ ಸಂದರ್ಭಗಳಲ್ಲಿ ಈ ಬಗೆಯ ನಾಯಕರು ತೋರುವ ಕ್ರಿಯಾತ್ಮಕತೆಯೇ ಅವರನ್ನು ಜನರ ಕಣ್ಣಲ್ಲಿ ನಾಯಕರನ್ನಾಗಿ ಬೆಳೆಸುತ್ತದೆ. ಸಾಮಾನ್ಯ ಕಲ್ಲುಕುಟಿಗನಾಗಿ ಹುಟ್ಟಿದ ವೀರು ಕಲ್ಕುಡನು ಗೊಮ್ಮಟನ ಪ್ರತಿಮೆ ಸ್ಥಾಪಿಸುವುದು, ಗೌಡರ ಗರ್ಭಿಣಿ ಸೊಸೆ ಊರಿನ ಒಳಿತಿಗಾಗಿ ತಾನೇ ಕೆರೆಗೆ ಬಲಿಯಾಗುವುದು ಇತ್ಯಾದಿಗಳು ಇವಕ್ಕೆ ಒಳ್ಳೆಯ ಉದಾಹರಣೆಗಳು. ಆದರೆ ಶಿಷ್ಟ ಪರಂಪರೆಯಲ್ಲಿ ನಾಯಕರು ಹುಟ್ಟುವಾಗಲೇ ಅಸಾಮಾನ್ಯ ಪರಾಕ್ರಮಿಗಳು. ಜೊತೆಗೆ ಶಿಷ್ಟ ಪರಂಪರೆಯು ಈಗಾಗಲೇ ಅಸ್ತಿತ್ವದಲ್ಲಿರುವ ಸಾಮಾಜಿಕ ವ್ಯವಸ್ಥೆಯನ್ನು ಕಾನೂನುಬದ್ಧಗೊಳಿಸುತ್ತದೆ. ಜಾತಿ-ವರ್ಣ ವ್ಯತ್ಯಾಸಗಳನ್ನು ಅವು ಬಹುಮಟ್ಟಿಗೆ ಸಮರ್ಥಿಸುತ್ತವೆ. ಹಾಗಾಗಿ ರಾಮನು ಶೂದ್ರ ಯೋನಿಯಲ್ಲಿ ಜನಿಸಿದ ಶಂಬೂಕನನ್ನು ಕೊಲ್ಲುವಂಥ ಕಥೆ ರಾಮಾಯಣದೊಳಕ್ಕೆ ಸುಲಭವಾಗಿ ಸೇರಿಕೊಳ್ಳುತ್ತದೆ. ಆದರೆ ಜನಪದ ನಿರೂಪಣೆಗಳು ಜಾತಿ ಸಮಾಜದ ಒಳಗಿನ ಕೆಲವು ಸಂಘರ್ಷಗಳನ್ನು ಬಹಿರಂಗಕ್ಕೆ ತರುತ್ತವೆ. ಅದರ ಹುಳುಕುಗಳನ್ನು ಬಯಲಿಗೆಳೆಯುತ್ತವೆ. ಇದಕ್ಕೆ ಜನಪದ ನಿರೂಪಣೆಗಳಲ್ಲಿ ಅನುಸರಿಸಲಾಗುವ ವಿಧಾನವೂ ತುಂಬಾ ಕುತೂಹಲಕರವಾಗಿರುತ್ತದೆ. ಈ ಜನಪದ ನಾಯಕರು ಜಾತಿ ಸಮಾಜದ ವೈರುಧ್ಯಗಳಿಗೆ ಬಲಿಯಾಗುತ್ತಾರೆ, ಹಾಗೆ ಬಲಿಯಾದಾಗಲೂ ಜನಪದರ ನಿರೂಪಣಾ ಪ್ರಜ್ಞೆ ನಾಯಕನ ಪರವಾಗಿ ನಿಲ್ಲುವುದರಿಂದಾಗಿ

ಆತನನ್ನು ಬಲಿ ತೆಗೆದುಕೊಂಡ ಸಾಮಾಜಿಕ ವ್ಯವಸ್ಥೆಯ ಬಗೆಗೆ ಅಸಹನೆ ಹುಟ್ಟಿಸುತ್ತದೆ. ಈ ಅಸಹನೆ ತೀವ್ರಗೊಳ್ಳುವುದು ನಾಯಕನ ಅಕಾಲ ಮೃತ್ಯುವಿನಲ್ಲಿ, ದಲಿತ ಹುಡುಗನ್ನು ಸಂರಕ್ಷಿಸುವ ಬ್ರಾಹ್ಮಣ ಕನ್ಯೆಯರು, ಕ್ಷತ್ರಿಯರ ಅಹಂಕಾರವನ್ನು ಪ್ರಶ್ನಿಸುವ ಶೂದ್ರ ನಾಯಕರು, ವೈದಿಕ ದೇವರ ಆಜ್ಞೆಗಳನ್ನು ಧಿಕ್ಕರಿಸುವ ಸಾಮಾನ್ಯರು ಜಾನಪದದಲ್ಲಿ ಹೇರಳವಾಗಿ ಕಂಡುಬರುತ್ತಾರೆ.ಜನಪದ ನಿರೂಪಣೆಗಳು ಅವುಗಳ ನಾಯಕನ ಸಾವಿನ ಅನಂತರವೂ ಸಾಕಷ್ಟು ದೀರ್ಘವಾಗಿ ಬೆಳೆಯುತ್ತವೆ. ಅಕಾಲ ಮರಣವನ್ನಪ್ಪುವ 'ನಾಯಕರು, ಸತ್ತ ಆನಂತರ ಅತಿಮಾನುಷ ವಲಯದಲ್ಲಿ ಉಗ್ರರೂಪಿಯಾಗಿ ಪರಿವರ್ತನೆ ಹೊಂದುತ್ತಾರೆ ಮತ್ತು ತನ್ನ ಸಾವಿಗೆ ಕಾರಣವಾದ ಶಕ್ತಿಗಳ ವಿರುದ್ಧ ಹೋರಾಟ ನಡೆಸುತ್ತಾರೆ. ಪ್ರತಿವರ್ಷ ನಿಗದಿತ ದಿನದಂದು ನಡೆಯುವ ಆಚರಣೆಗಳಲ್ಲಿ ಈ ನಾಯಕರು ಪೂಜಾರಿಯೊಬ್ಬನ ಮೂಲಕ ಪ್ರತ್ಯಕ್ಷವಾಗಿ ಜನಗಳ ಕಷ್ಟಗಳಿಗೆ ಕಿವಿಗೊಡುತ್ತಾರೆ.

ಭಾರತದ ಶ್ರೇಣೀಕೃತ ಸಮಾಜದ ಕೆಳ ಹಂತದಲ್ಲಿರುವ ಜನವರ್ಗಗಳ ಪರಂಪರೆ, ಆಧುನಿಕತೆ ಮತ್ತು ಭವಿಷ್ಯಗಳೆಲ್ಲ ಬಹುತೇಕವಾಗಿ ಉಳಿದಿರುವುದು ಇಂಥ ಮೌಖಿಕ ರೂಪಗಳಲ್ಲಿ. ಸಾವಿರಾರು ಸಾಲುಗಳಿರುವ, ಅತ್ಯಂತ ಮಹತ್ವದ ತುಳು ಜನಪದ ಕಾವ್ಯ 'ಸಿರಿ'ಯು ಬಾಯಿಂದ ಬಾಯಿಗೆ ಹರಿದುಬಂದು ಇಂದಿಗೂ ಉಳಿದಿದೆ. ದಲಿತರ ಯಾವುದೇ ಆಚರಣೆಗಳನ್ನು ದಾಖಲಿಸುವ ಯಾವುದೇ ಲಿಖಿತ ಪಠ್ಯಗಳಿಲ್ಲ. ಆದರೆ ದಲಿತರು ಪರಂಪರೆಯಿಂದ ದತ್ತವಾದ ಜ್ಞಾನವನ್ನು ಆಧರಿಸಿ ತಮ್ಮ ಆಚರಣೆಗಳನ್ನು ನಡೆಸಿಕೊಂಡು ಬದುಕಿದ್ದಾರೆ. ಕರಾವಳಿಯಲ್ಲಿ ಜನಪ್ರಿಯವಾಗಿರುವ ಸಾವಿರಾರು ಭೂತಗಳ ಆರಾಧನೆಯು ಮೌಖಿಕ ನಿರೂಪಣೆಗಳ ಮೂಲಕವೇ ನಡೆಯುತ್ತದೆ. ಆದರೆ ನಮ್ಮ ದೌರ್ಭಾಗ್ಯ ಎಂದರೆ ಮೌಖಿಕ ನಿರೂಪಣೆಗಳನ್ನು ಇನ್ನು ಕೂಡಾ ನಾವು ಭಾರತೀಯ ಸಂಸ್ಕೃತಿಯ ಮುಖ್ಯಭಾಗವೆಂದು ಪರಿಗಣಿಸದಿರುವುದು. ಕಾರಣ ಸುಮಾರು ಶೇಕಡಾ ೯೦ ರಷ್ಟು ಜನರ ಸಂಸ್ಕೃತಿಯು ಇಂದಿಗೂ ಉಪೇಕ್ಷೆಗೆ ಗುರಿಯಾಗುತ್ತಿದೆ. ಭಾರತೀಯ ಜಾನಪದವನ್ನು ಲಿಖಿತ ನಿರೂಪಣೆಗಳ ಜೊತೆಗೆ ಸಮಸ್ಥಾನದಲ್ಲಿ ನಿಲ್ಲಿಸಲಾಗಿಲ್ಲ. ಆಳುವ ವರ್ಗ ತನ್ನ ಆಳ್ವಿಕೆ ಮತ್ತು ರಾಜಕೀಯ ಧೋರಣೆಗಳಿಗೆ ಅನುಗುಣವಾದ ಲಿಖಿತ ನಿರೂಪಣೆಗಳನ್ನು ತನ್ನದೆಂದು ಹೇಳುತ್ತಾ, ಅವುಗಳನ್ನು ಮಾಧ್ಯಮಗಳಲ್ಲಿ ನಿರಂತರವಾಗಿ ಪ್ರಚುರ ಪಡಿಸುತ್ತಾ, ಕಾನೂನುಬದ್ಧಗೊಳಿಸುತ್ತದೆ. ಆಳುವ ವರ್ಗದ ಬೆಂಬಲ ಪಡೆದ ನಿರೂಪಣೆಗಳೇ ರಾಷ್ಟ್ರೀಯ ಮನ್ನಣೆ ಪಡೆಯುತ್ತವೆ. ಈ ಕಾಲದಲ್ಲಿ ಅಂಥವುಗಳಿಗೆ ಅಂತರ ರಾಷ್ಟ್ರೀಯ ಮಾರುಕಟ್ಟೆಯೂ ಲಭಿಸುತ್ತದೆ. ಇಂಥ ಸಂದರ್ಭದಲ್ಲಿ ಮೌಖಿಕ ನಿರೂಪಣೆಗಳ ಮೂಲಕ ಚಾಲ್ತಿಯಲ್ಲಿರುವ ಜಾನಪದವು ಮೂಲೆಗೆ ತಳ್ಳಲ್ಪಡುತ್ತದೆ. ಅಕ್ಷರ ರಾಜಕೀಯವೂ ಮೌಖಿಕ ಸಾಮಗ್ರಿಗಳನ್ನು ಅಷ್ಟಾಗಿ ಮನ್ನಿಸುವುದಿಲ್ಲ. ಜೊತೆಗೆ ಆಳುವ ವರ್ಗಕ್ಕೆ ವರ್ತಮಾನ, ಚರಿತ್ರೆ ಮತ್ತು ಪುರಾಣಗಳ ಬಗ್ಗೆ ತನ್ನದೇ ಆದ ಖಚಿತ ನಿಲುವುಗಳಿರುತ್ತದೆ. ಆ ನಿಲುವುಗಳನ್ನು ಒಮ್ಮೊಮ್ಮೆ ನೇರವಾಗಿ, ಮತ್ತೆ ಕೆಲವು ಬಾರಿ

ಪರೋಕ್ಷವಾಗಿ ಇತರರ ಮೇಲೆ ಹೇರುತ್ತದೆ. ಇಂಥ ಹೇರಿಕೆಯ ವಿರುದ್ಧ ಮೌಖಿಕ ನಿರೂಪಣೆಗಳು ಒಂದು ಬಗೆಯ ಜಾಗೃತ ಸ್ಥಿತಿಯನ್ನು ಸದಾ ಕಾದಿಟ್ಟುಕೊಂಡಿರುತ್ತವೆ. ಆಳುವ ವರ್ಗ ಯಾವುದನ್ನು ಅಕ್ಷರ ಮಾಧ್ಯಮದ ಮೂಲಕ ಮಾನ್ಯ ಮಾಡಲೆತ್ನಿಸುವುದೋ ಅದನ್ನು ಮೌಖಿಕ ಮಾಧ್ಯಮದ ಮೂಲಕ ಜನರು ವಿಮರ್ಶೆಗೆ ಒಳಪಡಿಸುತ್ತಾರೆ. ಎಷ್ಟೋ ಬಾರಿ ಈ ಎರಡೂ ಪ್ರವೃತ್ತಿಗಳು ಪರಸ್ಪರ ವಿರೋಧಿ ನೆಲೆಗಳಲ್ಲಿರುತ್ತವೆ. ಒಂದು ಅಕ್ಷರ ರೂಪದಲ್ಲಿರುವುದನ್ನು 'ಶಾಶ್ವತ' ಎಂದೂ, ಇನ್ನೊಂದು ಅನಕ್ಷರ ರೂಪದಲ್ಲಿರುವುದನ್ನು 'ಅಶಾಶ್ವತ' ಎಂದೂ ನಂಬುತ್ತದೆ. ಮೇಲ್ನೋಟಕ್ಕೆ ಸ್ಪಷ್ಟವಾಗುವಂತೆ, ಇದು ಅಕ್ಷರದ ಪರವಾಗಿರುವಂಥವರ ತರ್ಕ, ಆದರೆ ಸೂಕ್ಷ್ಮವಾಗಿ ನೋಡಿದರೆ, ಮೌಖಿಕ ರೂಪದಲ್ಲಿರುವಂಥದ್ದು ಅಶಾಶ್ವತ ಏನೂ ಅಲ್ಲ. ಅದು ಕಂಠಸ್ಥ ಪರಂಪರೆಯಲ್ಲಿ ನವೀನಗೊಳ್ಳುತ್ತಾ ಉಳಿಯುತ್ತಿರುತ್ತದೆ. ಅಕ್ಷರದ ಬಂಧನ ಇಲ್ಲದ್ದರಿಂದ ಅದು ಹೆಚ್ಚು ಲವಲವಿಕೆಯಿಂದ ಬೆಳೆಯುತ್ತದೆ. ಬದಲಾಗುತ್ತಿರುವ ಸಮಾಜದೊಂದಿಗೆ ತನ್ನನ್ನು ಗುರುತಿಸಿಕೊಳ್ಳುತ್ತಾ, ಸಮಕಾಲೀನವಾಗುತ್ತಾ ಕ್ರಿಯಾಶೀಲವಾಗುತ್ತಿರುತ್ತದೆ. ಇಷ್ಟಿದ್ದರೂ ನಮ್ಮ ಮಾನವಿಕಗಳಲ್ಲಿ, ವಿಚಾರಸಂಕಿರಣಗಳಲ್ಲಿ, ಬೌದ್ಧಿಕ ಚರ್ಚೆಗಳಲ್ಲಿ ಮೌಖಿಕ ನಿರೂಪಣೆಗಳಿಗೆ ಅಂಥ ಮನ್ನಣೆ ದೊರಕಿಲ್ಲ. ಕಾರಣ ಮೌಖಿಕ ನಿರೂಪಣೆಗಳು ಸಾಮಾನ್ಯ ಜನರ ಜ್ಞಾನವಾಗಿದ್ದು ಅದಕ್ಕೆ ಅಂಥ ಮನ್ನಣೆ ನೀಡಬೇಕಾಗಿಲ್ಲ ಎಂಬ ಪಾರಂಪರಿಕ ನಿಲುವು. ಇದು ಬಹಳ ಅಪಾಯಕಾರಿಯಾದ ಧೋರಣೆ. ಹೀಗಾಗಿ ನಾವು ನಮ್ಮ ಪೂರ್ವಾಗ್ರಹಗಳನ್ನು ಬಿಟ್ಟು ಮೌಖಿಕ ಪರಂಪರೆಯ ನಿರೂಪಣೆಗಳಿಗೆ ಇನ್ನಾದರೂ ಗಂಭೀರವಾಗಿ ಕಿವಿಕೊಡಬೇಕಾಗಿದೆ. ನಮ್ಮ ಸಂಶೋಧನೆಗಳು ಈ ನಿಟ್ಟಿನಲ್ಲಿ ಮುಂದುವರಿಯಬೇಕಾಗಿದೆ.

ಕೆಲವು ವಿದ್ವಾಂಸರು ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದರೂ ಅವರಿಗೆ ತಮ್ಮ ಕೈಯಲ್ಲಿರುವ ಮಾಹಿತಿಗಳ ಮಹತ್ವವನ್ನು ಒಂದು ನಿರ್ದಿಷ್ಟವಾದ ಚೌಕಟ್ಟಿನಲ್ಲಿರಿಸಿ ವ್ಯಾಖ್ಯಾನ ಮಾಡಲಾಗುತ್ತಿಲ್ಲ. ಇದಕ್ಕೆ ಎರಡು ಕಾರಣಗಳಿವೆ- ೧. ವಿಸ್ತಾರವಾದ ಓದಿನ ಕೊರತೆ ಮತ್ತು ೨. ಸೈದ್ಧಾಂತಿಕ ತಿಳುವಳಿಕೆಯ ಕೊರತೆ. ಇಂಥವರು ಕಷ್ಟ ಪಟ್ಟು ಮಾಹಿತಿಗಳನ್ನು ಕಲೆಹಾಕುತ್ತಾರೆ, ಆದರೆ ಆ ಮಾಹಿತಿಗಳ ವಿಶ್ಲೇಷಣೆಯಲ್ಲಿ ಸೋಲುತ್ತಾರೆ. ಕರ್ನಾಟಕದಲ್ಲಿ ದೊಡ್ಡ ಮಟ್ಟದಲ್ಲಿ ನಡೆಯುತ್ತಿರುವ ಸಮುದಾಯಗಳ ಅಧ್ಯಯನಗಳನ್ನು ಗಮನಿಸಿದರೂ ಸಾಕು, ಸಂಶೋಧಕರು ತುಂಬಾ ಶ್ರಮವಹಿಸಿ ಕ್ಷೇತ್ರಕಾರ್ಯ ಮಾಡುವುದರ ಮೂಲಕ ಸಾಕಷ್ಟು ವಿಷಯಗಳನ್ನು ಕಲೆಹಾಕುತ್ತಾರೆ. ಹುಟ್ಟಿನಿಂದ ಸಾಯುವ ತನಕದ ವಿವಿಧ ಆಚರಣೆಗಳನ್ನೂ, ಇಡೀ ವರ್ಷದ ಹಬ್ಬ -ಜಾತ್ರೆಗಳ ಬಗ್ಗೆಯೂ ವಿವರ ಸಂಗ್ರಹಿಸುತ್ತಾರೆ. ಆದರೆ ಈ ವಿವರಗಳು ಒಂದು ನಿರ್ದಿಷ್ಟ ಸಮುದಾಯವನ್ನು ಹೇಗೆ ಆಗುಮಾಡಿದೆ? ಮತ್ತು ಅದು ಇತರ ಸಮುದಾಯಗಳಿಗಿಂತ ಹೇಗೆ ಭಿನ್ನವಾಗಿದೆ? ಎಂದು ಹೇಳುವಲ್ಲಿ ಅವರು ದಯನೀಯವಾಗಿ ಸೋಲುತ್ತಾರೆ. ವಿವರಗಳಷ್ಟೇ ಅತ್ಯುತ್ತಮ ಸಂಶೋಧನೆ ಯಾಗುವುದಿಲ್ಲ ಎಂಬ ಸತ್ಯವನ್ನು ನಮ್ಮ ಸಂಶೋಧಕರು ಮನಗಾಣಬೇಕು.

ಉದಾಹರಣೆಗೆ ಸಮುದಾಯ ಅಧ್ಯಯನಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ಅಂತ್ಯಸಂಸ್ಕಾರದ ಕುರಿತಾದ ವಿವರಗಳನ್ನು ನೆನಪಿಸಿಕೊಳ್ಳೋಣ. ನಮಗೆಲ್ಲ ತಿಳಿದಿರುವ ಹಾಗೆ, ಹಿಂದೂ ಧರ್ಮದ ಅಂತ್ಯಸಂಸ್ಕಾರ ವಿಧಿಗಳ ಬಗೆಗೆ ಗೃಹ್ಯ ಸೂತ್ರವು ಮಾಹಿತಿಯನ್ನು ನೀಡುತ್ತದೆ. ಈ ಪಠ್ಯವನ್ನು ಆಧರಿಸಿ ಅನೇಕ ಸಂಶೋಧನಾ ಗ್ರಂಥಗಳೂ, ಲೇಖನಗಳೂ ಪ್ರಕಟವಾಗಿವೆ. ಭಾರತೀಯರು ಹೇಗೆ ಸತ್ತವರನ್ನು ಮರುಹುಟ್ಟಿಗೆ ಒಳಪಡಿಸುತ್ತಾರೆ ಎಂಬುದನ್ನು ಆ ಲೇಖನಗಳಲ್ಲಿ ಸಾಬೀತು ಪಡಿಸಲಾಗಿದೆ. ಭಾರತದಲ್ಲಿ ನಡೆದ ಇಂತಹ ಅಧ್ಯಯನಗಳು ಬ್ರಾಹ್ಮಣರ ಅಂತ್ಯ ಸಂಸ್ಕಾರದ ವಿಶ್ಲೇಷಣೆಗೇ ಸೀಮಿತವಾಗಿರುವುದು ಕುತೂಹಲಕರ. ಭಾರತದಲ್ಲಿ ಅಂತ್ಯಸಂಸ್ಕಾರ ವಿಧಿಗಳ ಕುರಿತು ಬರೆದ ಪಾಶ್ಚಾತ್ಯ ವಿದ್ವಾಂಸರೂ ಬ್ರಾಹ್ಮಣರ ಅಂತ್ಯಕ್ರಿಯೆಗಳನ್ನೇ ಆಕರವಾಗಿ ಪರಿಗ್ರಹಿಸಿದ್ದಾರೆ. ಇದಕ್ಕೆ ಕಾರಣ ಸ್ಪಷ್ಟವೇ ಇದೆ. ಅಂಥ ವಿಶ್ಲೇಷಣೆಗೆ ಬೇಕಾದ ಆಕರಗಳನ್ನು ವಿದ್ಯಾವಂತ ಬ್ರಾಹ್ಮಣರು ವಿದೇಶಿಯರಿಗೆ ಒದಗಿಸಿಕೊಡಬಲ್ಲವರಾಗಿರುವುದು ಮತ್ತು ಅಂತ್ಯಸಂಸ್ಕಾರದ ವಿವರಗಳು ಗೃಹ್ಯ ಸೂತ್ರಗಳಲ್ಲಿ ಸುಲಭವಾಗಿ ದೊರೆಯುತ್ತಿರುವುದು. ಅಂದರೆ ಇಲ್ಲಿ ಸಂಶೋಧಕನಿಗೆ ಅಂತ್ಯಸಂಸ್ಕಾರದ ಬಗೆಗಿನ ಒಂದು 'ಪಠ್ಯ'ಸುಲಭವಾಗಿ ಲಭಿಸುತ್ತದೆ. ಇಂಥ ಲಿಖಿತಪಠ್ಯವನ್ನು ಆಧಾರವಾಗಿರಿಸಿಕೊಂಡು ಅಧ್ಯಯನ, ವ್ಯಾಖ್ಯಾನಗಳು ಸ್ವಲ್ಪಮಟ್ಟಿಗೆ ನಡೆದಿವೆ ನಿಜ. ಇಂತಹ ಲಿಖಿತ ಪಠ್ಯಗಳು ಬ್ರಾಹ್ಮಣೇತರರ ಬಗೆಗೆ ದೊರೆಯುವು ದಿಲ್ಲವಾದ ಕಾರಣ, ಬ್ರಾಹ್ಮಣೇತರರ ಅಂತ್ಯಸಂಸ್ಕಾರದ ಕುರಿತಾಗಿ ನಮಗಿಂದು ಲಿಖಿತವಾಗಿ ಯಾವ ಮಾಹಿತಿಯೂ ಲಭ್ಯಸುತ್ತಿಲ್ಲ. ಗೃಹ್ಯಸೂತ್ರದ ಲಿಖಿತ ಪಠ್ಯವನ್ನು ವಾಸ್ತವದ ಆಚರಣೆಗಳೊಂದಿಗೆ ಹೋಲಿಸಿ ನೋಡುವ ಪ್ರಯತ್ನವೂ ನಡೆದಿಲ್ಲ. ಈ ಹಿನ್ನೆಲೆಯಲ್ಲಿ ಸಾವಿಗೆ ಸಂಬಂಧಿಸಿದಂತೆ ವಿವಿಧ ಸಮುದಾಯಗಳ ಜನರು ನಡೆಸುವ ಆಚರಣೆಗಳ ಕುರಿತಾಗಿ ನಾವು ಇನ್ನಷ್ಟೇ ತಿಳುವಳಿಕೆಯನ್ನು ಬೆಳೆಸಿ ಕೊಳ್ಳಬೇಕಾಗಿದೆ. ಈ ಅರಿವಿನಲ್ಲಿ ನಮ್ಮ ಸಂಶೋಧಕರು ಇದೀಗ ಬ್ರಾಹ್ಮಣೇತರರಲ್ಲಿ ಪ್ರಚಲಿತದಲ್ಲಿರುವ ಅಂತ್ಯಸಂಸ್ಕಾರದ ಬಗೆಗೆ ಬೆಳಕು ಚೆಲ್ಲಲು ಪ್ರಯತ್ನಿಸಬೇಕು. ಹೀಗೆ ಮಾಡುವುದರಿಂದ ಅಂತ್ಯಸಂಸ್ಕಾರದ ಬಗೆಗಿನ ಅಧ್ಯಯನಕ್ಕೆ ಬೇರೊಂದು ತಿರುವು ಕೊಡಲು ಸಾಧ್ಯ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಇಲ್ಲಿ ಅಧ್ಯಯನಕ್ಕೆ ಸಾಂಪ್ರದಾಯಕವಲ್ಲದ ಆಕರಗಳನ್ನು ಬಳಸಿಕೊಳ್ಳಲಾಗುತ್ತದೆ ಮತ್ತು ಬ್ರಾಹ್ಮಣೇತರ ಜನಸಮುದಾಯವೊಂದರ ಸಮಾಜ ಕಲ್ಪನೆಯನ್ನು ಪರಿಶೀಲನೆಗೆ ಒಳಪಡಿಸ ಲಾಗುತ್ತದೆ. ಬ್ರಾಹ್ಮಣೇತರರ ಅದರಲ್ಲೂ ದಲಿತರ ಕುರಿತಾದ ಅಧ್ಯಯನಗಳು ಈ ನಿಟ್ಟಿನಲ್ಲಿ ಸಾಗಬೇಕಾಗಿದೆ.

**ಭಾಗ : ಮೂರು**

ನಾವು ಇಂದು ಬೌದ್ಧಿಕವಾಗಿ ಇದಿರಿಸಬೇಕಾದ ಸವಾಲುಗಳಲ್ಲಿ ಕೆಲವನ್ನು ಮೇಲೆ ಹೇಳಿದೆ. ಆದರೆ ಇಂದು ಪರಿಸ್ಥಿತಿ ತೀವ್ರವಾಗಿ ಬದಲಾಗುತ್ತಿದೆ. ಕಲಬುರ್ಗಿಯವರು ತಮ್ಮ ಸಂಶೋಧನೆಯ ಸತ್ಯಗಳಿಂದಾಗಿಯೇ ಅಮಾನುಷವಾಗಿ ಕೊಲೆಯಾದರು. ಸಂಶೋಧಕ ಆಗಾಗ ಶಿಲುಬೆಗೇರಬೇಕಾಗುತ್ತದೆ ಎಂಬ ಅವರ ಮಾತು ಅವರಲ್ಲಿಯೇ

ನಿಜವಾಯಿತು. ಅಂದರೆ ಸಂಶೋಧಕರು ಇಂದು ತಮ್ಮ ಓದಿನಲ್ಲಿ ಕಂಡುಕೊಂಡ ಅಥವಾ ಕ್ಷೇತ್ರಕಾರ್ಯದಲ್ಲಿ ತಾವು ಸಂಗ್ರಹಿಸಿದ ಮಾಹಿತಿಗಳ ಆಧಾರದ ಮೇಲೆ ತಮ್ಮ ಸಂಶೋಧನೆಯನ್ನು ಮುಂದುವರಿಸುವುದು ಕಷ್ಟವಾಗುತ್ತಿದೆ. ಬದಲು ಸಮಕಾಲೀನ ಸಮಾಜ ಏನನ್ನು ನಿರೀಕ್ಷಿಸುತ್ತದೆಯೋ ಅದನ್ನೇ ಹೇಳ ಬೇಕಾಗಿರುವ ಒತ್ತಡದಲ್ಲಿ ನಾವು ಸಿಲುಕಿದ್ದೇವೆ. ಟಿಪ್ಪೂ ಸುಲ್ತಾನನ ಲಾವಣಿಯೊಂದರಲ್ಲಿ ಬರುವ -

**"ಟೀಪು ರಾಜ್ಯದೊಳು ಶರಾಬು, ಶೇಂದಿ, ಗಾಂಜಾ ಅಫೀಮು ಇರಲಿಲ್ಲ,**

**ಟೀಪುವಿನ ಕಾಲದೊಳು ಜೂಜಿನಾಟ ಮೇಣ್ ವ್ಯಭಿಚಾರದ ಸುಳಿವಿಲ್ಲ'**

ಎಂಬ ಸಾಲುಗಳನ್ನು ಕೇಳಿಸಿಕೊಳ್ಳಲು ಇವತ್ತು ಯಾರೂ ಸಿದ್ಧರಿಲ್ಲ. ಪಂಡರಾಪುರ ವಿಠ್ಠಲನು ವಲಸೆಗಾರ ಪಶುಪಾಲಕರ ದೈವವಾಗಿರುವ ಸಾಧ್ಯತೆ ಇದೆ ಎಂಬ ಮಾತನ್ನು ಅನೇಕ ಆಕರಗಳನ್ನು ಆಧರಿಸಿ ಬರೆದದ್ದಕ್ಕೆ ನಾನು ಸಾಕಷ್ಟು ತೊಂದರೆ ಅನುಭವಿಸಬೇಕಾಯಿತು. ಕರ್ನಾಟಕವೂ ಸೇರಿದಂತೆ, ಈ ದೇಶದ ಸುದೀರ್ಘ ಇತಿಹಾಸದಲ್ಲಿ ಇಲ್ಲಿಗೆ ವಲಸೆ ಬಂದು ನೆಲೆಸಿದ ಜನಾಂಗಗಳ ಮತ್ತು ಸಮುದಾಯಗಳ ಲೆಕ್ಕ ಇಟ್ಟವರಿಲ್ಲ. ಒಂದು ಬಗೆಯ ನಿರಂತರತೆಯನ್ನು ಸದಾ ಕಾಪಾಡುತ್ತಲೇ, ಜೊತೆ ಜೊತೆಗೆ ಬದಲಾಗುತ್ತಾ ಹೋಗಿರುವ ಈ ನೆಲವು, ಬಗೆ ಬಗೆಯ ಸಂಸ್ಕೃತಿಗಳನ್ನು ಉದಾರವಾಗಿ ಸ್ವೀಕರಿಸಿ ಬೆಳೆಯಲು ಅನುವು ಮಾಡಿಕೊಟ್ಟಿದೆ. ಈ ಹಂತದಲ್ಲಿ ನಡೆದ ಹೊಸ ಆವಿಷ್ಕಾರಗಳು, ಸೇರ್ಪಡೆಗಳು, ನಿರಾಕರಣೆಗಳು, ಸಂಘರ್ಷಗಳು ಮತ್ತು ಸಮನ್ವಯಗಳು ನಮ್ಮ ದೇಶವನ್ನು ಇತರ ದೇಶಗಳಿಂದ ಬೇರೆಯಾಗಿಸಿದೆ. ಜಗತ್ತಿನ ಮೂಲೆ ಮೂಲೆಗಳಿಂದ ಇಲ್ಲಿಗೆ ಬೌದ್ಧಿಕತೆ ಹರಿದುಬಂದಿದೆ. ಭೌತಿಕ ಸಾಮಗ್ರಿಗಳು ಸಾಗಿಬಂದಿವೆ. ಅವು ಕಾಲಾಂತರದಲ್ಲಿ ಇಲ್ಲಿಯವರಿಗೆ ಗೊತ್ತಾಗದ ಹಾಗೆ ಇಲ್ಲಿಯವೇ ಆಗಿವೆ. ಇಂದು ಕರ್ನಾಟಕ ಸಂಗೀತದ ಮೂಲದ್ರವ್ಯವಾಗಿರುವ ವಯೋಲಿನ್, ಮಧ್ಯ ಏಷಿಯಾದಿಂದ ಇಲ್ಲಿಗೆ ಆಗಮಿಸಿದೆ. ಜನಪದ ಸಂಗೀತದ ಅದರಲ್ಲೂ ಭಾರತದ ದಲಿತರ ಸುಖ ದುಃಖಗಳ ಭಾಗವಾಗಿರುವ ದಪ್ಪು ಕೂಡಾ ಮೂಲತಹ ನಮ್ಮದಲ್ಲ. ಇಂಥ ಘಟನೆಗಳು ನಮಗೆ ಸಹನೆಯನ್ನು ಹೇಳಿಕೊಟ್ಟಿವೆ. ಈ ನೆಲದಲ್ಲಿ ನಡೆದ ಬಹುದೊಡ್ಡ ಸಂವಾದಗಳು ಇಂದು ನಮ್ಮ ಪ್ರಜಾಪ್ರಭುತ್ವದ ತಳಹದಿಯಾಗಿ ಕೆಲಸ ನಿರ್ವಹಿಸುತ್ತಿವೆ. ಆದರೆ ಈಗ ಏನನ್ನು ಹೇಳಿದರೆ ನಾನು ಅಪಾಯದಿಂದ ಪಾರಾಗಬಹುದು ಎಂದು ಎರಡೆರಡು ಬಾರಿ ಯೋಚಿಸಿ ಬರೆಯಬೇಕಾದ ಮತ್ತು ಮಾತಾಡಬೇಕಾದ ವಾತಾವರಣ ನಿರ್ಮಾಣವಾಗುತ್ತಿರುವಾಗ ನಮ್ಮ ಸಂಶೋಧನೆಗಳು ಪೇಲವ ವಾಗುವುದರಲ್ಲಿ ಅನುಮಾನವಿಲ್ಲ.

ಈ ಸಮಸ್ಯೆ ಇನ್ನೂ ಜಟಿಲವಾಗಿರುವುದು ಸಂಶೋಧನೆಗೆ ಜಾತಿ ಮತ್ತು ಸಮುದಾಯಗಳು ಗಟ್ಟಿಯಾಗಿ ಅಂಟಿಕೊಂಡಿರುವುದರಿಂದ, ಪಂಪ, ಬಸವಣ್ಣ, ಕನಕದಾಸ, ಕುವೆಂಪು, ಸಂಗೊಳ್ಳಿ ರಾಯಣ್ಣ, ಕೆಂಪೇಗೌಡ ಮೊದಲಾದ ಇತಿಹಾಸ ಪ್ರಸಿದ್ಧರು

ಎಲ್ಲ ಕನ್ನಡಿಗರ ಸೊತ್ತಾಗಿ ಬೆಳೆಯಬೇಕಾಗಿತ್ತು. ಆದರೆ ಅವರೆಲ್ಲ ಇಂದು ಒಂದೊಂದು ಸಮುದಾಯಗಳಿಗೆ ಸೀಮಿತವಾಗಿ ಕಾಣಿಸಿಕೊಳ್ಳುತ್ತಿದ್ದಾರೆ ಮತ್ತು ನಿರೀಕ್ಷೆಗೂ ಮೀರಿ ಎಲ್ಲ ಬಗೆಯ ವಿಮರ್ಶೆಗಳ ಗಡಿದಾಟಿ ಬೆಳೆದು ನಿಲ್ಲುತ್ತಿದ್ದಾರೆ. ಕರ್ನಾಟಕದ ಅನೇಕ ಚಾರಿತ್ರಿಕ ಘಟನೆಗಳನ್ನು, ಇತಿಹಾಸ ನಿರ್ಮಾಪಕರನ್ನು ಮತ್ತು ಸಾಹಿತಿಗಳನ್ನು ಜಾತಿಯ ಕಬಂಧ ಬಾಹುಗಳಿಂದ ಬಿಡಿಸದೇ ಹೋದರೆ ನಮಗೆ ಯಾವ ಬಗೆಯ ಸಂಶೋಧನೆಯೂ ಸಾಧ್ಯವಿಲ್ಲ. ಈ ಮಾತು ಅನೇಕ ಜನಪದ ಕಲೆಗಳಿಗೂ ಅನ್ವಯವಾಗುತ್ತದೆ. ಯಕ್ಷಗಾನದಂಥ ಜನಪ್ರಿಯ ಕಲೆಯಲ್ಲಿ ವಿದೂಷಕನಿಗಿದ್ದ ಮುಕ್ತ ಅವಕಾಶ ಈಗ ಸಂಕುಚಿತವಾಗಿಬಿಟ್ಟಿದೆ. ಅರಸರನ್ನೂ ದೇವಾನುದೇವತೆಗಳನ್ನೂ ಋಷಿಗಳನ್ನೂ ರಂಗದ ಮೇಲೆ ಎಗ್ಗಿಲ್ಲದೆ ಹಾಸ್ಯ ಮಾಡುವ ಅವಕಾಶ ಸಂಸ್ಕೃತ ರಂಗಭೂಮಿಯಿಂದ ತೊಡಗಿ ಜನಪದ ರಂಗಭೂಮಿಯವರೆಗೆ ವಿದೂಷಕನಿಗೆ ಮೊದಲಿನಿಂದಲೂ ಇತ್ತು. ಆದರೆ ಈಗ ಇಲ್ಲ ಅಥವಾ ಅಂಥ ಅವಕಾಶ ಕಡಿಮೆಯಾಗಿದೆ. ಸುಲಕಲ್ಲ ಮುರವ ಬ್ಯಾರಿ ಮತ್ತು ಫಾತಿಮಾಳ ಮಗನಾಗಿ ಬೆಳೆದ ಬಬ್ಬರನು ತುಳುನಾಡಿನ ಜನಪ್ರಿಯ ದೈವಗಳಲ್ಲಿ ಒಂದು. ಆದರೆ ಇದೀಗ ಅವನನ್ನು ಬಬ್ರುವಾಹನನ ಅವತಾರವೆಂಬಂತೆ ಬಿಂಬಿಸಲಾಗುತ್ತಿದೆ. ಪ್ರಜಾಪ್ರಭುತ್ವದ ಮೂಲ ಆಶಯಕ್ಕೆ ವಿರುದ್ಧವಾಗಿ ಕಲಾವಿದರ ಮುಕ್ತ ಅಭಿವ್ಯಕ್ತಿಗೆ ಈಗ ಅಂಕುಶ ಬಿದ್ದಿದೆ. ಇಂಥಲ್ಲಿ ಸೃಜನಶೀಲತೆ, ಸಂಶೋಧನೆ ಮತ್ತು ವಿಮರ್ಶೆ ಆರೋಗ್ಯಕರವಾಗಿ ಬೆಳೆಯುವುದು ಅಸಾಧ್ಯ. ಮಾರ್ಗ- ೪ ರಲ್ಲಿ ಕಲಬುರ್ಗಿಯವರು ಹೀಗೆ ಬರೆಯುತ್ತಾರೆ-

"ಇತ್ತೀಚೆಗೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ ರಾಜಕೀಯ, ಧಾರ್ಮಿಕ ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟುಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಇತಿಹಾಸವನ್ನು ಮುಂದು ಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವ ರೊಂದಿಗೆ ನಡೆಸುವ ಹೋರಾಟವಾಗಿದೆ (ಮಾರ್ಗ-೪, ಮಾರ್ಗಕ್ಕೆ ಮೊದಲು, ೨೦೦೪).

ಇಂದು ಸಂಶೋಧನೆಯ ವಾತಾವರಣವೇ ಬದಲಾಗಿದೆ. ಉನ್ನತ ಸಂಶೋಧನೆಯನ್ನು ಸಾಧ್ಯಮಾಡುವ ಶಿಕ್ಷಣ ಕ್ಷೇತ್ರದ ಆದ್ಯತೆಗಳೂ ಬದಲಾಗಿವೆ. ಈಗ ಬಿಡುಗಡೆಯಾಗಿರುವ ಹೊಸ ಶಿಕ್ಷಣ ನೀತಿಯಲ್ಲಿ ಮಾನವಿಕಗಳಿಗೆ ಅಂತಾ ಒತ್ತೇನೂ ನೀಡಿಲ್ಲ. ಕೇಂದ್ರೀಯ ವಿಶ್ವವಿದ್ಯಾಲಯಗಳಿಗೆ ಧನಸಹಾಯವನ್ನು ಕಡಿತಗೊಳಿಸಲಾಗಿದೆ. ಈ ಕೊರತೆಯನ್ನು ತುಂಬಲು ಬಹುರಾಷ್ಟ್ರೀಯ ಕಂಪೆನಿಗಳು ಮುಂದೆ ಬರುತ್ತಿವೆ. ಈ ಕಂಪೆನಿಗಳ ಆದ್ಯತೆಗಳು ಬೇರೆಯೇ ಇದ್ದು ಅಲ್ಲಿ ಮಾನವಿಕ ಸಂಶೋಧನೆಗಳಿಗೆ ಯಾವ ಅವಕಾಶವೂ ಇರುವುದಿಲ್ಲ.

ಇಂಥ ಸಂದರ್ಭದಲ್ಲಿ ನಾವು ನಮ್ಮ ಸಂಶೋಧನೆಗಳ ಬಗೆಗೆ ಹೊಸದಾಗಿ ಯೋಚಿಸುವ ಕಾಲ ಬಂದಿದೆ. ಒಂದೆಡೆ ಸಂಶೋಧನೆಯ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳು, ಇನ್ನೊಂದೆಡೆ ತಿಳುವಳಿಕೆಗಳು ಅಂತಾರಾಷ್ಟ್ರೀಯಗೊಳ್ಳುತ್ತಿರುವ ಆಧುನಿಕ ಪ್ರಕ್ರಿಯೆ, ಇವೆರಡರ ನಡುವೆ ಸಂಶೋಧನೆಯನ್ನು ಗಂಭೀರವಾಗಿ ಪರಿಗಣಿಸದ ಸಂಶೋಧಕರು - ಇವು ಇಂದಿನ ದೊಡ್ಡ ಸಮಸ್ಯೆಗಳು. ಈ ಜವಾಬ್ದಾರಿಯನ್ನು ಸಂಶೋಧಕರು ತುರ್ತಾಗಿ ಹೊತ್ತುಕೊಳ್ಳದಿದ್ದರೆ ಮುಂದಿನ ದಿನಗಳಲ್ಲಿ ನಮ್ಮ ಸಂಶೋಧನೆಗಳಿಗೆ ಯಾವ ಬೆಲೆಯೂ ಇರಲಾರದು.

## ಪರಾಮರ್ಶನ ಗ್ರಂಥಗಳು

**ಕನ್ನಡ ಪುಸ್ತಕಗಳು :**


೧. ಕಲಬುರ್ಗಿ ಎಂ ಎಂ ೨೦೦೦, ಮಾರ್ಗ-೧; ಬೆಂಗಳೂರು : ಸಪ್ನಾ ಬುಕ್ ಹೌಸ್.

೨. ಗದ್ದಗೀಮಠ ಜಿ ಎಸ್ ೧೯೬೩, ಉತ್ತರ ಕರ್ನಾಟಕದ ಜಾನಪದ ಸಾಹಿತ್ಯ ಧಾರವಾಡ : ಕರ್ನಾಟಕ ವಿಶ್ವವಿದ್ಯಾಲಯ

೩. ಚಿದಾನಂದಮೂರ್ತಿ ಎಂ ೧೯೭೯, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ; ಮೈಸೂರು : ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

೪. ನರಸಿಂಹಾಚಾರ್ ಡಿ ಎಲ್ ೧೯೭೧, ಪಂಪಭಾರತ ದೀಪಿಕೆ; ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

೫. ನಾಗರಾಜಯ್ಯ ಹಂಪ, ಪ್ರಾಕೃತ ಕಥಾ ಸಾಹಿತ್ಯ; ಬೆಂಗಳೂರು: ಗೋಧೂಳಿ ಪ್ರಕಾಶನ

೬. ನಾಯಕ ಹಾ ಮಾ ೧೯೭೧, ಜಾನಪದ ಸ್ವರೂಪ; ಮೈಸೂರು : ತ ವೆಂ ಸ್ಮಾರಕ ಗ್ರಂಥಮಾಲೆ

೭. ಪೀಟರ್ ಜೆ ಕ್ಲಾಸ್ ೧೯೮೭, ತುಳುವ ದರ್ಶನ ( ಅನು: ನಾವಡ ಎ ವಿ, ಸುಭಾಶ್ಚಂದ್ರ ); ಕುಂದಾಪುರ: ಪ್ರಾದೇಶಿಕ ವ್ಯಾಸಂಗ

೮. ಪುರುಷೋತ್ತಮ ಬಿಳಿಮಲೆ ೧೯೯೦, ಕರಾವಳಿ ಜಾನಪದ; ಮಂಗಳೂರು

೯. ಪುರುಷೋತ್ತಮ ಬಿಳಿಮಲೆ ೧೯೯೭, ಕೂಡುಕಟ್ಟು; ಮಲ್ಲಾಡಿಹಳ್ಳಿ: ಆನಂದಕಂದ ಪ್ರಕಾಶನ

೧೦. ಪುರುಷೋತ್ತಮ ಬಿಳಿಮಲೆ ೨೦೦೦, ಜನ ಸಂಸ್ಕೃತಿ; ಬೆಂಗಳೂರು: ಕ್ರೈಸ್ತ ಕಾಲೇಜು

೧೧. ಪುರುಷೋತ್ತಮ ಬಿಳಿಮಲೆ ೧೯೮೫, ಮೆಕೆಂಜಿ ಕೈಫಿಯತ್ತುಗಳು, ಪುತ್ತೂರು: ಸಮೀರ ಪ್ರಕಾಶನ



೧೨. ನೇಗಿನಹಾಳ ಎಂ ಬಿ ೧೯೯೨, ಮೈಲಾರಲಿಂಗ ಖಂಡೋಬಾ; ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ

೧೩. ಪರಮಶಿವಯ್ಯ ಜೀ ಶಂ, ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು; ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ.

೧೪. ರಹಮತ್ ತರೀಕೆರೆ ೨೦೦೪, ಕರ್ನಾಟಕದ ಮೊಹರಂ; ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

೧೫. ವರದರಾಜರಾವ್ ಜಿ ೧೯೭೦, ಕುಮಾರರಾಮನ ಸಾಂಗತ್ಯಗಳು; ಮೈಸೂರು: ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ

೧೬. ಶೆಟ್ಟರ್. ಷ (ಸಂ) ೨೦೦೭, ಹಳಗನ್ನಡ; ಬೆಂಗಳೂರು: ಅಭಿನವ ಪ್ರಕಾಶನ ೧೭. ಶೆಟ್ಟರ್. ಷ ೨೦೦೭, ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ; ಬೆಂಗಳೂರು: ಅಭಿನವ ಪ್ರಕಾಶನ

೧೮. ಶೆಟ್ಟರ್, ಷ ೨೦೦೪, ಲಿಪಿ, ಲಿಪಿಕಾರ, ಲಿಪಿ ವ್ಯವಸಾಯ; ಬೆಂಗಳೂರು: ಅಭಿನವ ಪ್ರಕಾಶನ

೧೯. ಸತ್ಯನಾಥ ಟಿ ಎಸ್ ೧೯೮೮, ಕನ್ನಡ ಜನಪದ: ಕೆಲವು ಮುಖಗಳು; ಬೆಂಗಳೂರು: ಶಾರದಾ ಪ್ರಕಾಶನ

೨೦. ವಿವೇಕ ರೈ ೧೯೮೫, ತುಳು ಜನಪದ ಸಾಹಿತ್ಯ ಬೆಂಗಳೂರು : ಕನ್ನಡ ಸಾಹಿತ್ಯ ಪರಿಷತ್ತು.

**ಇಂಗ್ಲಿಷ್ ಪುಸ್ತಕಗಳು:**

1. Crooke, William 1896, The Popular Religion and Folklore of Northern India Volune 1 and 2, Westminister: Archibald Con- stable &Co.

2. Eichinger, Gabriella Ferro-Luzzi 1987, The self-milking cow and the bleeding li?gam: criss-cross of motifs in Indian temple leg- ends; Wiesbaden: Harrassowitz

3. Maheshwari, Amrita (Ed.) 2011, Indian Higher Education and Globalization, Delhi, Gagandeep Publications

4. O'Flaherty 1994, Hindu Myths, Delhi: Penguin Books

5. Panikkar N and Nair, Bhaskaran M (2012), Globalization and Higher Education in India, Delhi: Pearson.



6. Qamar Furqan (Ed) 2014, Trends in Internationalization of Higher Education in India; New Delhi: Association of Indian Universities.

7. Sontheimer G D 1993, Pastoral Dieties in western India; Delhi: Oxford University Press.

8. Subrahmanyam, Sanjay, Narayana Rao Velcheru and Shulman, David 2002, Textures of Time: Writing History in South India 1600-1800; New Delhi: Permanent Black

9. Sukthanka VS 1966, Critical edition of the Mahabharata, Pune: The Bhandarakar Oriental Research Institute.

10. UGC Reports 2006-15

**ಗೋಷ್ಠಿ - ೮**

## ಸಮಕಾಲೀನ ಸಂದರ್ಭ : ಬಹುತ್ವದ ಸವಾಲುಗಳು

## ನವ ರಾಷ್ಟ್ರೀಯತೆ - ಧಾರ್ಮಿಕ ಮೂಲಭೂತವಾದ

**-ಡಾ. ಪ್ರಧಾನ್ ಗುರುದತ್ತ**

"ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ!" (ರಾಮಾಯಣ) - ತಾಯಿ ಮತ್ತು ತಾಯಿನಾಡು ಸ್ವರ್ಗಕ್ಕಿಂತಲೂ ಮಿಗಿಲಾದುದು ಎಂಬ ಭಾವನೆಯೇ ಇತ್ಯಾತ್ಮಕ ಸ್ವರೂಪದ ರಾಷ್ಟ್ರೀಯತೆ ಎಂದೆನಿಸಿಕೊಳ್ಳುತ್ತದೆ. ಈ ಭಾವನೆ ಇರದ ಯಾವುದೇ ನಾಡು ಕಾಣದೊರೆಯುವುದಿಲ್ಲ, ಯಾವುದೇ ಭಾಷೆಯೂ ಇರಲಾರದು, ಹಾಗೇನಾದರೂ ಇದ್ದರೆ, ಆ ನಾಡು ಹಾಗೂ ಅಂಥ ಜನಪದ ಏನೆಂದೆನ್ನಿಸಿಕೊಳ್ಳಲು ಯೋಗ್ಯವಾಗುತ್ತದೆ ಎಂಬುದನ್ನು ರಾಷ್ಟ್ರಕವಿ ಕುವೆಂಪು ಹೀಗೆ ಹೇಳಿದ್ದಾರೆ.

"ನನ್ನದು ಈ ನಾಡು ಎನ್ನದ ಮಾನವನೆದೆ ಸುಡುಗಾಡು"

'ನನ್ನದು ಈ ನಾಡು' ಎನ್ನುವ ಭಾವನೆಯನ್ನೇ ನಾವು ನಮ್ಮ ಸಂಸ್ಕೃತಿ ಎಂದು ಭಾವಿಸುತ್ತೇವೆ. ಸಂಸ್ಕೃತಿ ಎಂಬ ಹೆಸರಿನ ತಮ್ಮ ಪುಸ್ತಕದಲ್ಲಿ ಡಿ.ವಿ.ಜಿ. ಅವರು ಈ ಸಂಸ್ಕೃತಿಯ ಮೂಲಸ್ಥಾನಗಳನ್ನು ಆರು ಗಣಗಳಾಗಿ ವಿಂಗಡಿಸಿದ್ದಾರೆ. ಆ ಆರು ಗಣಗಳೆಂದರೆ "(೧) ದೈವ, ಮತ, ಧರ್ಮ, ಸಾಹಿತ್ಯಾದಿ ಸರಸಕಲೆ (೨) ವಿಜ್ಞಾನ (೩) ದೇಶ ವಿದೇಶ ಚರಿತ್ರೆ (೪) ಮಹಾಪುರುಷ ವೃತ್ತಾಂತ (೫) ಸ್ವಸಮಾಜದ ಪ್ರಭಾವ (೬) ಮನುಷ್ಯನ ಅಂತರಂಗದ ಆತ್ಮಪರಿಶೋಧನೆ ಆತ್ಮಸಂಯಮಗಳು," ಇವುಗಳು ಪರಿಣಾಮ ಸೌಂದರ್ಯವನ್ನು ಪಡೆದುಕೊಳ್ಳುವುದು ಹೇಗೆಂಬುದನ್ನೂ ಅವರು ಮುಂದುವರೆದು ಹೀಗೆ ವಿವರಿಸಿದ್ದಾರೆ. "ಮೊದಲಿನ ಐದೂ ಪರಣಾಮ ಹೊಂದುವುದು ಆರನೆಯದರಲ್ಲಿ, ಒಂದು ಕಡೆ ಬುದ್ಧಿಗೆ ಸಂಸ್ಕಾರ, ಮತ್ತೊಂದು ಕಡೆ ಹೃದಯಕ್ಕೆ ಸಂಸ್ಕಾರ, ಈ ಎರಡೂ ಬಗೆಯ ಸಂಸ್ಕಾರಗಳಿಂದ ಪರಿಪಕ್ವವಾಗತಕ್ಕದ್ದು ಜೀವದ ಅಂತರಂಗ, ಹಾಗೆ ಪರಿಪಕ್ವವಾದ ಜೀವವು ಜಗತ್ತಿನೊಳಕ್ಕೆ ಉಸಿರುವ ಸುಗಂಧವೇ ಸಂಸ್ಕೃತಿ." ಈ ಸಂಸ್ಕೃತಿ ನಮ್ಮ ನಾಡಿನಲ್ಲಿ ಅನಾದಿ ಕಾಲದಿಂದಲೂ ವೀಕ್ಷಿಸುತ್ತ ಬಂದು ಜಾಗತಿಕ ಸಂಸ್ಕೃತಿಗಳಲ್ಲೇ ವಿಶಿಷ್ಟವಾದುದೆನಿಸಿಕೊಂಡಿದ್ದ 'ಭಾರತೀಯ ಸಂಸ್ಕೃತಿ' ಯ ರೂಪವನ್ನು ತಳೆದಿದೆ.

ಈ ಭಾರತೀಯ ಸಂಸ್ಕೃತಿ'ಯ ಲಕ್ಷಣ, ಹೃದಯವೈಶಾಲ್ಯ ಯಾವ ಸ್ವರೂಪದ್ದಾಗಿದೆಯೆಂದರೆ ಅದು ಇಡೀ ವಿಶ್ವವನ್ನೇ ಒಂದು ಕುಟುಂಬವೆಂದು ಭಾವಿಸುತ್ತದೆ. "ವಸುಧೈವ ಕುಟುಂಬಕಮ್- ಇದು ಮಹೋಪನಿಷತ್ತಿನ ಹೇಳಿಕೆ. (೫.೭೧) ಈ ವಿಶ್ವ ಕುಟುಂಬದಲ್ಲಿ ಎಲ್ಲರೂ ಹೇಗೆ ಬದುಕಿ ಬಾಳಬೇಕೆಂಬುದನ್ನು ಬೃಹದಾರಣ್ಯ ಕೋಪನಿಷತ್ತು ಹೀಗೆ ಸಾರಿ ಹೇಳುತ್ತದೆ. (೧.೪.೧೪).

"ಸರ್ವೇ ಭವಂತು ಸುಖಿನಃ|

ಸರ್ವೇ ಸಂತು ನಿರಾಮಯಾಃ|

ಸರ್ವೇ ಭದ್ರಾಣಿ ಪಶ್ಯಂತು!

ಮಾ ಕಶ್ಚಿದ್ ದುಃಖಭಾಗ್ಯವೇತ್||"

(ಎಲ್ಲರೂ ಸುಖಿಗಳಾಗಿರಲಿ, ಎಲ್ಲರೂ ರೋಗಮುಕ್ತರಾಗಿರಲಿ, ಎಲ್ಲರೂ ಮಂಗಳಕರವಾದುದನ್ನೇ ಕಾಣಲಿ, ಯಾರೂ ದುಃಖಕ್ಕೆ ಒಳಗಾಗದಿರಲಿ)

ಇದೀಗ ಮಾನವತೆಯ ಮಹಾಧ್ಯೇಯ. ಇದನ್ನು ಅನಾದಿಕಾಲದಿಂದಲೂ ಆಚರಣೆಗೆ ತರುವುದನ್ನೇ ಭಾರತ ತನ್ನ ಸಂಕಲ್ಪವನ್ನಾಗಿಸಿಕೊಂಡು ಬಂದಿದೆ.

ಭಾರತ ಹೇಳಿಕೇಳಿ ಬಹುಧರ್ಮಗಳ ಬೀಡಾಗಿದೆ, ಬಹುಧರ್ಮೀಯರ ನಾಡಾಗಿದೆ. ಹೀಗಿರುವಾಗ, ಸರ್ವಧರ್ಮ ಸಮಭಾವ – ಸಾಮರಸ್ಯಗಳನ್ನು ಸಾಧಿಸುವುದಾದರೂ ಹೇಗೆ? ಇದನ್ನೂ ಹೀಗೆ ಸಾರಿಹೇಳಲಾಗಿದೆ.

"ಆಕಾಶಾತ್ ಪತಿತಂ ತೋಯಂ| ಯಥಾಗಚ್ಛತಿ ಸಾಗರಮ್ ಸರ್ವದೇವ ನಮಸ್ಕಾರಃ ಕೇಶವಂ ಪ್ರತಿಗಚ್ಛತಿ

(ಆಕಾಶದಿಂದ ಸುರಿದ ನೀರೆಲ್ಲವೂ ಸಾಗರದತ್ತ ಹರಿದು ಹೋಗುವಂತೆ, ಎಲ್ಲ ದೇವತೆಗಳಿಗೆ ಸಲ್ಲಿಸುವ ನಮಸ್ಕಾರಗಳೂ ಕೇಶವನನ್ನೇ ಹೋಗಿ ಸೇರುತ್ತವೆ.)

ಇದೇ ಆಶಯವನ್ನು ಬೇರೊಂದು ರೀತಿಯಲ್ಲಿ ಧ್ವನಿಸುವ ಬೇಲೂರಿನ ಶಿಲಾಶಾಸನವೂ ಧಾರ್ಮಿಕ ಸಾಮರಸ್ಯವನ್ನೇ ಅರ್ಥವತ್ತಾಗಿ ಉದ್ಘೋಷಿಸುತ್ತದೆ.

"ಯಂ ಶೈವಾಕ್ಸಮುಪಾಸತೇ ಶಿವ ಇತಿ, ಬ್ರಹ್ಮೇತಿ ವೇದಾಂತಿನಃ ಬೌದ್ಧಾ ಬುದ್ಧ ಇತಿ ಪ್ರಮಾಣಪಟವಃ ಕರ್ತೇತಿ ನೈಯಾಯಿಕಾ ಅರ್ಹನ್ ಇತ್ಯಥ ಜೈನಶಾಸನರತಾಃ ಕರ್ಮೇತಿ ಮೀಮಾಂಸಕಾಃ ಸೋಯಂ ವೋ ವಿಧಧಾತು ವಾಂಚಿತ ಫಲಂ ತ್ರೈಲೋಕ್ಯನಾಥೋ ಹರಿಃ||"

(ಯಾರನ್ನು 'ಶಿವ' ಎಂದು ಶೈವರು ಪೂಜಿಸುತ್ತಾರೋ, 'ಬ್ರಹ್ಮ' ಎಂದು ವೇದಾಂತಿಗಳೂ, 'ಬುದ್ಧ' ಎಂದು ಬೌದ್ಧರೂ, ಪ್ರಮಾಣಪಟುಗಳಾಗಿರುವ ನೈಯಾಯಿಕರು 'ಕರ್ತ' ಎಂದೂ, 'ಅರ್ಹನ್' ಎಂದು

ಜೈನಧರ್ಮಾನುಯಾಯಿಗಳೂ, 'ಕರ್ಮ' ಎಂದು ಮೀಮಾಂಸಕರೂ ಪೂಜಿಸುತ್ತಾರೋ ಮೂರೂ ಲೋಕಗಳ ಒಡೆಯನಾಗಿರುವ ಆ ಹರಿ ಬೇಡಿದ ಫಲಗಳನ್ನು ಕರುಣಿಸಲಿ.

ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಖ್ಯಾತ ತತ್ತ್ವವೇತ್ತರಾಗಿದ್ದ ಡಾ. ಎಸ್. ರಾಧಾಕೃಷ್ಣನ್ ಅವರು ಇದಕ್ಕೆ “ಅಲ್ಲೇತಿ ಮುಸಲಾಃ ಕ್ರಿಸ್ತತಿ ಕ್ರೈಸ್ತವಃ” ಎಂಬ ಮಾತುಗಳನ್ನು ಸೇರಿಸಿಬಿಟ್ಟರೆ. ಇದನ್ನು ನಮ್ಮ



ನಾಡಿನ ಇನ್ನೊಂದು ರಾಷ್ಟ್ರಗೀತೆಯೆಂದೇ ಪರಿಗಣಿಸಬಹುದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು ಎಂಬುದನ್ನಿಲ್ಲಿ ಉಲ್ಲೇಖಿಸಬಹುದಾಗಿದೆ.

ಹಿಂದೂ ಜಾಗರಣಕ್ಕೆ ಕಾರಣರಾದ ಆಧುನಿಕ ವಿಭೂತಿಪುರುಷರಲ್ಲಿ ಒಬ್ಬರಾದ ಸ್ವಾಮಿ ವಿವೇಕಾನಂದರ ಈ ಹೇಳಿಕೆಯೂ ಭಾರತೀಯ ಮನೀಷಿಗಳ ಜಾತ್ಯತೀತ ಧೋರಣೆಯನ್ನೇ ಎತ್ತಿಹಿಡಿಯುತ್ತದೆ.

"No man is born to any religion Everyman has a religion in his soul; Let there be as many religions as There are human beings in this world."

(ಯಾವ ವ್ಯಕ್ತಿಯೂ ಯಾವುದೇ ಧರ್ಮದವನಾಗಿ ಹುಟ್ಟಿಬಂದಿರುವುದಿಲ್ಲ. ಪ್ರತಿಯೊಬ್ಬ ವ್ಯಕ್ತಿಯ ಹೃದಯದಲ್ಲಿಯೂ ಅವನದೇ ಆದ ಧರ್ಮ ಇರುತ್ತದೆ. ಈ ಜಗತ್ತಿನಲ್ಲಿ ಎಷ್ಟು ಮಂದಿ ಮಾನವ ಜೀವಿಗಳು ಇರುತ್ತಾರೋ ಅಷ್ಟು ಸಂಖ್ಯೆಯ ಧರ್ಮಗಳಿರಲಿ).

ಈ ಮಾತುಗಳನ್ನು ಮೊದಲೇ ಉದ್ಧರಿಸಿರುವುದಕ್ಕೆ ಕಾರಣವೇನೆಂದರೆ ಭಾರತದಲ್ಲಿ ಧರ್ಮ ಎಂಬುದು ರಾಷ್ಟ್ರೀಯತೆಗೆ ಕಂಟಕ ಸ್ವರೂಪದ್ದೇನೂ ಆಗಿರಲಿಲ್ಲ. ಮಾನವ ಜೀವಿತದ ಆದರ್ಶಗಳಿಗೆ ಪೂರಕವಾಗಿಯೇ ಬೆಳೆದುಬರುತ್ತಿತ್ತು. ಹಾಗೂ ಸಮಯ ಸನ್ನಿವೇಶ ಚಿಂತನೆಗಳಿಗೆ ಅನುಗುಣವಾಗಿಯೇ ಬದಲಾಗುತ್ತಲೂ ಬರುತ್ತಿತ್ತು. ಇಷ್ಟಾಗಿಯೂ, ಅದರ ಮೂಲ ಸ್ವರೂಪದ ವೈಶಿಷ್ಟ್ಯಗಳನ್ನು ಉಳಿಸಿಕೊಂಡೇ ಇರುತ್ತಿತ್ತು. ಧರ್ಮ ಕಾಣಿಸಿಕೊಳ್ಳುವುದು ಮೂರು ಸ್ವರೂಪಗಳಲ್ಲಿ : (೧) ದಾರ್ಶನಿಕ ಅಥವಾ ತಾತ್ತ್ವಿಕ ನೆಲೆ, (೨) ಪೌರಾಣಿಕ ಅಥವಾ ಐತಿಹಾಸಿಕ ನೆಲೆ, (೩) ಮತಾಚರಣೆಗಳ ಅಥವಾ ಸಂಸ್ಕಾರಗಳ ಆಚರಣೆಯ ನೆಲೆ (Philosophical, mythdological and ritualistic), ದಾರ್ಶನಿಕ ಚಿಂತನೆ ಉನ್ನತ ನೆಲೆಯಲ್ಲಿ ನಡೆಯುವಂಥದು; ಪೌರಾಣಿಕ ಸ್ವರೂಪದ ಚಿಂತನೆ ಧರ್ಮದ ನೆಲೆಗಟ್ಟು ಶ್ರೀ ಸಾಮಾನ್ಯರಲ್ಲಿ ಬೇರು ಬಿಡುವಂತಾಗಬೇಕೆಂಬ ದೃಷ್ಟಿಯಿಂದ ಬೆಳೆದುಬರುವ ಸಾಹಿತ್ಯವನ್ನು ಒಳಗೊಂಡಿರುತ್ತದೆ.

ಮೂರನೆಯದಾದ ಮತಾಚರಣೆಗಳು ಶ್ರೀ ಸಾಮಾನ್ಯರನ್ನು ಕಟ್ಟಿಹಾಕುವ ಉದ್ದೇಶದಿಂದ ರೂಪಿಸಲಾದ ಬಗೆಬಗೆಯ ಕಾರ್ಯಗಳನ್ನು ಒಳಗೊಂಡಿರುತ್ತದೆ. ಇವೆಲ್ಲವೂ ಪ್ರೀತಿ- ದ್ವೇಷ, ಒಳಿತು ಕೆಡಕುಗಳ ವೈರುದ್ಧಗಳನ್ನು ಒಳಗೊಂಡಿರುತ್ತವೆ. ಇವು ಹಿಂಸಾತ್ಮಕ ಅತಿರೇಕಗಳಿಗೆ ಎಡೆಗೊಟ್ಟಾಗ, ಅವುಗಳನ್ನು ಮತಾಂಧತೆ (fanaticism) ಎಂದು ಗುರುತಿಸಲಾಗುತ್ತದೆ. ತಾತ್ವಿಕ ನೆಲೆಯಲ್ಲಿ ಆಸ್ತಿಕತೆಯಂತೆಯೇ ನಾಸ್ತಿಕತೆ ಅಥವಾ ಚಾರ್ವಾಕ ಮನೋಧರ್ಮಕ್ಕೂ ಗೌರವಾರ್ಹವಾದ ಸ್ಥಾನವಿರುತ್ತದೆ. ಪೌರಾಣಿಕ ಅಥವಾ ಐತಿಹಾಸಿಕ ನೆಲೆಯಲ್ಲಿ ಧಾರ್ಮಿಕ ಭಾವನೆಗಳನ್ನು ಪುಷ್ಟಿಕರಿಸುವ ಪ್ರಯತ್ನ ಅಡಗಿರುತ್ತದೆ.



ಮತಾಚರಣೆಗಳು ಮೂಢನಂಬಿಕೆಯ ನೆಲೆಯನ್ನು ತಲುಪಿದ್ದು, ಹುಚ್ಚುತನದ ಬೇಜವಾಬ್ದಾರಿಯೇ (Irresponsibility of a lumatic) ಪ್ರತೀಕವೂ ಆಗಿಬಿಟ್ಟಿರಬಹುದು. ಈ ಕಾರಣದಿಂದಾಗಿಯೇ “ಮತಾಂಧನನ್ನು ಮಾನವ ಜನಾಂಗದ ಮಹಾ ಶತ್ರು”  ಎಂದು ಭಾವಿಸಲಾಗಿದೆ, ಏಕೆಂದರೆ ಇಲ್ಲಿ ವೈಚಾರಿಕ ಭಿನ್ನತೆಗೆ ಎಡೆಯೇ ಇರುವುದಿಲ್ಲ. (fanatic is the greatest enemy of mankind). ಆದ್ದರಿಂದಲೇ ಸ್ವಾಮಿ ವಿವೇಕಾನಂದರು “ಧರ್ಮ ಎಂಬುದು ಸಾಕ್ಷಾತ್ಕರಣ ಅಥವಾ ಮನಗಾಣೆ. ಅದು ಬರಿಯ ಭಾಷಣವಲ್ಲ, ತತ್ತ್ವವಲ್ಲ, ಸಿದ್ಧಾಂತವೂ ಅಲ್ಲ – ಅದೆಷ್ಟೇ ಸುಂದರವೆಂದು ತೋರಬಹುದಾದರೂ, ಅದು ಇರುವಿಕೆ ಮತ್ತು ಬದಲಾಗುವಿಕೆಯೇ ಆಗಿರುತ್ತದೆ.” (Religion is realisation, not talk, not doctrine nor, theories; however beutiful they may be.... It is being and becoming.) o agatay. ಭಾರತೀಯ ಧರ್ಮ ಅಥವಾ ರಾಷ್ಟ್ರೀಯತೆ ತನ್ನ ಅಸ್ತಿತ್ವವನ್ನು ಉಳಿಸಿಕೊಂಡೂ ಬದಲಾವಣೆಯ ಪ್ರಕ್ರಿಯೆಗೆ ತನ್ನನ್ನು ಒಳಗೊಳ್ಳಿಸಿಕೊಳ್ಳುತ್ತ ಬಂದಿದೆ.

'ಮೂಲಭೂತವಾದ' (fundamentalism) ಎಂಬ ಶಬ್ದ ಮೊದಲಿಗೆ ಕಾಣಿಸಿಕೊಂಡಿದ್ದು ನಯಾಗರಾದಲ್ಲಿ ನಡೆದ 'ಬೈಬಲ್ ಸಮ್ಮೇಳನ'ದಲ್ಲಿ (Niagara Bible conference : ೧೮೨-೧೮೯೭). ಇದು ಕ್ರೈಸ್ತ ಧರ್ಮೀಯರ ನಂಬುಗೆಗೆ ಮೂಲಭೂತವಾದುದೆಂದು ಪರಿಗಣಿಸಲಾದ ತತ್ತ್ವಗಳ ವ್ಯಾಖ್ಯೆಯನ್ನು ಒಳಗೊಂಡ ಪರಿಭಾಷೆಯೇ ಆಗಿತ್ತು. ಇದು ೧೯೧೦ ರಲ್ಲಿ ಪ್ರಕಟವಾದ The Fundamentals ಎಂಬ ಹನ್ನೆರಡು ಸಂಪುಟಗಳ ಗ್ರಂಥ ಸರಣಿಯ ಹಿಂದೆ ಹುದುಗಿದ್ದ ಪೂರ್ವಕಲ್ಪನೆಯಾಗಿತ್ತು. ಇದನ್ನು ಪ್ರಕಟಿಸಿದವರು ಮಿಲ್ಟನ್ ಮತ್ತು ಲೈಮನ್ ಸ್ಟೀವರ್ಟ್ ಎಂಬ ಸೋದರರು. ಆದರೆ ಈ ಶಬ್ದವನ್ನು ವಾಸ್ತವವಾಗಿ ಟಂಕಿಸಿದ್ದು “The Watchman-Exminer' ಎಂಬ ಪತ್ರಿಕೆಯ ಸಂಪಾದಕರಾಗಿದ್ದ ಕರ್ಟಿಸ್ ಲೀ ಲಾವೆಸ್ ಅವರು, 'ಧರ್ಮ'ವೊಂದರ ಮೂಲಭೂತ ತತ್ತ್ವಗಳಿಗಾಗಿ ಹೋರಾಡುವವರನ್ನು ಮೂಲಭೂತವಾದಿಗಳೆಂದು ಕರೆಯತಕ್ಕದ್ದೆಂಬ ಸೂಚನೆಯನ್ನು ಅವರು ನೀಡಿದ್ದರು

(fundamentalists). ಇದರ ಆಧಾರದ ಮೇಲೆ 'ಧಾರ್ಮಿಕ ಮೂಲಭೂತವಾದ ವೆಂಬ ಪರಿಕಲ್ಪನೆಯೂ ರೂಪುಗೊಂಡಿತು (Religious Fundamentalism).

'ಧಾರ್ಮಿಕ ಮೂಲಭೂತವಾದ' ಎಂದು ಕ್ರೈಸ್ತ ಧರ್ಮೀಯರು ಪರಿಗಣಿಸಲು ಆಧಾರವಾಗಿದ್ದ ಐದು ಮೂಲಭೂತ ಅಂಶಗಳೆಂದರೆ,

೧. ಬೈಬಲಿನ ಸ್ಫೂರ್ತಿ ಮತ್ತು ಆ ಧರ್ಮಗ್ರಂಥದ ಅಸ್ಖಲಿತತೆ ಅಥವಾ Loco (Infalliability)

9. ಏಸುವಿನ ಅನಿಷೇಕ- ಜನನ (Virgin birth)



೩. ಪಾಪದ ಪ್ರಾಯಶ್ಚಿತ್ತದ ರೂಪವಾಗಿ ಕ್ರಿಸ್ತನು ಮರಣವನ್ನಪ್ಪಿದನೆಂಬ ನಂಬಿಕೆ (Atonement of sin)

೪. ಏಸುವಿನ ದೈಹಿಕ ಪುನರುತ್ಥಾನ ಅಥವಾ ಮತ್ತೆ ಮೂಡಿಬರುವನೆಂಬ 302 (Resurrection)

೫. ಏಸು ಎಸಗಿದ ಪವಾಡಗಳು ಐತಿಹಾಸಿಕವಾಗಿಯೂ ನಡೆದ ವಾಸ್ತವಿಕ ಘಟನೆಗಳೆಂಬ ನಂಬಿಕೆ (Historical reality)

ಇವುಗಳನ್ನು ಪ್ರಶ್ನಾತೀತವಾಗಿ ನಂಬುವುದೇ 'ಮೂಲಭೂತವಾದ'ವೆಂದು ಹೇಳಲಾಯಿತು. ಹೀಗಾಗಿ ಅದನ್ನು ಹೀಗೆ ವಿವರಿಸಲಾಯಿತು : "ಧಾರ್ಮಿಕ ಶ್ರದ್ಧೆಯನ್ನುಳ್ಳವರು ತಮ್ಮ ಧರ್ಮದ ಮೊದಲ ಸ್ವರೂಪವನ್ನು ಒಪ್ಪಿ ನಡೆಯುವುದನ್ನು ಕಂಡರಿಸುವ ಧರ್ಮದ ಬಗೆಗಿನ ದೃಷ್ಟಿಕೋನ, ಅದು ಟೀಕೆ-ಟಿಪ್ಪಣಿಗಳಿಗೆ ಹೊರತಾದುದೆಂದು ಪರಿಗಣಿಸುವುದು, ಅದಕ್ಕೆ ವಿರುದ್ಧವಾಗಿರುವಂಥ ಆಧುನಿಕ ಸಾಕ್ಷ್ಯವನ್ನು ಗಣಿಸುವುದು ಅಥವಾ ತಾರ್ಕಿಕ ವಾದಗಳಿಗೆ ಎಡೆಗೊಡದ ರೀತಿಯಲ್ಲಿ, ಅದನ್ನು ತನ್ನ ಮೇಲೆ ಅಥವಾ ಇತರರ ಮೇಲೆ ಆವಾಹಿಸಿಕೊಳ್ಳಲು ಅರ್ಹವಾಗಿರು ವಂಥದು- ಇದೇ ಮೂಲಭೂತವಾದ, "[(Fundamentalism is the approach to religion that seas believers embrace an early form of their religion, to consider it beyond criticism and worty enough to be enforced upon one-self (or others) without having to accommodate modern evidence orlogical arguments against it.]" ಈ ಮೂಲಭೂತವಾದೀ ಧಾರ್ಮಿಕ ಜಾಗತೀಕರಣವನ್ನು "ಹೊಸ ಸಂಸ್ಕೃತಿಯ ಋಣವನ್ನು ಅಂಗೀಕರಿಸದೆಯೇ, ಹೊಸ ಸಂಸ್ಕೃತಿಯಲ್ಲಿ ತಮ್ಮನ್ನು ನೆಲೆಗೊಳಿಸುವ ಮೂಲಭೂತವಾದಿಗಳ ವಿಧಾನ" (Way fundamentalists establish themselves in a new culture without acknowledging this new culture" ಎಂಬುದಾಗಿ ಧಾರ್ಮಿಕ ಸಮಾಜಶಾಸ್ತ್ರೀಯ ಚಿಂತಕರಾದ ಡೇವಿಡ್ ಲೆಹಮನ್ ಅವರು ವಿವರಿಸಿದ್ದಾರೆ.

ಜಗತ್ತಿನ ಯಾವುದೇ ಪೂರ್ವಕಾಲೀನ ಧರ್ಮವೂ ಮೂಲಭೂತವಾದದಿಂದ ಮುಕ್ತವಾಗಿಲ್ಲವೆಂದೇ ಹೇಳಬೇಕಾಗುತ್ತದೆ. ಕ್ರೈಸ್ತ ಧರ್ಮ, ಯಹೂದೀ ಧರ್ಮ, ಇಸ್ಲಾಂ ಧರ್ಮ, ಬೌದ್ಧ ಧರ್ಮ ಎಲ್ಲವುಗಳಲ್ಲಿಯೂ ಮೂಲ ಸಿದ್ಧಾಂತಗಳಿಗೆ, ಮತೀಯ ಗ್ರಂಥಗಳ ಕಟ್ಟುಪಾಡುಗಳಿಗೆ ಅವಿಚಾರಕವಾಗಿ ಬದ್ಧತೆಯನ್ನು ಮೆರೆಯುವ ಪ್ರವೃತ್ತಿ ಕಂಡುಬಂದಿದೆ. ಹೀಗಾಗಿ, ಮೂಲಭೂತವಾದ ಎಂಬುದು "ಅಪರಿವರ್ತನೀಯ ನಂಬಿಕೆಗಳ ಕೂಟದ ಬಗೆಗಿನ ಅವಿಚಲಿತವಾದ ಬದ್ಧತೆ" (Unwavering attach- ment to a set of irreducible set of beliefs) ಎಂದೇ ಹೇಳಲಾಗಿದೆ. ಇದು ನಿರ್ದಿಷ್ಟ ಧರ್ಮಗ್ರಂಥಗಳಿಗೆ, ತತ್ತ್ವಗಳಿಗೆ ಅಥವಾ ವಿಚಾರಗಳಿಗೆ ಶಬ್ದಶಃ ಬದ್ಧವಾಗಿರುವುದನ್ನು ಸೂಚಿಸುತ್ತದೆ. (Strict literalism as applied to certain



specific scriptrues, dogmas or ideologies...leading to an emphasis on purity or the desire to return to a previous idea). ಇದನ್ನು ಪರಿಪಾಲಿಸದೆ ಇರುವವರನ್ನು 'ದಾರಿತಪ್ಪಿದವರು' (Strayed) ಎಂದು ಪರಿಗಣಿಸುವುದೂ ಉಂಟು. ಕ್ರಿಶ್ಚಿಯನ್ ಮೂಲಭೂತವಾದಿಗಳು (ಉದಾಹರಣೆಗೆ ಅಮೆರಿಕನ್ ಪಂಥದವರು) ಚಾರ್ಲ್ಸ್ ಡಾರ್ವಿನ್ ಮುಂದಿರಿಸಿದ 'ವಿಕಾಸವಾದ' ದ (Theory of evolution) ವಿರುದ್ಧ ಪ್ರತಿಭಟನಾತ್ಮಕ ನಿಲುವನ್ನು ಪ್ರದರ್ಶಿಸಿದ್ದಾರೆ ಹಾಗೂ ಸಹಸ್ರಮಾನಪೂರ್ವದ ಅಂತಿಮಗತಿಶಾಸ್ತ್ರದ (Premillenial eschatology) ನಂಬಿಕೆಯಂತೆ, ಕ್ರಿಸ್ತಮತ ಹುಟ್ಟಿ ಬರದೇ ಇದ್ದರೆ ಜಗತ್ತು ಪ್ರಳಯಕ್ಕೆ ತುತ್ತಾಗಿಬಿಡುತ್ತಿತ್ತೆಂದು ನಂಬಿದ್ದಾರೆ. ನಮ್ಮಲ್ಲಿನ "ಅವತಾರವಾದ'ದ ("ಯದಾ ಯದಾಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ | ಅಭ್ಯುತ್ಥಾನಂ ಅಧರ್ಮಸ್ಯ ತದಾ ಆತ್ಮಾನಂ ಸೃಜಾಮ್ಯಹಮ್!) ಕಲ್ಪನೆ, ಗ್ರಹಣ ಕಾಲದಲ್ಲಿ 'ರಾಹು'ವೇ ಸೂರ್ಯಚಂದ್ರರನ್ನು ಆಕ್ರಮಿಸುತ್ತಾನೆಂಬ ಪರಿಕಲ್ಪನೆಯನ್ನು ಸಂವಾದಿ ಎಂದು ಪರಿಗಣಿಸಬಹುದು.

ಯಹೂದ್ಯರೂ (ಇಸ್ರೇಲ್‌ನಲ್ಲಿ) ಸಂಪ್ರದಾಯನಿಷ್ಠ ಯಹೂದಿ ಸಂಸ್ಕೃತಿಯನ್ನು ಸಂಸ್ಥಾಪಿಸಲು ಯಹೂದಿ ನ್ಯಾಯಶಾಸನವಾಗಿರುವ 'ಹಲಾಚ್ಯ'ಕ್ಕೆ ಕಟ್ಟುನಿಟ್ಟಾಗಿ ವಿಧೇಯವಾಗಿರಬೇಕೆಂಬುದನ್ನು ಪ್ರತಿಪಾದಿಸಲು ಪ್ರಯತ್ನಿಸುವುದನ್ನು ಇಂದಿಗೂ ಕಾಣಬಹುದಾಗಿದೆ.

ಇಸ್ಲಾಮಿ ಮೂಲಭೂತವಾದಿಗಳು ಇದೇ ರೀತಿಯಲ್ಲಿ ಪವಿತ್ರ ಖುರಾನಿನ ಹಾಗೂ ಹದಿತ್ (ಹದೀಸ್)ನ ಅಕ್ಷರಶಃ ವ್ಯಾಖ್ಯಾನವನ್ನು ನಂಬುತ್ತಾರೆ ಹಾಗೂ ಇಸ್ಲಾಮಿಕ್ ಜನಜೀವನದ ಎಲ್ಲ ರಂಗಗಳಲ್ಲಿ ಶರಿಯದ (ಶರಿಯತ್) ನ ನಿಯಮಗಳನ್ನು ಪಾಲಿಸಬೇಕೆಂದು ಒತ್ತಾಯಿಸುತ್ತಾರೆ. ಇದರಲ್ಲಿ ಯಾವುದೇ ಪರಿವರ್ತನೆಯನ್ನೂ ಅವರು ಇಚ್ಛಿಸುವುದಿಲ್ಲ. (ಮುಸ್ಲಿಮ್ ವೈಯಕ್ತಿಕ ಕಾನೂನಿಗೆ ಯಾವುದೇ ತಿದ್ದುಪಡಿಯನ್ನು ತರಲು ಅವರು ಅವಕಾಶ

ಮಾಡಿಕೊಡಬಯಸುವುದಿಲ್ಲ ಎಂಬುದಕ್ಕೆ 'ಶಾಬಾನು ಪ್ರಕರಣ' ಹಾಗೂ 'ತ್ರಿವಳಿ ತಲಾಖ್' ಪ್ರಕರಣವನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು. ಈಚೆಗಷ್ಟೆ ದೃಶ್ಯ ಮಾಧ್ಯಮದ ಸ್ಪರ್ಧೆಯೊಂದರಲ್ಲಿ ಸುಹಾನಾ ಸಯ್ಯದ್ ಎಂಬ ಹೆಸರಿನ ಮುಸ್ಲಿಂ ಯುವತಿ ಶ್ರೀ ಕೃಷ್ಣನನ್ನು ಕುರಿತ ಗೀತೆಯನ್ನು ಹಾಡಿದ್ದಕ್ಕಾಗಿ ತೋರಿದ ಪ್ರತಿಭಟನೆಯನ್ನು ಹಾಗೂ ಮುಸ್ಲಿಮ್ ಯುವತಿಯರು ಅಲಂಕರಣಕ್ಕಾಗಿಯಾದರೂ ತಲೆಗೂದಲನ್ನು ಕತ್ತರಿಸಬಾರದೆಂದೂ, ಹುಬ್ಬುಗಳನ್ನು ತೀಡಿಸಿಕೊಳ್ಳಬಾರದೆಂದೂ ನಿಷೇಧಾಜ್ಞೆಯನ್ನು ಹೊರಡಿಸುವ ಯತ್ನ ನಡೆದಿರುವುದನ್ನು ಉಲ್ಲೇಖಿಸಬಹುದಾಗಿದೆ. ತಸ್ಲಿಮಾ ನಸ್‌ರೀನ್ ಅವರ ಲಜ್ಜಾ' ಕೃತಿಯ ಮೇಲೆ ಹಾಗೂ ಸಲ್ಮಾನ್ ರಶ್ದಿ ಅವರ Satanic Versus ಸಂಕಲನದ ಮೇಲೆ ನಿಷೇಧ ಹೇರಿರುವುದಲ್ಲದೆ, ದೇಶ ಬಾಹಿರರಾಗಿ ಅತಿಯಾದ ರಕ್ಷಣೆಯಲ್ಲಿ ಬಾಳಬೇಕಾಗಿ ಬಂದಿರುವುದಂತೂ ಜಗಜ್ಜಾಹೀರು ಆಗಿರುವ ಪ್ರಸಂಗಗಳೇ ಆಗಿವೆ.) ಅಂತರರಾಷ್ಟ್ರೀಯ ಭಯೋತ್ಪಾದಕ ಸಂಘಟನೆಗಳಾಗಿರುವ



ಅಲ್-ಖೈದಾ, ಬೋಕೋ ಹರಾಮ್ ಮತ್ತು ಐಸಿಎಸ್‌ಗಳ ಹಿಂದೆಯೂ ಈ ಧಾರ್ಮಿಕ ಮೂಲಭೂತವಾದ ಕಾರ್ಯಶೀಲವಾಗಿರುವುದು ಸ್ಪಷ್ಟವಾಗಿಯೇ ಇದೆ.

ಹಿಂದೂ ಧರ್ಮದ ಬಗ್ಗೆ, ಇದಕ್ಕೆ ತದ್ವಿರುದ್ಧವಾಗಿ, ಹೀಗೆಂದು ಹೇಳಲಾಗಿದೆ: "ಜಗತ್ತಿನ ಅತ್ಯಂತ ಪ್ರಾಚೀನ ಧರ್ಮವಾಗಿರುವ ಹಿಂದೂ ಧರ್ಮ ಯಾವುದೇ ಒಂದು ಪವಿತ್ರ ಗ್ರಂಥಕ್ಕಾಗಲೀ, ಯಾವನೇ ಒಬ್ಬ ಪ್ರವಾದಿ ಅಥವಾ ದೇವರಿಗಾಗಲೀ ಸರ್ವೋಚ್ಚ ಮಹತ್ವದ ಸ್ಥಾನವನ್ನು ನೀಡುವುದಿಲ್ಲ. ತತ್ತ್ವ-ಸಿದ್ಧಾಂತಗಳ ಅನೇಕ ಪಂಥಗಳ ಸಂಕೀರ್ಣ ಸಮುದಾಯವೇ ಹಿಂದೂ ಧರ್ಮವೆನಿಸಿಕೊಂಡಿದ್ದು, ವೇದಗಳು, ಭಗವದ್ಗೀತೆ, ಉಪನಿಷತ್ತುಗಳು ಮತ್ತು ಬ್ರಾಹ್ಮಣಗಳನ್ನು ಒಳಗೊಂಡಂತೆ ಬಹು ಸಂಖ್ಯೆಯ ಪವಿತ್ರ ಗ್ರಂಥಗಳು ಈ ಪಂಥಗಳ ಹಿರಿಮೆಯನ್ನು ಪ್ರತಿಪಾದಿಸುತ್ತವೆ." (Strong Religion: The Rise of Fundamentalism around the world by Gabriel A.Almond, R.Scott Appleoy Emmanuel Sevan)

ಇಷ್ಟಾಗಿಯೂ ಹಲವು (ಸ್ವಯಂಘೋಷಿತ) ಬುದ್ಧಿಜೀವಿಗಳು, ತಮ್ಮದೇ ಆದ ಕಾರಣಗಳಿಂದಾಗಿ, ತಮ್ಮ (ವಾಮ) ಪಂಥದ ಧೋರಣೆಗಳ ಸಮರ್ಥನೆಯಾಗಿ, (ರಾಷ್ಟ್ರೀಯ ಸ್ವಯಂ ಸೇವಕ ಸಂಘ (RSS)' ಭಾರತೀಯ ಜನಸಂಘ (BJS),' ವಿಶ್ವಹಿಂದೂ ಪರಿಷತ್, 'ಭಜರಂಗದಳ' ಮುಂತಾದುವನ್ನು (ಕಮ್ಯೂನಿಸ್ಟ್ ತತ್ವಕ್ಕೆ ವಿರುದ್ಧವಾಗಿ ಮುಸೋಲಿನಿಯ ನೇತೃತ್ವದಲ್ಲಿ ಬೆಳೆದುನಿಂತ ಸರ್ವಾಧಿಕಾರಿ ಧೋರಣೆಯ) ಫ್ಯಾಸಿಸ್ಟ್ ಪಂಥಗಳೆಂದು ಹೆಸರಿಸಿಬಿಟ್ಟಿದ್ದಾರೆ. ಇದಕ್ಕೆ ನಿದರ್ಶನವಾಗಿ ಬಾಬ್ರಿ ಮಸೀದಿಯ ವಿನಾಶ ಮೊದಲಾದ ಘಟನೆಗಳನ್ನು

ಉಲ್ಲೇಖಿಸುವುದುಂಟು. ಇದಕ್ಕೆ ಪ್ರತಿಯಾಗಿ ಗೋಧ್ರಾ ಹತ್ಯಾಕಾಂಡ (ಕರಸೇವಕರಿದ್ದ ಬೋಗಿಗೆ ಬೆಂಕಿ ಹಚ್ಚಿ ಸಾಮೂಹಿಕ ಹತ್ಯೆ ನಡೆಸಿದ್ದು) ಮುಂತಾದುವನ್ನು ಪ್ರತಿಪಕ್ಷೀಯರು ಹೆಸರಿಸುವುದುಂಟು. ಇವನ್ನು ಧಾರ್ಮಿಕ ಮೂಲಭೂತವಾದದ ಅತಿರೇಕಗಳೆಂದು ಪರಿಗಣಿಸುವುದೇ ತುಂಬ ಉಚಿತವೆಂದು ತೋರುತ್ತದೆ.

ಮೂಲಭೂತವಾದ ಭಯೋತ್ಪಾದನೆಯ ರೂಪವನ್ನು (terrorism) ಪಡೆದುಕೊಳ್ಳುತ್ತಿರುವುದು ಗಂಭೀರ ಚಿಂತೆಯ ವಿಷಯವೇ ಆಗಿ ಪರಿಣಮಿಸುತ್ತಿದೆ. (ಸ್ವಯಂಘೋಷಿತ) ಬುದ್ಧಿಜೀವಿಗಳ ಜೊತೆಗೆ ನ್ಯಾಯಾಧೀಶರುಗಳೂ ಈ ಬಗೆಯ ಮನೋಧರ್ಮವನ್ನು ತೋರುತ್ತಿರುವುದು ಮತ್ತಷ್ಟು ಚಿಂತೆಗೆ ಕಾರಣವಾಗುತ್ತಿದೆ. ಡ್ಯಾನಿ ಪಿರೇರಾ ಅವರು 'ವಿಶ್ವವಾಣಿ' ಪತ್ರಿಕೆಯ ೧೩-೧೧-೨೦೧೭ರ ಸಂಚಿಕೆ ಯಲ್ಲಿನ ತಮ್ಮ ಅಂಕಣ ಬರಹದಲ್ಲಿ ಮುಂಬಯಿ ಉಚ್ಚ ನ್ಯಾಯಾಲಯದ ಮಾಜಿ ಮುಖ್ಯ ನ್ಯಾಯಾಧೀಶರಾದ ಬಿ.ಜೆ.ಕೋಲ್ಸ್ ಪಾಟೀಲ್ ಅವರು ಪಿಎಫ್ ಐ (Peoples Federation of India) ಸಂಘಟನೆಯ ರಾಷ್ಟ್ರಮಟ್ಟದ ಸಮಾವೇಶದಲ್ಲಿ ಆಡಿದ ಆಕ್ಷೇಪಾರ್ಹ ಮಾತುಗಳಿಗೆ ಪ್ರತಿಭಟನೆಯನ್ನು ಸೂಚಿಸುತ್ತ ಹೇಳಿರುವ ಈ ಮಾತನ್ನು ಉದ್ಧರಿಸಿದರೆ



ಸಾಕೆಂದು ತೋರುತ್ತದೆ. “ರಾಷ್ಟ್ರದ್ರೋಹಿ ಸಂಘಟನೆಯ ವೇದಿಕೆಯನ್ನು ಬಳಸಿ, ದೇಶಭಕ್ತ ಸಂಘಟನೆಯ ಮುಖ್ಯಸ್ಥರ (ಮೋಹನ್ ಭಾಗವತರ) ಮೇಲೆ ಆಧಾರ ರಹಿತ ಆರೋಪ ಮಾಡಿದರೆ, ಇವರು ಕಲಿತ ನ್ಯಾಯಶಾಸ್ತ್ರಕ್ಕೆ ಏನು ಗೌರವ ನೀಡಿದಂತಾಯಿತು?.... ಹಿಂದೂ ಸಂಘಟನೆಗಳ ಮೇಲೆ ಗೂಬೆ ಕೂರಿಸದಿದ್ದರೆ ಸೆಕ್ಯುಲರಿಸ್ಟರ ಭಾಷಣ ಮತ್ತು ಬರಹಗಳು ಅಪೂರ್ಣ ಎನ್ನುವುದು ಮಾಜಿ ನ್ಯಾಯಾಧೀಶರ ಮಾತಿನಿಂದ ಸಾಬೀತಾಗುತ್ತದೆ.”

ಈ ಸಂಬಂಧವಾಗಿ ವೇಲ್ಸ್‌ನ ಆರ್ಚ್‌ಬಿಷಪ್ ಅವರ ಹೇಳಿಕೆಯೊಂದಿಗೆ ಈ ವೈಚಾರಿಕ ಚರ್ಚೆಗೆ ಮಂಗಳವನ್ನು ಹಾಡಬಹುದಾಗಿದೆ. “ಯಾವುದೇ ಬಗೆಯ ಮೂಲಭೂತವಾದವಾಗಲಿ- ಅದು ಬೈಬಲ್ ಆಧಾರಿತವಾದುದಾಗಿರಲಿ ಅಥವಾ ನಿರೀಶ್ವರವಾದಿ ಸ್ವರೂಪದ್ದಾಗಿರಲಿ ಅಥವಾ ಇಸ್ಲಾಮೀಯವಾದುದಾಗಿರಲಿ ಅದು ಅಪಾಯಕಾರಿಯಾಗಿರುವಂಥದು...... ನಮ್ಮ ಕಾಲದ ನೂತನ ಮೂಲಭೂತವಾದವು ಹೊರದೂಡುವಿಕೆಯ ಹಾಗೂ ಬೆರೆಯದಿರುವ ಭಾಷೆಗೆ ದಾರಿ ಮಾಡಿಕೊಡುತ್ತದೆ. ಉಗ್ರಗಾಮಿತ್ವಕ್ಕೆ ಹಾಗೂ ಧ್ರುವೀಕರಣಕ್ಕೆ ಎಡೆಮಾಡಿಕೊಡುತ್ತದೆ. ದೇವರು ನಮ್ಮ ಕಡೆ ಇರುವುದರಿಂದ ನಿಮ್ಮ ಕಡೆಯಲ್ಲಿ ಇಲ್ಲ ಎಂಬ ವಾದಕ್ಕೂ ಅವಕಾಶ ಮಾಡಿ ಕೊಡುತ್ತದೆ.” (Any kind of fundamentalism, be it Biblical, atheistic or Islamic, is dangerous.... the new fundamentalism of our age...leads to the lan- guage of expulsion and exclusivity, of extremism and polarisation and the claim that because God is on our side, he is not on yours.")

ಭಾರತೀಯ ಸಾಹಿತ್ಯ ಅದರಲ್ಲಿಯೂ ಕನ್ನಡ ಸಾಹಿತ್ಯ 'ಧಾರ್ಮಿಕ ಮೂಲಭೂತವಾದ'ಕ್ಕೆ ನೀರೆರೆದು ಪೋಷಿಸಿಲ್ಲ ಎಂಬುದು ಸಮಾಧಾನದ ಸಂಗತಿಯೇ ಆಗಿದೆ. ರಾಜಕೀಯ ಉದ್ದೇಶಗಳಿಂದ 'ಇಸ್ಲಾಮಿಕ್ ಭಯೋತ್ಪಾದನೆ' ಎಂಬುದಕ್ಕೆ ಪ್ರತಿಯಾಗಿ 'ಹಿಂದೂ ಭಯೋತ್ಪಾದನೆ' ಎಂಬ ಪರಿಕಲ್ಪನೆಯನ್ನು ಹುಟ್ಟುಹಾಕಲಾಗಿದೆ ಯಾದರೂ, ಅದರ ಪೊಳ್ಳುತನ ಬಯಲಾಗಿದೆ. ಸಾಹಿತ್ಯ ಕ್ಷೇತ್ರವಂತೂ ಇದರಿಂದ ಬಹುಮಟ್ಟಿಗೆ ದೂರವಾಗಿಯೇ ಉಳಿದಿದೆ. ಈ ವಿಚಾರವನ್ನು ವಿಶದಪಡಿಸುವುದಕ್ಕೆ ಮೊದಲು, ನವ-ರಾಷ್ಟ್ರೀಯತೆ '(Neo-nationalism) ಎಂಬ ಪರಿಕಲ್ಪನೆ ಬೆಳೆದುಬಂದಿರುವ ಪರಿಯನ್ನು, ಅದರ ಹಿಂದೆ ಅಡಗಿರುವ ವಿಚಾರಧಾರೆಯನ್ನು ತಿಳಿದುಕೊಳ್ಳುವುದು ಒಂದು ರೀತಿಯಲ್ಲಿ ಅಗತ್ಯವೇ ಆಗುತ್ತದೆ.

'ನವ-ರಾಷ್ಟ್ರೀಯತೆ (Neo/New nationalism) ಎಂಬುದು ೨೦೧೦ರ ದಶಕದ ಮಧ್ಯಾವಧಿಯಲ್ಲಿ, ವಿಶೇಷವಾಗಿ ಪಶ್ಚಿಮ ಯೂರೋಪಿನಲ್ಲಿ ಹಾಗೂ ಉತ್ತರ ಅಮೇರಿಕಾದಲ್ಲಿ ರೂಪುಗೊಂಡ ಪರಿಕಲ್ಪನೆ ಎಂದು ಹೇಳಲಾಗಿದೆ. ವಿದ್ವಾಂಸರೊಬ್ಬರ ಅಭಿಪ್ರಾಯದ ಮೇರೆಗೆ, ಜಾಗತಿಕ ಉದಾರವಾದಕ್ಕೆ (Global Liberalism)



ಪ್ರತಿರೋಧದ ರೂಪದಲ್ಲಿ ಮೂಡಿಬಂದ ಈ ವಿಚಾರಧಾರೆ ೨೦೧೬ರಲ್ಲಿ ಪಾಶ್ಚಾತ್ಯ ರಾಜಕೀಯ ಚಿಂತನೆಯ ಅತ್ಯಂತ ಪ್ರಭಾವಶಾಲಿ ಶಕ್ತಿಯಾಗಿ ಪರಿಣಮಿಸಿದೆ. ಈ ವಿಚಾರಧಾರೆಯ ಪ್ರಮುಖ ಅಂಶಗಳನ್ನು ಹೀಗೆ ಗುರುತಿಸಲಾಗಿದೆ. (೧) ಬಲಪಂಥೀಯ ಜನಪ್ರಿಯ ಘೋಷಣಾವಾದ (Right-wing populism), (೨) ಜಾಗತೀಕರಣ ವಿರೋಧಿತ್ವ (Anti-globalisation), (೩) ಸಹಜ ಜಾಯಮಾನ ಅಥವಾ ಪ್ರಾದೇಶಿಕ ವೈಶಿಷ್ಟ್ಯ (Nativism), (೪) ಆರ್ಥಿಕ ರಕ್ಷಣಾ ನೀತಿ (Protectionism), (೫) ವಲಸೆ-ವಿರೋಧಿತ್ವ (Opposition to Immigration), (೬) ಐರೋಪ್ಯ ಒಕ್ಕೂಟ ವಿರೋಧಿ ನಿಲುವು (ಅನ್ವಯವಾಗುವ ಸಂದರ್ಭಗಳಲ್ಲಿ) (Euro-scepticism). ಈ ಅಂಶಗಳು ಎದ್ದುಕಾಣುವ ಪ್ರಸಂಗಗಳೆಂದರೆ 'ಸಂಯುಕ್ತ ಸಾಮ್ರಾಜ್ಯದ (ಅಂದರೆ ಬ್ರಿಟನ್ನಿನ) ಐರೋಪ್ಯ ಒಕ್ಕೂಟದ ಸದಸ್ಯತ್ವದ ಬಗೆಗಿನ ಜನಾಭಿಪ್ರಾಯ ಸಂಗ್ರಹಣೆ' (United Kingdom European Union membership Referendum) ಅಮೇರಿಕಾ ಸಂಯುಕ್ತ ಸಂಸ್ಥಾನಗಳ ೪೫ನೇ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಅವರ ಆಯ್ಕೆ ಎಂದು ಕೂಡ ಹೇಳಲಾಗಿದೆ. ಜನಾಭಿಪ್ರಾಯ ಸಂಗ್ರಹಣೆಯ ಬಳಿಕ ಇಂಗ್ಲೆಂಡ್ ಆ ಯುರೋಪ್ಯ ಒಕ್ಕೂಟದಿಂದ ಹೊರಬಂದಿತಷ್ಟೆ. ಇದಕ್ಕೆ ಕಾರಣವಾಗಿದ್ದ ಪ್ರಮುಖ ಸಂಗತಿ ಎಂದರೆ ಇಂಗ್ಲೆಂಡಿನ ಹಿತಾಸಕ್ತಿಯ ರಕ್ಷಣೆ, ಅಂತೆಯೇ ಮೆಕ್ಸಿಕೋ ಗಡಿಯಲ್ಲಿ ಅಕ್ರಮ ಒಳನುಸುಳುವಿಕೆಯನ್ನು (Illegal immigration) ತಡೆಯುವ ಸಲುವಾಗಿ ತಡೆಗೋಡೆಯನ್ನು ನಿರ್ಮಿಸುವ ಅಮೇರಿಕಾ ಸಂಯುಕ್ತ ಸಂಸ್ಥಾನಗಳ ಯೋಜನೆ ಹಾಗೂ ಅಮೇರಿಕನ್ನರಿಗಾಗಿ ಅಮೇರಿಕಾ '(America for

Americans) ನೀತಿಯ ಅಂಗವಾಗಿ ವಲಸೆ ನೀತಿಯ ಮಾರ್ಪಾಟು ಇವು ಅಮೇರಿಕೆಯ ನವ-ರಾಷ್ಟ್ರೀಯತೆಯ ಅಂಗವಾಗಿರುವ ಕಾರ್ಯಕ್ರಮಗಳೇ ಆಗಿವೆ. ಇವುಗಳಲ್ಲಿಯೂ ರಾಷ್ಟ್ರೀಯ ಹಿತಾಸಕ್ತಿಯೇ ಪ್ರಧಾನವಾಗಿದೆ. ಭಾರತವೂ ಇಂಥ ಸಮಸ್ಯೆಗಳನ್ನು ಎದುರಿಸುತ್ತಿದೆ. ಅಸ್ಸಾಂ ಸೇರಿದಂತೆ, ಈಶಾನ್ಯ ಪ್ರಾಂತ್ಯದ ರಾಜ್ಯಗಳಲ್ಲಿನ ಹಲವಾರು ಸಮಸ್ಯೆಗಳಿಗೆ (ಇತರ ಕ್ಷೇತ್ರಗಳ ಜೊತೆಗೆ, ಬಾಂಗ್ಲಾ ದೇಶೀಯರ ಅಕ್ರಮ ಒಳನುಸುಳುವಿಕೆಯಿಂದ ಸ್ಥಳೀಯರೇ ಅಲ್ಪಸಂಖ್ಯಾತರಾಗಿಬಿಡುತ್ತಿರುವ ಭಯ!) ಕಾರಣವಾಗಿದೆ. ಈಚೆಗೆ ಮ್ಯಾನ್‌ಮಾರ್‌ನಿಂದ ಉಚ್ಚಾಟಿತರಾಗಿರುವ ರೋಹಿಂಗ್ಯಾಗಳು ಭಾರತಕ್ಕೆ ಸಾಮೂಹಿಕವಾಗಿ ನುಸುಳಿ ಬರುತ್ತಿರುವ ವಿದ್ಯಮಾನಕ್ಕೆ ತಡೆಯೊಡ್ಡುವುದು ಮಾತ್ರವಲ್ಲದೆ, ಆ ವಿದೇಶೀಯ ವಿಜಾತಿಯವರನ್ನು ದೇಶದಿಂದ ಹೊರಹಾಕಬೇಕೆಂಬ ಒತ್ತಡಕ್ಕೆ ಭಾರತ ಒಳಗಾಗಿದೆ. ಔದಾರ್ಯ ಮತ್ತು ಮಾನವೀಯತೆಯ ತತ್ತ್ವಗಳು ಭಾರತಕ್ಕೆ ಮಾತ್ರವೇ ಅನ್ವಯವಾಗಬೇಕೆ? ಪಾಕಿಸ್ತಾನವೂ ಸೇರಿದಂತೆ ಇತರ ಮುಸ್ಲಿಮ್ ರಾಷ್ಟ್ರಗಳು ಈ ದಿಕ್ಕಿನಲ್ಲಿ ಮುಂದೆ ಬರಬಾರದೇಕೆ? ಎಂಬ ಪ್ರಶ್ನೆಗಳನ್ನು ಹುಟ್ಟುಹಾಕಿವೆ. ಟಿಬೆಟ್ಟಿನ ನಿರಾಶ್ರಿತರಿಗೆ ನೆಲೆಯನ್ನು ಕಲ್ಪಿಸಿದ ಕ್ರಮದಿಂದಾಗಿ, ಭಾರತ ಎದುರಿಸುತ್ತ ಬಂದಿರುವ ಬಿಕ್ಕಟ್ಟುಗಳ ಬಗ್ಗೆ ಹೆಚ್ಚಿನ ಚರ್ಚೆ ಸದ್ಯಕ್ಕೆ ಅಪ್ರಕಟಿತವಾಗಿದೆ.

೧೨೨ / ನುಡಿಗಂಧ

ನವ-ರಾಷ್ಟ್ರೀಯತೆಯ ಪರಿಕಲ್ಪನೆ ಇನ್ನೊಂದು ದೃಷ್ಟಿಯಲ್ಲಿ ೧೯೪೫ರಿಂದ ೧೯೯೧ರ ವರೆಗೆ ಜಗತ್ತಿನ ಮೇಲೆ ಕವಿದುಕೊಂಡಿದ್ದ ಶೀತಲ ಸಮರದ (Cold war) ಭಯ ದೂರವಾಗಿ, ರಷ್ಯಾದಲ್ಲಿ ಗೋರ್ಬಚೇವ್ ಅವರು ಅಧಿಕಾರಕ್ಕೆ ಬಂದು, ಸುಧಾರಣಾ ಕ್ರಮಗಳನ್ನು ಕೈಗೊಂಡ ಹಾಗೂ ಕಬ್ಬಿಣದ ಪರದೆಯ ಹಿಂದಿನ ರಾಷ್ಟ್ರವೆಂಬ ಪ್ರಥೆಯನ್ನು ಕೊಡವಿಹಾಕಿದ ಪರಿಣಾಮವಾಗಿ ಕಾಣಿಸಿಕೊಂಡ ಬೆಳವಣಿಗೆ ಎಂಬುದಾಗಿಯೂ ಹೇಳಲಾಗಿದೆ. ಮೈಖೇಲ್ ಬ್ರೆಂಡನ್ ಡೌಗರ್ಟಿ ಅವರು 'The Week' ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಈ ಮಾತನ್ನು ಹೇಳಿದ್ದಾರೆ. "ನವ- ರಾಷ್ಟ್ರೀಯತೆ ಎಂಬುದು ಶೀತಲ ಸಮರೋತ್ತರ ರಾಜಕೀಯದ ವಿರುದ್ಧ ನಡೆದ ವಿಶಾಲವಾದ ಸಹಜ ಸಂವೇದನೆಯ ಒಂದು ಬಂಡಾಯವೇ ಆಗಿದೆ." ("Neo- nationalism' is a broad nativist revolt against post-cold war politics.") ಮೈಖೇಲ್ ಹಿರ್ಷ್ ಅವರೂ ಇದು "ಶೀತಲ ಸಮರೋತ್ತರ ಬೆಳವಣಿಗೆಯಾಗಿದ್ದು, ಅಂತರ-ರಾಷ್ಟ್ರೀಯ ವ್ಯವಸ್ಥೆಯ ಮೇಲೆ ಜಾಗತಿಕ ಸ್ತರದ ಗಣ್ಯರು ಹೊರಿಸಿರುವ ಯಥಾಸ್ಥಿತಿವಾದದ ಬಗೆಗಿನ ಕಟುವಾದ ಜನಸಾಮಾನ್ಯವಾದೀ ನಿರಾಕರಣೆಯೇ ಆಗಿದೆ ಹಾಗೂ ಈ ಯಥಾಸ್ಥಿತಿವಾದ ಅನ್ಯಾಯಪೂರ್ಣವಾದು ದೆಂದು ಕಡಿಮೆ ಆದಾಯ (ವರ್ಗಕ್ಕೆ ಸೇರಿ)ದ ಮತರದಾರರು ತೀರ್ಮಾನಿಸಿದ್ದಾರೆ" ಎಂದು ವರ್ಣಿಸಿದ್ದಾರೆ.

ಈ ನವ-ರಾಷ್ಟ್ರೀಯತೆಯನ್ನು ಜನಾಂಗೀಯ ಸ್ವರೂಪದ್ದೆಂದು ಭಾವಿಸುವುದು ಅರ್ಥಹೀನ ವಿಚಾರವೆಂದು ಡ್ಯಾಮೋನ್ ಲಿಂಕರ್ ಅವರು ಅಭಿಪ್ರಾಯಪಟ್ಟಿದ್ದಾರೆ. “ನವರಾಷ್ಟ್ರೀಯತೆಯನ್ನು ಜನಾಂಗೀಯತೆ, ಇಸ್ಲಾಮೀ ದ್ವೇಷ ಮತ್ತು ವಿದೇಶೀಯತೆ ದ್ವೇಷವಲ್ಲದೆ ಬೇರೇನೂ ಅಲ್ಲವೆಂದು ವರ್ಣಿಸುವುದು ಪ್ರಗತಿಶೀಲರ ಪ್ರವೃತ್ತಿಯೇ ಆಗಿಬಿಟ್ಟಿದೆ. ಯಾವುದೇ ಬಗೆಯ ಏಕನಿಷ್ಠೆಯ ಒಲವನ್ನು ಅಥವಾ ಐಕಮತ್ಯದ ಸ್ವರೂಪವನ್ನು ಅದು ರಾಷ್ಟ್ರೀಯವಾದುದಾಗಿರಲಿ, ಭಾಷಿಕವಾದುದಾಗಿರಲಿ, ಧಾರ್ಮಿಕವಾದುದಾಗಿರಲಿ, ಪ್ರಾದೇಶಿಕವಾದುದಾಗಿರಲಿ ಅಥವಾ ಜನಾಂಗೀಯವಾದು ದಾಗಿರಲಿ, ಅದನ್ನು ಅಶಾಸನಬದ್ಧವಾಗಿಸುವ ಬಯಕೆಯೇ ಆಗಿರುತ್ತದೆ.” 'The Week' ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಈ ಹಿನ್ನೆಲೆಯಲ್ಲಿ ಟ್ರಂಪ್ ಅವರು ತಮ್ಮ ನೀತಿಗಳು, ಇತರ ರಾಷ್ಟ್ರಗಳ ಸಂದರ್ಭದಲ್ಲಿ, ಅಸೂಯಾಪರ ರಾಷ್ಟ್ರೀಯತೆ ಎನ್ನಿಸಿಕೊಂಡುಬಿಡುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ. “ಹಾಗೆ ನೋಡಿದರೆ, ಸ್ವತಃ ರಾಷ್ಟ್ರೀಯತೆ ಎಂಬುದೇ ಒಂದು ಜಾರುನೆಲದ ಪರಿಕಲ್ಪನೆ ಯಾಗಿದ್ದು, ಅದನ್ನು ಸುಲಭವಾಗಿಯೇ ದುರುಪಯೋಗಪಡಿಸಿಕೊಳ್ಳಬಹುದಾಗಿದೆ... ನವರಾಷ್ಟ್ರೀಯತೆ ಎಂಬುದು ಕ್ರೋಧರೂಪಿಯೂ ನಿಯಂತ್ರಿಸಲು ಕಷ್ಟಸಾಧ್ಯವೂ ಆಗಿಬಿಡಬಹುದು. ಇದಕ್ಕೆ 'ಚೀಣೀ ರಾಷ್ಟ್ರೀಯತೆ” ಯನ್ನು ಉದಾಹರಣೆಯಾಗಿ ತೆಗೆದುಕೊಳ್ಳಬಹುದು.” ಎಂಬುದಾಗಿ The Economist ಪತ್ರಿಕೆ ಎಚ್ಚರಿಕೆಯ ಮಾತನ್ನೂ ಹೇಳಿದೆ. “(Neo-



nationalism (being) racist (is a) 'nonsense', it is the tendency of progressives to describe it as nothing but racism, islamophobia and xenophobia, (it)is the desire to delegitimize any particularistic attach- ment or form of solidarity, best national, linguistic, religious, territo- rial or ethnic. "(the week')... "Mr. Trump needs to realize that his policies will unfold in the context of other countries 'Jealous Nation- alism', and called nationalism itself a 'slippery concept' that is easy to manipulate... New Nationalism could be 'angry' and 'difficult to control', citing chinese Nationalism as an example." ("The Econo- mist')

'ನಮ್ಮ ರಾಷ್ಟ್ರೀಯತೆ' ಯ ಪರಿಕಲ್ಪನೆಯೊಂದಿಗೆ ಬೆಸೆದುಕೊಂಡಿರುವ ಪ್ರಮುಖ ರಾಷ್ಟ್ರಗಳೆಂಬುದಾಗಿ ಚೀಣಾ, ಹಾಂಗ್‌ಕಾಂಗ್, ಜಪಾನ್, ಫಿಲಿಪ್ಪೈನ್ಸ್, ಪೋಲೆಂಡ್, ರಷ್ಯ, ತುರ್ಕಿ, ಸಂಯುಕ್ತ ಸಾಮ್ರಾಜ್ಯ (ಬ್ರಿಟನ್) ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳನ್ನು ಹೆಸರಿಸಲಾಗಿದೆ. ಇತರ ರಾಷ್ಟ್ರಗಳನ್ನು ೧೦ನೆಯ ಕ್ರಮಾಂಕದಲ್ಲಿ ಇರಿಸಲಾಗಿದೆ. ಚೀಣಾದ ನೇತಾರರಾಗಿರುವ ಕ್ಸಿ ಜಿನ್‌ಪಿಂಗ್ ಅವರ ಚೀಣಾದ ಕನಸನ್ನು 'ನವ-ರಾಷ್ಟ್ರೀಯತೆಯ ಅಭಿವ್ಯಕ್ತಿ' ಎಂದೇ ಭಾವಿಸಲಾಗಿದೆ. ಹಾಂಗ್‌ಕಾಂಗ್‌ನ ನವ ರಾಷ್ಟ್ರೀಯತೆಗೆ ಸ್ಥಳೀಯ ಅಭಿಯಾನವೇ (Localist movement) ಕಾರಣವೆನ್ನಲಾಗಿದೆ. ಜಪಾನಿನ ೬೩ನೆಯ (ಹಾಗೂ ೨೦೧೨ರಲ್ಲಿನ) ಪ್ರಧಾನ ಮಂತ್ರಿ ಶಿಂಜೋ ಅಜಿ,

ಫಿಲಿಪೈನ್ಸ್‌ನ ಅಧ್ಯಕ್ಷ ರಾಡ್ರಿಗೋ ಡ್ಯೂಟರ್ಟೆ, ಪೋಲೆಂಡಿನ ಆರನೆಯ (ಹಾಗೂ ೨೦೧೫ರಲ್ಲಿನ) ರಾಷ್ಟ್ರಾಧ್ಯಕ್ಷ ಆಂಡಿಜೇಜ್ ದೂದಾ ಹಾಗೂ ರಷ್ಯಾದ (ಎರಡನೆಯ ಹಾಗೂ ನಾಲ್ಕನೆಯ) ರಾಷ್ಟ್ರಾಧ್ಯಕ್ಷ ವಾಡಿಮೀ ಪುತಿನ್ ಅವರುಗಳನ್ನು ನವ ರಾಷ್ಟ್ರೀಯತೆ'ಯ ಪ್ರವರ್ಧಕರೆಂದೂ, ಹರಿಕಾರರೆಂದೂ ಹೊಗಳಲಾಗಿದೆ. The Fi nancial Times' ಪತ್ರಿಕೆಯ ಮಾಸ್ಕೋ ಕಾರ್ಯಾಲಯದ ಮುಖ್ಯಸ್ಥರಾದ ಚಾರ್ಲ್ಸ್ ಕೋವರ್ ಅವರು ರಷ್ಯಾದ ನವರಾಷ್ಟ್ರೀಯತೆಯನ್ನು ಕುರಿತಂತೆ ೨೦೧೬ರಲ್ಲಿ Black wind, white snow: The Rise of Russias New Nationalism Dow ಮಹತ್ವದ ಗ್ರಂಥವನ್ನು ಹೊರತಂದಿದ್ದಾರೆ.

ಐರೋಪ್ಯ ಒಕ್ಕೂಟದಿಂದ ಬ್ರಿಟನ್ ಹೊರಬಂದಿದ್ದು ಹಾಗೂ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಅಧ್ಯಕ್ಷರಾಗಿ ಟ್ರಂಪ್ ಅವರು ಚುನಾಯಿತರಾದದ್ದು, ಈ ಘಟನೆಗಳಿಗೆ ಚೋದಕ ಶಕ್ತಿಯಾಗಿದ್ದ ಸಂಗತಿಗಳೆಂದರೆ "ವಲಸೆಯನ್ನು ನಿಯಂತ್ರಿಸಬೇಕೆಂಬ ಹಂಬಲ, ಜಾಗತೀಕರಣವನ್ನು ಹಿಮ್ಮೊಗವಾಗಿಸುವ ಆಶಯ ಹಾಗೂ ರಾಷ್ಟ್ರದ ಹಿರಿಮೆಯನ್ನು ಪುನರ್‌ಸ್ಥಾಪಿಸಬೇಕೆಂಬ ಧ್ಯೈಯ" ಎಂಬುದಾಗಿ ಒವೆನ್ ಮ್ಯಾಥ್ಸ್ ಗುರುತಿಸಿದ್ದಾರೆ. ('News Week' 3). (..."a yearning to control immigration, re- verse globalization and restore national greatness.....") "ಪಾಶ್ಚಾತ್ಯ



ಪ್ರಪಂಚವನ್ನು ಸೂರೆಗೊಂಡ ನವ-ರಾಷ್ಟ್ರೀಯತೆಯ ದೃಷ್ಟಿಯಿಂದ, ಬ್ರಿಟನ್ ಐರೋಪ್ಯ ಒಕ್ಕೂಟದಿಂದ ಹೊರಬಂದದ್ದು ಪಾಶ್ಚಾತ್ಯ ಪ್ರಪಂಚವನ್ನು ಅತಿಯಾಗಿ ಬೆಚ್ಚಿಬೀಳಿಸುವಂಥ ಯಶಸ್ಸಾಗಿತ್ತು" ಎಂದು ಮ್ಯಾಥ್ಯ ಓಬ್ರಿಯೆನ್ ದಾಖಲಿಸಿದ್ದಾರೆ. (...the most shocking success for the new nationalism sweeping the western world") ಈ ಅಭಿಯಾನದ ನೇತಾರರಾಗಿದ್ದ ನಿಗೆಲ್ ಫಾರೇಜ್, ಬೋರಿಸ್ ಜಾನ್‌ಸನ್ ಅವರನ್ನು 'ನವ-ರಾಷ್ಟ್ರೀಯವಾದಿ'ಗಳೆಂದು ಹೆಸರಿಸಲಾಗಿದೆ. ಅಷ್ಟೇ ಅಲ್ಲ, 'Breitport News' ಪತ್ರಿಕೆಯ ಕಾರ್ಯನಿರ್ವಹಣಾಧಿಕಾರಿಯಾಗಿದ್ದ ಸ್ಟೀವ್ ಬ್ಯಾನನ್ ಅವರನ್ನು ಅಮೆರಿಕಾ ಸಂಯುಕ್ತ ಸಂಸ್ಥಾನಗಳ ರಾಷ್ಟ್ರಾಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ರಾಯಭಾರ ಕಛೇರಿಯ ಹಿರಿಯ ಅಧಿಕಾರಿಯಾಗಿ ನೇಮಿಸಿದ್ದು, 'ಹೊಸ ಜಾಗತಿಕ ವ್ಯವಸ್ಥೆ'ಗೆ (new world order) ಪ್ರೇರಕವಾದ ಸಂಗತಿಯಾಗಿದೆ. ದೇಶಭಕ್ತಿ ಹಾಗೂ ನಿಮ್ಮದೇ ಆದ ಹಿತಾಸಕ್ತಿಗಳನ್ನು ಕಾಯ್ದುಕೊಳ್ಳುವ ತೀವ್ರವಾದ ಅಭೀಷ್ಟೆಯಿಂದ ಚೋದಿತವಾಗಿರುವ ವ್ಯವಸ್ಥೆಯನ್ನು ನವ-ರಾಷ್ಟ್ರೀಯತೆ ರೂಪಿಸಲಿದೆ. ಇದು ಅವಿರತವಾಗಿ ಮುಸ್ಲಿಮರಿಗೆ ಕಳಂಕವನ್ನು ಹಚ್ಚುತ್ತದೆ, ಮುಕ್ತ ವ್ಯಾಪಾರ ಮತ್ತು ಜಾಗತೀಕರಣದ ಪ್ರಕ್ರಿಯೆಯ ಗಡಿಯಾರವನ್ನು ಹಿಮ್ಮುಖವಾಗಿಸಲು ಪ್ರಯತ್ನಿಸುತ್ತದೆ. ಇದರಲ್ಲಿ ವ್ಯವಹಾರ ಕೌಶಲ

ಮತ್ತು ಹೊಂದಾವಣೆಗಿಂತಲೂ ಹೆಚ್ಚಾಗಿ ಸೈನಿಕ ಶಕ್ತಿಯೇ ಪ್ರಧಾನವಾಗಿ ಪರಿಣಮಿಸುತ್ತದೆ. ("....arousal of a new world order, driven by patriotism and a fierce urge to look after your own, a neo-nationalism that endlessly smears muslims and strives to turn back the clock on free trade and global- ization, a world where military might counts for far more than diplo- macy and compromise.”). ಇದಕ್ಕೆ ಕಾರಣವೇನೆಂದರೆ ಸ್ಟೀವ್ ಬ್ಯಾನನ್ ಅವರು ವಲಸೆಯನ್ನು ಕಡಿಮೆಯಾಗಿಸುವ ಹಾಗೂ (ಚೀಣಾ ಮತ್ತು ಮೆಕ್ಸಿಕೋ ದೇಶಗಳೊಂದಿಗೆ ನಡೆಯುತ್ತಿದ್ದ) ಮುಕ್ತ ವ್ಯಾಪಾರದ ಪ್ರಕ್ರಿಯೆಯ ಮೇಲೆ ನಿರ್ಬಂಧಗಳನ್ನು ವಿಧಿಸಬೇಕೆಂಬ ವಿಚಾರವನ್ನು ಒತ್ತಿಹೇಳುತ್ತಿದ್ದುದು. ಈ ಒತ್ತಿನಿಂದಾಗಿಯೇ ಇದನ್ನು ಅರ್ಥಶಾಸ್ತ್ರೀಯ ನವ-ರಾಷ್ಟ್ರೀಯತೆ' ಎಂದೂ ಹೆಸರಿಸಲಾಗಿದೆ.

ಈ ಚರ್ಚೆಯನ್ನು ಗಮನಿಸಿದರೆ, ನವ ರಾಷ್ಟ್ರೀಯತೆ ಎಂಬುದು ಸಾಹಿತ್ಯಕ್ಕೆ ಪ್ರೇರಕವೂ, ಪೋಷಕವೂ ಆಗಿರುವುದಕ್ಕಿಂತ ಹೆಚ್ಚಾಗಿ ದೇಶಭಕ್ತಿಮುಖಿಯಾದ ಹಾಗೂ ರಾಷ್ಟ್ರೀಯ ಹಿತಾಸಕ್ತಿ ಪ್ರಧಾನವಾದ ಆರ್ಥಿಕ ಚಿಂತನೆಯನ್ನು ಒಳಗೊಂಡಿರುವ ಒಂದು ಜಾಗತಿಕ ಬೆಳವಣಿಗೆಯಾಗಿದೆ ಎಂಬುದು ಸ್ಪಷ್ಟವಾಗುತ್ತದೆ. ಈ ಕಾರಣದಿಂದಾಗಿಯೇ ಭಾರತವೂ ಸೇರಿದಂತೆ ಈಜಿಪ್ಟ್, ಫ್ರಾನ್ಸ್, ಡಚ್, ಕೆನಡಾ, ಇಸ್ರೇಲ್, ಆಸ್ಟ್ರಿಯಾ, ಕೀನ್ಯಾ, ಪ್ಲೊವಾಕಿಯಾ, ಹಂಗರಿ, ಇಟಲಿ, ಜೆಕ್, ಫಿನ್ಲೆಂಡ್, ಲಾಟ್ವಿಯಾ, ಸ್ವಿಜರ್ಲ್ಯಾಂಡ್, ಸ್ವೀಡನ್, ಜರ್ಮನಿ, ಆಸ್ಟ್ರೇಲಿಯ ದೇಶಗಳೂ ಈ ದಿಕ್ಕಿನಲ್ಲಿ ಮುನ್ನಡೆಯತೊಡಗಿದ್ದು, ಇವನ್ನು ನವ-ರಾಷ್ಟ್ರೀಯತಾವಾದಿ ದೇಶಗಳ ಪಟ್ಟಿಗೆ ಸೇರಿಸಲಾಗಿದೆ. ಈ ರೀತಿ ಆರ್ಥಿಕಾಭಿವೃದ್ಧಿ ನಿಷ್ಠೆ ಸ್ವಾಭಿಮಾನಿ ದೇಶಪ್ರೇಮಿ ರಾಷ್ಟ್ರಗಳ ಪಥದಲ್ಲಿ ನಮ್ಮ ರಾಷ್ಟ್ರವನ್ನೂ



ಮುನ್ನಡೆಸಬಯಸುತ್ತಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ನವ- ರಾಷ್ಟ್ರೀಯತಾವಾದಿ '(Neo-nationalist) ಎಂದೇ ಸಂಬೋಧಿಸಲಾಗುತ್ತಿದೆ ಎಂಬುದೂ ಗಮನಾರ್ಹವಾದ ಸಂಗತಿ.

ಭಾರತ ಎಂದಿನಿಂದಲೂ ಧಾರ್ಮಿಕ ಸಾಮಾಜಿಕ ಸಾಮರಸ್ಯದ ಪ್ರತೀಕ ವಾಗಿಯೇ ಉಳಿದು ಬೆಳೆಯುತ್ತ ಬಂದಿದೆ. ಅಲ್ಲಲ್ಲಿ ಧರ್ಮಾಂಧ ವ್ಯಕ್ತಿಗಳ ಮತ್ತು ಸಂಘಟನೆಗಳ ಅದೂರದೃಷ್ಟಿ ಪ್ರೇರಿತವಾದ ಕೆಲವೊಂದು ಘಟನೆಗಳು ಆಗಾಗ್ಗೆ ನಡೆಯುತ್ತ ಇದ್ದರೂ. ಇಂಥ ಪ್ರಸಂಗಗಳ ನಿದರ್ಶನಗಳನ್ನು ಪುನರಾವರ್ತಿಸುವ ಹಾಗೂ ಅಂಥ ಘಟನೆಗಳ ಹಿಂದಿರುವ ಕಾರಣಗಳನ್ನು ವಿಶ್ಲೇಷಿಸುವ ಅಗತ್ಯವೇನೂ ಇಲ್ಲ. ಆದರೆ, ಈ ನವ- ರಾಷ್ಟ್ರೀಯತೆ ಎಂಬ ಪರಿಕಲ್ಪನೆಯ ಪ್ರಮುಖ ಅಂಶಗಳಲ್ಲಿ ಸೇರಿರುವ ದೇಶಪ್ರೇಮ, ಉದಾರ ದೃಷ್ಟಿಕೋನ, ರಾಷ್ಟ್ರದ ಹಿರಿಮೆ, ಮಾನವೀಯ ಮೌಲ್ಯಗಳು, ಧಾರ್ಮಿಕ- ಸಾಮಾಜಿಕ ಸಾಮರಸ್ಯದ ಮಹತ್ವದಂಥ ವಿಚಾರಗಳು ಇಂಥ ಘೋಷಣೆಗಳು ಜಾಗತಿಕ ನೆಲೆಯಲ್ಲಿ ಪ್ರತಿಧ್ವನಿಸುವುದಕ್ಕೂ ಮೊದಲೇ ಅನಾದಿಕಾಲದಿಂದಲೂ ಅನುಷ್ಠಾನಕ್ಕೆ ಬರುತ್ತಬಂದಿವೆ. ನಮ್ಮ ಸಾಹಿತ್ಯದಲ್ಲಿಯೂ ಅನುರಣನಗೊಳ್ಳುತ್ತ ಇವೆ, ಅಂಥ ಆದರ್ಶಗಳ ಪ್ರತಿಷ್ಠಾಪನೆಯೂ ಆಗುತ್ತಲೇ ಬಂದಿದೆ. ನಮ್ಮ ಭಾಷೆಯ ಆಧುನಿಕ

ಕವಿ-ಸಾಹಿತಿಗಳು ಇವನ್ನು ಪ್ರತಿಪಾದಿಸುತ್ತ, ಎತ್ತಿ ಹಿಡಿಯುತ್ತ ಬಂದಿದ್ದಾರೆ. ಎಲ್ಲ ಬಗೆಯ ವೈವಿಧ್ಯಗಳ ನಡುವೆಯೂ, ಏಕತೆಯ ಮಂತ್ರ ಉದ್ಘೋಷಿತವಾಗುತ್ತಲೇ ಬಂದಿದೆ.

ಮೊದಲಿಗೆ ಕುವೆಂಪು ಅವರ ಈ ಮಾತುಗಳನ್ನು ಗಮನಿಸಬಹುದು: "ನಾನು ರಾಜ್ಯದ ದೃಷ್ಟಿಯಿಂದ ಕರ್ನಾಟಕದವನು. ಭಾಷಾದೃಷ್ಟಿಯಿಂದ ಕನ್ನಡದವನು. ಆದರೆ ಸಂಸ್ಕೃತಿಯ ದೃಷ್ಟಿಯಿಂದ ಭಾರತೀಯನು. ನನ್ನ ಕರ್ನಾಟಕತ್ವ ಎಂದಿಗೂ ಭಾರತೀಯತ್ವಕ್ಕೆ ಅವಿರುದ್ಧವಾಗಿ ನಿಲ್ಲುತ್ತದೆ. ಕರ್ನಾಟಕ ಮಾತೆಗೆ ಜಯಘೋಷ ಮಾಡುವಾಗಲೆಲ್ಲ, ಆಕೆ ಭಾರತ ಜನನಿಯ ತನುಜಾತೆ ಎಂದು ಘೋಷಿತಳಾಗುತ್ತಾಳೆ." (ಸ.ಗ.ಸಂ.೨, ಪು.೩೭೭)

"ಜಯ್ ಭಾರತ ಜನನಿಯ ತನುಜಾತೆ / ಜಯ ಹೇ ಕರ್ನಾಟಕ ಮಾತೆ" ಎಂಬ ಅವರ ಈ ನಾಡಗೀತೆಯ ಮೊದಲ ಪಂಕ್ತಿಗಳಲ್ಲಿ ಈ ಭಾವ ಮೊಳಗಿರುವುದು ಕನ್ನಡಿಗರೆಲ್ಲರಿಗೂ ಚಿರಪರಿಚಿತವಾಗಿರುವ ಸಂಗತಿ, ನನಗೆ ತಿಳಿದಿರುವಂತೆ, ಭಾರತದ ಬೇರಾವ ಭಾಷೆಯ ಸಾಹಿತಿಯೂ ಈ ಮನೋಭಾವವನ್ನು ಸಾಹಿತ್ಯ ರೂಪದಲ್ಲಿ ಮೊಳಗಿಸಿಲ್ಲ. ಇದು ಕನ್ನಡಿಗರ ಹಿರಿಮೆ.

ವಿಶ್ವಸಂಸ್ಥೆಯ ಸ್ಥಾಪನೆಯಾದ ಬಳಿಕ, ೧೯೪೮ರಲ್ಲಿ ಮಾನವೀಯ ಹಕ್ಕುಗಳನ್ನು ಸಂರಕ್ಷಿಸುವ ಮತ್ತು ಎತ್ತಿಹಿಡಿಯುವ ಘೋಷಣೆಯನ್ನು ತನ್ನ ಸಂಕಲ್ಪವಾಗಿ ಸ್ವೀಕರಿಸಿತು. ಸರಿಸುಮಾರು ಆ ಕಾಲದಲ್ಲಿಯೇ ಬರ್ಟ್ರೆಂಡ್ ರಸೆಲ್ 'ವಿಶ್ವನಾಗರಿಕ'ನ (World



citizen) ಹಾಗೂ ರವೀಂದ್ರರು 'ವಿಶ್ವಮಾನವ'ನ (Universal Man) ಪರಿಕಲ್ಪನೆಗಳನ್ನು ಮುಂದಿರಿಸಿದ್ದರು. ಕುವೆಂಪು ಅವರೂ ವಿಶ್ವಮಾನವ ಸಂದೇಶವನ್ನು, ಅದರ ಪಂಚಮಂತ್ರಗಳನ್ನು ಹಾಗೂ ಸಪ್ತಸೂತ್ರಗಳನ್ನು ಪ್ರಕಟಿಸಿದ್ದಾರೆ. 'ಮನುಜಮತ', 'ವಿಶ್ವಪಥ', 'ಸರ್ವೋದಯ', 'ಸಮನ್ವಯ' ಮತ್ತು 'ಪೂರ್ಣದೃಷ್ಟಿ'- ಇವೇ ಆ ಪಂಚಮಂತ್ರಗಳು. 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬುದನ್ನು ನಿರುಪಾಧಿಕ ವಾಗಿ ಸ್ವೀಕರಿಸಬೇಕು, ವರ್ಣಾಶ್ರಮವನ್ನು ಸಂಪೂರ್ಣವಾಗಿ ತೊಲಗಿಸಬೇಕು, ಜಾತಿ ಪದ್ಧತಿಯನ್ನು ವಿನಾಶಗೊಳಿಸಬೇಕು, 'ಮತ' ತೊಲಗಿ 'ಅಧ್ಯಾತ್ಮ' ಮಾತ್ರ ಮಾನ್ಯತೆ ಪಡೆಯಬೇಕು, ಮತ 'ಮನುಜಮತ'ವಾಗಬೇಕು, ಪಥ 'ವಿಶ್ವಪಥ' ವಾಗಬೇಕು, ಮನುಷ್ಯ 'ವಿಶ್ವಮಾನವ'ನಾಗಬೇಕು. ಮತ ಗುಂಪುಕಟ್ಟುವ ವಿಷಯವಾಗಬಾರದು, ಯಾವ ಒಂದು ಗ್ರಂಥವೂ ಏಕೈಕ ಪರಮಪೂಜ್ಯ" ಧರ್ಮಗ್ರಂಥವಾಗಬಾರದು. ಇವೇ ಆ ಸಪ್ತಸೂತ್ರಗಳು. ಹೀಗೆ ದೇಶಧರ್ಮ ಮತ್ತು ಸಮಾಜದ ವಿಷಯದಲ್ಲಿ ನಮ್ಮ ನಿಲುವು ಏನಾಗಿರಬೇಕೆಂಬುದನ್ನು ಕುವೆಂಪು ಸ್ಪಷ್ಟಪಡಿಸಿದ್ದಾರೆ ಮಾತ್ರವಲ್ಲ, ಹೊಸ ದಾರಿಯನ್ನು

ತೋರಿದ್ದಾರೆ. ಮತೀಯ ಗ್ರಂಥಗಳ ಬಗೆಗಿನ ಪ್ರಶ್ನಾತೀತವಾದ ಬದ್ಧತೆಯನ್ನೇ ನವ್ಯ ರಾಷ್ಟ್ರೀಯತೆಯ ಲಕ್ಷಣಗಳಲ್ಲಿ ಸಮಾವೇಶಗೊಳಿಸಿರುವ ನಿಲುವಿನಿಂದ ಯಾವ ಎತ್ತರದ, ಉದಾತ್ತ ಧ್ಯೈಯ ಇದು ಎಂಬುದನ್ನು ಬಿಡಿಸಿ ಹೇಳಬೇಕಾದ ಅಗತ್ಯವೇನೂ ಇಲ್ಲ.

ದೇವರ ಬಗೆಗಿನ ಕಲ್ಪನೆಯನ್ನು ದೇಶಪ್ರೇಮದೊಂದಿಗೆ ಸಮೀಕರಿಸಿ, ಅದಕ್ಕೊಂದು ಹೊಸ ಆಯಾಮವನ್ನು ಕಲ್ಪಿಸಿದ ಹಿರಿಮೆಯೂ ಕುವೆಂಪು ಅವರದಾಗಿದೆ. ಇದು ಬಂಕಿಮರ 'ವಂದೇ ಮಾತರಮ್'ನ ಮುಂದಿನ ಹೆಜ್ಜೆಯಾಗಿದೆ.

"ನೂರು ದೇವರನೆಲ್ಲ ನೂಕಾಚೆ ದೂರ

ಭಾರತಾಂಬೆಯ ದೇವಿ ನಮಗಿಂದು

ಪೂಜಿಸುವ ಬಾರ!

ಭಾರತಿಯ ನಮಗಿಂದು ಜೀವನದ ದೇವತೆಯು,

ವಿಶ್ವರೂಪಿಣಿಯವಳು, ವಿಶ್ವಮುಖಿದ್ಯೆ!"

(ಕು.ಸ.ಕಾವ್ಯ, ಸಂಪುಟ-೧: ಪು.೧೪೪-೪೫)

ಅಷ್ಟೇ ಅಲ್ಲ, ಸಮರ್ಪಣೆಯ ಈ ಭಾವವನ್ನು ಅದರ ಉನ್ನತ ನೆಲೆಗೆ ಕೊಂಡೊಯ್ಯುವುದೂ ಅವರ ದೇಶಪ್ರೇಮದ ಆಳ-ವಿಸ್ತಾರಗಳನ್ನು ಎತ್ತಿ ತೋರಿಸುತ್ತದೆ. ಏಕೆಂದರೆ ಅದರಲ್ಲಿಯೇ ಅವರು ಬಾಳಿನ ಧನ್ಯತೆಯನ್ನು ಕಾಣುತ್ತಾರೆ.

"ಭಾರತಾಂಬೆಯೆ, ಜನಿಸಿ ನಿನ್ನೊಳು ಧನ್ಯನಾದೆನು ದೇವಿಯೇ

ನಿನ್ನ ಸೇವೆಯೊಳಳಿವ ಭಾಗ್ಯಕೆ/ಸಕಲ ಭಾಗ್ಯವ ತೊರೆವೆನು!

ಅದೇ, ಪು.೧೦೫)

ರವೀಂದ್ರರು ದೇವರ ಕಲ್ಪನೆಗೆ ಇನ್ನೊಂದು ಹೊಸ ಆಯಾಮವನ್ನು ನೀಡಿದರು. ದೇವರನ್ನು ಎಲ್ಲಿ, ಯಾರಲ್ಲಿ ಕಾಣಬೇಕೆಂಬುದನ್ನು ಅವರು ಗೀತಾಂಜಲಿಯ ಒಂದು ಗೀತದಲ್ಲಿ ಹೀಗೆ ಸಾರಿ ಹೇಳಿದ್ದಾರೆ.

"Leave this chanting and singing

and telling of beads!

Whom dost thou worship in this

londely dark corner of a

temple with doors all shut?

Open thine eyes and see thy

God is not before thee!

He is there where the tiller is

tilling the hard ground

and where the path maker

is breaking stones...."(ಪದ್ಯ ೧೧)

(ಇದರ ಕನ್ನಡ ಅನುವಾದಕ್ಕಾಗಿ ನೋಡಿ : ಗೀತಾಂಜಲಿ: ಅನು:ಎಂ.ಆರ್.ಸಿ. ನಾಗರಾಜನ್, ಪ್ರ: ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು.೧೩೧)

ಇದೇ ಭಾವವನ್ನು ಜಿ.ಎಸ್.ಶಿವರುದ್ರಪ್ಪನವರ ಈ ಕವಿತೆಯಲ್ಲಿಯೂ ಕಾಣಬಹುದಾಗಿದೆ.

"ಎಲ್ಲೋ ಹುಡುಕಿದೆ ಇಲ್ಲದ ದೇವರ

ಕಲ್ಲುಮಣ್ಣುಗಳ ಗುಡಿಯೊಳಗೆ."

ಬದಲಾಗಿರುವ ಕಾಲದಲ್ಲಿ ದೇವರ ಬಗೆಗಿನ ನಮ್ಮ ಕಲ್ಪನೆಗಳೂ ಬದಲಾಗ ಬೇಕಾಗಿರುವ ಚಿಂತನೆ ಗಾಂಧೀಜಿಯವರನ್ನು ಕುರಿತ ಕುವೆಂಪು ಅವರ 'ಸಭ್ಯತಾ ದೇವತೆ' ಎಂಬ ಕವನದಲ್ಲಿ ಹೀಗೆ ಅನಾವರಣಗೊಂಡಿದೆ.

"ವೈಚಿತ್ರ್ಯವನೆ ದೇವರೆಂದೆಂಬುವಾ ಕಾಲ

ಒಂದಿತ್ತು. ಮತ್ಸಕೂರಾದಿ ನರಸಿಂಹರನು

ಭಯ ಭಕ್ತಿಯಿಂ ಪೂಜಿಸುವ ಕಾಲವೊಂದಿತ್ತು.

ರಾಜದರ್ಪದಲಿ, ಅಧಿಕಾರದಲಿ, ಕೌಲ್ಯದಲಿ,

ಶಕ್ತಿ ಬಲ ಯುಕ್ತಿ ಸಿರಿ ಮೇಣ್ ಅಹಂಕಾರದಲಿ

ದೇವತ್ವವನ್ನು ಕಾಣುವಾ ಕಾಲವೊಂದಿತ್ತು.

ಆ ಅನಾಗರಿಕ ಮಾನವ ದೇವಭಾವಗಳ್

ಇಂದು ದೂರಾಗುತಿವೆ. ಮಾನವನ ಅಭ್ಯುದಯ



ಶ್ರೇಯಸ್ಸುಗಳಿಗಾಗಿ ನೊಂದವರ್, ಬೆಂದವರ್,

ಮನುಜರಂತೆಯೇ ಬಾಳಿ ಹೋರಾಡಿ ಸಂದವರ್,

ರಾಜ್ಯ ಭೋಗ ತ್ಯಾಗದಮಲ ವೈರಾಗಿಗಳ್,

ಮನುಜ ತನುಜ ಇಂದು, ಕ್ರಿಸ್ತ ಬುದ್ಧಾದಿಗಳೆ

ಮಾನವರ ಪೂಜೆ ಗೌರವಗಳನ್ನು ಕೈಕೊಳ್ಳ

ದೇವತೆಗಳಾಗುವಾ ಕಾಲವೈತಂದಿಹುದು...”

(ಪೂರ್ವೋಕ್ತ, ಪು.೬೦೫)

ನಮ್ಮ ನಾಡಿನ ವಿಭೂತಿಗಳ ಈ ಬಗೆಯ ಹೊಸ ಆಯಾಮದ ಚಿಂತನೆಗಳನ್ನು ಕಂಡಾಗ, ನವ-ರಾಷ್ಟ್ರೀಯತೆಯ ಬಗೆಗಿನ ಪಾಶ್ಚಾತ್ಯ ಚಿಂತನೆಗಿಂತ ಭಾರತೀಯ ಪ್ರಾಚೀನ ಮತ್ತು ಅರ್ವಾಚೀನ ಚಿಂತನೆಗಳು ಎಷ್ಟರಮಟ್ಟಿಗೆ ಕಾಲಾತೀತವಾಗಿ, ಆದರ್ಶಪ್ರಾಯವಾಗಿ ಬೆಳೆದುನಿಂತಿವೆ ಎಂಬ ಅರಿವಾಗದೆ ಇರದು. ನಾಗರಿಕತೆಯ ಆರಂಭದ ಯುಗದಿಂದಲೂ ನಮ್ಮ ನಾಡಿನ ವೇದೋಪನಿಷತ್ತುಗಳು, ಮಹಾಕಾವ್ಯಗಳು ಜಗತ್ತಿಗೆ ಹೊಸ ಬೆಳಕನ್ನು, ಹೊಸ ಹಾದಿಯನ್ನು ತೋರುತ್ತ ಬಂದಿರುವಂತೆ, ಅರ್ವಾಚೀನ ಚಿಂತನೆಯ ಹಲವು ಕ್ಷೇತ್ರಗಳಲ್ಲಿಯೂ ಭಾರತೀಯ ಚಿಂತನೆ ಕೇವಲ ಅನುಕರಣಶೀಲವಾಗಿರದೆ, ಮೌಲಿಕವೂ, ಸ್ವತಂತ್ರವೂ, ಬಹು ಆಯಾಮಪೂರ್ಣವೂ ಆಗಿದೆ

ಎಂಬುದಕ್ಕೆ 'ನವ-ರಾಷ್ಟ್ರೀಯತೆ'ಯ ಬಗೆಗಿನ ಚಿಂತನೆಯೂ ಇನ್ನೊಂದು ನಿದರ್ಶನವನ್ನು ಒದಗಿಸುತ್ತದೆ ಎಂದು ಧೈರ್ಯವಾಗಿ ಹೇಳಬಹುದು. ಅಸ್ತು.

## ಅಸಹಿಷ್ಣುತೆ - ವಿಷಮ ವಿಸ್ತಾರ

**ಡಾ. ವೀರಣ್ಣ ದಂಡೆ**

**ಅಸಹಿಷ್ಣುತೆ ಎಂಬುದು ಒಂದು ಮಾನಸಿಕ ಸಂಕೀರ್ಣತೆ**

ಅಸಹಿಷ್ಣುತೆ ಎಂಬುದು ಒಂದು ಮಾನಸಿಕ ಸಂಕೀರ್ಣತೆ. ಇದು ಮನಸ್ಸಿನ ಅಸಹನೆಯ ವ್ಯಕ್ತರೂಪವಾಗಿರುತ್ತದೆ. ಇನ್ನೊಬ್ಬರ ಏಳಿಯನ್ನು ಸಹಿಸಿಕೊಳ್ಳದೆ, ಎಲ್ಲದರಲ್ಲೂ ತಾನೇ ಗೆಲ್ಲಬೇಕೆಂಬ ಜಿದ್ದು, ತನ್ನದೇ ಶ್ರೇಷ್ಠವಾದುದೆಂಬ ವಾಂಛ, ತನಗೆ ಏನನ್ನೂ ಸಾಧಿಸಲು ಸಾಧ್ಯವಾಗದ ದೌರ್ಬಲ್ಯ, ತಾನು ಕೈಲಾಗದವ, ನಿಷ್ಪ್ರಯೋಜಕ ಎಂದು ಸಮಾಜದ ಕಣ್ಣಿಗೆ ಕಾಣಿಸಿಕೊಳ್ಳಲು ಇಷ್ಟವಿಲ್ಲದವರು ವ್ಯಾಕುಲತೆಗೆ (ಒಂದು ಬಗೆಯ ಭೀತಿ) ಒಳಗಾಗುತ್ತಾರೆ. ಈ ಮಾನಸಿಕ ಸಂಕೀರ್ಣತೆಯೇ ಘರ್ಷಣೆಗೆ ದಾರಿಮಾಡಿಕೊಡುತ್ತದೆ. ಇಂತಹ ಮಾನಸಿಕ ಸಂಕೀರ್ಣತೆಗೆ ಒಳಗಾದವನು ರೂಪಿಸುವ ಷಡ್ಯಂತ್ರ, ಕುತಂತ್ರ, ಹತ್ಯೆ- ಈ ಮುಂತಾದುವೆಲ್ಲ ಅಸಹಿಷ್ಣುತೆಯ ಅಭಿವ್ಯಕ್ತಿಗಳಾಗಿ ಹೊರಹೊಮ್ಮುತ್ತವೆ.

ಅಸಹನೆ-ಅಸಹಿಷ್ಣುತೆ ಎನ್ನುವುದು ನಮ್ಮ ಬದುಕಿನ ಮೌಲ್ಯಗಳನ್ನು, ನಮ್ಮ ಸಂಸ್ಕೃತಿಯನ್ನು ಧಿಕ್ಕರಿಸಿ, ಹಾಳುಮಾಡುವ ಒಂದು ಅಸಾಮಾನ್ಯ ಸ್ವಭಾವ. ಅದು ಮನುಷ್ಯ ಬದುಕಿನ ಎಲ್ಲ ರಂಗಗಳಲ್ಲಿ ಕಾಣಿಸಿಕೊಳ್ಳುತ್ತದೆ. ಅಸಹಿಷ್ಣುತೆ ಎಂಬುದು ಹೆಣ್ಣು-ಗಂಡು, ಬಡವ-ಬಲ್ಲಿದ, ಶಿಕ್ಷಿತ-ಅಶಿಕ್ಷಿತ ಹೀಗೆ ಯಾವ ಭೇದಭಾವ ಇಲ್ಲದೆ ಎಲ್ಲರಲ್ಲೂ ಕಾಣಿಸಿಕೊಳ್ಳುತ್ತದೆ. ವ್ಯಕ್ತಿ-ವ್ಯಕ್ತಿಗಳ ನಡುವೆ, ಸಮುದಾಯ-ಸಮುದಾಯಗಳ ನಡುವೆ, ಧರ್ಮ-ಧರ್ಮಗಳ ನಡುವೆ, ಗ್ರಾಮ-ಗ್ರಾಮಗಳ ನಡುವೆ, ದೇಶ-ದೇಶಗಳ ನಡುವೆ ಉಂಟಾಗಬಹುದಾದ ಒಂದು ಮಾನಸಿಕ ಸಂಕೀರ್ಣತೆಯ ಸಂಘರ್ಷ ಅದು. ಅದರಿಂದ ಪಾರಾಗಲು ಯಾರಿಗೂ ಸಾಧ್ಯವಿಲ್ಲವೆಂದು ತೋರುತ್ತದೆ.

ತನು-ಮನಗಳನ್ನು ಯಾರಿಂದಲೂ ಸಂಪೂರ್ಣವಾಗಿ ನಿಯಂತ್ರಿಸಿಕೊಳ್ಳಲು ಸಾಧ್ಯವಿಲ್ಲ. ಸಹನೆ-ಅಸಹನೆ ಗುಣಗಳು ಎಲ್ಲರಲ್ಲೂ ಸಹಜವಾಗಿ ಇರುತ್ತವೆ. ಒಂದೇ ತಾಯಿಗರ್ಭದಿಂದ ಹುಟ್ಟಿದ ಮಕ್ಕಳಲ್ಲೂ ಪರಸ್ಪರ ಈ ಅಸಹನೆಯ ಎಳೆ ಹೆಡೆಯಾಡುತ್ತಲೇ ಇರುತ್ತದೆ. 'ಹುಟ್ಟುತಲೇ ಅಣ್ಣತಮ್ಮರು, ಬೆಳೆಯುತ್ತಲೇ ಭಾಗಾದಿಗಳು' ಎಂಬ ಪ್ರಸಿದ್ಧ ಗಾದೆಯ ಮಾತಿದೆ. ದಾಯಾದಿ ಜಗಳ ಹುಟ್ಟಿಕೊಳ್ಳುವುದೇ ಸಹನೆ ಕಳೆದುಕೊಂಡು ಮತ್ಸರ

ತುಂಬಿಕೊಂಡಾಗ, ಸಹನೆಗೆ ಬಹು ತೆಳುವಾದ ಕವಚವಿದೆ. ಈ ಸಹನೆಯ ಕವಚಕ್ಕೆ ಸ್ವಲ್ಪ ಧಕ್ಕೆ ತಗುಲಿದರೂ ಸಾಕು, ಅದು ಕೆರಳುತ್ತದೆ. ಸಹನೆಯ ಕಟ್ಟೆ ಒಡೆದಾಗ ಅದರ ಪ್ರಕಟರೂಪವಾಗಿ ಅಸಹನೆಯ ವಿರಾಟ್‌ರೂಪ ಅಸಹಿಷ್ಣುತೆ ಎದ್ದು ಕಾಣುತ್ತದೆ. ಮನುಷ್ಯನ ವರ್ತನೆ ಇಂದಿನ ದಿನಮಾನಗಳಲ್ಲಿಯೇ ಹೀಗಾಗುತ್ತಿದೆಯೆಂದಲ್ಲ, ಅದು ಎಲ್ಲ ಕಾಲಕ್ಕೂ, ಎಲ್ಲ ದೇಶವಾಸಿಗಳಲ್ಲೂ ಇದ್ದದ್ದೆ,



ಇವತ್ತಿನ ರಾಜಕಾರಣಿಗಳು ಮತ್ತು ಧಾರ್ಮಿಕ ಮುಖಂಡರು ಬಹಿರಂಗವಾಗಿ, ಅದೂ ವಿದ್ಯುನ್ಮಾನ ಮಾಧ್ಯಮಗಳ ಎದುರಿಗೆ ಮಾತನಾಡುವ ರೀತಿ ತೀರ ಅಸಹ್ಯವಾಗಿ ಕಾಣುತ್ತಿದೆ. ಸಾಮಾನ್ಯರ ಮೇಲೆ ಸಹಜವಾಗಿ ಪರಿಣಾಮ ಬೀರುವ ಈ ರಾಜಕಾರಣಿಗಳು, ಮಂತ್ರಿಮಹೋದಯರು, ಧಾರ್ಮಿಕ ನಾಯಕರು ಸಾಮಾನ್ಯರಲ್ಲಿ ಅಸಹ್ಯ ಹುಟ್ಟಿಸುವ ತಮ್ಮ ವರ್ತನೆಗಳನ್ನು ಕಡಿಮೆ ಮಾಡಿಕೊಂಡರೆ ನಮ್ಮ ಸಂಸ್ಕೃತಿಗೆ ಆಗುತ್ತಿರುವ ಅಪಾಯ ಒಂದಿಷ್ಟು ಕಡಿಮೆಯಾಗಬಹುದಾಗಿದೆ. ಈ ಎರಡು ವಲಯಗಳ ಚರ್ಚೆಗಳನ್ನು ಪ್ರತಿದಿನವೂ ನಾಡಿನ ಮತ್ತು ರಾಷ್ಟ್ರದ ಟಿ.ವಿ. ವಾಹಿನಿಗಳಲ್ಲಿ ಕೇಳುತ್ತಲೇ ಇರುತ್ತೇವೆ. ಅದಕ್ಕಾಗಿ ಈ ಸಂಗತಿಗಳನ್ನು ಈ ಪ್ರಬಂಧದ ಹೊರಗಿಡಲಾಗಿದೆ.

**ಬದುಕಿನ ಮೌಲ್ಯಗಳ ಮಹತ್ವ**

ಅಸಹಿಷ್ಣುತೆ ತಾಂಡವವಾಡುವುದು ಎಂದರೆ ನಮ್ಮ ಜೀವನ ಮೌಲ್ಯಗಳ ಮರವೆಯೇ ಇದಕ್ಕೆ ಕಾರಣವಾಗಿದೆ ಎನ್ನಬೇಕು. ತಾಳ್ಮೆ-ತೃಪ್ತಿ, ಸಮಾಧಾನ-ಸಂಯಮ, ಸ್ನೇಹ- ಸಹಿಷ್ಣುತೆ ಇವೆಲ್ಲ ನಮ್ಮ ಬದುಕಿನ ಮೌಲ್ಯಗಳು. ಆಸಹಿಷ್ಣುತೆ ಈ ಎಲ್ಲ ಮೌಲ್ಯಗಳನ್ನು ಹಾಳುಗೆಡುವುತ್ತದೆ. ಅದಕ್ಕಾಗಿಯೇ 'ಮನದ ಮುಂದಣ ಆಸೆಯೇ ಮಾಯೆ' ಎಂದರು ಅಲ್ಲಮಪ್ರಭುಗಳು, ಆಸೆಯೆ ದುಃಖಕ್ಕೆ ಮೂಲ' ಎಂದರು ಬುದ್ಧ, ತೀರ ಸಂಕೀರ್ಣವಾದ ಮನಸ್ಸನ್ನು ಅಲ್ಪಮಟ್ಟಿಗೆ ನಿಯಂತ್ರಿಸಿಕೊಳ್ಳುವ ರೂಢಿ ಹಾಕಿಕೊಂಡರೆ ಈ ಎಲ್ಲ ಮೌಲ್ಯಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗ ಬಹುದು. ಅದಕ್ಕಾಗಿಯೇ ಬಸವಣ್ಣನವರು ಹೇಳುತ್ತಾರೆ: ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ/ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ' ಎಂದು. ಆದರೆ ಇಂದು ಈ ಮಾಲ್ಯಗಳಿಗೆ ಯಾರೂ ಹೆಚ್ಚು ಗಮನ ಕೊಡುತ್ತಿಲ್ಲ. ಹೀಗಾಗಿ ನಮ್ಮ ಸಂಸ್ಕೃತಿ ಇದರಿಂದ ಹಾಳಾಗುತ್ತಿದೆ ಎಂಬ ಭಾವ ಸಾಮಾನ್ಯವಾಗಿ ಕಾಣುತ್ತಿದೆ.

**ಕಸವರಮೆಂಬುದು ನೆರೆ ಸೈ**

**ರಿಸಲಾರ್ಪೊಡೆ ಪರವಿಚಾರಮಂ ಧರ್ಮಮುಮಂ**

-ಕವಿರಾಜಮಾರ್ಗ, ೩-೧೭೭

'ಪರರ ವಿಚಾರವನ್ನೂ ಧರ್ಮವನ್ನೂ ಸೈರಿಸುವುದಾದರೆ ಅದೇ ಹೊನ್ನು ಎಂಬುದು ಶ್ರೀವಿಜಯನ ಅಭಿಪ್ರಾಯ.

**ಕಳಬೇಡ ಕೊಲಬೇಡ ಹುಸಿಯ ನುಡಿಯಲು ಬೇಡ**

**ತನ್ನ ಬಣ್ಣಿಸಬೇಡ ಇದಿರ ಹಳಿಯಲು ಬೇಡ**

**ಮುನಿಯ ಬೇಡ, ಅನ್ಯರಿಗೆ ಅಸಹ್ಯಪಡಬೇಡ -**

ಎಂಬ ಸಪ್ತಸೂತ್ರಗಳನ್ನು ಬಸವಣ್ಣನವರು ಬೋಧಿಸಿದರು. “ಅನ್ಯರಿಗೆ ಅಸಹ್ಯ ಪಡಬೇಡ' ಎಂಬುದು ಅಸಹಿಷ್ಣುತೆಯನ್ನು ಕುರಿತೇ ಹೇಳುತ್ತಿದೆ. ಒಬ್ಬನ ಈ ಎಲ್ಲ ವರ್ತನೆಗಳು ಇನ್ನೊಬ್ಬರಲ್ಲಿ ಅಸಹಿಷ್ಣುತೆಯನ್ನು ಹುಟ್ಟಿಸುವ ಸಂಗತಿಗಳು. ಇವುಗಳನ್ನು ನಿಯಂತ್ರಿಸಿಕೊಳ್ಳುವುದನ್ನೇ ಬಸವಣ್ಣನವರು-



ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ

ಇದೇ ನಮ್ಮ ಕೂಡಲಸಂಗಮದೇವರನೊಲಿಸುವ ಪರಿ

ಎಂದರು. ಮನುಷ್ಯನ ದೇಹ ಮತ್ತು ಮನಸ್ಸುಗಳ ಗುಣಗಳು ಪ್ರತಿಯೊಬ್ಬನ ವ್ಯಕ್ತಿತ್ವವನ್ನು ರೂಪಿಸುತ್ತವೆ. ದೇಹವನ್ನು ಬಹಿರಂಗವೆಂದೂ, ಮನಸ್ಸನ್ನು ಅಂತರಂಗವೆಂದೂ ವಚನಕಾರರು ಗುರುತಿಸಿದರು. ಬಹಿರಂಗ ಶುದ್ಧವಿಲ್ಲದೆ, ಅಂತರಂಗ ಶುದ್ಧವಿರುವುದು ಸಾಧ್ಯವಿಲ್ಲದ ಮಾತು. ವ್ಯಕ್ತಿಯ ವ್ಯಕ್ತಿತ್ವವನ್ನು ದೇಹ ಮತ್ತು ಮನಸ್ಸು ಎಂದು ಎರಡು ಪ್ರತ್ಯೇಕ ತತ್ತ್ವಗಳನ್ನಾಗಿ ವಿಂಗಡಿಸಲು ಸಾಧ್ಯವಿಲ್ಲ. ಇವೆರಡೂ ಒಂದೇ ವ್ಯಕ್ತಿತ್ವದ ಎರಡು ಅಂಶಗಳು. ಇವೆರಡೂ ಅಭಿನ್ನ, ಮನುಷ್ಯನ ವರ್ತನೆ ಅವನ ದೇಹ ಮತ್ತು ಮನಸ್ಸಿನ ಗುಣಗಳನ್ನು ಹೊಂದಿರುತ್ತದೆ.

ನಮ್ಮದು ಬಹುಸಂಸ್ಕೃತಿಯ ದೇಶ. ಬಹು ಭಾಷೆ, ಬಹು ಧರ್ಮಗಳ ನಾಡು. ನಮ್ಮನ್ನು ನಾವು ಪ್ರೀತಿಸುತ್ತ, ಇತರರನ್ನೂ ಪ್ರೀತಿಸುವ, ಸಹಿಸಿಕೊಳ್ಳುವ ಮನೋಭಾವವುಳ್ಳ ಬಹುದೊಡ್ಡ ಗುಣ ಭಾರತೀಯರದು. ಇದೇ ನಮ್ಮ ಸಂವಿಧಾನ ಹೇಳುವ ಬಹುಮುಖ್ಯ ಸಂಗತಿಯೂ ಕೂಡ. ರಾಷ್ಟ್ರಕವಿ ಕುವೆಂಪು ಅವರು ಕರ್ನಾಟಕದ ಸಂಸ್ಕೃತಿಯನ್ನು ಕುರಿತು ಹೀಗೆ ಹೇಳುತ್ತಾರೆ :

ಸರ್ವ ಜನಾಂಗದ ಶಾಂತಿಯ ತೋಟ

ರಸಿಕರ ಕಂಗಳ ಸೆಳೆಯುವ ನೋಟ

ಹಿಂದೂ ಕ್ರೈಸ್ತ ಮುಸಲ್ಮಾನ

ಪಾರಸಿಕ ಜೈನರುದ್ಯಾನ

ಜನಕನ ಹೋಲುವ ದೊರೆಗಳ ಧಾಮ

ಕರ್ನಾಟಕದ ಜನ ಯಾವಾಗಲೂ ತಮ್ಮ ಸಹನೆಯಿಂದ, ಸಂಸ್ಕೃತಿಯಿಂದ ಹೆಸರುವಾಸಿ ಆದವರು. ಸಂಸಾರ ಸಾಗಿಸುವಲ್ಲಿ ಜಾಣರಾದವರು. ಕನ್ನಡದ ಶ್ರೇಷ್ಠಕವಿ ಪಂಪನ ಈ ಕೆಳಗಿನ ಸಾಲುಗಳು ಬಹಳ ಮುಖ್ಯವಾಗಿ ಕರ್ನಾಟಕದ ಸಂಸ್ಕೃತಿಯನ್ನು ಬಿಂಬಿಸುತ್ತವೆ.

'ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ

ಳ್ಗಾಗರವಾದ ಮಾನಸ ಮಾನಸರ್,

'ತ್ಯಾಗದ, ಸುಖದ, ವಿದ್ಯೆಯ, ಸಂಗೀತ-ಗೋಷ್ಠಿಗಳ ಸಂತೋಷ ಸೌಖ್ಯಕ್ಕೆ ಅಧೀನರಾಗಿರುವ ಮನಸ್ಸುಳ್ಳವರೇ ಮನುಷ್ಯರು' ಎಂಬುದು ಕರ್ನಾಟಕದ ಬಹುಮುಖ್ಯ ಸಂಸ್ಕೃತಿಯಾಗಿದೆ.

ಪದನರಿದು ನುಡಿಯಲುಂ ನುಡಿ

ದುದನರಿದಾರಯಲುಮಾರ್ಪರಾ ನಾಡವರ್ಗಳ್

ನಿಜದಿಂ ಕುರಿತೋದದೆಯುಂ

ಕಾವ್ಯಪ್ರಯೋಗ ಪರಿಣತ ಮತಿಗಳ್

'ಮಾತನ್ನು ಅರಿತು ಮಾತನಾಡಲು, ತಾವು ನುಡಿದಂತೆ ನಡೆಯಲು ಬಲ್ಲವರು, ಶಿಕ್ಷಿತರಲ್ಲದವರೂ ಕಾವ್ಯಪ್ರಯೋಗ ಮಾಡಬಲ್ಲವರು'. ಇದು ಕವಿರಾಜಮಾರ್ಗಕಾರ ಶ್ರೀವಿಜಯನ ಅಭಿಪ್ರಾಯ.

ಕನ್ನಡ ನಾಡಿನ ತಾಯಂದಿರು ತಮ್ಮ ಮಕ್ಕಳನ್ನು ಹಾಲುಣಿಸುತ್ತಲೇ ಮಗುವಿಗೆ ಕೊಡುವ ಸಂಸ್ಕಾರವನ್ನು ಹಂಪಿಯ ಶಾಸನ ಹೀಗೆ ಹೇಳುತ್ತದೆ

ಕೆರೆಯಂ ಕಟ್ಟಿಸು, ಭಾವಿಯಂ ಸವೆಸು, ದೇವಾಗಾರಮಂ ಮಾಡಿಸು

ಸೆರೆಯೊಳ್ ಸಿಲ್ಕಿದನಾಥರಂ ಬಿಡಿಸು, ಮಿತ್ರರ್ಗ್ಗಂಬುಕೆ ನಂಬಿದ

ರ್ಗ್ಗೆರೆವೆಟ್ಟಾಗಿರು, ಶಿಷ್ಟರಂ ಪೊರೆ-ಯೆನುತ್ತಿಂತೆಲ್ಲವಂ ಪಿಂದೆ ತಾ

ಯೆರದಾಳ್ಪಾಲೆರೆವಂದುತೊಟ್ಟು ಕಿವಿಯೊಳ್ ಲಕ್ಷ್ಮೀಧರಾಮಾತ್ಯನಾ

ಹಂಪಿ, ೧೪೧೧

(ಕೆರೆಯನ್ನು ಕಟ್ಟಿಸು, ಬಾವಿಯನ್ನು ತೋಡಿಸು, ದೇವಾಲಯಗಳನ್ನು ನಿರ್ಮಿಸು, ಬಂಧನಕ್ಕೆ ಸಿಕ್ಕ ಅನಾಥರನ್ನು ಬಿಡಿಸು, ಸ್ನೇಹಿತರಿಗೆ ಸಹಾಯಕನಾಗು, ನಂಬಿದವರಿಗೆ ಆಶ್ರಯದಾತನಾಗು, ಸತ್ಪುರುಷರನ್ನು ರಕ್ಷಿಸು-ಎಂದು ಮುಂತಾಗಿ ಅವನ ಕಿವಿಯಲ್ಲಿ ಹೇಳುತ್ತಾ ಹಾಲನ್ನು ಹಾಕಿದಳಂತೆ ಲಕ್ಷ್ಮೀಧರಾಮಾತ್ಯನ ತಾಯಿ. ಇಂತಹ ಸಂಸ್ಕೃತಿ ಕನ್ನಡಿಗರದು.)

**ಮಹಾಕವಿಗಳಲ್ಲಿ ಸಹನೆಯ ಸಂಗತಿಗಳು :**

ಕನ್ನಡಿಗರಲ್ಲಿ ಮೆಚ್ಚುವ ಗುಣ ಢಾಳವಾಗಿ ಕಾಣುತ್ತದೆ. ಮಹಾಕವಿ ಪಂಪ ತನ್ನ ವಿಕ್ರಮಾರ್ಜುನ ವಿಜಯಕ್ಕೆ ಅರ್ಜುನನನ್ನು ನಾಯಕನನ್ನಾಗಿ ಮಾಡಿಕೊಂಡು ಕಾವ್ಯ ಬರೆದವನು. ಆದರೆ ಕಾವ್ಯದ ಕೊನೆಯಲ್ಲಿ ಅವನು ಮೆಚ್ಚಿಕೊಳ್ಳುವುದು ಕರ್ಣನ ವ್ಯಕ್ತಿತ್ವವನ್ನು. ಈ ಮೂಲಕ ಅವನು ಸಾರುವುದು ಕರ್ನಾಟಕದ ಸಂಸ್ಕೃತಿಯನ್ನು, ಕರ್ಣನಲ್ಲಿ ಕರ್ನಾಟಕ ಸಂಸ್ಕೃತಿಯ ವ್ಯಕ್ತಿತ್ವವನ್ನು ಅವನು ಹೀಗೆ ಕಾಣುತ್ತಾನೆ-

ನೆನೆಯದಿರಣ್ಣ ಭಾರತದೊಳಿಂ ಪೆರರಾರುಮನೊಂದೆ ಚಿತ್ತದಿಂದ

ನೆನೆವೊಡೆ ಕರ್ಣನಂ ನೆನೆಯ ಕರ್ಣನೊಳಾರ್ ದೊರ

ಕರ್ಣನೇರು ಕರ್ಣನ ಕಡು ನನ್ನ ಕರ್ಣನಳವಂಕದ ಕರ್ಣನ ಚಾಗಮೆಂದು

ಕರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲೆ ಭಾರತಂ

(ಪಂಪಭಾ.೧೨-೨೧೮)

(ಅಣ್ಣ, ಮಹಾಭಾರತದಲ್ಲಿ ಇನ್ನು ಬೇರೆ ಯಾರನ್ನೂ ನೆನೆಯದಿರು. ಒಂದೇ ಮನಸ್ಸಿನಿಂದ ನೆನೆಯುವ ಪಕ್ಷದಲ್ಲಿ ಕರ್ಣನನ್ನು ನೆನೆ. ಕರ್ಣನಿಗೆ ಯಾರು ಸಮಾನ? ಕರ್ಣನ ಕಾಳೆಗ, ಕರ್ಣನ ಘನ ಸತ್ಯನಿಷ್ಠೆ, ಕರ್ಣನ ಸಾಮರ್ಥ್ಯ, ಕೀರ್ತಿಶಾಲಿಯಾದ ಕರ್ಣನ ದಾನಗುಣ ಎಂಬುದಾಗಿ ಕರ್ಣನ ವೃತ್ತಾಂತದಿಂದ ತುಂಬಿ ಮಹಾಭಾರತವು ಕಿವಿಗೆ ರಸಾಯನವಾಗಿಲ್ಲವೆ?)



ಮಹಾಭಾರತದಲ್ಲಿ ದುರ್ಯೋಧನನು ಅರ್ಜುನನ ಎದುರಿಗೆ ಪ್ರತಿನಾಯಕ. ಆದರೆ ಪಂಪನು ತನ್ನ ಇನ್ನೊಂದು ಪದ್ಯದಲ್ಲಿ ತಾನು ಮೆಚ್ಚಿಕೊಂಡ ಮಹಾಭಾರತದ ಪಾತ್ರಗಳ ಮುಖ್ಯ ಗುಣಗಳನ್ನು ಹೊಗಳುತ್ತ ತಾನು ಮೆಚ್ಚುವ ವ್ಯಕ್ತಿತ್ವದ ಕ್ರಮವನ್ನು ಹೀಗೆ ಕೊಡುತ್ತಾನೆ:

ಚಲದೊಳ್ ದುರ್ಯೊಧನಂ ನನ್ನಿಯೊಳಿನತನಯಂ ಗಂಡಿನೊಳ್ ಭೀಮಸೇನಂ

ಬಲದೊಳ್ ಮದ್ರೇಶನತ್ಯುನ್ನತಿಯೊಳಮರಸಿಂಧೂದ್ಭವಂ ಚಾಪವಿದ್ಯಾ

ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್

ನಿರಲಚಿತ್ತಂ ಧರ್ಮಪುತ್ರಂ ಮಿಗಿಲಿವರ್ಗಳಿನೀ ಭಾರತಂ ಲೋಕಪೂಜ್ಯಂ

ಪಂಪಭಾ.೧೪-೭೪

(ಹಟದಲ್ಲಿ ದುರ್ಯೋಧನನು, ಸತ್ಯದಲ್ಲಿ ಕರ್ಣನು, ಪೌರುಷದಲ್ಲಿ ಭೀಮಸೇನನು, ಶಕ್ತಿಯಲ್ಲಿ ಶಲ್ಯನು, ಮಿಗಿಲಾದ ಹಿರಿಮೆಯಲ್ಲಿ ಭೀಷ್ಮನು, ಧನುರ್ವಿದ್ಯೆಯ ಸಾಮರ್ಥ್ಯದಲ್ಲಿ ದ್ರೋಣನು, ಸಾಹಸದ ಮಹಿಮೆಯಲ್ಲಿ ಅರ್ಜುನನು, ಧರ್ಮದಲ್ಲಿ ಶುದ್ಧಮನಸ್ಸಿನವನಾದ ಧರ್ಮರಾಯನು ಅಧಿಕರಾದವರು. ಇವರುಗಳಿಂದ ಈ ಮಹಾಭಾರತವು ಲೋಕಪೂಜ್ಯವಾಗಿದೆ.)

ತಾನು ಮೆಚ್ಚಿಕೊಂಡ ವ್ಯಕ್ತಿತ್ವಗಳ ಪಟ್ಟಿಯಲ್ಲಿ ಅರ್ಜುನ ಮತ್ತು ಧರ್ಮ ರಾಜನನ್ನು ಕೊನೆಯಲ್ಲಿ ಹೆಸರಿಸುತ್ತಾನೆ. ಇದು ಕರ್ನಾಟಕದ ಸಂಸ್ಕೃತಿಯ ದ್ಯೋತಕ. ಅಂದರೆ ತನಗೆ ಆಗದವರಲ್ಲಿಯೂ ಕಾಣುವ ಉತ್ತಮ ಗುಣಗಳನ್ನು ಮೆಚ್ಚುವ, ಒಪ್ಪಿಕೊಳ್ಳುವ ಸ್ವಭಾವ ಕನ್ನಡಿಗರದು.

**ಅಸಹಿಷ್ಣುತೆ ಕಾಣುವುದು ಮೂರು ಬಗೆಯಲ್ಲಿ :**

೧. **ಅಸಹನೆ-ಅಸಹಿಷ್ಣುತೆ :** ಇದು ಕಾಣಿಸಿಕೊಳ್ಳುವುದು ಸ್ನೇಹ-ಸಂಬಂಧಗಳ ನಡುವೆ. ಎದುರಿನವರ ವರ್ತನೆಗಳಿಗೆ ಬೇಸತ್ತು, ಸಹನೆ ಕಳೆದುಕೊಂಡು ಅಸಹಿಷ್ಣುತೆಗೆ ಒಳಗಾಗಿ ಪ್ರತಿಕ್ರಿಯೆ ತೋರುವುದು. ಅದು ಕಠೋರವಾದ ಮಾತಿನ ವಾಗ್ವಾದವಾಗಿರ ಬಹುದು, ಆಕ್ರಮಣಕಾರಿ ಕೃತ್ಯಗಳನ್ನು ಎಸಗಬಹುದು. ಇದು ಒಳ್ಳೆಯವರಾಗಿದ್ದೂ ಸಹನೆಯ ಕಟ್ಟೆ ಒಡೆದಾಗ ಜರುಗುವ ಸಂಗತಿ. ನಿಜಜೀವನದಲ್ಲಿ ನಡೆವ ಅಪರೂಪದ ಘಟನೆಗಳಾಗಿ, ಹೆಚ್ಚಾಗಿ ಸಾಹಿತ್ಯ ಕೃತಿಗಳಿಗೆ ವಸ್ತುವಾಗುವ ಸಂಗತಿಗಳು ಇವಾಗಿರುತ್ತವೆ.

೨. **ಜುಗುಪ್ಸೆ-ಅಸಹಿಷ್ಣುತೆ :** ನಿಜಜೀವನದಲ್ಲಿ ಎದುರಾದ ತೊಂದರೆಗಳನ್ನು ತನಗೆ ಸಹಿಸಿಕೊಳ್ಳಲು ಸಾಧ್ಯವಾಗದೇ ಇದ್ದಾಗ, ಆಲೋಚನಾ ಹೀನನಾಗಿ, ತನ್ನ ಬದುಕಿನ ಬಗೆಗೆ ಜುಗುಪ್ಸೆಗೊಂಡು, ತನ್ನನ್ನೇ ತಾನು ಶಿಕ್ಷೆಗೆ ಗುರಿಮಾಡಿಕೊಳ್ಳುವ ಅಸಹಿಷ್ಣುತೆ ಇಲ್ಲಿ ಕಾಣಿಸುತ್ತದೆ. ಆತ್ಮಹತ್ಯೆಗಳು ಈ ಕಾರಣವಾಗಿಯೇ ನಡೆಯುವುದು. ರೈತರ ಆತ್ಮಹತ್ಯೆಗಳು ವ್ಯಾಪಕವಾಗಿ ಕಾಣುತ್ತಿರುವುದು ಇದೆಕ್ಕೆ ಉದಾಹರಣೆಯಾಗುತ್ತವೆ.

೩. **ಮಾತ್ಸರ್ಯ-ಅಸಹಿಷ್ಣುತೆ :** ನಿಜಜೀವನದಲ್ಲಿ ಮತ್ಸರಪಡುವ ಮನಸ್ಸು ಅಸಹನೆಗೆ ಒಳಗಾದಾಗ ಪರರ ಏಳಿಗೆ, ಆಹಾರ, ಧರ್ಮ, ಸಾಮಾಜಿಕ ಸ್ಥಾನಮಾನ ಗಳನ್ನು

ಸಹಿಸದ, ತನ್ನ ಕುಂದು ಕೊರತೆಗಳನ್ನು ಬಯಲಿಗೆಳೆದಾಗ ಅದನ್ನು ಸಹಿಸದೆ ಮನಸ್ಸಿನಲ್ಲಿ ಮತ್ಸರ ಮಡುಗಟ್ಟಿ, ಅಸಹನೆ ಹೆಚ್ಚಿ, ನಿಷ್ಕಾರುಣ್ಯ ಕೃತ್ಯ ಎಸಗಬಹುದು. ಇದಕ್ಕೆ ಒಬ್ಬನ ಜೀವವೇ ಹಾಳಾಗಬಹುದು. ಇದು ದುಷ್ಟತನದ ಪ್ರತೀಕವಾಗಿ ಅಸಹಿಷ್ಣುತೆಯ ಪರಮ ನೀಚತನವೆನಿಸುತ್ತದೆ.

**೧. ಅಸಹನೆ-ಅಸಹಿಷ್ಣುತೆ :**

ಅಸಹನೆ-ಅಸಹಕಾರಗಳು ಸಾಮಾನ್ಯ ಬದುಕಿನಲ್ಲಿ ಸಣ್ಣಪುಟ್ಟ ಸಂಘರ್ಷಗಳು ಇರುವಂತಹವೆ. ಈ ಎಲ್ಲವುಗಳ ಜೊತೆ, ಮನಸ್ಸಿನ ವ್ಯವಹಾರಗಳಾದ ಸಹನೆ- ಅಸಹನೆ, ಸಹಕಾರ-ಅಸಹಕಾರಗಳು ಇರುವಂತಹವೆ. ಅವು ಹಿಂದೂ ಇದ್ದವು, ಈಗಲೂ ಇವೆ, ಮುಂದೂ ಇರುತ್ತವೆ. ಇದಕ್ಕೆ ಯಾರೂ ಹೊರತಾಗಿಲ್ಲ. ಆದರೆ ಅಸಹಿಷ್ಣುತೆ ಎನ್ನುವುದು ನಾಗರಿಕತೆ ಬೆಳೆದಂತೆ, ಶಿಕ್ಷಣ ಹೆಚ್ಚಾದಂತೆ ಇನ್ನೂ ಹೆಚ್ಚು ಹೆಚ್ಚು ತನ್ನ ದಳ್ಳುರಿಯ ಬಾಯಿ ತೆರೆಯುತ್ತಿದೆ. ಇದು ನಮ್ಮ ಸಂಸ್ಕೃತಿಗೆ, ಮಾನವ ಬದುಕಿಗೆ ಒಂದು ದೊಡ್ಡ ಅಪಾಯಕಾರಿ ಗಂಟೆ ಎಂಬುದನ್ನು ಎಚ್ಚರದಿಂದ ಗಮನಿಸಬೇಕಾದ ಸ್ಥಿತಿ ಇಂದು ಕರ್ನಾಟಕದಲ್ಲಿ ಉಂಟಾಗಿದೆ.

ಸಹನೆ ಬಹುಮುಖ್ಯವಾದ ಮೌಲ್ಯ. ಅದು ವ್ಯಕ್ತಿಯ ಮಾನಸಿಕ ಸ್ಥಿತಿಯಾಗಿದ್ದು, ದೇಹದ ಚಲವಲನದ ಮೂಲಕ ವ್ಯಕ್ತವಾಗುತ್ತಿರುತ್ತದೆ. ಸಹನೆ ಗಟ್ಟಿಗೊಂಡಾಗ ಅದು ಮಾತಿನ ಮೂಲಕ ಪ್ರಕಟವಾಗಬಹುದು. ಅದು ಇನ್ನಷ್ಟು ಗಟ್ಟಿಗೊಂಡಾಗ ತ್ಯಾಗದ ರೂಪದಲ್ಲಿಯೂ ಪ್ರಕಟವಾಗಬಹುದು. ತನ್ನ ಸಂಪತ್ತು, ಶಕ್ತಿ, ಪ್ರಭಾವ ಈ ಮೂಲಕವಾಗಿಯೂ ತ್ಯಾಗ ಕಾಣಿಸಿಕೊಳ್ಳಬಹುದು. ಸಹನೆಯ ಪ್ರಕಟರೂಪವೇ ಸಂಯಮ ಮತ್ತು ತ್ಯಾಗದ ವ್ಯಕ್ತರೂಪ ಎನಿಸುತ್ತದೆ. ಇದು ವ್ಯಕ್ತಿಯ ವ್ಯಕ್ತಿತ್ವವನ್ನು ಬೆಳಗಿಸುತ್ತದೆ. ಕುಟುಂಬದಲ್ಲಿ, ಸಮಾಜದಲ್ಲಿ ಆದರಕ್ಕೆ ಪಾತ್ರವಾಗುತ್ತದೆ. ಈ ಆದರಗಳು ಬೆಳೆದು ಆದರ್ಶ ವ್ಯಕ್ತಿತ್ವವಾಗಿ ಬೆಳಗಬಹುದು.

ತ್ಯಾಗ ಒಮ್ಮೊಮ್ಮೆ ತೀರ ಆದರ್ಶವೆಂದು ಬೆಳಗುವಾಗ ಅಂತಹ ಪ್ರಸಂಗಗಳು ಸಾಹಿತ್ಯಕ್ಕೆ ಆಹಾರವಾಗುತ್ತವೆ. ಹರಿಶ್ಚಂದ್ರ ಸತ್ಯಕ್ಕಾಗಿ ತೋರಿದ ಸಹನೆ, ತ್ಯಾಗವಾಗಿ ಮಾರ್ಪಟ್ಟು, ನಾನಾ ತೊಂದರೆಗಳಿಗೆ ಒಳಗಾಗುವ, ಅವುಗಳಿಂದ ಪಾರಾಗುತ್ತ ಸಾಗುವ ಕಥೆಯಾಗಿ ಬೆಳೆಯುತ್ತದೆ. ಹಾಗೆಯೇ ಕರ್ಣನ ತ್ಯಾಗ, ಶಿಬಿ ರಾಜನ ತ್ಯಾಗದ ಕಥೆಗಳನ್ನು ನಾವು ಓದುತ್ತೇವೆ. ನಮ್ಮ ಜೀವನಕ್ಕೆ ಇವೆಲ್ಲ ಮಾರ್ಗದರ್ಶನ ಮಾಡುತ್ತಿರುತ್ತವೆ.

**ಕೌಟುಂಬಿಕ ಪರಿಸರ :** ಭಾರತೀಯ ಸಂದರ್ಭದಲ್ಲಿ ಕೌಟುಂಬಿಕ ಪರಿಸರವೊಂದು ದೊಡ್ಡ ಸಹಕಾರ ಜೀವನದ ಪ್ರತೀಕ, ಕುಟುಂಬ ವ್ಯವಸ್ಥೆ ನಿಂತದ್ದೇ ಸಹನೆ ಸಹಕಾರಗಳ ಮೇಲೆ, ಅಲ್ಲಿ ಅಸಹನೆ ಅಸಹಕಾರಗಳು ತಲೆ ಹಾಕಿದರೂ ಸಾಕು, ಅಸಹಿಷ್ಣುತೆ ಭುಗಿಲೇಳುತ್ತದೆ. ನಮ್ಮ ರಕ್ತ ಸಂಬಂಧ, ದೈಹಿಕ ಸಂಬಂಧಗಳಿಂದ ಕೂಡಿದ ಕುಟುಂಬ ವ್ಯವಸ್ಥೆ ಅಸಹಿಷ್ಣುತೆಯ ಒಂದು ಧಕ್ಕೆಗೆ ಮುರಿದು ಬೀಳುತ್ತದೆ. ಕೌಟುಂಬಿಕ

ವಾತಾವರಣದಲ್ಲಿ ಅತ್ತೆ-ಸೊಸೆಯರ ಜಗಳ ಪ್ರಸಿದ್ಧವಾಗಿದೆ. ಒಂದು ಮನೆಯಲ್ಲಿ ಹುಟ್ಟಿ ಇನ್ನೊಂದು ಮನೆಯಲ್ಲಿ ಬಾಳು ಸಾಗಿಸಬೇಕಾಗಿರುವ ಸ್ತ್ರೀಗೆ ಈ ಅಸಹಿಷ್ಣುತೆಯನ್ನು ಸಹಿಸಿಕೊಳ್ಳಬೇಕಾದದ್ದು ಭಾರತೀಯ ಸಂದರ್ಭದಲ್ಲಿ ಅನಿವಾರವಾಗಿ ಕಾಣುತ್ತದೆ. ಅತ್ಯಂತ ಸೂಕ್ಷ್ಮ ಸಂಗತಿಯಾದ ಇದು ಸ್ತ್ರೀ ಬದುಕಿನ ಒಂದು ಅನಿವಾರವಾದ ಅಂಗವಾಗಿ ತೋರುತ್ತದೆ.

ಅತ್ತೆಯ ಮನೆಯಲ್ಲಿ ಕಾಣಿಸಿಕೊಳ್ಳುವ ಸಣ್ಣ ಬಿರುಕು, ಗರತಿಯ ಸಹನೆಯನ್ನು ಕೆಣಕುತ್ತದೆ. ಇದರಿಂದ ಅವಳಲ್ಲಿ ಅಸಹನೆಯ ಭಾವನೆ ಎಚ್ಚರಗೊಳ್ಳುತ್ತದೆ. 'ಹೋಗ ಹೋಗ ಬಿಸಿಲ/ ನೀ ಬಾರ ಬೆಳದಿಂಗಳ' ಎನ್ನುವ ಸಂಸ್ಕೃತಿ ಹೊತ್ತ ಗರತಿ, 'ಅತ್ತಿಮನಿ ಬೆಳದಿಂಗಳು ನಮಗೆ ಬಿಸಲಾಯ್ತು' ಎಂಬ ಭಾವನೆಯನ್ನು ಹೊಂದುವದು ಆಕೆಯ ಮನಸ್ಸಿನಲ್ಲಿ ಉಂಟಾಗುವ ಏರಿಳಿತವನ್ನು ಸ್ಪಷ್ಟವಾಗಿ ವ್ಯಕ್ತಪಡಿಸುತ್ತದೆ. ಪ್ರಾರಂಭದಲ್ಲಿ ಬಿಸಿಲನ್ನು ಅಂದರೆ ಸಂಕಟಗಳನ್ನು ದೂರಗೊಳಿಸಿ ಬೆಳದಿಂಗಳನ್ನು ಅಂದರೆ ಸುಖಸಂತೋಷಗಳನ್ನು ಪಡೆಯಲು ಹಂಬಲಿಸುವ ಮನಸ್ಸು, ನಂತರದಲ್ಲಿ ಬೆಳದಿಂಗಳು ಬಿಸಲಾಯಿತು' ಅಂದರೆ ಎಲ್ಲಿ ತನಗೆ ಸುಖ ಸಂತೋಷಗಳು ಸಿಗಬೇಕಾಗಿತ್ತೋ ಅಲ್ಲಿ ಅವುಗಳ ಕೊರತೆಯಿಂದಾಗಿ ಸಂಕಟಗಳು ಸುತ್ತಿಕೊಳ್ಳುತ್ತಿರುವುದನ್ನು ರೂಪಕಾತ್ಮಕ ಭಾಷೆಯಲ್ಲಿ ಹೇಳಿಕೊಂಡಿದ್ದಾಳೆ. ಗಂಡನ ಮನೆ, ತನ್ನ ಮನೆಯಾಗಿ ಪರಿವರ್ತನೆಯಾಗುವ ಮುಂಚೆ ಅದು ಅತ್ತೆಯ ಮನೆಯೇ, ಗರತಿ ಸಂಬೋಧಿಸುವ 'ಅತ್ತಿಯ ಮನೆ'ಯಲ್ಲಿ ಪ್ರೀತಿಯ ದ್ಯೋತಕವಾಗಿ ಸಿಗುವ ಆದರವೂ ಆಕೆಗೆ 'ಬೆಳದಿಂಗಳು ಬಿಸಿಲಾಗಿ ಪರಿಣಮಿಸಿದಂತೆ' ಭಾಸವಾಗುತ್ತಿದೆ. ಮುಂದೆ ಈ ಬದುಕಿನಲ್ಲಿ ಕಾಣಿಸುವ ಸಂಗತಿಗಳು ವಾಚ್ಯವಾಗುತ್ತ ಹೋಗುತ್ತವೆ:

ಹಚ್ಚಿದ ಮಾತೀಗಿ ಹರಿವ ಗಂಗ್ಯೆರಡಾಗಿ

ಇಚ್ಚುಳ್ಳ ಮನವು ವಿಷವಾಗಿ | ಒಳಗೊಳಗ

ಹಚ್ಚಿದವರ್‍ಯಾರ ಕದನವ

ಕೌಟುಂಬಿಕ ಬದುಕಿನಲ್ಲಿ ಹೀಗೆ ಬಿರುಕು ಕಾಣಿಸಿಕೊಳ್ಳುವುದು ಸಹಜ. ಇಚ್ಚುಳ್ಳ ಮನವು ವಿಷವಾಗಿ' ಎನ್ನುವಲ್ಲಿ ಪ್ರೀತಿ ವಿಶ್ವಾಸ ತುಂಬಬೇಕಾದ ಮನಸ್ಸಿನಲ್ಲಿ ವಿಷ ಕಾಣಿಸಿಕೊಳ್ಳುವಲ್ಲಿ, ಅಸಹಿಷ್ಣುತೆ ತಲೆಹಾಕುವ ಪರಿಯನ್ನು ಕಾಣುತ್ತೇವೆ. ಗರತಿಯ ಅಭಿವ್ಯಕ್ತಿಯಲ್ಲಿ ಆಕೆಯ ಸಹನೆಯ ಕಟ್ಟೆ ಸಾವಕಾಶವಾಗಿ ಕರಗಲು ತೊಡಗಿದ ಎಳೆ ಇಲ್ಲಿ ಕಾಣುತ್ತದೆ. ಈ ಪರಿಣಾಮವಾಗಿ ಸೊಸೆಯಾದವಳು ಗಂಡನ ಮನೆಯ ಕಿರಿಕಿರಿ ತಾಳಿಕೊಳ್ಳದ ಸ್ಥಿತಿಯಲ್ಲಿ ಕುಟುಂಬಗಳು ಹೋಳಾಗಿ ಹೋಗುತ್ತವೆ.

**ಹಂಗಿನ ತವರು ಮನೆ :** ಗಂಡನ ಮನೆಗೆ ಹೋದ ಹೆಣ್ಣುಮಗಳಿಗೆ ತಾಯಿ ಇರುವವರೆಗೆ ಅದೊಂದು ಪವಿತ್ರ ಸ್ಥಳ. ತಾಯಿ ನೆನಪು ಆಕೆಗೆ ಜೀವ ತುಂಬುತ್ತಿರುತ್ತದೆ. ಆದರೆ ತಾಯಿ ಇಲ್ಲದ ಮನೆ ಸ್ತ್ರೀಗೆ 'ತಾವೂರಿ ಬಾವೂರಿ'ಯಾಗಿ ಕಾಡುತ್ತದೆ. ಸ್ತ್ರೀಗೆ ತಾಯಿ ಇರುವ ತವರುಮನೆ ಕಾಶಿಗೆ ಸಮಾನ. ತಾಯಿಯ ಜವಾಬ್ದಾರಿ ಮರೆಯಾದಾಗ



ಅಥವಾ ತಾಯಿಯೇ ಇಲ್ಲದಾಗ, ತವರುಮನೆಯೇ ಹೆಣ್ಣಿಗೆ ಹಂಗಿನರಮನೆಯಾಗಿ ಪರಿವರ್ತನೆಯಾಗುತ್ತದೆ. ಇದೆಲ್ಲ ತವರಿನಲ್ಲಿ ಬದಲಾದ ಪರಿಸರದ ಬಗ್ಗೆ ಸ್ತ್ರೀಯಲ್ಲಿ ಹುಟ್ಟಿಕೊಳ್ಳುವ ಅಸಹಿಷ್ಣುತೆಯ ಭಾವನೆಯೇ ಆಗಿದೆ. ಇಂತಹ ಭಾವನೆಯ ಅಭಿವ್ಯಕ್ತಿಗಳು ನಮಗೆ ದೊರೆಯುತ್ತವೆ.

ಹಡೆದಮ್ಮ ಇದ್ದಾಗ ನಡುಮನಿ ನನಗಿತ್ತು

ಕಡಗದ ಕೈಯ ಸೊಸಿ ಬಂದು | ನಡೆವಾಗ

ತುದಿಗಟ್ಟಿ ನನಗ ಎರವಾಯ್ತು

ಗಂಜೀಯ ಕುಡಿದರು ಗಂಡನ ಮನಿ ಲೇಸ

ಅಂದಣದ ಮ್ಯಾಲ ಚವುರವ | ಸಾರಿದರ |

ಹಂಗೀನ ತವರ ಮನಿ ಸಾಕ

ಈಗ ಶಿಕ್ಷಣ, ತಿಳುವಳಿಕೆಗಳು ಅಲ್ಪಸ್ವಲ್ಪ ಪ್ರವೇಶ ಮಾಡಿ, ಇಂತಹ ಅಸಹಿಷ್ಣುತೆಯ ದುಷ್ಪರಿಣಾಮಗಳು ಕಡಿಮೆಯಾಗಿವೆ. ಆದರೆ ಕುಟುಂಬಗಳು ಸಣ್ಣವಾಗುತ್ತಿವೆ. ಇದರ ಅಡ್ಡಪರಿಣಾಮಗಳು ಮತ್ತೆ ಬೇರೆ ರೂಪದಲ್ಲಿ ಕಾಣುತ್ತಿವೆ. ಅದೇ ಅಸಹನೆ- ಅಸಹಿಷ್ಣುತೆಯಿಂದಾಗಿಯೇ ವೃದ್ಧಾಶ್ರಮಗಳು ನಮ್ಮಲ್ಲಿ ಬೆಳೆಯುತ್ತಿವೆ. ಕುಟುಂಬದ ಹಿರಿಯರು ಪರದೇಶಿಗಳಾಗುತ್ತಿದ್ದಾರೆ. ಹೀಗೆ ಅತ್ತೆ-ಸೊಸೆ, ಗಂಡ-ಹೆಂಡತಿ, ಕೌಟುಂಬಿಕ ಇತರ ಸಂಬಂಧಗಳ ನಡುವೆ ನಲುಗಿಹೋಗುವ ಕುಟುಂಬ ವ್ಯವಸ್ಥೆಯಲ್ಲಿ ಹೊಸದಾಗಿ ಉದ್ಭವವಾಗುತ್ತಿರುವ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವತ್ತ ಆಧುನಿಕರು ಲಕ್ಷ್ಯ ಹಾಕಬೇಕಾಗಿದೆ.

**ರಾಮಾಯಣ-ಮಹಾಭಾರತ ಕಥೆಗಳು :** ಭಾರತೀಯ ಮಹಾಕಾವ್ಯಗಳಾದ ರಾಮಾಯಣ ಮಹಾಭಾರತ ಕಥೆಗಳ ಹುಟ್ಟಿಗೆ ಮೂಲ ಕಾರಣ ಇನ್ನೊಬ್ಬರ ಏಳಿಯನ್ನು ಸಹಿಸಿಕೊಳ್ಳದ ಮನಸ್ಸು, ರಾಮಾಯಣದಲ್ಲಿ ದಶರಥ ಮಹಾರಾಜನು ರಾಮನಿಗೆ ಪಟ್ಟಗಟ್ಟಲು ತಯಾರಾದಾಗ, ಮಂಥರೆಯ ಮಾತಿಗೆ ಕಿವಿಗೊಟ್ಟು, ತನ್ನ ಸಹನೆಯನ್ನು ಕಳೆದುಕೊಂಡ ಕೈಕೇಯಿ ರಾಮನಿಗೆ ೧೪ ವರ್ಷ ವನವಾಸವಾಗಬೇಕೆಂದೂ, ತನ್ನ ಮಗ ಭರತನಿಗೆ ರಾಜ್ಯಾಭಿಷೇಕವಾಗಬೇಕೆಂದೂ ಬೇಡುತ್ತಾಳೆ. ಈ ಬೇಡಿಕೆಯನ್ನು ಸಹಿಸಿಕೊಳ್ಳಲು ಸಾಧ್ಯವಾಗದ ದಶರಥ ಬಿದ್ದು ಒದ್ದಾಡುತ್ತಾನೆ. ತನ್ನ ಮನೆಯವರೇ ಗೈಯುವ ಮೋಸಕ್ಕೆ ಯಾರು ಹೊಣೆಗಾರರು ಎಂದು ಹಂಬಲಿಸುತ್ತಾನೆ. ಆದರೆ ಕೈಕೇಯಿಯ ಅಸಹಿಷ್ಣುತಾ ಮನಸ್ಸು ತಾರಕಕ್ಕೇರಿರುತ್ತದೆ. ಸಹಿಸಿಕೊಳ್ಳಲು ಅಸಾಧ್ಯವಾದ ಸಂಗತಿಯಿಂದ ದಶರಥ ಒದ್ದಾಡಿದರೂ ಯಾರೂ ಏನೂ ಮಾಡುವ ಸ್ಥಿತಿಯಲ್ಲಿ ಇರಲಿಲ್ಲ. ಇದು ಅಸಹಿಷ್ಣುತೆ ಭುಗಿಲೆದ್ದಾಗ ಕಾಣುವ ಭಯಾನಕ ದೃಶ್ಯ.

ಇದನ್ನು ಕೇಳಿದ ಭರತನೂ ಸಹಿಸಿಕೊಳ್ಳದೇ ಗೋಳಾಡುತ್ತಾನೆ. ರಾಮ ಸೀತೆ ಲಕ್ಷ್ಮಣ ಕಾಡಿಗೆ ಹೊರಟುಹೋಗುತ್ತಾರೆ. ಭರತ ರಾಮನ ಪಾದುಕೆಗಳನ್ನು ತಂದು



ರಾಜಸಿಂಹಾಸನದ ಮೇಲೆ ಇಟ್ಟು ಒಂದಿಷ್ಟು ಸಮಾಧಾನ ತಾಳಿ, ರಾಜ್ಯಭಾರವನ್ನು ನಡೆಸುತ್ತಾನೆ. ಹೀಗೆ ಅಸಹಿಷ್ಣುತೆಯ ಆರ್ಭಟದಲ್ಲಿಯೇ ರಾಮಾಯಣ ಪ್ರಾರಂಭವಾಗುತ್ತದೆ. ಇವತ್ತಿಗೂ ಈ ಸವತಿ ಮತ್ಸರದಿಂದುಂಟಾಗುವ ಅನಾಹುತಗಳು ಆಗಾಗ ಕಾಣಿಸುತ್ತಲೇ ಇರುತ್ತವೆ. ಇಬ್ಬರು ಹೆಂಡಂದಿರ ಕಥೆಗಳು ಕೇಳಿಬರುತ್ತಲೇ ಇರುತ್ತವೆ.

ರಾಮಾಯಣದಲ್ಲಿ ಸವತಿಯ ಅಸಹನೆಯ ಗುಣ ಕಥೆಗೆ ಕಾರಣವಾದರೆ, ಮಹಾಭಾರತದಲ್ಲಿ ಸಹೋದರರ, ದಾಯಾದಿಗಳ ಅಸಹನೆಯ ಗುಣವೇ ಕಥೆಗೆ ಕಾರಣವಾಗುತ್ತದೆ.

ಭೀಷ್ಮನಿಗೆ ಪಟ್ಟಗಟ್ಟಿದಾಗ, ಈ ಸಂಗತಿಯನ್ನು ಸಹಿಸಿಕೊಳ್ಳಲು ಸಾಧ್ಯವಾಗದ ಕರ್ಣ ಅದನ್ನು ಹಿಯ್ಯಾಳಿಸಿ ಮಾತನಾಡುತ್ತಾನೆ.

ಕಟ್ಟಿದ ಪಟ್ಟಮೆ ಸರವಿಗೆ

ನೆಟ್ಟನೆ ದೊರೆ ಪಿಡಿದ ಬಿಲ್ಲೆ ದಂಟಿಂಗೆಣೆ ಕ

ಣ್ಗೆಟ್ಟ ಮುದುಪಂಗೆ ಪಗೆವರ

ನಿಟ್ಟೆಲ್ವಂ ಮುರಿವೊಡೆನಗೆ ಪಟ್ಟಂಗಟ್ಟಾ (ಪಂಪಭಾ.೧೦-೧೭)

(ಕಣ್ಣು ಕಾಣದ ಈ ಮುದುಕನಿಗೆ ಕಟ್ಟಿದ ವೀರಪಟ್ಟವು ಹಗ್ಗಕ್ಕೆ ಸಮಾನವಲ್ಲವೇ? ಆತನು ಧರಿಸಿರುವ ಬಿಲ್ಲು ದಂಟಿಗೆ ಸಮಾನವಲ್ಲವೇ? ಶತ್ರುಗಳ ನಿಟ್ಟೆಲುಬುಗಳನ್ನು ಪುಡಿಮಾಡಬೇಕಾದರೆ ನನಗೆ ಪಟ್ಟ ಕಟ್ಟಯ್ಯ) ಎನ್ನುತ್ತಾನೆ ಕರ್ಣ. ಆಗ ದ್ರೋಣ ಹೇಳುತ್ತಾನೆ :

ಕುಲಜರನುದ್ಧತರಂ ಭುಜ

ಬಲಯುತರಂ ಹಿತರನೀ ಸಭಾ ಮಧ್ಯದೊಳ

ಗ್ಗಲಿಸಿದ ಮದದಿಂ ನಾಲಗೆ

ಕುಲಮಂ ತುಬ್ಬುವವೊಲುರದೆ ನೀಂ ಕೆಡೆನುಡಿವೈ (ಪಂಪಭಾ.೧೦-೨೦)

(ಸತ್ಕುಲ ಪ್ರಸೂತರಾದವರನ್ನು, ಶ್ರೇಷ್ಠರಾದವರನ್ನು, ಎಲ್ಲರಿಗೂ ಹಿತರಾದವರನ್ನು ಕುರಿತು ಈ ಸಭಾಮಧ್ಯದಲ್ಲಿ ಹೆಚ್ಚಿದ ಕೊಬ್ಬನಿಂದ ನೀನು ನಿಷ್ಪ್ರಯೋಜಕವಾಗಿ ತಿರಸ್ಕಾರದ ಮಾತನಾಡಿದ್ದೀಯೆ. ಕುಲವನ್ನು ನಾಲಗೆ ಆಡಿ ತೋರಿಸುತ್ತದೆಯಲ್ಲವೆ?) ಎಂದಾಗ, ಮತ್ತೆ ರೋಷಗೊಂಡ ಕರ್ಣನು ಮಾರುತ್ತರ ಕೊಡುತ್ತಾನೆ.

ಕುಲಮನೆ ಮುನ್ನಮುಗ್ಗಡಿಪಿರೇಂ ಗಳ ನಿಮ್ಮ ಕುಲಂಗಳಾಂತು ಮಾ

ರ್ಮಲೆವನನಟ್ಟಿ ತಿಂಬುವೆ '**ಕುಲಂ ಕುಲಮಲ್ತು ಚಲಂ ಕುಲಂ ಗುಣಂ**

**ಕುಲಮಭಿಮಾನಮೊಂದೆ ಕುಲಮಣ್ಣು ಕುಲಂ**' ಬಗೆವಾಗಳೀಗಳೀ

ಕಲಹದೊಳಣ್ಣ ನಿಮ್ಮ ಕುಲವಾಕುಲಮಂ ನಿಮಗುಂಟು ಮಾಡುಗುಂ।

(ಪಂಪಭಾ.೧೦-೨೧)

(ಮಾತಿಗೆ ಮೊದಲು ಕುಲವನ್ನೇ ಏಕೆ ಕುರಿತು ಘೋಷಿಸುತ್ತೀರಿ? ನಿಮ್ಮ ಕುಲಗಳು

ಪ್ರತಿಭಟಿಸಿದವರನ್ನು ಎದುರಿಸಿ ಹಿಂಬಾಲಿಸಿ ತಿಂದುಹಾಕುತ್ತವೆಯೇನು? ಹುಟ್ಟಿದ ಜಾತಿ ನಿಜವಾದ ಕುಲವಲ್ಲ, ಛಲ ಕುಲ, ಸದ್ಗುಣ ಕುಲ, ಆತ್ಮಗೌರವವೊಂದೆ ಕುಲ, ಪರಾಕ್ರಮವೆಂಬುದು ಕುಲ. ವಿಚಾರ ಮಾಡುವುದಾದರೆ ಈಗ ಈ ಯುದ್ಧದಲ್ಲಿ ಅಣ್ಣಾ, ನಿಮ್ಮ ಈ ಕುಲವು ನಿಮಗೆ ವ್ಯಥೆಯನ್ನುಂಟುಮಾಡುತ್ತದೆ.)

ಅದಕ್ಕೆ ಭೀಷ್ಮನ ಪ್ರತಿಕ್ರಿಯೆ :

ಕಲಿತನದುರ್ಕು ಜವ್ವನದ ಸೊರ್ಕು ನಿಜೇಶನ ನಚ್ಚು ಮಿಕ್ಕ

ತೋಳ್ವಲದ ಪೊಡರ್ಪು ಕರ್ಣ ನಿನಗುಳ್ಳನಿತೇನೆನಗುಂಟೆ ಭಾರತಂ।

ಕಲಹವಿದಿರ್ಚುವಂ ಹರಿಗನಸೊಡೆಮೊಕ್ಕಳಮೇಕೆ ನೀಂ

ಪಳಂಚಲೆದಪೆಯಣ್ಣ ಸೂಕ್ವಡೆಯಲ್ಲಪ್ಪುದು ಕಾಣ ಮಹಾಜಿರಂಗದೊಳ್।

(ಪಂಪಭಾ.೧೦-೨೩)

(ಕರ್ಣನೇ, ಶೌರ್ಯದ ಗರ್ವ, ಯವ್ವನದ ಮದ, ಸ್ವಾಮಿಯ ನಂಬಿಕೆ, ಮೀರಿದ ಬಾಹುಬಲದ ವೈಭವ- ಇವು ನಿನಗಿರುವಷ್ಟು ನನಗಿದೆಯೇನಪ್ಪ, ಇದು ಭಾರತದ ಯುದ್ಧ, ಎದುರಿಸುವವನು ಹರಿಗನಾಗಿರುವಾಗ ಈ ಹೀಯಾಳಿಕೆಯೇಕೆ? ನೀನೂ ಪ್ರತಿಭಟಿಸಿ ಕಾದುವೆಯಣ್ಣಾ, ಈ ಮಹಾಯುದ್ಧದಲ್ಲಿ, ನಿನಗೂ ಸರದಿ ಬರುತ್ತದೆ ನೋಡುವೆಯಂತೆ.)

**೨. ಜುಗುಪ್ಸೆ- ಅಸಹಿಷ್ಣುತೆ :**

ಜೀವನದಲ್ಲಿ ಜುಗುಪ್ಸೆಗೊಂಡು ತನ್ನ ಬದುಕೇ ತನಗೆ ಸಹಿಸಿಕೊಳ್ಳಲು ಅಸಾಧ್ಯವೆನಿಸಿ, ಅಸಹಿಷ್ಣುತೆ ಸಂಕೀರ್ಣತೆಗೆ ಒಳಗಾಗಿ ಮಕ್ಕಳು, ಹೆಣ್ಣುಮಕ್ಕಳು, ವಿಶೇಷವಾಗಿ ಇಂದಿನ ದಿನಮಾನಗಳಲ್ಲಿ ರೈತರು ಆತ್ಯಹತ್ಯೆಗೆ ಶರಣಾಗುತ್ತಿದ್ದಾರೆ. ಬದುಕಿನ ಸಂಕಷ್ಟಗಳನ್ನು ಎದುರಿಸಲಾರದ ಮನಸ್ಸು, ಒಮ್ಮೊಮ್ಮೆ ಜುಗುಪ್ಸೆಗೊಂಡು, ಅಸಹಿಷ್ಣುತೆಗೆ ಒಳಗಾಗಿ ಜೀವಕಳೆದುಕೊಳ್ಳುವ ಮಟ್ಟಕ್ಕೆ ಹೋಗುತ್ತದೆ. ತಾವು ನಿರೀಕ್ಷೆ ಮಾಡಿದಷ್ಟು ಅಂಕಗಳು ಬರಲಿಲ್ಲವೆಂದು ಇಂದಿನ ವಿದ್ಯಾಥಿಗಳು ಅತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ಕೌಟುಂಬಿಕ ಸಂಕಷ್ಟಗಳನ್ನು ತಾಳಲಾರದೆ ಹೆಣ್ಣುಮಕ್ಕಳು ಆತ್ಮಹತ್ಯೆ ಮಾಡಿಕೊಳ್ಳುವುದು ಈಗ ಕಡಿಮೆಯಾಗಿರುವುದು ಒಳ್ಳೆಯ ಬೆಳವಣಿಗೆ.

ಇಲ್ಲಿ ವಿಶೇಷವಾಗಿ ರೈತರ ಆತ್ಮಹತ್ಯೆಗಳು ಅಸಹಿಷ್ಣುತೆಗೆ ತಕ್ಕ ಉದಾಹರಣೆ ಗಳೆನಿಸುತ್ತವೆ. ನಮ್ಮದು ಒಕ್ಕಲುತನ ಪ್ರಮುಖವಾದ ದೇಶ, ನಾನಾ ತೊಂದರೆಗಳಿಗೆ ಒಳಗಾಗುವ ರೈತ ಇಂದು ಒಂದೊಂದು ವರ್ಷಕ್ಕೆ ಸಾವಿರಾರು ಸಂಖ್ಯೆಯಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾನೆ. ಇದು ಒಂದು ರೀತಿಯಿಂದ ತನ್ನ ಜೀವನದ ಬಗ್ಗೆ ತನಗೇ

ಹುಟ್ಟಿಕೊಂಡ ಜುಗುಪ್ಸೆ, ಅಸಹಿಷ್ಣುತೆ, ಸಹಿಸಿಕೊಳ್ಳಲು ಸಾಧ್ಯವಾಗದ ತೊಂದರೆಗಳಿಗೆ ಒಳಗಾಗಿ ತನ್ನ ಜೀವದ ಬಗ್ಗೆ ತನಗೆ ಅಸಹ್ಯವುಂಟಾಗಿ ಆತ್ಮಹತ್ಯೆಗೆ ಒಳಗಾಗುತ್ತಿದ್ದಾನೆ.

ಕರ್ನಾಟಕದಲ್ಲಿ ರೈತನ ಮೊದಲನೇ ಆತ್ಮಹತ್ಯೆ ನಡೆದುದು ೧೯೯೮ನೇ ಮಾರ್ಚ್ ತಿಂಗಳಲ್ಲಿ, ಬೀದರ ಜಿಲ್ಲೆಯ ಒಬ್ಬ ರೈತ ತಾನು ಬೆಳೆಗಳಿಗಾಗಿ ಮಾಡಿಕೊಂಡ ಸಾಲ



ಶೂಲವಾಗಿ ಆತ್ಮಹತ್ಯೆಗೆ ಶರಣಾಗಿದ್ದ. ಇದು ಆಗಿನವರೆಗಿನ ನಮ್ಮ ಜೀವಮಾನದಲ್ಲಿ ಕಂಡುಕೇಳರಿಯದ ಒಂದು ಸಂಗತಿಯಾಗಿತ್ತು. ಅಲ್ಲಿಂದ ಪ್ರಾರಂಭವಾಗಿ, ಒಬ್ಬರನೊಬ್ಬರು ಅನುಕರಣೆ ಮಾಡುತ್ತ ರೈತರ ಆತ್ಮಹತ್ಯೆಗಳು ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತ ನಡೆದವು. ಈಗಂತೂ ಸಾರ್ವಜನಿಕರಿಗೆ, ಸರ್ಕಾರಗಳಿಗೆ ಈ ಆತ್ಮಹತ್ಯೆ ಸಮಸ್ಯೆ ಒಂದು ದೊಡ್ಡ ಸವಾಲಾಗಿ ಪರಿವರ್ತನೆ ಹೊಂದಿದೆ. ಇದು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ತಲೆನೋವಾಗಿ, ಬಗೆಹರಿಸಲು ಅಸಾಧ್ಯವಾದ ಒಂದು ನವೀನ ಸಮಸ್ಯೆಯಾಗಿ ಪರಿಣಮಿಸಿದೆ. ರೈತರು ತಮ್ಮ ಹೆಂಡರು ಮಕ್ಕಳ ಕ್ಷೇಮವನ್ನೂ ಲಕ್ಷಿಸದೆ, ತನ್ನ ಮನೆ ಹಾಳಾಗುವುದೆಂಬ ಅರಿವು ಇಲ್ಲದೆ, ಈ ಬಗೆಯಲ್ಲಿ ಸಹನೆ ಕಳೆದುಕೊಂಡರೆ ಯಾರು ಹೊಣೆಗಾರರು? ಆತ್ಮಹತ್ಯೆ ಒಂದು ಪರಿಹಾರವಲ್ಲ. ಸಹನೆ ಸಂಯಮ ಬಹಳ ಮುಖ್ಯ. ತಮ್ಮ ಜೀವನದಲ್ಲಿ ತಾವು ಕಳೆದುಕೊಂಡ ಸಹನೆ, ಅದರಿಂದುಂಟಾದ ಅಸಹನೆ, ಅಸಹಿಷ್ಣುತೆಯ ಭಾವದಿಂದ ಇಂತಹ ಆತ್ಮಹತ್ಯೆಗಳು ಹೆಚ್ಚಾಗುತ್ತಿವೆ.

ತಾವು ಸತ್ತು ಹೋದರೆ ಪರದೇಶಿಯಾಗುವ ತಮ್ಮ ಎಳೆಯ ಮಕ್ಕಳಿಗೆ ಆಸರೆ ಯಾರು? ನಂಬಿ ಕೈಹಿಡಿದ ಹೆಂಡತಿಯ ಪಾಡೇನು? ಇಡೀ ಬದುಕನ್ನೇ ಅರೆಹೊಟ್ಟೆ ತಿಂದು ಜೀವ ಹಿಡಿದ, ಮಕ್ಕಳ ಮೊಮ್ಮಕ್ಕಳ ನೋಡಿ ಖುಷಿಗೊಳ್ಳುತ್ತ ಬದುಕಿದ್ದ ತಾಯಿ-ತಂದೆ, ಅಜ್ಜ-ಅಜ್ಜಿಯವರ ಗತಿ ಏನಾಗಬಹುದು ಎಂಬ ವಿಚಾರವನ್ನು ರೈತರು ಮರೆಯುತ್ತಿದ್ದಾರೆ.

ಒಣ ಬರಗಾಲ, ಹಸಿ ಬರಗಾಲ, ಬೆಳೆನಾಶಗಳಂತಹವು ಸಾಮಾನ್ಯ ಸಂಗತಿಗಳು. ಮಳೆ ಕೈಕೊಟ್ಟು ಬರುವ ಬರಗಾಲಗಳಂತೂ ಸರಿಯೇ ಸರಿ. ಒಣ ಬರಗಾಲ ಇದು ಮಣ್ಣ ಮಾಡಿ ಇಟ್ಟಿತು/ ಬಿಸಿ ಗಂಜಿ ಕುದಿಸೋದಕ ದಿಕ್ಕಿಲ್ಲ ಅನ್ನ ಇಲ್ಲಕ ಮರಗತೀರೊ ಮನಿಯೆಲ್ಲ' ಇಂತಹ ಸಂಗತಿಗಳು ಕಾಲಕಾಲಕ್ಕೆ ಮರುಕಳಿಸಿದ ದಾಖಲೆಗಳೇ ದೊರೆಯುತ್ತವೆ. ಮಳೆ ವಿಪರೀತ ಬಂದೂ ಒಕ್ಕಲಿಗನಿಗೆ ಹಾನಿಗಳಾಗಿವೆ: 'ಸುರುವ ಮಾಡಿ ಮಳಿಯ ಬಂದಿತು

ಅಗಣಿತ ಒಂದೇ ಸವನ/ ರಾತ್ರಿ ಮೋಸಮ ಹಾಕ್ಯಾರೊ ಮಾಡಿ ಕಣ/ ಮುರಕೊಂಡು ಗಿಡಬಳ್ಳಿ ನೆಲಕ ಬಿದ್ದಾವೊ ಹೊರಳಿ ಉಳಿದಿಲ್ಲ ಹತ್ತಿಯ ತೊಳಿ ಅಡವ್ಯಾಗಿನ್ನ'- ಇಂತಹ ಹಾನಿಗಳೂ ರೈತನಿಗೆ ಸಾಮಾನ್ಯ.

ಇಂತಹ ಎಷ್ಟೊಂದು ಬಗೆಯ ಕೆಟ್ಟ ಕಾಲಗಳನ್ನು ನಮ್ಮ ಹಿರಿಯರು ಕಂಡಿಲ್ಲ. ಅವರೆಲ್ಲ ಹೀಗೆ ಹೆದರಿ ಸಾಯುತ್ತ ಹೋಗಿದ್ದರೆ, ನಮಗೆ ಎಂತಹ ಆದರ್ಶಗಳನ್ನು ಅವರು ಬಿಟ್ಟು ಹೋಗುತ್ತಿದ್ದರು? 'ಯಾತಕ್ಕೆ ಮಳೆ ಹೋದವೋ ಶಿವ ಶಿವ/ ಲೋಕ ತಲ್ಲಣಿಸುತಾವ/ ಬೇಕಿಲ್ಲದಿದ್ದರೆ ಬೆಂಕಿಯ ಮಳೆ ಸುರಿದು ಉರಿಸಿ ಕೊಲ್ಲಲು ಬಾರದೆ ಎನ್ನುತ್ತ ಶಿವನ ಮೇಲೆಯೇ ಭಾರ ಹಾಕಿ, 'ಹುಟ್ಟಿಸಿದ ಶಿವ ಹುಲ್ಲು ಮೇಯಿಸುತ್ತಾನೆಯೇ? ಎಂಬ ವಿಶ್ವಾಸದಿಂದ ಜೀವನ ಸಾಗಿಸುತ್ತ ಬಂದಿದ್ದಾರೆ.

ಒಂದು ವರ್ಷವಲ್ಲ, ಇಂತಹ 'ಮಳೆ' ಮೂರಾಲ್ಕು ವರ್ಷ ಇಲ್ಲವೆಂದರೂ ಗಂಜಿಯ ಆಸರೆಗಾಗಿ ಅವರ ಹಗೆ, ಗುಮ್ಮಿ (ಕಣಜ, ಕರ್ಜಿ)ಗಳು ಯಾವಾಗಲೂ



ತುಂಬಿ ಇರುತ್ತಿದ್ದವು. ಪ್ರಸಂಗ ಬಂದಾಗ ತನ್ನ ಕುಟುಂಬ ಒಂದೇ ಅಲ್ಲ, ತಮ್ಮನ್ನು ಅವಲಂಬಿಸಿದ್ದ ಕುಟುಂಬಗಳನ್ನೂ ಬದುಕಿಸುವ ಜಾಣ್ಮೆ ಅವರದಾಗಿರುತ್ತಿತ್ತು.

ಮೇವಿನ ಬರ, ಬಾಟಿ ಬರ, ಡೋಗಿ ಬರಗಳ ಕಥೆಗಳು ಒಂದೊಂದೂ ರೋಚಕವಾಗಿವೆ. ಆ ಕಡೆ ದನಗಳಿಗೆ ಸರಿಯಾಗಿ ಮೇವೂ ಆಗದೆ, ಈ ಕಡೆ ತೆನೆ ತುಂಬಿ ಕಾಳೂ ಕೊಡದೆ- ಜೋಳದ ಬೆಳೆ ಅರ್ಧಕ್ಕೆ ಒಣಗಿ ನಿಂತದ್ದೇ 'ಬಾಟಿ ಬರ'. ಅಂತಹದಕ್ಕೂ ನಮ್ಮವರು ಅಂಜಿದವರಲ್ಲ. 'ಬಾಟಿ ಸಾಲಾ ವರ್ಸಿನಲ್ಲಿ ಬರಾ ಬಾದಂದು, ಕ್ವಾಟಿ ಜ್ವಾಳಾ ತರಬೇಕೆಂದು ಖರೀದಿಗ ತಯಾರ ಆಗಿದ್ದ. ಸಾಟಿ ಮಳಾ ಮುಂಡಾಸ ಕಟಗೊಂಡು ಕ್ವಾಟಿಮ್ಯಾಗ ಹೋಗಿ ಮೋಟರದಾಗ ಕುಂತು ಗದಗ- ಬೆಟಗೇರಿ ಬಲ್ಲಿ ಇಳದಿದ್ದ. ಆಗಟೋ ಇಗಟೋ ಮಂದಿ ಬಂದು ಜ್ವಾಳದ ಖರೀದಿ ನಡೆದಿತ್ತು. ಮಂದಿಗ ಬಗಟ ಮಾಡಕೋತ ಒಳಗೋಗಿ ನೋಡಿದ್ರ ಕೋಟಾದಾಗ ಮಾಲ ಹೇಟಾ ಕಾಣುಸ್ತು, ಉಪರಾಟೆ ತಿರಗಿದ್ದ'. ಇದೊಂದು ಅಪರೂಪದ ದಾಖಲೆ ಮಾತು. ನಮ್ಮ ಹಿರಿಯರ ಮುನ್ನಾಲೋಚನೆಯನ್ನು, ನಿಸರ್ಗದ ಕೋಪವನ್ನು ನಗುನಗುತ್ತಲೇ ಎದುರಿಸುವ ಪ್ರವೃತ್ತಿಯನ್ನು-ನಮ್ಮ ಒಕ್ಕಲಿಗ ಯುವಕರು ಕಳೆದುಕೊಳ್ಳುತ್ತಿದ್ದಾರೆ.

'ಒಕ್ಕಲಗೇರಾಗ ಮಳಿರಾಜ ಅವರು ಮಕ್ಕಳ ಮಾರ್‍ಯಾರಾ ಮಳಿರಾಜಾ' ಎಂಬ ಮಾತು, ತಮ್ಮಲ್ಲಿಯ ಸಂರಕ್ಷಣ ಮಾಡುವ ತಾಕತ್ತು ಕಳೆದುಕೊಂಡಾಗಿನ ನಿರ್ಣಯವಾಗಿದೆ. 'ಹೊಟ್ಟೆಯ ಮಕ್ಕಳು ರೊಟ್ಟಿ ಬೇಡಿದರ/

ಹೊಟ್ಟೆಯೊಳಗ ಬೀಳತದ ಬೆಂಕಿ/ ಮರುಗಲಾರದ ಮಕ್ಕಳ ಮಾರಾರ/ ತಗೊಂಡವ ಮಾಡ್ಯಾನ ಜ್ವಾಕಿ' ಎಂಬ ಉದಾಹರಣೆಯು ತಮ್ಮ ಮಕ್ಕಳು ಎಲ್ಲಾದರೂ ಜೀವಿಸಿರಲಿ ಎಂದು ಬಯಸಿದ ಫಲವಾಗಿದೆ. ಈಗ ಮಕ್ಕಳಿಗೆ ಆಸರೆ ಆದವರೇ ಹಾಡುಹಗಲು ಹಗ್ಗಕ್ಕೆ ಕೊರಳು ಕೊಟ್ಟು ಸ್ವರ್ಗಕ್ಕೆ ಏರಿದರೆ, ಸಾಯಲೂ ತಿಳಿಯದ ಮಕ್ಕಳು ಏನು ತಿಂದು ಬದುಕಬೇಕು? ಯಾರನ್ನಾಶ್ರಯಿಸಿ ಬದುಕಬೇಕು?

ಒಕ್ಕಲಿಗರಿಗೆ ಒಂದಲ್ಲ ನೂರು ಕುತ್ತುಗಳು ಸಾಮಾನ್ಯ ಮಕ್ಕಳ ತಾಪ ನೋಡದೆ, ದನಗಳ ತಾಪ ಸಹಿಸದೆ ತಾನು ಉರಲು ಹಾಕಿಕೊಂಡ ಉದಾಹರಣೆಗಳು ಅಪರೂಪಕ್ಕೆ ಸಿಗಬಹುದು. ಆದರೆ ಬೆಳೆ ನಾಶಕ್ಕೆ ಅಂಜಿ, ಹೀಗೆ ಒಬ್ಬರ ನೋಡಿ ಒಬ್ಬರು ಇಡೀ ಕುಟುಂಬವನ್ನು ದಿಗ್ಗೇಡಿ ಮಾಡಿದ ಉದಾಹರಣೆಗಳು ಈಗ ಹೆಚ್ಚಾಗುತ್ತಿವೆ.

“ಆತ್ಮಹತ್ಯೆ' ಒಂದು ಘಾತುಕ ಕ್ರಿಯೆ, ಇಡೀ ಕುಟುಂಬವನ್ನು ಕನಿಷ್ಟ ಒಂದು ತಲೆಮಾರು ಪುನಃ ಚೇತರಿಸಿಕೊಳ್ಳದಂತೆ ಮಾಡುವ ಅನಾಹುತ. ನೆನೆಸಿಕೊಳ್ಳಲೂ ಸಾಧ್ಯವಾಗದಂತಹದು. ಮಳೆ ಇಲ್ಲದೇ ಬರಗಳು ಬಿದ್ದಾಗ ಭಾಗೀರಥಿ, ಮದಗದ ಕೆಂಚವ್ವನಂತಹ ಅಮಾಯಕ ಹೆಣ್ಣುಗಳನ್ನು ಕೆರೆಗೆ ಹಾರ ಕೊಟ್ಟ ಉದಾಹರಣೆಗಳೂ ನಮ್ಮಲ್ಲಿವೆ. ಇವೆಲ್ಲ ಅಧಿಕಾರಸ್ಥರು ಮಾಡಿದ ಹತ್ಯೆಗಳು. ಆತ್ಮಹತ್ಯೆಗೆ ಇಳಿದರೆ ಕಾಪಾಡುವವರು ಯಾರು? 'ಮಳಿಯಪ್ಪ ಮಳಿರಾಜ ಬೆಳಿ ಒಣಗಿ ಹೋದಾವೊ/ ಬಡವರು ಬಾಯಿ ಬಿಡತಾರೋ' ಇಷ್ಟೇ ಅವರು ಸ್ವೀಕರಿಸಿದ್ದು; ಬಾಯಿ ಬಿಟ್ಟಾರು, ಪ್ರಾಣಬಿಡರು. ಆದರೆ ಇವತ್ತಿನ ರೈತರು ಯಾವುದೇ ಯೋಚನೆ ಇಲ್ಲದೆ ಸಹನೆ ಇಲ್ಲದೆ



ಆತ್ಮಹತ್ಯೆಗೆ ಒಳಗಾಗುತ್ತಿದ್ದಾರೆ. ನಮ್ಮ ಸರ್ಕಾರಗಳು ಈ ಬಗೆಗೆ ಗಂಭೀರವಾಗಿ ಚಿಂತಿಸುತ್ತಿಲ್ಲ.

**೩. ಮಾತ್ಸರ್ಯ-ಅಸಹಿಷ್ಣುತೆ :**

ದಿನಾಂಕ ೧೩-೧೧-೨೦೧೭ ರಂದು ಬೆಳಗಾಂವಿಯಲ್ಲಿ ಪ್ರಾರಂಭವಾದ ಕರ್ನಾಟಕ ಸರ್ಕಾರದ ಚಳಿಗಾಲದ ಅಧಿವೇಶನದ ಮೊದಲ ದಿನ, ಅಗಲಿದ ಗಣ್ಯರಿಗೆ ಸಂತಾಪ ಸೂಚಿಸುವ ನಿರ್ಣಯದ ಮೇಲೆ ಮಾತನಾಡಿದ ಶ್ರೀ ವೈ.ಎಸ್.ವಿ.ದತ್ತ ಅವರು: 'ಗೌರಿ (ಮತ್ತು ಡಾ. ಕಲಬುರ್ಗಿ) ಹತ್ಯೆ ಮೂಲಕ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಅಸಹಿಷ್ಣತೆಯ ಗುಂಡು ಕೊಂದುಹಾಕಿತು' ಎಂದು ಹೇಳಿದ ಮಾತು ತೀರ ಗಮನಾರ್ಹವಾದುದಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯನವರು 'ಹಿರಿಯ ಸಂಶೋಧಕ ಎಂ.ಎಂ.ಕಲಬುರ್ಗಿ ಮತ್ತು ಗೌರಿ ಲಂಕೇಶ್ ಹತ್ಯೆ ಸಮಾಜದಲ್ಲಿ ಭಯದ ವಾತಾವರಣ ಮೂಡಿಸಲು ಸಮಾಜಘಾತುಕ ಶಕ್ತಿಗಳು ನಡೆಸಿರುವ ಪ್ರಯತ್ನ' ಎಂದಿದ್ದಾರೆ.

(ಪ್ರಜಾವಾಣಿ, ೧೪-೧೧-೧೭).

ಇವು ಅಸಹಿಷ್ಣುತೆಯ ಇಂದಿನ ವಿಷಮವಿಸ್ತಾರವನ್ನು ಹೇಳುವ ಎರಡು ಮಾತುಗಳಾಗಿವೆ. ಅಸಹಿಷ್ಣುತೆ ಎನ್ನುವುದು ಜೀವವನ್ನೂ ಲೆಕ್ಕಿಸದಷ್ಟು ವಿಚಾರಹೀನ ಕ್ರೂರ ಸ್ಥಿತಿಗೆ ಮುಟ್ಟಿದಾಗ, ಅದರಿಂದಾಗುವ ಅನಾಹುತ ಜೀವಹಾನಿ, ಈ ಜೀವಹಾನಿಗಳಿಂದ ಉಂಟಾಗುವ ಸ್ಥಿತಿಯೆಂದರೆ ಸಮಾಜದಲ್ಲಿ ಭಯದ ವಾತಾವರಣ ಮೂಡುವುದು. ಕೊಲೆಗಡುಕರು ಕೇವಲ ಕೊಲೆಗಡುಕರಾಗಿ ಉಳಿಯದೆ ಅವರು ಸಮಾಜಘಾತುಕ ಶಕ್ತಿಗಳಾಗಿ ಕಾಣುತ್ತಾರೆ.

**ಭಯದ ವಾತಾವರಣ ನಿರ್ಮಾಣ :** ಒಬ್ಬನ ಬಗ್ಗೆ ಉಂಟಾಗುವ ಮತ್ಸರ, ಅದು ವೈಯಕ್ತಿಕ, ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಯಾವುದೇ ಹಂತದ ಸಂಗತಿಯಾಗಿರಬಹುದು, ಅದು ತನ್ನ ಮಿತಿಯನ್ನು ಮೀರಿ ಬೆಳೆದರೆ ಅಸಹಿಷ್ಣುತೆಯಾಗಿ ಕಾಣುತ್ತದೆ. ವ್ಯಕ್ತಿಗೆ ದೈಹಿಕ ಹಾಗೂ ಮಾನಸಿಕ ಹಿಂಸೆ ಕೊಡುವುದು, ಮುಂದುವರೆದು ಅವನ ಜೀವನಕ್ಕೆ ಹಾನಿಯನ್ನು ತಂದೊಡ್ಡುವುದು ಅಸಹಿಷ್ಣುತೆಯ ಪರಿಣಾಮವಾಗಿ ಕಾಣುತ್ತದೆ. ಇದರ ದುಷ್ಪರಿಣಾಮದ ವ್ಯಾಪಕತೆಗೆ ಮೊದಲು ಈಡಾಗುವುದು ಆ ವ್ಯಕ್ತಿಯ ಕುಟುಂಬ. ಅವನ ಮೇಲೆ ಅವಲಂಬಿತವಾಗಿರುವ ಕುಟುಂಬದ ಸದಸ್ಯರು ಕನಿಷ್ಟ ಒಂದೆರಡು ತಲೆಮಾರು ಹೊಟ್ಟೆಬಟ್ಟೆಗೆ ಗತಿಯಿಲ್ಲದಂತೆ ಆಗಬಹುದು.

ಭಿನ್ನಾಭಿಪ್ರಾಯ ಹೊಂದುವುದು ಭಾರತದ ಸಂವಿಧಾನದ ಪ್ರಮುಖ ಅಂಗ. ಆದರೆ ಅಸಹಿಷ್ಣುತೆ ಹೆಚ್ಚಿದ ನಾಡಿನಲ್ಲಿ ಭಯದ ವಾತಾವರಣ ನಿರ್ಮಾಣವಾಗುತ್ತದೆ. ಅಸಹಿಷ್ಣುತೆಯಿಂದಾಗಿ ಇಂದಿನ ದಿನಮಾನಗಳಲ್ಲಿ ದೇಶದಲ್ಲಿ ನಡೆದಿರುವ ಘಟನೆಗಳನ್ನು ಗಮನಿಸಿದರೆ, ಭಾರತದ ಬಹುಮುಖ್ಯ ಲಕ್ಷಣವಾದ ವೈವಿಧ್ಯತೆಯ ಮೇಲೆ ಹಲ್ಲೆ



ನಡೆಯುತ್ತಿದ್ದು, ಬಹುಸಂಸ್ಕೃತಿಯ ನಾಡಾದ ಭಾರತದ ಸಂಸ್ಕೃತಿಯೇ ಹಾಳಾಗುತ್ತಿದೆ ಎನಿಸುತ್ತಿದೆ. ತಿನ್ನುವ ಆಹಾರ, ಭಕ್ತಿ ಸಲ್ಲಿಸುವ ದೇವಮಂದಿರಗಳು, ಜಾತಿರಾಜಕಾರಣ, ಧರ್ಮಧರ್ಮಗಳ ನಡುವಿನ ಭಿನ್ನಾಭಿಪ್ರಾಯ, ಟೀಕಿಸುವ ಅಸಹ್ಯ ಮಾತುಗಳು ಇವೆಲ್ಲ ಹದ್ದು ಮೀರಿ, ಸಾಮಾಜಿಕ ಬದುಕಿನಲ್ಲಿ ಒಂದು ಬಗೆಯ ಅಸಹ್ಯ ಭಾವನೆ ಉಂಟಾಗು ವಂತಾಗುತ್ತಿದೆ. ಶಿಕ್ಷಣವೇತ್ತರೇ ಇಂತಹ ಕೆಲಸಗಳಲ್ಲಿ ಹೆಚ್ಚಾಗಿ ಭಾಗಿಯಾಗುತ್ತಿದ್ದಾರೆ. ಇದನ್ನು ಗಮನಿಸಿದರೆ ನಾಗರಿಕ ಜೀವನವೇ ಹದಗೆಟ್ಟು ಹೋಗಿದೆ ಎನಿಸುತ್ತದೆ.

ಅಸಹಿಷ್ಣುತೆಯ ಬಗೆಗೆ ನಮಗೆ ಹೆಚ್ಚು ಕೇಳಿಬಂದುದು ಡಾ. ಎಂ.ಎಂ. ಕಲಬುರ್ಗಿ ಅವರ ಹತ್ಯೆಯಾದಾಗ, ಅದರಲ್ಲೂ ಅವರ ಹತ್ಯೆಯನ್ನು ಖಂಡಿಸಿ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಲು ಮತ್ತು ಆ ಮೂಲಕ ದೇಶದ ಗಮನ ಸೆಳೆಯಲು ನಾಡಿನ, ದೇಶದ ನೂರಾರು ಪ್ರತಿಭಾವಂತ ಸಾಹಿತಿಗಳು, ಕಲಾವಿದರು ತಮಗೆ ಸಂದ ಪ್ರತಿಷ್ಠಿತ

ಪ್ರಶಸ್ತಿಗಳನ್ನು ಹಿಂತಿರುಗಿಸುವ, ತಾವು ಹೊಂದಿರುವ ಜವಾಬ್ದಾರಿ ಸ್ಥಾನಗಳಿಗೆ ರಾಜೀನಾಮೆ ಕೊಟ್ಟು ಪ್ರತಿಭಟನೆಗೆ ತೊಡಗಿದ್ದಾಗ ಅಸಹಿಷ್ಣುತೆ ಬಗೆಗೆ ರಾಷ್ಟ್ರಮಟ್ಟದಲ್ಲಿ ಹೆಚ್ಚು ಚರ್ಚೆ ನಡೆಯಿತು. ಈ ಚರ್ಚೆ ಮತ್ತು ಪ್ರತಿಭಟನೆಗೆ ಪ್ರಪಂಚದ ಪ್ರತಿಭಾವಂತ ದಿಗ್ಗಜರೂ ಕೈಜೋಡಿಸಿದರು.

ಇಂತಹ ದೊಡ್ಡ ಚರ್ಚೆಗೆ ನಾಂದಿಯಾದುದು ಇಂದಿನ ಈ ಸಮ್ಮೇಳನದ ಸರ್ವಾಧ್ಯಕ್ಷ ಸ್ಥಾನವನ್ನು ಹೊಂದಿರುವ ಪ್ರೊ. ಚಂದ್ರಶೇಖರ ಪಾಟೀಲ ಅವರ ಪ್ರತಿಭಟನೆಯ ರೀತಿಯಿಂದ ಎಂಬುದು ಮಹತ್ವದ ಸಂಗತಿಯಾಗಿದೆ. ಡಾ. ಎಂ.ಎಂ. ಕಲಬುರ್ಗಿ ಅವರ ಹತ್ಯೆಯಾದುದು ಅಗಸ್ಟ್ ೩೦ ರಂದು. ಮುಂದೆ ನಾಲ್ಕೈದು ದಿನಗಳಲ್ಲಿಯೇ ಚಂಪಾ ಅವರು, ೪-೯-೨೦೧೫ ರಂದು ತಮಗೆ ೨೦೦೯ರಲ್ಲಿ ಸಂದಿದ್ದ ಕನ್ನಡದ ಪ್ರತಿಷ್ಠಿತ ಪಂಪ ಪ್ರಶಸ್ತಿಯನ್ನು ಅದರ ಫಲಕದ ಜೊತೆಗೆ ಅದಕ್ಕಾಗಿ ಸರ್ಕಾರದಿಂದ ತಮಗೆ ಸಂದ ಮೂರು ಲಕ್ಷ ರೂಪಾಯಿಗಳನ್ನೂ ಸರ್ಕಾರಕ್ಕೆ ಹಿಂತಿರುಗಿಸಿದರು.

'ಡಾ. ಎಂ.ಎಂ. ಕಲಬುರ್ಗಿ ಅವರನ್ನು ಗುಂಡಿಕ್ಕಿ ಹತ್ಯೆ ಮಾಡಿರುವುದು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಹಲ್ಲೆ ಎಂಬುದು ನನ್ನ ಅನಿಸಿಕೆ. ಇದನ್ನು ಖಂಡಿಸಿ ಈ ತೀರ್ಮಾನಕ್ಕೆ ಬಂದಿದ್ದೇನೆ'(ಡಾ. ಎಂ.ಎಂ.ಕಲಬುರ್ಗಿ ಹತ್ಯೆ: ಪ್ರತಿಕ್ರಿಯೆ, ಪು.೧೫೧) ಎಂಬ ಒಕ್ಕಣೆಯ ಪತ್ರವನ್ನೂ ಅದರ ಜೊತೆಗೆ ಇಟ್ಟರು. ಡಾ. ಎಂ.ಎಂ.ಕಲಬುರ್ಗಿ ಅವರ ಹತ್ಯೆ ಒಬ್ಬ ವ್ಯಕ್ತಿಯ ಕೊಲೆಯಲ್ಲ, ಒಂದು ನಾಡಿನ ಸಂಸ್ಕೃತಿಯ ಕೊಲೆ. ಚಂಪಾ ಅವರ ಪ್ರತಿಭಟನೆ ಒಬ್ಬನ ಪ್ರತಿಬಟನೆಯಲ್ಲ, ಅದು ಸಂವೇದನಾಶೀಲ ಪ್ರಪಂಚದ ಪ್ರತಿಭಟನೆಯಾಗಿದೆ. ಚಂಪಾ ಅವರ ಪ್ರತಿಭಟನೆಯ ನಂತರ ದೇಶವ್ಯಾಪಿ ಈ ಚರ್ಚೆ ಹಬ್ಬಿಕೊಂಡಿತು. ಭಾರತದ ಬಹುದೊಡ್ಡ ವಿಚಾರವಾದಿಗಳು, ಲೇಖಕರು, ಡಾ. ಎಂ.ಎಂ.ಕಲಬುರ್ಗಿ ಅವರ ಹತ್ಯೆಯನ್ನು ಖಂಡಿಸಿ ತಮ್ಮ ಮಹತ್ವದ ಹುದ್ದೆಗಳನ್ನು ತ್ಯಜಿಸುವ, ತಮ್ಮ ಸಾಮರ್ಥ್ಯಕ್ಕೆ ಬಂದ ಪ್ರಶಸ್ತಿಗಳನ್ನು ಸರ್ಕಾರಗಳಿಗೆ ಹಿಂತಿರುಗಿಸುವ

ಪ್ರತಿಭಟನೆಗಳು ದೇಶದ ತುಂಬಾ ಸಾಮಾನ್ಯವಾದವು. ಕೆಲವು ಪ್ರಮುಖರ ಹೇಳಿಕೆಗಳನ್ನು ಇಲ್ಲಿ ಗಮನಿಸಿದರೆ, ಅಸಹಿಷ್ಣುತೆಯ ಅರಿವು ಒಂದಿಷ್ಟು ಸ್ಪಷ್ಟವಾಗುವಂತಿದೆ.

**ದೇವನೂರು ಮಹಾದೇವ :**

ಸಾಹಿತಿ ದೇವನೂರ ಮಹಾದೇವ ಅವರು ಕೇಂದ್ರ ಸಾಹಿತ್ಯ ಅಕಾಡೆಮಿ ಹಾಗೂ ಪದ್ಮಶ್ರೀ ಪ್ರಶಸ್ತಿಗಳನ್ನು, ಈ ಸಂಬಂಧದಲ್ಲಿ ತಮಗೆ ದೊರೆತ ಪ್ರಶಸ್ತಿಯ ಮೊತ್ತ ೨೫ ಸಾವಿರ ರೂಪಾಯಿಗಳನ್ನೂ ಹಿಂತಿರುಗಿಸುತ್ತ, ಅವರು ಬರೆದ ಪತ್ರದ ಸಾಲುಗಳು ಅಸಹಿಷ್ಣುತೆ ಚರ್ಚೆಯ ಹಿನ್ನೆಲೆಯಲ್ಲಿ ಬಹು ಪ್ರಮುಖವಾಗಿವೆ.

"ಯಾವುದೇ ಆಳ್ವಿಕೆಯು ಸಂವೇದನಾಶೀಲವಾಗಲು ಹಾಗೂ ಸಮಾಜಮುಖಿ ಯಾಗಲು ಲೇಖಕ, ಕಲಾವಿದ, ಪ್ರಜ್ಞಾವಂತರು ಸರ್ಕಾರಕ್ಕೆ ಅಂಕುಶದಂತೆ ಇರಬೇಕು ಎಂದು ನಂಬಿಕೊಂಡಿರುವ ನಾನು, ಇತ್ತೀಚಿನ ಅಸಹಿಷ್ಣುತೆಗಾಗಿ ಪ್ರಶಸ್ತಿ ಹಿಂತಿರುಗಿಸುತ್ತಿರುವ' ಈ ಸಂದರ್ಭದಲ್ಲಿ ನನ್ನ ಸ್ವಭಾವಕ್ಕೆ ವಿರುದ್ಧವಾಗಿ ಸಂಯಮಿಸಿ ಕೊಂಡೇ ಬಂದೆ. ಆದರೆ ಯಾವಾಗ ಕೆಲ ಲೇಖಕ-ಕಲಾವಿದರು ಆಳ್ವಿಕೆ ಪರ ಸಂಘಟಿತರಾಗಿ ನಿಂತರೋ ಅದು ಕೇಡಿನ ಲಕ್ಷಣ ಅನ್ನಿಸಿಬಿಟ್ಟಿತು. ಇದಕ್ಕೆ ಜಿಗುಪ್ಸೆಗೊಂಡು, ನಾನು ಪಡೆದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಪದ್ಮಶ್ರೀ ಪ್ರಶಸ್ತಿಗಳನ್ನು ಹಿಂತಿರುಗಿಸುತ್ತಿದ್ದೇನೆ....

ನಮ್ಮ ಸ್ವಾತಂತ್ರ್ಯ ಹೋರಾಟದ ಕನಸುಗಳಾದ ಅಭಿವ್ಯಕ್ತಿ ಸ್ವಾತಂತ್ರ್ಯ, ಸಹಿಷ್ಣುತೆ, ಸಾಮಾಜಿಕ ನ್ಯಾಯ ಇತ್ಯಾದಿ ಮೌಲ್ಯಗಳು ನೆಹರೂ ಯುಗದ ನಂತರ ಒಂದಲ್ಲಾ ಒಂದು ಕ್ಷೀಣಿಸುತ್ತಾ ಬಂದು ಈಗ ತತ್ತರಿಸುತ್ತಿವೆ. ಈ ಮೌಲ್ಯಗಳು ಕಣ್ಣಿಗೆ ಕಾಣುವಂತೆ ಭೌತಿಕ ಅಲ್ಲದಿರಬಹುದು, ಆದರೆ ಇವು ನಾವು ಕಟ್ಟಬೇಕಾದ ಸಾಂಸ್ಕೃತಿಕ, ಸಾಮಾಜಿಕ ಭಾರತದ ಉಸಿರಾಟದಂತೆ ಎಂಬ ಈ ಅರಿವಿಲ್ಲದಿರುವುದೇ ಇಂದಿನ ಅಸಹಿಷ್ಣುತೆಗೆ ಕಾರಣ ಎನ್ನಿಸುತ್ತಿದೆ.

ಇದಲ್ಲದಿದ್ದರೆ, ದಾದ್ರಿಯಂಥ ಘಟನೆಗಳೋ ಅಥವಾ ವೈಚಾರಿಕ ಭಿನ್ನಾಭಿಪ್ರಾಯ ಗಳಿಂದ ನಡೆಯುತ್ತಿರುವ ಹತ್ಯೆಗಳೋ ಇವನ್ನು ಆಯಾಯ ರಾಜ್ಯಗಳ ಸಮಸ್ಯೆ ಎಂದು ಆಳ್ವಿಕೆ ನಡೆಸುತ್ತಿರುವ ಕೇಂದ್ರ ಸರ್ಕಾರದ ವರಿಷ್ಠರೇ ಹೇಳುವ ದುರಂತ ಸಂಭವಿಸುತ್ತಿರಲಿಲ್ಲ. ಹಾಗೆಯೇ 'ಈ ಪ್ರಜ್ಞಾವಂತರ ಪ್ರಶಸ್ತಿ ಹಿಂತಿರುಗಿಸುವ ಪ್ರಕ್ರಿಯೆ'ಯ ಸಾಮಾಜಿಕ, ಸಾಂಸ್ಕೃತಿಕ ಅಸಹಿಷ್ಣುತೆಗೆ ಪ್ರತಿಕ್ರಿಯೆಯಾಗಿ ಎಂಬ ಕನಿಷ್ಟ ಅರಿವಿದ್ದರೂ ಕಾನೂನು ಸಚಿವರು ಅದನ್ನು 'ಮೋದಿ ಅವರ ವಿರುದ್ಧ ಸೈದ್ಧಾಂತಿಕ ಅಸಹಿಷ್ಣುತೆ' ಎಂಬ ಆತ್ಮನಾಶಕ ಮಾತುಗಳನ್ನಾಡುತ್ತಿರಲಿಲ್ಲ. ಬದಲಾಗಿ ಇದನ್ನು ಆಳ್ವಿಕೆ ನಡೆಸುತ್ತಿರುವ ವರಿಗೆ ಹೆಚ್ಚು ಸಂವೇದನಾಶೀಲರಾಗಲು ಸಹಕಾರಿ ಎಂದೇ ಸ್ವೀಕರಿಸಬಹುದಿತ್ತು."

(ಅದೇ,ಪು.೧೯೧)

**ಪೆನ್ ಇಂಟರ್ ನ್ಯಾಶನಲ್ ಪ್ರತಿಕ್ರಿಯೆ :** ಈ ಸಂಸ್ಥೆ ಪ್ರಪಂಚದ ೧೫೦ ದೇಶಗಳ ಪ್ರಸಿದ್ಧ ಸಾಹಿತಿಗಳ ಒಂದು ಸಂಘಟನೆಯಾಗಿದೆ. ಅವರ ಅಭಿಪ್ರಾಯ ಹೀಗಿದೆ : "ಭಾರತದಲ್ಲಿ ಹೆಚ್ಚುತ್ತಿರುವ ಅಸಹಿಷ್ಣುತೆ ಮತ್ತು ಭಯದ ವಾತಾವರಣದ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರ ಜತೆ ಚರ್ಚಿಸಬೇಕು ಎಂದು ಸುಮಾರು ೨೦೦ ಮಂದಿ ಖ್ಯಾತ ಲೇಖಕರು ಬ್ರಿಟನ್ ಪ್ರಧಾನಿ ಡೇವಿಡ್ ಕ್ಯಾಮರೂನ್ ಅವರನ್ನು ಒತ್ತಾಯಿಸಿದ್ದಾರೆ.

ಸಲ್ಮಾನ್ ರಶ್ದಿ ಮತ್ತು ನೀಲ್ ಮುಖರ್ಜಿ, ಮೆಕ್ ಇವಾನ್, ಹರಿಕುಂಜ್ರು ಸೇರಿದಂತೆ ಸುಮಾರು ೨೦೦ ಲೇಖಕರು ಸಹಿ ಮಾಡಿರುವ ಬಹಿರಂಗ ಪತ್ರದಲ್ಲಿ ಕ್ಯಾಮರೂನ್ ಅವರನ್ನು ಆಗ್ರಹಪಡಿಸಲಾಗಿದೆ. 'ಭಾರತದಲ್ಲಿ ಹೆಚ್ಚುತ್ತಿರುವ ಅಸಹಿಷ್ಣುತೆ, ಭಯದ ವಾತಾವರಣ ಮತ್ತು ಚಿಂತಕರ ಮೇಲೆ ನಡೆಯುತ್ತಿರುವ ದಾಳಿಯ ಬಗ್ಗೆ ನಾವು ತೀವ್ರ ಆತಂಕಕ್ಕೆ ಒಳಗಾಗಿದ್ದೇವೆ' ಎಂದು ಲೇಖಕರು ಪತ್ರದಲ್ಲಿ ಹೇಳಿದ್ದಾರೆ. ಸಂಪ್ರದಾಯವಾದ ಅಥವಾ ಮೂಲಭೂತವಾದವನ್ನು ವಿರೋಧಿಸುವ ಪ್ರಗತಿಪರರ ಮೇಲಿನ ದಾಳಿ ವಿಚಾರವನ್ನು ಮೋದಿ ಭೇಟಿ ಸಂದರ್ಭದಲ್ಲಿ ಪ್ರಸ್ತಾಪಿಸಬೇಕು ಎಂದು ಒತ್ತಾಯಿಸಲಾಗಿದೆ" (ಅದೇ, ಪು.೧೮೯-೧೯೦).

**ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಾಪಸ್ ಮಾಡಿದ ನಯನ ತಾರಾ ಸೆಹಗಲ್ :**

ದಾದ್ರಿಯಲ್ಲಿ ಗೋಮಾಂಸ ತಿಂದಿದ್ದಾನೆಂದು ವ್ಯಕ್ತಿಯ ಹತ್ಯೆ, ಕರ್ನಾಟಕದ ಸಾಹಿತಿ ಎಂ.ಎಂ. ಕಲಬುರ್ಗಿ, ಮಹಾರಾಷ್ಟ್ರದ ವಿಚಾರವಾದಿಗಳಾದ ನರೇಂದ್ರ ದಾಭೋಲ್ಕರ್ ಮತ್ತು ಗೋವಿಂದ ಪಾನ್ಸರೆ ಕೊಲೆಯಂತಹ ಘಟನೆಗಳಿಂದ ನೊಂದು, ಜವಾಹರ್‌ಲಾಲ್ ನೆಹರೂ ಸೋದರ ಸೊಸೆ, ಲೇಖಕಿ ನಯನತಾರ ಸೆಹಗಲ್ ಅವರು, ತಮ್ಮ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಸರ್ಕಾರಕ್ಕೆ ವಾಪಸ್ ಮಾಡಿದ್ದಾರೆ.

"ಭಾರತದ ವೈವಿಧ್ಯತೆಯ ಮೇಲೆ 'ನಿಷ್ಕಾರುಣ್ಯ ಹಲ್ಲೆ ನಡೆಯುತ್ತಿದ್ದರೂ, ಅದನ್ನು ರಕ್ಷಿಸುವಲ್ಲಿ ಕೇಂದ್ರ ಸರ್ಕಾರ ವಿಫಲವಾಗಿದೆ'. ...ಮೃತಪಟ್ಟ ಭಾರತೀಯರ ನೆನಪಲ್ಲಿ, ಭಿನ್ನಾಭಿಪ್ರಾಯ ವ್ಯಕ್ತಪಡಿಸುವ ಹಕ್ಕನ್ನು ಎತ್ತಿ ಹಿಡಿಯುವ ಭಾರತೀಯರಿಗೆ ಮತ್ತು ಈಗ ಭಯ, ಅನಿಶ್ಚಿತತೆಯಿಂದ ಬದುಕುತ್ತಿರುವ ಎಲ್ಲ ಭಿನ್ನ ಅಭಿಪ್ರಾಯವುಳ್ಳವರಿಗೆ ಬೆಂಬಲ ಕೋರಿ ನಾನು ನನ್ನ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯನ್ನು ಹಿಂದಿರುಗಿ ಸುತ್ತಿದ್ದೇನೆ" . ಭಿನ್ನಾಭಿಪ್ರಾಯ ಹೊಂದುವುದು ಭಾರತದ ಸಂವಿಧಾನದ ಪ್ರಮುಖ ಅಂಗ. ಎಲ್ಲ ಘಟನೆಗಳ ಬಗ್ಗೆಯೂ ಪ್ರಧಾನಿ ಚಕಾರವೆತ್ತಿಲ್ಲ. ಒಂದೇ ಒಂದು ಖಂಡನೆಯ ಮಾತುಗಳನ್ನು ಆಡಿಲ್ಲ. ಮೋದಿ ಆಡಳಿತದಲ್ಲಿ ನಾವು ಹಿಮ್ಮುಖವಾಗಿ ಚಲಿಸುತ್ತಿದ್ದೇವೆ, ಹಿಂದುತ್ವದ ಸಂಕುಚಿತತೆಯ ಆಳಕ್ಕಿಳಿಯುತ್ತಿದ್ದೇವೆ. ದೇಶದಲ್ಲಿ ಅಸಹಿಷ್ಣುತೆ ಹೆಚ್ಚುತ್ತಿದ್ದು, ಜನ ಭಯದಿಂದ ಬದುಕುವಂತಾಗಿದೆ. (ಅದೇ, ಪು.೧೫೪).

**ಶಶಿ ದೇಶಪಾಂಡೆ : ಶ್ರೀರಂಗ ಅವರ ಮಗಳು. ಪ್ರಸಿದ್ಧ ಲೇಖಕಿ.**

'ಇದು ತುರ್ತು ಪರಿಸ್ಥಿತಿ ವಾತಾವರಣವಲ್ಲ,..... ಆದರೆ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ನಮಗೆ ಶತ್ರು ಯಾರೆಂದು ಗೊತ್ತಿತ್ತು. ಆದರೆ ಈಗ ಶತ್ರುವನ್ನು ಗುರುತಿಸುವುದೇ ಕಷ್ಟ. ಮುಖವಾಡ ತೊಟ್ಟಿದ್ದಾರೆ. ಎಲ್ಲ ದಿಕ್ಕುಗಳಿಂದ ಬರುತ್ತಾರೆ. ಹೇಗೆ ಎದುರಿಸುವುದು ಎಂಬುದೇ ಗೊತ್ತಿಲ್ಲ. ಭಯಮುಕ್ತರಾಗುವುದೇ ಇಂಥ ಶಕ್ತಿಗಳನ್ನು ಎದುರಿಸುವುದಕ್ಕೆ ಇರುವ ಏಕೈಕ ಮಾರ್ಗ. ಆದರೂ ಇದು ನಿಜಕ್ಕೂ ಸವಾಲಿನ ಕಾಲಘಟ್ಟ, ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಜಯಪ್ರಕಾಶ ನಾರಾಯಣರಂಥ ನಾಯಕರಿದ್ದರು. ಆದರೆ ಈಗ ಸಾಂಸ್ಕೃತಿಕ ವಲಯದಿಂದ ವ್ಯಕ್ತವಾಗುತ್ತಿರುವ ಆಕ್ರೋಶ ಸಾಂಸ್ಕೃತಿಕ ಚಳವಳಿಯ ರೂಪ ಪಡೆದುಕೊಳ್ಳುತ್ತಿದೆ ಯಾದರೂ ಇದ್ದಕ್ಕೊಬ್ಬ ನಾಯಕನಿಲ್ಲ. ಕಾಲ ಅದನ್ನು ಕಂಡುಕೊಳ್ಳುತ್ತದೆ ಎಂಬ ವಿಶ್ವಾಸವಿದೆ'. (ಅದೇ, ಪು.೪೫೩).

**ರಾಷ್ಟ್ರಪತಿಗಳು ಮಧ್ಯ ಪ್ರವೇಶಿಸಲು ಮನವಿ :**

'ದೇಶದಲ್ಲಿ ಹೆಚ್ಚುತ್ತಿರುವ ಅಸಹನೆ, ದಾದ್ರಿ ಘಟನೆ, ವಿಚಾರವಾದಿಗಳ ಹತ್ಯೆ ಪ್ರಕರಣಗಳಲ್ಲಿ ಕೂಡಲೇ ಮಧ್ಯೆ ಪ್ರವೇಶಿಸಬೇಕು ಎಂದು ನೂರಕ್ಕೂ ಹೆಚ್ಚು ಬಂಗಾಳಿ ಲೇಖಕರು, ಸಾಹಿತಿಗಳು, ಕಲಾವಿದರು ಹಾಗೂ ವಿಚಾರವಾದಿಗಳ ಗುಂಪು ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರನ್ನು ಒತ್ತಾಯಿಸಿದೆ. ದೇಶದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ದಮನಿಸಲಾಗುತ್ತಿದ್ದು, ಭಯದ ವಾತಾವರಣ ನಿರ್ಮಾಣವಾಗಿದೆ. ದೇಶದ ಬಹು ಸಂಸ್ಕೃತಿಯ ಭವ್ಯ ಪರಂಪರೆ ರಕ್ಷಿಸಲು ಮುಂದಾಗುವಂತೆ ಲೇಖಕರು ರಾಷ್ಟ್ರಪತಿಗೆ ಬರೆದ ಪತ್ರದಲ್ಲಿ ಮನವಿ ಮಾಡಿದ್ದಾರೆ. ಭಾರತದ ಪ್ರಜಾತಂತ್ರ ವ್ಯವಸ್ಥೆಯನ್ನು ದಮನಿಸುವ ವ್ಯವಸ್ಥಿತ ಪಿತೂರಿ ವಿರುದ್ಧ ಹೋರಾಡಲು ದೃಢ ನಿರ್ಧಾರ ತೆಗೆದುಕೊಳ್ಳುವಂತೆ ಅವರು ಒತ್ತಾಯಿಸಿದ್ದಾರೆ.

ವಿಚಾರವಾದಿಗಳಾದ ನರೇಂದ್ರ ದಾಭೋಲ್ಕರ್, ಗೋವಿಂದ ಪಾನ್ಸರೆ, ಡಾ.ಎಂ.ಎಂ. ಕಲಬುರ್ಗಿ ಹಾಗೂ ದಾದ್ರಿಯಲ್ಲಿ ಮಹಮ್ಮದ್ ಇಕ್ಲಾಖ್ ಹತ್ಯೆ ಅಭಿವ್ಯಕ್ತಿ ಹಾಗೂ ಆಯ್ಕೆ ಸ್ವಾತಂತ್ರ್ಯ ಹತ್ತಿಕ್ಕುವ ಯತ್ನಗಳಾಗಿವೆ ಎಂದು ಲೇಖಕರು ಆರೋಪಿಸಿದ್ದಾರೆ. ನೂರಕ್ಕೂ ಹೆಚ್ಚು ಪ್ರಸಿದ್ಧ ಬಂಗಾಳಿ ಲೇಖಕರು, ಸಾಹಿತಿಗಳು, ವಿಚಾರವಾದಿಗಳು, ಕಲಾವಿದರು ಈ ಮನವಿಗೆ ಸಹಿ ಹಾಕಿದ್ದಾರೆ. (ಅದೇ, ಪು.೧೭೭).

**ರಾಷ್ಟ್ರಪತಿಗಳ ಪ್ರತಿಕ್ರಿಯೆ :**

"ಸಮಾಜದಲ್ಲಿಯ ಕೆಲವು ಘಟನೆಗಳ ಬಗ್ಗೆ ಸೂಕ್ಷ್ಮ ಮನಸ್ಸಿನವರು ಗೊಂದಲಕ್ಕೆ ಒಳಗಾಗುವುದು ಸಹಜ. ಇಂತಹ ಸಂದರ್ಭದಲ್ಲಿ ಮಾನಸಿಕ ಸಮತೋಲನ ಕಾಪಾಡಿಕೊಂಡು ಘಟನೆಯ ಬಗ್ಗೆ ಸೂಕ್ತ ರೀತಿಯಲ್ಲಿ ಪ್ರತಿಕ್ರಿಯೆ ವ್ಯಕ್ತಪಡಿಸಬೇಕು" ಎಂದು ಹೇಳಿದರು. (ಅದೇ, ಪು.೧೯೩).

ದೇಶದ ರಾಷ್ಟ್ರಪತಿಗಳೇ ಮಧ್ಯಪ್ರವೇಶ ಮಾಡಿ, ದೇಶದ ಪ್ರತಿಭಾವಂತರನ್ನು ಸಮಾಧಾನ ಪಡಿಸಲು ಮುಂದಾದ ಒಂದು ಅಪರೂಪದ ಸನ್ನಿವೇಶವಿದು. ಇದೆಲ್ಲ ಅಸಹಿಷ್ಣುತೆಯ ವಿಷಮ ವಿಸ್ತಾರದ ಫಲವೇ ಆಗಿದೆ.

**ಸಹಾಯಕ ಗ್ರಂಥಗಳು**


೧. ಡಾ. ಎಂ.ಎಂ.ಕಲಬುರ್ಗಿ ಹತ್ಯೆ: ಪ್ರತಿಕ್ರಿಯೆ, ಸಂ. ಡಾ. ವೀರಣ್ಣ ದಂಡೆ, -ಕವಿಮಾರ್ಗ ಪ್ರಕಾಶನ, ಸರಸ್ವತಿಪುರ, ಕಲಬುರಗಿ-೫೮೫ ೧೦೬, ೨೦೧೬.

9. ದೇಸಿ-೩ (ಕಲಬುರ್ಗಿ ಕಲರವ' ಅಂಕಣಬರಹಗಳ ಸಂಗ್ರಹ), ಡಾ. ವೀರಣ್ಣ ದಂಡೆ, -ಕವಿಮಾರ್ಗ ಪ್ರಕಾಶನ, ಸರಸ್ವತಿಪುರ, ಕಲಬುರಗಿ-೫೮೫ ೧೦೬, ೨೦೧೩.

೩. ಕನ್ನಡ ಕಾವ್ಯಮೀಮಾಂಸೆ, ಡಾ. ವೀರಣ್ಣ ದಂಡೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೨೦೧೪,

೪. ಮನುಷ್ಯನ ಮನಸ್ಸು, ಮೂಲ : ಜಿ.ಡಿ.ಬಾವುಜ್, ಅನು, ಎಂ. ಯಮುನಾಚಾರ್ಯ, -ದಕ್ಷಿಣ ಭಾಷಾ ಸಂಸ್ಥೆ, ಮದ್ರಾಸ್, ೧೯೬೭.

೫. ಕವಿರಾಜಮಾರ್ಗ, ಸಂ. ಡಾ. ಕೆ. ಕೃಷ್ಣಮೂರ್ತಿ, -ಐಬಿಎಚ್ ಪ್ರಕಾಶನ, ಬೆಂಗಳೂರು-೯, ೧೯೮೩.

೬ ಕನ್ನಡ ಚೆನ್ನುಡಿ, ಡಾ. ಟಿ.ವಿ. ವೆಂಕಟಾಚಲಶಾಸ್ತ್ರಿ, -ಪ್ರಿಸಂ ಬುಕ್ಸ್ ಪ್ರೈ.ಲಿ. ಬೆಂಗಳೂರು-೭೦, ೨೦೦೮.

೭. ಗರತಿಯ ಹಾಡು, ಸಂ. ಹಲಸಂಗಿ ಗೆಳೆಯರು, ಸಮಾಜ ಪುಸ್ತಕಾಲಯ, ಧಾರವಾಡ, ೧೯೮೪,

೮. ಪಂಪಭಾರತಂ (ವಿಕ್ರಮಾರ್ಜುನ ವಿಜಯಂ), ಗದ್ಯಾನುವಾದ: ಎನ್. ಅನಂತರಂಗಾಚಾರ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೭.

೯. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಾ. ಎಚ್. ತಿಪ್ಪೇರುದ್ರಸ್ವಾಮಿ, -ಡಿ.ವಿ.ಕೆ.ಮೂರ್ತಿ, ಮೈಸೂರು, ೧೯೮೫.

೧೦. ಕನ್ನಡ ತಾಯಿಗೆ ನುಡಿನಮನ (ಕವನ ಸಂಕಲನ), ಸಂ. ಎಲ್. ಎಸ್.ಶೇಷಗಿರಿ ರಾವ್, -ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೩.

ಸಮಾನಾಂತರ ಗೋಷ್ಠಿ – ೧

ಗೋಷ್ಠಿ - ೧

## ಆಧುನಿಕ ಕರ್ನಾಟಕ ನಿರ್ಮಾಣ :

## ಮೈಸೂರು ರಾಜರ ಕೊಡುಗೆ

# ಅಧ್ಯಕ್ಷ ಭಾಷಣ

**- ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ**

ಮೈಸೂರೊಡೆಯರ ಆಸ್ಥಾನದಲ್ಲಿ ಒಂದು ಕಾಲಕ್ಕೆ ಕೋಟೆಯೊಳಗಿನ ದೇವಸ್ಥಾನಗಳಲ್ಲಿಯೋ ಅರಮನೆಯಲ್ಲಿಯೋ ಪಂಡಿತರ ನಡುವೆ ವಾಕ್ಯಾರ್ಥಗಳು ನಡೆಯುತ್ತಿದ್ದುವು. ಆಗ ಹಿರಿಯರೊಬ್ಬರು ಮಧ್ಯಸ್ಥರಾಗಿರುತ್ತಿದ್ದರು. ಇಂಥ ಕೆಲವು ವಾಕ್ಯಾರ್ಥಗಳ ವಿಚಾರ ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ ಕೆಲವರು ವಿದ್ವಾಂಸರ ಜೀವನ ಚರಿತ್ರೆಗಳಲ್ಲಿ ಬಂದಿವೆ. ಯಾರು ಸರಿ, ಯಾವ ವಾದ ಗೆದ್ದಿತು ಎನ್ನುವ ವಿಷಯದಲ್ಲಿ ದೊರೆ ಪಂಡಿತರಿಗೆ ಅಸಂತೋಷವಾಗದ ಹಾಗೆ ಒಂದು ಘಟ್ಟದಲ್ಲಿ ನಿಲುಗಡೆ ಹೇಳುತ್ತಿದ್ದರು, ಎರಡು ಪಕ್ಷಗಳವರಿಗೂ ಸಮಾನವಾಗಿ ಖಿಲ್ಲತ್ತುಗಳನ್ನು ನೀಡಿ ಗೌರವಿಸುತ್ತಿದ್ದರು. ಇಂದಿನ ಈ ವಿಚಾರ ಗೋಷ್ಠಿಯಲ್ಲಿ ನಾನು ಅಧ್ಯಕ್ಷನಷ್ಟೇ, ಮಧ್ಯಸ್ಥನೋ ತ್ರಯಸ್ಥನೋ ಅಲ್ಲ.

ಅಭಿಪ್ರಾಯಭೇದಗಳ ವಿಚಾರದಲ್ಲಿ ಒಂದು ಸೂತ್ರಪ್ರಾಯವಾದ ಮಾತು ವ್ಯಾಸ ಭಾರತದ ವಿರಾಟಪರ್ವದಲ್ಲಿ ಬರುತ್ತದೆ. ಪಾಂಡವರ ವನವಾಸ ಅಜ್ಞಾತವಾಸಗಳ ಅವಧಿ ಮುಗಿಯಿತೇ ಇಲ್ಲವೇ ಎಂಬ ಸಂದೇಹ ದುರ್ಯೋಧನನಿಗೆ ಬಂದಾಗ, ಅವನು ಹೀಗೆ ಹೇಳುತ್ತಾನೆ: "ವಿಷಯಕ್ಕೆ ಎರಡು ಮುಖಗಳಿರುವಲ್ಲಿ ಯಾವುದು ಸರಿ ಎಂಬುದರ ಬಗ್ಗೆ ಯಾವಾಗಲೂ ಸಂಶಯವುಂಟಾಗುತ್ತದೆ. ಒಂದು ರೀತಿಯಲ್ಲಿ ಚಿಂತಿತವಾದ ವಿಷಯ ಕೆಲವೊಮ್ಮೆ ಮತ್ತೊಂದು ರೀತಿಯಲ್ಲಿ ಪರಿಣಮಿಸುತ್ತದೆ"

ಪ್ರಸ್ತಾವಗೊಂಡ ಇಂದಿನ ಗೋಷ್ಠಿಯ ಅಭಿಪ್ರಾಯಗಳಿಗೆ ಈ ಮಾತು ಅನ್ವಯಿಸುತ್ತದೆ. ಮೈಸೂರು ಸಂಸ್ಥಾನದ ಅರಸೊತ್ತಿಗೆಯ ನೂರಿನ್ನೂರು ವರ್ಷಗಳ ಇತಿಹಾಸದ ಘಟನಾವಳಿಯನ್ನು ಅಧಿಕೃತ ಎನ್ನುವ ಚರಿತ್ರೆಯ ಗ್ರಂಥಗಳಿಂದ ಪರಿಚಯ ಮಾಡಿಕೊಂಡಿದ್ದಾದರೆ, ಹೆಚ್ಚಿನ ಮಟ್ಟಿಗೆ ಅದು ಪ್ರಭುಶಕ್ತಿಯೇ ಸರ್ವೋಚ್ಚವಾಗಿದ್ದ ಕಾಲ. ಘಟನೆಗಳ ವಿವರಗಳು ಪ್ರಕ್ಷುಬ್ಧ ಸಾಗರದ ಹೆದ್ದೆರೆಗಳ ಹಾಗೆ ಭಯ ಆತಂಕ ಕೋಭೆಗಳಿಂದ ನಮ್ಮ ಮನಸ್ಸನ್ನು ವಿಷಾದಗೊಳಿಸುತ್ತವೆ, ಅಧೀರಗೊಳಿಸುತ್ತವೆ. ನಾವಿರುವ ಕಾಲ ಒಳ್ಳೆಯ ಕಾಲವೆನಿಸುತ್ತದೆ. ಆ ಹಿಂದಿನ ಸಾಮ್ರಾಜ್ಯಶಾಹಿ, ಅಧಿಕಾರಶಾಹಿ ಕಾಲಘಟ್ಟದಲ್ಲಿ ವಿದ್ಯೆ ವರ್ಚಸ್ಸುಗಳಿಲ್ಲದ, ಅನ್ನಬಟ್ಟೆ ಗಳಿಗೆ ಗತಿಯಿಲ್ಲದೆ ಸಾಮಾನ್ಯ ಪ್ರಜೆ ಹೇಗೆ ಕಷ್ಟಪಟ್ಟನೋ ಎನ್ನಿಸುತ್ತದೆ. ಯುದ್ಧೋನ್ಮಾದದ ದೊರೆಗಾಗಿ ಪ್ರಾಣ ತೆತ್ತ ಸೈನಿಕರೆಷ್ಟೋ, ಎಣಿಕೆ ಸಾಧ್ಯವೇ ಎನ್ನಿಸುತ್ತದೆ.

ಮೈಸೂರು ಒಡೆಯರ ಕಾಲ ೫೫೦ ವರ್ಷಗಳ ಅವಧಿಯದು (೧೪೦೦- ೧೯೫೦). ಅವರಲ್ಲಿ ಮುಮ್ಮಡಿ ಕೃಷ್ಣರಾಜರ ಕಾಲದಿಂದ (೧೭೯೯-೧೮೬೮) ಜಯಚಾಮರಾಜೇಂದ್ರರ ಕಾಲದವರೆಗೆ (೧೯೪೦-೧೯೫೦) ಸಂಸ್ಥಾನವು ಆಧುನಿಕ ರಾಜ್ಯವ್ಯವಸ್ಥೆಗೆ ತನ್ನನ್ನು ತೆರೆದುಕೊಂಡಿತು. ಎಂದರೆ ನಿರಂತರ ಯುದ್ಧೋನ್ಮಾದದ 'ಅಶಾಂತಿಪರ್ವ' ಮುಗಿದು ಸ್ಥಿರ ರಾಜ್ಯ ವ್ಯವಸ್ಥೆಗೆ ಏರ್ಪಾಡುಗಳು ನಡೆದ ಉದ್ಯೋಗ ಪರ್ವ' ಮೊದಲಾಯಿತು. ವಿಪತ್ಕಾನಕ ಸನ್ನಿವೇಶಗಳಲ್ಲಿ ಮೈಸೂರಿನ ಪ್ರಧಾನರಾಗಿ ವೆಂಕಪ್ಪಯ್ಯ, ಪೂರ್ಣಯ್ಯ ಈ ಕೆಲವರು ಶ್ರಮಿಸಿ, ಬಹುವಾಗಿ ಭಂಗಪಟ್ಟರು. ಅನಂತರ ಸಿ. ರಂಗಾಚಾರ್ಲು, ಶೇಷಾದ್ರಿ ಅಯ್ಯರ್, ಎಂ. ವಿಶ್ವೇಶ್ವರಯ್ಯ, ಮಿರ್ಜಾ ಇಸ್ಮಾಯಿಲ್ ಮೊದಲಾದವರ ಮಂತ್ರತ್ವದ ಕಾಲದಲ್ಲಿ ಆಡಳಿತದಲ್ಲಿ ಒಂದು ನಾಗರಿಕ ಶಿಸ್ತು ತೊಡಗಿತು ಎನ್ನುವುದನ್ನು ಈಗಾಗಲೇ ಇತಿಹಾಸಕಾರರು ಗುರುತಿಸಿದ್ದಾರೆ.

ಆಧುನಿಕ ಕರ್ನಾಟಕದ ನವೋದಯ ಕಾಲಘಟ್ಟದ ಮೈಸೂರರಸರ ವಿಷಯದಲ್ಲಿ ಸ್ಪಷ್ಟ ವಿವರಗಳನ್ನು ಒದಗಿಸುವ ಮೂಲ ಮತ್ತು ಆನುವಂಶಿಕ ಸಾಮಗ್ರಿ ಅಗಾಧವಾಗಿದೆ. ಇವುಗಳ ವರ್ಣನಾತ್ಮಕ ಸೂಚಿಯ ಅಗತ್ಯವಿದೆ. ಆದರೆ ಸಮತೋಲನದ, ವಸ್ತುನಿಷ್ಠ ಆದ ಆಕರಗಳಲ್ಲಿ ಸಿ. ಹಯವದನರಾಯರ ಮೂರು ದೊಡ್ಡ ಸಂಪುಟಗಳ ೨೮೩೫ ಪುಟಗಳ History of Mysore (೧೯೪೩, ೧೯೪೫, ೧೯೪೬), ಎಂ. ಶಾಮರಾಯರ ಎರಡು ಸಂಪುಟಗಳ, ೧೧೦೯ ಪುಟಗಳ Modern Mysore(೧೯೩೬) ಮತ್ತು ಅವರೇ ಬರೆದಿರುವ Ten Years of Nahive Rule in Mysore (೧೮೯೧) ಇವನ್ನು ನೋಡುವುದರಿಂದ ಹೆಚ್ಚಿನ ಪ್ರಯೋಜನವಿದೆ. ಮುಖ್ಯವಾಗಿ, ಈ ಗ್ರಂಥಕರ್ತೃಗಳಿಬ್ಬರೂ ಎಲ್ಲಾ ಲಭ್ಯ ಆಧಾರ ಸಾಮಗ್ರಿಯನ್ನು ಕ್ರೋಡೀಕರಿಸಿಕೊಂಡು, ವಿಮರ್ಶೆಯ ಭಿನ್ನ ಮತಗಳನ್ನು ಪರಿಶೀಲನೆ ಮಾಡಿ, ಗತ ಇತಿಹಾಸದ ಚಿತ್ರಣವನ್ನು ಮತ್ತು ಉತ್ತರಕಾಲೀನ ಫಲ ಪರಿಣಾಮಗಳನ್ನು ಇತಿಹಾಸಕಾರರಾಗಿ ದಾಖಲಿಸಿದ್ದಾರೆ. ಈ ಗ್ರಂಥಗಳ ಪುನರ್ ಮುದ್ರಣವೂ ಕನ್ನಡ ಭಾಷಾಂತರವೂ ಆಗಬೇಕು. ಇದು ತುರ್ತಾಗಿ ಆದರೆ, ಈಗ ಸಾರ್ವಜನಿಕವಾಗಿ ಚರ್ಚಿತವಾಗಿ ಗೊಂದಲದ ಗೂಡಾಗಿ ಪರಿಣಮಿಸಿರುವ ಅನೇಕ ಐತಿಹಾಸಿಕ ತಪ್ಪು ಗ್ರಹಿಕೆಗಳು ತೊಲಗುವುದು ಸಾಧ್ಯವಿದೆ.

ಕಳೆದ ಎರಡು ಶತಮಾನಗಳ ಸಂದರ್ಭ ವಿಶೇಷಗಳನ್ನು, ಅಂದಂದಿನ ಒತ್ತಡಗಳಲ್ಲಿ ಕೈಕೊಂಡ ನಿಲವು ನಿರ್ಧಾರಗಳನ್ನು ನಮಗೆ ಬೇಕಾದಷ್ಟು ಮಟ್ಟಿಗೆ ಎತ್ತಿತೆಗೆದು ಸಮರ್ಥಿಸುವ ಇಲ್ಲವೆ ಖಂಡಿಸುವ ಪ್ರವೃತ್ತಿ ಹೆಚ್ಚುತ್ತಿರುವ ಇಂದಿನ ದಿನಗಳಲ್ಲಿ ನಮ್ಮ ನಡೆ ಹೇಗಿರಬೇಕು ಎನ್ನುವುದನ್ನು ಆಳುವ ಸರ್ಕಾರಗಳೂ ಪ್ರಜಾಸಾಮಾನ್ಯವೂ ಎಚ್ಚರದಿಂದ ಗೊತ್ತುಮಾಡಿಕೊಳ್ಳಬೇಕಾಗಿದೆ. ಒಡೆಯರು, ದಳವಾಯಿಗಳು, ಸರ್ವಾಧಿಕಾರಿಗಳು, ಅಧಿಕಾರಿಗಳು, ಸಾಮಾನ್ಯ ಪ್ರಜೆಗಳು, ಎಲ್ಲರೂ ಒಂದಲ್ಲ ಒಂದು

ಬಗೆಯಲ್ಲಿ ಅನ್ಯಾಯ ಅತಿರೇಕಗಳಲ್ಲಿ ನಡೆದುಕೊಂಡು ನಮ್ಮ ಸಂಸ್ಥಾನದ ಇತಿಹಾಸ ನೆತ್ತರು ಚೆಲ್ಲುವಂತಾಗಿದೆ. ಮತ್ತೆ ಈ ಸಂಗತಿಗಳನ್ನು ಈಗ ಕೆದಕಿ ಬೆದಕಿ ಕೋಲಾಹಲದ ದೂಳೆಬ್ಬಿಸುವುದು ವಿವೇಕದ ಲಕ್ಷಣವಲ್ಲ.

ನಾವು ಆಧುನಿಕ ಕರ್ನಾಟಕ ಅಭ್ಯುದಯದ ದೃಷ್ಟಿಯಿಂದ ಆರಂಭಕ್ಕೇ ಹೆಸರಿಸಿ, ಕೊಡುಗೆಗಳನ್ನು ಗುರುತಿಸಬೇಕಾದ ಮುಖ್ಯ ವ್ಯಕ್ತಿಯೆಂದರೆ ಮುಮ್ಮಡಿ ಕೃಷ್ಣರಾಜ ಒಡೆಯರು. ಅವರನ್ನು ನಾವು ಎಂದಿನಿಂದಲೂ ನಿರ್ಲಕ್ಷಿಸುತ್ತಲೇ ಬಂದಿದ್ದೇವೆ. ೧೯ನೇ ಶತಮಾನದಲ್ಲಿ ಭಾರತೀಯ ಸಂಸ್ಕೃತಿಯ ಪುನರುತ್ಥಾನಕ್ಕೆ ದೇಶೀಯ ಸಾಹಿತ್ಯ ಸಂಸ್ಕೃತಿ ಕಲೆ ಧರ್ಮ ಪ್ರಸಾರಗಳಿಗೆ, ವಿದ್ವಜ್ಜನರ ಪೋಷಣೆ ಪ್ರೋತ್ಸಾಹಗಳಿಗೆ ಅವರು ಕೊಟ್ಟ ಕೊಡುಗೆಗಳನ್ನು ಇನ್ನೂ ನಾವು ಒಗ್ಗೂಡಿಸಿಯೇ ಇಲ್ಲ. ರಾಜಕೀಯವಾಗಿ ಅವರಿಗಿದ್ದ ಅಸಹಾಯಕತೆ ಬಿಕ್ಕಟ್ಟುಗಳು ಏನೇ ಇರಲಿ, ಸಂಸ್ಕೃತ ಮತ್ತು ಕನ್ನಡ ಭಾಷೆ ಸಾಹಿತ್ಯಗಳಿಗೆ ಅವರು ನೀಡಿದ ಆಶ್ರಯ ದೊಡ್ಡದು, ಕಲಾಭಿರುಚಿಯೂ ದೊಡ್ಡದು.

ಮೈಸೂರಿನಲ್ಲಿ ಮುಮ್ಮಡಿಯವರು ೧೮೩೩ರಲ್ಲಿ ರಾಜಾ ಸ್ಕೂಲ್ ಸ್ಥಾಪಿಸಿದ ಮೇಲೆ, ೧೮೬೫ರಲ್ಲ ಒಮ್ಮೆ ಶಾಲೆಯ ಪರಾಂಬರಿಕೆಗೆ ಬಂದಾಗ, ದೇಶಭಾಷಾ ಶಿಕ್ಷಣದ ತರಗತಿಗಳ ಬಗೆಗೆ ವಿಶೇಷ ಗಮನ ಕೊಡುವಂತೆ ಆಗಿನ ಆಂಗ್ಲ ಮುಖ್ಯೋಪಾಧ್ಯಾಯರಾದ ಜೇಮ್ಸ್ ಡನ್ನಿಂಗ್ ಅವರಿಗೆ ಮನವರಿಕೆ ಮಾಡಿದಂತೆ ಮುಮ್ಮಡಿಯವರ ಕಾಲದ ವಿದ್ವತ್ತೆಯ ಸ್ವರೂಪವನ್ನು ಆ ಕಾಲದ ಗಣ್ಯರ ಆರೆಂಟು ಜೀವನಚರಿತ್ರೆಗಳಿಂದ ತಕ್ಕಮಟ್ಟಿಗೆ ತಿಳಿಯಲು ಸಾಧ್ಯವಿದೆ. ಮುದ್ರಿತ ಅಮುದ್ರಿತ ಸಾಹಿತ್ಯಕೃತಿಗಳಿಂದಲೂ ತಿಳಿಯಬಹುದಾಗಿದೆ. ತಿಳಿಸುವ ಪ್ರಯತ್ನಗಳೂ ತಪ್ಪದೆ ನಡೆಯಬೇಕಾಗಿದೆ. ಈ ಕಾಲದ ಮಹೋನ್ನತ ಸಾಹಿತ್ಯ ರಚನೆ 'ಶ್ರೀತತ್ತ್ವನಿಧಿ'ಯ ಶ್ರೇಣಿ ಪೂರ್ಣವಾಗಿ ಮುದ್ರಣ ಕಾಣಬೇಕಾಗಿದೆ, ಹಾಗೆಯೇ ತಡವಾಗಿಯಾದರೂ ಈ ರನ್ನಭಂಡಾರದಂತಹ ವರ್ಣಚಿತ್ರಗಳ ಬೃಹತ್ ಸಂಪುಟಗಳನ್ನು ಕಲಾತ್ಮಕವಾಗಿ ಪ್ರಕಟಿಸುತ್ತಿರುವ ಮೈಸೂರು ವಿಶ್ವ ವಿದ್ಯಾನಿಲಯದ ಪ್ರಾಚ್ಯ ವಿದ್ಯಾ ಸಂಶೋಧನಾಲಯ ವನ್ನು ಅಭಿನಂದಿಸಬೇಕಾಗಿದೆ. ಈ ಕೆಲಸದಿಂದ ಭಾರತೀಯ ವಿದ್ಯೆಯ ಬೇರೊಂದು ಮುಖದತ್ತ ವಿಶ್ವದ ಕುತೂಹಲ ಮೂಡುವ ಹಾಗೆ ಮುಮ್ಮಡಿಯವರ ಕಾಲ ಸಾಫಲ್ಯವನ್ನು ಕಂಡಿದೆ. ಅಲ್ಲದೆ ಮುಮ್ಮಡಿಯವರೇ ಸ್ವತಃ ಆಸಕ್ತಿವಹಿಸಿ ಬರೆಸಿದ್ದಂತೆ ತೋರುವ ಆ ಕಾಲದ ಸುಮಾರು ೫೦೦ ಮಂದಿ ಗಣ್ಯವ್ಯಕ್ತಿಗಳ ವರ್ಣಚಿತ್ರ ಸಂಪುಟ ಒಂದು ಕಾಲಕ್ಕೆ ಜಗಮೋಹನ ಅರಮನೆಯಲ್ಲಿದ್ದುದು, ಈಗ ಮುಖ್ಯವಾದ ಅರಮನೆಯ ಖಾಸಗಿ ಭಂಡಾರದಲ್ಲಿ ನಿಕ್ಷೇಪಗೊಂಡಿದೆಯೆಂದು ಕೇಳಿದ್ದೇನೆ. ಅದನ್ನು ಇಂದಿನ ಮಾನ್ಯರಾದ, ರಾಜವಂಶದ ಯದುವೀರರು ಹುಡುಕಿಸಿ ತೆಗೆದು, ಆಕರ್ಷಕವಾಗಿ ಪ್ರಕಟಿಸುವ ಉಪಕಾರ ಮಾಡಬೇಕಾಗಿಯೂ ನಾನು ಪ್ರಾರ್ಥಿಸುತ್ತೇನೆ.

ಪ್ರಣತಿ ತಂಜಾವೂರುಗಳ ಕಡೆಯಿಂದ ೧೯ನೆಯ ಶತಮಾನದ ಆದಿ ಭಾಗದಿಂದ, ಅಲ್ಲಿಯ ಅವನತ ಸ್ಥಿತಿ ಕಾರಣವಾಗಿ, ವಿದ್ವಾಂಸರ ಪಡೆ ಮೈಸೂರಿನತ್ತ ಬಂದು ಮುಮ್ಮಡಿಯವರ ಆಶ್ರಯವನ್ನು ಸೇರುವುದು ಮೊದಲಾಯಿತು. ಹೈದರಾಲಿಯ ಪ್ರಧಾನನಾಗಿದ್ದ ವೆಂಕಪ್ಪಯ್ಯ ವೆಂಕಾಮಾತ್ಯ ರಾಮಾಯಣದ ಮತ್ತು ಇನ್ನೂ ಹಲವು ಕೃತಿಗಳ ಕರ್ತೃ. ಆ ಕಾಲದ ಸಾಹಿತ್ಯಕಾರರಲ್ಲಿ ಅವನೊಂದು ವಿರಳವಾದ ದ್ವೀಪವಾಗಿ ಕಾಣುತ್ತಾನೆ. ಮುಮ್ಮಡಿಯವರ ಕಾಲ ಗದ್ಯ ಪದ್ಯ ಸಾಹಿತ್ಯದ ಸುಗ್ಗಿ ಕಂಡ ಕಾಲ. ಅನೇಕ ಕುತೂಹಲಗಳಿಗೆ ಈ ಕಾಲದ ಮುದ್ರಾಮಂಜೂಷ, ರಾಜಾವಳೀ ಕಥಾಸಾರ, ಚಾಮುಂಡಾ ಲಘು ನಿಘಂಟು, ಕಲಾವತಿ ಪರಿಣಯ, ಕೃಷ್ಣನೃಪಜಯೋಯತ್ಕರ್ಷ, ಶ್ರೀಕೃಷ್ಣರಾಜ ವರ್ಷವರ್ಧಂತೀ ಶತಕ ಮೊದಲಾದವು ಆವರೆಗೆ ಸಾಹಿತ್ಯೇತಿಹಾಸ ಕಾಣದ, ಒಂದೊಂದೂ ವಿಶೇಷವಾದ ರಚನೆಗಳು, ಕರ್ನಾಟಕ ಸರ್ಕಾರ ವಿವಿಧ ಯೋಜನೆಗಳಡಿಯಲ್ಲಿ ಇವುಗಳಲ್ಲಿ ಕೆಲವನ್ನು ಮುದ್ರಿಸಿರುವುದು ಶ್ಲಾಘಿವೇ. ಇದನ್ನು ಆಸಕ್ತರ ಗಮನಕ್ಕೆ ಒಯ್ಯಬೇಕು.

ಮುಂದೆ, ೧೦ನೇ ಚಾಮರಾಜೇಂದ್ರ ಒಡೆಯರ ಅವಧಿ ಶೈಕ್ಷಣಿಕವಾಗಿ ಅನೇಕ ಪ್ರಥಮಗಳನ್ನು ಕಂಡಿತು (೧೮೮೧-೯೪). ಪ್ರಜಾಪ್ರತಿನಿಧಿ ಸಭೆ, ಸ್ತ್ರೀ ಶಿಕ್ಷಣ, ಕರ್ಣಾಟಕ ಭಾಷಜೀವಿನೀ ಸಭಾ, ಪ್ರಾಚ್ಯವಸ್ತು ಇಲಾಖೆ, ಪ್ರಾಚ್ಯ ಪುಸ್ತಕ ಭಂಡಾರ, ಬೆಂಗಳೂರಿನ ಸಂಸ್ಕೃತ ವಿದ್ಯಾನಿಲಯ, ಧಾರವಾಡದ ಕರ್ಣಾಟಕ ವಿದ್ಯಾವರ್ಧಕ ಸಂಘ ಇನ್ನು ಮುಂದೆ ಅಖಿಲ ಕರ್ನಾಟಕ ವ್ಯಾಪ್ತಿಯ ಫಲ ಪರಿಣಾಮಗಳನ್ನು ನೀಡಿದುವು. ರಾಯಲ್ ಸ್ಕೂಲ್, ಕಾಲೇಜು ದರ್ಜೆಗೆ ಏರಿದಾಗ ಒಡೆಯರು ವಿದ್ಯಾರ್ಥಿಗಳನ್ನುದ್ದೇಶಿಸಿ ಹೇಳಿದ್ದು-

"ಇಂಗ್ಲಿಷ್ ವಿದ್ಯಾಭ್ಯಾಸ ಪಡೆದುಕೊಂಡವರು ತಾವೇ ಒಂದು 'ಜಾತಿ' ಎನ್ನುವಂತೆ ಮಧ್ಯಯುಗದ ವಿದ್ವಾಂಸರ ಹಾಗೆ ತಮ್ಮ ಹಿರಿಮೆಗೆ ತಾವೇ ತೃಪ್ತಿಪಟ್ಟುಕೊಂಡು ಕುಳಿತುಕೊಳ್ಳಬಾರದು. ಇಂಥವರು ಇಂಗ್ಲಿಷ್ ವಿದ್ಯಾಭ್ಯಾಸವಿಲ್ಲ ದವರಿಂದ ತಾವೇ ಹೆಚ್ಚಾಗಿ ಜನಸಂಪರ್ಕದಿಂದ ದೂರವಾಗಿರುತ್ತಾರೆ. ನಮ್ಮ ದೇಶದ ರಾಷ್ಟ್ರೀಯ ಸಾಹಿತ್ಯ, ವಾಸ್ತು ದರ್ಶನಗಳು, ಸಿದ್ಧಾಂತಗಳಲ್ಲಿ ಮಿಗಿಲಾದ ಆಸಕ್ತಿಯನ್ನು ಇಂಗ್ಲಿಷ್ ಕಲಿಯದ ಜನರ ಭಾವನೆಗಳ ಹಾಗೂ ಆಶೋತ್ತರಗಳ ವಿಷಯದಲ್ಲಿ ಸಹಾನುಭೂತಿಯನ್ನು ಅವರು ತೋರಿಸಬೇಕು. ಇಂಗ್ಲಿಷ್ ವಿದ್ಯೆ ಬರಡಾಗಿ ವ್ಯರ್ಥವಾಗುವುದನ್ನು ತಡೆಯಬೇಕಾದರೆ, ದೇಶ ಭಾಷೆಯ ವ್ಯಾಸಂಗ ಸಾಂಗವಾಗಿ ನಡೆಯಬೇಕು. ಈ ಕಾಲೇಜು ಬರಲಿರುವ ದಿನಗಳಲ್ಲಿ ಪಾಶ್ಚಾತ್ಯ ಜ್ಞಾನದ ನಾನಾ ಶಾಖೆಗಳಲ್ಲಿ ಉನ್ನತ ಶಿಕ್ಷಣವನ್ನು ದೇಶಭಾಷೆಯ ಮೂಲಕವೇ ನಡೆಸುವ ಮಟ್ಟಿಗೆ ಕನ್ನಡದ ವ್ಯಾಸಂಗವನ್ನು ಕೈಗೊಳ್ಳುವುದೆಂಬ ಭರವಸೆ ನನಗಿದೆ" . ನೂರು ವರ್ಷಗಳಿಗೆ ಹಿಂದಿನ ಮಾತು ಇದು. ಇದು ಫಲಕಾರಿಯಾಯಿತೇ ಎನ್ನುವುದು ಯೋಚಿಸಬೇಕಾದ್ದು.

ನಾಲ್ವಡಿಯವರು ೧೯೦೭ರಲ್ಲಿ ನ್ಯಾಯವಿಧಾಯಕ ಸಭೆಯನ್ನು ಏರ್ಪಡಿಸಿದ್ದು, ಸಂಸ್ಥಾನದ ಕಾನೂನು ರಚನೆಯ ಕಾರ್ಯದಲ್ಲಿ ಅಧಿಕಾರಿಗಳು ಸಾರ್ವಜನಿಕರು ಪಾಲ್ಗೊಳ್ಳುವಂತೆ ಆಗಲಿ ಎಂಬ ದೃಷ್ಟಿಯಿಂದ, ಮೈಸೂರು ವಿಶ್ವವಿದ್ಯಾನಿಲಯ ಸ್ವತಂತ್ರವಾಗಿ ಸ್ಥಾಪನಗೊಳ್ಳಲು ನೂರು ವರ್ಷಗಳ ಹಿಂದೆ ಪ್ರಯತ್ನಗಳು ನಡೆದಾಗ, ಕನ್ನಡ ಭಾಷೆ ಸಾಹಿತ್ಯಗಳ ಸ್ವತಂತ್ರವಾದ ಬೆಳೆವಣಿಗೆಗಾಗಿ ಅದರ ಅಗತ್ಯವನ್ನು ಎತ್ತಿ ಹೇಳಿದ್ದವರು ಎಂ. ವಿಶ್ವೇಶ್ವರಯ್ಯನವರು. ಕನ್ನಡ ಸಾಹಿತ್ಯ ಪರಿಷತ್ತು, ಮೈಸೂರು ವಿಶ್ವವಿದ್ಯಾನಿಲಯಗಳ ಸ್ಥಾಪನೆ, ಸಂಸ್ಥಾಪನದ ಕೇಂದ್ರ ಪುಸ್ತಕ ಭಂಡಾರ ಇವುಗಳ ಸಂಬಂಧದಲ್ಲಿ ಅವರು ನಾಲ್ವಡಿಯವರ ಒಪ್ಪಿಗೆ ಬೆಂಬಲಗಳನ್ನು ಪಡೆದುಕೊಂಡರು. ೧೯೦೨ರಷ್ಟು ಹಿಂದೆಯೇ By a Mysorean ಎಂಬವರ ಹೆಸರಿನಲ್ಲಿ A Vision of Prosperous Mysore ಎಂಬ ಪುಸ್ತಕವನ್ನು ಬರೆದಿದ್ದರಲ್ಲದೆ, ತಮಗೆ ಸೇವಾವಕಾಶ ದೊರೆತಾಗ ಮೈಸೂರಿನ, ಆ ಮೂಲಕ ಆಧುನಿಕ ಕರ್ನಾಟಕದ ಅಭ್ಯುದಯಕ್ಕೆ ಅತಿಶಯವಾಗಿ ಶ್ರಮಿಸಿದರು. ಕನ್ನಡದಲ್ಲಿಯೇ ಮೈಸೂರಿನ ಇತಿಹಾಸವನ್ನು ಯಾರೂ ಬರೆದಿಲ್ಲವಲ್ಲ ಎಂದು ಆಗಾಗ ಪೇಚಾಡುತ್ತಿದ್ದರಂತೆ. ಅಲ್ಲದೆ ಮಿಥಿಕ್ ಸೊಸೈಟಿಯಲ್ಲಿ ಇಂಗ್ಲಿಷ್ ಭಾಷೆಯಲ್ಲಿಯೇ ಹೆಚ್ಚಿನ ವ್ಯವಹಾರಗಳು ನಡೆಯುತ್ತಿದ್ದುದನ್ನು ನೋಡಿ, ಕನ್ನಡದಲ್ಲಿಯೂ ಕಾರ್ಯಕ್ರಮಗಳಾಗಬೇಕೆಂದು ಹೇಳಿದ್ದುಂಟು.

ಮೈಸೂರು ವಿಶ್ವವಿದ್ಯಾನಿಲಯ ಆರಂಭಗೊಂಡ ಮೇಲೆ ನಡೆದ ಮೊತ್ತಮೊದಲ ಘಟಕೋತ್ಸವ ಸಂದರ್ಭದಲ್ಲಿ (೧೯-೧೦-೧೯೧೮) ನಾಲ್ವಡಿಯರು ಸರ್.ಎಂ.ವಿ. ಅವರನ್ನು ಕುರಿತು ಆಡಿದ ಮಾತುಗಳನ್ನು ಮೂಲದಿಂದಲೇ ಮುಂದೆ ಉದ್ಧರಿಸಿಕೊಡಬಹುದು.

I feel that I should acknowledge on this public occasion a debt of gratitude from myself and my people to sir M. Vishweshwaraya, the dewan of my state. It was chiefly his patriotism, his euthusiasm and his unflinching adroeacy which anverted, what was once little more than a dream of the future into a living creation, and his name will always be remembered, above all others, as the man to whom our university over its being ದೊಡ್ಡ ಮನಸ್ಸಿನ ದೊರೆಗಳು, ದೊಡ್ಡ ಸೇವೆಯ ದಿವಾನರು!

ದೇಶೀಯ ಸಂಸ್ಥಾನಗಳಲ್ಲೇ ವಿಶ್ವವಿದ್ಯಾನಿಲಯವೊಂದು ಮೊದಲನೆಯದಾಗಿ ಸ್ಥಾಪನೆಗೊಂಡಿತು ಎನ್ನುವುದು ಆ ಕಾಲಕ್ಕೆ ಶಿಕ್ಷಣ ಕ್ಷೇತ್ರದ ಒಂದು ಅಸಾಮಾನ್ಯ ಸಂಗತಿ. ಮುಂದಿನ ಈ ೧೦೦ ವರ್ಷಗಳ ಕಾಲಘಟ್ಟದಲ್ಲಿ ಕರ್ನಾಟಕ ಹಲವು ವಿಶ್ವವಿದ್ಯಾನಿಲಯಗಳ ಹುಟ್ಟು ಬೆಳವಣಿಗೆಗಳನ್ನು ಕಾಣುವಂತಾಗಲು ಮೈಸೂರು ವಿಶ್ವವಿದ್ಯಾನಿಲಯ ಹೀಗೆ ನಾಂದೀಪದವನ್ನು ಹಾಡಿತು. ಪ್ರಥಮ ಕುಲಾಧಿಪತಿಯಾಗಿ

ನಾಲ್ವಡಿಯವರು ಸೆನೆಟ್ ಸಭೆಯಲ್ಲಿಯೂ ಮೊದಲ ಘಟಕೋತ್ಸವದ ಭಾಷಣಗಳಲ್ಲಿಯೂ ವ್ಯಕ್ತಪಡಿಸಿದ ರೀತಿಯಲ್ಲಿ ಕನ್ನಡ ಭಾಷೆ ಸಾಹಿತ್ಯಗಳಿಗೆ ಒತ್ತಾಸೆ ದೊರೆತು ಪ್ರಚಾರೋಪನ್ಯಾಸಗಳು, ವಿವಿಧ ಗ್ರಂಥ ಪ್ರಕಟಣೆಗಳು, ವಿದ್ವತ್ಪತ್ರಿಕೆಗಳು, ವಿಶೇಷೋಪನ್ಯಾಸಗಳು ಇವೆಲ್ಲ ಅಗತ್ಯವಿದ್ದ ಶಿಕ್ಷಣವನ್ನು ಸಾರ್ವಜನಿಕವಲಯದಲ್ಲಿ ತುಂಬಿಕೊಟ್ಟವು. ಮುಂದೆ ಕರ್ನಾಟಕದ ಇತರ ವಿಶ್ವವಿದ್ಯಾನಿಲಯಗಳಿಗೂ ಮಾದರಿ ಎನಿಸಿದುವು. ಸಂಸ್ಥಾನದ ದೂರ ಪ್ರದೇಶಗಳಲ್ಲಿ ವಾಸಿಸುವ ಜನರಲ್ಲಿ ಹೀಗೆ ಶಿಕ್ಷಣ ಸಂಸ್ಕೃತಿಯನ್ನು ಹರಡುವ ಅಂದಿನ ಒಡೆಯರ ಆಶಯವೇ ದೂರಶಿಕ್ಷಣ, ಮುಕ್ತ ವಿಶ್ವವಿದ್ಯಾನಿಲಯಗಳ ಉಗಮಕ್ಕೆ ಕಾರಣವಾಯಿತು.

ಒಡೆಯರ ಮತ್ತು ಸಮಕಾಲದ ಆಡಳಿತಗಾರರ ರಾಜಕೀಯ ಮತ್ತು ಬೇರೆಬೇರೆ ವಿದ್ಯಮಾನಗಳ ಬಗೆಗೆ ಪ್ರವಾಸಿಗಳ ಕಥನಗಳನ್ನು ಬಖೈರು, ಕೈಫಿಯತ್, ನಾಮಾಗಳನ್ನು, ಇತರ ಆಕರಗಳನ್ನು ಒಳಕೊಂಡು ಈಗಾಗಲೇ ಬಿ.ಎಲ್. ರೈಸ್, ಸಿ. ಹಯವದನರಾವ್, ಎಂ.ಎಸ್. ಪುಟ್ಟಣ್ಣ, ಎಂ. ಶಾಮರಾವ್, ತಿ.ತಾ.ಶರ್ಮ, ಹುಲ್ಲೂರು ಶ್ರೀನಿವಾಸ ಜೋಯಿಸ್, ಆರ್.ನರಸಿಂಹಾಚಾರ್ ಮೊದಲಾದವರಿಂದ ಕೆಲಸಗಳು ನಡೆದಿವೆ. ಈಚೆಗೆ ಡಾಕ್ಟರೇಟ್ ನಿಬಂಧಗಳಿಗಾಗಿ ಕೆಲಸಗಳು ಮುಂದುವರಿದಿದ್ದರೂ, ಸಾಮಾನ್ಯ ಜನ ತಮ್ಮ ನಾಡು ನುಡಿಗಳ, ನೆಲ ಜಲಗಳ, ಆಳಿದ ಅರಸರ ಅಧಿಕಾರಿಗಳ ಬಗೆಗೆ ಆಸಕ್ತಿಯಿಂದ ತಿಳಿಯುವ ಹಾಗೆ ಮಾಡುವುದರಲ್ಲಿ ನಮ್ಮ ಸರ್ಕಾರವೂ ವಿದ್ಯಾಪೀಠಗಳೂ ಯೋಜನೆ ಹಾಕಿಕೊಳ್ಳುವತ್ತ ಇನ್ನೂ ಪೂರ್ಣವಾಗಿ ಮನಸ್ಸು ಮಾಡಿದಂತಿಲ್ಲ. ನಾಟಕಕಾರ ಸಂಸರು, ಪತ್ರಕರ್ತ ಚಾಮರಾಜನಗರ ವೆಂಕಟರಮಣ ಶಾಸ್ತ್ರಿಗಳು, ಸಾಹಿತಿ ಸಿ.ಕೆ.ವೆಂಕಟರಾಮಯ್ಯನವರು ಹಿಂದೆ ಮಾಡಿದ ಪ್ರಯತ್ನಗಳು ಈ ಸಂದರ್ಭದಲ್ಲಿ ನನಗೆ ನೆನಪಾಗುತ್ತವೆ.

ಈಚೆಗೆ ವಿದೇಶದಲ್ಲಿರುವವರೂ ಹೆಚ್ಚು ಆಸಕ್ತಿ ತೋರಿಸುತ್ತಿದ್ದಾರೆ. ಕೆನಡಾದ ಸಂಸ್ಕೃತ ವಿದ್ವಾಂಸ ಎನ್. ಇ. ಸೋಮನ್ ಎಂಬವರು ಮೈಸೂರೊಡೆಯರು ಯೋಗವಿದ್ಯೆಗೆ ನೀಡಿದ ಪ್ರೋತ್ಸಾಹ ಕುರಿತು, ಮೈಸೂರಿನ ಕಲಾವಿದರನ್ನು ಕುರಿತು ಎರಡು ಪುಸ್ತಕಗಳನ್ನು ಬರೆದಿದ್ದಾರೆ. ಯೋಗಾಚಾರ ಬಿ.ಕೆ.ಎಸ್. ಅಯ್ಯಂಗಾರ್ಯರ ಗುರು ಟಿ. ಕೃಷ್ಣಮಾಚಾರ್ಯರು ನಾಲ್ವಡಿಯವರಿಗೆ ಯೋಗಾಸನಗಳನ್ನು ಕಲಿಸಿದ ವಿವರಗಳಿರುವ ಮೈಸೂರ್ ಮೈಸಿರಿಯಿಂದ ಅನುವಾದಿಸಿಕೊಳ್ಳುವಾಗ ನನ್ನ ನೆರವನ್ನು ಅವರ ಪಡೆದರು. ಈಚೆಗೆ ಮೂಲ ಗ್ರಂಥವನ್ನೇ ನೋಡಲಪೇಕ್ಷಿಸಿದ ವಿದೇಶದ ವಿದ್ವಾಂಸರೂ ಅದರ ಪ್ರತಿ ತರಿಸಿಕೊಂಡರು.

ಇನ್ನೊಂದು ಪ್ರಯತ್ನವನ್ನು ಎಂ. ಎಸ್. ಪುಟ್ಟಣ್ಣ ಸೋಸಲೆ ಅಯ್ಯಾಶಾಸ್ತ್ರಿಗಳ ಮನೆತನದ, ಕ್ಯಾಲಿಫೋರ್ನಿಯ ವಿಶ್ವವಿದ್ಯಾನಿಲಯದಲ್ಲಿ ಹಿರಿಯ ಗಣಕ ಪ್ರಾಧ್ಯಾಪಕರಾಗಿರುವ ಚೇಣ್ಯ ವಿ. ರವಿಶಂಕರ್ ಸುಮಾರು ೨೦೦ ವರ್ಷ ಒಡೆಯರು

ಪೋಷಿಸಿದ ವಿದ್ವತೆಯ ಇತಿಹಾಸವನ್ನು ಪುನಃ ಕಟ್ಟಿಕೊಡುವ ಪ್ರಯತ್ನವನ್ನು Sons of Saraswati late exemplars of the Indian intellectual tradition ತಮ್ಮ ಪುಸ್ತಕದಲ್ಲಿ ಮಾಡಿದ್ದಾರೆ. ಅದರಲ್ಲಿ ಆ ಕಾಲದ ವಿದ್ವಾಂಸರು, ವಿದ್ವಜ್ಜನಪೋಷಕರ ಅಪೂರ್ವ ವರ್ಣಚಿತ್ರಗಳನ್ನೂ ಸಂಗ್ರಹಿಸಿಕೊಟ್ಟಿದ್ದಾರೆ. ಇದು ಒಡೆಯರ ಕೀರ್ತಿಯ ಸೀಮೋಲ್ಲಂಘನ.

ನಾಲ್ವಡಿಯವರ ಅನಂತರ ಜಯಚಾಮರಾಜ ಒಡೆಯರ್ ಅವರು (೧೯೧೯- ೭೪ / ಆಳಿಕೆ ೧೯೪೦-೫೦) ಸ್ವತಂತ್ರ ಭಾರತ ಗಣರಾಜ್ಯವಾಗಿ ಘೋಷಿತವಾದಾಗ ಮೈಸೂರು ಸಂಸ್ಥಾನವನ್ನು ಅದರಲ್ಲಿ ವಿಲೀನಗೊಳಿಸಿದರು. ಸ್ವತಃ ಗ್ರಂಥಕರ್ತೃವಾಗಿ, ವಿದ್ವಜ್ಜನ ಪೋಷಕರಾಗಿ ಇದ್ದ ಒಡೆಯರು ನಮ್ಮ ದೇಶದ ಬೌದ್ಧಿಕನಿಧಿ ಎನ್ನಬಹುದಾದ ಋಗ್ವದ ಸಂಪುಟಗಳು, ಪುರಾಣಗಳು, ಭಾಷ್ಯಸಹಿತ ಪ್ರಸ್ತಾವತ್ರಯ, ಪ್ರಕರಣ ಗ್ರಂಥಗಳು ಎಲ್ಲಾ ಸೇರಿ ೩೫೦ ದೊಡ್ಡ ಸಂಪುಟಗಳ ಪ್ರಕಟಣೆಯ ಮಹತ್ಕಾರ್ಯವನ್ನು ವಿದ್ವಾಂಸರ ಸಹಕಾರದೊಂದಿಗೆ ಆಗುಮಾಡಿಸಿದರು. ಒಂದೊಂದು ಸಂಪುಟದಲ್ಲಿಯೂ ಸರಾಸರಿ ೫೦೦ ಪುಟಗಳು, ಮೂಲ ಮತ್ತು ಸರಳ ಕನ್ನಡ ಭಾಷಾಂತರದೊಂದಿಗೆ ಸಿದ್ಧವಾಗಿರುವ ಈ ಪುಸ್ತಕಗಳ ವ್ಯಾಪ್ತಿ ಸುಮಾರು ಒಂದು ಲಕ್ಷ ಪುಟಗಳಷ್ಟು ಸುಂದರವಾದ ಮುದ್ರಣ, ಗಟ್ಟಿರಟ್ಟಿನ ಪುಸ್ತಕಗಳು, ಇವು ತೀರ ಕಡಿಮೆ ಬೆಲೆಗೆ, ಕೆಲವೊಮ್ಮೆ ಉಚಿತವಾಗಿ ಶಾಲೆ ಕಾಲೇಜುಗಳ ಗ್ರಂಥಭಂಡಾರಗಳಿಗೆ ಕೊಡಲಾಯಿತೆಂದು ನಾನು ಕೇಳಿದ್ದೇನೆ.

೧ನೇ ಚಾಮರಾಜೇಂದ್ರ ಒಡೆಯರ ಜನನಕ್ಕೆ ಮೊದಲೇ ೧೮೯೦ ಜುಲೈ ೨೦ರಂದು ಪ್ರಾರಂಭವಾದ ಕರ್ಣಾಟಕ ವಿದ್ಯಾವರ್ಧಕ ಸಂಘ ಮೊದಲಿಗೆ ಮುಂಬಯಿ ಹೈದರಾಬಾದ್, ಕರ್ನಾಟಕಗಳ ಕನ್ನಡ ನುಡಿಭಕ್ತರಾದ ಶಾಮರಾವ್ ಕೈಕಿಣಿ, ರಾ.ಹ.ದೇಶಪಾಂಡೆ, ಆಲೂರು ವೆಂಕಟರಾವ್, ಮುದವೀಡು ಕೃಷ್ಣರಾವ್ ಇಂಥವರ ಮುಂದಾಳುತನದಲ್ಲಿ ಕನ್ನಡ ಪುರುಜ್ಜೀವನದ, ಕರ್ನಾಟಕ ಏಕೀಕರಣದ ಹಲವು ಪ್ರಯತ್ನಗಳಲ್ಲಿ ಕಾರ್ಯತತ್ಪರವಾಯಿತು. ಅಂದಿನ ಮೈಸೂರು ಸರ್ಕಾರದ ಹಾಗೂ ಮಂಗಳೂರು ಕರ್ನಾಟಕ ಭಾಗದ ವಿದ್ಯಾಭ್ಯಾಸ ಇಲಾಖೆಯ ನುಡಿಭಕ್ತರು ಧಾರವಾಡದಲ್ಲಿ ಒಗ್ಗೂಡಲು ಇದರಿಂದ ಅನುಕೂಲವಾಯಿತು. ಈ ಸಂಬಂಧವಾಗಿ ಪರಿಶ್ರಮ ಪರಿಣಾಮದ ಘಟ್ಟಗಳನ್ನು ಆಲೂರರ ಜೀವನಸ್ಮೃತಿಗಳು, ಬಿ.ಎಂ.ಶ್ರೀಯವರ ಲೇಖನ ಭಾಷಣಗಳು ಇಂಥ ಆಕರಗಳಿಂದ ತಿಳಿಯಬಹುದಾಗಿದೆ.

೧೯೦೭ರಲ್ಲಿ ಧಾರವಾಡದಲ್ಲಿ ಜರುಗಿದ ಅಖಿಲ ಕರ್ನಾಟಕ ಗ್ರಂಥಕರ್ತರ ಪ್ರಥಮ ಸಮ್ಮೇಳನದ ಅಧ್ಯಕ್ಷರಾಗಿದ್ದ ಎಸ್. ಜಿ. ನರಸಿಂಹಾಚಾರ್ಯರು ತಮ್ಮ ಭಾಷಣದಲ್ಲಿ ಏಕೀಕೃತ ಕರ್ನಾಟಕದ ಸಾಧ್ಯತೆಯ ಬಗ್ಗೆ ಅನುಮಾನವನ್ನು ವ್ಯಕ್ತಪಡಿಸಿಯೂ, ಮೈಸೂರಿನ ಕರ್ಣಾಟಕ ಭಾಷಜೀವಿನೀ ಸಭೆ (೧೮೮೬) ಯ, ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆ (೧೮೯೦) ಮುನ್ನಡೆಗೆ ಹೇಗೆ ಒಂದು ಮೀಟುಗೋಲು

ಎನ್ನವಂತಾಯಿತೋ ವಿದ್ಯಾವರ್ಧಕ ಸಂಘ ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಗೆ (೧೯೧೫), ಮುನ್ನಡೆಗೆ ಮೀಟುಗೋಲಾಗಿ ಪರಿಣಮಿಸಿತು. ಮೈಸೂರು ಒಡೆಯರಲ್ಲಿ ಆಧುನಿಕ ಕರ್ನಾಟಕದಲ್ಲಿ ಕನ್ನಡತನ ಸರ್ವತೋಮುಖವಾಗಿ ಸ್ಫುರಿಸಿ ವ್ಯಾಪಿಸಲು ೧೦ ನೆಯ ಚಾಮರಾಜೇಂದ್ರ ಒಡೆಯರ, ನಾಲ್ವಡಿ ಕೃಷ್ಣರಾಜರ, ಜಯಚಾಮರಾಜೇಂದ್ರರ ಕಾಲದ ವಿದ್ಯಾವಂತ ಕನ್ನಡ ಭಕ್ತರ ಸೇವೆ ಸಹಕಾರಗಳು ಪ್ರಭಾವಳಿಯಾಗಿ ನೆಲೆಯಾದುವು. ಮೈಸೂರು ವಿದ್ಯಾ ಇಲಾಖೆಯ ವಿದ್ಯಾದಾಯಿನಿ ಪತ್ರಿಕೆಯಲ್ಲಿ, ಕನ್ನಡ ನುಡಿ ಮೊದಲಾದ ಪತ್ರಿಕೆಗಳಲ್ಲಿ ದೊರೆಯುವ ವಿವರಗಳು ಕುತೂಹಲಕರವಾಗಿವೆ. ವಿದ್ಯಾವರ್ಧಕ ಸಂಘ, ಕರ್ನಾಟಕ ಇತಿಹಾಸ ಮಂಡಲ ಇಂಥವು ಧಾರವಾಡದ ಸೀಮೆಗೆ ದಕ್ಷಿಣ ಕರ್ನಾಟಕದವರನ್ನು ಕೈಬೀಸಿ ಕರೆದುವು. ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ನಾರ್ಮಲ್ ಸ್ಕೂಲ್ ಮತ್ತು ಕನ್ನಡ ಪಂಡಿತ ಪದವಿ ಶಿಕ್ಷಣ, ಮಹಾರಾಜ ಸಂಸ್ಕೃತ ಪಾಠಶಾಲೆ, ಚಾಮರಾಜೇಂದ್ರ ಸಂಸ್ಕೃತ ಪಾಠಶಾಲೆ, ಪ್ರಾಚ್ಯವಿದ್ಯಾ ಸಂಶೋಧನಾಲಯ, ಶಾಸನ ಮತ್ತು ಪುರಾತತ್ತ್ವ ಇಲಾಖೆ ಇಂಥವು ಮೈಸೂರೇತರವಾದ ಕರ್ನಾಟಕದ ಭಾಗಗಳಿಂದ ಆಸಕ್ತರನ್ನೂ ಶಿಕ್ಷಣಾರ್ಥಿಗಳನ್ನೂ ಒಡೆಯರ ಆಳಿಕೆಯಲ್ಲಿದ್ದ ಮೈಸೂರು ಬೆಂಗಳೂರು ಪ್ರಾಂತಗಳು ಬರಮಾಡಿಕೊಂಡುವು. ಪರಸ್ಪರವಾದ ಕೊಳುಕೊಡೆಗಳಿಂದ ನಾವು ಬೆಳೆದಿದ್ದೇವೆ. ಈ ವಿಷಯವನ್ನು ಹೆಚ್ಚು ಸ್ಫುಟಗೊಳಿಸಿದವರಲ್ಲಿ, ಸಾಹಿತ್ಯ ಪರಿಷತ್ತನ್ನು ಕನ್ನಡಿಗರ ವಿದ್ಯಾಪೀಠ'ವೆಂದು ಕರೆದ ಬಿ.ಎಂ.ಶ್ರೀಕಂಠಯ್ಯನವರನ್ನು ಈ ಸಂದರ್ಭದಲ್ಲಿ ವಿಶೇಷವಾಗಿ ನಾನು ನೆನೆಯುತ್ತೇನೆ. ಮೈಸೂರು ಸೀಮೆಯಿಂದ ಉತ್ತರ ಕರ್ನಾಟಕದ ಭಾಗಗಳಿಗೆ ತಾವು ಆಗಾಗ ಕನ್ನಡದ ಚಟುವಟಿಕೆಗಳಿಗಾಗಿ ಹೋಗಿ ಬರುತ್ತಿದ್ದುದಲ್ಲದೆ, ತಮ್ಮ ಶಿಷ್ಯರನ್ನು, ಮಿತ್ರರನ್ನು ಹೋಗಿ ಬರುವಂತೆ ಹುರಿದುಂಬಿಸುತ್ತಿದ್ದರು. ಈ ವಿಷಯವನ್ನು ವಿ.ಸೀ. ಅವರು ಉತ್ಕಟವಾಗಿ ನೆನಪು ಮಾಡಿಕೊಂಡಿದ್ದಾರೆ. Let as be the living human bridger across the Tungabhadra ಎಂಬುದಾಗಿ ತಮಗೆ ಮತ್ತು ರಾಜರತ್ನಂ ಅವರಿಗೆ ಹೇಳಿದ್ದನ್ನು ಉದ್ಧರಿಸಿದ್ದಾರೆ. ಶ್ರೀ ಅವರು 'ರಾಜಸೇವಾಸಕ್ತ' ರು ನಿಜ; ಆದರೆ ಕನ್ನಡ ಸರಸ್ವತಿಯ ಅವಿಚ್ಛಿನ್ನ ಭಕ್ತರಾಗಿದ್ದುದು ಅದಕ್ಕಿಂತ ಹೆಚ್ಚಿನ ನಿಜ. ಅವರು ಕನ್ನಡದ ಕಣ್ವರೆನ್ನಿಸಿದ್ದರು. ಮೈಸೂರಿನಲ್ಲಿಯೇ ಈಗ್ಗೆ ೬೭ ವರ್ಷಗಳ ಕೆಳಗೆ ನಡೆದ ೧೬ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದವರು ಆಲೂರು ವೆಂಕಟರಾಯರು, ಕನ್ನಡ ಪ್ರಜ್ಞೆಯನ್ನು ಕನ್ನಡಿಗರಲ್ಲಿ ಎಚ್ಚರಿಸಿದ ಆದ್ಯರಲ್ಲಿ ಒಬ್ಬರಾಗಿ ಕನ್ನಡ ಕುಲಪುರೋಹಿತರೆನ್ನಿಸಿದವರು. ಆಗ್ಗೆ ತರುಣ ಲೇಖಕರ ಗೋಷ್ಠಿಯ ಅಧ್ಯಕ್ಷರಾಗಿದ್ದವರು ದ.ರಾ ಬೇಂದ್ರೆಯವರು. ಆಗ್ಗೆ ಮೈಸೂರು ದೊರೆ ನಾಲ್ವಡಿ ಕೃಷ್ಣರಾಜ ಒಡೆಯರು; ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಅವರ ಸೋದರ, ಯುವರಾಜ ಕಂಠೀರವ ನರಸಿಂಹರಾಜ ಒಡೆಯರು.

# ಮೈಸೂರು ಸಂಸ್ಥಾನದ ಅಭಿವೃದ್ಧಿಯಲ್ಲಿ ದಿವಾನರ ಪಾತ್ರ

**- ಡಾ.ಡಿ.ಎಸ್.ಜಯಪ್ಪಗೌಡ**

ಮೈಸೂರು ಸಂಸ್ಥಾನ ಬ್ರಿಟಿಷ್ ಭಾರತದ ಪ್ರಮುಖ ಸಂಸ್ಥಾನಗಳಲ್ಲೊಂದಾಗಿತ್ತು. ಈ ಸಂಸ್ಥಾನಗಳಿಗೆ ಸ್ವಯಮಾಡಳಿತ ಅಧಿಕಾರ ಕೊಡುವ ಮೂಲಕ ಬ್ರಿಟಿಷರು ಭಾರತೀಯ ಜನಸ್ತೋಮದ ವಿಶ್ವಾಸ ಗಳಿಸಲು ಉದ್ದೇಶಿಸಿದ್ದರು. ಅದರೊಟ್ಟಿಗೆ ಸಂಸ್ಥಾನದಲ್ಲಿ ತಮ್ಮ ರೆಸಿಡೆಂಟ್ ಎಂಬ ಅಧಿಕಾರಿಯನ್ನು ಬ್ರಿಟಿಷ್ ಪ್ರಭುತ್ವದ ಪ್ರತಿನಿಧಿಯಾಗಿ ನೇಮಿಸಿದ್ದರು. ಈ ಸಂಸ್ಥಾನದ ಪ್ರಭುತ್ವದ ಸಂಕೇತವಾಗಿ ಮಹಾರಾಜರಿರುತ್ತಿದ್ದರು. ಕಾರ್ಯಾಂಗ ಪ್ರಮುಖರಾಗಿ ದಿವಾನ್ ಹುದ್ದೆಯನ್ನು ಸೃಷ್ಟಿಸಲಾಗಿತ್ತು. ಈ ದಿವಾನರ ನೇಮಕದಲ್ಲಿ ಮಹಾರಾಜರಿಗೆ ಹೆಚ್ಚು ಸ್ವಾತಂತ್ರ್ಯವಿದ್ದರೂ ಬ್ರಿಟಿಷ್ ಪ್ರಭುತ್ವವೂ ತನ್ನ ಪ್ರಭಾವ ಬೀರುತ್ತಿತ್ತು. ದಿವಾನರು ಆಡಳಿತಾಂಗದ ಏಕೈಕ ಅಧಿಕಾರಸ್ಥರಾಗಿದ್ದರು. ಅವರು ತಮ್ಮ ಕೌನ್ಸಿಲ್ ಸಭೆಯ ಇತರ ಸದಸ್ಯರ ವಿಶ್ವಾಸ ಪಡೆಯಬೇಕೆಂಬುದು ಕಾರ್ಯನೀತಿಯಾಗಿದ್ದರೂ ಕಾನೂನುಬದ್ಧವಾಗಿ ಅವರು ಮಹಾರಾಜರಿಗೆ ಮಾತ್ರ ಉತ್ತರದಾಯಿಯಾಗಿದ್ದರು. ಹೀಗಿದ್ದ ಪರಿಸ್ಥಿತಿಯಲ್ಲಿ ದಿವಾನರು ರಾಜ್ಯದ ಆಗುಹೋಗುಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

ಆಡಳಿತದ ಮತ್ತು ಅಭಿವೃದ್ಧಿಯ ಕ್ಷೇತ್ರದಲ್ಲಿ ದಿವಾನರ ಪ್ರಭಾವ ವಿಶೇಷ ವಾಗಿರುತ್ತಿದ್ದಿತು. ಮೈಸೂರು ಸಂಸ್ಥಾನದ ಮಟ್ಟಿಗೆ ಹೇಳಬೇಕೆಂದರೆ ದಿವಾನರೇ ಅತ್ಯಂತ ನಿರ್ಣಾಯಕ ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾದ ಸಂದರ್ಭಗಳು ಮತ್ತೆ ಮತ್ತೆ ಬರುತ್ತಿದ್ದವು. ಇದಕ್ಕೆ ಕಾರಣ ಉತ್ತರಾಧಿಕಾರಿಗಳಾಗಿ ಅಪ್ರಾಪ್ತ ರಾಜವಂಶಿಗರನ್ನು ಮತ್ತೆ ಮತ್ತೆ ನೇಮಿಸುವ ಸಂದರ್ಭ ಬಂದದ್ದು: ೧೭೯೯ ರಲ್ಲಿ ಟಿಪ್ಪುಸುಲ್ತಾನನಿಂದ ರಾಜ್ಯವನ್ನು ವಶಕ್ಕೆ ತೆಗೆದುಕೊಂಡ ಬ್ರಿಟಿಷರು ಮಹಾರಾಣಿ ಲಕ್ಷ್ಮಮ್ಮಣ್ಣಿಯವರ ದತ್ತುಪುತ್ರ ಮುಮ್ಮಡಿ ಕೃಷ್ಣರಾಜ ಒಡೆಯರನ್ನು ಉತ್ತರಾಧಿಕಾರಿ ಯಾಗಿ ನೇಮಿಸಿದ್ದು ಇವರಿಗೆ ಆಗ ಕೇವಲ ಐದಾರು ವರ್ಷಗಳ ಪ್ರಾಯ. ಈ ಉತ್ತರಾಧಿಕಾರಿಯ ಪರವಾಗಿ ರಾಜಮಾತೆಯ ಹಿರಿತನದಲ್ಲಿ ರಚಿಸಲಾದ ಕೌನ್ಸಿಲ್ ಆಡಳಿತ ನಡೆಸುತ್ತಿತ್ತು. ಆ ಬಾರಿ ಪೂರ್ಣಯ್ಯನವರನ್ನು ಬ್ರಿಟಿಷ್ ಪ್ರಭುತ್ವದ ಶಿಫಾರಸ್ಸಿನ ಮೇಲೆ ದಿವಾನರನ್ನಾಗಿ ನೇಮಿಸಲಾಯಿತು. ಟಿಪ್ಪು ಆಡಳಿತದಲ್ಲಿ ಸಚಿವರಾಗಿ ಕೆಲಸ ಮಾಡಿದ್ದ ಪೂರ್ಣಯ್ಯನವರು ಕೈಗೊಳ್ಳುವ ನಿರ್ಣಯಗಳೇ ಮುಖ್ಯವಾಗಿರುತ್ತಿದ್ದವು. ಹಿಂದಿನ ರಾಜವಂಶಗಳವರು ರಾಜ್ಯದಲ್ಲಿ ದಂಗೆಯೆದ್ದಾಗ ದಿವಾನ್ ಪೂರ್ಣಯ್ಯನವರು ಬ್ರಿಟಿಷ್ ಸೈನ್ಯದ ನೆರವು

ಪಡೆದು ಬಂಡುಕೋರರನ್ನು ಅಡಗಿಸಿದರು. ಕೆಲವೊಮ್ಮೆ ತಾವೇ ಖುದ್ದಾಗಿ ಸೈನ್ಯದೊಂದಿಗೆ ಹೋಗಿ ನೈತಿಕ ಧೈರ್ಯ ತುಂಬಿದ್ದರು. ಅವರು ಕೈಗೊಂಡ ಆರ್ಥಿಕ ಸುಧಾರಣೆಗಳು, ಭೂ ಸುಧಾರಣೆಗಳು ರಾಜ್ಯ ಬಲಿಷ್ಠವಾಗಲು ಪೂರಕವಾಗಿತ್ತು. ಇವರು ಕೃಷ್ಣರಾಜ ಒಡೆಯರು ಸ್ವತಂತ್ರವಾಗಿ ರಾಜ್ಯಭಾರ ಮಾಡುವುದಕ್ಕೆ ಮುನ್ನವೇ ೧೮೧೧ ರಲ್ಲಿ ಸ್ವಯಂ ನಿವೃತ್ತಿ ಪಡೆದರು.

ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರು ಸ್ವತಂತ್ರವಾಗಿ ಆಳಲು (೧೮೧೧) ಪ್ರಾರಂಭಿಸಿದ ಮೇಲೆ ಅವರ ಕಾಲದಲ್ಲಿ ಅನೇಕ ದಿವಾನರು ಬಂದರು, ಹೋದರು. ಹೀಗೆ ಪದೇ ಪದೇ ದಿವಾನರನ್ನು ಬದಲಾಯಿಸಿದ್ದರಿಂದ ಮುಮ್ಮಡಿ ಯವರ ಆಡಳಿತ ಅನೇಕ ಎಡರುತೊಡರುಗಳನ್ನು ಎದುರಿಸಿತು. ಅದರ ದುಷ್ಪರಿಣಾಮ ಮಹಾರಾಜರ ರಾಜತ್ವದ ಪತನಕ್ಕೆ ಕಾರಣವಾಯಿತು. ರಾಜ್ಯದ ವಿವಿಧ ಭಾಗಗಳಲ್ಲಿ ದಂಗೆಗಳಾದವು. ಮಹಾರಾಜರು ದಂಗೆಗಳನ್ನು ಅಡಗಿಸಲು ಅಸಮರ್ಥರಾದರೆಂಬ ಭಾವನೆ ಬ್ರಿಟಿಷ್ ಪ್ರಭುತ್ವಕ್ಕೆ ಬಂದಿತ್ತು. ಹಣಕಾಸಿನ ನಿರ್ವಹಣೆಯಲ್ಲೂ ವಿಫಲರಾದರೆಂದು ಅವರನ್ನು ಪದಚ್ಯುತಗೊಳಿಸಲಾಯಿತು. ಆಗ ಮಹಾರಾಜರ ಜೀವನಕ್ಕೆ ರಾಜಧನ ನಿರ್ಧರಿಸಿ ಸಂಸ್ಥಾನದ ಆಳ್ವಿಕೆಯನ್ನು ಬ್ರಿಟಿಷ್ ಕಮಿಷನರುಗಳಿಗೆ ಒಪ್ಪಿಸಲಾಯಿತು. ಮುಂದೆ ಮುಮ್ಮಡಿಯವರ ಸತತ ಪ್ರಯತ್ನದಿಂದ ಮಹಾರಾಜರ ವಂಶಸ್ಥರಿಗೆ ಮರಳಿ ಅಧಿಕಾರ ವಹಿಸಿಕೊಡಲು ಒಪ್ಪಿದರೂ ಮುಮ್ಮಡಿಯವರ ದತ್ತುಪುತ್ರ ೯ನೇ ಚಾಮರಾಜ ಒಡೆಯರಿಗೆ ಪ್ರಾಪ್ತ ವಯಸ್ಸಾಗಲು ೧೮೮೧ರವರೆಗೂ ಕಾಯಬೇಕಾಯಿತು. ಹೀಗೆ ಐವತ್ತು ವರ್ಷಗಳ ಕಾಲ ಸಂಸ್ಥಾನವಿದ್ದರೂ ಪ್ರಭುತ್ವವಿಲ್ಲದ ಸ್ಥಿತಿಯಲ್ಲಿ ಕಾಲ ಕಳೆಯಲಾಯಿತು.

೧೮೮೧ರಲ್ಲಿ ೯ನೇ ಚಾಮರಾಜ ಒಡೆಯರು ಸಿಂಹಾಸನವೇರಿದರು. ಅವರ ಕಾಲದಲ್ಲಿ ಸಿ.ರಂಗಾಚಾರ್ಲು ಮತ್ತು ಕೆ.ಶೇಷಾದ್ರಿ ಐಯ್ಯರ್ ದಿವಾನರಾಗಿದ್ದರು. ಇವರಿಬ್ಬರೂ ಪ್ರಭಾವಿ ದಿವಾನರಾಗಿದ್ದು ತಮ್ಮ ನಿರ್ಧಾರಗಳಿಗೆ ಮನ್ನಣೆ ಸಿಗುವಂತೆ ನೋಡಿಕೊಂಡರು. ಪ್ರಜೆಗಳ ವಿವಿಧ ವರ್ಗಗಳಿಗೆ ಪ್ರಾತಿನಿಧ್ಯ ಕೊಡುವ ಪ್ರಜಾಪ್ರತಿನಿಧಿ ಸಭೆಯ ರಚನೆಯಲ್ಲಿ ಸಿ.ರಂಗಾಚಾರ್ಲುರವರ ನಿರ್ಧಾರ ಪ್ರಮುಖವಾಯಿತು. ೧೮೩೧ರಲ್ಲಿ ರಾಜ್ಯಾಧಿಕಾರ ಚ್ಯುತಿಯಾದ ಸಂದರ್ಭ ಮತ್ತೊಮ್ಮೆ ಮರುಕಳಿಸದಂತೆ ಈ ಕ್ರಮಕೈಗೊಳ್ಳಲಾಯಿತು. ಪ್ರಜೆಗಳ ಅಹವಾಲು ರೂಪದಲ್ಲಾದರು ತಮ್ಮ ಸಮಸ್ಯೆಗಳನ್ನು ನಿವೇದಿಸಲು ಇದರಿಂದ ಅವಕಾಶವಾಯಿತು. ಸಿ.ರಂಗಾಚಾರ್ಲು ಅನತಿಕಾಲದಲ್ಲಿ ಅಂದರೆ ೧೮೮೩ರಲ್ಲಿ ಕಾಲವಾದರು.

೧೮೮೩ರಿಂದ ದಿವಾನರಾಗಿ ಅಧಿಕಾರ ವಹಿಸಿಕೊಂಡ ಕೆ.ಶೇಷಾದ್ರಿ ಅಯ್ಯರ್ ರವರು ಮೈಸೂರು ಸಂಸ್ಥಾನದಲ್ಲಿ ದಿವಾನರಾಗಿ ಅತಿ ದೀರ್ಘಕಾಲ ಸೇವೆ ಸಲ್ಲಿಸಿದ ಹೆಗ್ಗಳಿಕೆಗೆ ಪಾತ್ರರಾದರು. ಹಿರಿಯ ಅನುಭವಿ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ಅಯ್ಯರ್‌ರವರಿಗೆ ಮಹಾರಾಜರು ಹೇಳಿ ಮಾಡಿಸುವ ಅವಕಾಶಗಳು ಕಡಿಮೆ ಇದ್ದವು.

ಜತೆಗೆ ಚಾಮರಾಜ ಒಡೆಯರಿಗೆ ಆಗ ಇಪ್ಪತ್ತರ ಹರೆಯ. ಅಯ್ಯರ್‌ರವರು ಮಧ್ಯ ವಯಸ್ಸನ್ನು ದಾಟಿದ್ದವರು. ಸಂಸ್ಥಾನದಲ್ಲಿ ರೈಲು ಮಾರ್ಗಗಳನ್ನು ಹಾಕುವ ಮೂಲಕ ಆರ್ಥಿಕ ಅಭಿವೃದ್ಧಿಗೆ ಅನುಕೂಲವಾಗುವುದೆಂದು ಬಗೆದು ಅದಕ್ಕೆ ಆದ್ಯತೆ ನೀಡಿದರು. ಚಾಮರಾಜ ಒಡೆಯರು ಸಹ ೧೮೯೪ರಲ್ಲಿ ಆಕಸ್ಮಿಕ ಸಾವಿಗೆ ಶರಣರಾದ್ದರಿಂದ ಮತ್ತೆ ಸಂಸ್ಥಾನದ ಸಿಂಹಾಸನ ಶೂನ್ಯವಾಯಿತು. ಆಗ ಚಾಮರಾಜ ಒಡೆಯರ ಪುತ್ರ ಕೃಷ್ಣರಾಜ ಒಡೆಯರು ಇನ್ನೂ ಅಪ್ರಾಪ್ತರಾಗಿದ್ದರು. ಅವರ ಹೆಸರಿನಲ್ಲಿ ರಾಜಮಾತೆ ಕೆಂಪರಾಜಮ್ಮಣ್ಣಿಯವರ ನೇತೃತ್ವದ ಕೌನ್ಸಿಲ್ ಪ್ರಭುತ್ವ ಮುಂದುವರೆಯಿತು. ಕೆ.ಶೇಷಾದ್ರಿ ಅಯ್ಯರ್ ಅವರೇ ಈಗಲೂ ದಿವಾನರಾಗಿ ಮುಂದುವರಿದರು. ಇವರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಸ್ವತಂತ್ರರಾಗಿ ಅಧಿಕಾರ ವಹಿಸುವ ಮುನ್ನವೇ ೧೯೦೦ರಲ್ಲಿ ನಿವೃತ್ತರಾದರು. ಅಯ್ಯರ್ ಅವರ ಕಾಲದಲ್ಲಿ ರೈಲು ಮಾರ್ಗಗಳ ವಿಸ್ತರಣೆ; ಕೋಲಾರ ಚಿನ್ನದ ಗಣಿಗಳ ವಿಸ್ತರಣೆ, ವಿದ್ಯುತ್ ತಯಾರಿಕೆಗೆ ಮುಂದಾಗಿ ಶಿವನಸಮುದ್ರದಲ್ಲಿ ಒಂದು ಕೇಂದ್ರ ಸ್ಥಾಪಿಸಿದ್ದು; ವೇದಾವತಿ ನದಿಗೆ ಅಡ್ಡಲಾಗಿ ಮಾರಿಕಣಿವೆ ಜಲಾಶಯ ನಿರ್ಮಾಣ ಪ್ರಾರಂಭಿಸಿದ್ದು ಅವರ ಪ್ರಮುಖ ಕಾರ್ಯಗಳಲ್ಲಿ ಕೆಲವಾಗಿವೆ. ಇದೆಲ್ಲ ರಾಜಮಾತೆ ಕೆಂಪರಾಜಮ್ಮಣ್ಣಿ ಯವರ ಕಾರ್ಯಗಳೆಂದು ಏಕೆ ಹೇಳಬಾರದು ಎನ್ನುವವರೂ ಇದ್ದಾರೆ. ಆದರೆ ವಸ್ತುಸ್ಥಿತಿ ಬಲ್ಲವರು ದಿವಾನರ ಪ್ರಯತ್ನದ ಫಲಗಳೆಂದು ನಂಬುತ್ತಾರೆ.

ನಾಲ್ವಡಿ ಕೃಷ್ಣರಾಜ ಒಡೆಯರು ೧೯೦೨ರಿಂದ ೧೯೪೦ರವರೆಗೆ ದೀರ್ಘ ಕಾಲ ಆಳಿದ ಮಹಾರಾಜರು. ಇವರ ಕಾಲ ಆಧುನಿಕತೆಗೆ ಮುನ್ನುಡಿ ಬರೆದ ಕಾಲವೆಂದೂ, ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಗಳ ಕಾಲವೆಂದೂ ರಾಜಕೀಯ ತುಮುಲದ ಕಾಲವೆಂದೂ ಹೇಳಬಹುದು. ನಾಲ್ವಡಿಯವರ ಆಳ್ವಿಕೆಯಲ್ಲಿ ಶ್ರೀಯುತರಾದ ಪಿ.ಎನ್.ಕೃಷ್ಣಮೂರ್ತಿ (೧೯೦೧-೧೯೦೬): ವಿ.ಪಿ. ಮಾಧವರಾವ್ (೧೯೦೬- ೧೯೦೯); ಟಿ.ಆನಂದರಾವ್ (೧೯೦೯-೧೯೧೨); ಎಂ.ವಿಶ್ವೇಶ್ವರಯ್ಯ (೧೯೧೨- ೧೯೧೮); ಸರ್ದಾರ್ ಕಾಂತರಾಜ ಅರಸ್ (೧೯೧೯-೧೯೨೨); ಆಲ್ಲೀಯನ್ ಬ್ಯಾನರ್ಜಿ (೧೯೨೨-೧೯೨೬); ಸರ್ ಮಿರ್ಜಾ ಇಸ್ಮಾಯಿಲ್ (೧೯೨೬-೧೯೪೧) ಇವರು ದಿವಾನರಾಗಿದ್ದರು. ಈ ಅವಧಿ ಅನೇಕ ಘಟನೆ ಗಳಿಂದಾಗಿ ಮಹತ್ವಪೂರ್ಣ ವಾಗಿದೆ. ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ದೂರದೃಷ್ಟಿಯ, ಸ್ನೇಹಪರ, ಆದರ್ಶವಾದಿಯಾಗಿದ್ದರು. ದಿವಾನರ ಒಂದು ಅವಧಿಯನ್ನು ಮೂರು ವರ್ಷಗಳಿಗೆ ಸೀಮಿತಗೊಳಿಸಲಾಗಿತ್ತು. ಅವರ ಸೇವೆಯ ಮುಂದುವರಿಕೆ ಅಗತ್ಯವೆಂದು ಕಂಡುಬಂದರೆ ಮಾತ್ರ ಅಂತಹವರನ್ನು ಮತ್ತೆ ಮೂರು ವರ್ಷಗಳಿಗೆ ಮುಂದುವರೆಸಿದ ನೇಮಕಾತಿ ಆಗುತ್ತಿತ್ತು. ಹಾಗೆಯೇ ಮಹಾರಾಜರು ಬಯಸಿ ಬ್ರಿಟಿಷ್ ಪ್ರಭುತ್ವದ ಪರೋಕ್ಷ ಒಪ್ಪಿಗೆ ಇದ್ದರೆ ದಿವಾನರನ್ನು ಮತ್ತೆಮತ್ತೆ ಮುಂದಿನ ಅವಧಿಗೆ ಮುಂದುವರಿಸಲಾಗುತ್ತಿತ್ತು. ಇವರ ಆಳ್ವಿಕೆಯಲ್ಲಿ ಎರಡು ಅವಧಿಗೆ ದಿವಾನರಾಗಿ ಸೇವೆ ಮಾಡಿದವರೆಂದರೆ

ಪಿ.ಎನ್.ಕೃಷ್ಣಮೂರ್ತಿ ಮತ್ತು ಎಂ.ವಿಶ್ವೇಶ್ವರಯ್ಯನವರು. ಎರಡಕ್ಕಿಂತ ಹೆಚ್ಚು ಅವಧಿಗೆ ನೇಮಕವಾದವರೆಂದರೆ ಸರ್ ಮಿರ್ಜಾ ಇಸ್ಮಾಯಿಲ್.

ಮಹಾರಾಜರಿಗೆ ತಮ್ಮ ಸಂಸ್ಥಾನ ಆಧುನಿಕ ಅಗತ್ಯಕ್ಕೆ ತಕ್ಕಹಾಗೆ ಬೆಳೆಯಬೇಕೆಂಬ ಕಳಕಳಿ ಇದ್ದಿತು. ಅದಕ್ಕಾಗಿ ಉತ್ತಮ ದಿವಾನರನ್ನು ನೇಮಿಸುವ ಮೂಲಕ ಮತ್ತು ಅವರಿಗೆ ಕಾರ್ಯನಿರ್ವಹಣಾ ಸ್ವಾತಂತ್ರ್ಯ ಕೊಡುವ ಮೂಲಕ ರಾಜರು ಮತ್ತು ದಿವಾನರು ಕೂಡಿ ಸಾಮರಸ್ಯದಿಂದ ಕೆಲಸ ಮಾಡಬೇಕೆಂಬುದು ಅವರ ಅಪೇಕ್ಷೆ. ೧೯೦೨ ರಿಂದ ೧೯೧೨ ರವರೆಗೆ ಆಗಿಹೋದ ಮೂರು ದಿವಾನರುಗಳ ಕಾಲದಲ್ಲಿ ಒಳ್ಳೆಯ ಕಾರ್ಯಕ್ರಮಗಳನ್ನು ಜರುಗಿಸುವ ಪ್ರಯತ್ನ ನಡೆಸಲಾಯಿತು. ಇದರ ಫಲವಾಗಿ ವಿಧಾನಪರಿಷತ್ತಿನ ಸ್ಥಾಪನೆ (೧೯೦೭), ಚಿನ್ನದ ಗಣಿ ಅಭಿವೃದ್ಧಿ; ನೀರಾವರಿ ಯೋಜನೆಗಳ ಅನುಷ್ಠಾನ, ಉನ್ನತ ಶಿಕ್ಷಣವನ್ನು ಒದಗಿಸಲು ವಿಶ್ವವಿದ್ಯಾನಿಲಯ ಸ್ಥಾಪನೆಗೆ ಯೋಜನೆ, ಮಹಿಳೆಯರ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ, ಪ್ಲಾಂಟೇಶನ್ ಬೆಳೆಗೆ ಪ್ರೋತ್ಸಾಹ, ಸಾರಿಗೆ ವ್ಯವಸ್ಥೆ ಅಭಿವೃದ್ಧಿ ಇತ್ಯಾದಿ ಕಾರ್ಯಕ್ರಮಗಳು ಜರುಗಿದವು.

ಆದರೆ ಮಹಾರಾಜರಿಗೆ ತಮ್ಮ ಮುನ್ನೋಟಕ್ಕೆ ತಕ್ಕ ಹಾಗೆ ಸ್ಪಂದಿಸಿ ಮುನ್ನುಗ್ಗುವ ದಿವಾನರೊಬ್ಬರ ಅಗತ್ಯವಿದ್ದಿತು. ಈ ಕೊರತೆಯನ್ನು ತುಂಬಲು ಅವರು ಸದಾ ಯೋಚಿಸುತ್ತಿದ್ದರು. ಆಗ ಅವರ ದೃಷ್ಟಿಗೆ ಬಿದ್ದವರು ಎಂ.ವಿಶ್ವೇಶ್ವರಯ್ಯನವರು, ಆಗ ವಿಶ್ವೇಶ್ವರಯ್ಯನವರು ಮುಂಬೈ ಸರ್ಕಾರದಲ್ಲಿ ಎಂಜಿನಿಯರ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಅವರ ಕಾರ್ಯದಕ್ಷತೆ ಮತ್ತು ಪ್ರತಿಭೆಗಳು ಭಾರತದ ಎಂಜಿನಿಯರಿಂಗ್ ವಲಯದಲ್ಲಿ ಜನಜನಿತವಾಗಿದ್ದವು. ಇವರನ್ನು ಮೈಸೂರು ರಾಜ್ಯದ ಸೇವೆಗೆ ಬರುವಂತೆ ಮಹಾರಾಜರು ಆಹ್ವಾನಿಸಿದ್ದರು. ಕೆಲವು ವರ್ಷಗಳ ಆನಂತರ ಎಂ.ವಿ.ಯವರನ್ನು ೧೯೦೯ರಲ್ಲಿ ಮೈಸೂರು ಸಂಸ್ಥಾನದ ಪ್ರಧಾನ ಎಂಜನಿಯರ್ ಆಗಿ ನೇಮಿಸುವಲ್ಲಿ ಮಹಾರಾಜರು ವಿಫಲರಾಗಿದ್ದರು. ಮುಂದಿನ ಮೂರು ವರ್ಷಗಳ ಅವಧಿಯಲ್ಲಿ ಎಂ.ವಿ.ಯವರು ಕೃಷ್ಣರಾಜಸಾಗರ ಜಲಾಶಯ ಸೇರಿದಂತೆ ಅನೇಕ ಯೋಜನೆಗಳಿಗೆ ಚಾಲನೆ ನೀಡಿದರು. ಸಣ್ಣ ಕೆರೆಗಳ ಜೀರ್ಣೋದ್ಧಾರ, ರೈಲುಮಾರ್ಗಗಳ ಯೋಜನೆ ಗಳು, ತಾಂತ್ರಿಕ ಶಿಕ್ಷಣಕ್ಕೆ ಒತ್ತು, ಒಳ್ಳೆ ರಸ್ತೆ ನಿರ್ಮಾಣ ಮೊದಲಾದ ಕಾಮಗಾರಿಗಳಿಗೆ ಆದ್ಯತೆ ನೀಡಿದರು. ಅವರು ಬೇಗ ತಮ್ಮ ಪ್ರಾಮಾಣಿಕತೆ, ಜನಸೇವೆ, ಶಿಸ್ತು, ಕಾಯಕ ನಿಷ್ಠೆ ಇವುಗಳಿಂದ ಜನಪ್ರಿಯರಾದರು. ಆಗ ೧೯೧೨ರಲ್ಲಿ ಮಹಾರಾಜರು ಈ ತಜ್ಞ ಎಂಜಿನಿಯರನ್ನೇ ರಾಜ್ಯದ ದಿವಾನರಾಗಿ ನೇಮಕ ಮಾಡಿದರು. ಮುಂದೆ ಸರ್.ಎಂ.ವಿ. ಅವರ ಆರು ವರ್ಷಗಳಿಗೂ ಮಿಕ್ಕಿದ ಸೇವಾ ಅವಧಿಯಲ್ಲಿ ಐತಿಹಾಸಿಕ ಯೋಜನೆಗಳನ್ನು ಜಾರಿಗೆ ತಂದರು. ಶಿಕ್ಷಣ, ವ್ಯವಸಾಯ, ನೀರಾವರಿ, ಕೈಗಾರಿಕೆಗಳ ಸ್ಥಾಪನೆಯಲ್ಲಿ ಅಸಾಧಾರಣ ಯೋಜನೆಗಳು ಜಾರಿಗೆ ಬಂದವು. ಮಹಾರಾಜರು ಸದಾ ಸರ್.ಎಂ.ವಿ. ಅವರ ಕಾರ್ಯಯೋಜನೆಗಳಿಗೆ ಬೆಂಬಲ ಕೊಟ್ಟರು. ಭಾರತದಲ್ಲೇ ವಿಶೇಷವಾದ ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ ಅಸ್ತಿತ್ವಕ್ಕೆ ಬಂದಿತು. ಮೈಸೂರು ಸಂಸ್ಥಾನದಲ್ಲಿ ಸ್ಥಾಪಿಸಿದ ಮೈಸೂರು ವಿಶ್ವವಿದ್ಯಾನಿಲಯ

ಭಾರತೀಯ ಸಂಸ್ಥಾನಗಳಲ್ಲಿ ಸ್ಥಾಪಿಸಿದ ಪ್ರಥಮ ವಿಶ್ವವಿದ್ಯಾನಿಲಯ ವಾಯಿತು. ಇವತ್ತು ನಾವು ಮಹಾರಾಜರು ಮಾಡಿಸಿದರಾ, ದಿವಾನರು ಮಾಡಿದರಾ ಎಂಬ ಜಿಜ್ಞಾಸೆಯಲ್ಲಿದ್ದೇವೆ. ಇಲ್ಲಿ ಮಹಾರಾಜರು ಮತ್ತು ದಿವಾನರು ಏಕಾಭಿಪ್ರಾಯ ದಿಂದ, ಸದುದ್ದೇಶದಿಂದ ಒಂದಾಗಿ ಕೆಲಸ ಮಾಡಿದ್ದರಿಂದ ಇದು ಸಾಧ್ಯವಾಯಿತು. ಯಾವ ದಿವಾನರನ್ನಾದರೂ ನೇಮಿಸಿ ಈ ಕೆಲಸ ಮಾಡಿಸಬಹುದಿತ್ತು ಎಂಬ ಭಾವನೆ ಮಹಾರಾಜರಲ್ಲಿದ್ದಿದ್ದರೆ ಅವರು ಎಂಜಿನಿಯರ್ ಒಬ್ಬರನ್ನು ದಿವಾನರನ್ನಾಗಿ ನೇಮಿಸುವ ಅಗತ್ಯವಿರಲಿಲ್ಲ. ಗಾಂಧೀಜಿ ಸೇರಿದಂತೆ ಹಲವಾರು ರಾಷ್ಟ್ರೀಯ ನಾಯಕರು ಈ ಜೋಡಿ ಕಟ್ಟುತ್ತಿದ್ದ ರಾಜ್ಯವನ್ನು ನೋಡಿ ಇದು ಮಾದರಿ ಸಂಸ್ಥಾನವೆಂದು ಹೊಗಳಿದರು. ಸರ್.ಎಂ.ವಿ. ತಮ್ಮ ದಿವಾನ ಅವಧಿಯನ್ನು ಅಭಿವೃದ್ಧಿ ಕಾಲವಾಗಿ ಪರಿವರ್ತಿಸಿ ೧೯೧೮ರಲ್ಲಿ ತಮ್ಮ ಹುದ್ದೆಯಿಂದ ನಿರ್ಗಮಿಸಿದರು.

೧೯೧೮ರಿಂದ ೧೯೨೬ರವರೆಗೆ ಅನುಕ್ರಮವಾಗಿ ಎಂ.ಕಾಂತರಾಜ ಅರಸು ಮತ್ತು ಸರ್ ಆಲ್ಬಿಯನ್ ಬ್ಯಾನರ್ಜಿಯವರು ದಿವಾನರಾಗಿದ್ದರು. ಈ ಅವಧಿ ಮೈಸೂರು ಸಂಸ್ಥಾನದ ಆತಂಕದ ಅವಧಿಯಾಗಿತ್ತು. ಕಾರಣ ನೀರಾವರಿಗೆ ಮತ್ತು ಕೈಗಾರಿಕೆಗಳಿಗೆ ಹೂಡಿದ ಹಣ ಹೆಚ್ಚಾಗಿ, ಯೋಜನೆಗಳನ್ನು ಮುಂದುವರೆಸಲು ಕಷ್ಟವೆಂಬ ಕೂಗು ಕೇಳಿಬಂದಿತು. ಆಗ ಮಹಾರಾಜರ ಅಪೇಕ್ಷೆಯಂತೆ ಸರ್.ಎಂ.ವಿ. ಯವರು ಭದ್ರಾವತಿ ಕಾರ್ಖಾನೆಯ ಆಡಳಿತ ಮಂಡಳಿ ಅಧ್ಯಕ್ಷರಾಗಿ ಆರು ವರ್ಷಗಳ ಕಾಲ ಶ್ರಮಿಸಿ ಅದನ್ನು ಸರಿಯಾದ ಸ್ಥಿತಿಗೆ ತಂದರು. ಸರ್.ಮಿರ್ಜಾ ಇಸ್ಮಾಯಿಲ್‌ರ ಕಾಲದಲ್ಲಿ ಸರ್.ಎಂ.ವಿ. ಪ್ರಾರಂಭಿಸಿದ ಯೋಜನೆಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಗಮನ ಕೊಡಲಾಯಿತು. ಎಂ.ವಿ.ಬಗ್ಗೆ ವಿಶೇಷ ಗೌರವ ಇಟ್ಟುಕೊಂಡಿದ್ದ ಮಿರ್ಜಾ ಅವರು ಅವರ ಸಲಹೆಗಳನ್ನು ಪಡೆಯುತ್ತಿದ್ದರು. ಮಿರ್ಜಾ ಅವರು ಸ್ವಾತಂತ್ರ್ಯ ಚಳವಳಿ ತಾರಕಕ್ಕೇರಿದ ಕಾಲದಲ್ಲಿ ದಿವಾನರಾಗಿದ್ದವರು. ಅವರು ಬಹು ನಾಜೂಕಾಗಿ ಸಮಸ್ಯೆಗಳನ್ನು ಪರಿಹರಿಸುತ್ತಿದ್ದರು. ಮಹಾರಾಜರು ಸಾಕಷ್ಟು ನಿರಾಳವಾಗಿರಲು ದಿವಾನ್ ಮಿರ್ಜಾ ಬಹಳಷ್ಟು ಕಾರಣರಾಗಿದ್ದರು. ಸಂಸ್ಥಾನದಲ್ಲಿ ಹೆಚ್ಚು ಪ್ರಜಾಸತ್ತಾತ್ಮಕ ಕ್ರಮಗಳು ಜರುಗಿದವು. ವಿವಿಧ ಸಮಿತಿಗಳಿಗೆ, ಪ್ರಜಾಪ್ರತಿನಿಧಿ ಸಭೆಗೆ ಸದಸ್ಯರನ್ನು ಆಯ್ಕೆ ಮಾಡಲು ಸ್ತ್ರೀ ಪುರುಷರಿಗೆ ಮತದಾನದ ಹಕ್ಕು ಕೊಡಿಸುವಲ್ಲಿ ಮಹಾರಾಜರು ಮತ್ತು ದಿವಾನರ ಅಭಿಪ್ರಾಯಗಳು ಒಂದುಗೂಡಿದ್ದೇ ಕಾರಣ. ಮಿರ್ಜಾರವರು ನಾಲ್ವಡಿಯವರ ಆಳ್ವಿಕೆ ಕೊನೆಗೊಳ್ಳುವವರೆಗೂ ದಿವಾನರಾಗಿ ಉಳಿಯಲು ಮಹಾರಾಜರು ಅವರಲ್ಲಿಟ್ಟಿದ್ದ ವಿಶೇಷ ನಂಬಿಕೆಯೇ ಕಾರಣ. ೧೯೪೦ರಲ್ಲಿ ಮಹಾರಾಜರಾಗಿ ಪಟ್ಟಕ್ಕೆ ಬಂದ ಜಯಚಾಮರಾಜೇಂದ್ರ ಒಡೆಯರು ೧೯೪೭ರವರೆಗೂ ಅಧಿಕಾರದಲ್ಲಿದ್ದರು. ಆಗ ಅಂತಿಮ ಹಂತದಲ್ಲಿದ್ದ ಸ್ವಾತಂತ್ರ್ಯ ಹೋರಾಟವನ್ನು ಎದುರಿಸುವಲ್ಲಿಯೇ ದಿವಾನರಾಗಿದ್ದ ಎನ್.ಮಾಧವರಾವ್ ಮತ್ತು ರಾಮಸ್ವಾಮಿ ಮೊದಲಿಯಾರ್‌ರವರ ಕಾಲ ಕಳೆದು ಹೋಯಿತು.

ಮೈಸೂರು ಸಂಸ್ಥಾನದ ದಿವಾನರು ಕೇವಲ ಅಲಂಕಾರಕ್ಕಿದ್ದು ಪದವಿ ಅಲಂಕರಿಸಿದವರಲ್ಲ. ಅವರು ಸಂಸ್ಥಾನದ ಆಡಳಿತಾಂಗದ ಮುಖ್ಯರಾಗಿದ್ದು ಚರಿತ್ರಾರ್ಹ ಕಾರ್ಯಗಳನ್ನು ಮಾಡಿದವರು. ಮಹಾರಾಜರಿಗೆ ಮಾತ್ರ ಉತ್ತರದಾಯಿಯಾಗಿದ್ದ ಅವರು ಅಪಾರ ಅಧಿಕಾರ ಶಕ್ತಿಯಿಂದ ಸಂಸ್ಥಾನವನ್ನು ನಿರ್ವಹಿಸಿದವರು. ದಿವಾನರುಗಳ ಯಶಸ್ಸೇ ಮಹಾರಾಜರ ಆಳ್ವಿಕೆಯ ಸಾರ್ಥಕತೆಯ ಅಳತೆಗೋಲಾಗಿತ್ತೆಂಬುದು ಸತ್ಯವಾದ ಸಂಗತಿ. ಮಹಾರಾಜರು ಉತ್ತಮ ದಿವಾನರನ್ನು ಆರಿಸುತ್ತಿದ್ದುದೇ ತಮ್ಮ ರಾಜ್ಯಭಾರ ನಿರಾಳವಾಗಿ ಯಶಸ್ವಿಯಾಗಬೇಕೆಂಬ ದೃಷ್ಟಿಯಿಂದ. ಎರಡು ಕೈ ಕೂಡಿಸಿದರೆ ಚಪ್ಪಾಳೆ. ಸಂಸ್ಥಾನದ ಆಡಳಿತ ರಾಮರಾಜ್ಯ ಎನಿಸಿಕೊಳ್ಳುವಲ್ಲಿ ಒಬ್ಬರನ್ನು ಬಿಟ್ಟು ಇನ್ನೊಬ್ಬರಿಲ್ಲ. ಇದನ್ನು ಸಂಕುಚಿತ ದೃಷ್ಟಿಯಿಂದ ನೋಡುವುದು ಸರಿಯಲ್ಲ.

ಗೋಷ್ಠಿ - ೧

# ಕರ್ನಾಟಕ ಏಕೀಕರಣ

# ಪ್ರಾದೇಶಿಕ ಅಸಮಾನತೆ : ಸವಾಲು ಮತ್ತು ಪರಿಹಾರ

**ಡಾ. ಕೆ.ಎನ್.ಇಂಗಳಗಿ**

ವೈವಿಧ್ಯತೆ ನಿಸರ್ಗದ ನಿಯಮ, ಆದ್ದರಿಂದ ಸೃಷ್ಟಿಯಲ್ಲಿ ಸಮಾನತೆ ಕಾಣಲಾಗದು ಎಂಬುದು ಕೆಲವರ ವಾದ. ಆದರೆ ಅಸಮಾನತೆ ಸಮಗ್ರ ಅಭಿವೃದ್ಧಿಗೆ ಪೂರಕವಾಗಬೇಕೆ ವಿನಃ ಮಾರಕವಾಗಬಾರದು. ಇಲ್ಲಿ ಚರ್ಚಿಸಲ್ಪಡುವ ವಿಷಯ ಮಾನವನ ಸಮಗ್ರ ಒಳತಿಗೆ ಪೂರಕವಾದ ಅಸಮಾನತೆಯ ಸವಾಲುಗಳು ಹಾಗೂ ಪರಿಹಾರೋಪಾಯಗಳು, "ಸರ್ವಜನಾ ಸುಖಿನೋಭವಂತು" ಎಂಬುದು ಭಾರತ ಜಗತ್ತಿಗೆ ನೀಡಿದ ಅದ್ಭುತವಾದ ಕೊಡುಗೆ. ಆದ್ದರಿಂದಲೇ ಪ್ರಾಚೀನ ಭಾರತದಲ್ಲಿ ಧರ್ಮ, ಕಲೆ, ಸಾಹಿತ್ಯ, ಸಂಗೀತ, ವಿಜ್ಞಾನ, ವೈದ್ಯ ಪದ್ಧತಿ, ಧನುರ್ವೇದ ಮುಂತಾದವು ಪ್ರಬುದ್ಧವಾಗಿ ಬೆಳೆದವು. ಮಧ್ಯಕಾಲೀನ ಭಾರತ ಹಲವಾರು ವಿದೇಶಿ ದಾಳಿಗಳೊಳಗಾಗಿ ವಿವಿಧ ಸಂಸ್ಕೃತಿಗಳ ಕೊಡುಕೊಳ್ಳುವಿಕೆಯಿಂದ ಇನ್ನೂ ಶ್ರೀಮಂತವಾಯಿತು. ಈ ಶ್ರೀಮಂತಿಕೆಯೇ ಯುರೋಪಿನ ಶಕ್ತಿಗಳು ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಭಾರತಕ್ಕೆ ಬಂದು, ಅಸಮಾನತೆಯ ಬೀಜ ಬಿತ್ತಿ, ಹುಲುಸಾದ ಬೆಳೆ ಬೆಳೆದು ಓಡಿಹೋಗಬೇಕಾಯಿತು ಎಂಬುದು ಇತಿಹಾಸ. ಸ್ವಾತಂತ್ರ್ಯದ ನಂತರ ಸರ್ವರಿಗೂ ಸಮಪಾಲು ಎಂಬ ತತ್ವದ ಮೇಲೆ ಈ ಅಸಮಾನತೆಯ ಚರಮಗೀತೆಗೆ ನಾಂದಿ ಹಾಡಲಾಯಿತು. ಸಂವಿಧಾನದ ಮುನ್ನುಡಿ ಹಾಗೂ ನಿರ್ದೇಶಿತ ತತ್ವಗಳು ಪ್ರಾದೇಶಿಕ ಅಸಮಾನತೆಯನ್ನು ತೊಡೆದುಹಾಕಲು ಸೈದ್ಧಾಂತಿಕ ನೆಲೆಗಳನ್ನು ಒದಗಿಸಿಕೊಡುವುದರ ಜೊತೆಗೆ ಸರಕಾರದ ಹಣಕಾಸಿನ ಸಹಾಯವನ್ನು ಒದಗಿಸಿದವು.

ಪ್ರಾದೇಶಿಕ ಅಸಮಾನತೆ ಸವಾಲು ಹಾಗೂ ಪರಿಹಾರ ಎಂಬ ವಿಷಯ ಮಂಡನೆಯ ವ್ಯಾಪ್ತಿ ಕರ್ನಾಟಕಕ್ಕೆ ಸೀಮಿತವಾಗಿದ್ದು ಅಸಮಾನತೆಯ ನಿಯಂತ್ರಣಕ್ಕಾಗಿ ಕೈಗೊಂಡ ಕಾರ್ಯಕ್ರಮಗಳು, ಸಾಧನೆಗಳು ಹಾಗೂ ಮುಂದಿರುವ ಸವಾಲುಗಳು ಮತ್ತು ಪರಿಹಾರೋಪಾಯಗಳ ಅವಲೋಕನವೇ ಈ ಲೇಖನದ ಉದ್ದೇಶವಾಗಿದೆ.

ಆಧುನಿಕ ಕಾಲದಲ್ಲಿ ಪ್ರಾದೇಶಿಕ ಸಮಾನತೆಯ ಚಿಂತನೆಗಳು ಗಂಭೀರತೆಯನ್ನು ಪಡೆದವು. ಭಾರತದಲ್ಲಿ ಪ್ರಾದೇಶಿಕ ಅಸಮಾನತೆ ಕುರಿತಾಗಿ ವಿಲಿಯಂಸನ್ (೧೯೬೪), ಧರ್ ಮತ್ತು ಶಾಸ್ತ್ರಿ(೧೯೬೯), ರಾವ್ (೧೯೭೩), ರಾಜ್(೧೯೯೦), ಡೋಲಾಕಿಯಾ (೧೯೯೪), ಆಹ್ಲುವಾಲಿಯಾ(೨೦೦೦), ಕುರಿಯನ್(೨೦೦೦), ನಯ್ಯರ್ (೨೦೦೮), ಕಲಾ ಮತ್ತು ಸೊಡಸಿ, ವಿಬೂನ್ (೨೦೧೦) ಅಧ್ಯಯನ ಮಾಡಿ ವರದಿ ಸಲ್ಲಿಸಿದ್ದಾರೆ. ಪಂಚವಾರ್ಷಿಕ ಯೋಜನೆಗಳಲ್ಲಿ ಈ ವಿಷಯ ಮೊಳಕೆ ಯೊಡೆಯಿತು. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ (೧೯೫೬-೬೧) ಪ್ರಾದೇಶಿಕ ಅಸಮಾನತೆ ಸರಿಪಡಿಸಲು

ಸಮಗ್ರ ಹಾಗೂ ವಿಶಿಷ್ಟ ಯೋಜನೆಗಳನ್ನು ರೂಪಿಸಲಾಯಿತು. ಮುಂದೆ ಅನುಷ್ಠಾನಗೊಂಡ ಪಂಚವಾರ್ಷಿಕ ಯೋಜನೆಗಳು ಹಣಕಾಸಿನ ನೆರವು ನೀಡುವುದರೊಂದಿಗೆ ಅಸಮಾನತೆ ನಿಯಂತ್ರಿಸುವಲ್ಲಿ ಪ್ರಯತ್ನಿಸಿದವು. ಗಾಡ್ಗಳ್ ಸೂತ್ರದಂತೆ ಪ್ರಾದೇಶಿಕ ಅಸಮಾನತೆ ನಿಯಂತ್ರಿಸಲು ಜನಸಂಖ್ಯೆ ಹಾಗೂ ಆರ್ಥಿಕ ಹಿಂದುಳಿಕೆ ಮಾನದಂಡಗಳಾದವು.

ಭಾರತದ ಆರ್ಥಿಕ ಬೆಳವಣಿಗೆಯಲ್ಲಿ ಈ ಶತಮಾನದ ಮೊದಲನೇ ದಶಕ ಮಹತ್ವದ ಒಂದು ಮೈಲಿಗಲ್ಲು. ಜಾಗತಿಕ ವ್ಯಾಪಾರ ಸಂಸ್ಥೆಯೊಂದಿಗೆ ಭಾರತ ಸಹಿ ಹಾಕಿದ ಮೇಲೆ ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣದ ಚಿಂತನೆಗಳು ಹರಿದಾಡಿದವು. ಮಾರುಕಟ್ಟೆ ಆಧಾರಿತ ಈ ಚಿಂತನೆಗಳು ನಿಯಂತ್ರಿತ ಮಾರುಕಟ್ಟೆಯ ಬೇರುಗಳನ್ನು ಅಲ್ಲಾಡಿಸಿದವು. ವಿವಿಧ ರಂಗಗಳಲ್ಲಿ ಮುಕ್ತ ಮಾರುಕಟ್ಟೆ ಸ್ಥಿತಿ, ಸರಕಾರಿ ಸಂಸ್ಥೆಗಳಿಗೆ ಅನುದಾನದ ಕಡಿತ, ಗ್ರಾಹಕರ ಸಾರ್ವಭೌಮತೆ, ತಂತ್ರಜ್ಞಾನದ ಅಟಾಟೋಪ ಯೋಜನೆಯ ದಾರಿಯನ್ನೇ ಬದಲಾಯಿಸಿತು.

ಒಂಬತ್ತನೇ ಪಂಚವಾರ್ಷಿಕ ಯೋಜನೆ (೧೯೯೭-೨೦೦೨) ಖಾಸಗೀ ಬಂಡವಾಳ ಹೂಡಿಕೆಗೆ ಅವಕಾಶ ನೀಡಿತು. ಅದರಂತೆ ಹಿಂದುಳಿದ ಪ್ರದೇಶ | ರಂಗಗಳ ಹಿತಾಸಕ್ತಿಯನ್ನು ಕಾಪಾಡಿಕೊಳ್ಳುವಂತೆ ಯೋಜನೆ ರೂಪಿಸಿತು. ಹನ್ನೊಂದನೇ ಪಂಚವಾರ್ಷಿಕ (೨೦೦೭-೧೨) ಯೋಜನೆ ಸಮಗ್ರ ಅಭಿವೃದ್ಧಿಗೆ ರೂಪುರೇಷೆಗಳನ್ನು ಹಾಕಿತು. ಹನ್ನೆರಡನೇ ಪಂಚವಾರ್ಷಿಕ ಯೋಜನೆಯು (೨೦೧೨-೨೦೧೭) ತ್ವರಿತ ತಾಳಬಲ್ಲ ಹಾಗೂ ಸಮಗ್ರ ಅಭಿವೃದ್ಧಿಗೆ ಯೋಜನೆ ಗಳನ್ನು ರೂಪಿಸಿತು. ಇತ್ತೀಚೆಗೆ ಸೃಷ್ಟಿಯಾದ ನೀತಿ ಆಯೋಗವು “National Institute for Transforming In- dia” ಅಸಮಾನತೆಯ ನಿಯಂತ್ರಣದಲ್ಲಿ ಪ್ರಮುಖ ಯೋಜನೆಗಳನ್ನು ರೂಪಿಸುತ್ತಿದೆ.

ಕರ್ನಾಟಕದಲ್ಲಿಯೂ ಪ್ರಾದೇಶಿಕ ಅಸಮಾನತೆ ಬಗ್ಗೆ ಸಂಶೋಧನೆ ಹಾಗೂ ಅಧ್ಯಯನಗಳು ನಡೆದಿದೆ. ಆದರೆ ಹೇಳಿಕೊಳ್ಳುವ ಸಾಧನೆ ಡಾ. ನಂಜುಡಪ್ಪ ರವರ ಅಧ್ಯಕ್ಷತೆಯಲ್ಲಿ ರಚಿಸಿದ ಹೈಪವರ್ ಕಮಿಟಿ ಫಾರ್‌ದಿ ರಿಡ್ರೆಸ್ಸಲ್ ಆಫ್ ರಿಜನಲ್ ಇಂಬ್ಯಾಲನ್ಸ್ ೧೯೯೯ ರವರೆಗೆ ಅಗಲಿಲ್ಲ. ಪಂಚಮುಖಿ-೧೯೯೮, ವ್ಯಾಸುಲು ೧೯೯೫, ವಿದ್ವಾನ್ ೧೯೯೬, ಅಬುಲ್ ಅಜೀಜ್ ೨೦೦೧, ಹನಗೋಡಿಮಠ ೨೦೦೬, ವಿವೇಕಾನಂದ ೧೯೯೨, ಒಡೆಯ ಹೆಗ್ಗಡೆ ೨೦೦೦ ಎಂಬುವರು ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ಬಗ್ಗೆ ಸಂಶೋಧನೆ ಮಾಡಿದ್ದಾರೆ.

ಉತ್ತರ ಕರ್ನಾಟಕದ ಬಾಂಬೆ ಪ್ರೆಸಿಡೆನ್ಸಿ ಪ್ರದೇಶ, ಹೈದ್ರಾಬಾದ್ ನಿಜಾಮ್ ಆಡಳಿತ ಪ್ರದೇಶ ಕರ್ನಾಟಕದ ಹಿಂದುಳಿದ ಪ್ರದೇಶಗಳೆಂದು ಸರಕಾರ ಗುರುತಿಸಿ, ಹಿಂದುಳಿದ ಪ್ರದೇಶಗಳ ಅಭಿವೃದ್ಧಿಗಾಗಿ ಹೈದ್ರಾಬಾದ್ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಬಯಲುಸೀಮೆ ಅಭಿವೃದ್ಧಿ ಮಂಡಳಿ, ಗಡಿನಾಡು ಪ್ರದೇಶಾಭಿವೃದ್ಧಿ ಮಂಡಳಿ, ಮಲೆನಾಡು

ಪ್ರದೇಶ ಅಭಿವೃದ್ಧಿ ಮಂಡಳಿ, ಕರಾವಳಿ ಅಭಿವೃದ್ಧಿ ಪ್ರಾಧಿಕಾರ ಮುಂತಾದವುಗಳನ್ನು ರಚಿಸಿದೆ. ಅದರಂತೆ ಬುಡಕಟ್ಟು ಅಭಿವೃದ್ಧಿ, ಬಂಜಾರ ಅಭಿವೃದ್ಧಿ, ಕುರಿ ಹಾಗೂ ಉಣ್ಣೆ ಅಭಿವೃದ್ಧಿ, ತೆಂಗು ಅಡಿಕೆ ಅಭಿವೃದ್ಧಿ ಪ್ರಾಧಿಕಾರ ಮುಂತಾವುಗಳು ರಚನೆ ಆಗಿವೆ.

ಜನವರಿ ೨೦೧೩ ರಿಂದ ಜಾರಿಗೆ ಬರುವಂತೆ ಸಂವಿಧಾನದ ೩೭೧ನೇ ಕಲಂ ಪ್ರಕಾರ ಹೈದ್ರಾಬಾದ್ ಕರ್ನಾಟಕ ಪ್ರದೇಶವನ್ನು ಆರ್ಥಿಕವಾಗಿ ಹಿಂದುಳಿದ ಪ್ರದೇಶವೆಂದು ಘೋಷಿಸಲಾಗಿದೆ.

ಡಾ. ನಂಜುಡಪ್ಪ ಸಮಿತಿಯು ತಾಲೂಕು ಮಟ್ಟದಲ್ಲಿ ಅಭಿವೃದ್ಧಿಯನ್ನು ತಿಳಿಯಲು ಸುಮಾರು ೩೫ ವಿವಿಧ ಅಂಶಗಳನ್ನು ಪಟ್ಟಿಮಾಡಿಕೊಂಡಿತ್ತು. ಈ ಎಲ್ಲಾ ಅಂಶಗಳ ಮೇಲೆ ಕಾಂಪೋಸಿಟ್ ಡೆವಲಪ್‌ಮೆಂಟ್ ಇಂಡೆಕ್ಸ್ ಅನ್ನು ಸಿದ್ಧಪಡಿಸಿ ಅಧ್ಯಯನ ಮಾಡಿರುವುದಾಗಿ ಕಂಡುಬಂದಿದೆ. ವಿವರ ಈ ಕೆಳಗಿನಂತಿದೆ:

| ವಿಭಾಗ | ಅತಿ ಹಿಂದುಳಿದ | ಹೆಚ್ಚು ಹಿಂದುಳಿದ | ಹಿಂದುಳಿದ | ಒಟ್ಟು |
|---|---|---|---|---|
| ಗುಲ್ಬರ್ಗ | ೩೧ | ೦೫ | ೦೨ | ೨೮ |
| ಬೆಳಗಾವಿ | ೦೫ | ೧೨ | ೧೪ | ೩೧ |
| ಬೆಂಗಳೂರು | ೧೧ | ೧೩ | ೦೯ | ೩೩ |
| ಮೈಸೂರು | ೦೨ | ೧೦ | ೧೦ | ೨೨ |
| ಒಟ್ಟು | ೩೯ | ೪೦ | ೩೫ | ೧೧೪ |

ರಾಜ್ಯದ ವ್ಯಾಪ್ತಿಯಲ್ಲಿರುವ ೧೭೫ ತಾಲ್ಲೂಕುಗಳ ಪೈಕಿ ೧೧೪ ತಾಲ್ಲೂಕುಗಳು ಹಿಂದುಳಿದ ಪಟ್ಟಿಯಲ್ಲಿದ್ದವು. ೬೧ ತಾಲ್ಲೂಕುಗಳು ಅಭಿವೃದ್ಧಿ ಹೊಂದಿದ ತಾಲ್ಲೂಕುಗಳಾಗಿದ್ದವು. ಈ ಮೇಲಿನ ಅಂಶಗಳಿಂದ ತಿಳಿದುಬರುವುದೇನೆಂದರೆ ಉತ್ತರ ಕರ್ನಾಟಕ ಭಾಗದಲ್ಲಿ ೫೯ ಹಿಂದುಳಿದ ತಾಲ್ಲೂಕುಗಳಿದ್ದರೆ ದಕ್ಷಿಣ ಕರ್ನಾಟಕ ಭಾಗದಲ್ಲಿ ೫೫ ಹಿಂದುಳಿದ ತಾಲ್ಲೂಕುಗಳಿವೆ. ಕರ್ನಾಟಕದ ಎರಡೂ ಭಾಗಗಳಲ್ಲಿರುವ ಅಸಮಾನತೆಯನ್ನು ಹೋಗಲಾಡಿಸಲು ನಂಜುಂಡಪ್ಪ ಸಮಿತಿಯು ಎಂಟು ವರ್ಷಗಳ ವಿಶೇಷ ಯೋಜನೆಯೊಂದನ್ನು ತಯಾರಿಸಿತು. ಇದರ ಪ್ರಕಾರ ಸರ್ಕಾರ ಒಟ್ಟು ೩೦೦೦ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ ಸಮಗ್ರ ಅಭಿವೃದ್ಧಿಗೆ ಒತ್ತು ನೀಡಬೇಕು ಎಂದು ಹೇಳಿತು. ಯಾವ ಕ್ಷೇತ್ರದಲ್ಲಿ ಎಷ್ಟು ಬಂಡವಾಳ ಹೂಡಬೇಕು ಎಂಬ ನೀಲನಕ್ಷೆಯನ್ನು ತಯಾರಿಸಿತು.

**ಪ್ರಾದೇಶಿಕ ಅಸಮಾನತೆಯಿಂದ ಉದ್ಭವಿಸುವ ಸವಾಲುಗಳು:**

೧. ಪ್ರಾದೇಶಿಕ ಅಸಮಾನತೆಯಿಂದ ಆರ್ಥಿಕ ಚಟುವಟಿಕೆಗಳಲ್ಲಿ ಅಸಮಾನತೆ ಉಂಟಾಗುತ್ತದೆ. ಅಭಿವೃದ್ಧಿ ಹೊಂದಿದ ಪ್ರದೇಶವು ಹೆಚ್ಚು ಆರ್ಥಿಕ ಚಟುವಟಿಕೆಗಳಿಂದ ಕೂಡಿದ್ದು ಅಲ್ಲಿ ವಾಸಿಸುವವರ ತಲಾ ಆದಾಯವು



ಉನ್ನತವಾಗಿರುತ್ತದೆ. ಹಿಂದುಳಿದ ಪ್ರದೇಶದ ಜನರ ತಲಾ ಆದಾಯವು ಗಣನೀಯವಾಗಿ ಕಡಿಮೆ ಇರುತ್ತದೆ. ಇಲ್ಲಿ ಜನರ ಉತ್ಪಾದನೆ ಕಡಿಮೆ ಇರುತ್ತದೆ. ೨೦೧೬ ರಲ್ಲಿ ಕರ್ನಾಟಕದ ಜಿಲ್ಲಾವಾರು ಹಾಗೂ ತಲಾವಾರು ಆದಾಯಗಳಲ್ಲಿ ಬೆಂಗಳೂರು ನಗರ ಜಿಲ್ಲೆ ರೂ.೨೬೮೫೭.೭೧ ಕೋಟಿ ಜಿಡಿಪಿ ಹಾಗೂ ರೂ.೨೦೯೫೩೩ ವಾರ್ಷಿಕ ತಲಾ ಆದಾಯ ಹೊಂದಿದ್ದರೆ, ಕಲ್ಬುರ್ಗಿ ಜಿಲ್ಲೆಯು ರೂ.೧೭೯೧೫ ಕೋಟಿ ಜಿಡಿಪಿ ಹಾಗೂ ರೂ.೫೧೦೦೦ ವಾರ್ಷಿಕ ತಲಾ ಆದಾಯ ಹೊಂದಿದೆ. ರಾಜ್ಯದ ಸರಾಸರಿ ತಲಾ ಆದಾಯವು ರೂ.೯೮೮೧೨ ಇದ್ದರೆ, ಇದರ ಕೆಳಮಟ್ಟದಲ್ಲಿ ೨೬ ಜಿಲ್ಲೆಗಳಿವೆ. ಅಂದರೆ, ತಲಾ ಆದಾಯ ಬೆಂಗಳೂರು ನಗರ, ಗ್ರಾಮಾಂತರ, ಉಡುಪಿ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಅಧಿಕವಾಗಿದೆ. ಇದರಿಂದ ಬೆಂಗಳೂರಿನಲ್ಲಿ ಅಭಿವೃದ್ಧಿ ಅಧಿಕವಾಗಿದ್ದು ಬೇರೆಡೆ ಇದು ಕಡಿಮೆ ಇದೆ ಎಂದು ತೋರಿಸುತ್ತದೆ. (ಕೋಷ್ಟಕ ೧ ಅನ್ನು ನೋಡಿ)

೨. **ಕೃಷಿ ಮತ್ತು ಔದ್ಯಮಿಕ ಉತ್ಪಾದನೆಯಲ್ಲಿ ಅಸಮಾನತೆ :** ಪ್ರಾದೇಶಿಕ ಅಸಮಾನತೆಯಿಂದ ಉದ್ಯೋಗಗಳನ್ನು ಸೃಷ್ಟಿಸಬಲ್ಲ ಶಕ್ತಿಗಳಾದ ಕೃಷಿ ಹಾಗೂ ಉದ್ಯಮಗಳ ಉತ್ಪಾದನೆಯಲ್ಲಿ ತಾರತಮ್ಯತೆ ಕಂಡುಬರುತ್ತದೆ. ನೀರಾವರಿ, ತಂತ್ರಜ್ಞಾನ ಬಳಕೆ, ಆಧುನಿಕ ಕೃಷಿ ಹಾಗೂ ಉಪ ಕೃಷಿ ಉತ್ಪನ್ನಗಳು, ವಾಣಿಜ್ಯ ಬೆಳೆಗಳು, ಹಣ್ಣು ಹಾಗೂ ತರಕಾರಿ ಬೆಳೆಗಳು ಅಭಿವೃದ್ಧಿ ಹೊಂದಿದ ಪ್ರದೇಶದ ಪ್ರಮುಖ ಬೆಳೆಗಳು, ಹಿಂದುಳಿದ ಪ್ರದೇಶಗಳು ಮಳೆಯಾಶ್ರಿತ, ಸಾಂಪ್ರದಾಯಿಕ ಕೃಷಿ ಪದ್ಧತಿ, ಆಹಾರ ಧಾನ್ಯಗಳ ಬೆಳೆ ಹೆಚ್ಚು ಕಂಡು ಬರುತ್ತವೆ. ಅರೆಕಾಲಿಕ ನಿರುದ್ಯೋಗ ಸಮಸ್ಯೆ ಹಿಂದುಳಿದ ಪ್ರದೇಶಗಳಲ್ಲಿ ಕಂಡುಬರುತ್ತದೆ. ಉದ್ಯಮದ ಬೆಳವಣಿಗೆ ಅಭಿವೃದ್ಧಿಯ ಮಾನದಂಡ ಗಳಲ್ಲೊಂದು. ಒಂದು ಪ್ರದೇಶದಲ್ಲಿ ಸ್ಥಾಪಿತವಾದ ಉದ್ಯಮಗಳ ಸಂಖ್ಯೆ, ಅದು ನೀಡುತ್ತಿರುವ ಉದ್ಯೋಗ, ನೀಡುತ್ತಿರುವ ಕರ, ಬಳಕೆ ಮಾಡುತ್ತಿರುವ ವಿದ್ಯುತ್ ಮುಂತಾದವುಗಳ ಮೇಲೆ ಅಭಿವೃದ್ಧಿ ಸ್ಥಿತಿಗತಿ ಅವಲಂಬಿತ ವಾಗಿರುತ್ತದೆ. ಅಭಿವೃದ್ಧಿ ಹೊಂದಿದ ಪ್ರದೇಶಗಳು ಹೆಚ್ಚು ಕೈಗಾರಿಕೆಗಳನ್ನು, ಆಧುನಿಕ ತಂತ್ರಜ್ಞಾನವನ್ನು, ಬೇಡಿಕೆಗೆ ಅನುಗುಣವಾದ ಉತ್ಪಾದನೆಯನ್ನು, ಸಂಶೋಧನಾ ವಿವರಗಳನ್ನು ಹೊಂದಿರುತ್ತವೆ. ಮಾರುಕಟ್ಟೆ ಸ್ಥಿತಿಗತಿಯನ್ನು ಪರಿಗಣಿಸಿ ಉತ್ಪಾದನೆಯನ್ನು

ಮಾಡುತ್ತವೆ ಹಾಗೂ ಸದಾ ಚಟುವಟಿಕೆಯಿಂದ ಇರುತ್ತವೆ. ಹಿಂದುಳಿದ ಪ್ರದೇಶಗಳಲ್ಲಿ ಕರಕುಶಲತೆ ಹಾಗೂ ದೈಹಿಕ ಶ್ರಮ ಹೆಚ್ಚಿರುತ್ತದೆ. ಉತ್ಪಾದನಾ ವೆಚ್ಚದಲ್ಲಿ ಹೆಚ್ಚಳ ಇರುತ್ತದೆ. ಇದರಿಂದ ಬೆಲೆ ಹೆಚ್ಚಾಗಿ ಲಾಭ ಗಳಿಸುವಲ್ಲಿ ವಿಫಲವಾಗುತ್ತದೆ. ಬೇರೆ ಗತಿಯಿಲ್ಲದೆ ಉತ್ಪಾದನೆಯಲ್ಲಿ ತೊಡಗಿಸಿಕೊಂಡು ಜನರು ಜೀವನ ಸಾಗಿಸುತ್ತಾರೆ.

ಕರ್ನಾಟಕದಲ್ಲಿ ಸ್ಥಾಪಿತವಾದ ವಿವಿಧ ಕೈಗಾರಿಕೆಗಳ ಜಿಲ್ಲಾವಾರು ವಿವರವನ್ನು ಕೋಷ್ಟಕ ೨ ರಲ್ಲಿ ನೀಡಿದೆ.



೩. ಮೂಲಭೂತ ಸೌಕರ್ಯಗಳ ವಿಸ್ತರಣೆ: ಅಭಿವೃದ್ಧಿ ಹೊಂದಿದ ಪ್ರದೇಶಗಳಲ್ಲಿ ನಾಗರಿಕ ಮೂಲಭೂತ ಸೌಕರ್ಯಗಳ ವಿಸ್ತರಣೆ ಹೇರಳವಾಗಿರುತ್ತದೆ. ಶುದ್ಧ ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ, ಉತ್ತಮ ರಸ್ತೆಗಳು, ಸಂಪರ್ಕ ವ್ಯವಸ್ಥೆ, ಸಾರಿಗೆ ವ್ಯವಸ್ಥೆ, ಸಾರ್ವಜನಿಕ ವಿತರಣಾ ವ್ಯವಸ್ಥೆ, ಉತ್ತಮ ಗುಣಮಟ್ಟದ ಸೇವಾ ಸೌಲಭ್ಯಗಳು, ಉತ್ತಮ ದರ್ಜೆ ಹಾಗೂ ಎಲ್ಲ ಮಾದರಿಯ ಶಿಕ್ಷಣ ಸವಲತ್ತುಗಳು ಇರುತ್ತವೆ.

ಇದಕ್ಕೆ ವಿರುದ್ಧವಾಗಿ ಹಿಂದುಳಿದ ಪ್ರದೇಶಗಳಲ್ಲಿ ಮೇಲಿನ ನಾಗರಿಕ ಮೂಲಭೂತ ಸೌಕರ್ಯಗಳ ಕೊರತೆಯಿಂದ ರೋಗ ರುಜಿನಗಳು ಹೆಚ್ಚಾಗಿರುತ್ತವೆ. ಕಾರ್ಯದಕ್ಷತೆ ಕಡಿಮೆ ಇರುತ್ತದೆ. ಸಾರಿಗೆ ಸಂಪರ್ಕದ ಕೊರತೆಯೊಂದಿಗೆ ಕಾರ್ಯದಕ್ಷತೆ ಮತ್ತು ಉತ್ಪಾದಕತೆ ಕುಂಠಿತವಾಗುತ್ತದೆ.

೪. ಆರ್ಥಿಕವಾಗಿ ಅಭಿವೃದ್ಧಿ ಹೊಂದಿದ ಪ್ರದೇಶದಲ್ಲಿ ಜನಸಂಖ್ಯೆ ಬಡತನ ರೇಖೆಗಿಂತ ಮೇಲಿನ ಜೀವನಮಟ್ಟ ಹೊಂದಿರುತ್ತಾರೆ. ಆಹಾರ, ಬಟ್ಟೆ, ವಾಸಯೋಗ್ಯ ಮನೆಯನ್ನು ಹೊಂದಿರುತ್ತಾರೆ. ಹಿಂದುಳಿದ ಪ್ರದೇಶದಲ್ಲಿ ಎರಡು ಹೊತ್ತಿನ ಊಟಕ್ಕಾಗಿ ಜನ ಪರದಾಡುತ್ತಾರೆ. ವಾಸಯೋಗ್ಯ ಮನೆಯಾಗಲೀ ಮೈತುಂಬ ಬಟ್ಟೆಯಾಗಲೀ ಇರುವುದಿಲ್ಲ. ಇದರ ವಿವರವನ್ನು ಕೋಷ್ಠಕ - ೩ ರಲ್ಲಿ ನೀಡಿದೆ.

೫. ನಗರ ಪ್ರದೇಶಗಳಿಗೆ ವಲಸೆ ಹೋಗುವುದು ಪ್ರಾದೇಶಿಕ ಅಸಮಾನತೆಯ ಪ್ರಮುಖ ಸವಾಲು ಆಗಿರುತ್ತದೆ. ನಗರೀಕರಣವೆಂದರೆ ವಲಸೀಕರಣ ಎಂದು ತಿಳಿಯಲಾಗಿದೆ. ಸಾಮಾನ್ಯವಾಗಿ ಹಳ್ಳಿ ಪ್ರದೇಶಗಳಲ್ಲಿ ಹಾಗೂ ಹಿಂದುಳಿದ ಪ್ರದೇಶಗಳಲ್ಲಿ ನಿರುದ್ಯೋಗಿಗಳಾದವರು ನಗರ ಪ್ರದೇಶಗಳಿಗೆ ವಲಸೆ ಬರುತ್ತಾರೆ. ಇವರು ಮುಂಚಿತವಾಗಿ ಯಾವುದೇ ಮನೆ ಅಥವಾ ವಸತಿ ಜಾಗವನ್ನು ಯೋಚಿಸಿಕೊಂಡಿರುವುದಿಲ್ಲ. ಇದರಿಂದಾಗಿ ಪಾದಚಾರಿ ಮಾರ್ಗ ಅಥವಾ ಕಟ್ಟುವ ಸ್ಥಿತಿಯಲ್ಲಿರುವ ಕಟ್ಟಡಗಳು ಇವರ ವಾಸಸ್ಥಾನಗಳಾಗಿರುತ್ತವೆ. ಇವರಿಗೆ ಮೂಲಭೂತ ಸೌಕರ್ಯ ಒದಗಿಸುವುದು ಕಷ್ಟದ ಕೆಲಸವಾಗಿದೆ. ಪ್ರಾದೇಶಿಕ ಅಸಮಾನತೆಯ

ಸವಾಲು ಜನಗಳು ವಲಸೆ ಹೋಗುವುದು ಆಗಿದೆ. ಗ್ರಾಮೀಣ ಮತ್ತು ನಗರ ಜನಸಂಖ್ಯೆ ದಶಕವಾರು ಬದಲಾವಣೆ ಕೋಷ್ಟಕ ೩.

೬. ಉದ್ಯೋಗದ ನಮೂನೆ ಪ್ರಾದೇಶಿಕ ಅಸಮಾನತೆಯ ಸವಾಲುಗಳಲ್ಲೊಂದು. ಅಭಿವೃದ್ಧಿ ಹೊಂದಿದ ಪ್ರದೇಶಗಳಲ್ಲಿ ಉದ್ಯೋಗದ ದಿನಗಳು ವರ್ಷದಲ್ಲಿ ಗರಿಷ್ಠವಾಗಿರುತ್ತವೆ. ಹಿಂದುಳಿದ ಪ್ರದೇಶಗಳಲ್ಲಿ ದಿನಗಳು ಕನಿಷ್ಠವಾಗಿರುತ್ತವೆ. ಅಭಿವೃದ್ಧಿ ಹೊಂದಿದ ಪ್ರದೇಶದ ಕಾರ್ಮಿಕರಲ್ಲಿ ತಾಂತ್ರಿಕ ಕೌಶಲ್ಯ ಮತ್ತು ಪರಿಣಿತಿ ಉತ್ತಮವಾಗಿರುತ್ತದೆ, ಯಂತ್ರ ಹಾಗೂ ತಂತ್ರಜ್ಞಾನಗಳ ಬಳಕೆ ಕಾರ್ಮಿಕರಿಗೆ ತಿಳಿದಿರುತ್ತದೆ. ಈ ಕೊರತೆಯನ್ನು ಹಿಂದುಳಿದ ಪ್ರದೇಶದ ಕಾರ್ಮಿಕರು



ಹೊಂದಿರುವುದರಿಂದ ಹಿಂಜರಿಯುತ್ತಾರೆ. ಅಭಿವೃದ್ಧಿ ಹೊಂದಿದ ಪ್ರದೇಶದ ಕಾರ್ಮಿಕರು ವಿವಿಧ ಕೌಶಲ್ಯಗಳನ್ನು ಹೊಂದಿರುತ್ತಾರೆ. ಒಂದಿಲ್ಲೊಂದು ರಂಗದಲ್ಲಿ ಉದ್ಯೋಗ ಮಾಡುತ್ತಾರೆ. ಹಿಂದುಳಿದ ಪ್ರದೇಶದ ಜನರು ಕೇವಲ ಒಂದೇ ಕೌಶಲ್ಯ ಹೊಂದಿದ್ದು, ಅದಕ್ಕೆ ಬೇಡಿಕೆ ಇಲ್ಲದ ಸಂದರ್ಭದಲ್ಲಿ ನಿರುದ್ಯೋಗಿಗಳಾಗಿರುತ್ತಾರೆ.

೭. ಈ ಶತಮಾನದ ಆದಿಯಲ್ಲಿ ಪ್ರಾರಂಭವಾದ ಹೊಸ ಆರ್ಥಿಕ ನೀತಿಯು ಜಾಗತೀಕರಣ, ಉದಾರೀಕರಣ ಹಾಗೂ ಖಾಸಗೀಕರಣಕ್ಕೆ ಕಾರಣವಾಯಿತು. ಜಾಗತೀಕರಣದ ನೀತಿಯಿಂದ ವಿದೇಶಿ ಬಂಡವಾಳದ ಹೂಡಿಕೆಯ ಆಕರ್ಷಣೆಯಲ್ಲಿ ಕರ್ನಾಟಕ ರಾಜ್ಯವು ಮುಂಚೂಣಿಯಲ್ಲಿದೆ. ಕರ್ನಾಟಕ ಸರ್ಕಾರವು ೨೦೧೬ ರಲ್ಲಿ ೧.೨೭ ಲಕ್ಷ ಕೋಟಿ ಹೂಡಿಕೆಯ ೧೧೨ ಒಪ್ಪಂದಗಳಿಗೆ ಸಹಿ ಹಾಕಿದೆ. ಈ ವಿದೇಶಿ ಬಂಡವಾಳದ ಹರಿವು ಅಭಿವೃದ್ಧಿ ಹೊಂದಿದ ಪ್ರದೇಶಗಳಿಗೆ ಸೀಮಿತವಾಗಿದೆ. ಹಿಂದುಳಿದ ಪ್ರದೇಶಗಳಲ್ಲಿ ವಿದೇಶಿಗರು ಬಂಡವಾಳ ಹೂಡಲು ಹಿಂಜರಿಯುತ್ತಾರೆ. ಇದು ಪ್ರಾದೇಶಿಕ ಅಸಮಾನತೆಯ ಸವಾಲಾಗಿ ಪರಿಣಮಿಸುತ್ತದೆ.

೮. ಪ್ರಾದೇಶಿಕ ಅಸಮಾನತೆಯ ಸವಾಲುಗಳ ನಿರ್ವಹಣೆಯಲ್ಲಿ ತಂತ್ರಜ್ಞಾನ ಬಹಳ ಪ್ರಮುಖವಾದ ಪಾತ್ರ ವಹಿಸುತ್ತದೆ. ೨೧ನೇ ಶತಮಾನದ ಅದ್ಭುತ ಆವಿಷ್ಕಾರಗಳಲ್ಲಿ ಮಾಹಿತಿ ತಂತ್ರಜ್ಞಾನ ಹಾಗೂ ಕಂಪ್ಯೂಟರ್ ಬಳಕೆ ಒಂದು. ಕ್ಷಣ ಮಾತ್ರದಲ್ಲಿ ಎಲ್ಲ ವಿಷಯಗಳ ಮಾಹಿತಿಯನ್ನು ಬೆರಳತುದಿಯಲ್ಲಿ ಒದಗಿಸುವ ಈ ತಂತ್ರಜ್ಞಾನದ ಉಪಯೋಗ ಪ್ರಾದೇಶಿಕ ಅಸಮಾನತೆ ನಿರ್ವಹಣೆಗೆ ಅಗತ್ಯವಾಗಿ ಬೇಕಾಗುತ್ತದೆ. ಅಭಿವೃದ್ಧಿ ಹೊಂದಿದ ಪ್ರದೇಶಗಳಲ್ಲಿ ಅಂತರ್ಜಾಲ, ಮಾಹಿತಿ ತಂತ್ರಜ್ಞಾನ, ಇಲೆಕ್ಟ್ರಾನಿಕ್ಸ್ ಉಪಕರಣಗಳ ಬಳಕೆ

ಗರಿಷ್ಠವಾಗಿರುತ್ತದೆ. ಹಿಂದುಳಿದ ಪ್ರದೇಶಗಳಲ್ಲಿ ಇದರ ಬಳಕೆ ಕಡಿಮೆ ಹಾಗೂ ದಕ್ಷ ಸಂಪರ್ಕಜಾಲ ಇರುವುದಿಲ್ಲ. ಕಂಪ್ಯೂಟರ್ ಅಳವಡಿಸಿಕೊಳ್ಳದ ರಂಗವೇ ವಿನಾಶದ ಹಾದಿ ಹಿಡಿಯುವ ಸಂದರ್ಭ ಬಂದೊದಗಿದೆ.

೯. ಮಾನವ ಅಭಿವೃದ್ಧಿ ಸೂಚಂಕಗಳು ಪ್ರಾದೇಶಿಕ ಸಮಾನತೆ ನಿರ್ವಹಣೆಯಲ್ಲಿ ಪ್ರಮುಖವಾಗಿದೆ. ಮಾನವ ಜೀವಿತಾವಧಿಯ ಹೆಚ್ಚಳ, ಕನಿಷ್ಟ ಶಿಶು ಮರಣ ಪ್ರಮಾಣ, ಉತ್ತಮ ಲಿಂಗಾನುಪಾತ, ಉನ್ನತ ಶಿಕ್ಷಣ ಇವು ಅಭಿವೃದ್ಧಿ ಹೊಂದಿದ ಪ್ರದೇಶದ ಲಕ್ಷಣಗಳು. ಇದಕ್ಕೆ ವಿರುದ್ಧವಾದ ಫಲಿತಾಂಶಗಳು ಹಿಂದುಳಿದ ಪ್ರದೇಶದ ಲಕ್ಷಣಗಳು.

೧೦. ಕೌಶಲ್ಯಪೂರಿತ ಜನಸಂಖ್ಯೆ ಪ್ರಾದೇಶಕ ಅಸಮಾನತೆಯ ಸವಾಲು : ಅಭಿವೃದ್ಧಿ ಹೊಂದಿದ ಪ್ರದೇಶದಲ್ಲಿ ದುಡಿಯುವ ಜನಸಂಖ್ಯೆ ಉತ್ತಮ ಪರಿಣಿತಿ ಹೊಂದಿರುತ್ತದೆ. ಇದರಿಂದ ಉತ್ಪಾದನಾ ವೆಚ್ಚದಲ್ಲಿ ಗಣನೀಯ ಪ್ರಮಾಣದ ಇಳಿಕೆ ಆಗುತ್ತದೆ. ಈ ಕೊರತೆ ಹಿಂದುಳಿದ ಪ್ರದೇಶದಲ್ಲಿ ಎದ್ದು ಕಾಣುತ್ತದೆ.



ಇತ್ತೀಚಿನ ದಿನಗಳಲ್ಲಿ ೬೫ ಶೇಕಡಾ ಇಂಜಿನಿಯರಿಗ್ ಪದವಿ ಪಡೆದ ಅಭ್ಯರ್ಥಿಗಳಲ್ಲಿ ಪರಿಣಿತಿಯ ಕೊರತೆ ಕಂಡುಬಂದಿದೆ. ಇವರಲ್ಲಿ ಹೆಚ್ಚಾಗಿ ಹಿಂದುಳಿದ ಪ್ರದೇಶದವರೇ ಆಗಿರುವುದು ವಿಶೇಷವಾಗಿದೆ.

೧೧. ಪ್ರಾದೇಶಿಕ ಅಸಮಾನತೆಯಿಂದ ಉಗ್ರವಾದವು ಬೆಳೆಯಲು ಕಾರಣವಾಗುತ್ತದೆ ಇದು ಸಮಾಜದ ಸ್ವಾಸ್ಥ್ಯವನ್ನು ಹಾಳುಮಾಡುವುದರ ಜೊತೆಗೆ ಆಂತರಿಕ ಭದ್ರತೆಗೆ ಸವಾಲಾಗುತ್ತದೆ. ಹಿಂದುಳಿದ ಪ್ರದೇಶಗಳಲ್ಲಿ ನಕ್ಸಲ್ ಚಟುವಟಿಕೆಗಳು ಸಕ್ರಿಯವಾಗಿದ್ದು ಕಂಡುಬರುತ್ತದೆ. ಇದು ಪ್ರಾದೇಶಿಕ ಅಸಮಾನತೆಯಿಂದ ಉಂಟಾದ ಸವಾಲು ಎಂಬುದರಲ್ಲಿ ಎರಡು ಮಾತಿಲ್ಲ.

೧೨. ಪ್ರತ್ಯೇಕತಾವಾದದ ಕೂಗು ಪ್ರಾದೇಶಿಕ ಅಸಮಾನತೆಯಿಂದ ಉದ್ಭವವಾದ ಸವಾಲು. ತೆಲಂಗಾಣ, ಉತ್ತರಾಖಂಡ, ಜಾರ್ಖಂಡ ಈಗಾಗಲೇ ಈ ಹಿನ್ನೆಲೆಯಲ್ಲಿ ಪ್ರತ್ಯೇಕ ರಾಜ್ಯಗಳಾಗಿ ಬೇರ್ಪಟ್ಟಿವೆ. ಮಹಾರಾಷ್ಟ್ರದ ವಿದರ್ಭ, ಅಸ್ಸಾಂನ ಬೋಡೋಲ್ಯಾಂಡ್ ಪ್ರತ್ಯೇಕ ರಾಜ್ಯಕ್ಕಾಗಿ ಕೂಗೆಬ್ಬಿಸುತ್ತಿವೆ. ಕರ್ನಾಟಕದಲ್ಲಿ ಕೊಡಗು, ಹೈದ್ರಾಬಾದ್ ಕರ್ನಾಟಕ ಪ್ರದೇಶ, ಮುಂಬೈ ಕರ್ನಾಟಕ ಪ್ರದೇಶಗಳು ಪ್ರತ್ಯೇಕ ರಾಜ್ಯಕ್ಕಾಗಿ ಹೋರಾಟ ನಡೆಸುವ ಯೋಜನೆಗಳು ಕೇಳಿಬರುತ್ತವೆ. ಈ ಕೂಗು ಪ್ರಾದೇಶಿಕ ಅಸಮಾನತೆಯಿಂದ ಉದ್ಭವವಾಗಿದೆ ಎಂಬುದರಲ್ಲಿ ಎರಡು ಮಾತಿಲ್ಲ.

೧೩. ದೇಶದ ಯುವ ಜನತೆ ಉತ್ಪಾದನೆಯ ಪ್ರತೀಕ. ಇವರು ಭರವಸೆಯನ್ನು ಕಳೆದುಕೊಳ್ಳದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ಆಡಳಿತಗಾರ ರದ್ದಾಗಿರುತ್ತದೆ. ಯುವಕರ ಭರವಸೆ ಎಂಬುದು ಉಪ್ಪಿನ ರುಚಿ ಇದ್ದಂತೆ ಎಂದು ಮಹಾತ್ಮ ಗಾಂಧಿ ನಂಬಿದ್ದರು ಹಾಗೂ ಯುವಜನತೆಯನ್ನು ರಚನಾತ್ಮಕ ಕ್ರಿಯೆಗಳಲ್ಲಿ ತೊಡಗಿಸಬೇಕೆಂದು ಅವರ ಇಚ್ಛೆಯಾಗಿದ್ದಿತು. ಭರವಸೆ ಕಳೆದುಕೊಂಡ ಯುವಕರು ದೇಶಕ್ಕೆ ಮಾರಕವಾಗುತ್ತಾರೆ ಎಂಬುದು ಅನುಭವದ ಮಾತು. ಪ್ರಾದೇಶಿಕ ಸಮಾನತೆಯಿಂದ ಹಿಂದುಳಿದ ಪ್ರದೇಶದ ಯುವಕರಲ್ಲಿ ಅಶಾಂತಿ ಹುಟ್ಟಿಕೊಳ್ಳುತ್ತದೆ. ಹಿಂಸಾಚಾರ, ಅಶಾಂತಿ, ಸಮಾಜದ ಸ್ವಾಸ್ಥ್ಯ ಕದಡುವಿಕೆಯಂತಹ ಸಂದರ್ಭಗಳು ಪ್ರಾದೇಶಿಕ ಅಸಮಾನತೆಯಿಂದ ಉಂಟಾಗುತ್ತವೆ.

೧೪. ಅಭಿವೃದ್ಧಿಯಿಂದ ಪ್ರಾದೇಶಿಕ ಅಸಮಾನತೆಯ ಸವಾಲು: ಒಂದು ಪ್ರದೇಶ ಮೂಲಭೂತ ಸೌಕರ್ಯಗಳಿಂದ ಅಭಿವೃದ್ಧಿ ಹೊಂದಿದಾಗ ಅದೇ ಪ್ರದೇಶದಲ್ಲಿ ಬಂಡವಾಳ ಹೂಡಿಕೆ ಹೆಚ್ಚಾಗುತ್ತದೆ. ಇದರಿಂದ ಅಭಿವೃದ್ಧಿ ಅದೇ ಪ್ರದೇಶಕ್ಕೆ ಸೀಮಿತವಾಗಿ ಆ ಪ್ರದೇಶ ಇನ್ನಷ್ಟು ಅಭಿವೃದ್ಧಿ ಆಗುತ್ತದೆ. ಹಿಂದುಳಿದ ಪ್ರದೇಶ ಬಂಡವಾಳ ಆಕರ್ಷಣೆ ಮಾಡದೇ ಹಿಂದುಳಿದು ಪ್ರಾದೇಶಿಕ ಅಸಮಾನತೆಗೆ ಕಾರಣವಾಗುತ್ತದೆ. ಕರ್ನಾಟಕದಲ್ಲಿ ಬೆಂಗಳೂರು ಉತ್ತಮ ಉದಾಹರಣೆ. ಎಲ್ಲಾ ಉದ್ಯಮಗಳು, ಕಚೇರಿಗಳು, ಸೌಲಭ್ಯಗಳು ಬೆಂಗಳೂರಿನಲ್ಲಿ ಕೇಂದ್ರೀಕೃತವಾಗಿವೆ. ಹಿಂದುಳಿದ ಪ್ರದೇಶಗಳು ಹಿಂದುಳಿದೇ ಇವೆ.



**ಪ್ರಾದೇಶಿಕ ಅಸಮಾನತೆಯ ಪರಿಹಾರೋಪಾಯಗಳು:**

೧) ಹಿಂದುಳಿದ ಪ್ರದೇಶಗಳ ಗುರುತಿಸುವಿಕೆ ಪ್ರಮುಖ ಪರಿಹಾರೋಪಾಯ ವಾಗಿದೆ. ಈ ಪ್ರಕ್ರಿಯೆ ನಿರಂತರವಾಗಿರಬೇಕಾಗುತ್ತದೆ. ಪ್ರಥಮವಾಗಿ ಹಾಗೂ ಸೈದ್ಧಾಂತಿಕವಾಗಿ ಡಾ. ನಂಜುಂಡಪ್ಪ ವರದಿ ಈ ದಿಸೆಯಲ್ಲಿ ಉತ್ತಮ ಕಾರ್ಯ ಮಾಡಿದೆ. ೩೫ ಅಂಶಗಳ ಆಧಾರದ ಮೇಲೆ ಒಂದು ಪ್ರದೇಶದ ಹಿಂದುಳಿಯುವಿಕೆ ಬಗ್ಗೆ ವರದಿ ನೀಡಿದೆ. ಇದು ಭಾರತ ಸರಕಾರವು ಜಾಗತಿಕ ವ್ಯಾಪಾರ ಸಂಸ್ಥೆಗೆ ಸೇರಲು ಒಪ್ಪಂದ ಮಾಡಿಕೊಂಡು ಅದರ ಫಲಿತಾಂಶ ಬರುವ ಮೊದಲೇ ಮಾಡಿದ ಅಧ್ಯಯನವಾಗಿದೆ. ಜಾಗತಿಕ ವಾಣಿಜ್ಯ ಸಂಸ್ಥೆ ಯೊಂದಿಗೆ ಸೇರಿದ ಮೇಲೆ ವಿವಿಧ ಪ್ರದೇಶಗಳಲ್ಲಿ ಅನೇಕ ಬದಲಾವಣೆಗಳಾಗಿವೆ. ಆದ್ದರಿಂದ ಪ್ರತಿ ಹತ್ತು ವರ್ಷಗಳಿಗೊಮ್ಮೆ ಇಂತಹ ಅಧ್ಯಯನಗಳು ನಡೆದು ವರದಿ ನೀಡಬೇಕು. ಅದರ ಆಧಾರದ ಮೇಲೆ ಅಭಿವೃದ್ಧಿ ಯೋಜನೆಗಳನ್ನು ರೂಪಿಸಬೇಕು. ಅಂದರೆ ಮಾತ್ರ ಅಸಮಾನತೆ ನಿಯಂತ್ರಣದಲ್ಲಿ ಸರಿಯಾದ ಯೋಜನೆ ರೂಪಿಸಿದಂತಾಗುತ್ತದೆ.

೧) **ಮೂಲಭೂತ ಸೌಕರ್ಯಗಳ ವಿಸ್ತರಣೆ :** ಪ್ರಾದೇಶಿಕ ಅಸಮಾನತೆಯನ್ನು ಪರಿಹರಿಸುವಲ್ಲಿ ಪಾತ್ರವಹಿಸುತ್ತದೆ. ಕುಡಿಯುವ ನೀರು, ಒಳಚರಂಡಿ ವ್ಯವಸ್ಥೆ, ವಿದ್ಯುತ್, ಸರ್ವಋತು ರಸ್ತೆಗಳು, ರೇಲ್ವೆ, ವಿಮಾನ ನಿಲ್ದಾಣ, ಮಾರುಕಟ್ಟೆ ಮುಂತಾದವುಗಳು ನಾಗರಿಕ ಮೂಲಭೂತ ಸೌಕರ್ಯಗಳ ವ್ಯಾಪ್ತಿಗೆ ಬರುತ್ತವೆ. ಹಿಂದುಳಿದ ಪ್ರದೇಶದಲ್ಲಿ ವೃತ್ತಿಪರರ ಆದಾಯಕ್ಕೆ ಕೊರತೆ ಇರುವುದಿಲ್ಲ. ಆದರೆ ನಾಗರಿಕ ಸೌಲಭ್ಯಗಳು, ಮನರಂಜನೆ ಹಾಗೂ ಮಕ್ಕಳ ಭವಿಷ್ಯವನ್ನು ರೂಪಿಸುವ ಶಿಕ್ಷಣ ಸಂಸ್ಥೆಗಳನ್ನು ಬಯಸುತ್ತಾರೆ. ಯಾವ ಪ್ರದೇಶದಲ್ಲಿ ಮೂಲಭೂತ ಸೌಕರ್ಯ ಹೆಚ್ಚಾಗಿ ಒದಗಿಸಲ್ಪಡುವುದೋ ಆ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಸರಪಳಿ ಪರಿಣಾಮದಿಂದ ಉದ್ಯೋಗದ ಸೃಷ್ಟಿಯಾಗುತ್ತದೆ. ಜೀವನಮಟ್ಟ ಸುಧಾರಿಸುತ್ತದೆ. ಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುವ ಮೂಲಭೂತ ಸೌಕರ್ಯ ಹೆಚ್ಚಿಗೆ ಮಾಡುವುದರಲ್ಲಿ ಕೇಂದ್ರೀಕೃತವಾಗಬೇಕು. ಇದರಿಂದ ಪ್ರಾದೇಶಿಕ ಅಸಮಾನತೆ ಪರಿಹಾರ ವಾಗುತ್ತದೆ.

೨) ಪ್ರಾದೇಶಿಕ ಅಸಮಾನತೆಯನ್ನು ನೀಗಿಸಲು ಸರಕಾರದ ಆಶಯವಿರಬೇಕು. ರಾಜ್ಯಾಶ್ರಯವಿಲ್ಲದ ಯಾವುದೇ ಯೋಜನೆಗಳು ಬದುಕಲಾರವು ಎಂಬ ಮಾತೊಂದಿದೆ. ಅದರಂತೆಯೇ ಯೋಜನೆಗಳನ್ನು ಯಶಸ್ವಿಯಾಗಿ ಅನುಷ್ಠಾನ ಗೊಳಿಸಲು ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳು ಸಮನ್ವಯತೆ ಯಿಂದ ಕೆಲಸ ಮಾಡಬೇಕಾಗುತ್ತದೆ. ಶಾಸನ ಸಭೆ ಸದಸ್ಯರು ಹಾಗೂ ಚುನಾಯಿತ ಪ್ರತಿನಿಧಿಗಳು ಕಾರ್ಯಾನುಷ್ಠಾನದ ನೇತೃತ್ವ ವಹಿಸುತ್ತಾರೆ. ಇವರಲ್ಲಿ ತಮ್ಮ ಪ್ರದೇಶದ ಅಭಿವೃದ್ಧಿಯ ತುಡಿತದೊಂದಿಗೆ ಬದ್ಧತೆ ಇರಬೇಕಾಗುತ್ತದೆ. ಅಂದಾಗ



ಮಾತ್ರ ಸರಕಾರದ ನೌಕರರು ಧನಾತ್ಮಕವಾಗಿ ಸ್ಪಂದಿಸುತ್ತಾರೆ ಹಾಗೂ ಪ್ರದೇಶದ ಅಭಿವೃದ್ಧಿಗೆ ಕಾರಣರಾಗುತ್ತಾರೆ. ಮೂಲಭೂತ ಹಕ್ಕು ಹಾಗೂ ಕಲ್ಯಾಣ ರಾಜ್ಯದ ಕಾವಲುಗಾರರಾದ ನ್ಯಾಯಾಂಗವು ಶ್ರೀಸಾಮಾನ್ಯನ ಹಾಗೂ ಪ್ರದೇಶದ ಅಭಿವೃದ್ಧಿಗಾಗಿ ಕಠಿಣ ಕ್ರಮ ಕೈಗೊಳ್ಳುವುದರ ಜೊತೆಗೆ ಪ್ರಜಾ ಪ್ರತಿನಿಧಿಗಳಿಗೆ ಬೆಂಬಲವಾಗಿ ನಿಲ್ಲಬೇಕಾಗುತ್ತದೆ. ಹಲವಾರು ಬಾರಿ ನ್ಯಾಯದಾನದ ವಿಳಂಬದಿಂದ ಯೋಜನಾ ವೆಚ್ಚ ಹೆಚ್ಚಾದ ಉದಾಹರಣೆಗಳಿವೆ ಹಾಗೂ ಯೋಜನೆಯಗಳನ್ನೇ ಕೈಬಿಟ್ಟ ಉದಾಹರಣೆ ಗಳಿವೆ. ರಾಜಕೀಯ ಪ್ರೇರಣೆ, ನೌಕರರ ಬದ್ಧತೆ, ನ್ಯಾಯಾಂಗದ ಪ್ರೋತ್ಸಾಹದಿಂದ ಹಿಂದುಳಿದ ಪ್ರದೇಶದ ಅಭಿವೃದ್ಧಿ ತ್ವರಿತವಾಗಿ ಆಗುತ್ತದೆ.

೪)	ಪ್ರದೇಶದ ಹಿಂದುಳಿಯುವಿಕೆಗೆ ಬಂಡವಾಳ ಹೂಡಿಕೆಯ ಕೊರತೆಯೂ ಕಾರಣವಾಗುತ್ತದೆ. ನೈಸರ್ಗಿಕ ಸಂಪತ್ತು ಹಾಗೂ ದುಡಿಯುವ ಕೈಗಳಿದ್ದಾಗ್ಯೂ ಬಂಡವಾಳ ಕೊರತೆಯಿಂದ ಸಂಪನ್ಮೂಲಗಳು ನಿರುಪಯುಕ್ತವಾಗುತ್ತವೆ. ಕಾರಣ ಸರಕಾರ ಹಾಗೂ ಖಾಸಗಿ ಕಂಪನಿಗಳು ಹಿಂದುಳಿದ ಪ್ರದೇಶಗಳಲ್ಲಿ ಬಂಡವಾಳ ಹೂಡಲು ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಇದರಿಂದಾಗಿ ನಿರುಪಯುಕ್ತ ಸಂಪನ್ಮೂಲಗಳ ಬಳಕೆಯಾಗಿ ಆ ಪ್ರದೇಶವು ಅಭಿವೃದ್ಧಿ ಹೊಂದುತ್ತದೆ ಹಾಗೂ ಜೀವನಮಟ್ಟ ಸುಧಾರಿಸುತ್ತದೆ.

೫)	**ಆರ್ಥಿಕ ಹಾಗೂ ವಾಣಿಜ್ಯ ನೀತಿಯ ಘೋಷಣೆ:** ಪ್ರಾದೇಶಿಕ ಅಸಮಾನತೆ ಯನ್ನು ನಿಯಂತ್ರಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಪ್ರಾದೇಶಿಕ ಅಸಮಾನತೆ ಕೇವಲ ಕರ್ನಾಟಕದ ಸಮಸ್ಯೆಯಲ್ಲ. ಅದು ಜಾಗತಿಕ ಸಮಸ್ಯೆ. ಇಂತಹ ದೊಂದು ಸಮಸ್ಯೆ ಯೂರೋಪಿನ ರಾಷ್ಟ್ರವಾದ ಆಸ್ಟ್ರಿಯಾದಲ್ಲಿಯೂ ಉದ್ಭವಿಸಿತ್ತು. ಇದರ ಪರಿಹಾರಕ್ಕಾಗಿ ವಾಣಿಜ್ಯ ವ್ಯವಹಾರಗಳ ಪ್ರಸಿದ್ಧ ಚಿಂತಕರಾದ ಫಿಲಿಪ್ ವಿಲ್‌ಹೆಲ್ಡ್ ವೊನ್ ಹಾರ್ನಿಕ್ (೧೬೩೮ -೧೭೧೨) ತಮ್ಮ ಕೃತಿ "ಆಸ್ಟ್ರಿಯಾ ಅಬೋವ್ ಆಲ್ ಇಫ್ ಶಿ ವಿಲ್" (Austria above all if she will (೧೬೮೪) ಎಂಬ ಕೃತಿಯಲ್ಲಿ ಯಾವುದೇ ಪ್ರದೇಶದ ಅಭಿವೃದ್ಧಿಗೆ ಒಂಬತ್ತು ಸೂತ್ರಗಳನ್ನು ಹೇಳಿದ್ದಾರೆ. ಈ ಸೂತ್ರದ ಹಿನ್ನೆಲೆ ಅವಲೋಕಿಸಿದಾಗ ಜರ್ಮನಿಯು ಎಲ್ಲಾ ರೀತಿಯ ಸಾಮ್ಯತೆ ಹೊಂದಿದ್ದರೂ ಆಸ್ಟಿಯಾದಷ್ಟು ಹಿಂದುಳಿದಿರಲಿಲ್ಲ. ಅದಕ್ಕಾಗಿ ಸೂತ್ರಗಳನ್ನು ಪ್ರತಿಪಾದಿಸಿದರು.

* ನೈಸರ್ಗಿಕ ಸಂಪನ್ಮೂಲಗಳ ಗರಿಷ್ಠ ಬಳಕೆ
* ಕಚ್ಚಾ ವಸ್ತುಗಳನ್ನು ಉಪಯೋಗಿ ವಸ್ತುಗಳನ್ನಾಗಿ ಮಾರಾಟ ಮಾಡುವುದು
* ಜನತೆಯ ಕೌಶಲ್ಯಾಭಿವೃದ್ಧಿ
* ವ್ಯಾಪಾರ ವಾಣಿಜ್ಯಕ್ಕಾಗಿ ಅಮೂಲ್ಯ ಲೋಹಗಳ ಬಳಕೆ

* ಐಷಾರಾಮಿ ವಸ್ತುಗಳ ಆಮದು ನಿಯಂತ್ರಣ ಕನಿಷ್ಠ ಆಮದು ವಸ್ತುಗಳು

* ಕಚ್ಚಾ ವಸ್ತುಗಳಿಗಷ್ಟೇ ಆಮದನ್ನು ನಿಗದಿಪಡಿಸುವುದು * ರಸ್ತೆಗಳಿಗೆ ಉತ್ತೇಜನ

* ರಾಜ್ಯದಲ್ಲಿನ ಉತ್ಪನ್ನಗಳಿಗೆ ಸ್ಪರ್ಧಿಸುವ ವಸ್ತುಗಳ ನಿಷೇಧ

ಸರಕಾರವು ವಾಣಿಜ್ಯ ನೀತಿಯನ್ನು ಆರ್ಥಿಕ ಸುಧಾರಣಾ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಸ್ಪಷ್ಟವಾಗಿ ಘೋಷಿಸಬೇಕಾಗಿದೆ. ಇಂದು ಚೈನಾದ ವಸ್ತುಗಳು ಪ್ರಮುಖವಾಗಿ, ಕುಂಕುಮ, ಅರಿಷಿಣ, ಎಲೆಕ್ಟ್ರಿಕ್ ವಸ್ತುಗಳು, ಟೇಲರಿಂಗ್ ವಸ್ತುಗಳು, ಬೊಂಬೆಗಳು, ವಿವಿಧ ಬಿಡಿಭಾಗಗಳು, ಬಟ್ಟೆಗಳು ಭಾರತದ ಮಾರುಕಟ್ಟೆಗೆ ಸ್ಪರ್ಧೆ ನೀಡುತ್ತಿವೆ. ಸಾರಿಗೆ ವೆಚ್ಚವನ್ನು ಭರಿಸಿಯೂ ಸ್ಪರ್ಧೆ ನೀಡುತ್ತಿರುವ ಚೀನಾದ ವಸ್ತುಗಳ ಉತ್ಪಾದನಾ ಪದ್ಧತಿಯನ್ನು ಅಧ್ಯಯನ ಮಾಡಬೇಕಾಗಿದೆ ಹಾಗೂ ಅಳವಡಿಸಿಕೊಳ್ಳಬೇಕಾಗಿದೆ. ಸ್ಪಷ್ಟ ವಾಣಿಜ್ಯ ಮತ್ತು ವ್ಯಾಪಾರ ನೀತಿಯ ಘೋಷಣೆ ಅವಶ್ಯಕವಾಗಿದೆ. ಇದು ಮಾತ್ರ ಅಸಮಾನತೆ ಸಮಸ್ಯೆಗೆ ಪರಿಹಾರ ಒದಗಿಸಬಲ್ಲದು.

೬) ನಗರಾಭಿವೃದ್ಧಿ ಅಸಮಾನತೆಯ ನಿಯಂತ್ರಣಕ್ಕೆ ಸಮರ್ಪಕ ಪರಿಹಾರೋಪಾಯ ವಾಗಿದೆ. ನಗರಾಭಿವೃದ್ಧಿ ಇಂದು ನಗರಕ್ಕೆ ಹಿಂದುಳಿದ ಪ್ರದೇಶಗಳಿಂದ ವಲಸೆ ಬರುವುದಾಗಿದೆ. ಇದು ನಗರ ಪ್ರದೇಶದ ಮೇಲೆ ಮೂಲಭೂತ ಸೌಕರ್ಯ ಪೂರೈಕೆಗಳಲ್ಲಿ ವ್ಯತ್ಯಯಕ್ಕೆ ಕಾರಣವಾಗಿದೆ. ನಗರಾಭಿವೃದ್ಧಿಯ ವ್ಯಾಖ್ಯಾನ ಹಾಗೂ ನೀತಿ ಬದಲಾಗಬೇಕಾಗಿದೆ. ಹಿಂದುಳಿದ ಪ್ರದೇಶಗಳಿಗೆ ಮೂಲಭೂತ ಸೌಕರ್ಯ, ಉದ್ಯಮಗಳ ಸ್ಥಾಪನೆಗೆ ಬಂಡವಾಳ ಒದಗಣೆ ಹಾಗೂ ಕರ ರಿಯಾಯಿತಿಗಳ ಘೋಷಣೆ, ಸೇವಾ ವಲಯದ ವಿಸ್ತರಣೆ, ವೈದ್ಯಕೀಯ ಸವಲತ್ತುಗಳು, ಶೈಕ್ಷಣಿಕ ಸೌಲಭ್ಯಗಳು, ಸರ್ವಋತು ರಸ್ತೆಗಳು, ರೇಲ್ವೆ ವಲಯದ ವಿಸ್ತರಣೆ, ವೈಮಾನಿಕ ಸಂಪರ್ಕ ಹಾಗೂ ಮನರಂಜನಾ ಸ್ಥಳಗಳ ಅಭಿವೃದ್ಧಿ ಜೊತೆ ಜೊತೆಯಲ್ಲಿಯೇ ಆಗಬೇಕಿರುತ್ತದೆ. ಇದರಿಂದಾಗಿ ಕೌಶಲ್ಯ ಹೊಂದಿದ ಕಾರ್ಮಿಕರೂ ಪರಿಣಿತ ಸಿಬ್ಬಂದಿಗಳೂ ಇಂತಹ ಪ್ರದೇಶಗಳಿಗೆ ಬಂದು ಉತ್ಪಾದನೆ ಹೆಚ್ಚಲು ಸಹಾಯಕವಾಗುತ್ತಾರೆ ಹಾಗೂ ಪ್ರದೇಶದ ಅಭಿವೃದ್ಧಿಗೆ ಕಾರಣರಾಗುತ್ತಾರೆ.

೭) ಸಮರ್ಪಕ ಸಾರಿಗೆ ಹಾಗೂ ಸಂಪರ್ಕ ವ್ಯವಸ್ಥೆಯಿಂದ ಅಸಮಾನತೆಯನ್ನು ನಿಯಂತ್ರಣಕ್ಕೆ ತರಲು ಸಾಧ್ಯವಾಗುತ್ತದೆ. ಇಂದಿನ ಹಳ್ಳಿಗಳು ವಯಸ್ಸಾದವರ ವಾಸಸ್ಥಾನವಾಗಿವೆ. ಉತ್ಪಾದನೆ ಮಾಡುವ ಜನರು ನಗರಕ್ಕೆ ವಲಸೆ ಬಂದು ಕೃಷಿ ಭೂಮಿಗಳು ಪಾಳು ಬೀಳುತ್ತವೆ. ರಸ್ತೆ ಸಾರಿಗೆ ವ್ಯವಸ್ಥೆ ಮೂಲಭೂತ ಸೌಕರ್ಯವಾಗಬೇಕು ಹಾಗೂ ಸೇವಾ ವಲಯವಾಗಬೇಕು. ಇದರಿಂದ

ಕಾರ್ಮಿಕರು ನಗರ ಪ್ರದೇಶಗಳಲ್ಲಿ ಕೆಲಸ ಮುಗಿಸಿ ಸಮೀಪದ ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಬರುವ ಅವಕಾಶ ಕಲ್ಪಿಸಬೇಕು. ಮುಂಬೈ, ಪುಣೆಯಿಂದ ಜನರು ಪ್ರತಿದಿನ ಕೆಲಸಕ್ಕಾಗಿ ಪ್ರಯಾಣಿಸುತ್ತಾರೆ. ಹಾಗೆಯೇ ಕರ್ನಾಟಕದ ಹಲವು ಭಾಗಗಳಿಗೆ ಸಮರ್ಪಕ ರಸ್ತೆ ಸಾರಿಗೆ, ರೈಲ್ವೆ, ಜಲಸಾರಿಗೆ ಹಾಗೂ ವಾಯು ಸಾರಿಗೆಗಳ ವ್ಯವಸ್ಥೆ ಆಗಬೇಕಿದೆ.

ಸಂಪರ್ಕ ಸೇವೆಯಿಂದ ಈಗ ಮನೆಯಲ್ಲಿಯೇ ಕುಳಿತು ಕೆಲಸ ಮಾಡುವ ಅವಕಾಶಗಳಿವೆ. ಉತ್ತಮ ಅಂತರ್ಜಾಲ ಹಾಗೂ ವೈಫೈ ವ್ಯವಸ್ಥೆಗಳು ಮನೆಯಿಂದಲೇ ಕಾರ್ಯನಿರ್ವಹಿಸಲು ಸಹಕಾರಿ ಆಗಿವೆ. ಇದರಿಂದಾಗಿ ಕಾರ್ಮಿಕರು ಅನಾವಶ್ಯಕವಾಗಿ ಪ್ರಯಾಣ ಮಾಡುವ ಬದಲು ಮನೆಯಲ್ಲಿಯೇ ಕುಳಿತು ಕೆಲಸ ಮಾಡಬಹುದು.

೮) ಸರ್ವ ಚಟುವಟಿಕೆಗಳಲ್ಲಿ ಕಂಪ್ಯೂಟರ್‌ನ ಬಳಕೆ ಆಗುತ್ತಿದೆ. ಕಂಪ್ಯೂಟರ್ ಬಳಕೆ ಮಾಡದ ಕ್ಷೇತ್ರ ಬೇಗನೆ ನಾಶವಾಗುತ್ತದೆ. ಆದ್ದರಿಂದಲೇ ಇಂದಿನ ಜ್ಯೋತಿಷಿಗಳೂ ಕಂಪ್ಯೂಟರ್ ಬಳಕೆ ಮಾಡಿಕೊಳ್ಳುತ್ತಿದ್ದಾರೆ. ಕಂಪ್ಯೂಟರ್ ನಿಂದ ಅಂತರ್ಜಾಲದ ಮುಖಾಂತರ ಕೃಷಿ, ಉದ್ಯಮ ಸೇವಾರಂಗ ಉತ್ಪಾದಕತೆಯನ್ನು ಹೆಚ್ಚಿಸಬಹುದು. ಹಿಂದುಳಿದ ಪ್ರದೇಶದ ಹಾಗೂ ದುರ್ಬಲ ವರ್ಗಗಳಿಗೆ ವಿಸ್ತರಿಸಿದ ಸೌಲಭ್ಯಗಳನ್ನು ಪರಿಪೂರ್ಣವಾಗಿ ಬಳಕೆ ಮಾಡಿ ಕೊಳ್ಳಲು ಕಂಪ್ಯೂಟರ್ ಬಳಕೆ ಸಹಾಯವಾಗುತ್ತದೆ. ಅಂತರ್ಜಾಲದಲ್ಲಿ ದೊರೆಯುವ ಮಾಹಿತಿ ಹಾಗೂ ಅದರ ಬಳಕೆ ಸಮಗ್ರ ಅಭಿವೃದ್ಧಿಗೆ ಕಾರಣವಾಗುತ್ತದೆ.

೯) ಶೈಕ್ಷಣಿಕ ಮತ್ತು ಉತ್ಪಾದನಾ ರಂಗಗಳಲ್ಲಿ ಸಮನ್ವಯತೆಯ ಕೊರತೆಯೂ ಪ್ರಾದೇಶಿಕ ಅಸಮಾನತೆಗೆ ಕಾರಣವಾಗಿದೆ. ಶಿಕ್ಷಣ ಸಂಸ್ಥೆಗಳು ಹಾಗೂ ವಿಶ್ವವಿದ್ಯಾಲಯಗಳು ನಿರುದ್ಯೋಗಿಗಳನ್ನು ಉತ್ಪತ್ತಿ ಮಾಡುತ್ತಿವೆ. ಹೀಗೆ ಉತ್ಪತ್ತಿ ಆಗುವ ಹೆಚ್ಚು ಅಭ್ಯರ್ಥಿಗಳಲ್ಲಿ ತಾವು ಪಡೆದ ಶಿಕ್ಷಣದ ಮಾಹಿತಿ ಹಾಗೂ ಕೌಶಲ್ಯ ಕೊರತೆಯಿಂದ ಬಳಲುತ್ತಿದ್ದಾರೆ. ಹಲವಾರು ಬಾರಿ ತಾವು ಪಡೆದ ಶಿಕ್ಷಣ ಬಿಟ್ಟು ಬೇರೆ ವೃತ್ತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ ಅಥವಾ ನಿರುದ್ಯೋಗಿ ಗಳಾಗಿದ್ದಾರೆ. ಇದರಿಂದಾಗಿ ಅಸಮಾನತೆ ಹೆಚ್ಚುತ್ತಿದೆ. ಎಲ್ಲಾ ಶಿಕ್ಷಣ ಕ್ಷೇತ್ರದಲ್ಲಿಯೂ Internship ತರಬೇತಿಗಳನ್ನು ಅವಶ್ಯವಾಗಿ ಪಠ್ಯಕ್ರಮದ ಭಾಗವನ್ನಾಗಿ ಮಾಡಬೇಕಾಗಿದೆ. ಇದರಿಂದ ಸಂಪತ್ತು ತರುವ ವಿದ್ಯೆಯನ್ನು ಪಡೆದ ಜನರು ಸಂಪತ್ತನ್ನು ಸೃಷ್ಟಿಸಬಲ್ಲರು ಹಾಗೂ ಅಸಮಾನತೆಯನ್ನು ನಿಯಂತ್ರಿಸಬಲ್ಲರು.

೧೦) ಯಾವುದೇ ಅಭಿವೃದ್ಧಿಪರ ಯೋಜನೆಗಳನ್ನು ಕೈಗೊಂಡಾಗ ಧರ್ಮಗುರುಗಳು, ಪರಿಸರವಾದಿಗಳು, ಚಿಂತಕರು ಹಾಗೂ ಸಮಾಜ ಸೇವಕರೆನಿಸಿಕೊಂಡವರು ವಿರೋಧಿಸುವುದು ಸಹಜವಾಗಿದೆ. ಈ ವಿರೋಧ ಕೇವಲ ವಿರೋಧಕ್ಕಾಗಿ ಯೇನೋ ಎಂದು ಕಂಡುಬರುತ್ತದೆ. ಹೀಗೆ ವಿರೋಧಿಸುವವರಿಗೆ ಸಂಪೂರ್ಣ

ತಿಳುವಳಿಕೆ ಹೊಂದಬೇಕು. ಇದಕ್ಕಾಗಿ ಮುಕ್ತ ಚರ್ಚೆಗಳನ್ನು ಏರ್ಪಡಿಸಿ ಸದರಿ ಯೋಜನೆಯ ಪಾಲುದಾರರನ್ನು ಆಹ್ವಾನಿಸಬೇಕು. ಚರ್ಚೆಯಲ್ಲಿ ಅವರ ಅಭಿಪ್ರಾಯ ಮನ್ನಿಸಿ ಉತ್ತರ ನೀಡಬೇಕು ಇಲ್ಲವೇ ಬದಲಾಯಿಸಿಕೊಳ್ಳಬೇಕು. ಹಲವಾರು ಉದ್ಯಮಗಳು ಕರ್ನಾಟಕದಿಂದ ಬಿಟ್ಟು ಹೋಗಲು ಇಂತಹ ಬಾಲಿಶ ವಿರೋಧಗಳು ಕಾರಣವಾಗಿವೆ. ಇಂತಹ ವಿರೋಧಗಳನ್ನು ಸೈದ್ಧಾಂತಿಕವಾಗಿ ತೊಡೆದುಹಾಕುವ ಕಾರ್ಯಗಳಾಗಬೇಕು ಅಂದಾಗ ಹಿಂದುಳಿದ ಪ್ರದೇಶಗಳಲ್ಲಿ ಅಭಿವೃದ್ಧಿ ಕಂಡು ಅಸಮಾನತೆ ನಿಯಂತ್ರಣವಾಗುತ್ತದೆ.

**ಅಸಮಾನತೆ ನಿಯಂತ್ರಣದಲ್ಲಿ ಸರ್ಕಾರಗಳ ಪಾತ್ರ :**

ಸ್ವಾತಂತ್ರ್ಯದ ನಂತರ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜನತೆಯ ಹಿತಾಸಕ್ತಿಗಳನ್ನು ಗಮನದಲ್ಲಿಟ್ಟುಕೊಂಡು ಹಲವಾರು ಯೋಜನೆಗಳನ್ನು ರೂಪಿಸಿವೆ. ಭಾರತ ಸರ್ಕಾರದ ಹಲವಾರು ಯೋಜನೆಗಳು ರಾಜ್ಯದಲ್ಲಿ ಅನುಷ್ಠಾನಗೊಂಡಿವೆ. ಐಐಟಿಯಂತಹ ವಿದ್ಯಾಸಂಸ್ಥೆಗಳನ್ನು, ವೈದ್ಯಕೀಯ ಸಂಸ್ಥೆಗಳನ್ನು ಭಾರತ ಸರ್ಕಾರ ಸ್ಥಾಪಿಸಿದೆ. ಕರ್ನಾಟಕ ಸರ್ಕಾರವು ರೂಪಿಸುವ ಅಭಿವೃದ್ಧಿ ಯೋಜನೆಗಳಿಗೆ ತಾಂತ್ರಿಕ, ಹಣಕಾಸಿನ ನೆರವನ್ನು ಕೇಂದ್ರ ಸರ್ಕಾರ ಒದಗಿಸಿದೆ.

ಕರ್ನಾಟಕ ಸರ್ಕಾರವು ಸಮಗ್ರ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವಲ್ಲಿ ಮುಂಚೂಣಿಯಲ್ಲಿದೆ. ಆದ್ದರಿಂದಲೇ ಕರ್ನಾಟಕವು ಭಾರತದ ಮುಂದುವರಿದ ರಾಜ್ಯಗಳಲ್ಲೊಂದಾಗಿದೆ.

ಕರ್ನಾಟಕ ಸರಕಾರದ ಹಲವಾರು ಇಲಾಖೆಗಳು ನೇರವಾಗಿ ಅಭಿವೃದ್ಧಿ ಪೂರೈಸುವಲ್ಲಿ ಹಾಗೂ ಅಸಮಾನತೆ ನಿವಾರಿಸುವಲ್ಲಿ ಕಾರ್ಯ ನಿರ್ವಹಿಸುತ್ತಿವೆ. ವಾರ್ಷಿಕ ಹಾಗೂ ಪಂಚವಾರ್ಷಿಕ ಯೋಜನೆಗಳನ್ನು ರೂಪಿಸಿ ಕಾರ್ಯಾನುಷ್ಠಾನ ಗೊಳಿಸುತ್ತವೆ. ಕೆಲವು ಸಂದರ್ಭಗಳಲ್ಲಿ ನಿಗಮ ಮಂಡಳಿಗಳನ್ನು ಸ್ಥಾಪಿಸಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿದೆ. ಜನಸಾಮಾನ್ಯರ ಕಲ್ಯಾಣಕ್ಕಾಗಿ ಸ್ಥಾಪಿತವಾದ ಸರ್ಕಾರದ ನಿಗಮ ಹಾಗೂ ಮಂಡಳಿಗಳು ರಾಜ್ಯದ ಆರ್ಥಿಕಾಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ೩೧ನೇ ಮಾರ್ಚ್ ೨೦೧೬ ರಲ್ಲಿದ್ದಂತೆ ಕರ್ನಾಟಕದಲ್ಲಿ ಒಟ್ಟು ೯೩ ನಿಗಮ/ ಮಂಡಳಿಗಳಿವೆ. ಪ್ರಸ್ತುತ ವರ್ಷದಲ್ಲಿ, ಕರ್ನಾಟಕ ಪೇಪರ್ ಮಿಲ್ಸ್ ನಿಯಮಿತ ಭಾರತದ ಶೇರು ಮಾರುಕಟ್ಟೆಯನ್ನು ಪ್ರವೇಶಿಸಿತು. ಪ್ರಸ್ತುತ ವರ್ಷದಲ್ಲಿ ಕರ್ನಾಟಕ ಪ್ರವಾಸೋದ್ಯಮ ಮೂಲಭೂತ ಸೌಕರ್ಯ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲಾಯಿತು. ಕರ್ನಾಟಕ ಸೌರಶಕ್ತಿ ಅಭಿವೃದ್ಧಿ ನಿಗಮ (ಪ್ರೈ)ನಿಯಮಿತ ಇದನ್ನು ಕೇಂದ್ರ ಮಂಡಳಿಗಳಲ್ಲಿ ವಿಲೀನಗೊಳಿಸಲಾಯಿತು.

**೩೧ನೇ ಮಾರ್ಚ್ ೨೦೧೬ ರಲ್ಲಿದ್ದಂತೆ ಸರ್ಕಾರದ ಅಂಗ ಸಂಸ್ಥೆಗಳು**

ಸಾರ್ವಜನಿಕ ಉದ್ಯಮಗಳ ಸ್ವರೂಪ ಚಾಲನೆಯಲ್ಲಿರುವವು

ಚಾಲನೆಯಲ್ಲಿ ಇಲ್ಲದ ಒಟ್ಟು

| | | | |
|---|---|---|---|
| ಸಾರ್ವಜನಿಕ ಉದ್ಯಮಗಳು | ೭೫ | ೧೨ | ೮೭ |
| ಶಾಸನಬದ್ಧ ಉದ್ಯಮಗಳು | ೬ | ೦ | ೬ |
| ಒಟ್ಟು | ೮೧ | ೧೨ | ೯೩ |

ಪ್ರಸ್ತುತ ವರ್ಷದಲ್ಲಿ ಇವು ರೂ.೫೬೭೮೭೦೦ ಕೋಟಿ ರೂಪಾಯಿಗಳ ವಹಿವಾಟು ನಡೆಸಿ ರಾಜ್ಯದ ನಿವ್ವಳ ಉತ್ಪನ್ನಕ್ಕೆ ಶೇಕಡಾ ೭.೩೧ ಕೊಡುಗೆ ನೀಡಿವೆ. ಈ ಎಲ್ಲಾ ನಿಗಮಗಳು ಸೇರಿ ವರ್ಷದಲ್ಲಿ ೧೪೪.೭೧ ಕೋಟಿ ರೂಪಾಯಿಗಳ ನಷ್ಟ ಅನುಭವಿಸಿವೆ. ಒಟ್ಟು ೧.೯೩ ಲಕ್ಷ ಜನರಿಗೆ ಉದ್ಯೋಗ ಕಲ್ಪಿಸಿವೆ.

**ವಲಯವಾರು ಬಂಡವಾಳ ಹೂಡಿಕೆ :**

**೨೦೧೭ನೇ ವರ್ಷದ ಕರ್ನಾಟಕ ಸರ್ಕಾರದ ಉದ್ಯಮಗಳ ಲೆಕ್ಕಪರಿಶೋಧನಾ ವರದಿ:**

ಕರ್ನಾಟಕ ಸರ್ಕಾರದ ಕಾರ್ಯನಿರ್ವಹಿಸುತ್ತಿರುವ ೮೧ ಸಾರ್ವಜನಿಕ ಉದ್ಯಮಗಳಲ್ಲಿ ೫೧ ಉದ್ಯಮಗಳು ರೂ.೧೪೨೫.೫೦ ಕೋಟಿ ಲಾಭ ಮಾಡಿವೆ. ೨೧ ಉದ್ಯಮಗಳು ೧೫೭೦.೨೧ ನಷ್ಟ ಅನುಭವಿಸಿವೆ. ಎರಡು ಕಂಪನಿಗಳ ಲಾಭ ನಷ್ಟ ತೀರ್ಮಾನವಾಗಿಲ್ಲ, ಏಕೆಂದರೆ ಇನ್ನೂ ವರ್ಷ ಮುಗಿದಿಲ್ಲ. ಎರಡು ಕಂಪನಿಗಳು ಆಯವ್ಯಯ ಪಟ್ಟಿ ಮಾಡಿಲ್ಲ. ಒಂದು ಕಂಪನಿ ಶೂನ್ಯ ಲಾಭ ಗುರುತಿಸಿದೆ.

| ಕ್ರ.ಸಂ. | ವಲಯ | ಸರ್ಕಾರದ ಉದ್ಯಮಗಳು | ಶಾಸನಬದ್ಧ ಉದ್ಯಮಗಳು | ಚಾಲ್ತಿಯಲ್ಲಿರುವ ಉದ್ಯಮಗಳು | ಒಟ್ಟು | ಬಂಡವಾಳ ಹೂಡಿಕೆ ರೂ. ಕೋಟಿಗಳಲ್ಲಿ |
|---|---|---|---|---|---|---|
| ೧. | ಕೃಷಿ ಹಾಗೂ ಸಹಾಯಕ ವಲಯ | ೧೨ | ೧ | ೫ | ೧೮ | ೪೪೫.೫೯ |
| ೨ | ಹಣಕಾಸು | ೧೪ | ೧ | ೦ | ೧೫ | ೪೬೭೯.೮೮ |
| | ಮೂಲಭೂತ ಸೌಕರ್ಯ ಅಭಿವೃದ್ಧಿ | ೧೨ | ೦ | ೦ | ೧೨ | ೪೬೫೩೨.೨೯ |
| ೪ | ಔದ್ಯಮಿಕ ಉತ್ಪಾದನೆ | ೧೯ | ೦ | ೭ | ೨೬ | ೧೧೦೬೩೮ |
| ೫ | ವಿದ್ಯುತ್ | ೧೧ | ೦ | ೦ | ೧೧ | ೪೭೮೨೨.೭೦ |
| ೬ | ಸೇವೆ | ೪ | ೪ | ೦ | ೮ | ೧೯೮೬.೬೭ |
| ೭ | ಇತರೆ | ೩ | ೦ | ೦ | ೩ | ೦.೧೧ |
| | ಒಟ್ಟು | ೭೫ | ೬ | ೧೨ | ೯೩ | ೯೨೫೭೩.೬೨ |

ಸ್ವಾತಂತ್ರ್ಯಾನಂತರ ಸಮಗ್ರ ಅಭಿವೃದ್ಧಿಗೆ ಸರಕಾರವು ಸ್ಪಂದಿಸಿದುದು ಅಧ್ಯಯನ, ಸಂಶೋಧನಾ ವರದಿ ಹಾಗೂ ಯೋಜನೆ ರೂಪುರೇಷೆಯಿಂದ ಕಂಡುಬರುತ್ತದೆ. ಆರ್ಥಿಕಾಭಿವೃದ್ಧಿ ಎಲ್ಲಾ ಅಭಿವೃದ್ಧಿಗಳ ತಾಯಿ ಎಂದರೆ ತಪ್ಪಾಗಲಾರದು. ಡಾ. ನಂಜುಂಡಪ್ಪ ವರದಿ ಅಸಮಾನತೆಯ ನಿಯಂತ್ರಣದಲ್ಲಿ ಒಂದು ಮೈಲಿಗಲ್ಲು. ಕೇಂದ್ರ ಸರ್ಕಾರದ

ಬದಲಾದ ಆರ್ಥಿಕ ನೀತಿಯ ಫಲಿತಾಂಶಗಳಾದ ಖಾಸಗೀಕರಣ, ಉದಾರೀಕರಣ ಹಾಗೂ ಜಾಗತೀಕರಣಗಳು ರಾಜ್ಯದಲ್ಲಿ ತ್ವರಿತ ಅಭಿವೃದ್ಧಿಗೆ ಕಾರಣವಾದರೂ ಈ ಅಭಿವೃದ್ಧಿ ಬೆಂಗಳೂರಿಗೆ ಸೀಮಿತವಾಯಿತು. ಸರ್ಕಾರಗಳು ನೀರಾವರಿ, ಕೃಷಿ, ಕೌಶಲ್ಯಾಭಿವೃದ್ಧಿ, ಮೂಲಭೂತ ಸೌಕರ್ಯಗಳಲ್ಲಿ ಬಂಡವಾಳ ಹೂಡಿ ಹಲವಾರು ಪ್ರದೇಶಗಳ ಜೀವನಮಟ್ಟ ಸುಧಾರಿಸಿವೆ ಹಾಗೂ ಅಸಮಾನತೆಯನ್ನು ನಿಯಂತ್ರಣದಲ್ಲಿಟ್ಟಿವೆ. ಅಸಮಾನತೆ ದಕ್ಷಿಣ ಹಾಗೂ ಉತ್ತರ ಕರ್ನಾಟಕದ ತಾಲ್ಲೂಕುಗಳಲ್ಲಿ ಸಮನಾಗಿದೆ. ಈ ಬಗ್ಗೆ ಪ್ರತಿ ದಶಕಕ್ಕೆ ಒಮ್ಮೆ ಅಧ್ಯಯನ ವರದಿಗಳಾಗಿ ಅಭಿವೃದ್ಧಿ ರೂಪುರೇಷೆ ಆಗಬೇಕು. ಮಾಹಿತಿ ತಂತ್ರಜ್ಞಾನದ ಬಳಕೆ, ಮೂಲಭೂತ ಸೌಕರ್ಯದ ಮುಖಾಂತರ ನಗರ ಪ್ರದೇಶಕ್ಕೆ ವಲಸೆ ಬರುವುದನ್ನು ನಿಯಂತ್ರಿಸಬೇಕು. ಅದರಂತೆ ಹಳ್ಳಿಗಳ ಉತ್ಪಾದಕತೆಯನ್ನು ಹೆಚ್ಚಿಸಬೇಕು.

ಹಸಿವು ಮುಕ್ತ ರಾಜ್ಯವಾಗಬೇಕೆಂದು ಎಲ್ಲರ ಆಶಯವಾಗಬೇಕು. ಆದರೆ ಸೋಮಾರಿಗಳ ರಾಜ್ಯವಾಗಬಾರದು. ಕಲ್ಯಾಣ ರಾಜ್ಯದ ಬದಲಾಗಿ ಕಾರ್ಯರಾಜ್ಯ ವಾಗಬೇಕು. ಎಲ್ಲರೂ ದುಡಿದು ಉಣ್ಣುವಂತಾಗಬೇಕು. ಅಂದಾಗ ರಾಜ್ಯ ಆದರ್ಶ ರಾಜ್ಯವಾಗುತ್ತದೆ. ಇತರರಿಗೆ ಮಾದರಿ ಆಗುತ್ತದೆ. ಸಮಗ್ರ ಅಭಿವೃದ್ಧಿಯ ಯೋಜನೆ ರೂಪಿಸಿದ ಸಾಹಿತ್ಯಾಸಕ್ತರ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಈ ಗೋಷ್ಠಿ ಆಯೋಜಿಸಿರುವುದು ಅವರ ಸಮಗ್ರ ಅಭಿವೃದ್ಧಿಯ ಚಿಂತನೆಯನ್ನು ಪ್ರದರ್ಶಿಸುತ್ತದೆ.

**ಗ್ರಂಥ ಋಣ**


೧. ರೀಜನಲ್ ಇಂಬ್ಯಾಲನ್ಸ್ ಇನ್ ಇಂಡಿಯಾ ಆ್ಯನ್ ಓವರ್ ವ್ಯೂ ಡಾ.ಬಿ.ಎಸ್.ವಿಜಯಕುಮಾರ್-ಕಾಕತಿಯಾ ವಿಶ್ವವಿದ್ಯಾಲಯ-ವಾರಂಗಲ್.

೨. ರೀಜನಲ್ ಡಿಸ್ಪಾರಿಟೀಸ್ ಇನ್ ಕರ್ನಾಟಕ ಎ ಡಿಸ್ಟಿಕ್ಸ್ ಲೆವೆಲ್ ಅನಾಲಿಸಿಸ್ ಆಫ್ ಗೋಡ್ ಅಂಡ್ ಡೆವಲಪ್‌ಮೆಂಟ್-ಸಿದ್ಧಲಿಂಗಸ್ವಾಮಿ ಹನಗೋಡಿ ಮಠ ಮತ್ತು ರಾಘವೇಂದ್ರ ವೈ.ಕೆ.

೩. ಮ್ಯಾನೇಜ್‌ಮೆಂಟ್ ಆಫ್ ಪ್ರಾವರ್ಟಿ ಅಂಟಿಪೇಷನ್ ಪ್ರೋಗ್ರಾಂ ಇನ್ ಕರ್ನಾಟಕ ಎಕಾನಾಮಿಕ್ ಅಂಡ್ ಪೊಲಿಟಿಕಲ್ ವ್ಯೂ-ಅಕ್ಟೋಬರ್ ೧೪೨೧ ವ್ಯಾಸಲು ವಿನೋದ್

೪. ಕರ್ನಾಟಕ ಸರ್ಕಾರದ ಹೈ ಪವರ್ ಕಮಿಟಿ ಫಾರ್ ರೆಡೆಸ್ಸಿಲ್ ಆಫ್ ರೀಜನಲ್ ಇಂಬ್ಯಾಲೆನ್ಸ್ ವರದಿ ಡಿ.ಎಂ.ನಂಜುಂಡಪ್ಪ.

೫. ಕರ್ನಾಟಕ ಸರ್ಕಾರದ ಪ್ರಕಾಶನಗಳು - ಕರ್ನಾಟಕ ಆಟ್ ಗ್ಲಾನ್ಸ್, ಸ್ಟಟಿಸ್ಟಿಕಲ್ ಅಬ್‌ಸ್ಟ್ರಕ್ಸ್ ಆಫ್ ಕರ್ನಾಟಕ, ಆಡಳಿತ ವರದಿ.

೬. ಕರ್ನಾಟಕ ಮಹಾಲೇಖಪಾಲರ ಲೆಕ್ಕಪರಿಶೋಧನಾ ವರದಿ ೨೦೧೭.

೭.	ಹಿಸ್ಟರಿ ಆಫ್ ಎಕಾನಾಮಿಕ್ ಥಾಟ್ ಎಚ್.ಎಲ್ ಭಾಟಿಯಾ,

## ಏಕೀಕರಣಕ್ಕೆ ಬದ್ಧತೆ ಬೇಕು (ಪ್ರತಿಕ್ರಿಯೆ)

**- ಸ.ರಾ, ಸುಳಕೂಡ**

ಸ್ವಾತಂತ್ರ್ಯ ಪೂರ್ವದಲ್ಲಿ ವಿವಿಧ ಆಡಳಿತದೊಳಗೆ ಹರಿದಂಚಿ ಹೋಗಿದ್ದ ಕನ್ನಡಮಯ ಪ್ರದೇಶಗಳನ್ನು ಒಗ್ಗೂಡಿಸಿ, ೧೯೫೬ರಲ್ಲಿ ಕೇಂದ್ರ ಸರಕಾರವು ಮೈಸೂರು ರಾಜ್ಯವನ್ನಾಗಿಸಿ ಅಸ್ತಿತ್ವಕ್ಕೆ ತಂದಿತು. ಕನ್ನಡಿಗರ ಒತ್ತಾಸೆಯಂತೆ ಇಂದು ಕರ್ನಾಟಕ ರಾಜ್ಯವೆಂದು ಮರುನಾಮಕರಣವಾಗಿದೆ. ಕನ್ನಡಮಯ ಪ್ರದೇಶಗಳನ್ನು ಒಗ್ಗೂಡಿಸುವ ಕಾರ್ಯದಲ್ಲಿ ಧಾರ್ಮಿಕ, ಸಾಮಾಜಿಕ, ಔದ್ಯೋಗಿಕ, ರಾಜಕೀಯ, ಸಾಹಿತ್ಯ-ಸಾಂಸ್ಕೃತಿಕ ಮುಖಂಡರು ಇಂದಿಗೂ ಹೋರಾಡುತ್ತಲೇ ಇದ್ದಾರೆ. ಆದರೂ ಕರ್ನಾಟಕ ಏಕೀಕರಣಕ್ಕೆ ಒಳಗಿನಿಂದಲೂ ಮತ್ತು ಹೊರಗಿನಿಂದಲೂ ಅಪಸ್ವರಗಳಿವೆ. ಅಭಿವೃದ್ಧಿ ಮತ್ತು ಅವಕಾಶ ವಂಚಿತರೆಂಬ ಕೂಗಿನೊಂದಿಗೂ ಏಕೀಕರಣಕ್ಕೆ ಎಲ್ಲಿಲ್ಲದ ಕಂಟಕವು ಸೃಷ್ಟಿಯಾಗಿದೆ. ಇನ್ನೂ ಕರ್ನಾಟಕದೊಳಗಿದ್ದುಕೊಂಡು ಎಲ್ಲ ಸವಲತ್ತು, ಸೌಲಭ್ಯ ಪಡೆದುಕೊಂಡು ವಾಸಿಸುತ್ತಿರುವ ಅನ್ಯ ಭಾಷಿಸಿಕರು ನೆರೆ ರಾಜ್ಯಗಳ ಪರವಾಗಿ ಗದ್ದಲ ಹಾಕುತ್ತಲೇ ಇದ್ದಾರೆ. ಬೆಳಗಾವಿಯು ಕರ್ನಾಟಕದ ಅವಿಭಾಜ್ಯ ಅಂಗವೆಂದು ಕಾನೂನುರೀತ್ಯ ನಿಶ್ಚಿತಗೊಂಡಿದ್ದರೂ, ಇಂದಿಗೂ ರಾಜ್ಯೋತ್ಸವದ ದಿನ ಮರಾಠಿಗರು ಕರಾಳ ದಿನ ಆಚರಿಸುತ್ತಲೇ ಬಂದಿದ್ದಾರೆ ಮತ್ತು ಎಂಇಎಸ್ ಪಕ್ಷದ ಶಾಸಕರು ನಮ್ಮ ಶಾಸನಸಭೆಯಲ್ಲಿ ದಾಂಧಲೆ ಹಾಕುತ್ತಲೇ ಇದ್ದಾರೆ.

ಕರ್ನಾಟಕ ರಾಜ್ಯ ಅಸ್ತಿತ್ವಕ್ಕೆ ಬಂದಾಗ ಅಪ್ಪಟ ಕನ್ನಡ ಪ್ರದೇಶಗಳು ಬೇರೆ ರಾಜ್ಯಗಳಿಗೆ ಸೇರಿದ್ದು, ಅಲ್ಲಿ ಕನ್ನಡ, ಕನ್ನಡಿಗರಿಗೆ ಕಿರುಕುಳ ತಪ್ಪಿಲ್ಲ. ಅಂದರೆ ಕರ್ನಾಟಕ ಏಕೀಕರಣದ ಕನಸು ಇನ್ನೂ ಪೂರ್ತಿಯಾಗಿಲ್ಲ, ಸಂತೃಪ್ತಿಯನ್ನು ತಂದಿಲ್ಲ. ಈ ಹಿನ್ನೆಲೆಯೊಳಗೆ ನಾವು ಸಾಧಿಸಿದ್ದೇನು? ಸಾಧಿಸಬೇಕಿರುವುದೇನು? ಕನ್ನಡ ನಾಡಿನಲ್ಲಿ ಉತ್ತರ-ದಕ್ಷಿಣ ಎಂಬ ಕೂಗು ಎದ್ದಿರುವುದೇತಕೆ? ಎಂಬೆಲ್ಲ ವಿಷಯಗಳ ಚಿಂತನೆಗೈದು ಕರ್ನಾಟಕ ಏಕೀಕರಣವನ್ನು ಗಟ್ಟಿಗೊಳಿಸುವ ಮಾರ್ಗಗಳನ್ನು ಕಂಡುಕೊಳ್ಳಲು ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಏಕೀಕರಣ ಗೋಷ್ಠಿ ಏರ್ಪಡಿಸಿದೆ. ಈ ಗೋಷ್ಠಿಯ ವಿಷಯಗಳಾದ “ಪ್ರಾದೇಶಿಕ ಅಸಮಾನತೆ ಸವಾಲು ಮತ್ತು ಪರಿಹಾರ” , “ಕಾವೇರಿಯಿಂದಮಾ ಗೋದಾವರಿ ಒಂದು ಅವಲೋಕನ” “ಗಡಿನಾಡು ಪ್ರದೇಶಗಳು- ಬಿಕ್ಕಟ್ಟುಗಳು” , ಇವು ಕನ್ನಡ ನಾಡು-ನುಡಿಯನ್ನು ಕಾಪಾಡುವ ಅಂತಃಕರಣವನ್ನು ಬಿಂಬಿಸುವ ಸೂತ್ರಗಳೇ ಆಗಿವೆ.

ಕರ್ನಾಟಕ ಏಕೀಕರಣದ ಹಿನ್ನೆಲೆಯೊಳಗೆ ಯೋಚಿಸಿ, ನಡೆದುಕೊಳ್ಳುವುದೆಂದರೆ, ಕನ್ನಡ ನಾಡಿನೊಳಗೆ, ನಾಡಿನಾಚೆಯ ಕನ್ನಡಿಗರೆಲ್ಲರೂ ಕನ್ನಡದ ಸೊಗಡು



ಸಂತೋಷಗಳನ್ನು ಸಮಾನವಾಗಿ, ಸ್ವಾಭಿಮಾನದಿಂದ ಯಾವುದೇ ಅಪಸ್ವರಕ್ಕೆ ಒಳಗಾಗದೇ ಹಂಚಿಕೊಳ್ಳುವುದಾಗಿದೆ. ಕನ್ನಡ ಸಂಸ್ಕೃತಿಯ ವಾರಸುದಾರಿಕೆಯನ್ನು ಮರೆಯದೇ, ಯಾವುದೇ ತಾರತಮ್ಯ ಭಾವ-ಭಾವನೆಗಳಿಗೆ ಆಸ್ಪದ ಕೊಡದೇ, ಕನ್ನಡದ ಛಾಪನ್ನು ಮೂಡಿಸಿಕೊಂಡು, ಮಾನವೀಯ ಮೌಲ್ಯಗಳ ಜೊತೆಗೆ ಪಂಪಕವಿ ಹೇಳಿದಂತೆ “ಮನುಷ್ಯ ಜಾತಿ ತಾನೊಂದೇ ವಲಂ” ಎಂದು, ಕುವೆಂಪು ಅವರು ಪರಿಭಾವಿಸಿದಂತೆ ನಿರಂಕುಶಮತಿಗಳಾಗಿ ಬೆಳಗುವುದಾಗಿದೆ. ಇಂಥ ಗೋಷ್ಠಿಗಳು ಪ್ರಚಲಿತ ಇಕ್ಕಟ್ಟು- ಬಿಕ್ಕಟ್ಟುಗಳನ್ನೆಲ್ಲ ಅವಲೋಕಿಸಿಕೊಂಡು, ಕನ್ನಡತನವನ್ನು ಉಳಿಸಿ ಕೊಳ್ಳುವುದಕ್ಕೆ ಜಾಗೃತಗೊಳ್ಳುವಂತೆ ಮಾಡದಿರಲಾರವು. ಈ ಗೋಷ್ಠಿಯಲ್ಲಿ ಚರ್ಚಿತಗೊಂಡ ಪ್ರಬಂಧಗಳಿಗೆ ಪ್ರತಿಕ್ರಿಯೆಯನ್ನು ಹೀಗೆ ಮಂಡಿಸಲಾಗಿದೆ.

**ಪ್ರಾದೇಶಿಕ ಅಸಮಾನತೆ ಸವಾಲು ಮತ್ತು ಪರಿಹಾರ**

ಡಾ. ಡಿ.ಎಂ. ನಂಜುಡಪ್ಪ, ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನತಾಧಿಕಾರ ಸಮಿತಿಯು ತನ್ನ ವರದಿಯಲ್ಲಿ ಅತ್ಯಂತ ಹಿಂದುಳಿದ ತಾಲ್ಲೂಕುಗಳು-೩೯, ಅತಿ ಹಿಂದುಳಿದ ತಾಲೂಕುಗಳು-೪೦, ಹಿಂದುಳಿದ ತಾಲೂಕುಗಳು-೩೫ ಎಂದು ಗುರುತಿಸಿದೆ. ವಿಭಾಗವಾರು ಈ ತಾಲೂಕುಗಳ ವರ್ಗೀಕರಣ ಇಂತಿದೆ.

| ವಿಭಾಗಗಳು | ಅತ್ಯಂತ ಹಿಂದುಳಿದ | ಅತಿ ಹಿಂದುಳಿದ | ಹಿಂದುಳಿದ | ಒಟ್ಟು |
|---|---|---|---|---|
| ಕಲಬುರಗಿ | ೨೧ | ೫ | ೨ | ೨೮ |
| ಬೆಳಗಾವಿ | ೫ | ೧೨ | ೧೪ | ೩೧ |
| ಬೆಂಗಳೂರು | ೧೧ | ೧೩ | ೧೯ | ೩೩ |
| ಮೈಸೂರು | ೩ | ೧೦ | ೧೦ | ೨೨ |
| ಒಟ್ಟು | ೩೯ | ೪೦ | ೩೫ | ೧೧೪ |

ಅತ್ಯಂತ ಹಿಂದುಳಿದ ತಾಲೂಕು ದಕ್ಷಿಣ ಭಾಗದಲ್ಲಿ ೧೩ ಇದ್ದರೆ ಉತ್ತರ ಭಾಗದಲ್ಲಿ ೨೬ ಇರುವುದು ಅಸಮಾನತೆಗೆ ಸ್ಪಷ್ಟ ನಿದರ್ಶನವಾಗಿದೆ. ಇದು ಅಭಿವೃದ್ಧಿ ಫಲ-ಫಲಿತಾಂಶಗಳು ಸಮನಾಗಿ ಉತ್ತರ ಕರ್ನಾಟಕದ ಜನತೆಗೆ ಸಿಕ್ಕಿಲ್ಲೆಂಬುದನ್ನು ಎತ್ತಿ ತೋರಿಸುತ್ತದೆ. ಪ್ರಾದೇಶಿಕ ಅಸಮಾನತೆ ನಿವಾರಣಾ ಉನ್ನತಾಧಿಕಾರ ಸಮಿತಿಯು ಅಸಮಾನತೆಯನ್ನು ಗುರುತಿಸಿದ ಕೆಲ ಸಂಗತಿಗಳು ಇಂತಿವೆ.

* ಜನಸಂಖ್ಯೆಗೆ ಅನುಗುಣವಾಗಿ ಕಾರ್ಮಿಕ ಶಕ್ತಿ ಉತ್ತರ ಕರ್ನಾಟಕಕ್ಕೆ ಹೋಲಿಸಿದಾಗ, ದಕ್ಷಿಣ ಕರ್ನಾಟಕ ಉತ್ತಮ ಸ್ಥಾನದಲ್ಲಿದೆ.

* ಒಟ್ಟು ಕೆಲಸಗಾರರಲ್ಲಿ ಕೈಗಾರಿಕಾ ಕೆಲಸಗಾರರ ಪ್ರಮಾಣವು ಉತ್ತರ ಕರ್ನಾಟಕಕ್ಕೆ ಹೋಲಿಸಿದಾಗ, ದಕ್ಷಿಣ ಕರ್ನಾಟಕದಲ್ಲಿ ಬಹುತೇಕ ಎರಡರಷ್ಟಿದೆ. ಸಾರ್ವಜನಿಕ ಸಂಘಟಿತ ವಲಯದಲ್ಲಿನ ಉದ್ಯೋಗವು ಉತ್ತರ ಕರ್ನಾಟಕಕ್ಕೆ ಹೋಲಿಸಿದಾಗ,



ದಕ್ಷಿಣ ಕರ್ನಾಟಕ ಶೇ. ೬೫ರಷ್ಟು ಸಿಂಹಪಾಲನ್ನು ಹೊಂದಿದೆ. ಅದೇ ರೀತಿಯಲ್ಲಿ ಸಂಘಟಿತ ಖಾಸಗಿ ವಲಯದಲ್ಲಿ ಉತ್ತರ ಕರ್ನಾಟಕದ ಶೇ.೧೮ಕ್ಕೆ ಪ್ರತಿಯಾಗಿ ದಕ್ಷಿಣ ಕರ್ನಾಟಕವು ಶೇ. ೮೨ರ ಪಾಲನ್ನು ಪಡೆದಿರುತ್ತದೆ. ನಿರುದ್ಯೋಗ ವಿಶೇಷವಾಗಿ ವಿದ್ಯಾವಂತ ಮತ್ತು ತಾಂತ್ರಿಕ ವರ್ಗದಲ್ಲಿ ತ್ವರಿತವಾಗಿ ಹೆಚ್ಚುತ್ತಲಿದೆ.

* ಸಮಗ್ರ ಕೃಷಿ ಹಿಂದುಳಿದಿರುವಿಕೆಗೆ ಸಂಬಂಧಿಸಿದಂತೆ, ಉತ್ತರ ಕರ್ನಾಟಕದ ೫೦ ತಾಲೂಕುಗಳು ಮತ್ತು ದಕ್ಷಿಣ ಕರ್ನಾಟಕದ ೩೮ ತಾಲೂಕುಗಳು ರಾಜ್ಯ ಸರಾಸರಿಗಿಂತ ಕೆಳಗೆ ಇವೆ. ಇವುಗಳಲ್ಲಿ ಉತ್ತರ ಕರ್ನಾಟಕದ ೨೧ ಮತ್ತು ದಕ್ಷಿಣ ಕರ್ನಾಟಕದ ೧೯ ತಾಲೂಕುಗಳು ಕೃಷಿ ಮೂಲ ಸೌಕರ್ಯ ಮತ್ತು ಅಭಿವೃದ್ಧಿಗಳಲ್ಲಿ ಅತ್ಯಂತ ತೀವ್ರವಾದ ಹಿಂದುಳಿದಿರುವಿಕೆಗೆ ಒಳಗಾಗಿದ್ದು ಕಂಡುಬಂದಿದೆ.

* ಪಶುವೈದ್ಯಕೀಯ ಮೂಲ ಸೌಕರ್ಯ ೧೩ ಜಿಲ್ಲೆಗಳಲ್ಲಿ ಗಣನೀಯ ಕೊರತೆ ಇದೆ. ಅದರಲ್ಲಿ ಬೆಳಗಾವಿ, ರಾಯಚೂರು, ಬೆಂಗಳೂರು, ಬಳ್ಳಾರಿ ಜಿಲ್ಲೆಗಳಲ್ಲಿ ತೀವ್ರ ಕೊರತೆ ಇರುತ್ತದೆ. ಉತ್ತರ ಕರ್ನಾಟಕದ ಪ್ರದೇಶದಲ್ಲಿ ಪಶುವೈದ್ಯಕೀಯ ಸಂಸ್ಥೆಗಳ ಸ್ಥಾಪನೆ ಅಗತ್ಯವಿದೆ.

* ಅಂತರ್ಜಲ ಬಳಕೆಯನ್ನು ಸಮತೋಲನಗೊಳಿಸುವ ದೃಷ್ಟಿಯಿಂದ ರಾಜ್ಯಾದ್ಯಂತ, ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಪುನರ್ ಬಳಕೆ ವ್ಯವಸ್ಥೆಯನ್ನು ಹೆಚ್ಚಿಸುವುದು ಅವಶ್ಯಕವಾಗಿದೆ.

* ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕದ ನಡುವೆ ವಿದ್ಯುತ್ ವಲಯದಲ್ಲಿನ ಈ ಅಸಮಾನತೆಯು ಅಪಾಯ ಸೂಚಕವಾಗಿದೆ. ಕೈಗಾರಿಕಾ ಅಭಿವೃದ್ಧಿ ಮತ್ತು ನೀರಾವರಿಯಲ್ಲಿನ ಬಹಳಷ್ಟು ಅಸಮಾನತೆಗೆ ವಿದ್ಯುತ್ ಸರಬರಾಜು ಸ್ಥಿತಿಯಲ್ಲಿಯ ಅಸಮತೋಲನವೇ ಕಾರಣವೆಂದು ಹೇಳಲಾಗಿದೆ. ಉತ್ತರ ಕರ್ನಾಟಕವು ಒಟ್ಟು ಸಣ್ಣ ನೀರಾವರಿ ಕಾಮಗಾರಿಗಳಲ್ಲಿ ಶೇಕಡಾ ೨೪.೨೧ ರಷ್ಟನ್ನು ಹೊಂದಿದ್ದರೆ ಉಳಿದುದೆಲ್ಲವನ್ನು ದಕ್ಷಿಣ ಕರ್ನಾಟಕ ಹೊಂದಿರುತ್ತದೆ. ೨೦೦೦-೦೧ ರಲ್ಲಿ ಉತ್ತರ ಕರ್ನಾಟಕ ವಿದ್ಯುತ್ ಬಳಕೆಯು ೨೩೧೩ ದಶಲಕ್ಷ ಯೂನಿಟ್‌ಗಳಾದರೆ (ಶೇ. ೨೪೨೩) ದಕ್ಷಿಣ ಕರ್ನಾಟಕದ ಬಳಕೆ ೨೨೩ ದಶಲಕ್ಷ ಯೂನಿಟ್‌ಗಳಾಗಿರುತ್ತದೆ. (ಶೇ.೭೫.೭೭)

* ಉತ್ತರ ಕರ್ನಾಟಕದ ವಿದ್ಯುತ್ ಬಳಕೆಯ ಪಾಲು ಕನಿಷ್ಟ ಶೇ.೪೦ ರಷ್ಟು ಆಗಬೇಕು. ಅವಕಾಶವಿದ್ದಲ್ಲಿ ವಿದ್ಯುಚ್ಛಕ್ತಿಯ ಶೇ. ೪೦ ರಷ್ಟನ್ನು ಉತ್ತರ ಕರ್ನಾಟಕಕ್ಕೆ ಮೀಸಲಿಡತಕ್ಕದ್ದು.

* ಸಂಪರ್ಕ ರಸ್ತೆಯ ಕೊರತೆ ಉತ್ತರ ಕರ್ನಾಟಕದ ೬೧ ತಾಲೂಕಗಳಲ್ಲಿ ಕಂಡುಬಂದಿದೆ. ವಿಮಾನ ಸಾರಿಗೆ ವಿಷಯಗಳಲ್ಲಿ ಉತ್ತರ ಕರ್ನಾಟಕ ಪ್ರದೇಶದಲ್ಲಿ ಭಾರೀ ಕೊರತೆ ಇದೆ.



* ಆರೋಗ್ಯ ಮೂಲ ಸೌಕರ್ಯ ಕ್ಷೇತ್ರದಲ್ಲಿ ಹಿಂದುಳಿಕೆಯ ತೀವ್ರತೆ ೫೫ ತಾಲೂಕುಗಳಲ್ಲಿ ಕಂಡುಬಂದಿದೆ.

* ಉತ್ತರ ಕರ್ನಾಟಕ ಪ್ರದೇಶವು ದಕ್ಷಿಣ ಕರ್ನಾಟಕ ಪ್ರದೇಶಕ್ಕಿಂತ ಶೈಕ್ಷಣಿಕ ಸಂಸ್ಥೆಗಳ ಸಂಖ್ಯೆಗೆ ಸಂಬಂಧಿಸಿದಂತೆ ಮಾತ್ರವಲ್ಲದೇ ಸರಕಾರಿ, ಖಾಸಗಿ, ಅನುದಾನಿತ, ಅನುದಾನರಹಿತ ಶೈಕ್ಷಣಿಕ ಸಂಸ್ಥೆಗಳ ಸಂಖ್ಯೆಗೆ ಸಂಬಂಧಿಸಿದಂತೆ ಸಹ ಹಿಂದುಳಿದಿರುವುದು ಕಂಡುಬಂದಿದೆ.

* ಗ್ರಾಮೀಣ ನೀರು ಸರಬರಾಜು ಯೋಜನೆಯಡಿ ೧೯೯೦ ರಿಂದ ಎಂಎನ್‌ಪಿ ಮತ್ತು ಎಆರ್‌ಡಬ್ಲ್ಯೂಎಸ್, ಗ್ರಾಮೀಣ ನೀರು ಸರಬರಾಜಿಗಾಗಿ ರಾಜ್ಯದಲ್ಲಿ ಮಾಡಿದ ಒಟ್ಟು ವೆಚ್ಚದಲ್ಲಿ ಶೇಕಡಾ ೪೨ ರಷ್ಟನ್ನು ಉತ್ತರ ಕರ್ನಾಟಕದ ಪ್ರದೇಶದಲ್ಲಿ ಮಾಡಿದ್ದರೆ ದಕ್ಷಿಣ ಕರ್ನಾಟಕದ ಪ್ರದೇಶದಲ್ಲಿ ಶೇಕಡಾ ೫೮ರಷ್ಟು ವೆಚ್ಚ ಮಾಡಲಾಗಿದೆ. ಅದೇ ರೀತಿಯಾಗಿ ಬಾಹ್ಯ ನೆರವಿನ ಯೋಜನೆಗಳಿಂದ ಪ್ರಯೋಜನ ಪಡೆದ ಗ್ರಾಮಗಳ ಸಂಖ್ಯೆ ಉತ್ತರ ಕರ್ನಾಟಕ ಪ್ರದೇಶದಲ್ಲಿ ಶೇಕಡಾ ೨೪ ರಷ್ಟು ಮಾತ್ರ ಇದ್ದರೆ ದಕ್ಷಿಣ ಕರ್ನಾಟಕಕ್ಕೆ ಸೇರಿದ ಗ್ರಾಮಗಳ ಸಂಖ್ಯೆ ಶೇಕಡಾ ೭೬ ಆಗಿದೆ.

* ಸರಕಾರಿ ಸೇವೆಗಳಿಗೆ ಮಾಡಲಾಗುವ ನೇಮಕಾತಿ, ಸಾರ್ವಜನಿಕ ಉದ್ಯಮಗಳು / ನಿಗಮಗಳು /ಮಂಡಳಿಗಳು, ಸಮಿತಿಗಳು, ಆಯೋಗಗಳು, ಮತ್ತು ಅಂತಹುದೇ ಸಂಸ್ಥೆಗಳಿಗೆ ರಾಜಕೀಯ ನೇಮಕಾತಿ ಮಾಡುವ ವಿಷಯಗಳಲ್ಲಿ ಉತ್ತರ ಕರ್ನಾಟಕ ಪ್ರದೇಶಗಳಿಗೆ ಸೂಕ್ತ ಪ್ರಾತಿನಿಧ್ಯವನ್ನು ನೀಡದಿರುವುದು ಕಂಡುಬಂದಿದೆ.

* ಸಾಂಸ್ಕೃತಿಕ ಅಭಿವೃದ್ಧಿ ವಲಯದಲ್ಲಿ ಸಹ, ಉತ್ತರ ಕರ್ನಾಟಕವು ತನ್ನ ಸೂಕ್ತ ಪಾಲನ್ನು ಪಡೆದಿಲ್ಲ.

* ವಿದ್ವಾಂಸರಿಗೆ, ಸಾಹಿತಿಗಳಿಗೆ ಪ್ರಶಸ್ತಿಯನ್ನು ನೀಡುವ ವಿಷಯದಲ್ಲೂ ಸಹ ಪ್ರಾದೇಶಿಕ ತಾರತಮ್ಯ ಎದ್ದು ಕಾಣುತ್ತದೆ. ಉತ್ತರ ಕರ್ನಾಟಕಕ್ಕೆ ಶೇಕಡಾ ೧೮ ರಷ್ಟು ಮಾತ್ರ ಪ್ರಶಸ್ತಿ ದಕ್ಕಿವೆ.

* ರಾಜ್ಯೋತ್ಸವ ಪ್ರಶಸ್ತಿಗಳಲ್ಲಿ ಉತ್ತರ ಕರ್ನಾಟಕಕ್ಕೆ ಕೇವಲ ಶೇ.೩೧ ರಷ್ಟು ಪಾಲು ಮಾತ್ರ ದೊರೆತಿವೆ.

* ಕ್ರೀಡೆ ಮತ್ತು ಆಟಗಳ ವಿಷಯಗಳಲ್ಲೂ ಸಹ ಉತ್ತರ ಕರ್ನಾಟಕ ಪ್ರದೇಶವು ಮೂಲ ಸೌಕರ್ಯಗಳು, ತರಬೇತಿ ಸೌಕರ್ಯಗಳು ಮತ್ತು ನಿಧಿಗಳು ಸಾಕಷ್ಟಿಲ್ಲದೆ ಸೊರಗಿದೆ.

* ಪ್ರವಾಸೋದ್ಯಮವನ್ನು ಕೇರಳ, ಆಂಧ್ರಪ್ರದೇಶ, ರಾಜಸ್ಥಾನಗಳಂತೆ ಒಂದು ಉದ್ಯಮವೆಂದು ಘೋಷಿಸಬೇಕಿದೆ.

* ಉತ್ತರ ಕರ್ನಾಟಕದಲ್ಲಿ, ಮಹಿಳೆಯರ ಸ್ಥಾನಮಾನ ಇನ್ನೂ ಕೆಳಮಟ್ಟದಲ್ಲಿದೆ. ಲಿಂಗಾಧಾರಿತ ಅಭಿವೃದ್ಧಿಯಲ್ಲೂ ಹೈದರಾಬಾದ್ ಕರ್ನಾಟಕ ಜಿಲ್ಲೆಗಳು ಕೊನೆಯ ಸ್ಥಾನದಲ್ಲಿವೆ.

* ನೀರಾವರಿ ಯೋಜನೆಗಳಿಗೆ ಗಮನ ಕೊಡದಿರುವುದು, ಮಹದಾಯಿ ಯೋಜನೆಗೆ ಸಕಾಲಿಕವಾಗಿ ಯೋಜನೆ ಹಾಕಿಕೊಳ್ಳದಿರುವುದು ಕಂಡುಬಂದಿದೆ.

* ಉತ್ತರ ಕರ್ನಾಟಕ ಭಾಗದಲ್ಲಿನ ವಸತಿ ಕೊರತೆ ದಕ್ಷಿಣ ಕರ್ನಾಟಕ ಭಾಗದಲ್ಲಿಕ್ಕಿಂತ ಹೆಚ್ಚಾಗಿದೆ.

ಡಾ. ಡಿ.ಎಂ. ನಂಜುಂಡಪ್ಪ ಸಮಿತಿ ಸೂಚಿಸಿದ ಅಭಿವೃದ್ಧಿಯ ಕಾರ್ಯ ತಂತ್ರವನ್ನು ಸಕಾಲಿಕವಾಗಿ, ಕಾಲಮಿತಿಯೊಳಗೆ ಅಳವಡಿಸಿಕೊಳ್ಳುವುದು, ಅಸಮಾನತೆ ನಿವಾರಣೆಗೆ ಸೂಕ್ತ ಪರಿಹಾರವಾಗಿದೆ. ಮಹಿಳಾ ಸಾಕ್ಷರತೆಗೆ ಆದ್ಯತೆ ಕೊಡಬೇಕಿದೆ.

೨೦೦೦-೨೦೦೨/೦೩ ನೇ ವರ್ಷದಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಕಡಿಮೆ ಮಾಡಲು ಸರಕಾರದ ಕಾರ್ಯನೀತಿಯಿಂದಾಗಿ ಕೆಲವು ಅಭಿವೃದ್ಧಿ ಕಾರ್ಯಗಳು ಜರುಗಿದ್ದರೂ ಎಂಟು ವರ್ಷದ ವಿಶೇಷ ಅಭಿವೃದ್ಧಿ ಯೋಜನೆಯ ಕಾರ್ಯ ಚಟುವಟಿಕೆಗಳು ಸೂಕ್ತ ಆದ್ಯತೆ ಮತ್ತು ನಿರ್ವಹಣೆ ಪಡೆದುಕೊಂಡಿಲ್ಲ. ಇದಲ್ಲದೆ ಸಮಿತಿ ನಿರ್ಧರಿಸದಂತೆ ಹಂಚಿಕೆಯಾದ ಅನುದಾನವನ್ನು ವಿನಿಯೋಗಿಸಲು ಸಾಧ್ಯವಾಗಿಲ್ಲ. ಹಿಂದಿನ ಸರಕಾರವು ರೂ. ೧೦,೮೨೮ ಕೋಟಿ ಅನುದಾನ ಹಂಚಿಕೆ ಮಾಡಿ, ೮,೬೫೦ ಕೋಟಿ ಹಣ ಬಿಡುಗಡೆ ಮಾಡಿ ೭,೯೦೮ ಕೋಟಿ ವಿನಿಯೋಗಿಸಿದೆ. ಈಗಿನ ಸರಕಾರವು ೨೦೧೭ ರ ವರೆಗೆ ೧೩,೪೯೨ ಕೋಟಿ ಹಂಚಿಕೆ ಮಾಡಿ ೯,೬೦೭ ಕೋಟಿ ಮಾತ್ರ ಬಿಡುಗಡೆ ಮಾಡಿದೆ. ೨೦೧೭ ರಲ್ಲಿ ಪಂಚಾಯತರಾಜ್ ರೂ. ೬೩೫ ಕೋಟಿ ಹಂಚಿಕೆಯಾಗಿ ರೂ. ೩೮೫ ಕೋಟಿ ಬಿಡುಗಡೆಯಾಗಿದೆ. ಅದರಲ್ಲಿ ೧೦೧ ಕೋಟಿ ಖರ್ಚಾಗಿದೆ. ಉನ್ನತ ಶಿಕ್ಷಣ ಇಲಾಖೆಗೆ ರೂ. ೧೦೦ ಕೋಟಿ ಹಂಚಿಕೆಯಾಗಿದ್ದು, ಅದರಲ್ಲಿ ರೂ. ೭೫ ಕೋಟಿ ಬಿಡುಗಡೆಯಾಗಿದೆ. ಆದರೆ ಆ ಹಣ ಖರ್ಚಾಗಿಲ್ಲ. ಪಶುಪಾಲನೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ನಗರಾಭಿವೃದ್ಧಿ ಇಲಾಖೆಗಳಿಗೆ ನೀಡಿದ ಹಣ ಖರ್ಚಾಗಿಲ್ಲ. ಅದರಂತೆ ಹೈದರಾಬಾದ್ ಕರ್ನಾಟಕ ಅಭಿವೃದ್ಧಿಗೆ ನೀಡಲಾಗಿರುವ ಅನುದಾನ ನಿರೀಕ್ಷಿತ ಮಟ್ಟದಲ್ಲಿ ವಿನಿಯೋಗಗೊಂಡಿಲ್ಲ. ಹೈದರಾಬಾದ್ ಕರ್ನಾಟಕ ಅಭಿವೃದ್ಧಿಗಾಗಿ ೩೭೧ ಜೆ ತಿದ್ದುಪಡಿ ತಂದು ವಿಶೇಷ ಸ್ಥಾನಮಾನ ನೀಡಿದ್ದರೂ ೩೫,೦೦೦ ಖಾಲಿ ಇರುವ ಹುದ್ದೆಗಳಲ್ಲಿ ಕೇವಲ ೫೦೦೦ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.

ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಕಾಲಕಾಲಕ್ಕೆ ಅಧ್ಯಯನಗಳು ಅಗತ್ಯ ಆ ಅಧ್ಯಯನಗಳಿಂದ ಹೊರಹೊಮ್ಮುವ ಫಲಿತಾಂಶಗಳ ಅನ್ವಯ ಸ್ಥಳೀಯವಾಗಿ

ಆದ್ಯತೆಯ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು ಅಗತ್ಯ. ಈ ದಿಶೆಯಲ್ಲಿ ಗ್ರಾಮಪಂಚಾಯಿತಿ ಮಟ್ಟದಿಂದ ಹಿಡಿದು ಕೇಂದ್ರ ಸರಕಾರದ ಮಟ್ಟದವರೆಗಿನ ಹಮ್ಮಿಕೊಳ್ಳುವ ಯೋಜನೆಗಳು ಕಾಲಮಿತಿಯೊಳಗೆ ಮತ್ತು ಯಾವುದೇ ಭ್ರಷ್ಟಾಚಾರಕ್ಕೆ ಗುರಿಯಾಗದೇ ನಿರ್ವಹಣೆ ಯಾಗುವಂತೆ ನೋಡಿಕೊಳ್ಳುವ ಜಾಗೃತ ಪಡೆಗಳು ಮುಂಚೂಣಿಗೆ ಬರಬೇಕಿದೆ. ಆಡಳಿತದಲ್ಲಿ ಪಾರದರ್ಶಕತೆ ತರುವುದರ ಜೊತೆಗೆ ಅಸಮಾನತೆಯನ್ನು ನಿವಾರಿಸುವ ಕಳಕಳಿಯುಳ್ಳ ಸಿಬ್ಬಂದಿಯನ್ನು ನಿಯೋಜಿಸುವುದು ಅಷ್ಟೇ ಮುಖ್ಯವಾಗಿದೆ. ಪ್ರಾದೇಶಿಕ ಅಸಮತೋಲನ ನಿವಾರಣಾ ಉನ್ನತಾಧಿಕಾರ ಸಮಿತಿಯು ತನ್ನ ವರದಿಯಲ್ಲಿ ಗುರುತಿಸಿದಂತೆ, “ಯೋಜನೆ ಜನ್ಮಕೊಟ್ಟ ಅಭಿವೃದ್ಧಿಯ ಪಾಪದ ಕೂಸು ಪ್ರಾದೇಶಿಕ ಅಸಮಾನತೆ ಆಗಿದೆ” . ಆದ್ದರಿಂದ ಯೋಜನೆಗಳ ನಿರ್ವಹಣೆಯನ್ನು ಶಿಸ್ತುಬದ್ಧ ಗೊಳಿಸುವುದು ಇಂದಿನ ಆದ್ಯತೆ ಆಗಿದೆ. ಇದಲ್ಲದೆ ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸುವ ರಾಜಕೀಯ ಇಚ್ಛಾಶಕ್ತಿ, ಪ್ರಾಮಾಣಿಕತೆ, ಸಮಯಪಾಲನೆ, ಪಾರದರ್ಶಕತೆ ಬಾರದೇ ಹೋದರೆ ನಾವು ಸಾಕಷ್ಟು ಯೋಜನೆ / ಅನುದಾನ ನಿಗದಿಗೊಳಿಸಿದರೂ ಅದು ತಳ ಒಡೆದ ಮಡಕೆಗೆ ನೀರು ಸುರಿದಂತಾಗುತ್ತದೆಂಬ ಅರಿವಿಟ್ಟುಕೊಂಡು ಮುಂದುವರಿಯುವುದು ಸೂಕ್ತ.

ಪ್ರಾದೇಶಿಕ ಅಸಮಾನತೆಯು ಇಂದು ಪ್ರತ್ಯೇಕ ರಾಜ್ಯ ರಚನೆಯ ಕೂಗಾಗಿ ಹೋಗುತ್ತಲಿದೆ. ಕನ್ನಡಿಗರೆಲ್ಲರೂ ಕೂಡಿಕೊಂಡು ಒಟ್ಟಾಗಿ ಬದುಕಬೇಕೆಂಬ ಮಹದಾಸೆಯನ್ನಿಟ್ಟುಕೊಂಡು ಉತ್ತರ ಕರ್ನಾಟಕದ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆಡಳಿತ, ಶೈಕ್ಷಣಿಕ ಧುರೀಣರು, ಸಾಹಿತಿಗಳು, ಸಾರ್ವಜನಿಕರು ಹೋರಾಡಿದ್ದು ಗಮನಾರ್ಹ ಸಂಗತಿಯಾಗಿದೆ. ನಮ್ಮ ಪೂರ್ವಜರು ಒಬ್ಬರಿಗಿಂತ ಇಬ್ಬರು ಲೇಸೆಂದು ಕನ್ನಡಿಗರೆಲ್ಲರನ್ನು ಒಗ್ಗೂಡಿಸಿ 'ಕರ್ನಾಟಕ'ವೆಂಬ ರಾಜ್ಯವನ್ನು ಸೃಷ್ಟಿಸಿದ್ದಾರೆ. ಕನ್ನಡಿಗರೆಲ್ಲರೂ ಒಬ್ಬರಿಗೊಬ್ಬರು ಬೇಕಾಗಿ ಕೂಡಿಕೊಂಡು ಬದುಕುತ್ತಿರುವ ಈ ಸನ್ನಿವೇಶದಲ್ಲಿ ಕರ್ನಾಟಕ ಏಕೀಕರಣದ ಆಶಯಗಳನ್ನು ಬಲಪಡಿಸುವ ಕಾರ್ಯದಲ್ಲಿ ಅಪಸ್ವರಕ್ಕಾಗಲಿ, ಪ್ರತ್ಯೇಕತೆಗಾಗಲಿ ಅವಕಾಶವಿರಕೂಡದು. ಕರ್ನಾಟಕ ಇಂದು ವಿಶ್ವವೇ ಗುರುತಿಸುವಷ್ಟು ಬೆಳೆದಿದೆ. ಇದಕ್ಕೆಲ್ಲ ನಮ್ಮಲ್ಲಿಯ ಒಗ್ಗಟ್ಟೇ ಮೂಲವಾಗಿದೆ. ಕರ್ನಾಟಕ ಏಕೀಕರಣಕ್ಕೆ ಧಕ್ಕೆ ಬರದಂತೆ ನಾವಿಂದು ಸಮಾನತೆಗಾಗಿ ಎಚ್ಚೆತ್ತು ದುಡಿಯಬೇಕಿದೆ.

**ಕಾವೇರಿಯಿಂದಮಾ ಗೋದಾವರಿ : ಒಂದು ಅವಲೋಕನ**

ಎಲ್ಲರಂತೆ ಕನ್ನಡಿಗರಿಗೆ ತಮ್ಮ ನಾಡು-ನುಡಿಯ ಗತಕಾಲದ ವೈಭವವನ್ನು ಹೇಳಿಕೊಳ್ಳಲು ಮತ್ತು ಅಭಿಮಾನಪಡಲು ಬೇಕಾದಷ್ಟು ವಿಷಯಗಳಿವೆ. ಕರ್ನಾಟಕ ಎಂಬ ಅಮೂರ್ತ ಕಲ್ಪನೆ ಮಹಾಭಾರತ ಕಾಲದಿಂದಲೂ ಇದೆ. ಕನ್ನಡ ಮಾತನಾಡುವ ಪ್ರದೇಶಗಳು ಭಾರತ ಸೇರಿದಂತೆ ನೇಪಾಳ ತುಂಬೆಲ್ಲ ಇದ್ದವು. ಕ್ರಿಶ. ಏಳನೇ ಶತಮಾನದಲ್ಲಿ ಚಾಲುಕ್ಯ ಸೇನಾಪತಿ 'ನಾಣ್ಯದೇವ' ಎಂಬುವವ ನೇಪಾಳವನ್ನು ಜಯಸಿದ ಎಂಬ

ವಿವರ ಅಲ್ಲಿಯ ಸ್ವಯಂಭು ಪುರಾಣದಲ್ಲಿದೆ. ಅಂದಿನಿಂದ ಇಲ್ಲಿಯವರೆಗೂ ನೇಪಾಳದ ರಾಜಧಾನಿ ಕಠ್ಮಂಡು ನಗರದಲ್ಲಿ ಇರುವ ಪಶುಪತಿನಾಥ ದೇವಾಲಯದಲ್ಲಿ ಕನ್ನಡದ ಅರ್ಚಕರೇ ಇಂದಿಗೂ ಇದ್ದಾರೆ. ಕರ್ನಾಟಕವು ಮೌರ್ಯ ಸಾಮ್ರಾಜ್ಯದ ಭಾಗವಾಗಿದ್ದುದಕ್ಕೆ ಸ್ಪಷ್ಟ ಸಾಕ್ಷಿಗಳಿವೆ. ಕ್ರಿಶ. ಎರಡನೇ ಶತಮಾನದ ತಮಿಳಿನ ಸುಪ್ರಸಿದ್ಧ ಕೃತಿ 'ಶಿಲಪ್ಪದಿಗಾರಂ' ದಲ್ಲಿ ಕರ್ನಾಟಕದ ಜನತೆಯನ್ನು 'ಕರುನಾಟಕ' ಅಥವಾ 'ಕರುನಾಡರ್' ಎಂದು ವರ್ಣಿಸಲಾಗಿದೆ. ಇಮ್ಮಡಿ ಪುಲಕೇಶಿ ಉತ್ತರ ಪ್ರದೇಶದ ಹರ್ಷನನ್ನು ಸೋಲಿಸಿ ತನ್ನ ನಾಡಿನ ಗಡಿಯನ್ನು ನರ್ಮದಾ ನದಿಯನ್ನಾಗಿಸಿದ್ದು ಇತಿಹಾಸವೇ ಆಗಿದೆ. ಕೃಷ್ಣದೇವರಾಯ “ಕನ್ನಡ ವಲ್ಲಭ' ನಾಗಿ ಮತ್ತು 'ಕನ್ನಡರಾಜ್ಯ ರಮಾರಮಣ'ನಾಗಿ ಪ್ರಸಿದ್ಧಿ ಹೊಂದಿದ್ದ ಎಂಬ ಹೆಮ್ಮೆ ಜನಜನಿತವಾಗಿದೆ. ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿಯ ಭಾಷಾ ಪರಂಪರೆಯು ಬಾಂಧವ್ಯ ಬಂಧುತ್ವವನ್ನು ಬೆಸೆದಿದೆ. ಮಹಾರಾಷ್ಟ್ರದ ಆರಾಧ್ಯ ದೈವ ವಿಠಲ ಕನ್ನಡನಾಡಿನವನಾಗಿದ್ದು, ಸಾಹಿತ್ಯಕವಾಗಿ, ಸಾಂಸ್ಕೃತಿಕವಾಗಿ, ಸಾಮಾಜಿಕ ವಾಗಿ ಈ ಎರಡು ರಾಜ್ಯಗಳ ನಡುವಿನ ಸಂಬಂಧ ಹೊಕ್ಕಳು ಬಳ್ಳಿಯ ಸಂಬಂಧವೇ ಆಗಿದೆ. ನೆಲ, ಜಲ, ಭಾಷೆ ಅಂಶಗಳು, ಕನ್ನಡ-ಮರಾಠಿ, ಕನ್ನಡಮಯವೆಂದು ಮರಾಠಿ ಸಂತರೇ ಘಂಟಾಘೋಷವಾಗಿ ಹೇಳಿದ್ದಾರೆ. ಏಕನಾಥರು 'ನಮೋ ಕಾನಡಿ ಭಾಷಾ ಎಂದು ಗೌರವ ತೋರಿಸಿದ್ದಾರೆ. ಸಂತ ರಾಮದಾಸರು 'ಚಿತ್ರಕಲಾ ನಾನಾ ನಾಟಕ ಮಣ್ಣೂನಿ ಕರ್ನಾಟಕ' ಎಂದು ಕರ್ನಾಟಕ ಸಂಸ್ಕೃತಿಯ ಹಿರಿಮೆಯನ್ನು ಕೊಂಡಾಡಿದ್ದಾರೆ. 'ಕರ್ನಾಟಕ ಮತ್ತು ಮಹಾರಾಷ್ಟ್ರ ಬೇರೆ ಬೇರೆ ಅಲ್ಲ, ಇವರಿಬ್ಬರಲ್ಲಿಯೂ ಒಂದೇ ರಕ್ತ ಹರಿದಾಡುತ್ತಲಿದೆ. ಇಬ್ಬರ ಭಾಷೆಯೂ ಒಂದೇ ಅಂದರೆ ಕನ್ನಡವೇ ಆಗಿತ್ತು' ಎಂದು ಲೋಕಮಾನ್ಯ ಬಾಲಗಂಗಾಧರ ತಿಲಕರು ಹೇಳಿದ್ದಾರೆ.

ಮರಾಠಿ ಅಭಂಗಗಳಲ್ಲಿ ಕನ್ನಡ ಪದಗಳು ಬಳಕೆಯಾಗಿವೆ. ಈ ಅಭಂಗ ರಚನೆಕಾರರ ಭಾಷೆ ಕನ್ನಡವಾಗಿತ್ತೆಂಬುದನ್ನು ಇದು ಖಾತರಿಪಡಿಸುತ್ತದೆ. ಮಹಾರಾಷ್ಟ್ರದ ಬಹು ಭಾಗಗಳಲ್ಲಿ ದೊರೆತಿರುವ ಶಾಸನಗಳು ಕನ್ನಡದಲ್ಲಿವೆ. ಮಹಾರಾಷ್ಟ್ರದ ಒಂದು ತಾಲೂಕಿನ ಹೆಸರು 'ಕನ್ನಡ' ಎಂದಿರುವುದು ವಿಶೇಷ. ಮಹಾರಾಷ್ಟ್ರದ ಊರಿನ ಹೆಸರುಗಳಲ್ಲಿ ಕನ್ನಡತನದ ಸೊಗಡಿದೆ. ಕನ್ನಡ ನಾಡು ದಕ್ಷಿಣ ಭಾರತದಲ್ಲಿ ಕಾವೇರಿಯಿಂದ ಗೋದಾವರಿ ನದಿಯವರೆಗೆ ಹಬ್ಬಿದ ನಾಡು. ಇಂದಿನ ಬಾಗಲಕೋಟ ಜಿಲ್ಲೆಯ ಪಟ್ಟದಕಲ್ಲು ಈ ಹಿಂದೆ ರಾಯಚೂರು ಜಿಲ್ಲೆಯೊಳಗಿದ್ದು, ಇಂದು ಜಿಲ್ಲೆಯಾಗಿರುವ ಕೊಪ್ಪಳ, ಗದಗ ಜಿಲ್ಲೆಯ ಲಕ್ಷ್ಮೇಶ್ವರ ಮತ್ತು ಬೆಳಗಾವಿ ಜಿಲ್ಲೆಯ ವಕ್ಕುಂದ ಇವುಗಳ ನಡುವೆಯಿದ್ದ ಪ್ರದೇಶವು ತಿರುಳಗನ್ನಡ ನಾಡಾಗಿತ್ತೆಂದು ಕವಿರಾಜಮಾರ್ಗದಲ್ಲಿ ವಿವರಿಸಲಾಗಿದೆ. ಇದೆಲ್ಲ ಹೆಗ್ಗಳಿಕೆಯ ವಿಚಾರವಾಗಿದೆ.

ಇಂದು ಕರ್ನಾಟಕವು ಗಡಿ ವಿವಾದ, ಭಾಷಾವಿವಾದ, ಜಲವಿವಾದಗಳಿಂದ ತತ್ತರಿಸಿಹೋಗಿದೆ. ಇದನ್ನೇ ಇನ್ನೊಂದು ತೆರನಾಗಿ ಡಾ. ಎಂ. ಚಿದಾನಂದಮೂರ್ತಿ

ಅವರು ಹೀಗೆ ಹೇಳಿದ್ದಾರೆ. ಕನಿಷ್ಠ ಹತ್ತು ಹನ್ನೆರಡು ಅಚ್ಚ ಕನ್ನಡ ಜಿಲ್ಲೆಗಳನ್ನು ಕರ್ನಾಟಕ ಕಳೆದುಕೊಂಡು ಉದಯವಾಯಿತು. ಕಾವೇರಿ ಗೋದೆಯರ ಮೈದೊಳೆಯುವ ನಲುನಾಡು' ಆಗಿದ್ದ ಕರ್ನಾಟಕದಿಂದ ಗೋದಾವರಿ ಕಳಚಿ ಕೊಂಡಿತು. ಸದ್ಯ ಕಾವೇರಿಯಾದರೂ ಉಳಿಯಿತಲ್ಲಾ ಎಂಬ ಸಮಾಧಾನ ನಮ್ಮದಾಗಿತ್ತು. ಕರ್ನಾಟಕವನ್ನು ಭದ್ರಗೊಳಿಸುವ, ಕನ್ನಡವನ್ನು ಬೆಳೆಸುವ, ಕನ್ನಡಿಗನನ್ನು ಆರ್ಥಿಕವಾಗಿ ಬಲಿಷ್ಠವಾಗಿ ಮಾಡುವ ಯಾವುದೇ ಕೆಲಸವೂ ಕಾಣುತ್ತಿಲ್ಲ. ಕರ್ನಾಟಕದ ಇಂದಿನ ಶ್ರೀಮಂತಿಕೆ ಅಂದರೆ ಹೊರಗಿನಿಂದ ಬಂದವರ ಸಿರಿವಂತಿಕೆಯಾಗಿದೆ. ನದಿ ನೀರು, ಉದ್ಯೋಗವಕಾಶ, ಉದ್ಯಮಶೀಲತೆ, ಸಮೂಹ ಮಾಧ್ಯಮಗಳು, ಶಿಕ್ಷಣ ಮಾಧ್ಯಮ, ವೃತ್ತಿಪರ ಶಿಕ್ಷಣ ಸಂಸ್ಥೆಗಳಲ್ಲಿರುವ ಸ್ಥಾನಗಳು, ರೈಲ್ವೆ, ರಾಷ್ಟ್ರೀಯ ಹೆದ್ದಾರಿ ಎಲ್ಲಾ ಕಡೆ ಕನ್ನಡ- ಕನ್ನಡಿಗ-ಕರ್ನಾಟಕಗಳಿಗೆ ನಿರಂತರ ಆಘಾತ. ಇಂದಿನ ಕರ್ನಾಟಕವು ಭೌಗೋಳಿಕ ವಾಗಿಯೂ ಸದೃಢವಾಗಿಲ್ಲ, ಭಾವನಾತ್ಮಕವಾಗಿ ಒಂದಾಗಿಲ್ಲ. ನಮ್ಮ ಪೂರ್ವಜರು ಹೇಳಿಕೊಂಡ ಅಂದಿನ ತಿರುಳುಗನ್ನಡ ನಾಡೂ ಉಳಿದಿಲ್ಲ. ಕರ್ನಾಟಕವು ಇಂದು ಅಖಂಡತ್ವ ನೆಲೆಯೊಳಗೆ ಬೆಳೆದು ಬರುತ್ತಿಲ್ಲ. ಕರ್ನಾಟಕದ ಭಾಷೆ, ನೆಲ-ಜಲದ ಜಗಳಗಳಂತೂ ಮಿತಿಮೀರಿ ಹೋಗಿವೆ. ಪ್ರಾದೇಶಿಕ ಅಸಮಾನತೆಯ ಕೂಗು ಜೋರಾಗಿದೆ. ಉತ್ತರ ಕರ್ನಾಟಕದ ಜನತೆಯು ತಮಗೆ ಸರಿಯಾದ ಸ್ಥಾನಮಾನ, ಪ್ರಶಸ್ತಿ, ಪ್ರೋತ್ಸಾಹ ಸಿಗುತ್ತಿಲ್ಲೆಂದು ಕೊರಗುತ್ತಲಿದ್ದಾರೆ. ಇದನ್ನೇ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು ಹೀಗೆ ಹೇಳಿದ್ದಾರೆ.

ಕನ್ನಡ ನೆಲದೊಳಗಿನ್ನೂ ಕನ್ನಡಕ್ಕೆ ಹೋರಾಡುವ ಕಾಲವು

ಮುಗಿದಿಲ್ಲೆಂದರೆ, ಅದು ನಮಗೇ ಅವಮಾನ

ಕನ್ನಡ ರಾಜ್ಯೋದಯವಾಗಿದೆ ಎಂದರೆ

ಅದು ನಿಮಗೇ ಅನುಮಾನ;

ನಿಜ; ಕನ್ನಡ ರಾಜ್ಯೋದಯವಾಗಿದೆ ಹೊರಗೆ

ಇನ್ನೂ ಕನ್ನಡ ರಾಜ್ಯೋದಯವಾಗುವುದಿದೆ

ನಮಗೂ ನಿಮಗೂ ಒಳಗೆ.

ಕನ್ನಡನಾಡು ತನ್ನ ಅಸ್ಮಿತೆ-ಅಸ್ತಿತ್ವಕ್ಕಾಗಿ ತೀವ್ರ ಬಿಕ್ಕಟ್ಟು ಎದುರಿಸುತ್ತಲಿದೆ. ಆದರೂ ಎಲ್ಲರೂ ಕೂಡಿ ಬದುಕಬೇಕೆಂಬ ಹಂಬಲವು ಹಿಗ್ಗಿಕೊಂಡಿದೆ. ಈ ನಿಟ್ಟಿನಲ್ಲಿ ಆಳುವವರೂ ಜಾಗೃತವಾಗಬೇಕಿದೆ. ಸಂವಿಧಾನದಡಿ ಅಸ್ತಿತ್ವಕ್ಕೆ ಬಂದಿರುವ ಈ ನಾಡನ್ನು ಏಕೀಕರಣದ ಜೊತೆಜೊತೆಗೆ ಕರೆದುಕೊಂಡು ಹೋಗುವ ಜವಾಬ್ದಾರಿಯು ಸಮಸ್ತ ಕನ್ನಡಿಗರ ಕರ್ತವ್ಯವೇ ಆಗಿದೆ.

**ಗಡಿನಾಡು ಪ್ರದೇಶಗಳು : ಬಿಕ್ಕಟ್ಟುಗಳು**

ಕನ್ನಡ ನಾಡು ಶಿಲಾಯುಗದಿಂದಲೂ ಅಸ್ತಿತ್ವದಲ್ಲಿದೆ ಎಂದು ಹೇಳಲಾಗುತ್ತಿದೆ. ಈ ನಾಡಿನ ಆಳ್ವಿಕೆ ಇತಿಹಾಸ ಮೌರ್ಯ ಅರಸರಿಂದ ಆರಂಭಗೊಂಡಿತು. ನಂತರ ಈ ಪ್ರದೇಶವನ್ನು ಶಾತವಾಹನರು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರ ಅರಸರು ಪ್ರಮುಖವಾಗಿ ಆಳ್ವಿಕೆ ಮಾಡಿದ್ದು ತಿಳಿದು ಬರುತ್ತದೆ. ವಿಜಯನಗರ ಅರಸರ ನಂತರ ಈ ಪ್ರದೇಶವನ್ನು ಬ್ರಿಟಿಷರು ಆಕ್ರಮಿಸಿಕೊಂಡರು. ಅಂದು ಈ ಗಡಿ, ಗಡಿನಾಡು ಸಮಸ್ಯೆಗಳಿರಲಿಲ್ಲ. ಪರಕೀಯ ಆಡಳಿತವನ್ನು ಕಿತ್ತುಹಾಕುವ ತುಡಿತ-ಮಿಡಿತವೇ ಹೆಚ್ಚಾಗಿತ್ತು. ಅಂದು ಕನ್ನಡ ನಾಡು ೧೯ ಪ್ರದೇಶದಲ್ಲಿ ಹರಿದಂಚಿ ಹೋಗಿತ್ತೆಂದು ವಿದ್ವಾಂಸರಾದ ರಂ.ರಾ.ದಿವಾಕರ ಅವರು ತಮ್ಮ ಒಂದು ಸಾಹಿತ್ಯ ಕೃತಿಯಲ್ಲಿ ದಾಖಲಿಸಿದ್ದಾರೆ. ಕರ್ನಾಟಕ ದರ್ಶನ, ಕೃತಿ ರಚಿಸಿರುವ ಮಂಗಳವೇಡೆ ಶ್ರೀನಿವಾಸರಾಯರು ಕರ್ನಾಟಕದ ಭಾಗಗಳು ೨೨ ಪ್ರದೇಶಗಳಲ್ಲಿ ಹರಿದಂಚಿ ಹೋಗಿವೆ ಎಂದು ಹೀಗೆ ಗುರುತಿಸಿದ್ದಾರೆ. ಅವು ಇಂತಿವೆ. ೧) ಮುಂಬೈ ಕರ್ನಾಟಕ ೨) ಮದ್ರಾಸ ಕರ್ನಾಟಕ ೩) ದಂಡು ಪ್ರದೇಶ ಕರ್ನಾಟಕ ೪) ಕೊಡಗು ಕರ್ನಾಟಕ ೫) ಹೈದರಾಬಾದ್ ಕರ್ನಾಟಕ ೬) ಹೈದರಾಬಾದ್ ಕರ್ನಾಟಕದ ಜಹಗೀರು ೭) ಮೈಸೂರು ಸಂಸ್ಥಾನ ೮) ಸಾಂಗಲಿ ೧೧) ಔಂಧ ೧೨) ಮಿರಜ (ಹಿರಿ) ೧೩) ಮಿರಜ (ಕಿರಿ) ೧೪) ಜಮಖಂಡಿ ೧೫) ಮುಧೋಳ ೧೬) ರಾಮದುರ್ಗ ೧೭) ಅಕ್ಕಲಕೋಟೆ ೧೮) ಜತ್ತ ೧೯) ಸವಣೂರು ೨೦) ಸೊಂಡೂರು ೨೧) ಕೊಲ್ಹಾಪುರ ಸಂಸ್ಥಾನ ೨೨) ಕೊಲ್ಹಾಪುರ ಸಂಸ್ಥಾನ ಜಹಗೀರುಗಳು.

ಈ ಇಪ್ಪತ್ತೆರಡು ಪ್ರದೇಶಗಳನ್ನು ಬ್ರಿಟಿಷರು ತಮ್ಮ ಆಡಳಿತದ ಅನುಕೂಲಕ್ಕಾಗಿ ಐದು ಘಟಕಗಳಲ್ಲಿ ವಿಂಗಡಿಸಿದರು. ಈ ಐದು ಪ್ರಮುಖ ಘಟಕಗಳು ಇಂತಿವೆ.

೧) ಮುಂಬಯಿ ಕರ್ನಾಟಕ    ೨) ಮೈಸೂರು ಸಂಸ್ಥಾನ

೩) ಹೈದರಾಬಾದ ಕರ್ನಾಟಕ    ೪) ಮದರಾಸ ಕರ್ನಾಟಕ

೫) ಕೊಡಗು

ಈ ಐದು ಘಟಕಗಳ ಆಡಳಿತಕ್ಕೆ ಒಳಗಾದ ಕನ್ನಡನಾಡು, ಅಂದಿನಿಂದಲೇ ಗಡಿ ಬಿಕ್ಕಟ್ಟಿಗೆ ಸಿಲುಕಿಕೊಂಡಿತೆಂದು ಹೇಳಬಹುದು. ಒಂದು ಅರ್ಥದಲ್ಲಿ ಗಡಿಗಳನ್ನು ಸೃಷ್ಟಿಸಿದವರೆಂದರೆ ಬ್ರಿಟಿಷರೆಂದೇ ಹೇಳಬೇಕಾಗುತ್ತದೆ.

ಮುಂಬಯಿ ಕರ್ನಾಟಕದಲ್ಲಿ ಮರಾಠಿ ಭಾಷೆಗೆ ಹೆಚ್ಚಿನ ಆದರ/ಗೌರವಗಳಿದ್ದವು. ಶಾಲೆಗಳಲ್ಲಿ ಮರಾಠಿಗೆ ಪ್ರಾಶಸ್ತ್ಯವಿತ್ತು. ಹೀಗಾಗಿ ಕನ್ನಡಿಗರು ಮರಾಠಿಯೊಳಗೆ ವ್ಯವಹರಿಸುವುದು ಅನಿವಾರ್ಯವಾಯಿತು. ಕನ್ನಡ

ಮಾತನಾಡುವುದೇ ಅವಮಾನ ಸಂಗತಿಯಾಗಿ ಬೆಳೆಯತೊಡಗಿತು. ಈ ಹಿನ್ನೆಲೆಯಲ್ಲಿ ಭೀ.ಗು.ಕುಲಕರ್ಣಿ ದಾಖಲಿಸಿರುವ ಈ ಮಾತುಗಳು ಇಂದಿನ ಗಡಿನಾಡು ಬಿಕ್ಕಟ್ಟುಗಳ ಮೇಲೆ ಬೆಳಕು ಚೆಲ್ಲುವಂತಿವೆ.



ಉತ್ತರ ಕರ್ನಾಟಕದ ಭಾಗವೆಲ್ಲ ಮರಾಠಿಗರ ದಟ್ಟ ಛಾಯೆಗೆ ಒಳಗಾಗಿತ್ತು. ಬ್ರಿಟಿಷ್ ಆಳರಸರಿಗೆ, ಈ ನಾಡಿನ ಭಾಷೆ ಮರಾಠಿಯೇ ಎಂಬ ಭ್ರಮೆ ಹಿಡಿದಿತ್ತು. ಸುಶಿಕ್ಷಿತರಲ್ಲಿ ಮರಾಠಿ ಬರೆಯುವುದು, ಮಾತನಾಡುವುದು, ಗೌರವದ ವಿಷಯವಾಗಿತ್ತು. ಕನ್ನಡ ಭಾಷೆ ಮತ್ತು ಸಂಸ್ಕೃತಿಗಳು ಅಜ್ಞಾತವಾಸಕ್ಕೆ ಸರಿದಂತಾಗಿದ್ದವು. ಅದೊಂದು ಪರಭಾಷೆಯ ಮೋಹಪಾಶದಲ್ಲಿ ಸಿಲುಕಿಬಿದ್ದ ವಿಸ್ಮೃತಿಯ ಪರಿಸ್ಥಿತಿ. ಇಂದು ಸಹ ಇದೇ ಪರಿಸ್ಥಿತಿ ಇದೆ. ಅಂದರೆ ಪರಭಾಷೆಯಾದ ಇಂಗ್ಲಿಷ್ ಕಲಿಯುವುದು, ಮಾತನಾಡುವುದು, ವ್ಯವಹರಿಸುವುದೇ ಇಂದಿಗೂ ಅಭಿಮಾನವಾಗಿ ಕನ್ನಡಿಗರಲ್ಲಿ ಉಳಿದಿದೆ.

ಮೈಸೂರು ಸಂಸ್ಥಾನದಲ್ಲಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗೆ ಮನ್ನಣೆ ದೊರತಿತ್ತು. ಹೈದರ-ಟಿಪ್ಪು ಸುಲ್ತಾನರ ಕಾಲದಲ್ಲಿ ಕೆಲವು ಭಾಷಿಕ ಬದಲಾವಣೆಗಳು ಆದವು. ಈ ಸಂಸ್ಥಾನದಲ್ಲೂ ಮೇಲ್ವರ್ಗದ ಮರಾಠಿ ಭಾಷಿಕರು ಆಡಳಿತದಲ್ಲಿ ಹೆಚ್ಚಿನ ಸ್ಥಾನಗಳನ್ನು ಅಲಂಕರಿಸಿದ್ದರು. ಪರಿಣಾಮ, ಕ್ರಮೇಣ ಆಡಳಿತದಲ್ಲಿ ಕನ್ನಡಕ್ಕೆ ಸರಿಸಮಾನವಾಗಿ ಮರಾಠಿಯೂ ತನ್ನದೇ ಆದ ಆದ್ಯತೆಯನ್ನು ಪಡೆಯತೊಡಗಿತು. ಅಚ್ಚರಿಯ ಸಂಗತಿ ಎಂದರೆ ಇಡೀ ಆಡಳಿತಕ್ಕೆ ಸಂಬಂಧಿಸಿದ ಲೆಕ್ಕ-ಪತ್ರ-ದಾಖಲೆಗಳ 'ಡಬಲ ದಫ ಪದ್ಧತಿ ಜಾರಿಗೆ ಬಂದಿತು. ಮೈಸೂರು ಸಂಸ್ಥಾನ ಬ್ರಿಟಿಷರ ಹಿಡಿತಕ್ಕೆ ಬಂದ ನಂತರ ಮರಾಠಿ ಬದಲಿಗೆ ಇಂಗ್ಲಿಷ್ ಆ ಸ್ಥಾನವನ್ನು ಅಲಂಕರಿಸಿತು. ಇಂದು ಗಡಿಯಲ್ಲೂ, ಗಡಿಯೊಳಗೂ, ನಡುನಾಡಿನಲ್ಲೂ ಇಂಗ್ಲಿಷ್ ದರ್ಬಾರ್ ಇದೆ.

ಹೈದರಾಬಾದ್ ಕರ್ನಾಟಕದಲ್ಲೂ ಉರ್ದು, ಪರ್ಷಿಯನ್, ತೆಲಗು-ಮರಾಠಿ ಒತ್ತಡಗಳು ಇದ್ದವು. ಉರ್ದು ಶಿಕ್ಷಣದ ಮಾಧ್ಯಮವಾಗಿತ್ತು. ರಜಾಕಾರರ ಹಾವಳಿಯಂತೂ ಕನ್ನಡಿಗರು ವಲಸೆ ಹೋಗುವಂತೆ ಮಾಡಿತ್ತು. ಇಂದು ಗೋವಾ ರಾಜ್ಯದ ಕನ್ನಡಿಗರು ಇದನ್ನೇ ಅನುಭವಿಸುತ್ತಲಿದ್ದಾರೆ.

ಮದ್ರಾಸ ಕರ್ನಾಟಕದಲ್ಲಿ ತಮಿಳು-ಮಲೆಯಾಳ ಭಾಷೆಗಳ ಒತ್ತಡ ಕನ್ನಡಿಗರ ಮೇಲೆ ಇತ್ತು. ಇಂದಿಗೂ ಆ ಭಾಗದಲ್ಲಿ ಇಂಥ ಬಿಕ್ಕಟ್ಟು ಇರುವುದನ್ನು ಮರೆಯಲಾಗದು.

ಕೊಡಗು ಬ್ರಿಟಿಷರ ನೇರ ಆಡಳಿತಕ್ಕೆ ಒಳಪಟ್ಟು ಗುಲಾಮಗಿರಿಯನ್ನು ಅನುಭವಿಸಿದ್ದು ಇತಿಹಾಸವೇ ಆಗಿದೆ. ಕೊಡಗು ಜನ ಬಡ್ತಿ ಬಿಕ್ಕಟ್ಟುಗಳನ್ನು ಅಂದು ಎದುರಿಸಿದ್ದು, ಇಂದು ಈ ಭಾಷಾ ಬಿಕ್ಕಟ್ಟುಗಳನ್ನು ನೆನಪಿಸುತ್ತದೆ.

ಆದರೂ ಈ ಎಲ್ಲ ಘಟಕಗಳಲ್ಲಿ ಹರಿದಂಚಿ ಹೋದ ಕನ್ನಡಿಗರು, ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡು ಕನ್ನಡನಾಡಿನ ಏಕೀಕರಣಕ್ಕೆ ಟೊಂಕಕಟ್ಟಿ ನಿಂತದ್ದು ಗಮನಾರ್ಹ.

ಸ್ವಾತಂತ್ರ್ಯದ ನಂತರ ಕರ್ನಾಟಕ ರಾಜ್ಯವಾಗಿ ಸಂಘಟಿತಗೊಂಡು ನಂತರ ಗಡಿ ಸಮಸ್ಯೆಯನ್ನು ಬಗೆಹರಿಸಲು ಮಹಾರಾಷ್ಟ್ರ - ಮೈಸೂರು- ಕೇರಳ ಗಡಿವಿವಾದ ಅಧ್ಯಯನ ಆಯೋಗ ಅಂದರೆ ಮಹಾಜನ ಆಯೋಗದ ವರದಿಯಿಂದಲೂ ಗಡಿ ಸಮಸ್ಯೆ ಬಗೆಹರಿದಿಲ್ಲ ಮತ್ತು ಗಡಿಭಾಗದ ಸಂಕಟಗಳು ನಿವಾರಣೆಯಾಗಿಲ್ಲ.



ಗಡಿನಾಡಿನ ಬಿಕ್ಕಟ್ಟುಗಳನ್ನು ಪ್ರೊ, ಬರಗೂರು ರಾಮಚಂದ್ರಪ್ಪ ವರದಿಯು ಎಳೆ-ಎಳೆಯಾಗಿ ಬಿಚ್ಚಿಟ್ಟು, ಗಡಿ ಪ್ರದೇಶದ ಅಭಿವೃದ್ಧಿಗೆ ಪ್ರಾಶಸ್ತ್ಯ, ಪ್ರೋತ್ಸಾಹದಾಯಕ ೩೩ ಶಿಫಾರಸ್ಸುಗಳನ್ನು ಮಾಡಿದೆ. ಗಡಿ ಕನ್ನಡಿಗರ ಸಮಸ್ಯೆ ಅಧ್ಯಯನ ವರದಿ- ವಾಟಾಳ್ ನಾಗರಾಜ ವರದಿ, ಮುಖ್ಯಮಂತ್ರಿ ಚಂದ್ರು ಗಡಿ ವರದಿ ಮುಂತಾದವು ಗಡಿ ಪ್ರದೇಶ, ಗಡಿ ಕನ್ನಡಿಗರ ಬಿಕ್ಕಟ್ಟುಗಳ ಮೇಲೆ ಬೆಳಕು ಚೆಲ್ಲಿವೆ. ಅಚ್ಚ ಕನ್ನಡದ ಪ್ರದೇಶಗಳು ಕರ್ನಾಟಕಕ್ಕೆ ಸೇರದೆ ಉಳಿದಿವೆ ಮತ್ತು ಕನ್ನಡಿಗರು ಕನ್ನಡ ಅಸ್ಮಿತೆ - ಅಸ್ತಿತ್ವದಿಂದ ದೂರಾಗುತ್ತಲಿದ್ದಾರೆ. ಇಂದು ಇಂಗ್ಲಿಷ್ ಕನ್ನಡ ನಾಡಿನಲ್ಲಿ ದೊಡ್ಡ ಗಡಿಯನ್ನು ನಿರ್ಮಿಸಿದೆ. ಜಾಗತೀಕರಣವು ಕನ್ನಡನಾಡು ನುಡಿಯನ್ನು ಕಸಿದು ಕೊಳ್ಳುತ್ತಲಿದೆ. ಈ ಗಡಿಗಳನ್ನು ಸಹ ನಾವಿಂದು ದಾಟಬೇಕಿದೆ.

ಗಡಿ ಬಿಕ್ಕಟ್ಟುಗಳನ್ನು ದಾಟುವುದೆಂದರೆ ಕರ್ನಾಟಕ ಏಕೀಕರಣವನ್ನು ಗಟ್ಟಿಗೊಳಿಸುವುದು ಮತ್ತು ಕರ್ನಾಟಕ ಏಕೀಕರಣಕ್ಕೆ ಬದ್ಧತೆ ಹೊಂದಿ, ಸರ್ವರೂ ಕೂಡಿ ಬದುಕುವುದಾಗಿದೆ.

ಜಾಗತೀಕರಣ, ಉದಾರೀಕರಣದೊಂದಿಗೆ ಪೈಪೋಟಿಯೊಳಗಿರುವ ನಾವು, ಕನ್ನಡಿಗರಾಗಿ ಕರ್ನಾಟಕ ಏಕೀಕರಣಕ್ಕಾಗಿ ಯಾವುದೇ ಸ್ಪಷ್ಟವಾದ ಕ್ರಿಯಾ ಯೋಜನೆಯನ್ನು ಹಾಕಿಕೊಂಡಿಲ್ಲ. ಗಡಿ ಕನ್ನಡಿಗರ ಬದುಕಿನ ಬವಣೆಯನ್ನು ನಿವಾರಿಸುವಲ್ಲೂ ಕ್ರಿಯಾಶೀಲರಾಗಿಲ್ಲ. ಇದನ್ನೇ ಗಡಿ ಕನ್ನಡಿಗರ ಕಥೆ-ವ್ಯಥೆ, ಕನ್ನಡ ನುಡಿ, ಕನ್ನಡ ಗಡಿ ಜಾಗೃತಿ ಜಾಥಾ ಎಂಬ ಕೃತಿಯೊಳಗೆ ಹೀಗೆ ದಾಖಲಿಸಲಾಗಿದೆ. ಪ್ರತಿ ಜಿಲ್ಲಾ ಗಡಿ ಭಾಗಗಳಲ್ಲಿಯೂ ಒಂದಲ್ಲ ಒಂದು ರೀತಿಯ ಸಂಕಟಗಳು ಎದುರಾಗಿದ್ದು, ಸರ್ಕಾರ ಈ ಬಗ್ಗೆ ಇದುವರೆಗೂ ಹೆಚ್ಚಿನ ಕಳಕಳಿ ತೋರಿರುವುದು ಕಂಡುಬಂದಿಲ್ಲ. ಈ ವಿಷಯವಾಗಿ, ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯದ ನಂತರವೂ ಸಾಮಾಜಿಕ ಕಳಕಳಿಯುಳ್ಳ ಜನ ಚಿಂತನೆಯನ್ನು ಮಾಡುತ್ತಲೇ ಬಂದಿದ್ದಾರೆ. ಸರ್ಕಾರ ಅಂಗೀಕರಿಸಿದ ವರದಿಗಳಿದ್ದರೂ ಸಹ

ಸರ್ಕಾರ ಗಡಿನಾಡು ನುಡಿ ಸಂಸ್ಕೃತಿಗಳ ಬಗ್ಗೆ ಯಾವುದೇ ಕಾಳಜಿ ವಹಿಸಿಲ್ಲ, ದಿಟ್ಟ ಕ್ರಮ ಕೈಕೊಂಡಿಲ್ಲ ಎಂಬುದು ಕಟುಸತ್ಯ.

ಒಂದು ವೇಳೆ ಸರ್ಕಾರ ವರದಿಗಳ ಶಿಫಾರಸ್ಸುಗಳನ್ವಯ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರೆ, ಇಂದು ಗಡಿ ಭಾಗದ ಕನ್ನಡಿಗರು ಶಿಕ್ಷಣದಿಂದ, ಉದ್ಯೋಗದಿಂದ, ತಮ್ಮದೇ ಆದ ಮಾತೃಭಾಷೆಯೊಳಗೆ ಮಾತನಾಡುವು ದರಿಂದ ವಂಚಿತರಾಗಿ, ಬೇರೆ ಬೇರೆ ಪ್ರದೇಶಗಳಿಗೆ ವಲಸೆ ಹೋಗುವ ಪರಿಸ್ಥಿತಿ ಬರುತ್ತಿರಲಿಲ್ಲ. ಗಡಿಭಾಗದ ಜನರು ಉದ್ಯೋಗಕ್ಕಾಗಿ, ಶಿಕ್ಷಣಕ್ಕಾಗಿ, ಗಡಿರಾಜ್ಯದ ಪ್ರದೇಶಗಳಿಗೆ ವಲಸೆ ಹೋಗಿ ನೆಲೆಯಾಗಿ ನಿಂತಿದ್ದರೂ, ಅವರು ಕನ್ನಡಿಗರೆಂದು ಇಲ್ಲದ ತ್ರಾಸು, ಒಕ್ಕಲೆಬ್ಬಿಸುವುದು ಗಡಿಕನ್ನಡಿಗರ ದೊಡ್ಡ ಬಿಕ್ಕಟ್ಟು ಆಗಿದೆ. ಕಾರಣ ಸರ್ಕಾರವು ಈ ಗಡಿಕನ್ನಡಿಗರ ರಕ್ಷಣೆಗೆ ವಿಶೇಷ ಕಾಳಜಿ ವಹಿಸುವ ಕಾರ್ಯತಂಡವನ್ನು ರಚಿಸುವ



ಅಗತ್ಯವಿದೆ. ಅದರಂತೆ ಸರ್ಕಾರವು ಗಡಿಭಾಗದ ಗ್ರಾಮ ಪಂಚಾಯತಿ, ಪಟ್ಟಣ ಪಂಚಾಯತಿಗಳಿಗೆ ವಿಶೇಷ ಅನುದಾನ ಕೊಡಬೇಕಲ್ಲದೆ ಕೆಲವು ಯೋಜನೆಗಳ ನಿಯಮಾವಳಿಗಳಲ್ಲಿಯೂ ರಿಯಾಯತಿಯನ್ನು ಕೊಡುವುದು ಒಳ್ಳೆಯದು. ಎಲ್ಲಕ್ಕೂ ಮುಖ್ಯವಾದದ್ದು ಕನ್ನಡಿಗರು, ತಮ್ಮತನವನ್ನು ಗಟ್ಟಿಯಾಗಿ ನಿರೂಪಿಸುವಲ್ಲಿ ಹಿಂದುಳಿಯಬಾರದು.

ಕರ್ನಾಟಕ ಏಕೀಕರಣವನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಹಮ್ಮಿಕೊಂಡಿರುವ ಕರ್ನಾಟಕ ಏಕೀಕರಣಕ್ಕಿರುವ ಪ್ರಾದೇಶಿಕ ಅಸಮಾನತೆ ಸವಾಲು ಮತ್ತು ಪರಿಹಾರ, ಕಾವೇರಿಯಿಂದಮಾ ಗೋದಾವರಿ: ಒಂದು ಅವಲೋಕನ, ಗಡಿನಾಡ ಪ್ರದೇಶಗಳು: ಬಿಕ್ಕಟ್ಟುಗಳು ಎಂಬ ವಿಷಯಗಳ ಈ ಗೋಷ್ಠಿಯು, ಜನಮನದೊಳಗಿರುವ ಅನೇಕ ಸಂಶಯ-ಬಿಕ್ಕಟ್ಟುಗಳನ್ನು ಪರಿಹರಿಸುವ ಮತ್ತು ಕರ್ನಾಟಕದ ಎಲ್ಲ ಪ್ರದೇಶಗಳು ಸಮಾನತೆಯನ್ನು ಹೊಂದುವ ಸದಾಶಯ ಹೊಂದಿದೆ. ಈ ನಿಟ್ಟಿನಲ್ಲಿ ಮಂಡಿತವಾದ ಎಲ್ಲ ಪ್ರಬಂಧಗಳು ತಮ್ಮದೇ ಆದ ನಿಲುವುಗಳನ್ನು ಪ್ರಕಟಿಸುವಲ್ಲಿ ಯಶಸ್ವಿಯಾಗಿವೆ.

**ಗೋಷ್ಠಿ - ೩**

## ಅಲಕ್ಷಿತ ಜನಸಮುದಾಯಗಳು

# ವಿಶೇಷ ಚೇತನರು

**-ಜಿ.ಕೆ. ಮಹಾಂತೇಶ್**

ಇಂದಿನ ಗೋಷ್ಠಿಯ ವಿಷಯ ಅಲಕ್ಷಿತ ಜನಸಮುದಾಯಗಳು, ಅದರಲ್ಲಿ ವಿಶೇಷ ಚೇತನರು. ಇದನ್ನು ನಾನು ಮೂರು ಘಟ್ಟಗಳಲ್ಲಿ ವಿವರಿಸಲು ಇಚ್ಛಿಸುತ್ತೇನೆ. ಹಿಂದಿನ ಕಾಲದಲ್ಲಿ ಇವರ ಜೀವನ ಸ್ಥಿತಿ ಹೇಗಿತ್ತು? ಈಗ ಹೇಗಿದೆ? ಹಾಗೂ ಮುಂದೆ ಹೇಗಿರಬೇಕೆಂದು ನಾವು ಬಯಸುತ್ತೇವೆ? ನಾನು ಒಂದು ಸಣ್ಣ ಕವನದೊಂದಿಗೆ ಪ್ರಾರಂಭಿಸುತ್ತೇನೆ.

ತೆರೆಯಿರಿ ನಿಮ್ಮ ಅಂತರಂಗದ ಕಣ್ಣುಗಳನ್ನು

ತೆರೆಸಿರಿ ಸಮಾಜದ ಒಳಗಣ್ಣನ್ನು

ನೀಡಿರಿ ವಿಕಲಚೇತನರಿಗೆ ಆತ್ಮವಿಶ್ವಾಸವನ್ನು

ಶುಚಿಗೊಳಿಸಿರಿ ಮಲಿನಗೊಂಡಿರುವ ಮಡಿವಂತರ ಮನಸ್ಸುಗಳನ್ನು

ನೀಡಿರಿ ವಿಕಲಚೇತನರಿಗೆ ಸದವಕಾಶಗಳನ್ನು

ತುಂಬಿರಿ ವಿಕಲಚೇತನರಿಗೆ ಸ್ವಾಭಿಮಾನದ ಕಿಚ್ಚನ್ನು

ನಿರ್ವಹಿಸಿರಿ ಒಂದು ಆರೋಗ್ಯವಂತ ಸಮಾಜವನ್ನು

ಕಟ್ಟಿರಿ ಒಂದು ಸುಂದರವಾದ ನಾಡನ್ನು

ತೀರಿಸಿರಿ ನಾಡಿನ ಋಣವನ್ನು

ಹಿಂದಿನ ಕಾಲದಲ್ಲಿ ಈ ಸಮಾಜವು ವಿಕಲಚೇತನರನ್ನು ನೋಡುವ ದೃಷ್ಟಿ ಕೋನವೇ ವಿಭಿನ್ನವಾಗಿತ್ತು. ನಿಜವಾಗಿಯೂ ಅವರು ಪ್ರತಿಯೊಂದು ಅವಕಾಶ ಗಳಿಂದಲೂ ವಂಚಿತರಾಗಿದ್ದರು. ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಅವರನ್ನು ಗುರುತಿಸುವವರೇ ಇರಲಿಲ್ಲ. ಒಂದು ಮನೆಯಲ್ಲಿ ವಿಕಲ ಚೇತನ ವ್ಯಕ್ತಿ ಜನಿಸಿದನೆಂದರೆ, ಇಡೀ ಸಮಾಜವು ಆ ಮನೆಯವರನ್ನು ನೋಡುವ ರೀತಿಯೇ ಬೇರೆಯಾಗಿರುತ್ತಿತ್ತು. ಇದು ಆ ಕುಟುಂಬಕ್ಕಾದ ಅವಮಾನವಾದರೆ, ಇನ್ನು ಆ ಮನೆಯಲ್ಲಿ ಜನಿಸಿದ ಅಂಗವಿಕಲ ಮಗುವಿನ ಯಾತನೆಯನ್ನು ಕೇಳುವರೇ ಇರಲಿಲ್ಲ. ಕೆಲವರಂತೂ ವಿಕಲಚೇತನರನ್ನು ನಾಲ್ಕು ಗೋಡೆಗಳ ಮಧ್ಯೆ ಕೈ ಕಾಲುಗಳಿಗೆ ಸರಪಳಿ ತೊಡಿಸಿ, ಒಂದೇ ಕಡೆ ಕೂಡಿ ಹಾಕುತ್ತಿದ್ದರು. ಅವರಿಗೆ ಸರಿಯಾದ ಆಹಾರ, ಬಟ್ಟೆಯನ್ನು ನೀಡದೆ ಹಿಂಸಿಸುತ್ತಿದ್ದರು. ಮಾನವೀಯ ಮೌಲ್ಯವನ್ನೇ ಮರೆತು ಸಭೆ, ಸಮಾರಂಭಗಳಿಗೆ ಕರೆದೊಯ್ಯುತ್ತಿರಲಿಲ್ಲ. ಅಂಗವಿಕಲ ಮಕ್ಕಳು ಸಾಮಾನ್ಯ ಮಕ್ಕಳ ಜೊತೆ ಆಟವಾಡಲು ಹೋದರೆ, ಜೊತೆಗೆ ಬೆರೆಯಲು ಬಿಡುತ್ತಿರಲಿಲ್ಲ. ಅಲ್ಲದೆ ಅವರನ್ನು ಕುಂಟ, ಕುರುಡ, ಹುಚ್ಚ, ಕಿವುಡ,

ಮೂಕ ಎಂದು ಗೇಲಿ ಮಾಡುತ್ತಿದ್ದರು. ವಿಕಲಚೇತನರಿಗೆ, ಅದರಲ್ಲೂ ಹಳ್ಳಿಗಾಡು ಪ್ರದೇಶದಲ್ಲಿನ ವಿಕಲಚೇತರಿಗೆ ಎಲ್ಲಾ ಅವಕಾಶಗಳೂ ಗಗನ ಕುಸುಮವಾಗಿತ್ತು.



ಕುಷ್ಠರೋಗ ಪೀಡಿತ ವಿಕಲಚೇತನರನ್ನು ಕುತ್ತಿಗೆಗೆ ಗಂಟೆಯನ್ನು ಕಟ್ಟಿ ಊರಿನಿಂದಾಚೆ ಬಿಡುತ್ತಿದ್ದರು. ಅಕಸ್ಮಾತ್ ಅವರು ಊರ ಕಡೆ ಬಂದಾಗ, ಗಂಟೆ ಸದ್ದು ಕೇಳಿಸಿಕೊಂಡು ಮನೆ ಬಾಗಿಲು ಮುಚ್ಚುತ್ತಿದ್ದರು. ಮನೆಯಲ್ಲಿ ಅಂಗವಿಕಲ ಮಗು ಜನಿಸಿದಾಗ, “ಇದು ನನ್ನ ಹಳೆಯ ಜನ್ಮದ ಕರ್ಮ ಯಾ ಶಾಪ” ಎಂದೆಲ್ಲ ನೊಂದುಕೊಳ್ಳುತ್ತಿದ್ದರು. ಅಲ್ಲದೆ 'ಗಿಣಿ ಶಾಸ್ತ್ರ', 'ಪಂಚಾಂಗ', ಮಠ ಮಂದಿರಗಳ ಮೊರೆ ಹೋಗುತ್ತಿದ್ದರು.

ವಿಕಲಚೇತನರ ಗೋಳಿನ ಕಥೆಯೇ ಒಂದೆಡೆಯಾದರೆ, ಆ ಕುಟುಂಬದ ವ್ಯಥೆ ಇನ್ನೊಂದು ತರ. ಅವಿಭಕ್ತ ಕುಟುಂಬದಲ್ಲಿ ಇಂತಹ ಘಟನೆಯಾದರೆ ಮನೆಯ ಇತರರು ಅಂಗವಿಕಲ ವ್ಯಕ್ತಿಯ ಮಾತಾ-ಪಿತರನ್ನು ಕುಟುಂಬ ತೊರೆದು ಹೊರ ಹೋಗುವಂತೆ ಆದೇಶಿಸುತ್ತಿದ್ದರು. ಕೆಲವೊಂದು ಬಾರಿ ವಿಕಲಚೇತನ ಮಗುವಿನ ತಂದೆ ಆ ಕುಟುಂಬವನ್ನು ತೊರೆದು ಬೇರೊಂದು ಮದುವೆ ಮಾಡಿಕೊಳ್ಳುತ್ತಿದ್ದರು. ಈಗಲು ಇಂತಹ ವ್ಯವಸ್ಥೆ ಆಚರಣೆಯಲ್ಲಿದೆ. ಕೆಲವೊಂದೆಡೆ, ಇಂತಹ ಕುಟುಂಬಗಳು ಸಮಾಜದ ಯಾವುದೇ ಕಾರ್ಯಕ್ರಮಗಳಲ್ಲಿ ಭಾಗಿಯಾಗದೆ, ತಾವು ಮಾನಸಿಕವಾಗಿ ಕುಗ್ಗಿ ಹೋಗುತ್ತಿದ್ದರು. ಇತರರೊಡನೆ ಬೆರೆಯಲು ಹಿಂಜರಿಯುತ್ತಿದ್ದರು. ಅವರ ನ್ಯೂನತೆಯನ್ನು ಹಿಡಿದು ಹೆಸರಿಸುತ್ತಿದ್ದರು, ಕುಂಟಿ, ಕುರುಡಿ, ಮೂಗ ಹೀಗೆ ನಾನಾ ರೀತಿಯಲ್ಲಿ ಕರೆಯುತ್ತಿದ್ದರು. ಸಮಾಜದಲ್ಲಿ ವಿಕಲಚೇತನರಾಗಿ ಹುಟ್ಟಿದರೆ ಸಮಾಜಕ್ಕೆ ಭಾರ ಮತ್ತು ಹೊರೆಯೆಂದು ತಿಳಿದಿರುವ ಸಮಾಜದಲ್ಲಿ ಅವಕಾಶ ವಂಚಿತರು ಎನ್ನುವ ಕಾಲ ಹೊರಟುಹೋಗಿದೆ. ಇತ್ತೀಚಿನ ದಿನಗಳಲ್ಲಿ ಸಮಾಜದಲ್ಲಿ ಮಾದರಿಯಾದ ಸಂಗೀತ ಬ್ರಹ್ಮ, ನಾದಕೋಗಿಲೆ, ಪಂಡಿತ ಪಂಚಾಕ್ಷರಿ ಗಾನಯೋಗಿ 'ಪುಟ್ಟರಾಜ ಗವಾಯಿ' ಅವರು ಪ್ರಪಂಚದ ಜನರನ್ನು ತಮ್ಮತ್ತ ಸೆಳೆದು, ಮತ್ತೊಬ್ಬರ ಕಣ್ಣಲ್ಲಿ ದೇವರ ಪ್ರತಿರೂಪವಾಗಿ ತಾಳಿದ ಇವರ ಕೊಡುಗೆ ಅಪಾರ. ಸಂಗೀತ ಪ್ರೇಮಿಗಳ ಕಣ ಕಣದಲ್ಲೂ ತುಂಬಿಕೊಂಡಿರುವ ಇವರು ಅಜರಾಮರ. ಇಂತಹವರ ಸ್ಫೂರ್ತಿ ಪಡೆದು ಸಾಹಸಮಯ ಸಾಧನೆಯ ಸಾಲಿನಲ್ಲಿ ಸಾಗುತ್ತಿರುವ ನಮ್ಮ ಪಯಣ ಸುಂದರ. ಇಂಥ ಸಾಲಿಗೆ ಸೇರಿದ ವ್ಯಕ್ತಿಗಳು ದೃಷ್ಟಿಹೀನರಾಗಿದ್ದರೂ “ಲೂಯಿಬ್ರೈಲ್” ಅವರ ಲಿಪಿ ಬರವಣಿಗೆ ಅವರ ಬೆರಳಿನ ಆಶಾಕಿರಣ. ಅಂಧರ ಬಾಳಿಗೆ ಬೆಳಕು ನೀಡಿದ ಚೇತನ, ಜ್ಞಾನ ಭಂಡಾರ ಅಂಧರ ಜ್ಞಾನಾಭಿವೃದ್ಧಿಗೆ ಕಾರಣ. ಬ್ರಿಟನ್ ಪ್ರಧಾನಿ ಟೋನಿಬ್ಲೇರ್ ಅವರ ಮಂತ್ರಿ ಮಂಡಲದಲ್ಲಿ ಸಂಪೂರ್ಣ ಅಂಧರಾದ ಡೇವಿಡ್ ಬ್ಲಾಂಕೆಟ್ ಗೃಹ ಖಾತೆ ನಿರ್ವಹಿಸುತ್ತಿದ್ದರೆಂದರೆ ನಂಬಲು ಸಾಧ್ಯವೇ? ಇಂತಹವರಿಂದ ಸ್ಫೂರ್ತಿ ಪಡೆದ ವಿಶೇಷ ಚೇತನರು ಸಾಧನೆಯ ದಾರಿಯಲ್ಲಿ ಸಾವಿರಾರು ಸವಾಲುಗಳು

ಎದುರಾದರೇನು, ಹಿಂದೆ ಗುರು, ಮುಂದೆ ಗುರಿ, ಛಲವಿಟ್ಟು ಮುನ್ನಡೆದರೆ ನಾವಿಡುವ ಪ್ರತಿಯೊಂದು ಹೆಜ್ಜೆ ಗೆಲುವಿನ ಮೆಟ್ಟಿಲು. ಆದ್ದರಿಂದ ಕೈಲಾಗದು ಎಂದು ಕೈಕಟ್ಟಿ ಕುಳಿತರೆ ಇವತ್ತಿನ ಈ ೨೧ನೇ ಶತಮಾನದಲ್ಲಿ ವಿಶೇಷ ಚೇತನರು ಇಷ್ಟೆಲ್ಲಾ ಸಾಧನೆಯನ್ನು ಮಾಡಲು ಸಾಧ್ಯವಾಗುತ್ತಿರಲಿಲ್ಲ. ಮನುಷ್ಯನಿಗೆ ಅಸಾಧ್ಯವಾದದ್ದು ಯಾವುದೂ ಇಲ್ಲ.



ವಿಕಲ ಚೇತನರ ಇಂದಿನ ಪರಿಸ್ಥಿತಿಯನ್ನು ವಿಶ್ಲೇಷಿಸುವುದಾದಲ್ಲಿ ಅವರ ಪ್ರತಿಭೆಗೆ ಮಿತಿ ಇಲ್ಲ. ಆಸೆಗೆ ಕೊನೆ ಇಲ್ಲ. ಸಾಧನೆಗೆ ಏನೂ ಕೊರತೆ ಇಲ್ಲ. ಇವರನ್ನು ಗುರುತಿಸುವ ರೀತಿಯೇ ಬದಲಾಗಿದೆ. ವಿಕಲಚೇತನರನ್ನು ವಿಶೇಷ ಚೇತನರು ಎಂದು ಕರೆಯುತ್ತೇವೆ. ಇವರ ಸಲುವಾಗಿ ಹಲವು ಅಧಿ ನಿಯಮಗಳು ಜಾರಿಗೆ ಬಂದಿವೆ. ಇತ್ತೀಚೆಗಿನ ಉದಾಹರಣೆಗಳಲ್ಲಿ, ಚಿಕ್ಕ ವಯಸ್ಸಿನಲ್ಲಿ ಕಣ್ಣು ಕಳೆದುಕೊಂಡು ಅಂಧಳಾದ 'ರಜನಿ'ಯವರು ಅಂಧರಲ್ಲಿ ಮೊದಲ 'ಚಾರ್ಟೆಡ್ ಅಕೌಂಟೆಂಟ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.' ರಾಜ್ಯದಲ್ಲೇ ಪ್ರಪ್ರಥಮವಾಗಿ ಅಂಧ ವ್ಯಕ್ತಿ ಕನ್ನಡಿಗ ಮೆ ಸೂರಿನವರೇ ಆದ ಶ್ರೀ ಕೆಂಪಹೊನ್ನಯ್ಯ ಐ.ಎ.ಎಸ್. ಪಾಸ್ ಮಾಡಿರುವುದು ನಮ್ಮ ನಿಮ್ಮೆಲ್ಲರಿಗೂ ಹೆಮ್ಮೆಯ ವಿಷಯ. ಶೇಖರ್ ನಾಯಕ್ “ಇಂಡಿಯನ್ ಬ್ಲೈಂಡ್ ಕ್ರಿಕೆಟ್” ನಾಯಕನಾಗಿ 'ಪದ್ಮಶ್ರೀ' ಮತ್ತು 'ರಾಜ್ಯೋತ್ಸವ' ಪ್ರಶಸ್ತಿ ಪಡೆದಿರುತ್ತಾರೆ. ವಿಶೇಷ ಚೇತನ ಹೆಣ್ಣುಮಕ್ಕಳಿಗೆ ಸ್ಫೂರ್ತಿಯಾದ 'ಅಶ್ವಿನಿ ಅಂಗಡಿ' ಅವರು ಅಂತಾರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿರುತ್ತಾರೆ. ಎಲ್ಲರಿಗೂ ಎಲ್ಲವನ್ನೂ ಸಾಧಿಸಲು ಸಾಧ್ಯ. ಛಲವೊಂದಿದ್ದರೆ ಸಾಕು, ಚಿಂತೆ ಏಕೆ ಬೇಕು? ಕೊರಗಿ ಸೊರಗುವುದು ಸಾಕು, ಸಮಾಜಕ್ಕೆ ಏನಾದರೂ ಕೊಡುಗೆ ನೀಡಬೇಕು. ಸಮಾಜಕ್ಕೆ ಭಾರವಾಗಿ ಬದುಕುವುದು ಸಾಕು, ಸಮಾಜದಲ್ಲಿ ವಿಶೇಷ ಸಾಧನೆಯತ್ತ ಮುಂದುವರಿಯಬೇಕು. ಆತ್ಮವಿಶ್ವಾಸ, ದೃಢಸಂಕಲ್ಪ, ಭಾವನೆಯ ಅಂಗಳದಲ್ಲಿ ಪ್ರೀತಿ ವಾತ್ಸಲ್ಯ, ಸ್ನೇಹಬಾಂಧವ್ಯ, ದಿವ್ಯದೃಷ್ಟಿ ಒಂದಿದ್ದರೆ ಭವ್ಯ ಭಾರತದಲ್ಲಿ ನಮ್ಮ ಕನಸು ವಿಶೇಷ ಯೋಜನೆಯತ್ತ ಸಾಗಬೇಕು. ಬೇಡ ತಾರತಮ್ಯದ ಅಂತರ, ಸಮಾಜದಲ್ಲಿ ಇರಲಿ ಸ್ನೇಹ ಭಾವ ನಿರಂತರ. ಹೆಲನ್ ಕೆಲ್ಲರ್‌ರವರು ವಿಕಲ ಚೇತನರ ಬಾಳಿನ ಬೆಳಕಾಗಿ, ಇವರ ಕೊಡುಗೆ ಅಮರವಾಗಿದೆ. ಇವರಿಂದ ಪ್ರಭಾವಿತರಾಗಿರುವ ನಾವೆಲ್ಲ ಈಗಿನ ಸಮಾಜದ ಮುಖ್ಯವಾಹಿನಿಗೆ ಬರಲು ಸ್ಫೂರ್ತಿ ಮತ್ತು ನಮ್ಮೆಲ್ಲ ಸಾಧನೆಯ ಕೀರ್ತಿಗೆ ಇಂದಿನ ಸಮಾಜದಲ್ಲಿ ವಿಕಲಚೇತನರ ಕೊಡುಗೆ ಅಪಾರವಾಗಿದೆ. ಡಾ. ಡೇವಿಡ್ ಹಾರ್ಟ ಮಾನ್ ಅವರು ವಿಶ್ವದಲ್ಲೇ ಪ್ರಪ್ರಥಮ ದೃಷ್ಟಿಹೀನ ಡಾಕ್ಟರ್ ಆಗಿ ಸಮಾಜಕ್ಕೆ ಮಾದರಿ ಆದರು.

ವಿಶ್ವ ಆರೋಗ್ಯ ಸಂಸ್ಥೆ (WHO) ಮತ್ತು ವಿಶ್ವಬ್ಯಾಂಕ್ (WB) ಇವರು ೨೦೧೧ ರಲ್ಲಿ ಪ್ರಕಟಿಸಿದ ವಿಶ್ವ ವಿಕಲಚೇತನರ ವರದಿಯ ಪ್ರಕಾರ, ವಿಶ್ವದಲ್ಲಿ ೧೦೦ ಕೋಟಿ ಅಂಗವಿಕಲರಿದ್ದಾರೆ. ಇವರು ವಿಶ್ವದ ಒಟ್ಟು

ಜನಸಂಖ್ಯೆಯಲ್ಲಿ ಶೇ. ೧೫ರಷ್ಟು ಇವರಲ್ಲಿ ಶೇ.೭೦ರಷ್ಟು ವಿಕಲಚೇತನರು ಅಭಿವೃದ್ಧಿಶೀಲ ದೇಶಗಳಲ್ಲಿ ವಾಸಿಸುತ್ತಾರೆ. ಅವರಲ್ಲಿ ಶೇ ೮೦ ರಷ್ಟು ವಿಕಲಚೇತನರು ಕಡುಬಡತನವನ್ನು ಅನುಭವಿಸುತ್ತಿದ್ದಾರೆ.

ಈ ಮೇಲ್ಕಂಡ ಅಂಕಿ ಅಂಶಗಳು ಭಾರತಕ್ಕೆ ಹೊರತಲ್ಲ. ಭಾರತದ ೨೦೧೧ ರ ಜನಗಣತಿಯ ಪ್ರಕಾರ ನಮ್ಮ ದೇಶದಲ್ಲಿ ವಿಕಲಚೇತನರು ದೇಶದ ಒಟ್ಟು ಜನಸಂಖ್ಯೆಯ ಶೇ.೨.೧ರಷ್ಟು ಇರುತ್ತಾರೆ, ಸ್ವಯಂಸೇವಾ ಸಂಸ್ಥೆಗಳು ವಿಕಲ ಚೇತನರಿಗಾಗಿ ನಡೆಸುವ



ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಕೈಗೊಂಡ ಲಘು ಅಧ್ಯಯನದ ಪ್ರಕಾರ ನಮ್ಮ ದೇಶದಲ್ಲಿ ಶೇ. ೫ ರಿಂದ ೬ ರಷ್ಟು ವಿಕಲಚೇತನರು ಇದ್ದಾರೆ. ಇವರಲ್ಲಿ ಶೇ ೭೦ ರಷ್ಟು ಗ್ರಾಮೀಣ ಪ್ರದೇಶದಲ್ಲಿ ವಾಸಿಸುತ್ತಿದ್ದು ಇವರಿಗೆ ಕನಿಷ್ಟ ಪ್ರಮಾಣ ಪುನಶ್ಚೇತನ ಕಾರ್ಯಕ್ರಮಗಳು ಲಭ್ಯವಿಲ್ಲ. ಇವರಲ್ಲಿ ಶೇ ೮೨ ರಷ್ಟು ವಿಕಲಚೇತನರು ಬಡತನ ರೇಖೆಗಿಂತ ಕಡಿಮೆಯಿದ್ದು ಕಡುಬಡತನದ ಶೋಚನೀಯ ಪರಿಸ್ಥಿತಿಯನ್ನು ಅನುಭವಿಸುತ್ತಿದ್ದಾರೆ.

ವಿಶ್ವವ್ಯಾಪಿ ಅಂಗವಿಕಲರ ಚಳುವಳಿಯ ಫಲವಾಗಿ ಡಿಸೆಂಬರ್ ೧೩ ೨೦೦೬ರಲ್ಲಿ ವಿಶ್ವಸಂಸ್ಥೆಯ ಮಹಾಸಭೆಯು ಅಂಗವಿಕಲ ವ್ಯಕ್ತಿಗಳ ಹಕ್ಕುಗಳಿಗೆ ಸಂಬಂಧಪಟ್ಟ ವಿಶ್ವ ಸಂಸ್ಥೆಯ ಒಡಂಬಡಿಕೆಯನ್ನು ಅನುಮೋದಿಸಿತು. ಮಾರ್ಚ್ ೩೦, ೨೦೦೭ರಲ್ಲಿ ನಮ್ಮ ಭಾರತ ದೇಶವು ಒಡಂಬಡಿಕೆಗೆ ಸಹಿ ಮಾಡಿ ಅಕ್ಟೋಬರ್ ೧, ೨೦೦೭ರಲ್ಲಿ ಇದನ್ನು ಅನುಮೋದಿಸಿತು.

ಮೇ ೩, ೨೦೦೮ರಿಂದ ವಿಶ್ವಸಂಸ್ಥೆಯ ಒಡಂಬಡಿಕೆ ಜಾರಿಗೆ ಬಂದಿತು. ಇದರ ಪರಿಣಾಮವಾಗಿ ನಮ್ಮ ದೇಶದಲ್ಲಿ ಚಾಲ್ತಿ ಇದ್ದ ೧೯೯೫ರ ಅಂಗವಿಕಲರ ಅಧಿನಿಯಮವನ್ನು ರದ್ದುಗೊಳಿಸಿ ಅಂಗವಿಕಲ ವ್ಯಕ್ತಿಗಳ ಹಕ್ಕು ಅಧಿನಿಯಮ ೨೦೧೬ರನ್ನು ಡಿಸೆಂಬರ್ ತಿಂಗಳಲ್ಲಿ ನಮ್ಮ ಸಂಸತ್ ಪಾಸುಮಾಡಿತು.

ಅಂಗವಿಕಲತೆಯನ್ನು ಅರ್ಥಮಾಡಿಕೊಳ್ಳಲು ಸಮಾಜಶಾಸ್ತ್ರದ ಕೆಲವು ಸಿದ್ಧಾಂತಗಳನ್ನು ವಿಶ್ಲೇಷಿಸುವುದು ಅನಿವಾರ್ಯ. ಇವುಗಳನ್ನು ಸಾಮಾನ್ಯವಾಗಿ ಅಂಗವಿಕಲತೆಗೆ ಅನುಗುಣವಾಗಿ ನಿರೂಪಿಸಲಾಗಿದೆ. ಈ ಸಿದ್ಧಾಂತಗಳು ಕೆಳಕಂಡಂತಿವೆ.

-- DEFECT THEORY OF DISABILITY ಇದರ ಪ್ರಕಾರ ಅಂಗ ವಿಕಲತೆಯು ಒಂದು ತರಹದ ದೋಷ, ಈ ದೋಷವನ್ನು ಸರಿಪಡಿಸಬೇಕು. ಇಲ್ಲದಿದ್ದರೆ ಅಂಗವಿಕಲ ವ್ಯಕ್ತಿಗಳು ಸಾಮಾನ್ಯ ಜೀವನವನ್ನು ನಡೆಸಲು ಸಾಧ್ಯವಿಲ್ಲ.

--DIVERSITY THEORY OF DISABILITY ಇದರ ಪ್ರಕಾರ ಅಂಗವಿಕಲತೆಯು ಒಂದು ವೈವಿಧ್ಯತೆ. ನಾವು ಮಾನವ ಸಮಾಜದಲ್ಲಿ ನೂರಾರು ವೈವಿಧ್ಯತೆಗಳನ್ನು ಕಾಣುತ್ತೇವೆ ಮತ್ತು ಹೆಚ್ಚಿನ ಪ್ರಕಾರ ಅವುಗಳನ್ನು ಸ್ವೀಕರಿಸುತ್ತೇವೆ. ಅದೇ ರೀತಿ ಅಂಗವಿಕಲತೆಯು ಕೂಡ ಮಾನವ ಸಮಾಜದ ಒಂದು ವೈವಿಧ್ಯತೆ ಅದನ್ನು ಬೇಷರತ್ತು ಸ್ವೀಕರಿಸಬೇಕು.

-ಅಂಗವಿಕಲತೆಯ ಸಾಮಾಜಿಕ ಮಾದರಿ (SOCIAL MODEL OF DISABIL- ITY) ಯ ಪ್ರಕಾರ ಅಂಗವಿಕಲತೆ ಅಡಚಣೆಯಲ್ಲ, ಆದರೆ ನಕಾರಾತ್ಮಕ ದೃಷ್ಟಿಕೋನ. ಸಂಸ್ಥೆ ಆಧಾರಿತ ಅಡಚಣೆ ಮತ್ತು ಪ್ರಾಕೃತಿಕ ಅಥವಾ ರಚನಾತ್ಮಕ ಅಡಚಣೆಗಳಿಂದ ಅಂಗವಿಕಲರು ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ಧಾರ್ಮಿಕ ಮತ್ತಿತರ



ಕ್ಷೇತ್ರಗಳಲ್ಲಿ ಸಮಾನವಾಗಿ ಭಾಗವಹಿಸಲಾರರು. ಆದ್ದರಿಂದ ನಮ್ಮ ಪ್ರಯತ್ನವು ಈ ಅಡೆತಡೆಗಳನ್ನು ನಿರ್ನಾಮಗೊಳಿಸಿ ಅಂಗವಿಕಲರಿಗೆ ತಡೆ ರಹಿತ ವಾತಾವರಣವನ್ನು ನಿರ್ಮಿಸಿದಲ್ಲಿ ಅಂಗವಿಕಲರು ತಮ್ಮ ಹಕ್ಕುಗಳನ್ನು ಅನುಭವಿಸುವುದರ ಜೊತೆಗೆ ಕರ್ತವ್ಯವನ್ನು ಕೂಡ ನಿರ್ವಹಿಸಬಲ್ಲರು.

ವಿಕಲಚೇತನರು ಮುಖ್ಯ  ವಾಹಿನಿಯಲ್ಲಿ ಸಾಮಾನ್ಯರಂತೆ ಜೀವಿಸಲು ಅನುವಾಗುವಂತೆ ಎಲ್ಲಾ ರೀತಿಯ ಅಡೆತಡೆರಹಿತ ಸೌಲಭ್ಯ ಅಥವಾ ನೆರವನ್ನು ಒದಗಿಸುವುದು ಸರ್ಕಾರದ ಹಾಗೂ ಸಂಘ ಸಂಸ್ಥೆಗಳ ಜವಾಬ್ದಾರಿಯಾಗಿರುತ್ತದೆ. ಹೆಚ್ಚಿನ ವಿಕಲಚೇತನರು ಗ್ರಾಮೀಣ ಪ್ರದೇಶದಲ್ಲಿ ವಾಸವಿದ್ದು, ಶೈಕ್ಷಣಿಕವಾಗಿ ಹಿಂದುಳಿದವರಾಗಿರುತ್ತಾರೆ. ಇದರಿಂದ ಹೆಚ್ಚಿನವರು ಸೌಲಭ್ಯಗಳಿಂದ ವಂಚಿತರಾಗುವ ಸಂಭವವಿರುತ್ತದೆ. ಈ ಹಿನ್ನೆಲೆಯಲ್ಲಿ ಸರ್ಕಾರದಿಂದ ನೀಡಲಾಗುವ ಸೌಲಭ್ಯಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು ಕೂಡಾ ಸಂಬಂಧಿಸಿದ ಇಲಾಖೆಯ ಹೊಣೆಯಾಗಿದೆ. ವಿಕಲಚೇತನರನ್ನು ಗುರುತಿಸುವಿಕೆ, ಅಂಗವಿಕಲತೆಯನ್ನು ತಡೆಗಟ್ಟುವಿಕೆ, ಸಾಮಾಜಿಕ ಭದ್ರತೆ, ಸೌಲಭ್ಯಗಳನ್ನು ನೀಡುವುದು ಹಾಗೂ ಪುನರ್ವಸತಿ ಕಾರ್ಯಗಳನ್ನು ವಿಕಲಚೇತನರ ಹಕ್ಕುಗಳ ಕಾಯಿದೆ ೨೦೧೬ರ ಪರಿಭಾಷೆ ಅರ್ಥದಲ್ಲಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದು ಇಲಾಖೆಯ ಆದ್ಯ ಕರ್ತವ್ಯವಾಗಿದೆ. ಇಲಾಖೆಯು ಕಳೆದ ೨೮ ವರ್ಷಗಳಿಂದ ಹಲವಾರು ಯೋಜನೆಗಳನ್ನು ಜಾರಿಗೊಳಿಸುತ್ತಿರುವುದು ನಮಗೆಲ್ಲಾ ತಿಳಿದ ವಿಷಯವೇ ಆಗಿದೆ.

**ಫಲಾನುಭವಿಗಳ ಆಧಾರಿತ ಯೋಜನೆಗಳು,**

- ವಿಕಲಚೇತನರಿಗೆ ಹಾಗೂ ಹಿರಿಯ ನಾಗರಿಕರಿಗೆ ಇರುವ ಅಧಿ ನಿಯಮಗಳು
- ಬಡ ವಿಕಲಚೇತನರಿಗೆ ಮಾಸಿಕ ನಿರ್ವಹಣಾ ಭತ್ಯ
- ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ
- ಉನ್ನತ ಶಿಕ್ಷಣ ಪಡೆಯುವ ವಿಕಲಚೇತನರಿಗೆ ಶುಲ್ಕ ಮರುಪಾವತಿ
- ಪ್ರತಿಭಾವಂತ ವಿಕಲಚೇತನರಿಗೆ ಪ್ರೋತ್ಸಾಹ ಧನ
- ಟಾಕಿಂಗ್ ಲ್ಯಾಪ್‌ಟಾಪ್
- ಸಾಧನಾ ಸಲಕರಣೆಗಳು
- ಯಂತ್ರಚಾಲಿತ ದ್ವಿಚಕ್ರ ವಾಹನ, ಸ್ವಯಂ ಉದ್ಯೋಗಕ್ಕಾಗಿ ಆಹಾರ ಯೋಜನೆ.
- ಅಂಗವಿಕಲತೆ ವೈದ್ಯಕೀಯ ಪರಿಹಾರ ನಿಧಿ
- ಸಾಧನೆ ಮತ್ತು ಪ್ರತಿಭೆ
- ವಿವಾಹ ಪ್ರೋತ್ಸಾಹಧನ ಯೋಜನೆ
- ಶಿಶುಪಾಲನಾ ಭತ್ಯೆ

- ಬುದ್ಧಿಮಾಂದ್ಯ ವ್ಯಕ್ತಿಗಳ ತಂದೆ ತಾಯಿ / ಪೋಷಕರ ವಿಮಾ ಯೋಜನೆ
- ನಿರಾಮಯ
- ವಿಕಲಚೇತನರಲ್ಲಿಯ ಅಂಗವಿಕಲತೆಯನ್ನು ನಿರ್ಧರಿಸಲು ವೈದ್ಯಕೀಯ
- ಪ್ರಾಧಿಕಾರದ ಹಾಗೂ ವಿಕಲಚೇತನರಿಗೆ ಗುರುತಿನ ಚೀಟಿ ವಿತರಣೆ.
- ವಿಕಲಚೇತನರಿಗೆ ನಿರುದ್ಯೋಗ ಭತ್ಯೆ
- ದೀನ್ ದಯಾಳ್ ರಿಹ್ಯಾಬಿಲಿಟೇಷನ್ (DDRS) ಯೋಜನೆಯಡಿ ವಿಕಲಚೇತನರಿಗೆ ಶೈಕ್ಷಣಿಕ ಹಾಗೂ ವೃತ್ತಿ ತರಬೇತಿ ಯೋಜನೆಗಳು
- ಇಂಟೆಗ್ರೇಟೆಡ್ ಪ್ರೋಗ್ರಾಂ ಫಾರ್ ಓಲ್ಡರ್ ಪರ್ಸನ್ಸ್ (IPOP) ಯೋಜನೆಯಡಿ ವೃದ್ಧಾಶ್ರಮಗಳು, ಮೊಬೈಲ್ ಮೆಡಿಕೇರ್ ಸೆಂಟರ್, ಹಗಲು ಯೋಗಕ್ಷೇಮ ಕೇಂದ್ರಗಳು
- ಬಡತನ ರೇಖೆಗಿಂತ ಕೆಳಗಿನ ವಿಕಲಚೇತನ ನಾಗರಿಕರಿಗಾಗಿ ವಿವಿಧ ಇಲಾಖೆಗಳಲ್ಲಿರುವ ಯೋಜನೆಗಳಡಿಯಲ್ಲಿ ಶೇ ೩ ರಷ್ಟು ಅನುದಾನ ಮೀಸಲಾತಿ
- ಅಂಧ ವ್ಯಕ್ತಿಗಳ ಉಚಿತ ಹಾಗೂ ಇತರೆ ವಿಕಲಚೇತನ ವ್ಯಕ್ತಿಗಳಿಗೆ
- ರಿಯಾಯಿತಿ ದರದ ಬಸ್ ಪಾಸ್
- ಉದ್ಯೋಗದಲ್ಲಿ ಮೀಸಲಾತಿ

೨೦೧೧ ರ ಜನಗಣತಿ ಪ್ರಕಾರ ರಾಜ್ಯದಲ್ಲಿ ೧೩,೨೪,೨೦೫ ವಿವಿಧ ರೀತಿಯ ವಿಕಲಚೇತನರು ಇರುತ್ತಾರೆ ಹಾಗೂ ಅಂದಾಜು ಒಟ್ಟು ಜನಸಂಖ್ಯೆಯ ಶೇ. ೭.೨ ರಷ್ಟು ಇದ್ದಾರೆ.

೧. ಅಂಧರು ೨೬೪೧೭೦

೨. ಶ್ರವಣದೋಷ ಉಳ್ಳವರು ೨೩೫೬೯೧

೩. ವಾಕ್-ಶ್ರವಣದೋಷ ೨೦೭೪೧

೪. ದೈಹಿಕ ಅಂಗವಿಕಲರು ೨೭೧೯೮೨

೫. ಬುದ್ಧಿಮಾಂದ್ಯರು ೯೩೯೭೪

೬ ಮಾನಸಿಕ ಅಸ್ವಸ್ಥರು ೨೯೯೧೩

೭ ಇತರರು ೨೪೬೭೨೧

೮. ಬಹುವಿಧದ ವಿಕಲಚೇತನರು ೧೦೦೦೧೩

ಒಟ್ಟು = ೧೩೨೪೨೦೫



**ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಅಧಿನಿಯಮ ೨೦೧೬**

ಅಂಗವಿಕಲ ವ್ಯಕ್ತಿಗಳ ಅಧಿನಿಯಮ ೨೦೧೬ ರ ಅಡಿ ಸರ್ವತೋಮುಖ ಅಭಿವೃದ್ಧಿ ಎಂದರೆ ಶಿಕ್ಷಣ, ಪುನರ್ವಸತಿ, ಸಾಮಾಜಿಕ ಭದ್ರತೆ, ಉದ್ಯೋಗಗಳಲ್ಲಿ ಅವಕಾಶಗಳನ್ನು ಕಲ್ಪಿಸಿ ಸಮಾಜದ ಮುಖ್ಯ ವಾಹಿನಿಯಲ್ಲಿ ವಿಕಲಚೇತನರನ್ನು ತರುವ ನಿಟ್ಟಿನಲ್ಲಿ ಅಂಗವಿಕಲ ವ್ಯಕ್ತಿಗಳ ಅಧಿನಿಯಮ ೯೫ರ ಬದಲಿಗೆ ಪರಿಷ್ಕೃತ ೨೦೧೬ರ ಅಧಿನಿಯಮವನ್ನು ರೂಪಿಸಲಾಗಿದೆ. ಸದರಿ ಅಧಿನಿಯಮದಡಿ ಒಟ್ಟು ೨೦ ವಿವಿಧ ಅಂಗವಿಕಲತೆಗಳನ್ನು ಗುರುತಿಸಲಾಗಿದೆ.

**೧. ಎ. ದೈಹಿಕ ಅಂಗವಿಕಲತೆ**

೧. ಕುಷ್ಠರೋಗ ನಿವಾರಿತರು

೨. ಸೆರೆಬ್ರಲ್ ಪಾಲ್ಸಿ (ಮೆದುಳಿನ ಪಾರ್ಶ್ವವಾಯು ಪೀಡಿತರು)

೩. ಕುಬ್ಜತೆ

೪. ಮಸ್ಕುಲರ್ ಡಿ ಸೋಫಿ

೫.ಆಸಿಡ್ ದಾಳಿಗೊಳಗಾದವರು

**ಬಿ. ದೃಷ್ಟಿ ದೋಷ**

೧. ಅಂಧತ್ವ

೨. ಮಂದ ದೃಷ್ಟಿ

**ಸಿ. ಶ್ರವಣದೋಷ**

೧. ಕಿವುಡುತನ

೨. ಹೆಚ್ಚಿನ ಶ್ರವಣದೋಷ

**ಡಿ. ಮಾತಿನ ಮತ್ತು ಭಾಷಾ ಅಂಗವಿಕಲತೆ**

**೨. ಬೌದ್ಧಿಕ ಅಂಗವಿಕಲತೆ**

೧. ನಿರ್ದಿಷ್ಟ ಕಲಿಕಾ ಅಂಗವಿಕಲತೆ

೨. ಅಟಿಸಂ ಸ್ಪೆಕ್ಟ್ರಂ ಡಿಸಾರ್ಡರ್

**೩. ಮಾನಸಿಕ ಅಸ್ವಸ್ಥತೆ**

೪. ಎ. ತೀವ್ರರೋಗ ನರಸಂಬಂಧಿತ

೧. ಮಲ್ಟಿಪಲ್ ಸೇವೆರೋಸಿಸ್

೨. ಪಾರ್ಕಿನ್‌ಸನ್ಸ್ ಕಾಯಿಲೆ

**ಬಿ. ರಕ್ತ ಸಂಬಂಧಿತ ಅಂಗವಿಕಲತೆ**

೧. ಹಿಮೋಫಿಲಿಯಾ

೧. ಥಲಸ್ಸೇಮಿಯಾ

೩. ಸಿಕಲ್ ಸೆಲ್ ಡಿಸೀಸ್

**ಸಿ. ಬಹುವಿಧ ಅಂಗವಿಕಲತೆ**

ಡಿ. ಇತರೆ ಅಂಗವಿಕಲತೆ (ಮೇಲಿನ ವಿಧಗಳನ್ನು ಹೊರತುಪಡಿಸಿ)

- ನ್ಯಾಷನಲ್ ಟ್ರಸ್ಟ್ ಅಧಿನಿಯಮ-೧೯೯೯

ನ್ಯಾಷನಲ್ ಟ್ರಸ್ಟ್ ಅಧಿನಿಯಮದಡಿ ೪ ವಿಧದ ವಿಕಲಚೇತನರಿಗೆ ಮತ್ತು ಇತರ ಸೌಲಭ್ಯಗಳಿಗೆ ಯೋಜನೆಗಳನ್ನು ರೂಪಿಸಲಾಗಿದೆ. ೪ ವಿಧದ ವಿಕಲಚೇತನ ರೆಂದರೆ ಬುದ್ಧಿಮಾಂದ್ಯರು, ಆಟಿಸಂ, ಸೆರಬ್ರಲ್ ಪಾಲ್ಸಿ ಹಾಗೂ ಬಹು ವಿಧ ಅಂಗವಿಕಲತೆಯಾಗಿರುತ್ತವೆ.

- ರಿಹ್ಯಾಬಿಲಿಟೇಷನ್ ಕೌನ್ಸಿಲ್ ಆಫ್ ಇಂಡಿಯಾ ಅಧಿನಿಯಮ ೧೯೯೨ ಭಾರತೀಯ ಪುನರ್ವಸತಿ ಮಂಡಳಿ (ರಿಹ್ಯಾಬಿಲಿಟೇಷನ್ ಕೌನ್ಸಿಲ್ ಆಫ್ ಇಂಡಿಯಾ) ಭಾರತ ಸರ್ಕಾರದ ಸ್ವಾಮ್ಯಕ್ಕೊಳಪಟ್ಟಿದ್ದು, ವಿಕಲಚೇತನರ ಪುನರ್ವಸತಿ ಕ್ಷೇತ್ರದಲ್ಲಿನ ವಿವಿಧ ಯೋಜನೆ ಮತ್ತು ತರಬೇತಿಗಳ ಕಾರ್ಯನೀತಿಗಳನ್ನು ಕ್ರಮಬದ್ಧಗೊಳಿಸುವ ಗುರುತರ ಜವಾಬ್ದಾರಿ ಹೊಂದಿರುವ ಸಂಸ್ಥೆ.

**- ವಿಕಲಚೇತನರ ಮಾಸಿಕ ನಿರ್ವಹಣಾ ಭತ್ಯೆ. :**

ಗ್ರಾಮೀಣ ಪ್ರದೇಶದಲ್ಲಿ ೧೨೦೦೦ ಹಾಗೂ ನಗರ ಪ್ರದೇಶದಲ್ಲಿ ೧೭೦೦೦ ಕ್ಕಿಂತಲೂ ಕಡಿಮೆ ವಾರ್ಷಿಕ ಆದಾಯವಿರುವ ಕುಟುಂಬದಲ್ಲಿರುವ ಶೇ. ೪೦ ರಿಂದ ಶೇ. ೭೪ ರಷ್ಟು ಅಂಗವಿಕಲತೆ ಹೊಂದಿರುವ ವಿಕಲಚೇತನರಿಗೆ ಮಾಹೆಯಾನ ರೂ. ೫೦೦ಗಳು ಪೋಷಣಾ ಭತ್ಯೆ ಹಾಗೂ ಶೇ. ೭೫ ಹಾಗೂ ಅದಕ್ಕಿಂತ ಹೆಚ್ಚಿನ ಅಂಗವಿಕಲತೆ ಹೊಂದಿರುವವರಿಗೆ ಮಾಹೆಯಾನ ಪೋಷಣಾ ಭತ್ಯೆ ನೀಡಲಾಗುತ್ತಿದೆ. ಸಾಮಾಜಿಕ ಭದ್ರತೆ ಹಾಗೂ ನಿರ್ದೇಶನಾಲಯದ ಮುಖಾಂತರ ಸಂಬಂಧಿಸಿದ ತಾಲ್ಲೂಕಿನ ತಹಸೀಲ್ದಾರರು ಪೋಷಣಾಭತ್ಯೆಯನ್ನು ಮಂಜೂರು ಮಾಡುವ ಅಧಿಕಾರ ಹೊಂದಿರುತ್ತಾರೆ.

ಆದರೆ ಈಗ ಹಾಗಲ್ಲ, ತಾಂತ್ರಿಕ ಅಭಿವೃದ್ಧಿಯಾಗಿದೆ. ವಿಕಲಚೇತನರು ಸಾಕಷ್ಟು ಕ್ಷೇತ್ರಗಳಲ್ಲಿ ತಮ್ಮನ್ನು ತಾವು ಗುರುತಿಸಿಕೊಂಡಿದ್ದಾರೆ. ಸಾಮಾನ್ಯ ವ್ಯಕ್ತಿಗಳಂತೆ, ತಂತ್ರಜ್ಞಾನದ ಸಹಾಯದಿಂದ ಉನ್ನತ ಶಿಕ್ಷಣ ಪಡೆದು, ಅನೇಕ ಶ್ರೇಷ್ಠ ಸ್ಥಾನಗಳನ್ನು ಅಲಂಕರಿಸಿದ್ದಾರೆ. ಅಲ್ಲದೆ ಸಮಾಜದಲ್ಲಿ ಎಲ್ಲರಂತೆ ಸೇವೆ ಸಲ್ಲಿಸುತ್ತಿದ್ದಾರೆ. ಮೇಲ್ಕಂಡ ಹಲವು ಅಧಿನಿಯಮಗಳಡಿಯಲ್ಲಿ ಸಾಕಷ್ಟು ಸುಧಾರಣೆಗಳು ಕಂಡುಬಂದಿವೆ. ಅವರನ್ನು ಹಿಂದಿನಂತಲ್ಲದೆ ಗುರುತಿಸುವ

ರೀತಿಯೇ ಬದಲಾಗಿದೆ. ವಿಕಲಚೇತನರನ್ನು ವಿಶೇಷ ಚೇತನರು, ದಿವ್ಯಾಂಗರು ಎಂದು ಕರೆಯುತ್ತೇವೆ. ಇಂತಹ ಬದಲಾವಣೆಗಳು ಬಹುತೇಕ ಅವರಲ್ಲಿ ಮನೋಧೈರ್ಯವನ್ನು ತುಂಬಿದೆ. ಇಂದಿನ ತಂತ್ರಜ್ಞಾನದ ಸೌಲಭ್ಯ ಹಾಗೂ



ಬಳಕೆ ಜೀವನದ ಅವಿಭಾಜ್ಯ ಅಂಗವಾಗಿದೆ. ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಇದರ ಕೊಡುಗೆ ಅಪಾರ. ಸರ್ಕಾರಿ ಅನುದಾನ ಸೌಲಭ್ಯಗಳು, ಕಾರ್ಪೋರೇಟ್ ಕಂಪನಿಗಳ ಸಹಕಾರಗಳು ವಿಶೇಷ ಚೇತನರ ಪಾಲಿಗೆ ಬಹು ಮುಖ್ಯವಾಗಿವೆ.

ವಿಶೇಷ ಚೇತನರನ್ನು ಮುಖ್ಯವಾಹಿನಿಗೆ ತರುವುದು ಸಮಾಜದ, ಸರ್ಕಾರೇತರ ಸಂಘ ಸಂಸ್ಥೆಗಳ ಆದ್ಯ ಕರ್ತವ್ಯವಾಗಿದೆ. ವಿಶೇಷ ಚೇತನರ ಬಗ್ಗೆ ಜನಜಾಗೃತಿ ಮಾಡಬೇಕಿದೆ. ಇವರ ವಿಷಯಗಳು ಪ್ರತಿ ಮನೆ-ಮನಗಳಿಗೆ ತಲುಪಬೇಕಿದೆ. ಇವರು ನಮ್ಮ ನಿಮ್ಮೆಲ್ಲರ ಜನ ಜೀವನದ ಅವಿಭಾಜ್ಯ ಅಂಗವಾಗಿರುವರು. ಕಲೆ, ಸಾಹಿತ್ಯ ನಾಟಕ, ರಂಗಭೂಮಿ, ಚಲನಚಿತ್ರ ಇಂತಹ ಹಲವಾರು ವಿಶೇಷ ಆಸಕ್ತಿ ಹೊಂದಿದ್ದು ಈ ನಿಟ್ಟಿನಲ್ಲಿ ಸಾಹಿತಿಗಳು, ವಿದ್ವಾಂಸರು, ಬರಹಗಾರರು ಹಾಗೂ ಮಾಧ್ಯಮಗಳು ಬೆಂಬಲವನ್ನು ನೀಡಿ, ವಿಶೇಷ ಚೇತನರ ಪರಿಭಾಷೆ ಸಾಮಾನ್ಯರಿಗೆ ತಿಳಿಯುವಂತಾಗಬೇಕು.

ನಾನು ನನ್ನ ಭಾಷಣವನ್ನು TONY ಲಿಖಿತ ಕಿರು ಪದ್ಯದಿಂದ ಮುಕ್ತಾಯ ಗೊಳಿಸಲು ಇಚ್ಛಿಸುತ್ತೇನೆ.

**ಅಂಗವಿಕಲರು ಯಾರು?**

ನೀವು ವ್ಯಕ್ತಿಯನ್ನು ನೋಡದೆ ಕೇವಲ ಅಂಗವಿಕಲತೆಯನ್ನು ನೋಡಿದರೆ ಕುರುಡರು

ಯಾರು?

ನೀವು ನ್ಯಾಯಕ್ಕಾಗಿ ಕೂಗುತ್ತಿರುವ ನಿಮ್ಮ ಸಹೋದರನ ಮೊರೆಯನ್ನು ಕೇಳದಿದ್ದರೆ ಕಿವುಡರು ಯಾರು?

ನೀವು ನಿಮ್ಮ ಸಹೋದರಿಯೊಂದಿಗೆ ಮಾತನಾಡದೆ ಅವಳನ್ನು ನಿಮ್ಮಿಂದ

ಬೇರ್ಪಡಿಸಿದರೆ ಮೂರ್ಖರು ಯಾರು?

ನೀವು ಎಲ್ಲಾ ಮಾನವರ ಹಕ್ಕುಗಳಿಗಾಗಿ ಎದ್ದು ನಿಲ್ಲದಿದ್ದರೆ ಕುಂಟರು ಯಾರು?

ನಿಮ್ಮ ಮನಸ್ಸು ಮತ್ತು ಹೃದಯ ಎಲ್ಲರನ್ನೂ ತಲುಪದಿದ್ದರೆ ಬುದ್ಧಿಮಾಂದ್ಯರು ಯಾರು?

# ಬುಡಕಟ್ಟು ಸಮುದಾಯ

## - ಪ್ರೊ. ಎಂ. ಗುರುಲಿಂಗಯ್ಯ

ಬುಡಕಟ್ಟು ಸಮುದಾಯಗಳು ಅಲಕ್ಷಿತ ಸಮುದಾಯಗಳಾಗಿವೆ. ಸಾಮಾನ್ಯವಾಗಿ ಒಂದು ಪ್ರದೇಶದ ಮೂಲ ವಾಸಸ್ಥರನ್ನು ಆದಿವಾಸಿಗಳೆಂದು ಕರೆಯಲಾಗುತ್ತದೆ. ನಾಗರಿಕ ಸಮಾಜದಿಂದ ದೂರವಿದ್ದು, ದಟ್ಟವಾದ ಕಾಡುಗಳ ಮಧ್ಯದಲ್ಲಿ ವಾಸಿಸುವ ಜನರಿಗೆ ಸಾಮಾನ್ಯ ಅರ್ಥದಲ್ಲಿ ಬುಡಕಟ್ಟುಗಳೆಂದು ಕರೆಯುತ್ತಾರೆ. ಇವರನ್ನು ಅಲೆಮಾರಿ ಜನಾಂಗ, ಅರಣ್ಯವಾಸಿಗಳು, ಗಿರಿಜನರು, ಸರ್ವಚೇತನವಾದಿಗಳು ಇತ್ಯಾದಿ ಹೆಸರುಗಳಿಂದ ಕರೆಯುತ್ತಾರೆ. ಇವರು ಆಧುನಿಕ ನಾಗರಿಕತೆಯಿಂದ ಹಲವು ಶತಮಾನಗಳಷ್ಟು ಕಾಲ ಹಿಂದುಳಿದವರಾಗಿದ್ದಾರೆ. ಸಾಮಾನ್ಯವಾಗಿ ಒಬ್ಬ ನಾಯಕನ ಅಧೀನದಲ್ಲಿ ಒಟ್ಟಾಗಿ ಬಾಳುವ, ನಾಗರಿಕತೆಯ ಪ್ರಭಾವ ಇಲ್ಲದ ಜನರ ಅಥವಾ ಕುಟುಂಬಗಳ ತಂಡವನ್ನು ಬುಡಕಟ್ಟು ಎಂದು ಕರೆಯಬಹುದು. ಮಾನವಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು ಮತ್ತು ಜಾನಪದ ವಿದ್ವಾಂಸರು ಬುಡಕಟ್ಟಿನ ಅರ್ಥ ವಿವರಣೆಯನ್ನು ಕೊಟ್ಟಿದ್ದಾರೆ. ಸಮಾಜಶಾಸ್ತ್ರಜ್ಞ ಪ್ರೊ. ಜಿ.ಎಸ್. ಘುರವರು ಆದಿವಾಸಿಗಳನ್ನು, 'ಹಿಂದುಳಿದ ಹಿಂದುಗಳು' ಎಂದು ಕರೆದರೆ, ಗಾಂಧೀಜಿಯವರು ಇವರನ್ನು ಗಿರಿಜನರು' ಎಂದು ಕರೆದಿದ್ದಾರೆ. ಆದಿವಾಸಿ ಎಂಬ ಪದವನ್ನು ಭಾರತದ ಅತ್ಯಂತ ಅನಾಗರಿಕ ಹಾಗೂ ಹಿಂದುಳಿದ ಬಣವನ್ನು ಮತ್ತು ಈ ದೇಶದ ಜನರಲ್ಲಿ ಅತ್ಯಂತ ಪ್ರಾಚೀನ ಹಾಗೂ ಮೊದಲ ನಿವಾಸಿಗಳು ಎಂಬುದನ್ನು ಸೂಚಿಸುವುದಕ್ಕೆ ಬಳಸಲಾಗಿದೆ (ನಂಜಮ್ಮಣ್ಣಿ ೧೯೮೨-೧೯೮), ರಿವರ್ಸ್‌ರವರು "ಸರಳ ಸಾಮಾಜಿಕ ಗುಂಪಿನಿಂದ ಕೂಡಿದ, ಸಾಮಾನ್ಯ ಭಾಷೆಯನ್ನು ಮಾತನಾಡುವ, ಯುದ್ಧದಲ್ಲಿ ಒಟ್ಟಿಗೆ ಕೆಲಸ ಮಾಡುವ ಮತ್ತು ಸಾಮಾನ್ಯ ಕೆಲಸಗಳಲ್ಲಿ ತೊಡಗುವ ಜನರಿಗೆ ಆದಿವಾಸಿ ಜನ" ರೆಂದು ಕರೆದಿದ್ದಾರೆ.

### ಬುಡಕಟ್ಟು ಸಮುದಾಯದ ವ್ಯಾಖ್ಯಾನಗಳು

ಡಿ.ಎನ್. ಮಜುಂದಾರ್‌ರವರ ಪ್ರಕಾರ "ಸಾಮಾನ್ಯವಾದ ನಾಮಾಂಕಿತವನ್ನು ಹೊಂದಿರುವ, ಸದಸ್ಯರು ಒಂದೇ ಭೌಗೋಳಿಕ ನೆಲೆಯಲ್ಲಿ ವಾಸಿಸುವ, ಒಂದೇ ಭಾಷೆಯನ್ನು ಮಾತನಾಡುವ ಹಾಗೂ ಉದ್ಯೋಗ ಮತ್ತು ವಿವಾಹಕ್ಕೆ ಸಂಬಂಧಿಸಿದ ಕೆಲವು ನಿಷಿದ್ಧಗಳನ್ನು ಪಾಲಿಸುವ ಕುಟುಂಬಗಳ ಸಮೂಹವೇ ಬುಡಕಟ್ಟು" . ಎಸ್. ಎಫ್. ನಾಡಲ್‌ರವರು "ಭಾಷೆ, ಸಂಸ್ಕೃತಿ ಮತ್ತು ರಾಜಕೀಯದ ಎಲ್ಲೆಯನ್ನು ಹೊಂದಿರುವ ಸಮಾಜವನ್ನು ಬುಡಕಟ್ಟು" ಎಂದು ಕರೆದಿದ್ದಾರೆ.

ಬುಡಕಟ್ಟುಗಳೆಂದರೆ ಯಾರು ಎಂಬುದಕ್ಕೆ "ಭಾರತದ ಇಂಪೀರಿಯಲ್ ಗೆಜೆಟಿಯರ್, "ಒಂದೇ ಹೆಸರನ್ನು ಹೊಂದಿರುವ, ಒಂದೇ ಭಾಷೆಯನ್ನು ಮಾತನಾಡುವ,

ಒಂದೇ ಸ್ಥಳದಲ್ಲಿ ವಾಸಮಾಡುವ ಅಥವಾ ವಾಸಿಸಲು ಉದ್ಯುಕ್ತವಾಗಿರುವ, ಪೂರ್ವದಲ್ಲಿ ಒಳ ಪಂಗಡ, ವಿವಾಹ ಪದ್ಧತಿಗೆ ಬದ್ಧವಾಗಿದ್ದಿರ ಬಹುದಾದರೂ ಈಗ ಹಾಗಿಲ್ಲದ ಕುಟುಂಬದ ಸಮೂಹವನ್ನು ಬುಡಕಟ್ಟು ಸಮಾಜ ಅಥವಾ ಆದಿವಾಸಿ ಸಮಾಜ"  ಎನ್ನಬಹುದು.

ಬೋಗಾರ್ಡಸ್ ಎಂಬುವರ ಪ್ರಕಾರ "ರಕ್ಷಣೆಯ ಅವಶ್ಯಕತೆ, ರಕ್ತ ಸಂಬಂಧ ಒಂದೇ ಧರ್ಮದ ನೆಲೆ ಇವುಗಳ ಆಧಾರದ ಮೇಲೆ ನಿಂತಿರುವ ಸಮೂಹವೇ ಬುಡಕಟ್ಟು ಸಮೂಹ" .

ವಿಶಾಲ ಅರ್ಥದಲ್ಲಿ ಹೇಳುವುದಾದರೆ "ಒಂದು ಸಾಮಾನ್ಯ ಭೌಗೋಳಿಕ ಪ್ರದೇಶದಲ್ಲಿ ವಾಸವಿದ್ದು, ಒಂದೇ ತೆರನಾದ ಭಾಷೆಯನ್ನು ಮಾತನಾಡುವ ಮತ್ತು ಒಂದೇ ತೆರನಾದ ಸಂಸ್ಕೃತಿ ಅಥವಾ ಆಚರಣೆಗಳನ್ನು ಹೊಂದಿರುವ ಜನಾಂಗವನ್ನು ಆದಿವಾಸಿ ಅಥವಾ ಬುಡಕಟ್ಟು ಜನಾಂಗ"ವೆಂದು ಹೇಳಬಹುದು. ಒಟ್ಟಾರೆ ಒಂದು ದೇಶದ ಮೂಲನಿವಾಸಿಗಳನ್ನು ಮತ್ತು ದ್ರಾವಿಡ ಜನಾಂಗದ ಪೂರ್ವ ಜನರನ್ನು ಆದಿವಾಸಿ ಜನಾಂಗವೆಂದು ಭಾರತದಲ್ಲಿ ಗುರುತಿಸಲಾಗುತ್ತಿದೆ. "ಭಾರತ ಸಂವಿಧಾನದ ೩೪೨ ನೇ ಕಲಮಿನಲ್ಲಿ ಆದಿವಾಸಿಗಳನ್ನು ಪರಿಶಿಷ್ಟ ಬುಡಕಟ್ಟುಗಳು ಎಂದು ಉಲ್ಲೇಖಿಸಿ ೪೨ ಪರಿಶಿಷ್ಟ ಬುಡಕಟ್ಟುಗಳಿಗೆ ಅಧಿಕೃತ ಮಾನ್ಯತೆಯನ್ನು ಕೊಟ್ಟಿದೆ" . ಆದರೆ ಬುಡಕಟ್ಟುಗಳ ಲಕ್ಷಣಗಳನ್ನು ಹೊಂದಿದ್ದರೂ ಅಧಿಕೃತವಾಗಿ ಬುಡಕಟ್ಟುಗಳ ಪಟ್ಟಿಗೆ ಸೇರಿಸಲ್ಪಡದ ಬುಡಕಟ್ಟುಗಳ ಸಂಖ್ಯೆ ಇನ್ನೂ ಅಧಿಕವಾಗಿವೆ.

ಬುಡಕಟ್ಟು ಸಮುದಾಯಗಳ ಬಗ್ಗೆ ಮಾನವಶಾಸ್ತ್ರಜ್ಞರು, ಸಮಾಜಶಾಸ್ತ್ರಜ್ಞರು ಮತ್ತು ಜಾನಪದ ವಿದ್ವಾಂಸರು ಅಧ್ಯಯನ ನಡೆಸಿ ಹಲವಾರು ಗ್ರಂಥಗಳನ್ನು ಪ್ರಕಟಿಸಿದ್ದಾರೆ ಎಡ್ಗ ಥರ್‌ಸ್ಟನ್ ಮತ್ತು ರಂಗಾಚಾರಿ ಕೆ. (೧೯೦೯), ಎ.ಎ.ಡಿ. ಲೂಯಿಸ್ (೧೯೬೩), ಮಜುಂದಾರ್ (೧೯೫೦, ನಾಡೆಲ್ (೧೯೪೭), ನಂಜುಂಡಯ್ಯ ಮತ್ತು ಅನಂತಕೃಷ್ಣ ಆಯ್ಯರ್ (೧೯೨೬), ನಿರ್ಮಲ್ ಕುಮಾರ್ ಬೋಸ್ (೧೯೪೭), ಎಲ್‌ವಿನ್ ವೆರಿಯ ಘುರೆ (೧೯೫೯) ಇವರು ಬುಡಕಟ್ಟುಗಳ ಬಗ್ಗೆ ಸಂಶೋಧನೆ ಕೈಗೊಂಡು ಉತ್ತಮ ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಇತ್ತೀಚೆಗೆ ಯುವ ವಿದ್ವಾಂಸರು ಬುಡಕಟ್ಟು ಅಧ್ಯಯನದಲ್ಲಿ ತೊಡಗಿಸಿಕೊಂಡಿದ್ದು, ಬುಡಕಟ್ಟು ಜನರ ಸಾಮಾಜಿಕ ಮತ್ತು ಸಾಂಸ್ಕೃತಿಕ ವಿವಿಧ ಮಗ್ಗುಲುಗಳನ್ನು ಕೂಲಂಕಷವಾಗಿ ಅಧ್ಯಯನ ನಡೆಸಿ ಕೃತಿಗಳನ್ನು ಪ್ರಕಟಿಸುತ್ತಿದ್ದಾರೆ.

ಬುಡಕಟ್ಟು ಜನರು ತಮ್ಮದೇ ಆದ ಅನನ್ಯತೆಯನ್ನು ಹೊಂದಿದ್ದು, ಇತರೆ ಜಾತಿ ಜನರಿಗಿಂತ ಮತ್ತು ಗ್ರಾಮ ಹಾಗೂ ನಗರ ಸಂಸ್ಕೃತಿಯಿಂದ ಬೇರೆಯಾಗಿದ್ದಾರೆ. ಭಾರತದ ಬುಡಕಟ್ಟುಗಳು ಭಿನ್ನಭಿನ್ನ ಗುಣಲಕ್ಷಣಗಳನ್ನು ಹೊಂದಿವೆ. ನಿರ್ದಿಷ್ಟ ಭೂಪ್ರದೇಶ, ನಿರ್ದಿಷ್ಟ ಹೆಸರು, ಸಾಮಾನ್ಯ ಭಾಷೆ, ಒಳ ಪಂಗಡ ವಿವಾಹ ಪದ್ಧತಿ, ಒಂದೇ ಸಂಸ್ಕೃತಿ, ಒಂದೇ ಧರ್ಮ, ಒಂದೇ ರೀತಿಯ ರಾಜಕೀಯ ವ್ಯವಸ್ಥೆ ಇವುಗಳು ಬುಡಕಟ್ಟುಗಳ ಲಕ್ಷಣಗಳಾಗಿವೆ.

**ಬುಡಕಟ್ಟು ಜನಸಂಖ್ಯೆ ಮತ್ತು ಭೌಗೋಳಿಕ ಹಂಚಿಕೆ**

ಪ್ರಪಂಚದಲ್ಲಿ ಅತ್ಯಂತ ಹೆಚ್ಚು ಬುಡಕಟ್ಟುಗಳನ್ನು ಹೊಂದಿರುವ ಆಫ್ರಿಕಾ ದೇಶವನ್ನು ಬಿಟ್ಟರೆ ಭಾರತ ದೇಶವು ಅತ್ಯಂತ ಹೆಚ್ಚು ಬುಡಕಟ್ಟುಗಳನ್ನು ಹೊಂದಿರುವ ಎರಡನೇ ದೇಶವಾಗಿದೆ. ೧೯೯೧ರ ಜನಗಣತಿಯ ಪ್ರಕಾರ ಭಾರತದಲ್ಲಿ ಬುಡಕಟ್ಟು ಜನರು ೬೮ ಮಿಲಿಯನ್ ಇದ್ದಾರೆ. ಅಂದರೆ ದೇಶದ ಶೇಕಡ ೮.೦೮% ರಷ್ಟು ಜನರು ಬುಡಕಟ್ಟು ಜನರಾಗಿದ್ದಾರೆ. ಭಾರತದಲ್ಲಿ ಸುಮಾರು ೬೩೦ ಕ್ಕೂ ಹೆಚ್ಚು ಆದಿವಾಸಿ ಬುಡಕಟ್ಟುಗಳಿವೆ. ಇವರು ವಿವಿಧ ಭೌಗೋಳಿಕ ಪ್ರದೇಶ ಮತ್ತು ಸಂಸ್ಕೃತಿಯನ್ನು ಪ್ರತಿನಿಧಿಸುತ್ತಾರೆ. ಈ ಬುಡಕಟ್ಟು ಜನರಲ್ಲಿ ಸಾಮ್ಯತೆ ಮತ್ತು ವ್ಯತ್ಯಾಸಗಳನ್ನು ಕಾಣಬಹುದು. ಬೃಹತ್ ಬುಡಕಟ್ಟು ಜನಾಂಗವು ದೇಶಾದ್ಯಂತ ಹರಡಿದೆ.

ಅತ್ಯಂತ ಅಧಿಕ ಸಂಖ್ಯೆಯಲ್ಲಿ ಬುಡಕಟ್ಟು ಜನರು ಮಧ್ಯಪ್ರದೇಶದಲ್ಲಿ (೧೫.೪ ಮಿಲಿಯನ್) ಕಂಡುಬರುತ್ತಾರೆ. ತದನಂತರ ಮಹಾರಾಷ್ಟ್ರ (೭.೩ ಮಿಲಿಯನ್), ಒರಿಸ್ಸಾ (೭ ಮಿಲಿಯನ್), ಬಿಹಾರ (೬.೬ ಮಿಲಿಯನ್) ಮತ್ತು ಗುಜರಾತ್ (೬.೧ ಮಿಲಿಯನ್) ರಾಜ್ಯಗಳು ಬರುತ್ತವೆ. ಮಿಜೋರಾಮ್, ನಾಗಾಲ್ಯಾಂಡ್, ಮೇಘಾಲಯ ಮತ್ತು ಅರುಣಾಚಲ ಪ್ರದೇಶ ರಾಜ್ಯಗಳಲ್ಲೂ ಬುಡಕಟ್ಟು ಜನರು ಆಯಾ ರಾಷ್ಟ್ರದ ಒಟ್ಟಾರೆ ಜನಸಂಖ್ಯೆಯ ಪ್ರತಿಶತ ಎಂಬತ್ತಕ್ಕಿಂತಲೂ ಅಧಿಕವಾಗಿದ್ದಾರೆ.

ಅತ್ಯಧಿಕ ಬುಡಕಟ್ಟು ಜನರೆಂದರೆ ಗೊಂಡರು. ಇವರು ಮಧ್ಯಪ್ರದೇಶ, ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ೪ ಮಿಲಿಯನ್‌ನಷ್ಟಿದ್ದಾರೆ. ರಾಜಾಸ್ತಾನ, ಗುಜರಾತ್, ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶಗಳಲ್ಲಿ ಭಿಲ್‌ರು ೪ ಮಿಲಿಯನ್ ಮತ್ತು ಬಿಹಾರ, ಒರಿಸ್ಸಾ, ಪಶ್ಚಿಮ ಬಂಗಾಳದಲ್ಲಿ ಸಂತಾಲರು ೩ ಮಿಲಿಯನ್‌ನಷ್ಟು ಕಂಡುಬರುತ್ತಾರೆ. ಭಾರತದ ಬಹುತೇಕ ಬುಡಕಟ್ಟು ಜನರು ತಮ್ಮಷ್ಟಕ್ಕೆ ತಾವೇ ಹಿಂದೂಗಳೆಂದು ಘೋಷಿಸಿಕೊಂಡಿದ್ದಾರೆ. ಧರ್ಮದ ಆಧಾರದ ಮೇಲೆ ಬುಡಕಟ್ಟು ಜನರನ್ನು ವಿಂಗಡಿಸುವುದಾದರೆ ಪ್ರತಿಶತ ೮೯% ರಷ್ಟು ಬುಡಕಟ್ಟುಗಳು ಹಿಂದುಗಳು, ೫.೫% ರಷ್ಟು ಕ್ರಿಶ್ಚಿಯನ್ನರು, ೦.೩% ರಷ್ಟು ಜನರು ಬೌದ್ಧರು, ೦.೨% ಜನರು ಮುಸಲ್ಮಾನರು, ೫% ರಷ್ಟು ಜನರು ಇತರೆಯವರು ಆಗಿದ್ದಾರೆ.

ಮಾನವಶಾಸ್ತ್ರಜ್ಞರು, ಸಾಮಾಜಿಕ ಮಾನವಶಾಸ್ತ್ರಜ್ಞರು ಮತ್ತು ಸಮಾಜಶಾಸ್ತ್ರಜ್ಞರು ಬುಡಕಟ್ಟುಗಳನ್ನು ಅವರು ವಾಸಿಸುವ ಭೂಪ್ರದೇಶಗಳ, ಭಾಷೆಗಳ, ಜನಾಂಗಗಳ ಆಧಾರದ ಮೇಲೆ ವರ್ಗೀಕರಿಸಿದ್ದಾರೆ. ಪ್ರಸಿದ್ಧ ಮಾನವಶಾಸ್ತ್ರಜ್ಞರಾದ ಎಲ್. ಪಿ. ವಿದ್ಯಾರ್ಥಿಯವರು ಬುಡಕಟ್ಟುಗಳು ವಾಸಿಸುವ ಭೌಗೋಳಿಕ ಪ್ರದೇಶವನ್ನು ನಾಲ್ಕು ವಲಯಗಳನ್ನಾಗಿ ವಿಂಗಡಿಸಿದ್ದಾರೆ. ಅವುಗಳೆಂದರೆ, ೧) ಹಿಮಾಲಯ ಪ್ರದೇಶ, ೨) ಮಧ್ಯ ಭಾರತ, ೩) ಪಶ್ಚಿಮ ಭಾರತ ೪) ದಕ್ಷಿಣ ಭಾರತ.

**ದಕ್ಷಿಣ ಭಾರತದ ಬುಡಕಟ್ಟುಗಳು**

ದಕ್ಷಿಣ ಭಾರತದ ವಲಯಕ್ಕೆ ಆಂಧ್ರಪ್ರದೇಶ, ಕರ್ನಾಟಕ, ತಮಿಳುನಾಡು, ಕೇರಳ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು ಸೇರಿವೆ. ಗೊಂಡಾ, ಕೋಯಾ, ಕೊಂಡಾ, ದೋವಾ ಬುಡಕಟ್ಟುಗಳು ಆಂಧ್ರಪ್ರದೇಶದಲ್ಲಿ ಕಂಡುಬಂದರೆ, ನಾಯ್ಕಾಡ, ಮರಾಠಿ ನಾಯಕ, ಬೇಡ, ಕೊರಗ, ಮಲೆಕುಡಿಯ, ಕುಡುಬಿ, ಜೇನುಕುರುಬ, ಕಾಡುಕುರುಬ, ಕಾಡುಗೊಲ್ಲ ಬುಡಕಟ್ಟುಗಳು ಕರ್ನಾಟಕದಲ್ಲಿ ಕಂಡುಬರುತ್ತವೆ. ತಮಿಳುನಾಡಿನಲ್ಲಿ ಇರುಳರೂ, ತೋಡರೂ, ಕೇರಳದಲ್ಲಿ ಪುಲಯನ್, ಪಣಿಯನ್ ಬುಡಕಟ್ಟುಗಳೂ ಕಂಡುಬರುತ್ತವೆ. ಹಾಗೆಯೇ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಅನುಕ್ರಮವಾಗಿ ಅಂಡಮಾನೀಸ್ ಮತ್ತು ನಿಕೋಬಾರಿಸ್ ಬುಡಕಟ್ಟುಗಳು ಕಂಡುಬರುತ್ತವೆ. ದಕ್ಷಿಣ ಭಾರತದ ಬುಡಕಟ್ಟುಗಳು ಪ್ರತಿಶತ ಶೇಕಡ ೭ ರಷ್ಟಿವೆ.

**ದಕ್ಷಿಣವಲಯ**

ಈ ವಲಯದಲ್ಲಿ ತೋಡ, ಬಡಗ, ಸೋಲಿಗ, ಕಾಡುಕುರುಬ, ಉರಲಿ, ಕಣಿಕ ಮುತ್ತುವನ್, ಇರುಳ, ಕರುಂಬ, ಗೊಂಡ, ನಾಯಕ, ಕುರುಬ, ಜೇನುಕುರುಬ, ಕೊರಗ, ಕುಡುಬಿ, ಮಲೆಕುಡಿಯ, ಕಾಡುಗೊಲ್ಲ ಇತ್ಯಾದಿ ಬುಡಕಟ್ಟುಗಳು ಕಂಡುಬರುತ್ತವೆ. ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ಅಂಡಮಾನಿ ಮತ್ತು ನಿಕೋಬಾರಿ, ಆಂಗೆ ಮತ್ತು ಜಾರವ ಬುಡಕಟ್ಟುಗಳನ್ನು ಕಾಣಬಹುದು.

**ಕರ್ನಾಟಕದಲ್ಲಿನ ಬುಡಕಟ್ಟುಗಳು**

ಭಾರತದ ಮೂರು ವಲಯಗಳ ಬುಡಕಟ್ಟುಗಳ ಪೈಕಿ ದಕ್ಷಿಣ ವಲಯದ ಬುಡಕಟ್ಟುಗಳು ಅತ್ಯಂತ ಹಿಂದುಳಿದ ಬುಡಕಟ್ಟುಗಳಾಗಿವೆ. ಅಲ್ಲದೇ ಇನ್ನೂ ಪ್ರಾಚೀನ ಸ್ಥಿತಿಯಲ್ಲಿದ್ದಾರೆ ಎಂದರೆ ತಪ್ಪಾಗಲಾರದು. ಇಲ್ಲಿಯ ಬಹುತೇಕ ಬುಡಕಟ್ಟುಗಳು ಅಲೆಮಾರಿ ಜೀವನವನ್ನು ನಡೆಸುತ್ತಾರೆ. ದಕ್ಷಿಣವಲಯದ ಬುಡಕಟ್ಟುಗಳಲ್ಲಿ ಮಾತ್ರ ಪ್ರಧಾನ ಕುಟುಂಬಗಳು ಕಂಡುಬರುತ್ತವೆ. ಈ ವಲಯದಲ್ಲಿ ಕರ್ನಾಟಕದ ಬುಡಕಟ್ಟುಗಳ ವೈವಿಧ್ಯಗಳೊಂದಿಗೆ ಸಾಮ್ಯತೆ ಮತ್ತು ಅನನ್ಯತೆಯ ಲಕ್ಷಣಗಳನ್ನು ಹೊಂದಿವೆ. ಕರ್ನಾಟಕ ರಾಜ್ಯದಲ್ಲಿ ಬುಡಕಟ್ಟು ಜನರು ಬಯಲುಸೀಮೆ, ಪಶ್ಚಿಮ ಘಟ್ಟ, ಕರಾವಳಿ ಮತ್ತು ಮಲೆನಾಡಿನ ತಪ್ಪಲು ಪ್ರದೇಶಗಳಲ್ಲಿ ಕಂಡುಬರುತ್ತಾರೆ. ೧೯೯೧ ರ ಜನಗಣತಿಯ ಪ್ರಕಾರ ರಾಜ್ಯದ ಬುಡಕಟ್ಟು ಜನಸಂಖ್ಯೆ ೧೯,೧೫,೯೯೧. ಇವರು ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡ ೪೨೬ ರಷ್ಟಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಅಧಿಕೃತವಾಗಿ ೫೦ ಬುಡಕಟ್ಟುಗಳನ್ನು ಪರಿಶಿಷ್ಟ ಪಂಗಡಗಳಲ್ಲಿ ಸೇರಿಸಲಾಗಿದೆ. ಆದರೆ ಇನ್ನೂ ಕೆಲವು ಬುಡಕಟ್ಟುಗಳು ರಾಜ್ಯದಲ್ಲಿ ಇವೆ ಎಂದು ಸಮಾಜಶಾಸ್ತ್ರೀಯ ಮತ್ತು ಮಾನವಶಾಸ್ತ್ರೀಯ ಅಧ್ಯಯನಗಳಿಂದ ತಿಳಿದುಬಂದಿದೆ. ರಾಜ್ಯದಲ್ಲಿ ೧೯೬೧ ಮತ್ತು ೧೯೮೧ ರ ನಡುವೆ ಬುಡಕಟ್ಟು ಜನಸಂಖ್ಯೆಯು ಬಹಳ ಹೆಚ್ಚಾಗಿದೆ. ಕರ್ನಾಟಕ ರಾಜ್ಯದಲ್ಲಿ ಬಳ್ಳಾರಿ,

ಚಿತ್ರದುರ್ಗ, ಕೊಡಗು, ಕೋಲಾರ, ಮೈಸೂರು, ತುಮಕೂರು ಜಿಲ್ಲೆಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಬುಡಕಟ್ಟು ಜನರು ಕಂಡುಬಂದರೆ, ನಂತರದ ಸ್ಥಾನ ಬೆಂಗಳೂರು, ಬೆಳಗಾಂ, ಬೀದರ್, ಬಿಜಾಪುರ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಧಾರವಾಡ, ಗುಲ್ಬರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳದ್ದು. ಉತ್ತರ ಕನ್ನಡ, ಮಂಡ್ಯ ಮತ್ತು ಹಾಸನ ಜಿಲ್ಲೆಗಳಲ್ಲಿ ಬುಡಕಟ್ಟು ಜನರ ಸಂಖ್ಯೆ ಆಯಾ ಜಿಲ್ಲೆಯ ಶೇಕಡ ಒಂದರಷ್ಟಿದೆ.

ರಾಜ್ಯದ ಬುಡಕಟ್ಟುಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡುಬರುವ ಬುಡಕಟ್ಟು ಗಳೆಂದರೆ ನಾಯಕಡ ಅಥವಾ ನಾಯಕ (೬೯%), ಇವರ ನಂತರ ಕಾಡುಕುರುಬರು ಶೇಕಡ ೧೧ ರಷ್ಟಿದ್ದರೆ, ಮರಾಠಿ ನಾಯಕರು ಶೇಕಡ ನಾಲ್ಕರಷ್ಟಿದ್ದಾರೆ. ಉಳಿದಂತೆ ಗೊಂಡರು ಶೇಕಡ ಮೂರರಷ್ಟು, ಕೋಲಿಡಾರ್, ಜೇನುಕುರುಬ ಮತ್ತು ಕೋಯ ತಲಾ ಶೇಕಡ ಎರಡರಷ್ಟು ಕಂಡುಬರುತ್ತಾರೆ. ಕಡಿಮೆ ಜನಸಂಖ್ಯೆಯ ರಾಜ್ಯದ ಬುಡಕಟ್ಟುಗಳೆಂದರೆ ಯರವ, ಮೇದ, ಸೋಲಿಗ, ಮಲೆಕುಡಿಯ ಮತ್ತು ಹಸಲರು. ಇವರ ಪ್ರಮಾಣ ಶೇಕಡ ಒಂದು. ಕೊರಗರ ಜನಸಂಖ್ಯೆ ಶೇಕಡ ಒಂದಕ್ಕಿಂತಲೂ ಕಡಿಮೆ ಇದೆ.

**ಬುಡಕಟ್ಟು ಜನರ ಸಮಸ್ಯೆಗಳು**

ಬುಡಕಟ್ಟು ಜನರು ಶೈಕ್ಷಣಿಕವಾಗಿ ಅತ್ಯಂತ ಹಿಂದುಳಿದವರಾಗಿರುತ್ತಾರೆ. ಇವರಲ್ಲಿ ಅಕ್ಷರಸ್ಥರ ಸಂಖ್ಯೆ ಶೇಕಡ ಹತ್ತಕ್ಕಿಂತಲೂ ಕಡಿಮೆ ಇರುತ್ತದೆ. ಇವರು ಔಪಚಾರಿಕ ಶಿಕ್ಷಣ ಸಂಸ್ಥೆಗಳಾದ ಶಾಲೆ, ಕಾಲೇಜುಗಳಿಗೆ ಹೋಗುವುದೇ ಕಡಿಮೆ. ಸಾಮಾನ್ಯವಾಗಿ ಬುಡಕಟ್ಟು ಜನರು ತಮ್ಮ ಶಿಕ್ಷಣವನ್ನು ದಿನನಿತ್ಯದ ಸಾಮಾಜಿಕ ಆರ್ಥಿಕ ಚಟುವಟಿಕೆಗಳಿಂದಲೇ ಅನೌಪಚಾರಿಕವಾಗಿ ಪಡೆಯುತ್ತಾರೆ. ಇತ್ತೀಚೆಗೆ ಅಲ್ಲೊಬ್ಬ ಇಲ್ಲೊಬ್ಬ ಆದಿವಾಸಿ ಮಕ್ಕಳು ಶಾಲೆಗೆ ಕಲಿಯಲು ಹೋಗುತ್ತಿದ್ದಾರೆ.

ಆರ್ಥಿಕ ಹಿಂದುಳಿದಿರುವಿಕೆಯು ಬುಡಕಟ್ಟು ಜನರ ಪ್ರಮುಖ ಲಕ್ಷಣವಾಗಿದೆ. ಬುಡಕಟ್ಟು ಜನರಲ್ಲಿ ಶ್ರೀಮಂತರು ಇಲ್ಲವೇ ಇಲ್ಲ. ಇವರ ಶ್ರೀಮಂತಿಕೆ ನಿರ್ಧಾರವಾಗುವುದು ಇವರ ಸಾಂಸ್ಕೃತಿಕ ಶ್ರೀಮಂತಿಕೆಯಿಂದ, ಬುಡಕಟ್ಟು ಜನರು ಕಾಡುಗಳಲ್ಲಿ ವಾಸಿಸುವುದರಿಂದ ಅನೇಕ ನಾಗರಿಕ ಸವಲತ್ತುಗಳಿಂದ ವಂಚಿತರಾಗಿದ್ದು, ಇವರಲ್ಲಿ ಬಡತನ ಎದ್ದು ಕಾಣುತ್ತದೆ. ಎಷ್ಟೋ ಬುಡಕಟ್ಟು ಜನರು ಭೂರಹಿತ ಜನರಾಗಿದ್ದಾರೆ. ಇವರಿಗೆ ಯಾವುದೇ ಅಧಿಕ ಆರ್ಥಿಕ ಮೂಲ ಇರುವುದಿಲ್ಲ. ಬುಡಕಟ್ಟು ಜನರ ಆರ್ಥಿಕ ಹಿಂದುಳಿದಿರುವಿಕೆ ಇವರ ಶೈಕ್ಷಣಿಕ ಹಿಂದುಳಿದಿರುವಿಕೆಗೆ ಕಾರಣವಾಗಿದೆ. ಭಾರತದಲ್ಲಿ ಶೇಕಡ ಎಂಬತ್ತೈದರಷ್ಟು ಬುಡಕಟ್ಟು ಜನರು ಬಡತನ ರೇಖೆಗಿಂತ (BPL) ಕೆಳಗಿದ್ದಾರೆ ಎಂದರೆ ಆಶ್ಚರ್ಯವಾಗುವುದಾದರೂ ಸತ್ಯ ಸಂಗತಿ.

ಭಾರತದ ಬುಡಕಟ್ಟುಗಳ ಆರ್ಥಿಕತೆ ಸರಳವಾದುದು. ಬಹುತೇಕ ಭಾರತದ ಬುಡಕಟ್ಟುಗಳು ಆರ್ಥಿಕವಾಗಿ ಹಿಂದುಳಿದವುಗಳಾಗಿವೆ. ಬುಡಕಟ್ಟುಗಳ ಪ್ರಾಚೀನ ಆರ್ಥಿಕ

ಜೀವನ ಹಣದ ಚಲಾವಣೆಯಿಂದ ಮುಕ್ತವಾಗಿತ್ತು. ಅಲ್ಲಿ ಆರ್ಥಿಕ ಚಟುವಟಿಕೆಗಳು ಸಂಕೀರ್ಣವಾಗಿರದೆ ಸರಳವಾಗಿದ್ದವು. ಅಂತಹ ಸಮಾಜದಲ್ಲಿ ಬುಡಕಟ್ಟು ಜನರು ತಮ್ಮ ಜೀವನ ನಿರ್ವಹಣೆಗೆ ಹಣ್ಣು ಹಂಪಲು, ಗೆಡ್ಡೆ ಗೆಣಸು ಸಂಗ್ರಹಿಸಿ ಮತ್ತು ಮೀನು ಹಿಡಿದು ಬೇಟೆಯಾಡಿ ಜೀವನ ಮಾಡುತ್ತಿದ್ದರು. ದವಸ ಧಾನ್ಯಗಳನ್ನು ಬೆಳೆಯದಿದ್ದಂತಹ ಕಾಲದಲ್ಲಿ ಬೇಟೆಯಾಡುವುದು ಮತ್ತು ಕಾಡಿನ ಉತ್ಪನ್ನಗಳನ್ನು ಸಂಗ್ರಹಿಸುವುದು ಬುಡಕಟ್ಟುಗಳ ಮುಖ್ಯವಾದ ಕಸುಬುಗಳಾಗಿದ್ದವು.

ಪಶುಪಾಲನೆಯು ಬುಡಕಟ್ಟುಗಳ ಸಾಂಪ್ರದಾಯಿಕ ಕಸುಬು. ಇದು ಬುಡಕಟ್ಟುಗಳ ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿ ಹಾಸುಹೊಕ್ಕಾಗಿದೆ. ನೀಲಗಿರಿಯ ತೋಡರು ಎಮ್ಮೆಗಳನ್ನು ಸಾಕುತ್ತಾರೆ ಮತ್ತು ಪೂಜಿಸುತ್ತಾರೆ. ಹಾಲು ಮತ್ತು ಅದರ ಉತ್ಪನ್ನಗಳನ್ನು ಮಾರಿ ಇವರು ಜೀವನ ನಡೆಸುತ್ತಾರೆ. ಕರ್ನಾಟಕದ ಕಾಡುಗೊಲ್ಲರು ಪಶುಪಾಲನೆ ಮತ್ತು ಕುರಿ ಸಾಕಣೆಯನ್ನು ತಮ್ಮ ಮುಖ್ಯ ಕುಲ ಕಸುಬಾಗಿಸಿಕೊಂಡಿದ್ದಾರೆ. ಇತ್ತೀಚೆಗೆ ಇತರೆ ಜಾತಿಗಳ ಜನರ ಸಂಪರ್ಕದಿಂದಾಗಿ ಕುರಿಸಾಕಣೆ ಮತ್ತು ಪಶುಪಾಲನೆ ಕ್ರಮೇಣ ಕಡಿಮೆಯಾಗುತ್ತಿದ್ದು ಕಾಡುಗೊಲ್ಲರು ಕೃಷಿಯತ್ತ ವಾಲುತ್ತಿದ್ದಾರೆ.

ಕರ್ನಾಟಕದ ಬುಡಕಟ್ಟುಗಳಲ್ಲಿ ಕುಲಕಸುಬುಗಳಿಗೆ ಸಂಬಂಧಿಸಿದಂತೆ ವೈವಿಧ್ಯತೆಯನ್ನು ಕಾಣಬಹುದು. ಇಲ್ಲಿನ ಕೆಲವು ಬುಡಕಟ್ಟುಗಳು ಅಲೆಮಾರಿ ಬುಡಕಟ್ಟುಗಳಾಗಿದ್ದು, ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಕಸುಬಿನ ನಿಮಿತ್ತ ವಲಸೆ ಹೋಗುತ್ತಾರೆ. ಉತ್ತರ ಕರ್ನಾಟಕದ ಚೆಂಚು, ಚೆಂಚ್‌ವಾರ್, ಅಡ್ಡಿ ಚೆಂಚಾರ್, ರಾಜಗೊಂಡ, ಹಕ್ಕಿಪಿಕ್ಕಿ ಮತ್ತು ಕಾಡುಗೊಲ್ಲ ಬುಡಕಟ್ಟುಗಳು ಅಲೆಮಾರಿ ಬುಡಕಟ್ಟುಗಳಾಗಿವೆ. ಆದರೆ ಕಾಡುಗೊಲ್ಲ ಬುಡಕಟ್ಟಿನವರು ಇತ್ತೀಚೆಗೆ ಬದಲಾವಣೆಯ ಗಾಳಿಯಿಂದಾಗಿ ಒಂದೆಡೆ ನೆಲೆ ನಿಂತ (settled life) ಜೀವನ ಮಾಡುತ್ತಾರೆ. ರಾಜ್ಯದಲ್ಲಿ ಜೇನುಕುರುಬ, ಸೋಲಿಗ, ಚೆಂಚು, ಹಕ್ಕಿಪಿಕ್ಕಿ, ಬೇಡ ಇತ್ಯಾದಿ ಬುಡಕಟ್ಟುಗಳು ಬೇಟೆ ಹಾಗೂ ಆಹಾರ ಸಂಗ್ರಾಹಕ ಬುಡಕಟ್ಟುಗಳಾಗಿವೆ. ಈ ಹಿಂದೆ ಹೇಳಿದಂತೆ ಕಾಡುಗೊಲ್ಲ ಬುಡಕಟ್ಟು ಪಶುಪಾಲನೆಯ ಕಾಯಕ ಮಾಡುವ ಬುಡಕಟ್ಟಾಗಿದ್ದು, ಇದರ ಜೊತೆಗೆ ಕಾಡುಕುರುಬ, ಜೇನುಕುರುಬ, ಹಸಲ, ಇರುಳ, ಕೋಟ ಪಳ್ಳಿಯನ್, ಪಣಿಯನ್, ಯರವ ಇತ್ಯಾದಿ ಬುಡಕಟ್ಟುಗಳು ಕುರಿಸಾಕಣೆ ಮತ್ತು ಪಶುಪಾಲನೆಯನ್ನು ತಮ್ಮ ಸಾಂಪ್ರದಾಯಿಕ ವೃತ್ತಿಯನ್ನಾಗಿ ಮುಂದುವರಿಸಿ ಕೊಂಡು ಬಂದಿವೆ. ಇತ್ತೀಚೆಗೆ ನಾಯಕ, ಮರಾಠಿ ನಾಯಕ, ಬೇಡ ಮತ್ತು ದಕ್ಷಿಣ ಕರ್ನಾಟಕದ ಕೆಲವು ಬುಡಕಟ್ಟುಗಳು ಕೃಷಿಯನ್ನು ತಮ್ಮ ಜೀವನದ ಮುಖ್ಯ ಕಸುಬನ್ನಾಗಿ ಮುಂದುವರಿಸಿಕೊಂಡು ಬಂದಿವೆ. ದಕ್ಷಿಣ ಕನ್ನಡದ ಮತ್ತು ಉಡುಪಿ ಜಿಲ್ಲೆಯ ಕೊರಗ ಬುಡಕಟ್ಟಿನವರು ಹಿಂದೆ ಬೇಟೆಯಾಡುವುದನ್ನು ತಮ್ಮ ವೃತ್ತಿಯನ್ನಾಗಿಕೊಂಡಿದ್ದರು. ಜೊತೆಗೆ ಕಾಡಿನ ಉತ್ಪನ್ನಗಳಾದ ಗೆಡ್ಡೆ ಗೆಣಸು, ಹಣ್ಣುಗಳನ್ನು ಸಂಗ್ರಹಿಸಿ ಅದರಿಂದ ಜೀವನ ನಿರ್ವಹಣೆ ಮಾಡುತ್ತಿದ್ದರು.

ಬುಟ್ಟಿ ಹೆಣೆಯುವುದು, ಚಾಪೆ ಹೆಣೆಯುವುದು, ತೊಗಟೆ ಸಂಗ್ರಹ ಇತ್ಯಾದಿಗಳು ಉಪಕಸುಬುಗಳಾಗಿದ್ದವು. ಇತ್ತೀಚೆಗೆ ಸಾಂಪ್ರದಾಯಿಕ ಕಸುಬುಗಳ ಕಣ್ಮರೆಯಿಂದಾಗಿ ಜೊತೆಗೆ ಅಭಿವೃದ್ಧಿ ಕಾರ್ಯಕ್ರಮಗಳ ಅನುಷ್ಠಾನದಿಂದಾಗಿ ನಿಧಾನಗತಿಯಲ್ಲಿ ಕೊರಗರಲ್ಲಿ ಉದ್ಯೋಗ ಚಲನೆ ಕಂಡುಬರುತ್ತಿದೆ. ಆದರೆ ಇದನ್ನು ಇತರೆ ಬುಡಕಟ್ಟುಗಳಿಗೆ ಹೋಲಿಸಿದರೆ ಉದ್ಯೋಗ ಸಂಚಲನೆ ತುಂಬಾ ಕಡಿಮೆ ಎಂದು ಹೇಳಬಹುದು.

ಬುಡಕಟ್ಟು ಜನರು ದೇವರು, ಧರ್ಮಗಳಲ್ಲಿ ಅಪಾರ ನಂಬಿಕೆಯುಳ್ಳವರಾಗಿದ್ದು, ಜೀವನದ ಆಗುಹೋಗುಗಳಿಗೆ ಅಗೋಚರ ಶಕ್ತಿಯೇ ಮೂಲ ಕಾರಣವೆಂದು ನಂಬಿದ್ದಾರೆ. ಬುಡಕಟ್ಟು ಧರ್ಮವು ಸಮಾಜದ ವ್ಯವಸ್ಥೆಯಿಂದ ದೂರವಿದ್ದು, ತನ್ನದೇ ಆದ ಸಾಮಾಜಿಕ ನಿಯಂತ್ರಣದ ಸಾಮರ್ಥ್ಯವನ್ನು ಪಡೆದಿದೆ. ಬುಡಕಟ್ಟು ಜನರು ಸರ್ವಚೇತನವಾದಿಗಳು. ಇವರು ಪ್ರಕೃತಿಯ ಅಂಗಗಳಾದ ಸೂರ್ಯ, ಚಂದ್ರ, ಭೂಮಿ, ಗಿಡ, ಮರ, ನದಿ, ಸರೋವರ, ಬೆಟ್ಟ ಮುಂತಾದವುಗಳನ್ನು ದೇವರುಗಳೆಂದು ಆರಾಧಿಸುತ್ತಾರೆ. ಅಲ್ಲದೆ ಇವರು ಅಣು ರೇಣು ತೃಣ ಕಾಷ್ಠಗಳಲ್ಲಿಯೂ ಪರಮಾತ್ಮ ಅಡಗಿದ್ದಾನೆಂದು ನಂಬುತ್ತಾರೆ. ಸಾಮಾನ್ಯವಾಗಿ ಭಾರತದ ಬುಡಕಟ್ಟು ಜನರು ತಮ್ಮ ಪೂರ್ವಿಕರನ್ನು ಅಥವಾ ಬುಡಕಟ್ಟಿನ ಮೂಲ ಪುರುಷರನ್ನು ಅವರು ಸಮುದಾಯಕ್ಕೆ ಮಾಡಿದ ಉತ್ತಮ ಕೆಲಸಗಳಿಂದಾಗಿ ಅವರ ಮರಣದ ನಂತರ ಅವರಿಗೆ ದೇವಾಲಯ ನಿರ್ಮಿಸಿ ದೇವರೆಂದು ಪೂಜಿಸುತ್ತಾರೆ. ಅವರ ದೇವರುಗಳು ಬುಡಕಟ್ಟು ಜನರ ಸಾಂಸ್ಕೃತಿಕ ವೀರರಾಗುತ್ತಾರೆ. ಬುಡಕಟ್ಟು ಜನರು ತಮ್ಮ ದೇವರುಗಳಿಗೆ ಉತ್ಸವ ಮತ್ತು ಹಬ್ಬಗಳನ್ನು ಮಾಡುತ್ತಾರೆ. ಇವರ ಹಬ್ಬ ಮತ್ತು ಜಾತ್ರೆಗಳು ತಮ್ಮ ಸಾಂಸ್ಕೃತಿಕ ವೀರರ ಹೆಸರಿನಲ್ಲಿಯೇ ಆಚರಿಸಲ್ಪಡುತ್ತವೆ. ಇಂತಹ ಹಬ್ಬ ಮತ್ತು ಜಾತ್ರೆಗಳ ಸಂದರ್ಭದಲ್ಲಿ ಬುಡಕಟ್ಟಿನ ಜನರು ಸಾಮುದಾಯಿಕವಾಗಿ ಪಾಲ್ಗೊಳ್ಳುತ್ತಾರೆ. ಮಾಟ ಮತ್ತು ಮಂತ್ರ ವಿದ್ಯೆಯು ಬುಡಕಟ್ಟಿನ ಧಾರ್ಮಿಕ ಲಕ್ಷಣವಾಗಿದೆ. ಇದರಲ್ಲೂ ಪ್ರೇತ ರೂಪ (black magic) ಮತ್ತು ಶಕ್ತಿ ರೂಪ (white magic) ಎಂಬ ಎರಡು ನಮೂನೆಗಳಿವೆ. ಮಾಟ ಮಂತ್ರಗಳ ನೆರವಿನಿಂದ ಅಲೌಕಿಕ ಶಕ್ತಿಗಳ ನೆರವನ್ನು ಪಡೆಯಬಹುದೆಂದು ಇವರು ನಂಬುತ್ತಾರೆ.

ಜಾತಿ ವ್ಯವಸ್ಥೆಯ ಪ್ರಭಾವ, ಅರಣ್ಯ ನಾಶ, ನಗರೀಕರಣ, ಅಭಿವೃದ್ಧಿಯ ನೆಪದಲ್ಲಿ ಬರುವ ಕಾರ್ಯಕ್ರಮಗಳು, ಆಧುನೀಕರಣ ಪ್ರಕ್ರಿಯೆ ಇತ್ಯಾದಿಗಳು ಬುಡಕಟ್ಟುಗಳ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಜೀವನದ ಮೇಲೆ ಪ್ರಭಾವ ಬೀರಿವೆ. ಇಂದು ಬುಡಕಟ್ಟು ಜನರ ವಿವಾಹ ಕ್ರಮ, ಕುಟುಂಬ ಪದ್ಧತಿ, ಆಹಾರ, ವೇಷಭೂಷಣ, ಕಸುಬು, ಧಾರ್ಮಿಕ ಅಂಶಗಳು ಆಧುನಿಕ ಬದಲಾವಣೆಯ ಗಾಳಿಗೆ ಸಿಲುಕಿ ತಮ್ಮ ಅನನ್ಯತೆಯನ್ನು ಕಳೆದುಕೊಳ್ಳುತ್ತಿವೆ. ಇಂದು ಬುಡಕಟ್ಟು ಜನರು ಬುಡಕಟ್ಟು ಜನರಾಗಿ ಉಳಿಯದೆ ಜಾತಿ ವ್ಯವಸ್ಥೆಯ ಸಾಮಾಜಿಕ ಸಾಂಸ್ಕೃತಿಕ ಅಂಶಗಳನ್ನು ಅನುಕರಿಸಲು ಪ್ರಾರಂಭಿಸಿದ್ದಾರೆ. ಈ ಒಂದು ಪ್ರಕ್ರಿಯೆ ಸಂಚಲನೆ ದೃಷ್ಟಿಯಿಂದ ನೇತ್ಯಾತ್ಮಕವಾಗಿ

ಕಂಡರೂ ಸಾಂಸ್ಕೃತಿಕ ಅನನ್ಯತೆಯ ದೃಷ್ಟಿಯಿಂದ ಕನಿಷ್ಠ ಮಟ್ಟಿಗಾದರೂ ಬುಡಕಟ್ಟು ಧರ್ಮ, ಕಲೆ, ಸಂಸ್ಕೃತಿ ಮತ್ತು ಶ್ರೀಮಂತ ಪಗಂಪರೆಯನ್ನು ಸಂರಕ್ಷಿಸುವುದು ಈಗಿನ ಆದ್ಯ ಕರ್ತವ್ಯ.

**ಬುಡಕಟ್ಟುಗಳ ಅಂಚೀಕರಣ ಸಮಸ್ಯೆ**

ಭಾರತೀಯ ಸಮಾಜವು ವಿವಿಧ ಧರ್ಮ, ಭಾಷೆ, ಸಮುದಾಯ, ಜನಾಂಗ ಮತ್ತು ಬುಡಕಟ್ಟುಗಳಿಂದ ಕೂಡಿದ ಸಮಾಜವಾಗಿದ್ದು, ಸಂಕೀರ್ಣ ಸಾಮಾಜಿಕ ವ್ಯವಸ್ಥೆಯನ್ನು ಹೊಂದಿದೆ. ಈ ಸಂಕೀರ್ಣ ಸಾಮಾಜಿಕ ವ್ಯವಸ್ಥೆಯಲ್ಲಿ ಏಕತೆಗಿಂತಲೂ ಹೆಚ್ಚಿಗೆ ಭಿನ್ನತೆಯ ವಿವಿಧ ಅಂಶಗಳನ್ನು ಕಾಣಬಹುದು. ಹೋಲಿಕೆಯ ಮತ್ತು ವಿವಿಧತೆಯ ಅಂಶಗಳು ಒಂದೇ ವಿಸ್ತೃತ ಸಮಾಜವಾದ ಭಾರತದಲ್ಲಿ ಬೇರೆ ಬೇರೆ ಸಾಮಾಜಿಕ ಗುಂಪುಗಳಲ್ಲಿ ಕಂಡುಬರುತ್ತವೆ. ಈ ಸಾಮಾಜಿಕ ಗುಂಪುಗಳು ಒಂದೇ ಸಮಾಜದಲ್ಲಿ ವಿವಿಧ ಉಪಸಂಸ್ಕೃತಿಗಳನ್ನು ಪ್ರತಿನಿಧಿಸುತ್ತವೆ. ಉಪಸಂಸ್ಕೃತಿಗಳು ಮುಖ್ಯ ಸಮಾಜದ ಭಾಗವಾಗಿದ್ದಾಗ್ಯೂ ತಮ್ಮ ಪ್ರತ್ಯೇಕತೆ ಮತ್ತು ಅಸ್ಮಿತೆಯನ್ನು (identity) ಉಳಿಸಿಕೊಂಡಿವೆ. ಭಾರತೀಯ ಸಮಾಜವನ್ನು ಒಂದು ಸಮಷ್ಟಿ ದೃಷ್ಟಿಯಿಂದ ನೋಡಿದಾಗ್ಯೂ, ಇದರೊಳಗಡೆ ಇರುವ ಇತರ ಉಪಸಂಸ್ಕೃತಿಗಳ ಅನನ್ಯತೆಯನ್ನು ಮರೆಯುವಂತಿಲ್ಲ. ಈ ಸಮಾಜದಲ್ಲಿ ನಾವು ನಗರ ಸಮಾಜ, ಗ್ರಾಮೀಣ ಸಮಾಜ ಎಂಬ ಭೇದಗಳನ್ನು ಮಾಡುವುದರೊಂದಿಗೆ ಬುಡಕಟ್ಟು ಸಮಾಜ (ಅಥವಾ ಸಂಸ್ಕೃತಿ) ಎಂಬ ಮತ್ತೊಂದು ಸಮಾಜವನ್ನು ಗುರುತಿಸುತ್ತೇವೆ. ಬುಡಕಟ್ಟು ಸಮಾಜ ಬೇರೆ ಸಮಾಜಕ್ಕಿಂತ ಸರ್ವ ವಿಧದಲ್ಲಿಯೂ ಭಿನ್ನವಾಗಿರುತ್ತದೆ.

ಬುಡಕಟ್ಟುಗಳ ಇತಿಹಾಸವನ್ನು ನಾವು ಹುಡುಕ ಹೊರಟರೆ ಪ್ರಪಂಚದ ವಿವಿಧ ಪ್ರದೇಶಗಳಲ್ಲಿ ವಿವಿಧ ಮಾನವ ಜನಾಂಗಗಳಿಗೆ ಸೇರಿದ ಬುಡಕಟ್ಟುಗಳು ಕಂಡುಬರುತ್ತವೆ. ಬುಡಕಟ್ಟುಗಳೆಂದು ಕರೆಯಲ್ಪಡುವ ಆದಿವಾಸಿಗಳು ಪ್ರಪಂಚದಾದ್ಯಂತ ಹಂಚಿಹೋಗಿದ್ದಾರೆ. ಭಾರತದಲ್ಲಿ ಬುಡಕಟ್ಟು ಜನರು ಸಾಮಾನ್ಯವಾಗಿ ಎಲ್ಲಾ ವಲಯಗಳಲ್ಲಿ ಕಂಡುಬರುತ್ತಾರೆ. ಮುಖ್ಯವಾಗಿ ಬೆಟ್ಟ-ಗುಡ್ಡ, ಕಾಡು-ಮೇಡು, ಗಿರಿ- ಶಿಖರ, ಕಣಿವೆ-ಕಾನನ ಹಾಗೂ ಕರಾವಳಿ ತಪ್ಪಲಿನ ಪಶ್ಚಿಮ ಘಟ್ಟಗಳಲ್ಲಿ ವಾಸಿಸುವ ಬುಡಕಟ್ಟು ಜನರನ್ನು ಕಾಣಬಹುದು. ದೇಶದ ಉದ್ದಗಲಕ್ಕೂ ಬುಡಕಟ್ಟು ಜನರು ಹಂಚಿಹೋಗಿದ್ದು, ಹಲವು ಬುಡಕಟ್ಟುಗಳು ಗುರುತಿಸಲ್ಪಡದೇ ಅಭಿವೃದ್ಧಿಯ ವಾಹಿನಿಯಿಂದ ದೂರ ಉಳಿದಿವೆ ಮತ್ತು ಸಮಸ್ಯೆಗಳನ್ನು ಎದುರಿಸುತ್ತಿವೆ. ಕೆಲವು ಬುಡಕಟ್ಟುಗಳು ಭಾರತದ ಜಾತಿ ವ್ಯವಸ್ಥೆಯ ಪ್ರಭಾವಕ್ಕೊಳಗಾಗಿ ಬದಲಾವಣೆಯ ಗಾಳಿಯಲ್ಲಿ ಸಿಲುಕಿವೆ.

ಬುಡಕಟ್ಟು ಜನರು ಮುಖ್ಯ ಸಮಾಜದೊಂದಿಗೆ ದೂರವಿದ್ದುದರಿಂದ, ಸಾಂಸ್ಕೃತಿಕವಾಗಿ ಮತ್ತು ಭೌಗೋಳಿಕವಾಗಿ ಪ್ರತ್ಯೇಕವಾಗಿದ್ದುದರಿಂದ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಇವರು ಪ್ರಾಚೀನ (primitive) ಸಮುದಾಯ

ದವರಾಗಿದ್ದುದೇ ಇವರ ಅಂಚೀಕರಣದ ಕಾರಣಗಳಲ್ಲಿ ಒಂದು ಎನ್ನಬಹುದು. ಬುಡಕಟ್ಟಿನ ಸಂಸ್ಕೃತಿ ಬಹಳ ಶ್ರೀಮಂತವಾಗಿದ್ದರೂ, ಆರ್ಥಿಕ ಮತ್ತು ಸಾಮಾಜಿಕ ಸ್ಥಿತಿಗತಿಗಳಲ್ಲಿ ಬುಡಕಟ್ಟುಗಳು ಅತ್ಯಂತ ಹಿಂದುಳಿದಿವೆ. ಭಾರತದಲ್ಲಿ ಬುಡಕಟ್ಟು ಜನರು ಎದುರಿಸುವ ಪ್ರಮುಖ ಸಮಸ್ಯೆಗಳೆಂದರೆ, ಭೂಮಿ, ಬಡತನ, ಋಣಭಾರ, ಅನಕ್ಷರತೆ, ಆರೋಗ್ಯ, ನಿರುದ್ಯೋಗ, ವಸತಿ, ಸಂಪರ್ಕ, ಶೋಷಣೆ, ಅಮಾನವೀಯ ಪದ್ಧತಿಗಳು, ಬುಡಕಟ್ಟಾಗದ ಸಮಸ್ಯೆ, ಮಿಳಿತವಾಗದ ಸಮಸ್ಯೆ ಮುಂತಾದವು.

ಕರ್ನಾಟಕದ ಬಹುತೇಕ ಬುಡಕಟ್ಟು ಜನರು ಬಡತನದ ರೇಖೆಗಿಂತ ಕೆಳಗಿದ್ದಾರೆ. ಅಂದರೆ ಇವರು ತಮ್ಮ ಜೀವಮಾನವನ್ನೆಲ್ಲಾ ಬಡತನದಲ್ಲಿಯೇ ಕಳೆಯಬೇಕಾಗುತ್ತದೆ. ಯಾವುದೇ ಆರ್ಥಿಕ ಸಂಪನ್ಮೂಲಗಳು ಇವರಿಗೆ ಲಭ್ಯವಾಗುವುದಿಲ್ಲ. ಇವರ ಬಡತನಕ್ಕೆ ಇವರ ಅನಕ್ಷರತೆಯೇ ಮುಖ್ಯ ಕಾರಣ ಎನ್ನಬಹುದು. ಇವರಿಗೆ ಬಡತನ ಕಟ್ಟಿಟ್ಟ ಬುತ್ತಿಯಂತೆ, ಬುಡಕಟ್ಟಿನ ಜನರು ಬಡತನದಿಂದ ಅನೇಕ ಸಮಸ್ಯೆಗಳಿಗೆ ತುತ್ತಾಗುತ್ತಾರೆ. ಕರ್ನಾಟಕದ ಶೇಕಡ ೮೫ಕ್ಕಿಂತಲೂ ಹೆಚ್ಚು ಬುಡಕಟ್ಟು ಜನರು ಬಡತನದ ರೇಖೆಗಿಂತ ಕೆಳಗಿದ್ದಾರೆ. ಇದು ಇವರ ಬಡತನದ ಮಟ್ಟವನ್ನು ತೋರಿಸುತ್ತದೆ. ಉದಾಹರಣೆಗೆ ಕರ್ನಾಟಕದ ಸಂದರ್ಭದಲ್ಲಿ ಹೇಳುವುದಾದರೆ ಸಮಾಜ ಕಲ್ಯಾಣ ಇಲಾಖೆಗೆ ಸಲ್ಲಿಸಿದ ಸಾಮಾಜಿಕ-ಆರ್ಥಿಕ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿ ಶೇಕಡ ೯೧% ಗ್ರಾಮೀಣ ಬುಡಕಟ್ಟುಗಳ ಕುಟುಂಬಗಳು ಬಡತನ ರೇಖೆಗಿಂತ ಕೆಳಗಿವೆ. ಭಾರತದ ಬುಡಕಟ್ಟುಗಳಲ್ಲಿ ಅನಕ್ಷರತೆಯ ಪ್ರಮಾಣ ಅಧಿಕ ಇದೆ. ಇವರಲ್ಲಿ ಅಕ್ಷರ ಸಂಸ್ಕೃತಿಯಿರುವವರು ವಿರಳ. ೨೦೦೧ರ ಜನಗಣತಿಯ ಪ್ರಕಾರ ಬುಡಕಟ್ಟು ಸಾಕ್ಷರತೆ ೨೯.೩೧ರಷ್ಟಿದ್ದು, ಒಟ್ಟಾರೆ ದೇಶದ ಸಾಕ್ಷರತೆ ೬೭.೧ರಷ್ಟಿದೆ. ಅಂದರೆ ದೇಶದ ಸರಾಸರಿ ಸಾಕ್ಷರತೆಗಿಂತ ಬುಡಕಟ್ಟು ಜನರ ಸಾಕ್ಷರತೆ ತುಂಬಾ ಕಡಿಮೆ ಇದೆ ಎಂದು ಹೇಳಬಹುದು. ಕೆಲವು ಬುಡಕಟ್ಟುಗಳ ಸಾಕ್ಷರತೆ ಶೇಕಡ ೧೧ಕ್ಕಿಂತಲೂ ಕಡಿಮೆ ಇದೆ. ಅಂದರೆ ಇವರಲ್ಲಿ ಓದು ಬರಹ ಬರುವವರ ಸಂಖ್ಯೆ ಇಷ್ಟಾದರೆ, ಔಪಚಾರಿಕವಾಗಿ ಶಾಲಾ-ಕಾಲೇಜುಗಳಿಗೆ ಹೋಗುವವರ ಪ್ರಮಾಣ ಇಲ್ಲವೇ ಇಲ್ಲ ಎನ್ನಬಹುದು. ಇತ್ತೀಚೆಗೆ ಬುಡಕಟ್ಟು ಜನರಲ್ಲಿ ಅಲ್ಲೊಬ್ಬ ಇಲ್ಲೊಬ್ಬ ಶಾಲೆಗೆ ಹೋಗುತ್ತಿದ್ದಾರೆ. ಒಂದು ವೇಳೆ ಶಾಲೆಗೆ ಹೋದರೂ ಮಧ್ಯದಲ್ಲಿಯೇ ಶಾಲೆ ಬಿಡುವವರ ಸಂಖ್ಯೆ ಹೆಚ್ಚು. ಉನ್ನತ ಶಿಕ್ಷಣವಂತೂ ಇವರಿಗೆ ಕನಸಿನ ಮಾತು. ಅನಕ್ಷರತೆಯೇ ಬುಡಕಟ್ಟು ಜನರ ಎಲ್ಲಾ ಸಮಸ್ಯೆಗಳಿಗೆ ಮೂಲ. ಇದರಿಂದಾಗಿ ಅಜ್ಞಾನ, ಮೂಢನಂಬಿಕೆ, ದೌರ್ಜನ್ಯಕ್ಕೆ ಒಳಗಾಗುವುದು ಹೆಚ್ಚಾಗುತ್ತದೆ. ಉದಾಹರಣೆಗೆ ಮಿಜೋರಾಂನ ಬುಡಕಟ್ಟುಗಳಲ್ಲಿ ಸಾಕ್ಷರತೆ ಪ್ರಮಾಣ ಶೇಕಡ ೮೨ರಷ್ಟಿದ್ದರೆ, ದಕ್ಷಿಣ ಭಾರತದ ಬುಡಕಟ್ಟುಗಳಲ್ಲಿ ಇದು ಶೇಕಡ ೨೦ಕ್ಕಿಂತಲೂ ಕಡಿಮೆ ಇದೆ. ಇತ್ತೀಚೆಗೆ ಸಾಕ್ಷರಸ್ಥರ ಸಂಖ್ಯೆಯನ್ನು ಹೆಚ್ಚಿಸಲು ಸರ್ಕಾರಗಳು ಹಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿವೆ. ಅದರಿಂದಾಗಿ ಸಾಕ್ಷರತೆಯ ಪ್ರಮಾಣ ಬುಡಕಟ್ಟುಗಳಲ್ಲಿ ನಿಧಾನಗತಿಯಲ್ಲಿ ಹೆಚ್ಚುತ್ತಿದ್ದು, ಇದರೊಂದರಿಂದಲೇ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗುತ್ತಿಲ್ಲ.

ಬುಡಕಟ್ಟುಗಳನ್ನು ಬೆಂಬಿಡದೆ ಕಾಡುತ್ತಿರುವ ಸಮಸ್ಯೆಗಳಲ್ಲಿ ನಿರುದ್ಯೋಗ ಮತ್ತು ಅರೆ-ನಿರುದ್ಯೋಗ ಮುಖ್ಯವಾದಂತಹ ಸಮಸ್ಯೆಯಾಗಿವೆ. ಇವರು ಪ್ರತ್ಯೇಕವಾಗಿ ತಮ್ಮದೇ ಆದ ನೆಲೆಗಳಲ್ಲಿ ವಾಸಿಸುವುದರಿಂದ ನಗರ ಸಮಾಜದಲ್ಲಿ ದೊರೆಯುವಂತಹ ಉದ್ಯೋಗದ ಅವಕಾಶಗಳು ಬುಡಕಟ್ಟು ಜನರಿಗೆ ದೊರೆಯುವುದಿಲ್ಲ. ಸಾಂಪ್ರದಾಯಿಕ ಕಸುಬುಗಳನ್ನು ಬಿಟ್ಟರೆ ಅಸಾಂಪ್ರದಾಯಿಕ ಜಾತಿ ಮುಕ್ತ (caste-free) ಉದ್ಯೋಗದ ಅವಕಾಶಗಳು ಇವರಿಗೆ ದೊರೆಯುವುದಿಲ್ಲ. ಇವರಲ್ಲಿ ಸರ್ಕಾರಿ ಹುದ್ದೆಗಳಲ್ಲಿರುವವರು ತುಂಬಾ ಕಡಿಮೆ. ಶೇಕಡ ಒಂದಕ್ಕಿಂತಲೂ ಕಡಿಮೆ ಎಂದರೆ ತಪ್ಪಾಗಲಾರದು. ಇನ್ನು ಇವರು ಕೈಗೊಳ್ಳುವ ದಿನನಿತ್ಯದ ಸಣ್ಣಪುಟ್ಟ ಬುಡಕಟ್ಟು ಕುಲಕಸುಬುಗಳಿಂದ ಇವರಿಗೆ ವರ್ಷದ ಎಲ್ಲಾ ದಿನಗಳಲ್ಲಿ ಉದ್ಯೋಗ ಸಿಗುವುದಿಲ್ಲ. ಒಂದು ವೇಳೆ ಸಿಕ್ಕರೂ ಇವರ ಆರ್ಥಿಕ ಜೀವನಕ್ಕೆ ಸಾಕಾಗುವಷ್ಟು ಆದಾಯ ಬರುವುದಿಲ್ಲ. ಬುಟ್ಟಿ ಹೆಣೆಯುವುದರಿಂದಾಗಲೀ ಇಲ್ಲವೇ ಕಾಡಿನಲ್ಲಿ ಗೆಡ್ಡೆ, ಗೆಣಸು ಸಂಗ್ರಹಿಸಿ ಮಾರಾಟ ಮಾಡುವುದರಿಂದಾಗಲೀ ಇವರ ಅರ್ಥಿಕ ಪರಿಸ್ಥಿತಿ ಸುಧಾರಿಸುವುದಿಲ್ಲ. ಇವರ ನಿರುದ್ಯೋಗಕ್ಕೆ ಕಾರಣ, ಇವರು ವಿದ್ಯಾವಂತರಾಗದೇ ಇರುವುದು ಮತ್ತು ಶಿಕ್ಷಣದ ಅವಕಾಶಗಳ ಕೊರತೆಯಿಂದಾಗಿ,

ಬುಡಕಟ್ಟಿನ ಜನರು ಸರ್ವಚೇತನವಾದಿಗಳಾದುದರಿಂದ ಅನಾರೋಗ್ಯದ ನಿವಾರಣೆಗೆ ಇವರು ದೇವರಿಗೆ ಮೊರೆಹೋಗುತ್ತಾರೆ. ಆದುದರಿಂದ ಬುಡಕಟ್ಟು ಜನರು ಅನೇಕ ರೋಗ-ರುಜಿನಗಳಿಂದ ಬಳಲುತ್ತಾರೆ. ಆರೋಗ್ಯಕ್ಕೆ ಸಂಬಂಧಪಟ್ಟ ಅರಿವಿನ (awareness) ಕೊರತೆಯಿಂದಾಗಿ ಅನಾರೋಗ್ಯ ಇವರಲ್ಲಿ ಗಂಭೀರ ಸಮಸ್ಯೆಯಾಗಿದೆ. ನೈರ್ಮಲ್ಯದ ಕೊರತೆ ಮತ್ತು ಆಸ್ಪತ್ರೆಗಳ ಸೌಲಭ್ಯಗಳ ಕೊರತೆಯಿಂದಾಗಿ ಅನೇಕ ಗಂಭೀರ, ವಾಸಿಯಾಗದಂತಹ ಕಾಯಿಲೆಗಳಿಗೆ ತುತ್ತಾಗಿ ಸಾಯುವವರ ಪ್ರಮಾಣ ಜಾಸ್ತಿ. ಕೆಲವು ಬುಡಕಟ್ಟುಗಳ ಮಹಿಳೆಯರಲ್ಲಿ ಹೆರಿಗೆಯ ಸಮಯದಲ್ಲಿ ತಾಯಿ ಮತ್ತು ಮಗು ಸಾವನ್ನಪ್ಪುವ ಪ್ರಸಂಗಗಳು ಹೆಚ್ಚಾಗಿವೆ. ಇದಕ್ಕೆ ಇವರಲ್ಲಿನ ಮೂಢನಂಬಿಕೆಗಳೇ ಕಾರಣ. ಬಹುತೇಕ ಬುಡಕಟ್ಟು ಪ್ರದೇಶಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳೇ ಇಲ್ಲ. ಇದ್ದರೂ ವೈದ್ಯರ ಕೊರತೆ ಮತ್ತು ಅವರ ಕಾಳಜಿ, ಬದ್ಧತೆಯ ಕೊರತೆ, ಶುಚಿತ್ವದ ಬಗ್ಗೆ ಕೆಲವು ಬುಡಕಟ್ಟುಗಳಲ್ಲಿ ಅರಿವು ಇರದ ಕಾರಣ ನಾನಾ ತರಹದ ಚರ್ಮ ವ್ಯಾಧಿಗಳಿಗೆ ಬಲಿಯಾಗ ಬೇಕಾಗುತ್ತದೆ. ಕೆಲವು ಬುಡಕಟ್ಟು ಜನರು ಅಂಟುರೋಗಗಳಿಂದಾಗಿ ಬಳಲುತ್ತಿದ್ದಾರೆ. ಗುಣಪಡಿಸಲಾಗದ ರೋಗಗಳಿಂದಾಗಿ ಇವರ ಜೀವನದ ಅವಧಿ ಕಡಿಮೆಯಾಗುತ್ತದೆ. ಇತ್ತೀಚೆಗೆ ಸರ್ಕಾರದ ಕೆಲವು ಆರೋಗ್ಯ ಕಾರ್ಯಕ್ರಮಗಳಿಂದಾಗಿ ಅಲ್ಲಲ್ಲಿ ಆರೋಗ್ಯದ ಅರಿವಿನ ಬಗ್ಗೆ ಕಾರ್ಯಗಳು ನಡೆಯುತ್ತಿವೆ. ಸ್ವಲ್ಪಮಟ್ಟಿನ ಆರೋಗ್ಯದ ಬಗೆಗಿನ ಅರಿವು ಬುಡಕಟ್ಟು ಜನರಲ್ಲಿ ಕಂಡುಬರುತ್ತಿದೆ. ಅನಾರೋಗ್ಯಕರ ವಾತಾವರಣದಿಂದಾಗಿ ಬುಡಕಟ್ಟು ಜನರು ಕ್ಷಯ, ಮಲೇರಿಯಾ, ನೇತ್ರರೋಗ, ಮಧುಮೇಹ ಮತ್ತು ಇತರೆ ಗುಹ್ಯ ರೋಗಗಳಿಂದ ಬಳಲುತ್ತಿದ್ದಾರೆ.

ಮುಗ್ಧ ಜೀವಿಗಳಾದ ಬುಡಕಟ್ಟು ಜನರು ಇತರೆ ಸಮಾಜದ ಜನಗಳಿಂದಾಗಿ ಹಲವು ರೀತಿಯ ಶೋಷಣೆಗೆ ಒಳಗಾಗುತ್ತಿದ್ದಾರೆ. ಇವರ ಅನಕ್ಷರತೆ, ಅಜ್ಞಾನ, ಮುಗ್ಧತೆಯನ್ನು ಬೇರೆ ಸಮುದಾಯದ ಜನರು ದುರುಪಯೋಗಪಡಿಸಿಕೊಳ್ಳುತ್ತಾರೆ. ಕಡಿಮೆ ಕೂಲಿಗೆ ತಮ್ಮ ಜಮೀನಿನಲ್ಲಿ ದುಡಿಸಿಕೊಳ್ಳುವುದು, ಅವಾಚ್ಯ ಶಬ್ದಗಳಿಂದ ನಿಂದಿಸುವುದು, ಮಹಿಳೆಯರಿಗೆ ಲೈಂಗಿಕ ಕಿರುಕುಳ ಕೊಡುವುದು, ಜೀತದಾಳಾಗಿ ದುಡಿಸಿಕೊಳ್ಳುವುದು, ಅಮಾನವೀಯ ಪದ್ಧತಿಗಳನ್ನು ಬಲವಂತವಾಗಿ ಹೇರುವುದು, ಭೂಕಬಳಿಕೆ ಮುಂತಾದವು ಶೋಷಣೆಯ ವಿವಿಧ ಮುಖಗಳು. ಉದಾ: ದಕ್ಷಿಣ ಕನ್ನಡದ ಕೊರಗ ಬುಡಕಟ್ಟು ಜನರಲ್ಲಿ ಅಜಲು ಪದ್ಧತಿಗಳನ್ನು ಆಚರಿಸುವಂತೆ ಪ್ರೇರೇಪಿಸುವುದು ಕಂಡುಬರುತ್ತದೆ ಎನ್ನುವುದು ಇತ್ತೀಚಿನ ವಿದ್ಯಮಾನಗಳಿಂದ ತಿಳಿದುಬರುತ್ತದೆ. ದಕ್ಷಿಣ ಭಾರತದ ಕೆಲವು ಬುಡಕಟ್ಟುಗಳ ಜನರಿಂದ ಭೂಮಾಲೀಕರು ಬಲವಂತವಾಗಿ ಭೂಮಿಯನ್ನು ಕಬಳಿಸಿಕೊಂಡಿದ್ದಾರೆ. ಅದೇ ರೀತಿ ಮಲೆ ಕುಡಿಯರನ್ನು ಜಮೀನ್ದಾರರ ವರ್ಗ ಜೀತದಾಳುಗಳನ್ನಾಗಿ ದುಡಿಸಿಕೊಳ್ಳುವ ಚಿತ್ರಣವನ್ನು ಮತ್ತು ಶಾಲೆಗೆ ಹೋಗದಂತೆ ನೋಡಿಕೊಳ್ಳುವುದನ್ನು ನಾವು ಬುಡಕಟ್ಟು ಜನರ ಬಾಯಿಂದಲೇ ಕೇಳಬಹುದಾಗಿದೆ.

ಸಂಪ್ರದಾಯದ ಹೆಸರಿನಲ್ಲಿ ಭಾರತದ ಕೆಲವು ಬುಡಕಟ್ಟುಗಳಲ್ಲಿ ಅಮಾನವೀಯ ಆಚರಣೆಗಳು ಬುಡಕಟ್ಟು ಜನರು ತಲತಲಾಂತರದಿಂದ ನಡೆಸಿಕೊಂಡು ಬಂದ ಇಲ್ಲವೇ ಸಮಾಜದಿಂದ ಬಲವಂತವಾಗಿ ಹೇರಲ್ಪಟ್ಟ ಆಚರಣೆಗಳಾಗಿವೆ. ಅತ್ಯಂತ ಹಿಂದುಳಿದ ಗ್ರಾಮೀಣ ಪ್ರದೇಶಗಳಲ್ಲಿ ಮತ್ತು ಬುಡಕಟ್ಟುಗಳಲ್ಲಿ ಮನುಷ್ಯಕುಲವೇ ನಾಚಿಕೆ ಪಡುವಂತಹ ಜೀವವಿರೋಧಿ ಅಮಾನವೀಯ ಆಚರಣೆಗಳು ರೂಢಿಯಲ್ಲಿವೆ. ಇದಕ್ಕೆ ಜ್ವಲಂತ ನಿದರ್ಶನವೆಂದರೆ ದಕ್ಷಿಣ ಕನ್ನಡದ ಕೊರಗ ಜನಾಂಗದಲ್ಲಿರುವ ಅಜಲು ಪದ್ಧತಿ. ಈ ಆಚರಣೆಯನ್ನು ಸಾಂಸ್ಕೃತಿಕ ಪರಂಪರೆಯ ದ್ಯೋತಕವೆಂದು ವಾದಿಸಿದರೂ ಇವುಗಳು ಅಮಾನವೀಯ ಆಚರಣೆಗಳಾಗುತ್ತವೆ. ಕೊರಗರಲ್ಲಿಯ ಅಜಲು ಪದ್ಧತಿ ಸರ್ಕಾರದ ಗಮನ ಸೆಳೆದು ರಾಜ್ಯ ಸರ್ಕಾರ ಇತ್ತೀಚೆಗೆ ಅಜಲು ಪದ್ಧತಿಯನ್ನು ಕಾನೂನಿನ ಮೂಲಕ ನಿಷೇಧಿಸಿದೆ. ಇತ್ತೀಚೆಗೆ ಈ ಪದ್ಧತಿಯು ಕಡಿಮೆಯಾಗುತ್ತಿದೆ ಎಂದು ನಂಬಲಾಗಿದೆ.

ರಾಜ್ಯದ ಕಾಡುಗೊಲ್ಲ ಬುಡಕಟ್ಟಿನಲ್ಲಿ ಇನ್ನೊಂದು ರೀತಿಯ ಅಮಾನವೀಯ ಆಚರಣೆ ಜಾರಿಯಲ್ಲಿದೆ. ಕರ್ನಾಟಕದ ಚಿತ್ರದುರ್ಗ, ತುಮಕೂರು, ಬೆಂಗಳೂರು, ಬಳ್ಳಾರಿ, ರಾಯಚೂರು ಜಿಲ್ಲೆಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಕಂಡುಬರುವ ಕಾಡುಗೊಲ್ಲ ಬುಡಕಟ್ಟು ಅಲೆಮಾರಿ ಜನಾಂಗವಾಗಿದ್ದು, ಅತ್ಯಂತ ಹಿಂದುಳಿದ ಬುಡಕಟ್ಟಾಗಿದೆ. ಇವರಲ್ಲಿ ಮಗು ಹೆರುವ ಕ್ರಿಯೆ ಪ್ರಕೃತಿದತ್ತವಾಗಿದ್ದರೂ, ಇದು ಕಾಡುಗೊಲ್ಲರಿಗೆ ಅತ್ಯಂತ ಸೂತಕದ ವಿಚಾರ, ಬಸುರಿ ಹೆಂಗಸಿಗೆ ಹೆರಿಗೆ ನೋವು ಕಾಣಿಸಿಕೊಂಡ ತಕ್ಷಣ ಅವಳನ್ನು ಹಟ್ಟಿ (ಹಾದಿ) ಯಿಂದ ದೂರ ಕರೆದೊಯ್ಯಲಾಗುತ್ತದೆ. ಅಲ್ಲಿ ಅಪ್ಪ-ಅಮ್ಮ ಅಥವಾ ಸಂಬಂಧಕರೆನಿಸಿಕೊಂಡವರು ಯಾರೂ ಆ ಮಹಿಳೆಯನ್ನು

ಮುಟ್ಟುವಂತಿಲ್ಲ. ಅವಳ ನೆರವಿಗೆ ಹೋಗುವಂತಿಲ್ಲ. ಇಂತಹ ಸಂದರ್ಭದಲ್ಲಿ ಅಪ್ಪಿತಪ್ಪಿಯೂ ವೈದ್ಯರು ಇಲ್ಲವೇ ಆಸ್ಪತ್ರೆಯ ನೆನಪು ಮಾಡಿಕೊಳ್ಳುವುದಿಲ್ಲ. ಒಂದು ವೇಳೆ ವೈದ್ಯರು ನೆರವಿಗೆ ಬಂದರೆ ಅವರನ್ನು ತಡೆಯುತ್ತಾರೆ. ಬಸುರಿ ಹೆಂಗಸು ತಾನೇ ಹೆರಿಗೆ ಮಾಡಿಕೊಳ್ಳಬೇಕಾಗುತ್ತದೆ. ಕರುಳ ಬಳ್ಳಿಯನ್ನು ತಾನೇ ಕತ್ತರಿಸ ಬೇಕಾಗುತ್ತದೆ. ಹಳ್ಳಿಯ ಜನರು ಮೂಕ ಪ್ರೇಕ್ಷಕರಂತೆ ದೂರನಿಂತು ನೋಡುತ್ತಿರುತ್ತಾರೆ. ದೇವರ ಕೃಪೆಯಿಂದ ಹೆರಿಗೆ ಸಲೀಸಾಗಿ ಆದರೆ ಮಗು ಮತ್ತು ತಾಯಿ ಬದುಕುಳಿಯುತ್ತಾರೆ, ಇಲ್ಲದಿದ್ದರೆ ಸಾವನ್ನಪ್ಪುತ್ತಾರೆ. ಇವರಲ್ಲಿ ಹೆರಿಗೆ ಸಂದರ್ಭದಲ್ಲಿ ಪ್ರತಿ ಮೂರು ಶಿಶುಗಳಿಗೆ ಒಂದು ಶಿಶು ಮತ್ತು ತಾಯಿ ಸಾವನ್ನಪ್ಪಿದ ಘಟನೆಗಳಿವೆ. ಇದರಿಂದ ಕಾಡುಗೊಲ್ಲ ಮಹಿಳೆಯ ಹೆರಿಗೆಯ ಸಂದರ್ಭದಲ್ಲಿ ಶಿಶುಗಳ ಮರಣ (infant martality) ಅತ್ಯಂತ ಹೆಚ್ಚು ಮತ್ತು ಮಹಿಳೆಯರು ಸಾವನ್ನಪ್ಪುವ ಸಂಭವ ಜಾಸ್ತಿ ಎಂದು ಸಂಶೋಧನೆಗಳಿಂದ ದೃಢಪಟ್ಟಿದೆ. ಹೆರಿಗೆಯ ನಂತರ ಎರಡು ತಿಂಗಳಿಗೂ ಹೆಚ್ಚಿನ ಕಾಲ ಮಗು ಮತ್ತು ತಾಯಿಯನ್ನು ಹಟ್ಟಿಯಿಂದ ದೂರದಲ್ಲಿ ಪ್ರತ್ಯೇಕ ಸಣ್ಣ ಗುಡಿಸಲು ಕಟ್ಟಿ ಇಡಲಾಗುತ್ತದೆ. ಅವರಿಬ್ಬರನ್ನು ಯಾರೂ ಮುಟ್ಟುವಂತಿಲ್ಲ ಹಾಗೂ ಅವರ ನೆರಳು ಬೇರೆಯವರ ಮೇಲೆ ಬೀಳುವಂತಿಲ್ಲ. ಒಂದು ವೇಳೆ ನೆರಳು ಬಿದ್ದರೆ ಅವರೂ ಮೈಲಿಗೆಯಾಗುತ್ತಾರೆ. ಅವರು ಮತ್ತೆ ಬುಡಕಟ್ಟು ದೇವರಿಗೆ ದಂಡ ತೆತ್ತು ಶುಚಿತ್ವ ಪಡೆಯಬೇಕಾಗುತ್ತದೆ. ಗಂಡನೆನಿಸಿ ಕೊಂಡವನು ಸಹ ತನ್ನ ಹೆಂಡತಿ ಮತ್ತು ಮಗುವನ್ನು ಸಮೀಪದಿಂದ ನೋಡುವಂತಿಲ್ಲ. ಸುಮಾರು ಮೂರು ತಿಂಗಳುಗಳ ಕಾಲ ಮಗು ಮತ್ತು ಬಾಣಂತಿಯು ಯಾರ ನೆರವಿಲ್ಲದೆ, ಮಳೆಯೆನ್ನದೆ, ಬಿಸಿಲೆನ್ನದೆ, ಗಾಳಿ, ಗುಡುಗು, ಮಿಂಚೆನ್ನದೆ ಅವಳಿಗಾಗಿಯೇ ನಿರ್ಮಿಸಿದ ಗುಡಿಸಲಿನಲ್ಲಿ ಕಾಲಕಳೆಯಬೇಕಾಗುತ್ತದೆ.

ಬುಡಕಟ್ಟುಗಳ ಮುಖ್ಯ ಸಮಸ್ಯೆ ಭೂಮಿಯ ಮತ್ತು ನೆಲೆಯ ಸಮಸ್ಯೆ ಭಾರತದ ಬಹುತೇಕ ಬುಡಕಟ್ಟು ಜನರಿಗೆ ತಮ್ಮದೇ ಆದಂತಹ ಭೂಮಿ ಇಲ್ಲದಿರುವುದು ಕಂಡುಬರುತ್ತದೆ. ಇವರು ಸಾಮಾನ್ಯವಾಗಿ ಅರಣ್ಯಗಳನ್ನೇ ನಂಬಿಕೊಂಡು ವಾಸಿಸುತ್ತಾರೆ. ಇತ್ತೀಚೆಗೆ ಅರಣ್ಯ ನಾಶದಂತಹ ಪ್ರಕ್ರಿಯೆಯಲ್ಲಿ ಬುಡಕಟ್ಟು ಜನರನ್ನು ಭೂರಹಿತ ಜನರನ್ನಾಗಿ ಮಾಡಲಾಗುತ್ತಿದೆ ಎಂಬ ದೂರು ಕೇಳಿಬರುತ್ತಿದೆ. ಬುಡಕಟ್ಟು ಜನರಿಗೆ ಅವರ ಹಿಂದುಳಿದಿರುವಿಕೆಯಿಂದಾಗಿ (backwardnes) ಭೂ ಒಡೆತನದ ಕಲ್ಪನೆ, ಭೂಮಿಯ ದಾಖಲೆಗಳು ಗೊತ್ತಿಲ್ಲ. ಬ್ರಿಟಿಷರ ಕಾಲದಲ್ಲಿ ಬ್ರಿಟಿಷ್ ಸರ್ಕಾರ ಭೂಮಿಯನ್ನು ಮತ್ತು ಅರಣ್ಯ ಭೂಮಿಯನ್ನು ಜಮೀನ್ದಾರರಿಗೆ ವರ್ಗಾಯಿಸಿತು ಮತ್ತು ಉಳಿದ ಭೂಮಿಯನ್ನೆಲ್ಲಾ ಅರಣ್ಯಭೂಮಿ ಎಂದು ಘೋಷಿಸಿತು. ಇದರಿಂದ ಬುಡಕಟ್ಟು ಜನರು ಭೂಮಿಯ ಜೊತೆಗಿನ ಸಂಬಂಧ ಕಳೆದುಕೊಂಡರು. ಹತ್ತು ಹಲವಾರು ತಲೆಮಾರುಗಳಿಂದ ಜೀವಿಸುತ್ತಿರುವ ಬುಡಕಟ್ಟು ಜನರಿಗೆ ತಮ್ಮದೇ ಆದ ಭೂದಾಖಲೆ ಮತ್ತು ಭೂಮಿಯ ಒಡೆತನ ಇಲ್ಲದಂತಾಯಿತು. ಮೊದಲಿದ್ದ ಬಹುತೇಕ ಅರಣ್ಯ ನೀತಿಗಳು ಅಥವಾ ಕಾನೂನುಗಳು ನಗರ ಮಾರುಕಟ್ಟೆಗಳಿಗೆ ಅರಣ್ಯ ಉತ್ಪನ್ನವನ್ನು ಒದಗಿಸುವುದಕ್ಕೆ

ಸಂಬಂಧಿಸಿದವುಗಳಾಗಿದ್ದವು. ಬುಡಕಟ್ಟುಗಳೂ ಸಹ ಅರಣ್ಯ ಉತ್ಪನ್ನವನ್ನು ಒದಗಿಸುವುದಕ್ಕೆ ತಮಗೆ ಸಮೀಪವಿರುವ ಸ್ಥಳೀಯ ಮಾರುಕಟ್ಟೆಗಳಲ್ಲಿ ಮಾರಾಟ ಮಾಡುತ್ತಿದ್ದರು. ಇವರಿಗೆ ಯಾವುದೇ ಅಧಿಕೃತವಾದ, ಇವರಿಗೆಂದೇ ಮೀಸಲಿಟ್ಟ ಅರಣ್ಯ ಪ್ರದೇಶಗಳಿರಲಿಲ್ಲ. ೧೮೬೫ ರ ಭಾರತದ ಅರಣ್ಯ ಕಾಯಿದೆಗೆ ೧೮೭೮ ರಲ್ಲಿ ತಿದ್ದುಪಡಿ ತಂದು ಅರಣ್ಯಗಳನ್ನು ಕಂದಾಯ ಅರಣ್ಯಗಳು, ಸಂರಕ್ಷಿತ ಅರಣ್ಯಗಳು ಮತ್ತು ಗ್ರಾಮ ಅರಣ್ಯಗಳು ಎಂದು ವಿಭಾಗ ಮಾಡಿ ಪ್ರತಿಯೊಂದಕ್ಕೂ ತನ್ನದೇ ಆದ ನಿಯಮಗಳನ್ನು ರೂಪಿಸಲಾಯಿತು.

ಸರ್ಕಾರದ ಈ ನೀತಿಯಿಂದಾಗಿ ಅರಣ್ಯದ ಉತ್ಪನ್ನಗಳನ್ನೇ ತಮ್ಮ ಜೀವಾಳ ವಾಗಿರಿಸಿಕೊಂಡಿದ್ದ ಬುಡಕಟ್ಟುಗಳಿಗೆ ಬರಸಿಡಿಲು ಬಡಿದಂತಾಗಿ ಭೂಮಿ, ನದಿ ಮತ್ತು ಅರಣ್ಯಗಳ ಭಾಗವಾಗಿದ್ದ ಇವರು ಇವೆಲ್ಲದರಿಂದ ದೂರವಾದರು. ಪರಿಣಾಮವಾಗಿ ಜಾರ್ಖಂಡ್, ಒರಿಸ್ಸಾ, ಮಹಾರಾಷ್ಟ್ರ, ಮಧ್ಯಪ್ರದೇಶ, ತಮಿಳುನಾಡು ಮತ್ತು ಕೇರಳ ರಾಜ್ಯಗಳ ಬುಡಕಟ್ಟು ಜನರು ಭೂರಹಿತ ಬುಡಕಟ್ಟುಗಳಾಗಿ ಉಳಿದರು. "ಒಂದು ಗೇಣಸನ್ನಾದರೂ ಬೆಳೆಯಲು ನಮ್ಮದೆನ್ನುವ ಭೂಮಿ ನಮಗಿಲ್ಲ. ಪ್ರತಿಯೊಂದಕ್ಕೂ ನಾವು ಹೊರಗಿನವರ ಮೇಲೆ ಅವಲಂಬಿತರಾಗಿದ್ದೇವೆ ಎಂದು ಕೇರಳದ ವಯನಾಡು ಪ್ರದೇಶದ ಬುಡಕಟ್ಟು ಜನರ ನಾಯಕಿ ಬುಡಕಟ್ಟು ಮಹಿಳೆ ಸಿ.ಕೆ. ಜಾನು ಹೇಳುತ್ತಾರೆ" (ಸಂವಾದ, ಆಗಸ್ಟ್ ೨೦೦೩). ಇದು ಬುಡಕಟ್ಟು ಜನರ ಭೂಮಿಯ ಸಮಸ್ಯೆಯನ್ನು ಎತ್ತಿ ತೋರಿಸುತ್ತದೆ.

ಬುಡಕಟ್ಟು ಜನರ ರಾಜಕೀಯ ನಾಯಕತ್ವದ ಕೊರತೆಯಿಂದಲೋ ಅಥವಾ ಸರ್ಕಾರ ವೈಜ್ಞಾನಿಕವಾಗಿ ಬುಡಕಟ್ಟು ಜನರು ಯಾರು ಎಂದು ಗುರುತಿಸಲು ಸಾಧ್ಯವಾಗದೇ ಇರುವುದರಿಂದಲೋ ಅಥವಾ ಬುಡಕಟ್ಟು ಜನರು ತಮ್ಮ ಸಮಸ್ಯೆಗಳನ್ನು ಸರಿಯಾಗಿ ಬಿಂಬಿಸಲು ಸಾಧ್ಯವಾಗದೇ ಇರುವುದರಿಂದಲೋ ಎಷ್ಟೋ ಬುಡಕಟ್ಟುಗಳು ಬುಡಕಟ್ಟಿನ ಅಧಿಕೃತ ಸ್ಥಾನಮಾನ ಪಡೆಯುವುದೇ ಇಲ್ಲ. ಇಂತಹ ಸಂದರ್ಭವನ್ನು ಭಾರತದಾದ್ಯಂತ ನೋಡಬಹುದು. ಎಷ್ಟೋ ಸಂದರ್ಭಗಳಲ್ಲಿ ಮೀಸಲಾತಿ ನೀತಿ ನಿರೂಪಿಸುವಾಗ ಜಾತಿ ಯಾವುದು? ಜಾತಿಯಿಂದ ಎಲ್ಲಾ ವಿಧದಲ್ಲಿಯು ಬೇರೆಯಾಗಿರುವ ಬುಡಕಟ್ಟು ಯಾವುದು? ಎಂಬ ವ್ಯತ್ಯಾಸದ ಅರಿವಿನ ಕೊರತೆಯಿರುವುದು, ಮೀಸಲಾತಿಯ ನೀತಿಯನ್ನು ಮತ್ತು ಆಯೋಗಗಳ ಶಿಫಾರಸುಗಳನ್ನು ಅನುಷ್ಠಾನ ಮಾಡುವಲ್ಲಿ ಕಂಡುಬರುತ್ತದೆ. ಇಂತಹ ಸಂದರ್ಭದಲ್ಲಿ ಆರ್ಥಿಕವಾಗಿ ಸಬಲವಾಗಿರುವ ಮತ್ತು ರಾಜಕೀಯ ನಾಯಕತ್ವವನ್ನು ಪಡೆದಿರುವ ಜಾತಿಗಳು ಅಥವಾ ಬುಡಕಟ್ಟುಗಳು ಬುಡಕಟ್ಟು ಸ್ಥಾನಮಾನವನ್ನು ಪಡೆಯುತ್ತವೆ. ನಿಜವಾಗಿ ಬುಡಕಟ್ಟು ಲಕ್ಷಣಗಳನ್ನೂ ಹೊಂದಿದ್ದು, ಜಾತಿ ವ್ಯವಸ್ಥೆಯಿಂದ ದೂರವಿರುವ ಎಷ್ಟೋ ಬುಡಕಟ್ಟುಗಳು ಇಂದಿಗೂ ಬುಡಕಟ್ಟು ಸ್ಥಾನಮಾನ ಪಡೆಯದೆ ಸರ್ಕಾರದ ಎಲ್ಲಾ ಅವಕಾಶಗಳಿಂದ ವಂಚಿತವಾಗಿವೆ. ಉದಾ: ಕರ್ನಾಟಕದ ಕಾಡುಗೊಲ್ಲರು,

ದಕ್ಷಿಣ ಕನ್ನಡ ಜಿಲ್ಲೆಯ ಕುಡುಬಿಗಳು ಮತ್ತು ಉತ್ತರ ಕರ್ನಾಟಕದ ಕೆಲವು ಸಮುದಾಯಗಳು ನಿಜವಾದ ಬುಡಕಟ್ಟುಗಳು. ಆದರೆ ಸರ್ಕಾರದ ಮೀಸಲಾತಿಯ ನೀತಿಯಡಿಯಲ್ಲಿ ಇವುಗಳನ್ನು ಹಿಂದುಳಿದ ವರ್ಗಗಳೆಂದು ಪರಿಗಣಿಸಲಾಗಿದೆ. ಇಂಥ ನೀತಿಯಿಂದಾಗಿ ಈ ಸಮುದಾಯಗಳು ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿದ್ದು, ಬುಡಕಟ್ಟಾಗಿದ್ದೂ ಬುಡಕಟ್ಟಾಗದ್ದ ಸಮಸ್ಯೆಯನ್ನು ಎದುರಿಸುತ್ತಿವೆ.

ರಾಜ್ಯದಲ್ಲಿಯೂ ಸೇರಿದಂತೆ ಈ ದೇಶದಲ್ಲಿ ಬುಡಕಟ್ಟುಗಳ ಸಮಸ್ಯೆ ಒಂದೇ ತೆರವಾಗಿಲ್ಲ. ಬಹುತೇಕ ಉತ್ತರ ಭಾರತದ ಬುಡಕಟ್ಟುಗಳು ಅವುಗಳ ಜನಸಂಖ್ಯಾ ಪ್ರಾಬಲ್ಯ ಮತ್ತು ಸ್ವಲ್ಪಮಟ್ಟಿನ ಶಿಕ್ಷಣದಿಂದಾಗಿ ತಮ್ಮ ಸಂವಿಧಾನಾತ್ಮಕ ಹಕ್ಕುಗಳ ರಕ್ಷಣೆಯ ಜೊತೆಗೆ ಸರ್ಕಾರದಿಂದ ವಿಶೇಷ ಸವಲತ್ತುಗಳನ್ನು ಪಡೆಯುವಲ್ಲಿ ಸಫಲವಾಗಿವೆ. ಆದರೆ ದಕ್ಷಿಣ ಭಾರತದ ಬೆಟ್ಟಗುಡ್ಡ, ಗಿರಿ-ಕಾನನಗಳಲ್ಲಿ ವಾಸಿಸುವ ಬುಡಕಟ್ಟುಗಳು ಮೂಲ ಸವಲತ್ತುಗಳಿಲ್ಲದೆ ತುಂಬಾ ನಿಕೃಷ್ಟ ಸ್ಥಿತಿಯಲ್ಲಿವೆ ಎಂಬುದು ಅವರ ನೆಲೆಗಳನ್ನು ನೋಡಿದರೆ ಗೊತ್ತಾಗುತ್ತದೆ. ಇನ್ನು ಬಯಲು ಪ್ರದೇಶಗಳಲ್ಲಿ ವಾಸಿಸುವ ಬುಡಕಟ್ಟುಗಳು ಸಂವಿಧಾನಾತ್ಮಕ ಸವಲತ್ತುಗಳನ್ನು ಪಡೆಯುವುದರ ಜೊತೆಗೆ ಜೀವನ ವಿಧಾನಗಳಲ್ಲಿ ಜಾತಿವ್ಯವಸ್ಥೆಗೆ ಹತ್ತಿರವಾಗುತ್ತಿವೆ. ಕನಿಷ್ಠ ಪಕ್ಷ ಸರ್ಕಾರದ ಕಾರ್ಯಕ್ರಮಗಳು ಅವರಿಗೆ ತಲುಪುತ್ತವೆ ಎಂಬುದರಲ್ಲಿ ಸಂದೇಹವಿಲ್ಲ. ಇಂತಹ ಬುಡಕಟ್ಟುಗಳು ತಮ್ಮಷ್ಟಕ್ಕೆ ತಾವು ಪ್ರತ್ಯೇಕವಾಗಿದ್ದರೂ ಸಹ ಸರ್ಕಾರದ ಕಾರ್ಯಕ್ರಮಗಳಲ್ಲಿ ಇವರ ಪಾಲ್ಗೊಳ್ಳುವಿಕೆ ಇದೆ. ಆದರೆ ಕೆಲವು ಬುಡಕಟ್ಟುಗಳು ಅಂದರೆ ಕಂದಾಯ ಗ್ರಾಮವೆಂದು ಸರ್ಕಾರದಿಂದ ಘೋಷಿಸದೆ ಇರುವಂತಹ ಬುಡಕಟ್ಟುಗಳ ನೆಲೆಗಳು ಪ್ರತ್ಯೇಕತೆಯ ಸಮಸ್ಯೆಯನ್ನು ಎದುರಿಸುತ್ತಿವೆ. ಸರ್ಕಾರದ ಪುನರ್‌ವಸತಿಯ ಬುಡಕಟ್ಟುಗಳ ಪ್ರದೇಶ ಮತ್ತು ಕಂದಾಯ ನೆಲೆಗಳಲ್ಲದಿರುವಂತಹ ಬುಡಕಟ್ಟು ನೆಲೆಗಳು ಹಲವು ಮೂಲ ಸೌಕರ್ಯಗಳಿಲ್ಲದೆ, ಬುಡಕಟ್ಟು ಜನರ ದಿನನಿತ್ಯದ ಜೀವನ ನಿರ್ವಹಣೆಗೆ ಮತ್ತು ಶಿಕ್ಷಣಕ್ಕೆ ತುಂಬಾ ಅಡ್ಡಿಯಾಗಿರುವುದು ಕಂಡುಬರುತ್ತದೆ.

## ಬುಡಕಟ್ಟುಗಳು ಮತ್ತು ಅಭಿವೃದ್ಧಿ

### ಬುಡಕಟ್ಟುಗಳು ಮತ್ತು ಸಂವಿಧಾನದ ಸೌಲಭ್ಯಗಳು

ಸ್ವಾತಂತ್ರಾನಂತರ ಭಾರತ ಸರ್ಕಾರ ಹಲವು ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡಿತು. ಅವುಗಳಲ್ಲಿ ಬುಡಕಟ್ಟು ಅಭಿವೃದ್ಧಿಯೂ ಒಂದು ಮಹತ್ತ್ವವಾದ ಕಾರ್ಯಯೋಜನೆಯಾಗಿತ್ತು. ಮಹಾತ್ಮ ಗಾಂಧೀಜಿ, ಜವಾಹರಲಾಲ್ ನೆಹರು, ತಕ್ಕರ ಬಾಪಾ ಮುಂತಾದ ಮಹನೀಯರುಗಳು ಬುಡಕಟ್ಟು ಜನರ ಅಭಿವೃದ್ಧಿಗಾಗಿ ಹಲವು ಅಭಿವೃದ್ಧಿ ನೀತಿಗಳನ್ನು ಪ್ರಸ್ತಾಪಿಸಿ ಅಂದೇ ರೂಪಿಸಿದ್ದರು. ಹಾಗಾದರೆ ಬುಡಕಟ್ಟು ಜನರ ಅಭಿವೃದ್ಧಿ ಹೇಗಾಗಬೇಕು? ಯಾವ ತೆರನಾದ ನೀತಿಗಳು ಅಥವಾ ಯೋಜನೆಗಳು ಬುಡಕಟ್ಟು ಜನರ ಅಭಿವೃದ್ಧಿಗೆ ಪೂರಕವಾಗಿ ಸಹಾಯಕ

ವಾಗುತ್ತವೆ? ಯೋಜನೆಗಳ ಸ್ವರೂಪ ಹೇಗಿರಬೇಕು? ಬುಡಕಟ್ಟುಗಳು ಪ್ರತ್ಯೇಕತೆಯನ್ನು ಉಳಿಸಿಕೊಳ್ಳಬೇಕೆ? ಅಥವಾ



ರಾಷ್ಟ್ರೀಯ ಸಮುದಾಯದಲ್ಲಿ ವಿಲೀನವಾಗಬೇಕೆ? ಈ ತೆರನಾದ ಪ್ರಶ್ನೆಗಳು ಸಮಾಜಶಾಸ್ತ್ರಜ್ಞರ ಮತ್ತು ಮಾನವಶಾಸ್ತ್ರಜ್ಞರ ತಲೆಹೊಕ್ಕು ನಿದ್ರೆಗೆಡಿಸಿದವು. ಪರಿಣಾಮವಾಗಿ ಇಬ್ಬರು ವಿದ್ವಾಂಸರಾದ ವೆರಿಯರ್ ಎಲ್ವಿನ್ ಮತ್ತು ಜಿ.ಎಸ್. ಘುರ್ರ ನಡುವೆ ಈ ಪ್ರಶ್ನೆಗಳ ಬಗ್ಗೆ ಮತ್ತು ಬುಡಕಟ್ಟುಗಳ ಸಮಸ್ಯೆ ಮತ್ತು ಅಭಿವೃದ್ಧಿಯ ಬಗ್ಗೆ ವಾದ ವಿವಾದಗಳು ನಡೆದು ಮಹತ್ವಪೂರ್ಣ ಚರ್ಚೆಗಳು ನಡೆಯಲು ಅವಕಾಶವಾಯಿತು. ಆ ಸಮಯದಲ್ಲಿ ವೆರಿಯರ್ ಎಲ್ವಿನ್‌ರವರು The Baiga (೧೯೩೯) ಮತ್ತು The Aboriginals (೧೯೪೪) ಎಂಬ ಎರಡು ಬುಡಕಟ್ಟು ಅಧ್ಯಯನಗಳ ಬಗ್ಗೆ ಪುಸ್ತಕಗಳನ್ನು ಪ್ರಕಟಿಸಿದರು. ಈ ಪುಸ್ತಕಗಳಲ್ಲಿ ಎಲ್ವಿನ್‌ರವರು "ಬುಡಕಟ್ಟುಗಳನ್ನು ಹೊರಗಿನವರಿಂದ ರಕ್ಷಿಸಲು ಪ್ರತ್ಯೇಕವಾಗಿಡಬೇಕು" (Tribes be kept in a state of isolated to protect them from outsiders) ಎಂದು ಪ್ರತಿಪಾದಿಸಿದ್ದರು. ವೆರಿಯರ್ ಎಲ್ವಿನ್‌ರವರು ಬುಡಕಟ್ಟುಗಳ ಸಂಸ್ಕೃತಿಯನ್ನು ಉಳಿಸಿಕೊಳ್ಳುವುದು ಮಾತ್ರವಲ್ಲದೇ ಅವರನ್ನು ಪ್ರತ್ಯೇಕವಾಗಿಯೇ ಬೆಳೆಸಬೇಕು ಎಂದು ಅಭಿಪ್ರಾಯಪಟ್ಟಿದ್ದರು. ಆದರೆ ಪ್ರಸಿದ್ಧ ಸಮಾಜಶಾಸ್ತ್ರಜ್ಞ ಪ್ರೊ.ಜಿ.ಎಸ್. ಘುರ್ಯೆರವರು "ಬುಡಕಟ್ಟುಗಳು ಹಿಂದುಳಿದ ಹಿಂದೂಗಳಾಗಿದ್ದು, ಮುಖ್ಯವಾಹಿನಿಯಲ್ಲಿ ವಿಲೀನವಾಗುವುದೇ ಒಳಿತು" ಎಂಬ ಅಭಿಪ್ರಾಯ ಹೊಂದಿದ್ದರು. ಮುಂದುವರಿದು ಮುಕ್ರಿಯವರು "ಭಾರತದ ಬುಡಕಟ್ಟುಗಳು ಬಹುದೊಡ್ಡ ಜನಸಂಖ್ಯೆಯಿಂದ ಬೇರ್ಪಟ್ಟಿರುವುದೇ (isolated) ಅವರ ಹಿಂದುಳಿದಿರುವಿಕೆಗೆ ಕಾರಣ" ಎಂದು ನಂಬಿದ್ದರು. ಆದ್ದರಿಂದ ಬುಡಕಟ್ಟುಗಳ ಕಡು ಬಡತನವನ್ನು ಹೋಗಲಾಡಿಸಲು ಮತ್ತು ಜೀವನ ಮಟ್ಟವನ್ನು ವೃದ್ಧಿಸಲು ಮುಖ್ಯವಾಹಿನಿಯಲ್ಲಿ ವಿಲೀನ ಮಾಡಬೇಕು ಎಂಬುದಾಗಿ ಅಭಿಪ್ರಾಯಪಟ್ಟರು.

ವಿದ್ವಾಂಸರುಗಳ ವಾದ, ಚರ್ಚೆ, ಪ್ರತಿಪಾದನೆ ಮತ್ತು ಸಂವೇದನೆಗಳ ದೃಷ್ಟಿಕೋನ ಏನೇ ಇದ್ದರೂ, ಇಂದು ಬುಡಕಟ್ಟುಗಳ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ, ಪರಿಸರೀಯ ಸ್ಥಿತಿ-ಗತಿಗಳನ್ನು ಅವಲೋಕಿಸಿದರೆ ಕೈಗಾರೀಕರಣ, ನಗರೀಕರಣ, ಆಧುನೀಕರಣ ಮತ್ತು ಪಾಶ್ಚಾತ್ತೀಕರಣದ ಪ್ರಕ್ರಿಯೆಗಳು ಬುಡಕಟ್ಟು ಜನಜೀವನದ ಮೇಲೆ ಪ್ರಭಾವ ಬೀರುತ್ತಿರುವುದು ಕಂಡುಬರುತ್ತಿದೆ. ಒಂದು ವೇಳೆ ನಾವು ಬುಡಕಟ್ಟುಗಳನ್ನು ಪ್ರತ್ಯೇಕವಾಗಿಟ್ಟು ಅವರನ್ನು ಸಂರಕ್ಷಿಸುತ್ತೇವೆ ಮತ್ತು ಅವರ ಅಭಿವೃದ್ಧಿಯನ್ನು ಸಾಧಿಸುತ್ತೇವೆ ಎಂದು ಹೇಳಿದರೆ ಅದು ಅಪ್ಪಟ ಸುಳ್ಳಾಗುತ್ತದೆ. ಕಾರಣ ಬುಡಕಟ್ಟು ಜನರ ಮತ್ತು ಅವರ ಸಂಸ್ಕೃತಿಯ ಮೇಲೆ ಈ ಮೇಲೆ ಹೇಳಿದ ಪ್ರಕ್ರಿಯೆಗಳು

ಬಿರುಗಾಳಿಯಾಗಿ ಬೀಸಿ ತಲ್ಲಣವನ್ನು ಎಬ್ಬಿಸುತ್ತಿವೆ. ನಾವು ಎಷ್ಟೇ ಪ್ರಯತ್ನಪಟ್ಟರೂ ನಗರೀಕರಣ, ಆಧುನೀಕರಣ ಪ್ರಕ್ರಿಯೆಗಳ ಪ್ರಭಾವವನ್ನು ತಪ್ಪಿಸಲಿಕ್ಕೆ ಸಾಧ್ಯವಿಲ್ಲ ಮತ್ತು ಇವು ಈಗಿನ ಸಮಾಜಗಳ ಬದಲಾವಣೆಯ ಅವಿಭಾಜ್ಯ ಅಂಗಗಳಾಗಿವೆ. ಒಂದು ವಾದದ ಪ್ರಕಾರ ಬುಡಕಟ್ಟಿನ ಸಂಸ್ಕೃತಿಯು ನಾಶವಾಗುತ್ತಿದೆ, ಅದನ್ನು ರಕ್ಷಿಸಿ ಬುಡಕಟ್ಟಿನ ಸಂಸ್ಕೃತಿಯ ಅನನ್ಯತೆಯನ್ನು ಉಳಿಸಿಕೊಳ್ಳಬೇಕು ಎಂಬುದು. ಆದರೆ ಬುಡಕಟ್ಟುಗಳಿಗೆ ಕೇವಲ



ಸಾಂಸ್ಕೃತಿಕ ಅನನ್ಯತೆಗಳಿರದೆ ಇತರೆ ಸಾಮಾಜಿಕ-ಆರ್ಥಿಕ ಅಥವಾ ಇನ್ನಿತರೆ ಅನನ್ಯತೆಗಳು ಇರುತ್ತವೆ. ಉದಾಹರಣೆಗಾಗಿ ಬುಡಕಟ್ಟುಗಳ ದೇಶೀಯ ತಂತ್ರಜ್ಞಾನ (Tribal Indegenious Technology) ಮತ್ತು ಬುಡಕಟ್ಟುಗಳ ದೇಶೀಯ ಔಷಧ ಪದ್ಧತಿ (Tribal Indegenious Medicine) ಇಂದು ಇವುಗಳ ಸಂರಕ್ಷಣೆ ಅತ್ಯಗತ್ಯವಾಗಿದೆ. ಇವುಗಳನ್ನು ಕಾಪಾಡಿ, ಇವುಗಳಿಗೆ ಜಾಗತಿಕ ಮಾರುಕಟ್ಟೆಯನ್ನು ಒದಗಿಸಬೇಕಾಗುತ್ತದೆ. ಕಾಲ ಕಳೆದಂತೆಲ್ಲಾ ಹಲವು ತೆರನಾದ ಪ್ರಭಾವಗಳಿಗೆ ತುತ್ತಾಗಿ ಬುಡಕಟ್ಟುಗಳಲ್ಲಿ ಸಾಮಾಜಿಕ ಚಲನೆ ಮತ್ತು ಬದಲಾವಣೆ ಉಂಟಾಗುವುದರಿಂದ ಬುಡಕಟ್ಟು ಸಂಸ್ಕೃತಿ ಮತ್ತು ಅವರ ಸಾಂಪ್ರದಾಯಿಕ ತಂತ್ರಜ್ಞಾನವನ್ನು ರಕ್ಷಿಸುವುದು ಅನಿವಾರ್ಯವಾಗಿದೆ. ಏಕೆಂದರೆ ಬುಡಕಟ್ಟುಗಳು ಅರಣ್ಯಗಳಲ್ಲಿ ತಲೆತಲಾಂತರದಿಂದ ವಾಸಿಸುತ್ತಾ ಅರಣ್ಯ ಜೀವಿಗಳಿಗೆ ತೊಂದರೆ ಮಾಡದಂತೆ ಮತ್ತು ಗಿಡಮೂಲಿಕೆಯ ಔಷಧಗಳಲ್ಲಿ ಪ್ರಾವೀಣ್ಯತೆಯನ್ನು ಪಡೆದು ಅರಣ್ಯಗಳ ಅವಿಭಾಜ್ಯ ಅಂಗವಾಗಿದ್ದಾರೆ. ಇಲ್ಲಿ ನಮ್ಮ ಮುಂದಿರುವ ಪ್ರಶ್ನೆಗಳೆಂದರೆ ಬುಡಕಟ್ಟುಗಳು ತಮ್ಮ ಪಾಡಿಗೆ ತಾವು ತಮ್ಮ ಮೂಲ ಸಂಸ್ಕೃತಿಯಲ್ಲಿ ಇರಬೇಕೆ? ಅಥವಾ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಮಾಡಬೇಕೆ? ಅಥವಾ ಸಮಾಜದ ಭಾಗವಾಗಬೇಕೆ? ಎಂಬುದು. ಹೇಗೂ ಸಾಮಾಜಿಕ ಪರಿವರ್ತನೆಗಳ ಪ್ರಭಾವ ಬುಡಕಟ್ಟು ಜನರ ಮೇಲೆ ಆಗುವುದರಿಂದ, ಬುಡಕಟ್ಟು ಜನರ ಸಂಸ್ಕೃತಿ, ನೆಲ, ಜಲ, ಅದರ ಸಾಂಪ್ರದಾಯಿಕ ಕಸುಬು ತಂತ್ರಜ್ಞಾನವನ್ನು ಸಂರಕ್ಷಿಸಿಕೊಂಡೇ ಅವರನ್ನು ನಿಜವಾದ ಅಭಿವೃದ್ಧಿಯ ದಿಕ್ಕಿನತ್ತ ತರುವುದು ಸೂಕ್ತವಾದುದಾಗಿದೆ. ಮೂಲ ಸೌಕರ್ಯಗಳಾದ ನೀರು, ವಿದ್ಯುತ್, ರಸ್ತೆ, ಶಾಲೆ ಮುಂತಾದ ಸೌಲಭ್ಯಗಳನ್ನು ಕಲ್ಪಿಸಿ ಜೀವನ ಮಟ್ಟವನ್ನು (living conditions) ಉತ್ತಮಪಡಿಸುವುದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಬುಡಕಟ್ಟು ಆಯೋಗದ ರಾಷ್ಟ್ರೀಯ ಅಧ್ಯಕ್ಷರು "ಎಷ್ಟೋ ಬುಡಕಟ್ಟು ಪುನರ್‌ವಸತಿ ಯೋಜನೆಗಳು ವಿಫಲವಾಗಿವೆ" ಎಂದಿದ್ದಾರೆ. ಪುನರ್‌ವಸತಿ ಕಾಲೋನಿಗಳಲ್ಲಿ ವಿದ್ಯುತ್, ರಸ್ತೆ, ಶಾಲಾ ಸೌಲಭ್ಯಗಳ ಕೊರತೆ ಎದ್ದು ಕಾಣುತ್ತದೆ. ಈ ನಿಟ್ಟಿನಲ್ಲಿ ಬುಡಕಟ್ಟುಗಳ ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಬುಡಕಟ್ಟುಗಳು ವಾಸಿಸುವ ಪ್ರದೇಶಗಳನ್ನು ಪರಿಶಿಷ್ಟ ಬುಡಕಟ್ಟುಗಳ ಪ್ರದೇಶ (Scheduled Areas) ಗಳೆಂದು ಘೋಷಿಸಿ ಅಗತ್ಯ ಸೌಲಭ್ಯಗಳನ್ನು ಒದಗಿಸಬೇಕಾಗುತ್ತದೆ. ಅಲ್ಲದೆ ಕರ್ನಾಟಕ ರಾಜ್ಯದ ಕೆಲವು ಪ್ರದೇಶಗಳನ್ನೊಳ ಗೊಂಡಂತೆ ಹಲವು ಬುಡಕಟ್ಟು ನೆಲೆಗಳು (settlements) ಕಂದಾಯದ ದಾಖಲಾತಿಗಳಲ್ಲಿ

ನಮೂದಿಸಲ್ಪಟ್ಟಿಲ್ಲ. ಅಂತಹ ಬುಡಕಟ್ಟು ನೆಲೆಗಳನ್ನು ಗುರುತಿಸಿ ಕಂದಾಯ ಗ್ರಾಮಗಳೆಂದು ಘೋಷಿಸಬೇಕು. ಆಗ ಮಾತ್ರ ಸರ್ಕಾರದ ಯೋಜನೆಯ ಕಾರ್ಯಕ್ರಮಗಳು ನೇರವಾಗಿ ಬುಡಕಟ್ಟು ಜನರಿಗೆ ತಲುಪಲು ಸಾಧ್ಯವಾಗುತ್ತದೆ. ಮುಖ್ಯವಾಗಿ ಶಾಲೆಗಳನ್ನು ಸ್ಥಾಪಿಸಿ ಪ್ರಾಥಮಿಕ ಶಿಕ್ಷಣವನ್ನು ಕೊಡುವುದು ಮುಖ್ಯವಾಗುತ್ತದೆ. ಜೊತೆಗೆ ಉನ್ನತ ಶಿಕ್ಷಣಕ್ಕೆ ಪ್ರೇರೇಪಿಸುವುದು ಇಂದಿನ ಅಗತ್ಯಗಳಲ್ಲಿ ಒಂದಾಗಿದೆ.



ಬುಡಕಟ್ಟು ಸಮುದಾಯಗಳಲ್ಲಿ ಜೀತ ಪದ್ಧತಿಯಿಂದಾಗಿ ಶಾಲೆಗೆ ಹೋಗುವವರ ಸಂಖ್ಯೆ ಕಡಿಮೆ ಇದೆ. ಇಂದಿಗೂ ಜಮೀನ್ದಾರರು ಬುಡಕಟ್ಟು ಮಕ್ಕಳನ್ನು ಜೀತಕ್ಕೆ ಇಟ್ಟುಕೊಂಡು ಶಾಲೆಗೆ ಹೋಗುವುದನ್ನು ತಡೆಯುವ ವ್ಯವಸ್ಥಿತ ಸಂಚನ್ನು ಕೆಲವು ಕಡೆಗಳಲ್ಲಿ ನೋಡಬಹುದಾಗಿದೆ. ಶಾಲೆಗೆ ಕಲಿಯಲು ಹೋದರೆ ವಿದ್ಯಾವಂತರಾಗಿ ತಮ್ಮ ಹಕ್ಕುಗಳ ಪ್ರತಿಪಾದನೆಯ ಬಗ್ಗೆ ಅರಿವು ಬರುತ್ತದೆ. ಆಗ ನಮ್ಮ ಜಮೀನಿನಲ್ಲಿ ಮತ್ತು ಮನೆಯಲ್ಲಿ ಜೀತದಾಳುಗಳಾಗಿ ದುಡಿಯಲು ಬರುವುದಿಲ್ಲವೆಂದು ನಂಬಿ ಬೇಕಂತಲೇ ಅವರನ್ನು ಶಾಲೆಗೆ ಹೋಗದಂತೆ ನೋಡಿಕೊಳ್ಳುತ್ತಾರೆ. ಸರ್ಕಾರ ಇತ್ತೀಚೆಗೆ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ಮತ್ತು ಉತ್ತೇಜನ ಕೊಡುತ್ತಿದ್ದು, ಹಲವಾರು ಸುಧಾರಣಾ ಕ್ರಮಗಳನ್ನು ಕೈಗೊಂಡಿರುವುದರಿಂದ ಇಂದು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಮಕ್ಕಳು ಶಾಲೆಗೆ ಕಲಿಯಲು ಹೋಗುತ್ತಿರುವುದನ್ನು ನೋಡಬಹುದು. ಇಂತಹದೇ ಶಿಕ್ಷಣದ ಕಾರ್ಯಕ್ರಮಗಳನ್ನು ವಿಶೇಷವಾಗಿ ಬುಡಕಟ್ಟು ಜನರ ಮಕ್ಕಳಿಗಾಗಿ ಅವರಿರುವ ಪ್ರದೇಶಗಳಿಗೆ ವಿಸ್ತರಿಸಿದರೆ ಅದರಿಂದ ಈ ಜನರ ಮೊದಲ ಪೀಳಿಗೆಯ ಜನರ ಶಿಕ್ಷಣ ದಾಹದ ಸಮಸ್ಯೆ ನಿವಾರಣೆಯಾಗುವುದರಲ್ಲಿ ಸಂಶಯವಿಲ್ಲ ಮತ್ತು ಬುಡಕಟ್ಟು ಜನರು ಎಲ್ಲರಂತೆ ವಿದ್ಯಾವಂತರಾಗಿ ಅವರೂ ಅಭಿವೃದ್ಧಿಯ ಯೋಜನೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಸಹಾಯಕವಾಗುತ್ತದೆ. ಆದ್ದರಿಂದ ಶಿಕ್ಷಣ ಬುಡಕಟ್ಟು ಜನರಿಗೆ ಒಂದು ಮುಖ್ಯವಾದ ವಾಹಕವಾಗಿದೆ ಮತ್ತು ಅವರ ಸಾಮಾಜಿಕ ಚಲನೆಗೆ ಅನುವು ಮಾಡಿಕೊಡುತ್ತದೆ. ಈ ಪ್ರಕ್ರಿಯೆಯಿಂದ ಬುಡಕಟ್ಟುಗಳ ಅನನ್ಯತೆಯನ್ನು ಉಳಿಸಿ ಮತ್ತು ಸಂರಕ್ಷಿಸಿಕೊಂಡೇ ಅವರ ಅಭಿವೃದ್ಧಿ ಮಾಡಬಹುದು. ಉದಾ: ಈಶಾನ್ಯ ವಲಯದ ನಾಗಾಗಳು ತಮ್ಮ ಸಂಸ್ಕೃತಿಯ ಅನನ್ಯತೆಯನ್ನು ಉಳಿಸಿಕೊಂಡೇ ಹೋರಾಟದ ಮೂಲಕ ತಮ್ಮ ಹಕ್ಕುಗಳನ್ನು ರಕ್ಷಿಸಿಕೊಂಡು ಮತ್ತು ಪ್ರತಿಪಾದಿಸಿಕೊಂಡು ಅಭಿವೃದ್ಧಿ ಹೊಂದುತ್ತಿದ್ದಾರೆ. ಪರಿಣಾಮವಾಗಿ ಅಲ್ಲಿನ ಸರ್ಕಾರ ನಾಗಾ ಬುಡಕಟ್ಟುಗಳ ಪ್ರದೇಶವನ್ನು ಅನುಸೂಚಿತ ಪ್ರದೇಶ (Scheduld Areas) ಎಂದು ಘೋಷಿಸಿದೆ. ಕರ್ನಾಟಕದ ಸಂದರ್ಭದಲ್ಲಿ ಹೇಳುವುದಾದರೆ ಬಯಲು ಪ್ರದೇಶಗಳಲ್ಲಿ ಕಂಡುಬರುವ ಕೆಲವು ಬುಡಕಟ್ಟು ಜನಾಂಗಗಳು ಜಾತಿ ವ್ಯವಸ್ಥೆಯ ಪ್ರಭಾವದಿಂದಾಗಿ ತಮ್ಮ ಸಾಂಸ್ಕೃತಿಕ ಐಡೆಂಟಿಟಿಯನ್ನು ಕಳೆದುಕೊಳ್ಳುತ್ತಿದ್ದಾರೆ ಎಂಬುದು ಸತ್ಯವಾದ ಮಾತು. ಅದಾಗುವುದಕ್ಕೆ ಮೊದಲು ಅವರ ಸಾಂಸ್ಕೃತಿಕ ವೈವಿಧ್ಯತೆಯನ್ನು ರಕ್ಷಿಸಿ ದಾಖಲಿಸುವುದು ಅಗತ್ಯವಾಗಿದೆ. ಜೊತೆಗೆ ಹೆಚ್ಚಿನದಾಗಿ ಬುಡಕಟ್ಟುಗಳ ಸಾಂಸ್ಕೃತಿಕ ರಚನೆ

ಮತ್ತು ಸ್ವರೂಪಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಅಭಿವೃದ್ಧಿ ಯೋಜನೆಗಳು ವಿಫಲಗೊಳ್ಳುವ ಸಾಧ್ಯತೆ ಹೆಚ್ಚಾಗಿರುತ್ತದೆ. ಬುಡಕಟ್ಟುಗಳ ಆಚಾರ-ವಿಚಾರಗಳು ನಾಶವಾಗದಂತೆ ನೋಡಿಕೊಳ್ಳಬೇಕು ಎಂಬುದು ಗಾಂಧೀಜಿಯವರ ಒಂದು ಮುಖ್ಯವಾದ ಆದರ್ಶವಾಗಿತ್ತು. ಯಾವ ರೀತಿಯಿಂದಲೂ ಅವರ ಸಂಸ್ಕೃತಿಯು ನಾಶವಾಗದಂತೆ ಅವರನ್ನು ಉದ್ಧರಿಸಬೇಕೆಂಬುದೇ ಅವರ ಇಚ್ಛೆಯಾಗಿತ್ತು. ನೆಹರೂರವರೂ ಸಹ



ತಮ್ಮ ಪಂಚಶೀಲ ತತ್ವಗಳಲ್ಲಿ ಬುಡಕಟ್ಟುಗಳ ಜೀವನದ ಸ್ಥಿತಿಗತಿಗಳನ್ನು ಅವರ ಸಂಸ್ಕೃತಿಗೆ ಧಕ್ಕೆಯಾಗದಂತೆ ಸುಧಾರಿಸಬೇಕು, ಅಲ್ಲದೆ ರಸ್ತೆ, ಸಾರಿಗೆ ಸಂಪರ್ಕ, ಶಾಲೆಗಳ ಸ್ಥಾಪನೆ, ವೈದ್ಯ ಶಾಲೆ ಮತ್ತು ಗೃಹ ಕೈಗಾರಿಕೆಗಳ ನಿರ್ಮಾಣವು ಅವಶ್ಯಕ ಎಂದು ಅಭಿಪ್ರಾಯಪಟ್ಟಿದ್ದರು. ಜೊತೆಗೆ ಬುಡಕಟ್ಟು ಜನರಿಗೆ ಸೇರಿದ ಅರಣ್ಯ ಮತ್ತು ಭೂಮಿಗೆ ಸಂಬಂಧಿಸಿದ ಹಕ್ಕುಗಳನ್ನು ಸಂರಕ್ಷಿಸಬೇಕು ಎಂಬುದಾಗಿ ಹೇಳಿದ್ದರು.

ಭಾರತದ ಸ್ವಾತಂತ್ರ್ಯಾನಂತರ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿರುವ ಜಾತಿ ಮತ್ತು ಸಮುದಾಯಗಳನ್ನು ಗುರುತಿಸಿ ಅವುಗಳನ್ನು ಅಧ್ಯಯನ ಮಾಡಿ ಅವರಲ್ಲಿರುವ ಅಸಮಾನತೆ ಮತ್ತು ಹಿಂದುಳಿದಿರುವಿಕೆಯನ್ನು ತೊಡೆದುಹಾಕುವ ಸಲುವಾಗಿ ಹಾಗೂ ಸಾಮಾಜಿಕ ನ್ಯಾಯವನ್ನು ಒದಗಿಸಿ ಸಂವಿಧಾನ ಬದ್ಧವಾದ ಹಕ್ಕನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಯಿತು. ಭಾರತದ ಸಂವಿಧಾನದ ಕಲಂ ೨೪೨(೧)ರ ಪ್ರಕಾರ ರಾಷ್ಟ್ರಪತಿಯವರು ಮತ್ತು ಸಂಸತ್ತು ಎಲ್ಲಾ ರೀತಿಯಿಂದಲೂ ಹಿಂದುಳಿದ ಅರ್ಹ ಸಮುದಾಯಗಳನ್ನು ಅನುಸೂಚಿತ ಬುಡಕಟ್ಟುಗಳೆಂದು ಪರಿಗಣಿಸಿ ಮತ್ತು ಆದೇಶಿಸಿ ವಿವಿಧ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ಕಲ್ಪಿಸಬಹುದಾಗಿದೆ. ಪ್ರಾರಂಭಿಕ ಹಂತದಲ್ಲಿ ಭಾರತ ಸರ್ಕಾರವು ಬುಡಕಟ್ಟುಗಳ ಅಭಿವೃದ್ಧಿಗೆ ಮೂರು ನೀತಿಗಳನ್ನು ರೂಪಿಸಿ, ಅವುಗಳೆಂದರೆ ರಕ್ಷಣಾತ್ಮಕ (Protection) ನೀತಿ, ಮೀಸಲಾತಿ ನೀತಿ (Reservation Policy) ಮತ್ತು ಅಭಿವೃದ್ಧಿ ನೀತಿ (Developmental), ರಕ್ಷಣಾತ್ಮಕ ನೀತಿಯು ಸಂವಿಧಾನಾತ್ಮಕ ಮತ್ತು ಕಾನೂನಾತ್ಮಕ ಹಕ್ಕುಗಳನ್ನು ಒಳಗೊಂಡಿದ್ದು, ಬುಡಕಟ್ಟು ಜನರ ಹಿತಾಸಕ್ತಿಗಳನ್ನು ಕಾಪಾಡುವಂಥವಾಗಿದ್ದವು. ಮೀಸಲಾತಿ ನೀತಿಯು ವಿವಿಧ ಕ್ಷೇತ್ರಗಳಲ್ಲಿ ಮೀಸಲಾತಿಯನ್ನು ವಿಸ್ತರಿಸುವ ಯೋಜನೆಯನ್ನೊಳಗೊಂಡಿತ್ತು. ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಮತ್ತು ಚಟುವಟಿಕೆಗಳನ್ನು ಬುಡಕಟ್ಟು ಜನರ ಕಲ್ಯಾಣ ಸಾಧಿಸಲು ಪ್ರಾರಂಭಿಸಲಾಯಿತು. ರಾಷ್ಟ್ರಪತಿಯವರ ಅನುಮೋದನೆಯಿಂದ ಅನುಸೂಚಿತ ಬುಡಕಟ್ಟುಗಳ ಪಟ್ಟಿಗೆ ಸೇರಿದ ಸಮುದಾಯಗಳು (ಬುಡಕಟ್ಟುಗಳು) ಸಂವಿಧಾನ ಬದ್ಧವಾಗಿ ವಿಶೇಷ ಸವಲತ್ತುಗಳನ್ನು ಪಡೆಯಬಹುದಾಗಿದೆ. ಆಯಾ ರಾಜ್ಯಗಳು ಸಹ ಸಂವಿಧಾನ ಬದ್ಧ

ಮೀಸಲಾತಿಯ ಸೌಲಭ್ಯವನ್ನು ಒದಗಿಸಬಹುದಾಗಿದೆ. ಪರಿಶಿಷ್ಟ ಬುಡಕಟ್ಟುಗಳೆಂದು ರಾಷ್ಟ್ರಪತಿಯವರು ಅನುಮೋದಿಸಿದ ಪಟ್ಟಿಯಲ್ಲಿರುವ ಅನುಸೂಚಿತ ಬುಡಕಟ್ಟುಗಳಿಗೆ ಸಂವಿಧಾನ ಬದ್ಧವಾದ ಸೌಲಭ್ಯಗಳನ್ನು ಮತ್ತು ಮೀಸಲಾತಿಯ ಹಕ್ಕುಗಳನ್ನು ರಕ್ಷಿಸುವುದು ಆದ್ಯ ಕರ್ತವ್ಯವಾಗಿರುತ್ತದೆ. ಅದರಂತೆ ಸಂವಿಧಾನ ಬದ್ಧ ಕಾರ್ಯಕ್ರಮಗಳ ಜಾರಿಯ ಹೊಣೆ ಮತ್ತು ಜವಾಬ್ದಾರಿ ಸರ್ಕಾರದ್ದಾಗಿರುತ್ತದೆ. ಸಂವಿಧಾನದ ಕೆಲವು ಕಲಂಗಳು ಬುಡಕಟ್ಟುಗಳಿಗೆ ಸರ್ಕಾರದಿಂದ ವಿಶೇಷ ಉಪಚಾರ ಅಥವಾ ಮೀಸಲು ಸೌಲಭ್ಯ ಪಡೆಯಲು ಅವಕಾಶ ಮಾಡಿ ಕೊಟ್ಟಿವೆ.



ಸಂವಿಧಾನದ ೪೬ನೇ ಅನುಚ್ಛೇದವು ರಾಜ್ಯದ ದುರ್ಬಲ ವರ್ಗಗಳ ಅದರಲ್ಲಿಯೂ ಬುಡಕಟ್ಟುಗಳ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ರಕ್ಷಿಸಬೇಕು ಹಾಗೂ ಸಾಮಾಜಿಕ ಅನ್ಯಾಯವಾಗದಂತೆ ರಕ್ಷಿಸಿ ಎಲ್ಲಾ ತರಹದ ಶೋಷಣೆಯಿಂದ ತಪ್ಪಿಸಬೇಕು ಎಂದು ಹೇಳುತ್ತದೆ. ಕಲಂ ೨೪೪ರ ಪ್ರಕಾರ ರಾಷ್ಟ್ರಪತಿಯವರು ಹೆಚ್ಚಿನ ಸಂಖ್ಯೆಯಲ್ಲಿ ಬುಡಕಟ್ಟು ಜನರಿರುವ ಪ್ರದೇಶವನ್ನು ಅನುಸೂಚಿತ ಪ್ರದೇಶಗಳೆಂದು ಘೋಷಿಸಬಹು ದಾಗಿದೆ. ಆಯಾ ರಾಜ್ಯಗಳ ರಾಜ್ಯಪಾಲರುಗಳು ತಮ್ಮ ಪರಮಾಧಿಕಾರವನ್ನು ಉಪಯೋಗಿಸಿ ರಾಜ್ಯದ ಯಾವುದೇ ಭಾಗವನ್ನು ಅನುಸೂಚಿತ ಪ್ರದೇಶ ಎಂದು ಘೋಷಿಸುವ ಅಧಿಕಾರ ಹೊಂದಿದ್ದಾರೆ. ಅನುಚ್ಛೇದ ೩೩೯ ಕೇಂದ್ರ ಸರ್ಕಾರದ ನಿರ್ದೇಶನದಂತೆ ರಾಜ್ಯ ಸರ್ಕಾರಗಳು ರಾಜ್ಯದ ಅನುಸೂಚಿತ ಬುಡಕಟ್ಟುಗಳ ಕಲ್ಯಾಣಕ್ಕೆ ಅಗತ್ಯವಾದ ನಿರ್ದಿಷ್ಟ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ತಿಳಿಸುತ್ತದೆ. ಸಂವಿಧಾನದ ೨೭೫ ನೇ ಅನುಚ್ಛೇದವು ಸಂವಿಧಾನದ ಸವಲತ್ತುಗಳನ್ನು ಅನುಷ್ಠಾನಗೊಳಿಸಲು ರಾಜ್ಯ ಸರ್ಕಾರಗಳಿಗೆ ಸಹಾಯವನ್ನು ನೀಡುವ ಅವಕಾಶವನ್ನು ಮಾಡಿಕೊಟ್ಟಿದೆ. ಸಂವಿಧಾನದ ೩೩೦, ೩೩೧ ಮತ್ತು ೩೩೪ರ ಕಲಂಗಳು ಅನುಸೂಚಿತ ಬುಡಕಟ್ಟುಗಳಿಗೆ ಸಂಸತ್ತು ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮೀಸಲಾತಿಯ ಸವಲತ್ತುಗಳನ್ನು ಒದಗಿಸುವ ಅವಕಾಶವನ್ನು ಒದಗಿಸಿವೆ. ಸಂವಿಧಾನದ ೩೩೫ನೇ ವಿಧಿಯು ಅನುಸೂಚಿತ ಬುಡಕಟ್ಟುಗಳಿಗೆ ನಾಗರಿಕ ಸೇವೆಗಳಲ್ಲಿ ಮೀಸಲಾತಿಯ ಅವಕಾಶವನ್ನು ಒದಗಿಸಿದೆ. ೧೫, ೧೬ ಮತ್ತು ೧೯ ನೇ ಸಂವಿಧಾನದ ಅನುಚ್ಛೇದಗಳು ಬುಡಕಟ್ಟುಗಳ ಹಿತಾಸಕ್ತಿಯನ್ನು ಮತ್ತು ಜೀವನವನ್ನು ಕಾಪಾಡುವ ಉದ್ದೇಶವನ್ನು ಹೊಂದಿವೆ.

ಸಂವಿಧಾನದ ೫ನೇ ಪಟ್ಟಿ (Shedule) "ಬಿ" ಪ್ಯಾರಾ ೪ರ ಭಾಗವು ಪ್ರತಿಯೊಂದು ರಾಜ್ಯವು ಕಡ್ಡಾಯವಾಗಿ ಬುಡಕಟ್ಟು ಪ್ರದೇಶ ಇರಲಿ ಅಥವಾ ಇಲ್ಲದಿರಲಿ ಆದರೆ ಅನುಸೂಚಿತ ಬುಡಕಟ್ಟುಗಳನ್ನೊಳಗೊಂಡ ಒಂದು ಬುಡಕಟ್ಟು ಸಲಹಾ ಸಮಿತಿಯನ್ನು ರಚಿಸುವ ಅವಕಾಶವನ್ನು ಒದಗಿಸಿದೆ. ಈ ಬುಡಕಟ್ಟು ಸಲಹಾ ಸಮಿತಿಯ

ಕಾರ್ಯವೇನೆಂದರೆ ರಾಜ್ಯದಲ್ಲಿ ಬುಡಕಟ್ಟುಗಳ ಉನ್ನತಿಗೆ ಸಂಬಂಧಿಸಿದಂತೆ ಸಲಹೆ ಕೊಡುವುದಾಗಿರುತ್ತದೆ. ಬುಡಕಟ್ಟು ಸಲಹಾ ಸಮಿತಿಯು ಬುಡಕಟ್ಟು ಪ್ರದೇಶಗಳಿಗೆ ಸಂಬಂಧಿಸಿದಂತೆ ನಿಯಮ ಮತ್ತು ಕಾನೂನುಗಳನ್ನು ರೂಪಿಸುವ ಬಗ್ಗೆ ಚರ್ಚಿಸಿ ಆ ಕಾನೂನುಗಳು ಬುಡಕಟ್ಟುಗಳ ಪ್ರದೇಶಕ್ಕೆ ಅನ್ವಯಿಸುತ್ತವೆಯೋ ಅಥವಾ ಇಲ್ಲವೋ ಎಂಬ ಉದ್ದೇಶವನ್ನಿಟ್ಟುಕೊಂಡು ಮುಖ್ಯವಾಹಕಗಳಾಗಿ ಕೆಲಸ ನಿರ್ವಹಿಸಬೇಕಾಗುತ್ತದೆ. ನೀತಿ ನಿರೂಪಕರು, ಆಡಳಿತಗಾರರು ಮತ್ತು ಬುಡಕಟ್ಟು ಜನರು ಹಾಗೂ ಬುಡಕಟ್ಟೇತರ ಜನರಿಗೆ ಒಟ್ಟಿಗೆ ಕೆಲಸ ಮಾಡಲು ಈ ಬುಡಕಟ್ಟು ಸಲಹಾ ಸಮಿತಿಗಳು ಮುಖ್ಯವಾದ ವೇದಿಕೆಗಳಾಗಬೇಕಾಗುತ್ತದೆ. ಸಂವಿಧಾನದ ಅನುಚ್ಛೇದ ೩೩೮ರ ಪ್ರಕಾರ ಸಂವಿಧಾನದ ಮುಖ್ಯವಾದ ಸವಲತ್ತುಗಳಲ್ಲಿ ಒಂದಾದ ಬುಡಕಟ್ಟುಗಳ ಅಭಿವೃದ್ಧಿಗೆ ಮತ್ತು ಹಿತಾಸಕ್ತಿಗಳಿಗೆ



ಆಯುಕ್ತ (Commissioner)ರನ್ನು ನೇಮಿಸುವುದು ಮುಖ್ಯವಾದುದಾಗಿದೆ. ಕೇಂದ್ರ ಸರ್ಕಾರ ಈ ಅನುಚ್ಛೇದದ ಪ್ರಕಾರ ವಿಶೇಷ ಅಧಿಕಾರಿಯನ್ನು ನೇಮಿಸುತ್ತದೆ. ಈ ಅಧಿಕಾರಿಯು ಬುಡಕಟ್ಟುಗಳ ಕಲ್ಯಾಣ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದರಲ್ಲಿ ಮುಖ್ಯ ಪಾತ್ರವಹಿಸಬೇಕಾಗುತ್ತದೆ. ಅಲ್ಲದೆ ಆಗಾಗ್ಗೆ ಬುಡಕಟ್ಟುಗಳ ಅಭಿವೃದ್ಧಿಗೆ ಅನುಷ್ಠಾನಗೊಂಡ ಕಾರ್ಯಕ್ರಮಗಳ ಪರಿಶೀಲನೆ ಮಾಡುವುದು, ಉಸ್ತುವಾರಿ ನೋಡಿಕೊಳ್ಳುವುದು, ಒಟ್ಟಾರೆ ಬುಡಕಟ್ಟು ಜನರ ಸಂವಿಧಾನಾತ್ಮಕ ಹಿತಾಸಕ್ತಿಗಳನ್ನು ಕಾಪಾಡುವುದು ಈ ಅಧಿಕಾರಿಯ ಕರ್ತವ್ಯವಾಗಿರುತ್ತದೆ.

**ಸಮಿತಿ, ಆಯೋಗಗಳು ಮತ್ತು ಬುಡಕಟ್ಟು ಅಭಿವೃದ್ಧಿ**

ಸಂವಿಧಾನಾತ್ಮಕ ರಕ್ಷಣೆ ಮತ್ತು ಸವಲತ್ತುಗಳಲ್ಲದೆ ಭಾರತದ ಬುಡಕಟ್ಟುಗಳ ಬದುಕನ್ನು ಉತ್ತಮಪಡಿಸಲು ಹಲವು ಯೋಜನೆಗಳನ್ನು ಸರ್ಕಾರ ಕೈಗೊಂಡಿರುವುದು ಗಮನಾರ್ಹ ಸಂಗತಿ. ಅವುಗಳಲ್ಲಿ ಸಮಿತಿ ಮತ್ತು ಆಯೋಗಗಳನ್ನು ಸ್ಥಾಪಿಸುವುದು ಮುಖ್ಯವಾದುದಾಗಿದ್ದು, ಆ ಮೂಲಕ ಕಾರ್ಯಕ್ರಮಗಳನ್ನು ರೂಪಿಸುವುದನ್ನು ಕಾಣಬಹುದಾಗಿದೆ. ಬುಡಕಟ್ಟು ಜನರಿಗೆ ಕನಿಷ್ಟ ಸೌಲಭ್ಯಗಳನ್ನು ಒದಗಿಸುವ ನಿಟ್ಟಿನಲ್ಲಿ ಕಾರ್ಯತಂತ್ರ ರೂಪಿಸಲು ೧೯೬೧ ರಲ್ಲಿ ಕೇಂದ್ರ ಸರ್ಕಾರ ದಾಬರ್‌ರವರ ಅಧ್ಯಕ್ಷತೆಯಲ್ಲಿ ಮೊಟ್ಟ ಮೊದಲ ಬುಡಕಟ್ಟು ಆಯೋಗವನ್ನು ರಚಿಸಿತು. ಈ ಆಯೋಗದ ಶಿಫಾರಸ್ಸಿನಂತೆ ಬುಡಕಟ್ಟುಗಳ ಸಮಗ್ರ ಯೋಜನೆಗಳನ್ನು ರೂಪಿಸಿ ಕನಿಷ್ಟ ಅವಶ್ಯಕತೆಗಳಾದ ಆಹಾರ, ನೀರು, ಉದ್ಯೋಗ, ಶಿಕ್ಷಣ, ಆರೋಗ್ಯ, ರಸ್ತೆ ಸೌಕರ್ಯವನ್ನು ಒದಗಿಸಲಾಯಿತು. ೧೯೭೨ ರಲ್ಲಿ ರಚಿತವಾದ ಬುಡಕಟ್ಟು ಪ್ರದೇಶಗಳ ಅಭಿವೃದ್ಧಿಯ ಕಾರ್ಯಪಡೆಯು (Task Force) ಬುಡಕಟ್ಟುಗಳ ಅಭಿವೃದ್ಧಿಗೆ ನೀತಿಯನ್ನು ರೂಪಿಸುವಾಗ ಪರಿಸರೀಯ ಉದ್ಯೋಗ ಮತ್ತು ಸಾಮಾಜಿಕ ಸೂಚಕ (parameters)ಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ಮಾಡಿತು. ಇದರಿಂದ ಬುಡಕಟ್ಟು ಜನರಿಗೆ ಅತಿ ಶೀಘ್ರದಲ್ಲಿ ಸೌಲಭ್ಯಗಳನ್ನು

ಒದಗಿಸಲು ಸಾಧ್ಯವಾಗುತ್ತದೆ ಎಂಬುದು ಕಾರ್ಯಪಡೆಯ ಉದ್ದೇಶವಾಗಿತ್ತು. ನಂತರ ೧೯೮೦ ರಲ್ಲಿ ಬುಡಕಟ್ಟುಗಳ ಅಭಿವೃದ್ಧಿಗೆ ಬುಡಕಟ್ಟು ಉಪಯೋಜನೆ (Tribal Sub- plan) ಯನ್ನು ರೂಪಿಸ ಲಾಯಿತು. ಈ ಯೋಜನೆಯು ಮುಖ್ಯವಾಗಿ ಎರಡು ಅಂಶಗಳನ್ನು ಒಳಗೊಂಡಿತ್ತು.

ಬುಡಕಟ್ಟುಗಳ ಸಾಮಾಜಿಕ-ಆರ್ಥಿಕ ಅಭಿವೃದ್ಧಿ ಮತ್ತು ಶೋಷಣೆಯಿಂದ ಬುಡಕಟ್ಟು ಜನರನ್ನು ತಪ್ಪಿಸುವುದು. ಬುಡಕಟ್ಟು ಉಪಯೋಜನೆಗೆ ಹಣಕಾಸಿನ ನೆರವನ್ನು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಒದಗಿಸಿದವು. ಈ ಯೋಜನೆಯ ಅಡಿಯಲ್ಲಿ ಶಿಕ್ಷಣ, ಆರೋಗ್ಯ ಮತ್ತು ವಸತಿ ಒದಗಿಸುವುದರ ಜೊತೆಗೆ ಕುಟುಂಬ ಆಧಾರಿತ ವರಮಾನದ ಯೋಜನೆಗಳಾದ ಕೃಷಿ, ಹೈನುಗಾರಿಕೆಗೆ ಸಹಕಾರ, ಬುಡಕಟ್ಟುಗಳ ಕರಕುಶಲ ಕಲೆಗೆ ಮತ್ತು ಇತರೆ ಪರಿಣತಿಗೆ ಹೆಚ್ಚು ಒತ್ತು ಕೊಡಲಾಯಿತು. ಬುಡಕಟ್ಟು



ಉಪಯೋಜನೆಯಲ್ಲಿ ಒಟ್ಟಾರೆ ಮೂಲ ಸೌಕರ್ಯಗಳಿಗೆ ಹೆಚ್ಚಿನ ಗಮನಹರಿಸಿದ್ದರಿಂದ ಬುಡಕಟ್ಟು ಜನರ ಅಭಿವೃದ್ಧಿಯನ್ನು ಅಷ್ಟೇನು ಸಾಧಿಸಿದಂತಾಗಲಿಲ್ಲ. ಆದರೂ, ಶಿಕ್ಷಣದ ಮಟ್ಟಿಗೆ ಹೇಳುವುದಾದರೆ ಬುಡಕಟ್ಟು ಅಭಿವೃದ್ಧಿಯನ್ನು ಸಾಧಿಸಿದಂತಾಯಿತು. ಇದರಿಂದ ಶೇಕಡ ೯೫ರಷ್ಟು ಬುಡಕಟ್ಟು ನೆಲೆಗಳು ಶಾಲೆಗಳನ್ನು ಹೊಂದಲು ಸಾಧ್ಯವಾಯಿತು.

೧೯೯೭ ರಲ್ಲಿ ಕೇಂದ್ರ ಸಕಾರ ಎರಡನೇ ಅನುಸೂಚಿತ ಪ್ರದೇಶ ಮತ್ತು ಬುಡಕಟ್ಟುಗಳ ಆಯೋಗವನ್ನು ರಚಿಸಿದ್ದು, ದಿಲೀಪ್ ಸಿಂಗ್ ಬೂರಿಯಾರನ್ನು ಅದರ ಅಧ್ಯಕ್ಷರನ್ನಾಗಿ ನೇಮಕ ಮಾಡಿದೆ. ಈ ಆಯೋಗವು ಬುಡಕಟ್ಟುಗಳ ಅಭಿವೃದ್ಧಿಗೆ ಮತ್ತು ಕಲ್ಯಾಣಕ್ಕೆ ೪೦ ವರ್ಷಗಳ ಒಂದು ಯೋಜನೆಯನ್ನು ರೂಪಿಸಿದೆ. ಈ ಯೋಜನೆಯ ಮುಖ್ಯ ಉದ್ದೇಶ ಭೂಮಿ, ನೀರು ಮತ್ತು ಅರಣ್ಯಕ್ಕೆ ಸಂಬಂಧಿಸಿದಂತೆ ಬುಡಕಟ್ಟು ಜನರ ಹಕ್ಕುಗಳ ರಕ್ಷಣೆ, ಶಿಕ್ಷಣ, ಆರೋಗ್ಯ, ಉದ್ಯೋಗ ಮತ್ತು ಇತರೆ ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಪಡಿಸುವುದಾಗಿದೆ.

**ಬುಡಕಟ್ಟು ಅಭಿವೃದ್ಧಿಯ ಇತ್ತೀಚಿನ ಒಲವುಗಳು**

ಬುಡಕಟ್ಟು ಅಭಿವೃದ್ಧಿಯಲ್ಲಿ ಸರ್ಕಾರದ ಜೊತೆಗೆ ಕೆಲವು ಸರ್ಕಾರೇತರ ಸಂಸ್ಥೆಗಳು ಕೈ ಜೋಡಿಸಿರುವುದು ಇತ್ತೀಚಿನ ವಿದ್ಯಮಾನಗಳಲ್ಲಿ ಒಂದು. ಸರ್ಕಾರ ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದರೆ ಆ ಯೋಜನೆಗಳು ಬುಡಕಟ್ಟುಗಳಿಗೆ ತಲುಪುವಲ್ಲಿ ಮತ್ತು ಅವುಗಳ ಬಗ್ಗೆ ಅರಿವು ಮೂಡಿಸುವಲ್ಲಿ ಸರ್ಕಾರೇತರ ಸಂಸ್ಥೆಗಳ ಪಾತ್ರ ಮಹತ್ವವಾದದ್ದು. ಈ ನಿಟ್ಟಿನಲ್ಲಿ ಹಲವು ಸರ್ಕಾರೇತರ ಸಂಸ್ಥೆಗಳು ಬುಡಕಟ್ಟು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ

ಪರಿಣಾಮಕಾರಿಯಾಗಿ ಭಾಗವಹಿಸಿರುವುದು ಶ್ಲಾಘನೀಯವಾದುದು. ಆದಾಗ್ಯೂ, ಕೆಲವು ಸರ್ಕಾರೇತರ ಸಂಸ್ಥೆಗಳು ಹೆಸರಿಗೆ ಮಾತ್ರ ಅಭಿವೃದ್ಧಿಯ ನೆಪದಲ್ಲಿ ಹಣ ಮಾಡುವ ಸಂಸ್ಥೆಗಳಾಗಿ ರೂಪುಗೊಳ್ಳುತ್ತಿವೆ. ಬುಡಕಟ್ಟುಗಳ ಅಭಿವೃದ್ಧಿ ಎಂದರೆ ಕೇವಲ ಆರ್ಥಿಕ ಅಭಿವೃದ್ಧಿಯಾಗಿರದೆ ಇತರೆ ಸಾಮಾಜಿಕ-ಸಾಂಸ್ಕೃತಿಕ ಆಯಾಮಗಳನ್ನು ಒಳಗೊಂಡಿರುತ್ತದೆ. ಸ್ವಾತಂತ್ರ್ಯಾನಂತರದ ದಿನಗಳಿಂದಲೂ ಬುಡಕಟ್ಟು ಅಭಿವೃದ್ಧಿಯ ಬಗ್ಗೆ ನೆಹರೂರವರನ್ನು ಒಳಗೊಂಡಂತೆ ಹತ್ತು ಹಲವಾರು ವ್ಯಕ್ತಿಗಳು, ಸಂಘ ಸಂಸ್ಥೆಗಳು ಚಿಂತನೆ ನಡೆಸಿರುವುದನ್ನು ಗಮನಿಸಬಹುದು. ಸರ್ಕಾರಗಳ ಜೊತೆಗೆ ಸರ್ಕಾರೇತರ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಬುಡಕಟ್ಟು ಅಭಿವೃದ್ಧಿಯಲ್ಲಿ ತೊಡಗಿಕೊಂಡಿರುವುದು ಗಮನಾರ್ಹ ಸಂಗತಿ, ಬುಡಕಟ್ಟು ಅಭಿವೃದ್ಧಿಯನ್ನು ಸಾಧಿಸಬೇಕಾದರೆ ಮೊದಲು ಬುಡಕಟ್ಟು ಸಮಸ್ಯೆಗಳು ಗುರುತಿಸಲ್ಪಡಬೇಕು. ಬುಡಕಟ್ಟು ಸಮಸ್ಯೆಗಳನ್ನು ಗುರುತಿಸಬೇಕಾದರೆ ಅವುಗಳ ಶಾಸ್ತ್ರೀಯ ಮತ್ತು ವೈಜ್ಞಾನಿಕ ಅಧ್ಯಯನ ಅವಶ್ಯಕ. ಈ ದಿಸೆಯಲ್ಲಿ ಬುಡಕಟ್ಟು ಅಭಿವೃದ್ಧಿಗೆ ಕೆಲವು ಸಂಸ್ಥೆಗಳು ಬುಡಕಟ್ಟು ಜನರ ಜೀವನ ಅಥವಾ ಸಮಸ್ಯೆಗಳನ್ನು ಶಾಸ್ತ್ರೀಯವಾಗಿ ಅಧ್ಯಯನ ಮಾಡುವುದರ ಮೂಲಕ ಅವುಗಳ ಅಭಿವೃದ್ಧಿಗೆ ಕಾರಣವಾಗಿವೆ. ಈ ಸಂಬಂಧವಾಗಿ ಭಾರತದಲ್ಲಿ ಅನೇಕ ಸಂಸ್ಥೆಗಳು



ಬುಡಕಟ್ಟು ಅಧ್ಯಯನವನ್ನು ಕೈಗೊಂಡಿವೆ. ಅವುಗಳಲ್ಲಿ Ethnological Survey of India ಮುಖ್ಯವಾದುದು. ಇದು ಬುಡಕಟ್ಟು ಜನರ ಏಳಿಗೆಗಾಗಿಯೇ ಸ್ಥಾಪಿಸಲ್ಪಟ್ಟಿರುವ ಸಂಸ್ಥೆ, ಬುಡಕಟ್ಟು ಜನರ ಬಗ್ಗೆ ಸಮಗ್ರ ಮಾಹಿತಿಯನ್ನು ಸಂಗ್ರಹಿಸುವುದು, ಅವರ ಜೀವನ ವಿಧಾನಗಳ ಬಗ್ಗೆ ಅಧ್ಯಯನ ಮಾಡುವುದು ಇದರ ಕಾರ್ಯವಾಗಿದೆ.

**ಆಕರ ಗ್ರಂಥಗಳು**


* ತೆಲಗಾವಿ, ಲಕ್ಷ್ಮಣ, ೧೯೯೯, ಹಿಂದುಳಿದ ವರ್ಗಗಳು ಮತ್ತು ದಲಿತ ಚಳುವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಇಂದಿರಾ. ಆರ್., ೨೦೦೨, ಮಹಿಳೆ, ಸಮಾಜ ಮತ್ತು ಸಂಸ್ಕೃತಿ, .. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
* ಗುರುಲಿಂಗಯ್ಯ, ಎಂ., ೨೦೦೫, ಬುಡಕಟ್ಟುಗಳು ಮತ್ತು ಅಭಿವೃದ್ಧಿ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

* ಗುರುಲಿಂಗಯ್ಯ, ಎಂ., ೨೦೦೮, ಅಂಚಿನೀಕರಣ ಮತ್ತು ಅಂಚೀಕೃತ ಗುಂಪುಗಳು, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು.

* ಕಾಂತರಾಜು, ಪ್ರಜಾವಾಣಿ, ದಿನಾಂಕ: ೦೮-೦೯-೧೯೯೮ ಮತ್ತು ೦೯- ೧೦-೧೯೯೮.

* ಮೂರನೇ ಹಿಂದುಳಿದ ವರ್ಗಗಳ ಆಯೋಗದ ವರದಿ, ಸಂಪುಟ ೧ ಮತ್ತು ೨, ೧೯೯೦, ಕರ್ನಾಟಕ ಸರ್ಕಾರ, ಬೆಂಗಳೂರು.

* ನಂಜಮ್ಮಣ್ಣಿ ಎಂ. (೧೯೭೪) ಸಾಮಾಜಿಕ ಮಾನವಶಾಸ್ತ್ರ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

* ಮೈತ್ರಿ ಕೆ.ಎಂ. ೨೦೦೨, ಬುಡಕಟ್ಟು ಕುಲ ಕಸುಬುಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

* ಸಂವಾದ ಮಾಸ ಪತ್ರಿಕೆ ಆಗಸ್ಟ್-೨೦೦೩

* ಪ್ರಜಾವಾಣಿ

* ದ ಹಿಂದೂ ದಿನ ಪತ್ರಿಕೆ

ಗೋಷ್ಠಿ - ೪

## ಕರ್ನಾಟಕ ನೀರಾವರಿ

# ಕಾವೇರಿ : ಇತ್ತೀಚಿನ ವಿದ್ಯಮಾನಗಳು

**- ಕ್ಯಾಪ್ಟನ್ ಎಸ್. ರಾಜಾರಾವ್**

**೧. ಕರ್ನಾಟಕದಲ್ಲಿ ಕಾವೇರಿ ನದಿ ಕುರಿತು.**

ಕರ್ನಾಟಕ ರಾಜ್ಯದ ಕೊಡಗು ಜಿಲ್ಲೆಯ ಪಶ್ಚಿಮ ಘಟ್ಟಗಳ ಬ್ರಹ್ಮಗಿರಿ ಪರ್ವತ ಶ್ರೇಣಿಗಳಲ್ಲಿ ಬರುವ 'ತಲಕಾವೇರಿ' ಎಂಬಲ್ಲಿ ಕಾವೇರಿಯು ಹುಟ್ಟುತ್ತದೆ. ಈ ನದಿಯು ಅಂತರರಾಜ್ಯ ನದಿಯಾಗಿದ್ದು ಕರ್ನಾಟಕ, ಕೇರಳ, ತಮಿಳುನಾಡು ಹಾಗೂ ಪಾಂಡಿಚೆರಿಗಳಲ್ಲಿ ಹರಿದಿದೆ. ಈ ನದಿಯ ಒಟ್ಟಾರೆ ಉದ್ದವು ಸುಮಾರು ೮೦೨ ಕಿ.ಮೀ ಗಳು. ಕರ್ನಾಟಕ ಹಾಗೂ ತಮಿಳುನಾಡು ಗಡಿಯನ್ನು ಪ್ರವೇಶಿಸುವ ಮೊದಲು ಕಾರ್ನಾಟಕದಲ್ಲಿ ೩೮೧ ಕಿ.ಮೀ. ಗಳಷ್ಟು ಉದ್ದ ಹರಿಯುತ್ತದೆ. ನದಿಯು ಎರಡು ರಾಜ್ಯಗಳ ಮಧ್ಯೆ ಸುಮಾರು ೬೪ ಕಿ.ಮೀ ಗಳಷ್ಟು ನೈಸರ್ಗಿಕ ವಾದ ಗಡಿರೇಖೆಯನ್ನು ನಿರ್ಮಿಸಿದೆ. ತದನಂತರ ನದಿಯು ತಮಿಳುನಾಡು ರಾಜ್ಯದಲ್ಲಿ ಸುಮಾರು ೩೫೭ ಕಿ.ಮೀ. ಗಳಷ್ಟು ಹರಿದುದ್ದು ಕೊನೆಗೆ ಕಾವೇರಿಪಟ್ಟಣಂ ಎಂಬಲ್ಲಿ ಬಂಗಾಳ ಕೊಲ್ಲಿಯಲ್ಲಿ ಸೇರುತ್ತದೆ. ಕಾವೇರಿಯನ್ನು 'ದಕ್ಷಿಣಗಂಗೆ' ಎಂದು ಕರೆಯಲಾಗಿದ್ದು ಭಾರತದ ಏಳು ಪವಿತ್ರ ನದಿಗಳಲ್ಲಿ ಒಂದಾಗಿ ಪರಿಗಣಿಸಲಾಗಿದೆ.

**೨. ಕಾವೇರಿ ಜಲಾನಯನ ಪ್ರದೇಶದ ಇಳುವರಿ - ರಾಜ್ಯವಾರು ಕೊಡುಗೆ**

ಲಭ್ಯವಿರುವ ದೀರ್ಘಕಾಲಿಕ ದತ್ತಾಂಶಗಳನ್ನು ಪರಿಗಣಿಸಿದಾಗ, ಕಾವೇರಿ ನದಿ ಇಳುವರಿಯ ಶೇಕಡ ೫೦ ರವರೆಗೆ ನೀರಿನ ಅವಲಂಬಿತತೆಯು ತಮಿಳುನಾಡಿನ ಲೋವರ್ ಕೋಲರೂನ್ ಆಣೆಕಟ್ಟು (LCA) ಪ್ರದೇಶದಲ್ಲಿ ೭೪೦ ಟಿ.ಎಂ.ಸಿ ಎಂದು ಅಂದಾಜಿಸಲಾಗಿದೆ. ಇದರಲ್ಲಿ ಕೇರಳವು ೧೨೬ ಟಿ.ಎಂ.ಸಿ ಗಳಷ್ಟು, ಕರ್ನಾಟಕವು ೩೯೨ ಟಿ.ಎಂ.ಸಿ ಗಳಷ್ಟು ಹಾಗೂ ತಮಿಳುನಾಡು ೨೨೨ ಟಿ.ಎಂ.ಸಿ ಗಳಷ್ಟು ಕೊಡುಗೆಯನ್ನು ನೀಡುತ್ತವೆ. ಇದರಿಂದ ಕರ್ನಾಟಕದಲ್ಲಿ ಕಾವೇರಿ ಜಲಾನಯನ ಪ್ರದೇಶದ ನೀರಿನ ಸಂಗ್ರಹಣಾ ಪ್ರದೇಶವು ಹೆಚ್ಚಿನ ಪ್ರಮಾಣದಲ್ಲಿರುವುದು ೫೩.೮ ರಷ್ಟು ಎಂದು ಸ್ಪಷ್ಟವಾಗುತ್ತದೆ.

**೩. ಜಲಾನಯನದ ಮುಖ್ಯ ಅಂಶಗಳು.**

ಕ್ರ.ಸಂ ಜಲಾನಯನದ ಅಂಶಗಳು ಕರ್ನಾಟಕ ತಮಿಳುನಾಡು ಪಾಂಡಿಚೆರಿ ಕೇರಳ

೧ ಹರಿಯುವಿಕೆ ಪ್ರದೇಶ (ಚ.ಕಿ.ಮೀ.)

| | |
|---|---|
| ಪ್ರತಿಶತ | ೩೪೨೭೦ |
| ೪೨.೨ | ೪೪೦೨೦ |

೫೪.೩ ೨೮೭೦

೩೫

೨೨೮ / ನುಡಿಗಂಧ

೨ ಬರಪ್ರದೇಶ (ಚ.ಕಿ.ಮೀ.) ತಾಲೂಕುಗಳ ಸಂಖ್ಯೆ ೨೧೮೭೦

೨೮ ೧೨೭೯೦

೩ ೧೯೨ರಲ್ಲಿನ ನೀರಾವರಿ ಪ್ರಮಾಣ (ಲಕ್ಷಗಳು,ಎಕರೆಗಳು)

೨೮.೨೦೯

೦.೫೩

೪ ಇಳುವರಿಯ ಕೊಡುಗೆ ಟಿ.ಎಂ.ಸಿ. ಗಳಲ್ಲಿ ೩೯೨ ೨೨೨ ೧೨೬

೫ ಜನಸಂಖ್ಯೆ ಲಕ್ಷಗಳಲ್ಲಿ ೧೩೬.೨೫ ೧೮೦.೬೬ ೧೧.೨೩

**೪. ಕರ್ನಾಟಕದ ಕಾವೇರಿ ಜಲಾನಯನ ಪ್ರದೇಶದಲ್ಲಿ ನೀರಾವರಿಯ ಬೆಳವಣಿಗೆ**

ಮೊದಲಿನಿಂದಲೂ ಕರ್ನಾಟಕದಲ್ಲಿ ನೀರಾವರಿ ಬೆಳವಣಿಗೆಗಳು ಕೆರೆಗಳು ಹಾಗೂ ಆಣೆಕಟ್ಟುಗಳ ಮೂಲದಿಂದ ಮಾತ್ರವೇ ನಡೆಯುತ್ತಿದೆ. ಕೆರೆಗಳ ನಿರ್ವಹಣೆಗಾಗಿ ೧೮೨ ರಲ್ಲಿ ಪ್ರತ್ಯೇಕವಾದ ನೀರಾವರಿ ಇಲಾಖೆಯನ್ನು ಸ್ಥಾಪಿಸಲಾಯಿತು. ೧೯೧೧ ರಲ್ಲಿ ರಾಜಮನೆತನದ ಮೈಸೂರು ರಾಜ್ಯವು "ಕೆರೆ ಪಂಚಾಯತ್ ವಿಧೇಯಕ" ಎಂಬ ನಿಯಂತ್ರಣವನ್ನು ಜಾರಿಗೊಳಿಸಿತು. ಜಲಾಶಯ ನಿರ್ಮಾಣದ ಉನ್ನತ ತಂತ್ರಜ್ಞಾನದ ಬಳಕೆ ಬಂದಾದ ಮೇಲೆ ಮಾತ್ರವೇ ಕರ್ನಾಟಕದಲ್ಲಿ ನೀರಾವರಿ ಚಟುವಟಿಕೆಗಳು ರಭಸಗೊಂಡು ಕೃಷ್ಣರಾಜಸಾಗರವನ್ನು ೧೯೧೧ ರಲ್ಲಿ ಪ್ರಾರಂಭಿಸಲಾಯಿತು ಮತ್ತು ಅದರ ಶಂಕುಸ್ಥಾಪನೆಯನ್ನು ನವೆಂಬರ್ ೧೯೧೧ ರಲ್ಲಿ ನೆರವೇರಿಸಲಾಯಿತು. ಇದರ ಸ್ಥಾಪನೆಯ ಕುರಿತು ಮದ್ರಾಸ್ ಪ್ರಾಂತ್ಯವು ವಿರೋಧ ವ್ಯಕ್ತಪಡಿಸಿದ್ದ ಹಿನ್ನೆಲೆಯಲ್ಲಿ ಈ ಕಾಮಗಾರಿಯನ್ನು ೧೯೨೪ ರವರೆಗೆ ನಿಲ್ಲಿಸಲಾಗಿತ್ತು.

**೫. ೧೯೭೨ ರಲ್ಲಿನ ನೀರಾವರಿ ಪ್ರದೇಶ ಮತ್ತು ಕರ್ನಾಟಕ ಹಾಗೂ ತಮಿಳುನಾಡು ಗಳಿಂದ ಕಾವೇರಿ ನೀರಿನ ಬಳಕೆ ಪ್ರಮಾಣ.**

ಡಾ. ಸಿ.ಸಿ. ಪಟೇಲ್ ಅವರ ವರದಿಯಂತೆ ತಮಿಳುನಾಡು ತನ್ನ ೨೮.೨೦೯ ಲಕ್ಷ ಎಕರೆಗಳಷ್ಟು ನೀರಾವರಿ ಪ್ರದೇಶಕ್ಕೆ ೪೮೯ ಟಿ.ಎಂ.ಸಿ. ಗಳಷ್ಟು ನೀರನ್ನು ಬಳಸಿದ್ದರೆ, ಕರ್ನಾಟಕವು ತನ್ನ ಅಡಿಯಲ್ಲಿ ಬರುವ ೬.೬ ಲಕ್ಷ ಎಕರೆಗಳಷ್ಟು ಭೂಮಿಗೆ ನೀರಾವರಿ ಒದಗಿಸಲು ೧೭೭ ಟಿ.ಎಂ.ಸಿ ಗಳಷ್ಟು ನೀರನ್ನು ಬಳಸುತ್ತಿತ್ತು.

**೬. ರಾಜ್ಯದಲ್ಲಿ ನೀರಾವರಿ ಅಭಿವೃದ್ಧಿಗೆ ಅಡ್ಡಿಯಾದ ೧೯ನೇ ಶತಮಾನದ ಒಪ್ಪಂದಗಳು**

೧೯ ನೇ ಶತಮಾನದಲ್ಲಿ ಒತ್ತಡಪೂರ್ವಕವಾಗಿ ಹೇರಲಾದ ಒಪ್ಪಂದಗಳ ಪ್ರಕಾರ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ತೋರಿದ ತಮಿಳುನಾಡಿನ ಧೋರಣೆ ಕರ್ನಾಟಕದಲ್ಲಿನ ನೀರಾವರಿ ಚಟುವಟಿಕೆಗಳ ಅಭಿವೃದ್ಧಿಗೆ ತಡೆಯನ್ನೊಡ್ಡಿದೆ. ಇದರ ಪರಿಣಾಮವಾಗಿ



ರಾಜ್ಯದಲ್ಲಿ ನೀರಾವರಿ ಅಭಿವೃದ್ಧಿಯು ಹಿನ್ನಡೆ ಅನುಭವಿಸಿತು ಹಾಗೂ ೧೯೨೪ ಮೈಸೂರಿನ ೩.೧೫ ಲಕ್ಷ ಎಕರೆಗಳಷ್ಟು ಇದ್ದ ನೀರಾವರಿ ಪ್ರದೇಶ ೧೯೭೨ ರಲ್ಲಿ ಕೇವಲ ೬.೬ ಲಕ್ಷ ಎಕರೆಗಳಷ್ಟಾಗಿತ್ತು. ಇದಕ್ಕೆ ವಿರುದ್ಧವೆಂಬಂತೆ ತಮಿಳುನಾಡಿನಲ್ಲಿ ೧೯೨೪ ರಲ್ಲಿ ೧೪.೫ ಲಕ್ಷ ಎಕರೆಗಳಷ್ಟಿದ್ದ ನೀರಾವರಿ ಕ್ಷೇತ್ರ ೧೯೭೨ ರವರೆಗೆ ೨೮.೨೦೯ ಲಕ್ಷ ಎಕರೆಗಳಷ್ಟಾಗಿದೆ.

**೭. ೧೮೯೨ ಮತ್ತು ೧೯೨೪ ರಲ್ಲಿ ಹೇರಲಾಗಿರುವ ಒಪ್ಪಂದಗಳು.**

ಮೇಲ್ಮಟ್ಟದಲ್ಲಿ ನದಿ ಹರಿಯುವ ರಾಜ್ಯವಾದ ಮೈಸೂರು ತನ್ನ ಪ್ರಾಂತ್ಯದಲ್ಲಿ ಹರಿಯುವ ನೀರನ್ನು ಬಳಸುವ ಕುರಿತು ಸ್ವಾಭಾವಿಕ ಹಕ್ಕು ತನಗಿದೆ' ಎಂದು ನಂಬಿತ್ತು ಮತ್ತು ಕೆಳಪ್ರಾಂತ್ಯದಲ್ಲಿ ನದಿ ಹರಿಯುವ ರಾಜ್ಯವಾದ ಮದ್ರಾಸ್ ತಾನು "ಕೇವಲ ನದಿಯಲ್ಲಿ ಹರಿಯುವ ನೀರಿನ ಪ್ರಮಾಣವನ್ನು ನೀರಾವರಿಗೆ ಉಪಯೋಗಿಸುವುದು ಮಾತ್ರವಾಗಿರದೆ ಗಡಿಯಲ್ಲಿ ಹರಿಯುವ ನದಿ ನೀರಿನ ಸಂಪೂರ್ಣ ಪ್ರಮಾಣವು ತನ್ನ ಮಿತಿಯಲ್ಲೇ ಬರುವುದೆಂಬ ಹಕ್ಕು ಚಲಾಯಿಸಿತು". ಈ ಸಮಸ್ಯೆಯನ್ನು ಬಗೆಹರಿಸಲು ಅಂದಿನ ಭಾರತ ಸರ್ಕಾರವು ಎರಡು ರಾಜ್ಯಗಳಿಗೆ ಮಾರ್ಗದರ್ಶಿಸಲು ನಿಖರವಾದ ನಿಯಮಗಳನ್ನು ರೂಪಿಸಲು ನಿರ್ಧರಿಸಿತು. ಹಾಗಾಗಿ ೧೮೯೨ ರ ಒಪ್ಪಂದವು' ಮೈಸೂರು ಮತ್ತು ಮದ್ರಾಸ್ ರಾಜ್ಯಗಳ ಮಧ್ಯೆ ಜಾರಿಗೆ ಬಂದಿತು. ವಿಸ್ಮಯವೆಂದರೆ ಈ ಒಪ್ಪಂದವು “ಮದ್ರಾಸ್

ಸರ್ಕಾರದ ಪೂರ್ವಾನುಮತಿ ಪಡೆಯದೇ ಮೈಸೂರು ಸರ್ಕಾರವು ಯಾವ ಹೊಸ ನೀರಾವರಿ ಕಾಮಗಾರಿಗಳ ನಿರ್ಮಾಣ ಮಾಡುವಂತಿಲ್ಲ ಎಂದು ವ್ಯಾಖ್ಯಾನಿಸುವ ನಿಯಮಗಳು" ಎಂಬ ತಲೆಬರಹವನ್ನು ಹೊಂದಿತ್ತು.

ಕರ್ನಾಟಕದಲ್ಲಿ ನಿಧಾನಗತಿಯ ನೀರಾವರಿ ಚಟುವಟಿಕೆಗಳಿಗೆ ಕಾರಣ ಹುಡುಕ ಹೊರಟಾಗ, ನೇರವಾಗಿ ಏಕಮಾತ್ರ ಮುಖ್ಯ ಕಾರಣವು ಇದಾಗಿದ್ದು, ಕರ್ನಾಟಕದ (ಅಂದಿನ ಮೈಸೂರು) ಮೇಲೆ ಹೇರಲಾದ ಬ್ರಿಟಿಷ್ ಆಡಳಿತವಿದ್ದ ಮೈಸೂರು ಹಾಗೂ ಮದ್ರಾಸ್ ರಾಜ್ಯಗಳ ಮಧ್ಯದ ೧೮೯೨ ಹಾಗೂ ೧೯೨೪ ರ ನಿಬಂಧನೆಗಳು ಮುಖ್ಯ ಕಾರಣವಾಗಿವೆ.

೧೮೯೨ ರ ಒಪ್ಪಂದದ ನಿಬಂಧನೆಗಳು ಕರ್ನಾಟಕಕ್ಕೆ (ಅಂದಿನ ಮೈಸೂರು) ಕಾವೇರಿನದಿ ಹಾಗೂ ಅದರ ಉಪನದಿಗಳ ನೀರನ್ನು ನೀರಾವರಿಗೆ ಬಳಸಲು ಹಾಗೂ ನೀರಾವರಿಗೆ ಸಂಬಂಧಿಸಿದ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳಲು ಮಾರಕವಾಯಿತು. ಇದರಿಂದಾಗಿ ಅಕ್ಷರಶಃ ಕರ್ನಾಟಕವು ಕೆರೆಗಳ ಪುನರ್ ನಿರ್ಮಾಣ ಸೇರಿದಂತೆ ಇತರೆ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳುವಾಗ ಮದ್ರಾಸ್ ಸರ್ಕಾರದಿಂದ ಪೂರಾನುಮತಿ ಪಡೆಯುವಂತಹ ದಯನೀಯ ಸ್ಥಿತಿಗೆ ಒಳಗಾಗಬೇಕಾಯಿತು. ಆದರೆ ಮದ್ರಾಸ್ ರಾಜ್ಯಕ್ಕೆ ಕಾವೇರಿ ಹಾಗೂ ಅದರ ಜಲಾನಯನ ಪ್ರದೇಶದಲ್ಲಿ ಇಂತಹ ಯಾವುದೇ ರೀತಿಯ ನಿಬಂಧನೆಗಳು ಇರಲಿಲ್ಲ.



೧೮೯೨ ರ ಒಪ್ಪಂದದ ಮೂಲವಾಗಿ ೧೯೨೪ ರ ಒಪ್ಪಂದವು ಚಾಲ್ತಿಗೆ ಬಂದು ಇದರ ಪರಿಣಾಮಸ್ವರೂಪವಾಗಿ ಹೊರಬಂದ ಅಂಶವೇ ಕೆ.ಆರ್.ಸಾಗರ ಜಲಾಶಯದ ನಿರ್ಮಾಣ. ಈ ಒಪ್ಪಂದವು ಮೈಸೂರು ಸರ್ಕಾರವು ಕಾನೂನಾತ್ಮಕ ಹಕ್ಕನ್ನು ಚಲಾಯಿಸುವುದರ ಮುಂಚೆ ನಿಗದಿಪಡಿಸಲಾದ ಮಿತಿಗಳ ಸಂಪೂರ್ಣ ನೀರಿನ ಬಳಕೆಯನ್ನು ಮದ್ರಾಸ್ ಬಳಸಿಕೊಳ್ಳಲು ಹಾಗೂ ಮದ್ರಾಸ್ ರಾಜ್ಯವು ತನ್ನ ೩,೦೧,೦೦೦ ಎಕರೆಗಳಷ್ಟು ಜಮೀನುಗಳಿಗೆ ನೀರುಣಿಸಲು ೯೩.೫ ಟಿ.ಎಂ.ಸಿ. ಸಾಮರ್ಥ್ಯದ ಮೆಟ್ಟೂರು ಜಲಾಶಯದ ನಿರ್ಮಾಣಕ್ಕೆ ಅನುವು ಮಾಡಿಕೊಟ್ಟಿತು. ಅಲ್ಲದೆ ಈ ಮೂಲಕ ಡೆಲ್ಟಾ ಪ್ರದೇಶಗಳಲ್ಲಿ ಎರಡನೇ ಬೆಳೆಗೆ ಒಳಗೊಂಡಂತೆ ಖಾತರಿ ನೀರಾವರಿ ಮತ್ತು ಜಲಾಶಯದ ಸುತ್ತಮುತ್ತಲಿನ ಉಪನದಿಗಳ ಮಿತಿಯಲ್ಲಿ ಬರುವ ಸ್ಥಳಗಳಲ್ಲಿ ಇತರೆ ಜಲಾಶಯಗಳ ನಿರ್ಮಾಣ ಮಾಡಿಕೊಳ್ಳಲು ಅನುಕೂಲ ಮಾಡಿ ಕೊಟ್ಟಿತು. ಇತ್ತ ಮೈಸೂರು ರಾಜ್ಯಕ್ಕೆ ಈ ಒಪ್ಪಂದವು ತೀವ್ರವಾದ ನಿಬಂಧನೆಗಳನ್ನೊಡ್ಡಿ ಅದರ ವ್ಯಾಪ್ತಿಯಲ್ಲಿ ಬರುವ ೧,೨೫,೦೦೦ ಎಕರೆಗಳಷ್ಟು ಜಮೀನುಗಳಿಗೆ ನೀರುಣಿಸಲು ೪೪.೮೩ ಟಿ.ಎಂ.ಸಿ ಸಾಮರ್ಥ್ಯದ ಕೆ.ಆರ್.ಸಾಗರ ಜಲಾಶಯದ ನಿರ್ಮಾಣ ಮಾಡಲು ಹಾಗೂ ಮುಂದೆ ಭವಿಷ್ಯದಲ್ಲಿ ೧,೧೦,೦೦೦ ಎಕರೆಗಳಷ್ಟು ಜಮೀನುಗಳಿಗೆ ನೀರುಣಿಸಲು ಕಾವೇರಿ ನೀರಿನ ಒಳ ಹರಿವು ಹಾಗೂ ಇತಿಮಿತಿಗಳನ್ನು

ಪರಿಗಣಿಸಿ ಕಾವೇರಿ ಹಾಗೂ ಅದರ ಉಪನದಿಗಳ ವ್ಯಾಪ್ತಿಯಲ್ಲಿ ಬರುವ ಜಮೀನುಗಳಿಗೆ ಅನುಕೂಲವಾಗುವಂತೆ ಒಟ್ಟಾರೆಯಾಗಿ ೪೫ ಟಿ.ಎಂ.ಸಿ. ಸಾಮರ್ಥ್ಯದ ಜಲಾಶಯ ನಿರ್ಮಿಸುವಂತೆ ಅನುವು ಮಾಡಿಕೊಟ್ಟಿತಾದರೂ ಅದನ್ನೂ ಸಹ ಮದ್ರಾಸ್ ಸರ್ಕಾರದ ಪೂರ್ವಾನುಮತಿಯಿಲ್ಲದೆ ಮಾಡುವಂತಿಲ್ಲ ಎಂಬ ಅಂಶವನ್ನು ಹೊಂದಿತ್ತು. ಒಪ್ಪಂದದಲ್ಲಿ ಅಳವಡಿಸಲಾದ ಮಿತ ಹರಿವಿನ ವಿಧಿಗಳು ಪ್ರತಿ ತಿಂಗಳಿನ ನಿಬಂಧನೆಗೆ ಒಳಪಟ್ಟಂತೆ ಒಳಹರಿವು ಒಂದು ನಿರ್ದಿಷ್ಟ ಪರಿಮಾಣದ ಮೇಲಿದ್ದಾಗ ಮಾತ್ರವೇ ಕರ್ನಾಟಕಕ್ಕೆ ಕೃಷ್ಣರಾಜಸಾಗರದಲ್ಲಿ ನೀರು ಸಂಗ್ರಹಿಸುವಂತೆ ಒತ್ತಡ ಹೇರಿದ್ದವು.

**೮. ಕರ್ನಾಟಕ ರಾಜ್ಯದ ಕೃಷ್ಣರಾಜ ಸಾಗರ ಆಣೆಕಟ್ಟೆಯಲ್ಲಿ ನೀರನ್ನು ಸಂಗ್ರಹ ಮಾಡುವುದಕ್ಕಿಂತ ಮುಂಚೆ ಅಪ್ಪರ್ ಆಣೆಕಟ್ಟೆಯಲ್ಲಿ ಹರಿಯುವ ನೀರಿನ ಕನಿಷ್ಟ ಮಟ್ಟ ಮತ್ತು ಹರಿಯುವ ನೀರಿನ ಪ್ರಮಾಣವನ್ನು ಖಚಿತಪಡಿಸಿಕೊಳ್ಳುವಿಕೆ.**

ಕರ್ನಾಟಕ ರಾಜ್ಯವು ತನ್ನ ಕೃಷ್ಣರಾಜಸಾಗರ ಅಣೆಕಟ್ಟಿನಲ್ಲಿ ನೀರನ್ನು ಸಂಗ್ರಹಿಸುವ ಮುನ್ನ, ತಮಿಳುನಾಡಿನಲ್ಲಿರುವ ಕಾವೇರಿ ಅಣೆಕಟ್ಟಿನ ಉತ್ತರಭಾಗದಲ್ಲಿ ಸ್ಥಾಪಿಸಿರುವ ಮಾಪನ ಕೇಂದ್ರದಲ್ಲಿ ಹರಿಯುವ ಕನಿಷ್ಠ ನೀರಿನ ಮಟ್ಟ ಮತ್ತು ಅದಕ್ಕೆ ತತ್ಸಮಾನ ನೀರಿನ ಹರಿವಿನ ಪ್ರಮಾಣವನ್ನು ಈ ಕೆಳಗೆ ನಿಗದಿಪಡಿಸಿದಂತೆ ಇರುವುದನ್ನು ಖಚಿತಪಡಿಸಿಕೊಂಡು ನಂತರವಷ್ಟೆ ತನ್ನ ಬಳಕೆಗೆ ಕೃಷ್ಣರಾಜ ಸಾಗರ ಅಣಿಕಟ್ಟಿನಲ್ಲಿ ನೀರನ್ನು ಸಂಗ್ರಹ ಮಾಡಬೇಕೆಂಬ ಕಟ್ಟುನಿಟ್ಟಿನ ನಿಬಂಧನೆಯನ್ನು ಜಾರಿಮಾಡಿತ್ತು.



ಕಾವೇರಿ ಉತ್ತರ ಮಾಪನ ಕೇಂದ್ರದಲ್ಲಿ ಹರಿಯುವ ನೀರಿನ ಎತ್ತರ ೧೮/೦೬/ ೧೯೨೯ ರ ಒಪ್ಪಂದದ ಪ್ರಕಾರ ತತ್ಸಮಾನ ನೀರು ಹರಿಯುವಿಕೆ ಪ್ರಮಾಣ (ಕ್ಯೂಸೆಕ್ಸ್ ಗಳಲ್ಲಿ)

| | | |
|---|---|---|
| ಜೂನ್ | ಆರುವರೆ ಅಡಿ | ೨೯,೮೦೦ |
| ಜುಲೈ ಮತ್ತು ಆಗಸ್ಟ್ | ಏಳುವರೆ ಅಡಿ | ೪೦.೦೦೦ |
| ಸೆಪ್ಟೆಂಬರ್ | ಏಳು ಅಡಿ | ೩೫.೦೦೦ |
| ಅಕ್ಟೋಬರ್ | ಆರುವರೆ ಅಡಿ | ೨೯,೮೦೦ |
| ನವಂಬರ್ | ಆರು ಅಡಿ | ೨೫,೦೩೩ |

| | | |
|---|---|---|
| ಡಿಸೆಂಬರ್ | ಮೂರುವರೆ ಅಡಿ | ೮,೯೧೩ |
| ಜನವರಿ | ಮೂರು ಅಡಿ | ೬.೧೭೦ |

ಮೇಲ್ಕಂಡ ಒಪ್ಪಂದಗಳನ್ನು ಒತ್ತಾಯಪೂರ್ವಕವಾಗಿ ಹೇರಿರುವ ಬ್ರಿಟಿಷ್ ಸರ್ಕಾರದ ಪರಂಪರೆಯು ಕರ್ನಾಟಕ ರಾಜ್ಯದ ಕಾವೇರಿ ನೀರಿನ ನ್ಯಾಯಬದ್ಧವಾದ ಪಾಲಿಗೆ ಸ್ಪಷ್ಟವಾದ ಚ್ಯುತಿ ತಂದಿದ್ದು ಅದರಿಂದಾಗಿ ಉಲ್ಲೇಖಿಸಿದ ಒಪ್ಪಂದಗಳು ಪ್ರಾರಂಭಿಕ ಹಂತದಲ್ಲಿಯೇ ನಿರರ್ಥಕವಾಗಿವೆ ಮತ್ತು ಯಾವುದೇ ಕಾರಣಕ್ಕೂ ಆ ಒಪ್ಪಂದಗಳು ೧೯೭೪ ರ ನಂತರ ಊರ್ಜಿತವಾಗುವುದಿಲ್ಲ, ಏಕೆಂದರೆ ಅಂದಿಗೆ ೧೯೨೪ ರ ಒಪ್ಪಂದವು ಸ್ಥಗಿತಗೊಂಡಿದೆ.

ಮೇಲ್ಕಂಡ ಕಾರಣಗಳಿಂದಾಗಿ, ತಮಿಳುನಾಡು ರಾಜ್ಯವು ವಸಾಹತುಶಾಹಿ ಶೋಷಣೆ ಹಾಗೂ ಮೈಸೂರಿನ ಸಾಮಂತ ರಾಜ್ಯದ ಪ್ರಯೋಜನ ಮತ್ತು ಮೈಸೂರಿನ ರಾಜಕೀಯ ಹಾಗೂ ಆರ್ಥಿಕ ಬಲಹಿನತೆಯನ್ನು ಬಳಸಿಕೊಂಡು ನಿರಂತರವಾಗಿ ಕಾವೇರಿ ನೀರನ್ನು ಅವಶ್ಯಕತೆಗಿಂತ ಹೆಚ್ಚಿನ ಪ್ರಮಾಣದಲ್ಲಿ ಬಳಸಿಕೊಂಡಿರುವುದು ಸ್ಪಷ್ಟವಾಗಿದೆ.

ಈ ಅಸಾಮಾನ್ಯ ಬೆಳವಣಿಗೆಯು ಎಂತಹ ಹಂತವನ್ನು ತಲುಪಿತು ಎಂದರೆ, ೧೯೭೧ ರಲ್ಲಿ ತಮಿಳುನಾಡಿನಲ್ಲಿ ನೀರಾವರಿ ಸೌಲಭ್ಯವು ಕರ್ನಾಟಕದಲ್ಲಿರುವ ಸೌಲಭ್ಯಕ್ಕಿಂತ ನಾಲ್ಕು ಪಟ್ಟು ಹೆಚ್ಚಾಯಿತು.

**೯. ಜಲವಿವಾದದ ಇತ್ಯರ್ಥದ ಮಾತುಕತೆಗಳ ವೈಫಲ್ಯ**

೧೯೫೯ ರಿಂದ ೧೯೯೦ ರವರೆಗಿನ ಅವಧಿಯಲ್ಲಿ ಭಾರತ ಸರ್ಕಾರ ಮತ್ತು ರಾಜ್ಯ ಸರ್ಕಾರಗಳ ಮಧ್ಯೆ ಜಲವಿವಾದವನ್ನು ಇತ್ಯರ್ಥಗೊಳಿಸಲು ಅನೇಕ ಸುತ್ತಿನ ಮಾತುಕತೆಗಳು ಮತ್ತು ಚರ್ಚೆಗಳು ನಡೆದವಾದರೂ ಯಾವುದೇ ಯಶಸ್ಸು ಕಾಣಲಿಲ್ಲ.

ಮಾನ್ಯ ಸರ್ವೋಚ್ಛ ನ್ಯಾಯಾಲಯವು ಕೇಂದ್ರ ಸರ್ಕಾರಕ್ಕೆ ಕಾವೇರಿ ಜಲಾಶಯದ ಅಡಿ ಬರುವ ರಾಜ್ಯಗಳ ಮಧ್ಯದಲ್ಲಿನ ಜಲವಿವಾದವನ್ನು ಬಗೆ ಹರಿಸಲು ಒಂದು

ನ್ಯಾಯ ಮಂಡಳಿಯನ್ನು ರಚಿಸುವಂತೆ ಆದೇಶಿಸುತ್ತ ಕಂಡಿಕೆ ೧೯ ರಲ್ಲಿ ಈ ಮುಂದಿನ ಅಂಶಗಳನ್ನು ಉಲ್ಲೇಖಿಸಿದೆ. ಕಳೆದ ನಾಲ್ಕೈದು ವರ್ಷಗಳಿಂದ ಈ ನ್ಯಾಯಾಲಯವು ೨೬ ಪ್ರಯತ್ನಗಳನ್ನು ಹಾಗೂ ಅನೇಕ ಬಾರಿ ಪ್ರಕರಣ ಮುಂದೂಡಿ ಎರಡೂ ರಾಜ್ಯಗಳಿಗೆ ಸಾಕಷ್ಟು ಕಾಲಾವಕಾಶವನ್ನು ಮಾತುಕತೆಗಳ ಮೂಲಕ ಸಮಸ್ಯೆ ಬಗೆಹರಿಸಿಕೊಳ್ಳಲು ನೀಡಿದರೂ ವಿಫಲವಾಗಿರುತ್ತವೆ. ಈ ಪ್ರಯತ್ನಗಳ ವಿಫಲತೆಯಿಂದಾಗಿ ಎರಡು ರಾಜ್ಯಗಳ ಮಧ್ಯೆ ಇರುವ ವಿವಾದವನ್ನು ಮಾತುಕತೆಗಳ ಮೂಲಕ ಬಗೆಹರಿಸಿಕೊಳ್ಳಲು ಆಗುವುದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಆದರೂ ಅಂತರರಾಜ್ಯ ಜಲವಿವಾದ ಕಾಯ್ದೆ ೪ ರ ಪ್ರಕಾರ ಕೇಂದ್ರ ಸರ್ಕಾರವು ತನ್ನ ಸ್ಪಷ್ಟ ಅಭಿಪ್ರಾಯವನ್ನು, ಈ ನ್ಯಾಯಾಲಯವು ೨೪ ಏಪ್ರಿಲ್ ೧೯೯೦ ರಲ್ಲಿ ತೀರ್ಪನ್ನು ಕಾಯ್ದಿರಿಸಿದಾಗ ಕೊಡಬೇಕಾಗಿತ್ತು. ಅದಕ್ಕಾಗಿ ಎರಡು ದಿನಗಳ ಕಾಲಾವಕಾಶವನ್ನು ಈ ನ್ಯಾಯಾಲಯವು ಕೇಂದ್ರ ಸರ್ಕಾರದ ಹೆಚ್ಚುವರಿ ಸಾಲಿಸಿಟರ್ ಜನರಲ್ ಇವರಿಗೆ ಕೊಟ್ಟು, ಕೇಂದ್ರ ಸರ್ಕಾರದ ಪ್ರತಿಕ್ರಿಯೆಯನ್ನು ನ್ಯಾಯಾಲಯಕ್ಕೆ ಒದಗಿಸುವಂತೆ ಹೇಳಲಾಗಿತ್ತು. ಅದರಂತೆ ೨೬ ಏಪ್ರಿಲ್ ೧೯೯೦ ರಂದು ಶ್ರೀಯುತ ಗೋಸ್ವಾಮಿ, ಹೆಚ್ಚುವರಿ ಸಾಲಿಸಿಟ ಜನರಲ್, ಇವರು ಭಾರತ ಸರ್ಕಾರದ ಪರವಾಗಿ ನ್ಯಾಯಾಲಯದಲ್ಲಿ ಹಾಜರಾಗಿ ಇತರೆ ಪಕ್ಷಗಳ ನ್ಯಾಯವಾದಿಗಳ ಸಮ್ಮುಖದಲ್ಲಿ ಮುಂದಿನ ಮಾತುಕತೆ ಕೈಗೊಳ್ಳಲು ಕೇಂದ್ರ ಸರ್ಕಾರವು ಇಚ್ಛಿಸಿರುವುದಿಲ್ಲ ಹಾಗೂ ನ್ಯಾಯಲಯದಿಂದಲೇ ಪ್ರಕರಣದ ಇತ್ಯರ್ಥವಾಗಲೆಂದು ಅಪೇಕ್ಷಿಸಿರುತ್ತದೆ ಎಂದು ಹೇಳಿರುತ್ತಾರೆ. ಇಂತಹ ಸಂದರ್ಭದಲ್ಲಿ, ನ್ಯಾಯಾಲಯಕ್ಕೆ ಯಾವ ಆಯ್ಕೆಯು ಇಲ್ಲವಾಗಿದ್ದು, ಇದು ಮಾತುಕತೆಯಿಂದ ಇತ್ಯರ್ಥವಾಗುವ ಸಮಸ್ಯೆಯಲ್ಲ ಎಂದು ಸ್ಪಷ್ಟವಾಗುತ್ತದೆ ಹಾಗೂ ಈ ಪ್ರಕರಣದ ಬೆಳವಣಿಗೆಗಳನ್ನು ಗಮನಿಸಿದಾಗ ಕೇಂದ್ರ ಸರ್ಕಾರವೂ ಇದೇ ಅಭಿಪ್ರಾಯವನ್ನು ಹೊಂದಿರುತ್ತದೆ. ಏಕೆಂದರೆ ತಮಿಳುನಾಡು ಮುಖ್ಯಮಂತ್ರಿಯವರೂ ಸಹಿತ ಮಾತುಕತೆಯಲ್ಲಿ ಭಾಗವಹಿಸಲು ಆಸಕ್ತಿ ಹೊಂದಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದ, ಜಲವಿವಾದ ಇತ್ಯರ್ಥಪಡಿಸುವಲ್ಲಿ ರಾಜ್ಯಗಳೊಂದಿಗೆ ನಡೆಸಿದ ಎಲ್ಲಾ ಮಾತುಕತೆಗಳು ಫಲಿಸಿಲ್ಲವೆಂದು ಸ್ಪಷ್ಟವಾಗುತ್ತದೆ.

**೧೦. ನೀರಿನ ಸಮಸ್ಯೆ ಬಗೆಹರಿಸಲು ಅಂತರರಾಜ್ಯ ಜಲವಿವಾದ ಕಾಯ್ದೆ ಅಡಿಯಲ್ಲಿ ತಮಿಳುನಾಡು ಪರವಾಗಿ ನ್ಯಾಯಮಂಡಳಿಯನ್ನು ಸ್ಥಾಪಿಸಲು ಮನವಿ.**

ತಮಿಳುನಾಡು ಮತ್ತು ಕರ್ನಾಟಕಗಳ ಮಧ್ಯೆ ಜಲವಿವಾದವನ್ನು ಬಗೆಹರಿಸು ವಂತೆ ಕೋರಿ ತಮಿಳುನಾಡಿನ ರೈತರ ಸಂಘವು ೨೬.೧೧.೧೯೮೩ ರಲ್ಲಿ ಸರ್ವೋಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು (WP No ೧೩೩೪೭ of ೧೯೮೩) ಸಲ್ಲಿಸಿತು. ೦೬.೦೭.೧೯೮೬ ರಲ್ಲಿ ತಮಿಳುನಾಡು ಸರ್ಕಾರವು ತನ್ನನ್ನು ತಾನೇ ಪಕ್ಷವಾಗಿ ಪ್ರತಿನಿಧಿಸಿ ಕೊಂಡು ಶೀಘ್ರದಲ್ಲೇ ನ್ಯಾಯಮಂಡಳಿಯನ್ನು ಸ್ಥಾಪಿಸುವಂತೆ ಕೋರಿತು.

**೧೧. ಮಾನ್ಯ ಸರ್ವೋಚ್ಛ ನ್ಯಾಯಾಲಯದಿಂದ ಕಾವೇರಿ ವಾಟರ್ ಡಿಸ್ಪ್ಯೂಟ್ ಟ್ರಿಬ್ಯೂನಲ್ (CWDT) ರಚಿಸಲು ನಿರ್ದೇಶನಗಳು.**

ತಮಿಳುನಾಡು ಸರ್ಕಾರವು ಪ್ರತಿನಿಧಿಸಿದ್ದ ತಮಿಳುನಾಡು ರೈತರ ಸಂಘವು ಸಲ್ಲಿಸಿದ್ದ ರಿಟ್ ಅರ್ಜಿಯು ಸರ್ವೋಚ್ಛ ನ್ಯಾಯಾಲಯದಲ್ಲಿ ಫೆಬ್ರುವರಿ ೧೯೯೦ ರಂದು ವಿಚಾರಣೆಗೆ ಬಂದಾಗ, ಎರಡೂ ಪಕ್ಷಗಳು ಏಪ್ರಿಲ್ ೨೪ ರವರೆಗೆ ಸಮಸ್ಯೆ ಯನ್ನು ಬಗೆಹರಿಸಿಕೊಳ್ಳಲು ವಿಫಲವಾದಾಗ ಪ್ರಕರಣದ ಅರ್ಹತೆಗಳಿಗನುಸಾರವಾಗಿ ನ್ಯಾಯಾಲಯವು ಅದನ್ನು ನಿರ್ಧರಿಸುತ್ತದೆ ಎಂದು ಘೋಷಿಸಿತು. ಏಪ್ರಿಲ್ ೫ ರಂದು ದೆಹಲಿಯಲ್ಲಿ ಹಾಗೂ ಏಪ್ರಿಲ್ ೧೯ ರಂದು ಮತ್ತೊಮ್ಮೆ ಮದ್ರಾಸ್‌ನಲ್ಲಿ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಭೇಟಿಯಾದರೂ ಯಾವುದೇ ಪರಿಹಾರ ಸಾಧ್ಯವಾಗಲಿಲ್ಲ.ಅಲ್ಲದೆ ಈ ಮಾತುಕತೆಯಲ್ಲಿ ಮಧ್ಯಸ್ಥಿಕೆ ವಹಿಸಲು ಕೇಂದ್ರ ಸರ್ಕಾರವು ಇಚ್ಛೆ ವ್ಯಕ್ತಪಡಿಸಲಿಲ್ಲ. ಆಗ ನ್ಯಾಯಾಲಯಕ್ಕೆ ಯಾವುದೇ ಆಯ್ಕೆಗಳಿಲ್ಲದೆ, ಮಾತುಕತೆಯ ಮೂಲಕ ಪರಿಹಾರ ಸಾಧ್ಯವಿಲ್ಲ" ಎಂದು ತೀರ್ಮಾನಿಸಿತು. ಹಾಗಾಗಿ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಕೇಂದ್ರ ಸರ್ಕಾರಕ್ಕೆ ಶಾಸನಬದ್ಧ ಕಟ್ಟುಪಾಡುಗಳಿಗೆ ಹೊಂದಿಕೊಂಡಂತೆ ಕಾವೇರಿ ಜಲವಿವಾದ ಬಗೆಹರಿಸಲು ಸೂಕ್ತವಾದ ನ್ಯಾಯಮಂಡಳಿಯನ್ನು ರಚಿಸುವಂತೆ ೦೪.೦೫.೧೯೯೦ ರಲ್ಲಿ ನಿರ್ದೇಶಿಸಿತು.

**೧೨. ಭಾರತ ಸರ್ಕಾರದಿಂದ ಕಾವೇರಿ ಜಲವಿವಾದ ನ್ಯಾಯಮಂಡಳಿಯ ರಚನೆ (CWDT).**

ಸರ್ವೋಚ್ಛ ನ್ಯಾಯಾಲಯದ ನಿರ್ದೇಶನಗಳಂತೆ, ಕಾವೇರಿ ಜಲವಿವಾದ ನ್ಯಾಯಮಂಡಳಿಯನ್ನು ಅಂತರರಾಜ್ಯ ಜಲವಿವಾದ ಕಾನೂನು, ೧೯೫೬ ರ ಅಡಿ ೨ ಜೂನ್ ೧೯೯೦ ರಂದು ರಚಿಸಲಾಯಿತು. ನ್ಯಾಯಮಂಡಳಿಯಲ್ಲಿ ಮೂರು ಸದಸ್ಯರುಗಳಿದ್ದು, ಮುಂಬೈ ಉಚ್ಛ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರಾದ ಶ್ರೀ ಚಿತ್ತತೋಶ್ ಮುಖರ್ಜಿ ಇವರು ಮಂಡಳಿಯ ಅಧ್ಯಕ್ಷರಾಗಿಯೂ ಮತ್ತು ಅಲಹಾಬಾದ್ ಉಚ್ಛ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀ ಎಸ್.ಡಿ.ಅಗರ್ವಾಲ ಹಾಗೂ ಪಾಟ್ನಾ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಶ್ರೀ ಎನ್.ಎಸ್.ರಾವ್ ಇವರು ನ್ಯಾಯಮಂಡಳಿಯ ಸದಸ್ಯರಾಗಿಯೂ ನೇಮಕಗೊಂಡರು.

**೧೩. ಸಿ.ಡಬ್ಲ್ಯೂ.ಡಿ.ಟಿ. ಯಿಂದ ಮಧ್ಯಂತರ ಆದೇಶ.**

ನ್ಯಾಯಮಂಡಳಿಯ ಪ್ರಪ್ರಥಮವಾಗಿ ೨೮ ಜುಲೈ ೧೯೯೦ ರಂದು ನಡೆದ ಕಲಾಪದಲ್ಲಿ ತಮಿಳುನಾಡು ಸರ್ಕಾರವು ಮಧ್ಯಂತರ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿತು. ಇದನ್ನು ಕರ್ನಾಟಕವು ವಿರೋಧಿಸಿತು ಮತ್ತು ನ್ಯಾಯಮಂಡಳಿಯು, ಅರ್ಜಿಯು ಉಲ್ಲೇಖಿತ ಪ್ರಕರಣದ ಭಾಗವಾಗಿರದ ಕಾರಣದಿಂದ ೫ ಜನವರಿ ೧೯೯೧ ರ ತನ್ನ

ಆದೇಶದಲ್ಲಿ ಅರ್ಜಿಯನ್ನು ವಜಾಗೊಳಿಸಿತು. ಆದಾಗ್ಯೂ, ತಮಿಳುನಾಡು ಸರ್ಕಾರದ ಮನವಿಯ ಮೇರೆಗೆ ಸರ್ವೋಚ್ಚ ನ್ಯಾಯಾಲಯವು ತನ್ನ ४ ಏಪ್ರಿಲ್ ೧೯೯೧ರ ಆದೇಶದಲ್ಲಿ ನ್ಯಾಯಮಂಡಳಿಗೆ ಮಧ್ಯಂತರ ಆದೇಶ ನೀಡಬಹುದೆಂದು ಆದೇಶಿಸಿತು. ಅದರಂತೆ, ನ್ಯಾಯಮಂಡಳಿಯು ಮಧ್ಯಂತರ ಆದೇಶವನ್ನು ೨೫ ಜೂನ್ ೧೯೯೧ ರಂದು ಹೊರಡಿಸಿತು.

ಆಗಿನ ಪರಿಸ್ಥಿತಿಯಲ್ಲಿ, ನ್ಯಾಯಮಂಡಳಿಯು, ತಮಿಳುನಡಿನ ಮೆಟ್ಟೂರು ಜಲಾಶಯದಲ್ಲಿ ಸರಾಸರಿ ವಾರ್ಷಿಕ ಕಾವೇರಿ ನೀರಿನ ಹರಿವಿನ ಪ್ರಮಾಣವು ಸಮಂಜಸವಾದ ಆಧಾರವನ್ನಾಗಿ ಪರಿಗಣಿಸಲು ಸೂಕ್ತ ಎಂದು ತೀರ್ಮಾನಿಸಿತು. ಹತ್ತು ವರ್ಷಗಳ ಅವಧಿಯ ಮೆಟ್ಟೂರು ಜಲಾಶಯದ ಒಳಹರಿವಿನ ಅಂಕಿ-ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು (೧೯೮೦-೮೧ ರಿಂದ ೧೯೮೯-೯೦), ನ್ಯಾಯಮಂಡಳಿಯು ಮೆಟ್ಟೂರು ಜಲಾಶಯದಲ್ಲಿ ವರ್ಷದಲ್ಲಿ ಜೂನ್‌ನಿಂದ ಮೇ ವರೆಗೆ ೨೦೫ ಟಿ.ಎಂ.ಸಿ. ನೀರು ಲಭ್ಯವಿರುವಂತೆ ಖಾತರಿಪಡಿಸಿಕೊಳ್ಳಲು ಕರ್ನಾಟಕಕ್ಕೆ ತನ್ನ ಜಲಾಶಯಗಳಿಂದ ನೀರನ್ನು ಬಿಡುವಂತೆ ನಿರ್ದೇಶಿಸಿತು. ಸೂಚಿಸಿರುವ ಮಾಸಿಕ ವೇಳಾಪಟ್ಟಿಗನುಸಾರವಾಗಿ ನಾಲ್ಕು ವಾರಗಳ ಕಾಲ ನಾಲ್ಕು ಸಮಾನ ಕಂತುಗಳಲ್ಲಿ ನೀರನ್ನು ಹರಿಸುವುದರ ಮೂಲಕ ನೀರು ಬಿಡುಗಡೆಯನ್ನು ನಿಯಂತ್ರಿಸಬೇಕು. ಯಾವುದೇ ಒಂದು ವಾರದಲ್ಲಿ ಉಂಟಾಗುವ ಕೊರತೆಯನ್ನು ತದನಂತರದ ವಾರದಲ್ಲಿ ಸರಿಪಡಿಸಿಕೊಳ್ಳಬೇಕು. ಅಲ್ಲದೆ, ನ್ಯಾಯಮಂಡಳಿಯು ಕರ್ನಾಟಕಕ್ಕೆ ಕಾವೇರಿ ವ್ಯಾಪ್ತಿಯಲ್ಲಿ ಬರುವ ನೀರಾವರಿ ಕ್ಷೇತ್ರವನ್ನು ೧೧.೨ ಲಕ್ಷ ಎಕರೆಗಳಿಗಿಂತ ಹೆಚ್ಚಾಗದಂತೆ ನೋಡಿಕೊಳ್ಳಲು ನಿರ್ದೇಶಿಸಿತು.

**೧४. ರಾಷ್ಟ್ರಪತಿಗಳ ಉಲ್ಲೇಖ ಹಾಗೂ ಸರ್ವೋಚ್ಚ ನ್ಯಾಯಾಲಯದ ಆದೇಶ.**

ಸಿ.ಡಬ್ಲ್ಯೂ.ಡಿ.ಟಿ. ಯಿಂದ ಮಧ್ಯಂತರ ಆದೇಶ ಹೊರಬಿದ್ದ ನಂತರ, ಕರ್ನಾಟಕ ಹಾಗೂ ತಮಿಳುನಾಡು ರಾಜ್ಯಗಳಲ್ಲಿ ಹಿಂಸಾಚಾರ ಉಂಟಾಗಿ ಎರಡೂ ರಾಜ್ಯಗಳಲ್ಲಿ ಶಾಂತಿ ಕದಡಿತು. ಕಾನೂನು ಸುವ್ಯವಸ್ಥೆ ಹದಗೆಟ್ಟಿತು. ಆಗ ತಕ್ಷಣ ಕರ್ನಾಟಕ ಸರ್ಕಾರವು ರಾಜ್ಯದಲ್ಲಿನ ಕಾವೇರಿ ನೀರನ್ನು ರಾಜ್ಯಕ್ಕಾಗಿಯೇ ಬಳಸುವ ಸುಗ್ರೀವಾಜ್ಞೆಯನ್ನು ಹೊರಡಿಸಿತು.

ಕರ್ನಾಟಕದಲ್ಲುಂಟಾದ ಪ್ರತಿಕೂಲ ವಾತಾವರಣವನ್ನು ಗಮನಿಸಿದ ಕೇಂದ್ರ ಸರ್ಕಾರವು ತಕ್ಷಣ ಸ್ಪಂದಿಸಿತು ಹಾಗೂ ಭಾರತದ ರಾಷ್ಟ್ರಪತಿಗಳು ಈ ಕೆಳಗಿನ ವಿಷಯಗಳನ್ನು ಸರ್ವೋಚ್ಚ ನ್ಯಾಯಾಲಯದ ಗಮನಕ್ಕೆ ತಂದು ನ್ಯಾಯಾಲಯದ ಸ್ಪಷ್ಟ ಅಭಿಪ್ರಾಯವನ್ನು ತಿಳಿಸಲು ಕೋರಿದರು.

೧. ಕರ್ನಾಟಕ ಸರ್ಕಾರವು ಹೊರಡಿಸಿದ ಸುಗ್ರಿವಾಜ್ಞೆ ಹಾಗೂ ಅದರ ನಿಬಂಧನೆಗಳು ಸಂವಿಧಾನಾತ್ಮಕವಾಗಿವೆಯೇ?

೨. ನ್ಯಾಯಮಂಡಳಿಯ ಆದೇಶ ಹಾಗೂ ನಿರ್ಧಾರವು ಕಾನೂನಿನ ಸೆಕ್ಷನ್ ೫(೨) ಆಕ್ಟ್ ಅರ್ಥವನ್ನು ಒಳಗೊಂಡಿವೆಯೆ?

೩. ನ್ಯಾಯಮಂಡಳಿಯ ಆದೇಶವನ್ನು ಹೆಚ್ಚು ಪರಿಣಾಮಕಾರಿಯಾಗಿರುವಂತೆ ಮಾಡಲು ಕೇಂದ್ರ ಸರ್ಕಾರವು ಅದನ್ನು ಪ್ರಕಟಿಸಬೇಕಿತ್ತೆ?

೪. ವಿವಾದದಲ್ಲಿ ಇದ್ದಂತಹ ಪಕ್ಷಗಳಿಗೆ ಯಾವುದೇ ಮಧ್ಯಂತರ ಪರಿಹಾರವನ್ನು ನೀಡಲು ನ್ಯಾಯಮಂಡಳಿಯು ಸಮರ್ಥವಾಗಿದೆಯೇ?

ಸರ್ವೋಚ್ಚ ನ್ಯಾಯಲಯವು ಎರಡೂ ಪಕ್ಷಗಳ ವಾದ-ಪ್ರತಿವಾದಗಳನ್ನು ಆಲಿಸಿ ತನ್ನ ಅಭಿಪ್ರಾಯವನ್ನು ೨೨ ನವಂಬರ್ ೧೯೯೧ ರಂದು ಹೀಗೆ ನೀಡಿತು; ಕರ್ನಾಟಕ ಹೊರಡಿಸಿದ ಸುಗ್ರೀವಾಜ್ಞೆಯು ಶಾಸನಬದ್ಧವಾಗಿಲ್ಲ ಹಾಗೂ ಅದು ದೇಶದ ಸಂವಿಧಾನಕ್ಕೆ ವಿರುದ್ಧವಾಗಿದೆ; ಐ.ಎಸ್.ಡಬ್ಲ್ಯೂ.ಡಿ. ಆಕ್ಟ್ ಪ್ರಕಾರ ನ್ಯಾಯಮಂಡಳಿಯ ಆದೇಶವನ್ನು ಸರ್ಕಾರಿ ಗೆಜೆಟ್‌ನಲ್ಲಿ ಪ್ರಕಟಿಸುವುದು ಅವಶ್ಯಕವಾಗಿದೆ ಹಾಗೂ ನ್ಯಾಯಮಂಡಳಿಯು ಮಧ್ಯಂತರ ಪರಿಹಾರ ನೀಡಲು ಸಮರ್ಥವಾಗಿದೆ ಎಂದು ತಿಳಿಸಿತು. ಹಾಗಾಗಿ ಅಂತಿಮದಲ್ಲಿ ಭಾರತ ಸರ್ಕಾರವು ಮಧ್ಯಂತರ ಆದೇಶವನ್ನು ತನ್ನ ಅಧಿಕೃತ ಗೆಜೆಟ್‌ನಲ್ಲಿ ಡಿಸೆಂಬರ್ ೧೧, ೧೯೯೧ ರಂದು ಪ್ರಕಟಿಸಿತು.

**೧೫. ನ್ಯಾಯಮಂಡಳಿಯ ೧೯೯೨ ರ ಸ್ಪಷ್ಟಿಕರಣ ಆದೇಶ.**

ನ್ಯಾಯಮಂಡಳಿಯ ಮಧ್ಯಂತರ ಆದೇಶದಂತೆ ನೀರು ಹರಿಸುವುದು ಅಪ್ರಾಯೋಗಿಕವಾಗಿದೆ ಎಂದು ಹೇಳಿ ಮನವಿ ಸಲ್ಲಿಸಿದ ಕರ್ನಾಟಕ ಸರ್ಕಾರಕ್ಕೆ ಏಪ್ರಿಲ್ ೩, ೧೯೯೨ ರಂದು ನ್ಯಾಯಮಂಡಳಿಯು ಸ್ಪಷ್ಟಿಕರಣದ ಆದೇಶವನ್ನು ಹೊರಡಿಸಿತು. ನ್ಯಾಯಮಂಡಳಿಯು ಕರ್ನಾಟಕದ ಅನುಚಿತ ಸಂಕಷ್ಟಕ್ಕೆ ಒಳಗಾಗುತ್ತೇವೆಂಬ ಮನವಿಯನ್ನು ತಿರಸ್ಕರಿಸುತ್ತ, ಮೆಟ್ಟೂರಿನಲ್ಲಿ ಸದಾ ಲಭ್ಯವಿರು ವಂತೆ ನೋಡಿಕೊಳ್ಳಬೇಕಾದ ೨೦೫ ಟಿ.ಎಂ.ಸಿ. ನೀರಿನ ಪ್ರಮಾಣದಲ್ಲಿ ೨೫ ಟಿ.ಎಂ.ಸಿ. ಗಳಷ್ಟು ನೀರು ತಮಿಳುನಾಡಿನ ಬಿಳಿಗುಂಡ್ಲು ಹಾಗೂ ಮೆಟ್ಟೂರಿನ ಆಸುಪಾಸಿನ ಅಚ್ಚುಕಟ್ಟುಗಳಿಂದ ಬರುವ ನೀರಿನ ಪ್ರಮಾಣವೂ ಒಳಗೊಂಡಿದೆ ಎಂದು ಸ್ಪಷ್ಟನೆ ನೀಡಿತು. ಅಂದರೆ ಈ ಸ್ಪಷ್ಟನೆಯಿಂದ ಕರ್ನಾಟಕವು ತನ್ನ ಭಾಗದಿಂದ ೧೮೦ ಟಿ.ಎಂ.ಸಿ. ಗಳಷ್ಟು ನೀರನ್ನು ಮಾತ್ರವೇ ಒದಗಿಸಬೇಕಾಗಿದೆ.

**೧೬. ಕಾವೇರಿ ನದಿ ಪ್ರಾಧಿಕಾರ.**

ಮೇ ೧೯೯೭ ರಲ್ಲಿ ಸರ್ವೋಚ್ಚ ನ್ಯಾಯಾಲಯದ ಸಾಂವಿಧಾನಿಕ ಪೀಠದ ನಿರ್ದೇಶನಗಳ ಫಲವಾಗಿ, ಪ್ರಧಾನ ಮಂತ್ರಿಗಳು ಮುಖ್ಯಮಂತ್ರಿಗಳ ಸಭೆಯನ್ನು ಅಗಸ್ಟ್ ೧೯೯೮ ರಲ್ಲಿ ಕರೆದರು. ಈ ಸಭೆಯಲ್ಲಿ ಕಾವೇರಿ ನದಿ

ಪ್ರಾಧಿಕಾರವನ್ನು (ಸಿ.ಆರ್.ಎ.) ರಚಿಸುವ ನಿರ್ಧಾರ ಕೈಗೊಳ್ಳಲಾಯಿತು. ಈ ಪ್ರಾಧಿಕಾರದಲ್ಲಿ ಪ್ರಧಾನ ಮಂತ್ರಿಗಳು ಅಧ್ಯಕ್ಷರಾಗಿಯೂ ಹಾಗೂ ಕರ್ನಾಟಕ, ಕೇರಳ, ತಮಿಳುನಾಡು ಹಾಗೂ



ಪಾಂಡಿಚೆರಿ ರಾಜ್ಯಗಳ ಮುಖ್ಯಮಂತ್ರಿಗಳನ್ನು ಸದಸ್ಯರನ್ನಾಗಿ ಮಾಡಲಾಯಿತು. ಗೊತ್ತುಪಡಿಸಿದ ಅಧಿಕಾರಿಗಳುಳ್ಳ (ಕೇಂದ್ರ ಕಾರ್ಯದರ್ಶಿ, ಜಲ ಸಂಪನ್ಮೂಲ ಸಚಿವಾಲಯ ಅಧ್ಯಕ್ಷರಾಗಿಯು, ರಾಜ್ಯ ಮತ್ತು ಕೇಂದ್ರ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹಾಗೂ ಗೊತ್ತುಪಡಿಸಿದ ಅಧಿಕಾರಿಗಳು ಸದಸ್ಯಾರಿಗಿಯೂ) ಕಾವೇರಿ ಉಸ್ತುವಾರಿ ಸಮಿತಿಯನ್ನು ಸಿ.ಆರ್.ಎ. ಗೆ ಸಹಾಯ ಮಾಡಲು ರಚಿಸಲಾಯಿತು.

**೧೭. ಸರ್ವೋಚ್ಚ ನ್ಯಾಯಾಲಯದಲ್ಲಿ ತಮಿಳುನಾಡು ಸಲ್ಲಿಸಿದ ತಿರಸ್ಕಾರ ಅರ್ಜಿ,**

ಸರ್ವೋಚ್ಛ ನ್ಯಾಯಲಯದ ಆದೇಶಗಳನ್ನು ಪಾಲಿಸುತ್ತಿಲ್ಲದಿದ್ದುದದರ ಬಗ್ಗೆ ತಿರಸ್ಕಾರ ಅರ್ಜಿಯನ್ನು ತಮಿಳುನಾಡು ಸರ್ಕಾರವು ಕರ್ನಾಟಕದ ಮುಖ್ಯ ಮಂತ್ರಿಗಳಾದ ಶ್ರೀ ಎಸ್.ಎಂ ಕೃಷ್ಣ, ಜಲಸಂಪನ್ಮೂಲ ಸಚಿವರಾದ ಶ್ರೀ ಹೆಚ್.ಕೆ. ಪಾಟೀಲ್ ಮತ್ತು ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಎ.ರವೀಂದ್ರ ಅವರ ವಿರುದ್ಧ ಸಲ್ಲಿಸಿತು. ಆ ವೇಳೆಯಲ್ಲಿ ಶ್ರೀ ಎಸ್.ಎಂ. ಕೃಷ್ಣ ಅವರು ಬೆಂಗಳೂರಿನಿಂದ ಮಂಡ್ಯದವರೆಗೆ ಪಾದಯಾತ್ರೆಯನ್ನು ಕೈಗೊಂಡಿದ್ದರು ಹಾಗೂ ಅದು ಜನಪ್ರಿಯವಾದ ಅನುಕಂಪವನ್ನು ಗಳಿಸಿತು. ಈ ಚಟುವಟಿಕೆ ಸರ್ವೋಚ್ಛ ನ್ಯಾಯಾಲಯದಿಂದ ಉಗ್ರವಾದ ಟೀಕೆಗೆ ಗುರಿಯಾಯಿತು. ಕೊನೆಗೆ ಕರ್ನಾಟಕವು ನೀರು ಬಿಡಲು ಪ್ರಾರಂಭಿಸಿತು. ಪರಿಸ್ಥಿತಿಯು ಕೈಮೀರುವುದರ ಮುಂಚೆ ಮಳೆಯ ಆಗಮನ ವಾಯಿತು. ತದನಂತರ ಮಾನ್ಯ ಸರ್ವೋಚ್ಛ ನ್ಯಾಯಾಲಯವು ತಿರಸ್ಕಾರ ಆರ್ಜಿಯ ಪ್ರಕರಣದ ವಿಚಾರಣೆಯನ್ನು ಕೈಬಿಟ್ಟಿತು.

**೧೮. ಸಿ.ಡಬ್ಲ್ಯೂ.ಡಿ.ಟಿ. ಯ ಮೂರು ಸದಸ್ಯರುಗಳ ಮಧ್ಯದ ಒಮ್ಮತದ ಕೊರತೆ.**

ನ್ಯಾಯಮಂಡಳಿಯ ಕಾಲಾವಧಿಯು ಅಗಸ್ಟ್ ೨೦೦೫ ರಲ್ಲಿ ಪೂರ್ಣ ಗೊಂಡಿದ್ದರಿಂದ ಅದನ್ನು ಒಂದು ವರ್ಷದ ಮಟ್ಟಿಗೆ ಅಂದರೆ ಏಪ್ರಿಲ್ ೨೦೦೬ ರವರೆಗೆ ವಿಸ್ತರಿಸಲಾಯಿತು. ಕಾಲಾವಧಿಯ ಅಂತಿಮ ಹಂತದಲ್ಲಿ ನ್ಯಾಯಮಂಡಳಿಯ ಇಬ್ಬರು ಸದಸ್ಯರು ಹಾಗೂ ಮಂಡಳಿಯ ಅಧ್ಯಕ್ಷರ ನಡುವೆ ಒಮ್ಮತದ ಕೊರತೆ ಉಂಟಾಯಿತು, ಕಾರಣ ತಮಿಳುನಾಡಿನಲ್ಲಿ ಬೆಳೆಗೆ ಬೇಕಾದ ನೀರಿನ ಅವಶ್ಯಕತೆಯ ಲೆಕ್ಕಾಚಾರ ಮಾಡಿ ವರದಿ ನೀಡಿದ ಮೌಲ್ಯಮಾಪಕರು ಕೃಷಿ ತಜ್ಞರಾಗಿಲ್ಲದೆ ಇರುವುದು ಹಾಗೂ ಬೆಳೆಗೆ ಬೇಕಾದ ನೀರಿನ ಪ್ರಮಾಣದ ವಿಷಯದಲ್ಲಿ ಪಾಂಡಿತ್ಯ ಹೊಂದಿಲ್ಲದೆ ಇರುವುದು ಹಾಗೂ ಈ ವರದಿಯು ತಮಿಳುನಾಡು ಸಲ್ಲಿಸಿದ ದಾಖಲೆ ೧೯೯೫ ರ ಮೇಲೆ

ಆಧಾರಿತವಾಗಿತ್ತು. ಈ ದಾಖಲೆಯು ವಾದ-ಪ್ರತಿವಾದಗಳು ಸಮಾಪ್ತಿಯಾಗಿದೆ ಎಂದು ನ್ಯಾಯ ಮಂಡಳಿಯು ಘೋಷಿಸಿದ ಮೇಲೆ ಸಲ್ಲಿಕೆಯಾಗಿತ್ತು. ಆ ದಾಖಲೆ ಪ್ರಕಾರ ಮೌಲ್ಯಮಾಪಕರು ನೀಡಿದ ಲೆಕ್ಕಾಚಾರದಂತೆ ತಮಿಳುನಾಡಿನ ಬೆಳೆಗೆ ಬೇಕಾದ ನೀರಿನ ಪ್ರಮಾಣವು ಹೆಚ್ಚಾಗಿತ್ತು ಮತ್ತು ಅದಕ್ಕೆ ಕರ್ನಾಟಕವು ಪಾಟಿ ಸವಾಲು ಹಾಕಿರಲಿಲ್ಲ ಮತ್ತು ಆ ದಾಖಲೆಯನ್ನು ಕರ್ನಾಟಕ ವಿರೋಧಿಸಿತ್ತು. ಹಾಗಾಗಿ



ಸೂಕ್ಷ್ಮವಾಗಿ ಪರಿಶೀಲಿಸಿ ನಿರ್ಣಯಿಸಲು ವಿಷಯ ಪರಿಣಿತರನ್ನೊಳಗೊಂಡ ಒಂದು ಪರಿಣಿತ ಸಮಿತಿಯನ್ನು ರಚಿಸಲು ಸೂಚಿಸಲಾಯಿತು. ಈ ಸಲಹೆಯು ನ್ಯಾಯ ಮಂಡಳಿಯ ಅಧ್ಯಕ್ಷರಿಗೆ ಹಾಗೂ ಜಲಾಶಯ ರಾಜ್ಯಗಳಿಗೆ ಒಪ್ಪಿಗೆಯಾಗಲಿಲ್ಲ.

ಈ ವಿಷಯದ ಬಗ್ಗೆ ನ್ಯಾಯಮಂಡಳಿಯ ಮೂರು ಸದಸ್ಯರಲ್ಲಿ ಗಂಭೀರವಾದ ವಾದ-ಪ್ರತಿವಾದಗಳು ತೆರೆದ ನ್ಯಾಯಾಲಯದಲ್ಲಿ ನಡೆದವು. ವಿಚಿತ್ರವೆಂದರೆ, ಅಧ್ಯಕ್ಷ ಅಥವಾ ನ್ಯಾಯಮಂಡಳಿಯ ಮುಖ್ಯ ನ್ಯಾಯಾಧೀಶ ಈ ಸಲಹೆಯನ್ನು ವಿರೋಧಿಸಿದರೆ ಇನ್ನುಳಿದ ಇಬ್ಬರು ಸದಸ್ಯರುಗಳು ಅಧ್ಯಕ್ಷರ ಅಭಿಪ್ರಾಯವನ್ನು ತಳ್ಳಿಹಾಕಿದರು. ನ್ಯಾಯಾಲಯದ ಕೊಠಡಿಯು ಮೂರು ನ್ಯಾಯವಾದಿಗಳ ವಾದ-ವಿವಾದಗಳಿಗೆ ಸಾಕ್ಷಿಯಾಯಿತು. ಈ ಪ್ರಸಂಗವು ತಮಿಳುನಾಡು ಪರ ವಕೀಲರು ಮುಜುಗರಗೊಳ್ಳುವಂತೆ ಮಾಡಿತು. ಅಲ್ಲದೆ ಆ ವಕೀಲರು ತಮ್ಮ ೫೪ ವರ್ಷಗಳ ಸೇವೆಯಲ್ಲೇ ಈ ರೀತಿಯ ವೈಷಮ್ಯತೆಯ ವಾತಾವರಣ ಕಂಡಿರಲಿಲ್ಲ ಹಾಗೂ ಅನುಭವಿಸಿರಲಿಲ್ಲ" ಎಂದು ಹೇಳಿದರೆಂದು ತಿಳಿದುಬಂದಿದೆ. ತದನಂತರ ನ್ಯಾಯಮಂಡಳಿಯು ರಾಜ್ಯಗಳಿಗೆ ಮೌಲ್ಯಮಾಪಕರ ವರದಿಯನ್ನು ಲಭ್ಯಗೊಳಿಸಿತು. ಆದರೆ ಕರ್ನಾಟಕವು ಈ ವರದಿಯನ್ನು ನಿರಾಕರಿಸಿತು. ಈ ಎಲ್ಲಾ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸಿದಲ್ಲಿ, ನ್ಯಾಯ ಮಂಡಳಿಯ ಅಂತಿಮ ಘಟ್ಟದಲ್ಲಿ, ಮಂಡಳಿಯ ಮೂರೂ ಸದಸ್ಯರಲ್ಲಿ ಒಮ್ಮತ ಇರಲಿಲ್ಲವೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

**೧೯. ನ್ಯಾಯಮಂಡಳಿಯ ಅಂತಿಮ ಆದೇಶ.**

ನ್ಯಾಯಮಂಡಳಿಯ ಸದಸ್ಯರುಗಳ ಮಧ್ಯೆ ಭಿನ್ನಾಭಿಪ್ರಾಯಗಳಿದ್ದರೂ ಸಹ ನ್ಯಾಯಮಂಡಳಿಯ ಅಂತಿಮ ಆದೇಶವು ೫ ಫೆಬ್ರುವರಿ ೨೦೦೭ ರಂದು ಹೊರಬಂದಿತು. ಇದು ಈ ನ್ಯಾಯಮಂಡಳಿಯು ಸ್ಥಾಪನೆಯಾಗಿ ೧೭ ವರ್ಷಗಳ ನಂತರ ಹಾಗೂ ಮಧ್ಯಂತರ ಆದೇಶ ಹೊರಡಿಸಿದ ೧೬ ವರ್ಷಗಳ ನಂತರ ಬಂದ ಆದೇಶವಾಗಿತ್ತು. ಈ ಆದೇಶದಲ್ಲಿ ಕೊರತೆಯಾಗುವ ವರ್ಷದಲ್ಲಿ ನೀರಿನ ಬಳಕೆ ಬಗ್ಗೆ ನಿರ್ದಿಷ್ಟ ಸೂಚನೆಗಳಿರಲಿಲ್ಲ ಹಾಗೂ ನಡೆಯುತ್ತಿದ್ದ

ವಿದ್ಯಮಾನಗಳಿಗೆ ಯಾವುದೇ ಉತ್ತರವಿರಲಿಲ್ಲ. ಮತ್ತು ಕೊರತೆಯಾಗುವ ವರ್ಷಗಳಲ್ಲಿ ಮಾತ್ರವೆ ನೀರಿನ ಸಮಸ್ಯೆಗಳು ತೀವ್ರವಾಗಿ ಉಲ್ಬಣವಾಗುತ್ತವೆ. ನ್ಯಾಯಮಂಡಳಿಯ ಅಂತಿಮ ಆದೇಶವು ಗಣನೀಯವಾಗಿ ಸಂಕಷ್ಟ ಉಂಟುಮಾಡಿತ್ತು ಮತ್ತು ಕರ್ನಾಟಕ ಸರ್ಕಾರ, ಅದರ ರೈತರುಗಳಿಗೆ ಮತ್ತು ಬೆಂಗಳೂರು ನಗರಕ್ಕೆ ಕುಡಿಯುವ ನೀರಿನ ಸರಬರಾಜಿಗೆ ಅನನುಕೂಲತೆಯನ್ನುಂಟು ಮಾಡಿತ್ತು.

**೨೦. ಸಿ.ಡಬ್ಲ್ಯೂ.ಡಿ.ಟಿ. ಯ ಅಂತಿಮ ತೀರ್ಪು ಕರ್ನಾಟಕಕ್ಕೆ ನ್ಯಾಯ ಒದಗಿಸಿರಲಿಲ್ಲ.**

ನ್ಯಾಯಮಂಡಳಿಯ ತೀರ್ಪನ್ನು ಪರಾಮರ್ಶಿಸಿದಾಗ ಕಂಡುಬಂದ ಅಂಶ ವೇನೆಂದರೆ, ಈ ಆದೇಶವು ಕರ್ನಾಟಕ ಸರ್ಕಾರ, ಅದರ ರೈತರುಗಳು ಮತ್ತು ಬೆಂಗಳೂರು



ನಗರಕ್ಕೆ ಕುಡಿಯುವ ನೀರಿನ ಸರಬರಾಜಿಗೆ ಸಾಕಷ್ಟು ಸಂಕಷ್ಟವನ್ನುಂಟು ಮಾಡಿತ್ತು ಹಾಗೂ ಅದರ ವಿವರಗಳು ಈ ಕೆಳಗಿನಂತಿವೆ. ಕರ್ನಾಟಕದ ಮೇಲೆ ಪರಿಣಾಮ ಬೀರಿರುವ ಸಿ.ಡಬ್ಲ್ಯೂ.ಡಿ.ಟಿ.ಯ ಮಹತ್ವದ ನಿರ್ಧಾರಗಳು

೧. ಕಬ್ಬು ಬೆಳೆಯ ಪ್ರದೇಶಕ್ಕೆ ಮಿತಿ ಹಾಕಿರುವುದು ೪೦,೦೦೦ ಎಕರೆಗಳು

೨ ಲಿಫ್ಟ್ ಇರಿಗೇಷನ್ ಯೋಜನೆಗಳಿಗೆ ನೀರಿನ ಪ್ರಮಾಣ Nil

೩ ಬೇಸಿಗೆಯ ಭತ್ತದ (ಎರಡನೇ ಬೆಳೆ) ಬೆಳೆಗೆ ನಿಗದಿಪಡಿಸಲಾದ ನೀರು Nil

೪. ದೊಡ್ಡ ಯೋಜನೆಗಳಿಗೆ ತಗ್ಗಿಸಿರುವ ನೀರಿನ ಪ್ರಮಾಣ ೩೯%

೫ ಬೆಂಗಳೂರಿಗೆ ಕುಡಿಯುವ ನೀರನ್ನು ಒದಗಿಸಲು ಗಣನೆಗೆ ತೆಗೆದುಕೊಂಡ 502 Only 1/3 population of Bangalore city residing in Cauvery basin.

೬ ಕಾವೇರಿ ಜಲಾನಯನದಿಂದ ಬೆಂಗಳೂರು ನಗರಕ್ಕೆ ಚಾಲ್ತಿಯಲ್ಲಿರುವ ನೀರು (೧೮.೧೮ + ೧೦ ) = ೨೮.೧೮ TMC.

೭ ಕುಡಿಯುವ ನೀರು ಒದಗಿಸಲು ಪರಿಗಣಿಸಲಾದ ಜನಸಂಖ್ಯೆ Only up to the year 2011.

೮ ಒದಗಿಸಲಾದ ಕುಡಿಯುವ ನೀರಿನ ಪ್ರಮಾಣ At 50% dependability instead of 100%

೯ ಕೇರಳ ರಾಜ್ಯವು ತನ್ನ ಪಾಲಿನ ನೀರು ಉಪಯೋಗಿಸುವವರೆಗೂ ಬಳಸದೆ ಹಾಗೆ ಉಳಿದಿರುವ ನೀರನ್ನು ತಮಿಳುನಾಡಿನ ಬಳಕೆಗಾಗಿ ಬಿಡುವುದು (ಇದು ೧೯೨ ಟಿ.ಎಂ.ಸಿ. ಯಲ್ಲಿ ಒಳಗೊಂಡಿಲ್ಲ).

೧೦ ೧೦ ಟಿ.ಎಂ.ಸಿ. ನೀರು ಪರಿಸರಕ್ಕೂ ಹಾಗೂ ೪ ಟಿ.ಎಂ.ಸಿ. ಗಳಷ್ಟು ಸಮುದ್ರಕ್ಕೆ ಸೇರುವ ನೀರನ್ನು ತಮಿಳುನಾಡಿನ ಬಳಕೆಗೆ ಬಿಡಬೇಕು.

೧೧ ಕಬಿನಿಯ ಒಟ್ಟಾರೆ ಇಳುವರಿಯನ್ನು ತಮಿಳುನಾಡಿಗೆ ಹರಿಯಲು ಬಿಡುವುದು (ಕಬಿನಿ ಯೋಜನೆ ೧೧.೯೯ ಟಿ.ಎಂ.ಸಿ. ಹಾಗೂ ಕೇರಳದ ಬಳಕೆಯಾದ ನೀರನ್ನು ಹೊರತುಪಡಿಸಿ)

೧೨ ಒಟ್ಟಾರೆ ೧೯೨ ಟಿ.ಎಂ.ಸಿ. ಆಗುವಂತೆ ಪ್ರತಿ ತಿಂಗಳು ತಮಿಳುನಾಡಿಗೆ ನೀರು ಬಿಡುವುದು (ಜೂನ್ ನಿಂದ ಸೆಪ್ಟೆಂಬರ್ ವರೆಗೆ ೧೩೪ ಟಿ.ಎಂ.ಸಿ. ಅಕ್ಟೋಬರ್ ನಿಂದ ಜನವರಿವರೆಗೆ ೫೮ ಟಿ.ಎಂ.ಸಿ. ಫೆಬ್ರುವರಿಯಿಂದ ಮೇ ವರೆಗೆ ೧೦ ಟಿ.ಎಂ.ಸಿ.)

೧೩ ರಚಿತ ಕಾವೇರಿ ನೀರು ನಿಯಂತ್ರಣ ಸಮಿತಿಯು ಸಿ.ಡಬ್ಲ್ಯೂ.ಡಿ.ಟಿ. ಯು ನೀಡಿದ ಆದೇಶಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳ್ಳುತ್ತಿವೆಯೇ ಎಂಬುದನ್ನು ನೋಡಿಕೊಳ್ಳುವುದು.



೧೪ ಸಿ.ಡಬ್ಲ್ಯೂ.ಡಿ.ಟಿ. ನೀಡಿದ ಆದೇಶ ಪುನರ್ ಪರಿಶೀಲಿಸಲು ಯಾವುದೇ ಆವಕಾಶಗಳನ್ನು ನೀಡಲಾಗಿಲ್ಲ.

೧೫ ಮುಂದಿಡಲಾದ ೪೬ ಟಿ.ಎಂ.ಸಿ. ಗಳಷ್ಟು ಕುಡಿಯುವ ನೀರಿನ ಬೇಡಿಕೆಗೆ (ಬೆಂಗಳೂರು ೩೦ ಟಿ.ಎಂ.ಸಿ. ನಗರ ಪ್ರದೇಶ ೧೦ ಟಿ.ಎಂ.ಸಿ. ಗ್ರಾಮೀಣ ಪ್ರದೇಶ ೬ ಟಿ.ಎಂ.ಸಿ.) ಸಿ.ಡಬ್ಲ್ಯೂ.ಡಿ.ಟಿ. ನಿಗದಿಪಡಿಸಿದ ಮೇಲೆ ನೀರು ೮.೭೫ ಟಿ.ಎಂ.ಸಿ.

೧೬ ಸಿ.ಡಬ್ಲ್ಯೂ ಡಿ.ಟಿ.ಯು ಕುಡಿಯುವ ಒಟ್ಟು ನೀರಿನ ಅವಶ್ಯಕತೆಯ ೫೦% ರಷ್ಟು ಪ್ರಮಾಣವನ್ನು ಅಂತರ್ಜಲದಿಂದ ಪಡೆದುಕೊಳ್ಳಲು ಪರಿಗಣಿಸಿರುವುದು (ಕಾವೇರಿ ಜಲಾನಯನದ ೧೨ ತಾಲೂಕುಗಳಲ್ಲಿ ಈಗಾಗಲೆ ಅಂತರ್ಜಲವನ್ನು ಅತಿ ಹೆಚ್ಚಾಗಿ ಬಳಸಲಾಗಿದೆ)

೧೭ ಕೈಗಾರಿಕೆಗಳಿಗೆ ಬೇಕಾದ ೫ ಟಿ.ಎಂ.ಸಿ. ನೀರಿನ ಬೇಡಿಕೆಗೆ ಸಿ.ಡಬ್ಲ್ಯೂ.ಡಿ.ಟಿ. ಯು ಕೇವಲ ೩.೮೨ ಟಿ.ಎಂ.ಸಿ. ನೀರನ್ನು ಮಾತ್ರ ಗಣನೆಗೆ ತೆಗೆದುಕೊಂಡಿದೆ (೦.೧ ಟಿ.ಎಂ.ಸಿ. ಸೇವಿಸಲು)

೧೮ ಅಚ್ಚುಕಟ್ಟು ಪ್ರದೇಶಗಳಲ್ಲಿ ಅಂತರ್ಜಲದ ಪ್ರಮಾಣವನ್ನು ಮರುಪರಿಶೀಲಿಸ ಬೇಕೆಂದು ನಂಬಲರ್ಹ ಮೂಲಗಳು ಉಲ್ಲೇಖಿಸಿದಾಗ್ಯೂ ಮತ್ತು ಸ್ವತಃ ಸಿ.ಡಬ್ಲ್ಯೂ.ಡಿ.ಟಿ. ಯು ತಮಿಳುನಾಡು ೨೦ ಟಿ.ಎಂ.ಸಿ. ಗಳಷ್ಟು ತನ್ನ ಅಂತರ್ಜಲದ ಬಳಕೆಗೆ ಸಾಧ್ಯವೆಂದು ಒಪ್ಪಿಕೊಂಡಿದ್ದರೂ ತಮಿಳುನಾಡಿಗೆ ಒದಗಿಸಬೇಕಾಗಿರುವ ನೀರಿನ ಪ್ರಮಾಣದಲ್ಲಿ ಈ ೨೦ ಟಿ.ಎಂ.ಸಿ. ಯನ್ನು ಪರಿಗಣಿಸದೇ ಇದ್ದುದು.

೧೯ ನದಿಯ ಸಮಾನ ಗಡಿಯಲ್ಲಿ ಕರ್ನಾಟಕ ಹಾಗೂ ತಮಿಳುನಾಡು ಜಲ ವಿದ್ಯುತ್ ಯೋಜನೆಗಳನ್ನು ಕೈಗೆತ್ತಿಕೊಳ್ಳಬಹುದು.

೨೦ ಮೆಟ್ಟೂರು ಜಲಾಶಯ ಬದಲು ಬಿಳಿಗುಂಡ್ಲುವನ್ನು ಕಾವೇರಿ ನದಿಯ ಮಾಪನ ಕೇಂದ್ರವನ್ನಾಗಿ ಪರಿಗಣಿಸುವುದು .

೨೧ ಪ್ರತಿ ರಾಜ್ಯಗಳಿಂದ ಮರುಸೃಷ್ಟಿಸಲಾದ ನೀರನ್ನು ಸಿ.ಡಬ್ಲ್ಯೂ.ಡಿ.ಟಿ. ಗಣನೆಗೆ ತೆಗೆದುಕೊಂಡಿಲ್ಲದೆ ಇರುವುದು ಹಾಗೂ ಇದರ ಪ್ರಯೋಜನವು ಕೇವಲ ಇತರೆ ರಾಜ್ಯಗಳನ್ನು ಹೊರತುಪಡಿಸಿ ಕೇವಲ ತಮಿಳುನಾಡಿಗೆ ಮಾತ್ರವೇ ಲಭಿಸುವಂತಾಗಿರುವುದು

೨೧. ಅಂತರರಾಜ್ಯ ಜಲವಿವಾದ ಕಾಯ್ದೆಯ ಸೆಕ್ಷನ್ ೫(೩) ಅಡಿಯಲ್ಲಿ ಜಲಾನಯನ ರಾಜ್ಯಗಳು ಮತ್ತು ಭಾರತ ಸರ್ಕಾರ ಸಿ.ಡಬ್ಲ್ಯೂ ಡಿ.ಟಿ. ಮುಂದೆ ಅರ್ಜಿ ಸಲ್ಲಿಕೆ.

ಅಂತರರಾಜ್ಯ ಜಲವಿವಾದ ಕಾಯ್ದೆಯ ಸೆಕ್ಷನ್ ೫೩) ಅಡಿಯಲ್ಲಿ ಎಲ್ಲ ಜಲಾನಯನ ರಾಜ್ಯಗಳು ಮತ್ತು ಭಾರತ ಸರ್ಕಾರವು ನ್ಯಾಯಮಂಡಳಿಯ ಮುಂದೆ

ಏಪ್ರಿಲ್/ಮೇ ೨೦೦೭ ರ ಕಾಲಾವಧಿಯಲ್ಲಿ ಉಲ್ಲೇಖಗಳನ್ನು ಸಲ್ಲಿಸಿದ್ದು ಅದಕ್ಕೆ ಸಂಬಂಧಿಸಿದಂತೆ ತಲೆದೋರಿದ ಸಮಸ್ಯೆಗಳ ಕುರಿತು ವಿವರಣೆ ಹಾಗೂ ಸ್ಪಷ್ಟೀಕರಣವನ್ನು ಕೋರಿರುತ್ತಾರೆ. ಇದೇ ಸಮಯದಲ್ಲಿ ಕರ್ನಾಟಕ ಹಾಗೂ ಕೇರಳ ರಾಜ್ಯಗಳು ಆರ್ಟಿಕಲ್ ೧೩೬ ಅಡಿಯಲ್ಲಿ ಎಸ್.ಎಲ್.ಪಿ. ಮೂಲಕ ಮಾನ್ಯ ಸರ್ವೋಚ್ಛ ನ್ಯಾಯಾಲಯದ ಮುಂದೆ ಸಿ.ಡಬ್ಲ್ಯೂ.ಡಿ.ಟಿ. ಯ ಆದೇಶವನ್ನು ಪ್ರಶ್ನಿಸಿರುವರು. ತದನಂತರ ತಮಿಳುನಾಡು ರಾಜ್ಯವೂ ಸಹ ಸರ್ವೋಚ್ಛ ನ್ಯಾಯಾಲಯದಲ್ಲಿ ಎಸ್.ಎಲ್.ಪಿ. ಅರ್ಜಿ ಸಲ್ಲಿಸಿತು. ಕೇಂದ್ರಾಡಳಿತ ಪ್ರದೇಶವಾದ ಪಾಂಡಿಚೆರಿ ಯಾವುದೇ ಎಸ್.ಎಲ್.ಪಿ. ಸಲ್ಲಿಸಲಿಲ್ಲ.

ಮೂರೂ ಜಲಾನಯನ ರಾಜ್ಯಗಳು ಹಾಗೂ ಭಾರತ ಸರ್ಕಾರವು ಸಲ್ಲಿಸಿದ ಎಸ್.ಎಲ್.ಪಿ. ಅರ್ಜಿಗಳು ಸರ್ವೋಚ್ಛ ನ್ಯಾಯಾಲಯದಲ್ಲಿ ಅಂತಿಮವಾಗಿ ಇತ್ಯರ್ಥ ಗೊಳ್ಳುವವರೆಗೂ ಸಿ.ಡಬ್ಲ್ಯೂ.ಡಿ.ಟಿ. ಯು ಐ.ಎಸ್.ಡಬ್ಲೂ ಡಿ. ಕಾಯ್ದೆಯ ಸೆಕ್ಷನ್ ೫(೩) ಅಡಿಯಲ್ಲಿ ಸಲ್ಲಿಸಲಾದ ರಾಜ್ಯಗಳ ಮತ್ತು ಭಾರತ ಸರ್ಕಾರದ ಅರ್ಜಿಗಳ ವಿಚಾರಣೆಯನ್ನು ಮುಂದೂಡಿತು. ಇನ್ನೂ ಈ ಅರ್ಜಿಗಳು ಇತ್ಯರ್ಥ ವಾಗಿಲ್ಲ.

**೨೨. ಜಲಾನಯನ ರಾಜ್ಯಗಳಿಂದ ಸರ್ವೋಚ್ಛ ನ್ಯಾಯಾಲಯಕ್ಕೆ ಸ್ಪೆಷಲ್ ಲೀವ್ ಪಿಟಿಷನ್ (ಎಸ್.ಎಲ್.ಪಿ.) ಸಲ್ಲಿಕೆ.**

ನ್ಯಾಯಮಂಡಳಿಯ ಆದೇಶದಿಂದ ಅತೃಪ್ತವಾದ ಕರ್ನಾಟಕವು ಆರ್ಟಿಕಲ್ ೧೩೬ ಅಡಿಯಲ್ಲಿ ಎಸ್.ಎಲ್.ಪಿ. ಯನ್ನು ಸರ್ವೋಚ್ಛ ನ್ಯಾಯಾಲಯದಲ್ಲಿ ಸಲ್ಲಿಸಿತು. ಕೇರಳವೂ ಸಹ ಎಸ್.ಎಲ್.ಪಿ. ಸಲ್ಲಿಸಿತು. ಮೊದಲು ತಮಿಳುನಾಡು ನ್ಯಾಯ ಮಂಡಳಿಯ ಆದೇಶವನ್ನು ಒಪ್ಪಿದಂತೆ ಕಂಡುಬಂದರೂ ನಂತರ ಅದೂ ಸಹ ಎಸ್.ಎಲ್.ಪಿ. ಸಲ್ಲಿಸಲು ನಿರ್ಧರಿಸಿತು. ಎಲ್ಲ ಮೂರು ರಾಜ್ಯಗಳಿಂದ ಸರ್ವೋಚ್ಛ ನ್ಯಾಯಾಲಯದಲ್ಲಿ ಸಲ್ಲಿಸಲಾಗಿರುವ ಎಸ್.ಎಲ್.ಪಿ. ವಿಚಾರಣೆಯು ೨೦೦೭ ರಿಂದ ಹಾಗೆ ಉಳಿದುಕೊಂಡು ಬಂದಿದೆ. ಆದರೆ, ತದನಂತರದಲ್ಲಿ ಯಾವಾಗ್ಯಾವಾಗ ತಮಿಳುನಾಡು ಮುಖ್ಯ ಎಸ್.ಎಲ್.ಪಿ. ಅಡಿಯಲ್ಲಿ ಐ.ಎ. ಗಳನ್ನು ಸಲ್ಲಿಸಿತೊ ಆವಾಗಾವಾಗ ಸರ್ವೋಚ್ಛ ನ್ಯಾಯಾಲಯವು ಐ.ಎ. ಗಳ ವಿಚಾರಣೆ ಮಾಡಿ ತೀರ್ಪನ್ನು ನೀಡಿತಾದರೂ ಮೂರೂ ರಾಜ್ಯಗಳು ಸಲ್ಲಿಸಿರುವ ಮುಖ್ಯ ಎಸ್.ಎಲ್.ಪಿ. ಗಳ ವಿಚಾರಣೆಯನ್ನು ಮುಂದೂಡುತ್ತಲೆ ಬಂದಿದೆ. ಕಳೆದ ಹತ್ತು ವರ್ಷಗಳಿಂದ ಸರ್ವೋಚ್ಛ ನ್ಯಾಯಾಲಯದಿಂದ ಮುಖ್ಯ ಎಸ್.ಎಲ್.ಪಿ. ಗಳ ಇತ್ಯರ್ಥಗೊಳ್ಳದೆ ಇರುವಿಕೆಯು ಸಮಸ್ಯೆಯ ಅಂತಿಮ ತೀರ್ಪು ಉಲ್ಬಣಗೊಳ್ಳುವಂತೆ ಮಾಡಿದೆ ಮತ್ತು ಕಾವೇರಿ ಜಲವಿವಾದವನ್ನು ಬಗೆಹರಿಸುವಲ್ಲಿ ಗಂಭೀರವಾದ ತಡೆಯನ್ನೊಡ್ಡಿದೆ.

ಕಳೆದ ಹತ್ತು ವರ್ಷಗಳಿಂದ ಹಾಗೆ ಉಳಿದಿದ್ದ ಎಸ್.ಎಲ್.ಪಿ.ಗಳು ಇತ್ತೀಚೆಗೆ ಜುಲೈ/ ಸೆಪ್ಟೆಂಬರ್ ೨೦೧೭ ರಲ್ಲಿ ಮತ್ತೆ ವಿಚಾರಣೆಗೊಳಪಟ್ಟು ಇದಕ್ಕೆ ಸಂಬಂಧಿಸಿದಂತೆ ಅಂತಿಮ ತೀರ್ಪನ್ನು ಸರ್ವೋಚ್ಚ ನ್ಯಾಯಾಲಯವು ಕಾಯ್ದಿರಿಸಿದೆ. ಸರ್ವೋಚ್ಛ ನ್ಯಾಯಾಲಯದ ಅಂತಿಮ ನಿರ್ಧಾರವು ಶೀಘ್ರದಲ್ಲಿ ಯಾವುದೇ ಸಮಯದಲ್ಲಾದರೂ ಹೊರಬೀಳಬಹುದು.

**೨೩. ಭಾರತ ಸರ್ಕಾರದಿಂದ ಸಿ.ಡಬ್ಲ್ಯೂ.ಡಿ.ಟಿ. ಯ ಅಂತಿಮ ಆದೇಶದ ಪ್ರಕಟಣೆ.**

ಮೂರು ರಾಜ್ಯಗಳಿಂದ ಸರ್ವೋಚ್ಛ ನ್ಯಾಯಾಲಯದಲ್ಲಿ ಸಲ್ಲಿಸಲಾದ ಎಸ್.ಎಲ್.ಪಿ. ಗಳು ಬಾಕಿ ಇರುವಾಗ, ಡಿಸೆಂಬರ್ ೨೦೧೨ ರಲ್ಲಿ ತಮಿಳುನಾಡು ಸಲ್ಲಿಸಿದ್ದ ಐ.ಎ. ವಿಚಾರಣೆ ನಡೆಸುತ್ತ, ಸರ್ವೋಚ್ಛ ನ್ಯಾಯಾಲಯವು ಕೇಂದ್ರ ಸರ್ಕಾರ, ನ್ಯಾಯಮಂಡಳಿಯ ಅಂತಿಮ ಆದೇಶವನ್ನು ಪ್ರಕಟಿಸದೆ ಇದ್ದುದರಿಂದ, ಅಂತಿಮ ಆದೇಶದಂತೆ ನೀರಿನ ಹರಿವನ್ನು ನಿಯಂತ್ರಿಸಲು ಉಸ್ತುವಾರಿ ಸಮಿತಿಯ ರಚನೆ ಆಗಿರುವುದಿಲ್ಲ. ಅಲ್ಲದೆ ಅಂತಹ ಒಂದು ಪ್ರಕಟಣೆಯು ಮೂರು ರಾಜ್ಯಗಳ ಮೇಲೆ ಯಾವುದೇ ಧಕ್ಕೆ ತರುವುದಿಲ್ಲ ಎಂದು ಪ್ರತಿಕ್ರಿಯಿಸಿತು. ಅಂತಿಮವಾಗಿ ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ ೨೦೦೭ರ ನ್ಯಾಯಮಂಡಳಿಯ ಆದೇಶವನ್ನು ಕೇಂದ್ರ ಸರ್ಕಾರವು ೧೯ ಫೆಬ್ರುವರಿ ೨೦೧೩ ರ ತನ್ನ ಗೆಜೆಟ್‌ನಲ್ಲಿ ಪ್ರಕಟಿಸಿತು.

**೨೪. ಕಾವೇರಿ ನಿರ್ವಹಣೆ ಮಂಡಳಿ (ಸಿ.ಎಂ.ಬಿ.) ಹಾಗೂ ಕಾವೇರಿ ನೀರು ನಿರ್ವಹಣಾ ಸಮಿತಿ (ಸಿ.ಡಬ್ಲ್ಯೂ.ಎಂ.ಸಿ.) ಗಳ ರಚನೆ.**

ನ್ಯಾಯ ಮಂಡಳಿಯ ತೀರ್ಪನ್ನು ಅನುಷ್ಠಾನಗೊಳಿಸಲು ತಮಿಳುನಾಡು ಕಾವೇರಿ ನಿರ್ವಹಣಾ ಮಂಡಳಿ (ಸಿ.ಎಂ.ಬಿ.) ಹಾಗೂ ನಿಯಂತ್ರಣ ಸಮಿತಿಗಳ ರಚನೆಗೆ ಬೇಡಿಕೆಯಿಟ್ಟಿತು. ಕರ್ನಾಟಕವು ತಕ್ಷಣ ಈ ಪ್ರಕಟಣೆಗೆ ತನ್ನ ವಿರೋಧವನ್ನು ವ್ಯಕ್ತಪಡಿಸಿತು ಹಾಗೂ ಅಂದಿನ ಮುಖ್ಯಮಂತ್ರಿಗಳಾದ ಶ್ರೀ ಜಗದೀಶ್ ಶೆಟ್ಟರ್ ಅವರು, ಸಲ್ಲಿಸಲಾದ ಮನವಿಗಳು ಇತ್ಯರ್ಥಗೊಳ್ಳುವವರೆಗೂ ಸಿ.ಎಂ.ಬಿ. ಯ ರಚನೆಗೆ ಅವಕಾಶ ಕಲ್ಪಿಸಬಾರದು ಎಂದು ಹೇಳಿದರು. ಸಿ.ಎಂ.ಬಿ. ರಚನೆಯಾಗುವುದ ರಿಂದ ಕರ್ನಾಟಕವು ಕಾವೇರಿ ಜಲಾನಯನದ ಎಲ್ಲ ಜಲಾಶಯಗಳ ಮೇಲಿನ ತನ್ನೆಲ್ಲ ನಿಯಂತ್ರಣ ಕಳೆದುಕೊಳ್ಳುವ ಭೀತಿ ಉಂಟಾಗಿತ್ತು. ತಮಿಳುನಾಡು ಸರ್ವೋಚ್ಛ ನ್ಯಾಯಾಲಯಕ್ಕೆ ಸಿ.ಎಂ.ಬಿ. ರಚನೆ ಮಾಡುವ ಕುರಿತು ಮನವಿ ಮಾಡಿದರೆ, ಕರ್ನಾಟಕವು ಅದಕ್ಕೆ ಪ್ರತಿಕ್ರಿಯೆಯಾಗಿ ಇದು ಅನಧಿಕೃತ ಪ್ರಯೋಗವಾಗಿದ್ದು ಮೂರು ರಾಜ್ಯಗಳ ಸ್ವಾಯತ್ತತೆಯ ಮೇಲೆ ಗಂಭೀರ ಪರಿಣಾಮ ಬೀರಲಿದೆ ಎಂದು ಹೇಳಿತು. ಭಾರತ ಸರ್ಕಾರವೂ ಸಹ ಸಿ.ಎಂ.ಬಿ. ರಚನೆಗೆ ವಿರೋಧ ವ್ಯಕ್ತಪಡಿಸುತ್ತ ಇದು ಶಾಸಕಾಂಗದ ಕ್ರಮವಾಗಿದೆ ಮತ್ತು ಐ.ಎಸ್.ಡಬ್ಲ್ಯೂ, ಕಾಯ್ದೆಯ ಅಡಿಯಲ್ಲಿ ಭಾರತ ಸರ್ಕಾರವು ನ್ಯಾಯಮಂಡಳಿಯ ತೀರ್ಪನ್ನು ಸಮರ್ಪಕವಾದ ರೂಪುರೇಷೆಗಳನ್ನು

ರೂಪಿಸಿ ಅನುಷ್ಠಾನಗೊಳಿಸಲು ಅಧಿಕಾರವನ್ನು ಹೊಂದಿದೆ ಎಂದು ಹೇಳಿತು, ಅಲ್ಲದೆ ಇದು ಸರ್ವೋಚ್ಚ ನ್ಯಾಯಾಲಯದ



ಪರಿಧಿಯಲ್ಲಿ ಬರುವುದಿಲ್ಲವೆಂದು ತಿಳಿಸಿತು. ಮಾನ್ಯ ಸರ್ವೋಚ್ಚ ನ್ಯಾಯಾಲಯವು ಜುಲೈ-ಸೆಪ್ಟೆಂಬರ್ ೨೦೧೭ ರಲ್ಲಿ ಮುಖ್ಯ ಎಸ್.ಎಲ್.ಪಿ. ಗಳ ವಿಚಾರಣೆಯನ್ನು ಕೈಗೆತ್ತಿಕೊಂಡಾಗ ಈ ಸಮಸ್ಯೆಯ ಕುರಿತು ಹೆಚ್ಚಿನ ಚರ್ಚೆಗಳಾಗಿ, ಅಂತಿಮ ತೀರ್ಪಿನಲ್ಲಿ ನ್ಯಾಯಾಲಯದ ಅಭಿಪ್ರಾಯ ಹೊರಬೀಳಲಿದೆ.

೨೫. ಜುಲೈ-ಸೆಪ್ಟೆಂಬರ್ ೨೦೧೭ ರಲ್ಲಿ, ಸರ್ವೋಚ್ಚ ನ್ಯಾಯಾಲಯದಲ್ಲಿ ಕಾವೇರಿ ನ್ಯಾಯಮಂಡಳಿಯ ಅಂತಿಮ ತೀರ್ಪನ್ನು ಪ್ರಶ್ನಿಸಿ ಮೂರು ರಾಜ್ಯಗಳಿಂದ ಸಲ್ಲಿಸಲಾದ ಮುಖ್ಯ ಎಸ್.ಎಲ್.ಪಿ. ಗಳ ವಿಚಾರಣೆಯ ಸಂದರ್ಭದಲ್ಲಿ ಹಲವು ವಿಷಯಗಳ ಮೇಲೆ ಕರ್ನಾಟಕ, ತಮಿಳುನಾಡು ಹಾಗೂ ಕೇರಳ ರಾಜ್ಯಗಳು ಮಂಡಿಸಿದ ಮಹತ್ವದ ವಾದ-ಪ್ರತಿವಾದಗಳು ಈ ಕೆಳಗಿನಂತಿವೆ

a. ಅಂದಿನ ಮೈಸೂರು ರಾಜ್ಯ ಇಂದು ಕರ್ನಾಟಕ ಹಾಗೂ ಮದ್ರಾಸ್ ರಾಜ್ಯಗಳ ಮಧ್ಯೆ ನಡೆದ ೧೮೯೨ ಮತ್ತು ೧೯೨೪ ರ ಒಪ್ಪಂದದ ಸಿಂಧುತ್ವ

ಸಿ.ಡಬ್ಲ್ಯೂ.ಡಿ.ಟಿ. ಯು ೧೮೯೨ ಮತ್ತು ೧೯೨೪ ರ ಒಪ್ಪಂದ ಇಂದಿಗೂ ಮಾನ್ಯ ಎಂದು ಹೇಳಿದ್ದು ಅದರಲ್ಲಿನ ಕೆಲ ನಿಯಮಗಳು ೫೦ ವರ್ಷಗಳ ನಂತರ ಅನೂರ್ಜಿತಗೊಂಡಿವೆ ಎಂದು ವ್ಯಾಖ್ಯಾನಿಸಿದೆ. ಅಲ್ಲದೆ, ಮೂರು ರಾಜ್ಯಗಳಿಗೆ ಸಮಾನವಾದ ನೀರು ಹಂಚಿಕೆಯನ್ನು "ಆದ್ಯತೆಯ ಸಿದ್ಧಾಂತ'ದ ಮೆರೆಗೆ ಪರಿಗಣಿಸಲಾಗಿದ್ದು ಎಂದು ಹೇಳುತ್ತ ಈ ಕೆಳಗಿನ ನಾಲ್ಕು ಹೊಸ ಆದ್ಯತೆಗಳನ್ನು ಪರಿಚಯಿಸಿದೆ

* ೧೯೨೪ ರ ಒಪ್ಪಂದಕ್ಕಿಂತ ಮುಂಚೆ ಅಭಿವೃದ್ಧಿಗೊಂಡ ಪ್ರದೇಶ
* ೧೯೨೪ ರ ಒಪ್ಪಂದದಂತೆ ಅಭಿವೃದ್ಧಿಗೆ ಪರಿಗಣಿಸಲಾದ ಪ್ರದೇಶ
* ೦೨.೦೭.೯೦ ರವರೆಗೆ ಒಪ್ಪಂದದಾಚೆ ಅಭಿವೃದ್ಧಿಗೊಂಡ ಪ್ರದೇಶ
* ಸಮಾನ ಹಂಚಿಕೆಗೆ ಸಂಬಂಧಿಸಿದಂತೆ ಪರಿಗಣಿಸಬಹುದಾದ ಪ್ರದೇಶ

ಸಿ.ಡಬ್ಲ್ಯೂ.ಡಿ.ಟಿ. ತಳೆದ ವಿಚಾರಧಾರೆಗೆ ತಮಿಳುನಾಡು ಬೆಂಬಲ ವ್ಯಕ್ತಪಡಿಸಿದರೆ, ಕರ್ನಾಟಕವು ಅದನ್ನು ಸಂಪೂರ್ಣವಾಗಿ ವಿರೋಧಿಸಿತು. ಈ ಕೆಳಗಿನ ಕಾಯ್ದೆ ಹಾಗೂ ದಾಖಲೆಗಳಲ್ಲಿ ಕಲ್ಪಿಸಲಾದ ಅಂಶಗಳ ಮೇಲೆ ಎರಡೂ ರಾಜ್ಯಗಳ ವಾದ ಅವಲಂಬಿಸಿದವು.

i) ೧೯೩೫ ರ ಭಾರತ ಸರ್ಕಾರ ಕಾಯ್ದೆ

ii) ೧೯೪೭ ರ ಭಾರತೀಯ ಸ್ವಾತಂತ್ರ್ಯ ಕಾಯ್ದೆ

iii) ಸ್ಟ್ಯಾಂಡ್ ಸ್ಟಿಲ್ ಒಪ್ಪಂದ

iv) ಇನ್ಸ್ಟ್ರುಮೆಂಟ್ ಆಫ್ ಆಕ್ಸೆಷನ್

v) ಸಂವಿಧಾನದ ೨೯೫ ಮತ್ತು ೩೯೫ ಆರ್ಟಿಕಲ್‌ಗಳು

vi) ೧೯೫೬ ರ ರಾಜ್ಯಗಳ ಪುನರ್ವಿಂಗಡನಾ ಕಾಯ್ದೆ



vii) ಬಾರ್ ಆಫ್ ಆರ್ಟಿಕಲ್ ೩೬೩ ಮತ್ತು

viii) ಕ್ಲಸ್ ಆಫ್ ಎಸ್ಟೊಪೆಲ್ಸ್, ಎಕ್ವೆಸೆನ್ಸ್ ಆನ್ ವೇವರ್ ಫಾರ್ ದೇರ್ ಆರ್ಗ್ಯೂಮೆಂಟ್

ತಮಿಳುನಾಡಿನ ವಾದವೇನಾಗಿತ್ತೆಂದರೆ, ರಾಜಮನೆತನದ ಮೈಸೂರು/ಕರ್ನಾಟಕ ರಾಜ್ಯವು ೧೮೯೨ ಮತ್ತು ೧೯೨೪ ರ ಒಪ್ಪಂದದ ಮುಂದುವರಿಯುವಿಕೆಗೆ ಎಂದಿಗೂ ಅಡ್ಡಿಪಡಿಸಿರಲಿಲ್ಲ ಹಾಗೂ ಇದಕ್ಕೆ ವಿರುದ್ಧವೆಂಬಂತೆ ೧೯೩೫ ರ ಭಾರತ ಸರ್ಕಾರ ಕಾಯ್ದೆಗಾಗಲಿ, ೧೯೪೭ ರ ಭಾರತೀಯ ಸ್ವಾತಂತ್ರ್ಯ ಕಾಯ್ದೆಗಾಗಲಿ, ಅಥವಾ ಸ್ಟ್ಯಾಂಡ್ ಸ್ಟೀಲ್ ಒಪ್ಪಂದವಾದ ಮೇಲಾಗಲಿ ಅಥವಾ ಸಾಂವಿಧಾನಿಕ ಪ್ರಸ್ತಾಪನೆಯಲ್ಲಾಗಲಿ ಒಪ್ಪಂದದ ಕುರಿತು ಅಡ್ಡಿಪಡಿಸಿಲ್ಲ. ಇದಕ್ಕೂ ವಿರುದ್ಧವೆಂಬಂತೆ ಕರ್ನಾಟಕವು ೧೯೭೪ ರವರೆಗೂ ೧೮೯೨ ಮತ್ತು ೧೯೨೪ ರ ಒಪ್ಪಂದಕ್ಕೆ ಎಚ್ಚರಿಕೆಯಿಂದ ಬದ್ಧವಾಗಿತ್ತು.

ರಾಷ್ಟ್ರಪತಿಯ ಉಲ್ಲೇಖಕ್ಕೆ ಸಂಬಂಧಿಸಿದಂತೆ ಸರ್ವೋಚ್ಛ ನ್ಯಾಯಾಲಯವು, "೧೯೨೪ ರ ಒಪ್ಪಂದವು ೫೦ ವರ್ಷಗಳ ನಂತರ ಮುಕ್ತಾಯವಾಗಿದ್ದು ನೀರು ಹಂಚಿಕೆಯನ್ನು ನ್ಯಾಯಸಮ್ಮತ ಹಂಚಿಕೆಯ ಆಧಾರದ ಮೇಲೆ ಮಾಡಬೇಕು" ಎಂದು ನೀಡಿದ್ದ ತೀರ್ಪನ್ನು ಕರ್ನಾಟಕವು ಈ ವಿಷಯದಲ್ಲಿ ಉಲ್ಲೇಖಿಸಿತು. ಅಲ್ಲದೆ ಮೇಲಿನ

ಒಪ್ಪಂದಗಳು ಎರಡು ಅಸಮಾನ ಪಕ್ಷಗಳ ಮಧ್ಯೆಯಾಗಿದ್ದು ಅದರಲ್ಲಿ ಮದ್ರಾಸ್ ಪ್ರಾಂತ್ಯವು ಯಾವಾಗಲೂ ತಾನೇ ಮಾಲೀಕನೆಂಬಂತೆ ವರ್ತಿಸಿ ಮೈಸೂರು ಆಡಳಿತಗಾರರು ತನ್ನ ನಿರ್ಧಾರಕ್ಕೆ ಬಲಿಪಶುಗಳಾಗುವಂತೆ ವರ್ತಿಸಿರುವುದನ್ನು ಹಲವು ಕಾರಣಗಳನ್ನು ನೀಡಿ ವಿವರಿಸಿತು. ಅಂತಹ ಹಲವು ಸನ್ನಿವೇಶಗಳನ್ನು ಅನೆಕ್ಸ ಒಂದರಲ್ಲಿ ವಿವರಿಸಲಾಗಿದ್ದು ಅದನ್ನು ಈ ಪ್ರಬಂಧ ದೊಂದಿಗೆ ಸೇರಿಸಲಾಗಿದೆ. ಹಾಗಾಗಿ ಕರ್ನಾಟಕವು ಒಪ್ಪಂದದ ಸಿಂಧುತ್ವಕ್ಕೆ ಸಂಬಂಧಿಸಿದಂತೆ ಸಾಕಷ್ಟು ದಾಖಲೆಗಳನ್ನು ಸಲ್ಲಿಸಿದ ನಂತರ ಈಗ ಮಾನ್ಯ ಸರ್ವೋಚ್ಚ ನ್ಯಾಯಾಲಯವು ೧೮೯೨ ಮತ್ತು ೧೯೨೪ ರ ಒಪ್ಪಂದವು ಇಂದಿಗೂ ಮಾನ್ಯವೆ ಅಥವಾ ಇಲ್ಲವೆ ಎಂಬುದನ್ನು ನಿರ್ಧರಿಸಿ ಕರ್ನಾಟಕಕ್ಕೆ ಸಮಾಧಾನ ನೀಡಬೇಕಾಗಿದೆ.

b. "ಹೆಲಸಂಕಿ ನಿಯಮಗಳು ಮತ್ತು ೨೦೦೪ ರ ಬರ್ಲಿನ್ ನಿಯಮಗಳು" ಪ್ರಕಾರವಾಗಿ ನ್ಯಾಯಮಂಡಳಿಗೆ ಸಂಬಂಧಿತ "ಜಲಾನಯನ ಅಂಶಗಳು" ಅನ್ನು ಗಣನೆಗೆ ತೆಗೆದುಕೊಳ್ಳುವುದು ಅವಶ್ಯಕವಾಗಿರುತ್ತದೆ, ಆದರೆ ಸಿಡಬ್ಲ್ಯೂ.ಡಿ.ಟಿ. ಯಾವುದೇ ಮಹತ್ವದ ಜಲಾನಯನ ಅಂಶಗಳನ್ನು ಪರಿಗಣಿಸಲಿಲ್ಲ. ಉದಾಹರಣೆಗೆ "ಕರ್ನಾಟಕದಲ್ಲಿರುವ ದೊಡ್ಡ ಪ್ರಮಾಣದ ಬರ ಪ್ರದೇಶ" ಮತ್ತು "ಜಲಾನಯನಕ್ಕೆ ನೀರಿನ ಕೊಡುಗೆ" ಅಲ್ಲದೆ ರಾಜ್ಯವು ಪ್ರಸ್ತಾವಿಸಿದ್ದ ಎಲ್ಲ "ಏಳು ಲಿಫ್ಟ್ ಇರಿಗೇಷನ್ ಯೋಜನೆಗಳಿಗೆ ನೀರು ನಿಗದಿಪಡಿಸುವಿಕೆಯನ್ನು ನ್ಯಾಯಮಂಡಳಿಯು ತಿರಸ್ಕರಿಸಿದ್ದೂ ಅಲ್ಲದೆ ಇನ್ನೂ ಉಳಿದಿರುವ ೪೫.೦೮ ಟಿ.ಎಂ.ಸಿ. ನೀರಿನ . ಕಡೆಗೆ ಬೊಟ್ಟು ಮಾಡಿತು.

೨೪೪ / ನುಡಿಗಂಧ

ಜಲಾನಯನ ರಾಜ್ಯಗಳಲ್ಲಿ ನ್ಯಾಯಸಮ್ಮತವಾದ ನೀರಿನ ಹಂಚಿಕೆಯ ಕುರಿತು ಯಾವೆಲ್ಲ ಅಂಶಗಳನ್ನು ಪರಿಗಣಿಸಬೇಕೆಂದು ಪರಿಣಾಮಕಾರಿಯಾಗಿ "ಹೆಲಸಂಕಿ ನಿಯಮಗಳು ಮತ್ತು ೨೦೦೪ ರ ಬರ್ಲಿನ್ ನಿಯಮಗಳು" ನಲ್ಲಿ ವ್ಯಾಖ್ಯಾನಿಸಲಾಗಿದೆ. 'ಜಲಾನಯನಕ್ಕೆ ನೀರಿನ ಕೊಡುಗೆ", "ಬರಪಿಡಿತ ಪ್ರದೇಶಗಳು" ಹಾಗೂ "ಕುಡಿಯುವ ನೀರಿನ ಅವಶ್ಯಕತೆ" ಮುಂತಾದವುಗಳು ಇದರಲ್ಲಿರುವ ಕೆಲವು ಮಹತ್ವದ ಅಂಶಗಳಾಗಿವೆ. ಕರ್ನಾಟಕವು ದೊಡ್ಡ ಪ್ರಮಾಣದ ಬರಪೀಡಿತ ಪ್ರದೇಶವನ್ನೊಳ ಗೊಂಡಿದ್ದರೂ, ಮತ್ತು ಜಲಾನಯನಕ್ಕೆ ಗಣನೀಯವಾದ ನೀರಿನ ಕೊಡುಗೆ ನೀಡುತ್ತಿದ್ದರೂ ಹಾಗೂ ಏಷಿಯಾದಲ್ಲಿ ವೇಗವಾಗಿ ಅಭಿವೃದ್ಧಿಯಾಗುತ್ತಿರುವಂತಹ ಬೆಂಗಳೂರು ನಗರವು ಇದರ ರಾಜಧಾನಿಯಾಗಿದ್ದ ಅಂದಿನಿಂದಲು ಬೆಂಗಳೂರು ನಗರದಲ್ಲಿ ನೆಲೆಸಿರುವ ಪ್ರತಿಯೊಬ್ಬರಿಗೂ ಆರಂಭದಿಂದಲೂ ಕುಡಿಯುವ ನೀರನ್ನು ಕಾವೇರಿ ನದಿ ಮೂಲದಿಂದಲೇ ಒದಗಿಸುತ್ತಿದ್ದರೂ ಸಹ, ಸಿ.ಡಬ್ಲ್ಯೂ.ಡಿ.ಟಿ. ಯು ಜಲಾನಯನ ರಾಜ್ಯಗಳಿಗೆ ನ್ಯಾಯಸಮ್ಮತ ನೀರು ಹಂಚಿಕೆಯನ್ನು ನಿರ್ಧರಿಸುವಲ್ಲಿ ಈ ಅಂಶಗಳನ್ನು ಪರಿಗಣಿಸಲಿಲ್ಲ, ಬದಲಾಗಿ

ಬೆಂಗಳೂರಿನ ಕಾವೇರಿ ಜಲಾನಯನ ದಲ್ಲಿ ವಾಸಿಸುತ್ತಿರುವ ಜನಸಂಖ್ಯೆಯ ಕೇವಲ ಒಂದು ಮೂರನೇ ಭಾಗದಷ್ಟು ಜನಸಂಖ್ಯೆಗೆ ಮಾತ್ರ ಹರಿಯುವ ಕಾವೇರಿ ನದಿಯ ನೀರಿನ ೫೦% ರಷ್ಟು ಭಾಗವನ್ನು ನಿಗದಿಪಡಿಸಲು ಪರಿಗಣಿಸಿತು ಹಾಗೂ ಜಲಾನಯನದ ಹೊರ ಪ್ರದೇಶ ಎಂಬುವ ಆಧಾರದ ಮೇಲೆ "ಬೆಂಗಳೂರಿನ ಎರಡರ ಮೂರನೆ ಭಾಗದಷ್ಟು ಜನಸಂಖ್ಯೆಗೆ ಕುಡಿಯುವ ನೀರನ್ನು ತಿರಸ್ಕರಿಸಿತು". ಇದೇ ಸಮಯದಲ್ಲಿ ಸಿ.ಡಬ್ಲ್ಯೂ.ಡಿ.ಟಿ. ೪೫.೦೮ ಟಿ.ಎಂ.ಸಿ. ಗಳಷ್ಟು "ಉಳಿದ ನೀರು" ಕಂಡುಬಂದು ಅದರಲ್ಲಿ ತಪ್ಪಾಗಿ ೨೫ ಟಿ.ಎಂ.ಸಿ. ಗಳಷ್ಟು ನೀರನ್ನು ೧೯೨೪ ರ ಒಪ್ಪಂದದಾಚೆಗಿನ ಯೋಜನೆಗಳಿಗೆ ಅನುಕೂಲ ಮಾಡಿಕೊಡಲು ತಮಿಳುನಾಡಿಗೆ ನೀರನ್ನು ಬಿಡಲು ನಿಗದಿ ಮಾಡಿತು. ನ್ಯಾಯಮಂಡಳಿಯ ಈ ಕ್ರಮವು ತಪ್ಪಾಗಿದ್ದು ಮತ್ತೊಮ್ಮೆ ಪರಿಶೀಲಿಸಬೇಕಾಗಿದೆ ಹಾಗೂ ಇದನ್ನು ಸರಿಪಡಿಸುವ ಕ್ರಮಗಳನ್ನು ತೆಗೆದುಕೊಂಡು ಕರ್ನಾಟಕಕ್ಕೆ ಹೆಚ್ಚಿನ ನೀರು ಸಿಗುವಂತೆ ಮಾಡಬೇಕಾಗಿದೆ. ಇದರಿಂದ "ಬರಪೀಡಿತ ಪ್ರದೇಶಗಳು" ಎಂಬ ಅಡಿಯಲ್ಲಿ ಕರ್ನಾಟಕವು ಸಲ್ಲಿಸಿದ "ಏಳು ಲಿಫ್ಟ್ ಇರಿಗೇಷನ್ ಯೋಜನೆಗಳಿಗೆ ಉಪಯೋಗವಾಗುವಂತೆ ಮಾಡಬೇಕಾಗಿದೆ.

C "ರಾಷ್ಟ್ರಪತಿಯವರ ಉಲ್ಲೇಖ" ವಿಚಾರಣೆಯ ಸಂದರ್ಭದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ "೧೯೨೪ ರ ಒಪ್ಪಂದವು ೫೦ ವರ್ಷಗಳ ನಂತರ ಮುಕ್ತಾಯ ವಾಗಿದ್ದು ನೀರಿನ ಪಾಲನ್ನು ನ್ಯಾಯಸಮ್ಮತ ಹಂಚಿಕೆಯ ಆಧಾರದ ಮೇಲೆ ಮಾಡಬೇಕು" ಎಂಬ ಆದೇಶವನ್ನು ಸಿ.ಡಬ್ಲ್ಯೂಡಿ.ಟಿ. ಯು ಪರಿಗಣಿಸದೆ ನಿರ್ಲಕ್ಷಿಸಿದೆ.

ರಾಷ್ಟ್ರಪತಿಯವರ ಉಲ್ಲೇಖಕ್ಕೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯವು, "೧೯೨೪ ರ ಒಪ್ಪಂದವು ೫೦ ವರ್ಷಗಳ ನಂತರ ಮುಕ್ತಾಯವಾಗಿದ್ದು ನೀರು

ಹಂಚಿಕೆಯನ್ನು ನ್ಯಾಯಸಮ್ಮತ ಹಂಚಿಕೆಯ ಆಧಾರದ ಮೇಲೆ ಮಾಡಬೇಕು" ಎಂದು ನೀಡಿದ್ದ ತೀರ್ಪನ್ನು ಕರ್ನಾಟಕವು ಈ ವಿಷಯದಲ್ಲಿ ಉಲ್ಲೇಖಿಸಿತು. ಅಲ್ಲದೆ ಮೇಲಿನ ಒಪ್ಪಂದಗಳು ಎರಡು ಅಸಮಾನ ಪಕ್ಷಗಳ ಮಧ್ಯೆಯಾಗಿದ್ದು ಅದರಲ್ಲಿ ಮದ್ರಾಸ್ ಪ್ರಾಂತ್ಯವು ಯಾವಾಗಲೂ ತಾನೆ ಮಾಲೀಕನೆಂಬಂತೆ ವರ್ತಿಸಿ ಮೈಸೂರು ಆಡಳಿತಗಾರರು ತನ್ನ ನಿರ್ಧಾರಕ್ಕೆ ಬಲಿಪಶುಗಳಾಗುವಂತೆ ವರ್ತಿಸಿರು ವುದನ್ನು ಹಲವು ಕಾರಣಗಳನ್ನು ನೀಡಿ ವಿವರಿಸಿತು. ಸಿ.ಡಬ್ಲ್ಯೂ.ಡಿ.ಟಿ.ಯು ಮೇಲೆ ಉಲ್ಲೇಖಿಸಿದ ಸರ್ವೋಚ್ಚ ನ್ಯಾಯಾಲಯದ ತೀರ್ಮಾನವನ್ನು ನಿರ್ಲಕ್ಷಿಸಿರುವ ಅದರ ನಿರ್ಧಾರವು ಸರಿಯಾಗಿದೆಯೇ ಎಂಬುದು ಮಾನ್ಯ ಸರ್ವೋಚ್ಚ ನ್ಯಾಯಾಲಯವೇ ನಿರ್ಧರಿಸಬೇಕಾಗಿದೆ.

d. ಸರ್ವೋಚ್ಛ ನ್ಯಾಯಾಲಯದ ಆದೇಶದ ಹೊರತಾಗಿಯೂ ಸಿ.ಡಬ್ಲ್ಯೂ.ಡಿ.ಟಿ. ಯು ನಾಲ್ಕು ರಾಜ್ಯಗಳಿಗೆ ನೀರು ಹಂಚುವಿಕೆಯಲ್ಲಿ ನ್ಯಾಯಸಮ್ಮತ ನೀರು ಹಂಚಿಕೆ ನಿಯಮದ ಬದಲು "ಆದ್ಯತೆಯ ನಿಯಮ" ವನ್ನು ಅನುಸರಿಸಿದೆ.

ಸಿ.ಡಬ್ಲ್ಯೂ.ಡಿ.ಟಿ. ಯು ೧೮೯೨ ಮತ್ತು ೧೯೨೪ ರ ಒಪ್ಪಂದ ಇಂದಿಗೂ ಮಾನ್ಯ ಎಂದು ಹೇಳಿದ್ದು ಅದರಲ್ಲಿನ ಕೆಲ ನಿಯಮಗಳು ೫೦ ವರ್ಷಗಳ ನಂತರ ಅನೂರ್ಜಿತಗೊಂಡಿವೆ ಎಂದು ವ್ಯಾಖ್ಯಾನಿಸಿದೆ. ಅಲ್ಲದೆ, ಮೂರು ರಾಜ್ಯಗಳಿಗೆ ಸಮಾನವಾದ ನೀರು ಹಂಚಿಕೆಯನ್ನು "ಆದ್ಯತೆಯ ಸಿದ್ಧಾಂತ" ದ ಮೇರೆಗೆ ಪರಿಗಣಿಸಲಾಗಿದ್ದು ಎಂದು ಹೇಳುತ್ತ ಈ ಕೆಳಗಿನ ನಾಲ್ಕು ಹೊಸ ಆದ್ಯತೆಗಳನ್ನು ಪರಿಚಯಿಸಿದೆ.

* ೧೯೨೪ ರ ಒಪ್ಪಂದಕ್ಕಿಂತ ಮುಂಚೆ ಅಭಿವೃದ್ಧಿಗೊಂಡ ಪ್ರದೇಶ +
* ೧೯೨೪ ರ ಒಪ್ಪಂದದಂತೆ ಅಭಿವೃದ್ಧಿಗೆ ಪರಿಗಣಿಸಲಾದ ಪ್ರದೇಶ
* ೦೨.೦೬.೯೦ ರವರೆಗೆ ಒಪ್ಪಂದದಾಚೆ ಅಭಿವೃದ್ಧಿಗೊಂಡ ಪ್ರದೇಶ
* ಸಮಾನ ಹಂಚಿಕೆಗೆ ಸಂಬಂಧಿಸಿದಂತೆ ಪರಿಗಣಿಸಬಹುದಾದ ಪ್ರದೇಶ

"ರಾಷ್ಟ್ರಪತಿಯವರ ಉಲ್ಲೇಖ” ದ ಸಂದರ್ಭದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ಅಭಿಪ್ರಾಯಗಳನ್ನು ಆದೇಶವನ್ನಾಗಿ ಪರಿಗಣಿಸಲು ಸಾಧ್ಯವಿಲ್ಲ, ಇದು ಕೇವಲ ಅಭಿಪ್ರಾಯವಷ್ಟೆ ಆಗಿದ್ದು ಇದನ್ನು ಸಿ.ಡಬ್ಲ್ಯೂ.ಡಿ.ಟಿ. ಯು ಪರಿಗಣಿಸಬೇಕಾಗಿಲ್ಲ ಎಂದು ತಮಿಳುನಾಡು ವಾದ ಮಾಡಿತು. ಹಾಗಾಗಿ ಈ ಆಧಾರದ ಮೇಲೆಯೆ ಸಿ.ಡಬ್ಲ್ಯೂ.ಡಿ.ಟಿ.ಯು ನ್ಯಾಯಸಮ್ಮತ ಹಂಚಿಕೆಯ ಸಿದ್ಧಾಂತದ ಬದಲು ಆದ್ಯತೆಯ ಸಿದ್ಧಾಂತವನ್ನು ಅಳವಡಿಸಿಕೊಂಡಿದೆ. ಆದರೆ ಈಗ ಸಿ.ಡಬ್ಲ್ಯೂ.ಡಿ.ಟಿ.ಯು ತೆಗೆದುಕೊಂಡ ಕ್ರಮದ ಮೇಲೆ ಸರಿಯಾದ ನಿರ್ಧಾರ ಕೈಗೊಂಡು ಆದೇಶ ನೀಡುವುದು ಸರ್ವೋಚ್ಛ ನ್ಯಾಯಾಲಯಕ್ಕೆ ಬಿಟ್ಟಿದೆ.

e. ನ್ಯಾಯಮಂಡಳಿಯ ಅಂತಿಮ ಘಟ್ಟದಲ್ಲಿ ಸಿ.ಡಬ್ಲ್ಯೂ.ಡಿ.ಟಿ. ಯು ೧೨/೪/ ೨೦೦೨ ರಲ್ಲಿ ಹೊರಡಿಸಿದ ಆದೇಶದಲ್ಲಿ ತಾನು ಅನುಸರಿಸುತ್ತಿದ್ದ 'ಅಡವ



ಸಿರೀಯಲ್ ವಿಧಾನ ತೊರೆದು ಯಾವುದೇ ರಾಜ್ಯಗಳಿಗೆ ಮುಂಚಿತವಾಗಿ ಸೂಚಿಸದೆ "ಇನ್‌ಕ್ವೈಸ್ಟೀರಿಯಲ್ ಪದ್ಧತಿಗೆ" ಬದಲಿಸಿರುವುದು ಕಾನೂನಾತ್ಮಕ ವಾಗಿ ಸರಿಯಾಗಿದೆಯೇ ಹಾಗೂ ಕರ್ನಾಟಕ ರಾಜ್ಯ ಇದಕ್ಕೊಳಪಡಬೇಕೆ?

ನ್ಯಾಯಮಂಡಳಿಗಳು ವಿಚಾರಣೆಗಳನ್ನು ನಡೆಸುವಾಗ "ಅಡವ ಸಿರೀಯಲ್ ವಿಧಾನ" ಅಥವಾ "ಇನ್‌ಕ್ವೈಸ್ಟೀರಿಯಲ್ ಪದ್ಧತಿಗೆ" ಇಲ್ಲವೆ ಎರಡನ್ನೂ ಅಳವಡಿಸಿ ಕೊಳ್ಳಲು ಅವಕಾಶವಿದೆ. ಆದರೆ ಸಿ.ಡಬ್ಲ್ಯೂ ಡಿ.ಟಿ.ಯು ಕರ್ನಾಟಕವು ಸಲ್ಲಿಸಿದ್ದ ೧೯೯೨ ರ ಸಿ.ಎಂ.ಪಿ. ೨೦ ಅರ್ಜಿಯ ವಿಚಾರಣೆಯ ಸಂದರ್ಭದಲ್ಲಿ ಮೊದಲ ಹಂತದಲ್ಲೆ ಸ್ಪಷ್ಟ ಮಾಡಿತ್ತು. ಏನೆಂದರೆ ಅದು ಕೇವಲ ಅಡವ ಸಿರೀಯಲ್ ವಿಧಾನ" ವನ್ನು ಅಳವಡಿಸಿಕೊಳ್ಳುತ್ತದೆಂದು ಆದೇಶಿಸಿದ ಮೇಲೆ ಅದಕ್ಕನುಸಾರವಾಗಿ ಎಲ್ಲ ರಾಜ್ಯಗಳು ಆ ವಿಧಾನವನ್ನು ಅನುಸರಿಸಿದವು.

ನ್ಯಾಯಮಂಡಳಿಯ ಅಂತಿಮ ಘಟ್ಟದಲ್ಲಿ ತಾನು ದಿನಾಂಕ ೧೨/೧೧/೨೦೦೨ ರಲ್ಲಿ ಹೊರಡಿಸಿದ್ದ ಆದೇಶದಂತೆ ನ್ಯಾಯಮಂಡಳಿಯು ಎಲ್ಲ ಜಲಾನಯನ ರಾಜ್ಯಗಳಿಗೆ ಬೆಳೆಗೆ ಬೇಕಾದ ನೀರಿನ ಅವಶ್ಯಕತೆ ಸಲ್ಲಿಸುವಂತೆಯೂ ಹಾಗೂ ನೀರಿನ ಮಿತವ್ಯಯ ಬಳಕೆಗೆ ಅಳವಡಿಸಿಕೊಳ್ಳಲಾದ ಪ್ರಮಾಣವನ್ನು ಸಲ್ಲಿಸುವಂತೆಯೂ ನಿರ್ದೇಶಿಸಿತು. ಈ ಮೊದಲೇ ಹೇಳಿದಂತೆ ಮೊದಲಿನಿಂದಲೂ ಕರ್ನಾಟಕ ರಾಜ್ಯವು ತಮಿಳುನಾಡಿನಲ್ಲಿ ನೀರಾವರಿಗೆ ಬೇಕಾದ ಅವಶ್ಯಕತೆಯ ಸಾಕ್ಷಿಗಳು ಹೊಂದಿಸುವುದು ತಮಿಳುನಾಡಿನ ಆದ್ಯ ಜವಾಬ್ದಾರಿ ಇದ್ದು ಅದು ಇದುವರೆಗೆ ಯಾವುದೇ ರೀತಿಯ ವರದಿಯನ್ನು ಸಲ್ಲಿಸಿಲ್ಲ ಹಾಗೂ ಪಾಟೀ ಸವಾಲಿಗೂ ಅನುವು ಮಾಡಿಕೊಟ್ಟಿಲ್ಲ ಎಂದು ನ್ಯಾಯಮಂಡಳಿಯ ಮುಂದೆ ಅಲವತ್ತುಕೊಂಡಿದೆ. ತಮಿಳುನಾಡು ಸೇರಿದಂತೆ ಎಲ್ಲ ರಾಜ್ಯಗಳು ತಮ್ಮ ಬೆಳೆಗೆ ಬೇಕಾದ ನೀರಿನ ಅವಶ್ಯಕತೆಯನ್ನು ನ್ಯಾಯಮಂಡಳಿಯ ಮುಂದೆ ಸಲ್ಲಿಸಿವೆ. ತಮಿಳುನಾಡು ಎಕ್ಸಿಬಿಟ್ ೧೬೬೫ ರಲ್ಲಿ ಹೇಳಿಕೆಯನ್ನು ಸಲ್ಲಿಸಿ ಹಾಗೂ ಅದನ್ನು ಮಂಡಳಿಯ ಮುಂದೆ ನೇರವಾಗಿ ಸಲ್ಲಿಸಿತು. ಕರ್ನಾಟಕ ಇದನ್ನು ವಿರೋಧಿಸಿತು. ಕರ್ನಾಟಕವು ಪಾಟೀ ಸವಾಲನ್ನು ಕೈಗೊಳ್ಳಲು ಆ ವೇಳೆಗಾಗಲೆ "ಪಾರ್ಟಿ ಸವಾಲ್" ಮುಗಿದಿದೆ ಎಂದು ನ್ಯಾಯಮಂಡಳಿಯು ಘೋಷಿಸಿದ್ದರಿಂದ ಶ್ರೀ ಆರ್.ಸುಬ್ರಮಣಿಯನ್ ಅವರು ಸಲ್ಲಿಸಿದ ಎಕ್ಸಿಬಿಟ್ ೧೬೬೫ ಮೇಲೆ ನ್ಯಾಯ ಮಂಡಳಿಯಾಗಲಿ ಅಥವಾ ತಮಿಳುನಾಡು ಸರ್ಕಾರವಾಗಲಿ ಅವಕಾಶ ಕಲ್ಪಿಸಲಿಲ್ಲ. ಹಾಗಾಗಿ ಎಕ್ಸಿಬಿಟ್ ೧೬೬೫ ರಲ್ಲಿ ನಮೂದಿಸಿದ ದಾಖಲೆಗಳನ್ನು ಪರಿಗಣಿಸುವ ನ್ಯಾಯಮಂಡಳಿಯ ನಡೆಯನ್ನು ಕರ್ನಾಟಕ

ರಾಜ್ಯವು ಬಲವಾಗಿ ಖಂಡಿಸಿತು. ನ್ಯಾಯಮಂಡಳಿಯು ಕರ್ನಾಟಕದ ಹೇಳಿಕೆಯನ್ನು ಅನುಮೋದಿಸುತ್ತ ಎಕ್ಸಿಬಿಟ್ ೧೬೬೫ ದ ಕುರಿತು "ಮಾನ್ಯ ನ್ಯಾಯಮಂಡಳಿಯು ಸಾಕಷ್ಟು ಬಾರಿ ಈ ಅಫಿಡವಿಟ್ ಅನ್ನು ಅಂದರೆ ಎಕ್ಸಿಬಿಟ್ ೧೬೬೫ ಅನ್ನು ತಮಿಳುನಾಡು ತನ್ನ ಸ್ವಂತ ಬೆಂಬಲಕ್ಕಾಗಿ



ಉಪಯೋಗಿಸುವಂತಿಲ್ಲ, ಆದರೆ ಅದರಲ್ಲಿರುವ ದಾಖಲೆಗಳನ್ನು ಇತರೆ ರಾಜ್ಯಗಳು ನಮೂದಿಸಿದ ಅಂಕಿ-ಅಂಶಗಳೊಂದಿಗೆ ಹೋಲಿಸಲು ಮಾತ್ರವೇ ಬಳಸಬಹುದಾಗಿದೆ ಎಂದು ನಿರ್ದೇಶಿಸಿತು."

ನ್ಯಾಯಮಂಡಳಿಯ ಇಬ್ಬರು ಮೌಲ್ಯಮಾಪಕರು ತಮಿಳುನಾಡಿನ ಬೆಳೆಗೆ ಬೇಕಾದ ನೀರಿನ ಪ್ರಮಾಣವನ್ನು ಎಕ್ಸಿಬಿಟ್ ೧೬೬೫ ದ ಪ್ರಕಾರ ಲೆಕ್ಕಹಾಕಿ ೩೯೦.೮೫ ಟಿ.ಎಂ.ಸಿ. ಎಂದು ನಮೂದಿಸಿದರು. ಮಂಡಳಿಯ ಇನ್ನಿಬ್ಬರು ಸದಸ್ಯರು ಇದು "ಅತಿ ಹೆಚ್ಚು ಎಂದು ಹೇಳಿದರೂ ಸಹ ನ್ಯಾಯಮಂಡಳಿಯ ಕೊನೆಯ ವರದಿಯಲ್ಲಿ ತಮಿಳುನಾಡಿನ ಬೆಳೆಗೆ ಬೇಕಾದ ನೀರಿನ ಪ್ರಮಾಣವನ್ನು ಮೌಲ್ಯಮಾಪಕರು ನೀಡಿದ್ದ ಅಂಕಿ-ಅಂಶವನ್ನೇ ಪರಿಗಣಿಸಿ ತಮಿಳುನಾಡಿಗೆ ಹೆಚ್ಚಿನ ಪ್ರಮಾಣದಲ್ಲಿ ನೀರು ನಿಗದಿ ಮಾಡಲಾಗಿತ್ತು.

ಈ ಸಮಯದಲ್ಲೇ ಕರ್ನಾಟಕವೂ ಸಹ ತಮಿಳುನಾಡಿನ ೨೪.೮೧ ಲಕ್ಷ ಎಕರೆಗಳಷ್ಟು ನೀರಾವರಿ ಜಮೀನುಗಳಿಗೆ ಭಾರತ ಸರ್ಕಾರದ ಸಿ.ಡಬ್ಲ್ಯೂ.ಸಿ. ಮಾರ್ಗಸೂಚಿಯ ಆಧಾರದ ಮೇಲೆ ಲೆಕ್ಕಹಾಕಿ ೩೧೧.೨೦ ಟಿ.ಎಂ.ಸಿ ನೀರು ಬೇಕಾಗುತ್ತದೆ ಎಂದು ಸೂಚಿಸಿತು. ಇದೇ ಮಾರ್ಗಸೂಚಿಯನ್ನು ಕರ್ನಾಟಕದ ವಿವಿಧ ಯೋಜನೆಗಳ ಬೆಳೆ ನೀರಿನ ಅವಶ್ಯಕತೆಯ ಪ್ರಮಾಣ ಲೆಕ್ಕಹಾಕುವಲ್ಲಿಯೂ ಅನುಸರಿಸಲಾಯಿತೆಂದು ವಿವರಿಸಿ ಅದನ್ನು ಸಿ.ಡಬ್ಲ್ಯೂ.ಡಿ.ಟಿ. ಯು ಒಪ್ಪಿಕೊಂಡಿತು. ಹಾಗಾಗಿ, ಕರ್ನಾಟಕವು ಲೆಕ್ಕ ಹಾಕಿದಂತೆ ತಮಿಳುನಾಡಿನ ಬೆಳೆ ನೀರಿನ ಅವಶ್ಯಕತೆಯ ಪ್ರಮಾಣವಾದ ೩೧೧.೨೦ ಟಿ.ಎಂ.ಸಿ. ನೀರನ್ನೇ ಪರಿಗಣಿಸಬೇಕು ಹಾಗೂ ೭೯.೬೫ ಟಿ.ಎಂ.ಸಿ. ಹೆಚ್ಚುವರಿಯಾಗಿ ತಮಿಳುನಾಡಿಗೆ ಹಂಚಿದ ನೀರನ್ನು ಕರ್ನಾಟಕಕ್ಕೆ ನೀಡಬೇಕು.

"ಸಿ.ಡಬ್ಲ್ಯೂ.ಡಿ.ಟಿ."ಯು "ಅಡವರ್ ಸಿರೀಯಲ್ ವಿಧಾನ" ದಿಂದ "ಇನ್‌ಸ್ಟೀರಿಯಲ್ ವಿಧಾನಕ್ಕೆ ಬದಲಾವಣೆ ಮಾಡಿದ ಕ್ರಮ ತಪ್ಪು ಕ್ರಮವಾಗಿದ್ದು ಕಾನೂನಿಗೆ ಚ್ಯುತಿ ತರುವಂಥದ್ದಾಗಿದೆ. ಹಾಗಾಗಿ ಈ ಬದಲಾವಣೆಯ ಮೂಲಕ ಎಕ್ಸಿಬಿಟ್ ೧೬೬೫ ಅನ್ನು ಪರಿಗಣಿಸಿ ತಮಿಳುನಾಡಿಗೆ ನೀಡಲಾದ ಪ್ರಯೋಜನವನ್ನು ಕಡೆಗಣಿಸಬೇಕು ಹಾಗೂ ನಂತರದ ಪ್ರಯೋಜನವನ್ನು ಕರ್ನಾಟಕಕ್ಕೆ ನೀಡಬೇಕು".

f. ಮೊದಲಿನಿಂದಲೂ ಅಂದರೆ ಐ.ಎಸ್.ಡಬ್ಲ್ಯೂ.ಡಿ. ಕಾಯ್ದೆಯ ಅಡಿಯಲ್ಲಿ ನ್ಯಾಯಮಂಡಳಿಯ ಸ್ಥಾಪನೆಯ ಕುರಿತು ಉಲ್ಲೇಖ ಮಾಡಿದಾಗಿನಿಂದಲೂ ತಮಿಳುನಾಡು ೧೯೨೪ ರ ಒಪ್ಪಂದದ ಆಧಾರದ ಮೇಲೆ ತನ್ನ ೨೯.೨೬೯ ಲಕ್ಷ ಎಕರೆಗಳಷ್ಟು ಜಮೀನುಗಳಿಗೆ ನೀರುಣಿಸಲು ೫೨೪ ಟಿ.ಎಂ.ಸಿ. ನೀರನ್ನು ಬೇಡುತ್ತಿರುವುದು ಸರಿಯೇ.?

ತಮಿಳುನಾಡು ಮೊದಲಿನಿಂದಲೂ ಹೆಚ್ಚಿನ ಪ್ರಮಾಣದ ನೀರನ್ನು ಬೇಡುತ್ತಿದೆ. ಕಾವೇರಿ ಸತ್ಯ ಶೋಧನಾ ಸಮಿತಿ (ಸಿ.ಎಫ್.ಎಫ್.ಸಿ.) ಮುಂದೆಯೂ ತಮಿಳುನಾಡು



೫೭೩೪ ಟಿ.ಎಂ.ಸಿ. ನೀರಿನ ಬೇಡಿಕೆಯಿಟ್ಟಿತ್ತು. ಅವರು ೦೬.೦೭.೧೯೮೬ ರಲ್ಲಿ ನೀಡಿದ ದೂರಿನಲ್ಲಿ ೨೮.೨೯ ಲಕ್ಷ ಎಕರೆಗಳಷ್ಟು ಪ್ರದೇಶಕ್ಕೆ ೫೬೬ ಟಿ.ಎಂ.ಸಿ. ಯಷ್ಟು ನೀರಿನ ಬೇಡಿಕೆಯನ್ನು ಇಟ್ಟಿದ್ದರು. ಇದನ್ನು ಅವರು ಸಿ.ಡಬ್ಲ್ಯೂ.ಡಿ.ಟಿ. ಗೆ ಸಲ್ಲಿಸಿದ ಸೆಟ್ಲಮೆಂಟ್ ಆಫ್ ಕೇಸ್‌ನಲ್ಲು ಇರುವುದನ್ನು ಕಾಣಬಹುದು. ೮.೭.೨೦೦೪ ರಂದು ಸಿ.ಡಬ್ಲ್ಯೂ.ಡಿ.ಟಿ.ಗೆ ಅವರು ಸಲ್ಲಿಸಿದ ಎಕ್ಸಿಬಿಟ್ ೧೬೬೫ ವರದಿಯಲ್ಲಿ ತಮ್ಮ ೨೯.೨೬೯ ಲಕ್ಷ ಎಕರೆಗಳಷ್ಟು ಜಮೀನುಗಳಿಗೆ ೫೨೪ ಟಿ.ಎಂ.ಸಿ. ಯಷ್ಟು ನೀರಿನ ಬೇಡಿಕೆ ಇಟ್ಟಿದ್ದಾರೆ. ಇದನ್ನು ಕರ್ನಾಟಕವು ಕಟುವಾಗಿ ವಿರೋಧಿಸಿತು. ೯.೨.೨೦೦೫ ರಂದು ಸಿ.ಡಬ್ಲ್ಯೂ.ಡಿ.ಟಿ.ಗೆ ಅವರು ಸಲ್ಲಿಸಿದ ವರದಿಯ ಹೇಳಿಕೆ ೫೬ ರಲ್ಲಿ ಅವರು ತಮಗೆ ನೀರಿನ ಅವಶ್ಯಕತೆ ೫೫೨.೦೬ ಟಿ.ಎಂ.ಸಿ. ಎಂದು ಹೇಳಿರುತ್ತಾರೆ. ತಮಿಳುನಾಡಿನ ಈ ಎಲ್ಲ ನೀರಿನ ಬೇಡಿಕೆಗಳು ೧೯೨೪ರ ಒಪ್ಪಂದದ ಆಧಾರದ ಮೇಲೆಯೇ ಇವೆ.

ತಮಿಳುನಾಡಿನ ವಾದವೇನೆಂದರೆ ೧೯೨೪ ರ ಒಪ್ಪಂದ ಇನ್ನೂ ಚಾಲ್ತಿಯಲ್ಲಿದ್ದು ಕರ್ನಾಟಕವು ಕೆ.ಆರ್. ಸಾಗರದಲ್ಲಿ ಹಕ್ಕು ಚಲಾಯಿಸುವುದಕ್ಕೆ ಮುಂಚೆ ಕಾವೇರಿ ನೀರಿನ ಹರಿವನ್ನು ಮೇಲ್ಮಟ್ಟದ ಆಣೆಕಟ್ಟೆಯಲ್ಲಿ ಮಿತಿ ಮಾಪಕಗಳನ್ನು ಬಳಸಿ ನಿಯಂತ್ರಿಸುತ್ತ ಸಂಪೂರ್ಣ ನೀರಿನ ಪ್ರಮಾಣವನ್ನು ತಮಿಳುನಾಡಿಗೆ ಬಿಡ ಬೇಕೆಂದಾಗಿದೆ.

ತಮಿಳುನಾಡಿನ ಈ ವಾದ, ಹೆಲಸಂಕೆ ರೂಲ್, ೨೦೦೪ರ ಬರ್ಲಿನ್ ರೂಲ್ ಅಥವಾ 'ರಾಷ್ಟ್ರಪತಿಯವರ ಉಲ್ಲೇಖ'ದ ಪ್ರತಿ ಉಚ್ಚ ನ್ಯಾಯಾಲಯ ನೀಡಿದ ತೀರ್ಪಿನ ವಿರುದ್ಧವಾಗಿದ್ದು, ತಮಿಳುನಾಡಿನ ವಾದ ಒಪ್ಪಲು ಸಾಧ್ಯವಿಲ್ಲ.

೪. ಕರ್ನಾಟಕವು ನ್ಯಾಯಮಂಡಳಿಯ ಮುಂದೆ ಮೊದಲಿನಿಂದಲೂ ತನ್ನ ಮನವಿಗಳ ಮೂಲಕ ತಮಿಳುನಾಡು ತನ್ನ ೨೯.೨೬೯ ಲಕ್ಷ ಎಕರೆ ಜಮೀನಿನ ಬೆಳೆಗೆ ನೀರಿನ ಅವಶ್ಯಕತೆ ಇಂತಿಷ್ಟೆ ಇರುವುದು ಎಂದು ವೈಜ್ಞಾನಿಕ ಆಧಾರಗಳ ಮೂಲಕ ದೃಢೀಕರಿಸಲಿ ಎಂದು ಕೇಳುತ್ತಿದೆ.

ತಮಿಳುನಾಡಿನ ಕಾವೇರಿಯ ಹರಿಯುವ ಕೆಳಮಟ್ಟದ ಆಣೆಕಟ್ಟೆಯಲ್ಲಿ ಹರಿಯುವ ಎಲ್ಲಾ ನೀರು ತಮ್ಮದೇ ಎಂದು ಹೇಳುವ ತಮಿಳುನಾಡಿನ ಹೇಳಿಕೆಗೆ ವಿರುದ್ಧವಾಗಿ ಕರ್ನಾಟಕವು ಸತತ ಮನವಿಗಳ ಮೂಲಕ ನ್ಯಾಯಮಂಡಳಿಯ ಮುಂದೆ ತಮಿಳುನಾಡು ತನಗೆ ಬೇಕಾದ ನೀರಿನ ಪ್ರಮಾಣದ ಕುರಿತು ಎಲ್ಲ ರಾಜ್ಯಗಳು ಅನುಸರಿಸುವ ಸಿ.ಡಬ್ಲ್ಯೂ.ಸಿ, ಮಾರ್ಗಸೂಚಿಗಳ ಮೇಲೆ ಲೆಕ್ಕ ಹಾಕಿ ವೈಜ್ಞಾನಿಕ ಆಧಾರಗಳಿಂದ ರುಜುವಾತು ಪಡಿಸಲಿ, ಅದಕ್ಕೆ ಬೇಕಾದ ಸಾಕ್ಷಿಯ ಒತ್ತಡವು ತಮಿಳುನಾಡಿನ ಮೇಲೆಯೆ ಇದೆ ಎಂದು ಹೇಳುತ್ತಿದೆ. ಅಲ್ಲದೆ ರಾಜ್ಯ ಸರ್ಕಾರವು ನ್ಯಾಯಮಂಡಳಿಯ ಗಮನವನ್ನು ಸರ್ವೋಚ್ಚ ನ್ಯಾಯಾಲಯದ ಹೇಳಿಕೆಯತ್ತ ಸೆಳೆಯುವಂತೆ ಮಾಡಿತು. ಆ ಪ್ರಕಾರವಾಗಿ ಸರ್ವೋಚ್ಚ ನ್ಯಾಯಾಲಯವು ರಾಷ್ಟ್ರಪತಿ ಉಲ್ಲೇಖಕ್ಕೆ ಸಂಬಂಧಿಸಿದ ವಿಚಾರಣೆಯ ಸಂದರ್ಭದಲ್ಲಿ "೧೯೨೪ ರ ಒಪ್ಪಂದವು ೫೦ ವರ್ಷಗಳ ನಂತರ ಅನೂರ್ಜಿತಗೊಂಡಿದೆ



ಹಾಗೂ ನೀರಿನ ಪಾಲನ್ನು ನ್ಯಾಯಸಮ್ಮತ ಆಧಾರದ ಮೇಲೆ ಹಂಚಬೇಕು" ಎಂದು ಹೇಳಿತ್ತು.

ಮೌಲ್ಯಮಾಪಕರ ವರದಿಯನ್ನು ತಮಿಳುನಾಡು ಸಲ್ಲಿಸಿದ ಎಕ್ಸಿಬಿಟ್ ೧೬೬೫ ಅನ್ನು ಬಳಸಿಕೊಂಡು ತಮಿಳುನಾಡಿಗೆ ಬೇಕಾದ ನೀರಿನ ಪ್ರಮಾಣದ ಲೆಕ್ಕಾಚಾರವನ್ನು ತಯಾರಿಸಲಾಗಿದೆ. ಕರ್ನಾಟಕವು ಈಗಾಗಲೆ ಎಕ್ಸಿಬಿಟ್ ೧೬೬೫ ಅನ್ನು ವಿರೋಧಿಸಿದ್ದು ನ್ಯಾಯಮಂಡಳಿಯು ಇದನ್ನು ಪರಿಗಣಿಸಬಾರದೆಂದು ಹೇಳಿದೆ. ಏಕೆಂದರೆ ಇದರಲ್ಲಿ ಮೌಲ್ಯಮಾಪಕರು ನೀಡಿದ ವರದಿಯಂತೆ ನೀರಿನ ಬೇಡಿಕೆಯ ಪ್ರಮಾಣವು "ಅತಿ ಹೆಚ್ಚಾಗಿದೆ" ಎಂದು ಮಂಡಳಿಯ ಇಬ್ಬರು ಸದಸ್ಯರು ಅಭಿಪ್ರಾಯಪಟ್ಟಿರುತ್ತಾರೆ. ಮೌಲ್ಯಮಾಪಕರು ಇಬ್ಬರು ಕೃಷಿ ತಜ್ಞರು, ಒಬ್ಬ ಪವನಶಾಸ್ತ್ರಜ್ಞ ಹಾಗೂ ಇಬ್ಬರು ಮೌಲ್ಯಮಾಪಕರುಳ್ಳ ಪರಿಣಿತ ಸಮಿತಿಯೊಂದನ್ನು ರಚಿಸಲು ಸಲಹೆ ನೀಡಿದ್ದರು. ಆದರೆ ಈ ಸಲಹೆಯನ್ನು ನ್ಯಾಯಮಂಡಳಿಯ ಅಧ್ಯಕ್ಷ ಹಾಗೂ ಎಲ್ಲಾ ರಾಜ್ಯಗಳು ತಿರಸ್ಕರಿಸಿದವು. ಹಾಗಾಗಿ ಮೌಲ್ಯಮಾಪಕರು ತಮ್ಮ ವರದಿಯಲ್ಲಿ ಬೆಳೆ ನೀರಿನ ಅವಶ್ಯಕತೆಯನ್ನು ಲೆಕ್ಕಾಚಾರ ಮಾಡಿದ್ದರು ಹಾಗೂ ಆ ವರದಿಯನ್ನು ಕರ್ನಾಟಕವು ತಮಿಳುನಾಡಿಗೆ ಬೇಕಾದ ನ್ಯಾಯಸಮ್ಮತ ನೀರಿನ ಪಾಲನ್ನು ಅಳೆಯಲು "ಇದನ್ನು ಪರಿಗಣಿಸಲು ಸಾಧ್ಯವಿಲ್ಲ" ಎಂದು ಹೇಳಿ ತಿರಸ್ಕರಿಸಿತು.

ಇದೇ ಸಮಯದಲ್ಲಿ ಕರ್ನಾಟಕವೂ ಸಹ ತಮಿಳುನಾಡಿಗೆ ಬೇಕಾದ ಬೆಳೆ ನೀರಿನ ಅವಶ್ಯಕತೆಯನ್ನು ಸಿ.ಡಬ್ಲ್ಯೂಸಿ. ಮಾರ್ಗಸೂಚಿಯ ಆಧಾರದ ಮೇಲೆ ಲೆಕ್ಕಾಚಾರ ಮಾಡಿತ್ತು. ಆ ಪ್ರಕಾರವಾಗಿ ತಮಿಳುನಾಡಿಗೆ ತನ್ನ ೧೪.೭೧ ಲಕ್ಷ ಎಕರೆ ಜಮೀನುಗಳಿಗೆ ನೀರುಣಿಸಲು ೩೧೧.೧೦ ಟಿ.ಎಂ.ಸಿ. ಯಷ್ಟು ನೀರಿನ ಅವಶ್ಯಕತೆಯಿದೆ. ಆದರೆ ಇದನ್ನು ಮೌಲ್ಯಮಾಪಕರು ೩೯೦.೮೫ ಟಿ.ಎಂ.ಸಿ. ಅಷ್ಟು ಬೇಕಾಗುತ್ತದೆ ಎಂದು ನಮೂದಿಸಿರುತ್ತಾರೆ. ಹಾಗಾಗಿ ತಮಿಳುನಾಡಿಗೆ ಬಿಡಬೇಕಾದ ನೀರಿನ ಮಿತಿಯನ್ನು ೩೧೧.೧೦ ಟಿ.ಎಂ.ಸಿ. ಗೆ ಮಾತ್ರ ನಿಗದಿಪಡಿಸಬೇಕು ಎಂದು ಪ್ರತಿಪಾದಿಸಿದೆ.

h. ತಮಿಳುನಾಡಿನ ೧೧.೩೮ ಲಕ್ಷ ಎಕರೆಗಳಷ್ಟು ಭೂಮಿಗೆ ಬದಲಾಗಿ ೧೪.೭೧ ಲಕ್ಷ ಎಕರೆಗಳಷ್ಟು ಜಮೀನುಗಳಿಗೆ ನೀರು ನಿಗದಿ, ಅಂದರೆ ೧೯೨೪ ರ ಒಪ್ಪಂದದ ಆಚೆಗಿನ ಹೆಚ್ಚಾದ ೩.೩೩ ಲಕ್ಷ ಎಕರೆಗಳಷ್ಟು ಭೂಮಿಯನ್ನು ಪರಿಗಣಿಸಿರುವುದು ಸಿ.ಡಬ್ಲ್ಯೂ ಡಿ.ಟಿ.ಯ ಅತ್ಯಂತ ಸ್ಪಷ್ಟವಾದ ತಪ್ಪಾಗಿದ್ದು ಅದನ್ನು ಸರಿಪಡಿಸುವ ದೃಷ್ಟಿಯಿಂದ ತಮಿಳುನಾಡಿಗೆ ೩೯೦.೮೫ ಬದಲಾಗಿ ೩೩೯ ಟಿ.ಎಂ.ಸಿ. ಯಷ್ಟು ನೀರು ಹರಿಸಬೇಕು. ಅಂದರೆ ತಮಿಳುನಾಡಿಗೆ ೫೧.೮೫ ಟಿ.ಎಂ.ಸಿ. ಗಳಷ್ಟು ನೀರನ್ನು ಕಡಿತಗೊಳಿಸಬೇಕು.

೧೯೨೪ ರ ಒಪ್ಪಂದದಂತೆ ತಮಿಳುನಾಡಿನಲ್ಲಿ ನೀರಾವರಿಗೆ ಅವಕಾಶ ಕಲ್ಪಿಸಲು ಸಿ.ಡಬ್ಲ್ಯೂ ಡಿ.ಟಿ.ಯು ೧೧.೮೮ ಲಕ್ಷ ಎಕರೆಗಳಷ್ಟು ಎಂದು ಗೊತ್ತುಮಾಡಿದೆ. ಕರ್ನಾಟಕವು



ಇದಕ್ಕನುಸಾರವಾಗಿ ಬೆಳೆ ನೀರಿನ ಅವಶ್ಯಕತೆ ೩೩೯.೦ ಟಿ.ಎಂ.ಸಿ. ಎಂದು ಲೆಕ್ಕ ಹಾಕಿದೆ, ಇದು ಜಲಾಶಯದಲ್ಲಿ ಆವಿಯಾಗುವ ೧೦ ಟಿ.ಎಂ.ಸಿ. ನೀರನ್ನು ಒಳಗೊಂಡಿದೆ. ಆದರೆ ನ್ಯಾಯಮಂಡಳಿಯು ತಮಿಳುನಾಡಿಗೆ ನೀರಾವರಿಗಾಗಿ ೩೯೦.೯೫ ಟಿ.ಎಂ.ಸಿ. ಎಂದು ಲೆಕ್ಕ ಹಾಕಿದೆ. ಈ ಲೆಕ್ಕಾಚಾರವು ಒಪ್ಪಿಗೆಯಿರದ ಹಾಗೂ ಪರೀಕ್ಷಿಸದೆ ಇರುವ ಎಕ್ಸಿಬಿಟ್ ೧೬೬೫ ರ ಮೇಲೆ ಆಧಾರವಾಗಿದ್ದು ಆ ಮೂಲಕ ತಮಿಳುನಾಡಿನ ೩.೩೧ ಲಕ್ಷ ಎಕರೆಗಳಷ್ಟು ಹೆಚ್ಚಿನ ಜಮೀನನ್ನು ಪರಿಗಣಿಸಿದ್ದು ಹೆಚ್ಚಿನ ೫೧.೮೫ ಟಿ.ಎಂ.ಸಿ. ಯಷ್ಟು ನೀರನ್ನು ತಮಿಳುನಾಡಿಗೆ ನಿಗದಿಪಡಿಸಲಾಗಿದೆ. "ಈ ರೀತಿ ಹೆಚ್ಚಾಗಿ ಹಾಗೂ ತಪ್ಪಾಗಿ ಹರಿಸಲಾಗುತ್ತಿರುವ ೫೧.೮೫ ಟಿ.ಎಂ.ಸಿ. ಯಷ್ಟು ನೀರನ್ನು ತಮಿಳುನಾಡಿಗೆ ಕಡಿತಗೊಳಿಸಿ ಆ ನೀರು ಕರ್ನಾಟಕಕ್ಕೆ ಸಿಗುವಂತಾಗಬೇಕು".

i. ತಮಿಳುನಾಡಿನಿಂದ ೭೨೦೮ ಟಿ.ಎಂ.ಸಿ. ಯಷ್ಟು ಇನ್ನೂ ಹೆಚ್ಚಿನ ನೀರಿನ ಬೇಡಿಕೆಯು ನ್ಯಾಯಯುತವಲ್ಲ.

ಮೆಟ್ಟೂರು ಯೋಜನೆ (ಗ್ರ್ಯಾಂಡ್ ಆಣೆಕಟ್ಟು ಕೆನಾಲ್ ವ್ಯವಸ್ಥೆ) ಮತ್ತು ಮೆಟ್ಟೂರು ಜಲಾಶಯಕ್ಕೆಂದು ೫೪.೬೮ ಟಿ.ಎಂ.ಸಿ. (೪೬.೪೫+೮.೨೩ ಟಿ.ಎಂ.ಸಿ.) ಯಷ್ಟು ನೀರನ್ನು ನಿಗದಿಪಡಿಸಲಾಗಿದೆ. ಈ ನಿಗದಿತ ಪ್ರಮಾಣವನ್ನು ೩೨೧ ಲಕ್ಷ ಎಕರೆಗಳನ್ನೊಳಗೊಂಡು ಲೆಕ್ಕಹಾಕಿ ಮಾಡಲಾಗಿದೆ. ತಮಿಳುನಾಡು ಪರ ಸಾಕ್ಷಿದಾರರಾದ ಶ್ರೀ ಮೋಹನ್ ಕೃಷ್ಣ ಅವರು ಪಾಟೀ ವಿಚಾರಣೆಯ ಸಂದರ್ಭದಲ್ಲಿ ೩.೨೧ ಲಕ್ಷ ಎಕರೆಗಳನ್ನೊಳಗೊಂಡ ಗ್ರಾಂಡ್ ಆಣೆಕಟ್ಟೆಗೆ ನೀರಿನ ಅವಶ್ಯಕತೆಯು ೪೧.೮೯ ಟಿ.ಎಂ.ಸಿ. ಯಷ್ಟು ಎಂದು ಹೇಳಿರುತ್ತಾರೆ. ಹೊಸ ಅಚ್ಚುಕಟ್ಟು (ಗ್ರಾಂಡ್ ಆಣೆಕಟ್ಟು) ಪ್ರದೇಶದಲ್ಲಿ ಬೆಳೆ ನೀರಿನ ಅವಶ್ಯಕತೆಯನ್ನು ಸಾಕ್ಷಿಯ ಸಂದರ್ಭದಲ್ಲಿ ಎರಡು ಭಾಗಗಳಾಗಿ ಪರಿಗಣಿಸಲಾಗಿತ್ತು. ಮೊದಲನೆಯ ಭಾಗ ಕಾವೇರಿ ಮೆಟ್ಟೂರು ಯೋಜನೆ ವರದಿಯಾಗಿದ್ದು ಅದರಲ್ಲಿ ೪೧.೮೯ ಟಿ.ಎಂ.ಸಿ. ಎಂದು ಹೇಳಲಾಗಿತ್ತು. ಎರಡನೆಯ ಭಾಗವು ತಮಿಳುನಾಡಿನ ಎಕ್ಸಿಬಿಟ್ ೧೬೬೫ ಆಧಾರಿತ ವರದಿ, ಅದನ್ನು ಕರ್ನಾಟಕ ಹಾಗೂ ನ್ಯಾಯಮಂಡಳಿಯ ಇಬ್ಬರು ಸದಸ್ಯರು ತಿರಸ್ಕರಿಸಿದ್ದರು. ಹಾಗಾಗಿ ಕಾವೇರಿ ಮೆಟ್ಟೂರು ಯೋಜನೆಗೆ ನೀರನ್ನು ೪೧.೮೯ ಟಿ.ಎಂ.ಸಿ. ನಿಗದಿಪಡಿಸಿ ತಮಿಳುನಾಡಿಗೆ ಹೆಚ್ಚಾಗಿ ಹರಿಯುತ್ತಿರುವ ೧೨.೭೯ ಟಿ.ಎಂ.ಸಿ. ನೀರನ್ನು ಕರ್ನಾಟಕಕ್ಕೆ ಸಿಗುವಂತೆ ಮಾಡಬೇಕು".

j. ತಮಿಳುನಾಡಿಗೆ "ಎರಡನೇ ಬೆಳೆ" ಗೆ ನೀರು ಒದಗಿಸುವ ಆಧಾರದ ಮೇಲೆ ಕರ್ನಾಟಕಕ್ಕೂ ಸಹ ಎರಡನೇ ಬೆಳೆಗೆಂದು ನೀರು ಒದಗಿಸುವುದನ್ನು ಪರಿಗಣಿಸಬೇಕು ಹಾಗೂ ಅದಕ್ಕಾಗಿ "೨೩.೯೭ ಟಿ.ಎಂ.ಸಿ. ನೀರನ್ನು" ನಿಗದಿಪಡಿಸಬೇಕು.

ಎರಡನೇ ಬೆಳೆಗೆ ನೀರು ಒದಗಿಸುವ ವಿಚಾರಕ್ಕೆ ಸಂಬಂಧಿಸಿದಂತೆ ನ್ಯಾಯಮಂಡಳಿಯು ಪಕ್ಷಪಾತ ಹಾಗೂ ಅನ್ಯಾಯದ ನೀತಿ ಅನುಸರಿಸಿದ್ದು ಕೇವಲ ತಮಿಳುನಾಡಿನ ಎರಡನೇ ಬೆಳೆಯನ್ನು ಮಾತ್ರ ಪರಿಗಣಿಸಿದೆ ಮತ್ತು ಕರ್ನಾಟಕವು ತನ್ನ ಎರಡನೇ ಬೆಳೆಗೆ ಸಲ್ಲಿಸಿದ ಮನವಿಯನ್ನು ಸಂಪೂರ್ಣವಾಗಿ ತಿರಸ್ಕರಿಸಿದೆ. ನ್ಯಾಯಸಮ್ಮತ ಹಂಚಿಕೆಯ ಸಿದ್ಧಾಂತಗಳನ್ನು ಕನಿಷ್ಟ ಮಟ್ಟದಲ್ಲಿ ಅನುಸರಿಸಿದಾಗ ಕರ್ನಾಟಕಕ್ಕೂ ಸಹ ತಮಿಳುನಾಡಿನಂತೆ ತನ್ನ ೧.೮೫ ಲಕ್ಷ ಎಕರೆಗಳಷ್ಟು ಜಮೀನುಗಳಲ್ಲಿ ನೀರು ಬಳಸಲು ಅನುಮತಿಯಿದೆ. (ಎರಡನೇ ಬೆಳೆ ಬೆಳೆಯುವ ಪ್ರದೇಶಗಳೆಂದು ಹೇಳಲಾಗುವ ಜಮೀನುಗಳಲ್ಲಿ ಅರೆ ಒಣ ಬೆಳೆಗಳನ್ನು ಬೆಳೆಯುವುದರಿಂದ ಕರ್ನಾಟಕಕ್ಕೆ ನೀರಿನ ಪ್ರಮಾಣವು ಸರಾಸರಿ ಅತಿ ಕಡಿಮೆ ಪ್ರಮಾಣದಲ್ಲಿ ಮಾತ್ರವೇ ಬೇಕಾಗುತ್ತದೆ) ಈ ಕನಿಷ್ಟ ಪ್ರಮಾಣವು ೧೬.೧೦ ಟಿ.ಎಂ.ಸಿ. ಯಾಗಿದೆ. ೧೯೭೪ ರವರೆಗೂ ನಡೆದುಕೊಂಡು ಬಂದಿದ್ದ "ಎರಡನೇ ಬೆಳೆ" ಯಿಂದ ಪ್ರೇರಿತವಾಗಿರುವ ಎಲ್ಲ ಯೋಜನೆಗಳನ್ನು (೨,೭೫,೧೨೦ ಎಕರೆಗಳಷ್ಟು ಪ್ರದೇಶ) ನ್ಯಾಯಮಂಡಳಿಯು ಪರಿಗಣಿಸಬೇಕಾಗಿತ್ತು. ಇದಾಗುವಂತೆ ಮಾಡಿದರೆ ಕರ್ನಾಟಕಕ್ಕೆ ಎರಡನೇ ಬೆಳೆಗೆಂದು ಹೆಚ್ಚುವರಿಯಾಗಿ ೨೩೯೭ ಟಿ.ಎಂ.ಸಿ. ನೀರು ಒದಗಿಸಬೇಕಾಗುತ್ತದೆ" .

k. ೪೫.೦೮ ಟಿ.ಎಂ.ಸಿ. "ಸಂತುಲಿತ ನೀರಿನಿಂದ ತಮಿಳುನಾಡಿಗೆ ೨೪.೭೧ ಟಿ.ಎಂ.ಸಿ. ನೀರು ನಿಗದಿಪಡಿಸಿದ್ದು ಸಂಪೂರ್ಣ ತಪ್ಪು ಕ್ರಮವಾಗಿದ್ದು ಸಿ.ಡಬ್ಲ್ಯೂ.ಡಿ.ಟಿ. ಯು ಇದನ್ನು ೧೯೨೪ ರ ಒಪ್ಪಂದದ ಆಚೆ ಇರುವ ೪ ಲಕ್ಷ ಎಕರೆಗಳಲ್ಲಿ ಬೆಳೆಯುವ ಕುರುವಾಯಿ ಬೆಳೆಗೆ ಅನುಕೂಲವಾಗುವಂತೆ ಕೇವಲ ತಮಿಳುನಾಡಿಗೆ ಸಹಾಯ ಮಾಡುವ ದೃಷ್ಟಿಯಿಂದ ಮಾಡಿದೆ.

೧೯೨೪ ರ ಒಪ್ಪಂದದ ಆಚೆಗಿರುವುದರಿಂದ ೪ ಲಕ್ಷ ಎಕರೆಗಳ ಕುರುವಾಯಿ ಬೆಳೆಗೆ ಸಿ.ಡಬ್ಲ್ಯೂ.ಡಿ.ಟಿ.ಯು ನೀರನ್ನು ಈ ಮೊದಲು ತಮಿಳುನಾಡಿಗೆ ನಿರಾಕರಿಸಿತ್ತು. ಎಲ್ಲ ಜಲಾನಯನ ರಾಜ್ಯಗಳಿಗೆ ನೀರನ್ನು ಹಂಚಿದ ಮೇಲೆ ಸಿ.ಡಬ್ಲ್ಯೂ.ಡಿ.ಟಿ. ಇನ್ನೂ ೪೫.೦೮ ಟಿ.ಎಂ.ಸಿ. "ಸಂತುಲಿತ ನೀರು ಹಂಚಿಕೆಗಾಗಿ ಲಭ್ಯವಿರುವುದು ಕಂಡುಬಂದಿತು. ಸಿ.ಡಬ್ಲ್ಯೂ.ಡಿ.ಟಿ. ಯು ಕರ್ನಾಟಕ ಹಾಗೂ ಕೇರಳದ ಹಲವಾರು ಯೋಗ್ಯ ಹಾಗೂ ನೈಜವಾದ ಅವಶ್ಯಕತೆಯಿರುವ ನೀರಾವರಿ ಯೋಜನೆಗಳಿಗೆ ನೀರನ್ನು ಒದಗಿಸಲು ನಿರಾಕರಿಸಿತ್ತು. ನ್ಯಾಯಸಮ್ಮತ ಹಂಚಿಕೆಯ ವಿಧಾನ" ವನ್ನು ಬಳಸಿಕೊಂಡು ನ್ಯಾಯಮಂಡಳಿಯು ಸಮಂಜಸವಾದ ರೀತಿಯಲ್ಲಿ ಸಂತುಲಿತ ನೀರನ್ನು ಜಲಾನಯನ ರಾಜ್ಯಗಳಿಗೆ ಹಂಚಲು ಕ್ರಮವನ್ನು ಕೈಗೊಂಡಿತು, ಅದೂ ಸಹ ೨೦೧೧ ರಲ್ಲಿಯ ಜನಸಂಖ್ಯೆಯನ್ನು ಆಧಾರವಾಗಿಟ್ಟುಕೊಂಡು, ಹೇಗೆಂದರೆ ಈ ನೀರು "ಅರ್ಹ ಯೋಜನೆಗಳಿಗೆ ಬಳಸಬೇಕೆಂದು. ಈ ಆಧಾರದ ಮೇಲೆ ತಮಿಳುನಾಡಿಗೆ ೨೪.೭೧ ಟಿ.ಎಂ.ಸಿ. ನೀರು ನಿಗದಿಮಾಡಿತು. ಇತ್ತ ತಮಿಳುನಾಡಿಗೆ ೧೯೨೪ ರ ಒಪ್ಪಂದದ

ಆಚೆಗಿರುವ ೪ ಲಕ್ಷ ಎಕರೆಗಳ ಕುರುವಾಯಿ ಬೆಳೆ ಬೆಳೆಯಲು ವರದಾನವಾಗಿ ಪರಿಣಮಿಸಿತು. ಇದು ಸರಿಯಾದ ಕ್ರಮವಲ್ಲ, ಬದಲಾಗಿ ಬರಪೀಡಿತ ಪ್ರದೇಶಗಳಿಗೆ ಪ್ರಯೋಜನವಾಗುವಂತೆ ಕರ್ನಾಟಕ ಪ್ರಸ್ತಾಪಿಸಿದ ಏಳು ಲಿಫ್ಟ್ ಇರಿಗೇಷನ್ ವ್ಯವಸ್ಥೆಗೆ ಅನುಕೂಲವಾಗುವಂತೆ ಸಂತುಲಿತ ನೀರನ್ನು ಕರ್ನಾಟಕಕ್ಕೇನೆ ಒದಗಿಸಬೇಕಾಗಿತ್ತು.

ನ್ಯಾಯಮಂಡಳಿ ಮುಂದೆ ಸಲ್ಲಿಸಿದ "ಸೆಟ್ಲಮೆಂಟ್ ಆಫ್ ಕೇಸ್ನಲ್ಲಿ ಕರ್ನಾಟಕವು ೪೦೮ ಟಿ.ಎಂ.ಸಿ. ಬೆಳೆ ನೀರಿನ ಅವಶ್ಯಕತೆಯನ್ನು ಯಾವುದೇ ರಾಜ್ಯಗಳು ಪ್ರಶ್ನಿಸಲಿಲ್ಲ, ಹಾಗಾಗಿ ಕರ್ನಾಟಕದ ಬೆಳೆ ನೀರಿನ ಅವಶ್ಯಕತೆ ಬಗ್ಗೆ ತಮಿಳುನಾಡು ಮಂಡಿಸಿದ ವಾದಗಳು ನಂತರದ ಭಾವನೆ ಆಗಿದೆ ಮತ್ತು ಇದು ಸ್ವಾಭಾವಿಕ ನ್ಯಾಯದ ಉಲ್ಲಂಘನೆಯಾಗಿದೆ.

ಕರ್ನಾಟಕವು ೪೦೮ ಟಿ.ಎಂ.ಸಿ. ಅಷ್ಟು ನೀರನ್ನು ತನ್ನ ೨೭.೨೮ ಲಕ್ಷ ಎಕರೆಗಳಷ್ಟು ಜಮೀನುಗಳ ನೀರಾವರಿಗೆಂದೇ ವಾದಿಸಿದೆ. ಇದು ೨೫.೨೭೮ ಲಕ್ಷ ಎಕರೆಗಳಲ್ಲಿ ಪ್ರಸ್ತುತ "ಚಾಲ್ತಿಯಲ್ಲಿರುವ ಹಾಗೂ ನಡೆಯುತ್ತಿರುವ ಯೋಜನೆಗಳಿಗೆ ೩೬೨.೪೯೧ ಟಿ.ಎಂ.ಸಿ. ಬಳಸುವುದು" ಒಳಗೊಂಡಿದೆ. ಇದಕ್ಕೆ ವಿರುದ್ಧವಾಗಿ ಸಿ.ಡಬ್ಲ್ಯೂ.ಡಿ.ಟಿ. ಯು ಕೇವಲ ೧೮.೮೫ ಎಕರೆಗಳನ್ನು ಪರಿಗಣಿಸಿದೆ. ನ್ಯಾಯಮಂಡಳಿಯು ಅಂದಾಜಿಸಿದ ನೀರಿನ ಪ್ರಮಾಣವನ್ನು ಹಿಡಿದರೂ ಸಹ ಕರ್ನಾಟಕದ ೨೭.೨೮ ಲಕ್ಷ ಎಕರೆಗಳಿಗೆ ನೀರಿನ ಪ್ರಮಾಣವು ೩೫೦ ಟಿ.ಎಂ.ಸಿ. ರಷ್ಟು ಬೇಕಾಗುತ್ತದೆ. ಹಾಗಾಗಿ ಕರ್ನಾಟಕಕ್ಕೆ ೩೫೦ ಟಿ.ಎಂ.ಸಿ. ಪ್ರಮಾಣದಷ್ಟು ನೀರನ್ನು ಒದಗಿಸಬೇಕಾಗುತ್ತದೆ.

m. ಮೌಲ್ಯಮಾಪಕರ ವರದಿಯ ಆಧಾರದ ಮೇಲೆ ಸಿ.ಡಬ್ಲ್ಯೂ.ಡಿ.ಟಿ. ಯು ಪರಿಗಣಿಸಿದ ಬೆಳೆ ನೀರಿನ ಅವಶ್ಯಕತೆಯು ಕರ್ನಾಟಕಕ್ಕೆ ಸ್ವೀಕಾರವಾಗಿಲ್ಲ. ಹಾಗಾಗಿ ಸಿ.ಡಬ್ಲ್ಯೂ.ಡಿ.ಟಿ.ಯ ಅಂತಿಮ ತೀರ್ಪನ್ನು ನ್ಯಾಯಮಂಡಳಿಯ "ಒಮ್ಮತದ" ನಿರ್ಧಾರ ಎಂದು ಒಪ್ಪಲು ಸಾಧ್ಯವಿಲ್ಲ.

ತಮಿಳುನಾಡಿಗೆ ಬೆಳೆ ನೀರಿನ ಅವಶ್ಯಕತೆಯನ್ನು ತಮಿಳುನಾಡಿನ ಎಕ್ಸಿಬಿಟ್ ೧೬೬೫ ರ ಆಧಾರದ ಮೇಲೆ ಮೌಲ್ಯಮಾಪಕರು ತಯಾರಿಸಿದ್ದು ಕರ್ನಾಟಕವು ಈಗಾಗಲೆ ಎಕ್ಸಿಬಿಟ್ ೧೬೬೫ ಅನ್ನು ವಿರೋಧಿಸಿದೆ. ನ್ಯಾಯಮಂಡಳಿಯು ಇದನ್ನು ಪರಿಗಣಿಸಬಾರದೆಂದು ಹೇಳಿದೆ. ಏಕೆಂದರೆ ಇದರಲ್ಲಿ ಮೌಲ್ಯಮಾಪಕರು ನೀಡಿದ ವರದಿಯಂತೆ ನೀರಿನ ಬೇಡಿಕೆಯ ಪ್ರಮಾಣವು ಅತಿ ಹೆಚ್ಚಾಗಿದೆ' ಎಂದು ಮಂಡಳಿಯ ಇಬ್ಬರು ಸದಸ್ಯರು ಅಭಿಪ್ರಾಯಪಟ್ಟಿರುತ್ತಾರೆ. ನ್ಯಾಯಮಂಡಳಿಯ ಇಬ್ಬರು ಸದಸ್ಯರು, ಇಬ್ಬರು ಕೃಷಿ ತಜ್ಞರು, ಒಬ್ಬ ಪವನಶಾಸ್ತ್ರಜ್ಞ ಹಾಗೂ ಇಬ್ಬರು ಮೌಲ್ಯಮಾಪಕರುಳ್ಳ ಪರಿಣಿತ ಸಮಿತಿಯೊಂದನ್ನು ರಚಿಸಲು ಸಲಹೆ ನೀಡಿದ್ದರು. ಈ ಸಲಹೆಯನ್ನು ಅಧ್ಯಕ್ಷರು ಹಾಗೂ ಪ್ರಕರಣದಲ್ಲಿ ಭಾಗಿಯಾದ ರಾಜ್ಯಗಳು ನಿರಾಕರಿಸಿದ್ದವು.

ನ್ಯಾಯಮಂಡಳಿಯ ಇಬ್ಬರು ಸದಸ್ಯರುಗಳ ಮತ್ತು ಅಧ್ಯಕ್ಷರ ಮಧ್ಯೆ ಭಿನ್ನಾಭಿಪ್ರಾಯಗಳು ಮೊದಲ ನೋಟದಲ್ಲೇ ಕಂಡುಬಂದವು. ಇಬ್ಬರು ಸದಸ್ಯರು ಒಂದೆಡೆಯಾದರೆ ಅಧ್ಯಕ್ಷರು ಇನ್ನೊಂದೆಡೆ. ಹಾಗಾಗಿ ತಮಿಳುನಾಡಿಗೆ ಬೆಳೆ ನೀರಿನ ಅವಶ್ಯಕತೆ ಗೊತ್ತುಮಾಡಲು ಒಮ್ಮತ ಕಂಡುಬರಲೇ ಇಲ್ಲ. ಹಾಗಾಗಿ ತಮಿಳುನಾಡಿಗೆ ಬೇಕಾದ ಬೆಳೆ ನೀರಿನ ಅವಶ್ಯಕತೆಯನ್ನು ತಯಾರಿಸಿದ ಮೌಲ್ಯಮಾಪಕರ ವರದಿಗೆ ಕರ್ನಾಟಕ ಅಡ್ಡಿಪಡಿಸಿತು ಮತ್ತು ಪ್ರತಿ ರಾಜ್ಯ ನ್ಯಾಯಸಮ್ಮತ ಹಂಚಿಕೆಗೆ ಇದನ್ನು ಪರಿಗಣಿಸಲಾಗದು ಎಂದು ಹೇಳಿತು. "ಇಂತಹ ಒಂದು ವಸ್ತುಸ್ಥಿತಿಯಲ್ಲಿ ಸಿ.ಡಬ್ಲ್ಯೂ.ಡಿ.ಟಿ. ನೀಡಿದ ಅಂತಿಮ ಆದೇಶವನ್ನು ನ್ಯಾಯಮಂಡಳಿಯ ಒಮ್ಮತದ ನಿರ್ಧಾರ ಎಂದು ಒಪ್ಪಲು ಸಾಧ್ಯವಿಲ್ಲ.

n. ತಮಿಳುನಾಡಿನ ಅಚ್ಚುಕಟ್ಟು ಪ್ರದೇಶದಲ್ಲಿ ಈಶಾನ್ಯ ಮಾರುತಗಳಿಂದ ಲಭಿಸುವ ನೀರು ಆ ಪ್ರದೇಶದಲ್ಲಿರುವ ಅಂತರ್ಜಲವನ್ನು ಪುನರುಜ್ಜಿವನಗೊಳಿಸುತ್ತದೆ ಹಾಗೂ ಇದನ್ನು ಮರುಪರಿಶೀಲಿಸಬಹುದಾಗಿದೆ. ಆದರೆ ಈ ಅಂಶವನ್ನು ಸಿ.ಡಬ್ಲ್ಯೂ.ಡಿ.ಟಿ. ಯು ಗಣನೆಗೆ ತೆಗೆದುಕೊಂಡಿಲ್ಲ.

ಲೋವರ್ ಕೋಲರೆನ್ ಅಣೆಕಟ್ಟು (ಎಲ್.ಸಿ.ಎ.) ಅಂದರೆ ಕೆಳಸ್ತರದಲ್ಲಿರುವ ಅಣೆಕಟ್ಟೆ ವಲಯದ ಜಲಾನಯನ ಪ್ರದೇಶದಲ್ಲಿ ಕಾವೇರಿಯ ಒಟ್ಟು ಇಳುವರಿ ೭೪೦ ಟಿ.ಎಂ.ಸಿ. ಎಂದು ಅಂದಾಜಿಸಿದೆ. ಕಾವೇರಿ ಅಚ್ಚುಕಟ್ಟು ಪ್ರದೇಶವು ಎಲ್.ಸಿ.ಎ. ಅನ್ನು ಮೀರಿಯೂ ವ್ಯಾಪಿಸಿದೆ. ಎಲ್.ಸಿ.ಎ.ಯ ಕೆಳ ಪ್ರದೇಶವಾದ ಈಶಾನ್ಯ ಡೆಲ್ಟಾ ಪ್ರದೇಶವು ಮಾರುತಗಳ ಲಾಭವನ್ನು ಪಡೆಯುತ್ತದೆ. ಈ ನೀರು ಡೆಲ್ಟಾ ಪ್ರದೇಶದ ಅಂತರ್ಜಲವನ್ನು ಪುನರುಜ್ಜಿವನಗೊಳಿಸಲು ಬಹು ಸಹಕಾರಿಯಾಗಿದೆ. ಹಲವು ಸಂಸ್ಥೆಗಳು ಇಲ್ಲಿ ನಡೆಸಿದ ಅಧ್ಯಯನದಿಂದ ತಿಳಿದಿರುವುದೇನೆಂದರೆ ಇಲ್ಲಿನ ಅಂತರ್ಜಲದಲ್ಲಿ ಗಣನೀಯ ಪ್ರಮಾಣದಲ್ಲಿ ನೀರು ಲಭ್ಯವಿರುವುದು. ತಮಿಳುನಾಡು ಈ ನೀರಿನ ಪ್ರಮಾಣವನ್ನು ನಿಗದಿಪಡಿಸುವುದು ಕಷ್ಟ ಸಾಧ್ಯವೆಂದು ವಾದಿಸುತ್ತದೆ. ಅದಕ್ಕೆ ಈ ವಾದವನ್ನು ಯಾರೂ ಒಪ್ಪಲು ಸಾಧ್ಯವಿಲ್ಲ. ರಾಷ್ಟ್ರೀಯ ಜಲನೀತಿ ಪ್ರಕಾರ, ಜಲಾನಯನದಲ್ಲಿ ಅಂತರ್ಜಲ ಹಾಗೂ ಮೇಲೆ ನೀರಿನ ಲಭ್ಯತೆಯನ್ನು ಗೊತ್ತುಮಾಡುವಾಗ "ಹೆಲಸಂಕೆ ನಿಯಮಗಳು ಮತ್ತು ೨೦೦೪ ರಬರ್ಲಿನ್ ನಿಯಮಗಳ ಪ್ರಕಾರ ಎರಡನ್ನೂ ಒಟ್ಟಿಗೆ ಪರಿಗಣಿಸಬೇಕಾಗಿದೆ. ಆದರೆ ಸಿ.ಡಬ್ಲ್ಯೂ.ಡಿ.ಟಿ.ಯು ಕೇವಲ "ಮೇಲ್ಮೈ ನೀರು ಮಾತ್ರವೇ ಪರಿಗಣಿಸಿರುವುದು ಸರಿಯಾದ ಕ್ರಮವಲ್ಲ. ಇದೊಂದು ಗಂಭೀರ ಸ್ವರೂಪದ ಪ್ರಮಾದವಾಗಿದ್ದು ಸರ್ವೋಚ್ಚ ನ್ಯಾಯಾಲಯವು ಇದನ್ನು ಸರಿಪಡಿಸಬೇಕು.

o. ಎಲ್ಲ ಜಲಾನಯನ ರಾಜ್ಯಗಳು ಕಡಿಮೆ ನೀರು ಉಪಯೋಗಿಸುವ ಪರ್ಯಾಯ ಬೆಳೆಗಳನ್ನು ಹಾಗೂ ನೀರನ್ನು ಸಂರಕ್ಷಿಸುವ ಹೊಸ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಬೇಕು.

ಕಾವೇರಿ ಜಲಾನಯನವು ನೀರಿನ ಕೊರತೆಯಿರುವ ಜಲಾನಯನವಾಗಿದೆ.ಎಲ್ಲ ಜಲಾನಯನ ರಾಜ್ಯಗಳು ಹೆಚ್ಚಿನ ವಿಸ್ತಾರದ ನೀರಾವರಿ ಭೂಮಿ ಹೊಂದಿದ್ದು ಅದರಲ್ಲಿ ಬಹುತೇಕವಾಗಿ ಎಲ್ಲವು ಭತ್ತ, ಕಬ್ಬು ಆದಿಯಾಗಿ "ಹೆಚ್ಚು ನೀರು ಅವಶ್ಯಕತೆ" ಬೆಳೆಗಳನ್ನೇ ಬೆಳೆದಿವೆ. ಎಲ್ಲ ರಾಜ್ಯಗಳು ಕಡ್ಡಾಯವಾಗಿ ಅತಿ ಕಡಿಮೆ ನೀರಿನ ಅವಶ್ಯಕತೆಯಿರುವಂತಹ ಪರ್ಯಾಯ ಬೆಳೆ ಬೆಳೆಯುವ ಹವ್ಯಾಸವನ್ನು ಹಾಗೂ ಹೆಚ್ಚಿನ ನೀರಿನ ಅವಶ್ಯಕತೆಯಿರುವ ಬೆಳೆಗಳಿಗೆ ಆಧುನಿಕ ತಂತ್ರಜ್ಞಾನಗಳಾದ 'ಸಿಂಚಕ ನೀರಾವರಿ", "ಮೈಕ್ರೋ ನೀರಾವರಿ' ಗಳನ್ನು ಅಳವಡಿಸಿಕೊಳ್ಳಬೇಕು. ಇದರಿಂದ ಬೇಕಾದ ಪ್ರಮಾಣದಲ್ಲಿ ಮಾತ್ರವೆ ನೀರುಣಿಸಲು ಸಾಧ್ಯವಾಗಿದ್ದು ಹೆಚ್ಚಿನ ಪ್ರಮಾಣದ ನೀರು ಪೋಲಾಗುವುದು ತಪ್ಪುತ್ತದೆ. ಅಲ್ಲದೆ ಇದು ಮುಂದಿನ ಭವಿಷ್ಯದ ದೃಷ್ಟಿಯಿಂದಲೂ ಅನುಕೂಲಕರ.

ಕೊರತೆಯ ಜಲಾನಯನವಾಗಿರುವುದರಿಂದ ಕಾವೇರಿ ನ್ಯಾಯಮಂಡಳಿಯು ನೀರಿನ ಸಂರಕ್ಷಣೆಗೆ ಹೆಚ್ಚು ಒತ್ತು ನೀಡುತ್ತ, ಎಲ್ಲ ರಾಜ್ಯಗಳು ಕಡ್ಡಾಯವಾಗಿ ಅತಿ ಕಡಿಮೆ ನೀರಿನ ಅವಶ್ಯಕತೆಯಿರುವಂತಹ ಪರ್ಯಾಯ ಬೆಳೆ ಬೆಳೆಯುವ ಹವ್ಯಾಸವನ್ನು ಹಾಗೂ ಹೆಚ್ಚಿನ ನೀರಿನ ಅವಶ್ಯಕತೆಯಿರುವ ಬೆಳೆಗಳಿಗೆ ಆಧುನಿಕ ತಂತ್ರಜ್ಞಾನಗಳನ್ನು ಬಳಸುವಂತೆ ಸಲಹೆ ನೀಡಿದೆ. “ಶ್ರೀ”  ಕ್ರಮವನ್ನು ಭತ್ತದ ಬೆಳೆಗೆ ಹೆಚ್ಚಾಗಿ ಅನುಸರಿಸಲಾಗುತ್ತದೆ ಮತ್ತು ಕಬ್ಬು ಬೆಳೆ ಹಾಗೂ ಬಾಳೆ ಬೆಳೆಗಳಿಗೆ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಳ್ಳಲು ಶಿಫಾರಸ್ಸು ಮಾಡಲಾಗುತ್ತದೆ.

ಕರ್ನಾಟಕ ರಾಜ್ಯ ಜಲ ಸಂಪನ್ಮೂಲ ಇಲಾಖೆಯು ನವಂಬರ್, ೨೦೦೪ ರಲ್ಲಿ "ಕರ್ನಾಟಕದ ಕಬ್ಬು ಬೆಳೆಗೆ ಹನಿ ನೀರಾವರಿ ಪದ್ಧತಿ - ಒಂದು ಕ್ರಾಂತಿಕಾರಿ ಮುನ್ನುಡಿ" ಎಂಬ ಪುಸ್ತಕವೊಂದನ್ನು ಪ್ರಕಟಿಸಿದೆ. ಇದರಲ್ಲಿ ವ್ಯವಸ್ಥೆಯ ಪ್ರಯೋಜನಗಳು, ೫೦% ರವರೆಗೆ ನೀರಿನ ಉಳಿತಾಯ ಹಾಗೂ ಹೆಚ್ಚಿನ ಇಳುವರಿ ಕುರಿತು ವಿವರಣೆ ನೀಡಲಾಗಿದೆ. ಈ ಬರಹದಲ್ಲಿ ಕೃಷ್ಣ ಹಾಗೂ ಕಾವೇರಿ ಜಲಾನಯನದಲ್ಲಿ ಕಬ್ಬು ಬೆಳೆಗೆ ಹನಿ ನೀರಾವರಿ ಅಳವಡಿಸಿಕೊಂಡ ರೈತರ ವಿವರಗಳಿವೆ. ಇದರಿಂದ ರೈತರಿಗೆ ಆರ್ಥಿಕ ಲಾಭಗಳು ಒದಗುವುದರ ಬಗ್ಗೆ ಖಾತರಿಯಾಗಿರುವುದು ಗೊತ್ತಾಗುತ್ತದೆ. ಹಾಗಾಗಿ ಜಲಾನಯನ ರಾಜ್ಯಗಳ ಜಲ ಸಂಪನ್ಮೂಲ ಇಲಾಖೆಗಳು, ಕೃಷಿ ಮತ್ತು ಕೃಷಿ ವಿಶ್ವವಿದ್ಯಾಲಯಗಳ ಅಧಿಕಾರಿಗಳು ರೈತ ಮುಖಂಡರು ಹಾಗೂ ಕಬ್ಬು/ಭತ್ತ/ಬಾಳೆ ಬೆಳೆಯುವ ರೈತರೊಂದಿಗೆ ಕುಳಿತು ಮೇಲೆ ಹೇಳಿದ ವ್ಯವಸ್ಥೆಯ ಕುರಿತು ಅವರಲ್ಲಿ ಜಾಗೃತಿ ಮೂಡಿಸುವುದು, ಅದನ್ನು ಅನುಷ್ಠಾನಗೊಳಿಸುವ ದೃಷ್ಟಿಯಿಂದ ಯೋಜನೆಗಳನ್ನು ರೂಪಿಸುವುದು, ಅದಕ್ಕಾಗಿ ಆರ್ಥಿಕ ಸಹಾಯ ಮಾಡುವಂತಹ ಮಾರ್ಗಗಳನ್ನು ರೂಪಿಸುವುದು ಹಾಗೂ ಮೊದಲೆರಡು ವರ್ಷಗಳ ಕಾಲ ಈ ಆಧುನಿಕ ತಂತ್ರಜ್ಞಾನದ ಸರಳವಾದ ಅಳವಡಿಕೆಗೆ ಸಹಾಯ ನೀಡುವುದನ್ನು ಮಾಡಬೇಕು. ಇದೇ ಸಮಯದಲ್ಲಿ ಜಲ ಸಂಪನ್ಮೂಲ ಇಲಾಖೆಯ ತಾಂತ್ರಿಕ ವರ್ಗದವರಿಗೂ ಸಹ ಹನಿ ನೀರಾವರಿ

ಪದ್ಧತಿಯ ಕುರಿತು ಸಮರ್ಪಕವಾದ ತರಬೇತಿ ನೀಡುವುದಕ್ಕಾಗಿ ಬೇಕಾದ ಕ್ರಮಗಳನ್ನು ಇಲಾಖೆಯು ತೆಗೆದುಕೊಳ್ಳಬೇಕು. ಜಲಾನಯನ ರಾಜ್ಯಗಳು ಇದಕ್ಕಾಗಿ ಆರ್ಥಿಕ ಸಹಾಯ ಮಾಡಬೇಕು. ಈ ಎಲ್ಲ ಪ್ರಯತ್ನಗಳ ಮೇಲೆ ಸೂಕ್ಷ್ಮವಾಗಿ ನಿಗಾ ಇಟ್ಟು ಅದರಿಂದ ಉಳಿತಾಯವಾಗುವ ನೀರು ಹಾಗೂ ಇತರೆ ಪ್ರಯೋಜನಗಳ ಕುರಿತು ವರದಿ ಪ್ರಕಟಿಸಿ ರೈತರಿಗೆ, ತಾಂತ್ರಿಕ ಸಿಬ್ಬಂದಿಗಳಿಗೆ ಹಾಗೂ ಸಾರ್ವಜನಿಕರಿಗೆ ದೊರೆಯುವಂತೆ ಮಾಡಬೇಕು. ನಾಲ್ಕೂ ಜಲಾನಯನ ರಾಜ್ಯಗಳು ಇದಕ್ಕೆ ಮೊದಲ ಆದ್ಯತೆ ನೀಡಬೇಕು ಹಾಗೂ ಇದಕ್ಕೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯವು ಸೂಕ್ತ ನಿರ್ದೇಶನಗಳನ್ನು ತನ್ನ ತೀರ್ಪಿನಲ್ಲಿ ನೀಡಬೇಕು.

**p. ಕೇರಳದಿಂದ ಜಲಾನಯನದ ಕಾವೇರಿ ನೀರಿನ ತಿರುವಿಕೆಗೆ ಸಮರ್ಥನೆ.**

ಕಾವೇರಿ ನದಿ ಪ್ರಾಂತ್ಯದ ಎಲ್ಲಾ ಪ್ರದೇಶಗಳಿಗೆ ನ್ಯಾಯಸಮ್ಮತ ನೀರು ಹಂಚಲು ನ್ಯಾಯಮಂಡಳಿಯು ಜಲವಿಜ್ಞಾನದ ಅಂಶಗಳನ್ನು ಪರಿಗಣಿಸಬೇಕೆಂಬುದು ಕೇರಳ ರಾಜ್ಯದ ವಾದವಾಗಿದೆ. ಅಲ್ಲದೆ ಕೇರಳದ ವಿಶೇಷವಾದ ಭೌತಿಕ ರಚನೆಯು ಜಲಾನಯನದ ತಿರುವುಗಳಿಗೆ ಅನುಕೂಲಕರವಾಗಿದ್ದು ಅಂತಹ ಸ್ಥಳಗಳು ಜಲವಿದ್ಯುತ್ ಯೋಜನೆಗಳಿಗೆ ಪೂರಕವಾಗಿದ್ದು ಅದರಿಂದ ಉತ್ಪಾದಿಸಲಾಗುವ ವಿದ್ಯುತ್ ಅಗ್ಗವಾಗಿರುತ್ತದೆಂಬುದೂ ಸಹ ಕೇರಳದ ವಾದವಾಗಿದೆ. ಕೇರಳದ ಇನ್ನೊಂದು ವಾದವೆಂದರೆ "ಅಂತರರಾಜ್ಯ ನದಿ ನೀರಿನ ಮೇಲಿನ ಹಕ್ಕು ಜಲಾನಯನ ರಾಜ್ಯಗಳ ವಾಸಿಗರಿಗಿದ್ದು ಅದು ಕೇವಲ ಜಲಾನಯನದ ವಾಸಿಗರಿಗಲ್ಲ". ರಾಜ್ಯಕ್ಕೆ ವಿದ್ಯುತ್ ಉತ್ಪಾದಿಸಲು ಅನುವಾಗುವಂತೆ ಜಲಾನಯನದ ತಿರುವಿನ ಮೂಲಕ ಹೆಚ್ಚಿನ ನೀರನ್ನು ಒದಗಿಸಬೇಕು. ಬೆಂಗಳೂರಿನ ೧/೩ ನೇ ಭಾಗಕ್ಕೆ ಕುಡಿಯುವ ನೀರು ಒದಗಿಸುವ ದೃಷ್ಟಿಯಿಂದ ಕರ್ನಾಟಕವು ಮಂಡಿಸಿರುವ ಜಲಾನಯನ ತೀರ್ಪಿನ ಅಂಶಕ್ಕೆ ಕೇರಳವು ಬೆಂಬಲ ವ್ಯಕ್ತಪಡಿಸಿದೆ.

ಕೇರಳದಲ್ಲಿರುವ ಬಾಣಾಸುರ ಸಾಗರವು ಈಗಾಗಲೇ ಚಾಲ್ತಿಯಲ್ಲಿರುವ ಯೋಜನೆಯಾಗಿದ್ದು ಅದಕ್ಕೆ ತಗುಲಿದ ವೆಚ್ಚ ೧೦೦ ಕೋಟಿ ಎಂದು ಕೇರಳ ಹೇಳಿದೆ. ಕರ್ನಾಟಕ ಹಾಗೂ ತಮಿಳುನಾಡು ಈ ಯೋಜನೆಗೆ ವಿರೋಧ ವ್ಯಕ್ತಪಡಿಸಿಲ್ಲ. ಸಿ.ಡಬ್ಲ್ಯೂ.ಡಿ.ಟಿ. ಯಿಂದ ಈ ಯೋಜನೆಗೆ ನೀರು ನಿಗದಿಪಡಿಸದೇ ಇರುವುದನ್ನು ಮರುಪರಿಶೀಲಿಸಬೇಕಾಗಿದೆ.

"ವಿದ್ಯುತ್ ಅಭಾವವಿರುವ ಕೇರಳ ರಾಜ್ಯವು ರಾಜ್ಯಕ್ಕೆ ಪ್ರಯೋಜನವಾಗುವಂತೆ ಜಲವಿದ್ಯುತ್ ಉತ್ಪಾದನೆಯ ಯೋಜನೆಗಳಿಗೆ ಅನುವು ಮಾಡಿಕೊಡಲು ಕಾವೇರಿ ನೀರಿನ ಜಲಾನಯನ ತಿರುವನ್ನು ಬಲವಾಗಿ ಸಮರ್ಥಿಸಿಕೊಂಡಿದೆ"

೪.	ನೀರಿನ ಅಭಾವವಿರುವ ವರ್ಷಗಳಲ್ಲಿ ಅದರಿಂದ ಹೊರಬರಲು ಹಾಗೂ ಅಗ್ಗವಾಗಿ ಜಲವಿದ್ಯುತ್ ಉತ್ಪಾದಿಸಲು ಕಾವೇರಿ ನದಿಗುಂಟ ನೀರು ಸಂಗ್ರಹಣಾ ರಚನೆಗಳ ಸಂಖ್ಯೆಯನ್ನು ವೃದ್ಧಿಸುವುದು ಅವಶ್ಯಕವಾಗಿದೆ.

೨೫೮ / ನುಡಿಗಂಧ

ಕಾವೇರಿ ಜಲವಿವಾದ ನ್ಯಾಯ ಮಂಡಳಿಯು ತನ್ನ ಅಂತಿಮ ಆದೇಶದಲ್ಲಿ ನದಿಯ ಸಾಮಾನ್ಯ ವ್ಯಾಪ್ತಿಯಲ್ಲಿ ಕರ್ನಾಟಕ ಹಾಗೂ ತಮಿಳುನಾಡು ರಾಜ್ಯಗಳಿಗೆ ಎರಡೆರಡು ಜಲವಿದ್ಯುತ್ ಯೋಜನೆಗಳ ನಿರ್ಮಾಣಕ್ಕೆ ಅವಕಾಶ ಕಲ್ಪಿಸಿದೆ. ಕರ್ನಾಟಕ ಸರ್ಕಾರವು ಈ ನದಿಯ ಮೇಲೆ "ಮೇಕೆದಾಟು ಹೈಡೆಲ್ ಯೋಜನೆ"ಯನ್ನು ಪ್ರಸ್ತಾಪಿಸಿದೆ. ಇದಕ್ಕೆ ತಮಿಳುನಾಡು ಸರ್ಕಾರವು ಯಾವುದೇ ಸೂಕ್ತ ಕಾರಣಗಳಿಲ್ಲದೆ ತನ್ನ ವಿರೋಧ ವ್ಯಕ್ತಪಡಿಸಿದೆ.

ನೀರಿನ ಕೊರತೆಯಾಗುವ ವರ್ಷಗಳಲ್ಲಿ ಎರಡೂ ರಾಜ್ಯಗಳ ರೈತಾಪಿ ವರ್ಗಗಳಿಗೆ ಹಾಗೂ ಜನರಿಗೆ ಅನುಕೂಲವಾಗುವಂತೆ ಎರಡು ರಾಜ್ಯಗಳ ಸರ್ಕಾರಗಳು ಜಲಾನಯನದಗುಂಟ ಹೆಚ್ಚಿನ ಸಂಖ್ಯೆಯಲ್ಲಿ ನೀರು ಸಂಗ್ರಹಣಾ ರಚನೆಗಳು ಇರುವುದನ್ನು ನೋಡಿಕೊಳ್ಳಬೇಕು. ಕಾವೇರಿ ನದಿಯ ಬಿಳಿಗುಂಡ್ಲು ಮತ್ತು ಮೆಟ್ಟೂರು ಜಲಾಶಯದ ಮಧ್ಯೆ ಸಾಕಷ್ಟು ಸಂಗ್ರಹಣಾ ರಚನೆಗಳಿದ್ದರೆ ಉತ್ತಮ. "ಪರಿಸರದ ದೃಷ್ಟಿಯಿಂದ ಎಲ್ಲವೂ ಸರಿಯಿದ್ದಾಗ ಸಂಗ್ರಹಣಾ ಅಣೆಕಟ್ಟುಗಳನ್ನು ನಿರ್ಮಿಸುವುದು ಉತ್ತಮ ವಿಚಾರವಾಗಿದ್ದು ಅದಕ್ಕೆ ಜಲಾನಯನ ರಾಜ್ಯಗಳು ಅಡ್ಡಿಪಡಿಸಬಾರದು ಎಂಬ ಅಂಶವುಳ್ಳ ಸೂಕ್ತ ಆದೇಶವನ್ನು ಸರ್ವೋಚ್ಛ ನ್ಯಾಯಾಲಯದಿಂದ ನಿರೀಕ್ಷಿಸಲಾಗುತ್ತಿದೆ."

ಡಿ. ಸಿ.ಡಬ್ಲ್ಯೂ.ಡಿ.ಟಿ. ಯ ಅಂತಿಮ ಆದೇಶದಂತೆ ಬಿಳಿಗುಂಡ್ಲುವಿಗೆ ೧೯೨ TMC ಬದಲಾಗಿ ೧೦೨ TMC ನೀರು ಬಿಡುವ ಹೊಣೆಗಾರಿಕೆಯು ಕರ್ನಾಟಕದ ಮೇಲಿರಲಿದೆ.

೧೯೨೪ರ ಒಪ್ಪಂದದ ಪ್ರಕಾರ, ತಮಗೆ ನೀರಿನ ಪ್ರಮಾಣವನ್ನು ನಿಗದಿಪಡಿಸ ಬೇಕೆಂಬುದು ತಮಿಳುನಾಡಿನ ನಿಲುವಾಗಿದೆ. ತಮ್ಮ ಹೇಳಿಕೆಯಲ್ಲಿ ತಮಿಳುನಾಡು ೫೬೬ ಟಿ.ಎಂ.ಸಿ. ಅಷ್ಟು ನೀರಿನ ಬೇಡಿಕೆಯಿಟ್ಟಿದೆ. ಸಿ.ಡಬ್ಲೂ.ಡಿ.ಟಿ. ಯು ಒಟ್ಟು ನೀರಾವರಿಯ ಅವಶ್ಯಕತೆಗೆಂದು ತಮಿಳುನಾಡಿಗೆ ಬೇಕಾದ ಪ್ರಮಾಣ ೩೯೦.೯೫ ಟಿ.ಎಂ.ಸಿ ಎಂದು ಲೆಕ್ಕ ಹಾಕಿದೆ. ಇದು ಕರ್ನಾಟಕ ವಿರೋಧಿಸಿದ, ಪರೀಕ್ಷಿಸದೆ ಇರುವ ಎಕ್ಸಿಬಿಟ್ ೧೬೬೫ ರ ಆಧಾರದ ಮೇಲೆ ಕಂಡುಕೊಂಡ ಅಂಶವಾಗಿದೆ. ನಿಜ ಹೇಳಬೇಕೆಂದರೆ ಸಿ.ಡಬ್ಲ್ಯೂ.ಡಿ.ಟಿ. ಗೊತ್ತುಮಾಡಿರುವಂತೆ ೧೯೨೪ ರ ಒಪ್ಪಂದದಂತೆ ಪರಿಗಣಿಸಬೇಕಾಗಿರುವ ಪ್ರದೇಶ ೨೧.೭೮ ಲಕ್ಷ ಎಕರೆಗಳು ಮಾತ್ರ ಹಾಗೂ ಅದಕ್ಕೆ ಬೇಕಾದ ನೀರಿನ ಅವಶ್ಯಕತೆ ೩೨೯.೨೭ ಟಿ.ಎಂ.ಸಿ. ತದನಂತರ ನ್ಯಾಯಮಂಡಳಿಯು ತಾನು ೫೧.೯೮ ಟಿ.ಎಂ.ಸಿ.

ಹೆಚ್ಚಿನ ಪ್ರಮಾಣದ ನೀರನ್ನು ನಿಗದಿಪಡಿಸಿದ್ದೇವೆಂದು ತಿಳಿಸಿದರೂ ಸುಮ್ಮನೆ ಕುಳಿತು ಅದು ತಮಿಳುನಾಡಿನ ಪಾಲಾಗುವಂತೆ ಮಾಡಿದೆ. ಜಲಾಶಯದಲ್ಲಿ ನೀರು ಆವಿಯಾಗುವಿಕೆಯನ್ನು ೧೦ ಟಿ.ಎಂ.ಸಿ. ಎಂದು ಅಳವಡಿಸಿಕೊಂಡರೂ ತಮಿಳುನಾಡಿಗೆ ಬೇಕಾದ ನೀರು ಸುಮಾರು ೩೩೯ ಟಿ.ಎಂ.ಸಿ.



ಸಿ.ಡಬ್ಲ್ಯೂ.ಡಿ.ಟಿ. ಜಲಾನಯನ ರಾಜ್ಯಗಳಿಗೆ ನೀರು ಹಂಚಿದ ನಂತರ ೪೫.೦೮ ಟಿ.ಎಂ.ಸಿ. "ಉಳಿದ ನೀರು ಇರುವುದನ್ನು ಕಂಡುಕೊಂಡಿದೆ. ಕರ್ನಾಟಕವು ಆ ನೀರನ್ನು ಬರಪೀಡಿತ ಪ್ರದೇಶಗಳಿಗೆ ಅನುಕೂಲವಾಗುವಂತೆ ಲಿಫ್ಟ್ ಇರಿಗೇಷನ್, ಎರಡನೇ ಬೆಳೆ ಮುಂತಾದವುಗಳಿಗೆ ಒದಗಿಸುವಂತೆ ಕೇಳಿದರೂ ನ್ಯಾಯ ಮಂಡಳಿಯು ಕರ್ನಾಟಕದ ಮನವಿಯನ್ನು ತಿರಸ್ಕರಿಸಿತು. ಅದಕ್ಕೆ ನೀಡಿದ ಕಾರಣವೆಂದರೆ, ಕಾವೇರಿ ನದಿಯು ಒಂದು "ಕೊರತೆಯುಳ್ಳ ಜಲಾನಯನ" ಹಾಗೂ "ನೀರಿನ ಲಭ್ಯತೆ ಯ" ಕೊರತೆ. ನ್ಯಾಯಮಂಡಳಿಯು ಸ್ವತಃ ತಾನು ತನ್ನ ವರದಿಯಲ್ಲಿ ತಮಿಳುನಾಡು ೨೦ ಟಿ.ಎಂ.ಸಿ. ಅಂತರ್ಜಲವನ್ನು ಬಳಸಬಹುದೆಂದು ಹೇಳಿದೆ. ೨೦ ಟಿ.ಎಂ.ಸಿ ಅಂತರ್ಜಲವು ೩೦ ಟಿ.ಎಂ.ಸಿ. ಮೇಲ್ಮ ನೀರಿಗೆ ಸಮವಾಗಿದೆ.

ಮೇಲಿನ ಈ ಎಲ್ಲ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡಾಗ ಸಿ.ಡಬ್ಲ್ಯೂ.ಡಿ.ಟಿ. ಯ ಅಂತಿಮ ಆದೇಶದಂತೆ ಬಿಳಿಗುಂಡ್ಲುವಿಗೆ ೧೯೨ ರ ಬದಲಾಗಿ ೧೦೨ ಟಿ.ಎಂ.ಸಿ. ನೀರು ಬಿಡುವ ಹೊಣೆಗಾರಿಕೆಯು ಕರ್ನಾಟಕದ ಮೇಲಿರಲಿದೆ. ಅದನ್ನು ಕೆಳಗೆ ವಿವರಿಸಿದೆ.

೧. ೫೦% ಅವಲಂಬನೆಯೊಂದಿಗೆ ಜಲಾನಯನದ ಒಟ್ಟು ಇಳುವರಿ – ೭೪೦ ಟಿ.ಎಂ.ಸಿ.

೨. ತಮಿಳುನಾಡು ಹೇಳಿಕೆಯಂತೆ ಮೆಟ್ಟೂರು ಜಲಾಶಯದ ಇಳುವರಿ ೫೦೮ ಟಿ.ಎಂ.ಸಿ.

೩. ತಮಿಳುನಾಡು ಪ್ರದೇಶದಲ್ಲಿ ಮೆಟ್ಟೂರು ಜಲಾಶಯದ ಮೇಲ್ಭಾಗದಲ್ಲಿ ಉತ್ಪತ್ತಿಯಾಗುವ ಇಳುವರಿ ೨೫ ಟಿ.ಎಂ.ಸಿ.

೪. ಮೆಟ್ಟೂರಿನ ಕೆಳಭಾಗದಲ್ಲಿ ಲಭ್ಯವಿರುವ ಇಳುವರಿ (೭೪೦-೫೦೮) – ೨೩೨ ಟಿ.ಎಂ.ಸಿ.

೫. ವಿವಿಧ ಪ್ರಯೋಜನಗಳಿಗಾಗಿ ಈಗಾಗಲೇ ನಿಗದಿಪಡಿಸಿರುವ ನೀರು.

a. ಕೇರಳದ ಭವಾನಿ ಉಪಜಲಾನಯನದಲ್ಲಿ ನಿಗದಿಪಡಿಸಿದ್ದು - ೬ ಟಿ.ಎಂ.ಸಿ.

b. ಕೇರಳದ ಪಂಬ ಉಪಜಲಾನಯನ ಪ್ರದೇದಲ್ಲಿ ನಿಗದಿಪಡಿಸಿದ್ದು ಟಿ.ಎಂ.ಸಿ.

C. ಕೇಂದ್ರಾಡಳಿತ ಪ್ರದೇಶವಾದ ಪಾಂಡಿಚೆರಿಗೆ ನಿಗದಿಪಡಿಸಿದ್ದು - ೭ ಟಿ.ಎಂ.ಸಿ.

d. ತಡೆಯಲಾಗದೆ ಸಮುದ್ರ ಸೇರುವ ಪಾಲು ೪ ಟಿ.ಎಂ.ಸಿ. ಒಟ್ಟು – ೧೦ ಟಿ.ಎಂ.ಸಿ.

೬ ತಮಿಳುನಾಡಿನ ಬಳಕೆಗೆ ಲಭ್ಯವಿರುವ ಉಳಿದ ನೀರು = (೧೩೨-೧೦-೧೧೨ 13.30.3.)

೧೫೮ / ನುಡಿಗಂಧ

ಟಿ.ಎಂ.ಸಿ.)

೭. ತಮಿಳುನಾಡು ಬಳಕೆಗೆ ಇರುವ ಒಟ್ಟು ನೀರು-(೧೧೨ + ೧೫ = ೧೩೭ ಟಿ.ಎಂ.ಸಿ.)

೮. ಬಿಳಿಗುಂಡ್ಲುನಲ್ಲಿ ಕರ್ನಾಟಕದ ಹೊಣೆಗಾರಿಕೆ- (೩೩೯-೧೩೭) =೧೩೭ ಟಿ.ಎಂ.ಸಿ.

ಈ ೧೧೨ ಟಿ.ಎಂ.ಸಿ. ಮಾಸಿಕವಾಗಿ ಬಿಡುವುದು ಹಾಗೂ ಮಾಸಿಕ ವೇಳಾಪಟ್ಟಿಯನ್ನು ಅಧಿಕಾರಿಗಳು ಲೆಕ್ಕಹಾಕುವುದು. ಕರ್ನಾಟಕದ ಈ ನಿಲುವು ಸ್ವೀಕಾರವಾದರೆ ತಮಿಳುನಾಡಿಗೆ ಯಾವುದೇ ಹಾನಿಯಾಗುವುದಿಲ್ಲ. ಅಲ್ಲದೆ ಕರ್ನಾಟಕಕ್ಕೆ ಹೆಚ್ಚು ಪೆಟ್ಟು ಉಂಟಾಗುವುದಿಲ್ಲ ಮತ್ತು ಎರಡೂ ರಾಜ್ಯಗಳು ಸಾಮಾನ್ಯ ವರ್ಷಗಳಲ್ಲಿ ಸಂತೋಷದಿಂದಿರಬಹುದು ಹಾಗೂ ನೀರಿನ ಕೊರತೆಯುಂಟಾಗುವ ವರ್ಷಗಳಲ್ಲಿ ಅಧಿಕಾರಿಗಳಿಂದ ಗೊತ್ತುಮಾಡಲಾದ "ಕೊರತೆ ಸೂತ್ರ' ವನ್ನು ಅಳವಡಿಸಿಕೊಂಡು ಇರಬಹುದಾಗಿದೆ. ಹಾಗಾಗಿ ಬಿಳಿಗುಂಡ್ಲುವಿಗೆ ೧೯೨ ರ ಬದಲಾಗಿ ೧೧೨ ಟಿ.ಎಂ.ಸಿ. ನೀರು ಬಿಡುವ ಹೊಣೆಗಾರಿಕೆ ಕರ್ನಾಟಕದ ಮೇಲಿರಲಿದೆ."

**S. ಹಂಚಿಕೆಯ ಸಂದರ್ಭದಲ್ಲಿ ಸಿ.ಡಬ್ಲ್ಯೂ.ಡಿ.ಟಿ.ಯು "ಮರುಸೃಷ್ಟಿ" ಯಾದ ನೀರನ್ನು ಪರಿಗಣಿಸಿಲ್ಲ.**

ಬಹುತೇಕ ಎಲ್ಲಾ ಚಾಲ್ತಿಯಿರುವ ಯೋಜನೆಗಳಿಗೆ ಅನುವು ಮಾಡಿಕೊಡಲೆಂದು ಕಾವೇರಿ ಜಲಾನಯನದ ಪ್ರತಿ ರಾಜ್ಯಗಳಿಗೆ ನೀರನ್ನು ಹಂಚಿಕೆ ಮಾಡಲಾಗಿದೆ. ಹಾಗಾಗಿ ಮರುಸೃಷ್ಟಿಗೊಂಡ ನೀರಿನ ಪ್ರಮಾಣ ಗಣನೀಯವಾಗಿರುವುದಿಲ್ಲ. ಆದರೆ, ಯೋಜನೆಗಳಿಗೆ ಒದಗಿಸಲಾದ ತಾಜಾ ನೀರು ವಿಶೇಷವಾಗಿ ಕೇರಳ ರಾಜ್ಯಕ್ಕೆ ಒದಗಿಸಲಾದ ನೀರು ಮತ್ತೆ ಮರುಸೃಷ್ಟಿಯಾಗುತ್ತದೆ. ಈ ನೀರಿಗೆ ಸಂಬಂಧಿಸಿದಂತೆ ನ್ಯಾಯಮಂಡಳಿಯು ತನ್ನ ಅಂತಿಮ ಆದೇಶದಲ್ಲಿ ಏನೂ ಹೇಳಿಲ್ಲ. "ಈ ಅಂತರವನ್ನು ಕೇರಳ ಸರ್ಕಾರವು ಗಮನಿಸಿ ಮುಂದಿಟ್ಟಿತು. ಇದಕ್ಕೆ

ಸರ್ವೋಚ್ಚ ನ್ಯಾಯಾಲಯವು ಸೂಕ್ತವಾದ ಮಾರ್ಪಾಡುಗಳನ್ನು ಮಾಡಿದಾಗ ಮರುಸೃಷ್ಟಿಗೊಂಡ ನೀರನ್ನು ಸಮಂಜಸವಾಗಿ ಜಲಾನಯನದ ರಾಜ್ಯಗಳಿಗೆ ಹಂಚಬಹುದು" .

**೬ ಸಿ.ಡಬ್ಲ್ಯೂ ಡಿ.ಟಿ, ಹಂಚಲು ಹೆಚ್ಚುವರಿ ನೀರನ್ನು ಪರಿಗಣಿಸಿಲ್ಲ.**

೫೦% ಅವಲಂಬನೆಯೊಂದಿಗೆ ಎಲ್.ಸಿ.ಎ. ನಲ್ಲಿ ಲಭ್ಯವಿರುವ ನೀರು ೭೪೦ ಟಿ.ಎಂ.ಸಿ. ಎಂದು ಸಿ.ಡಬ್ಲ್ಯೂ.ಡಿ.ಟಿ. ಅಂದಾಜಿಸಿದೆ. ಹಾಗಾಗಿ ಒಟ್ಟಾರೆ ನೂರು ವರ್ಷಗಳ ಕಾಲಾವಧಿಯನ್ನು ಪರಿಗಣಿಸಿದಾಗ ಮಿಕ್ಕ ೫೦ ವರ್ಷಗಳಲ್ಲಿ ನೀರು ೭೪೦ ಟಿ.ಎಂ.ಸಿ. ಗಿಂತ ಕಡಿಮೆ ಅಥವಾ ಹೆಚ್ಚಾಗಿಯೂ ಇರಬಹುದು. ಇಲ್ಲಿ ಸಿ.ಡಬ್ಲ್ಯೂ.ಡಿ.ಟಿ. ಯು ೭೪೦ ಟಿ.ಎಂ.ಸಿ.ಗಿಂತ ನೀರು ಹೆಚ್ಚಾಗಿದ್ದಾಗ ಅದರ ಹಂಚಿಕೆಯನ್ನು ನಿಗದಿಪಡಿಸಲು ವಿಫಲವಾಗಿರುತ್ತದೆ. ''ಹಾಗಾಗಿ ಕಾವೇರಿ ಜಲಾನಯನದಲ್ಲಿ ಹೆಚ್ಚಿನ ಪ್ರಮಾಣದ ನೀರಿದ್ದಾಗ



ಅದನ್ನು ಎಲ್ಲಾ ನಾಲ್ಕು ರಾಜ್ಯಗಳಿಗೆ ಸಮರ್ಪಕವಾಗಿ ಹಂಚುವುದು ಅವಶ್ಯಕವಾಗಿದೆ."

**u. ಅಂತಿಮ ಆದೇಶವನ್ನು ಮರುಪರಿಶೀಲಿಸಲು ಸಿ.ಡಬ್ಲ್ಯೂ.ಡಿ.ಟಿ. ಯಾವುದೇ ಅವಕಾಶ ಕಲ್ಪಿಸಿಲ್ಲ.**

ಇಲ್ಲಿಯವರೆಗೆ ದೇಶದಲ್ಲಿ ರಚಿತವಾದ ಎಲ್ಲ ನ್ಯಾಯಮಂಡಳಿಗಳು ತಮ್ಮ ಅಂತಿಮ ಆದೇಶವನ್ನು ಮರುಪರಿಶೀಲಿಸಲು ಅವಕಾಶ ಕಲ್ಪಿಸಿರುವುದನ್ನು ಕಾಣಬಹುದಾಗಿದೆ. ಆದರೆ, ಸಿ.ಡಬ್ಲ್ಯೂ.ಡಿ.ಟಿ. ಅಂತಹ ಯಾವುದೇ ಅವಕಾಶ ಕಲ್ಪಿಸಿಲ್ಲ. ಕೇರಳವನ್ನು ಹೊರತುಪಡಿಸಿ ಜಲಾನಯನ ರಾಜ್ಯಗಳಲ್ಲಿ ಈಗಾಗಲೆ ಬಹುತೇಕ ದೊಡ್ಡ ಯೋಜನೆಗಳು ಚಾಲ್ತಿಯಲ್ಲಿವೆ. ಈ ಕಾರಣದಿಂದಾಗಿ ಕೇರಳಕ್ಕೆ ಸೂಕ್ತವಾದ ಕಾಲಾವಕಾಶ ನೀಡಿ ತನ್ನ ಪಾಲಿನ ೩೦ ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳಲು ಅನುಕೂಲವಾಗುವಂತೆ ಯೋಜನೆಗಳನ್ನು ನಿರ್ಮಿಸಲು ಅನುವು ಮಾಡಿಕೊಡಬೇಕು. ಅದರಂತೆ ಅಂತಿಮ ಆದೇಶವನ್ನು ಮರುಪರಿಶೀಲಿಸಲು ಸೂಕ್ತ ಕಾಲಾವಕಾಶವನ್ನು ನಿಗದಿಮಾಡಬೇಕು.

**೪. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಂತಿಮ ನಿರ್ಧಾರವನ್ನು ಅನುಷ್ಠಾನ ಗೊಳಿಸಲು ಸೂಕ್ತವಾದ ನಿರ್ವಹಣಾ ವ್ಯವಸ್ಥೆಯ ರಚನೆ.**

ಸಿ.ಡಬ್ಲ್ಯೂ ಡಿ.ಟಿ.ಯು ಕಾವೇರಿ ನಿರ್ವಹಣಾ ಸಮಿತಿ (ಸಿ.ಎಂ.ಬಿ.) ಹಾಗೂ ಕಾವೇರಿ ನೀರು ನಿರ್ವಹಣಾ ಸಮಿತಿ (ಸಿ.ಡಬ್ಲ್ಯೂ ಎಂ.ಸಿ.)ಗಳ ರಚನೆಗಾಗಿ ಒದಗಿಸಿದ ತನ್ನ ಅಂತಿಮ ಆದೇಶದ ಅಧ್ಯಾಯ ೮ ವಾಲ್ಯೂಮ್ ೫ ರಲ್ಲಿ

"ಯಾವುದೇ ನಿರ್ದಿಷ್ಟ ವಿಧಿ"ಯನ್ನು ಉಲ್ಲೇಖಿಸಿಲ್ಲ. ತಮಿಳುನಾಡು ಸಿ.ಎಂ.ಬಿ. ಹಾಗೂ ಸಿ.ಡಬ್ಲೂ.ಎಂ.ಸಿ. ರಚನೆಗಳಿಗಾಗಿ ಒತ್ತಾಯಿಸುತ್ತಿದೆ. ಭಾರತ ಸರ್ಕಾರವು ತನ್ನ ವಾದದಲ್ಲಿ ಈಗಾಗಲೆ ಸಿ.ಎಂ.ಬಿ. ಹಾಗೂ ಸಿ.ಡಬ್ಲ್ಯೂ .ಎಂ.ಸಿ. ರಚನೆಗಳಿಗೆ ವಿರೋಧ ವ್ಯಕ್ತಪಡಿಸಿದ್ದು ಇದು ಶಾಸನದ ಕ್ರಮವಾಗಿದ್ದು ನ್ಯಾಯಮಂಡಳಿಯ ತೀರ್ಪನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಐ.ಎಸ್.ಡಬ್ಲ್ಯೂ, ಕಾಯ್ದೆಯ ಅಡಿ ಅದಕ್ಕೆ ಅಧಿಕಾರವಿದೆ ಎಂದು ಹೇಳಿದೆ. ಅಲ್ಲದೆ, ಇದು ಸರ್ವೋಚ್ಛ ನ್ಯಾಯಾಲಯದ ಸರಹದ್ದಿನಲ್ಲಿ ಬರುವುದಿಲ್ಲವೆಂತಲೂ ತಿಳಿಸಿದೆ. ಈಗಾಗಲೆ ಭಾರತ ಸರ್ಕಾರವು ಕಾವೇರಿ ನದಿ ಪ್ರಾಧಿಕಾರ (ಸಿ.ಆರ್.ಎ.) ಹಾಗೂ ಕಾವೇರಿ ಉಸ್ತುವಾರಿ ಸಮಿತಿ (ಸಿ.ಎಂ.ಸಿ.) ಗಳ ರಚನೆ ಮಾಡಿದೆ.

ಮಾನ್ಯ ಸರ್ವೋಚ್ಛ ನ್ಯಾಯಾಲಯದ ನಿರ್ಧಾರಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಖಂಡಿತವಾಗಿ "ಸ್ವತಂತ್ರ ಹಾಗೂ ನಿಷ್ಪಕ್ಷಪಾತ ಸಾಂಸ್ಥಿಕ ವ್ಯವಸ್ಥೆ" ಯ ಅವಶ್ಯಕತೆಯಿದೆ. ಅಂತಹ ನಿಷ್ಪಕ್ಷಪಾತ ಪ್ರಾಧಿಕಾರಗಳನ್ನು ಅಂತರರಾಜ್ಯ ವಿವಾದ ಕಾಯ್ದೆ ಅಡಿಯಲ್ಲಿ ಅವಕಾಶ ಕಲ್ಪಿಸಲಾಗಿರುವಂತೆ ಹಲವಾರು ನ್ಯಾಯಮಂಡಳಿಗಳಿಂದ ಈಗಾಗಲೆ ರಚಿಸಲಾಗಿದೆ. ಈ ಸಮಸ್ಯೆಗೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಛ



ನ್ಯಾಯಾಲಯದ ನಿರ್ಣಯವನ್ನು ಎಲ್ಲ ಜಲಾನಯನ ರಾಜ್ಯಗಳು ಸ್ವಾಗತಿಸುತ್ತವೆ.

**W. ಶತಮಾನದಷ್ಟು ಹಳೆಯದಾದ ನೀರಿನ ಸಮಸ್ಯೆಯನ್ನು ಬಗೆಹರಿಸಲು ಕರ್ನಾಟಕ ರಾಜ್ಯ ನೀಡಿರುವ ಸಲಹೆ.**

ಎಲ್ಲ ಮೂರು ರಾಜ್ಯಗಳು ತಮ್ಮ ದಾಖಲೆಗಳನ್ನು ಸಲ್ಲಿಸಿ ತಮ್ಮ ಪರವಾದ ವಾದಗಳನ್ನು ಸರ್ವೋಚ್ಛ ನ್ಯಾಯಾಲಯದ ಮುಂದೆ ಮಂಡಿಸಿದ್ದಾರೆ. ನ್ಯಾಯಾಲಯ ತನ್ನ ತೀರ್ಪನ್ನು ಕಾಯ್ದಿರಿಸಿದ್ದು ಶೀಘ್ರದಲ್ಲಿ ಯಾವುದೇ ಸಮಯದಲ್ಲಾದರೂ ಹೊರಬೀಳ ಬಹುದು. ಸರ್ವೋಚ್ಛ ನ್ಯಾಯಾಲಯದ ಅಂತಿಮ ತೀರ್ಪು ಎಲ್ಲ ನಾಲ್ಕು ರಾಜ್ಯಗಳಿಗೂ ಅನ್ವಯವಾಗುತ್ತದೆ. ಎಲ್ಲರೂ ಕುತೂಹಲದಿಂದ ತೀರ್ಪಿಗಾಗಿ ಎದುರು ನೋಡುತ್ತಿದ್ದಾರೆ.

ಇದೆಲ್ಲದರ ನಡುವೆ ಕರ್ನಾಟಕ ಸರ್ಕಾರವು ಮಾನ್ಯ ಸರ್ವೋಚ್ಛ ನ್ಯಾಯಾಲಯವು ರಾಷ್ಟ್ರಪತಿ ಉಲ್ಲೇಖದಲ್ಲಿ ನೀಡಿರುವ ಆದೇಶವನ್ನು ಪರಿಗಣಿಸಿ ನಾಯಸಮ್ಮತ ಹಂಚಿಕೆಗೆ ಸಂಬಂಧಿಸಿದ ತನ್ನ ಅಂತಿಮ ಆದೇಶವನ್ನು ನೀಡಬೇಕೆಂದು ವಾದಿಸುತ್ತಿದೆ ಹಾಗೂ ಮಾನ್ಯ ಸರ್ವೋಚ್ಛ ನ್ಯಾಯಾಲಯಕ್ಕೆ ೨೦೨೫ ರವರೆಗೆ ಅಂದಾಜಿಸಲಾದ ಬೆಂಗಳೂರು ನಗರದ ಜನಸಂಖ್ಯೆಗೆ ಹೆಚ್ಚುವರಿಯಾಗಿ ಕುಡಿಯುವ ನೀರನ್ನೊದಗಿಸುವ ಪ್ರಮಾಣವನ್ನು ಗಣನೆಗೆ ತೆಗೆದುಕೊಂಡು ೩೫೦ ಟಿ.ಎಂ.ಸಿ. ರಷ್ಟು ನೀರನ್ನು ಒದಗಿಸಲು ವಿನಂತಿಸಿಕೊಂಡಿದೆ.

**ಸಮಸ್ಯೆ ಪರಿಹಾರಕ್ಕೆ ಕರ್ನಾಟಕ ರಾಜ್ಯದ ಪರವಾಗಿ ನೀಡಲಾದ ಸಲಹೆ**

ಕಾರಣಾಂತರಗಳಿಂದ, ಮಾನ್ಯ ಸರ್ವೋಚ್ಚ ನ್ಯಾಯಾಲಯ, ಮೇಲೆ ಸೂಚಿಸಿದಂತೆ ಕರ್ನಾಟಕಕ್ಕೆ ಕನಿಷ್ಟಪಕ್ಷ ೩೫೦ ಟಿ.ಎಂ.ಸಿ. ನೀರನ್ನು ನೀಡಲು ಸಾಧ್ಯವಾಗದ ಪಕ್ಷದಲ್ಲಿ, C.W.D.T. ನೀಡಿದ ಆದೇಶವನ್ನು ಮಾರ್ಪಡಿಸುತ್ತಿದ್ದಲ್ಲಿ, ನೀರನ್ನು "ಈಕ್ವಿಟಬಲ್ ನೀತಿಯ" ಆಧಾರದ ಮೇಲೆ ಹಂಚಲು ಹವಣಿಸುತ್ತಿದ್ದಲ್ಲಿ, ಕರ್ನಾಟಕ ರಾಜ್ಯವು, ಕಾವೇರಿ ಕಣಿವೆಯ ಎಲ್ಲರ ಹಿತದೃಷ್ಟಿಯಿಂದ ರಾಜ್ಯಗಳಿಗೆ "ಸಮಾನ ಹಕ್ಕು" ಇದೆ ಎಂಬುವ ಸಿದ್ಧಾಂತದ ಮೇಲೆ ಶತಮಾನದಿಂದ ನೆನೆಗುದಿಗೆ ಬಿದ್ದಿರುವ ಈ ಕಾವೇರಿ ನದಿ ನೀರಿನ ಹಂಚಿಕೆ ಈ ಕೆಳಕಂಡ ಪರ್ಯಾಯ ಸೂತ್ರವನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಗಮನಕ್ಕೆ ತರಬಯಿಸಿ ಇದರಂತೆ ಕ್ರಮ ಸಾಧ್ಯತೆ ಬಗ್ಗೆ ಪರಿಶೀಲಿಸಲು ಕೋರುತ್ತಿದೆ.

ಲಭ್ಯವಿರುವ ೭೪೦ ಟಿ.ಎಂ.ಸಿ. ನೀರನ್ನು ಈ ರೀತಿ ಹಂಚಬಹುದು.

೧) ಕೇರಳ ರಾಜ್ಯಕ್ಕೆ ೩೦ ಟಿ.ಎಂ.ಸಿ.

೨) ಪುದುಚೇರಿ ರಾಜ್ಯಕ್ಕೆ ೭ ಟಿ.ಎಂ.ಸಿ.

೩) ಪರಿಸರ ಸಂರಕ್ಷಣೆಗೆ ೧೦ ಟಿ.ಎಂ.ಸಿ.

೪) ತಪ್ಪಿಸಲಾಗದ ವೇಸ್ಟೇಜ್‌ಗಾಗಿ ೪ ಟಿ.ಎಂ.ಸಿ.



೫) ಹೆಚ್ಚುವರಿಯಾಗಿ ಕುಡಿಯಲು ಹಾಗೂ ಉದ್ದಿಮೆಗಳ ಬಳಕೆಗಾಗಿ (Consumptive use)೧೦ ಟಿ.ಎಂ.ಸಿ.ಒಟ್ಟು (೧ ರಿಂದ ೫) ೬೧ ಟಿ.ಎಂ.ಸಿ.

೬) ಉಳಿದ ನೀರು (೭೪೦ ? ೬೧)೬೭೯ ಟಿ.ಎಂ.ಸಿ.

೭) ಸಮಾನ ಹಕ್ಕು ಸಿದ್ಧಾಂತದ ಮೇಲೆ ಕರ್ನಾಟಕ ಹಾಗೂ

ತಮಿಳುನಾಡಿಗೆ ಸಮನಾಗಿ ಹಂಚಿದಲ್ಲಿ ಪ್ರತಿ ರಾಜ್ಯದ ಪಾಲು೩೩೯.೫ ಟಿ.ಎಂ.ಸಿ.

೮) ಎಲ್ಲಾ ರಾಜ್ಯಗಳು ತಮ್ಮಲ್ಲಿ ಲಭ್ಯವಿರುವ ಅಂತರ್ಜಲವನ್ನು ಬಳಸಲು ಅನುಮತಿಯಿದೆ.

Note: ಹೀಗೆ ಮಾಡುವುದರಿಂದ ತಮಿಳುನಾಡಿಗೆ (೩೩೯.೫ + ೧೦ + ೪) ೩೫೩.೫ ಟಿ.ಎಂ.ಸಿ. ಲಭ್ಯವಿರುತ್ತದೆ. ಕೇರಳ ತನ್ನ ಪಾಲನ್ನು ಉಪಯೋಗಿಸುವವರೆಗೆ ಕಬಿನಿ ಕೊಳ್ಳದ ನೀರು ಕರ್ನಾಟಕಕ್ಕೆ, ಭವಾನಿ ಮತ್ತು ಪಾಂಬಾರ್ ಕೊಳ್ಳದಲ್ಲಿನ ಕೇರಳ ಪಾಲಿನ ನೀರನ್ನು ತಮಿಳುನಾಡು ಉಪಯೋಗಿಸುವಂತೆ ತಿಳಿಸಬಹುದು.

**೨೬. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಪ್ರಸ್ತಾಪಿಸದ ವಿಷಯಗಳು**

೧. ನೀರಿನ ಅಭಾವ ಉಂಟಾಗುವ ವರ್ಷಗಳಲ್ಲು ಕಾವೇರಿ ನದಿ ನೀರನ್ನು ಹಂಚಿಕೊಳ್ಳಲು ಅನುಸರಿಸುವ ಕೊರತೆ ಸೂತ್ರ' ವನ್ನು ನಿರ್ಧರಿಸುವ ಬಗೆ.

೫೦% ರಷ್ಟು ಅವಲಂಬಿತತೆಯ ಆಧಾರದಲ್ಲಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಲಭ್ಯವಿರುವ ನೀರಿನ ಪ್ರಮಾಣ ೭೪೦ ಟಿ.ಎಂ.ಸಿ ಎಂದು ಸಿ.ಡಬ್ಲ್ಯೂ.ಡಿ.ಟಿ.ಯು ಕಂಡುಕೊಂಡಿದೆ. ಅಂದರೆ ಪ್ರತಿ ಬದಲಿ ವರ್ಷಕೊಮ್ಮೆ ಕಾವೇರಿಯ ಹರಿವು ೭೪೦ ಟಿ.ಎಂ.ಸಿ. ಗಿಂತ ಕಡಿಮೆ ಅಥವಾ ಅಧಿಕವಾಗಬಹುದು. ಹಾಗಾಗಿ ನೀರಿನ ಅಭಾವದ ವರ್ಷಗಳಲ್ಲಿ ಸಮನಾಗಿ ನೀರು ಹಂಚಲು ಅನುಕೂಲವಾಗುವಂತೆ "ಕೊರತೆ ಸೂತ್ರ" ವನ್ನು ಹುಡುಕಿ ನಿರ್ಧರಿಸುವುದು ಸಿ.ಡಬ್ಲ್ಯೂ ಡಿ.ಟಿ.ಯ ಆದ್ಯ ಕರ್ತವ್ಯವಾಗಿತ್ತು. ಆದರೆ ಇದನ್ನು ಮಾಡಲು ವಿಫಲವಾದ ಸಿ.ಡಬ್ಲ್ಯೂ ಡಿ.ಟಿ. ಬದಲಾಗಿ ತನ್ನ ಅಂತಿಮ ಆದೇಶದ ವಿಧಿ ೮ ರ ಅಡಿಯಲ್ಲಿ ಈ ರೀತಿ ಆದೇಶ ನೀಡಿತು; ಏನೆಂದರೆ, "ಕಾವೇರಿ ಜಲಾನಯನದಲ್ಲಿ ಅಭಾವವಿದ್ದ ವರ್ಷದಲ್ಲಿ ಕರ್ನಾಟಕ, ತಮಿಳುನಾಡು, ಕೇರಳ ಹಾಗೂ ಕೇಂದ್ರಾಡಳಿತ ಪ್ರದೇಶವಾದ ಪಾಂಡಿಚೆರಿಗಳಿಗೆ ನಿಗದಿಪಡಿಸಲಾಗಿರುವ ನೀರಿನ ಪ್ರಮಾಣದಲ್ಲಿ ಸೂಕ್ತವಾಗಿ ಕಡಿತಗೊಳಿಸಲಾಗುವುದು". ಅಭಾವದ ವರ್ಷ ಎಂದು ನಿರ್ಧರಿಸಲು ಮುಂಗಾರು ಹಾಗೂ ಹಿಂಗಾರುಗಳ ಸಮಾಪ್ತತೆಯವರೆಗೂ ಕಾಯಬೇಕಾಗಿರುವುದರಿಂದ ನ್ಯಾಯಮಂಡಳಿಯ ಈ ಆದೇಶವು ಕೊರತೆ ವರ್ಷಗಳಲ್ಲಿ ನೀರಿನ ಹಂಚಿಕೆಯ ವಿಷಯದಲ್ಲಿ ಗಂಭೀರವಾದ ಸಮಸ್ಯೆ ಸೃಷ್ಟಿಸಿತು. ಈ ಸಂದರ್ಭದ ಪ್ರಯೋಜನ ಪಡೆಯುತ್ತ ತಮಿಳುನಾಡು ಸಿ.ಡಬ್ಲ್ಯೂ.ಡಿ.ಟಿ. ಗೆ ಹೋಗುವ ಬದಲು ಕರ್ನಾಟಕವನ್ನು ಕೆಟ್ಟ ಸ್ವರೂಪದಲ್ಲಿ ಬಿಂಬಿಸುವಂತೆ ಸರ್ವೋಚ್ಚ ನ್ಯಾಯಾಲಯದ ಮುಂದೆ ತನ್ನ ಅಳಲನ್ನು ಪದೇ ಪದೇ ಪ್ರತಿಪಾದಿಸುತ್ತದೆ.

ಕರ್ನಾಟಕ ರಾಜ್ಯವು ಮಾನ್ಯ ಸರ್ವೋಚ್ಛ ನ್ಯಾಯಾಲಯದ ಮುಂದೆ ಈಗಾಗಲೆ ಈ ರೀತಿ ವಿನಂತಿಸಿದೆ. ಎಲ್ಲ ರಾಜ್ಯಗಳ ನ್ಯಾಯಸಮ್ಮತವಾದ ಪಾಲನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಗೊತ್ತುಮಾಡಿದರೆ, ರಾಜ್ಯ ಸರ್ಕಾರ ಪ್ರಸ್ತಾಪಿಸಿದಂತೆ ಕರ್ನಾಟಕ ರಾಜ್ಯವು ಬಿಳಿಗುಂಡ್ಲುವಿನಲ್ಲಿ ೧೯೨ ರ ಬದಲಾಗಿ ೧೦೨ ಟಿ.ಎಂ.ಸಿ. ನೀರು ಲಭ್ಯವಿರುವಂತೆ ನೋಡಿಕೊಳ್ಳುವ ಹೊಣೆಗಾರಿಕೆಯನ್ನು ಪಡೆಯುತ್ತದೆ ಎಂದು ಅಭಿಪ್ರಾಯಪಟ್ಟಿದೆ.

ಮಾನ್ಯ ಸರ್ವೋಚ್ಛ ನ್ಯಾಯಾಲಯವು ಹೊರಡಿಸುವ ತೀರ್ಪು ಕರ್ನಾಟಕಕ್ಕೆ ದೊಡ್ಡ ಪರಿಹಾರ ನೀಡಬಹುದೆಂದು ನಿರೀಕ್ಷಿಸಿದರೆ, ಆಗ ಸಾಮಾನ್ಯ ವರ್ಷಗಳಲ್ಲಿ ಬಿಳಿಗುಂಡ್ಲುವಿಗೆ ಕರ್ನಾಟಕವು ಹರಿಸಬೇಕಾದ ನೀರಿನ ಪ್ರಮಾಣವು ಖಂಡಿತ ವಾಗಿಯೂ ೧೯೨ ಟಿ.ಎಂ.ಸಿ. ಗಿಂತ ಕಡಿಮೆಯಾಗುತ್ತದೆ ಹಾಗೂ ಅದು ಏನಿಲ್ಲವೆಂದರೂ ೧೦೨ ಮತ್ತು ೧೯೨ ಟಿ.ಎಂ.ಸಿ. ಮಧ್ಯದ ಯಾವುದೇ ಪ್ರಮಾಣವಾಗುವ ಸಾಧ್ಯತೆ ಇದೆ. ಈ ಸಂದರ್ಭವನ್ನು ಪರಿಗಣಿಸಿದಾಗ ಮಾನ್ಯ ಸರ್ವೋಚ್ಛ ನ್ಯಾಯಾಲಯವು ಅಥವಾ ಅದು ಘೋಷಿಸುವ ಉಸ್ತುವಾರಿ ಸಮಿತಿಯು “ಕೊರತೆ ಸೂತ್ರವನ್ನು” ಹುಡುಕಿ ನಿರ್ಧರಿಸಬೇಕಾಗುತ್ತದೆ.

ಸಿ.ಡಬ್ಲ್ಯೂ.ಡಿ.ಟಿ. ಯು ತನ್ನ ಅಧ್ಯಾಯ ೭ ರಲ್ಲಿ ಅಂದರೆ ಪುಟ ಸಂಖ್ಯೆ ೨೦೭ ಮತ್ತು ೨೦೮ ರಲ್ಲಿ ನಮೂದಿಸಿದ ಅಂಶವು ಒಮ್ಮೆ ಕಣ್ಣಾಡಿಸಲು ಯೋಗ್ಯವಾಗಿದೆ; ಅಲ್ಲಿ ಅದು ಹೇಳಿರುವಂತೆ ಕಬಿನಿ ಜಲಾನಯನವು ೬೦ ಟಿ.ಎಂ.ಸಿ. ಕಬಿನಿಯ ಮತ್ತು ಕೆ.ಆರ್.ಎಸ್. ಕೆಳಗಿನ ಅಚ್ಚುಕಟ್ಟು ಪ್ರದೇಶ ೮೦ ಟಿ.ಎಂ.ಸಿ. ವರೆಗೂ ಹಾಗೂ ಕೆ.ಆರ್.ಎಸ್. ಮೇಲ್ಭಾಗದಲ್ಲಿರುವ ಅಚ್ಚುಕಟ್ಟು ಪ್ರದೇಶವು ೫೨ ಟಿ.ಎಂ.ಸಿ. ವರೆಗೂ ನೀರನ್ನು ಕಾವೇರಿಗೆ ಒದಗಿಸುತ್ತದೆ. ಇವೆಲ್ಲವೂ ಸೇರಿ ಒಟ್ಟು ಪ್ರಮಾಣ ೧೯೨ ಟಿ.ಎಂ.ಸಿ. ಯಾಗಿದ್ದು ಇದು ಸಿ.ಡಬ್ಲ್ಯೂ ಡಿ.ಟಿ.ಯ ಅಂತಿಮ ಆದೇಶದಂತೆ ಬಿಳಿಗುಂಡ್ಲುವಿನಲ್ಲಿ ಲಭ್ಯವಿರಬೇಕು. ಈ ಅಂಶಗಳನ್ನು ಪರಿಗಣಿಸಿ "ಕೊರತೆ ಸೂತ್ರ" ವನ್ನು ನಿರ್ಧರಿಸಬಹುದಾಗಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ ನಿರೀಕ್ಷಿಸಲಾದ ತೀರ್ಪಿನಲ್ಲಿ ಬಿಳಿಗುಂಡ್ಲುವಿನಲ್ಲಿ ಲಭ್ಯವಿರಬೇಕಾದ ನೀರಿನ ಪ್ರಮಾಣವು ೧೦೨ ರಿಂದ ೧೪೨ ಟಿ.ಎಂ.ಸಿ. ಮಧ್ಯದಲ್ಲಿದ್ದರೆ ಆಗ ಕರ್ನಾಟಕವು ಕೆ.ಆರ್.ಎಸ್. ಮೇಲ್ಭಾಗದಲ್ಲಿರುವ ತನ್ನ ಯಾವುದೇ ಮೂರು ಜಲಾಶಯಗಳಿಂದ ನೀರನ್ನು ಹರಿಸುವ ಜವಾಬ್ದಾರಿ ಇರುವುದಿಲ್ಲ, ಏಕೆಂದರೆ ಕಬಿನಿ ಜಲಾನಯನ ಮತ್ತು ಕಬಿನಿ ಹಾಗೂ ಕೆ.ಆರ್.ಎಸ್, ಕೆಳಭಾಗದ ಜಲಾನಯನ ಪ್ರದೇಶಗಳಿಂದಲೆ ೧೪೦ TMC (೮೦ ಹಾಗೂ ೬೦ ಟಿ.ಎಂ.ಸಿ.) ಲಭಿಸುವ ನೀರು ಪರ್ಯಾಪ್ತವಾಗಿರುತ್ತದೆ. ಆದರೆ, ಮಾನ್ಯ ಸರ್ವೋಚ್ಛ ನ್ಯಾಯಾಲಯದ ತೀರ್ಪು ನೀರಿನ ಪ್ರಮಾಣವು ೧೪೦ ಟಿ.ಎಂ.ಸಿ. ಮೇಲಿದ್ದರೆ, ೧೪೦ ರ ಮೇಲೆ ಎಷ್ಟು ಹೆಚ್ಚು ಪ್ರಮಾಣವಿದೆಯೋ ಆ ಪ್ರಮಾಣದ ನೀರನ್ನು ಮಾತ್ರ ಕೆ.ಆರ್.ಎಸ್. ಜಲಾಶಯದಿಂದ ಬಿಡಬೇಕಾಗುತ್ತದೆ.

ಮೇಲಿನ ಪ್ರಮಾಣವನ್ನು ಅಭಾವದ ವರ್ಷಗಳಲ್ಲಿ ಅಭಾವ ಉಂಟಾದ ಪ್ರಮಾಣಕ್ಕನುಗುಣವಾಗಿ ಹರಿಸುವ ನೀರಿನ ಪ್ರಮಾಣವನ್ನು ಸೂಕ್ತವಾಗಿ ಕಡಿತಗೊಳಿಸಲಾಗುತ್ತದೆ. ಈ ಆಧಾರದ ಮೇಲೆ ಕೆ.ಆರ್.ಎಸ್. ಜಲಾಶಯದಿಂದ ನೀರನ್ನು ಬಿಡಬೇಕಾಗುತ್ತದೆ ಹಾಗೂ ಇದರ ನಿರ್ವಹಣೆಯನ್ನು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ರಚಿಸಲಾದ "ಉಸ್ತುವಾರಿ ಪ್ರಾಧಿಕಾರ" ನೋಡಿಕೊಳ್ಳ ಬೇಕಾಗುತ್ತದೆ.

ಈ ಅಂಶಗಳನ್ನು ಗಣನೆಗೆ ತೆಗೆದುಕೊಂಡರೆ ಮುಂದೆ ಭವಿಷ್ಯದಲ್ಲಿ ಕರ್ನಾಟಕಕ್ಕೆ ಅಭಾವದ ವರ್ಷಗಳಲ್ಲಿ ಎದುರಾಗುವ ಸಮಸ್ಯೆ ಅನವಶ್ಯಕವಾಗಿ ಒತ್ತಡ ಹೇರುವುದಿಲ್ಲ. ಅಲ್ಲದೆ ಈ ವ್ಯವಸ್ಥೆಯು ಸಂತೃಪ್ತಿಕರವಾಗಿ ನಡೆಯುತ್ತದೆ ಹಾಗೂ ತಮಿಳುನಾಡಿಗೂ ಸಹ ಒಪ್ಪಿಯಾಗಬಹುದೆಂದು ಅಪೇಕ್ಷಿಸಲಾಗಿದೆ.

**೨. ಪ್ರತಿ ರಾಜ್ಯಗಳಿಗೆ ನಿಗದಿಪಡಿಸಲಾದ ಪಾಲನ್ನು ಯೋಜನೆಗನುಸಾರ ಪಾಲು" ಎಂದು ಪರಿಗಣಿಸದೆ " ಒಟ್ಟಾರೆ ಪಾಲು" ಎಂದು ಪರಿಗಣಿಸಬೇಕು.**

ಈ ದೇಶದಲ್ಲಿ ನೀರಿನ ಸಮಸ್ಯೆಗಳಿಗೆ ರಚಿಸಲಾದ ವಿವಿಧ ನ್ಯಾಯಮಂಡಳಿಗಳು ರಾಜ್ಯಗಳಿಗೆ ಒಟ್ಟಾರೆ ಪಾಲು ಎಂದೆ ನಿಗದಿಪಡಿಸಿವೆ. ಹಾಗಾಗಿ ಈ ಅಂಶವನ್ನು ಗಮನದಲ್ಲಿರಿಸಿಕೊಂಡು ಮಾನ್ಯ ಸರ್ವೋಚ್ಚ ನ್ಯಾಯಾಲಯವು ನ್ಯಾಯಸಮ್ಮತವಾದ ನೀರಿನ ಪಾಲನ್ನು ಹಂಚಬೇಕು ಹಾಗೂ ಆ ಪಾಲನ್ನು ಯೋಜನೆಗನುಸಾರ ಪಾಲು ಬದಲು "ಒಟ್ಟಾರೆ ಪಾಲು" ಎಂದು ಹಂಚಬೇಕು ಮತ್ತು ನಿರ್ದೇಶಿಸಬೇಕು.

ಸಂವಿಧಾನದಲ್ಲಿ ನೀರು" ವಿಷಯ ರಾಜ್ಯದ ವಿಷಯವಾಗಿದೆ. ಹಾಗಾಗಿ ರಾಜ್ಯಗಳಿಗೆ ತನ್ನ ಪಾಲಿನ “ನೀರನ್ನು ತನ್ನ ವಿವಿಧ ಯೋಜನೆಗಳಿಗೆ ಬಳಸುವಂತೆ ಅವಕಾಶ ಕಲ್ಪಿಸಿಕೊಡಬೇಕು. ಇದನ್ನು ಪರಿಗಣಿಸಿದಾಗ "ಒಟ್ಟಾರೆ ಪಾಲು" ಹೆಚ್ಚು ನ್ಯಾಯಸಮ್ಮತ ಎನಿಸುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯ ಇದನ್ನು ಪರಿಗಣಿಸಿ ಇದಕ್ಕನುಸಾರವಾಗಿ ತೀರ್ಪು ನೀಡಬೇಕೆಂದು ಆಶಿಸಲಾಗಿದೆ.

**೨೮. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಅಂತಿಮ ಆದೇಶದ ಮೂಲಕ ತೃಪ್ತಿಕರವಾದ ಪರಿಹಾರ ಬಯಸಿರುವ ಜನರ/ಫಲಾನುಭವಿ ರೈತರ/ಪಾಲುದಾರರಲ್ಲಿ ಮೂಡಿರುವ ಹಲವು ಮಹತ್ವದ ವಿಷಯಗಳ ಮೇಲಿನ ಸಂದೇಹಗಳಿಗೆ ಪರಿಹಾರ.**

ಸಿ.ಡಬ್ಲ್ಯೂ.ಡಿ.ಟಿ. ರಚನೆಗೊಂಡ ಕಳೆದ ೧೮ ವರ್ಷಗಳಿಂದಲೂ ಕಾವೇರಿ ನದಿಯಲ್ಲಿ ಗಣನೀಯವಾದ ನೀರು ಹರಿದುಹೋಗಿದೆ ಹಾಗೂ ಕಾಲಕಾಲಕ್ಕೆ ಪ್ರಾಧಿಕಾರಗಳಿಂದ ಸಾಕಷ್ಟು ನಿರ್ಧಾರಗಳು ಹೊರಬಿದ್ದಿವೆ ಮತ್ತು ಜಲಾನಯನ ರಾಜ್ಯಗಳಲ್ಲಿ ಆಡಳಿತಕ್ಕೆ ಧಕ್ಕೆ ತರುವ, ಕಾನೂನು ಸುವ್ಯವಸ್ಥೆಗೆ ಅಡ್ಡಿಯುಂಟಾಗುವ, ತೊಂದರೆ ಉಂಟುಮಾಡುವ ಮತ್ತು ಅಮಾನವೀಯ ಘಟನೆಗಳು ಸಾಕಷ್ಟು ಜರುಗಿವೆ. ಪ್ರಸ್ತುತ

ವ್ಯವಸ್ಥೆಯ ಮೂಲಕ ನೀರಿನ ಸಮಸ್ಯೆ ಇನ್ನೂ ಇತ್ಯರ್ಥವಾಗದೆ ಇರುವುದು ಜನರ/ ರೈತರ/ಪಾಲುದಾರರ ಹಾಗೂ ರಾಜ್ಯ ಸರ್ಕಾರಗಳ ಹಲವಾರು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ. ಅಂತಹ ಕೆಲವು ಅನುಮಾನಗಳನ್ನು ಈ ಕೆಳಗೆ ಉಲ್ಲೇಖಿಸಲಾಗಿದೆ. ಮುಂದೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ ಹೊರಬರಲಿರುವ ಅಂತಿಮ ನಿರ್ಧಾರವು ಈ ಎಲ್ಲಾ ಅನುಮಾನಗಳಿಗೆ ತೃಪ್ತಿದಾಯಕ ಪರಿಹಾರ ನೀಡಬಹುದೆಂದು ಕಳಕಳಿಯಿಂದ ಆಶಿಸಲಾಗಿದೆ.

**೧. ಗಣನೀಯವಾದ ಕಾಲಾವಧಿಯ ಹೊರತಾಗಿಯೂ ಸಮರ್ಪಕ ನ್ಯಾಯ ವಿತರಣೆ ಮಾಡುವಲ್ಲಿ ಸಿ.ಡಬ್ಲ್ಯೂ.ಡಿ.ಟಿ. ವಿಫಲವಾಗಿರುವುದು**

ಜಲಾನಯನ ರಾಜ್ಯಗಳಲ್ಲಿ ನೀರಿನ ಸಮಸ್ಯೆಯನ್ನು ಬಗೆಹರಿಸುವ ದೃಷ್ಟಿಯಿಂದ ಸಿ.ಡಬ್ಲ್ಯೂ.ಡಿ.ಟಿ. ಅನ್ನು ರಚಿಸಲಾಯಿತು. ಅಭಾವದ ವರ್ಷ" ದಲ್ಲಿ ಸಮಸ್ಯೆಯು ಅತಿ ಉಲ್ಬಣವಾಗಿದ್ದು ಸಾಮಾನ್ಯ ವರ್ಷಗಳಲ್ಲಿ ಅಥವಾ ಹೆಚ್ಚಿನ ಮಳೆಯಾದ ವರ್ಷದಲ್ಲಿ ಉದ್ಭವಿಸುವುದಿಲ್ಲ. ಹಾಗಾಗಿ ಸಿ.ಡಬ್ಲ್ಯೂ.ಡಿ.ಟಿ. ಯು ನೇರವಾಗಿ ಸಮಸ್ಯೆಯನ್ನು ಕೈಗೆತ್ತಿಕೊಂಡು "ಅಭಾವದ ವರ್ಷದಲ್ಲಿ" ನ್ಯಾಯಸಮ್ಮತ ನೀರಿನ ಹಂಚಿಕೆಗೆ ಸೂತ್ರವೊಂದನ್ನು ಪರಿಣಾಮಕಾರಿಯಾಗಿ ರೂಪಿಸಬೇಕಾಗಿತ್ತು. ಸಿ.ಡಬ್ಲ್ಯೂ, ಡಿ.ಟಿ. ಯಿಂದ ಇದನ್ನು ಮಾಡಲಾಗದ ಕಾರಣ ಸಮಸ್ಯೆಯು ಸತತವಾಗಿ ೨೦೦೨-೦೩, ೨೦೦೫-೦೬ ಹಾಗೂ ೨೦೦೬-೦೭ ಅಭಾವದ ವರ್ಷಗಳಲ್ಲಿ ಸರ್ವೋಚ್ಚ ನ್ಯಾಯಾಲಯದ ಬಾಗಿಲು ಮುಟ್ಟಿತು. ೧೭ ವರ್ಷಗಳಷ್ಟು ಸುದೀರ್ಘವಾದ ಕಾಲಾವಧಿ ತೆಗೆದುಕೊಂಡರೂ ಸಿ.ಡಬ್ಲ್ಯೂ.ಡಿ.ಟಿ.ಯು ತೃಪ್ತಿಕರವಾದ ಪರಿಹಾರ ನೀಡಲಿಲ್ಲ ಹಾಗೂ ಈ ಮೂಲಕವಾಗಿ ಅದು ಐ.ಎಸ್.ಡಬ್ಲ್ಯೂ.ಡಿ. ಕಾಯ್ದೆಯ ಅನ್ವಯ ತನ್ನ ಕರ್ತವ್ಯ ನಿರ್ವಹಿಸಲು ವಿಫಲವಾಯಿತು. ಇದರಿಂದ ಕಕ್ಷಿದಾರ ರಾಜ್ಯಗಳಿಗೆ ಸಾಕಷ್ಟು ವೆಚ್ಚ ಭರಿಸಬೇಕಾಯಿತು. ಇದು ನ್ಯಾಯವೇ?

**9. ಮೇಲಿಂದ ಮೇಲೆ ಕಕ್ಷಿದಾರ ರಾಜ್ಯಗಳು ಸರ್ವೋಚ್ಚ ನ್ಯಾಯಾಲಯಕ್ಕೆ ಹೋಗಿದ್ದುದರಿಂದ, ಸಮಸ್ಯೆ ಬಗೆಹರಿಸುವ ಏಕಮಾತ್ರ ಉದ್ದೇಶದಿಂದ ರಚಿಸಲಾದ ಜಲವಿವಾದ ನ್ಯಾಯಮಂಡಳಿಯ ಮೂಲ ಉದ್ದೇಶವೇ ದುರ್ಬಲಗೊಂಡಿರುವುದು ಮೇಲ್ನೋಟಕ್ಕೆ ಕಾಣುತ್ತದೆ.**

ಸಿ.ಡಬ್ಲ್ಯೂ.ಡಿ.ಟಿ. ಯು ಮಧ್ಯಂತರ ಆದೇಶ ಹೊರಡಿಸಿದಾಗ, ನ್ಯಾಯ ಮಂಡಳಿಯು ಆ ಆದೇಶ ಅನುಷ್ಠಾನ ವಿಚಾರವಾಗಿ ಯಾವ ಸಮಸ್ಯೆ ತಲೆದೋರಿದರೂ ಅದನ್ನು ಬಗೆಹರಿಸುವ ನಿಟ್ಟಿನಲ್ಲಿ ಜಲಾನಯನ ರಾಜ್ಯಗಳು ನ್ಯಾಯಮಂಡಳಿಗೆ ಮತ್ತೆ ಬರಲು ನಿರ್ದೇಶಿಸಿತ್ತು. ಸಿ.ಡಬ್ಲ್ಯೂ.ಡಿ.ಟಿ. ಯ ಅಂತಹ ಆದೇಶದ ಹೊರತಾಗಿಯೂ, ನ್ಯಾಯಮಂಡಳಿಯು ಸಕ್ರಿಯವಾಗಿ ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿಯೂ ಅಸಮಾಧಾನಗೊಂಡ ರಾಜ್ಯಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯದ ಕದ ತಟ್ಟಿದವು

ಹಾಗೂ ಅವುಗಳಿಗೆ ಪರಿಹಾರಗಳೂ ದೊರಕಿದವು. ಅಸಮಾಧಾನಗೊಂಡ ರಾಜ್ಯಗಳ ಇಂತಹ ಒಂದು ನಡೆಯು ನ್ಯಾಯಮಂಡಳಿಯು ಮುಖ್ಯ ವಿಚಾರಣೆಯನ್ನು ಕೈಗೆತ್ತಿಕೊಳ್ಳುವುದು ದೂರವಾಗುವಂತೆ ಮಾಡಿತು ಹಾಗೂ ಇದು ಕೂಡ ವಿಳಂಬಕ್ಕೆ ಕಾರಣವಾಯಿತು. ಅಲ್ಲದೆ ಆರ್ಟಿಕಲ್ ೧೪೧ ರ ಪ್ರಕಾರ, ಸರ್ವೋಚ್ಛ ನ್ಯಾಯಾಲಯದ ಆದೇಶವೇ ಅಂತಿಮವಾಗಿ ಅನ್ವಯಿಸುವುದರಿಂದ ನ್ಯಾಯಮಂಡಳಿಯು ನಿರಂತರವಾಗಿ ವಿಚಾರಣೆ ನಡೆಸುವಂತಿಲ್ಲ ಹಾಗೂ ಅದು ಸರ್ವೋಚ್ಛ ನ್ಯಾಯಾಲಯದ ನಿಗ್ರಾಣಿಯಲ್ಲಿರುತ್ತದೆ. ಇದರ ಒಟ್ಟಾರೆ ಪರಿಣಾಮ ವೆಂದರೆ ಸಿ.ಡಬ್ಲೂ.ಡಿ.ಟಿ.ಯ ಅಂತಿಮ ಆದೇಶ ಕೇವಲ ವಿಳಂಬವಾಗುವುದು ಮಾತ್ರವಲ್ಲದೆ ಅದರ ಮೂಲ ಉದ್ದೇಶವೇ ದುರ್ಬಲಗೊಳ್ಳುವಂತೆ ಮಾಡಿತು. ಸರ್ವೋಚ್ಛ ನ್ಯಾಯಾಲಯದ ಆದೇಶ ಎಲ್ಲರಿಗೂ ಅನ್ವಯಿಸುವುದರಿಂದ ನ್ಯಾಯಮಂಡಳಿಯು ತನ್ನ ಅಧಿಕಾರದ ಸಮರ್ಪಕ ಉಪಯೋಗವನ್ನು ಮಾಡದಾಯಿತು.

ಮೇಲಿನ ಅಂಶದಿಂದ ಸ್ಪಷ್ಟವಾಗಿ ತಿಳಿಯುವುದೇನೆಂದರೆ ಅಂತರರಾಜ್ಯ ನದಿಗಳ ಜಲ ಹಂಚುವ ಸಮಸ್ಯೆ ಬಗೆಹರಿಸುವ ಏಕಮಾತ್ರ ಉದ್ದೇಶದಿಂದ ರಚಿಸಲಾದ ಜಲವಿವಾದ ನ್ಯಾಯಮಂಡಳಿಯ ಮೂಲ ಉದ್ದೇಶವೇ ದುರ್ಬಲ ಗೊಂಡಿತು. ಐ.ಎಸ್.ಡಬ್ಲ್ಯೂ ಡಿ, ಕಾಯ್ದೆಯ ಸೆಕ್ಷನ್ ೬(೧) ರಲ್ಲಿ ಹೇಳಿರುವಂತೆ ನ್ಯಾಯಮಂಡಳಿಗಳ ತೀರ್ಪು ಸರ್ವೋಚ್ಛ ನ್ಯಾಯಾಲಯದ ಆದೇಶ ಹಾಗೂ ಡಿಗೆ ಸರಿಸಮಾನವಾಗಿರುತ್ತದೆ ಮತ್ತು ಆ ರೀತಿಯ ಯಾವುದೇ ಆದೇಶ ಇನ್ನೂ ನ್ಯಾಯಮಂಡಳಿಯಿಂದ ನೀಡಲಾಗಿಲ್ಲ. ಅಲ್ಲದೆ ಅಸಮಾಧಾನಗೊಂಡ ರಾಜ್ಯಗಳು ಮೇಲಿಂದ ಮೇಲೆ ಸರ್ವೋಚ್ಛ ನ್ಯಾಯಾಲಯದ ಕದ ತಟ್ಟಿರುವುದನ್ನು ಗಮನಿಸಿರುವ ಪಾಲುದಾರರಲ್ಲಿ ನ್ಯಾಯಮಂಡಳಿಯ ಮೂಲ ಉದ್ದೇಶವೇ ದುರ್ಬಲಗೊಂಡಿರುವ ಅನುಮಾನ. ಮೂಡಿರುವುದು ಮೇಲ್ನೋಟಕ್ಕೆ ಕಾಣುತ್ತದೆ.

**೩. ಸೆಕ್ಷನ್ ೫(೨) ರ ಅಡಿಯಲ್ಲಿ ಉದ್ದೇಶಪೂರ್ವಕವಾಗಿ ನೀಡಿದ ಆದೇಶಗಳು ಪ್ರಶ್ನಿಸಲ್ಪಟ್ಟಾಗ ಮಾನ್ಯ ಸರ್ವೋಚ್ಛ ನ್ಯಾಯಾಲಯವು ನೀಡಿದ ಆದೇಶಗಳು ಐ.ಎಸ್.ಡಬ್ಲ್ಯೂ ಡಿ, ಆಕ್ಟ್ ೧೯೫೬ ನ ೫(೩) ರ ಅಡಿಯಲ್ಲಿ ಪೂರ್ವಭಾವಿಯಾಗಿರುತ್ತದೆಯೆ?**

ಐ.ಎಸ್.ಡಬ್ಲ್ಯೂ.ಡಿ. ಕಾಯ್ದೆಯ ಸೆಕ್ಷನ್ ೫(೨) ರ ನಿಬಂಧನೆಯ ಪ್ರಕಾರ, ನ್ಯಾಯಮಂಡಳಿಯು ಅದಕ್ಕೆ ವಹಿಸಲಾದ ವಿಷಯಗಳ ವಿಚಾರಣೆ ನಡೆಸಿ ಸತ್ಯಾಂಶಗಳನ್ನು ಕ್ರೋಢೀಕರಿಸಿ, ತನ್ನ ನಿರ್ಧಾರಗಳನ್ನು ತಿಳಿಸಿರುವ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಮೂರು ವರ್ಷಗಳಲ್ಲಿ ಸಲ್ಲಿಸಬೇಕು. ಮೂರು ವರ್ಷಗಳಲ್ಲಿ ಕೆಲವು ಅನಿವಾರ್ಯ ಕಾರಣಗಳಿಂದಾಗಿ ನಿರ್ಧಾರ ಕೈಗೊಳ್ಳಲು ಸಾಧ್ಯವಾಗದೆ ಹೋದ ಸಂದರ್ಭದಲ್ಲಿ ಆಗ ಕೇಂದ್ರ ಸರ್ಕಾರವು ಎರಡು ವರ್ಷಗಳಿಗೆ ಮೀರದಂತೆ ಹೆಚ್ಚಿನ ಕಾಲಾವಕಾಶವನ್ನು ಒದಗಿಸಬಹುದಾಗಿದೆ.

ಐ.ಎಸ್.ಡಬ್ಲ್ಯೂ.ಡಿ. ಕಾಯ್ದೆ ಸೆಕ್ಷನ್ ೫(೩) ರ ನಿಬಂಧನೆಯ ಪ್ರಕಾರ, ನ್ಯಾಯಮಂಡಳಿಯ ನಿರ್ಧಾರವನ್ನು ಪರಿಗಣಿಸಿಯಾದ ಮೇಲೆ ಒಂದು ವೇಳೆ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಕ್ಕೆ ಅದರ ಆದೇಶದ ಯಾವುದಾದರೂ ನಿರ್ದಿಷ್ಟ ಅಂಶದ ಮೇಲೆ ಹೆಚ್ಚಿನ ವಿವರಣೆ ಬೇಕೆಂಬ ಅಭಿಪ್ರಾಯ ಮೂಡಿದ್ದಲ್ಲಿ ಅಥವಾ ಮೂಲತಃ ನ್ಯಾಯಮಂಡಳಿಗೆ ತಿಳಿಸಲಾಗದ ಯಾವುದಾದರೂ ವಿಷಯದ ಮೇಲೆ ಮಾರ್ಗದರ್ಶನ ಬೇಕಾಗಿದ್ದಲ್ಲಿ ಆದೇಶ ಬಂದ ಮೂರು ತಿಂಗಳುಗಳೊಳಗೆ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರ ಯಾರಿಗೆ ಬೇಕಾಗಿದೆಯೋ ಅವರು ಮತ್ತೆ ನ್ಯಾಯಮಂಡಳಿಯ ಕದ ತಟ್ಟಬಹುದು. ಅಂತಹ ಸಂದರ್ಭದಲ್ಲಿ ನ್ಯಾಯ ಮಂಡಳಿಯು ಒಂದು ವರ್ಷದಲ್ಲಿ ಮಗದೊಂದು ವರದಿಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸುತ್ತದೆ.

ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ನ್ಯಾಯಮಂಡಳಿಗೆ ನೀಡಿರುವ ಒಂದು ವರ್ಷದ ಕಾಲಾವಧಿಯನ್ನು ಪರಿಸ್ಥಿತಿಗಳಿಗನುಸಾರವಾಗಿ ಹೆಚ್ಚಿಸಬಹುದಾಗಿದೆ.

ಮೇಲಿನ ಅಂಶಗಳನ್ನು ಗಮನಿಸಿದಾಗ ಐ.ಎಸ್.ಡಬ್ಲ್ಯೂ.ಡಿ. ಕಾಯ್ದೆಯ ಸೆಕ್ಷನ್ ೫(೨) ರ ಅಡಿಯಲ್ಲಿ ನ್ಯಾಯಮಂಡಳಿಯು ಹೊರಡಿಸುವ ಆದೇಶ ಅಂತಿಮವಲ್ಲ ಎಂದು ತಿಳಿಯುತ್ತದೆ. ಸೆಕ್ಷನ್ ೫(೩) ಅಡಿಯಲ್ಲಿ ರಾಜ್ಯಗಳು ಅಥವಾ ಕೇಂದ್ರ ಸರ್ಕಾರ ಹೆಚ್ಚಿನ ವಿವರಣೆ ಕೋರಿ ಅರ್ಜಿ ಸಲ್ಲಿಸಬಹುದಾಗಿದ್ದು ಅವುಗಳ ವಿಚಾರಣೆ ಹಾಗೂ ಸತ್ಯಶೋಧನೆಗಳು ನ್ಯಾಯಮಂಡಳಿಯ ಮುಂದಿದ್ದು "ಮುಂದಿನ ವರದಿ" ಗಾಗಿ ಕಾಯಬೇಕಾಗುತ್ತದೆ. ಸೆಕ್ಷನ್ ೫(೨) ರ ಅಡಿಯಲ್ಲಿ ನ್ಯಾಯಮಂಡಳಿಯು ನೀಡುವ ಆದೇಶವನ್ನು ಕೇಂದ್ರ ಸರ್ಕಾರವು ತನ್ನ ಗೆಜೆಟ್‌ನಲ್ಲಿ ಪ್ರಕಟಿಸಿದಾಗ ಅದು ಅಂತಿಮವಾಗುತ್ತದೆ ಹಾಗೂ ಐ.ಎಸ್.ಡಬ್ಲೂ.ಡಿ, ಕಾಯ್ದೆಯ ಸೆಕ್ಷನ್ ೬(i) ಪ್ರಕಾರ ಅದನ್ನು ಸರ್ವೋಚ್ಚ ನ್ಯಾಯಾಲಯದ ಆದೇಶ ಮತ್ತು ಡಿಕ್ರೀ ಎಂದು ಪರಿಗಣಿಸಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ ಪಾರ್ಟಿಗಳಿಗೆ ಸೆಕ್ಷನ್ ೫(೩) ರಂತೆ ಅವಕಾಶ ಸಿಗುವುದಿಲ್ಲ ಹಾಗೂ ಈ ಮೂಲಕ ಅವರು ಸ್ವಾಭಾವಿಕ ನ್ಯಾಯದಿಂದ ವಂಚಿತರಾಗುತ್ತಾರೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಇಂತಹ ಕ್ರಮಗಳು ಸೆಕ್ಷನ್ ೫(೨) ಮತ್ತು ೫(೩) ಗಳ ಸಂಯೋಜಿತ ನಿರ್ಧಾರವಾಗುವುದಿಲ್ಲವೆ?

ಮೇಲಿನ ಅಂಶವು ಸರಿ ಹಾಗೂ ಕಾನೂನಾತ್ಮಕವಾಗಿವೆಯೇ? ಏಕೆಂದರೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಧಾರಗಳಿಂದ ಹಿಡಿದು ಸೆಕ್ಷನ್ ೫(೨) ಅಡಿಯಲ್ಲಿ ನೀಡಲಾದ ನ್ಯಾಯಮಂಡಳಿಯ ಆದೇಶವನ್ನು ಕೇಂದ್ರ ಸರ್ಕಾರದ ಗೆಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಏಕೆಂದರೆ ೫(೨) ರಲ್ಲಿ ನೀಡಲಾದ ಆದೇಶ ಗೆಜೆಟ್ ನಲ್ಲಿ ಪ್ರಕಟಿಸಬಹುದಾಗಿದ್ದು ಅದೇ ಅಂತಿಮ ಎಂದೆನಿಸಿಕೊಂಡುಬಿಡುತ್ತದೆ. ಬದಲಾಗಿ ಸೆಕ್ಷನ್ ೫(೩) ಅಡಿಯಲ್ಲಿ ನೀಡುವ "ಮುಂದಿನ ವರದಿ" ಯನ್ನು ಗೆಜೆಟ್‌ನಲ್ಲಿ ಪ್ರಕಟಿಸುವಂತಾಗಬೇಕು ಮತ್ತು ಸೆಕ್ಷನ್ ೬(೨) ರ ಪ್ರಕಾರ ಭಾರತ ಸರ್ಕಾರಕ್ಕೆ

ಕಾಯ್ದೆಯ ಸೆಕ್ಷನ್ ೬(A) ಅಡಿಯಲ್ಲಿ ನ್ಯಾಯಮಂಡಳಿಯ ನಿರ್ಧಾರಕ್ಕೆ ಪರಿಣಾಮ ನೀಡುವ ಹಾಗೂ ಅನುಷ್ಠಾನಗೊಳಿಸಲು ಅನುಕೂಲವಾಗುವಂತೆ ಯೋಜನೆ ಅಥವಾ ಯೋಜನೆಗಳನ್ನು ರೂಪಿಸುವ ಅಧಿಕಾರವನ್ನು ನೀಡಬೇಕಾಗಿದೆ.

**೪. ಅಂತರರಾಜ್ಯ ನದಿ ವಿವಾದಕ್ಕೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದಿಂದ ನ್ಯಾಯದ ಶೀಘ್ರ ವಿತರಣೆ.**

ರಾಜ್ಯಗಳ ಮಧ್ಯೆ ನೀರಿಗೆ ಸಂಬಂಧಿಸಿದಂತೆ ವಿವಾದಗಳು ಬಹು ಸೂಕ್ಷ್ಮವಾಗಿರುತ್ತವೆ. ಭಾರತ ಸರ್ಕಾರಕ್ಕೆ ಸಿ.ಡಬ್ಲ್ಯೂ.ಡಿ.ಟಿ. ಯನ್ನು ರಚಿಸುವಂತೆ ನಿರ್ದೇಶನ ನೀಡುತ್ತಿದ್ದಾಗ ಅಂದಿನ ಭಾರತದ ಮುಖ್ಯ ನ್ಯಾಯಾಧೀಶರಾದ ಶ್ರೀ ರಂಗನಾಥ್ ಮಿಶ್ರಾ ಅವರು ಈ ರೀತಿಯಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು: "ಈ ರೀತಿಯ ವಿವಾದಗಳು ತಪ್ಪಿಸಬಹುದಾದ ಎರಡು ರಾಜ್ಯಗಳ ಮಧ್ಯದ ಜನರಲ್ಲಿ ಕಹಿಯಾದ ಭಾವನೆಗಳನ್ನು ಸೃಷ್ಟಿಸುವ ಗುಣ ಹೊಂದಿವೆ. ವಿವಾದಗಳು ಬಗೆ ಹರಿಯದೆ ಎಷ್ಟು ದೀರ್ಘ ಮುಂದುವರೆಯುತ್ತವೋ ಅಷ್ಟೇ ಕಹಿ ಭಾವನೆ ಹೆಚ್ಚುತ್ತದೆ. ಎಲ್ಲಾ ರಾಜ್ಯಗಳಿಗೆ ಪೋಷಕನಂತಿರುವ ಕೇಂದ್ರ ಸರ್ಕಾರವು ಇಂತಹ ಪರಿಸ್ಥಿತಿಗಳನ್ನು ತಪ್ಪಿಸಲು ಪ್ರಯತ್ನಿಸಬೇಕು. ಸಾಂವಿಧಾನಿಕವಾಗಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಮುಂದಾಗಬೇಕು. ಅದೃಷ್ಟವಶಾತ್, ಲೋಕಸಭೆಯು ಜಾರಿಗೊಳಿಸಿರುವ ಕಾನೂನಿನಿಂದಾಗಿ ಕೇಂದ್ರ ಸರ್ಕಾರ ಇಂತಹ ವಿವಾದಗಳನ್ನು ನಿಷ್ಪಕ್ಷಪಾತದ ನ್ಯಾಯಮಂಡಳಿಗಳಿಗೆ ವಹಿಸುವುದರ ಮೂಲಕ ಪರಿಣಾಮಕಾರಿಯಾಗಿ ಪರಿಹರಿಸುವಂತಹ ಅಧಿಕಾರ ಸಿಕ್ಕಿದೆ. ಹಾಗಾಗಿ ವಿವಾದಗಳೆದ್ದಾಗ ಸಂಬಂಧಿಸಿದ ಪ್ರಾಧಿಕಾರದಿಂದ ಒದಗಿಸಲಾದ ಕಾನೂನು ನಿರ್ವಹಣೆ ವ್ಯವಸ್ಥೆಯನ್ನು ಚಾಲ್ತಿಯಲ್ಲಿಡುವುದು ಅವಶ್ಯಕವಾಗಿದೆ. ಪ್ರತ್ಯೇಕ ವ್ಯಕ್ತಿಯೊಬ್ಬನಿಗೆ ಸತ್ಯವಾಗಿರುವ ಅಂಶವು ಬಹುಶಃ ದೇಶಕ್ಕೆ ಇನ್ನೂ ಹೆಚ್ಚು ಸತ್ಯವಾಗಿರಬಹುದು".

ಸಿ.ಡಬ್ಲ್ಯೂ.ಡಿ.ಟಿ.ಯು ೫.೨.೨೦೦೭ ರಂದು ತನ್ನ ಅಂತಿಮ ಆದೇಶ ನೀಡಿತು. ಮೂರು ಜಲಾನಯನ ರಾಜ್ಯಗಳು ಏಪ್ರಿಲ್-ಮೇ-೨೦೦೭ ರಂದು ಎಸ್.ಎಲ್.ಪಿ. ಗಳನ್ನು ಸಲ್ಲಿಸಿದವು. ಆವಾಗಾವಾಗ ಅಸಮಾಧಾನಗೊಂಡ ರಾಜ್ಯದಿಂದ ಐ.ಎ. ಗಳು ಸಲ್ಲಿಕೆಯಾದಾಗ ಅವುಗಳನ್ನು ಪರಿಗಣಿಸಿ ಸರ್ವೋಚ್ಚ ನ್ಯಾಯಾಲಯವು ಸೂಕ್ತವಾದ ಆದೇಶಗಳನ್ನು ನೀಡಿದೆ. ಕಳೆದ ೧೦ ವರ್ಷಗಳಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಮುಖ್ಯ ಎಸ್.ಎಲ್.ಪಿ. ಗಳನ್ನು ವಿಚಾರಣೆಗೆ ತೆಗೆದುಕೊಂಡಿಲ್ಲ. ಈ ಹತ್ತು ವರ್ಷಗಳ ಸಮಯದಲ್ಲಿ ಕಾವೇರಿ ಜಲಾನಯನ ಪ್ರದೇಶದಲ್ಲಿ ಮಾನ್ಸೂನ್ ಗಳ ತೀವ್ರ ಕೊರತೆಯಿಂದಾಗಿ ಪರಿಸ್ಥಿತಿಯು ವಿಕೋಪಕ್ಕೆ ಹೋಗಿತ್ತು ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಪರಿಸ್ಥಿತಿಯಲ್ಲಿ ಪ್ರವೇಶಿಸುವುದು ಅನಿವಾರ್ಯವಾಗಿತ್ತು. ಕಾವೇರಿ ನ್ಯಾಯಮಂಡಳಿಯ ರಚನೆ ಮಾಡುವಂತೆ ನೀಡಿದ ಆದೇಶದ ಸಂದರ್ಭದಲ್ಲಿ ಅಂದಿನ ಭಾರತದ ಮುಖ್ಯ ನ್ಯಾಯಾಧೀಶರಾದ ಶ್ರೀ ರಂಗನಾಥ್ ಮಿಶ್ರಾರವರು ಮುಂಚಿತವಾಗಿಯೇ ಎಸ್.ಎಲ್.ಪಿ.

ಗಳ ವಿಚಾರಣೆ ನಡೆಸಿದ್ದರೆ ಅನುಕೂಲವಾಗುತ್ತಿತ್ತು. ಎಸ್.ಎಲ್.ಪಿ. ಗಳ ಮೂಲಕ ಅಸಮಾಧಾನ ಗೊಂಡ ರಾಜ್ಯಗಳು ನ್ಯಾಯಾಲಯಗಳ ಗಮನ ಸೆಳೆದಾಗ ಅದಕ್ಕೆ ಸಂಬಂಧಿಸಿದಂತೆ ನೀರಿನ ಸೂಕ್ಷ್ಮ ಸಮಸ್ಯೆಗಳಿಗೆ ಉನ್ನತ ನ್ಯಾಯ ವ್ಯವಸ್ಥೆಯು ಮೊದಲ ಆದ್ಯತೆ ನೀಡಬೇಕಾಗುತ್ತದೆ.

"ಕೊರತೆ ವರ್ಷ" ದಲ್ಲಿ ನೀರಿನ ಸಮಸ್ಯೆಯನ್ನು ಬಗೆಹರಿಸಲು ಅನುಸರಿಸ ಲಾಗುವ "ಪರ್ಯಾಯ ಕ್ರಮವು ಅಸಮಾಧಾನ ಪಕ್ಷಗಳು ಪರಿಹಾರಕ್ಕಾಗಿ ಮಾನ್ಯ ಸರ್ವೋಚ್ಚ ನ್ಯಾಯಾಲಯಕ್ಕೆ ಹೋದಾಗ ಹಾಗೂ ನ್ಯಾಯಾಲಯದಿಂದ ರಚಿಸಲಾದ ನ್ಯಾಯಮಂಡಳಿಯಿಂದ ಪರಿಗಣಿಸಲಾಗಿರಬೇಕು. ಅಂತಹ ಪರ್ಯಾಯ ಕ್ರಮವು "ಪರಿಹಾರ" ದ ರೂಪದಲ್ಲಿ ಪೀಡಿತ ರಾಜ್ಯಕ್ಕೆ ಹಣ ಸಹಾಯ ಒದಗಿಸುವುದೂ ಆಗಬಹು ದಾಗಿದೆ. ಭಾರತ ಸರ್ಕಾರವು ಪ್ರತ್ಯೇಕವಾದ 'ಪ್ರಕೃತಿ ವಿಕೋಪ ನಿಧಿ" ಯನ್ನು ಹೊಂದಿದೆ. ಆ ನಿಧಿಯ ಹಣವನ್ನೇ ಸೈಕ್ಲೋನ್, ಭೂಕಂಪ, ಪ್ರವಾಹ ಹಾಗೂ ಬರಪೀಡಿತ ರಾಜ್ಯಗಳಿಗೆ ಹಣ ನೀಡಲು ಬಳಸಲಾಗುತ್ತದೆ. ಪರಿಹಾರ ನೀಡುವ ಈ ಪಟ್ಟಿಯಲ್ಲಿ ಮಳೆ ಕೊರತೆಯಿಂದ ಬಳಲುತ್ತಿರುವ ರಾಜ್ಯಗಳಿಗೆ ಹಣ ಸಹಾಯ ಮಾಡುವಂತೆ ಸೂಕ್ತವಾದ ನಿಯಮಗಳನ್ನು ರೂಪಿಸಬೇಕು. ಕಡಿಮೆ ಮಳೆಗಳ ವರ್ಷಗಳಲ್ಲಿ ಸಮಸ್ಯೆಯನ್ನು ಸ್ನೇಹಪರವಾಗಿ ಬಗೆಹರಿಸಲು ಇದೊಂದು ಹೊಸ ಮಾರ್ಗವೆಂದು ಹೇಳಬಹುದು ಹಾಗೂ ಈ ಅಭಾವ ವರ್ಷಗಳು ಕಾವೇರಿ ಜಲಾನಯನದಲ್ಲಿ ಹೆಚ್ಚಾಗಿ ಕಂಡುಬರುತ್ತವೆ.

**೫. ಶೀಘ್ರ ನಿರ್ಧಾರಕ್ಕಾಗಿ ಐ.ಎಸ್.ಡಬ್ಲ್ಯೂ.ಡಿ, ಕಾಯ್ದೆ ಹಾಗೂ ನಿಯಮಗಳಲ್ಲಿ ತಿದ್ದುಪಡಿಗಳ ಅವಶ್ಯಕತೆ,**

ಐ.ಎಸ್.ಡಬ್ಲ್ಯೂ.ಡಿ. ಕಾಯ್ದೆ ಹಾಗೂ ನಿಯಮಗಳಲ್ಲಿ ಮೊದಲಿನಿಂದಲೂ ಅಂತರ ಲೋಪಗಳಿರುವುದರಿಂದ ನದಿ ನೀರು ವಿವಾದಗಳು ಅನವಶ್ಯಕವಾಗಿ ದೀರ್ಘ ಸಮಯವನ್ನು ತೆಗೆದುಕೊಳ್ಳುತ್ತಿವೆ, ಏಕೆಂದರೆ ಅಂತಹ ಸಮಸ್ಯೆಗಳ ಬಗೆಹರಿಯುವಿಕೆಗೆ ಮಿತಿ ಇರುವ ಕಾಲಾವಕಾಶ ನೀಡಲಾಗಿದೆ. ತಿದ್ದುಪಡಿ ತರಬೇಕಾಗಿರುವ ಅಂಶಗಳು ಈ ಕೆಳಗಿನಂತಿವೆ.

* ನ್ಯಾಯಮಂಡಳಿಯ ಸದಸ್ಯರು ಸೇವೆಯಲ್ಲಿರುವವರು ಸರ್ವೋಚ್ಚ ನ್ಯಾಯಾಲಯದಲ್ಲಿ ನಿವೃತ್ತರಾದವರು/ ಹೈಕೋರ್ಟ್ ನ್ಯಾಯಾಧೀಶರು, ನಿವೃತ್ತ ನ್ಯಾಯಾಧೀಶರನ್ನು ಸದಸ್ಯರನ್ನಾಗಿ ನೇಮಕ ಮಾಡುವುದು ಅಫಲದಾಯಕ ವಾಗಿದೆ. ಏಕೆಂದರೆ, ಅವರು ತಮ್ಮ "ಪೂರ್ಣ ಆಸಕ್ತಿ" ಯನ್ನು ಕಳೆದು ಕೊಂಡಿರುತ್ತಾರೆ ಹಾಗೂ ಸಕ್ರಿಯವಾಗಿ ಪಾಲ್ಗೊಳ್ಳುವುದಿಲ್ಲ.

* ಸಾಮಾನ್ಯವಾಗಿ ನ್ಯಾಯಮಂಡಳಿಯ ಕೇಂದ್ರ ಕಚೇರಿಯನ್ನು ನವದೆಹಲಿಯಲ್ಲಿ ಸ್ಥಾಪಿಸುವುದು. ಈ ನಿಯಮವು ಬದಲಾಗಬೇಕಿದ್ದು ನ್ಯಾಯಮಂಡಳಿಯ ಸಮರ್ಪಕ ಕೆಲಸಕ್ಕೆ ಅನುವು ಆಗುವಂತೆ ಅದನ್ನು ಜಲಾನಯನ ಪ್ರದೇಶದಲ್ಲೇ ಸ್ಥಾಪಿಸಬೇಕು.

* ನ್ಯಾಯಮಂಡಳಿಗಳು ನಿರಂತರವಾಗಿ ಕುಳಿತು ಎಲ್ಲ ವಾದ-ಪ್ರತಿವಾದಗಳನ್ನು ಆಲಿಸಬೇಕು, ಇದರಿಂದ ಸಮಯಕ್ಕೆ ಸರಿಯಾಗಿ ತೀರ್ಪು ನೀಡಲು ಸಹಾಯವಾಗುತ್ತದೆ. ಇದರ ಗರಿಷ್ಠ ಮಿತಿ ೫ ವರ್ಷಗಳು ಎಂದಿಗೂ ಹೆಚ್ಚಾಗುವಂತಿರಬೇಕು.

* ನ್ಯಾಯಮಂಡಳಿಯ ಮುಂದೆ ಸೂಕ್ಷ್ಮ ವಿಚಾರಗಳನ್ನು ಎತ್ತಿದಾಗ ಕಾಯ್ದೆ ಹೇಗಿರಬೇಕೆಂದರೆ ಆ ಮಂಡಳಿಯ ಸದಸ್ಯರುಗಳು ಮಾತ್ರವೇ ಅದನ್ನು ಅವಲೋಕಿಸಿ ಸ್ಥಳ ಪರಿಶೀಲಿಸಿ ತಮ್ಮ ನಿರ್ಧಾರ ಹೇಳಬೇಕೆ ಹೊರತು ನ್ಯಾಯಮಂಡಳಿ ನೇಮಕ ಮಾಡಿದ ಅಧಿಕಾರಿಗಳ ವರದಿಯಿಂದಲ್ಲ.

* ರಾಜ್ಯ ಸರ್ಕಾರಗಳು ನ್ಯಾಯಮಂಡಳಿಗಳೊಂದಿಗೆ ಸಂಪೂರ್ಣ ಹಾಗೂ ನಿರಂತರ ಸಮಯ ನೀಡಿ ಸಹಕರಿಸುವಂತಹ ವಕೀಲರನ್ನು ನೇಮಕ ಮಾಡಿಕೊಳ್ಳಬೇಕು.

* ರಾಜಕೀಯ ಪಕ್ಷಗಳು ಸಹಕಾರದ ಮೂಲಕ ಸಮಸ್ಯೆಯ ನಿವಾರಣೆಗೆ ಇಚ್ಛಾಶಕ್ತಿಯಿಂದ ಪ್ರಯತ್ನಿಸಬೇಕು.

* ಭಾರತ ಸರ್ಕಾರ/ರಾಜ್ಯ ಸರ್ಕಾರ ನ್ಯಾಯಮಂಡಳಿಗೆ ೧-೨ ತಿಂಗಳುಗಳಲ್ಲಿ ಅದಕ್ಕೆ ಬೇಕಾದ ಎಲ್ಲ ಮೂಲಸೌಲಭ್ಯಗಳನ್ನು ಒದಗಿಸಬೇಕು.

* ವಿಚಾರಣೆಗಳನ್ನು ನಡೆಸುವಿಕೆಗೆ ಕಾರಣರಾದ ಸಂಬಂಧಿಸಿದವರೆಲ್ಲರ ಮೇಲೆ ಅವರುಗಳಿಂದ ವಿಳಂಬವಾದಲ್ಲಿ ಅವರ ಆರ್‌ಬಿಟ್ರೇಷನ್ ಕಾಯ್ದೆಯಲ್ಲಿರುವಂತೆ ಭಾರಿ ದಂಡ ವಿಧಿಸುವಂತಹ ಅವಕಾಶವುಳ್ಳ ನಿಬಂಧನೆಯನ್ನು ಐ.ಎಸ್. ಡಬ್ಲ್ಯೂ.ಡಿ, ಕಾಯ್ದೆಯಲ್ಲಿ ಅಳವಡಿಸಿಕೊಳ್ಳಬಹುದಾಗಿದೆ.

**೬. ಜಲವಿವಾದದ ಪರಿಮಿತಿ ಹಾಗೂ ವ್ಯಾಪ್ತಿಯ ಪರಿಗಣನೆ, ಇನ್ನೂ ಹೆಚ್ಚಿನ ಪರಿಣಿತರ ಸಹಾಯದ ಅವಶ್ಯಕತೆ ಇದೆಯೆ? ಸಂಪೂರ್ಣವಾಗಿ ನೀರಿನ ಸಮಸ್ಯೆ ಬಗೆಹರಿಸಲು ಸರ್ವೋಚ್ಚ ನ್ಯಾಯಾಲಯದಿಂದ ಕೇಂದ್ರ ಅಧಿಕಾರ ಸಮಿತಿ (ಸಿ.ಇ.ಸಿ.) ರಚನೆಗೆ ಯೋಗ್ಯವೆ?**

ಜಲವಿವಾದ ಬಗೆಹರಿಸಲು ಐ.ಎಸ್.ಡಬ್ಲ್ಯೂ.ಡಿ. ಕಾಯ್ದೆಯು ೨ ಅಥವಾ ಅದಕ್ಕಿಂತ ಹೆಚ್ಚು ಮೌಲ್ಯಮಾಪಕರ ನೇಮಕಾತಿಗೆ ಅವಕಾಶ ಕಲ್ಪಿಸಿದೆ. ಏಕೆಂದರೆ, ಈ ಸಮಸ್ಯೆಗಳು ಸಾಕಷ್ಟು ತಾಂತ್ರಿಕ ಅಂಶಗಳಿಂದ ಕೂಡಿರುತ್ತವೆ. ಪ್ರಸ್ತುತ ಸಮಸ್ಯೆಯಲ್ಲಿ ನ್ಯಾಯಮಂಡಳಿಯ ಇಬ್ಬರು ಸದಸ್ಯರು, ಮೌಲ್ಯಮಾಪಕರು ನೀಡಿದ್ದ ತಮಿಳುನಾಡಿಗೆ

ಬೇಕಾದ ಬೆಳೆ ನೀರಿನ ಅವಶ್ಯಕತೆಯ ಪ್ರಮಾಣದ ವರದಿಗೆ ತಮ್ಮ ಅಡ್ಡಿ ವ್ಯಕ್ತಪಡಿಸಿದ್ದರು. ಏಕೆಂದರೆ ಅವರು ಕೃಷಿ ತಜ್ಞರಲ್ಲ ಹಾಗೂ ಬೆಳೆ ನೀರಿನ ಅವಶ್ಯಕತೆಯನ್ನು ಲೆಕ್ಕ



ಹಾಕುವಲ್ಲಿ ಪರಿಣಿತಿಯನ್ನೂ ಪಡೆದಿಲ್ಲ. ಹಾಗಾಗಿ ಅವರು. ಇಬ್ಬರು ಕೃಷಿ ತಜ್ಞರು, ಇಬ್ಬರು ಮೌಲ್ಯಮಾಪಕರು ಹಾಗೂ ಒಬ್ಬ ಪವನಶಾಸ್ತ್ರಜ್ಞರನ್ನೊಳಗೊಂಡ ಪರಿಣಿತ ಸಮಿತಿ ರಚಿಸಲು ಸಲಹೆ ನೀಡಿರುತ್ತಾರೆ.

ಕಾವೇರಿ ನೀರು ವಿವಾದ ಬಗೆಹರಿಸಲು ಈ ಎಲ್ಲ ಬೆಳವಣಿಗೆಗಳನ್ನು ಪರಿಗಣಿಸಿರುವ ಪ್ರಸ್ತುತ ನ್ಯಾಯಪೀಠವು ಮುಖ್ಯ ನ್ಯಾಯಾಧೀಶ ದೀಪಕ್ ಮಿಶ್ರಾ ಅವರ ಅಧ್ಯಕ್ಷತೆಯಲ್ಲಿ ಎಸ್.ಎಲ್.ಪಿ. ಗಳನ್ನು ಪರೀಕ್ಷಿಸುತ್ತಿದ್ದು ಎಲ್ಲ ಮೂರು ಜಲಾನಯನ ರಾಜ್ಯಗಳು ಮಂಡಿಸಿರುವ ವಾದಗಳನ್ನು ಆಲಿಸಿದೆ. ಈ ವಾದಗಳು ಸಾಕಷ್ಟು ತಾಂತ್ರಿಕ ವಿಷಯಗಳಾದಂತಹ ಬೆಳೆ ನೀರಿನ ಅವಶ್ಯಕತೆ, ಅಂತರ್ಜಲದ ಪರಿಶೀಲನೆ, ಕುಡಿಯುವ ನೀರಿನ ಅವಶ್ಯಕತೆ, ಮಣ್ಣಿನ ಸ್ಥಿತಿ, ಆವಿಯಾಗುವಿಕೆ, ಬೆಳೆಯ ಸಮಯ, ಹವಾಮಾನ ವಿಷಯಗಳಿಗೆ ಸಂಬಂಧಿಸಿದ ಅಂಶಗಳು ಹೀಗೆ ಹಲವು ವಿಷಯಗಳನ್ನೊಳಗೊಂಡಿದೆ. ಹಾಗಾಗಿ ಸರ್ವೋಚ್ಚ ನ್ಯಾಯಾಲಯವು ವಿಷಯ ತಜ್ಞರ ಸಹಾಯವಿಲ್ಲದೆ ಹೇಗೆ ಇದನ್ನು ಪರಿಶೀಲಿಸಲಿದೆ ಎಂದು ಉತ್ಸುಕತೆಯಿಂದ ಜನರು/ರೈತರು/ಪಾಲುದಾರರು ಕಾದು ನೋಡುತ್ತಿದ್ದಾರೆ.

ತಾಂತ್ರಿಕ ಪರಿಣಿತರ ಸಹಾಯ ಇಲ್ಲದೆ ಹೋದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಪ್ರತಿ ರಾಜ್ಯದ ವಕೀಲರ ಹೇಳಿಕೆಯನ್ನು ಅವಲಂಬಿಸಬೇಕಾಗುತ್ತದೆ. ಮತ್ತೆ ಅದು ಈ ಹಿಂದೆ ಸಿ.ಡಬ್ಲ್ಯೂ.ಡಿ.ಟಿ. ಅಥವಾ ಸರ್ವೋಚ್ಚ ನ್ಯಾಯಾಲಯದ ಮುಂದೆ ಸಲ್ಲಿಸಲಾಗಿರುವ ವರದಿಯೇ ಆಗಿದೆ. ಇದು ರಾಜ್ಯಗಳು ತಮ್ಮ ವಾದದ ಪುಷ್ಟಿಗೆ ಮಾಡಿದ "ಸ್ವಂತ ಬೆಂಬಲ ಹೇಳಿಕೆಗಳು" ಆಗಿ ಕಾಣುತ್ತವೆಯೇ ಹೊರತು ಪರಿಣಿತರ ಅಭಿಪ್ರಾಯವಾಗುವುದಿಲ್ಲ.

ಸಾಮಾನ್ಯವಾಗಿ ಇಂತಹ ಕ್ಲಿಷ್ಟಕರ ಪರಿಸ್ಥಿತಿಗಳು ಬಂದಾಗ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಕೇಂದ್ರ ಅಧಿಕಾರ ಸಮಿತಿ (ಸಿ.ಇ.ಸಿ.) ನೇಮಕ ಮಾಡುವುದನ್ನು ನೋಡಲಾಗಿದೆ. ಇದು ಪರಿಣಿತ ತಜ್ಞರನ್ನು ಒಳಗೊಂಡಿರುತ್ತದೆ. ಆದರೆ ಪ್ರಸ್ತುತ ಪ್ರಕರಣದಲ್ಲಿ ಸಿ.ಇ.ಸಿ. ಸಹಾಯ ಸಿಗುವುದು ಕಷ್ಟಕರವಾಗಿದೆ. ಹಾಗಾಗಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ನೀಡುವ ಆದೇಶವನ್ನು ಅಸಮಾಧಾನಗೊಂಡ ರಾಜ್ಯಗಳು ಮತ್ತೆ ನ್ಯಾಯಾಲಯದ ಪರಿಶೀಲನೆಗೆ ಹಾಕುವ ಸಂದರ್ಭ ದಟ್ಟವಾಗಿದೆ. ಹೀಗಾದಲ್ಲಿ ಈ ಪ್ರಕರಣ ಇತ್ಯರ್ಥಗೊಳ್ಳದೆ ರೈತರ/ಜನರ/ಪಾಲುದಾರರ ಸಂಕಷ್ಟ ಮುಂದುವರಿಯುತ್ತದೆ. ಹಾಗಾಗಿ ಇದು ಮಾನ್ಯ ಸರ್ವೋಚ್ಚ ನ್ಯಾಯಾಲಯ ಗಮನ ಹರಿಸಬೇಕಾದ ಅತಿ ಗಂಭೀರ ಸಮಸ್ಯೆಯಾಗಿದೆ ಎಂದು ಭಾವಿಸಲಾಗಿದೆ.

೧೮. **ನಿರೀಕ್ಷಿತ ಸರ್ವೋಚ್ಚ ನ್ಯಾಯಾಲಯದ ಆದೇಶದ ಯಶಸ್ವೀ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರಗಳು, ಪಾಲುದಾರರು ಮತ್ತು ಕಾವೇರಿ ಜಲಾನಯನ ಪ್ರದೇಶದ ಪ್ರತಿಯೊಬ್ಬರೂ ಕೈಗೊಳ್ಳಬೇಕಾದ ಕ್ರಮ :**



ಘನ ಸರ್ವೋಚ್ಚ ನ್ಯಾಯಾಲಯವು ಐ. ಎಸ್. ಡಬ್ಲ್ಯೂ, ಡಿ. ಕಾಯಿದೆಯ ಪರಿಚ್ಛೇದ ೫(೨) ಅಡಿಯಲ್ಲಿ ಸಿ.ಡಬ್ಲ್ಯೂ.ಡಿ.ಟಿ. ನೀಡಿದ ಅಂತಿಮ ಆದೇಶದ ಮೇಲೆ ಕರ್ನಾಟಕ, ತಮಿಳುನಾಡು ಮತ್ತು ಕೇರಳ ರಾಜ್ಯಗಳು ಸಲ್ಲಿಸಿದ ಎಸ್. ಎಲ್. ಪಿ. ಮೇಲಿನ ತನ್ನ ಆದೇಶವನ್ನು ಕಾಯ್ದಿರಿಸಿಕೊಂಡಿದೆ. ಘನ ಸರ್ವೋಚ್ಚ ನ್ಯಾಯಾಲಯದ ನಿರ್ಧಾರ ಯಾವುದೇ ಸಮಯದಲ್ಲಿ ಬರಬಹುದು. ಆದ್ದರಿಂದ ನಿರೀಕ್ಷಿತ ಸರ್ವೋಚ್ಚ ನ್ಯಾಯಾಲಯದ ಆದೇಶದ ಯಶಸ್ವೀ ಅನುಷ್ಠಾನಕ್ಕಾಗಿ ರಾಜ್ಯ ಸರ್ಕಾರಗಳು, ಪಾಲುದಾರರು ಮತ್ತು ಕಾವೇರಿ ಜಲಾನಯನ ಪ್ರದೇಶದ ಪ್ರತಿಯೊಬ್ಬರೂ ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಲು ಸಿದ್ಧರಾಗಬೇಕಿದೆ:

ಎ. ಕಾವೇರಿ ಕಣಿವೆಯ ಎಲ್ಲಾ ರಾಜ್ಯಗಳು ಲಾಗಾಯ್ತಿನಿಂದ ನಡೆಸಿಕೊಂಡು ಬರುತ್ತಿರುವ ಆಡಳಿತ ಮತ್ತು ನೀರು ನಿರ್ವಹಣೆಗಳನ್ನು ಸರ್ವೋಚ್ಚ ನ್ಯಾಯಾಲಯ ತಾನು ಪ್ರಕಟಿಸಲಿರುವ ಆದೇಶದಲ್ಲಿ ಹೆಸರಿಸಬಹುದಾದ 'ನಿಯಂತ್ರಣಾ ಪ್ರಾಧಿಕಾರ ಮತ್ತು 'ನೀರು ನಿರ್ವಹಣಾ ಸಮಿತಿ' ಗಳ ನಿರ್ದೇಶನಗಳಿಗೆ ಅನುಸಾರವಾಗಿ ತಮ್ಮ ನೀರು ನಿರ್ವಹಣೆ ಮತ್ತು ಮೇಲ್ವಿಚಾರಣೆಗಳನ್ನು ಬದಲಾಯಿಸಿಕೊಳ್ಳಲು ಸಿದ್ಧವಾಗಿರಬೇಕಾಗುತ್ತದೆ.

ಬಿ. ಭತ್ತ, ಕಬ್ಬು, ಬಾಳೆ ಮುಂತಾದ ಹೆಚ್ಚು ನೀರು ಬಳಸಬೇಕಾದ ಬೆಳೆಗಳಿಗೆ 'ಅತ್ಯುತ್ಕೃಷ್ಟ ಗುಣಮಟ್ಟದ ತಂತ್ರಜ್ಞಾನ'ವನ್ನು ಅಳವಡಿಸಿಕೊಂಡು 'ಹಾಲಿ ಇರುವ ಬೆಳೆ ನಮೂನೆ'ಯನ್ನು 'ಮೈಕ್ರೋ ನೀರಾವರಿ, ಹನಿ ನೀರಾವರಿ, ಸಿಂಪರಣೆ ನೀರಾವರಿ' ಮುಂತಾದ 'ಕಡಿಮೆ ನೀರಿನಲ್ಲಿ ಬೆಳೆಯಬಹುದಾದ (ಲೆಸ್ ವಾಟರ್ ಇಂಟೆನ್ಸಿವ್) ಬೆಳೆ'ಗಳಿಗೆ ಅನುಸಾರವಾಗಿ ಮಾರ್ಪಡಿಸಿ ಕೊಳ್ಳಬೇಕಾಗುತ್ತದೆ. ಈ ಪ್ರಯತ್ನದಲ್ಲಿ ರಾಜ್ಯ ಸರ್ಕಾರಗಳು ಅಗತ್ಯವಿರುವ ಹಣಕಾಸು ನೆರವನ್ನು ಎಲ್ಲಾ ಪಾಲುದಾರರಿಗೆ ನೀಡಬೇಕಾಗುತ್ತದೆ.

ಸಿ. ಯೋಜನೆಯ ಬಂಡವಾಳ ಹಾಗೂ ಓ ಅಂಡ್ ಎಂ ವೆಚ್ಚಗಳನ್ನು ಹಂಚಿಕೊಳ್ಳುವ ಸಂಬಂಧ 'ಫಲಾನುಭವಿಗಳ ಪಾತ್ರವನ್ನು ನಿಗದಿಪಡಿಸಲು 'ಏತ ನೀರಾವರಿ ಯೋಜನೆಗಳಿಗೆ ಒಂದು ನಿರ್ದಿಷ್ಟ ನೀತಿಯನ್ನು ರೂಪಿಸಬೇಕಾಗುತ್ತದೆ.

ಡಿ. ಎಲ್ಲಾ ಚರಂಡಿ, ಮಳೆ ನೀರು ಹಾಗೂ ಕೈಗಾರಿಕಾ ತ್ಯಾಜ್ಯದ ನೀರು ಕಣಿವೆಗೆ ಹರಿಯುವ ಬದಲಾಗಿ ಚರಂಡಿ ವ್ಯವಸ್ಥೆಗೆ ಹರಿಯುವಂತೆ ಖಾತರಿ ಪಡಿಸಿಕೊಳ್ಳಲು ಮತ್ತು ಕಡಿಮೆ ಕಾಲಾವಧಿಯಲ್ಲಿ ನೈಸರ್ಗಿಕ

ಜಲಮೂಲಗಳನ್ನು ಮಾಲಿನ್ಯ ಮುಕ್ತಗೊಳಿಸಲು ಜಲಾನಯನ ಪ್ರದೇಶದ ಎಲ್ಲಾ ಪ್ರಮುಖ ನಗರಗಳು ಹಾಗೂ ಪಟ್ಟಣಗಳ ಹಾಲಿ ಇರುವ ಯುಜಿಡಿ ವ್ಯವಸ್ಥೆಯು ಸದರಿ ನಗರ/ಪಟ್ಟಣದ ಅನುಮೋದಿತ ಸಿಡಿಪಿ ಯೋಜನೆಯ ಅನುಸಾರವಾಗಿ ಒಟ್ಟಾರೆ ಪ್ರದೇಶಗಳನ್ನು ವಿಸ್ತರಿಸಬೇಕು.



ಇ. ಜಲಾನಯನ ಪ್ರದೇಶದೊಳಗೆ ಬರುವ ಎಲ್ಲಾ ಪ್ರಮುಖ ನಗರಗಳು ಹಾಗೂ ಪಟ್ಟಣಗಳಿಗೆ ಅಲ್ಪ ಕಾಲಾವಧಿಯಲ್ಲೇ 'ತೃತೀಯ ಹಂತಕ್ಕೆ ಎಸ್ ಟಿ ಪಿ ಸ್ಥಾವರ'ಗಳನ್ನು ಒದಗಿಸಿ 'ಎರಡು ಪೈಪ್ ಲೈನ್ ವ್ಯವಸ್ಥೆ'ಯ ಮೂಲಕ ಅವು ಸಂಸ್ಕರಿಸಿದ ನೀರನ್ನು ಎರಡನೆಯ ಹಂತದ ಬಳಕೆಗೆ ಉಪಯೋಗಿಸು ವಂತೆ ಮಾಡಬೇಕು.

ಎಫ್. ಸಾರ್ವಜನಿಕರು ತೃತೀಯ ಹಂತಕ್ಕೆ ಸಂಸ್ಕರಿಸಿದ ನೀರನ್ನು ತಮ್ಮ ಗೃಹಬಳಕೆಗೆ ಬಳಸುವಂತೆ ಮಾಡಲು ಮತ್ತು ಈ ಕುರಿತು ಸಾರ್ವಜನಿಕರ ಮನವೊಲಿಸಲು ರಾಜ್ಯ ಸರ್ಕಾರಗಳು ತೃತೀಯ ಹಂತಕ್ಕೆ ಸಂಸ್ಕರಿಸಿದ ನೀರು ಲಭ್ಯವಿರುವ ಎಸ್ ಟಿ ಪಿ ಗಳಲ್ಲಿ 'ಬಾಟಲಿಂಗ್ ಸ್ಥಾವರ'ಗಳನ್ನು ಸ್ಥಾಪಿಸಬೇಕು ಮತ್ತು ಆ ನೀರನ್ನು ಬಾಟಲಿಗಳಲ್ಲಿ ಹಾಕಿ ಎಲ್ಲಾ ಸಾರ್ವಜನಿಕ ಮತ್ತು ಸರ್ಕಾರಿ ಸಭೆಗಳಲ್ಲಿ ಬಳಸುವಂತೆ ಮಾಡಬೇಕು, ಆ ನೀರನ್ನು ಶಾಸಕರ ಭವನ (ಎಲ್ ಎಚ್) ಗಳು, ಮಂತ್ರಿಗಳ ಕಚೇರಿಗಳು ಹಾಗೂ ವಸತಿಗಳಿಗೆ ಸರಬರಾಜು ಮಾಡಬೇಕು. ಈ ಮೂಲಕ ತೃತೀಯ ಹಂತದ ಸಂಸ್ಕರಿಸಿದ ನೀರು ಕುಡಿಯಲು ಮತ್ತು ಅಡುಗೆ ಬಳಸಲು ಸುರಕ್ಷಿತ ಎಂದು ಸಾರ್ವಜನಿಕರಿಗೆ ಮನವರಿಕೆ ಮಾಡಿಸಬೇಕು.

ಜಿ. ತಕ್ಷಣಕ್ಕೆ, ಹೆಚ್ಚಿನ ಆದ್ಯತೆಯ ಮೇರೆಗೆ ಜಲಾನಯನ ಪ್ರದೇಶದ ಎಲ್ಲಾ ಪ್ರಮುಖ ನಗರಗಳು ಹಾಗೂ ಪಟ್ಟಣಗಳಲ್ಲಿ ಮಳೆನೀರು ಕೊಯ್ಲು ಪದ್ಧತಿಯನ್ನು ಕಡ್ಡಾಯಗೊಳಿಸಬೇಕು.

ಎಚ್. ತಕ್ಷಣಕ್ಕೆ, ಹೆಚ್ಚಿನ ಆದ್ಯತೆಯ ಮೇರೆಗೆ, ಕುಸಿಯುತ್ತಿರುವ ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಜಲಾನಯನ ಪ್ರದೇಶದ ಎಲ್ಲಾ ಪ್ರಮುಖ ನಗರಗಳು ಹಾಗೂ ಪಟ್ಟಣಗಳಲ್ಲಿ ರಸ್ತೆ ಬದಿಯ ಚರಂಡಿಯೊಂದಿಗೆ ಪ್ರತಿ ರಸ್ತೆ ಕ್ರಾಸಿಂಗ್ ನಲ್ಲಿ 'ಪಿಪಿಪಿ ಮಾದರಿ'ಯಲ್ಲಿ ಸಾರ್ವಜನಿಕರ ಸಹಯೋಗದೊಂದಿಗೆ 'ಮಳೆ ನೀರು ಪುನರ್ಭರ್ತಿ'ರ ರಚನೆಗೆ ಬೇಕಾದ ವ್ಯವಸ್ಥೆಯನ್ನು ನಿರ್ಮಿಸಬೇಕು.

ಐ. ಕೃಷಿ/ಜಲ ಸಂಪನ್ಮೂಲ ಇಲಾಖೆಗಳ ಮೂಲಕ ಇಡೀ ರಾಜ್ಯದಲ್ಲಿ ವ್ಯಾಪಕವಾಗಿ 'ಜಲಾನಯನ ಅಭಿವೃದ್ಧಿ ಕಾರ್ಯಕ್ರಮ'ವನ್ನು ಕೈಗೊಳ್ಳಬೇಕು. ಜೊತೆಗೆ, ಮಣ್ಣಿನ 'ತೇವಾಂಶ ಸಂಗ್ರಹ'ವನ್ನು ಅಭಿವೃದ್ಧಿಪಡಿಸಲು

ಪ್ರತಿ ರೈತನೂ ತನ್ನ ಕೃಷಿ ಭೂಮಿಯಲ್ಲಿ “ಕೃಷಿ ಹೊಂಡವನ್ನು ನಿರ್ಮಿಸಲು ಸಹಾಯ ಧನದ ವ್ಯವಸ್ಥೆ ಮಾಡಬೇಕು.

ಜೆ. ಎಲ್ಲಾ ಪ್ರಮುಖ ಪ್ರದೇಶಗಳಲ್ಲೂ ನೀರು ಕುಡಿದು ನಿಷ್ಪ್ರಯೋಜಕವಾಗಿರುವ, ಕ್ಷಾರಯುಕ್ತವಾದ ಮತ್ತು ಸಮೃದ್ಧವಾಗಿ ನೀರಿರುವ ಪ್ರದೇಶಗಳನ್ನು ಗುರುತಿಸಿ ಮೇ ಹಾಗೂ ಅಂತರ್ಜಲ ನೀರಿನ ಸಂಯೋಗಾತ್ಮಕ ಬಳಕೆ ಮಾಡಬೇಕು. ರಾಜ್ಯ ಸರ್ಕಾರಗಳ ಜಲಾನಯನದ ಪ್ರದೇಶಗಳಲ್ಲಿ ಅಂತಹ ಯೋಜನೆಗಳ



ತಯಾರಿಕೆಗೆ ಮತ್ತು ಅನುಷ್ಠಾನಕ್ಕಾಗಿ ಭಾರತ ಸರ್ಕಾರ ಹಣಕಾಸು ನೆರವು ನೀಡಬೇಕು.

ಕೆ. ಎಲ್ಲಾ ಪ್ರಮುಖ ಜಲಾಶಯಗಳ ಪ್ರಮುಖ ಕಾಲುವೆಗಳು/ಪ್ರಮುಖ ಉಪಕಾಲುವೆಗಳಿಗೆ ಫ್ರೀ ಬೋರ್ಡನ್ನು ಕನಿಷ್ಟ ೧ ಮೀಟರ್ ಎತ್ತರಿಸುವ ಮೂಲಕ ಮತ್ತು ಸುಮಾರು ೨ ರಿಂದ ೩ ಕಿ.ಮೀ. ಅಂತರಗಳಲ್ಲಿ ಕ್ರಾಸ್ ರೆಗ್ಯುಲೇಟರ್‌ಗಳನ್ನು ನಿರ್ಮಿಸುವ ಮೂಲಕ 'ಆನ್ ಲೈನ್ ನೀರಿನ ಸಂಗ್ರಹಣೆ' ಮಾಡಬೇಕು. ಇದಕ್ಕಾಗಿ ಕಾಲುವೆಯ ಕೊನೆಭಾಗದಿಂದ ಮೇಲ್ಭಾಗದವರೆಗೆ ಹೆಚ್ಚಿನ ಫ್ರೀ ಬೋರ್ಡನ್ನು ಒತ್ತುವರಿ ಮಾಡಿಕೊಂಡು ಸಂಜೆ ೬ ಗಂಟೆಯ ನಂತರ ಕಾಲುವೆಗೆ ಬಿಡುಗಡೆಯಾಗುವ ನೀರಿನ ಪ್ರಮಾಣವನ್ನು ಕಡಿಮೆಮಾಡಿ ನೀರನ್ನು ಸಂಗ್ರಹಿಸಬೇಕು. ಹೀಗೆ ಸಂಜೆ ೬ ರಿಂದ ಬೆಳಗ್ಗೆ ೬ರ ನಡುವೆ ಕಾಲುವೆಗೆ ಹರಿಯುವ ಬಳಸದ ನೀರನ್ನು ಸಂಗ್ರಹಿಸಬಹುದು. ರಾಜ್ಯ ಸರ್ಕಾರಗಳ ಜಲಾನಯನದ ಪ್ರದೇಶಗಳಲ್ಲಿ ಅಂತಹ ಯೋಜನೆಗಳ ಅನುಷ್ಠಾನಕ್ಕಾಗಿ ಭಾರತ ಸರ್ಕಾರ ಹಣಕಾಸು ನೆರವು ನೀಡಬೇಕು.

ಎಲ್. ಮಳೆ ಹೆಚ್ಚಾದ ವರ್ಷಗಳಲ್ಲಿ ಸುರಿಯುವ ಮಳೆ ನೀರು ಸಂಗ್ರಹಿಸಲು, ಮಳೆ ಕಡಿಮೆಯಾಗುವ ವರ್ಷಗಳಲ್ಲಿ ಉಂಟಾಗುವ ನೀರಿನ ಕೊರತೆ ನೀಗಿಸಲು ಕರ್ನಾಟಕ ಮತ್ತು ತಮಿಳು ರಾಜ್ಯಗಳೆರಡೂ ಕಾವೇರಿ ನದಿಯ ಸಮಾನ ಗಡಿರೇಖೆಯಲ್ಲಿ ನಾಲ್ಕು ನೀರು ಸಂಗ್ರಹಣಾ ರಚನೆಗಳನ್ನು (ಕರ್ನಾಟಕದ ಮೇಕೇದಾಟು ಒಳಗೊಂಡಂತೆ ಪ್ರತಿ ರಾಜ್ಯವೂ ಎರಡು ರಚನೆಗಳನ್ನು ನಿರ್ಮಿಸಬೇಕು. ಹೀಗೆ ಸಂಗ್ರಹವಾದ ನೀರು ಎಲ್ಲಾ ಫಲಾನುಭವಿಗಳ ಬಳಕೆಗೆ ಲಭ್ಯವಿರಬೇಕು, ನಿರ್ದಿಷ್ಟವಾಗಿ ಅಗ್ಗದ ವಿದ್ಯುತ್ ಉತ್ಪಾದನೆಗೆ ಮಾಡಲು ಮತ್ತು ಘನ ಸರ್ವೋಚ್ಚ ನ್ಯಾಯಾಲಯದ ನಿರೀಕ್ಷಿತ ಆದೇಶದ ಅನುಸಾರ ತಮಿಳುನಾಡಿಗೆ ನಿಗದಿತವಾಗಿ ಬಿಡುಗಡೆ ಮಾಡಲು ಇದನ್ನು ಬಳಸಬೇಕು. ಜಲಾನಯನದ ಪ್ರದೇಶಗಳಲ್ಲಿ ಉಭಯ ರಾಜ್ಯ ಸರ್ಕಾರಗಳ

ಅಂತಹ ಬೃಹತ್ ಯೋಜನೆಗಳ ಯೋಜನೆ ಮತ್ತು ಅನುಷ್ಠಾನಕ್ಕಾಗಿ ಭಾರತ ಸರ್ಕಾರ ಹಣಕಾಸು ನೆರವು ನೀಡಬೇಕು ಹಾಗೂ ಆ ಯೋಜನೆಗಳ ಮಂಜೂರಿಗೆ ಆದ್ಯತೆ ಕೊಡಬೇಕು.

ಎಂ. ೪ ರಿಂದ ೫ ವರ್ಷಗಳ ಒಳಗಾಗಿ ಎಲ್ಲಾ ಸಣ್ಣ ನೀರಾವರಿ ಇಲಾಖೆಯ ಕೆರೆಗಳ ಪೂರ್ಣ ಸಾಮರ್ಥ್ಯ ಬಳಕೆಯಾಗುವಂತೆ ಅವುಗಳ ಹೂಳನ್ನು ತೆಗೆಯಬೇಕು.

ಎನ್. ಅಮೂಲ್ಯವಾದ ನೀರನ್ನು ಸಂರಕ್ಷಿಸಲು ಅಲ್ಪ ಕಾಲಾವಧಿಯ ಒಳಗಾಗಿ ಎಲ್ಲಾ ಕಾಲುವೆಗಳನ್ನು ಅವುಗಳ ಮುಖ್ಯ ಕಾಲುವೆಯಿಂದ ಹಿಡಿದು ಕೊನೆಯ ಹಂತದವರೆಗೆ ಭದ್ರಗೊಳಿಸಿ ಅವುಗಳಿಗೆ ಕಾಂಕ್ರೀಟ್ ಲೈನಿಂಗ್ ಮಾಡಬೇಕು.



ಓ. ಜಲಾನಯನ ಪ್ರದೇಶದ ಅಂತರ್ಜಲ ಮಟ್ಟವನ್ನು ಪರಿಶೀಲಿಸಲು ಸೂಕ್ತ ತಂತ್ರಜ್ಞಾನ ಮತ್ತು ಫಾರ್ಮುಲಾಗಳನ್ನು ಕಂಡುಕೊಳ್ಳಲು ಭಾರತ ಸರ್ಕಾರವು ಸಿಡಬ್ಲ್ಯೂ ಸಿ ಮತ್ತು ಗೌಂಡ್ ವಾಟರ್ ಮಂಡಲಿಗಳ ಅಡಿಯಲ್ಲಿ ತಜ್ಞರ ಸಮಿತಿ ರಚಿಸಿ ನಿರ್ದಿಷ್ಟ ಸಮಯದಲ್ಲಿ ವರದಿ ಮಂಡಿಸಲು ನಿರ್ದೇಶಿಸಬೇಕು.

ಪಿ. ಕಾವೇರಿ ಜಲಾನಯನ ಪ್ರದೇಶದ ಜಲಸಂಪನ್ಮೂಲದ ವೃದ್ಧಿಗಾಗಿ ಪಶ್ಚಿಮದಲ್ಲಿ ಹರಿಯುವ ನದಿಗಳನ್ನು ಕಾವೇರಿ ಜಲಾನಯನ ಪ್ರದೇಶದತ್ತ ತಿರುಗಿಸಲು ಕೂಡಲೆ ಕ್ರಮವಹಿಸಬೇಕು.

ಕ್ಯೂ, ಭಾರತ ಸರ್ಕಾರವು ಒಡಿಶಾದ ಮಹಾನದಿಯ ಹೆಚ್ಚುವರಿ ನೀರನ್ನು ತಮಿಳುನಾಡಿನ ಕಾವೇರಿಗೆ ಜೋಡಿಸಲು 'ಪೆನಿನ್ಸುಲಾರ್ ನದಿ ಅಭಿವೃದ್ಧಿ ಯೋಜನೆ' (ಪಿಆರ್ ಡಿಎಸ್) ಯನ್ನು ಶೀಘ್ರವಾಗಿ ಒಂದು ರಾಷ್ಟ್ರೀಯ ಯೋಜನೆಯಂತೆ ಕೈಗೊಳ್ಳಬೇಕು.

ಆರ್. ನೀರಿನ ಸದ್ಬಳಕೆ ಹಾಗು ಮಿತಬಳಕೆಗೆ ಉತ್ತೇಜನ ನೀಡುವ ಸಲುವಾಗಿ, ವಿದ್ಯುತ್ ದರ ನಿಯಂತ್ರಿಸಲು ಸ್ಥಾಪಿಸಿರುವ "ವಿದ್ಯುತ್ ದರ ನಿಯಂತ್ರಣ ಪ್ರಾಧಿಕಾರ'ದ ಮಾದರಿಯಲ್ಲಿ, ನೀರಿನ ವಿವಿಧ ಬಳಕೆಗೆ ದರ ನಿಗದಿಪಡಿಸಲು "ನೀರಿನ ದರ ನಿಗದಿಪಡಿಸುವ ಪ್ರಾಧಿಕಾರವನ್ನು" ರಾಜ್ಯ ಸರ್ಕಾರ ಸ್ಥಾಪಿಸಲು ಕ್ರಮವಹಿಸಬೇಕು.

ಎಸ್. ಆಹಾರ ಉತ್ಪಾದನೆ ಮತ್ತು ಬಂಡವಾಳ ಸೃಷ್ಟಿಗೆ ಪೂರಕವಾಗುವಂತೆ ರಾಜ್ಯಕ್ಕೆ ಹಂಚಿಕೆಯಾದ ಮತ್ತು ಲಭ್ಯವಾಗುವ ಪ್ರತಿ ಹನಿ ನೀರನ್ನು ಮೌಲ್ಯಯುತವಾಗಿ ಬಳಸಿಕೊಳ್ಳಬೇಕಾದರೆ ರಾಜ್ಯ ಜಲ ಆಯೋಗ

ರಚಿಸಬೇಕಾದ ಅಗತ್ಯವಿದೆ. ಮುಂದಿನ ೫೦ ವರ್ಷಗಳಲ್ಲಿ ನೀರಾವರಿ ಕ್ಷೇತ್ರದ ಪ್ರಗತಿಯನ್ನು ದೃಷ್ಟಿಯಲ್ಲಿಟ್ಟು ಕೊಂಡು, ಎರಡು ವರ್ಷದಲ್ಲಿ ಸಮಗ್ರ ವರದಿ ನೀಡುವಂತೆ ಆಯೋಗಕ್ಕೆ ಸೂಚಿಸಬೇಕು.

**೧೯. ಉಪಸಂಹಾರ**

ಸರ್ವೋಚ್ಚ ನ್ಯಾಯಾಲಯದ ಆದೇಶ ಜಲಾನಯನ ಪ್ರದೇಶದ ಎಲ್ಲಾ ನಾಲ್ಕು ರಾಜ್ಯಗಳಿಗೂ ಅಂತಿಮ ಹಾಗೂ ಬದ್ಧವಾಗಲಿದೆ ಎಂದೂ, 'ಮೇಲ್ವಿಚಾರಣಾ ಸಮಿತಿ'ಯ ಮೂಲಕ ಅಂತಹ ಆದೇಶದ ಪಾಲನೆಯಾಗಲಿದೆ ಎಂದೂ ಹಾಗೂ ಈ ಆದೇಶದ ಅನುಷ್ಠಾನಕ್ಕಾಗಿ ಈ ಸಮಿತಿಯ ಕಾರ್ಯವನ್ನು ಕನಿಷ್ಟ ಪಕ್ಷ ಕೆಲವು ವರ್ಷಗಳವರೆಗಾದರೂ ಘನ ಸರ್ವೋಚ್ಚ ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ನಡೆಯುವುದು ಸೂಕ್ತವೆಂದು ನಿರೀಕ್ಷಿಸುತ್ತೇವೆ.

ಸಿಡಬ್ಲ್ಯೂ ಡಿಟಿ ರಚಿಸುವಾಗ ಈ ಹಿಂದಿನ ಭಾರತದ ಮುಖ್ಯ ನ್ಯಾಯಾಧೀಶರಾದ ಶ್ರೀ ರಂಗನಾಥ ಮಿಶ್ರಾ ಅವರು ವ್ಯಕ್ತಪಡಿಸಿದ ಅಭಿಪ್ರಾಯವನ್ನು ಮುಖ್ಯವಾಗಿ ಗಮನಿಸತಕ್ಕದ್ದು, ಈ ಸಂಬಂಧ ಅವರು "ಈ ತರಹದ ವಿವಾದಗಳು ಸಂಬಂಧಪಟ್ಟ ರಾಜ್ಯಗಳ ಪ್ರಜೆಗಳ ನಡುವೆ ಅನಗತ್ಯ ಮನಸ್ತಾಪ ಸೃಷ್ಟಿ ಮಾಡಬಲ್ಲವು. ವಿವಾದ



ಹೆಚ್ಚುಕಾಲ ಉಳಿದಷ್ಟೂ ಮನಸ್ತಾಪ ಹೆಚ್ಚಾಗುತ್ತದೆ. ಎಲ್ಲಾ ರಾಜ್ಯಗಳ ಪ್ರಜೆಗಳ ಹಿತಾಸಕ್ತಿಗಳನ್ನು ರಕ್ಷಿಸುವ ಕೇಂದ್ರ ಸರ್ಕಾರ ಅಂತಹ ಎಲ್ಲಾ ಸಂದರ್ಭಗಳಲ್ಲೂ ಸಾಂವಿಧಾನಿಕ ಯಂತ್ರ ಸೂಕ್ತವಾಗಿ ನಡೆಯುವಂತೆ ಪ್ರಾಮಾಣಿಕವಾಗಿ, ತ್ವರಿತವಾಗಿ ಕ್ರಮ ಕೈಗೊಳ್ಳಬೇಕಾಗುತ್ತದೆ. ಅದೃಷ್ಟವಶಾತ್ ಸಂಸತ್ತು ಇಂತಹ ವಿವಾದಗಳನ್ನು ಪರಿಣಾಮಕಾರಿಯಾಗಿ ಬಗೆಹರಿಸುವಲ್ಲಿ ಕೇಂದ್ರ ಸರ್ಕಾರದಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಒಂದು ನಿಷ್ಪಕ್ಷವಾದ ನ್ಯಾಯಾಧಿಕರಣಕ್ಕೆ ಈ ವಿವಾದವನ್ನು ವಹಿಸಿಕೊಟ್ಟಿದೆ. ಈ ವಿವಾದವನ್ನು ಇಷ್ಟು ದೀರ್ಘಾವಧಿಯವರೆಗೆ ಮುಂದುವರಿಸಲು ಕಾರಣಗಳೇ ಇಲ್ಲ. ಶಾಸನಾತ್ಮಕವಾದ ಕಡ್ಡಾಯವಾದ ಕ್ರಮ ಕೈಗೊಳ್ಳುವಲ್ಲಿ ಇನ್ನೂ ವಿಳಂಬವಾದಲ್ಲಿ ಜನರ ಭಾವನೆಗಳು ಇನ್ನೂ ವಿಷಮ ಸ್ಥಿತಿ ತಲುಪಲಿವೆ. ಆದ್ದರಿಂದ ವಿವಾದ ಇನ್ನೂ ಉಲ್ಬಣಿಸುವ ಮುನ್ನ ಶಾಸನಾತ್ಮಕವಾದ ಕಾನೂನಾತ್ಮಕ ವ್ಯವಸ್ಥೆಯು ತಕ್ಷಣವೇ ಕ್ರಿಯಾಶೀಲವಾಗಬೇಕಾಗಿದೆ. ಇಂತಹ ವಿಷಯಗಳಲ್ಲಿ ಸಕಾಲಿಕ ಪರಿಹಾರಗಳು ತುಂಬ ಮುಖ್ಯ. ಒಬ್ಬ ವ್ಯಕ್ತಿಯ ಪಾಲಿನ ಸತ್ಯವು ಒಂದು ರಾಷ್ಟ್ರದ ಪಾಲಿಗೆ ಇನ್ನೂ ಮಿಗಿಲಿನ ಸತ್ಯವಾಗಬಹುದು" ಎಂದು ಹೇಳಿದ್ದರು.

೧೯೯೯ರ ರಾಷ್ಟ್ರೀಯ ಸಮಗ್ರ ಜಲಸಂಪನ್ಮೂಲ ಯೋಜನಾ ಸಮಿತಿ ವ್ಯಕ್ತಪಡಿಸಿದ ಅಭಿಪ್ರಾಯವೂ ಇಲ್ಲಿ ಪರಿಶೀಲನಾರ್ಹವಾಗಿದೆ. ಜಲಸಂಪನ್ಮೂಲ ಅಭಿವೃದ್ಧಿ ಹಾಗೂ ನಿರ್ವಹಣೆಯಲ್ಲಿ ಪ್ರತಿಯೊಂದು ವಲಯದಲ್ಲೂ ಜಲಸಂರಕ್ಷಣೆ ಮತ್ತು ಪ್ರತಿಯೊಂದು ಚಟುವಟಿಕೆಯಲ್ಲೂ ನೀರಿನ ಸಾಮರ್ಥ್ಯದ ಅಭಿವೃದ್ಧಿ ತುಂಬ ಮುಖ್ಯವಾದುದಾಗಿದೆ. ಜಲಸಂಪನ್ಮೂಲ ನಿರ್ವಹಣೆಯ ವಿಧಾನಗಳು ಹಾಗೂ ಕ್ರಮಗಳು ಅಭಿವೃದ್ಧಿಯ ದೃಷ್ಟಿಯಿಂದಲೂ ಹಾಗೂ ಪರಿಸರ ಸಂರಕ್ಷಣೆಯ ದೃಷ್ಟಿಯಿಂದಲೂ ಸಮರ್ಥನೀಯ ವಾದುದಾಗಿರಬೇಕು. ಈ ವಿಷಯದಲ್ಲಿ ಜಲಾನಯನ ಪ್ರದೇಶದ ಎಲ್ಲಾ ರಾಜ್ಯಗಳೂ, ಅವುಗಳ ನೀರಾವರಿ ಇಂಜಿನಿಯರುಗಳೂ, ಕೃಷಿ ವಿಜ್ಞಾನಿಗಳೂ, ರೈತರೂ, ರೈತ ಸಂಘಟನೆಗಳೂ, ರಾಜ್ಯ ಸರ್ಕಾರಗಳ ಎಲ್ಲಾ ರಾಜಕೀಯ ಪಕ್ಷಗಳೂ ಹಾಗೂ ನಾಯಕರೂ ಸರ್ವೋಚ್ಚ ನ್ಯಾಯಾಲಯದ ಆದೇಶದ ಅನುಷ್ಠಾನಕ್ಕಾಗಿ ತಮ್ಮ ರಾಜಕೀಯ ಇಚ್ಛಾಶಕ್ತಿಯನ್ನು ಮತ್ತು ದಕ್ಷತೆಯನ್ನು ಪ್ರದರ್ಶಿಸಬೇಕು.

ಸರ್ವೋಚ್ಚ ನ್ಯಾಯಾಲಯದ ಆದೇಶದ ಅನುಸಾರವಾಗಿ ಹಾಗೂ ಅದರ ಮೇಲ್ವಿಚಾರಣೆಯಲ್ಲಿ ರಚನೆಗೊಳ್ಳಲಿರುವ ಮೇಲ್ವಿಚಾರಣಾ ಸಮಿತಿಯು, ಮೇಲೆ ತಿಳಿಸಲಾದ ಮಾತುಗಳಿಗೆ ಪೂರಕವಾಗಿ ಕ್ರಿಯಾಶೀಲವಾದಲ್ಲಿ ಜಲಾನಯನ ಪ್ರದೇಶದ ಎಲ್ಲಾ ರಾಜ್ಯಗಳಿಗೆ ಹಾಗೂ ಮಧ್ಯಸ್ಥಗಾರರುಗಳಿಗೆ ಮುಂಬರುವ ದಿನಗಳಲ್ಲಿ ಶಾಂತಿಯಿಂದ ಜೀವನ ನಡೆಸಲು ಮತ್ತು ಕಾವೇರಿ ನೀರಿನ ಪ್ರಯೋಜನವನ್ನು ಶಾಶ್ವತವಾಗಿ ಅನುಭವಿಸಲು ಸಾಧ್ಯವಾಗುತ್ತದೆ ಎಂದು ಆಶಿಸಲಾಗಿದೆ.

# ನದಿ ಪಾತ್ರಗಳ ಯೋಜನೆಗಳು (ಪ್ರತಿಕ್ರಿಯೆ)

**ಎಸ್.ಎಲ್. ಶಿವಪ್ರಸಾದ್**

ಕರ್ನಾಟಕ ನೀರಾವರಿ ವಿಷಯದ ಬಗ್ಗೆ ನಡೆದ ಗೋಷ್ಠಿಯಲ್ಲಿ ಪ್ರಮುಖವಾಗಿ ಮೂರು ನದಿ ಪಾತ್ರಗಳ ಯೋಜನೆಗಳ ಬಗ್ಗೆ ವಿಷಯ ಮಂಡನೆ ಮಾಡಲಾಗಿರುತ್ತದೆ. ಅವುಗಳೆಂದರೆ, ಕಾವೇರಿ ನದಿ ನೀರು ಹಂಚಿಕೆ, ಮಹದಾಯಿ ನದಿ ನೀರು ಹಂಚಿಕೆ ಹಾಗೂ ಎತ್ತಿನಹೊಳೆ ಯೋಜನೆ. ಇವುಗಳಲ್ಲಿ ಮೊದಲೆರಡು ಅಂತರ ರಾಜ್ಯ ನದಿಗಳಾಗಿದ್ದು, ಕಡೆಯದು ಅಂತರಜಿಲ್ಲಾ ಉಪನದಿಯಾಗಿರುತ್ತದೆ.

**೧) ಕಾವೇರಿ ನದಿ ಅಚ್ಚುಕಟ್ಟು:** ಕಾವೇರಿ ನ್ಯಾಯಮಂಡಳಿಯು ತನ್ನ ಅಂತಿಮ ತೀರ್ಪಿನಲ್ಲಿ ಕರ್ನಾಟಕಕ್ಕೆ ೨೭೦ ಟಿ.ಎಂ.ಸಿ. ನೀರನ್ನು ಹಂಚಲಾಗಿದ್ದು, ನೀರಾವರಿ ಪ್ರದೇಶವನ್ನು ೧೮.೮೫ ಲಕ್ಷ ಎಕರೆಗಳಿಗೆ ಸೀಮಿತಗೊಳಿಸಿರುತ್ತದೆ. (ಕರ್ನಾಟಕದ ಬೇಡಿಕೆ ೨೦.೯೮ ಲಕ್ಷ ಎಕರೆ). ಕಾವೇರಿ ನ್ಯಾಯಮಂಡಳಿಯ ತೀರ್ಪನ್ನು ಪ್ರಶ್ನಿಸಿ ಭಾರತದ ಸರ್ವೋಚ್ಚ ನ್ಯಾಯಾಲಯಕ್ಕೆ ಎಲ್ಲಾ ಕಣಿವೆ ರಾಜ್ಯಗಳು ಅಪೀಲು ಹೋದ ಹಿನ್ನೆಲೆಯಲ್ಲಿ, ಇತ್ತೀಚೆಗೆ ಸರ್ವೋಚ್ಚ ನ್ಯಾಯಾಲಯವು ತನ್ನ ತೀರ್ಪನ್ನು ಪ್ರಕಟಿಸಿ, ಕರ್ನಾಟಕಕ್ಕೆ ೨೮೪.೭೫ ಟಿ.ಎಂ.ಸಿ. ನೀರನ್ನು ಹಂಚಲಾಗಿದ್ದು, ಈ ಹಂಚಿಕೆಯ ಬಗ್ಗೆ ಮೇಲ್ಮನವಿ ಸಲ್ಲಿಸಲಾಗಿರುವುದಿಲ್ಲ. ಸರ್ವೋಚ್ಚ ನ್ಯಾಯಾಲಯವು ತನ್ನ ತೀರ್ಪಿನಲ್ಲಿ ಎಲ್ಲಾ ರಾಜ್ಯಗಳಿಗೆ ಹಂಚಿಕೆಯಾಗಿರುವ ನೀರು ಸಮರ್ಪಕವಾಗಿ ಆಯಾಯ ರಾಜ್ಯಕ್ಕೆ ಒದಗಿಸುವಂತೆ ನೋಡಿಕೊಳ್ಳಲು ಒಂದು ವ್ಯವಸ್ಥೆಯನ್ನು (Scheme) ರಚಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನವನ್ನು ನೀಡಿರುತ್ತದೆ. ಈ ನಿರ್ವಹಣಾ ವ್ಯವಸ್ಥೆಗೆ ಸಂಬಂಧಪಟ್ಟಂತೆ ಸೂಕ್ತ ಸಲಹೆಗಳನ್ನು (ನಿರ್ದೇಶನವನ್ನು ನೀಡುವಂತೆ ಕೇಂದ್ರ ಸರ್ಕಾರವು ಸರ್ವೋಚ್ಚ ನ್ಯಾಯಾಲಯಕ್ಕೆ ಮನವಿ ಮಾಡಿರುತ್ತದೆ.

ಆಯಾ ರಾಜ್ಯಗಳಿಗೆ ಸಮರ್ಪಕವಾಗಿ ನೀರು ಹಂಚಲು ಸೂಕ್ತವಾದ ನಿರ್ವಹಣಾ ವ್ಯವಸ್ಥೆಯನ್ನು ರಚಿಸುವುದು ಅತ್ಯಗತ್ಯವಾಗಿರುತ್ತದೆ. ಈಗ ನಮ್ಮ ರಾಜ್ಯಕ್ಕೆ ಹಂಚಿಕೆಯಾಗಿರುವ ೨೮೪.೭೫ ಟಿ.ಎಂ.ಸಿ. ನೀರನ್ನು ಸಮರ್ಪಕವಾಗಿ ಬಳಸಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿರುತ್ತದೆ. ಈಗ ಅನುಸರಿಸ ಲಾಗುತ್ತಿರುವ ಬೆಳೆ ಪದ್ಧತಿಯಿಂದ ೧೯ ಲಕ್ಷ ಎಕರೆಗಳಿಗೆ ನೀರನ್ನು ಒದಗಿಸುವುದು ಕಷ್ಟಸಾಧ್ಯ. ಕಬ್ಬು ಮತ್ತು ಭತ್ತ ಬೆಳೆಯುವ ಪ್ರದೇಶವನ್ನು ಮಿತಿಗೊಳಿಸಿ ಅರೆ ನೀರಾವರಿ ಬೆಳೆ ಪ್ರದೇಶವನ್ನು ಹೆಚ್ಚಿಸಿದಾಗ ಮಾತ್ರ ಇದು ಸಾಧ್ಯವಾಗುತ್ತದೆ. ನೀರಿನ ಉಳಿತಾಯ ಮತ್ತು ಮಳೆ ನೀರು ಕೊಯ್ಲಿನ (Rain water harvesting) ಬಗ್ಗೆ ಹೆಚ್ಚಿನ ಪ್ರಚಾರವನ್ನು ಮಾಡಿ ರೈತರಿಗೆ ತಿಳುವಳಿಕೆಯನ್ನು ಕೊಡಬೇಕು. ಹನಿ ನೀರಾವರಿ (Drip Irrigation and

Sprinkler Irrigation), ಅಂತರ್ಜಲ ಮರು ಪೂರೈಕೆ, ಜಲಾಶಯ ಮತ್ತು ನಾಲೆಗಳಲ್ಲಿ ನೀರಿನ ಆವಿಯನ್ನು (Evaporation) ಕನಿಷ್ಠ ಮಿತಿಗೊಳಿಸುವುದು ಮುಂತಾದವುಗಳಿಗೆ ಆದ್ಯತೆಯನ್ನು ಕೊಡಬೇಕಾಗುತ್ತದೆ.

ನಿರ್ವಹಣಾ ವ್ಯವಸ್ಥೆಯ ರಚನೆಯಲ್ಲಿ ರಾಜ್ಯಗಳ ರೈತ ಪ್ರತಿನಿಧಿಗಳು, ವ್ಯವಸಾಯ ತಜ್ಞರು ಹಾಗೂ ಇಂಜಿನಿಯರುಗಳಿಗೆ ಪ್ರಾಮುಖ್ಯತೆಯನ್ನು ಕೊಟ್ಟು ಚುನಾವಣೆಗಳಲ್ಲಿ ಸ್ಪರ್ಧಿಸುವಂತಹ ವ್ಯಕ್ತಿಗಳಿಗೆ ಅವಕಾಶವನ್ನು ಕೊಡಬಾರದು. ನಿರ್ವಹಣಾ ವ್ಯವಸ್ಥೆಯು ರಾಜಕೀಯ ವ್ಯಕ್ತಿಗಳಿಂದ ಮುಕ್ತವಾಗಿದ್ದರೆ ಮಾತ್ರ ನಿರ್ವಹಣೆಯು ಸಮರ್ಪಕವಾಗಿರುತ್ತದೆ.

**೧) ಮಹದಾಯಿ ಯೋಜನೆ :**

ಕೇಂದ್ರ ಜಲ ಆಯೋಗದ ಮಾಹಿತಿಯಂತೆ ಮಹದಾಯಿ ನದಿಯಲ್ಲಿನ ನೀರಿನ ಲಭ್ಯತೆ ಸುಮಾರು ೨೦೦ ಟಿ.ಎಂ.ಸಿ.ಗಳಿದ್ದು, ಅದರಲ್ಲಿ ಕರ್ನಾಟಕದ ಕೊಡುಗೆ ಸುಮಾರು ೪೪ ಟಿ.ಎಂ.ಸಿ.ಗಳು. ರಾಜ್ಯಗಳ ನೀರಿನ ಹಂಚಿಕೆಯ ಬಗ್ಗೆ ವ್ಯಾಜ್ಯವು ನ್ಯಾಯಮಂಡಳಿಯ ಮುಂದಿದ್ದು, ತೀರ್ಪು ಬರಬೇಕಾಗಿದೆ. ಈ ಮಧ್ಯೆ, ಕರ್ನಾಟಕ ರಾಜ್ಯವು ಕುಡಿಯುವ ನೀರಿಗಾಗಿ ನಮ್ಮ ಪಾಲಿನ ನೀರಿನಲ್ಲಿನ ಸುಮಾರು ೭.೫ ಟಿ.ಎಂ.ಸಿ. ಯಷ್ಟು ನೀರನ್ನು ಮಲಪ್ರಭಾ ಅಣೆಕಟ್ಟೆಗೆ ತಿರುಗಿಸಿ (ಕಳಸಾ ಮತ್ತು ಬಂಡೂರಿ ನಾಲೆಗಳ ಮೂಲಕ) ಉಪಯೋಗಿಸಲು ಮಧ್ಯಂತರ ಆದೇಶವನ್ನು ಕೋರಿದ್ದು, ಇದಕ್ಕೆ ಸೂಕ್ತವಾದ ಸ್ಪಂದನೆ ದೊರೆತಿಲ್ಲ. ಗೋವಾ ರಾಜ್ಯವು ಇದಕ್ಕೆ ಅಡ್ಡಗಾಲು ಹಾಕುತ್ತಿದೆ. ನಮಗೆ ನ್ಯಾಯವಾಗಿ ಸಲ್ಲಬೇಕಾದ ನೀರಿನ ಪ್ರಮಾಣವು ದೊರಕಿದಾಗ ಮಲಪ್ರಭಾ ಅಣೆಕಟ್ಟೆಯ ಅಚ್ಚುಕಟ್ಟು ಪ್ರದೇಶಕ್ಕೆ ನೀರಿನ ಕೊರತೆಯಾಗದಂತೆ ಹಾಗೂ ಹುಬ್ಬಳ್ಳಿ-ಧಾರವಾಡ ನಗರಗಳಿಗೆ ಸಮರ್ಪಕವಾಗಿ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬಹುದಾಗಿರುತ್ತದೆ. ನ್ಯಾಯ ಮಂಡಳಿಯು ತ್ವರಿತವಾಗಿ ತೀರ್ಪು ನೀಡಲು ಕ್ರಮ ಕೈಗೊಳ್ಳಬೇಕಾಗಿರುತ್ತದೆ.

**೩) ಎತ್ತಿನಹೊಳೆ ಯೋಜನೆ :**

ರಾಜ್ಯದ ಪೂರ್ವಭಾಗದ ೭ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ತುಮಕೂರು, ಹಾಸನ ಹಾಗೂ ಚಿಕ್ಕಮಗಳೂರು ಜಿಲ್ಲೆಗಳ ಕೆಲ ಭಾಗಗಳಿಗೆ ಕುಡಿಯುವ ನೀರನ್ನು ಒದಗಿಸುವುದು ಹಾಗೂ ೫೨೭ ಕೆರೆಗಳಿಗೆ ಅವುಗಳ ಸಾಮರ್ಥ್ಯದ ೫೦%ಕ್ಕೆ ನೀರು ತುಂಬಿಸಿ ಅವುಗಳ ಅಂತರ್ಜಲ ಅಭಿವೃದ್ಧಿಗೆ ನೀರೊದಗಿಸುವುದು ಈ ಯೋಜನೆಯ ಉದ್ದೇಶ. ಇದಕ್ಕಾಗಿ ಒಟ್ಟು ೨೪ ಟಿ.ಎಂ.ಸಿ. ನೀರು ಬೇಕಾಗುತ್ತದೆ ಎಂದು ಅಂದಾಜಿಸಲಾಗಿದೆ.

ಎತ್ತಿನಹೊಳೆಯು ಕುಮಾರಧಾರಾ ನದಿಯ ಉಪನದಿಯಾಗಿದ್ದು, (ಕುಮಾರಧಾರಾ ನದಿಯು ನೇತ್ರಾವತಿ ನದಿಯ ಉಪನದಿಯಾಗಿರುತ್ತದೆ) ನೇತ್ರಾವತಿ ನದಿಯ ಜಲಾನಯನ



ಪ್ರದೇಶದ ಭಾಗವಾಗಿರುತ್ತದೆ. ನೇತ್ರಾವತಿ ನದಿಯು ಸಂಪೂರ್ಣವಾಗಿ ಕರ್ನಾಟಕ ರಾಜ್ಯದಲ್ಲೇ ಹುಟ್ಟಿ, ಪಶ್ಚಿಮಾಭಿಮುಖವಾಗಿ ಹರಿದು ಸಮುದ್ರ ಸೇರುತ್ತದೆ. ನೇತ್ರಾವತಿ ನದಿಯಲ್ಲಿನ ನೀರಿನ ಲಭ್ಯತೆ ಸುಮಾರು ೪೦೦ ಟಿ.ಎಂ.ಸಿ. ಎಂದು ಅಂದಾಜಿಸಲಾಗಿದ್ದು, ಅದರಲ್ಲಿ ಎತ್ತಿನಹೊಳೆಯ ಕೊಡುಗೆ ಸುಮಾರು ೩೪ ಟಿ.ಎಂ.ಸಿ. ಆಗಿರುತ್ತದೆ. ಇದರಲ್ಲಿ ೨೪ ಟಿ.ಎಂ.ಸಿ. ನೀರನ್ನು ಮಳೆಗಾಲದಲ್ಲಿ ಪೂರ್ವಕ್ಕೆ ತಿರುಗಿಸುವುದು ಈ ಯೋಜನೆಯ ಉದ್ದೇಶ. ಈಗಾಗಲೇ ಕೆಲಸಗಳು ಪ್ರಗತಿಯಲ್ಲಿರುತ್ತವೆ. ಈ ಯೋಜನೆಯಿಂದ ಅಂತಿಮವಾಗಿ ಸುಮಾರು ೭೫ ಲಕ್ಷ ಜನರಿಗೆ ಅನುಕೂಲವಾಗಲಿದೆ.

ಈ ನದಿಯು ಸಂಪೂರ್ಣವಾಗಿ ನಮ್ಮ ರಾಜ್ಯದಲ್ಲೇ ಹರಿಯುತ್ತಿದ್ದರೂ ಸಹಾ ದಕ್ಷಿಣ ಕನ್ನಡ ಜಿಲ್ಲೆಯ ಜನಪ್ರತಿನಿಧಿಗಳು ಯೋಜನೆಯನ್ನು ವಿರೋಧಿಸುತ್ತಿದ್ದಾರೆ. ನೀರಿನ ಲಭ್ಯತೆಯ ಬಗ್ಗೆ ಅವರು ಸಂಶಯ ವ್ಯಕ್ತಪಡಿಸುತ್ತಿದ್ದಾರೆ.

**ಉಪಸಂಹಾರ :**

೧. ಈಗಾಗಲೇ ಕೇಂದ್ರ ಸರ್ಕಾರವು ಅಂತರ್ನದಿ ಜೋಡಣೆ ಯೋಜನೆಗಳನ್ನು ರೂಪಿಸುತ್ತಿರುವುದು ಸಂತಸದ ವಿಷಯ. ಇದರಲ್ಲಿ ಗೋದಾವರಿ-ಕೃಷ್ಣಾ ಮತ್ತು ಕಾವೇರಿ ನದಿಗಳ ಜೋಡಣೆಯು ಒಂದು ಭಾಗವಾಗಿರುತ್ತದೆ. ಇದರಿಂದ ಕಾವೇರಿ ನದಿ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗಬಹುದು.

೨. ಪಶ್ಚಿಮಾಭಿಮುಖವಾಗಿ ಹರಿಯುತ್ತಿರುವ (ಪ್ರಮುಖವಾಗಿ ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ಕಡಿಮೆ ದೂರ ಹರಿದು ಸಮುದ್ರವನ್ನು ಸೇರುವ) ನದಿಗಳಲ್ಲಿನ ಹೆಚ್ಚುವರಿ ನೀರನ್ನು ಪೂರ್ವಾಭಿಮುಖವಾಗಿ ಹರಿಸಿ ಸದುಪಯೋಗ ಪಡಿಸಿಕೊಳ್ಳಲು ಹೆಚ್ಚಿನ ಆದ್ಯತೆ ಕೊಡಬೇಕು.

೩. ನೀರನ ಉಳಿತಾಯ, ಪುನರ್ ಬಳಕೆ (Recycling) ಮಳೆ ನೀರಿನ ಕೊಯ್ಲು (Rain Water Harvesting) ಇವುಗಳ ಅನುಷ್ಠಾನದ ಬಗ್ಗೆ ಸೂಕ್ತ ಕಠಿಣ ಕಾನೂನು ರಚಿಸಬೇಕಾಗಿರುತ್ತದೆ. ಇಸ್ರೇಲ್ ದೇಶದ ಮಾದರಿಯನ್ನು ಅಳವಡಿಸಬೇಕು.

೪. ನ್ಯಾಯ ಮಂಡಳಿಗಳು ಶೀಘ್ರವಾಗಿ ತೀರ್ಪು ಕೊಡುವಂತೆ ಕಾಲಮಿತಿಯನ್ನು ಗೊತ್ತುಮಾಡಬೇಕು ಮತ್ತು ಮಧ್ಯಂತರ ಆದೇಶವನ್ನು ನೀಡಲು ನ್ಯಾಯ ಮಂಡಳಿಯ ಕಾನೂನಿನಲ್ಲಿ ಅವಕಾಶ ಕಲ್ಪಿಸಬೇಕು.

೫. ರಾಜ್ಯಗಳು ಪಕ್ಷ ರಾಜಕೀಯ ಮಾಡದೇ, ರಾಷ್ಟ್ರೀಯ ಭಾವೈಕ್ಯತೆಯನ್ನು ಬೆಳಸಿಕೊಳ್ಳಬೇಕು. ನದಿ ನೀರಿನ ಹಂಚಿಕೆಯಲ್ಲಿ ಇದು ಬಹಳ ಮುಖ್ಯ ವಾಗಿರುತ್ತದೆ.

೬. ನ್ಯಾಯಮಂಡಳಿಯ ತೀರ್ಪುಗಳನ್ನು ವ್ಯವಸ್ಥಿತವಾಗಿ ಅನುಷ್ಠಾನಗೊಳಿಸಲು ತಜ್ಞರನ್ನೊಳಗೊಂಡ ಒಂದು ಸ್ವತಂತ್ರ ಸಂಸ್ಥೆ (ರಾಜಕೀಯೇತರ) ಇರಬೇಕು.

**ಗೋಷ್ಠಿ - ೫**

## ಯುವ ಗೋಷ್ಠಿ - ನನ್ನ ಹಾಡು ನನ್ನದು

# ಅಧ್ಯಕ್ಷ ಭಾಷಣ

**-ಡಾ. ಡಿ. ಕೆ. ಚಿತ್ತಯ್ಯ ಪೂಜಾರ್**

ಅಖಿಲ ಭಾರತ ೮೩ನೇ ಕನ್ನಡ ಸಾಹಿತ್ಯ ಸಮ್ಮೇಳನದ ಎರಡನೇ ದಿನದ ಯುವಗೋಷ್ಠಿಯಲ್ಲಿ ಪ್ರಬಂಧ ಮಂಡಿಸಿದ ಡಾ. ನಂದೀಶ್ ಅಂಜೆ ಅವರೆ, ಕುಮಾರಿ ಮೆಹರಿನ್ ಅವರೆ, ಡಾ. ಮಲ್ಲಿಕಾರ್ಜುನ ಅವರೆ, ಡಾ. ರಘು ಹಾಗೂ ರೂಪಿಣಿಯವರೆ ಮತ್ತು ಮಹಾರಾಜ ಕಾಲೇಜಿನ ಈ ಸಭಾಂಗಣದಲ್ಲಿ ಕಿಕ್ಕಿರಿದು ತುಂಬಿರುವ ಸಾಹಿತ್ಯಾಸಕ್ತರೆ, ಕನ್ನಡ ಬಂಧುಗಳೆ ನಿಮ್ಮೆಲ್ಲರಿಗೂ ನಮಸ್ಕಾರಗಳು. ಇಂದಿನ ಸಮ್ಮೇಳನದಲ್ಲಿ ಯುವಗೋಷ್ಠಿಯ ಅಧ್ಯಕ್ಷೀಯ ಮಾತುಗಳನ್ನು ಆಡಲು ಅವಕಾಶ ಮಾಡಿಕೊಟ್ಟ ಪರಿಷತ್ತಿಗೂ ನನ್ನ ನಮಸ್ಕಾರಗಳು.

ಮಾನ್ಯರೆ, ಬಲಿಷ್ಠ ದೇಶದ ಶಕ್ತಿಯೆಂದರೆ ಬಲಿಷ್ಠವಾದ; ಆರೋಗ್ಯಪೂರ್ಣ ಯುವಜನತೆಯೇ ಆಗಿರುತ್ತದೆ ಎಂಬುದು ನನ್ನ ಸ್ಪಷ್ಟ ತಿಳುವಳಿಕೆ. ಇಡೀ ಜಗತ್ತೇ ಜಾಗತೀಕರಣದ ಜಾರುಬಂಡೆಯಲ್ಲಿ ಮಿಂಚಿನಂತೆ ಮುನ್ನುಗುತ್ತಿದೆ. ಇದು ಅಭಿವೃದ್ಧಿಯೋ ಅಧಃಪತನವೋ ಹೇಳಲಾಗುತ್ತಿಲ್ಲ. ಪ್ರಪಂಚದ ಹಳ್ಳಿ - ನಗರ, ವಿದ್ಯಾವಂತ ಅವಿದ್ಯಾವಂತ, ಬಡವ - ಬಲ್ಲಿದ, ಹೆಣ್ಣು – ಗಂಡು, ಮಕ್ಕಳು - ವೃದ್ಧರು ಎಲ್ಲರೂ ಒಂದಲ್ಲಾ ಒಂದು ರೀತಿ ಇದರ ಹಿಡಿತಕ್ಕೆ ಸಿಕ್ಕಿಕೊಂಡು ಹೊರಬರಲಾರದವರಾಗಿದ್ದಾರೆ. ಬದಲಾವಣೆಯ ಸುಂಟರಗಾಳಿಗೆ ಸಿಕ್ಕಿ ಬದಲಾವಣೆಯ ವ್ಯಾಖ್ಯಾನವೇ ಬದಲಾಗುವಂತಾಗಿದೆ.ಸರ್ವೋದಯ, ಸಮನ್ವಯ, ಸಮಪಾಲು, ಸಮಬಾಳು ಎಂಬ ಮಾತುಗಳು ಅಕ್ಷರಕ್ಕೆ ಅಂಟಿಕೊಂಡು ಆಗಾಗ ಭಾಷಣಗಳಲ್ಲಿ ನುಸುಳಿ ಮಾಯವಾಗುತ್ತಿವೆ. ವಿದ್ಯಾವಂತರು, ವಿಚಾರವಂತರಾಗಿ, ವಿಚಾರಗಳು ವಿವೇಕವನ್ನು ಬೆಳೆಸಬೇಕಾದದ್ದು ಸರಿ.ಆದರೆ ವಿದ್ಯಾವಂತರೆ ಈ ದೇಶದ ಅನೇಕ ದುರಂತಗಳಿಗೆ ಕಾರಣರಾಗುತ್ತಿರುವುದು ವಿಪರ್ಯಾಸ.

ನಾವು ನಂಬಿ ಬದುಕುತ್ತಿರುವ ಕರ್ನಾಟಕಕ್ಕೆ ಭವ್ಯ ಪರಂಪರೆ ಇದೆ. ಪುರಾಣ, ಇತಿಹಾಸ, ವರ್ತಮಾನಗಳಲ್ಲೂ ಕರ್ನಾಟಕಕ್ಕೆ ತನ್ನದೇ ಆದ ಹೆಗ್ಗಳಿಕೆ ಇದೆ. ಇಂತಹ ಪುಣ್ಯಭೂಮಿಯಲ್ಲಿ ಅನೇಕ ರಸಋಷಿಗಳು, ಸಾಧು-ಸಂತರು, ಸೂಫಿಗಳು, ಸಿದ್ಧ- ಸಾಧಕರು, ದಾಸರು-ಶರಣರು, ಸಿದ್ಧಾಂತಿಗಳು, ಕವಿಪುಂಗವರು, ರಾಜಮಹಾರಾಜರು, ವಿಜ್ಞಾನಿಗಳು, ತಂತ್ರಜ್ಞಾನಿಗಳು, ಸಮಾಜ ಸುಧಾರಕರು, ವೀರವನಿತೆಯರು ಬಾಳಿ ಬದುಕಿ ನಮಗಾಗಿ ಇಂಥ ಸುಂದರ ಪುಣ್ಯಭೂಮಿಯನ್ನು ಕೊಟ್ಟು ಹೋಗಿದ್ದಾರೆ.ಈ ನೆಲದಲ್ಲಿ ಅವೆಲ್ಲವನ್ನೂ ಸಾಕ್ಷಾತ್ಕರಿಸಲು ಸ್ಮಾರಕಗಳು, ಗುಡಿ-ಗೋಪುರ, ಮಠ, ಮಂದಿರ,

ಶಾಸನ, ಶಿಲ್ಪ, ಕೋಟೆ-ಕೊತ್ತಲೆ, ನದಿ, ಕಣಿವೆ, ಬೆಟ್ಟ-ಗುಡ್ಡ, ಕಾಡು ಕಣಿವೆ ನಮ್ಮ ಮುಂದಿವೆ. ಅವೆಲ್ಲವನ್ನು ಕವಿಪುಂಗವರು ಮನದಣಿಯೆ ಹಾಡಿ ಹೊಗಳಿದ್ದಾರೆ. ಅವೆಲ್ಲ ಇರುವುದು ನಮ್ಮ ಭವಿಷ್ಯದ ಭವಿತವ್ಯಗಳಿಗಾಗಿಯೇ ಎಂಬುದನ್ನು ಮರೆಯುವಂತಿಲ್ಲ. ಜಗತ್ತಿನ ಯಾವುದೇ ಮೂಲೆಯಲ್ಲಿಯೂ ತಲೆ ಎತ್ತಿ ನಾನು ಕನ್ನಡಿಗ ಎಂದು ಹೇಳಿಕೊಳ್ಳಲು ಹೆಮ್ಮೆ ಎನಿಸುತ್ತದೆ.ಈ ಹೆಮ್ಮೆ ಸದಾ ಹಸಿರಾಗಿಯೇ ಇರಬೇಕೆಂದರೆ ನಾವೆಲ್ಲರೂ ಅವುಗಳನ್ನು ಪ್ರೀತಿ ಗೌರವಗಳಿಂದ ಕಾಪಾಡಿಕೊಳ್ಳಬೇಕು.ಅವುಗಳಿಗೆ ಚುತಿಬಾರದಂತೆ ಎಚ್ಚರಿಕೆಯಿಂದ ಸಂರಕ್ಷಿಸಿಕೊಳ್ಳಬೇಕಾಗಿರುವುದು ಈ ರಾಜ್ಯದ ಯುವಜನರ ಮೇಲಿರುವ ಬಹುದೊಡ್ಡ ಜವಾಬ್ದಾರಿ ಎಂದು ನಾನು ಭಾವಿಸಿದ್ದೇನೆ.

ನಾನು ಈಗಾಗಲೇ ಹೇಳಿದಂತೆ ನಮ್ಮ ಯುವಕರ ಮುಂದಿರುವ ಮಾದರಿಗಳು ಯಾವುವು?ಯಾವುದನ್ನು ಅನುಸರಿಸಬೇಕು?ಯುವಕರ ಬದುಕಿಗೆ ಯಾವುದು ಮಾರಕ, ಯಾವುದು ಪೂರಕ ಅಭಿವೃದ್ಧಿ ಎಂದರೆ ಯಾವುದು? ಅದು ಭೌದ್ಧಿಕವೋ, ಭೌತಿಕವೊ ಮುಂತಾದ ಗೊಂದಲಗಳಲ್ಲಿ ತೊಳಲುತ್ತಿದ್ದಾರೆ ಎನಿಸುತ್ತದೆ. ಇವೆಲ್ಲವುಗಳಿಗೂ ಸಮಂಜಸವಾದ ಉತ್ತರ ಕಂಡುಕೊಂಡು ಮುನ್ನಡೆಯಬೇಕಾಗಿದೆ. ಸಮಾಜಸುಧಾರಕರು ದೂರವಾಗುತ್ತಿದ್ದಾರೆ. ಆದರ್ಶಗಳು ಅಪಮೌಲ್ಯಗಳಾಗುತ್ತಿವೆ. ಸಂಬಂಧಗಳು ಸಂಕಟಕ್ಕೆ ಕಾರಣವಾಗುತ್ತಿವೆ. ಮಾತುಗಳು ಮಲಿನಗೊಳ್ಳುತ್ತಿವೆ. ಸಂವಾದಗಳು ಸಂಘರ್ಷಕ್ಕೆ ಕಾರಣವಾಗುತ್ತಿವೆ. ಚರ್ಚೆಗಳು ಕೊಚ್ಚೆಯಾಗುತ್ತಿವೆ. ಇಂಥ ಸಂದರ್ಭದಲ್ಲಿ ಯುವಕರ ಬದುಕಿಗೆ ಮಾರ್ಗದರ್ಶಕರಾರು, ಮಾರ್ಗ ಸೂಚಿಗಳಾವುವು? ಯಾಕೆ ಹೀಗಾಗುತ್ತಿದೆ.ಇವೆಲ್ಲವುಗಳಿಗೆ ಉತ್ತರ ಕಂಡುಕೊಳ್ಳುವುದು ಸುಲಭದ ಮಾತಲ್ಲ.

ಬುದ್ಧ, ಬಸವ, ಗಾಂಧಿ, ವಿವೇಕಾನಂದ, ಅಂಬೇಡ್ಕರ್, ಲೋಹಿಯಾ, ಮೊದಲಾದವರು ಜನರ ಶಾಂತಿ, ನೆಮ್ಮದಿ, ಸಹಬಾಳ್ವೆ, ಸಮಸಮಾಜದ ನಿರ್ಮಾಣಕ್ಕಾಗಿ ಏನೆಲ್ಲಾ ತ್ಯಾಗ ಮಾಡಿದರು. ಈಗ ಅವರ ತತ್ವ ಸಿದ್ಧಾಂತಗಳು ಕೊನೆಗೆ ಅವರ ಭಾವಚಿತ್ರಗಳು ಏತಕ್ಕಾಗಿ ಬಳಕೆಯಾಗುತ್ತಿವೆ ಎಂಬುದನ್ನು ಕಂಡರೆ ಬೇಸರವಾಗುತ್ತದೆ. ಆಯಾ ಜಾತಿಯವರು ಅವರನ್ನು ಮತ್ತೆ ತಂದು ಅದೇ ಗೂಟಕ್ಕೆ ಕಟ್ಟುತ್ತಿದ್ದಾರೆ.ಇದೆಲ್ಲಾ ಬದಲಾಗಿ ಅವರ ಆದರ್ಶಗಳು, ಕನಸುಗಳು, ಸಾಕಾರಗೊಳ್ಳಲು ನಾವುಗಳೆಲ್ಲಾ ಪಣತೊಡಬೇಕಾಗಿದೆ.

ಆತ್ಮೀಯರೆ - ಕರ್ನಾಟಕವನ್ನು ಒಳಗೊಂಡಂತೆ ಭಾರತೀಯ ಯುವ ಸಮುದಾಯ ಹಲವಾರು ಬಿಕ್ಕಟ್ಟುಗಳನ್ನು, ಸವಾಲುಗಳನ್ನು ಎದುರಿಸುತ್ತಿದೆ. ಅಷ್ಟೇ ಅಲ್ಲ ಅವುಗಳಿಗೆ ಉತ್ತರ ಕಂಡುಕೊಳ್ಳುವ ತುರ್ತು, ಅಗತ್ಯವೂ ಇಂದು ಅವಶ್ಯವಿದೆ. ದಿಕ್ಕು ತಪ್ಪಿಸುವ, ದಿಕ್ಕು ಕಾಣಿಸಿ ಗುರಿ ಮುಟ್ಟಿಸುವ ಹಲವಾರು ಮಾರ್ಗಗಳು ನಮ್ಮ ಮುಂದಿದ್ದು ಅವುಗಳ ಆಯ್ಕೆಯೂ ನಮ್ಮದೇ ಆಗಿದೆ. ಭಾರತದ ಯುವ ಸಮುದಾಯವನ್ನು ದಿಕ್ಕು ತಪ್ಪಿಸುವ 'ಬಂಡವಾಳಶಾಹಿ ರಾಜಕಾರಣ' ದಿನೇ ದಿನೇ ಪ್ರಭಲವಾಗುತ್ತಿದೆ. ಇದು

ಲಾಭ - ನಷ್ಟ, ಸೋಲು - ಗೆಲುವು ಅಷ್ಟನ್ನೇ ಹೇಳಿಕೊಡುತ್ತಿದೆ. ಮಾನವೀಯತೆ, ಮನುಷ್ಯತ್ವ, ಸ್ವಾಭಿಮಾನ ಹೊಂದಾಣಿಕೆ, ಸಹಬಾಳ್ವೆಯನ್ನು ಮರೆಮಾಚುತ್ತಿದೆ. ಅಸತ್ಯ, ಹಿಂಸೆ, ಭೋಗ, ದ್ವೇಷ, ಸಂಘರ್ಷ ಅಸೂಯೆಗಳನ್ನೇ ಭಿತ್ತಿ ಬೆಳೆಯುತ್ತಿದೆ. ಇಲ್ಲಿ ವ್ಯಕ್ತಿ ಕೇಂದ್ರಿತ ಚಿಂತನೆಗಳು, ವ್ಯಕ್ತಿ ಕೇಂದ್ರಿತ ಅಭಿವೃದ್ಧಿ ಮುಖ್ಯವಾಗಿ ಸಮುದಾಯದ ಪರವಾದ ಕಾಳಜಿಗಳು, ಸಮಾಜ ಕೇಂದ್ರಿತ ಚಿಂತನೆಗಳು, ಅಭಿವೃದ್ಧಿಗಳು ಮರೆಗೆ ಸರಿಯುತ್ತಿವೆ.

ಸಂಘಟನೆ, ಚಳವಳಿ, ಹೋರಾಟ, ಪ್ರತಿಭಟನೆ, ಸಂವಾದ, ಚರ್ಚೆಗಳು ಮಹತ್ವವನ್ನು ಕಳೆದುಕೊಳ್ಳುತ್ತಿವೆ ಯಾಕೆ? ಇವುಗಳು ಇಂದಿನ ಯುವಕರನ್ನು ಒಳ್ಳೆಯ ರೀತಿಯಲ್ಲಿ ಯಾಕೆ ಪ್ರಭಾವಿಸುತ್ತಿಲ್ಲ. ಯುವಕರ ಬದುಕು ಒಂದು ಕಡೆ ದುಸ್ತಾರ ಆಗ್ತಾ ಇದ್ರೆ, ಇನ್ನೊಂದು ಕಡೆ ಶೋಕಿ ಆಗ್ತಾ ಇದೆ ಯಾಕೆ? ಇದಕ್ಕೆ ಯುವಕರು ಕಾರಣವೆ, ವ್ಯವಸ್ಥೆ ಕಾರಣವೆ? ಇತ್ತೀಚೆಗೆ ಸಂವಾದ ಎನ್ನುವುದು ಸಂಘರ್ಷ ಆಗ್ತಾ ಇದೆ. ಚರ್ಚೆ ಎನ್ನವುದು ಇನ್ನೊಂದು ಸಂಘರ್ಷಕ್ಕೆ ದಾರಿ ಆಗ್ತಾ ಇದೆ. ಮಾತುಗಳು ಮೈಲಿಗೆ ಆಗ್ತಾ ಇವೆ. ಮಾತಿಗೂ ಸೂತಕದ ಛಾಯೆ ಆವರಿಸುತ್ತಿದೆ. ಮಾತನಾಡುವವರನ್ನು ಬಾಯಿ ಮುಚ್ಚಿಸುತ್ತಿದ್ದಾರೆ. ಬಡತನ, ನಿರುದ್ಯೋಗ, ಆರೋಗ್ಯ ಶಿಕ್ಷಣ ಮುಂತಾದ ಸಮಸ್ಯೆಗಳ ಮಧ್ಯೆಯೂ ಧರ್ಮ, ಜಾತಿ, ವರ್ಗ, ವರ್ಣಗಳ ಹೆಸರಿನಲ್ಲಿ ದಿನನಿತ್ಯ ಸಂಘರ್ಷಗಳು ನಡೆಯುತ್ತಲೇ ಇವೆ ಯಾಕೆ ಎನ್ನುವ ಹಲವಾರು ಪ್ರಶ್ನೆಗಳಿಗೆ ಉತ್ತರ ಕಂಡು ಕೊಳ್ಳಬೇಕಿದೆ.

ನಮಗೆ ಬೇಕಾಗಿರುವುದು ಕಲ್ಯಾಣದ (ಅಭಿವೃದ್ಧಿ) ರಾಜಕಾರಣ, ಇಲ್ಲಿ ಸಮಾಜದ, ಸಮುದಾಯದ ಕಲ್ಯಾಣವೇ ಮುಖ್ಯವಾಗಬೇಕು. ಸಮಾಜ ಕೇಂದ್ರಿತ ಚಿಂತನೆಗಳು ಮುಖ್ಯವಾಗಿ ವ್ಯಕ್ತಿ ಕೇಂದ್ರಿತ ಚಿಂತನೆಗಳು ಮರೆಗೆ ಸರಿಯಬೇಕು. ಸಮಾಜವನ್ನು, ವ್ಯವಸ್ಥೆಯನ್ನು ಸರಿದಾರಿಯಲ್ಲಿ ನಡೆಸಬೇಕಾದ ಮಾಧ್ಯಮಗಳು ತಮ್ಮ ಜವಾಬ್ದರಿಯನ್ನು ಮರೆತು ಬಂಡವಾಳಶಾಹಿಗಳ ಹಿಡಿತಕ್ಕೆ ಸಿಕ್ಕಿ ಅವರ ಅಣತಿಯಂತೆ ಬಾಲ ಅಲ್ಲಾಡಿಸುತ್ತಿವೆ. ಅವುಗಳಿಗೆ ಟಿ.ಆರ್.ಪಿ. ಮುಖ್ಯವೇ ಹೊರತು ವ್ಯವಸ್ಥೆಯ ಓರೆ - ಕೋರೆಗಳನ್ನು ತಿದ್ದುವುದಲ್ಲ. ಇನ್ನು ಮಠಮಾನ್ಯಗಳೂ ಬಂಡವಾಳಗಾರರ ಅಥವಾ ಅಂಥದೇ ರಾಜಕಾರಣಿಗಳ ಹಿಡಿತದಲ್ಲಿವೆ. ಊರಿಗೊಂದು, ಜಾತಿಗೊಂದು, ಇತ್ತೀಚೆಗೆ ಉಪಜಾತಿ, ಪಂಗಡಗಳಿಗೊಂದು ಮಠ ಮತ್ತು ಜಗದ್ಗುರುಗಳು ಹುಟ್ಟಿಕೊಂಡಿದ್ದಾರೆ. ಇವರಿಗೆ ಮಠದ ಆಸ್ತಿ ಜಾತಿಯ ಅಭಿವೃದ್ಧಿ ಮುಖ್ಯವಾಗಿದೆಯೇ ವಿನಃ ಸಾಮಾನ್ಯ ಜನರ ಕಾಳಜಿಯಲ್ಲ, ಇಂದಿನ ಶಿಕ್ಷಣ ಸಂಸ್ಥೆಗಳನ್ನು, ಅಲ್ಲಿನ ಅರಾಜಕ, ಭ್ರಷ್ಟ ಆಡಳಿತವನ್ನು ನೋಡಿದರೆ ದೇಹ ಅಗ್ನಿ ಜ್ವಾಲೆಯಾಗುತ್ತದೆ. ಶಿಕ್ಷಣ ಸಂಸ್ಥೆಗಳು ಶಿಕ್ಷಣ ತಜ್ಞರ ಕೈಜಾರಿ ರಾಜಕಾರಣಿಗಳ, ರಿಯಲ್ ಎಸ್ಟೇಟ್ ಏಜೆನ್ಸಿಗಳ, ಬಂಡವಾಳ ಶಾಹಿಗಳ ಕಪಿ ಮುಷ್ಟಿಯಲ್ಲಿವೆ. ಇಲ್ಲಿ ಯೂ ಹಣಸಂಪಾದನೆ ಮುಖ್ಯವಾಗಿರುತ್ತದೆಯೇ ವಿನಹ ನಮ್ಮ ಮಕ್ಕಳ ಭವಿಷ್ಯವಾಗಲೀ, ಪೋಷಕರ ಸಂಕಷ್ಟಗಳಾಗಲೀ, ಸಾಹಿತ್ಯ,

ಸಂಸ್ಕೃತಿ, ಭಾಷೆಯಾಗಲೀ ವ್ಯವಸ್ಥೆಯಾಗಲೀ, ಸಮಾಜವಾಗಲೀ ಅವರಿಗೆ ಮುಖ್ಯವಾಗುವುದಿಲ್ಲ. ಇನ್ನು ಖಾಸಗೀ ಕಂಪನಿಗಳಲ್ಲಿಯೂ ಲಾಭ ನಷ್ಟವೇ ಮುಖ್ಯ ಜನಹಿತ, ಸಮಾಜ ಸುಖ! ಅವುಗಳಿಗೆ ಬೇಕಾಗಿಲ್ಲ. ಸಮಾಜವಾಗಲೀ ಸಮುದಾಯ ಗಳಾಗಲಿ, ಬಡತನ - ನಿರ್ಗತಿಕನಾಗಲೀ, ಸಾಮಾನ್ಯನಾಗಲೀ, ಸ್ಥಳೀಯ ಭಾಷೆ ಅಭಿವೃದ್ಧಿಯಾಗಲೀ ಇಲ್ಲಿ ಮುಖ್ಯವಾಗುವುದಿಲ್ಲ. ಇಲ್ಲೆಲ್ಲಾ ಸಾಮಾಜಿಕ ವ್ಯವಸ್ಥೆಗಿಂತ ವೈಯಕ್ತಿಕ ಲಾಭ-ನಷ್ಟಗಳೇ ಮುಖ್ಯ ಹೀಗಿರುವಾಗ ಯುವಕರ ಪಾಡು ಏನಾಗಬೇಕು. ಅವರ ಮುಂದಿನ ಮಾದರಿಗಳು ಯಾರಾಗಬೇಕು, ಯಾವ ಆದರ್ಶಗಳು ಅವರನ್ನು ಮುನ್ನಡೆಸಬೇಕು.

ಅಭಿವೃದ್ಧಿ ರಾಜಕಾರಣಕ್ಕೆ ನಾವು ಒತ್ತುಕೊಡದಿದ್ದರೆ ಭವಿಷ್ಯದ ಗತಿ ಏನು. ಮೇಲೆ ತಿಳಿಸಿದಂತೆ ಅನೇಕ ರೀತಿಯ ದ್ವಂದ್ವಗಳು ಯುವರಕನ್ನು ಕಾಡುತ್ತಿವೆ. ಅವುಗಳನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲರಾಗುತ್ತಿದ್ದಾರೆ. ಸಾಮಾಜದ ಇಂಥ ಅನಿಷ್ಟಗಳ ವಿರುದ್ಧ ಈಜಬೇಕಾದ ಯುವಕರು ಅದೇ ಅಲೆಯಲ್ಲಿ ಅದೇ ಅಮಲಿನಲ್ಲಿ ತೇಲುತ್ತಿದ್ದಾರೆ. ಸಮಾಜವಾದದ ವಿರುದ್ಧ ದಿಕ್ಕಿನಲ್ಲಿ ಸಮಾಜ ಮುನ್ನಡೆಯುತ್ತಿದೆ. ಇದು ಆಗಬಾರದು. ಈ ಒತ್ತಡದ 'ಹಣ ಕೇಂದ್ರಿತ' ಜೀವನ ವಿಧಾನದಿಂದ ಬೆಳೆದ ನಗರಗಳೇ ಇನ್ನೂ ಬೆಳೆಯುತ್ತಿವೆ. ದುರ್ಬಲವಾದ ಹಳ್ಳಿಗಳು ಇನ್ನೂ ದುರ್ಬಲವಾಗುತ್ತಿವೆ. ನಿರ್ಜನ ಸ್ಮಶಾನಗಳಾಗುತ್ತಿವೆ. ಅಸಹಾಯಕರು, ನಗರದಲ್ಲಿ ದುಡಿಯಲಾರದವರು ಮಾತ್ರ ಹಳ್ಳಿಗಳಲ್ಲಿದ್ದಾರೆ. 'ವಲಸೆ' ಬಹಳ ದೊಡ್ಡ ಸಮಸ್ಯೆ ತಂದೊಡ್ಡುತ್ತಿದೆ. ಆದ್ದರಿಂದ ಗ್ರಾಮಗಳಿಗೆ ಮೂಲ ಸೌಕರ್ಯ ಒದಗಿಸಿ ಕೃಷಿಯನ್ನು ಪುನರುಜ್ಜಿವನಗೊಳಿಸಬೇಕಾಗಿದೆ. ಗ್ರಾಮೀಣ ಬದುಕಿನ ಧಾರುಣ ಸ್ಥಿತಿ ಬದಲಾಗಬೇಕಾಗಿದೆ.

ಯುವಶಕ್ತಿಯನ್ನು ಸದ್ಬಳಕೆ ಮಾಡಿಕೊಳ್ಳದ, ಬಂಡವಾಳಶಾಹಿ ರಾಜಕಾರಣ ಹಾಗೂ ಅದರ ಅನುದಾನಿತ ಮಾಧ್ಯಮಗಳು, ಮಠಮಾನ್ಯಗಳು, ಶಿಕ್ಷಣ ಸಂಸ್ಥೆಗಳು ಯುವಕರನ್ನು ಕೂಗು ಮಾರಿಯನ್ನಾಗಿ ಮಾಡಿಕೊಳ್ಳುತ್ತಿವೆ. ಯುವಕರು ಕೂಗುಮಾರಿಗಳಾಗಬಾರದು. ಯುವಶಕ್ತಿಯ ದುರ್ಬಳಕೆ ತಪ್ಪಬೇಕು. ಆಗ ಮಾತ್ರ ಉತ್ತಮ ಸಮಾಜ ನಿರ್ಮಿಸಲು ಸಾಧ್ಯ. ಬೌದ್ಧಿಕ ದಿವಾಳಿತನದ ಸಮಸ್ಯೆ ಎಲ್ಲಾ ರಂಗಗಳಲ್ಲಿಯೂ ಇದೆ ಅದಕ್ಕೆ ಚಿಕಿತ್ಸೆ ನೀಡುವ ಕೆಲಸ ಆಗಬೇಕು. ಇಂದಿನ ಕಲಿತ ಯುವಕರು, ಮಲೀನಗೊಂಡಿರುವ, ಭ್ರಷ್ಟಗೊಂಡಿರುವ ರಾಜಕೀಯ, ಧರ್ಮ, ಶಿಕ್ಷಣ, ಉದ್ಯೋಗ, ಸಾಹಿತ್ಯ, ಸಂಸ್ಕೃತಿ, ಸಂಶೋಧನೆ, ಸಾಮಾಜಿಕ ಚಿಂತನೆಗಳ ಕಡೆ ಹೆಚ್ಚು ಹೆಚ್ಚು ಗಮನ ಹರಿಸಬೇಕು. ಈ ಮೂಲಕ ಸಮಾಜದ ಸ್ವಾಸ್ಥ್ಯವನ್ನು ಕಾಪಾಡುವ ಜವಾಬ್ದಾರಿಯನ್ನು ಹೊರಬೇಕಾಗಿದೆ.

ಇಂತಹುವಗಳೇ ನೂರಾರು ಸಮಸ್ಯೆಗಳು ದಿನನಿತ್ಯ ಸಮಾಜವನ್ನು ಬಸವಳಿಯು ವಂತೆ ಮಾಡುತ್ತಿವೆ. ಇವೆಲ್ಲವುಗಳಿಗೂ ಉತ್ತರವನ್ನು ನಾವೇ ಕಂಡು ಕೊಳ್ಳಬೇಕು.

ಕಾಲಹರಣ, ಸೋಮಾರಿತನ, ದ್ವೇಷ, ಅಸೂಯೆ, ಅತಿಯಾದ ಭಾವುಕತೆ, ಭ್ರಷ್ಟಚಾರ, ಅಸಹಕಾರ, ಅಸಹಿಷ್ಣುತೆಗಳಿಂದ ಮುಕ್ತರಾಗಿ ಸಹಕಾರ ಭ್ರಾತೃತ್ವ, ಸೋದರತೆ, ಹೊಂದಾಣಿಕೆ, ತ್ಯಾಗ, ಅಹಿಂಸೆ, ಅಸಂಗ್ರಹ ಮುಂತಾದ ಮೌಲ್ಯಗಳನ್ನು ರೂಢಿಸಿಕೊಳ್ಳಬೇಕು. ಹಿರಿಯರನ್ನು ತಂದೆ, ತಾಯಿಗಳನ್ನು, ಪೋಷಕರನ್ನು, ವೃದ್ಧರನ್ನು, ಮಕ್ಕಳನ್ನು, ಸ್ತ್ರೀಯರನ್ನು, ನೆರೆಹೊರೆಯವರನ್ನು ನಮ್ಮ ಭಾಷೆ, ಸಂಸ್ಕೃತಿ, ದೇಶ ಮುಂತಾದವುಗಳನ್ನು ಗೌರವಿಸಬೇಕಾಗಿದೆ. ಈ ನಿಟ್ಟಿನಲ್ಲಿ ಈ ಹೊತ್ತಿನ ವಿದ್ಯಮಾನಗಳನ್ನು ಅರಿತುಕೊಳ್ಳುವಲ್ಲಿ ಅಂತರ್‌ಜಾಲವನ್ನು ಬಳಕೆ ಮಾಡಿಕೊಳ್ಳುವುದು ಉತ್ತಮವಾದ ಬೆಳವಣಿಗೆ, ಆದರೆ ಅದು ದುರುಪಯೋಗಕ್ಕೆ ಹೆಚ್ಚು ಬಳಕೆಯಾಗುತ್ತಿರುವುದು ವಿಷಾದನೀಯ. ಎಲ್ಲವನ್ನು ಅಂತರ್‌ಜಾಲದಲ್ಲಿ ಗ್ರಹಿಸಿಯೇ ತಿಳಿಯುತ್ತೇವೆಂಬ ಭ್ರಮೆಯಿಂದ ಹೊರಬಂದು ಲಕೋಪಲಕ್ಷ ಸಂಖ್ಯೆಯಲ್ಲಿ ಮುದ್ರಿತವಾದ ಕನ್ನಡ ಭಾಷಾ ಕೃತಿಗಳನ್ನು ಓದುವುದರಿಂದ ಪರಂಪರೆಯ ಅರಿವು ಮತ್ತು ಸಮಕಾಲೀನತೆಯ ಎಚ್ಚರಿಕೆ ತಿಳಿಯುತ್ತದೆ. ಆದುದರಿಂದ ಯುವಕರೇ ವಾರಕ್ಕೊಂದರಂತೆಯಾದರೂ ಕನ್ನಡ ಕೃತಿಗಳನ್ನು ಓದುವ ಮೂಲಕ ಜ್ಞಾನವನ್ನು ಹೆಚ್ಚಿಸಿಕೊಳ್ಳಿ. ಆ ಮೂಲಕ ದೇಶದ ಪ್ರಗತಿಗೆ ಮುಂದಾಗಿ,

ಇಂದಿನ ಹೋರಾಟಗಳು, ಚಳುವಳಿಗಳು, ಸುಧಾರಣೆ ಹೆಸರಿನಲ್ಲಿ, ಅಭಿವೃದ್ಧಿ ಹೆಸರಿನಲ್ಲಿ ನಡೆಯುತ್ತಿರುವ ಬೆಳವಣಿಗೆಗಳು ಸಮಾಜ ಕಂಟಕಗಳಿಗೆ ದಾರಿಯಾಗುತ್ತಿವೆ. ಸ್ವಾರ್ಥದಿಂದ ಕೂಡಿದ್ದು ಏಕವ್ಯಕ್ತಿಯ ಏಕೋದ್ದೇಶಕ್ಕಾಗಿ ನಡೆಯುತ್ತಿದ್ದು ಸಾಮಾಜಿಕವಾದ, ಸಮಾಜಮುಖಿಯಾದ ಕಾಳಜಿ ಕಾಣುತ್ತಿಲ್ಲ. ಇಲ್ಲೆಲ್ಲಾ ಹೆಚ್ಚು ಹೆಚ್ಚು ಯುವಕರು ತೊಡಗಿಕೊಂಡು ಇವುಗಳಿಗಿರುವ ಕಳಂಕವನ್ನು ದೂರ ಮಾಡಬೇಕಾಗಿದೆ. ಪ್ರಜಾಪ್ರಭುತ್ವದ ಆಶಯಗಳನ್ನು ಎತ್ತಿ ಹಿಡಿಯಬೆಕಾಗಿದೆ. ಹದಗೆಟ್ಟು ಮಲಿನಗೊಂಡು ಗಬ್ಬುನಾರುತ್ತಿರುವ ರಾಜಕಾರಣವನ್ನು ಇಂದಿನ ಯುವಪೀಳಿಗೆ ಶುದ್ದೀಕರಿಸಿ ಸ್ವೀರಿಕರಿಸಬೇಕಾಗಿದೆ. ಜಾತಿರಹಿತ, ಸ್ವಾರ್ಥರಹಿತ, ಸಮೃದ್ಧಿಯ 'ಕಲ್ಯಾಣ ಕರ್ನಾಟಕ' ನಮ್ಮ ಗುರಿಯಾಗ ಬೇಕಾಗಿದೆ. ಅದಕ್ಕಾಗಿ ಇಂದಿನ ಯುವಕರ ಗುರಿ ಮತ್ತು ಮಾರ್ಗ ಸ್ಪಷ್ಟವಾಗಿರಬೇಕು.ಭೌತಿಕ ಅಭಿವೃದ್ಧಿಗಿಂತ ಬೌದ್ಧಿಕ ಅಭಿವೃದ್ಧಿಯ ಕಡೆ ಗಮನ ಕೊಡಬೇಕು. ಅದಕ್ಕಾಗಿ ತಮ್ಮ ಕುಟುಂಬ ವಲಯ, ಸ್ನೇಹವಲಯ, ಉದ್ಯೋಗವಲಯ...... ಹೀಗೆ ಎಲ್ಲಾ ಕಡೆ ಉತ್ತಮ ಸಂಬಂಧಗಳನ್ನು ಸೃಷ್ಟಿಸಿಕೊಳ್ಳಬೇಕಾಗಿದೆ.

ಇಂದು ತಿನ್ನುವ ಅನ್ನ, ಕುಡಿಯುವ ನೀರು, ಸೇವಿಸುವ ಗಾಳಿ, ಕೇಳಿಸಿಕೊಳ್ಳುವ ಶಬ್ದ, ಆಲಿಸುವ ನೀತಿ, ಆಡುವ ಮಾತು, ಆಲೋಚಿಸುವ ನಮ್ಮ ಚಿಂತನೆಗಳೆಲ್ಲವೂ ಮಲಿನಗೊಳ್ಳುತ್ತಿವೆ. ತತ್ವಸಿದ್ಧಾಂತಗಳನ್ನು ನಮ್ಮ ಮೂಗಿನ ನೇರಕ್ಕೆ ಬಳಸಿಕೊಳ್ಳುತ್ತಿದ್ದೇವೆ? ಇವೆಲ್ಲವುಗಳಿಗೂ ಕಾರಣಗಳೇನು?ಇದನ್ನು ಹೋಗಲಾಡಿ ಸುವುದು ಹೇಗೆ ಎಂಬುದನ್ನು ಚಿಂತಿಸಬೇಕಾಗಿದೆ.ಆಹಾರದಷ್ಟೇ ಔಷಧಿಗಳು, ನೀರಿನಷ್ಟೇ -ಬೀರು, ಆಸ್ಪತ್ರೆಯಷ್ಟೇ- ಬಾರುಗಳು ಬಳಕೆಯಾಗುತ್ತಿವೆ. ಜ್ಞಾನದಾಹಕ್ಕಿಂತ ಧನದಾಹವೇ ಹೆಚ್ಚಾಗಿ ಮಣ್ಣು-

ಕಲ್ಲು, ಗಿಡ- ಮರ, ಕಾಡು-ಕಣಿವೆಬೆಟ್ಟ-ಗುಡ್ಡ, ನದಿ-ಸರೋವರ, ತೋಟ-ಕುಡಿಕೆಗಳನ್ನೆಲ್ಲಾ ತಿಂದು ನೊಣೆಯುತ್ತಿದ್ದೇವೆ. ಹೀಗೇ ಆದರೆ ಮುಂದಿನ ಭವಿಷ್ಯದ ದಿನಗಳಲ್ಲಿ ನಾಳಿನ ಸಮಾಜ ಬದುಕುವುದು ಹೇಗೆ?

ಸ್ನೇಹಿತರೆ "ಯಾರನ್ನೂ ದ್ವೇಷಿಸುವುದರಲ್ಲಿ ಕಾಲಕಳೆಯಬೇಡಿ ಜೀವನ ಚಿಕ್ಕದು.ನಿಮ್ಮನ್ನು ಯಾರಿಗೂ ಹೋಲಿಸಿಕೊಳ್ಳಬೇಡಿ, ಯಾಕೆಂದರೆ ಅವರ ಪಯಣ ಎಲ್ಲಿಗೆಂದು ನಿಮಗೆ ತಿಳಿಯದು."ಅದಕ್ಕಾಗಿಯೇ ನಿಮಗೆ ಸ್ಪಷ್ಟವಾದ ಗುರಿ, ಸಾಧಿಸುವ ಛಲ ಇದ್ದರೆ ಅದು ಸಾಧನೆಗೆ ಊರುಗೋಲಾಗುತ್ತದೆ. ರಾಜಕಾರಣಿಗಳಾಗಿ, ವಿಜ್ಞಾನಿಗಳಾಗಿ, ತಂತ್ರಜ್ಞಾರಾಗಿ, ಕೃಷಿಕರಾಗಿ, ಕೂಲಿಕಾರ್ಮಿಕರಾಗಿ ಆದರೆ ಅದಕ್ಕೆ ನ್ಯಾಯ ತಂದು ಕೊಡಿ, ನಿಸ್ವಾರ್ಥದಿಂದ ಕೆಲಸ ಮಾಡಿ, 'ಜ್ಞಾನದಿಂದ ಅಧಿಕಾರ ಸಿಗಬಹುದು, ಆದರೆ ಗೌರವ ಸಿಗಬೇಕಾದರೆ ವ್ಯಕ್ತಿತ್ವ ಇರಬೇಕು.'

ಅತಿಯಾದ ವಲಸೆಯಿಂದ ಗ್ರಾಮಗಳು ಸೊರಗುತ್ತಿವೆ. ಹಳ್ಳಿಗಳು ವೃದ್ಧಾಶ್ರಮ ಗಳಾಗುತ್ತಿವೆ. ದುಡಿಯಲಾರದವರ, ಅಸಹಾಯಕರ ಗಂಜೀಕೇಂದ್ರ ಗಳಾಗುತ್ತಿವೆ. ಅದು ತಪ್ಪಬೇಕು.ಗಾಂಧಿ ಕನಸಿನಂತೆ "ಗ್ರಾಮಗಳ ಉದ್ಧಾರವೇ ದೇಶದ ಉದ್ಧಾರ."ವಲಸೆ ಎನ್ನುವುದು ಹಳ್ಳಿ ಮತ್ತು ನಗರಗಳು ಎರಡೂ ಕಡೆ ಸಮಸ್ಯೆ ತಂದೊಡ್ಡುತ್ತಿದೆ. ಅದನ್ನು ಸರಿದೂಗಿಸಬೇಕು.ದುಡ್ಡುಳ್ಳ ಯುವಕರು ಗ್ರಾಮೀಣ ಪ್ರದೇಶಗಳಲ್ಲಿ ಚಿಕ್ಕ ಚಿಕ್ಕ ಉದ್ಯಮಗಳನ್ನು ಪ್ರಾರಂಭಿಸಬೇಕಾಗಿದೆ. ಕೃಷಿಯನ್ನು, ರೈತನನ್ನು ಕಾಪಾಡಿಕೊಳ್ಳಬೇಕಾದ ತುರ್ತು ನಮ್ಮ ಮುಂದಿದೆ. ಕಾರ್ಖಾನೆಗಳಲ್ಲಿ ವಿನಾಶಕ್ಕೆ ಬೇಕಾದ ಬಾಂಬು ತಯಾರಿಸಬಹುದು ಆದರೆ ಜೀವನಕ್ಕೆ ಬೇಕಾದ ಒಂದು ಭತ್ತ, ಒಂದು ರಾಗಿ, ಒಂದು ಗೋಧಿ, ಕಾಳು, ಕಡ್ಡಿಗಳನ್ನು, ತರಕಾರಿ, ಹಣ್ಣು ಹಂಪಲುಗಳನ್ನು ತಯಾರಿಸಲಾದೀತೆ? ಯೋಚಿಸಿ ಅದಕ್ಕಾಗಿ ಮರಳಿ ಹಳ್ಳಿಗಳ ಕಡೆ ಚಲಿಸಬೇಕಾಗಿದೆ.

ಯಂತ್ರಗಳ ಅತಿಯಾದ ಅವಲಂಬನೆ ಕಡಿಮೆಯಾಗಬೇಕು.ಸರ್ಕಾರವನ್ನು ನೆಚ್ಚಿಕೂರುವುದಕ್ಕಿಂತ ಸ್ವಯಂ ಉದ್ಯೋಗಗಳ ಕಡೆ ಗಮನ ಹರಿಸಬೇಕಾಗಿದೆ.ಕಲೆ, ಸಾಹಿತ್ಯ, ವಿಜ್ಞಾನ, ಕೃಷಿ, ಉದ್ಯಮ, ಕ್ರೀಡೆ, ರಾಜಕಾರಣ, ತಂತ್ರಜ್ಞಾನ ಇತ್ಯಾದಿಗಳಲ್ಲಿ ಯುವಕರು ಹೆಚ್ಚು ಹೆಚ್ಚು ತೊಡಗಿಕೊಳ್ಳಬೇಕು.ಆ ಮೂಲಕ ದೇಶದ ಅಭಿವೃದ್ಧಿಗೆ ಕೈ ಜೋಡಿಸಬೇಕಾಗಿದೆ. ಕನ್ನಡ, ಕನ್ನಡಿಗ, ಕರ್ನಾಟಕದ ಬೆಳವಣಿಗೆಯಲ್ಲಿ ತೊಡಗಿಕೊಳ್ಳ ಬೇಕಾಗಿದೆ. ನಮ್ಮ ಜಲ, ಜನ, ಭಾಷೆಗೆ ಆದ್ಯತೆ ನೀಡಬೇಕಾಗಿದೆ

ಯುವಕರಲ್ಲಿ ಮತ್ತೊಂದು ಕಿವಿಮಾತು ಇಂದಿನ ಯುವಜನತೆ ರಾಜಕಾರಣಿಗಳ ಗುಲಾಮರಾಗುತ್ತಿದ್ದಾರೆ.ಡ್ರಗ್ ಮಾಫಿಯಾಗಳಿಗೆ ದಲ್ಲಾಳಿಗಳಾಗುತ್ತಿದ್ದಾರೆ. ಇದರಿಂದ ಹಳ್ಳಿ - ನಗರವೆಂಬ ಭೇದಭಾವವಿಲ್ಲದೆ ಯುವ ಸಮೂಹ ಹಾಳಾಗುತ್ತಿದೆ. ಇದರಿಂದ ಸಮಾಜದಲ್ಲಿ ಅತ್ಯಾಚಾರ, ಅನಾಚಾರ, ಕೊಲೆ, ಸುಲಿಗೆ, ಹಗಲು ದರೋಡೆಗಳು

ಹೆಚ್ಚಾಗುತ್ತಿವೆ. ಸಾರ್ವಜನಿಕರು, ಅಸಹಾಯಕರು, ಅಮಾಯಕರು ಆತಂಕದಲ್ಲಿ ಬದುಕುತ್ತಿದ್ದಾರೆ. ಇದಕ್ಕೆಲ್ಲ ಯಾರು ಕಾರಣ?ಯಾರನ್ನ ದೂರುವುದು?ಪ್ರಭುತ್ವವೇ ಎಲ್ಲಕ್ಕೂ ಕಾರಣವೇ? ನಮ್ಮ ಪಾಲು ಇಲ್ಲವೆ ಚಿಂತಿಸಬೇಕಾಗಿದೆ.

ಎಲ್ಲರೂ ಶ್ರೀಮಂತಿಕೆಯ ಬದುಕನ್ನು ಇಷ್ಟಪಡುತ್ತಾರೆ. ಅದು ಸಹಜ.ಆದರೆ "ನೆಮ್ಮದಿಯು" ಅದಕ್ಕಿಂತ ಶ್ರೀಮಂತವಾದದ್ದೆಂದು ಎಷ್ಟೋ ಜನರಿಗೆ ಗೊತ್ತೇ ಇರುವುದಿಲ್ಲ. ಸ್ನೇಹಿತರೆ ಯಾರಿಗೂ ಯಾವುದೂ ಅಸಾಧ್ಯವಲ್ಲ, ಸಾಧಿಸುವ ಛಲ ಇರಬೇಕು."ದೂರದಿಂದ ನೋಡಿದರೆ ಬೆಟ್ಟ ತಲೆಯ ಮೇಲಿರುತ್ತದೆ. ಕಷ್ಟ ಪಟ್ಟು ಮೇಲೆ ಹತ್ತಿದರೆ ಅದೇ ಬೆಟ್ಟ ಕಾಲ ಕೆಳಗಿರುತ್ತದೆ.ಅದಕ್ಕೆ ವಿವೇಕಾನಂದರು "ನೀನು ಮಾಡಿದ ತಪ್ಪಿಗೆ ಎದುರು ನುಡಿಯಬೇಡ, ತಪ್ಪು ಮಾಡದೆ ಎದುರಾಳಿಗೆ ತಲೆ ತಗ್ಗಿಸಬೇಡ" ಎಂದು ಕರೆ ಕೊಡುತ್ತಾರೆ. ರಾಮಾಯಣ, ಮಹಾಭಾರತ, ಬೈಬಲ್, ಕುರಾನ್ ಇತ್ಯಾದಿ ಗ್ರಂಥಗಳು ಮನುಷ್ಯನ ಸಹಜ ವರ್ತನೆಗಳನ್ನೇ ಹೇಳಿವೆ. ಅದರಲ್ಲಿ ಒಳಿತು, ಕೆಡುಕು ಎಲ್ಲವೂ ಇದೆ. ಅವು ಸಮಾಜದ ಕನ್ನಡಿಗಳು ಅವುಗಳನ್ನು ದುರಾತ್ಮರು ತಮಗೆ ಬೇಕಾದ ಹಾಗೆ ವ್ಯಾಖ್ಯಾನಿಸಿ ಅನುಕೂಲಕ್ಕೆ ತಕ್ಕಂತೆ ಜನರಿಗೆ ಯುವ ಜನರಿಗೆ ಮತ್ತು ಅಮಾಯಕರಿಗೆ ಹೇಳಿ ದಿಕ್ಕು ತಪ್ಪಿಸುತ್ತಿದ್ದಾರೆ.ಇದರಲ್ಲಿ ಯುವಕರ ಜವಾಬ್ದಾರಿ ಬಹಳ ಇದೆ ಎನಿಸುತ್ತದೆ.

ದಿನನಿತ್ಯ ಬಲಗೊಳ್ಳುತ್ತಿರುವ ಜಾತಿಯ ತರತಮನೆಗಳು, ಮೇಲು-ಕೀಳು ಭಾವನೆಗಳು, ಧಾರ್ಮಿಕ ಕಲಹಗಳು, ಮರ್ಯಾದಾ ಹತ್ಯೆಗಳು, ನೈತಿಕ ಪೋಲಿಸ್‌ಗಿರಿ, ಆತ್ಮಹತ್ಯೆಗಳು, ಕೌಟುಂಬಿಕ ವಿಘಟನೆಗಳು, ಕೌಟುಂಬಿಕ ಕಲಹಗಳು, ವಿಚ್ಛೇದನಗಳು, ಮನೋವ್ಯಾಕುಲತೆಗಳು, ಅಸಹಿಷ್ಣುತೆ, ಹಿಂಸೆ, ಅತ್ಯಾಚಾರ, ಭ್ರಷ್ಟತೆ, ಅನಾಥಾಲಯಗಳು, ವೃದ್ಧಾಶ್ರಮಗಳು, ಆಸ್ಪತ್ರೆಗಳು, ಔಷಧಾಲಯಗಳು ಮುಂತಾದವು ಹೆಚ್ಚುತ್ತಿರುವುದು ಯಾಕೆ? ಇದಕ್ಕೆ ಕಾರಣವೇನು? ಇತ್ಯಾದಿ ವಿಚಾರಗಳ ಕಡೆ ನಾವು ಗಮನಹರಿಸಬೇಕು. ಇದು ಆಧುನಿಕತೆ, ನಾಗರೀಕತೆ, ಜಾಗತೀಕರಣದ ಕೊಡುಗೆಯೇ?ಗೊತ್ತಿಲ್ಲ ಎಲ್ಲರೂ ಚಿಂತಿಸಬೇಕಾಗಿದೆ.

ಬದಲಾದ ಕಾಲಘಟ್ಟದಲ್ಲಿ ಜಾಗತೀಕರಣ, ಖಾಸಗೀಕರಣ, ಉದಾರೀಕರಣ ನೀತಿಗಳು ಇಂದಿನ ಅಗತ್ಯತೆಗಳನ್ನು ನಿರ್ಧರಿಸುತ್ತಿವೆ. ಸಾಮಾಜಿಕ, ಸಾಮೂದಾಯಿಕ ಬದುಕಿಗೆ ಬದಲಾಗಿ ವೈಯಕ್ತಿಕ ಸಾದನೆ, ಸಂತೋಷಗಳನ್ನು ಮುಂದುಮಾಡಿದೆ. ಹಾಗಾಗಿಯೇ ವೈಯಕ್ತಿಕ ನೆಲೆಯನ್ನು ಪ್ರಚೋದಿಸುವ ಶಿಕ್ಷಣ (ಸೇವಾ ವಲಯ) ಜಾರಿಗೆ ಬಂದಿದೆ. ಸರಕು ಸಂಸ್ಕೃತಿಯನ್ನು ಪ್ರಚೋದಿಸುತ್ತಿದೆ. ಮೊಬೈಲ್, ಸಾಮಾಜಿಕ ಜಾಲತಾಣಗಳು ಈ ನಿಟ್ಟಿನಲ್ಲಿ ಯುವಜನರ ಅಭಿರುಚಿ ತಿದ್ದುತಿವೆ. ಹೀಗಾಗಿಯೇ ೯೦ರ ದಶಕದ ನಂತರದ ಬಲಪಂಥೀಯ ರಾಜಕಾರಣ ಇದನ್ನು ಚೆನ್ನಾಗಿ ಬಳಸಿಕೊಂಡು ಕೋಮುವಾದ, ಜಾತಿವಾದ ಇನ್ನಷ್ಟು ಉಲ್ಬಣಗೊಳ್ಳಲು ಕಾರಣವಾಗಿದೆ. ಈ ರಾಜಜೀಯ

ಶಕ್ತಿಗಳು ಯುವಜನತೆಯನ್ನು ಕಲಾಳಾಗಿ ಬಳಸುತ್ತಿವೆ. ತಮ್ಮ ವಿವೇಚನೆಯನ್ನು ಮಾರಿಕೊಂಡಿರುವ ಯುವಜನತೆ ಮುಖ್ಯವಾಹಿನಿಯ ರಾಜಕಾರಣ ಮತ್ತು ಮಾಧ್ಯಮ ಸೃಷ್ಟಿಸುವುದನ್ನೇ ನಿಜ ಎಂದು ನಂಬಿ ಕರುಡಾಗಿ ಅನುಸರಿಸುತ್ತಿದೆ.

ಈ ಮೇಲಿನ ವಿಚಾರಗಳ ಹಿನ್ನೆಲೆಯಲ್ಲಿ ಯುವಜನರ ಬದಲಾದ ಆಶಯಗಳನ್ನು ಗಮನಿಸಬೇಕಿದೆ. ಹುಸಿ ದೇಶವಾದ, ರಾಷ್ಟ್ರಭಕ್ತಿ, ದೇಶಪ್ರೇಮ ಎನ್ನುವ ಅಮಲನ್ನು ತಲೆಯಲ್ಲಿ ತುಂಬಲಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಬರುವ ಮಾಹಿತಿಯ ಸತ್ಯಾಸತ್ಯತೆಯನ್ನು ಪರಿಶೀಲಿಸದೆ ಕುರುಡಾಗಿ ನಂಬುತ್ತಿದೆ. ಈ ನಂಬಿಕೆಯೇ ಇಂದಿನ ಹಲವಾರು ಅವಾಂತರಗಳಿಗೆ ಕಾರಣವಾಗಿದೆ. ಸತ್ಯದ ಹುಡುಕಾಟ ಬೇಡವಾಗಿದೆ. ಇದನ್ನು ಜಾತಿವಾದಿ, ಕೋಮುವಾದಿ ಶಕ್ತಿಗಳು ಸಲೀಸಾಗಿ ಬಳಸಿಕೊಳ್ಳುತ್ತಿದೆ.

ನಿನ್ನೆ, ಇಂದಿನ ತಿಳಿವಿಲ್ಲದ ಯುವಜನಾಂಗ ನಾಳೆಯನ್ನು ಹೇಗೆ ಕಟ್ಟಿಕೊಳ್ಳಬಲ್ಲುದು ಎಂಬುದು ಪ್ರಜ್ಞಾವಂತರಿಗೆ ಚಿಂತೆಗೀಡು ಮಾಡಿದೆ. ಜಾತಿ-ಧರ್ಮ ಮೀರಿದ, ಸಾಮಾಜಿಕ ಮತ್ತು ಸಾಮೂದಾಯಿಕ ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಜನಾಂಗ ಬೇಕಾಗಿದೆ. ಸಾಹಿತ್ಯದ ಓದು, ಚರ್ಚೆ, ನಮ್ಮ ಅಂತರಂಗವನ್ನು ಒಮ್ಮೆ ಕೇಳಿಕೊಂಡು ಮುಂದಿನ ನಡೆಯನ್ನು ನಿರ್ಧರಿಸುವುದು, ನಮ್ಮ ಪರಂಪರೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವುದು, ನಮ್ಮ ಹಿರೀಕರ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕಾಗಿದೆ.

ಕ್ಯಾಶ್ ಮತ್ತು ಕ್ಯಾಸ್ಟ್ ಪ್ರಧಾನವಾಗಿರುವ ಇಂದಿನ ರಾಜಕಾರಣ ನಮ್ಮನ್ನು ಬಹುದೂರ ಕರೆದುಕೊಂಡು ಹೋಗಲು ಸಾಧ್ಯವಿಲ್ಲ. ಇಂದಿನ ಯುವಜನಾಂಗ ಮುಂದಿನ ಬದುಕನ್ನು ಸುಂದರವಾಗಿ ರೂಪಿಸಬಲ್ಲದು ಎಂಬ ಆಶಯ ನನ್ನದು. ನಾವು ಇನ್ನೇನನ್ನೂ ಮಾಡಬೇಕಿಲ್ಲ. ನಮ್ಮ ಹಿರೀಕರು ಬಹುಶ್ರಮದಿಂದ, ರಾಷ್ಟ್ರದ ಬಗ್ಗೆ, ಎಲ್ಲಾ ಜನರ ಬಗ್ಗೆ ಕಟ್ಟಿದ ಕನಸುಗಳು ನಮ್ಮ ಸಂವಿಧಾನದಲ್ಲಿ ಎರಕಗೊಂಡಿವೆ. ಅದನ್ನು ಸರಿಯಾಗಿ ಅರ್ಥೈಸಿಕೊಂಡು ಬದುಕು ಸಾಗಿಸಿದರೆ ಅಷ್ಟೇ ಸಾಕು. ಉತ್ತಮ ದೇಶವನ್ನು ಕಟ್ಟಬಹುದಾಗಿದೆ.

ನಮ್ಮ ಇಂದಿನ ಶತೃಗಳು, ಕೋಮುವಾದ, ಜಾತೀವಾದ, ಭ್ರಷ್ಟಾಚಾರ, ಮೋಸ ಮುಂತಾದ ಸಂಗತಿಗಳು ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ದಿನದಿನಕ್ಕೂ ಕೆಲವರೇ ಶ್ರೀಮಂತರಾಗುವ, ನೈಸರ್ಗಿಕ ಸಂಪತ್ತು ಕೆಲವರ ಪಾಲಾಗುತ್ತಿರುವ, ಅಧಿಕಾರ, ರಾಜಕಾರಣ, ಶ್ರೀಮಂತರ ಪರವಾಗಿರುವ ವಾತಾವರಣ ಬದಲಾಗಬೇಕಿದೆ. ಈ ಜವಾಬ್ದಾರಿ ಮುಂದಿನ ತಲೆಮಾರಿನ ಮೇಲಿದೆ.

ಬಂಧುಗಳೇ ತೀರ ಇತ್ತೀಚೆಗೆ ಆತಂಕದ ಬೆಳವಣಿಗೆಗಳಾಗುತ್ತಿವೆ. ೨೦ನೇ. ಶತಮಾನದುದ್ದಕ್ಕೂ ಸಾಮಾಜಿಕ ಸಮಸ್ಯೆಗಳ ನಿವಾರಣೆಗಾಗಿ, ಸಮಸಮಾಜದ ನಿರ್ಮಾಣಕ್ಕಾಗಿ ತಳಸಮುದಾಯಗಳು, ಶೋಷಿತರು, ಶ್ರಮಿಕರು, ದಲಿತರು, ಅಸ್ಪೃಶ್ಯರು,

ಮಹಿಳೆಯರು, ಕಾರ್ಮಿಕರು ಮುಂತಾದವರ ನೆಮ್ಮದಿಯ ಬದುಕಿಗಾಗಿ, ಚಳುವಳಿ, ಹೋರಾಟ ಬರಹ, ಭಾಷಣ, ರಾಜಕಾರಣ ಎಲ್ಲವೂ ನಡೆದವು. ಅದಕ್ಕೆ ಇದ್ದ ಏಕೈಕ ಗುರಿ ಜನಜಾಗೃತಿಯೇ ಆಗಿತ್ತು. ಆದರೆ ಇಂದು ನಾವಿರುವ ದಿನಗಳು ಅಂದರೆ ೨೧ನೇ ಶತಮಾನದಲ್ಲಿ ಜನಜಾಗೃತಿಗಿಂತ ಜಾತಿ, ಒಳಜಾತಿ, ಪಂಗಡ - ಒಳಪಂಗಡ, ಧರ್ಮ, ವರ್ಗಗಳ ಜಾಗೃತಿಗಳು ಹೆಚ್ಚಾಗಿ ನಡೆಯುತ್ತಿವೆ. ಅಂದರೆ ಸಂಘಟನೆಗಳು ಹೋಳಾಗಿ ವಿಘಟನೆಗಳು ಪ್ರಧಾನವಾಗುತ್ತಿವೆ. ಇದು ಸಾಧಕವೋ ಬಾಧಕವೋ ಚಿಂತಿಸಬೇಕಾಗಿದೆ.

ಗೆಳೆಯರೇ, ಆತ್ಮೀಯರೆ ಇಂಥ ನೂರಾರು ಸಂಕಟಗಳ ಮಧ್ಯೆ ನಾವು ಬದುಕುತ್ತಿದ್ದೇವೆ. ನಮಗಾಗಿ ನಮ್ಮವರ ನೆಮ್ಮದಿಯ ನಾಳೆಯ ದಿನಗಳಿಗಾಗಿ ನಾವೆಲ್ಲಾ ಒಗ್ಗಟ್ಟಾಗಿ ದುಡಿಯಬೇಕಾಗಿದೆ. ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ವಿವೇಕಾನಂದ, ದಾಸರು, ಶರಣರು, ಸಂತರು, ಕವಿಗಳು, ಸುಧಾರಕರು ಆಶಿಸಿದ ಸಮಾಜವನ್ನು ಕಟ್ಟಬೇಕಾದ ಜವಾಬ್ದಾರಿ ನಮ್ಮ ಮೇಲಿದೆ. ನಮ್ಮೆಲ್ಲ ವೈಯಕ್ತಿಕ ದ್ವೇಷಾಸೂಯೆಗಳನ್ನು ಬಿಟ್ಟು ದುಡಿಯೋಣ, ಕರ್ನಾಟಕವೂ, ಭಾರತವೂ ಭವಿಷ್ಯದ ಶಾಂತಿ, ನೆಮ್ಮದಿಯಿಂದ ಕೂಡಿದ ಸಮಾಜವನ್ನು ನಿರ್ಮಿಸೋಣ.

ಹುಸಿನಗುತ ಬಂದೇವಾ, ನಸುನಗುತಾ ಬಾಳೋಣ

ತುಸು ನಗುತ ತೆರಳೋಣ, ಬಡನೂರು ವರುಷಾನು

ಹರುಷಾದಿ ಕಳೆಯೋಣ ಯಾಕಾರೆ ಕೆರಳೋಣ (ಬೇಂದ್ರೆ)

ಜೈ ಕರ್ನಾಟಕ -ಜೈ ಕನ್ನಡಾಂಬೆ

# ಯುವ ಸಾಹಿತ್ಯ: ಪ್ರೇರಣೆ ಮತ್ತು ಪ್ರಭಾವ

**ಡಾ. ಎಂ. ಎನ್. ರಘು**

ಯುವಜನರೆಂದರೆ ದೈಹಿಕವಾಗಿ ಸದೃಢರಾದವರು ಎಂಬ ಮಾತಿಗಿಂತ ದೈಹಿಕವಾಗಿ ಮತ್ತು ಮಾನಸಿಕವಾಗಿ ತಾಜಾ ವಿಚಾರಗಳನ್ನು ಒಳಗೊಂಡಿರುವವರು, ಆ ವಿಚಾರಗಳ ಫಲಿತಾಂಶಕ್ಕಾಗಿ ನಿರಂತರ ಹೋರಾಟ ಮಾಡುವ ಸಾಮರ್ಥ್ಯ ಇರುವಂಥವರಾಗಿರುತ್ತಾರೆ. ದೇಶ ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕವಾಗಿ ಅಭಿವೃದ್ಧಿ ಆಗಲು ಯುವ ಜನಾಂಗದ ಪಾತ್ರ ಬಹಳ ದೊಡ್ಡದಾಗಿರುತ್ತದೆ. ಇಷ್ಟು ಅದ್ಭುತವಾದ ಶಕ್ತಿಯುಳ್ಳ ಯುವಜನಾಂಗ ಭಾಷಾ ಸಾಹಿತ್ಯದ ಆಗುಹೋಗುಗಳನ್ನು ತೌಲನಿಕವಾಗಿ ಚರ್ಚೆ ಮಾಡಬೇಕಾಗಿದೆ.

ನೆಹರು ಅವರ ಮಾತಿನಂತೆ 'ಯುವ ಜನಾಂಗವು ಮನಸ್ಸು ಮಾಡಿದರೆ ಭವ್ಯ ಭಾರತದ ಹಣೆಬರಹವನ್ನು ಬದಲಿಸಬಹುದು. ವಿವೇಕಾನಂದ ಮತ್ತು ನೆಹರುರಂಥವರು ಕನಸು ಕಂಡಂತೆ ಯುಜ ಜನಾಂಗದ ಹೊಚ್ಚ ಹೊಸ ಕನಸುಗಳು ಮತ್ತು ವಿಚಾರಗಳು ಹಳೆಯ ತಲೆಮಾರಿನ ಕೊಳಕನ್ನು ಕಿತ್ತೆಸೆದು ನವೀನ ಮಾದರಿಯ ಸಮಾಜ ಸೃಷ್ಟಿಸಲು ಸಾಧ್ಯ. ಯುವ ಜನಾಂಗದ ಆಚಾರಗಳು, ವಿಚಾರಗಳು ಅವರ ನಡತೆ ಇನ್ನಿತರ ಆಲೋಚನಾ ಕ್ರಮಗಳೂ ಸಹ ಸಾಹಿತ್ಯದಿಂದ ಒಂದಲ್ಲ ಒಂದು ರೀತಿಯಲ್ಲಿ ಪ್ರಭಾವಿತವಾಗಿರುತ್ತವೆ. ಪ್ರತಿಯೊಬ್ಬ ಯುವಕ ಒಂದಲ್ಲ ಒಂದು ವಿಚಾರದಲ್ಲಿ ಯಾವುದಾದರೂ ಒಂದು ಬಗೆಯ ಸಾಹಿತ್ಯದಿಂದ ಗಾಢವಾದ ಪ್ರಭಾವಕ್ಕೆ ಒಳಗಾಗಿರುತ್ತಾನೆ. ಇದಕ್ಕೆ ಹಿಂದಿನ ಕಾಲದಿಂದ ಇಂದಿನವರೆಗಿನ ಪರಂಪರೆಯನ್ನು, ಚರಿತ್ರೆಯಲ್ಲಿ ಹುದುಗಿರುವ ಹೋರಾಟಗಳನ್ನು, ಕಾಂತಿಗಳನ್ನು, ಸ್ವಾತಂತ್ರ್ಯ ಸಂಗ್ರಾಮಗಳನ್ನು ಅವಲೋಕಿಸಿದಾಗ ಮೇಲಿನ ಅಭಿಪ್ರಾಯಕ್ಕೆ ಉತ್ತರ ದೊರಕುತ್ತದೆ.

ಅನಿಕೇತನ ಸಂದೇಶದ ಕುವೆಂಪು ಯುವ ಸಮುದಾಯದ ಆಶಾಕಿರಣ, ಇಂದಿಗೂ ಯುವ ಸಮುದಾಯ ಅವರ ಆದರ್ಶಗಳನ್ನು ತಮ್ಮಲ್ಲಿ ಮೈಗೂಡಿಸಿಕೊಂಡಿರುವುದನ್ನು ಕಾಣಬಹುದು. ಇತ್ತೀಚೆಗೆ ಶಿವಮೊಗ್ಗ ಜಿಲ್ಲೆಯ ಹೊರಬೈಲಿನಲ್ಲಿ ಆಂಗ್ಲ ಶಿಕ್ಷಕನಾಗಿದ್ದರೂ ಕುವೆಂಪುರವರ ವಿಚಾರಧಾರೆಯಿಂದ ಪ್ರಭಾವಿತನಾಗಿ ತನ್ನ ವಿವಾಹದಲ್ಲಿ ಧಾರ್ಮಿಕ ಸಂಪ್ರದಾಯಗಳನ್ನು ಬಿಟ್ಟು ವೈಚಾರಿಕತೆಯನ್ನು ಬಿಂಬಿಸಲು ಸಾಮಾಜಿಕ ಜಾಗೃತಿಯನ್ನುಂಟುಮಾಡುವ ಚೊಂಬೇಶ ಕವನ ಸಂಕಲನವನ್ನು ಬಿಡುಗಡೆ ಮಾಡಿದ್ದಾರೆ. ಇಲ್ಲಿ ಮತ್ತೊಂದು ಅಂಶವನ್ನು ಹೇಳಲೇಬೇಕಾಗಿದೆ. ಕುವೆಂಪುರವರ ವೈಚಾರಿಕತೆಯನ್ನು ನೆಚ್ಚಿಕೊಂಡು ವೇದಿಕೆ ಭಾಷಣಗಳಿಗೆ ಮಾತ್ರ ಸೀಮಿತಗೊಂಡಿರುವ ಸಾಹಿತಿಗಳ ನಡುವೆ ಮತ್ತೊಬ್ಬ ಯುವಕ ಆದರ್ಶ ಪ್ರಾಯರಾಗಿದ್ದಾರೆ. ಶಿವಮೊಗ್ಗ ಜಿಲ್ಲೆಯ ಸೊರಟೂರಿನ

ಯುವಕರೊಬ್ಬರು ಕುವೆಂಪು ವಿಚಾರಧಾರೆಯನ್ನು ಎಷ್ಟರಮಟ್ಟಿಗೆ ತನ್ನ ರಕ್ತದಲ್ಲಿ ಕರಗತ ಮಾಡಿಕೊಂಡಿದ್ದಾರೆಂದರೆ ತನ್ನ ವಿವಾಹ ಸಮಾರಂಭದ ದಿನ ಕುಪ್ಪಳಿಯ ಕುವೆಂಪು ಮನೆಯಲ್ಲಿ ಕವನ ಸಂಕಲನ ಬಿಡುಗಡೆ ಮಾಡಿ ಅಕ್ಷರ ಮತ್ತು ವಿಚಾರ ಕ್ರಾಂತಿಯನ್ನುಂಟುಮಾಡಿದ್ದಾರೆ. ಇದು ಇಂದಿನ ಯುವ ಸಮುದಾಯವು ಯಾವ ಪ್ರಮಾಣದಲ್ಲಿ ಕುವೆಂಪುರವರ ಸಾಹಿತ್ಯದಿಂದ ಪ್ರೇರಿತರಾಗಿದ್ದಾರೆಂಬುದನ್ನು ಸಾಬೀತುಪಡಿಸುತ್ತದೆ.

ಕುವೆಂಪು ಪದವಿ ಪಡೆದ ಯುವಕರನ್ನು ಕುರಿತು ಹೇಳಿದ "ನೀವಿನ್ನೂ ಜೀವನದ ಉತ್ಸಾಹದಲ್ಲಿರುವ ಯುವಜನರು. ಎಂತಹ ಕಷ್ಟಗಳು ಎದುರಾದರೂ ಧೈರ್ಯ್ಯದಿಂದ ಇದಿರಿಸುವ ಸಾಹಸ ಚೇತನರಾಗಿದ್ದೀರಿ, ಹಿರಿಯರಾದ ನಾವು ಎದೆಗೆಟ್ಟರೂ ನೀವು ಎದೆಗೆಡುವುದಿಲ್ಲ ಎಂಬ ಭರವಸೆ ನನಗಿದೆ" ಎಂಬ ನುಡಿಗಳು ಯುವಕರಲ್ಲಿನ ಶಕ್ತಿಯನ್ನು ಬಡಿದೆಬ್ಬಿಸಿತು ಮತ್ತು ಅವರು ಮುಂದಿನ ಗುರಿಯೇನೆಂಬುದನ್ನು ಸ್ಪಷ್ಟಪಡಿಸಿತು.

ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ ಮತ್ತು ಪೂರ್ಣದೃಷ್ಟಿ ಜಾತ್ಯತೀತ ಕಲ್ಪನೆಯ ಸಮಾಜ ನಿರ್ಮಾಣಕ್ಕೆ ಮಂತ್ರಗಳಾಗಲಿ ಎಂಬ ಮಾತುಗಳು ನಿಜವಾಗಿಯೂ ಯುವಜನರಲ್ಲಿ ಹೊಸದೊಂದು ಸಮಸಮಾಜದ ಕಲ್ಪನೆಯನ್ನು ಬಿತ್ತಿತು.

ಜಾತಿ, ಧರ್ಮಗಳ ದಾಸ್ಯದಿಂದ ಹೊರಬರಲು ಯುವಕರನ್ನು ಆಲೋಚನಾ ಪರರನ್ನಾಗಿ ಮಾಡಬೇಕು. ಆಗ ಮಾತ್ರ ಸಮಾಜ ಬದಲಾವಣೆ ಸಾಧ್ಯ ಎಂದ ಕುವೆಂಪು ದ್ವೇಷದ, ಉದ್ವೇಗದ ಮಾತುಗಳಿಗೆ ಬಲಿಯಾಗಬಾರದು ಎಂದರು. ಪಾಂಚಜನ್ಯ, ಕಲ್ಕಿ, ರಕ್ತಧುನಿ ಇತ್ಯಾದಿಗಳು ವೀರಗೀತೆಗಳಾಗಿದ್ದು, ಯುವಕರ ಮನಸ್ಥಿತಿಯನ್ನು ಬದಲಾಯಿಸುವಂತಹ ಶಕ್ತಿಯನ್ನು ಹೊಂದಿವೆ.

ಸೋವಿಯತ್ ರಷ್ಯ ೧೯೩೯ರಲ್ಲಿ ಹಿಟ್ಲರ್‌ನ ದಾಳಿಗೆ ತುತ್ತಾದರೂ ಸಹ ಮುಂದೆ ತನ್ನ ಸೇಡನ್ನು ತೀರಿಸಿಕೊಳ್ಳುವುದರಲ್ಲಿ ಯುವಕರ ಪಾತ್ರ ಹೆಚ್ಚಾಗಿತ್ತು. ಮುಂದಿನ ಯುವ ಪೀಳಿಗೆಗೆ ಆದರ್ಶಪ್ರಾಯವಾಗಲು ಎರನ್ ಬರ್ಗ್ 'ದಿ ಸ್ಟಾರ್ಮ್' ಎಂಬ ಅದ್ಭುತ ಕಾದಂಬರಿಯನ್ನು ಬರೆದನು. ಇದು ಸದೃಢವಾದ ರಷ್ಯ ಬೆಳವಣಿಗೆಯಾಗಲು ಸಹಾಯಕವಾಯಿತು. ಪೋಲೋಕೊವ್‌ರ 'ಕ್ವಿಯಟ್ ಫ್ಲೋಸ್ ದಿ ಡೋನ್' ಎಂಬ ನೊಬೆಲ್ ಪ್ರಶಸ್ತಿ ಪಡೆದ ಕಾದಂಬರಿ, ಅಲೆಕ್ಸಿ ಟಾಲ್‌ಸ್ಟಾಯ್‌ರ 'ದಿ ಆರ್ಡಿಯಲ್' ಎಂಬ ಮಹಾಕಾದಂಬರಿ ಸೋವಿಯತ್ ರಷ್ಯದ ಯುವಕರಲ್ಲಿ ಸಂಚಲವನ್ನುಂಟು ಮಾಡಿದವು, ದೇಶ ಪ್ರೇಮವನ್ನೂ ತಮ್ಮ ಹಿಂದಿನವರ ತ್ಯಾಗವನ್ನೂ ಅತ್ಯುತ್ತಮವಾಗಿ ಬಿತ್ತಿದವು.

ಇಂಗ್ಲೆಂಡ್ ಮತ್ತು ಅಮೇರಿಕಾಗಳ ಯುವಕರಲ್ಲಿ ಸಮಾಜ ಸುಧಾರಣೆಯ ಬಗ್ಗೆ, ದಬ್ಬಾಳಿಕೆಯ ಬಗ್ಗೆ ಹೋರಾಟದ ಕಿಚ್ಚನ್ನು ಹೊತ್ತಿಸಿದವರಲ್ಲಿ ಬರ್ಟ್ರಾಂಡ್ ರಸಲ್, ಇಂಗಾಲ್ ಮುಖ್ಯವಾಗಿದ್ದಾರೆ.

ಅಂಧಕಾರದಲ್ಲಿದ್ದ ಸಮುದಾಯಗಳ ಜನರು ನಿರುತ್ಸಾಹಿಗಳಾಗಿದ್ದರು. ಜೀವನ ಹಲವು ಶತಮಾನಗಳಿಂದ ದುಸ್ತರವಾಗಿದ್ದು ಇಂತಹ ವಿಷಮ ಸ್ಥಿತಿಯಿಂದ ಹೊರಬರಲು ಹಲವು ನಾಯಕರು ಪ್ರಯತ್ನಿಸಿದ್ದರು, ತಮ್ಮದೇ ಧಾಟಿಯಲ್ಲಿ ಹಲವು ಮಾರ್ಗಗಳನ್ನು ತಿಳಿಸಿದ್ದರು. ಮುಖ್ಯವಾಗಿ ಯುವ ಪೀಳಿಗೆಯನ್ನು ಹೊಸ ದಿಕ್ಕಿನೆಡೆಗೆ ಸಾಗಿಸಲು ಪ್ರಯತ್ನಿಸಿದರೆ ಅದು ಮುಂದಿನ ಹಲವು ತಲೆಮಾರುಗಳ ಯುವ ಸಮುದಾಯಕ್ಕೆ ದಾರಿ ದೀಪವಾಗಬಹುದೆಂಬ ಸದಾಶಯವಿತ್ತು. ಈ ಹಿನ್ನೆಲೆಯಲ್ಲಿ ದೇವನೂರ ಮಹಾದೇವರ 'ಎದೆಗೆ ಬಿದ್ದ ಅಕ್ಷರ' ಎಂಬ ಅಕ್ಷರ ನುಡಿ ಯುವಕರಲ್ಲಿ ಹೊಸ ಚೇತನವನ್ನೇ ಮೂಡಿಸಿತು. ಭೂಮಿಗೆ ಬಿದ್ದ ಬೀಜ, ಎದೆಗೆ ಬಿದ್ದ ಅಕ್ಷರ ಇಂದಲ್ಲ ನಾಳೆ ಫಲ ಕೊಡುವುದು ಎಂಬ ಭರವಸೆಯ ನುಡಿಗಳು ಸಹಸ್ರ ಸಂಖ್ಯೆಯ ಯುವ ಸಮುದಾಯಕ್ಕೆ ಹೊಸ ಬೆಳಕನ್ನು ನೀಡಿತು. ನಮ್ಮ ಬದುಕು ಇಷ್ಟೇ ಎಂದು ಪರಿತಪಿಸುತ್ತಾ ತಲತಲಾಂತರಗಳಿಂದ ಶೋಚನೀಯವಾದ ಬದುಕನ್ನು ನಡೆಸುತ್ತಿದ್ದ ಕುಟುಂಬಗಳ ಯುವಕರನ್ನು ಹೆಚ್ಚು ಆಕರ್ಷಣೆ ಮಾಡಿತು. ವಿದ್ಯಾವಂತ ಸಮುದಾಯ ಹೆಚ್ಚಾಗಲು ಪ್ರಭಾವ ಬೀರಿತು. ಅಜ್ಞಾನವೆಂಬ ಕತ್ತಲೆಯಿಂದ ಸುಜ್ಞಾನದ ಬೆಳಕಿನತ್ತ ಹೊಸ ಹೆಜ್ಜೆಗಳನ್ನು ಯುವ ಸಮುದಾಯ ಇಡಲಾರಂಭಿಸಿತು. ಆರ್ಥಿಕವಾಗಿ ಕಡು ಬಡತನದಲ್ಲಿದ್ದರೂ ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂದು ಪೋಷಕರ ಮನಸ್ಸಿನಲ್ಲಿ ದೇವನೂರರ ಎದೆಗೆ ಬಿದ್ದ ಅಕ್ಷರ, ಪ್ರೇರಣೆ, ಪ್ರಭಾವ ಉಂಟುಮಾಡಿತು.

ಕೋ. ಚೆನ್ನಬಸಪ್ಪ ಯುವಕರ ಹೃದಯವನ್ನು ಬಡಿದೆಬ್ಬಿಸುವಂತಹ ರೀತಿಯಲ್ಲಿ ಕುವೆಂಪು ವಿಚಾರಗಳನ್ನು ಬಳಸಿಕೊಂಡರು. ಅದರಲ್ಲಿ "ನೂರು ದೇವರನೆಲ್ಲ ನೂಕಾಚೆ ದೂರ ಭಾರತಾಂಬೆಯೆ ದೇವಿ ಪೂಜಿಸುವ ಬಾರ" ಎಂಬುದನ್ನು ತಮ್ಮದೇ ಆದ ರೀತಿಯಲ್ಲಿ ಇತರ ಕೃತಿಗಳನ್ನೆಲ್ಲ ಮುಚ್ಚಿಟ್ಟು ಈಗ ವಿಚಾರ ಕ್ರಾಂತಿಗೆ ಸಮಯ, ಓಗೊಟ್ಟು ಬಾರ ಎಂಬುದಾಗಿ ತಿಳಿಸಿದ್ದಾರೆ. ಯುವಕರು ಮೌಢ್ಯ ಆಚರಣೆಗಳಿಂದ ದೂರ ಬರಬೇಕು ಎಂಬುದು ಅವರ ಆಶಯ. ವಿಚಾರ ಕ್ರಾಂತಿಯಿಂದ ಮನಸ್ಸಿನಲ್ಲಿ ಮೂಡಿರುವ ಹಲವು ಶತಮಾನಗಳ ಅಜ್ಞಾನವು ತನ್ನ ಕವಚ ಕಳಚುತ್ತದೆ ಎಂದರು. ದೇಶದಲ್ಲಿನ ಮತಭ್ರಾಂತಿಯನ್ನು ಹೊರದೂಡಲು ಸಾಹಿತ್ಯದಲ್ಲೂ ಧನ್ವಂತ್ರಿ ಚಿಕಿತ್ಸೆ ಅವಶ್ಯ.

ಡಾಂಟೆಯ ಡಿವೈನ್ ಕಾಮಿಡಿ, ಪೆಟ್ರಾರ್ಕ್‌ನ ಎಪಿಸ್ಟಿಲ್ಸ್, ರೆಮಿಡೀಸ್, ಇನ್ನರ್ ಸೆಲ್ಫ್, ಮೆಕೆವೆಲ್ಲಿಯ ದಿ ಪ್ರಿನ್ಸ್, ಥಾಮಸ್ ಮೋರ್‌ನ ಯುಟೋಪಿಯ, ಷೇಕ್ಸ್‌ಪಿಯರ್‌ನ ಹ್ಯಾಮ್ಲೆಟ್, ಮ್ಯಾಕ್‌ಬೆತ್ ಮುಂತಾದ ಸಾಹಿತ್ಯ ಕೃತಿಗಳು ಯುರೋಪಿನಲ್ಲಿ ಪುನರುಜ್ಜೀವನ ಚಳವಳಿಯನ್ನು ಉಂಟುಮಾಡಿದವು. ಪ್ರಾಟೆಸ್ಟಂಟ್ ಚಳವಳಿಯ ನೇತಾರ ಮಾರ್ಟಿನ್ ಲೂಥರ್ ಕಿಂಗ್‌ನ ಬ್ಯಾಬಿಲೋನಿಯನ್ ಕ್ಯಾಪಿಟಿವಿಟಿ ಆಫ್ ದಿ ಕ್ರಿಸ್ತ(ಪುನರುಜ್ಜೀವನ ಚಳವಳಿಯ ಪ್ರಣಾಳಿಕೆ), ಆನ್ ಫ್ರೀಡಂ ಆಫ್ ಕ್ರಿಸ್ಟಿಯನ್ ಮ್ಯಾನ್ ಎಂಬ ಕೃತಿಗಳು ಮೌಢ್ಯದಲ್ಲಿದ್ದ ಮತ್ತು ಚರ್ಚಿನ ದಬ್ಬಾಳಿಕೆಯ ದಾಸ್ಯತ್ವವನ್ನು ಯುವಕರಿಗೆ ಪರಿಚಯಿಸಿದವು.

ಜಗತ್ತಿಗೆ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ತತ್ವಗಳನ್ನು ಫ್ರಾನ್ಸ್ ಕ್ರಾಂತಿಯಿಂದ ಪಡೆಯಲು ಮತ್ತು ಕ್ರಾಂತಿಗೆ ಯುವಕರನ್ನು ಸೆಳೆದಿದ್ದು ಮಾಂಟೆಸ್ಕೋನ ಸ್ಪಿರಿಟ್ ಆಫ್ ದಿ ಲಾಸ್, ವೋರ್‌ನ ದಿ ಫಿಲಾಸಫಿಕಲ್ ಲೆಟರ್ ಆನ್ ದಿ ಇಂಗ್ಲಿಷ್, ರೂಸೋನ ಸಾಮಾಜಿಕ ಒಪ್ಪಂದ ಸಿದ್ಧಾಂತ (ಫ್ರಾನ್ಸ್ ಕ್ರಾಂತಿಯ ಪ್ರವಾದಿ)

ಜಗತ್ತಿನ ಕಾರ್ಮಿಕರ ಆತ್ಮವಾದ ಕಾರ್ಲ್ ಮಾರ್ಕ್ಸ್‌ನ ಮೇಲೆ ಹೆಗಲ್ ಮತ್ತು ನ್ಯೂಯರ್‌ಬಾಕ್‌ರ ಪ್ರಭಾವ ಹೆಚ್ಚಿನದಾಗಿದೆ. ಭಾರತವಲ್ಲದೇ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿಯೂ ಯುವ ಸಾಹಿತ್ಯ ಊಹಿಸಲಾರದಷ್ಟು ಪ್ರಭಾವ ಮತ್ತು ಪರಿಣಾಮಗಳನ್ನು ಬೀರಿದೆ. ಯುವ ಜನಾಂಗವನ್ನು ರಾಷ್ಟ್ರ ನಿರ್ಮಾಣಕ್ಕೆ ಮತ್ತು ಕ್ರಾಂತಿಗಳಿಗೆ ಸಜ್ಜುಗೊಳಿಸಲು ಹಲವು ದಾರ್ಶನಿಕರ ಕಾವ್ಯ ಮತ್ತು ವಿಚಾರಧಾರೆಗಳು ಪ್ರೇರಕವಾಗಿವೆ. ಫ್ಯಾಸಿಸ್ಟ್ ಎಂಬ ಹಿಂಸೆ ಮತ್ತು ಯುದ್ಧದಲ್ಲಿ ನಂಬಿಕೆ ಹೊಂದಿದ್ದ ಒಂದು ಸಿದ್ಧಾಂತ ಹುಟ್ಟಿಕೊಳ್ಳಲು ಸಾಹಿತ್ಯ ಪ್ರೇರಕ ಶಕ್ತಿಯಾಗಿದೆ. ಮ್ಯಾಜನಿಯ ಆದರ್ಶವಾದ, ಸೋರೆಲ್‌ನ ಕಾರವಿಧಾನ, ಹೆಗಲ್ ಮತ್ತು ನೀಟ್ಷೆಯ ರಾಷ್ಟ್ರೀಯವಾದ ಮತ್ತು ಸರ್ವಾಧಿಕಾರತ್ವ ಮತ್ತು ಬರ್ಗ್‌ಸನ್‌ನ ವಿಚಾರವಾದಕ್ಕೆ ವಿರೋಧವಾದಗಳು ಮುಸೋಲಿನಿಯನ್ನು ಕೆರಳಿಸಿ ಬೆಳೆಸಿ ಭೀಕರ ಯುದ್ಧಗಳಿಗೆ ಜಗತ್ತನ್ನು ಈಡು ಮಾಡಿದವು. ಹಾಗೆಯೇ ಮನುಷ್ಯನಿಗಿಂತ ರಾಜ್ಯವೇ ಮುಖ್ಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ ತತ್ವಗಳಿಗೆ ವಿರುದ್ಧವಿದ್ದ ಹಿಟ್ಲರ್ ಜರ್ಮನಿಯ ಏಕಮೇವ ನಾಯಕನಾಗಲು ಹೆಗಲ್ ಮತ್ತು ಕ್ಯಾಂಟ್ ಆದರ್ಶವಾದವು ಕಾರಣೀಭೂತವಾಯಿತು. ಸ್ವತಃ ಹಿಟ್ಲರ್ ರಚಿಸಿದ ಮೈನ್‌ಕೆಂಪ್ ಕೃತಿಯು ಜರ್ಮನಿಯ ಯುವ ಜನಾಂಗವನ್ನು ತನ್ನ ದೇಶಕ್ಕಾಗಿ ಯಾವ ಬಗೆಯ ತ್ಯಾಗಕ್ಕಾದರೂ ಸಿದ್ಧರಾಗುವಂತೆ ಪ್ರೇರೇಪಿಸಿತು. ಮುಂದೆ ಇಂತಹ ಉಗ್ರರಾಷ್ಟ್ರೀಯವಾದವು ಲಕ್ಷಾಂತರ ಜೆಸ್ಯಟ್ಸ್ ಅಥವಾ ಯಹೂದಿಗಳನ್ನು ಬಲಿ ಪಡೆಯಿತು.

ಜಾಗತಿಕ ಮಟ್ಟದಲ್ಲಿ ಯುವ ಸಾಹಿತ್ಯ ಹಲವು ಕ್ರಾಂತಿಗಳನ್ನು, ಚಳವಳಗಳನ್ನು ಹುಟ್ಟುಹಾಕಿ ಅಧಿಕಾರ ಶಕ್ತಿಗಳನ್ನು ಪದವಿಗಳಿಂದ, ಅಧಿಕಾರದಿಂದ ಕೆಳಗಿಳಿಯುವಂತೆ ಮಾಡಿರುವ ಜೊತೆಜೊತೆಗೆ ಸಾಮಾಜಿಕ ಸಮಾನತೆ, ಆರ್ಥಿಕ ಅಸಮಾನತೆ, ಧಾರ್ಮಿಕ ಶೋಷಣೆ ಇನ್ನಿತರ ಕೆಡುಕುಗಳಿಂದ ಮುಕ್ತಿ ದೊರಕಿಸಿದವು.

ಇನ್ನು ಬಹುಸಂಸ್ಕೃತಿಯ ಸಮಾಜವನ್ನು, ಸಮುದಾಯಗಳನ್ನು ಹೊಂದಿರುವ ಭಾರತದಲ್ಲಿನ ಯುವ ಸಾಹಿತ್ಯ ಭಾರತೀಯ ಯುವಕರನ್ನು ಅಲ್ಲದೇ ಪಾಶ್ಚಿಮಾತ್ಯರನ್ನೂ ತನ್ನ ಗಾಳದೊಳಗೆ ಬೀಳಿಸಿದೆ. ಅಂದರೆ ಭಾರತೀಯ ಸಾಹಿತ್ಯ ಪರಂಪರೆಗೆ ಅಷ್ಟು ಅದ್ಭುತ ಶಕ್ತಿಯಿದೆ ಎಂದರ್ಥ. ೧೯ನೇ ಶತಮಾನದಲ್ಲಿ ಆದಂತಹ ಇಂಗ್ಲಿಷ್‌ನ ಪ್ರಭಾವದಿಂದ ಪಾಶ್ಚಿಮಾತ್ಯ ವಿಚಾರಧಾರೆಗಳ ಪರಿಚಯದೊಂದಿಗೆ ಯುವ ಸಾಹಿತ್ಯದ ಮೇಲೆ ಪ್ರಭಾವ ಹೆಚ್ಚಾಗಿಯೇ ಇತ್ತು. ಹೆನ್ರಿ ವಿವಿಯನ್ ಡಿರಿಜೋಯೋನಿಂದ ಪ್ರಾರಂಭವಾದ ಯಂಗ್ ಬೆಂಗಾಳ್ ಚಳವಳಿಯು ಆಗ ತಾನೇ ಇಂಗ್ಲಿಷ್ ಶಿಕ್ಷಣವನ್ನು

ಪಡೆದ ಯುವ ಸಮೂಹವನ್ನು ಅತಿ ಹೆಚ್ಚಾಗಿ ಆಕರ್ಷಣೆ ಮಾಡಿತು. ಭಾರತವು ದಾಸ್ಯದಿಂದ ಮುಕ್ತಿ ಪಡೆಯಲು ಜನತೆ ತಮ್ಮ ಪ್ರಾಣಗಳನ್ನೂ ಸಹ ತ್ಯಾಗ ಮಾಡಲು ಸಿದ್ಧರಾಗುವಂತೆ ಮಾಡಿಬಿಟ್ಟಿತು.

ಬಹುಸಂಸ್ಕೃತಿಯ ಪರಂಪರೆಯನ್ನು ತಿಳಿದ ವಿದೇಶಿ ಮಹಿಳೆ ಅನಿ ಬೆಸೆಂಟ್ ತನ್ನ ದೇಶದವರ ವಿರುದ್ಧವಾಗಿ ಭಾರತಕ್ಕೆ ಬಂದು ಬ್ರಿಟೀಷರ ವಿರುದ್ಧ ಬಹುದೊಡ್ಡ ಚಳವಳಿಯನ್ನೇ ಪ್ರಾರಂಭಿಸಿಬಿಟ್ಟರು. ಇಂದಿನ ಯುವಕರಿಗೆ ಅವರು ಮಾದರಿ. ತಮ್ಮ ಪತ್ರಿಕೆಗಳ ಮೂಲಕವಾಗಿ ಯುವ ಜನಾಂಗವನ್ನು ರಾಷ್ಟ್ರಕ್ಕಾಗಿ ಹೋರಾಟ ಮಾಡಲು ಪ್ರೇರೇಪಣೆ ಮಾಡಿದರು. ದಕ್ಷಿಣ ಭಾರತದ ಯುವ ಸಮುದಾಯವು ಅನಿ ಬೆಸೆಂಟ್‌ರಿಂದ ಪ್ರಭಾವಿತಗೊಂಡರೆ ಮಹಾರಾಷ್ಟ್ರ ಮತ್ತು ಉತ್ತರ ಭಾರತದಲ್ಲಿ ತಿಲಕರ ಕೇಸರಿ ಮತ್ತು ಮರಾಠ ಪತ್ರಿಕೆಗಳಿಂದ ಯುವ ಜನಾಂಗವು ಸ್ವರಾಜ್ಯಕ್ಕಾಗಿ ಹೋರಾಡಲು ಪ್ರೇರಕ ಶಕ್ತಿ ಪಡೆದರು. ಸ್ವದೇಶಿ ಚಳವಳಿಯ ಜೀವಾಳವೇ ಅಂದಿನ ಯುವ ಸಮುದಾಯವಾಗಿತ್ತೆಂದರೆ ತಪ್ಪಾಗಲಾರದು.

ವಿವೇಕಾನಂದರ ಭಾಷಣಗಳು ಮತ್ತು ಅವರ ವಿಚಾರಧಾರೆಗಳು ಅಂದಿನ ಯುವ ಸಮುದಾಯದ ಹೃದಯ ಬಡಿತವನ್ನು ಹೆಚ್ಚಿಸುವುದರೊಂದಿಗೆ ಭಾರತದ ಬಗ್ಗೆ ಅಭಿಮಾನವನ್ನು, ತನ್ನ ಬಗ್ಗೆ ಗೌರವ ಭಾವನೆಯನ್ನು ಬೆಳೆಸಿಕೊಳ್ಳಲು ಕಾರಣವಾಯಿತು. ದೇಶದ ಯುವಶಕ್ತಿಯ ಪ್ರಾಮುಖ್ಯತೆಯನ್ನು, ಅವರಲ್ಲಿನ ಅಂತಃಶಕ್ತಿಯನ್ನು ಬಡಿದೆಬ್ಬಿಸಿದವರು ವಿವೇಕಾನಂದರು. ದೇಶದ ಭವಿಷ್ಯವು ಯುವಕರ ಮೇಲೆ ಅವಲಂಬಿತವಾಗಿದೆ ಎಂದರು. ಸದೃಢ ಯುವ ಜನಾಂಗವು ದೇಶದ ಆಸ್ತಿಯೆಂದು ತಿಳಿಸಿದ ಅವರು ಇಂದಿಗೂ ಯುವಕರಿಗೆ ಆದರ್ಶಪ್ರಾಯರಾಗಿದ್ದಾರೆ. 'ಏಳಿ ಎದ್ದೇಳಿ ಗುರಿಮುಟ್ಟುವ ತನಕ ನಿಲ್ಲದಿರಿ' ಎಂಬ ವಿವೇಕರ ವಾಣಿಯು ಇಂದಿಗೂ ಪ್ರಸ್ತುತತೆಯನ್ನು ಪಡೆದುಕೊಂಡಿದೆ. ಸಾಮಾಜಿಕ ಜಾಲತಾಣಗಳಲ್ಲಿ ದುಶ್ಚಟಗಳಲ್ಲೇ ತಮ್ಮ ಎಲ್ಲ ಕಾಲವನ್ನು ಕಳೆಯುತ್ತಿರುವ ಯುವ ಸಮುದಾಯವನ್ನು ಜಾಗೃತಗೊಳಿಸಲು ವಿವೇಕರೇ ಗುರು.

ಬಂಕಿಮ ಚಂದ್ರರ ವಂದೇ ಮಾತರಂ ಗೀತೆಯು ಸಾವಿರಾರು ಯುವಕರು ತಮ್ಮನ್ನು ದೇಶದ ಸ್ವಾತಂತ್ರ್ಯಕ್ಕೆ ಅರ್ಪಣೆ ಮಾಡಿಕೊಳ್ಳುವಂತೆ ಮಾಡಿತು. ಇಂದಿಗೂ ಈ ಗೀತೆಯು ಸಣ್ಣ ವಯಸ್ಸಿನ ಮಕ್ಕಳಿಂದ ಹಿರಿಯರ ತನಕ ಶಕ್ತಿಯ, ಶೌರ್ಯದ, ಐಕ್ಯತೆಯ, ಹುಮ್ಮಸ್ಸಿನ ಪ್ರತೀಕವಾಗಿದೆ. ಈ ಹಾಡಿಗೆ ಹೆಜ್ಜೆ ಹಾಕುವುದೆಂದರೆ ಯುವಕರಿಗೆ ಅದೊಂದು ರೋಮಾಂಚನವಾದಂತೆಯೇ ಸರಿ.

ಮಹಾವೀರ ಮತ್ತು ಬುದ್ಧರ ಸಾಮಾಜಿಕ, ಧಾರ್ಮಿಕ ಸಮಾನತೆ, ಸರಳತೆ ಮತ್ತು ಅಹಿಂಸಾ ತತ್ತ್ವಗಳು ಇಂದಿನ ಕೆಳವರ್ಗಗಳ ಮೇಲೆ ಗಾಢವಾದ ಪ್ರಭಾವ ಬೀರಿರುವುದನ್ನು ಕಾಣಬಹುದಾಗಿದೆ. ಬುದ್ಧನ ಮೂರ್ತಿಯನ್ನು ತಮ್ಮ ಫೇಸ್ ಬುಕ್ ಮತ್ತು ವ್ಯಾಟ್ಸಪ್ ಖಾತೆಯ ಪ್ರೊಫೈಲ್‌ಗೆ ಹಾಕಿಕೊಳ್ಳುವುದೆಂದರೆ ಒಂದು ಬಗೆಯ

ಉತ್ಸಾಹ ಮತ್ತು ಚೇತನ ಸಿಕ್ಕಂತೆ. ತಮ್ಮ ಮನೆಯಲ್ಲಿ, ಕಾರುಗಳ ಮೇಲೆಯೂ ಯುವ ಜನಾಂಗವು ಬುದ್ಧನ ರೇಖಾಚಿತ್ರಗಳನ್ನು ಬಿಡಿಸಿಕೊಂಡು ಅವರಿಂದ ಹೆಚ್ಚು ಪ್ರಭಾವಕ್ಕೆ ಒಳಗಾಗಿದ್ದೇವೆ ಎಂಬುದನ್ನು ಸಾದರಪಡಿಸುವುದನ್ನು ಕಾಣಬಹುದು. ಹನ್ನೆರಡನೇ ಶತಮಾನದ ಬಸವಣ್ಣನ ಅಂತರ್‌ಜಾತಿ ವಿವಾಹಗಳು ಮತ್ತು ಸಾಮಾಜಿಕ ಹಾಗೂ ಕಲ್ಯಾಣ ಕ್ರಾಂತಿಯೂ ಇಂದಿನ ಯುವಕರ ಮನಸ್ಸನ್ನು ಸೆಳೆಯುತ್ತಿವೆ. ಬಸವಣ್ಣ ಕಳೆದುಹೋಗಿ ಒಂಬತ್ತು ಶತಮಾನಗಳಾದರೂ ಸಹ ಅವರ ವಚನ ಸಾಹಿತ್ಯ ಒಂದು ಪ್ರೇರಕ ಶಕ್ತಿಯಾಗಿ ಯುವಕರನ್ನು ಸಾಮಾಜಿಕ ಸಮಾನತೆಯ ಕಡೆಗೆ ಹಾತೊರೆಯುವಂತೆ ಮಾಡಿದೆ.

ಇಪ್ಪತ್ತನೇ ಶತಮಾನದ ಪ್ರಾರಂಭದಲ್ಲಿ ಅಂಬೇಡ್ಕರ್‌ರವರು ತಮ್ಮ ಪತ್ರಿಕೆಗಳಲ್ಲಿ ಬರೆಯುತ್ತಿದ್ದ ಲೇಖನಗಳು ತುಳಿತಕ್ಕೆ ಒಳಗಾದ ಹಲವು ಸಮುದಾಯಗಳಿಗೆ ಜೀವ ತುಂಬಿದವು. ಸಾಮಾಜಿಕವಾಗಿ ಹಿಂದುಳಿದ ಜನಸಮುದಾಯಗಳಿಗೆ ಅಂಬೇಡ್ಕ ಆಶಾಕಿರಣವಾಗಿ ಕಂಡರು. ಸಮಾಜದಲ್ಲಿ ಉನ್ನತ ಸ್ಥಾನಗಳನ್ನು ಪಡೆಯದೇ ಹಲವು ಶತಮಾನಗಳಿಂದ ವಂಚಿತಗೊಂಡಿದ್ದ ಸಮುದಾಯಗಳಿಗೆ, ಮುಖ್ಯವಾಗಿ ಯುವಕರಿಗೆ ಅಂಬೇಡ್ಕರ್ ಬೆಳಕು ನೀಡಿದ ಸೂರನಂತೆ ಕಂಡರು, ದೈತ್ಯ ಶಕ್ತಿಯಾಗಿ ಕಂಡರು. ಅವರನ್ನು ಹಿಂಬಾಲಿಸಿ, ಅನುಸರಿಸಿ ಅವರ ದಾರಿಯಲ್ಲಿ ನಡೆದ ಯುವ ಸಮುದಾಯದ ಲೆಕ್ಕವನ್ನು ತೋರಿಸುವುದು ಬಹು ಕಷ್ಟ, ಅಂಬೇಡ್ಕರ್ ಸಾಹಿತ್ಯ ರಚನೆಯಿಂದಲೇ ಅಲ್ಲದೇ ಪಾಂಡಿತ್ಯದಿಂದ, ಜ್ಞಾನದಿಂದ ವಿದೇಶಿಯರೇ ಬೆರಗಾಗಿದ್ದರೆಂದರೆ ಅವರ ಪ್ರಭಾವ ಎಷ್ಟೆಂದು ಅರಿಯಬಹುದು.

ಕನ್ನಡ ನಾಡು ಏಕೀಕರಣಗೊಳ್ಳಲು ಶ್ರೀವಿಜಯನ ಕವಿರಾಜ ಮಾರ್ಗವು ದಾರಿದೀಪವಾಯಿತು. ಕನ್ನಡದ ಹಲ್ಮಿಡಿ ಶಾಸನವೂ ಮಹತ್ವದ ಕೊಡುಗೆಯನ್ನು ನೀಡಿತು. ನವ್ಯ ಮತ್ತು ನವೋದಯ ಸಾಹಿತ್ಯಕಾರರು ಕರ್ನಾಟಕ ರಚನೆಗೆ ಮತ್ತು ಸ್ವಾತಂತ್ರ್ಯಕ್ಕೆ ಬಹಳಷ್ಟು ಕೊಡುಗೆಯನ್ನು ನೀಡಿದರು. ವಿಶ್ವಮಾನವ ಸಂದೇಶವನ್ನು ನೀಡಿದ ಕುವೆಂಪುರವರ ಸಾಹಿತ್ಯವು ಯುವಕರ ಮೇಲೆ ಅಗಾಧವಾದ ಪರಿಣಾಮವನ್ನು ಬೀರಿತು. ವೈಚಾರಿಕತೆಯನ್ನು ಪ್ರತಿಪಾದಿಸಿದ ಡಾ.ಎಚ್.ನರಸಿಂಹಯ್ಯನವರ ವೈಚಾರಿಕ ಸಾಹಿತ್ಯವು ೮೦ ಮತ್ತು ೯೦ರ ದಶಕದಲ್ಲಿ ಪವಾಡ ಪುರುಷರನ್ನು ಬೀದಿಗೆ ತಂದು ನಿಲ್ಲಿಸಿತು. ಪ್ರಶ್ನೆ ಮಾಡದೇ ಯಾವುದನ್ನೂ ಸಹ ಒಪ್ಪಿಕೊಳ್ಳಬಾರದೆಂಬ ನಿಲುವು ಯುವ ಸಮುದಾಯದಲ್ಲಿ ಮೂಡಿತು. ಇದರಿಂದ ಕೆಲವು ಪವಾಡಗಳ ಮೂಲಕ ಜನರನ್ನು ಮೂಢರನ್ನಾಗಿ ಮಾಡುತ್ತಿದ್ದ ಜ್ಯೋತಿಷಿಗಳ ದೇವಮಾನವರೆಂಬ ಮುಖವಾಡವನ್ನು ಕಳಚುವಂತೆ ಮಾಡಿತು. ವಿಚಾರಗಳಲ್ಲಿ ಯಾವುದನ್ನು ಒಪ್ಪಬೇಕು, ಯಾವುದನ್ನು ಬಿಡಬೇಕು ಎಂಬ ಅಂಶಗಳ ಬಗ್ಗೆ ಬೆಳಕನ್ನು, ತಿಳುವಳಿಕೆಯನ್ನು ನೀಡುವಂತಹ ವೈಚಾರಿಕ ಮಾಸ ಪತ್ರಿಕೆಯನ್ನು ಹೊರಡಿಸಿದ್ದರಿಂದ ಅಂದಿನಿಂದ ಇಂದಿನವರೆಗೂ ಸಹ ಯುವಕರು

ಸಾಮಾಜಿಕ ಅನಿಷ್ಟಗಳಿಂದ ಜಾಗೃತರಾದರು. ಪಕ್ಕದ ರಾಜ್ಯ ಆಂಧ್ರಪ್ರದೇಶದ ತೆಲಂಗಾಣದಲ್ಲಿನ ಭೂ ಒಡೆಯರ ಶೋಷಣೆಯನ್ನು ಪ್ರಶ್ನಿಸಿ ತನ್ನ ಕ್ರಾಂತಿ ಗೀತೆಗಳ ಮೂಲಕ ಸಾಮಾಜಿಕ ಕ್ರಾಂತಿಗೆ ಕಾರಣರಾದ ಗದ್ದರ್ ಯುವ ಸಮುದಾಯದ ಐಕಾನ್ ಆದರು. ಅವರ ಗೀತೆಗಳು ದೇಶ ವಿದೇಶಗಳಲ್ಲಿಯೂ ಪ್ರಸಿದ್ಧ, ಕಮ್ಯೂನಿಷ್ಟರಿಗೆ ಅವರೇ ಒಂದು ಶಕ್ತಿ. ಬುದ್ಧಿವಂತ ಯುವಕರನ್ನು ಕಮ್ಯೂನಿಸಂ ಕಡೆಗೆ ಸೆಳೆಯಲು ಇವರ ಹಾಡುಗಳು ಮತ್ತು ಸಾಹಿತ್ಯ ಒಂದು ಹೊಸ ಅಲೆಯನ್ನೇ ಉಂಟುಮಾಡಿತು. ಒಸೇಯಾ ರಾವಲಮ್ಮ ಮತ್ತು ಸಮ್ಮಕ್ಕ ಸಾರಕ್ಕೆ ಸಿನೆಮಾಗಳು ಯುವ ಸಮುದಾಯವು ಶೋಷಣೆಯ ವಿರುದ್ಧ ನಿಲ್ಲುವಂತೆ ಮಾಡಿದವು.

ಎಪ್ಪತ್ತರ ದಶಕದಲ್ಲಿ ಹುಟ್ಟಿಕೊಂಡ ದಲಿತ ಚಳವಳಿ ಮತ್ತು ದಲಿತ ಸಾಹಿತ್ಯ ಕೆಳವರ್ಗಗಳ ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಶೈಕ್ಷಣಿಕ, ರಾಜಕೀಯ ಇನ್ನಿತರ ಶೋಷಣೆಗಳನ್ನು ಪ್ರಶ್ನೆ ಮಾಡುವಂತೆ ಮಾಡಿತು. ದೇವನೂರು ಮಹಾದೇವ ಅವರ ಒಡಲಾಳ, ದ್ಯಾವನೂರು, ಕುಸುಮಬಾಲೆ ಮತ್ತು ಎದೆಗೆ ಬಿದ್ದ ಅಕ್ಷರ ಕೃತಿಗಳು ಯುವ ಸಮುದಾಯದ ಮೇಲೆ ಬೀರಿದ ಪ್ರಭಾವ ತೀವ್ರತರವಾಗಿತ್ತು. ಯುವಕರಲ್ಲಿ ಶೋಷಣೆಯನ್ನು ಪ್ರತಿಭಟಿಸುವಂತಹ ಮತ್ತು ಕ್ರಾಂತಿಯಾದರೆ ನಾವು ನಮ್ಮ ಜೀವಗಳನ್ನು ಅರ್ಪಣೆ ಮಾಡಿಕೊಳ್ಳಬೇಕೆಂಬ ನಿಲುವಿಗೆ ಬರಲು ಕಾರಣವಾಯಿತು. ಇಕ್ಕಲ್ಲಾ ವದೀರಾ, ಹೊಲೆ ಮಾದಿಗರ ಹಾಡು, ಹಾಡು ಪಾಡು, ಯಾರಿಗೆ ಬಂತು ಎಲ್ಲಿಗೆ ಬಂತು ನಲವತ್ತೇಳರ ಸ್ವಾತಂತ್ರ್ಯ ಎಂಬ ಸಾಹಿತ್ಯ ಮತ್ತು ಗೀತೆಗಳು ಯುವ ಸಮುದಾಯದ ಹೃದಯವನ್ನು ಬಡಿದೆಬ್ಬಿಸಿದವು. ಯುವ ಸಮುದಾಯಕ್ಕೆ ಒಂದು ಹೊಸ ಉತ್ತೇಜನವನ್ನು ನೀಡಿದವು. ದಲಿತ ಚಳವಳಿಯು ತನ್ನ ಪ್ರಾಬಲ್ಯ ಮತ್ತು ಜನರ ಮಧ್ಯ ವಿಶ್ವಾಸವನ್ನು ಹೆಚ್ಚಿಸಿಕೊಳ್ಳಲು ಕಾರಣವಾಯಿತು. ಇಂದಿಗೂ ಜಾಗೃತಿ ಕಾರ್ಯಕ್ರಮಗಳಲ್ಲಿ ಇಂತಹ ಹಾಡುಗಳನ್ನು ಹಾಡುವುದೆಂದರೆ ಯುವಕರಿಗೆ ಎಲ್ಲಿಲ್ಲದ ಖುಷಿಯೋ ಖುಷಿ, ಹಾಡುಗಳು ತಳ ಸಮುದಾಯದವರಲ್ಲಿ ವಿಶ್ವಾಸ, ಶಕ್ತಿಯನ್ನು ತುಂಬಿದವು. ಅವರಲ್ಲಿ ಸಾಮಾಜಿಕ ನ್ಯಾಯ ಮತ್ತು ಐಕ್ಯತೆಯನ್ನು ಮೂಡಿಸಿತು. ಹಲವು ಯುವ ಪ್ರತಿಭೆಗಳಲ್ಲಿನ ಸಾಮರ್ಥ್ಯ ಹೊರ ಜಗತ್ತಿಗೆ ಪರಿಚಯವಾಗಲು ರಾಜ್ಯ, ರಾಷ್ಟ್ರಮಟ್ಟದಲ್ಲೇ ಅಲ್ಲದೇ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಸಾಂಸ್ಕೃತಿಕವಾಗಿ ಮತ್ತು ಶೈಕ್ಷಣಿಕವಾಗಿ ಗುರ್ತಿಸಿಕೊಳ್ಳಲು ಕಾರಣೀಭೂತವಾಯಿತು. ಆದರೆ ಇಂತಹ ಖದರ್ ಇಂದು ಕಾಣುತ್ತಿಲ್ಲ.

ಯುವಜನಾಂಗ ಮತ್ತು ಕನ್ನಡ ಸಾಹಿತ್ಯದ ಒಡನಾಡಿತನವನ್ನು ಬಿಡಿಸಿ ನೋಡಿದಾಗ ನಮಗೆ ಹಲವು ವಿಚಾರಗಳು ಕಂಡುಬರುತ್ತವೆ. ಸಕಾರಾತ್ಮಕ ವಿಚಾರಕ್ಕಿಂತ ನಕಾರಾತ್ಮಕ ವಿಚಾರಗಳೇ ಹೆಚ್ಚು ಕಂಡುಬರುತ್ತವೆ. ನಮ್ಮ ಭಾಷೆ, ಕಲೆ ಮತ್ತು ಸಂಸ್ಕೃತಿಯನ್ನು ಎತ್ತಿ ಹಿಡಿಯುವ ಯುವಜನಾಂಗ ಕನ್ನಡ ಭಾಷೆಯನ್ನು ಬೆಳೆಸುವಲ್ಲಿ ಮತ್ತು ವಿಸ್ತರಿಸುವಲ್ಲಿ ಹಿಂದುಳಿದಿದ್ದಾರೆ. ಈ ಧೋರಣೆಗೆ ಅವರನ್ನು ನೇರವಾಗಿ ವಿರೋಧಿಸುವಂತಿಲ್ಲ, ಏಕೆಂದರೆ ಈ ಧೋರಣೆ ಬೆಳೆಯುವಲ್ಲಿ ಬದಲಾದ ಸಾಮಾಜಿಕ ಧೋರಣೆಗಳೇ ಕಾರಣವಾಗುತ್ತವೆ.

ಅಂದಿನ ಹೊಸ ಸಮಾಜವನ್ನು ಕಟ್ಟುವಂತಹ ಆಶಯಗಳು ಇಂದು ಯುವಕರಲ್ಲಿ ಉಳಿದಿಲ್ಲ. ಸಾಮಾಜಿಕ ಜಾಲತಾಣಗಳಿಂದ ಅವರ ದೇಹ ಮತ್ತು ಮನಸ್ಸು ಕುಲುಷಿತಗೊಳ್ಳುತ್ತಿವೆ. ಸಮಾಜದಿಂದ ಬೆಳೆದ ಯುವಕ ತನ್ನ ಸಮಾಜಕ್ಕೆ ತನ್ನಿಂದಾದ ಕೊಡುಗೆಯನ್ನು ಮತ್ತು ಸೇವೆಯನ್ನು ಕೊಡಬೇಕೆಂಬ ಆಶಯದಿಂದ ದೂರ ಸರಿಯುತ್ತಿದ್ದಾನೆ. ತನ್ನ ಜೀವನವೇ ಮುಖ್ಯ ಇತರ ನೋವುಗಳು ತನಗೆ ಮುಖ್ಯವಲ್ಲ ಎಂಬ ರೀತಿಯಲ್ಲಿ ವರ್ತಿಸುತ್ತಿದ್ದಾನೆ. ಕುಡಿತ ಮತ್ತು ತಂಬಾಕು ಸೇವನೆಯಂತಹ ದುಶ್ಚಟಗಳಿಗೆ ಯುವಕರು ಹೆಚ್ಚು ಬಲಿಯಾಗುತ್ತಿದ್ದಾರೆ. ೩೦ರಿಂದ ೪೦ವರ್ಷ ವಯಸ್ಸಿಗೆ ನಿಸ್ತೇಜನಗೊಳ್ಳುತ್ತಿದ್ದಾರೆ. ದೈಹಿಕ ಸಾಮರ್ಥ್ಯವನ್ನು ಕಳೆದುಕೊಳ್ಳುತ್ತಿದ್ದಾರೆ. ಮನಸ್ಸು ಸಹ ಪರಿಶುದ್ಧವಾಗಿಲ್ಲ. ಕಾಮದ ಬಲೆಗೆ ಸಿಲುಕಿ ಅತ್ಯಾಚಾರದಂತಹ ಹೇಯ ಕೃತ್ಯಗಳನ್ನು ನಡೆಸುತ್ತಿದ್ದಾರೆ. ಸಾಮಾಜಿಕ ಬದ್ಧತೆ ಇಲ್ಲದಂತಾಗಿದೆ. ಹೊಸ ನಾಡನ್ನು ಕಟ್ಟುವ ಕಾಯಕದಿಂದ ದೂರವಿದ್ದಾರೆ. ಯುವಕರೇ ದೇಶದ ಸಂಪತ್ತು ಎಂಬ ಮನೋಭಾವನೆಯನ್ನು ಬೆಳೆಸುವ, ಬಿತ್ತುವ ಸಾಹಿತ್ಯವು ಬೇಕಾಗಿದೆ. ಸಮಾಜದಲ್ಲಿ ಸಾಮಾಜಿಕ ಅಶಾಂತಿಯನ್ನು ಉಂಟುಮಾಡುವ ಸಂದೇಶಗಳನ್ನು ಒಬ್ಬರಿಂದ ಮತ್ತೊಬ್ಬರಿಗೆ ರವಾನಿಸುವ ಕಾಯಕದಲ್ಲಿ ತೊಡಗಿದ್ದಾರೆ. ದೇಶದ ಸಮಗ್ರ ಅಭಿವೃದ್ಧಿಗೆ ತನ್ನ ಪಾಲು ಏನು ಎಂಬುದನ್ನು ತಿಳಿಸಿಕೊಡಬೇಕಾದ ಸಾಹಿತ್ಯದ ಕೊರತೆ ಎದ್ದು ಕಾಣುತ್ತಿದೆ. ಒಡೆದ ಮನಸ್ಸುಗಳನ್ನು ಕಟ್ಟುತ್ತ ಹೊಸ ನಾಡನ್ನು ನಿರ್ಮಾಣ ಮಾಡಲು ಯುವ ಸಮುದಾಯವನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ಆಲೋಚನೆ ಮಾಡಬೇಕಾಗಿದೆ. ಯುವ ಪ್ರತಿಭೆಗಳು ವಿದೇಶಗಳಿಗೆ ಪಲಾಯನಗೊಳ್ಳುವುದನ್ನು ತಡೆಯುವ ನಿಟ್ಟಿನಲ್ಲಿ ದೇಶಕ್ಕೆ ಮತ್ತು ತನ್ನ ಸಮಾಜಕ್ಕೆ ಅವರ ಸೇವೆಯ ಮಹತ್ವವನ್ನು ತಿಳಿಸುವ ಸಾಹಿತ್ಯ ರಚನೆಯು ಅತ್ಯಗತ್ಯವಾಗಿದೆ.

ಉನ್ನತ ಆಲೋಚನೆಗಳನ್ನು, ಬಹುತ್ವವನ್ನು, ಉತ್ತಮ ಸಂಸ್ಕಾರಗಳನ್ನು, ಮಾನವೀಯ ಗುಣಗಳನ್ನು ಮತ್ತು ಮೌಲ್ಯಗಳನ್ನು ನೈಜ ಸ್ಥಿತಿಯಲ್ಲಿ ಬಿತ್ತುವಂತಹ ಯುವ ಸಾಹಿತ್ಯ ಬೇಕಾಗಿದೆ. ಡೋಂಗಿ ಸಮಾಜ ಸುಧಾರಣೆ, ಸಾಮಾಜಿಕ ಚಿಂತನೆ, ಸಮ ಸಮಾಜದ ಕಡೆಗೆ ನಾವು ಎಂಬ ಕಲ್ಪನೆಗಳನ್ನು ಮುಂದಿಟ್ಟುಕೊಂಡು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವಂತಹ ನಾಯಕರ ಮತ್ತು ಅವರ ಸಾಹಿತ್ಯದಿಂದ ದೂರ ಉಳಿಯಬೇಕಾಗಿದೆ. ಆತ್ಮಪೂರ್ವಕವಾಗಿ ಬುದ್ಧ, ಬಸವ, ವಿವೇಕಾನಂದ, ಅಂಬೇಡ್ಕರ್ ಇಂತಹ ಮಹಾನ್ ನಾಯಕರ ದುಡಿಮೆ, ಆಲೋಚನೆಗಳು, ತತ್ವ ಸಿದ್ಧಾಂತಗಳು ಮತ್ತು ಮೌಲ್ಯಗಳಿಂದ ನವ ಸಮಾಜದ ಮನ್ವಂತರಕ್ಕೆ ಯುವಕರನ್ನು ಸಜ್ಜುಗೊಳಿಸುವ, ಜೀವಪರವಾದ ಮತ್ತು ದೇಶಕ್ಕಾಗಿ ತನ್ನನ್ನು ದುಡಿಸಿಕೊಳ್ಳುವಂತಹ ಮನಸ್ಥಿತಿಯನ್ನು ಯುವಕರಲ್ಲಿ ಬಿತ್ತುವಂತಹ ಸಾಹಿತ್ಯದ ಅಗತ್ಯವಿದೆ.

# ನನ್ನ ಓದು - ನನ್ನ ಭಾಷೆ

-- ಕು. ಮಿಸ್ಬಾ ಮೆಹರೀನ್

ಓದು ಅಂದ್ರೆ ವಿದ್ಯೆ, ವಿದ್ಯೆಯು ಒಂದು ಬಹುದೊಡ್ಡ ಸಂಪತ್ತು, ಹಂಚಿದರೆ ಕಡಿಮೆಯಾಗಲ್ಲ, ನಮ್ಮಲ್ಲೇ ಇದ್ದರೆ ಕೊಳೆಯುವುದಿಲ್ಲ.

ವಿದ್ಯೆಯ ಬಗ್ಗೆ ಒಂದು ಶ್ಲೋಕ ಹೇಳುತ್ತೇನೆ ಕೇಳಿ -

"ವಿದ್ಯಾತುರಾಣಂ ನ ಸುಖಂ ನ ನಿದ್ರಾ

ಕಾಮಾತುರಾಣಂ ನ ಭಯಂ ನ ಲಜ್ಜಾ

ಈ ಶ್ಲೋಕದಂತೆ ವ್ಯಕ್ತಿಯಲ್ಲಿ ದುರಾಶೆ ಇದ್ದರೆ ಬಂಧುಗಳಾಗಲೀ ಸ್ನೇಹಿತರುಗಳಾಗಲೀ ನೋಡುವುದಿಲ್ಲ- ಹಸಿವು ರುಚಿಯನ್ನು ನೋಡುವುದಿಲ್ಲ. ಇದೇ ರೀತಿ ಕಲಿಯುವ ಆಸೆ ನಿದ್ರೆಯನ್ನಾಗಲಿ, ಸುಖವನ್ನಾಗಲಿ ಅಪೇಕ್ಷಿಸುವುದಿಲ್ಲ. ಇದು ಗೀತೆಯಲ್ಲಿ ಬಂದಿರುವು ಶ್ಲೋಕ. ವಿದ್ಯೆಯ ಬಗ್ಗೆ ಖುರಾನ್‌ನಲ್ಲಿಯೂ ಸಹ ಬಂದಿದೆ.

ವಿದ್ಯೆಯಿಂದ ನಮ್ಮ ಜೀವನದಲ್ಲಿ ಶಾಂತಿ ಬರುತ್ತದೆ. ಏಕೆಂದರೆ ವಿದ್ಯೆ ನಮಗೆ ನಮ್ಮ ಜೀವನ ಮುನ್ನಡೆಸುವ ಒಂದು ಸುಲಭವಾದ ಮತ್ತು ಸಹಜವಾದ ದಾರಿ ತೋರುತ್ತದೆ. ಆ ದಾರಿಯಲ್ಲಿ ನಾವು ಮುಕ್ತ ಮನಸಿನಿಂದ ಹೋದರೆ ಯಾವ ಭೇದವನ್ನಾಗಲೀ, ಮುಜುಗುರವನ್ನಾಗಲೀ ಮರೆಯಬಹುದು.

ವಿದ್ಯೆಯು ಸಮಾಜದಲ್ಲಿನ ಅವ್ಯವಸ್ಥೆಯನ್ನು ಹೋಗಲಾಡಿಸುತ್ತ, ವ್ಯಕ್ತಿಯ ಸರ್ವಾಂಗೀಣ ಬೆಳವಣಿಗೆಗೆ ಆಶಾಕಿರಣವಾಗಿದೆ. ನಮ್ಮ ಸಂವಿಧಾನವು ನಮಗೆ ಶಿಕ್ಷಣದ ಹಕ್ಕನ್ನು ನೀಡಿದ್ದು ಯಾವುದೇ ಜಾತಿಭೇದ ವರ್ಣಭೇದವಿಲ್ಲದೆ ಎಲ್ಲರಿಗೂ ಸಿಗುವಂತೆ ಅವಕಾಶ ಕಲ್ಪಿಸಲಾಗಿದೆ. ಈ ದಿಸೆಯಲ್ಲಿ ನೋಡಿದರೆ ಈ ಹಕ್ಕು ನನಗೂ ಸಿಕ್ಕಿದೆ. ನನ್ನ ಓದು, ಇದರ ಸಂಪೂರ್ಣ ಅಧಿಕಾರ ನನಗಿದ್ದು ನಾನು ಯಾವ ಮಾರ್ಗದಲ್ಲಿ ಹೋಗಬೇಕೆಂಬುದನ್ನು ನನಗೆ ಸೂಚಿಸುತ್ತದೆ. ನನ್ನ ಓದು ನನಗೆ ಎಷ್ಟು ಮಹತ್ತರ ಸ್ಥಾನ ಕಲ್ಪಿಸಿದೆ ಎಂದರೆ ಮೂರುವರೆ ಲಕ್ಷ ಮಂದಿಯ ಮುಂದೆ ಮತ್ತು ನಾಡಿನ ಗೌರವಾನ್ವಿತ ಪ್ರಜೆಗಳಾದ ಗಣ್ಯರುಗಳ ಎದುರಿಗೆ, ಬೆಂಗಳೂರಿನಿಂದ ಇಲ್ಲಿಯವರೆಗೆ ಬಂದು ಈ ಬೃಹತ್ ಸಮಾವೇಶದಲ್ಲಿ ನಿಂತು ಮಾತನಾಡುತ್ತಿರುವುದು ಬಹುದೊಡ್ಡ ನಿದರ್ಶನವಾಗಿದೆ.

ಇದು ನನಗು ಮತ್ತು ನನ್ನ ತಂದೆ ತಾಯಿಗಳಿಗು ಹೆಮ್ಮೆಯ ಮಾತಾಗಿದೆ. ಅಷ್ಟೇ ಅಲ್ಲ, ನಾನು ಓದುತ್ತಿರುವ ನಮ್ಮ ವಿದ್ಯಾ ಸಂಸ್ಥೆಯಾದ ಬಿ.ಇ.ಟಿ.ಪ್ರೌಢ ಶಾಲೆಯವರಿಗು ಕೂಡ ಹೆಮ್ಮೆಯ ಮಾತಾಗಿದೆ. ಇಷ್ಟೆಲ್ಲ ಗೌರವ ನನಗೆ ಸಿಗುತ್ತಿರುವುದು ನನ್ನ ಓದಿನಿಂದಲೆ ಎಂದು ಹೇಳಿದರೆ ತಪ್ಪಾಗಲಾರದು. ನನ್ನ ಓದು ನನ್ನಲ್ಲಿ ಸದೃಢ ಸಂಸ್ಕೃತಿಯನ್ನು, ಮಾನವೀಯತೆಯನ್ನು, ಸೌಹಾರ್ದತೆಯನ್ನು ಮತ್ತು ಉತ್ತಮ ಭವಿಷ್ಯವನ್ನು ರೂಪಿಸುವ ಸನ್ಮಾರ್ಗಗಳನ್ನು ತೋರುತ್ತಿರುವ ರಾಮಬಾಣವಾಗಿದೆ.

ನನ್ನ ಓದು ನನಗೆ ಇಷ್ಟೆಲ್ಲ ಸವಲತ್ತುಗಳನ್ನು ಕೊಡುತ್ತಿರುವಾಗ ನನ್ನಲ್ಲಿ ಚಿಂತೆಯೊಂದು ಕಾಡುತ್ತಿದೆ. ನನ್ನ ಓದು ನನ್ನಲ್ಲಿ ದುಃಖಕರ ವಾತಾವರಣವನ್ನು ಸೃಷ್ಟಿಸಿದೆ. ಏಕೆ ಅಂತ ಪ್ರಶ್ನೆ ನಿಮ್ಮಲ್ಲಿ ಹುಟ್ಟಬಹುದು. ಅದಕ್ಕೆ ಉತ್ತರ ನಾನು ಹೇಳುತ್ತೇನೆ ಕೇಳಿ, ಸರ್ಕಾರವೇನೋ ಪ್ರತಿಯೊಬ್ಬರಿಗೂ ಕಡ್ಡಾಯ ಶಿಕ್ಷಣವನ್ನು ಜಾರಿಗೊಳಿಸಿದೆ. ಆದರೆ ಈಗಲು ಅನೇಕ ಜನ ಹೆಣ್ಣುಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ.

ಈಗಲು ಅನೇಕ ಮಂದಿಯಲ್ಲಿ ಸ್ತ್ರೀ ಶಿಕ್ಷಣ ಅನುಚಿತ ಮತ್ತು ಹೆಣ್ಣುಮಕ್ಕಳು ಎಷ್ಟೇ ಓದಿದರೂ ನಾಲ್ಕು ಗೋಡೆಗಳ ಮಧ್ಯೆ ಕೆಲಸ ಮಾಡಲೇಬೇಕಿದೆ. ಅವರು ಹೆಚ್ಚು ಓದಿದರೆ, ಎಲ್ಲಿ ಕೆಟ್ಟು ಹೋಗುತ್ತಾರೋ ಎಂಬ ಭಾವನೆ ಜನರಲ್ಲಿ ಗಾಢವಾಗಿ ಬೇರೂರಿದೆ.

ಅಂಥವರಿಗೆ ನನ್ನ ಸವಿನುಡಿಯೇನೆಂದರೆ, ನಾನು ಓರ್ವ ಹೆಣ್ಣು ಮಗಳು. ನಾನು ಓದುತ್ತಿರುವುದರಿಂದಲೆ ನನಗೆ ಇಷ್ಟೆಲ್ಲ ಗೌರವ, ಸನ್ಮಾನಗಳು ದೊರೆಯುತ್ತಿರುವುದು. ನನ್ನ ಉತ್ತಮ ಭವಿಷ್ಯ ನನ್ನ ಓದಿನೊಂದಿಗೆ ಪ್ರಾರಂಭಗೊಂಡು, ನನ್ನ ಓದಿಗೆ ಅಂತ್ಯಗೊಳ್ಳುತ್ತದೆ.

ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಸರ್ಕಾರ ಹಲವಾರು ಯೋಜನೆಗಳನ್ನು ಜಾರಿಗೊಳಿಸಿದೆ. ಲಿಂಗಾನುಪಾತದ ಸಮಾನತೆಗಾಗಿ ಸರ್ಕಾರ ಹೆಣ್ಣುಮಕ್ಕಳ ಶಿಕ್ಷಣ, ಉದ್ಯೋಗದಡಿಯಲ್ಲಿ ಸಬಲೀಕರಣವನ್ನು ಪ್ರಾರಂಭಿಸಿದೆ. ಹೆಣ್ಣುಮಕ್ಕಳ ಶಿಕ್ಷಣಕ್ಕಾಗಿ ಅನೇಕ ಸ್ಕಾಲರ್ಶಿಪ್‌ಗಳ ಮೂಲಕ ಸರ್ಕಾರ ಸಹಾಯಧನವನ್ನು ಒದಗಿಸುತ್ತಿರುವಾಗ ಎಲ್ಲರೂ ಅದರ ಪ್ರಯೋಜನ ಪಡೆಯಬೇಕು. ಒಬ್ಬ ಹೆಣ್ಣುಮಗಳು ಓದಿದಾಗ ತನ್ನ ಜೀವನಕ್ಕೆ ಸಂಬಂಧಿಸಿದ ಎಲ್ಲಾ ನಿರ್ಧಾರ ತೆಗೆದುಕೊಳ್ಳುವಷ್ಟು ಸಮರ್ಥಳಾಗುತ್ತಾಳೆ. ಅಷ್ಟೇ ಏಕೆ ಈಗಂತೂ ಅನೇಕ ಹೆಣ್ಣುಮಕ್ಕಳು ಅನೇಕ ಉದ್ಯೋಗಗಳು, ಕ್ರೀಡೆಗಳು ಹಾಗೂ ಸೈನ್ಯದಲ್ಲಿ ಭಾಗವಹಿಸಿದ್ದು ತಾವು ಗಂಡುಮಕ್ಕಳಿಗೆ ಸಮಾನರು ಎಂಬ ನಿದರ್ಶನಗಳನ್ನು ತೋರಿಸಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ಮಾತಾಗಿದೆ. ಹೀಗೆಲ್ಲಾ ಇದ್ದಾಗ ಹೆಣ್ಣು ಮಕ್ಕಳು ಓದಬಾರದು, ಓದಿದರೆ ಉದ್ಯೋಗಕ್ಕೆ

ಹೋಗಬಾರದು ಎಂಬೆಲ್ಲ ಆಲೋಚನೆಗಳನ್ನು ಜನರು ಬಿಟ್ಟು ಹೆಣ್ಣುಮಕ್ಕಳನ್ನು ಪ್ರೋತ್ಸಾಹಿಸಿದರೆ ನಮ್ಮ ದೇಶ ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಾಲಿನಲ್ಲಿ ಸೇರುತ್ತದೆ.

"ಓದು ಬರಹ ಕಲಿತ ನಾರಿ, ಸುಖ ಸಂಸಾರಕ್ಕೆ ದಾರಿ" ಎಂಬ ಗಾದೆಯನ್ನು ಪ್ರತಿಯೊಬ್ಬರು ಅರ್ಥಯಿಸಿಕೊಳ್ಳಬೇಕು. ಹೆಣ್ಣುಮಕ್ಕಳು ಓದಬಾರದೆಂಬ ಭಾವನೆ ಹಿಂದಿನ ಕಾಲದಲ್ಲಿತ್ತು. ಈಗ ಕಾಲ ಬದಲಾಗಿದ್ದು, ಗಂಡು ಹೆಣ್ಣು ಸಮಾನರು ಎಂದು ಜನ ಹೇಳುತ್ತಾರಷ್ಟೆ. ಆದರೆ ಅವರ ಭಾವನೆ ಏನೇನೂ ಬದಲಾಗಿಲ್ಲ. ಅಂಥವರೆಲ್ಲ ಈ ಶ್ಲೋಕವನ್ನು ಅರ್ಥಮಾಡಿಕೊಳ್ಳಬೇಕು.

ಯತ್ರ ನಾರಸ್ತು ಪೂಜ್ಯಂತೆ ರಮಂತೆ, ತಕ್ರದೇವತಾಹಯಂತಸ್ಥು ನ ಪೂಜ್ಯಂತೆ ಸರ್ವಾಸ್ಥ ಫಲಾವ ಕ್ರಿಯಹ.

ಅಂದ್ರೆ ಎಲ್ಲಿ ಹೆಣ್ಣಿಗೆ ಗೌರವ ಕೊಡ್ತಾರೊ ಅಲ್ಲಿ ದೇವತೆಗಳು ವಾಸಿಸುತ್ತಾರೆ. ಎಲ್ಲಿ ಅವರಿಗೆ ಗೌರವ, ಸನ್ಮಾನ ದೊರೆಯುವುದಿಲ್ಲವೋ ಆ ಸ್ಥಳ ನಿಯೋಜಕ ವಾಗುತ್ತದೆ.

ಇದು ಪ್ರತಿಯೊಬ್ಬರಿಗೆ ಮನದಟ್ಟಾದರೆ ಅದಕ್ಕಿಂತ ಸಂತೋಷಕರ ವಿಷಯ ಬೇರೊಂದಿಲ್ಲ. ಆಗಲೆ "ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ" ಎಂಬ ಗಾದೆಗೆ ಅರ್ಥಸಿಗುತ್ತದೆ.

ಅಷ್ಟೇ ಅಲ್ಲ, ನನ್ನ ಓದು ಇಡೀ ಸಮಾಜದ ಬದಲಾವಣೆಯನ್ನು ಬಯಸುತ್ತಿದೆ. ಕೇವಲ ನನ್ನ ಓದು ಅಲ್ಲ, ಇಡೀ ನಾಡಿನ ಶೈಕ್ಷಣಿಕ ಪ್ರಗತಿಯನ್ನು ಕಂಡರೆ ನಾನು ಓದಿದ್ದಕ್ಕೆ ಸಾರ್ಥಕ ಎಂಬ ಭಾವನೆ ಪ್ರತಿಯೊಬ್ಬರಲ್ಲಿ ಮೂಡಬೇಕು.

ಪ್ರತಿಯೊಂದು ರಾಜ್ಯವು ತನ್ನ ಪ್ರಜೆಗಳಿಗೆ, ಅವರವರ ಮಾತೃಭಾಷೆಗೆ ತಕ್ಕ ಶಿಕ್ಷಣವನ್ನು ಕಲ್ಪಿಸಿದೆ. ಅಂತೆಯೇ ಕರ್ನಾಟಕದಲ್ಲೂ ಸಹ ಕನ್ನಡವು ನಾಡ ಭಾಷೆಯಾಗಿದೆ. ನನ್ನ ವಿಚಾರಕ್ಕೆ ಬಂದರೆ ನನ್ನ ಮಾತೃಭಾಷೆ ಉರ್ದು, ನಾನು ಮನೆಯಲ್ಲಿ ಮಾತನಾಡುವ ಭಾಷೆ ಉರ್ದು, ಇನ್ನು ನಾನು ಶಾಲೆಯಲ್ಲಿ ಕಲಿಯುತ್ತಿರುವ ಭಾಷೆಗಳು ಹಿಂದಿ, ಅಂತಾರಾಷ್ಟ್ರೀಯ ಭಾಷೆಯಾದ ಇಂಗ್ಲಿಷ್ ಹಾಗೂ ನಮ್ಮ ನಾಡ ಭಾಷೆಯಾದ ಕನ್ನಡ. ನಾನು ನಮ್ಮ ಶಾಲೆಯಲ್ಲಿ ಹಿಂದಿಯನ್ನು ಪ್ರಥಮ ಭಾಷೆಯನ್ನಾಗಿ, ಕನ್ನಡ ದ್ವಿತೀಯ ಭಾಷೆಯನ್ನಾಗಿ ಮತ್ತು ಇಂಗ್ಲಿಷನ್ನು ತೃತೀಯ ಭಾಷೆಯನ್ನಾಗಿ ಓದುತ್ತಿದ್ದೇನೆ.

ಆದರೆ ಕರ್ನಾಟಕದಲ್ಲಿರುವ ನಮಗೆ ನಮ್ಮ ಕನ್ನಡ ಭಾಷೆಯೇ ಮಾತೃಭಾಷೆ.

ಹರಿವ ನದಿಗಳಿಂದ ಹರಸೋ ಋಷಿಗಳಿಂದ

ಬರೆವ ಕವಿಗಳಿಂದ ಧನ್ಯ ನೀವು

ಸವಿಯ ನುಡಿಯ ಆಡುವ ಅಮೃತ ಸವಿಯ

ಸವಿಯುವ ಕನ್ನಡಿಗರು ನಾವು ಧನ್ಯ ಧನ್ಯ

೮೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಮೈಸೂರು | ೩೦೧

ಕರ್ನಾಟಕ ೧೯೫೬ ನವೆಂಬರ್ ೧ರಂದು ಏಕೀಕರಣವಾಯಿತು. ದಕ್ಷಿಣ ಭಾರತದ ಎಲ್ಲ ಕನ್ನಡ ಭಾಷೆ ಮಾತನಾಡುವ ಪ್ರದೇಶಗಳನ್ನು ವಿಲೀನಗೊಳಿಸಿ ಒಂದು ರಾಜ್ಯವನ್ನು ಘೋಷಣೆ ಮಾಡಿದ ಈ ರಾಜ್ಯೋತ್ಸವ ದಿನವನ್ನು ಸರ್ಕಾರಿ ರಜಾದಿನವನ್ನಾಗಿ ಪಟ್ಟಿ ಮಾಡಲಾಗಿದ್ದು ಎಲ್ಲರೂ ನಾಡಹಬ್ಬವಾಗಿ ಆಚರಿಸುತ್ತಾರೆ.

ಕನ್ನಡದ ಕುಲಪುರೋಹಿತರಾದ ಆಲೂರು ವೆಂಕಟರಾವ್ ೧೯೦೫ ರಲ್ಲಿ ಕರ್ನಾಟಕ ಏರಣ ಚಳುವಳಿಯನ್ನು ಪ್ರಾರಂಭಿಸಿದರು. ೧೯೫೦ರಲ್ಲಿ ಭಾರತ `ಗಣರಾಜ್ಯವಾದ ನಂತರ ಭಾರತದ ವಿವಿಧ ಪ್ರಾಂತಗಳು ಭಾಷೆಯ ಆಧಾರದ ಮೇಲೆ ರಾಜ್ಯಗಳಾಗಿ ರೂಪುಗೊಂಡವು. ಈ ಹಿಂದೆ ರಾಜರ ಆಳ್ವಿಕೆಯಲ್ಲಿದ್ದ ದಕ್ಷಿಣ ಭಾರತದ ಹಲವಾರು ಸಂಸ್ಥಾನಗಳು ಒಳಗೊಂಡಂತೆ ರಾಜ್ಯಗಳಾಗಿ ರೂಪುಗೊಂಡು, ಮೈಸೂರು ರಾಜ್ಯ ಉಗಮಗೊಂಡಿತು. ಕಾಲಕ್ರಮೇಣ ಮೈಸೂರು ರಾಜ್ಯ ಎಂಬ ಹೆಸರು ಹೋಗಿ ಕರ್ನಾಟಕವೆಂದು ಮರುನಾಮಕರಣವಾಯಿತು. ಹೀಗೆ ನಿರ್ಮಾಣವಾದ ಕರ್ನಾಟಕದ ನೆನಪಿನಲ್ಲಿ ಕನ್ನಡ ರಾಜ್ಯೋತ್ಸವವನ್ನು ಪ್ರತಿ ವರ್ಷ ಕನ್ನಡಿಗರಾದ ನಾವು ನಾಡಹಬ್ಬವನ್ನಾಗಿ ಆಚರಿಸುತ್ತೇವೆ. ಈ ದಿನದಂದು ಹಳದಿ ಕೆಂಪು ಬಣ್ಣದ ಬಾವುಟಗಳನ್ನು ಹಾರಿಸಿ, ರಾಷ್ಟ್ರಕವಿ ಕುವೆಂಪುರವರಿಂದ ರಚಿತವಾದ "ಜೈ ಭಾರತ ಜನನಿಯ ತನುಜಾತೆ ಜಯ ಹೇ ಕರ್ನಾಟಕ ಮಾತೆ" ಎಂಬ ನಾಡಗೀತೆಗಳನ್ನು ಹಾಡಲಾಗುತ್ತದೆ.

ಇನ್ನು ಭಾಷೆಯ ವಿಷಯಕ್ಕೆ ಬಂದಾಗ ನನ್ನ ಓದು ಯಾವ ಭಾಷೆಯಲ್ಲಿರ ಬೇಕು? ಯಾವ ಭಾಷೆಗಳನ್ನು ಓದಬೇಕು? ಎಂಬೆಲ್ಲ ಪ್ರಶ್ನೆಗಳು ಹುಟ್ಟುತ್ತವೆ.

ಎಲ್ಲಾದರು ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು.

ನಮ್ಮ ನಾಡು ವೈವಿಧ್ಯತೆಗಳ ಬೀಡು, ಬಯಲುಸೀಮೆ, ಮಲೆನಾಡು, ಕರಾವಳಿ ಪ್ರದೇಶ, ಬೆಟ್ಟ ಗುಡ್ಡಗಳು ಹೀಗೆ ಭೌಗೋಳಿಕ ವಿಶಿಷ್ಟತೆ ಹೊಂದಿರುವ ರಾಜ್ಯ ನಮ್ಮದು. ನಮ್ಮ ಭಾಷೆ ಕನ್ನಡ ಅತ್ಯಂತ ಸುಲಭ, ಸುಂದರವಾದುದು. ಕನ್ನಡಕ್ಕೆ ಸುಮಾರು ಎರಡೂವರೆ ಸಾವಿರ ವರ್ಷಗಳ ಇತಿಹಾಸವಿದೆ. ನಮ್ಮ ಭಾಷೆಯ ಸಾಹಿತ್ಯದಲ್ಲಿ ಅನೇಕ ದಿಗ್ಗಜರು ಬಂದುಹೋಗಿದ್ದಾರೆ. ಪ್ರಾಚೀನ ಕವಿಗಳಾದ ಪಂಪ, ರನ್ನ, ಕುಮಾರವ್ಯಾಸ, ರಾಘವಾಂಕ, ಹರಿಹರ ಮೊದಲಾದವರು ಅನೇಕ ಕೃತಿಗಳನ್ನು ರಚಿಸಿ ಕನ್ನಡವನ್ನು ಶ್ರೀಮಂತಗೊಳಿಸಿದ್ದಾರೆ. ಅಷ್ಟೇ ಅಲ್ಲ ಕುವೆಂಪು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಗಿರೀಶ್ ಕಾರ್ನಾಡ್ ಮೊದಲಾದವರು ತಮ್ಮ ಸಾಹಿತ್ಯದ ಮೂಲಕ

ಕನ್ನಡವನ್ನು ಮತ್ತಷ್ಟು ಶ್ರೀಮಂತಗೊಳಿಸಿದ್ದಾರೆ. ೮ ಕನ್ನಡ ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವುದು ನಮ್ಮೆಲ್ಲರಿಗೂ ಹೆಮ್ಮೆಯ ಮಾತಾಗಿದೆ.

೩೦೨ / ನುಡಿಗಂಧ

ಕನ್ನಡದ ಸ್ಥಾನಮಾನ ಭಾರತೀಯ ಸಾಹಿತ್ಯದಲ್ಲಿ ಮುಂಚೂಣಿಯಲ್ಲಿದೆ. "ಚೆಲ್ಲಲಿ ನಮ್ಮೆಲ್ಲರೆದೆಗೆ ಕನ್ನಡದ ಹೂವ ಕಂಪು, ಕವಿ ಕವಿಯತ್ರಿಯರ ಪ್ರೀತಿಯ ಕಾವ್ಯದ ಇಂದು" . ಕನ್ನಡ ಮನೆಯ ಅನ್ನ ತಿಂದವರು ಅದನ್ನು ಮರೆತು ಯಾವತ್ತು ಕನ್ನಡ ಭಾಷೆಯನ್ನು ತುಳಿಯಬೇಡಿ. ಹಾಗಂತ ನಾನು ಬೇರೆ ಭಾಷೆ ಕಲಿಯಬೇಡಿ ಅಂತ ಹೇಳ್ತಾ ಇಲ್ಲ. ಬರಿ ಬಾಯಿಮಾತಲ್ಲಿ ನಾನು ಕನ್ನಡಿಗ ಎಂದು ಹೇಳಿದರೆ ಸಾಲದು. ಕರ್ನಾಟಕ ಶಬ್ದದಲ್ಲಿ ಕರ್ಣ ಅಂದ್ರೆ ಕಿವಿ, ಅಟಕ್ ಅಂದ್ರೆ ಬೀಳುವುದು, ಅರ್ಥಕ್ಕೆ ಅನುಗುಣವಾದ, ಭಾವಕ್ಕೆ ಅರ್ಥವಾಗುವ, ಜ್ಞಾನಕ್ಕೆ ಅರ್ಥವಾಗುವ ಭಾಷೆ ಅದು ಕನ್ನಡ. ಇಂತಹ ಭಾಷೆ ಈಗ ನಮ್ಮಿಂದ ದೂರವಾಗುತ್ತಿದೆ. ಅಖಂಡ ಕರ್ನಾಟಕವೇನೋ ರಚಿತವಾಯಿತು, ಆದರೆ ಕನ್ನಡಿಗರ ಮನಸ್ಸು ಒಂದಾಗಿಲ್ಲ. "ನಾವು ಕನ್ನಡಿಗರು, ನಾವೆಲ್ಲಾ ಒಂದೇ" ಎಂಬ ಭಾವನೆ ನಮ್ಮೆಲ್ಲರ ಎದೆಯಲ್ಲಿ ಬೇರೂರಬೇಕು.

ದೇಶವೆಲ್ಲ ಸುತ್ತಾಡಿ ಕನ್ನಡಕ್ಕೆ ನಾಲ್ಕನೇ ಸ್ಥಾನ ಎಂದಾಗ ಬೆಂಗಳೂರು ಎನ್ನುವ ಬದಲು ಜನರು "ನಾವು ಬೆಂಗಳೂರಿಯನ್" ಅಂತಾರೆ. ಯಾಕೇ, ನಾನು ಕನ್ನಡಿಗ ಎಂದು ಹೇಳ್ಕೊಳೋಕೆ ನಾಚಿಕೇನ? ಇಂಗ್ಲಿಷ್‌ನಲ್ಲಿ ಮಾತಾಡಿದ್ರೆ ಸ್ಟಾಂಡರ್ಡ್ ಅಂತ ಇರಬೇಕು. ಕನ್ನಡ ಕನ್ನಡ ಅಂದ ಮಾತ್ರಕ್ಕೆ, ಬೇರೆ ಭಾಷೆಯನ್ನು ದ್ವೇಷಿಸಿ ಅಂತ ನಾನು ಹೇಳ್ತಾ ಇಲ್ಲ. ಎಲ್ಲಾ ಭಾಷೆಗಳಿಗೂ ತನ್ನದೇ ಆದ ಸ್ಥಾನ ಮಾನ ಇದ್ದೇ ಇದೆ.

ಪ್ರತಿಸಲ ನಮಗೊಂದು ಧ್ವನಿ ಕೇಳಿಬರುತ್ತದೆ, ಅದು ಕನ್ನಡ ಭಾಷೆಯನ್ನು ಉಳಿಸಿಯೆಂದು, ಕರ್ನಾಟಕದಲ್ಲಿದ್ದುಕೊಂಡು ನಾವು ಕನ್ನಡ ಭಾಷೆಯನ್ನು ಉಳಿಸಿ ಎಂಬ ಹೋರಾಟ ಮಾಡಬೇಕಾಗಿದೆ.

ಹಾಗಾದರೆ ನಮ್ಮ ಭಾಷೆಯನ್ನು ಸಾಯಿಸುವವರು ಯಾರು? ಜಾಗತೀಕರಣ, ವಾಣಿಜ್ಯಕರಣದಿಂದ ಪರಭಾಷೆ ವ್ಯಾಮೋಹ ಹೆಚ್ಚಾಗಿ ಅವು ಕನ್ನಡದ ಮೇಲೆ ಪ್ರಭಾವ ಬೀರಿವೆ. ಭಾಷೆ ಎನ್ನುವುದು ಸಂವಹನ ಮಾಧ್ಯಮ ಮಾತ್ರವಾಗಿರದೆ ಅದು ನಮ್ಮ ಸಂಸ್ಕೃತಿಯಲ್ಲಿ ಮಹತ್ತರ ಪಾತ್ರವಹಿಸುತ್ತದೆ. ಅಂತಹ ಸಮೃದ್ಧ ಸಂಸ್ಕೃತಿಯನ್ನು ಹೊಂದಿರುವ ಕನ್ನಡವೇ ನಮ್ಮಮ್ಮ, ಅವಳಿಗೆ ಕೈ ಮುಗಿಯಮ್ಮ ಎನ್ನದೆ ನಾವು ಇಂದು "sorry & cant speak kannada" ಎನ್ನುತ್ತೇವೆ. "ಕನ್ನಡ ಕಲಿತರೇನು ಸಿಗುತ್ತದೆ, English ಕಲಿತರೆ ಮುಂದೆ ಒಳ್ಳೆಯ ಕೆಲಸ ಸಿಗಬಹುದು" ಎಂದು ಜನ ತಮ್ಮ ಮಕ್ಕಳನ್ನು ಆಂಗ್ಲ ಶಾಲೆಗೆ ಸೇರಿಸುತ್ತಾರೆ. ಇದೇ ರೀತಿ ಆದ್ರೆ ಉಳಿಸೋಣ ಬನ್ನಿ ಕನ್ನಡ ಅಂದ

ಮಾತು ಹುಡುಕೋಣ ಬನ್ನಿ ಕನ್ನಡ ಅಂತ ಹೇಳುವಲ್ಲಿ ಅನುಮಾನವೇ ಇಲ್ಲ. ಈಗಲು ಕಾಲ ಮಿಂಚಿಲ್ಲ, ಕನ್ನಡ ಉಳಿಸಿ ಬೆಳೆಸಬೇಕಾದರೆ ಮೊದಲನೆಯದಾಗಿ ಕನ್ನಡ ಭಾಷೆಯನ್ನು ಪ್ರೀತಿಸಬೇಕು. ಕನ್ನಡವನ್ನು ಮುಕ್ತ ಮನಸ್ಸಿನಿಂದ ಯಾವುದೇ ಮುಜುಗರವಿಲ್ಲದೆ ಕಲಿಯಬೇಕು, ಕನ್ನಡ ಪತ್ರಿಕೆಗಳನ್ನು ಓದಬೇಕು, ಸಾಹಿತ್ಯ ಗ್ರಂಥಗಳನ್ನು ಅಭ್ಯಸಿಸಬೇಕು.

೮೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಮೈಸೂರು / ೨೦೩

ಬೇರೊಂದು ಭಾಷೆಯನ್ನು ಕಲಿಯುತ್ತಲೇ ಕನ್ನಡದ ಉಳಿವಿಗಾಗಿ ಶ್ರಮವಹಿಸಬೇಕು. "ನಮ್ಮ ನಡೆ ನುಡಿ ಕನ್ನಡವಾಗಲಿ, ನಾಡ ಸಂಸ್ಕೃತಿ ಉಳಿಯಬೇಕು" , "ಸಿರಿಗನ್ನಡಂ ಗೆಲ್ಗೆ ಸಿರಿಗನ್ನಡಂ ಬಾಳ್ಗೆ."

ಯಾವುದೇ ಭಾಷೆ ಕನ್ನಡದ ಸ್ಥಾನವನ್ನು ಕಿತ್ತುಕೊಳ್ಳುವಂತಾಗಬಾರದು. ಹಾಗೇನಾದರೂ ಆದರೆ ಅದಕ್ಕಿಂತ ದುರಂತ ಇನ್ನೊಂದಿಲ್ಲ. ಕನ್ನಡ ಭಾಷೆ ಅಳಿದರೆ ಮಹಾನ್ ಸಂಸ್ಕೃತಿ ಅಳಿದಂತೆ ಎಂಬುದು ನಮ್ಮ ಗಮನದಲ್ಲಿರಬೇಕು.

"ಕನ್ನಡಕೆ ಹೋರಾಡು ಕನ್ನಡದ ಕಂದ, ಕನ್ನಡವ ಕಾಪಾಡು ನನ್ನ ಆನಂದ ಎಂಬ ನುಡಿಯಂತೆ" , ಇಂದು ನಾವು ನಾವಾಗಿರಲು ಬಂಧು ಮಿತ್ರರೊಂದಿಗೆ ಪ್ರೀತಿ ಪ್ರೇಮ ವಾತ್ಸಲ್ಯದ ಅಮೃತ ದಾರಿಯನ್ನು ಹಂಚಿಕೊಳ್ಳಲು ನಮಗೆ ನಮ್ಮ ಕನ್ನಡ ಭಾಷೆಯೇ ಮಾಧ್ಯಮ. ನಮ್ಮ ಭಾವಾರ್ಥಗಳಿಗೆ ಮೂರ್ತರೂಪ ನೀಡಿ ಅದನ್ನು ಇತರರ ಹೃದಯದೊಂದಿಗೆ ಬೆಸೆಯುವಂತಹ ಬೆಸುಗೆಯೇ ಕನ್ನಡ, ನಮ್ಮ ಭಾವನೆಗಳ ಅಭಿವ್ಯಕ್ತಿಗೆ ನಮಗೆ ನಮ್ಮ ಭಾಷೆ ಕನ್ನಡವೇ ಮಾಧ್ಯಮ ಎಂದು ನಮ್ಮ ಶ್ರೇಷ್ಠ ಕವಿಗಳು ತಮ್ಮ ಕವಿತೆಗಳಲ್ಲಿ ಸಾರಿದ್ದಾರೆ.

"ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುವುದು, ಕನ್ನಡಕ್ಕಾಗಿ ಕೊರಳೆತ್ತು ಅಲ್ಲಿ ಪಾಂಚಜನ್ಯ ಮೊಳಗುವುದು." "ಕನ್ನಡವೇ ಸತ್ಯ ಕನ್ನಡವೇ ನಿತ್ಯ" . ಕನ್ನಡಾಂಬೆಯ ವರಪುತ್ರರಾದ ನಾವು ಭಾಷೆ ಭಾವನೆ ನಡವಳಿಕೆ ಎಲ್ಲದರಲ್ಲಿಯೂ ಇಡೀ ಜಗತ್ತಿನಲ್ಲಿ ಮಾದರಿಯಾಗಿದ್ದೇವೆಂದರೆ ತಪ್ಪಲ್ಲ.

"ಎಲ್ಲ ಭಾಷೆಗಳನ್ನು ಗೌರವಿಸುವುದು ನಮ್ಮ ಪರಂಪರೆ" , "ಎಲ್ಲಾ ಭಾಷೆಗಳನ್ನು ಕಲಿಯುವುದು ನಮ್ಮ ವಿಶೇಷತೆ" , ಆದರೆ ಇದೇ ಕಾರಣಕ್ಕಾಗಿ ನಮ್ಮ ಮಾತೃಭಾಷೆ, ನಮ್ಮ ಪ್ರಾದೇಶಿಕ ಭಾಷೆಯನ್ನು ಕಡೆಗಣಿಸುವಂತಾಗಬಾರದು.

ಕನ್ನಡದ ಮಹತ್ವದ ಬಗ್ಗೆ ಹೇಳುತ್ತಾ ಹೋದರೆ ನೂರಾರು ಗ್ರಂಥಗಳೇ ಸೃಷ್ಟಿಯಾಗುತ್ತವೆ. ಇಲ್ಲಿ ಕನ್ನಡವನ್ನು ಕುರಿತು ಕೆಲ ಹಿತನುಡಿಗಳನ್ನಾಡಲು ಇಚ್ಛಿಸುತ್ತೇನೆ.

ಆ ಭಾಷೆ ಈ ಭಾಷೆ ಅಂತ ನೂರಾರು ಭಾಷೆ ಕಲಿಯಿರಿ ಅದು ನಗಣ್ಯ, ರಸ ಮಾಧುರ ತುಂಬಿರುವ ನಿಮ್ಮ ಮಾತೃಭಾಷೆ ಕಲಿಯಿರಿ ಅದು ಅಗ್ರಗಣ್ಯ. ಕನ್ನಡ ಭಾಷೆಯೆಂಬುದೊಂದು ಈ ಜಗದ ವೇದಿಕೆಯ ತೆರೆದ ಮಾಧ್ಯಮ. ತನ್ನ ಮಡಿಲನ್ನು ಆಶಿಸಿ ಬರುವ ಕಂದಮ್ಮಗಳಿಗೆ ಹೇಳದು ನೀ ಅಧಮ, ನೀ ಮಧ್ಯಮ!

ಎಲ್ಲೆಲ್ಲೂ ಕನ್ನಡದ ಕಂಪು ಹರಡಬಹುದಲ್ಲ

ಇದನ್ನು ಕನ್ನಡಿಗರೇ ಹೇಳುವ ಸ್ಥಿತಿ ಬಂದಿದೆಯಲ್ಲ



ಕನ್ನಡವನ್ನು ಉಳಿಸುವುದೇ ನಮ್ಮ ಸಮಸ್ಯೆಯಾಗದಿರಲಿ

ಎಂದೆಂದಿಗೂ ದೇಶವಿದೇಶಗಳಲ್ಲಿ ಕರುನಾಡು ಸುಪ್ರಸಿದ್ಧವಾಗಲಿ

ದೇಶ, ಭಾಷೆ, ನಾಡಿನ ಬಗ್ಗೆ ಒಲವು ತೋರಬೇಕು

ನಾಡಿನ ಗೌರವಾಭಿಮಾನಗಳನ್ನು ಹೀಗೆಯೇ ಉಳಿಸಿ ಬೆಳೆಸಬೇಕು

ಅಷ್ಟೇ ಅಲ್ಲ ನಾವೆಲ್ಲ ನವೆಂಬರ್ ೧ ಕನ್ನಡಿಗರಾಗದೆ

ನಂಬರ್ ೧ ಕನ್ನಡಿಗರಾಗಬೇಕು

ಎದೆ ಬಗೆದರೆ ಇರಲಿ ಕನ್ನಡ, ಹೃದಯ ಬಡಿದರೆ ಬರಲಿ ಕನ್ನಡ, ಹೆಮ್ಮೆಯಿಂದ ಹೇಳು ನಮ್ಮ ಭಾಷೆ ಕನ್ನಡ, ಗರ್ವದಿಂದ ಹೇಳು ನಾನು ಕನ್ನಡಿಗ

## ಗೋಷ್ಠಿ - ೭

# ಜನಪರ ಚಳವಳಿಗಳು

# ಅಧ್ಯಕ್ಷ ಭಾಷಣ

**- ಸತೀಶ ಕುಲಕರ್ಣಿ**

ಅಖಿಲ ಭಾರತ ೮೩ನೇ ಕನ್ನಡ ಸಾಹಿತ್ಯ ಸಮ್ಮೇಳನದ ಕೊನೆಯ ದಿನದ ಮೊದಲ ಗೋಷ್ಠಿಯಿದು. ಇದಕ್ಕೊಂದು ವಿಶೇಷ ಮಹತ್ವವಿದೆ. ಯಾವಾಗಲೂ ಜನಪರ ಚಳುವಳಿಗಳ ಸಂಗಡ ತಮ್ಮನ್ನು ಗುರುತಿಸಿಕೊಂಡ ಪ್ರೊ.ಚಂದ್ರಶೇಖರ ಪಾಟೀಲರೇ ಈ ಸಮ್ಮೇಳನದ ಸರ್ವಾಧ್ಯಕ್ಷರಾದ ಕಾರಣದಿಂದಾಗಿ ಇದಕ್ಕೆ ವಿಶೇಷ ಮಹತ್ವವಿದೆ ಎಂಬ ಭಾವನೆ ನನ್ನದು.

ಮೈಸೂರು ಚಳುವಳಿಗಳ ನೆಲ. ಇದರ ಚೈತನ್ಯ ಕೇಂದ್ರವಾಗಿದ್ದವರು ರಾಷ್ಟ್ರಕವಿ ಕುವೆಂಪು, ಕುವೆಂಪುರವರು ಚಂಪಾ ಯುವಕರಾಗಿದ್ದಾಗ (೧೯೫೮) ನಾಡಿನ ಇನ್ನೊಂದು ಚಳುವಳಿಗಳ ಶಕ್ತಿಕೇಂದ್ರವಾಗಿದ್ದ ಧಾರವಾಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಕನ್ನಡ ಇರಲಿ, ಕಾವೇರಿಯೇ ಇರಲಿ ಅದಕ್ಕೊಂದು ಕೂಗು ಕೊಟ್ಟಿದ್ದು ಈ ಮೈಸೂರು ನೆಲ, ಎಲ್ಲ ಬಗೆಯ ಮೌಢ್ಯಗಳನ್ನು ವಿರೋಧಿಸುತ್ತ ಯುವ ತಲೆಮಾರಿಗೆ ನಿರಂಕುಶಮತಿಗಳಾಗಿ ಎಂದು ಹೇಳಿ, ಅಂಕುಶ ಪ್ರಭುತ್ವಕ್ಕೆ ಉತ್ತರ ಕೊಟ್ಟವರು ರಾಷ್ಟ್ರಕವಿ ಕುವೆಂಪುರವರು.

ಚಂದ್ರಶೇಖರ ಪಾಟೀಲರ ಬಗ್ಗೆ ಇನ್ನೊಂದೆರಡು ಮಾತುಗಳನ್ನು ಹೇಳಲೇ ಬೇಕು. ಹೋರಾಟ ಮತ್ತು ಚಳುವಳಿಗಳು ಅವರ ಬರವಣಿಗೆಯ ದ್ರವ್ಯಗಳಾಗಿವೆ. ಸಮಾಜವಾದಿ ಹಿನ್ನೆಲೆಯಿಂದ ಬಂದ ಚಂಪಾ ಈ ಸಮ್ಮೇಳನದ ಸರ್ವಾಧ್ಯಕ್ಷ ರಾದದ್ದು ಬಂಡಾಯದ ಶಾಲೆಯಿಂದ ಬಂದ ನನ್ನಂಥವರಿಗೆ ಪುಳಕ ತಂದಿದೆ. ಲಂಕೇಶ, ತೇಜಸ್ವಿ, ರಾಮದಾಸ ಅವರೆಲ್ಲ ಈಗಿಲ್ಲ. ಅತ್ಯಂತ ದುಃಖದ ಮಾತೆಂದರೆ 'ಆಂದೋಲನ' ಪತ್ರಿಕೆಯ ಸಂಪಾದಕರು, ಸಮಾಜವಾದಿ ಚಿಂತಕರಾಗಿದ್ದ ರಾಜಶೇಖರ ಕೋಟಿಯವರು ಸಮ್ಮೇಳನದ ಮುನ್ನಾದಿನ (೨೦೧೭ ನವೆಂಬರ ೨೨ ) ನಮ್ಮನ್ನು ಅಗಲಿದ್ದಾರೆ. ಜನಪರ ಚಳುವಳಿಗಳಿಗಳು ಎಂಬ ಈ ಗೋಷ್ಠಿಯ ಸಂದರ್ಭದಲ್ಲಿ ಕೋಟಿಯವರನ್ನು ನೆನೆಯದೆ ಇರಲಾಗದು. ಹುಬ್ಬಳ್ಳಿಯಲ್ಲಿ ನಾನು ಸರಜೂ ಕಾಟ್ಕರ್ ವಿದ್ಯಾರ್ಥಿಗಳಾಗಿದ್ದಾಗ ಕೋಟಿ ಅವರು ಆಂದೋಲನ ಪತ್ರಿಕೆ ಆರಂಭಿಸಿದ್ದರು. ಮೊದಲ ಸಂಚಿಕೆಯಲ್ಲಿ ನನ್ನ ಮತ್ತು ಚನ್ನಣ್ಣ ವಾಲೀಕಾರರ ಸಂದರ್ಶನವನ್ನು ಪ್ರಕಟಿಸಿದ್ದರು. ಅಗಲಿದ ಹಿರಿಯ ಮಿತ್ರರಿಗೆ ನನ್ನ ನೆನಪಿನ ಶ್ರದ್ಧಾಂಜಲಿ.

'ಜನಪರ ಚಳುವಳಿಗಳು' ಎಂಬ ಈ ಗೋಷ್ಠಿಯಲ್ಲಿ ನಾಲ್ವರು ಚಿಂತಕರಾದ ಶ್ರೀ ಚಾಮರಸ ಮಾಲಿಪಾಟೀಲ ರೈತ ಚಳುವಳಿ ಬಗ್ಗೆ ಪ್ರಬಂಧ ಮಂಡಿಸಿದ್ದಾರೆ. ಕನ್ನಡ ಚಳುವಳಿಯನ್ನು ಕುರಿತು ಶ್ರೀ ರಾ. ನಂ. ಚಂದ್ರಶೇಖರ ಪ್ರಬಂಧ ಮಂಡಿಸಿದ್ದಾರೆ,

ಹೋರಾಟಗಾರ್ತಿ ಶ್ರೀಮತಿ ವರಲಕ್ಷ್ಮೀ ಕಾರ್ಮಿಕ ಚಳುವಳಿಯ ಬಗ್ಗೆ ಹಾಗೂ ಡಾ. ಎಲ್. ಜಿ. ಮೀರಾರವರು ಮಹಿಳಾ ಚಳುವಳಿಯ ಬಗ್ಗೆ ಪ್ರಬಂಧ ಮಂಡಿಸಿದ್ದಾರೆ.

ಪ್ರಚಲಿತ ನಾಲ್ಕು ಜನಪರ ಚಳುವಳಿಗಳನ್ನು ಖಚಿತ ನೆಲೆಯಲ್ಲಿ ಗುರುತಿಸಿ ಅವುಗಳು ಉಳಿಯಬೇಕು, ಬೆಳೆಯಬೇಕೆಂಬ ಸದಾಶಯವಿದೆ. ಮುಖ್ಯವಾಗಿ ಇವರೆಲ್ಲ ನಿರಂತರವಾಗಿ ಈ ಚಳುವಳಿಗಳ ಸಂಗಡ ಗುರುತಿಸಿಕೊಂಡವರು, ಅಪಾರವಾದ ಕಾಳಜಿ ಮತ್ತು ಕಳಕಳಿಯಿಂದ ತುಂಬ ಪ್ರಬುದ್ಧವಾಗಿ - ಇವರೆಲ್ಲ ವಿಚಾರಗಳನ್ನು ಮಂಡಿಸಿದ್ದಾರೆ. ಹಿರಿಯ ಚಿಂತಕ ಶ್ರೀ ರವಿವರ್ಮಕುಮಾರರು ಅರ್ಥಪೂರ್ಣ ಮಾತುಗಳ ಮೂಲಕ ಗೋಷ್ಠಿಗೆ ಪ್ರವೇಶಿಕೆ ಮಾತುಗಳನ್ನಾಡಿದ್ದಾರೆ.

ಜನಪರ ಚಳುವಳಿಗಳ ಬಗ್ಗೆ ಮಾತನಾಡುವಾಗ ಬಹಳ ಮುಖ್ಯವಾಗಿ ಎರಡು ಪ್ರಶ್ನೆಗಳು ಏಳುತ್ತವೆ.

೧) ಜನಪರ ಚಳುವಳಿಗಳ ಕಾಲ ಮುಗಿಯಿತೆ ?

೨) ಮುಗಿಯದಿದ್ದರೆ ಅದನ್ನು ಕಟ್ಟುವ ಬಗೆ ಹೇಗೆ ?

ಮೊದಲ ಪ್ರಶ್ನೆಯನ್ನು ಎತ್ತಿಕೊಂಡರೆ ಅಲ್ಲಿ ಒಂದು ಆತಂಕವಿದೆ. ಚಳುವಳಿಗಳು ಮುಗಿಯಬಾರದು ಎಂಬ ಆಶಯವಿದೆ. ಇದನ್ನು ಕೇಳುವ ಮನಸ್ಸು ನಾವು ಎಚ್ಚೆತ್ತು ಕೊಳ್ಳಬೇಕು, ಇಲ್ಲಿ ಏನೋ ಒಂದು ರೀತಿಯ ಅರಾಜಕತೆ ಹುಟ್ಟುತ್ತಿದೆ, ನಾವೆಲ್ಲ ಆತ್ಮಾವಲೋಕನ ಮಾಡಿಕೊಳ್ಳುವ ಸನ್ನಿವೇಶದಲ್ಲಿದ್ದೇವೆ ಎಂಬ ಭಾವನೆ ಇದೆ.

ಜನಪರತೆಯ ಅರ್ಥವೇ ಜನರನ್ನು ಚಳುವಳಿಯಲ್ಲಿ ತೊಡಗಿಸುವ ಪ್ರಯತ್ನದ್ದು, ಸ್ವಾತಂತ್ರ್ಯ ಪೂರ್ವದಲ್ಲಿ ಜನರು ತೊಡಗಿಸಿಕೊಂಡು ಮಾಡಿದ ಚಳುವಳಿಗಳ ಫಲವೇ ನಮಗೆ ದೊರಕಿದ ಸ್ವಾತಂತ್ರ್ಯ, ವಿಮೋಚನೆ, ಸ್ವತಂತ್ರತೆ ಇವುಗಳಿಗಾಗಿ ಜನಾಂದೋಲನಗಳು ನಡೆದ ಪ್ರಯುಕ್ತ ನಮಗೆ ಸ್ವಾತಂತ್ರ್ಯ ಸಿಕ್ಕಿದೆ. ಇದರರ್ಥ ಚಳುವಳಿಗಳ ಅಗತ್ಯ ಅಂದೂ ಇತ್ತು, ಇಂದೂ ಕೂಡ ಇದೆ. ಏಳು ದಶಕದ ಅವಧಿಯಲ್ಲಿ ಕಾಲ ಸಂದರ್ಭ ತುಂಬ ಬದಲಾಗಿದೆ. ಹೊರಗಿನವರಿಂದ ವಿಮೋಚನೆ ಪಡೆಯುವಾಗ ಇದ್ದ ಒತ್ತಡಗಳು ಇಂದು ಒಳಗಿನ ಹಲವು ಸಮಸ್ಯೆಗಳಿಂದ ವಿಮೋಚನೆ ಪಡೆಯುವುದೇ ಆಗಿದೆ. ರಾಜಕೀಯ ಸ್ವಾತಂತ್ರ್ಯ ಅಂದರೆ ಆರ್ಥಿಕ ಸ್ವಾತಂತ್ರ್ಯಕ್ಕೊಂದು ಉನ್ನತಿಯ ಮೆಟ್ಟಿಲು. ಈ ಕಾರಣಗಳಿಂದಾಗಿ ಜನಪರ ಚಳುವಳಿಗಳ ಅಗತ್ಯ ಎಂದಿಗಿಂತ ಇಂದು ಹೆಚ್ಚೆಂದು ನನ್ನ ಭಾವನೆ.

ಇಂದಿನ ಗೋಷ್ಠಿಯಲ್ಲಿ ಕಾರ್ಮಿಕ, ರೈತ, ಮಹಿಳೆ, ಭಾಷಾ ಚಳುವಳಿಗಳ ಬಗ್ಗೆ ಚರ್ಚೆಯಾಗಿದೆ. ಒಟ್ಟಾರೆ ಅಭಿಪ್ರಾಯದಲ್ಲಿ ಚಳುವಳಿಗಳ ಪ್ರಖರತೆ ಕಡಿಮೆಯಾಗಿದೆಯೇ ಹೊರತು ಅದು ತನ್ನ ಅಸ್ತಿತ್ವವನ್ನು ಕಳೆದುಕೊಂಡಿಲ್ಲ. ಹೊಸ ಕಾಲದಲ್ಲಿ ಹೊಸ ವಿಧಾನಗಳ ಮೂಲಕ ಜನಪರ ಚಳುವಳಿ ಕಟ್ಟಬೇಕೆಂಬುದೇ ಆಗಿದೆ.

ಹಸಿವು, ಬಡತನ, ನಿರುದ್ಯೋಗ, ಇತ್ತೀಚೆಗೆ ಹೆಚ್ಚಾಗುತ್ತಿರುವ ಅತ್ಯಾಚಾರ, ಭ್ರಷ್ಟಾಚಾರ, ಕೋಮುವಾದ ಮುಂತಾದ ಸ್ಥಿತಿಗಳ ವಿರುದ್ಧ ಹೋರಾಡುವ ಹೊಸ ಶಕ್ತಿಗಳು ಬೇಕಾಗಿವೆ. ಅದು ಸ್ಪಷ್ಟ ನಿಲುವಿನ ಗಟ್ಟಿಯಾದ ತಾತ್ವಿಕ ಬದ್ಧತೆಯುಳ್ಳ ಶಕ್ತಿಯದ್ದಾಗಿರಬೇಕು. ಇಂಥ ತಾತ್ವಿಕ ಹೋರಾಟಗಳೇ ಪರ್ಯಾಯ ವ್ಯವಸ್ಥೆಯನ್ನು ಹುಟ್ಟುಹಾಕುತ್ತವೆ.

ಕರ್ನಾಟಕದಲ್ಲಿ ರೈತ ಚಳುವಳಿ ಗಟ್ಟಿಯಾಗಲು ಪ್ರೊ, ನಂಜುಂಡಸ್ವಾಮಿ, ರುದ್ರಪ್ಪನವರುಗಳೇ ಕಾರಣ. ಇಂದು ಅನೇಕ ರೈತ ಸಂಘಟನೆಗಳು ವ್ಯಕ್ತಿಗತ ಹೆಸರಿನಲ್ಲಿ ಕ್ರಿಯಾಶೀಲವಾಗಿ ಚಳುವಳಿ ಮುಂದುವರಿಸಿಕೊಂಡು ಸಾಗುತ್ತಿವೆ. ರೈತ ಸಂಘಟನೆಗಳ ಸಂಖ್ಯೆ ಹೆಚ್ಚಾದಂತೆ ರೈತರ ಪಾಲ್ಗೊಳ್ಳುವಿಕೆ ಕೂಡ ಹೆಚ್ಚಾಗಿದೆ. ೧೯೮೦ ರಲ್ಲಿ ನರಗುಂದದ ರೈತ ಬಂಡಾಯ ಪ್ರಾಂತ ರೈತ ಸಂಘದ ಅಡಿಯಲ್ಲಿ ಸ್ಫೋಟಗೊಂಡ ರೀತಿಯು, ಅನೇಕ ವಿದ್ಯಮಾನಗಳಿಗೆ ದಾರಿ ಮಾಡಿಕೊಟ್ಟಿತು. ಆದರೆ ಮೂರುವರೆ ದಶಕಗಳ ನಂತರವೂ ರೈತರ ಉತ್ಪನ್ನಗಳಿಗೆ ಬೆಲೆ ನಿಗದಿ ವಿಚಾರದಲ್ಲಿ ಈಗಲೂ ಯಾವುದೇ ಹೆಚ್ಚಿನ ಬದಲಾವಣೆ ಕಾಣುತ್ತಿಲ್ಲ. ಮತ್ತೊಮ್ಮೆ ರೈತ ಚಳುವಳಿ ಕ್ರಿಯಾಶೀಲವಾಗಬೇಕು. ಕೃಷಿ ಕೂಲಿ ಕಾರ್ಮಿಕರನ್ನು ಒಳಗೊಂಡಂತೆ ರೈತ ಚಳುವಳಿ ಹೊಸ ರೈತ ಚಳುವಳಿಯಾಗಿ ಅವತಾರ ತಾಳಬೇಕು. ರೈತ ಸಂಘಟನೆಗಳು ತಮ್ಮ ಸಮಸ್ಯೆಗಳ ಜೊತೆಗೆ ಇನ್ನಿತರ ಚಳುವಳಿಗಳ ಸಂಗಡ ಸ್ಪಂದಿಸಿ, ಅವನ್ನೂ ತಮ್ಮ ತೆಕ್ಕೆಗೆ ತೆಗೆದುಕೊಳ್ಳಬೇಕು. ಹೀಗಾದಾಗ ರೈತ ಚಳುವಳಿಗಳು ಹೊಸ ವಿಸ್ತಾರಕ್ಕೂ ಚಾಚಿಕೊಳ್ಳಬಹುದು.

ಶ್ರೀ ರಾ. ನಂ. ಚಂದ್ರಶೇಖರವರು ಕನ್ನಡ ಚಳುವಳಿಗಳ ಬಗ್ಗೆ ಮಾತಾಡಿ ಒಂದಿಷ್ಟು ಚಿಂತನೆಗಳನ್ನು ಹಂಚಿಕೊಂಡಿದ್ದಾರೆ. ಕನ್ನಡ ಚಳುವಳಿಯ ಮಾತು ಬಂದಾಗಲೆಲ್ಲ ಮತ್ತೊಮ್ಮೆ ಗೋಕಾಕ್ ಮಾದರಿಯ ಚಳುವಳಿ ಆಗಬೇಕೆಂಬ ಮಾತು ಆಗಾಗ ಕೇಳಿ ಬರುತ್ತದೆ. ಆದರೆ ಇದು ಸಾಧ್ಯವೇ? ಎಂಬ ಪ್ರಶ್ನೆ ಕೇಳಿ ಕೊಂಡಿರೆ ಮತ್ತಷ್ಟು ಪ್ರಶ್ನೆಗಳು ಧುತ್ತೆಂದು ನಮ್ಮೆದುರು ನಿಲ್ಲುತ್ತವೆ. ೮೦ರ ದಶಕದ ವಾತಾವರಣಕ್ಕಿಂತ ಭಿನ್ನವಾದ ವಾತಾವರಣವು ಈಗಿದೆ. ಜಾಗತೀಕರಣದ ಪ್ರವೇಶದ ನಂತರ ಇಂಗ್ಲಿಷ್ ಕಲಿಕೆ ಬದುಕಿಗೆ ಅನಿವಾರವೆಂಬ ಭಾವನೆ ದಟ್ಟವಾಗಿದೆ. ಇಂದು ಕನ್ನಡ ಭಾಷೆಯ ಬಗ್ಗೆ ಅಭಿಮಾನ ಮತ್ತು ಆದರ್ಶಗಳನ್ನು ಮೀರಿ ಕನ್ನಡದ ಸಮಸ್ಯೆಗಳನ್ನು ನೋಡಬೇಕು. ಜನರ ಸಮಸ್ಯೆಗಳಿಗೆ ಸ್ಪಂದಿಸಿ ಇಂಬು ಕೊಡುವ ಕಾಲವಿದು. ಕನ್ನಡ ಅನ್ನ ಕೊಡಬಹುದೇ? ಕನ್ನಡ ಕಲಿಕೆ ನಮ್ಮ ಬದುಕನ್ನು ಭದ್ರಗೊಳಿಸಬಹುದೇ? ಎಂಬ ಅನುಮಾನಗಳಿವೆ. ಅನ್ನ ಮತ್ತು ಭದ್ರತೆಯನ್ನು ಕನ್ನಡ ಕೊಡಲು ಸಾಧ್ಯ ಎಂಬ ರಾಜಕೀಯ ಇಚ್ಛಾಶಕ್ತಿಯನ್ನು ತೋರಿದಾಗ ಕನ್ನಡಕ್ಕೂ ಮತ್ತು ಕನ್ನಡ ಚಳುವಳಿಗಳಿಗೂ ಮೌಲ್ಯ ಬರುತ್ತದೆ.

ಒಂದು ಕಾಲಕ್ಕೆ ಕರ್ನಾಟಕ ಏಕೀಕರಣ ಚಳುವಳಿ ನಡೆಯಿತು. ನಮಗೊಂದ ಕನ್ನಡನಾಡೆಂಬ ನಕಾಶೆ ಬೇಕು, ಕನ್ನಡ ಮಾತನಾಡುವವರ ನೆಲವೆಂಬ ಹಕ್ಕು ಬೇಕೆಂಬುದು

ಏಕೀಕರಣದ ಆಶಯವಾಗಿತ್ತು. ಕಾಲ ಸಂದರ್ಭ ಬದಲಾದಂತೆ,. ನಕಾಶೆ ಮಾತ್ರ ಉಳಿದು, ಕನ್ನಡ ಭಾಷೆ ಕ್ಷೀಣಿಸುತ್ತಿದೆ. ಇದಕ್ಕೆ ಕಾರಣಗಳನ್ನು ಸ್ಪಷ್ಟವಾಗಿ ಕಂಡುಕೊಂಡು ಹೊಸ ಕಾರ್ಯ ವಿಧಾನಗಳಿಂದ ಕನ್ನಡ ಚಳುವಳಿಗಳನ್ನು ಕಟ್ಟಬೇಕಾಗಿದೆ. ಏಕೀಕರಣ ಚಳುವಳಿಗಳಿಂದ ನಾಡೊಂದು ಹುಟ್ಟುವುದಾದರೆ ಅದರ ಅಗತ್ಯ ಎಷ್ಟು ಎಂದು ಮನಗಾಣಬೇಕು.

ರೈತ ಚಳುವಳಿಯಂತೆ ಕನ್ನಡ ಚಳುವಳಿಗಳೂ ತುಂಡು ತುಂಡಾಗಿವೆ. ಕನ್ನಡದ ಕಾಳಜಿಗೆ ಸಂಖ್ಯಾಬಲ ಹೆಚ್ಚಾಗಿದ್ದರೂ, ಸೈದ್ಧಾಂತಿಕ ಬಲ ಕಡಿಮೆಯಾಗಿದೆ. ಸ್ಥಳೀಯ ಸಣ್ಣ ಪುಟ್ಟ ಅನ್ಯಾಯಗಳಿಗೆ ಕನ್ನಡಪರ ಸಂಘಟನೆಗಳು ಹೋರಾಟ ಮಾಡುತ್ತ, ಪರಿಹಾರಗಳನ್ನು ಕಂಡುಕೊಳ್ಳುತ್ತಿವೆ. ಮೂರುವರೆ ದಶಕಗಳ ಕಾಲ ಕೊಳೆ ಬಿದ್ದಿದ್ದ ಡಾ. ಸರೋಜಿನಿ ಮಹಿಷಿ ವರದಿಯನ್ನು ಪರಿಷ್ಕರಿಸಿ ಅದಕ್ಕಿರುವ ಕಾನೂನಿನ ತೊಡಕುಗಳನ್ನು ಪರಿಹರಿಸುವ ರೂಪದಲ್ಲಿ ಕನ್ನಡಾಭಿವೃದ್ಧಿ ಪ್ರಾಧಿಕಾರ ಸರಕಾರಕ್ಕೆ ಪ್ರಸ್ತಾವನೆ ಮಂಡಿಸಿದೆ. ಇದನ್ನು ಕೂಡ ಇಲ್ಲಿ ನೆನಪಿಸಿಕೊಳ್ಳಬೇಕು.

ಇಂಗ್ಲಿಷ್ ಮುಖ್ಯ, ಕನ್ನಡ ಅಮುಖ್ಯ ಎಂಬ ಸ್ಥಿತಿಯಲ್ಲಿ ನಾವು ಬದುಕುತ್ತಿದ್ದೇವೆ. ಭಾವನಾತ್ಮಕವಾಗಿ ಕನ್ನಡವನ್ನು ಬೆಳೆಸುವುದಕ್ಕಿಂತ, ಮಾತೃಭಾಷೆಯ ಅಗತ್ಯದ ಬಗ್ಗೆ ಅರಿವು ಮೂಡಿಸಬೇಕಾಗಿದೆ. ಡಾ ರಾಮಮನೋಹರ ಲೋಹಿಯಾ ಅವರ ಮಾತೊಂದು ನೆನಪಾಗುತ್ತದೆ. “ ಇಂಗ್ಲಿಷಿನಂತಹ ಹೊಸ ಭಾಷೆಯನ್ನು ಕಲಿಯುವಾಗ ಸಮಯ, ಜ್ಞಾನಶಕ್ತಿಯ ನಿರ್ವಹಣೆ ಬೇಕಾಗುತ್ತದೆ. ಹೀಗಾದಾಗ ಜ್ಞಾನ ಶಕ್ತಿ ಕುಂಠಿತವಾಗುತ್ತದೆ. ಅದೇ ಮಾತೃಭಾಷೆಯ ಮೂಲಕ ಕಲಿಕೆ ಆರಂಭವಾದರೆ ಎಲ್ಲವೂ ಸರಳ ಸಹಜವಾಗಿರುತ್ತದೆ', ಡಾ. ಎಂ. ಎಂ. ಕಲಬುರ್ಗಿಯವರು ಒಂದೆಡೆ ಹೇಳಿದಂತೆ “ ಇಂಗ್ಲಿಷು ನಮಗೆ ಬೆಳಕಾಗಲಿ ಹೊರತು ಬೆಂಕಿಯಾಗದಿರಲಿ'

ಕುವೆಂಪು ವಿಶ್ವದತ್ತ ತೆರೆದುಕೊಂಡು, ವಿಶ್ವಮಾನವ ಕಲ್ಪನೆ ಕೊಟ್ಟಿದ್ದಾರೆ. ಆದರೆ ಜಾಗತೀಕರಣ ಜಗತ್ತನ್ನೇ ಹಳ್ಳಿಯಾಗಿಸಿದೆ. ಭಾಷೆಯ ನಾಶ ನಮ್ಮ ಪರಂಪರೆಯ ನೆನಪಿನ ನಾಶ. ನಮ್ಮ ನಾಡಿನಲ್ಲಿ ಲಿಪಿಯೇ ಇಲ್ಲದ, ಆದರೆ ಕನ್ನಡವನ್ನಾಡುವ ಭಾಷೆಗಳಿವೆ. ಸೋಲಿಗ, ಹಕ್ಕಿ ಪಿಕ್ಕಿ ಮುಂತಾದ ಪುಟ್ಟ ಪುಟ್ಟ ಜನಾಂಗಗಳು ಇಂಗ್ಲಿಷಿಗೆ ಸೋತರೆ ಇಡೀ ಜನಾಂಗದ ಸ್ಮೃತಿ ಮತ್ತು ಸಂಸ್ಕೃತಿ ನಾಶವಾಗುತ್ತದೆ. ಇಂಥ ಆತಂಕಗಳು ದೇಶದ ಇನ್ನಿತರ ಭಾಷೆಗಳಗೂ ಅನ್ವಯವಾಗುತ್ತದೆ. ಒಂದು ಕಾಲದಲ್ಲಿ ಸಂಸ್ಕೃತವೇ ಶ್ರೇಷ್ಠವೆಂಬ ಭಾವನೆ ಇತ್ತು. ಈಗ ಇಂಗ್ಲಿಷು ಆ ಸ್ಥಾನವನ್ನು ಆಕ್ರಮಿಸಿದೆ. ಈಗೀಗ ಹಿಂದಿ ಭಾಷೆಯೂ ಕ್ರಮೇಣವಾಗಿ ರಾಜಕೀಯ ಸನ್ನಿವೇಶದ ಫಲವಾಗಿ ಮುಂಚೂಣಿಗೆ ಬರುತ್ತಿದೆ.

ಶೇಕಡಾ ಒಂದರಷ್ಟು ಜನರ ಸಂಪತ್ತು, ಇನ್ನಿತರ ಜನರ ಸಂಪತ್ತಿಗಿಂತ ಹೆಚ್ಚಾಗಿದೆ ಎಂಬ ಅಂಕಿ ಅಂಶಗಳಿವೆ. ಇಂಥ ಸ್ಥಿತಿಯಲ್ಲಿ ಬಂಡವಾಳಶಾಹಿಗಳ ವಿರುದ್ಧ ಹೋರಾಡುವ ಕಾರ್ಮಿಕ ಚಳುವಳಿಯ ಸ್ಥಿತಿ ಹೇಗಿರಬಹುದೆಂದು ಊಹಿಸಲು ಅಸಾಧ್ಯ.

ಕಾರ್ಪೊರೇಟ್ ಜಗತ್ತಿನ ದುಡಿಮೆಗಾರರ ಸ್ಥಿತಿ ಇನ್ನೂ ವಿಚಿತ್ರವಾಗಿದೆ. ಸಂಘವನ್ನು ಕಟ್ಟಿಕೊಳ್ಳದ ದುಃಸ್ಥಿತಿ ಕೆಲವಡೆ ಕಾಣುತ್ತಿದ್ದೇವೆ. ಕೆಲಸದ ಸಮಯಾವಧಿ ಮಿಕ್ಕಿ ದುಡಿಯುವ ಕಾರ್ಪೊರೇಟ್ ಜಗತ್ತಿನ ದುಡಿಮೆಗಾರರ ಬದುಕು ಹಿಂಡಿ ಹಿಪ್ಪೆಯಾಗುತ್ತಿದೆ. ಯುವ ಟೆಕ್ಕಿಗಳ ಬಗ್ಗೆ ಕೂಡ ಚಳುವಳಿ ನಡೆಯಬೇಕು. ಉದ್ಯೋಗ ಅಭದ್ರತೆಯ ಭೀತಿ, ಕಾರ್ಮಿಕ ಕಾನೂನುಗಳ ಅಸಮರ್ಪಕ ಅನುಷ್ಠಾನ ಮುಂತಾದವುಗಳ ಬಗ್ಗೆ ಎಚ್ಚರಿಕೆ ಮೂಡುವಂತಾಗಬೇಕು.

ಆಳುವ ಸರಕಾರಗಳು ಕಾರ್ಪೊರೇಟ್ ಜಗತ್ತಿಗೆ ತೋರುವ ನಿಷ್ಠೆ ಇನ್ನಿತರ ಸಂಗತಿಗಳ ಬಗ್ಗೆ ತೋರುತ್ತಿಲ್ಲ. ಸಂಘಟಿತರು ಮತ್ತು ಅಸಂಘಟಿತ ಕಾರ್ಮಿಕ ವರ್ಗಗಳನ್ನು ಒಟ್ಟಟ್ಟಾಗಿ ಕರೆದುಕೊಂಡು ಹೋಗಲಾರದ ಸ್ಥಿತಿ ಇದೆ. ಇಂಥದರ ನಡುವೆ ಕಾರ್ಮಿಕ ಹೋರಾಟದ ಕೆಲವು ಯಶಸ್ವಿ ಮಾದರಿಗಳನ್ನು ಇತ್ತೀಚೆಗೆ ನೋಡುತ್ತಿದ್ದೇವೆ ಭವಿಷ್ಯನಿಧಿಯ ನೀತಿ ವಿರೋಧಿಸುವ ಪ್ರಾಂತ ರೈತ ಸಂಘ ಮಾಡಿದ ಹೋರಾಟ, ರಸ್ತೆ ಸಾರಿಗೆ ನೌಕರರು ತಮ್ಮ ಹಕ್ಕುಗಳಿಗಾಗಿ ಬೀದಿಗೆ ಬಂದ ಬೃಹತ್ ಚಳುವಳಿ, ಅಂಗನವಾಡಿಯ ಕಾರ್ಯಕರ್ತೆಯರು ಅಹೋರಾತ್ರಿ ತಮ್ಮ ಹಕ್ಕುಗಳಿಗಾಗಿ ಪ್ರತಿಭಟಿಸಿದ ಹೋರಾಟಗಳು ಸಧ್ಯಕ್ಕೆ ಆಶಾದಾಯಕ ಬೆಳವಣಿಗೆ ಗಳಾಗಿವೆ. ಅದರಂತೆ ಸ್ಫೋಟಗೊಳ್ಳದೆ ಕರಗಿಹೋದ ಪೋಲಿಸರ ಹೋರಾಟ ಮರೆಯಲಾಗುವುದಿಲ್ಲ. ಚಳುವಳಿಯ ಭೀತಿಯಲ್ಲಿಯೇ ಗೃಹಖಾತೆ ಹಲವು ಬೇಡಿಕೆಗಳತ್ತ ಕಣ್ಣು ತೆರೆದದ್ದು ಚಳುವಳಿಯ ನೈತಿಕ ಜಯವೆಂಬ ಭಾವನೆ ನನ್ನದು.

ಇನ್ನು ಅತ್ಯಂತ ಮಹತ್ವದ್ದಾದ ಮಹಿಳಾ ಚಳುವಳಿಯ ಬಗ್ಗೆ ಹೆಚ್ಚು ಹೇಳುವುದು ಅಗತ್ಯವಿಲ್ಲ. ಎಲ್ಲ ರಂಗದ ಮಹಿಳೆಯರಲ್ಲಿ ಒಂದು ಜಾಗೃತಿಯಂತೂ ಮೂಡಿದೆ. ಅತ್ಯಾಚಾರ, ಭ್ರಷ್ಟಾಚಾರ ಮುಂತಾದವುಗಳ ವಿರುದ್ಧ ದನಿ ಎತ್ತುತ್ತಿದ್ದಾರೆ. ರಾಜಕೀಯ ಚಟುವಟಿಕೆಗಳಲ್ಲಿಯೂ ಸಕ್ರಿಯವಾಗಿ ಭಾಗವಹಿಸುವ ಮನಸ್ಥಿತಿ ನಿರ್ಮಾಣವಾಗಿದೆ.

ಮಹಿಳೆ ಶಿಕ್ಷಣದ ಮೂಲಕ ಲೋಕಜ್ಞಾನದ ಪರಿಧಿಯನ್ನು ಪ್ರವೇಶಿಸಿದ್ದಾಳೆ. ಅದನ್ನು ಒಗ್ಗೂಡಿಸಿ ಮಹಿಳಾ ಚಳುವಳಿ ಸಂಘಟಿತ ರೂಪ ತಾಳಬೇಕಾಗಿದೆ. ಮನೆಯಿಂದ ಹೊರಬರುವ ಮಹಿಳೆ ಎರಡೆರಡು ಜವಾಬ್ದಾರಿಗಳನ್ನು ನಿಭಾಯಿಸು ವುದನ್ನು ಕಲಿತಿದ್ದಾಳೆ. ಶಿಕ್ಷಣ, ಸ್ವಾತಂತ್ರ್ಯ ಹಾಗೂ ಹೋರಾಟಗಳು ಪುರುಷ ಪ್ರಧಾನ ವ್ಯವಸ್ಥೆಯನ್ನು ಪ್ರಶ್ನಿಸುವ ವಾತಾವರಣವಂತೂ ನಿರ್ಮಾಣವಾಗಿದೆ. ತಾತ್ವಿಕ ಖಚಿತತೆ ಮತ್ತು ಸಂಘಟನೆಯ ಅರಿವು ವಿಸ್ತಾರಗೊಂಡ ಮಹಿಳಾ ಚಳುವಳಿ ಬೆಳೆಯಬೇಕು.

೭೦ರ ದಶಕದ ಹಲವು ಹೋರಾಟಗಳು ಇಂದು ರಾಜಕೀಯ ಶಕ್ತಿಯೊಂದಿಗೆ ಕೂಡಿಕೊಂಡು ಗಟ್ಟಿಗೊಂಡಿವೆ. ಲಿಂಗ ತಾರತಮ್ಯದ ಅಂತರವನ್ನು ಗ್ರಹಿಸುವ ಶಕ್ತಿ ಬೆಳೆದಿದೆ. ಮಹಿಳಾ ಚಳುವಳಿ ಕೇವಲ ಪುರುಷ ವ್ಯವಸ್ಥೆಯ ವಿರೋಧದಲ್ಲಿಯೇ ಸೀಮಿತಗೊಳ್ಳದೇ ಪರಂಪರೆಯ ಹಲವು ಜಡ ನಂಬುಗೆಗಳನ್ನು ಪ್ರಶ್ನಿಸುತ್ತಿವೆ. ಕಾನೂನಿನ ಮೂಲಕ ಪರಿಹಾರ ಪಡೆದು ಹಲವು ಯಶಸ್ಸುಗಳು ಸಿಕ್ಕಿವೆ. ಮಂದಿರ, ಮಸೀದಿಗಳ

ಪ್ರವೇಶ, ವಿಚ್ಛೇದನ ಸಂದರ್ಭದಲ್ಲಿ ಸಿಗಬೇಕಾದ ನ್ಯಾಯ ಇವೆಲ್ಲ ವ್ಯಾಪಕ ಸ್ವರೂಪ ಪಡೆದಿವೆ. ಕೆಲವೇ ಕೆಲವು ಸಮಸ್ಯೆಗಳನ್ನು ಇಟ್ಟುಕೊಂಡು ಹೋರಾಡುವ ಸ್ಥಿತಿಯನ್ನು ದಾಟಿ ಲೈಂಗಿಕ ಅಲ್ಪಸಂಖ್ಯಾತರ ಸಮಸ್ಯೆಗಳಗೂ ವಿಸ್ತರಿಸಿಕೊಳ್ಳುತ್ತಿವೆ.

ಇದು ಮಹಿಳೆಯರ ಅಸ್ಮಿತೆಯನ್ನು ಕಟ್ಟಿಕೊಡುವ ಕಾಲ. ಗ್ರಾಮೀಣ ಮಹಿಳೆ, ಬಡ ಹೆಣ್ಣುಮಕ್ಕಳು ಶಿಕ್ಷಣವೇ ಇಂದು ನಮ್ಮೆಲ್ಲ ಸಮಸ್ಯೆಗಳ ಪರಿಹಾರವೆಂಬ ತಿಳುವಳಿಕೆಗೆ ಬಂದಿದ್ದಾರೆ. ಇನ್ನಷ್ಟು ಗಟ್ಟಿಯಾಗಿಸುವ ಮಹಿಳಾಪರ ಹೋರಾಟಗಳು ಬೇಕು. ನನ್ನ ಒಟ್ಟಾರೆ ಅಭಿಪ್ರಾಯಗಳನ್ನು ಕ್ರೋಢೀಕರಿಸಿ ಈ ರೀತಿ ಹೇಳಬಹುದು.

೧) ಎಲ್ಲ ಪ್ರಗತಿಪರ ಚಳುವಳಿಗಳು ಸಮಾನ ಉದ್ದೇಶಕ್ಕಾಗಿ ಅಂತ ಸಂಬಂಧವನ್ನು ಸ್ಥಾಪಿಸಿಕೊಳ್ಳಬೇಕು

೨) ಪ್ರಗತಿಪರ ಚಳುವಳಿಗೆ ಒಂದೇ ಉದ್ದೇಶವಿದ್ದಾಗ ಏಕತ್ರ ವೇದಿಕೆಗೆ ಬರುವಂತಾಗಬೇಕು.

೩) ಆಧುನಿಕ ತಂತ್ರಜ್ಞಾನ ವಿಧಾನಗಳ ಮೂಲಕ ಹೊಸ ತಲೆಮಾರನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡು ಅವರಿಗೂ ಜವಾಬ್ದಾರಿ ಕೊಡುವಂತಾಗ ಬೇಕು.

೪) ಈಗಾಗಲೇ ಸಾಕಷ್ಟು ಆಳವಾಗಿ ಬೇರು ಬಿಟ್ಟಿರುವ ಜಾಗತೀಕರಣದ ಪರಿಣಾಮಗಳನ್ನು ಜನರಿಗೆ ತಿಳಿಸುತ್ತ, ಅದರ ನಿಷ್ಫಲತೆಯನ್ನು ಪ್ರಚುರಪಡಿಸಿ, ದೇಶೀಯತೆಗೆ ಪ್ರಥಮಾದ್ಯತೆಯನ್ನು ನೀಡಬೇಕು.

ಎಲ್ಲ ಜನಪ್ರಿಯ ಚಳುವಳಿಗಳು ಜನಪರವಾಗಿರುವುದಿಲ್ಲ. ಜನಪರ ಚಳುವಳಿಗಳು ಎಂದೂ ಜನಪ್ರಿಯವಾಗುವುದಿಲ್ಲ. ಕೊನೆಗೂ ಜನಪರ ಚಳುವಳಿಗಳೇ ನಿಜವಾದ ಚಳುವಳಿಗಳು.

# ರೈತ ಚಳುವಳಿ ನಡೆದುಬಂದ ದಾರಿ

## - ಚಾಮರಸ ಮಾಲಿಪಾಟೀಲ

ಕರ್ನಾಟಕದಲ್ಲಿ ರೈತ ಚಳುವಳಿ ಪ್ರಾರಂಭವಾದದ್ದು ೧೯೮೦ರ ದಶಕದಲ್ಲಿ. ಧಾರವಾಡ ಜಿಲ್ಲೆಯ ನರಗುಂದ ಮತ್ತು ನವಲಗುಂದ ಘಟನೆಯ ನಂತರ, ನರಗುಂದ ನವಲಗುಂದದಲ್ಲಿ ನೀರಾವರಿ ಯೋಜನೆ ಪ್ರಾರಂಭವಾಗಿ ಕಾಲುವೆಗಳ ನಿರ್ಮಾಣ ನಡೆದಿತ್ತು. ರೈತರ ಹೊಲಗಳಿಗೆ ನೀರು ಪೂರೈಸುವ ಮೊದಲೇ ನೀರಾವರಿಗಾಗಿ ಅಭಿವೃದ್ಧಿ ಕರ ರೈತರ ಮೇಲೆ ಹಾಕಲಾಗಿತ್ತು. (ಬೆಟರ್‌ಮೆಂಟ್ ಲೆವಿ) ರೈತರು ಆತಂಕಕ್ಕೆ ಒಳಗಾಗಿ ರೈತರ ಹೊಲಗಳಿಗೆ ನೀರೇ ಪೂರೈಕೆಯಾಗಿಲ್ಲ, ಅಭಿವೃದ್ಧಿ ಕರ ಹೇರಿದರೆ ಹೇಗೆ ಎಂದು ಬೃಹತ್ ಪ್ರತಿಭಟನೆಗೆ ಇಳಿದರು. ಆಗಿನ ಗುಂಡುರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರ ರೈತ ಚಳುವಳಿಯನ್ನು ಹಿಮ್ಮೆಟ್ಟಿಸಲು ಪೊಲೀಸ್ ಬಲ ಪ್ರಯೋಗಿಸಿಸಲು ರೈತರ ಮೇಲೆ ಗೋಲಿಬಾರ್ ಮಾಡಿ ಇಬ್ಬರು ರೈತರನ್ನು ಬಲಿತೆಗೆದು ಕೊಂಡಿತು. ಇದರಿಂದ ರೊಚ್ಚಿಗೆದ್ದ ರೈತರು ಅಲ್ಲಿನ ಪೊಲೀಸ್ ಅಧಿಕಾರಿಯನ್ನು ಕೊಂದದ್ದು ಇತಿಹಾಸ, ರೈತರ ಮೇಲೆ ನಡೆದ ಗೋಲಿಬಾರ್ ಹೋರಾಟಗಾರರನ್ನು ಘಾಸಿಗೊಳಿಸಿತು. ಇದರಿಂದ ಎಚ್ಚೆತ್ತ ಹೋರಾಟಗಾರರು ಸರ್ಕಾರದ ಗೂಂಡಾಗಿರಿಯ ವಿರುದ್ಧ ಸಂಘಟಿತ ಹೋರಾಟ ಮಾಡಲು ನಿರ್ಧರಿಸಿದರು.

ಈ ಘಟನೆ ನಡೆಯುವುದಕ್ಕೆ ಮುಂಚೆ ಶಿವಮೊಗ್ಗದಲ್ಲಿ ಹೆಚ್.ಎಸ್. ರುದ್ರಪ್ಪರವರು ಮತ್ತು ಎನ್.ಡಿ. ಸುಂದರೇಶ್‌ರವರ ಮಾರ್ಗದರ್ಶನದಲ್ಲಿ ಕಬ್ಬು ಬೆಳೆಗಾರರ ಸಂಘ ಅಸ್ತಿತ್ವದಲ್ಲಿತ್ತು. ನರಗುಂದ ನವಲಗುಂದ ಘಟನೆಯ ನಂತರ ಕಬ್ಬು ಬೆಳೆಗಾರರ ಸಂಘದ ಮುಖಂಡರು ಧಾರವಾಡ ಜಿಲ್ಲೆಯ ಘಟನೆಯನ್ನು ಸಂಪೂರ್ಣ ತಿಳಿದುಕೊಂಡು ಈ ರೈತ ಚಳುವಳಿಯನ್ನು ಕರ್ನಾಟಕದಾದ್ಯಂತ ಅಸ್ತಿತ್ವದಲ್ಲಿ ತಂದರು. ಈ ವೇದಿಕೆಯಲ್ಲಿ ಲಂಕೇಶ್, ತೇಜಸ್ವಿ, ಪ್ರೊ. ಎಂ.ಡಿ. ನಂಜುಂಡಸ್ವಾಮಿ ಯವರು ಸೇರಿಕೊಂಡು ರಾಜ್ಯಾದ್ಯಂತ ಪ್ರಬಲ ಚಳುವಳಿ ಕಟ್ಟಲು ಕಾರಣವಾಯಿತು.

**ರೈತ ಚಳುವಳಿ ಮುಂಚೆ ರೈತರ ಸ್ಥಿತಿಗತಿ**

ಕರ್ನಾಟಕ ರಾಜ್ಯ ರೈತಸಂಘ ಪ್ರಾರಂಭವಾಗುವ ಮುಂಚೆ ರೈತರು ತಮ್ಮ ಮೇಲೆ ನಡೆಯುತ್ತಿದ್ದ ಶೋಷಣೆ, ಅನ್ಯಾಯ, ಸರ್ಕಾರದಿಂದ ನಡೆಯುವ ದೌರ್ಜನ್ಯವನ್ನು ಪ್ರತಿಭಟಿಸುವ ಧೈರ್ಯ ತೋರುತ್ತಿರಲಿಲ್ಲ. ರೈತರಿಗೆ ತಾಲ್ಲೂಕು ಆಫೀಸಿಗೆ ಹೋಗುವ ಧೈರ್ಯ ಕೂಡ ಇರಲಿಲ್ಲ. ತಾಲ್ಲೂಕು ಆಫೀಸಿಗೆ ಹೋಗಬೇಕಾದರೆ ರೈತ ತನ್ನ ಚಪ್ಪಲಿಗಳನ್ನು ಬಾಗಿಲ ಹೊರಗೆ ಬಿಟ್ಟು ತಲೆಬಾಗಿ ಸಲಾಮು ಹಾಕಿ ಪ್ರವೇಶ ಮಾಡುವ

ಸ್ಥಿತಿಯಲ್ಲಿದ್ದ. ಸಹಕಾರ ಸಂಘದಲ್ಲಿನ ಕಂದಾಯ ಬಾಕಿಗಾಗಿ ರೈತರ ಮನೆಗಳನ್ನು ಜಪ್ತಿ ಮಾಡುವುದು, ಹರಾಜು ಮಾಡುವುದು ಸರ್ಕಾರದಿಂದ ನಿರಾತಂಕವಾಗಿ ನಡೆದರೂ ಪ್ರತಿಭಟಿಸುವ ಶಕ್ತಿ ಇರಲಿಲ್ಲ. ಊಟಕ್ಕಾಗಿ ಇಟ್ಟುಕೊಂಡಿದ್ದ ದವಸ ಧಾನ್ಯಗಳನ್ನು, ಪಾತ್ರೆ ಪಗಡುಗಳನ್ನು ಸರ್ಕಾರಿ ಅಧಿಕಾರಿಗಳು ಸಾಲಕ್ಕಾಗಿ ಜಪ್ತಿ ಮಾಡಿಕೊಂಡು ಹೋದರೆ ಮೂಕ ಪ್ರೇಕ್ಷಕನಾಗಿದ್ದ, ಶೋಷಣೆ, ಅನ್ಯಾಯ, ದೌರ್ಜನ್ಯಗಳನ್ನು ನನ್ನ ಹಣೆಬರಹ ಎಂದು ನಂಬಿ ಕೂತಿದ್ದ.

**ಗೂಂಡಾಗಿರಿ ಸರ್ಕಾರ ಕಿತ್ತೊಗೆಯಲು ಪಣ ರಾಜಕೀಯ ಬದಲಾವಣೆಗೆ ದಾರಿ**

ರೈತ ಹೋರಾಟವನ್ನು ಕುಗ್ಗಿಸಲು ಆಗಿನ ಆಳುವ ಗುಂಡೂರಾಯರ ಸರ್ಕಾರ ದೌರ್ಜನ್ಯವನ್ನು ಮುಂದುವರಿಸುತ್ತಲೇ ಬಂದಿದ್ದರಿಂದ ಆ ಸರ್ಕಾರದ ವಿರುದ್ಧ ದನಿ ಕಳೆದುಕೊಂಡಿದ್ದ ವಿರೋಧ ಪಕ್ಷದ ಕೆಲಸವನ್ನು ರೈತ ಚಳುವಳಿ ಸೃಜನಾತ್ಮಕವಾಗಿ ಹಾಗೂ ರಚನಾತ್ಮಕವಾಗಿ ಮುಂದುವರೆಸಿ ೧೯೮೨ರ ಅಕ್ಟೋಬರ್ ೨ ರಂದು ಬೆಂಗಳೂರಿನ ಕಬ್ಬನ್‌ಪಾರ್ಕ್‌ನಲ್ಲಿ ಲಕ್ಷಾಂತರ ರೈತರು ಸಮಾವೇಶಗೊಂಡಿದ್ದು ಒಂದು ಐತಿಹಾಸಿಕ ಘಟನೆ. ಆ ಸಮಾವೇಶ ಸರ್ವಾಧಿಕಾರಿ ಹಾಗೂ ರೈತರ ಮೇಲೆ ಗುಂಡಿಕ್ಕಿದ ಗುಂಡೂರಾವ್ ನೇತೃತ್ವದ ಕಾಂಗ್ರೆಸ್ ಪಕ್ಷದ ಸರ್ಕಾರವನ್ನು ಕಿತ್ತೊಗೆಯಲು ತೀರ್ಮಾನಿಸಿತು. ಈ ಹೋರಾಟವನ್ನು ನಿರಂತರವಾಗಿ ಮುಂದುವರೆಸುತ್ತ ಚುನಾವಣೆ ಪೂರ್ವ ಮಂಡ್ಯದ ಸಿಲ್ವರ್ ಜ್ಯುಬಿಲಿ ಪಾರ್ಕಿನಲ್ಲಿ ಸಭೆ ಸೇರಿ "ಗುಂಡಿಕ್ಕಿದ ಸರ್ಕಾರಕ್ಕೆ ರೈತರ ಓಟಿಲ್ಲ" ಎಂದು ಘೋಷಣೆ ಮಾಡಿ, ಪ್ರತಿ ಹಳ್ಳಿ ಹಳ್ಳಿಯಲ್ಲೂ ಸರ್ಕಾರದ ವಿರುದ್ಧ ಜಾಗೃತಿ ಮೂಡಿಸಿ ೩೫ ವರ್ಷಗಳ ಕಾಲ ನಿರಂಕುಶ ಆಡಳಿತದಲ್ಲಿದ್ದ ಕಾಂಗ್ರೆಸ್ ಸರ್ಕಾರವನ್ನು ಕಿತ್ತೊಗೆಯುವುದರ ಮುಖಾಂತರ ರಾಜ್ಯದಲ್ಲಿ ಒಂದು ಹೊಸ ರಾಜಕೀಯ ಶಕೆಯ ಹುಟ್ಟಿಗೆ ಕಾರಣವಾಯಿತು. ಎಲ್ಲಾ ಕ್ಷೇತ್ರಗಳಲ್ಲೂ ಸ್ಪರ್ಧಿಸಲು ಅಭ್ಯರ್ಥಿಗಳೇ ಇಲ್ಲದ ಅಂಗವಿಕಲ ಪಕ್ಷವಾಗಿದ್ದ ಜನತಾ ಪಕ್ಷ ಈ ಚಳುವಳಿಯ ಲಾಭ ಪಡೆದು ರಾಜ್ಯದ ಚುಕ್ಕಾಣಿಯನ್ನು ಹಿಡಿಯಿತು. ರಾಜ್ಯದ ಆಗಿನ ಮುಖ್ಯಮಂತ್ರಿಯಾಗಿದ್ದ ಆರ್. ಗುಂಡುರವರನ್ನು ಸೋಮವಾರಪೇಟೆ ಕ್ಷೇತ್ರದಲ್ಲಿ ಪರಾಭವಗೊಳಿಸಲು ರೈತ ನಾಯಕರ ಹಾಗೂ ಕಾರ್ಯಕರ್ತರ ಶ್ರಮವೇ ಮುಖ್ಯ ಕಾರಣ. ರೈತ ಚಳುವಳಿಯ ಲಾಭದಿಂದ ಅಧಿಕಾರ ಪಡೆದ ಜನತಾ ಪಕ್ಷ ತಾನು ಅಧಿಕಾರಕ್ಕೆ ಬಂದ ನಂತರ ಚಳುವಳಿಯನ್ನೇ ಒಡೆಯಲು ಮತ್ತು ರೈತ ಮುಖಂಡರ ಮೇಲೆ ಸುಳ್ಳು ಮೊಕದ್ದಮೆ ಹಾಕಿ ಜೈಲಿಗೆ ತಳ್ಳಿ ಜೈಲಿನಲ್ಲಿ ರೌಡಿಗಳ ಮುಖಾಂತರ ಹಲ್ಲೆ ನಡೆಸುವ ಹೀನ ಕೃತ್ಯವನ್ನು ಎಸಗಿತು. ಅಲ್ಲದೇ ರೈತ ಹಿತಾಸಕ್ತಿಗೆ ವಿರೋಧವಾಗಿ ನಡೆದುಕೊಂಡಿತು. ಈ ಕಾರಣ ರೈತರೇ ರಾಜಕೀಯ ಶಕ್ತಿಯಾಗಬೇಕೆಂದು ತೀರ್ಮಾನಿಸಿ ೧೯೮೯ರ ಚುನಾವಣೆಯಲ್ಲಿ ೧೩೭ ಕ್ಷೇತ್ರಗಳಲ್ಲಿ ಸ್ಪರ್ಧೆ ಮಾಡಿ ಸುಮಾರು ೨೯ ಕಡೆ ೨ನೇ ಸ್ಥಾನವನ್ನು ಗಳಿಸಿತು. ೨ ಕ್ಷೇತ್ರಗಳಲ್ಲಿ ಜಯ ಗಳಿಸಿತು. ಚುನಾವಣೆಯನ್ನು ಒಂದು ಚಳುವಳಿಯ ಮುಖಾಂತರ ನಡೆಸಿತು.

**ಸರ್ಕಾರದ ಮೇಲೆ ರೈತ ಚಳುವಳಿಯ ಪ್ರಭಾವ**

೧೯೮೦ರ ದಶಕದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ಹುಟ್ಟಿದ ನಂತರ ರಾಜ್ಯದಾದ್ಯಂತ ರೈತರಲ್ಲಿ ತೀವ್ರ ಸಂಚಲನ ಉಂಟುಮಾಡಿತು. ರೈತ ಮುಖಂಡರು ಪ್ರತಿ ಜಿಲ್ಲೆ, ತಾಲ್ಲೂಕು, ಹೋಬಳಿ, ಹಳ್ಳಿಗಳಿಗೆ ಖುದ್ದಾಗಿ ಭೇಟಿ ಕೊಟ್ಟು ರೈತರ ಹಕ್ಕುಗಳ ಬಗ್ಗೆ ತಿಳಿಸಿದರು. ರೈತರಲ್ಲಿ ಆತ್ಮಸ್ಥೈರ್ಯ ತುಂಬಿದರು. ರೈತರ ವಿರುದ್ಧ ನಡೆಯುವ ಅನ್ಯಾಯ, ಭ್ರಷ್ಟಾಚಾರ, ಶೋಷಣೆ ವಿರುದ್ಧ ಪ್ರತಿಭಟನೆ ಮಾಡುವ ಮನಃಸ್ಥಿತಿಗೆ ರೈತರನ್ನು ತಯಾರು ಮಾಡಿದರು. ಇದರ ಫಲವಾಗಿ ರಾಜ್ಯದಾದ್ಯಂತ ರೈತರು ತಮ್ಮ ಮೇಲೆ ಹೇರಿದ ರೈತ ವಿರೋಧಿ ನೀತಿಗಳನ್ನು ಒಂದೊಂದಾಗಿ ಎದುರಿಸಲು ಸಿದ್ಧವಾದರು.

**ಜಪ್ತಿ ಮರುಜಪ್ತಿ :**

ಕಂದಾಯ ಬಾಕಿ, ಸಹಕಾರಿ ಸಂಘಗಳ ಸಾಲ ಇನ್ನಿತರ ಸಾಲಕ್ಕಾಗಿ ರೈತರ ಮನೆ ಜಪ್ತಿ, ಹರಾಜುಗಳನ್ನು ತಡೆಯುವ ಹೋರಾಟ, ರೈತರ ಮನೆಯಿಂದ ಜಪ್ತಿ ಮಾಡಿದ ವಸ್ತುಗಳನ್ನು ಮರುಜಪ್ತಿ ಮಾಡಲಾಯಿತು. ಅನೇಕ ಕಡೆಗಳಲ್ಲಿ ಲಾಠಿ ಚಾರ್ಜ್, ಗೋಲಿಬಾರ್ ನಡೆಯಿತು. ಗುಂಡೂರಾವ್‌ರವರ ಅಧಿಕಾರಾವಧಿಯಲ್ಲಿ ೧೫೦ಕ್ಕೂ ಹೆಚ್ಚು ರೈತರು ಗೋಲಿಬಾರ್‌ಗೆ ಬಲಿಯಾದರೂ ರೈತರು ಧೃತಿಗೆಡದೆ ಹೋರಾಟ ಮುಂದುವರಿಸಿದರು.

**ಬ್ರಿಟಿಷರ ಕಾಲದಲ್ಲಿದ್ದ ಲೆವಿ ಪದ್ಧತಿ :**

ಲೆವಿ ಎಂದರೆ ರೈತರು ತಾವು ಬೆಳೆದ ದವಸ ಧಾನ್ಯಗಳನ್ನು ಎಕರೆಗೆ ಇಂತಿಷ್ಟು ಎಂದು ನಿಗದಿ ಮಾಡಿ ಮುಕ್ತ ಮಾರುಕಟ್ಟೆಗಿಂತ ಕಡಿಮೆ ಬೆಲೆಯಲ್ಲಿ ಸರ್ಕಾರಕ್ಕೆ ಕೊಡಬೇಕಾಗಿತ್ತು. ಈ ಪದ್ಧತಿಯಿಂದ ರೈತರು ಕಡಿಮೆ ಬೆಲೆಗೆ ತಮ್ಮ ಉತ್ಪನ್ನಗಳನ್ನು ಸರ್ಕಾರಕ್ಕೆ ಕೊಡುವುದರಿಂದ ನಷ್ಟಕ್ಕೆ ಒಳಗಾಗುತ್ತಿದ್ದರು. ರೈತ ಸಂಘವು ಲೆವಿಯನ್ನು ತೆಗೆದುಹಾಕಲು ರಾಜ್ಯದಾದ್ಯಂತ ಬೃಹತ್ ಹೋರಾಟ ಹಮ್ಮಿಕೊಂಡು ಈ ಪದ್ಧತಿ ರದ್ದಾಗಲು ಕಾರಣವಾಯಿತು.

**ವಿದ್ಯುತ್ ಹೋರಾಟ**

ರಾಜ್ಯದಲ್ಲಿ ವಿದ್ಯುತ್ ವಿತರಣೆಯಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶ ಎಂಬ ತಾರತಮ್ಯದ ನೀತಿ ಜಾರಿಯಲ್ಲಿತ್ತು. ಸಮಾನ ವಿದ್ಯುತ್ ನೀತಿಗಾಗಿ ಬೃಹತ್ ಹೋರಾಟ ಹಮ್ಮಿಕೊಳ್ಳಲಾಯಿತು. ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ವಿಧಾನಸೌಧದ ಮುಂದೆ ಚಳುವಳಿ ಹಮ್ಮಿಕೊಳ್ಳಲಾಯಿತು. ಬಂಗಾರಪ್ಪನವರು ಪ್ರಥಮವಾಗಿ ರೈತ ಮುಖಂಡರನ್ನು ಕರೆದು ಮಾತನಾಡಿದರು. ೧೦ ಹೆಚ್. ಪಿ. ಮೋಟರ್‌ಗಳಿಗೆ ಕರ ವಿನಾಯಿತಿ ನೀಡಿದರು. ನಂತರ ಸಮಾನ ವಿದ್ಯುತ್ ನೀತಿ ಜಾರಿಗಾಗಿ ಮೀಟರ್ ವಾಪಸ್ಸಾತಿ ಚಳುವಳಿ ಹಮ್ಮಿಕೊಂಡು ರಾಜ್ಯದಾದ್ಯಂತ ಮನೆಗೆ ಹಾಕಿದ್ದ ವಿದ್ಯುತ್

ಮೀಟರ್‌ಗಳನ್ನು ಮರಳಿ ಸರ್ಕಾರಕ್ಕೆ ಕೊಡುವ ಚಳುವಳಿ ಹಮ್ಮಿಕೊಳ್ಳಲಾಯಿತು. ಪರಿಣಾಮ ಇಂದು ಗ್ರಾಮೀಣ ಪ್ರದೇಶಗಳಿಗೆ ನಿರಂತರ ಜ್ಯೋತಿ ಯೋಜನೆ ಪ್ರಾರಂಭವಾಗಿ ಹಳ್ಳಿಗಳಿಗೆ ನಿರಂತರ ವಿದ್ಯುತ್ ಪೂರೈಕೆಗೆ ಕ್ರಮ ಕೈಗೊಳ್ಳಲಾಯಿತು. ಎಸ್.ಎಂ.ಕೃಷ್ಣ ಮುಖ್ಯಮಂತ್ರಿಗಳಾಗಿದ್ದಾಗ ರೈತರಿಗೆ ಕೆಲವೇ ಗಂಟೆ ವಿದ್ಯುತ್ ಪೂರೈಕೆಯಾಗಿತ್ತು. ನಿರಂತರವಾಗಿ ೧ ತಿಂಗಳು ಕಾವೇರಿ ಭವನದ ಮುಂದೆ ಧರಣಿ ಹಮ್ಮಿಕೊಂಡಾಗ ಮುಖ್ಯಮಂತ್ರಿಗಳು ರೈತರನ್ನು ಕರೆದು ಮಾತನಾಡಿ ೮ ಗಂಟೆ ಪೂರೈಸಲು ಒಪ್ಪಿಕೊಂಡರು.

**ರೈತ ಸಂಘದ ಬೋರ್ಡ್ ಹಾಕುವ ಚಳುವಳಿ**

ಸಾಲ ವಸೂಲಾತಿಗಾಗಿ ಹಳ್ಳಿಗಳಿಗೆ ಬರುವ ಸರ್ಕಾರಿ ಅಧಿಕಾರಿಗಳಿಗೆ ನಡುಕ ಹುಟ್ಟಿಸಲು ಪ್ರತಿ ಗ್ರಾಮದ ಮುಂಭಾಗದಲ್ಲಿ ಭ್ರಷ್ಟ ಅಧಿಕಾರಿಗಳಿಗೆ ಮತ್ತು ಭ್ರಷ್ಟ ರಾಜಕಾರಣಿಗಳಿಗೆ ಗ್ರಾಮದಲ್ಲಿ ಪ್ರವೇಶವಿಲ್ಲ, ಪ್ರಾಮಾಣಿಕರಿಗೆ ಸ್ವಾಗತ, ರೈತರನ್ನು ಭೇಟಿ ಮಾಡುವ ಸಮಯ ಸಾಯಂಕಾಲ ೬ ಗಂಟೆಯ ನಂತರ, ಸೋಮವಾರ ರಜಾ' ಎನ್ನುವ ಬೋರ್ಡ್ ಹಾಕುವುದರ ಮುಖಾಂತರ ರಾಜಕಾರಣಿಗಳು ಮತ್ತು ಅಧಿಕಾರಿಗಳನ್ನು ಎಚ್ಚರಿಸುವ ಕಾರ್ಯಕ್ರಮ ನಡೆಯಿತು.

**ಕರ ನಿರಾಕರಣೆ ಚಳುವಳಿ**

ರೈತರಿಗೆ ಸಕಲ ಸವಲತ್ತು, ಲಾಭದಾಯಕ ಬೆಲೆ, ಶೋಷಣೆ ಮುಕ್ತ ಮಾರುಕಟ್ಟೆ ನಿರ್ಮಾಣ, ಲಂಚವಿಲ್ಲದ ಕಛೇರಿಗಳ ನಿರ್ಮಾಣ, ನೀರಾವರಿ ಯೋಜನೆಗಳು ಇನ್ನಿತರ ಸವಲತ್ತು ನೀಡುವವರೆಗೂ ಸರ್ಕಾರಕ್ಕೆ ಭರಿಸಬೇಕಾದ ಕಂದಾಯ, ನೀರಾವರಿ ತೆರಿಗೆ, ವಿದ್ಯುತ್ ತೆರಿಗೆ ಯಾವುದನ್ನೂ ಕೊಡುವುದಿಲ್ಲ ಎಂಬ ಕರ ನಿರಾಕರಣೆ ಚಳುವಳಿ ಹೂಡಲಾಯಿತು.

**ಜೈಲ್ ಭರೋ ಚಳವಳಿ**

ರಾಮಕೃಷ್ಣ ಹೆಗಡೆಯವರ ನೇತೃತ್ವದ ಸರ್ಕಾರವಿದ್ದಾಗ ರೈತರ ಸಮಸ್ಯೆಗಳನ್ನು ಬಗೆಹರಿಸದ ಸರ್ಕಾರದ ವಿರುದ್ಧ ಅಸಹಕಾರ ತೋರಲು ಸಾವಿರಾರು ರೈತರು ಜೈಲ್ ಭರೋ ಚಳುವಳಿ ನಡೆಸಿದರು. ರೈತರನ್ನು ಬಂಧಿಸಿದ ಸರ್ಕಾರ ಜೈಲಿನಲ್ಲಿ ಸ್ಥಳವಿಲ್ಲದೆ ರೈತರನ್ನು ಬಯಲು ಮೈದಾನದಲ್ಲಿ ಕೂಡಿಹಾಕಿತ್ತು. ಸಾವಿರಾರು ರೈತರನ್ನು ಬಂಧಿಸಿದರೂ ೨೨೪ ಜನ ಶಾಸಕರಲ್ಲಿ ಒಬ್ಬರಾದರೂ ರೈತರ ಬಂಧನದ ಬಗ್ಗೆ ವಿಧಾನಸಭೆಯಲ್ಲಿ ಚಕಾರ ಎತ್ತಲಿಲ್ಲ. ಇದರಿಂದ ರೈತರಿಗೆ ಆಘಾತವಾಯಿತು. ರೈತರೇ ಅಧಿಕಾರ ಹಿಡಿಯಬೇಕು ಎಂಬ ಚರ್ಚೆ ಪ್ರಾರಂಭವಾಯಿತು.

**ಗ್ರಾಮ ಬಂದ್ ಚಳುವಳಿ**

ರೈತರ ಸಮಸ್ಯೆಗಳನ್ನು ಬಗೆಹರಿಸದ ಸರ್ಕಾರಕ್ಕೆ ಗ್ರಾಮಗಳ ಬಗ್ಗೆ ಗಮನ ಹರಿಸಲು ಗ್ರಾಮದಿಂದ ನಗರಕ್ಕೆ ಹಾಲು, ತರಕಾರಿ, ಕಾಳುಕಡ್ಡಿಗಳನ್ನು ಪೂರೈಸದಂತೆ



ಹೋರಾಟ ರೂಪಿಸಿ ಸಮಗ್ರ ಗ್ರಾಮೀಣಾಭಿವೃದ್ಧಿಗೆ ಒತ್ತು ನೀಡಲು ಹೋರಾಟ ಹಮ್ಮಿಕೊಳ್ಳಲಾಯಿತು.

**ನಗುವ ಚಳುವಳಿ**

ಇದೊಂದು ವಿನೂತನವಾದ ಚಳುವಳಿ, ಸರ್ಕಾರದ ಅಸಹಾಯಕತೆ, ಭ್ರಷ್ಟಾಚಾರ, ಸ್ವಜನ ಪಕ್ಷಪಾತ, ರೈತರ ಸಮಸ್ಯೆಗಳ ಬಗ್ಗೆ ನಿರ್ಲಕ್ಷ್ಯವನ್ನು ಖಂಡಿಸಿ ಸರ್ಕಾರದ ಗಮನ ಸೆಳೆಯಲು ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಈ ಚಳುವಳಿ ಹಮ್ಮಿಕೊಳ್ಳಲಾಯಿತು. ನಂತರ ಬಂಗಾರಪ್ಪನವರು ರೈತರ ಸಮಸ್ಯೆಗಳ ಬಗ್ಗೆ ಚರ್ಚಿಸಲು ರೈತರನ್ನು ಆಹ್ವಾನಿಸಿದರು.

**ಸಹಕಾರಿ ಸಂಘಗಳ ೧೦೧ ಸಿ ಕಾನೂನು ತಿದ್ದುಪಡಿ**

ಕರ್ನಾಟಕದ ರೈತರ ಬೆಂಬಲ ಮತ್ತು ಪ್ರಗತಿಪರ ಬೆಂಬಲದಿಂದ ಅಧಿಕಾರಕ್ಕೆ ಬಂದ ಜನತಾ ಪಕ್ಷ ಮತ್ತು ಮುಖ್ಯಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಚುನಾವಣೆ ಸಮಯದಲ್ಲಿ ರೈತರೇ ದೇವರು ಎಂದು ರೈತ ಸಂಘದ ಬೋರ್ಡಿಗೆ ಮಾಲೆ ಹಾಕಿ ಗ್ರಾಮ ಪ್ರವೇಶ ಮಾಡುತ್ತಿದ್ದರು. ಆದರೆ ಹೆಗಡೆಯವರು ಮುಖ್ಯಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡ ನಂತರ ಗ್ರಾಮಗಳ ಮುಂಭಾಗದಲ್ಲಿ ಹಾಕಿದ್ದ ರೈತ ಸಂಘದ ಬೋರ್ಡ್‌ಗಳನ್ನು ಪೊಲೀಸ್ ಬಲ ಪ್ರಯೋಗಿಸಿ ಕೀಳಿಸಲಾರಂಭಿಸಿದರು. ಅಲ್ಲದೆ ರೈತರು ಸಹಕಾರಿ ಸಂಘಗಳಲ್ಲಿ ಸಾಲ ತೀರಿಸಲು ವಿಳಂಬವಾದಾಗ ಅಂತಹ ರೈತರ ಹೊಲಗಳನ್ನು ಅವರ ಪಹಣಿ ಪತ್ರಿಕೆಯ ಪಟ್ಟಾದಾರ ಕಾಲಂನಲ್ಲಿ ಸರ್ಕಾರ ಎಂದು ಬರೆದುಕೊಳ್ಳಲು ೧೦೧ ಸಿ ಕಾನೂನನ್ನು ಜಾರಿಗೆ ತಂದರು. ಈ ಕಾನೂನನ್ನು ವಿರೋಧಿಸಿ ರಾಜ್ಯದ ಮೂಲೆ ಮೂಲೆಗಳಿಂದ ರೈತರು ಪಾದಯಾತ್ರೆ ಮೂಲಕ ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ಸಭೆ ನಡೆಸಿ ೧೦೧ ಸಿ ಕಾನೂನು ರದ್ದಾಗಲು ಹೋರಾಟ ಮಾಡಿದರು. ಆದರೂ ಸರ್ಕಾರ ಮಾಡಲಿಲ್ಲ. ರೈತ ಸಂಘವೇ ೧೦೧ ಸಿ ರದ್ದತಿ ಘೋಷಣೆ ಮಾಡಿ ಇಡೀ ರಾಜ್ಯದಲ್ಲಿ ಈ ಕಾನೂನು ಜಾರಿಯಾಗದಂತೆ ನೋಡಿಕೊಂಡಿತು.

**ನೀರಾ ಚಳುವಳಿ**

ರಾಜ್ಯದಾದ್ಯಂತ ತೆಂಗಿಗೆ ತಗುಲಿದ ನುಸಿ ಹುಳುವಿನ ಬಾಧೆಯಿಂದ ತೆಂಗು ಬೆಳೆಗಾರರು ಅಪಾರ ನಷ್ಟವನ್ನು ಅನುಭವಿಸಿದರು. ತೆಂಗು ಬೆಳೆಗಾರರನ್ನು ರಕ್ಷಿಸಲು ಏಕೈಕ ಪರಿಹಾರವಾಗಿದ್ದ ತೆಂಗಿನ ಹೊಂಬಾಳೆಯಿಂದ ನೀರಾ ತೆಗೆಯುವುದಕ್ಕೆ ಸರ್ಕಾರದ ಪರವಾನಿಗೆ ಇದ್ದಿಲ್ಲ. ತೆಂಗು ಬೆಳೆಗಾರರಿಗೆ ಧೈರ್ಯ ತುಂಬಿ, ಸರ್ಕಾರ ನಿಷೇಧಿಸಿದ್ದರೂ ನೀರಾ ತೆಗೆದು ಮಾರಾಟ ಮಾಡಲು ದೊಡ್ಡ ಚಳುವಳಿ ಪ್ರಾರಂಭಿಸಿದರು ಮತ್ತು ನೀರಾದಿಂದ ಉಪ-ಉತ್ಪನ್ನಗಳನ್ನು ಮಾಡಲು ಚಿಂತನೆ ಪ್ರಾರಂಭಿಸಿದರು. ಪರಿಣಾಮವಾಗಿ ಇಂದಿನ ಸರ್ಕಾರ ನೀರಾ ತೆಗೆಯಲು ಅಧಿಕೃತ ಪರವಾನಿಗೆ ನೀಡಿದೆ.



**ಡಂಕಲ್ ಪ್ರಸ್ತಾವನೆ, ಡಬ್ಲ್ಯೂ.ಟಿ.ಒ. ವಿರುದ್ಧ ಪ್ರತಿಭಟನೆ**

೧೯೯೦ರ ದಶಕದಲ್ಲಿ ಭಾರತ ಸರ್ಕಾರ ವಿಶ್ವ ವಾಣಿಜ್ಯ ಸಂಸ್ಥೆಯೊಂದಿಗೆ ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಡಂಕಲ್ ಪ್ರಸ್ತಾವನೆಯನ್ನು ಒಪ್ಪಿಕೊಳ್ಳುವ ಮುಂಚೆ ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರು ಈ ಪ್ರಸ್ತಾವನೆ ಬಗ್ಗೆ ಕೂಲಂಕಷವಾಗಿ ಅಧ್ಯಯನ ಮಾಡಿ, ಈ ಒಪ್ಪಂದದಿಂದ ಕೃಷಿ ಕ್ಷೇತ್ರ ಹಾಳಾಗುವುದರಲ್ಲಿ ಸಂದೇಹವೇ ಇಲ್ಲ, ಈ ಒಪ್ಪಂದಕ್ಕೆ ಸಹಿ ಹಾಕಿದರೆ ದೇಶದಲ್ಲಿ ಸರಣಿ ಆತ್ಮಹತ್ಯೆಗಳಾಗುತ್ತವೆ ಎಂದು ೧೯೯೦ರಲ್ಲಿ ರೈತ ಕಾರ್ಯಕರ್ತರಿಗೆ ತಿಳಿಸಿದರು. ಸುದರ್‌ಲ್ಯಾಂಡ್ ಎಂಬುವವರು ಭಾರತಕ್ಕೆ ಬಂದಾಗ ದೆಹಲಿಯವರೆಗೆ ರೈತರು ಹೋಗಿ "ಗೋಬ್ಯಾಕ್ ಸುದರ್‌ಲ್ಯಾಂಡ್" ಎಂದು ಪ್ರತಿಭಟಿಸಿದರು. ಈ ಒಪ್ಪಂದ ಇಂದು ಕೃಷಿ ಕ್ಷೇತ್ರದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿ ಲಕ್ಷಾಂತರ ರೈತರು ಆತ್ಮಹತ್ಯೆಗೆ ಒಳಗಾಗಿದ್ದಾರೆ. ಈ ಒಪ್ಪಂದದಿಂದ ಅನೇಕ ಬಹುರಾಷ್ಟ್ರ ಕಂಪನಿಗಳು ಭಾರತಕ್ಕೆ ಬಂದು ವಿಶಾಲವಾದ ಕೃಷಿ ಕ್ಷೇತ್ರವನ್ನು ಆಕ್ರಮಿಸಿಕೊಂಡಿವೆ. ಈ ಕಂಪನಿಗಳು ಉತ್ಪಾದಿಸುವ ರಸಗೊಬ್ಬರ, ಕ್ರಿಮಿನಾಶಕ, ಕೃಷಿ ಪರಿಕರಗಳು, ಟ್ರಕ್ಟರ್, ಕಟಾವು ಯಂತ್ರ, ಜೈವಿಕ ತಂತ್ರಜ್ಞಾನದ ಬೀಜ ಇತ್ಯಾದಿಗಳು ದುಬಾರಿ ಬೆಲೆಗೆ ರೈತರಿಗೆ ಮಾರಾಟವಾಗುತ್ತಿದ್ದವು. ರೈತರಿಂದ ಬೀಜ ಸ್ವಾತಂತ್ರ್ಯ ಕಸಿದುಕೊಳ್ಳಲಾಯಿತು. ಉದಾ : ಬಿ.ಟಿ. ಹತ್ತಿಬೀಜ ಮಾರಾಟದಿಂದ ಲಕ್ಷಾಂತರ ಕೋಟಿ ರೂಪಾಯಿಗಳನ್ನು ಈ ಕಂಪನಿಗಳು ಲಾಭಮಾಡಿಕೊಂಡಿವೆ. ಆದರೆ ಬಿ.ಟಿ. ಹತ್ತಿ ಬೆಳೆದ ರೈತರು ಮಾತ್ರ ಆತ್ಮಹತ್ಯೆಗೆ ಒಳಗಾಗಿದ್ದಾರೆ.

ಈ ಎಲ್ಲಾ ಅಂಶಗಳು ೧೯೯೦ರಲ್ಲಿ ಯಾವ ರೈತರಿಗೂ ಅರ್ಥವಾಗಲಿಲ್ಲ. ಸರ್ಕಾರ ಮಾತ್ರ ಒಪ್ಪಂದಕ್ಕೆ ಸಹಿ ಹಾಕಿತು. ರೈತರನ್ನು ಆತ್ಮಹತ್ಯೆಗೆ ದೂಡಿತು.

**ಆನ್‌ಲೈನ್ ಲಾಟರಿ, ವಿಶ್ವಸುಂದರಿ ಸಮಾವೇಶ, ಮದ್ಯ ನಿಷೇಧ**

ರೈತಸಂಘ ಸಾಮಾಜಿಕ ಕಳಕಳಿಯ ಹೋರಾಟದಲ್ಲಿ ಕೂಡ ಹಿಂದೆ ಬಿದ್ದಿಲ್ಲ. ಆನ್‌ಲೈನ್ ಲಾಟರಿಯನ್ನು ರದ್ದು ಮಾಡಲು, ಏಶ್ವಸುಂದರಿ ಸಮಾವೇಶ ನಡೆಸಲು ತೀವ್ರ ಹೋರಾಟ ನಡೆಸಿದ್ದರ ಪರಿಣಾಮ ಜನಸಾಮಾನ್ಯರ ಜೇಬಿಗೆ ಕತ್ತರಿ ಹಾಕುವ ಲಾಟರಿ ನಿಷೇಧವಾಯಿತು. ಮದ್ಯ ನಿಷೇಧ ಆಂದೋಲನವನ್ನು ಪೂರ್ಣ ಬೆಂಬಲಿಸಿ ಇತ್ತೀಚೆಗೆ ಗ್ರಾಮೀಣ ಕೂಲಿ ಕಾರ್ಮಿಕರ ಸಂಘ ರಾಯಚೂರಿನಲ್ಲಿ ಮದ್ಯನಿಷೇಧಕ್ಕೆ ಒತ್ತಾಯಿಸಿ ಸಮಾವೇಶ ನಡೆಸಿದಾಗ ರೈತ ಸಂಘವು ಸಕ್ರಿಯವಾಗಿ ಬೆಂಬಲ ಕೊಟ್ಟಿದೆ. ರಾಜ್ಯದಲ್ಲಿ ಮದ್ಯ ನಿಷೇಧವಾಗುವವರೆಗೂ ಈ ಹೋರಾಟ ಮುಂದುವರೆಯುತ್ತದೆ. ರೈತ ಚಳುವಳಿ ಮೌಢ್ಯದ ವಿರುದ್ಧ ನಿರಂತರವಾಗಿ ಕೆಲಸ ಮಾಡುತ್ತಿದ್ದು, ಸರಳ ವಿವಾಹವನ್ನು ಒಂದು ವೈಚಾರಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವಾಗಿ ನಡೆಸುತ್ತಾ ಬಂದಿದೆ. ಜಾತಿ ವಿನಾಶಕ್ಕೆ ರಚನಾತ್ಮಕ ಕಾರ್ಯಕ್ರಮವನ್ನು ರೂಪಿಸುತ್ತಾ ಬಂದಿದೆ.



ಸಮಾಜಕ್ಕೆ ವಿಷಮುಕ್ತ ಆಹಾರವನ್ನು ನೀಡುವ ಉದ್ದೇಶದಿಂದ ಸುಭಾಷ್ ಪಾಳೇಕರ್‌ರವರ ನೈಸರ್ಗಿಕ ಕೃಷಿಗೆ ಒತ್ತು ನೀಡುತ್ತದೆ. ಅಲ್ಲದೇ ೩೭ ವರ್ಷಗಳ ಹೋರಾಟದ ಹಾದಿಯಲ್ಲಿ ರಾಜಕೀಯ, ಆರ್ಥಿಕ, ಸಾಮಾಜಿಕ ಬದಲಾವಣೆಗೆ ಕಾರಣವಾಗಿದೆ. ಪ್ರಾಥಮಿಕ ಶಿಕ್ಷಣದಲ್ಲಿ ಕನ್ನಡ ಭಾಷೆ ಶಿಕ್ಷಣ ಕಡ್ಡಾಯಗೊಳಿಸಲು ಪ್ರಾರಂಭದಿಂದಲೂ ಹೋರಾಟ ಮಾಡುತ್ತಿದೆ. ಒಟ್ಟಾರೆ ರೈತ ಚಳುವಳಿ ಒಂದು ತಾತ್ವಿಕ ನೆಲೆಗಟ್ಟಿನಲ್ಲಿ ಸಮಾಜದ ಬೆಳವಣಿಗೆಗೆ ಕೆಲಸ ಮಾಡಿದೆ.

**ಸಾಲಮನ್ನಾ ಮತ್ತು ಸ್ವಾಮಿನಾಥನ್ ವರದಿ**

ರೈತಸಂಘ ಅಸ್ತಿತ್ವಕ್ಕೆ ಬಂದ ನಂತರದಿಂದಲೂ ಎಲ್ಲಿಯವರೆಗೆ ರೈತರಿಗೆ ವೈಜ್ಞಾನಿಕ ಬೆಲೆ ನಿಗದಿಯಾಗುವುದಿಲ್ಲವೋ ಅಲ್ಲಿಯವರೆಗೆ ಸಕಾಲದಲ್ಲಿ ಸಾಲ ತೀರಿಸಲಾಗುವುದಿಲ್ಲ. ರೈತರ ಸಾಲ ಮನ್ನಾಕ್ಕೆ ಒತ್ತಾಯಿಸಿ ರಾಜ್ಯದಾದ್ಯಂತ ಚಳುವಳಿ ನಡೆಸಿ ಸರ್ಕಾರಕ್ಕೆ ಒತ್ತಾಯಿಸಲಾಯಿತು. ಪರಿಣಾಮ ಮನಮೋಹನ್ ಸಿಂಗ್ ರವರು ಪ್ರಧಾನಮಂತ್ರಿ ಗಳಾಗಿದ್ದಾಗ ೭೦ ಸಾವಿರ ಕೋಟಿ ರೈತರ ಸಾಲ ಮನ್ನಾ ಆಯಿತು. ಕುಮಾರಸ್ವಾಮಿ ಯವರು ಮುಖ್ಯಮಂತ್ರಿಗಳಾಗಿದ್ದಾಗ ೨೫ ಸಾವಿರದವರಗೆ ರೈತರ ಸಾಲ ಮನ್ನವಾಯಿತು. ಇತ್ತೀಚೆಗೆ ಮೇಲುಕೋಟೆ

ಶಾಸಕರಾದ ಕೆ.ಎಸ್. ಪುಟ್ಟಣ್ಣಯ್ಯನವರ ನೇತೃತ್ವದಲ್ಲಿ ನಿರಂತರವಾಗಿ ಬೆಂಗಳೂರಿನ ಮೌರ್ಯ ಸರ್ಕಲ್‌ನಲ್ಲಿ ಹತ್ತು ದಿನಗಳವರೆಗೆ ಸಾಲಮನ್ನಕ್ಕಾಗಿ ಹೋರಾಟ ಮಾಡಲಾಯಿತು. ಪರಿಣಾಮವಾಗಿ ರಾಜ್ಯದ ರೈತರ ಸಹಕಾರಿ ಸಂಘಗಳ ೫೦ ಸಾವಿರವರೆಗೆ ಸಾಲ ಮನ್ನವಾಯಿತು. ರಾಷ್ಟ್ರೀಕೃತ ಬ್ಯಾಂಕ್‌ನ ಸಾಲವನ್ನು ಮನ್ನಾ ಮಾಡಲು ದೇಶದ ವಿವಿಧ ರೈತಪರ ಸಂಘಟನೆಗಳನ್ನು ಒಗ್ಗೂಡಿಸಿ, ದೆಹಲಿಯಲ್ಲಿ ಲಕ್ಷಾಂತರ ರೈತರನ್ನು ಸೇರಿಸಿ, ಕಿಸಾನ್ ಸಂಸತ್ ನಡೆಸಿ, ಸಾಲಕ್ಕಾಗಿ ಆತ್ಮಹತ್ಯೆ ಮಾಡಿಕೊಂಡ ರೈತರ ಮಡದಿಯರ ಹೇಳಿಕೆಗಳನ್ನು ಸರ್ಕಾರಕ್ಕೆ ತಲುಪಿಸಲಾಯಿತು.

# ಕನ್ನಡ ಚಳುವಳಿಗಳು

**- ರಾ.ನಂ. ಚಂದ್ರಶೇಖರ**

ಕನ್ನಡತನ, ಕನ್ನಡ ಜಾಗೃತಿಗೆ ಸ್ಪಷ್ಟರೂಪ ನೀಡಿದ ಬಿ.ಎಂ.ಶ್ರೀ., ಕುವೆಂಪು ಅವರ ಕರ್ಮಭೂಮಿ, ಚಳವಳಿಗಳ ತವರು, ಕನ್ನಡದ ಸಾಂಸ್ಕೃತಿಕ ರಾಜಧಾನಿ ಮೈಸೂರಿನಲ್ಲಿ ಕನ್ನಡ ಚಳವಳಿಯ ಬಗ್ಗೆ ಕೆಲವು ಮಾತುಗಳನ್ನು ಆಡಲು ನಿಂತಿದ್ದೇನೆ.

ಭಾಷಿಕ ನೆಲೆಯಲ್ಲಿ ಆದಿಕವಿ ಪಂಪನಿಂದಲೇ ಕನ್ನಡ ಚಳವಳಿ ಆರಂಭವಾಯಿತು. ಕನ್ನಡ ಸಾಹಿತ್ಯದಲ್ಲಿ ಅದು ನಿರಂತರವಾಗಿ ಕಾಲಕಾಲಕ್ಕೆ ಪ್ರಕಟವಾಗುತ್ತಲೇ ಬಂದಿದೆ. ತಮ್ಮೆಲ್ಲ ಅಭಿವ್ಯಕ್ತಿಗೂ ಕನ್ನಡವನ್ನೇ ಬಳಸಿದ ೧೨ನೆಯ ಶತಮಾನದ ವಚನಕಾರರು, ದಾಸ (ಕೀರ್ತನ) ಸಾಹಿತ್ಯಕಾರರು, 'ಕನ್ನಡಮೆನಿಪ್ಪಾ ನಾಡು ಚೆಲ್ವಾಯ್ತು' ಎಂದು ಹೇಳಿದ ಆಂಡಯ ಇಂತಹವರನ್ನೆಲ್ಲ ಕನ್ನಡ ಚಳವಳಿಗಾರರಲ್ಲ ಅನ್ನಲಾದೀತೆ. ಆದರೆ, ಕನ್ನಡ ಚಳವಳಿ ಪ್ರತ್ಯೇಕ ಆಂದೋಲನವಾಗಿ ಹೋರಾಟದ ಸ್ವರೂಪವನ್ನು ಪಡೆದುಕೊಂಡದ್ದು ಏಕೀಕರಣದ ನಂತರವೇ.

ವಿವಿಧ ಪ್ರಾಂತಗಳಲ್ಲಿ ಹರಿದು-ಹಂಚಿಹೋಗಿದ್ದ ಕನ್ನಡಿಗರನ್ನು ಒಂದು ಗೂಡಿಸಲು ೧೯ನೆಯ ಶತಮಾನದಲ್ಲಿ ಆರಂಭವಾದ 'ಕರ್ನಾಟಕ ಏಕೀಕರಣ' ಚಳವಳಿಯನ್ನು ನಾಡು-ನುಡಿಯ ಹಿತ ಕಾಪಾಡಲು ಆರಂಭವಾದ ನೇರ ಹೋರಾಟ ಎನ್ನಬಹುದು. ಏಕೀಕರಣದ ಕಾಲಮಾನದಲ್ಲಿ ಸ್ಥಾಪನೆಯಾದ ಧಾರವಾಡದ ವಿದ್ಯಾವರ್ಧಕ ಸಂಘ, ಕನ್ನಡ ಸಾಹಿತ್ಯ ಪರಿಷತ್ತುಗಳು ಕನ್ನಡಪರ ಚಟುವಟಿಕೆಗಳನ್ನು ಗಟ್ಟಿಗೊಳಿಸಿದವು. ಆದರೆ, 'ಹಾರಿಸಿ ಏರಿಸಿ ಕನ್ನಡದ ಬಾವುಟ' ಎಂದು ನಾಡಿನ ಉದ್ದಗಲಕ್ಕೂ ತಿರುಗಿ ಕನ್ನಡಿಗರಲ್ಲಿ ಕನ್ನಡಾಭಿಮಾನ' ಮೂಡಿಸಿದ ಬಿ.ಎಂ.ಶ್ರೀ. ಅವರೇ ಇಂದಿನ ಸ್ವರೂಪದ ಕನ್ನಡ ಚಳವಳಿಗೆ ನಾಂದಿ ಹಾಡಿದವರು ಎಂದು ಜಿ.ಎಸ್. ಶಿವರುದ್ರಪ್ಪ ಹೇಳುತ್ತಾರೆ.

**'Mysore For Mysoreans' ಎಂದ ತಾತಯ್ಯ:**

ಇಂದಿನ ದಿನಗಳಲ್ಲಿ ನಡೆಯುತ್ತಿರುವ ಕನ್ನಡ ಹೋರಾಟ ಆರಂಭವಾದದ್ದು ವಿಶ್ವೇಶ್ವರಯ್ಯನವರು ದಿವಾನರಾದಾಗ ಎನ್ನಬಹುದು. ಇವರಿಗಿಂತ ಮೊದಲು ದಿವಾನರಾಗಿದ್ದವರೆಲ್ಲ ಪರಪ್ರಾಂತದವರು. ಮೈಸೂರು ಸಂಸ್ಥಾನದ ಹುದ್ದೆಗಳಲ್ಲಿ ತಮಿಳರೇ ತುಂಬಿದ್ದರು. ಕನ್ನಡಿಗರೊಬ್ಬರು ದಿವಾನರಾದಾಗ ಕನ್ನಡಿಗರಿಗೆ ಆಗುತ್ತಿದ್ದ ಅನ್ಯಾಯದ ವಿರುದ್ಧ ಆಕ್ರೋಶ ಪ್ರಕಟವಾಯಿತು. ಕನ್ನಡ ಪತ್ರಿಕಾ ಪಿತಾಮಹ ಎಂದು ಗುರುತಿಸಲ್ಪಡುವ

ತಾತಯ್ಯನವರ ನೇತೃತ್ವದಲ್ಲಿ ಆಂದೋಲನ ಆರಂಭವಾಯಿತು. ಇದಕ್ಕೆ ಪ್ರತಿಯಾಗಿ ವಲಸಿಗರು ಕೂಗೆಬ್ಬಿಸಿದರು. ಕರ್ನಾಟಕ ಏಕೀಕರಣ ಹೋರಾಟ ಬಿರುಸುಗೊಂಡಾಗ



ಕನ್ನಡಿಗರು ತಮ್ಮ ನಾಡು-ನುಡಿಯ ಬಗ್ಗೆ ಚಿಂತಿಸುವಂತಾಯಿತು. ರಾಮಮನೋಹರ ಲೋಹಿಯ 'ಅಂಗ್ರೇಜಿ ಹಟಾವ್' ಆಂದೋಲನಕ್ಕೆ ಕರೆ ನೀಡಿದಾಗ, ಅವರಿಂದ ಪ್ರಭಾವಿತರಾಗಿದ್ದ ಕೋಣಂದೂರು ಲಿಂಗಪ್ಪ, ಕೆ.ಎಚ್.ಶ್ರೀನಿವಾಸ್ ಮುಂತಾದ ಸಮಾಜವಾದಿ ಯುವಕರು ಮೈಸೂರಿನಲ್ಲಿ ಈ ಆಂದೋಲನದ ಜೊತೆಗೆ ಕನ್ನಡ ಜಾಗೃತಿ ಆಂದೋಲನವನ್ನೂ ಆರಂಭಿಸುವ ಉದ್ದೇಶದಿಂದ 'ಕನ್ನಡ ಯುವಜನ ಸಭಾ'ವನ್ನು ಆರಂಭಿಸಿದರು. ಕೋಣಂದೂರು ಲಿಂಗಪ್ಪ ಕಾನೂನು ಪದವಿ ಓದಲು ಬೆಂಗಳೂರಿಗೆ ಹೋದಾಗ ಅ.ನ.ಕೃ. ಅವರ ಮನವೊಲಿಸಿ ಸಭಾದ ಹೆಸರಲ್ಲಿಯೇ ಕನ್ನಡ ಚಟುವಟಿಕೆಗೆ ಚಾಲನೆ ನೀಡಿದರು.

**ಅ.ನ.ಕೃ. ಪ್ರವೇಶ - ಗರಿಗೆದರಿದ ಕನ್ನಡೋತ್ಸಾಹ :**

ಕನ್ನಡ ಚಳವಳಿ ಮೇಲ್ನೋಟಕ್ಕೆ ಭಾಷಿಕ ಹೋರಾಟ ಅನ್ನಿಸಿದರೂ ಅದು ಸವೆಸಿದ ಹಾದಿಯನ್ನು ಗಮನಿಸಿದರೆ, ಭಾಷೆ-ಸಂಸ್ಕೃತಿಗಳ ಜೊತಿಗೆ ನೆಲ-ಜಲ, ಜನರ ಅಂದರೆ 'ಕನ್ನಡ-ಕನ್ನಡಿಗ-ಕರ್ನಾಟಕ'ಗಳ ಹಿತ ಕಾಪಾಡಲು ಹೋರಾಟ ನಡೆಸಿರುವುದು ಸ್ಪಷ್ಟವಾಗುತ್ತದೆ. ಹೀಗೆ ಹಲವು ಸ್ತರಗಳಲ್ಲಿ ಗುಪ್ತಗಾಮಿನಿಯಾಗಿ ಸಾಗುತ್ತಿದ್ದ ಕನ್ನಡ ಚಳವಳಿಯು, ಭಾಷಾನ್ವಯ ರಾಜ್ಯಗಳ ರಚನೆಯಾದ ನಂತರವೂ ತನ್ನ ನಾಡಿನಲ್ಲಿಯೇ ಕನ್ನಡಿಗ 'ಸ್ಥಳೀಯ ನಿರಾಶ್ರಿತ', ಕನ್ನಡ 'ಅನಾಥ' ಅನ್ನುವ ಸ್ಥಿತಿ ನಿರ್ಮಾಣವಾಗಿ, ಕನ್ನಡ ಭಾಷೆ-ಸಂಸ್ಕೃತಿಗೆ ಮನ್ನಣೆ ದೊರಕುತ್ತಿಲ್ಲ ಅನ್ನುವ ಭಾವನೆ ತೀವ್ರವಾದಾಗ ಪ್ರತಿಭಟನೆಯ ಸ್ವರೂಪ ಪಡೆದುಕೊಂಡಿತು. ಇದೇ ಸಂದರ್ಭದಲ್ಲಿ ಮಣಿಪಾಲ್‌ನಲ್ಲಿ(೧೯೬೦) ನಡೆದ ೪೨ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ಅ.ನ.ಕೃ.ತಮ್ಮ ಅಧ್ಯಕ್ಷ ಭಾಷಣದಲ್ಲಿ ಕನ್ನಡನಾಡು-ನುಡಿ ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರವಾಗಿ ಚರ್ಚಿಸಿದರು. ಇದು ಕನ್ನಡಾಭಿಮಾನಿಗಳು ನೇರ ಕನ್ನಡ ಹೋರಾಟಕ್ಕೆ ಇಳಿಯಲು ಪ್ರೇರಣೆಯಾಯಿತು. ಕನ್ನಡ ಯುವಜನ ಸಭಾ ೧೯೬೧ರ ನವೆಂಬರ್‌ನಲ್ಲಿ 'ಕನ್ನಡ ದಿನ' ಆಚರಿಸಿ, ಬೆಂಗಳೂರಿನಲ್ಲಿ ಕನ್ನಡ ಉಳಿಸುವ ಸಂಕಲ್ಪ ಮಾಡಿದರು.

**"ಎನ್ನಡ-ಯಕ್ಕಡಗಳ ನಡುವೆ ಸ್ವಲ್ಪ ಕನ್ನಡ**

ಬೆಂಗಳೂರಿನಲ್ಲಿ 'ಎನ್ನಡ-ಯಕ್ಕಡಗಳ ನಡುವೆ ಸ್ವಲ್ಪ ಕನ್ನಡ' ಎನ್ನುವ ಸ್ಥಿತಿಯಿತ್ತು. ನಗರದಲ್ಲಿ ಸಾಲ ಸಾಲು ಪ್ರತಿಷ್ಠಿತ ಉದ್ದಿಮೆಗಳಿದ್ದವು. ಆದರೆ ಅಲ್ಲಿ ಕನ್ನಡಿಗರಿಗೆ ಕೆಲಸ ಸಿಗುತ್ತಿರಲಿಲ್ಲ. ಕೆಲವು ಪ್ರದೇಶಗಳಲ್ಲಿ ಕನ್ನಡ

ಮಾತಾನಾಡುವುದೇ ಅಪಾಯ ಅನ್ನುವ ಸ್ಥಿತಿ. ಈ ಸನ್ನಿವೇಶದಲ್ಲಿ ಕನ್ನಡ ಉಳಿಸಲು ೧೯೬೨ರ ಫೆಬ್ರವರಿಯಲ್ಲಿ 'ಬೆಂಗಳೂರು ಕನ್ನಡಿಗರ ಸಮ್ಮೇಳನ' ಅ.ನ.ಕೃ. ಅಧ್ಯಕ್ಷತೆಯಲ್ಲಿ ನಡೆಯಿತು. ಕನ್ನಡಿಗರನ್ನು ಜಾಗೃತಿಗೊಳಿಸಲು, ಮತ್ತು ಸಂಪರ್ಕ ಸಾಧಿಸಲು ಮ. ರಾಮಮೂರ್ತಿ ಸಂಪಾದಕತ್ವದಲ್ಲಿ 'ಕನ್ನಡ ಯುವಜನ' ವಾರ ಪತ್ರಿಕೆ ಆರಂಭವಾಯಿತು. ಕೋಣಂದೂರು ಲಿಂಗಪ್ಪ, ಮ.ರಾಮಮೂರ್ತಿ ಈ ಸಮಾವೇಶ ಸಂಘಟಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದರು.



ಈ ಸಮಾವೇಶದ ಪರಿಣಾಮ ನಗರದಲ್ಲಿ ಅಗಣಿತ ಸಂಖ್ಯೆಯಲ್ಲಿ ಕನ್ನಡ ಸಂಘಗಳು ಅಸ್ತಿತ್ವಕ್ಕೆ ಬಂದವು. ಕನ್ನಡ ನಾಮಫಲಕ, ಕನ್ನಡ ಚಲನಚಿತ್ರಗಳ ಪ್ರದರ್ಶನಕ್ಕೆ ಒತ್ತಾಯಿಸುವುದು, ವಲಸಿಗರ ವಸಾಹತುಗಳಾಗಿದ್ದ ಕಾರ್ಖಾನೆಗಳ ಸಮೀಪ ನೇರ ಸಂಘರ್ಷಗಳು ಆರಂಭವಾಯಿತು. ಕನ್ನಡನಾಡಿನ ಏಳಿಗೆಗಾಗಿ ದುಡಿವೆವು ನಾವು; ಮಡಿವೆವು ನಾವು ಒಂದಾಗಿ' ಎಂಬ ಗೋಡೆ ಬರಹ ಕಾಣಿಸಿ ಕೊಂಡಿತು. ಐ.ಟಿ.ಐ. ಕಾರ್ಖಾನೆಯಲ್ಲಿ 'ಫೈನ್ ಆರ್ಟ್ಸ್'ನ್ನು 'ಲಲಿತಕಲಾ ಸಂಘ' ಎಂದು ಬದಲಿಸಿ ಎಂದು ಒತ್ತಾಯಿಸಿದ ಕನ್ನಡ ಕಾರ್ಮಿಕರು ಏಟು ತಿನ್ನಬೇಕಾಯಿತು. ನಂತರ ಪಕ್ಕದ ಹಳ್ಳಿಗರ ನೆರವಿನಿಂದ ನೇರ ಉತ್ತರ ನೀಡಿದ್ದು ಬೇರೆಯ ಮಾತು. ಲಲಿತ ಕಲಾ ಸಂಘದ ಜೊತೆಗೆ ಐಟಿಐ ಕಾಲೋನಿ 'ದೂರವಾಣಿನಗರ'ವಾಯಿತು. ಕನ್ನಡದ ದನಿ ಕೇಳುವುದೇ ಅಪರೂಪ ಎನ್ನುವ ಪರಿಸ್ಥಿತಿಯಿದ್ದ ಬೆಂಗಳೂರಿನ ಬಡಾವಣೆಗಳಲ್ಲಿ ಸ್ಥಾಪನೆಯಾದ ಕನ್ನಡ ಸಂಘಗಳು ವಾಚನಾಲಯ ತೆರೆದವು, ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿದವು. ಹೀಗೆ ಬಿಡಿಯಾಗಿ ನಡೆಯುತ್ತಿದ್ದ ಕನ್ನಡ ಚಟುವಟಿಕೆಗಳನ್ನು ಇಡಿಯಾಗಿಸಲು ಮ. ರಾಮಮೂರ್ತಿ ಮುಂದಾದರು.

**ಎಂ.ಎಸ್. ಸಂಗೀತ ಕಛೇರಿಗೆ ತಡೆ :**

ಬೆಂಗಳೂರಿನಲ್ಲಿ ನಡೆಯುತ್ತಿದ್ದ ರಾಮನವಮಿ, ಗಣೇಶೋತ್ಸವ ಮುಂತಾದ ಸಂಗೀತ ಕಾರ್ಯಕ್ರಮಗಳಲ್ಲಿ ಸ್ಥಳೀಯ ಕಲಾವಿದರಿಗೆ, ಕನ್ನಡ ಗೇಯ ಕೃತಿಗಳಿಗೆ ಅವಕಾಶವಿರಲಿಲ್ಲ. ೧೯೨ ಮೇ ೨೭ ರಂದು ವಿಶ್ವಖ್ಯಾತ ಗಾಯಕಿ ಎಂ.ಎಸ್. ಸುಬ್ಬಲಕ್ಷ್ಮಿ ಅವರ ಸಂಗೀತ ಕಚೇರಿ ಚಾಮರಾಜಪೇಟೆ ರಾಮಸೇವಾ ಮಂಡಲಿಯಲ್ಲಿ ವ್ಯವಸ್ಥೆಯಾಗಿತ್ತು. ಅಂದು ಪ್ರತಿಭಟಿಸಿದರೆ ಹೆಚ್ಚು ಗಮನ ಸೆಳೆಯಬಹುದೆಂದು ನಿರ್ಧರಿಸಿದ ಕನ್ನಡ ಹೋರಾಟಗಾರರು ಅ.ನ.ಕೃ., ಮ. ರಾಮಮೂರ್ತಿ ನೇತೃತ್ವದಲ್ಲಿ ದೊಡ್ಡ ಸಂಖ್ಯೆಯಲ್ಲಿ ಮೆರವಣಿಗೆ ಬಂದು, ಸಂಗೀತ ನಡೆಯುತ್ತಿದ್ದ ಚಪ್ಪರದ ಎದುರು ಕನ್ನಡ ಕಲಾವಿದರು, ಕನ್ನಡ ಗೇಯ ಕೃತಿಗಳಿಗೆ ಆಗ್ರಹಿಸಿ ಪ್ರತಿಭಟನೆ ನಡೆಸಿದರು. ಯಾರೋ ಕಿಡಿಗೇಡಿಗಳು ಚಪ್ಪರಕ್ಕೆ ಬೆಂಕಿ ಹಚ್ಚುವ ಯತ್ನ ಮಾಡಿದರು. ಪೊಲೀಸರು ಲಾಠಿ ಪ್ರಹಾರ ನಡೆಸಿದರು. ಕೆಲವರನ್ನು ಬಂಧಿಸಿದರು. ಬಂಧಿತರಲ್ಲಿ

ಸಾಹಿತಿ ಆದ್ಯ ರಾಮಾಚಾ ಅವರು ಇದ್ದರು. ಬಿ.ಬಿ.ಸಿ.ಯಲ್ಲಿ ಘಟನೆ ಪ್ರಸ್ತಾಪವಾಯಿತು. ಇದು ಕನ್ನಡಿಗರು ತಮ್ಮ ಅಸ್ಮಿತೆ ಉಳಿಸಿಕೊಳ್ಳಲು ನಡೆಸಿದ ಮೊದಲ ಬೀದಿ ಹೋರಾಟವಾಗಿತ್ತು. ಈ ಹೋರಾಟದ ನಂತರ ಕನ್ನಡ ಚಳವಳಿ ರಾಜ್ಯದ ವಿವಿಧ ಭಾಗಗಳಿಗೂ ಹಬ್ಬಿತು.

**'ಕಾಂಚಿ ತಲೈವನ್' ಕನ್ನಡ ಬಾವುಟಕ್ಕೆ ಅವಮಾನ :**

ಮ. ರಾಮಮೂರ್ತಿ ಕನ್ನಡ ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸಲು ೬೦ಕ್ಕೂ ಹೆಚ್ಚು ಕನ್ನಡ ಸಂಘಗಳನ್ನು ಒಗ್ಗೂಡಿಸಿ ಅ.ನ.ಕೃ. ಅಧ್ಯಕ್ಷತೆಯಲ್ಲಿ 'ಕರ್ನಾಟಕ ಸಂಯುಕ್ತ ರಂಗ'ವನ್ನು ಸ್ಥಾಪಿಸಿದರು. ವಾರದಲ್ಲಿ ೩-೪ ಬಹಿರಂಗ ಸಭೆ, ಆಗಾಗ ಪ್ರತಿಭಟನೆಗಳು



ನಡೆಯುವಂತಾಯಿತು. ಈ ಸಭೆಗಳು ನಗರದಲ್ಲಿ ಕನ್ನಡ ವಾತಾವರಣ ಮೂಡಿಸುವಲ್ಲಿ ಮಹತ್ವದ ಪಾತ್ರವಹಿಸಿದವು. ಕಾರ್ಖಾನೆಗಳಲ್ಲಿ ಕನ್ನಡಿಗರಿಗೆ ಕೆಲಸ ಕೊಡಿ; ರೈಲು ನಿಲ್ದಾಣದಲ್ಲಿ ತಮಿಳು ಪ್ರಕಟಣೆ ನಿಲ್ಲಿಸಿ; ಆಕಾಶವಾಣಿಯಲ್ಲಿ ಕನ್ನಡ ಮಾತ್ರ: ಕನ್ನಡ ನಾಮಫಲಕಗಳಿಲ್ಲದಿದ್ದರೆ ವ್ಯಾಪಾರ ಬೇಡ; ಕನ್ನಡ ಪತ್ರಿಕೆ, ಪುಸ್ತಕಗಳನ್ನುಕೊಂಡು ಓದಿ; ಕನ್ನಡ ಚಲನಚಿತ್ರಗಳನ್ನೇ ನೋಡಿ ಎನ್ನುವ ಘೋಷಣೆಗಳೊಂದಿಗೆ ೧ ರಂದು ಪ್ರಪ್ರಥಮವಾಗಿ ಬೆಂಗಳೂರಿನಲ್ಲಿ ರಾಜ್ಯೋತ್ಸವವನ್ನು ಆಚರಿಸಲಾಯಿತು. ೧೦ ಸಾವಿರಕ್ಕೂ ಹೆಚ್ಚು ಜನ, ೧೨೮ ಸಂಘಟನೆಗಳು ಪಾಲ್ಗೊಂಡಿದ್ದವು. ಇದು ವಲಸಿಗರಲ್ಲಿ ತಲ್ಲಣವನ್ನುಂಟುಮಾಡಿತು.

ರಾಜ್ಯೋತ್ಸವ ಆಚರಿಸಿ ಸಂಭ್ರಮಿಸುತ್ತಿದ್ದ ದಿನವೇ ಚಾಲುಕ್ಯ ದೊರೆ ಪುಲಿಕೇಶಿಯನ್ನು ಪಲ್ಲವ ದೊರೆ ನರಸಿಂಹವರ್ಮ ಸೋಲಿಸುವ ಕಾಲ್ಪನಿಕ ಕಥೆ ಉಳ್ಳ ಕಾಂಚಿ ತಲೈವನ್' ತಮಿಳು ಚಿತ್ರ ತೆರೆಕಂಡಿತು. ಚಿತ್ರದಲ್ಲಿ ಪುಲಿಕೇಶಿಯನ್ನು ವಿದೂಷಕನಂತೆ ಚಿತ್ರಿಸಿದ್ದಲ್ಲದೆ, ಕರ್ನಾಟಕದ ಬಾವುಟವನ್ನು ತುಳಿಯುವ ದೃಶ್ಯವಿತ್ತು. ಇದು ಕನ್ನಡ ಚಳವಳಿಗಾರರನ್ನು ಕೆರಳಿಸಿತು. ತೀವ್ರ ಪ್ರತಿಭಟನೆ ನಡೆಯಿತು. ಚಳವಳಿ ಬೆಂಗಳೂರಿನಾಚೆಗೂ ಹಬ್ಬಿತು. ಚಿತ್ರದಲ್ಲಿದ್ದ ವಿವಾದಾತ್ಮಕ ದೃಶ್ಯವನ್ನು ತೆಗೆದುಹಾಕಿದ್ದಲ್ಲದೆ ಚಿತ್ರದ ನಾಯಕ ಎಂ.ಜಿ.ಆರ್. ಕನ್ನಡಿಗರ ಕ್ಷಮೆ ಕೋರುವುದ ರೊಂದಿಗೆ ಚಳವಳಿ ನಿಂತಿತು. ಇದೇ ಸಂದರ್ಭದಲ್ಲಿ ನಡೆದ ಘಟನೆಯೊಂದು ಕನ್ನಡ ಚಳವಳಿಗೆ ಹೆಚ್ಚಿನ ಜನಪ್ರಿಯತೆಯನ್ನು ತಂದುಕೊಟ್ಟಿತು. ಚಿತ್ರದುರ್ಗ ಜಿಲ್ಲೆಯ ಹಿರಿಯೂರು ಪುರಸಭೆ ಡಿ.ಎಂ.ಕೆ. ವಶದಲ್ಲಿತ್ತು. ಅಲ್ಲಿನ ಪ್ರಮುಖ ವೃತ್ತದಲ್ಲಿ ಕಪ್ಪು-ಕೆಂಪು ಬಣ್ಣದ ತಮಿಳು ಧ್ವಜ ಹಾರಾಡುತ್ತಿತ್ತು. ಅಲ್ಲಿಗೆ ಹೋಗಿ ಮ. ರಾಮಮೂರ್ತಿ ತಮಿಳು ಧ್ವಜವನ್ನು ಕೆಳಗಿಳಿಸಿದರು. ತಮಿಳು ಬಾವುಟ ತಮಿಳರು ಹೆಚ್ಚಿದ್ದ ಬೆಂಗಳೂರಿನ ಬಡಾವಣೆಗಳಲ್ಲೂ ಹಾರಾಡುತ್ತಿತ್ತು.

ಈ ಘಟನೆಯ ನಂತರ ಕನ್ನಡ ಕಾರ್ಯಕರ್ತರು ತಮಿಳು ಬಾವುಟಗಳನ್ನು ಇಳಿಸಿ ಕನ್ನಡ ಬಾವುಟವನ್ನು ಹಾರಿಸುವ ಕಾರ್ಯಕ್ರಮ ರೂಪಿಸಿದರು. ಇದೇ ಕಾಲಘಟ್ಟದಲ್ಲಿ ಡಬ್ಬಿಂಗ್ ಚಿತ್ರಗಳನ್ನು ವಿರೋಧಿಸಿ ನಡೆದ ಚಳವಳಿ ಅತೀ ಮಹತ್ವದ್ದು. ಅಂದಿನ ಹೋರಾಟದ ಬಗ್ಗೆ ಹೇಳುತ್ತಾ ಹೋದರೆ, ಅದು ಹನುಮಂತನ ಬಾಲದಂತೆ ಬೆಳೆಯುತ್ತಲೇ ಇರುತ್ತದೆ.

ಮ. ರಾಮಮೂರ್ತಿ ಅಕಾಲಿಕ ಮರಣದ ನಂತರ ವಾಟಾಳ್ ನಾಗರಾಜ್ ಅವರು ಒಂದಲ್ಲ ಒಂದು ಕನ್ನಡಪರ ಹೋರಾಟ ನಡೆಸುತ್ತಾ ಕನ್ನಡ ಚಳವಳಿಯ ಅಗ್ರ ನಾಯಕರಾಗಿ ಬೆಳೆದರು. ಮಹಾಜನ್ ವರದಿ ಅನುಷ್ಠಾನಕ್ಕೆ ಒತ್ತಾಯಿಸಿ ನಡೆದ ಚಳವಳಿಯಲ್ಲಿ ಒಮ್ಮೆ ವಾಟಾಳ್ ಜೀವನದ ಹಂಗು ತೊರೆದು ಕೇಂದ್ರ ಗೃಹ ಸಚಿವ ಚವಾಣ್ ಕಾರು ತಡೆಯಲು ಯತ್ನಿಸಿದ್ದು ಮರೆಯಲಾಗದು. ತಮ್ಮ ವರ್ಣರಂಜಿತ ಚಟುವಟಿಕೆಯಿಂದ ಕನ್ನಡ ಚಳವಳಿಯಲ್ಲಿ ಹದಿಹರೆಯದ ಯುವಕರು, ಅನಕ್ಷರಸ್ಥರು ಹೋರಾಟದಲ್ಲಿ ತೊಡಗಿಸಿಕೊಳ್ಳುವಂತೆ ಮಾಡಿದರು. ಕನ್ನಡ ರಾಜ್ಯೋತ್ಸವ ಆಚರಣೆಗೆ



ಹೊಸ ಮೆರಗು ನೀಡಿ, ಕನ್ನಡ ಸಂಘಗಳು ಈ ಮಾರ್ಗವನ್ನೇ ಅನುಸರಿಸುವಂತೆ ಮಾಡಿದರು. ಮಹಾಜನ್ ವರದಿ ಅನುಷ್ಠಾನಕ್ಕೆ ಆಗ್ರಹಿಸಿ ನಡೆದ ರೈಲು ತಡೆಯಲ್ಲಿ ಮು. ಗೋವಿಂದರಾಜು ಹುತಾತ್ಮರಾದದ್ದು ಕನ್ನಡ ರಕ್ಷಣೆಗೆ ಹೋರಾಟಗಾರರ ಬದ್ಧತೆ ಎಂಥದ್ದೆಂಬುದಕ್ಕೆ ಸಾಕ್ಷಿಯಾಗಿದೆ.

ಸಾವಧಾನವಾಗಿ ೧೯೮೦ರ ಹೊತ್ತಿಗೆ ಕನ್ನಡ ಚಳವಳಿ ಗಾಂಭೀರ್ಯ ಕಳೆದು ಕೊಂಡು ನಿಸ್ತೇಜವಾಗಿತ್ತು. ಆಗ ಕನ್ನಡ ಜಾಗೃತಿಗೆ ಸಂಜೀವನಿಯಾಗಿ ಬಂದದ್ದು ಗೋಕಾಕ್ ಚಳವಳಿ, ಪ್ರೌಢಶಾಲೆಯಲ್ಲಿ ಕನ್ನಡ ಕಲಿಕೆಗೆ ಸಂಬಂಧಿಸಿದ ಗೋಕಾಕ್ ಭಾಷಾಸೂತ್ರದ ಅನುಷ್ಠಾನಕ್ಕಾಗಿ ೧೯೮೨ರಲ್ಲಿ 'ಹೆಸರಾಯಿತು ಕರ್ನಾಟಕ; ಉಸಿರಾಗಲಿ ಕನ್ನಡ' ಎನ್ನುವ ಘೋಷಣೆಯೊಡನೆ ನಡೆದ ಚಳವಳಿ ಕನ್ನಡ ಜಾಗೃತಿಯ ಹಾದಿಯಲ್ಲಿ ಅತೀ ಮಹತ್ವದ್ದು. ಜನ ಕನ್ನಡ ರಕ್ಷಣೆಗೆ ಅಭೂತಪೂರ್ವವಾದ ರೀತಿಯಲ್ಲಿ ಸಿಡಿದೆದ್ದು, ಸುಪ್ತವಾಗಿದ್ದ ಕನ್ನಡಾಭಿಮಾನವನ್ನು ಜ್ವಾಲಾಮುಖಿಯಂತೆ ಸ್ಫೋಟಿಸಿ ತೋರಿಸಿದ ಅತ್ಯಪೂರ್ವ ಪ್ರಸಂಗವದು. ಕರ್ನಾಟಕದಲ್ಲಿ ಕಾಗೆ 'ಕಾ' ಎಂದಲ್ಲೆಲ್ಲಾ ನಡೆದ ಈ ಚಳವಳಿ ಕನ್ನಡಿಗರಲ್ಲಿ ನವಜಾಗೃತಿ ಮೂಡಿಸಿತು. ಗಣ್ಯ ಸಾಹಿತಿಗಳಲ್ಲದೇ ವಿವಿಧ ಕ್ಷೇತ್ರದ ಗಣ್ಯರು ಗೋಕಾಕ್ ಚಳವಳಿಯಲ್ಲಿ ಪಾಲ್ಗೊಂಡ ಪರಿಣಾಮ ಕನ್ನಡ ಚಳವಳಿಯನ್ನು ಜನ, ಸರ್ಕಾರ ಎಲ್ಲರೂ ಗಂಭೀರವಾಗಿ ಪರಿಗಣಿಸುವಂತಾಯಿತು. ಈ ಚಳವಳಿಯಲ್ಲಿ ರಾಜಕುಮಾರ್ ಭಾಗವಹಿಸಿದ್ದರ ಪರಿಣಾಮ ಜನಸಾಗರವೇ ಚಳವಳಿಗೆ ಹರಿದು ಬರುವಂತಾಯಿತು.

ಪ್ರತಿಭಟನೆಯ ಎಲ್ಲ ಸಾಧ್ಯತೆಗಳೂ ಬಳಕೆಯಾದವು. ಧಾರವಾಡದ ಕೇಂದ್ರ ಕನ್ನಡ ಕ್ರಿಯಾ ಸಮಿತಿಯು ಹೋರಾಟದ ನೇತೃತ್ವ ವಹಿಸಿತ್ತು.

ಅಭೂತಪೂರ್ವವಾಗಿ ನಡೆದ ಗೋಕಾಕ್ ಚಳವಳಿ ಆಳುವವರು ಬದಲಾಗುವಂತೆ ಮಾಡಿತು. ಆದರೆ ಯಶಸ್ವಿಯಾಯಿತು ಎನ್ನುವಂತಿಲ್ಲ. ಕನ್ನಡ ಏಕೈಕ ಪ್ರಥಮ ಕಲಿಕಾ ಭಾಷೆಯಾಗಲಿಲ್ಲ. ಚಳವಳಿ ಸಂದರ್ಭದಲ್ಲಿ ಅಸ್ತಿತ್ವಕ್ಕೆ ಬಂದ ಡಾ. ಎಂ. ಚಿದಾನಂದಮೂರ್ತಿ ಅವರ ನೇತೃತ್ವದ ಸಾಹಿತಿಗಳ ಕಲಾವಿದರ ಬಳಗ, ನಂತರ ಕನ್ನಡ ಶಕ್ತಿ ಕೇಂದ್ರ ಕನ್ನಡ ಚಳವಳಿಯನ್ನು ಬೇಡಿಕೆಯ ಹಂತದಿಂದ ಹಕ್ಕೊತ್ತಾಯದ ಹಂತಕ್ಕೇರಿಸಿತು. ಹಾಗೇ ಇನ್ನಷ್ಟು ಸಂಘಟನೆಗಳು ಕನ್ನಡ ಚಳವಳಿಯ ಸಾಧ್ಯತೆಯನ್ನು ವಿಸ್ತರಿಸಿದವು. ಕೈಗಾರಿಕಾ, ಕಚೇರಿಗಳಲ್ಲಿ ಕನ್ನಡ ಸಂಘಗಳು ನಡೆಸಿದ ಹೋರಾಟದಿಂದ ಕನ್ನಡಿಗರಿಗೆ ಕೆಲಸ ಸಿಗುವಂತಾಯಿತು ಮತ್ತು ಅಲ್ಲಿ ಕನ್ನಡ ಕಾಣುವಂತಾಯಿತು. ಹೊರಗೆ ನಡೆಯುವ ಕನ್ನಡ ಹೋರಾಟಕ್ಕೂ ಬಲಬಂತು. ನಂತರದ ಚಳವಳಿಗಳಿಂದ ಮಹಿಷಿ ವರದಿ, ಕನ್ನಡ ದೂರದರ್ಶನ, ರೈಲ್ವೆ ನೈರುತ್ಯ ವಲಯ, ಕನ್ನಡ ವಿಶ್ವವಿದ್ಯಾಲಯ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಇತ್ಯಾದಿ ಬಂದವು. ಕಾವೇರಿ ಜಲವಿವಾದದಲ್ಲಿ ಕನ್ನಡ ಸಂಘಟನೆಗಳು ನಿರ್ಣಾಯಕ ಪಾತ್ರ ವಹಿಸಿರುವುದನ್ನು ಯಾರೂ ಅಲ್ಲಗಳೆಯಲಾಗದು. ಕನ್ನಡ ದೂರದರ್ಶನಕ್ಕೆ ಆಗ್ರಹಿಸಿ ಬೆಂಗಳೂರು ದೂರದರ್ಶನ ಕೇಂದ್ರಕ್ಕೆ ಪ್ರವೇಶಿಸಿ ಪ್ರಧಾನಿ



ಇಂದಿರಾ ಗಾಂಧಿ ಭಾಷಣ, ಜನಪ್ರಿಯ ಧಾರಾವಾಹಿ ರಾಮಾಯಣ ನಿಲ್ಲಿಸಿದ್ದು, ದೂರದರ್ಶನ ಮುತ್ತಿಗೆ ಮಹತ್ವದ ಘಟನೆಗಳು. ಇಂದು ಕನ್ನಡ ಚಳವಳಿ ನಿಜ ಅರ್ಥದಲ್ಲಿ 'ಕನ್ನಡ-ಕನ್ನಡಿಗ-ಕರ್ನಾಟಕ'ಗಳ ರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ಕರ್ನಾಟಕದಲ್ಲಿ ಕನ್ನಡ ಕಾಣುತ್ತಿರುವುದು, ಕೇಳುತ್ತಿರುವುದು, ಕನ್ನಡಿಗರಿಗೆ ಸ್ವಲ್ಪಮಟ್ಟಿಗಾದರೂ ಕೆಲಸ ಸಿಗುತ್ತಿರುವುದು ಕನ್ನಡ ಹೋರಾಟದಿಂದಲೇ ಅನ್ನುವುದು ಅಲ್ಲಗಳೆಯಲಾಗದ ಸಂಗತಿ. ಇತ್ತೀಚಿನ ವರ್ಷಗಳಲ್ಲಿ 'ಕರ್ನಾಟಕ ರಕ್ಷಣಾ ವೇದಿಕೆ' ನಡೆಸಿರುವ ಕನ್ನಡ ಕೆಲಸಗಳು ಮರೆಯಲಾಗ ದಂಥವು. “ಕರ್ನಾಟಕ ಸರ್ಕಾರಗಳು ಮಾಡಿರುವ ಎಲ್ಲ ಕನ್ನಡಪರ ಕೆಲಸಗಳ ಹಿಂದೆ ಕನ್ನಡ ಸಂಘಟನೆಗಳ ಒತ್ತಡವಿದೆ' ಎಂದು ರಾಮಕೃಷ್ಣ ಹೆಗಡೆ ಹೇಳಿರುವ ಮಾತೊಂದೇ ಸಾಕು ಕನ್ನಡ ಚಳವಳಿ ಏನು ಮಾಡಿದೆ ಎಂಬುದಕ್ಕೆ ಸಾಮಾಜಿಕ, ಸಾಂಸ್ಕೃತಿಕ ಪಲ್ಲಟಗಳು ಸಂವಹನದ ಇಡೀ ಚಿತ್ರಣವನ್ನೇ ರೂಪಾಂತರ ಗೊಳಿಸುತ್ತಿರುವ ಇಂದಿನ ದಿನಗಳಲ್ಲಿ ಭಾಷಾ ಚಳವಳಿಗಳ ಸ್ವರೂಪಗಳು ಸಹಾ ಪರಿವರ್ತನೆಗೊಳ್ಳ ಬೇಕಾದ ಅನಿವಾರ್ಯತೆಯನ್ನು ಸೃಷ್ಟಿಸಿವೆ. ಚಳವಳಿಯಿಲ್ಲದೇ ಚಲನಶೀಲತೆಯಿಲ್ಲ ಎನ್ನುವುದು ಸಾಮಾಜಿಕ ವ್ಯವಸ್ಥೆಯ ದುರಂತವಾದರೂ ಒಪ್ಪಿಕೊಳ್ಳಲೇಬೇಕಾದ ಸತ್ಯ. ಆಳುವ ವರ್ಗಗಳನ್ನು ಎಚ್ಚೆತ್ತುಕೊಳ್ಳುವ ಹಾಗೆ ಮಾಡಲು ಎಂದಿನಿಂದಲೂ ಚಳವಳಿಗಾರರು ಆಯಾ ಕಾಲಘಟ್ಟಕ್ಕೆ ತಕ್ಕ

ಹೋರಾಟಗಳನ್ನು ರೂಪಿಸಿರುವುದನ್ನು ಚರಿತ್ರೆ ರುಜುವಾತು ಮಾಡಿಯೇ ಇದೆ. ಈ ಜಾಗತೀಕರಣದ ಯುಗದಲ್ಲಿ, ಕ್ಷಣಕ್ಷಣಕ್ಕೂ ಬದಲಾಗುತ್ತಿರುವ ಜೀವನ ವ್ಯವಸ್ಥೆಯ ನಡುವಿನಲ್ಲಿ ಭಾಷೆಯ ಅಸ್ಮಿತೆ ಅಷ್ಟರಮಟ್ಟಿಗಿನ ಪ್ರಾಧಾನ್ಯತೆ ಕಳೆದುಕೊಳ್ಳುತ್ತಿದೆ. ಭಾಷಾ ಹೋರಾಟಕ್ಕೆ ಸಂಘಟನೆ ಎನ್ನುವ ಕಲ್ಪನೆ ಮಂಜಾಗುತ್ತಿದೆ. ಇಂತಹ ಪರೀಕ್ಷಾರ್ಥ ಸಂದರ್ಭಗಳಲ್ಲಿ ಕನ್ನಡ ಚಳವಳಿಗಾರರು ನಿಸ್ವಾರ್ಥ ರೀತಿಯಲ್ಲಿ ಎದ್ದು ನಿಲ್ಲುವುದು ಸಾಮಾನ್ಯ ಮಾತಲ್ಲ. ಭಾಷಾ ಚಳವಳಿಗಳು ಲಯ ಕಂಡುಕೊಳ್ಳುವುದು ಸುಲಭವಲ್ಲ. ಹಾಗೆಂದು ಕನ್ನಡ ಚಳವಳಿಗಳು ನಿಲ್ಲುವ ಹಾಗಿಲ್ಲ. ನೀರಿನ ಹರಿವನ್ನು ಗಟ್ಟಿಗೊಳಿಸುವ, ದಾರಿ ಕಲ್ಪಿಸುವ ದಡದ ಜವಾಬ್ದಾರಿ ಅವುಗಳದ್ದು. ಹಾಗಾಗಿ ದಡ ಗಟ್ಟಿಯಾಗುವ ಅವಕಾಶ ಸೃಷ್ಟಿಸಿಕೊಳ್ಳಬೇಕು. ಇದಾಗಬೇಕೆಂದರೆ ಇಂದಿನ ಚಳವಳಿಗಾರರು ಸಮಗ್ರರಾಗಬೇಕು, ಹೊಸ ತಂತ್ರ ರೂಪಿಸಿ ಹೊಸ ಹಾದಿಯಲ್ಲಿ ನಡೆಯುವ ವಿವೇಕವನ್ನು ಕಂಡುಕೊಳ್ಳಬೇಕಿದೆ.

ಇದಕ್ಕೆ ಹೆಚ್ಚು ಹೆಚ್ಚು ವೈಜ್ಞಾನಿಕ ಆಲೋಚನೆಗಳು ಪೂರಕವಾಗುತ್ತವೆ. ಇಂದಿನ ಚಳವಳಿಗಾರರು ಕೈಯಲ್ಲಿ ಕನ್ನಡದ ಬಾವುಟ, ಮುಖದಲ್ಲಿ ಆಕ್ರೋಶದ ಜೊತೆ- ಜೊತೆಗೆ ಜನರಲ್ಲಿ ಏಳುವ ಹೊಸ ಪ್ರಶ್ನೆಗಳಿಗೆ ಉತ್ತರಿಸುವ ಶಕ್ತಿಯನ್ನು ಹೊಂದಿದವರಾಗಿರಬೇಕಾಗುತ್ತದೆ. ಬೆನ್ನಮೇಲಿನ ಟೀ-ಶರ್ಟುಗಳ ಮೇಲೆ ಕನ್ನಡ ಡಿಂಡಿಮವನ್ನು ಮೊಳಗಿಸುತ್ತಲೇ ಡೆಸ್ಕ್‌ಟಾಪಿನ ಪರದೆಯ ಮೇಲೆ ಕನ್ನಡ ಮಸೂರದ ಮೂಲಕ ಪ್ರೋಗ್ರಾಮಿಂಗ್ ಕೋಡ್‌ಗಳನ್ನು ಬರೆಯುತ್ತಾ, ಜಗತ್ತಿನ ಗಮನ ಸೆಳೆಯುವ ಹುಮ್ಮಸ್ಸನ್ನು ಹೊಂದಿದವನಾಗಿರಬೇಕಾಗುತ್ತದೆ. ಪರಸ್ಪರ ಆಲೋಚನೆಗಳ ವಿನಿಮಯಗಳ

ಮೂಲಕ ಸ್ಪಷ್ಟತೆಯೆಡೆಗೆ ತುಡಿಯಬೇಕಾಗುತ್ತದೆ. ಹಾಗಾದಾಗ ಮಾತ್ರ ಚಲನಶೀಲತೆಯ ಚೌಕಟ್ಟಿನಲ್ಲಿಯೇ ಭಾಷೆ ಗಟ್ಟಿಗೊಳ್ಳಬಲ್ಲದು, ಚಳವಳಿಯ ಆಶಯಗಳಿಗೆ ಸಮರ್ಥ ಫಲಿತಾಂಶ ಸಾಕಾರವಾಗಬಲ್ಲದು.

ಕನ್ನಡ ಸಂಘಟನೆಗಳು ಹೊಸ ಬೆಳವಣಿಗೆಗಳನ್ನು ಸಮರ್ಥವಾಗಿ ಎದುರಿಸಲು ಸಾಂಪ್ರದಾಯಿಕ ಮಾರ್ಗವನ್ನು ಬದಲಿಸಿ, ಹೊಸ ಹಾದಿಯಲ್ಲಿ ಕಾರ್ಯಶೀಲ ವಾಗಬೇಕಿದೆ. ಕನ್ನಡದ ಹಿತರಕ್ಷಣೆ ಕನ್ನಡ ಸಂಘಟನೆಗಳಿಗಷ್ಟೇ ಸೇರಿದ್ದಲ್ಲ; ಅದು ಎಲ್ಲ ಕನ್ನಡಿಗರ ಜವಾಬ್ದಾರಿಯೂ ಹೌದು ಎಂಬುದನ್ನು ಕನ್ನಡಿಗರಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನವು ವ್ಯಾಪಕ ನೆಲೆಯಲ್ಲಿ ನಡೆಯಬೇಕು. ಈ ನಿಟ್ಟಿನಲ್ಲಿ ಕನ್ನಡಪರ ಬದ್ಧತೆಯುಳ್ಳ ಬುದ್ಧಿಜೀವಿಗಳು ಕನ್ನಡ ಕಾರ್ಯಕರ್ತರಿಗೆ ಮಾರ್ಗದರ್ಶನ ಮಾಡುವ ಅಗತ್ಯವಿದೆ. ಪ್ರಮುಖ ಕನ್ನಡ ಸಂಘಟನೆಗಳ ನಾಯಕರು, ತಮ್ಮ ಭಿನ್ನ ಅಭಿಪ್ರಾಯಗಳನ್ನು ಬದಿಗೊತ್ತಿ ಎಲ್ಲ ಕನ್ನಡ ಸಂಘ/ಸಂಸ್ಥೆಗಳು, ಕಾರ್ಯಕರ್ತರನ್ನು ಒಂದೆಡೆ ಸೇರಿಸಿ, ಸಾಮಾನ್ಯ ಅಂಶಗಳನ್ನು ಗುರುತಿಸಿ ಕ್ರಿಯಾಶೀಲರಾದರಷ್ಟೇ ಕನ್ನಡದ ಕೈಬ ತೊಲಗಿ, ಕನ್ನಡಿಗರು ತಲೆಯೆತ್ತಿ ತಿರುಗಲು ಸಾಧ್ಯ. ಇತ್ತ ಎಲ್ಲ ಕನ್ನಡಾಸಕ್ತರು ಗಮನ ನೀಡಲಿ ಎಂಬ ವಿನಮ್ರ ಬಿನ್ನಹದೊಂದಿಗೆ ಮಾತು ಮುಗಿಸುತ್ತಿದ್ದೇನೆ.

ಕನ್ನಡವಿದು ಕನ್ನಡ; ಬನ್ನಿ ನಮ್ಮ ಸಂಗಡ; ಜೈ ಕರ್ನಾಟಕ

## ಕಾರ್ಮಿಕ ಚಳವಳಿಗಳು

### - ಶ್ರೀಮತಿ ವರಲಕ್ಷ್ಮೀ

“ಕೈ ಕೆಸರಾದರೆ ಬಾಯಿ ಮೊಸರು' ಎಂಬ ಜನಪ್ರಿಯ ಗಾದೆ ಮಾತೊಂದಿದೆ. ದುಡಿಮೆಯ ಮಹತ್ವವನ್ನು ಸಾರುವ ಗಾದೆ ಮಾತಿದು. ಆದರೆ ಅಸಮಾನತೆಯೇ ಆಡಿಪಾಯವಾಗಿರುವ ನಮ್ಮ ಈ ಸಾಮಾಜಿಕ ವ್ಯವಸ್ಥೆಯಲ್ಲಿ ನಾವು ಇಂದು 'ಯಾರ ಕೈ ಕೆಸರಾಗುತ್ತಿದೆ.?' ಅದರ ಫಲವಾಗಿ 'ಯಾರ ಬಾಯಿ ಮೊಸರಾಗುತ್ತಿದೆ?' ಎಂದು ಸರಿಯಾಗಿ ನೋಡಬೇಕಿದೆ. ನಮ್ಮ ಸಮಾಜದಲ್ಲಿ 'ದುಡಿಯುವವರು' ಮತ್ತು 'ದುಡಿಸುವವರು' ಎಂಬ ವ್ಯತ್ಯಾಸವು ಢಾಳಾಗಿ ಎದ್ದು ಕಾಣುತ್ತದೆ. ಕೈಕೆಸರು ಮಾಡಿಕೊಂಡು ದುಡಿಯುವವರ ಬಾಯಿ ಮೊಸರಾಗುತ್ತಿಲ್ಲ, ಬದುಕು ಹಸನಾಗುತ್ತಿಲ್ಲ. ಸುಮ್ಮನೆ ಕೂತು ಉಣ್ಣುವ ಧನಿಕ ಧಣಿಗಳು ಮೊಸರು, ತುಪ್ಪ, ಅನ್ನ, ಚಿನ್ನ ಎಲ್ಲ ತಾವೇ ಬಾಚಿಕೊಂಡಿದ್ದಾರೆ.

ನಿಜಕ್ಕೂ ನಮ್ಮ ಸಮಾಜದ ಸರ್ವ ಸಂಪತ್ತನ್ನೂ ಉತ್ಪಾದಿಸುವವರು ಶ್ರಮಿಕರು, ಕಾರ್ಮಿಕರು. ಈ ಜನರಿಗೆ ಗೌರವದ-ಘನತೆಯ, ಸ್ವಾಭಿಮಾನದ ಜೀವನ ನಡೆಸುವ ಅವಕಾಶವೇ ಇಲ್ಲ. ಹಸಿವು, ಬಡತನಗಳು, ಅನಾರೋಗ್ಯಗಳು ಅವರನ್ನು ಕಾಡುವ ಸಂಕಟಗಳಾಗಿವೆ. ಪರರನ್ನು, ಸರಕಾರಗಳನ್ನು ಯಾಚಿಸಬೇಕಾದಂತಹ ಪರಿಸ್ಥಿತಿಯಲ್ಲಿ ಅವರನ್ನು ಇಡಲಾಗಿದೆ. ಈ ಜನರು 'ದುಡಿಯವ ವರ್ಗ' ಅನಿಸಿಕೊಳ್ಳದೆ ಇನ್ನೂ ಕೂಡ ಬಹುತೇಕ ಬಡವರು' ಎಂದು ಕರೆಸಿಕೊಳ್ಳುತ್ತಿದ್ದಾರೆ. ಆಶ್ರಯ, ಅನ್ನಭಾಗ್ಯ ಮುಂತಾದ ಚೂರುಪಾರು ಸೌಕರ್ಯ- ಭಾಗ್ಯಗಳಿಗಾಗಿ ಇನ್ನೂ ಕೈ ಚಾಚಿಕೊಂಡಿರ ಬೇಕಾದ ಪರಿಸ್ಥಿತಿಯಲ್ಲೇ ಅವರನ್ನು ಉಳಿಸಲಾಗಿದೆ. ದುರಂತವೆಂದರೆ ದುಡಿಯುವ ಜನರಿಗೆ ಅವರ ದುಡಿಮೆ ಮತ್ತು ಬೆವರಿಗೆ ತಕ್ಕ ಕನಿಷ್ಟ ಕೂಲಿ ಇಲ್ಲದ ಸಂದರ್ಭದಲ್ಲಿ ಬದುಕಿಗೆ ಕೊಂಚ ಆಸರೆಯಾಗುವ 'ಭಾಗ್ಯ'ಗಳನ್ನು, ತಾತ್ಕಾಲಿಕ ಪರಿಹಾರ ನೀಡುವ “ಯೋಜನೆ'ಗಳನ್ನು ಸಹ ಹೀನಾಯವಾಗಿ ಅವಹೇಳನ ಮಾಡುವ ಕಿಡಿಗೇಡಿತನ ಹೆಚ್ಚುತ್ತಿದೆ. ಕಾರ್ಮಿಕರಿಗೆ ಘನತೆಯ ಜೀವನಕ್ಕೆ ಬೇಕಾದಂತೆ ಕನಿಷ್ಟ ಕೂಲಿಯನ್ನು ಎತ್ತರಿಸುವುದನ್ನು ವಿರೋಧಿಸುವ ಶಕ್ತಿಗಳು ಬಡವರ ಭಾಗ್ಯಗಳನ್ನು ಅವಹೇಳನ ಮಾಡುವುದು ಕುಚೋದ್ಯವಾಗಿದೆ. ಇಂತಹ ಶ್ರಮಜೀವಿಗಳ, ಕಾರ್ಮಿಕರ ಒಡಲ ನೋವುಗಳನ್ನು ಹಲವು ಕವಿಗಳು ಉತ್ತಮ ಕಾವ್ಯವಾಗಿಸಿದ್ದಾರೆ.

ಬೆಟ್ಟಗಳ ಒಡೆದೆವು ಬಂಡೆಗಳ ಹಿಂಡಿದೆವು,

ನಮ್ಮ ರಕ್ತ ಜೆಲ್ಲಿ ಮಾಡಿ ಪ್ರಾಜೆಕ್ಟು ಕಟ್ಟಿದೆವು.

ಸಿರಿಯು ಯಾರಿಗೋ ಶ್ರಮವು ಯಾರಿಗೋ

ಎಂದು ಕವಿ ಸಿದ್ದಲಿಂಗಯ್ಯನವರು ಕೇಳಿದ್ದಾರೆ.



ಕವಿ ರಂಜಾನ್ ದರ್ಗಾ ಅವರು ಕೇಳುತ್ತಾರೆ.

ರಸ್ತೆಗಳೇ ಹೇಳಿ, ನೀವು

ಎಂದಾದರೂ ಹೋಗುವಿರಾ

ನಿಮ್ಮನ್ನು ನಿರ್ಮಿಸಿದವರ

ಗುಡಿಸಲುಗಳ ಕಡೆಗೆ ?

ಇನ್ನು ರಾಜ್ಯದ ವಲಸೆ ಕಾರ್ಮಿಕರ ಬವಣೆಗಳನ್ನು ಮಾತುಗಳಲ್ಲಿ ಬಣ್ಣಿಸುವುದು ಕಷ್ಟ

'ಸ್ಯಾರಿ ಗಂಜಿಗಾಗಿ ಸೇರು ಬೆವರು ಸುರಿಸೂತ

ಊರೂರು ತಿರುಗುವರಾರಯ್ಯ ?'

ಎಂಬ ಪ್ರಶ್ನೆಯೊಂದಿಗೆ ಆರಂಭವಾಗುವ ಕವನವೊಂದು ಇಂತಹ ಕಾರ್ಮಿಕರ ಒಡಲಾಳದ ನೋವುಗಳನ್ನು ಸಾರುತ್ತಾ ಜನರ ನಡುವೆ ಜೀವಂತವಾಗಿ ಈಗಲೂ ಹರಿದಾಡುತ್ತಿದೆ.

'ನಮ್ಮ ಹೊಲದಲಿ ನಗುತ ನಿಂತ ಬೆಳೆ ನಮ್ಮ ಒಡಲಿಗಲ್ಲ

ನಾವು ಕಟ್ಟಿದ ಭವ್ಯ ಮಹಲುಗಳು ನಮ್ಮ ನೆರಳಿಗಲ್ಲ.'

ಎಂಬ ಕವನದ ಸಾಲುಗಳು ಪ್ರಸ್ತುತ ನಮ್ಮ ಸಮಾಜದಲ್ಲಿ ದುಡಿಯವವರ ಬೆವರಿನ ಫಲವನ್ನು ಹೇಗೆ ದೋಚಲಾಗುತ್ತಿದೆ ಎಂದು ಸಾರುತ್ತಿವೆ.

ಮೈಸೂರು, ಬೆಂಗಳೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡ ಮುಂತಾದ ಮಹಾನಗರಗಳಲ್ಲಿ ದೊಡ್ಡ ದೊಡ್ಡ ಬಂಗಲೆ ಕಟ್ಟಡಗಳನ್ನು, ಗಗನಚುಂಬಿ ಅಪಾರ್ಟ್‌ಮೆಂಟ್‌ಗಳನ್ನು, ರಸ್ತೆ ಸೇತುವೆ ಟ್ಯಾಂಕುಗಳನ್ನು ಕಟ್ಟುವ ಕಟ್ಟಡ ಕಾರ್ಮಿಕರಿಗೆ, ಕೂಲಿಕಾರರಿಗೆ ಸಾಮಾಜಿಕ ಭದ್ರತೆ ಎಂಬುದಿಲ್ಲ. ಅವರು ಈ ಮಹಾನಗರಗಳ ನಡುವೆ ಸ್ಲಂಗಳಲ್ಲಿ 'ಗುಲ್ಬರ್ಗಾ ಕಾಲೋನಿ', 'ರಾಯಚೂರು ಕಾಲೋನಿ' 'ಬಿಜಾಪುರ ಕಾಲೋನಿ' ಎಂದು ಕರೆಯುವ

ಗುಡಿಸಲುಗಳಲ್ಲಿ, ಅನಾರೋಗ್ಯದ ಬೀಡಾದ ಕೊಂಪೆಗಳಲ್ಲಿ ಬದುಕಬೇಕಾಗಿದೆ. ಈ ಬಡವರು ವಾಸಿಸುವ ಕೇರಿಗಳಲ್ಲಿ ನೀರಿಲ್ಲ, ಕರೆಂಟಿಲ್ಲ, ಶೌಚಾಲಯವಿಲ್ಲ. ಮಕ್ಕಳಿಗೆ ಶಿಕ್ಷಣದ ಖಾತ್ರಿ ಇಲ್ಲ. ಹೆಣ್ಣುಮಕ್ಕಳ ಪ್ರಾಣ ಮತ್ತು ಮಾನ ಎರಡಕ್ಕೂ ಭದ್ರತೆ ಇಲ್ಲ. ಇಂತಹ ದಾರುಣ ಅವಸ್ಥೆ ಈ ವಲಸಿಗ ಕಾರ್ಮಿಕರದು.

ಪ್ರಖ್ಯಾತ ಹುಬ್ಬಳ್ಳಿ ಮತ್ತಿತರ ಎಪಿಎಂಸಿಗಳಲ್ಲಿ ೩೦-೪೦ ವರ್ಷಗಳಿಂದ ೧೨೦ ಕೆ.ಜಿ. ತೂಕದ ಹಾಸನ ಆಲೂಗಡ್ಡೆ ಚೀಲವನ್ನು, ಸು. ೧೦೦ ಕೆ.ಜಿ.ಯ ಈರುಳ್ಳಿ, ಜೋಳ, ಅಕ್ಕಿ, ಬೇಳೆ ಇತ್ಯಾದಿ ಚೀಲಗಳನ್ನು ಬೆನ್ನ ಮೇಲೆ ಹೊತ್ತೂ ಹೊತ್ತೂ ಲಾರಿಗಳಿಂದ ಗೋದಾಮಿಗೆ, ಗೋದಾಮಿನಿಂದ ಲಾರಿಗೆ ಸಾಗಿಸಿದ ಹಮಾಲಿ ಕಾರ್ಮಿಕರು ಇಂದು ಏನಾಗಿದ್ದಾರೆ? ತಮ್ಮ ಯೌವನದ ದಿನಗಳಲ್ಲಿ ೧೦-೧೨ ಗಂಟೆಗಳ ದುಡಿಮೆಯಲ್ಲಿ ದಿನಕ್ಕೆ ೬೦-೭೦ ಸಾವಿರ ಕೆ.ಜಿ. ಕೆಲವೊಮ್ಮೆ ದಿನಕ್ಕೆ ೧ ಲಕ್ಷ



ಕೆ.ಜಿ.ಗೂ ಹೆಚ್ಚು ತೂಕವನ್ನು ಬೆನ್ನ ಮೇಲೆ ಹೊತ್ತ ಕಾರ್ಮಿಕರು ಇಂದು ಬೆನ್ನು ಮೂಳೆ ಮುರಿತದಿಂದ, ಮೂಳೆ ಸವೆತದಿಂದ, ಮಂಡಿಯ ಕೀಲು ಸವೆತದಿಂದ ಏಳಲೂ ಆಗದೇ, ಕೂರಲೂ ಆಗದೇ, ಮಲಗಲೂ ಆಗದೇ, ನಿಲ್ಲಲೂ ಆಗದೇ, ಚಿಕಿತ್ಸೆಗೂ ಹಣವಿಲ್ಲದೇ ನಗರದ ಸ್ಲಂನಲ್ಲಿ ನರಳುತ್ತಾ ಬದುಕು ದೂಡುತ್ತಿದ್ದಾರೆ. ವೃದ್ಧಾಪ್ಯವೇತನ, ಸಾಮಾಜಿಕ ಸುರಕ್ಷಾ ಯೋಜನೆಗಳು ಯಾವುದರ ಬೆಂಬಲವೂ ಅವರ ಪಾಲಿಗಿಲ್ಲ. ಇಂತಹ ಶ್ರಮಿಕರ ದುಡಿಮೆಯ ಮೇಲೆಯೇ ಇಡೀ ಸಮಾಜದ ಸುಖ ಸಂತೋಷ ನೆಮ್ಮದಿಗಳು ನಿಂತಿವೆ ಎಂಬುದನ್ನು 'ನಾಗರಿಕ ಸಮಾಜ' ಮರೆತಂತಿದೆ.

ಬೆಂಗಳೂರು ಮಹಾನಗರದ ಮೈಸೂರು ರಸ್ತೆಯ ಬಿಡದಿ ಸಮೀಪದಲ್ಲಿರುವ ಅತ್ಯಾಧುನಿಕವಾದ ಪ್ರಸಿದ್ಧ ವಾಹನ ತಯಾರಿಕಾ ಘಟಕದಲ್ಲಿ ಕೆಲಸ ಮಾಡುವ ಎಷ್ಟೋ ಜನ ಯುವ ಕಾರ್ಮಿಕರು ಮಣಬಾರದ ವಾಹನ ಭಾಗಗಳನ್ನು ಸತತವಾಗಿ ಎತ್ತುವುದು, ಇಳಿಸುವುದು ಮುಂತಾದ ಅಪಾರ ಶ್ರಮದ ಕೆಲಸಗಳಲ್ಲಿ ತೊಡಗಿದವರ ಬೆನ್ನಮೂಳೆಯ ಕೆಳಭಾಗದಲ್ಲಿ 'ಡಿಸ್ಕ್‌ಗೆ ಹಾನಿಯಾಗಿ ಸಂಕಟಗಳನ್ನು ಅನುಭವಿಸುತ್ತಿರುವ ಉದಾಹರಣೆಗಳು ಸಾಕಷ್ಟಿವೆ. ಅಸಾಧ್ಯವಾದ ಉತ್ಪಾದನೆಯ 'ಗುರಿ' ಮುಟ್ಟುವ ಆಡಳಿತ ಮಂಡಳಿಯ ಒತ್ತಡಗಳನ್ನು ಸಹಿಸಲಾರದ ಕಾರ್ಮಿಕರು ಸುಮಾರು ಹತ್ತು ವರ್ಷಗಳ ಹಿಂದೆ ಕಾರ್ಮಿಕ ಸಂಘವನ್ನು ರಚಿಸಿಕೊಳ್ಳಲು ಬಯಸಿದಾಗ ಮಾಲೀಕ ವರ್ಗ, ಪ್ರಭುತ್ವ ಎಲ್ಲವೂ ಸೇರಿ ನಾನಾ ತಂತ್ರ ಕುತಂತ್ರಗಳನ್ನು ನಡೆಸಿ ಸಂವಿಧಾನ ಬದ್ಧವಾದ ಸಂಘಟನೆ ರಚಿಸಿಕೊಳ್ಳುವ ಪ್ರಾಥಮಿಕ ಹಕ್ಕನ್ನು ಸಹ ಕೊಡದೆ ಕಾರ್ಮಿಕ ಚಳುವಳಿಯನ್ನು ಹತ್ತಿಕ್ಕಲಾಯಿತು ಎಂಬುದನ್ನು ಈ ಸಂದರ್ಭದಲ್ಲಿ ನೆನೆಸಿಕೊಳ್ಳಬೇಕು. ಇಂತಹ ಕಾರ್ಮಿಕರ ಸಂಕಟಗಳು ಈಗಲೂ ಮುಂದುವರಿದೇ ಇವೆ.

ಭಾವನೆ, ಬದುಕು, ಮನಸ್ಸು, ಕನಸು ಎಲ್ಲವನ್ನೂ ಉಳ್ಳ ಮನುಷ್ಯನಾದ ಕಾರ್ಮಿಕನಿಗಿಂತಲೂ ದುಡಿಸಿಕೊಳ್ಳುವವರಿಗೆ ಯಂತ್ರಗಳೇ ಮುಖ್ಯವಾಗಿವೆ. ನಿರ್ಜೀವ ಯಂತ್ರಗಳಿಗೆ ಇರುವ ಪ್ರಾಮುಖ್ಯತೆಯೂ ಕಾರ್ಮಿಕರಿಗೆ ಇಲ್ಲ. ಗ್ರಾಮೀಣ ಭಾಗಗಳಲ್ಲಿ ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಉದ್ಯೋಗಗಳನ್ನು ಯಂತ್ರಗಳು ಕಸಿದುಕೊಳ್ಳುವುದು ಅಪರೂಪವೇನಲ್ಲ. ಅದೇ ರೀತಿ ಕಾರ್ಖಾನೆಗಳಲ್ಲಿ ಯಂತ್ರಗಳು ಮನುಷ್ಯರ ಕೈಕಾಲುಗಳನ್ನು ಕತ್ತರಿಸುವುದು, ಬೆರಳುಗಳನ್ನು ತುಂಡರಿಸುವುದು, ಉಸಿರನ್ನೇ ಕಿತ್ತುಕೊಳ್ಳುವುದೂ ಇಲ್ಲದೇ ಇಲ್ಲ.

ಕೆಲಸದ ಸ್ಥಳಗಳಲ್ಲಿ ದುಡಿಯುವವರಿಗೆ ಸುರಕ್ಷತೆ ಎಂಬುದಕ್ಕೆ ಬಹಳಷ್ಟು ಕಡೆ ಖಾತ್ರಿ ಇಲ್ಲ. ಅಪಘಾತ, ಅನಾಹುತ ಆದ ಸಂದರ್ಭಗಳಲ್ಲಿ ಸೂಕ್ತ ಪರಿಹಾರವೂ ಇಲ್ಲ.

"ಯಂತ್ರಗಳ ಬಾಯಿಗೆ ಬಲಿಯಾಗಿ ಹೋದಾಗ

ಕೈಕಾಲು ಬೆರಳೂ ಉಳಿಯಲಿಲ್ಲ...



ನಮಗೀ ನೆಲದಲಿ ಬದುಕಿಲ್ಲ..."

ಎಂಬ ಕಾರ್ಮಿಕರ ನೋವಿನ ಹಾಡು ಇದನ್ನೇ ಹೇಳುತ್ತಿದೆ.

ಪೌರ ಕಾರ್ಮಿಕರ ಸಮಸ್ಯೆಗಳನ್ನು 'ಸಭ್ಯ ಸಮಾಜ' ನೋಡಿಯೂ ನೋಡದಂತೆ ಮುಂದೆ ಸಾಗುತ್ತಿರುವುದು ಒಂದು ದುರಂತವಾಗಿದೆ. ಒಳಚರಂಡಿಗಳಲ್ಲಿ ಉಸಿರುಗಟ್ಟಿ ಕಾರ್ಮಿಕರು ಸಾಯುತ್ತಲೇ ಇದ್ದಾರೆ. ಸುರಕ್ಷತಾ ಕ್ರಮಗಳಿಲ್ಲ, ಜಾಗ್ರತಿ ಇಲ್ಲ.

ಗುತ್ತಿಗೆದಾರರ ಮರ್ಜಿಯಲ್ಲಿ ಪೌರ ಕಾರ್ಮಿಕರ ಜೀವಕ್ಕೆ ಹುಳು ಹುಪ್ಪಟೆಗಳ ಜೀವಕ್ಕೆ ಇರುವ ಬೆಲೆಯೂ ಇಲ್ಲ. ಯಂತ್ರೋಪಕರಣಗಳನ್ನು ಬಳಸಿ ಮನುಷ್ಯನ ಘನತೆಯನ್ನು, ಆರೋಗ್ಯವನ್ನು ಕಾಪಾಡಬೇಕಾದ ತುರ್ತು ಅಗತ್ಯ ಈ ಕ್ಷೇತ್ರದಲ್ಲಿದೆ. ನ್ಯಾಯಾಲಯದ ತೀರ್ಪು ಸಹ ಇದೆ. ಆದರೆ ಆಧುನಿಕ ಯಂತ್ರೋಪಕರಣಗಳ ಬಳಕೆ ಈ ಕ್ಷೇತ್ರದಲ್ಲಿ ನಿಕೃಷ್ಟ ಪ್ರಮಾಣದಲ್ಲಿದೆ. ಜೀವಕ್ಕೆ, ಭಾವಕ್ಕೆ ಬೆಲೆಯಿಲ್ಲ. ಮನುಷ್ಯ ಸಮಾಜ ಹೃದಯಹೀನ ಕುರುಡು ಯಂತ್ರದಂತೆ ವರ್ತಿಸುತ್ತಿದೆ.

ತಮ್ಮ ಜೀವವನ್ನು ಒತ್ತೆ ಇಟ್ಟು ಗಣಿಯಾಳಕ್ಕಿಳಿದು ದೇಶಕ್ಕೆ ಚಿನ್ನವನ್ನು ಮೊಗೆದು ಮೊಗೆದು ಕೊಟ್ಟ ಕೋಲಾರ ಚಿನ್ನದ ಗಣಿ ಕಾರ್ಮಿಕರು ಇಂದು ಅನ್ನಕ್ಕಾಗಿ ಪರಿತಪಿಸಬೇಕಾದ ದುರಂತದ ಪರಿಸ್ಥಿತಿ ಇದೆ. ಇಂತಹ ಎಷ್ಟೋ ಕಾರ್ಖಾನೆ ಗಣಿಗಳ ಕಾರ್ಮಿಕರ ಕಣ್ಣೀರಿನ ಕಥೆ ಅದು. ಕೆ.ಜಿ.ಎಫ್. ಒಂದು ಸಂಕೇತ ಅಷ್ಟೆ.

"ಚಿನ್ನವನ್ನು ತೆಗೆಯೋರು,

ಅನ್ನವನ್ನು ಕಾಣದೋರು..

ಭಕ್ತರಪ್ಪ ಭಕ್ತರು.. ನನ್ನ ಜನಗಳು

ಎಂದು ಕವಿ ಹೇಳಿರುವುದಕ್ಕೆ ಈಗ ಹೊಸ ಹೊಸ ಅರ್ಥಗಳು ಸಿಗುತ್ತಿವೆ. ರಾಷ್ಟ್ರವನ್ನು ಆಳುವ ನೀತಿಗಳು ತೀವ್ರವಾಗಿ ಬದಲಾಗುತ್ತಿವೆ. ದುಡಿಯುವ ವರ್ಗಕ್ಕೆ ಸರಕಾರದಿಂದ ದೊರೆಯುವ ಎಲ್ಲ ಸಹಾಯಧನಗಳು, ಸಬ್ಸಿಡಿಗಳ ಮೇಲೆ ವ್ಯವಸ್ಥಿತ ಧಾಳಿಯಾಗುತ್ತಿರುವ ಈ ಹಂತದಲ್ಲಿ ಅಂಗನವಾಡಿ' ವ್ಯವಸ್ಥೆಯೇ ಅಪಾಯಕ್ಕೆ ಸಿಲುಕಿದ್ದು ತಾಯಂದಿರು-ಗರ್ಭಿಣಿಯರಿಗೆ ಪೌಷ್ಟಿಕ ಆಹಾರ ಒದಗಿಸುವ ಅಂಗನವಾಡಿ ಅಕ್ಕಂದಿರು ಮತ್ತು ಅವರ ಕುಟುಂಬದವರು ಸ್ವತಃ ತಾವೇ ರಕ್ತಹೀನತೆ, ಅಪೌಷ್ಟಿಕತೆ ಯಿಂದ ನರಳುವ ಪರಿಸ್ಥಿತಿ ಬರುತ್ತಿದೆ. ಬಿಸಿಯೂಟ ಕಾರ್ಮಿಕರ ಮನೆಯಲ್ಲಿ ಅವರ ಮನೆಮಂದಿಗೆ ತಂಗಳೂಟವೂ ಕಷ್ಟ ಬೇರೆಯವರ ಆರೋಗ್ಯ ಕಾಪಾಡುವ NRHM ಯೋಜನೆಯ ಆಶಾಗಳದು ಕಠೋರ ವಾಸ್ತವ ಪರಿಸ್ಥಿತಿ. ಈ ಎಲ್ಲ ಪ್ರಶ್ನೆಗಳನ್ನು ಕಾರ್ಮಿಕ ಚಳುವಳಿಯು ಕಾಲಕಾಲಕ್ಕೆ ಎತ್ತುತ್ತಾ ಬರುತ್ತಿದೆ. ಎಷ್ಟೇ ತೀವ್ರ ಹೋರಾಟಗಳು ನಡೆದಾಗಲೂ ಕಾರ್ಮಿಕರಿಗೆ ಸಿಕ್ಕಿರುವ ಪರಿಹಾರಗಳು ಅತ್ಯಲ್ಪ.



ಗ್ರಾಮಪಂಚಾಯತ್‌ಗಳಿಗೆ ನೀಡುವ ಅನುದಾನವು ವಿದ್ಯುತ್ ಬಿಲ್ ಕಟ್ಟುವುದಕ್ಕೆ ಮಾತ್ರ ಅಗುತ್ತದೆ ಎಂದಾದರೆ ಪಂಚಾಯತ್ ನೌಕರರು ನಾಲ್ಕಾರು ತಿಂಗಳು ಸಿಗುವ ನಿಕೃಷ್ಟ ವೇತನವೂ ಇಲ್ಲದೇ ನರಳಬೇಕಾಗುತ್ತದೆ. ಅಧಿಕಾರ ವಿಕೇಂದ್ರೀಕರಣ ಗಾಂಧೀ ಕನಸು ಹೀಗೆ ಸೊರಗಿ ಸಾಯುತ್ತಿದೆ. ರಾಜ್ಯದ ಸಂಪನ್ಮೂಲದ ಬಹುಪಾಲು ಕೇಂದ್ರದ ಖಜಾನೆ ಸೇರುತ್ತಿದೆ. ಆದರೆ ಕಾರ್ಮಿಕ ಕಲ್ಯಾಣಕ್ಕೆ, ಜನಪರ ಕೆಲಸಗಳಿಗೆ ಅದು ಮರಳಿ ಬರುವುದಿಲ್ಲ. ಬಹುರಾಷ್ಟ್ರೀಯ ಕಂಪನಿಗಳು, ಬೃಹತ್ ಕಾರ್ಪೋರೇಟ್ ಕಂಪನಿಗಳೇ ಹಿಂದಿನಿಂದ ಸರಕಾರಿ ಯಂತ್ರದ ಸ್ಟೇರಿಂಗ್ ಹಿಡಿದು ದೇಶ ನಡೆಸಲು ನೋಡುತ್ತಿದ್ದಾರೆ.

ಸದ್ಯದ ಸ್ಥಿತಿಯ ಬಗೆಗೆ ಹೇಳುವುದಾದರೆ ಬಂಡವಾಳಶಾಹಿಯ ಲಾಭ ಕೋರತನ, ಕಡುಲೋಭಕ್ಕೆ ಕಡಿವಾಣ ಹಾಕುವ ಶಕ್ತಿಯೇ ಎಲ್ಲಿಯೂ ಕಣ್ಣಿಗೆ ಎದ್ದು ಕಾಣದಂತಾಗಿದೆ.

ಆದರೆ ಆಧುನಿಕ ಕಾಲದ ಸೃಷ್ಟಿಬ್ರಹ್ಮನಾದ ಕಾರ್ಮಿಕ ವರ್ಗಕ್ಕೆ ಅಂಥ ಶಕ್ತಿ ಚೈತನ್ಯ ಇದೆ. ಸದ್ಯದ ಪರಿಸ್ಥಿತಿ ಸಂಘಟಿತ ಕಾರ್ಮಿಕರನ್ನು ಸಹ ಗುಲಾಮಗಿರಿಯ ಸ್ಥಿತಿಗೆ ತಳ್ಳುವಂತೆ ಮಾಡುತ್ತಿದೆ. ಈ ಹಿಂದೆ ಇಂತಹ ಗುಲಾಮಗಿರಿಯ ಪರಿಸ್ಥಿತಿಯು ಕಾರ್ಮಿಕ ಚಳುವಳಿ ಸ್ಫೋಟಕ್ಕೆ, ಸಂಘರ್ಷಕ್ಕೆ, ಸಂಘರ್ಷವು ಸಂಘಟನೆಗೆ, ಸಂಘಟನೆಯು ಚಳವಳಿಗಳಿಗೆ, ಚಳವಳಿಯು ಸಾಹಿತ್ಯ ರಚನೆಗೆ ಪ್ರೇರಣೆಯಾದವು ಎಂಬ ಚರಿತ್ರೆಯೂ ಇದೆ. ಇಂದಿನ ನಮ್ಮ ಪ್ರಸ್ತುತ ಕಾಲಘಟ್ಟಕ್ಕೆ ಸತ್ವಶಾಲಿಯಾದ ಬಲಿಷ್ಠ ಕಾರ್ಮಿಕ ಚಳುವಳಿಯು ಮೈತಾಳಿ ಮೇಲೇಳುವುದು ಅತ್ಯಗತ್ಯವಾಗಿದೆ. ಹೊಸ ಕಾಲದ ಅಗತ್ಯಗಳಿಗೆ ತಕ್ಕಂತೆ ಗರಿಗಟ್ಟಿಕೊಳ್ಳುತ್ತಿರುವ ಕಾರ್ಮಿಕ ಚಳುವಳಿಯ ವೇಗೋತ್ಕರ್ಷಕವಾಗಿ ಜನಪರ ಸಾಹಿತ್ಯ ಮತ್ತು ಸಾಂಸ್ಕೃತಿಕ ಚಳುವಳಿಯು ಕೆಲಸ ಮಾಡಬೇಕಾದ ಮಹತ್ವದ ಘಟ್ಟವಿದು. ಈ ಸಾಹಿತ್ಯ ಸಮ್ಮೇಳನವು ಈ ಕಾರ್ಯಕ್ಕೆ ಪ್ರೇರಣೆ ನೀಡಲಿ, ಹೊಸ ನೋಟಗಳನ್ನು ನೀಡಲಿ, ಒಳನೋಟಗಳನ್ನು ನೀಡಲಿ,

ಹೌದು. ಯಾವುದೇ ಚಳವಳಿಯ ಸೃಜನಶೀಲ ಅಭಿವ್ಯಕ್ತಿಗೆ ಸಾಹಿತ್ಯ ರಚನೆ ಮುಖ್ಯವಾಗುತ್ತದೆ. ಪೀಟ್ ಸೀಗರ್ ಹೇಳಿದ ಹಾಗೆ, ಹೋರಾಟದ ಹಾಡುಗಳು ನಮ್ಮ ಉತ್ಸಾಹವನ್ನು ಕಾಯ್ದಿಡುವ ಬಹುಮುಖ್ಯ ಊರುಗೋಲು. ಇದೇ ಸಂದರ್ಭದಲ್ಲಿ ಕಲ್ಯಾಣದ ಶರಣರ ಅನುಭವ ಮಂಟಪವನ್ನು ಉಲ್ಲೇಖಿಸಬೇಕು. ಇಲ್ಲಿ ವಿವಿಧ ಕಾಯಕಗಳ ದುಡಿಯುವ ಜನ ತಮ್ಮ ದುಡಿಮೆಯ ಅನುಭವಗಳನ್ನೇ ಅನುಭಾವವಾಗಿ ಮಾಡಿಕೊಂಡು ಸಾಮಾಜಿಕ ಕ್ರಾಂತಿಗೆ ಕಾರಣರಾದರು. ಇಲ್ಲಿಯೂ ಮುಖ್ಯ ಪಾತ್ರ ವಹಿಸಿದ್ದು ಸಾಹಿತ್ಯವೇ. ಅದು ವಚನ ಸಾಹಿತ್ಯ.

ವಚನ ಸಾಹಿತ್ಯವು ಮುಖ್ಯವಾಗಿ ತಳಸಮುದಾಯದ ದುಡಿಯುವ ಜನರು ಕಟ್ಟಿದ ಸಾಹಿತ್ಯ ಪ್ರಕಾರವಾಗಿತ್ತು. ಆದರೆ ಈ ಚಳುವಳಿ ಅಂದಿನ ಚಾರಿತ್ರಿಕ ಸಂದರ್ಭ ದಲ್ಲಿ ಸಹಜವಾಗಿಯೇ ಸಾಮಾಜಿಕ ಪ್ರಶ್ನೆಗಳಿಗೆ ವಿಶೇಷ ಪ್ರಾಮುಖ್ಯತೆಯನ್ನು ನೀಡಿದೆ.

ಆದರೂ ಅದು ಆ ಸಮುದಾಯದ ವಿಮುಕ್ತಿಗೆ, ಪ್ರಗತಿಗೆ, ಆತ್ಮಗೌರವಕ್ಕೆ ಬಹುದೊಡ್ಡ ಆಸರೆಯಾಯಿತು. 'ಕಾಯಕವೇ ಕೈಲಾಸ' ಎಂದ ಬಸವಣ್ಣನವರು ದುಡಿಮೆಯ ಮಹತ್ವವನ್ನು ಹೇಳುತ್ತಲೇ ದುಡಿಯುವ ಜನರ ಪ್ರಾಮುಖ್ಯತೆಯನ್ನೂ ಸಾರಿದರು, ಶ್ರಮ ಸಂಸ್ಕೃತಿಯನ್ನು ಎತ್ತಿ ಹಿಡಿದರು. ಆದರೆ ನಂತರದ ದಿನಗಳಲ್ಲಿ ಶ್ರಮ ಸಂಸ್ಕೃತಿ ಕನ್ನಡ ಸಾಹಿತ್ಯದಲ್ಲಿ ಪ್ರಾಶಸ್ತ್ರ ಪಡೆದಿದ್ದು ಬಹಳ ಕಡಿಮೆ. ಹಾಗೆ ರೈತಾಪಿ ಜೀವನದ ಸುತ್ತಮುತ್ತ ಸಾಹಿತ್ಯ ರಚನೆಯಾದರೂ ದುಡಿಯುವ ಜನರ ಕಥನಗಳು ಹಳ್ಳಿಗಳಿಗೇ ಸೀಮಿತವಾಗಿ ಹೋದವು. ಅದು ನಗರದ ಶ್ರಮಿಕ ವರ್ಗದ ಸಂವೇದನೆಗಳನ್ನು, ಕಾರ್ಮಿಕ ವರ್ಗದ ನೋವು ನಲಿವು ಸೊಗಡುಗಳನ್ನು, ಕಂಪನ್ನು ಹೆಚ್ಚಾಗಿ ಒಳಗೊಳ್ಳಲೇ ಇಲ್ಲ.

ಕಾರ್ಮಿಕರ ಬದುಕು ಬವಣೆಗಳನ್ನು ತಕ್ಕಮಟ್ಟಿಗೆ ಪರಿಚಯಿಸುವ ಕಾದಂಬರಿ ಎಂದರೆ ನನಗೆ ನೆನಪಾಗುವುದು ಬಲ್ಲಾಳರ 'ಬಂಡಾಯ'. ಈ ಕಾದಂಬರಿಯು ನಗರ ಸಮಾಜ, ಕಾರ್ಮಿಕ ಚಳವಳಿ, ಅದರ ಬೇರೆ ಬೇರೆ ಸಮಸ್ಯೆಗಳನ್ನು ಪರಿಚಯಿಸುತ್ತದೆ. ಹಾಗಿದ್ದರೂ ಕೂಡ ಅದು ಕೈಗಾರಿಕೆಯೊಂದರ ಒಳಗಿನ ಮತ್ತು ಅದು ರಾಜಕೀಯ ವ್ಯವಸ್ಥೆಯ ಜೊತೆಗೆ ಹೊಂದಿಕೊಂಡಿರುವ ನಂಟನ್ನು ಹೆಚ್ಚು ವಿವರಿಸುವುದಿಲ್ಲ. ಕೈಗಾರಿಕೆಗಳು ಇಂದು ಬಹಳ ದೊಡ್ಡ ಕಾರ್ಯಕ್ಷೇತ್ರವಾದರೂ ಆ ಬಗೆಗಿನ ಸಾಹಿತ್ಯ ಅಷ್ಟಾಗಿ ಸೃಷ್ಟಿಯಾಗುತ್ತಿಲ್ಲ. ಯಾಕೆ ಸೃಷ್ಟಿಯಾಗುತ್ತಿಲ್ಲ ಎಂಬುದರ ಬಗೆಗೆ ಯೋಚಿಸಬೇಕಾದ ಅಗತ್ಯವಿದೆ. ಕೈಗಾರಿಕೆಗಳು ಇಂದು ವ್ಯಾಪಕವಾಗಿ ಸ್ಥಾಪನೆಗೊಂಡು ಕೋಟ್ಯಂತರ ಜನರು ಅವುಗಳನ್ನು ಆಧರಿಸಿ ಜೀವಿಸುತ್ತಿದ್ದರೂ ಆ ಬಗೆಗಿನ ಮತ್ತು ಅವುಗಳೊಳಗಿನ ಜೀವನ ಸಂಘರ್ಷವನ್ನು ಕಟ್ಟಿಕೊಡುವ ಶಕ್ತವಾದ ಸಾಹಿತ್ಯ ಕನ್ನಡದಲ್ಲಿ ಇನ್ನೂ ರೂಪುಗೊಂಡಿಲ್ಲವೆಂದೇ ಹೇಳಬೇಕು.

ಯಾಕೆ ಹೀಗಾಗುತ್ತಿದೆ? ಸಾಹಿತಿಗಳು ಮತ್ತು ಕಾರ್ಮಿಕರ ನಡುವಿನ ಒಡನಾಟದ ಕೊರತೆಯೇ ಇದಕ್ಕೆ ಕಾರಣವೇ? ವ್ಯವಸ್ಥೆಯ ಕರಾಳ ಕ್ರೌರ್ಯವನ್ನು ಕಂಡು ಉಂಡ, ಆಧುನಿಕ ಕಾರ್ಮಿಕ ಜೀವನವನ್ನು ಜೀವಿಸುತ್ತಿರುವ ಕಾರ್ಮಿಕ ಸಮುದಾಯದಿಂದ ಶಕ್ತ ಬರಹಗಾರರು ಹುಟ್ಟಿಕೊಳ್ಳದಿರುವುದು ಕಾರಣವೇ ? ಬರಹಗಾರರು ಬೇಸಾಯ ಮತ್ತಿತರ ಗ್ರಾಮೀಣ ಬದುಕಿನ ವಿವರಗಳಿಗೆ ಕೊಟ್ಟಷ್ಟು ಮಹತ್ವದಿಂದ ಕೈಗಾರಿಕೆ ಮತ್ತು ಕಾರ್ಮಿಕರ ಬದುಕನ್ನು, ನಗರ-ಪಟ್ಟಣಗಳ ಜನ ಜೀವನದ ಒಳಸುಳಿ, ಗಂಧ, ಗಮಲು ಸೆರೆಹಿಡಿಯಲು ಸಾಧ್ಯವಾಗಿಲ್ಲವೇಕೆ ?

ಯಂತ್ರಗಳೊಂದಿಗೆ ದುಡಿದರೂ ಕಾರ್ಮಿಕ ಯಂತ್ರವಲ್ಲ. ಕಾರ್ಮಿಕ ಸಂಘಟನೆಯೊಂದರ ಭಾಗವಾಗಿರುವ ನಾನು ಪ್ರತಿಯೊಬ್ಬ ಕಾರ್ಮಿಕರಲ್ಲೂ ಒಂದೊಂದು ಸತ್ವಶಾಲಿ ಕಥೆಯನ್ನು ಕಂಡಿದ್ದೇನೆ. ಕಾರ್ಮಿಕರು ಪ್ರತಿಭಟನೆಗೆ ಇಳಿಯುತ್ತಾರೆ, ಚಳವಳಿ ಕಟ್ಟುತ್ತಾರೆ ಅಂದರೇನೇ ಅಲ್ಲೊಂದು ಮಹತ್ವದ ಕಥನ ಇದ್ದೇ ಇರುತ್ತದೆ. ಕೇವಲ ಸಾಹಿತ್ಯಕ ದೃಷ್ಟಿಯಿಂದ ಅಲ್ಲ, ಚಾರಿತ್ರಿಕ ದೃಷ್ಟಿಯಿಂದಲೂ ಅದು ಮಹತ್ವದ್ದಾಗಿರುತ್ತದೆ.

ಉದಾಹರಣೆಗೆ, ನಿರಂಜನರು ಕೈಯೂರಿನ ರೈತರು ಭೂಮಿಯ ಹಕ್ಕಿಗಾಗಿ ಆರಂಭಿಸಿದ ಹೋರಾಟದ ಮೂಲಕ ಕ್ರಾಂತಿಯ ಕಿಡಿ ಹೊತ್ತಿಸಿದ ಕಥನವನ್ನು ಕಾದಂಬರಿಯಾಗಿ ಬರೆದರು. ಇಂಥ ಪ್ರಯತ್ನ ಕಾರ್ಮಿಕ ಹೋರಾಟದ ಕುರಿತು ಯಾಕೆ ಮಾಡಬಾರದು? ಮ್ಯಾಕ್ಸಿಂ ಗಾರ್ಕಿ ಕಾರ್ಮಿಕ ಹೋರಾಟದ ಹುಟ್ಟು, ಬೆಳವಣಿಗೆಯನ್ನು 'ತಾಯಿ' ಕಾದಂಬರಿಯಲ್ಲಿ ಅದ್ಭುತವಾಗಿ ತೆರೆದಿಟ್ಟರು. ಇದು ಕನ್ನಡದಲ್ಲಿ ಸಾಧ್ಯವಾಗಲಾರದೇ?

ನಮ್ಮ ರಾಜ್ಯವನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ ೭ ದಶಕಗಳಲ್ಲಿ ಅದೆಷ್ಟು ಕಾರ್ಮಿಕರ ಬೃಹತ್ ಹೋರಾಟಗಳು ನಡೆದಿಲ್ಲ? ಅದೆಷ್ಟು ಸಂಗಾತಿಗಳು ಜೈಲು ಸೇರಿಲ್ಲ? ಪ್ರತಿಭಟನೆಗಳು ಯಶ ಕಂಡಿಲ್ಲ? ಅಂಥ ಪ್ರಕರಣಗಳು, ಚಳವಳಿಗಳು ಬೇಕಾದಷ್ಟಿವೆ. ಕರ್ನಾಟಕ ರಾಜ್ಯ ಅಧಿಕೃತವಾಗಿ ಘೋಷಣೆಯಾಗದಿರುವ ಸಂದರ್ಭದಲ್ಲಿ, ಅಂದರೆ ಸ್ವಾತಂತ್ರ್ಯಪೂರ್ವದಿಂದಲೂ ದುಡಿಯುವ ವರ್ಗ ಅಸ್ತಿತ್ವದಲ್ಲಿದೆ. ಅಂದಿನ ಕಾರ್ಮಿಕ ವರ್ಗ ತಮ್ಮ ಮೇಲಿನ ಶೋಷಣೆಯ ವಿರುದ್ಧ ಮಾತ್ರವಲ್ಲದೆ ಜವಾಬ್ದಾರಿಯುತ ಸರ್ಕಾರಕ್ಕಾಗಿ ಮತ್ತು ಸ್ವಾತಂತ್ರ್ಯಕ್ಕಾಗಿಯೂ ಹೋರಾಟ ನಡೆಸಿತ್ತು. ಅಂದಿನ ಶ್ರಮಿಕರ ಕಥೆಗಳನ್ನು, ಸಂಕಟಗಳನ್ನು ಸ್ವಾತಂತ್ರ್ಯ ಹೋರಾಟ ಕಾಲಘಟ್ಟದಲ್ಲಿ ರಚನೆಗೊಂಡ ಶಿವರಾಮ ಕಾರಂತರ 'ಚೋಮನ ದುಡಿ' ಕಟ್ಟಿಕೊಡುತ್ತದೆ. ಕೃಷಿಕೂಲಿಕಾರರು ಪ್ಲಾಂಟೇಷನ್ ಕೂಲಿಕಾರರಾಗಿ ಪರಿವರ್ತನೆಯಾಗುವುದನ್ನು ಈ ಕೃತಿ ವಿವರಿಸುತ್ತದೆ. ಭೂಮಿ ಇಲ್ಲದ ದಲಿತ ಕೃಷಿ ಕೂಲಿಕಾರನೊಬ್ಬನ ಕುಟುಂಬ ರೈತ ಕುಟುಂಬವಾಗಲು, ಸ್ವಂತದ್ದೆಂಬ ಭೂಮಿಯನ್ನು ಹೊಂದಲು ಹಂಬಲಿಸುವ ಕಥಾನಕ ಮತ್ತು ಅದನ್ನು ನಿರಾಕರಿಸುವ ವ್ಯವಸ್ಥೆಯ ಭೀಕರ ಮುಖ ಕಾದಂಬರಿಯಲ್ಲಿ ಮನೋಜ್ಞವಾಗಿ ಚಿತ್ರಿತವಾಗಿದೆ.

ಇನ್ನು ಸ್ವಾತಂತ್ರ್ಯಾನಂತರದ ಕಾರ್ಮಿಕ ಹೋರಾಟ ಮತ್ತು ಕಾರ್ಮಿಕರು ಹೆಗಲು ನೀಡಿದ ಹೋರಾಟಗಳು ಯಾವುದೆಲ್ಲ ಎಂದು ನೋಡೋಣ.

೧೯೫೬ ರಲ್ಲಿ ನಡೆದ ಕರ್ನಾಟಕ ಏಕೀಕರಣ ಚಳುವಳಿಯಲ್ಲಿಯೂ ಅಂದಿನ ಕಾರ್ಮಿಕ ವರ್ಗ ಮಹತ್ತರ ಪಾತ್ರವನ್ನು ವಹಿಸಿದೆ. ಕರ್ನಾಟಕ ಏಕೀಕರಣ ನಂತರದ ಕಾರ್ಮಿಕ ಚಳುವಳಿಗಳು ಬಹುರಾಷ್ಟ್ರೀಯ ಕಂಪನಿಯಾದ ಮೈಕೋ ಕಾರ್ಮಿಕರು ಕೆಲಸದ ಒತ್ತಡ ಮತ್ತು ಕೆಲಸದ ಭದ್ರತೆಗಾಗಿ ೧೯೭೯-೧೯೮೦ ರ ನಡುವೆ ೮೭ ದಿನಗಳ ಮುಷ್ಕರದಲ್ಲಿ ಗುಂಡುಗಳ ದಾಳಿ ಮತ್ತು ಚೂರಿಯ ಇರಿತಗಳನ್ನು ಎದುರಿಸಿದ್ದಾರೆ.

೧೯೭೯ ಡಿಸೆಂಬರ್‌ನಲ್ಲಿ ಬೆಂಗಳೂರನ್ನು ಬಂದ್ ಮಾಡಲಾಗಿದೆ. ಮತ್ತೊಂದು ಬಹುರಾಷ್ಟ್ರೀಯ ಸಂಸ್ಥೆಯಾದ ಐಟಿಸಿ ಕಾರ್ಮಿಕರ ೧೩೨ ದಿನಗಳ ಮುಷ್ಕರ, ಬೆಳಗಾಂನ ಇಂಡಿಯನ್ ಅಲ್ಯೂಮಿನಿಯಂ ಕಾರ್ಮಿಕರ ೫೪ ದಿನಗಳ ಮುಷ್ಕರ, ಮಿಲ್ ಕಾರ್ಮಿಕರ ೧೧೧ ದಿನಗಳ ಮುಷ್ಕರ, ಬಂದ್ ಮತ್ತು ಸರಿಸಾಟಿ ದಾಂಡೇಲಿ

ಬಂದ್, ಪ್ಲಾಂಟೇಶನ್ ೬೦ ದಿನಗಳ ಮುಷ್ಕರ, ಮಂಗಳೂರು ಕುಂದಾಪುರದ ಹೆಂಚಿನ ಕಾರ್ಮಿಕರ ಹೋರಾಟಗಳು, ಗುಲ್ಬರ್ಗಾ ಎಮ್.ಎಸ್.ಕೆ. ಮಿಲ್, ದಾವಣೆಗೆರೆ, ಮೈಸೂರು, ಬೆಂಗಳೂರು ಮಿಲ್‌ಗಳ ಕಾರ್ಮಿಕರು ರಜೆ, ತುಟ್ಟಿಭತ್ಯೆ ಮತ್ತು ಮೂಲವೇತನದಲ್ಲಿ ಹೆಚ್ಚಳವಾಗಬೇಕೆಂದು ೨೬೦೦೦ ಗಿರಣಿ ಕಾರ್ಮಿಕರ ಮೊದಲ ಮುಷ್ಕರ, ಕಾಫಿ ಕ್ಯೂರಿಂಗ್, ಏಲಕ್ಕಿ, ಅಡಿಕೆ, ಗೇರುಬೀಜ ಕಾರ್ಮಿಕರ ಹೋರಾಟಗಳು; ಬೀಡಿ ಕಾರ್ಮಿಕರು ದಿನಕ್ಕೆ ೮ ರೂ ವೇತನ ಹೆಚ್ಚಳ, ಪಿಎಫ್‌ಗಾಗಿ ೧೯೮೦ ಸೆಪ್ಟೆಂಬರ್‌ನಲ್ಲಿ ಮೊದಲ ಬಾರಿಗೆ ೪೦ ಸಾವಿರ ಬೀಡಿ ಮಹಿಳೆಯರ ಪ್ರತಿಭಟನೆ ಹಾಗೂ ೧೯೮೦ ಡಿಸೆಂಬರ್‌ನಲ್ಲಿ ೩ ಲಕ್ಷ ಬೀಡಿ ಕಾರ್ಮಿಕರು ಮುಷ್ಕರದಲ್ಲಿ ಪಾಲ್ಗೊಂಡಿದ್ದರು.

ಹೋಟೆಲ್ ಕಾರ್ಮಿಕರ ೧೯೭೯ ಮೇ ೧ ರಂದು ೮ ಗಂಟೆ ಕೆಲಸಕ್ಕಾಗಿ ೧ ದಿನದ ಮುಷ್ಕರ, ಪೌರ ಕಾರ್ಮಿಕರು ೧೯೭೯ ಮೇ ನಲ್ಲಿ ಮೊದಲ ಉಪವಾಸ ಸತ್ಯಾಗ್ರಹ, ೧೯೮೦ ರ ನವಂಬರ್‌ನಲ್ಲಿ ಹಟ್ಟಿ ಮತ್ತು ಕೆಜಿಎಫ್ ಚಿನ್ನದ ಗಣಿಗಳ ಕಾರ್ಮಿಕರು ಒಂದು ದಿನದ ಮುಷ್ಕರಗಳನ್ನು ನಡೆಸಿದ್ದಾರೆ. ೧೯೮೦ರಲ್ಲಿ ಗುಂಡೂರಾವ್ ಸರ್ಕಾರದ ಅಗತ್ಯ ಸೇವಾ ನಿರ್ವಹಣೆಯ ಮಸೂದೆ ವಿರುದ್ಧ ಸಾರ್ವತ್ರಿಕ ಮುಷ್ಕರ ಆಗಸ್ಟ್ ೧೮ ರಂದು ನಡೆಯಿತು.

೧೯೮೦ ಡಿಸೆಂಬರ್‌ನಿಂದ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಐತಿಹಾಸಿಕ ಹೋರಾಟದಲ್ಲಿ ರಾಜ್ಯದಲ್ಲಿ ೭೮,೦೦೦ ಕಾರ್ಮಿಕರ ಮುಷ್ಕರಗಳು, ಬಿರ್ಲಾರವರ ಹರಿಹರ ಪಾಲಿಫೈಬರ್, ಗ್ವಾಲಿಯರ್, ರಿಲೆಯನ್ಸ್, ಕಿರ್ಲೋಸ್ಕರ ಸಂಸ್ಥೆ, ಮಹೇಂದ್ರ ಮೆಷನರಿ, ಎಸ್ಕಾರ್ಟ್ ಕಾರ್ಖಾನೆಗಳ ಕಾರ್ಮಿಕರು ಕನಿಷ್ಟ ವೇತನ, ಕೆಲಸದ ಭದ್ರತೆಗಾಗಿ ಮುಂತಾದ ಕಾರ್ಮಿಕ ವಿರೋಧಿ ನೀತಿಗಳಲ್ಲದೆ ಬೆಲೆಯೇರಿಕೆ, ಬಡತನ, ನಿರುದ್ಯೋಗ ಮುಂತಾದ ಬೇಡಿಕೆಗಳಿಗಾಗಿ ಅಂದಿನಿಂದ ಇಂದಿನ ಉದಾರೀಕರಣ ನೀತಿಗಳಿಂದಾಗುತ್ತಿರುವ ಪರಿಣಾಮಗಳ ವಿರುದ್ಧವೂ ಹೋರಾಟಗಳನ್ನು ಹಲವು ಸ್ವರೂಪಗಳಲ್ಲಿ ನಡೆಸಿಕೊಂಡು ಬರುತ್ತಿದ್ದಾರೆ.

ಇನ್ನು, ಕಾರ್ಮಿಕ ಹೋರಾಟಗಳ ಮೂರನೇ ಹಂತ, ಜಾಗತೀಕರಣದ ನಂತರದ್ದು. ಉದಾರೀಕರಣ, ಜಾಗತೀಕರಣ ಮತ್ತು ಹೊಸ ಆರ್ಥಿಕ ನೀತಿಗಳು ಜಗತ್ತನ್ನು ಒಂದು 'ವಿಶ್ವಗ್ರಾಮ'ವನ್ನಾಗಿ ಮಾಡಲು ಹೊರಟವು. ೨ನೇ ಜಾಗತಿಕ ಯುದ್ಧದ ಪರಿಣಾಮ "ಸೂರ ಮುಳುಗದ ಸಾಮ್ರಾಜ್ಯ" ದಲ್ಲಿ ಸೂರ ಮುಳುಗಿದ. ಪರೋಕ್ಷವಾಗಿ ದೊಡ್ಡಣ್ಣ ಅಮೆರಿಕಾ ಜಗತ್ತಿನ ಮೇಲೆ ತನ್ನ ಹಿಡಿತವನ್ನು ಸಾಧಿಸಲಿಕ್ಕಾಗಿ ಮಾಡಿಕೊಂಡ ವ್ಯವಸ್ಥೆಯೇ ವಿಶ್ವ ಬ್ಯಾಂಕ್, ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆ, ಅಮೆರಿಕಾ, ಫ್ರಾನ್ಸ್, ಜರ್ಮನಿ, ಇಟಲಿ, ಜಪಾನ್, ಇಂಗ್ಲೆಂಡ್, ಕೆನಡಾ ಮತ್ತು ರಷ್ಯಾಗಳು ಸೇರಿ ಕೈಗಾರಿಕಾ ರಾಷ್ಟ್ರಗಳ ಒಂದು ಒಕ್ಕೂಟವನ್ನು ರಚಿಸಿಕೊಂಡವು. ಇದರಿಂದ ಜಗತ್ತಿನ ಶ್ರೀಮಂತ ರಾಷ್ಟ್ರಗಳು

ಮತ್ತಷ್ಟು ಶ್ರೀಮಂತವಾದರೆ, ಬಡರಾಷ್ಟ್ರಗಳು ಚೇತರಿಸಿಕೊಳ್ಳಲಾರದೆ ಹೋದವು. ಇದರ ನೇರ ಹೊಡೆತ ಬಿದ್ದಿದ್ದು ಕಾರ್ಮಿಕರ ಮೇಲೆ.

ಜಾಗತೀಕರಣದಿಂದ ಅಂತರರಾಷ್ಟ್ರೀಯ ಶ್ರಮ ಮಾರುಕಟ್ಟೆ ಅಂತರರಾಷ್ಟ್ರೀಯ ಮಾರುಕಟ್ಟೆಯೊಂದಿಗೆ ಸೇರಿಹೋಯಿತು. ಬಹುರಾಷ್ಟ್ರೀಯ ಕಂಪನಿಗಳು ಸಣ್ಣ ಸಣ್ಣ ಕಂಪನಿಗಳನ್ನು ಒಂದೊಂದಾಗಿ ನುಂಗುತ್ತಿವೆ. ಇದರ ಭಯಾನಕ ಪರಿಣಾಮವನ್ನು ವಿಶ್ವದ ಕಾರ್ಮಿಕರು ಎದುರಿಸಬೇಕಾಗಿದೆ.

ಉದಾರೀಕರಣದ ನಂತರದ ಸಂದರ್ಭದಲ್ಲಿ ಹೊರಹೊಮ್ಮಿದ ದೃಢವಲ್ಲದ ಉದ್ಯೋಗ ವಿನ್ಯಾಸದ ಬೇರುಗಳು ನವ ಉದಾರೀಕರಣದ ನೀತಿಗಳನ್ನು ನಿಯಂತ್ರಿಸುವ ಮತ್ತು ಪ್ರಭಾವಿಸುವ ಮೂಲಕ ಹಿಡಿತಕ್ಕೆ ತೆಗೆದುಕೊಂಡವು. ಇದರಿಂದ ಭಾರತದಲ್ಲಿನ ಉದ್ಯೋಗ ಸಂಬಂಧಗಳ ಸಾಂಪ್ರದಾಯಿಕ, ದೃಗ್ಗೋಚರ, ಸುರಕ್ಷಿತ ಸಂಬಂಧಗಳು ಇವುಗಳ ಬದಲಿಗೆ ಅನಿಶ್ಚಿತ, ಅನೌಪಚಾರಿಕ, ಪರಾಧೀನ, ಕಾಣದ ಮತ್ತು ಸ್ಥಿರವಲ್ಲದ ಉದ್ಯೋಗ ಸಂಬಂಧಗಳಿಗೆ ದಾರಿ ಮಾಡಿಕೊಟ್ಟವು.

ಈ ಎಲ್ಲದರ ಪರಿಣಾಮವಾಗಿ ಭಾರತದಲ್ಲಿ ೧೯೮೦ ರಲ್ಲಿ ಕೈಗಾರಿಕಾ ಉತ್ಪನ್ನದ ಒಟ್ಟು ಮೌಲ್ಯದಲ್ಲಿ ಕಾರ್ಮಿಕರ ವೇತನದ ಪಾಲು ೩೦% ಇದ್ದದ್ದು ಈಗ ೯.೫ ಕ್ಕೆ ಇಳಿದಿದೆ. ಅದೇ ಸಮಯದಲ್ಲಿ ಮಾಲೀಕರ ಲಾಭವು ೧೫% ರಿಂದ ೫೫% ಕ್ಕೆ ಹೆಚ್ಚಾಗಿದೆ. ರಾಜ್ಯ, ದೇಶ ಮತ್ತು ವಿದೇಶಗಳ ಬಂಡವಾಳಶಾಹಿ ವರ್ಗಗಳು ಕಾರ್ಮಿಕ ಕಾನೂನುಗಳಲ್ಲಿ ಪ್ರಜಾಪ್ರಭುತ್ವ ವಿರೋಧಿ ನಿರಂಕುಶ, ಉಪದ್ರವಕಾರಿ ಬದಲಾವಣೆಗಾಗಿ ಬೇಡಿಕೆ ಇಡುತ್ತಿವೆ. ಇದಕ್ಕೆ ತಕ್ಕ ಹಾಗೆ ಪ್ರಭುತ್ವಗಳು ಸುಧಾರಣೆಯ ಹೆಸರಿನಲ್ಲಿ ಕಾರ್ಮಿಕರನ್ನು ಮತ್ತೊಮ್ಮೆ ಗುಲಾಮರಾಗಿಸುವ ತಿದ್ದುಪಡಿಗಳನ್ನು ತರುವ ಉತ್ಸಾಹ ತೋರುತ್ತಿವೆ.

ದೇಶದ ಪ್ರಥಮ ಕಾರ್ಮಿಕ ಸಚಿವರಾಗಿದ್ದ ಡಾ.ಬಿ.ಆರ್.ಅಂಬೇಡ್ಕರ್‌ರವರು ಕಾರ್ಮಿಕರಿಗಾಗಿ ತಂದಿದ್ದ ಕಾನೂನುಗಳನ್ನು ಸಂಪೂರ್ಣವಾಗಿ ವಿಫಲಗೊಳಿಸುವ ವ್ಯವಸ್ಥಿತ ಹುನ್ನಾರದ ಭಾಗವಾಗಿ ಪ್ರಸ್ತುತ ಕಾರ್ಮಿಕ ಕಾನೂನುಗಳನ್ನು ಸುಧಾರಿಸುವ ಹೆಸರಿನಲ್ಲಿ ಕಾರ್ಮಿಕರ ಹಕ್ಕುಗಳನ್ನು ಸಂಪೂರ್ಣವಾಗಿ ಕಸಿದುಕೊಳ್ಳುವ ಕೆಲಸ ನಡೆಯುತ್ತಿದೆ.

ಈಗಾಗಲೇ ಟ್ರೇಡ್ ಯೂನಿಯನ್ ಹಕ್ಕುಗಳು, ಕಾರ್ಮಿಕರ ಕಾನೂನುಗಳ ಉಲ್ಲಂಘನೆ ಸತತವಾಗಿ ಹೆಚ್ಚಾಗುತ್ತಿದೆ. ಖಾಸಗಿ ವಲಯದ ಉದ್ಯಮಗಳು ಬಹು ರಾಷ್ಟ್ರೀಯ ಕಂಪನಿಗಳಲ್ಲಿ ಟ್ರೇಡ್ ಯೂನಿಯನ್ ಚಟುವಟಿಕೆಗಳ ಮೇಲೆ ಭಯಾನಕ ಹಲ್ಲೆಗಳು ಅಂದರೆ ಕೆಲಸದಿಂದ ತೆಗೆಯುವುದು, ಲೇ ಆಫ್, ಕಾರ್ಖಾನೆಗಳ ಸ್ಥಳಾಂತರ, ಗೂಂಡಾಗಳ ಉಪಯೋಗ, ಪೋಲಿಸ್ ಕೇಸ್‌ಗಳು, ನಾನ್ ಬೇಲಬಲ್ (ಜಾಮೀನು ರಹಿತ) ಕೇಸುಗಳು, ಲಾಠಿಚಾರ್ಜ್, ಗೋಲಿಬಾರ್ ಮುಂತಾದವು ಸಾಮಾನ್ಯವಾಗಿದೆ.

೧೨ ಗಂಟೆಯ ದುಡಿಮೆ, ಕೆಲಸದ ಭದ್ರತೆಯಿಲ್ಲದಿರುವುದು, ನಿರಂತರ ಮತ್ತು ಖಾಯಂ ಕೆಲಸಗಳಿಗೆ ಗುತ್ತಿಗೆ, ಹೊರಗುತ್ತಿಗೆ ಕೊಡುವುದು, ಕೌಶಲ್ಯ ಭರಿತ ಕೆಲಸಗಳನ್ನು ಗುತ್ತಿಗೆಯಲ್ಲಿ ಮಾಡಿಸುವುದು, ಮಹಿಳೆಯರಿಗೆ ಹೆರಿಗೆ ಭತ್ಯೆ ನಿರಾಕರಣೆ, ದುಡಿಮೆಯ ಸ್ಥಳಗಳಲ್ಲಿ ಶಿಶುಪಾಲನಾ ಕೇಂದ್ರಗಳು ಇಲ್ಲದಿರುವುದು, ಸಮಾನ ಕೆಲಸಕ್ಕೆ ಸಮಾನವೇತನ ನೀಡದಿರುವುದು, ಸಾಮಾಜಿಕ ಭದ್ರತೆಯ ಭಾಗವಾಗಿ ನಿವೃತ್ತಿ ವೇತನ, ಆರೋಗ್ಯ ಸೌಕರ್ಯವಾದ ಇಎಸ್‌ಐಗಳನ್ನು ಕೊಡದಿರುವುದು, ಪರಿಹಾರಗಳನ್ನು ನೀಡದೇ ಕೆಲಸದ ನಿರಾಕರಣೆ ಹೆಚ್ಚುತ್ತಿದೆ.

ಇಂತಹ ಸಂಧರ್ಭದಲ್ಲಿ ಕಾರ್ಮಿಕರು ಈಗಾಗಲೇ ಇರುವ ಕಾನೂನುಗಳನ್ನು ಕಾರ್ಮಿಕರ ಸಂಘಗಳ ಮುಖಾಂತರ ಬಳಸಿ ಅಲ್ಪ ಸ್ವಲ್ಪ ಪರಿಹಾರಗಳನ್ನು ನಿರಂತರ ಹೋರಾಟಗಳ ಮುಖಾಂತರ ಪಡೆಯುತ್ತಿದ್ದಾರೆ. ಕರ್ನಾಟಕದಲ್ಲಿ ೨ ಕೋಟಿ ೭೮ ಲಕ್ಷಕ್ಕಿಂತಲೂ ಹೆಚ್ಚು ದುಡಿಯುವ ಜನರಿದ್ದಾರೆ. ರಾಜ್ಯದ ಆಂತರಿಕ ಉತ್ಪನ್ನ ೨೦೧೫- ೧೬ರಲ್ಲಿ ೭ ಲಕ್ಷದ ೮೦ ಸಾವಿರದ ೮೦೫ ಕೋಟಿಗೇರಿದೆ.

ರಾಜ್ಯದಲ್ಲಿ ೧೫,೯೦೩ ನೋಂದಾಯಿತ ಕಾರ್ಖಾನೆಗಳು, ೨೮,೭೪೩ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿವೆ. ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಡಿ ೪ ಲಕ್ಷ ೮೦ ಸಾವಿರ ಸಂಸ್ಥೆಗಳು, ೧,೦೫೩ ಘನ ಮತ್ತು ಮಧ್ಯಮ ಕೈಗಾರಿಕೆಗಳಿವೆ. ಲಕ್ಷಾಂತರ ಸೀಂ ನೌಕರರು, ೪೩.೭% ಸ್ವಯಂ ಉದ್ಯೋಗಸ್ಥರಿದ್ದಾರೆ. ರಾಜ್ಯದಲ್ಲಿ ಕೂಡಾ ಇದುವರೆಗೆ ವಿವರಿಸಿದ ಪರಿಸ್ಥಿತಿಯೇ ಇದೆ. ಹಾಗೆಂದು ಕಾರ್ಮಿಕರೇನೂ ಕೈಕಟ್ಟಿ ಕುಳಿತಿಲ್ಲ. ಬಹುಶಃ ಜಗತ್ತಿನಲ್ಲೇ ತಮ್ಮ ಹಕ್ಕುಗಳಿಗಾಗಿ ದನಿಯೆತ್ತಿ ಹೋರಾಡುವ ವರ್ಗ ಕಾರ್ಮಿಕ ವರ್ಗ.

**ಭಾರತ, ನಮ್ಮ ಕರ್ನಾಟಕವೇನೂ ಇದಕ್ಕೆ ಹೊರತಾಗಿಲ್ಲ.**

ಕರ್ನಾಟಕದ ಗಮನ ಮಾತ್ರವಲ್ಲ ದೇಶದ ಗಮನವನ್ನು ಸೆಳೆದ ಇತ್ತೀಚಿನ ದಿನಗಳಲ್ಲಿ ನಡೆದ ಕಾರ್ಮಿಕರ ಹೋರಾಟ ಅಂದರೆ ಅದು ಅಂಗನವಾಡಿ ತಾಯಂದಿರ ಹೋರಾಟ, ಸಾವಿರಾರು ಜನ ಅಂಗನವಾಡಿ ಕಾರ್ಯಕರ್ತರು ೪-೫ ದಿನಗಳ ಕಾಲ ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಅಂತಿಮವಾಗಿ ತಮ್ಮ ಬಳಿ ಇರುವ ಪ್ರತಿಭಟನೆಯ ಅಸ್ತ್ರವನ್ನು ಬಳಸಿದರು. ಹಗಲು ಇರುಳೆನ್ನದೆ, ಬಿಸಿಲು ಧೂಳೆನ್ನದೆ, ರಾಜಧಾನಿಯ ರಸ್ತೆಯ ಮೇಲೆ ಕುಳಿತ ಅವರ ಗೋಳು ಕೇಳುವವರಿರಲಿಲ್ಲ. ಅಂದು ಅವರು ಮಾಡಿದ ತೀರ್ಮಾನ 'ನಾವು ನಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವವರೆಗೂ ಇಲ್ಲಿಂದ ಕದಲುವುದಿಲ್ಲ. ಅವರ ಆ ದೃಢ ವಿಶ್ವಾಸವೇ ಅಂತಿಮವಾಗಿ ರಾಜ್ಯದ ಜನಸಾಮಾನ್ಯರ ಗಮನವನ್ನು ಇತ್ತಕಡೆ ತಿರುಗಿಸಿ ಸರ್ಕಾರ ಬೇಡಿಕೆಗಳನ್ನು ಈಡೇರಿಸುವಂತಾಯಿತು.

ಈ ಹಿಂದೆ ಇದೇ ಬೆಂಗಳೂರಿನಲ್ಲೇ ಗಾರ್ಮೆಂಟ್ಸ್ ಹೆಣ್ಣುಮಕ್ಕಳ ಹೋರಾಟ ಭವಿಷ್ಯ ನಿಧಿ ಕಡಿತದ ವಿಚಾರವಾಗಿ ನಡೆದು ಕೇಂದ್ರ ಸರ್ಕಾರದ ತೀರ್ಮಾನವನ್ನೇ ವಾಪಸ್ ಪಡೆಯುವಂತೆ ಮಾಡಿತ್ತು. ಆದರೂ ಈ ಹೋರಾಟಕ್ಕೂ ಅಂಗನವಾಡಿ ನೌಕರರ ಸುಸಂಘಟಿತ ಹೋರಾಟಕ್ಕೂ ಸಾಕಷ್ಟು ವ್ಯತ್ಯಾಸಗಳಿರುವುದನ್ನು ನಾವು ಗಮನಿಸಬೇಕಿದೆ.

ಒಟ್ಟಾರೆಯಾಗಿ ಎಲ್ಲವನ್ನೂ ಸೃಷ್ಟಿ ಮಾಡುವ ಕಾಮಿಕ ವರ್ಗ ಇಂದು ತನ್ನ ಹಕ್ಕುಗಳಿಗಾಗಿ ಬೀದಿಗಿಳಿಯುವ ಸಂದರ್ಭ ಎದುರಾಗಿದೆ. ಎಲ್ಲಿಯವರೆಗೂ ಈ ನಾಗರಿಕ ಸಮಾಜ ಮತ್ತು ಜವಾಬ್ದಾರಿಯುತ ಸರ್ಕಾರಗಳು ದುಡಿಯುವ ವರ್ಗಕ್ಕೆ ಅವರ ಶ್ರಮದ ಪಾಲನ್ನು ನೀಡುವುದಿಲ್ಲವೋ ಅಲ್ಲಿಯವರೆಗೂ ಕಾರ್ಮಿಕ ಚಳುವಳಿಗಳು ತೀವ್ರಗೊಳ್ಳುತ್ತವೆ. ಆ ಮೂಲಕ ತಮ್ಮ ಹಕ್ಕುಗಳನ್ನು ಪ್ರತಿಪಾದಿಸುವ ಮತ್ತು ಉಳಿಸಿಕೊಳ್ಳುವ ಕೆಲಸಕ್ಕೆ ಮುಂದಾಗುತ್ತವೆ.

ರಾಷ್ಟ್ರಕವಿ ಕುವೆಂಪುರವರ ಆಶಯದಂತೆ ಸರ್ವರಿಗೂ ಸಮ ಬಾಳು, ಸರ್ವರಿಗೂ ಸಮ ಸಮಪಾಲು' ಎಂಬ ವ್ಯವಸ್ಥೆ ನಿರ್ಮಾಣವಾದಾಗ ಮಾತ್ರ ಶ್ರಮ ಸಂಸ್ಕೃತಿಯನ್ನು ಗೌರವಿಸುವ ವಾತಾವರಣ ನಿರ್ಮಾಣವಾಗುತ್ತದೆ. ಇಲ್ಲದಿದ್ದರೆ ಸಮಾಜದ ಕಟ್ಟಕಡೆಯ ಸ್ಥಾನದಲ್ಲಿ ದುಡಿವ ವರ್ಗ ನಿಲ್ಲಬೇಕಾದ ಪರಿಸ್ಥಿತಿ ಇಂದಿನ ಬಂಡವಾಳಶಾಹಿ ವರ್ಗದಲ್ಲಿ ಉದ್ಭವವಾಗಿದೆ. ಇಲ್ಲಿ ಲಾಭವೇ ಮುಖ್ಯ ಉದ್ದೇಶವಾಗಿರುವುದರಿಂದ ಶ್ರಮಜೀವಿಗಳ ರಕ್ತ ಬಸಿದಾದರೂ ಲಾಭ ಮಾಡುವುದೇ ಗುರಿಯಾಗಿದೆ. ಅದಕ್ಕಾಗಿಯೇ ಇಂತಹ ಶೋಷಣಾ ವ್ಯವಸ್ಥೆಯ ವಿರುದ್ಧ ಕಾರ್ಮಿಕ ವರ್ಗದಲ್ಲಿ ಎಲ್ಲ ಶ್ರಮಜೀವಿಗಳು ಸಂಘಟಿತರಾಗುತ್ತಾರೆ. ಆ ಮೂಲಕ ಒಂದು ಹೊಸ ಬದಲಾವಣೆಗೆ ನಾಂದಿ ಹಾಡುತ್ತಾರೆ. ಇಲ್ಲಿಗೆ ಸರಿಯಾಗಿ ನೂರು ವರ್ಷಗಳ ಹಿಂದೆ ರಷ್ಯಾದಲ್ಲಿ ಕಾರ್ಮಿಕ ವರ್ಗದ ನೇತೃತ್ವದಲ್ಲಿ ಸಮಾಜವಾದಿ ಕ್ರಾಂತಿ ನಡೆದು ಕಷ್ಟಪಟ್ಟು ಬೆವರು ಸುರಿಸಿ ದುಡಿಯುವ ಜನರು ದೇಶದ ಅಧಿಕಾರದ ಚುಕ್ಕಾಣಿಯನ್ನು ಹಿಡಿದು ಜಗತ್ತಿಗೆ ಮಾದರಿಯಾದಂತೆ ಜೀವಪರವಾದ, ಮಾನವೀಯವಾದ, ಸಮಗ್ರ ಸಮಾಜದ ಪರವಾದ ಸಮಾಜವಾದಿ ವ್ಯವಸ್ಥೆಯನ್ನು ಸತತ ೭೪ ವರ್ಷಗಳ ಕಾಲ ನಡೆಸಿದ್ದಾರೆ. ಇದರಿಂದ ಕಾರ್ಮಿಕ ವರ್ಗವು ಸಮಾಜದ ಸಮಗ್ರ ಪ್ರಗತಿಯ ಚುಕ್ಕಾಣಿ ಹಿಡಿಯುವ, ಮನುಕುಲ ಇಲ್ಲಿಯವರೆಗೂ ಸಾಧಿಸಲಾಗದ ಶ್ರೇಷ್ಠ ನಾಗರಿಕತೆಯ ಘಟ್ಟವನ್ನು ಏರುವ, ಮನುಕುಲದ ಮುನ್ನಡೆಯನ್ನು ಸಾಧಿಸುವ ಸಾಮರ್ಥ್ಯ ಹೊಂದಿದೆ ಎನ್ನುವುದು ಅರ್ಥವಾಗುತ್ತದೆ.

ಸಮಾಜದಲ್ಲಿ ಅತಿ ದೊಡ್ಡ ಪ್ರಮಾಣದಲ್ಲಿರುವುದು ಕಾರ್ಮಿಕ ವರ್ಗ. ಈ ವರ್ಗದ ಹೋರಾಟ ಕಥನಗಳನ್ನು ಅರಿಯುವುದು ಎಂದರೆ ಸಮಾಜವನ್ನು ಅರಿಯುವುದು, ಬದುಕನ್ನು ಅರಿಯುವುದು ಎಂದೇ ಆಗಿದೆ. ಈವರೆಗೆ ಅಲ್ಲಲ್ಲಿ ಚದುರಿದ ಚಿತ್ರಗಳಂತೆ

ಹೇಳಲಾಗಿರುವ ಕಾರ್ಮಿಕ ಹೋರಾಟದ ಕಥನಗಳು ಸಶಕ್ತ ಸಾಹಿತ್ಯವಾಗಿ ಹೊರಹೊಮ್ಮಿದರೆ ಕಾರ್ಮಿಕರಿಗೂ ಮತ್ತಷ್ಟು ಸ್ಫೂರ್ತಿ ದೊರೆಯುತ್ತದೆ; ಮಾತ್ರವಲ್ಲ, ಜನಸಾಮಾನ್ಯರನ್ನೂ ಅದರೊಡನೆ ಬೆಸೆಯುವುದು ಸಾಧ್ಯವಾಗುತ್ತದೆ.

ಮನುಷ್ಯ ಮನುಷ್ಯನನ್ನು ಶೋಷಿಸುವ, ಒಂದು ದೇಶ ಮತ್ತೊಂದು ದೇಶವನ್ನು ಶೋಷಿಸುವ ಶೋಷಕ ವ್ಯವಸ್ಥೆಯನ್ನು ನಿವಾರಿಸುವ ನವಯುಗದ ನಿರ್ಮಾತೃಗಳು ಕಾರ್ಮಿಕ ವರ್ಗ ಎಂಬ ತಿಳುವಳಿಕೆ, ಕಷೋಟ ಕಾರ್ಮಿಕರನ್ನೂ ಜನಸಾಮಾನ್ಯರನ್ನೂ ತಲುಪುವಂತಾಗಬೇಕು. ಸಾಹಿತ್ಯ ಮತ್ತು ಜನಪರ ಸಂಸ್ಕೃತಿಯು ಒಂದು ಜನಾಂದೋಲನವಾಗಿ, ಮಹಾಂದೋಲನವಾಗಿ ಸಮಾಜದ ಮೂಲೆ ಮೂಲೆಯನ್ನು ತಲುಪಬೇಕು. ತುಳಿಯಲ್ಪಟ್ಟವರು, ದಮನಕ್ಕೆ ಗುರಿಯಾದವರು ಎಲ್ಲರನ್ನೂ ತಲುಪಬೇಕು. ಕತ್ತಲಲ್ಲೇ ಇದ್ದವರಿಗೆ ಹೊಸ ಬೆಳಕು ನೀಡಬೇಕು. ಈ ಸಾಹಿತ್ಯ ಸಮ್ಮೇಳನವು ಇಂತಹ ಮಹತ್ವದ ಸಾಂಸ್ಕೃತಿಕ ಚಳುವಳಿಗೆ ಸ್ಫೂರ್ತಿಯಾಗಬೇಕು, ಹೊಸ ಹೊಳಹು ನೀಡಬೇಕು.

ಜಾತಿ, ಮತ, ಪಂಥ, ಮೇಲು-ಕೀಳು ಎಂಬ ಎಲ್ಲ ಭೇದ ಭಾವಗಳನ್ನು ಕಿತ್ತು ಎಸೆವ ಕಾರ್ಮಿಕ ವರ್ಗದ ಸಿದ್ಧಾಂತ ಎಂದರೆ ಅದು ಕುವೆಂಪು ಅವರ 'ವಿಶ್ವ ಮಾನವ ತತ್ವ'ದ ಜೊತೆ ಬೆರೆತುಕೊಂಡ ಉದಾತ್ತ ಸಿದ್ಧಾಂತ.

'ನಾವು ಬೆವರನು ಸುರಿಸಿ ದುಡಿಯುವ ಜನ,

ನಮ್ಮ ಬೆವರಿನ ಪಾಲನು ಕೇಳುವೆವು.

ತುಂಡು ಭೂಮಿಯಲ್ಲ, ಒಂದು ದೇಶವಲ್ಲ,

ಇಡಿ ಭೂಗೋಳವನೆ ಕೇಳುವೆವು'

ಎಂಬುದು ಕಾರ್ಮಿಕ ವರ್ಗದ ಆತ್ಮವಿಶ್ವಾಸ, ಕೆಚ್ಚು.

**ಕಾರ್ಮಿಕ ವರ್ಗದ ಹಕ್ಕೊತ್ತಾಯಗಳು**

ಭಾರತೀಯ ಕಾರ್ಮಿಕ ಸಮ್ಮೇಳನದ ಶಿಫಾರಸ್ಸಿನಂತೆ ಮತ್ತು ೨೦೧೫ ರಲ್ಲಿದ್ದ ಬೆಲೆಗಳನ್ನಾಧರಿಸಿ ಸುಪ್ರೀಂ ಕೋರ್ಟ್ ನೀಡಿದ ಆದೇಶದಂತೆ ರೂ. ೨೬೦೦೦ ಕನಿಷ್ಟ ವೇತನವಿರಬೇಕು. ಈ ವೇತನ ಜಾರಿಯಾಗುವ ತನಕ ೭ ನೇ ವೇತನ ಆಯೋಗದ ಶಿಫಾರಸ್ಸಿನಂತೆ ೧೮೦೦೦ ಕನಿಷ್ಟ ವೇತನಕ್ಕಿಂತ ಯಾರನ್ನೂ ದುಡಿಸಬಾರದು.

ಇಂಗ್ಲಿಷ್ ಭಾಷೆಯಲ್ಲಿರುವ ಕಾರ್ಮಿಕ ಕಾನೂನುಗಳನ್ನು ಕನ್ನಡದಲ್ಲಿ ತರಬೇಕು. ಕಾರ್ಮಿಕ ಇಲಾಖೆ ಹಾಗೂ ಕಾರ್ಮಿಕ ನ್ಯಾಯಾಲಯಗಳಲ್ಲಿ ಕಾರ್ಮಿಕರ ವಿಚಾರಗಳನ್ನು ಕನ್ನಡದಲ್ಲಿಯೇ ವ್ಯವಹರಿಸಬೇಕು. ಗುತ್ತಿಗೆ ಕಾರ್ಮಿಕರ

ಖಾಯಮಾತಿಗೆ ಸಂಬಂಧಿಸಿ ಶಾಸನ ತರಬೇಕು, ಸರ್ವೋಚ್ಛ ನ್ಯಾಯಾಲಯದ ಆದೇಶದಂತೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು, ಸರ್ಕಾರದ ಹೊಸ ನೇಮಕಾತಿಗಳಲ್ಲಿ ಗುತ್ತಿಗೆ ಕಾರ್ಮಿಕರನ್ನು ಪರಿಗಣಿಸಬೇಕು.



- ಕಾರ್ಮಿಕ ಸಂಘಗಳಿಗೆ ಕಡ್ಡಾಯ ಮಾನ್ಯತೆ ಕೊಡಬೇಕು.
- ಸ್ಕೀಂ ನೌಕರರು ಮತ್ತು ಹಲವು ವಿಭಾಗದ ಗುತ್ತಿಗೆ ಕಾರ್ಮಿಕರನ್ನು ಕನಿಷ್ಟ ವೇತನ ಕಾಯ್ದೆಯಡಿಯಲ್ಲಿ ತರಬೇಕು.
- ಬೆಲೆ ಏರಿಕೆಯನ್ನು ನಿಲ್ಲಿಸಿ, ಸಾರ್ವಜನಿಕ ಪಡಿತರ ಮತ್ತು ವಸತಿ ಯೋಜನೆ ನೀಡಬೇಕು.
- ರಾಜ್ಯದ ಮೂರೂವರೆ ಕೋಟಿ ಇರುವ ಕಾರ್ಮಿಕ ವರ್ಗದ ಸಮಸ್ಯೆಗಳನ್ನು ಆಲಿಸಲು 'ಕರ್ನಾಟಕ ರಾಜ್ಯ ಸಮ್ಮೇಳನ' (KC) ರಚಿಸಬೇಕು.
- ಅಸಂಘಟಿತ ಕ್ಷೇತ್ರದ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಯೋಜನೆ ಜಾರಿ ಮಾಡಬೇಕು.
- ೨೦೦೪ ರಿಂದ ಇರುವ ಹೊಸ ನಿವೃತ್ತಿ ಯೋಜನೆಯನ್ನು (NPS) ಬದಲಿಸಿ ಮೊದಲಿನಂತೆ ನಿವೃತ್ತಿ ಸೌಲಭ್ಯಗಳನ್ನು ಜಾರಿಗೊಳಿಸಬೇಕು.
- ಕಾರ್ಮಿಕ ಕಾನೂನುಗಳಿಗೆ ತರುತ್ತಿರುವ ಕಾರ್ಮಿಕ ವಿರೋಧಿ ತಿದ್ದುಪಡಿಗಳನ್ನು ಕೈಬಿಡಬೇಕು.
- ದೇಶದ ಮತ್ತು ರಾಜ್ಯದ ಆರ್ಥಿಕ ಸಾರ್ವಭೌಮತೆಗೆ ಪೂರಕವಾಗಿರುವ ಸಾರ್ವಜನಿಕ ಕೈಗಾರಿಕೆಗಳನ್ನು ಖಾಸಗೀಕರಣ ಮಾಡಬಾರದು.
- ಎಲ್ಲಾ ಕಾರ್ಮಿಕರಿಗೂ ಕೆಲಸದ ಭದ್ರತೆ ಸಿಗಬೇಕು.
- ಎಲ್ಲಾ ದುಡಿಯುವ ಮಹಿಳೆಯರಿಗೂ ೬ ತಿಂಗಳ ಹೆರಿಗೆ ಭತ್ಯ ಜಾರಿ ಮಾಡಬೇಕು, ದುಡಿಯುವ ಸ್ಥಳಗಳಲ್ಲಿ ಶಿಶುಪಾಲನಾ ಕೇಂದ್ರಗಳನ್ನು ನಡೆಸಬೇಕು.
- ದುಡಿಮೆಯ ಸ್ಥಳಗಳಲ್ಲಿ ಮಹಿಳೆಯ ಮೇಲೆ ನಡೆಯುವ ಲೈಂಗಿಕ ಕಿರುಕುಳಗಳನ್ನು ತಡೆಗಟ್ಟಲು ಸುಪ್ರೀಂ ಕೋರ್ಟ್ ಆದೇಶದಂತೆ ಸಮಿತಿಗಳನ್ನು ರಚಿಸಬೇಕು.

## ಗೋಷ್ಠಿ - ೮

# ಕನ್ನಡ ತಂತ್ರಜ್ಞಾನ

# ಕನ್ನಡ ಗ್ರಂಥಗಳ ಡಿಜಿಟಲಿಸುವಿಕೆ

**- ವಸಂತ ಶೆಟ್ಟಿ**

ಕನ್ನಡ ಗ್ರಂಥಗಳ ಡಿಜಿಟಲಿಸುವಿಕೆ ಅನ್ನುವ ವಿಷಯದ ಚರ್ಚೆಯನ್ನು ಕೆಲವು ಮುಖ್ಯವಾದ ಪ್ರಶ್ನೆಗಳ ಸುತ್ತ ಮಾಡುವುದು ಹೆಚ್ಚು ಸೂಕ್ತ ಅನ್ನುವುದು ನನ್ನ ಅನಿಸಿಕೆ. ಮೊದಲಿಗೆ ಡಿಜಿಟಲಿಸುವಿಕೆ ಅಂದರೇನು? ಗ್ರಂಥಗಳ ಡಿಜಿಟಲಿಸುವಿಕೆ ಅಂದರೇನು? ಅದರ ಅಗತ್ಯ ಇದೆಯಾ? ಅದರ ಪ್ರಯೋಜನಗಳೇನು? ಅದನ್ನು ಸಾಧ್ಯವಾಗಿಸುವಲ್ಲಿ ಇರುವ ಸವಾಲುಗಳೇನು? ಆ ಸವಾಲುಗಳಿಗೆ ಪರಿಹಾರ ಕಲ್ಪಿಸಬೇಕಾದ ಹೊಣೆ ಯಾರದ್ದು? ಕೇವಲ ಸರ್ಕಾರದ್ದಾ? ವಿಶ್ವವಿದ್ಯಾಲಯಗಳದ್ದಾ? ಜನ ಸಮುದಾಯದ್ದಾ? ಮಾರುಕಟ್ಟೆಯದ್ದಾ? ಈ ಪ್ರಶ್ನೆಗಳ ಸುತ್ತ ಈ ವಿಷಯವನ್ನು ಚರ್ಚಿಸಿದರೆ ಇದನ್ನೊಂದು ತುಂಬಾ ತಾಂತ್ರಿಕವಾದ ಚರ್ಚೆಯಾಗಿಸದೇ ಜನಸಾಮಾನ್ಯರ ಪರಿಭಾಷೆಯಲ್ಲಿ, ಅವರಿಗೂ ಅರ್ಥವಾಗುವಂತೆ ಚರ್ಚೆಯನ್ನು ಕಟ್ಟುವ ಕೆಲಸ ಆಗುತ್ತೆ ಅನ್ನುವುದು ನನ್ನ ಆಶಯ. ಪ್ರತಿಯೊಂದು ಸಾಹಿತ್ಯ ಸಮ್ಮೇಳನದಲ್ಲೂ ಲಕ್ಷಾಂತರ ಜನರು ಸೇರುತ್ತಾರೆ. ಹೀಗಾಗಿ ಈ ಸಮ್ಮೇಳನಗಳನ್ನು ಜನಸಾಮಾನ್ಯರ ಅಕ್ಷರಜಾತ್ರೆ ಅಂತಲೇ ಗುರುತಿಸಲಾಗುತ್ತೆ. ಅಲ್ಲಿ ಏರ್ಪಡುವ ಪ್ರತಿಯೊಂದು ಚರ್ಚೆಯೂ, ಪ್ರತಿಯೊಂದು ಭಾಷಣವೂ ನನ್ನ ಪ್ರಕಾರ ಈ ಜನರ ಪರವಾದ, ಅವರ ನುಡಿಯ ಪರವಾದ, ಅವರ ಬದುಕು- ಬವಣೆಯ ಪರವಾದ ಚರ್ಚೆಗಳಾಗಬೇಕು ಮತ್ತು ಹಾಗಾಗಲು ಈ ಚರ್ಚೆಗಳು ಅವರಿಗೂ ಅರ್ಥವಾಗುವ ಸ್ವರೂಪದಲ್ಲಿ ಇರಬೇಕಾದದ್ದು, ಅವರೂ ಅದರಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುವ ಸ್ವರೂಪದಲ್ಲಿ ಇರುವುದು ಮುಖ್ಯ. ಆದ್ದರಿಂದ ಇಂದಿನ ಈ ವಿಷಯದ ಕುರಿತ ಚರ್ಚೆಯನ್ನು ಕೆಲವು ಪ್ರಶ್ನೆಗಳ ಸುತ್ತ ಸರಳವಾದ ನುಡಿಗಟ್ಟಿನಲ್ಲೇ ರೂಪಿಸುವ ಪ್ರಯತ್ನ ಮಾಡುತ್ತೇನೆ. ನನ್ನ ಮಾತುಗಳು ಕೇವಲ ನನ್ನದಲ್ಲ ಅನ್ನುವುದನ್ನೂ ಈ ಸಂದರ್ಭದಲ್ಲಿ ಹೇಳಲು ಬಯಸುತ್ತೇನೆ. ಸಾಹಿತ್ಯ ಸಮ್ಮೇಳನದಲ್ಲಿ ಇಂತಹದೊಂದು ವಿಷಯದ ಬಗ್ಗೆ ಮಾತನಾಡುವ ಅವಕಾಶ ಬಂದಾಗ ಈ ವಿಷಯವನ್ನು ಸಾಧ್ಯವಾದಷ್ಟು ಜನರ ಅಭಿಪ್ರಾಯ, ಅನಿಸಿಕೆ ಪಡೆದು ನಿರೂಪಿಸುವ ಕೆಲಸ ಮಾಡಬೇಕು ಅನ್ನುವ ಪ್ರಯತ್ನ ಮಾಡಿದ್ದೆ. ಅಂತೆಯೇ ಫೇಸ್ ಬುಕ್, ಟ್ವಿಟರ್, ಮಿಂಚಂಚೆ, ವಾಟ್ಸಾಪ್ ಹಾಗೂ ಹಲವು ಫೋನ್ ಕರೆಗಳ ಮೂಲಕ ಅನೇಕ ಗೆಳೆಯರು, ಹಿರಿಯರು ಕೊಟ್ಟ ಅನಿಸಿಕೆಗಳನ್ನು ಈ ಸಭೆಯ ಗಮನಕ್ಕೆ ತರುವ ಪ್ರಯತ್ನ ಮಾಡುತ್ತಿದ್ದೇನೆ. ಅವರೆಲ್ಲರಿಗೂ ಈ ವೇದಿಕೆಯ ಮೂಲಕ ವಂದಿಸಲು ಬಯಸುತ್ತೇನೆ.

**ಡಿಜಿಟಲಿಸುವಿಕೆ ಅಂದರೇನು?**

ಯಾವುದೇ ಒಂದು ಭಾಷೆಯಲ್ಲಿನ ಬಾಯಿಮಾತಿನಲ್ಲಿರುವ ಇಲ್ಲವೇ ಭೌತಿಕವಾದ ಬರಹದ ರೂಪದಲ್ಲಿ ಇರುವ ಒಂದಿಷ್ಟು ವಿಷಯಗಳನ್ನು ಹೊಸ ತಂತ್ರಜ್ಞಾನದ ಸಾಧ್ಯತೆಗಳನ್ನು ಬಳಸಿ ಕಂಪ್ಯೂಟರ್, ಮೊಬೈಲ್ ಇತ್ಯಾದಿ ಆಧುನಿಕ ಮಾಧ್ಯಮದ ಉಪಕರಣಗಳಲ್ಲಿ ಯಾವತ್ತು ಬೇಕಾದರೂ, ಯಾರು ಬೇಕಾದರೂ, ಎಲ್ಲಿಂದ ಬೇಕಾದರೂ ನೋಡುವ, ಕೇಳುವ, ಓದುವ ಅವಕಾಶಗಳನ್ನು ಸೃಷ್ಟಿಸುವುದನ್ನು ಡಿಜಿಟಲಿಸುವಿಕೆ ಎಂದು ಕರೆಯಬಹುದು. ಒಂದು ಸಂಗೀತ ಪ್ರದರ್ಶನವಿರಬಹುದು, ಒಂದು ಯಕ್ಷಗಾನದ ಬಯಲಾಟ ಇರಬಹುದು, ಹಳ್ಳಿಗರ ಗೀಗೀ ಪದವಿರಬಹುದು, ಒಂದು ನಾಟಕವಿರಬಹುದು, ತಾಳೆಗರಿಯಲ್ಲಿನ ಹಸ್ತಪ್ರತಿಗಳಲ್ಲಿನ ಬರಹವಿರಬಹುದು. ಎಂದೋ ಮುದ್ರಣವಾದ ಒಂದು ಪುಸ್ತಕವಿರಬಹುದು, ಸಾಧಕನೊಬ್ಬನೊಂದಿಗಿನ ಸಂದರ್ಶನವಿರಬಹುದು ಹೀಗೆ ಒಮ್ಮೆ ನಡೆದು ಕಳೆದುಹೋಗಬಹುದಾದ, ಇಲ್ಲವೇ ಕಾಲಾನುಕ್ರಮದಲ್ಲಿ ನಶಿಸಿಹೋಗಬಹುದಾದ ಕೆಲವು ಮಹತ್ವದ ವಿಷಯಗಳನ್ನು ಕಾಪಿಟ್ಟುಕೊಂಡು, ಮುಂದಿನ ಪೀಳಿಗೆಗೂ ದೊರೆಯುವಂತೆ ಮಾಡುವ ಮಹತ್ವದ ಕೆಲಸ ಡಿಜಿಟಲಿಸುವಿಕೆ ಅನ್ನಬಹುದು.

**ಡಿಜಿಟಲಿಸುವಿಕೆ ಯಾಕೆ ಮುಖ್ಯ?**

ಗ್ರಂಥಗಳು ಅದು ಬರೆದಾಗಿನ ಕಾಲದ ಸಮಾಜ, ಸಂಸ್ಕೃತಿ ಎಲ್ಲದರ ಪರಿಚಯವನ್ನು ನೀಡುವ ಸಾಧನಗಳು. ಅವು ನಮಗೊಂದು ಗುರುತು ಕೊಟ್ಟಂತವು. ಕವಿರಾಜಮಾರ್ಗದಲ್ಲಿ ಕಾವೇರಿಯಿಂದ ಗೋದಾವರಿಯವರೆಗೆ ಕನ್ನಡ ನಾಡಿನ ಗಡಿಯಿತ್ತು ಅನ್ನುವ ಒಂದು ಮಾತು ನಮ್ಮೆಲ್ಲರಲ್ಲಿ ನಮ್ಮ ಕನ್ನಡತನದ ಬಗ್ಗೆ ಅತೀವ ಹೆಮ್ಮೆ ತಾಳುವಂತೆ ಮಾಡುತ್ತದೆ. ಅದನ್ನು ಬರೆದು ಸಾವಿರ ವರ್ಷಗಳ ಮೇಲಾಗಿದೆ. ಆದರೆ ಅದು ಇಂದಿಗೂ ನಮ್ಮ ಗುರುತಿನ, ನಮ್ಮ ಪ್ರಜ್ಞೆಯ ಒಂದು ಭಾಗವಾಗಿ ಉಸಿರಾಡುತ್ತಿದೆ. ನಾವ್ಯಾರು ಅಂದಾಗ ನಾವು ಕನ್ನಡಿಗರು ಅಂತ ಹೇಳಿಕೊಳ್ಳಲು, ನಮ್ಮಲ್ಲೊಂದು ಇತಿಹಾಸದ ಪ್ರಜ್ಞೆ ತುಂಬುವಲ್ಲಿ ಈ ಗ್ರಂಥಗಳದ್ದೊಂದು ದೊಡ್ಡ ಪಾತ್ರವಿದೆ. ಹೀಗಾಗಿ ಇವು ಉಳಿಯಬೇಕಾದದ್ದು, ಮುಂದಿನ ಪೀಳಿಗೆಗೆ ತಲುಪಬೇಕಾದದ್ದು ಮಹತ್ವದ್ದು. ಆದರೆ ಡಿಜಿಟಲಿಸುವಿಕೆ ಕೇವಲ ಇದೊಂದೇ ಕಾರಣಕ್ಕೆ ಮುಖ್ಯವಲ್ಲ. ಇನ್ನು ಹಲವಾರು ಕಾರಣಗಳಿವೆ. ಡಿಜಿಟಲ್ ಮಾಧ್ಯಮ ಕಳೆದ ಇಪ್ಪತ್ತೈದು ವರ್ಷಗಳಲ್ಲಿ ಮನುಕುಲ ಕಂಡು ಕೇಳರಿಯದ ರೀತಿಯಲ್ಲಿ, ವೇಗದಲ್ಲಿ ಮನುಷ್ಯರು ಸಂಪರ್ಕ ಸಾಧಿಸುವ ಬಗೆಯನ್ನು, ಜ್ಞಾನವನ್ನು ಪಡೆದುಕೊಳ್ಳುವ, ಹಂಚುವ, ಹರಡುವ ಬಗೆಯನ್ನು ಬಹಳ ದೊಡ್ಡ ರೀತಿಯಲ್ಲಿ ಬದಲಾಯಿಸಿದೆ. ಇಂದು ಮನೆಮನೆಗೂ ಕಂಪ್ಯೂಟರ್, ಮೊಬೈಲ್ ತಲುಪಿದೆ. ಕಡಿಮೆ ದರದ ಸ್ಮಾರ್ಟ್ ಫೋನ್ ಹಾಗೂ ಡೇಟಾ ಕನೆಕ್ಷನ್ ದೊಡ್ಡ ರೀತಿಯಲ್ಲಿ ಡಿಜಿಟಲ್ ಮಾಧ್ಯಮದ ಆಯ್ಕೆಗಳನ್ನು ಜನರ ಮುಂದಿರಿಸಿದೆ. ಇದು ಯುವಕರಲ್ಲಿ, ಅದರಲ್ಲೂ ಹದಿಹರೆಯದ

ಹುಡುಗರಲ್ಲಿ ಒಂದು ರೀತಿಯ ಗೀಳು ಹುಟ್ಟು ಹಾಕುವ ಮತ್ತು ಒಂದು ರೀತಿಯ ಸ್ಮಾರ್ಟ್ ಫೋನ್ ಡಿಸ್ಟೋಪಿಯಾ ಹುಟ್ಟು ಹಾಕುವ ಅಪಾಯಗಳನ್ನು ಒಂದೆಡೆ ತಂದಿದೆ. ಆದರೆ ಇನ್ನೊಂದೆಡೆ ಜ್ಞಾನ ಸೃಷ್ಟಿ, ಹರಡುವಿಕೆ, ವ್ಯಾಪಾರ, ಮನರಂಜನೆ, ಸುದ್ದಿ ಹೀಗೆ ಅಂಗೈಯಲ್ಲೇ ಪ್ರಪಂಚವನ್ನು ತೋರುವ ಆಯ್ಕೆಯಾಗಿಯೂ ಮುನ್ನೆಲೆಗೆ ಬಂದಿದೆ. ಹೀಗಿರುವಾಗ ಕನ್ನಡ ಗ್ರಂಥಗಳು ಈ ಹೊಸ ಮಾಧ್ಯಮದ ಮೂಲಕ ಜನರನ್ನು ತಲುಪುವ ಹಾದಿಯಲ್ಲಿ ಸೋಲಬಾರದು. ಡಿಜಿಟಲ್ ಮಾಧ್ಯಮಕ್ಕೆ ಪ್ರಪಂಚದ ಯಾವುದೇ ಭಾಗವನ್ನು ಕ್ಷಣಾರ್ಧದಲ್ಲಿ ತಲುಪುವ ಶಕ್ತಿಯಿರುವುದರಿಂದ ಕನ್ನಡಿಗರು ಪ್ರಪಂಚದ ಯಾವ ಮೂಲೆಯಲ್ಲಿದ್ದರೂ ಅವರನ್ನು ಕನ್ನಡಕ್ಕೆ ಬೆಸೆಯುವ ಶಕ್ತಿ ಇದಕ್ಕಿದೆ. ಇಲ್ಲಿ ಸಶಕ್ತವಾಗಿ ಕನ್ನಡ ಗ್ರಂಥಗಳು ಡಿಜಿಟಲಿಸಲು ಸಾಧ್ಯವಾದರೆ ಕನ್ನಡ ಗ್ರಂಥಗಳು ಹೆಚ್ಚೆಚ್ಚು ಕನ್ನಡಿಗರನ್ನು ತಲುಪುತ್ತ ತಲೆಮಾರಿನಿಂದ ತಲೆಮಾರಿಗೆ ಸಾಗಬಲ್ಲವು. ಎಲ್ಲದನ್ನೂ ಅಮೇರಿಕನೈಸ್ ಮಾಡುವ (ಭಾರತದ ಸಂದರ್ಭದಲ್ಲಿ ಎಲ್ಲವನ್ನೂ ಹಿಂದೀಮಯ ಮಾಡುವ) ಮಾರುಕಟ್ಟೆ ಶಕ್ತಿ ಬುಲ್ಡೋಜರ್ ರೀತಿಯಲ್ಲಿ ವೈವಿಧ್ಯತೆಯನ್ನು ಬಡಿದು ಹದ ಮಾಡಿ, ನಮ್ಮ ಊಟ ತಿಂಡಿ, ನುಡಿ, ಕಲಿಕೆ, ಸಮಾಜವನ್ನು ನೋಡುವ, ಅರ್ಥೈಸುವ ಬಗೆಯೆಲ್ಲದರಲ್ಲಿ ಒಂದು ರೀತಿಯ ಏಕರೂಪತೆ ತರುವ ಪ್ರಯತ್ನ ಮಾಡುತ್ತಿರುವಾಗ ಅದನ್ನು ಕೊಂಚವಾದರೂ ಹಿಮ್ಮೆಟ್ಟಿಸುವ ಸಾಧನವಾಗಿ ನಮ್ಮ ನುಡಿ ಮತ್ತು ಅದರ ಸಾಹಿತ್ಯದ ಪರಂಪರೆಯಲ್ಲಿ ಹುಟ್ಟಿದ ಎಲ್ಲ ಬೆಲೆಕಟ್ಟಲಾಗದ ಬರಹಗಳು, ಹೊತ್ತಗೆಗಳು ಡಿಜಿಟಲ್ ಮಾಧ್ಯಮದ ಮೂಲಕ ಪಸರಿಸುವಂತಾಗುವುದು ಒಂದು ಮುಖ್ಯವಾದ ಕಾಳಜಿಯೇ ಸರಿ.

**ಡಿಜಿಟಲಿಸುವಿಕೆಗೆ ಇರುವ ತೊಡಕುಗಳು**

ಡಿಜಿಟಲಿಸುವಿಕೆ ಮುಖ್ಯ ಅನ್ನುವುದು ಮನವರಿಕೆಯಾದ ಮೇಲೆ ಹುಟ್ಟುವ ಮೊದಲ ಪ್ರಶ್ನೆ, ಇದನ್ನು ವ್ಯಾಪಕವಾಗಿ ಸಾಧ್ಯವಾಗಿಸಲು ಇರುವ ತೊಡಕುಗಳೇನು ಅನ್ನುವುದು. ಇದೊಂದು ತಾಂತ್ರಿಕವಾದ ವಿಷಯವಾದರೂ ಚುಟುಕಾಗಿ ಕೆಲವು ತೊಡಕುಗಳನ್ನು ಪಟ್ಟಿ ಮಾಡುವುದಾದರೆ :

ಇತ್ತೀಚಿನ ವರ್ಷಗಳಲ್ಲಿ ಪ್ರಕಟವಾಗಿರುವ ಬಹುತೇಕ ಕನ್ನಡ ಪುಸ್ತಕಗಳು ಕಂಪ್ಯೂಟರ್ ಸಹಾಯ ಪಡೆದೇ ಮುದ್ರಣಗೊಂಡಂತವು. ಅವುಗಳನ್ನು ಇ-ಪಬ್ ಮಾದರಿಗೆ ಬದಲಾಯಿಸಿ, ಮುದ್ರಿತ ಪುಸ್ತಕದಂತೆ ಓದಲಾಗಿಸುವುದು ಕಷ್ಟವೇನಲ್ಲ. ಆದರೆ ಪ್ರಾಚೀನ ಗ್ರಂಥಗಳನ್ನು, ಅದರಲ್ಲೂ ಕೈಬರಹದಲ್ಲಿರುವ ಗ್ರಂಥಗಳನ್ನು ಡಿಜಿಟೈಸ್ ಮಾಡುವುದು ನಿಜಕ್ಕೂ ಸವಾಲಿನ ಕೆಲಸವಾಗಿದೆ.

ಕೈಬರಹ, ಟೈಪಿಸಿದ ಇಲ್ಲವೇ ಮುದ್ರಿಸಿದ ಕನ್ನಡ ಗ್ರಂಥಗಳನ್ನು ಡಿಜಿಟಲ್ ರೂಪಕ್ಕೆ ತರುವಾಗ ಚಿತ್ರರೂಪದಲ್ಲಿ ಮೊದಲು ಡಿಜಿಟಲೈಸಾಗುವ ಚಿತ್ರದಿಂದ ಅಕ್ಷರವನ್ನು

ಎತ್ತಿ ಅಕ್ಷರ ವಿನ್ಯಾಸದ ಇವತ್ತಿನ ಶಿಷ್ಟ ಸ್ವರೂಪದಂತಿರುವ ಯುನಿಕೋಡ್ ಮಾದರಿಗೆ ಬದಲಾಯಿಸಿ, ತಿದ್ದಲು ಸಾಧ್ಯವಾಗುವಂತೆ ಮಾಡುವ ಓ.ಸಿ.ಆರ್. (ಆಪ್ಟಿಕಲ್ ಕ್ಯಾರೆಕ್ಟರ್ ರೆಕಗ್ನಿಶನ್) ತಂತ್ರಜ್ಞಾನ ಇನ್ನಷ್ಟು ಪರಿಣಾಮಕಾರಿಯಾಗಬೇಕಿದೆ. ಇದನ್ನು ಹೆಚ್ಚು ಕಡಿಮೆ ೯೯% ಸಾಧ್ಯವಾಗಿಸಿ ಕೇವಲ ಆರುಗಂಟೆಯಲ್ಲಿ ಒಂದು ಮುದ್ರಿತ ಕನ್ನಡ ಪುಸ್ತಕದಿಂದ ಇ-ಬುಕ್ ಆವೃತ್ತಿಗೆ ಬದಲಾಯಿಸುವ ಓ.ಸಿ.ಆರ್. ಕಂಡುಹಿಡಿದ ಕ್ವಿಲ್ ಬುಕ್ಸ್ ಸಂಸ್ಥೆಯ ರಾಮಪ್ರಕಾಶ್ ಅವರಿಗೆ ಪುಸ್ತಕ ಉದ್ಯಮದಿಂದಾಗಲಿ, ರಾಜ್ಯ ಸರ್ಕಾರದಿಂದಾಗಲಿ ಸರಿಯಾದ ಸಹಕಾರ, ಬೆಂಬಲ ಸಿಗದೇ ದೊಡ್ಡ ಪ್ರಮಾಣದಲ್ಲಿ ಕನ್ನಡ ಇ-ಬುಕ್ಸ್ ಹೊರತರುವ ಅವರ ಯೋಜನೆಗಳು ಈಡೇರಲಿಲ್ಲ.

ತಾಳೆಗರಿಗಳನ್ನು ಡಿಜಿಟೈಸ್ ಮಾಡುವ ಕೋಲ್ಡ್ ಸ್ಟೋರೇಜಿನಂತಹ ತಂತ್ರಜ್ಞಾನವನ್ನು ಕನ್ನಡಿಗರೇ ಆದ ಉದಯ ಪುರಾಣಿಕ್‌ರಂತಹ ಆಸಕ್ತರು ಮಾಡಿದ್ದಾರೆ. ಅದನ್ನು ಹೊರದೇಶದ ಅನೇಕರು ಬಳಸುತ್ತಿದ್ದರೂ ಅದನ್ನು ಬಳಸಿ ಕನ್ನಡದಲ್ಲಿರುವ ತಾಳೆಗರಿಗಳಾಧಾರಿತ ಗ್ರಂಥಗಳನ್ನು ಡಿಜಿಟೈಸ್ ಮಾಡುವ ಆಸಕ್ತಿ ನಮ್ಮ ಸರ್ಕಾರಗಳಿಗೆ ಬಂದಿಲ್ಲ.

ಈಗಾಗಲೇ ದೊರೆಯುತ್ತಿರುವ ತಂತ್ರಜ್ಞಾನವನ್ನು ಬಳಸಿ ಸಾವಿರಾರು ಕನ್ನಡ ಪುಸ್ತಕಗಳನ್ನು ಡಿಜಿಟಲಿಸುವ ಕೆಲಸವನ್ನು ಮಾಡಲಾಗಿದ್ದರೂ ಜನಸಾಮಾನ್ಯರು ಅವುಗಳನ್ನು ಅಂತರ್ಜಾಲದಲ್ಲಿ ಕನ್ನಡದಲ್ಲಿ ಹುಡುಕುವುದು ಸುಲಭವಾಗದೇ ಅವು ಜನರನ್ನು ತಲುಪುವಲ್ಲಿ ಸೋಲುತ್ತಿವೆ. ಓಸ್ಮಾನಿಯಾ ವಿಶ್ವವಿದ್ಯಾಲಯ, ಡಿಜಿಟಲ್ ಲೈಬ್ರರಿ ಆಫ್ ಇಂಡಿಯಾ, ಕಣಜ ಡಿಜಿಟಲ್ ಲೈಬ್ರರಿಯಂತಹ ಮೂರು ಮೂಲದಲ್ಲೇ ಸರಿಸುಮಾರು ಆರು ಸಾವಿರಕ್ಕೂ ಹೆಚ್ಚು ಕನ್ನಡ ಪುಸ್ತಕಗಳು ಡಿಜಿಟಲ್ ಸ್ವರೂಪದಲ್ಲಿವೆ. ಆದರೆ ಅವುಗಳನ್ನು ಕನ್ನಡದಲ್ಲಿ ಹುಡುಕುವುದು ಬಹಳ ಸವಾಲಿನ ಕೆಲಸವಾಗಿತ್ತು. ಓಂ ಶಿವಪ್ರಕಾಶ್ ಮತ್ತು ಕೆಲ ಗೆಳೆಯರ ವೈಯಕ್ತಿಕ ಪರಿಶ್ರಮದಿಂದ ರೂಪುಗೊಂಡ ಪುಸ್ತಕ ಸಂಚಯದಂತಹ ಯೋಜನೆಗಳು ಈಗ ಈ ಪುಸ್ತಕಗಳನ್ನು ಹುಡುಕುವುದನ್ನು ಸುಲಭವಾಗಿಸಿವೆ. ಇದೇ ತಂಡ ರೂಪಿಸಿದ ವಚನ ಸಂಚಯದಲ್ಲಿ ಇಪ್ಪತ್ತು ಸಾವಿರಕ್ಕೂ ಹೆಚ್ಚು ವಚನಗಳನ್ನು ಓದುವುದು, ಹುಡುಕುವುದು ಎರಡೂ ಸಾಧ್ಯವಾಗಿದೆ. ಆದರೆ ಇಲ್ಲಿ ಆಗಬೇಕಿರುವ ಕೆಲಸ ಇನ್ನೂ ದೊಡ್ಡದಿದೆ.

ಡಿಜಿಟಲಿಸಲಾದ ಗ್ರಂಥಗಳು ಇಲ್ಲಿ ದೊರೆಯುತ್ತವೆ, ಅವುಗಳನ್ನು ಹೇಗೆ ಬಳಸಬಹುದು ಅನ್ನುವ ಕುರಿತು ಜನಸಾಮಾನ್ಯರಲ್ಲಿ ಮಾಹಿತಿಯ ಕೊರತೆಯಿದೆ.

ಇ-ಪಬ್ ಮಾದರಿಯಲ್ಲಿ ಪುಸ್ತಕಗಳು ಬಂದರೆ ಮುದ್ರಿತ ಪ್ರತಿಗಳ ಮಾರಾಟ ಕುಸಿಯುತ್ತೆ ಅನ್ನುವ ಅನಗತ್ಯ ಆತಂಕದಿಂದ ಬಹುತೇಕ ಪ್ರಕಾಶಕರು ಇ-ಪಬ್ ಮಾದರಿಯಲ್ಲಿ ಪುಸ್ತಕ ಬಿಡುಗಡೆಗೆ ಆಸಕ್ತಿ ತೋರದೇ ಇದನ್ನೊಂದು ಉದ್ಯಮದಂತೆ ಕಟ್ಟುವ ಪ್ರಯತ್ನಗಳು ಸೋತಿವೆ.

ಅಮೆಜಾನ್ ಸಂಸ್ಥೆಯ ಕಿಂಡಲ್ ತರದ ಪುಸ್ತಕ ಓದುವ ಸಾಧನಗಳು ಬಹು ಜನಪ್ರಿಯಗೊಂಡಿದ್ದರೂ ಅಲ್ಲಿ ಕನ್ನಡಕ್ಕೆ ಅಧಿಕೃತವಾದ ಬೆಂಬಲ ಇನ್ನೂ ಸಿಕ್ಕಿಲ್ಲ. ಹೀಗಾಗಿ ಅಲ್ಲಿ ಕನ್ನಡ ಪುಸ್ತಕಗಳನ್ನು ನೋಡಲು ಸಾಧ್ಯವಾಗಿಲ್ಲ. ಗುಜರಾತಿ, ಮರಾಠಿ ಮತ್ತು ಹಿಂದಿಯ ಪುಸ್ತಕಗಳನ್ನು ಕಿಂಡಲ್ ಅಲ್ಲಿ ರೂಪಿಸಿ ಕೆಲಸ ಮಾಡುತ್ತಿರುವ ಸಂಸ್ಥೆ ೨೦೧೮ರ ಹೊತ್ತಿಗೆ ಅಧಿಕೃತವಾಗಿ ಕನ್ನಡಕ್ಕೆ ಬೆಂಬಲ ನೀಡುವ ಕೆಲಸ ಮಾಡುವುದಾಗಿ ತಿಳಿಸಿದೆ. ಇಲ್ಲಿ ಕನ್ನಡ ಕಾಣಿಸುವುದು ಡಿಜಿಟಲ್ ಸಮಾನತೆಯ ಪ್ರಶ್ನೆಯಷ್ಟೇ ಅಲ್ಲ. ಅದೊಂದು ದೊಡ್ಡ ವ್ಯಾಪಾರದ ಸಾಧ್ಯತೆಯನ್ನು ಕಂಪನಿಗೂ, ಪ್ರಕಾಶಕರಿಗೂ ಒದಗಿಸುವಂತದ್ದು. ಆದರೆ ಅಮೆಜಾನಿನಂತಹ ನೂರಾರು ದೇಶಗಳಲ್ಲಿ ವ್ಯಾಪಾರ ಮಾಡುತ್ತಿರುವ ದೈತ್ಯ ಕಂಪನಿಗೆ ಕನ್ನಡವೂ ಮುಖ್ಯವಾಗಬೇಕೆಂದರೆ ಅದು ಒಂದು ವ್ಯವಸ್ಥಿತವಾದ ಕನ್ನಡ ಗ್ರಾಹಕರ ಚಳವಳಿಯ ಮೂಲಕವೇ ಆಗಬೇಕು.

ಪಠ್ಯದಿಂದ ಮಾತಿಗೆ (Text to Speech) ಮಾರ್ಪಡುವ ವ್ಯವಸ್ಥೆಗಳು ಕನ್ನಡದಲ್ಲೂ ಸರಿಯಾಗಿ ಬಂದಲ್ಲಿ ಓದಲು ಬಾರದ, ಇಲ್ಲವೇ ಓದುವುದಕ್ಕಿಂತ ಕೇಳುವುದನ್ನೇ ಹೆಚ್ಚು ಇಷ್ಟಪಡುವ ಜನರಿಗೆ ಮಾತಿನ ರೂಪದಲ್ಲಿ ಕನ್ನಡ ಗ್ರಂಥಗಳನ್ನು ತಲುಪಿಸುವ ಕೆಲಸ ಮಾಡಬಹುದು. ಹಾಗೆಯೇ ಮೌಖಿಕ ಪರಂಪರೆಯಲ್ಲೇ ಉಳಿದಿರುವ ನಮ್ಮ ಅನೇಕ ಜ್ಞಾನಪ್ರಕಾರಗಳನ್ನು ಮಾತಿನಿಂದ ಪಠ್ಯಕ್ಕೆ ವರ್ಗಾಯಿಸಿ ಇ-ಬುಕ್ ಮೂಲಕ ಹೆಚ್ಚು ಜನರಿಗೆ ತಲುಪಿಸಬಹುದು. ಇವೆರಡರಲ್ಲೂ ಆಗಿರುವ ಪ್ರಗತಿ ಸಾಲದು.

ಡಿಜಿಟಲಿಸುವಿಕೆಯ ಸವಾಲುಗಳನ್ನು ಗಮನಿಸಿದಾಗ ಅದಕ್ಕೆ ಪರಿಹಾರ ರೂಪಿಸುವ ಕೆಲಸ ಯಾವುದೋ ಒಂದು ವ್ಯಕ್ತಿ ಇಲ್ಲವೇ ವ್ಯವಸ್ಥೆಯ ಕೆಲಸವಲ್ಲ ಅನ್ನುವುದು ಸ್ಪಷ್ಟವಾಗುತ್ತದೆ. ಅಲ್ಲಿ ಸರ್ಕಾರ, ಸಮುದಾಯ, ಗ್ರಾಹಕ ಹೀಗೆ ಎಲ್ಲರದ್ದೂ ಒಂದು ಪಾತ್ರವಿದೆ. ಅದರ ಬಗ್ಗೆ ಗಮನ ಹರಿಸುವುದಾದರೆ-

೧. ಸಮುದಾಯದ ಪಾಲ್ಗೊಳ್ಳುವಿಕೆಯಲ್ಲಿ ರೂಪಿತವಾದ ಅನೇಕ ಯೋಜನೆಗಳಿಂದ ಅಂತರ್ಜಾಲದಲ್ಲಿ ಕನ್ನಡ ಕಟ್ಟುವ ಕೆಲಸ ಹೆಚ್ಚಾಗಿ ನಡೆದಿದೆ. ವಿಕಿಪಿಡಿಯಾ, ವಿಕ್ಷನರ, ಫೇಸ್ ಬುಕ್ ಅನುವಾದ, ವಾಟ್ಸಾಪ್ ಅನುವಾದ, ಪೇಘಿನಂತಹ ನ್ಯಾವಿಗೇಶನ್ ಅಪ್ಲಿಕೇಶನ್ ಅನುವಾದ ಹೀಗೆ ಕನ್ನಡವನ್ನು ತಂತ್ರಜ್ಞಾನಕ್ಕೆ ಒಗ್ಗಿಸುವ ಅನೇಕ ಕೆಲಸಗಳು ಸಮುದಾಯ ಪಾಲ್ಗೊಳ್ಳುವಿಕೆಯಲ್ಲೇ ನಡೆದು ಯಶಸ್ವಿಯಾಗಿವೆ. ಡಿಜಿಟಲ್ ಆವೃತ್ತಿಯಲ್ಲಿರುವ ಕನ್ನಡ ಗ್ರಂಥಗಳ ಹುಡುಕಾಟ ಸುಲಭವಾಗಿಸಿ ಆರು ಸಾವಿರಕ್ಕೂ ಹೆಚ್ಚು ಕನ್ನಡ ಪುಸ್ತಕಗಳನ್ನು ಕನ್ನಡಿಗರಿಗೆ ದೊರೆಯುವಂತೆ ಮಾಡಿದ ಪುಸ್ತಕ ಸಂಚಯದಂತಹ ಯೋಜನೆಯೂ ಒಂದು ಸಮುದಾಯದ ಪಾಲ್ಗೊಳ್ಳುವಿಕೆಯ ಯೋಜನೆಯೇ ಆಗಿದೆ. ಈಗ ಕನ್ನಡ ಗ್ರಂಥಗಳ, ಅದರಲ್ಲೂ ಕಂಪ್ಯೂಟರಿನ ಸಹಾಯ ಬಳಸಿ ಮುದ್ರಣವಾಗದ ಹಳೆಯ ಗ್ರಂಥಗಳನ್ನು ಡಿಜಿಟಲಿಸುವ ವಿಷಯಕ್ಕೆ ಬಂದಾಗ ಸಮುದಾಯ ಪಾಲ್ಗೊಳ್ಳುವಿಕೆಯ ಯೋಜನೆಗಳು ಮಹತ್ವ ಪಡೆದುಕೊಳ್ಳುತ್ತವೆ.

ಸಮುದಾಯದ ಪಾಲ್ಗೊಳ್ಳುವಿಕೆಯಲ್ಲಿ ಒ.ಸಿ.ಆರ್. ರೂಪಿಸುವುದು, ಪಠ್ಯದಿಂದ ಮಾತು, ಮಾತಿನಿಂದ ಪಠ್ಯಕ್ಕೆ ಬದಲಾಯಿಸುವ ತಂತ್ರಜ್ಞಾನವನ್ನು ಇನ್ನಷ್ಟು ಪರಿಣಾಮಕಾರಿಯಾಗಿ ರೂಪಿಸುವುದು, ಎಲ್ಲ ವಿಶ್ವವಿದ್ಯಾಲಯಗಳಲ್ಲಿನ ಅತ್ಯಮೂಲ್ಯವಾದ ಗ್ರಂಥಗಳೆಲ್ಲವನ್ನೂ ಡಿಜಿಟಲಿಸುವುದು- ಹೀಗೆ ಅನೇಕ ಯೋಜನೆಗಳನ್ನು ವಿಶ್ವವಿದ್ಯಾಲಯದ ಮಟ್ಟದಲ್ಲಿ ರೂಪಿಸಿ, ಅದರಲ್ಲಿ ವಿದ್ಯಾರ್ಥಿಗಳು ವ್ಯಾಪಕವಾಗಿ ತೊಡಗಿಕೊಳ್ಳುವಂತೆ ಮಾಡಲು ಬೇಕಿರುವ ಯೋಜನೆ ರೂಪಿಸುವುದನ್ನು, ಬೇಕಿರುವ ಅನುದಾನ ನೀಡುವುದನ್ನು ಸರ್ಕಾರ ಆದ್ಯತೆಯ ಮೇಲೆ ಕೈಗೆತ್ತಿಕೊಳ್ಳಬೇಕು.

೧. ಕೇಂದ್ರ ಸರ್ಕಾರದ ಮಟ್ಟದಲ್ಲಿ ಹಿಂದಿನಿಂದಲೂ ಭಾರತೀಯ ಭಾಷೆಗಳಲ್ಲಿ ತಂತ್ರಜ್ಞಾನಕ್ಕೆ ಸಂಬಂಧಿತ ಹೂಡಿಕೆಯೆಲ್ಲವೂ ಕನ್ನಡಿಯೊಳಗಿನ ಗಂಟಿನಂತೆಯೇ ಕಾಣಿಸುತ್ತ ಬಂದಿದೆ. ಸಿಡ್ಯಾಕ್ ತರಹ ಸಂಸ್ಥೆಯ ಮೊದಲ ಆದ್ಯತೆಯೇನಿದ್ದರೂ ಹಿಂದಿಗೆ ಹಿಂದಿಯನ್ನು ಆದ್ಯತೆಯಾಗಿಸಿಕೊಂಡು ಯೋಜನೆಗಳನ್ನು ರೂಪಿಸಿ, ಆನಂತರ ಅವುಗಳನ್ನು ಕನ್ನಡದಂತಹ ಭಾಷೆಗೆ ತರುವ ಪ್ರಯತ್ನಗಳಿಂದಾಗಿ ಕನ್ನಡದ ಅಗತ್ಯಗಳನ್ನು ಸರಿಯಾಗಿ ಮನಗಾಣುವಂತಹ ತಂತ್ರಜ್ಞಾನದ ಪರಿಹಾರಗಳನ್ನು ರೂಪಿಸುವಲ್ಲಿ ಇವು ಸೋತಿವೆ. ಹೀಗಾಗಿ ಸರ್ಕಾರದ ಮಟ್ಟದಲ್ಲಿ ಯಾವುದೇ ಕನ್ನಡ ತಂತ್ರಜ್ಞಾನ ಸಂಬಂಧಿತ ಯೋಜನೆಗಳು ರೂಪುಗೊಳ್ಳುವಾಗ ಅವು ಕನ್ನಡದಲ್ಲೇ ರೂಪುಗೊಂಡು ಅನುಷ್ಠಾನಕ್ಕೆ ಬರುವುದಕನ್ನು ಖಾತರಿಪಡಿಸುವ ಕೆಲಸವಾಗುವಂತೆ ಸರ್ಕಾರ ಎಚ್ಚರವಹಿಸಬೇಕು.

೩. ಕರ್ನಾಟಕದಲ್ಲಿ ಮಾರಾಟವಾಗುವ ಎಲ್ಲ ಬಳಕೆಯ ಡಿಜಿಟಲ್ ಸಾಧನಗಳು ಫ್ಯಾಕ್ಟರಿಯಿಂದ ಹೊರಟಾಗಲೇ ಕನ್ನಡವನ್ನು ಬೆಂಬಲಿಸುವ ಹಾಗಿರಬೇಕು. ಇಲ್ಲದಿದ್ದಲ್ಲಿ ಅವುಗಳ ಮಾರಾಟಕ್ಕೆ ಕರ್ನಾಟಕದಲ್ಲಿ ಅವಕಾಶ ಕೊಡುವುದಿಲ್ಲ ಅನ್ನುವ ನಿಲುವು ಸರ್ಕಾರ ತಳೆದಿದ್ದರೆ ಕಿಂಡಲ್ ಆಗಲಿ, ಮೊಬೈಲ್ ಆಗಲಿ ಕನ್ನಡವನ್ನು ಹೊತ್ತೇ ಕರ್ನಾಟಕದ ಪ್ರವೇಶಿಸುತ್ತಿದ್ದವು. ಈ ಬಗ್ಗೆ ಈಗಲಾದರೂ ಒಂದು ಸೂಕ್ತ ನೀತಿ ಏರ್ಪಡಬೇಕು.

೪. ಸರ್ಕಾರ ದೊಡ್ಡ ಮಟ್ಟದಲ್ಲಿ ಪ್ರಕಾಶನದ ಉದ್ಯಮಕ್ಕೆ ಬೆಂಬಲವಾಗಿ ನಿಂತಿದೆ. ಜೊತೆಯಲ್ಲಿ ಸರ್ಕಾರ ಬೇರೆ ಬೇರೆ ಅಕಾಡೆಮಿಗಳ ಮೂಲಕ ಪ್ರಕಟವಾಗುವ ಪುಸ್ತಕಗಳು ಸಾಕಷ್ಟಿವೆ. ಈಗ ಸರ್ಕಾರದ ಅಂತಹ ಪುಸ್ತಕಗಳಿಗೆ ಬೆಂಬಲ ನೀಡಲು, ಈ ಪುಸ್ತಕಗಳು ಡಿಜಿಟಲ್ ಮಾಧ್ಯಮದಲ್ಲಿ ಸುಲಭವಾಗಿ ಓದಲಾಗುವಂತೆ ಈ-ಪಬ್ ಮಾದರಿಯಲ್ಲೂ ಪ್ರಕಟವಾಗಬೇಕು ಅನ್ನುವ ಶರತ್ತು ವಿಧಿಸಬೇಕು.

೫. ಗ್ರಂಥಗಳ ಡಿಜಿಟಲಿಸುವಿಕೆಯ ಚರ್ಚೆ ಕೇವಲ ಪುಸ್ತಕಗಳಿಗೆ ಸೀಮಿತ ವಾಗದೇ ಮೌಖಿಕ ರೂಪದಲ್ಲಿರುವ ನಾಟಕ, ಯಕ್ಷಗಾನ, ಜಾನಪದ ಹಾಡುಗಾರಿಕೆ ಹೀಗೆ ಅನೇಕ ಪ್ರಕಾರದ ಅರಿವನ್ನು ಡಿಜಿಟಲ್ ಸ್ವರೂಪದಲ್ಲಿ ಸೆರೆ ಹಿಡಿದು ಡಾಕ್ಯುಮೆಂಟರಿ, ಆಡಿಯೋ ಪುಸ್ತಕಗಳ ರೂಪದಲ್ಲಿ ಲಭ್ಯವಾಗುವಂತೆ ಮಾಡಬೇಕು. ಇಲ್ಲಿ ಸರ್ಕಾರ, ಸಮುದಾಯ ಮತ್ತು ಮಾರುಕಟ್ಟೆ ಎಲ್ಲರಿಗೂ ಪಾತ್ರವಿದೆ.

೬ ಇಂದಿನ ಮಾರುಕಟ್ಟೆ ಆಧಾರಿತ ಅರ್ಥವ್ಯವಸ್ಥೆಯಲ್ಲಿ ಖಾಸಗಿ ಸಂಸ್ಥೆಗಳು ಅರ್ಥವ್ಯವಸ್ಥೆಯನ್ನು ವ್ಯಾಪಕವಾಗಿ ಪ್ರಭಾವಿಸುವ ಮಟ್ಟದಲ್ಲಿವೆ. ಸರ್ಕಾರ, ಸಂಘ ಸಂಸ್ಥೆಗಳ ಮಾತುಗಳಿಗಿಂತ ಈ ಸಂಸ್ಥೆಗಳು ಕೇಳುವುದು ಹಣ ತೆತ್ತು ಸೇವೆ ಇಲ್ಲವೇ ಉತ್ಪನ್ನ ಖರೀದಿಸುವ ಗ್ರಾಹಕನದ್ದು. ಆದ್ದರಿಂದ ಇದೇ ಗ್ರಾಹಕನ ಕೊಳ್ಳುವ ಶಕ್ತಿಯನ್ನೇ ಬಳಸಿ ಕನ್ನಡದಲ್ಲಿ ಸೇವೆ, ಉತ್ಪನ್ನ ಒದಗಿಸುವಂತೆ ಒತ್ತಾಯಿಸುವ ಕನ್ನಡ ಕೇಂದ್ರಿತ ಗ್ರಾಹಕ ಚಳವಳಿಯ ಮೂಲಕ ಮಾರುಕಟ್ಟೆಯಲ್ಲಿ ಖಾಸಗಿ ಸಂಸ್ಥೆಗಳು ಒದಗಿಸುವ ಉತ್ಪನ್ನ, ಸೇವೆಗಳನ್ನು ಕನ್ನಡದಲ್ಲಿ ಪಡೆಯುವ ಪ್ರಯತ್ನಗಳು ಇನ್ನಷ್ಟು ವ್ಯಾಪಕವಾಗಬೇಕು. ಕಿಂಡಲಿನಲ್ಲಿ ಕನ್ನಡ ಪುಸ್ತಕ ಕಾಣಿಸುವಂತಾಗುವುದು, ಇನ್ನಷ್ಟು ದೊಡ್ಡ ಪ್ರಮಾಣದಲ್ಲಿ ಆಡಿಯೋ ಪುಸ್ತಕಗಳು ಸಿಗುವಂತಾಗಲು ಗ್ರಾಹಕ ಹಕ್ಕೊತ್ತಾಯದ ಶಕ್ತಿಯನ್ನು ಬಳಸಿಕೊಳ್ಳಬೇಕು.

ಡಿಜಿಟಲ್ ಜಗತ್ತಿನಲ್ಲಿ ಕನ್ನಡವನ್ನು ಪೂರ್ತಿಯಾಗಿ ಸಜ್ಜುಗೊಳಿಸುವುದು ಒಂದು ದೊಡ್ಡ ಯೋಜನೆ, ಸಾಹಿತ್ಯ ಸಮ್ಮೇಳನದ ಗೋಷ್ಠಿಗಳು ಈ ವಿಷಯವನ್ನು ಎತ್ತಿಕೊಳ್ಳುವುದು ಸಂತೋಷವೇ. ಆದರೆ ಸಮುದಾಯದ ನೆಲೆಯಲ್ಲಿ, ಸರ್ಕಾರದ ನೆಲೆಯಲ್ಲಿ ಹಾಗೂ ಮಾರುಕಟ್ಟೆಯಲ್ಲಿ ನೆಲೆಯಲ್ಲಿ ಆಗಬೇಕಿರುವ ಕೆಲಸಗಳ ಬಗ್ಗೆ ಒಂದು ನಿರ್ದಿಷ್ಟ ಯೋಜನೆ ರೂಪಿಸಿ, ಅದರ ಅನುಷ್ಠಾನದತ್ತ ಗಮನ ಕೊಟ್ಟಲ್ಲಿ ಮಾತ್ರ ಅದು ಇನ್ನಷ್ಟು ಅಚ್ಚುಕಟ್ಟಾಗಿ, ವ್ಯಾಪಕವಾಗಿ ಕನ್ನಡವನ್ನು ಡಿಜಿಟಲ್ ಜಗತ್ತಿನಲ್ಲಿ ಹಬ್ಬಿಸುವ ಕೆಲಸ ಮಾಡಬಹುದು. ಅಂತಹದೊಂದು ಆಶಯದೊಂದಿಗೆ, ಈ ವಿಷಯದ ಬಗ್ಗೆ ಅನೇಕ ಸಲಹೆ ಅನಿಸಿಕೆ ಬರೆದು ಕಳಿಸಿದ ಎಲ್ಲ ಗೆಳೆಯರಿಗೂ ಇನ್ನೊಮ್ಮೆ ವಂದಿಸಿ, ನನ್ನ ಮಾತಿಗೆ ತೆರೆ ಎಳೆಯುತ್ತೇನೆ.

# ಕನ್ನಡ ತಂತ್ರಜ್ಞಾನದ ಸವಾಲುಗಳು (ಪ್ರತಿಕ್ರಿಯೆ)

- ಪ್ರೊ. ಎಂ.ವೈ. ಶಿವರಾಮು

ಎರಡು ಸಾವಿರಕ್ಕೂ ಮಿಗಿಲಾದ ಇತಿಹಾಸ ಹೊಂದಿರುವ ಪ್ರಪಂಚದ ಕೆಲವೇ ಕೆಲವು ಭಾಷೆಗಳಲ್ಲಿ ಕನ್ನಡವೂ ಒಂದು. ಭಾರತೀಯ ಭಾಷಾ ಪರಿವಾರದಲ್ಲಿ ಸ್ವಂತ ಲಿಪಿ ಮತ್ತು ಅಂಕಿಗಳನ್ನು ಹೊಂದಿರುವ ಶ್ರೀಮಂತ ಭಾಷೆ ಕನ್ನಡ, ಕ್ರಿ.ಪೂ.೩ನೇ ಶತಮಾನದ ಅಶೋಕನ ಶಾಸನದಲ್ಲಿಯೇ ಕನ್ನಡ ಅಂಕಿಗಳು ಮೊದಲಿಗೆ ಕಾಣಸಿಗುತ್ತವೆ. ಆದಿಕವಿ ಪಂಪ ಕೂಡ ತನ್ನ ಆದಿಪುರಾಣದಲ್ಲಿ ಅಂಕಿಗಳನ್ನು ಕುರಿತು ಪ್ರಸ್ತಾಪಿಸಿದ್ದಾನೆ.

ಕನ್ನಡ ಭಾಷೆ ಮಾತನಾಡುವವರ ಸಂಖ್ಯೆಯ ದೃಷ್ಟಿಯಿಂದ ಬೃಹತ್ತನ್ನೂ, ಸಾಹಿತ್ಯಕ ಶ್ರೀಮಂತಿಕೆಯಿಂದ ಮಹತ್ವವನ್ನೂ ಪಡೆದಿರುವಂತಹುದು. ಆಕ್ಸಫರ್ಡ್ ಶಬ್ದಕೋಶ ದಲ್ಲಿಯೂ ಜಾಗ ಪಡೆದಿರುವಂತಹ ಹೆಗ್ಗಳಿಕೆ ಕನ್ನಡದ್ದು, ಅಕ್ಷರ ಜ್ಞಾನ ಹೊಂದಿರದ ಜನಪದರಿಂದಲೇ ಕನ್ನಡ ಸಾಹಿತ್ಯದ ಕಂಪು ಪಸರಿಸುತ್ತಾ ಬಂದಿದೆ. ಕವಿರಾಜಮಾರ್ಗ ದಲ್ಲಿಯೇ ಜನಪದರನ್ನು ಕುರಿತು 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್' ಎಂದು ಉದ್ಧರಿಸಲಾಗಿದೆ. ಲಾವಣಿಯಂತಹ ವಿಶಿಷ್ಟ ಕಾವ್ಯ ಪರಂಪರೆ ಕನ್ನಡ ಜನಪದ ಸಾಹಿತ್ಯದಲ್ಲಿ ಒಡಮೂಡಿದೆ.

ಪಂಪನಿಗಿಂತ ಪೂರ್ವದಲ್ಲಿಯೇ ಕನ್ನಡ ಸಾಹಿತ್ಯ ಪ್ರಭೆ ಪ್ರಕಾಶಮಾನವಾಗಿತ್ತು ಎಂಬುದು ತಿಳಿದು ಬಂದರೂ, ಅದರ ಪ್ರಕಾಶಮಾನತೆಯು ಅಳತೆಗೆ ನಿಲುಕುತ್ತಿಲ್ಲ. ಪಂಪನಿಂದ ಮೊದಲ್ಗೊಂಡು ಇಂದಿನವರೆಗೂ ಹಲವಾರು ಮಹಾನ್ ಕವಿಗಳು ಕನ್ನಡ ಸಾಹಿತ್ಯ ಪ್ರಭೆಯನ್ನು ಉಜ್ವಲಗೊಳಿಸಿದ್ದಾರೆ. ಕನ್ನಡಕ್ಕೆ ಕೊಡಮಾಡಿರುವ ಎಂಟು ಜ್ಞಾನಪೀಠ ಪ್ರಶಸ್ತಿಗಳು ಭಾರತೀಯ ಸಾಹಿತ್ಯ ಪ್ರಪಂಚದಲ್ಲಿನ ಕನ್ನಡದ ಮಹತ್ವದ ಸ್ಥಾನವನ್ನು ಪುಷ್ಟಿಕರಿಸಿವೆ.

**ಕನ್ನಡ ತಂತ್ರಜ್ಞಾನದ ಸವಾಲುಗಳು**

ಇಂದು ತಂತ್ರಜ್ಞಾನದಿಂದಾಗಿಯೇ ಜಗತ್ತು ಒಂದು ಹಳ್ಳಿಯಾಗಿದೆ. ಸಂಪರ್ಕ ಮತ್ತಿತರ ಕ್ಷೇತ್ರಗಳಲ್ಲಿ ಅಗಾಧವಾದ ಬದಲಾವಣೆಗಳಾಗಿವೆ. ಎಲ್ಲ ಕ್ಷೇತ್ರಗಳಲ್ಲಿಯೂ ಹೊಸ ಹೊಸ ಸವಾಲುಗಳು ಎದುರಾಗುತ್ತಿವೆ. ಜ್ವರ ಮತ್ತು ಮಲೇರಿಯಾ ಜ್ವರ ಇವೆರಡನ್ನು ಕೇಳಿ ಬೆಳೆದ ನಾವು ಇಂದು ಹಂದಿ,ಹಕ್ಕಿ,ಟೈಪಾಯಿಡ್,ವೈರಸ್,ಡೆಂಗ್ಯೂ ಇನ್ನಿತರ ತರಹೇವಾರಿ ಜ್ವರಗಳನ್ನು ಕಾಣುತ್ತಿದ್ದೇವೆ. ಏಡ್ಸ್, ಕ್ಯಾನ್ಸರ್‌ನಂತಹ ರೋಗಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ವೈದ್ಯಕೀಯ ಜಗತ್ತು ಹೆಣ ಗಾಡುತ್ತಿರುವುದು ನಮಗೆಲ್ಲಾ ತಿಳಿದಿದೆ.

ಹೀಗೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಹೊಸ ಹೊಸ ಸವಾಲುಗಳು ಬಂಡೆಯಂತೆ ಅಪ್ಪಳಿಸುತ್ತಿವೆ. ಅಂತೆಯೇ ಕನ್ನಡ ಭಾಷೆಯನ್ನು ಸರ್ವ ರೀತಿಯಲ್ಲಿ ತಂತ್ರಜ್ಞಾನಕ್ಕೆ ಒಗ್ಗಿಸಿಕೊಳ್ಳುವ ಸವಾಲಿದೆ. ಕನ್ನಡಿಗರೇ ಆದ ಶ್ರೀ ಕೆ.ಪಿ.ರಾವ್ ರವರು ೧೯೭೦ ರ ದಶಕದಲ್ಲಿ ಪ್ರಥಮ ಬಾರಿಗೆ ಫೋಟೋ ಟೈಪ್ ಸೆಟ್ಟಿಂಗ್ ಯಂತ್ರದಲ್ಲಿ ಭಾರತೀಯ ಭಾಷೆಗಳನ್ನು ಅಳವಡಿಸುವ ಕೆಲಸವನ್ನು ಆರಂಭಿಸಿದರು. ಕನ್ನಡ ಭಾಷೆ ಕಂಪ್ಯೂಟರಲ್ಲಿ ಒಡಮೂಡಲು ಕಾರಣಕರ್ತರಾದರು. ಹೀಗೆ ಪ್ರಾರಂಭವಾದ ಕನ್ನಡ ಗಣಕೀಕರಣ ತನ್ನ ಸ್ವರೂಪವನ್ನು ಆಗಿಂದಾಗ್ಗೆ ಬದಲಿಸಿಕೊಂಡು ಉನ್ನತೀಕರಣಗೊಳ್ಳುತ್ತಿದೆ.

ತಂತ್ರಜ್ಞಾನ ಎಲ್ಲಾ ಕ್ಷೇತ್ರದಲ್ಲಿಯೂ ಹಾಸುಹೊಕ್ಕಾಗಿದೆ.ಅಂತೆಯೇ ಭಾಷಾ ಕ್ಷೇತ್ರದಲ್ಲಿಯೂ ಅದು ವ್ಯಾಪಕಗೊಂಡಿದೆ. ಮಾನವ ಎಲ್ಲಾ ಸಮಯದಲ್ಲಿಯೂ ಸರಳತೆಯನ್ನು ಬಯಸುತ್ತಾನೆ. ಅಂತೆಯೇ ಆತನ ಬಳಕೆಗೆ ನಿಲುಕುವಂತೆ, ಸರಳವಾಗಿಸುವ ಸವಾಲು ಕನ್ನಡ ತಂತ್ರಜ್ಞಾನ ಅಭಿವೃದ್ಧಿಪಡಿಸುವವರದಾಗಿದೆ. ಇಂದು ಡಿ.ಟಿ.ಪಿ. ಕೇಂದ್ರಗಳಲ್ಲಿ ಕನ್ನಡ ಮುದ್ರಣಕ್ಕಾಗಿ ಇಂಗ್ಲಿಷ್ ಮುದ್ರಣಕ್ಕಿಂತ ಅಧಿಕ ಹಣ ಪಡೆಯುತ್ತಿದ್ದಾರೆ. ಅವರನ್ನು ಪ್ರಶ್ನಿಸಿದರೆ ಅವರು ಹೇಳುವುದು ಕನ್ನಡ ಟೈಪಿಂಗ್ ಇಂಗ್ಲಿಷ್ ಟೈಪಿಂಗ್‌ಗಿಂತ ಕಠಿಣ. ನಮ್ಮಲ್ಲಿ ಒತ್ತು, ದೀರ್ಘ, ಇಳಿ ಮುಂತಾದುವನ್ನು ಒಡಮೂಡಿಸಲು ಕಂಪ್ಯೂಟರ್‌ನ ಕೀಬೋರ್ಡ್‌ನಲ್ಲಿ ಒಡಮೂಡಿರುವ ಇಂಗ್ಲಿಷ್‌ನ ೨೬ ಅಕ್ಷರಗಳನ್ನು ಕನ್ನಡದ ೪೯ ಅಕ್ಷರಗಳಿಗೆ ಹೊಂದಿಸಲಾಗಿದೆ. ಈ ರೀತಿಯ ಗೊಂದಲಗಳನ್ನು ಪರಿಹರಿಸಿ ಅದನ್ನು ಸುಲಲಿತಗೊಳಿಸಬೇಕಾಗಿದೆ. ಟೈಪಿಂಗ್ ಮಾಡುವವರಲ್ಲಿ ಕನ್ನಡವೂ ಇಂಗ್ಲಿಷಿನಂತೆ ಸರಳ ಸುಲಭ ಎನ್ನಿಸಬೇಕಾಗಿದೆ. ಈ ನಿಟ್ಟಿನಲ್ಲಿ ತಂತ್ರಜ್ಞರು ಪರಿಶ್ರಮಿಸಬೇಕಾಗಿದೆ. 'ಹಾಸಿಗೆ ಇದ್ದಷ್ಟು ಕಾಲು ಚಾಚು' ಎಂಬ ಗಾದೆಗೆ ಬದಲಾಗಿ ಕಾಲಿದ್ದಷ್ಟಕ್ಕೆ ಹಾಸಿಗೆಯನ್ನು ಹೊಲಿಯಬೇಕಾದ ಅಗತ್ಯತೆಯಿದೆ. ಕನ್ನಡ ಅಕ್ಷರಗಳಿಗೆ ಹೊಂದಿಕೆಯಾಗುವಂತಹ ಕೀಬೋರ್ಡನ್ನೇ ಕಂಡುಹಿಡಿಯಬೇಕಾಗಿದೆ.

ಇಂತಹ ತಾಂತ್ರಿಕ ಹೊಸ ಸವಾಲು ಕನ್ನಡ ಭಾಷೆಗಷ್ಟೇ ಸೀಮಿತವಾದುದಲ್ಲ, ಅದು ಎಲ್ಲಾ ಭಾಷೆಗಳಲ್ಲಿಯೂ ಇದೆ. ಇಂಗ್ಲಿಷಿನಂತಹ ಭಾಷೆಗೆ ಎದುರಾಗಿರುವ ಸವಾಲುಗಳನ್ನು ಸರಿಪಡಿಸಲು ಬಹುದೊಡ್ಡ ಸಂಖ್ಯೆಯೇ ಇದೆ. ಆದರೆ ಕನ್ನಡದಂತಹ ಭಾಷೆಗಳ ಸವಾಲು ಸರಿಪಡಿಸುವಂಥ ನಿಪುಣರು ಕೆಲವೇ ಮಂದಿ, ನಮ್ಮಲ್ಲಿಯೂ ಕಂಪ್ಯೂಟರ್ ತಂತ್ರಜ್ಞಾನ ಬಲ್ಲ ಬಹಳಷ್ಟು ಮಂದಿ ಇದ್ದರೂ, ಸಮರ್ಥವಾಗಿ ಕನ್ನಡ ಕಲಿಯದ ಕಾರಣ ಅವರಿಂದ ಉತ್ತರ ನಿರೀಕ್ಷಿಸುವುದು ಸಾಧ್ಯವಿಲ್ಲ. ಇಂತಹ ಸಮಸ್ಯೆಯಿಂದ ಪಾರಾಗಲು ಶಿಕ್ಷಣದಲ್ಲಿ ಮಾತೃಭಾಷೆ ಮಾಧ್ಯಮವಾದರೆ ಸಹಜವಾಗಿಯೇ ಕನ್ನಡ ಕಲಿಕೆ ವಿಸ್ತರಿಸಿ ಕನ್ನಡ ಸಮಸ್ಯೆಗೆ ತಕ್ಕ ಪರಿಹಾರ ದೊರಕಿಸಿಕೊಳ್ಳಲು ಸಹಕಾರಿಯಾಗಬಹುದು.

ಇಂದು ಫೇಸ್‌ಬುಕ್, ವಾಟ್ಸಪ್, ಟ್ವಿಟರ್, ಬ್ಲಾಗ್ ಮತ್ತಿತರ ಕಡೆಗಳಲ್ಲಿ ನಿಧಾನವಾಗಿ ಕನ್ನಡಭಾಷೆ ನೆಲೆಯೂರುತ್ತಿದೆ. ವಾಟ್ಸಾಪ್‌ನಲ್ಲಿ ಕನ್ನಡ ಬಳಕೆಯ ತಂತ್ರಜ್ಞಾನ

ಅಭಿವೃದ್ಧಿಗೊಂಡಂತೆ ಅಲ್ಲಿ ಕನ್ನಡ ಬಳಕೆಯ ಪ್ರಮಾಣ ಅಧಿಕವಾಗುತ್ತಿದೆ. ಅಲ್ಲದೆ ಇಲ್ಲಿ ಕನ್ನಡ ಬಳಕೆ ಕಂಪ್ಯೂಟರ್‌ಗಿಂತಲೂ ಸರಳ ಸುಲಭದ್ದಾಗಿದೆ. ಅವಕಾಶ ಸಿಕ್ಕರೆ ಎಲ್ಲರೂ ಆಟಗಾರರೇ' ಎಂಬಂತೆ ತಾಂತ್ರಿಕವಾಗಿ ಕನ್ನಡವನ್ನು ಸಜ್ಜುಗೊಳಿಸುವ ಕೆಲಸ ತಂತ್ರಜ್ಞರಿಂದಾದರೆ ಅದರ ಬಳಕೆ ಸಮೃದ್ಧಗೊಳ್ಳುತ್ತದೆ. ಕಂಪ್ಯೂಟರಲ್ಲಿ ಕನ್ನಡದ ಬಳಕೆ ಸರಳಗೊಳ್ಳಬೇಕಾದ ಅಗತ್ಯವಿದೆ. ಮಿತ್ರಮಾಧ್ಯಮ ದವರು 'ಕಂಪ್ಯೂಟರ್ ಮತ್ತು ಕನ್ನಡ' ಎಂಬ ಪುಸ್ತಕ ಮಾಡಿ, ಅದು ಎಲ್ಲರಿಗೂ ಆನ್‌ಲೈನ್‌ನಲ್ಲಿ ಉಚಿತವಾಗಿ ದೊರೆಯುವಂತೆ ಮಾಡಿ ಕನ್ನಡಿಗರ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಇಂತಹ ಪ್ರಯತ್ನಗಳು ಎಲ್ಲೆಡೆಯೂ ಸಾಗಿದರೆ ಕನ್ನಡಭಾಷೆ ತಂತ್ರಜ್ಞಾನದಲ್ಲಿಯೂ ಮೇಲುಗೈ ಸಾಧಿಸಲಿದೆ. ಅದು ಎಲ್ಲರಿಗೂ ತಲುಪಿ ಅದರ ವ್ಯಾಪಕ ಬಳಕೆಯಾಗುತ್ತದೆ. ಕನ್ನಡದ ಎಲ್ಲಾ ಪುಸ್ತಕಗಳು ಅಂತರ್ಜಾಲದಲ್ಲಿ ದೊರೆಯುವಂತಾಗಬೇಕು.

ಎಲ್ಲಾ ಕ್ಷೇತ್ರಗಳಲ್ಲಿಯೂ ತಂತ್ರಜ್ಞಾನದ್ದೇ ಮೇಲುಗೈ. ಅಂತೆಯೇ ಭಾಷಾ ಕ್ಷೇತ್ರದಲ್ಲಿನ ತಂತ್ರಜ್ಞಾನದ ಬಳಕೆಯಲ್ಲಿ ಕನ್ನಡವೂ ಸದೃಢಗೊಳ್ಳಬೇಕಾಗಿದೆ. 'ಹೊತ್ತು ಬಂದ ಕಡೆ ಕೊಡೆ ಹಿಡೀಬೇಕು' ಎಂಬಂತೆ ಹೊಸ ಹೊಸ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ನಮ್ಮ ಅಸ್ತಿತ್ವವನ್ನು ರುಜುವಾತುಗೊಳಿಸಿಕೊಳ್ಳಬೇಕು. ಅಂತಹ ಕಾರ್ಯ ಹಲವರಿಂದಾಗಬೇಕೆ ಹೊರತು ಕೆಲವರಿಂದಲ್ಲ. ಈ ನಿಟ್ಟಿನಲ್ಲಿ ಸಾಗಬೇಕಾದ ದೂರ ಇನ್ನೂ ಸಾಕಷ್ಟಿದೆ. ಅಂತಹ ಪ್ರಯತ್ನಗಳು ನಿರಂತರವಾಗಿ ಸಾಗುತ್ತಿರಲಿ.

**ಗೋಷ್ಠಿ - ೯**

# ವಿಜ್ಞಾನ ತಂತ್ರಜ್ಞಾನ : ಕನ್ನಡದ ಬಳಕೆ

# ಅಧ್ಯಕ್ಷ ಭಾಷಣ

## ನಾಡೋಜ ಡಾ.ಪಿ.ಎಸ್.ಶಂಕರ್

ವಿಜ್ಞಾನ ಮತ್ತು ತಂತ್ರಜ್ಞಾನ ಜೀವನದ ಅವಿಭಾಜ್ಯ ಅಂಗಗಳಾಗಿದ್ದು ಅವುಗಳ ಬೆಳವಣಿಗೆ ಮನುಕುಲದೊಟ್ಟಿಗೆ ಸಾಗಿಬಂದಿದೆ. ರುಡ್‌ಯಾರ್ಡ್ ಕಿಪ್ಲಿಂಗ್ ತನ್ನ ಕವನವೊಂದರಲ್ಲಿ ಹೇಳಿದಂತೆ ನಮ್ಮೆಲ್ಲರಿಗೆ ಆರು ಜನ ನಂಬಿಕಸ್ತ ಸ್ನೇಹಿತರಿದ್ದಾರೆ. ಅವರ ಹೆಸರುಗಳು ಏಕೆ? ಯಾವಾಗ? ಎಲ್ಲಿ? ಹೇಗೆ? ಏನು? ಯಾರು? ಈ ಪ್ರಶ್ನೆಗಳನ್ನು ನಮ್ಮ ದೈನಂದಿನ ಜೀವನದಲ್ಲಿ ಹಾಕುತ್ತ ನಾವೆಲ್ಲ ಬೆಳೆದು ಬಂದಿದ್ದೇವೆ. ಅವು ಕೊಡಮಾಡುವ ಉತ್ತರಗಳಿಂದ ನಮ್ಮ ಜ್ಞಾನದ ಪರಿಧಿಯನ್ನು ವಿಸ್ತರಿಸಿ ಕೊಂಡಿದ್ದೇವೆ. ಹೀಗೆ ನಾವು ಕಂಡು ಕೇಳಿದ ವಿಷಯಗಳನ್ನು ಪ್ರಯೋಗಗಳ ಮೂಲಕ ಒರೆಗೆ ಹಚ್ಚಿದಾಗ ಅದು ಕೊಡಮಾಡುವ ಉತ್ತರಗಳನ್ನು ವಿಶ್ಲೇಷಿಸಿ, ಎಲ್ಲ ವಿವರಗಳನ್ನು ಕ್ರೋಢೀಕರಿಸಿ ಸಿದ್ಧಪಡಿಸಿದ ಬರವಣಿಗೆ ಸಂಶೋಧನೆಯಾಗಿ ಪರಿಣಮಿಸುತ್ತದೆ. ಇದು ಸಂಬಂಧಿಸಿದ ತಜ್ಞರ ಅಧ್ಯಯನ ವಸ್ತುವಾಗುತ್ತದೆ. ಅದನ್ನು ಅವರು ನಿರ್ದಿಷ್ಟ ವಿಜ್ಞಾನಕ್ಕೆ ಸಂಬಂಧಿಸಿದ ಪತ್ರಿಕೆಯಲ್ಲಿ ಪ್ರಕಟಿಸುತ್ತಾರೆ. ಒಂದು ವಿಷಯಕ್ಕೆ ಸಂಬಂಧಿಸಿದ ಲೇಖನಗಳನ್ನೆಲ್ಲ ಸಂಗ್ರಹಿಸಿ ಪುಸ್ತಕ ಮಾಡುತ್ತಾರೆ.

ವಿಜ್ಞಾನಿಗಳು ವೈದ್ಯರಾಗಿರಲಿ, ಕೃಷಿ ಪಂಡಿತರಾಗಿರಲಿ, ಪರಿಸರ ತಜ್ಞರಾಗಿರಲಿ, ಭೌತ-ರಸಾಯನಿಕ-ಜೀವವಿಜ್ಞಾನದಂತಹ ಮೂಲಭೂತ ವಿಜ್ಞಾನಕ್ಕೆ ಸಂಬಂಧಿಸಿದ ತಜ್ಞರಾಗಿರಲಿ, ಭೂಗರ್ಭ ವಿಜ್ಞಾನಿಗಳಾಗಿರಲಿ, ಮನೋವಿಜ್ಞಾನಿಯಾಗಿರಲಿ, ಇಲ್ಲವೆ ಬಾಹ್ಯಾಕಾಶ ವಿಜ್ಞಾನಿಯಾಗಿರಲಿ ಅವರು ತಾವು ಪ್ರಾವೀಣ್ಯತೆ ಪಡೆದ ವಿಷಯಗಳನ್ನು ಜನಸಾಮಾನ್ಯರಿಗೆ ಅರ್ಥವಾಗುವ ರೀತಿ ಲೇಖನಗಳ ಮೂಲಕ ಪತ್ರಿಕೆಗಳಲ್ಲಿ, ಪುಸ್ತಕಗಳಲ್ಲಿ ಪ್ರಕಟಿಸುವುದು ಜನಪ್ರಿಯ ವಿಜ್ಞಾನವಾಗಿ ಪರಿಣಮಿಸುತ್ತದೆ. ಅಲ್ಲದೆ ಈ ವಿಷಯವನ್ನು ವಿದ್ಯಾರ್ಥಿಗಳಿಗೆ ಅವರ ಪಠ್ಯಕ್ರಮವನ್ನು ಅನುಸರಿಸಿ ಬೋಧನೆಗೆ ಅನುಕೂಲವಾಗುವಂತೆ ಸಿದ್ಧಪಡಿಸುವ ಪಠ್ಯಪುಸ್ತಕಗಳು ಮತ್ತು ಪೂರಕವಸ್ತುಗಳು ಮತ್ತೊಂದು ಗುಂಪು.

ವಿಜ್ಞಾನ ತಂತ್ರಜ್ಞಾನದಲ್ಲಿ ಕನ್ನಡದ ಬಳಕೆಯ ಬಗ್ಗೆ ವಿಚಾರ ಮಾಡಲು ನೆರೆದಿದ್ದೇವೆ. ದೈನಂದಿನ ಜೀವನದಲ್ಲಿ ಕನ್ನಡದ ಬಳಕೆ ದಿನೇದಿನೇ ಕಡಿಮೆ ಯಾಗುತ್ತಿರುವುದು ಕನ್ನಡದ ಅಭಿಮಾನಿಗಳನ್ನು ವಿವಂಚನೆಗೆ ಈಡುಮಾಡಿದೆ. ಕನ್ನಡದ ಬಳಕೆಯನ್ನು ಕುರಿತಾಗಿ ವಿಶ್ಲೇಷಣೆ ಮಾಡುವಾಗ ಅದನ್ನು ಶಿಕ್ಷಣ ಕ್ಷೇತ್ರದಲ್ಲಿ, ದೈನಂದಿನ ಜೀವನದಲ್ಲಿ, ಸಂಶೋಧನೆಯಲ್ಲಿ, ಬರವಣಿಗೆಯಲ್ಲಿ ಎಂದು ವಿಂಗಡಿಸ ಬಹುದು.

**೧. ಶಿಕ್ಷಣ :**

ನಮ್ಮ ಶಿಕ್ಷಣದಲ್ಲಿ ಕನ್ನಡ ಕಲಿಯುವುದು ಅಪ್ರಸ್ತುತ ಎನಿಸಿದೆ. ವಿದ್ಯಾರ್ಥಿ ಶಾಲೆಯಲ್ಲಿ ವಿಜ್ಞಾನವನ್ನು ಕನ್ನಡ ಮಾಧ್ಯಮದಲ್ಲಿ ಅಭ್ಯಸಿಸಿದರೂ ಮುಂದೆ ಕಾಲೇಜಿನಲ್ಲಿ ವಿಷಯಗಳನ್ನು ಇಂಗ್ಲಿಷಿನಲ್ಲಿ ಕಲಿಯಬೇಕಾಗುತ್ತದೆ. ಮೂಲವಿಜ್ಞಾನವನ್ನು ಅಭ್ಯಸಿಸುವವರ ಸಂಖ್ಯೆ ಗಣನೀಯವಾಗಿ ಕೆಳಕ್ಕಿಳಿದಿದೆ. ವೈದ್ಯ ವಿಜ್ಞಾನಿಗಳು ಮತ್ತು ಎಂಜಿನಿಯರಿಂಗ್ ವಿಷಯಗಳ ಅಧ್ಯಯನದಲ್ಲಿ ವಿದ್ಯಾರ್ಥಿ (ಪಾಲಕರೂ ಸೇರಿ) ಆಸಕ್ತನಾಗಿ ಅವುಗಳ ಬಗ್ಗೆ ಪ್ರಾಧಾನ್ಯತೆಯನ್ನು ನೀಡುತ್ತಾನೆಯೇ ವಿನಃ ಭಾಷೆ ಕಲಿಯುವುದಕ್ಕೆ (ಇಂಗ್ಲಿಷ್ ಸೇರಿ) ಮಹತ್ವ ನೀಡುವುದಿಲ್ಲ. ಶಿಕ್ಷಣದಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಕಲಿಯದಿರುವ ಮಕ್ಕಳನ್ನು ಬಹುಸಂಖ್ಯೆಯಲ್ಲಿ ನೋಡುತ್ತೇವೆ. ಅವರು ಕನ್ನಡದಲ್ಲಿ ಬರೆಯಲಾರರು; ಓದಲಾರರು.

ಬ್ರಿಟಿಷರು ಭಾರತದಲ್ಲಿ ಒಂದೂವರೆ ಶತಮಾನಗಳಿಗಿಂತ ಹಿಂದೆ (೧೮೪೫) ವೈದ್ಯ ಶಿಕ್ಷಣ ಪ್ರಾರಂಭಿಸಿದ್ದು ಕಲಕತ್ತಾ (ಇಂದು ಕೊಲ್ಕತ್ತಾದಲ್ಲಿ. ಅಲ್ಲಿ ಬಂಗಾಳಿಯಲ್ಲಿ ಓದಿದ ವಿದ್ಯಾರ್ಥಿಗಳಿಗೆ ಬಂಗಾಳಿಯಲ್ಲಿಯೇ ವೈದ್ಯ ಶಿಕ್ಷಣ ನೀಡುವ ಪರಿಪಾಠವಿದ್ದಿತು. ಅವರನ್ನು ಬಂಗಾಲದ ಗ್ರಾಮೀಣ ಪ್ರದೇಶದಲ್ಲಿ ವೈದ್ಯಕೀಯ ಸೇವೆ ನೀಡುವಂತೆ ತರಬೇತಿ ನೀಡಲಾಗುತ್ತಿದ್ದಿತು.

ಅದೇ ಬಗೆಯ ಪದ್ಧತಿ ನಿಜಾಮರ ಆಳ್ವಿಕೆಗೆ ಸೇರಿದ ಹೈದರಾಬಾದ್ ಸಂಸ್ಥಾನ (ಈಗ ಅದು ತೆಲಂಗಾಣ, ಮಹಾರಾಷ್ಟ್ರದ ಮರಾಠವಾಡ ಮತ್ತು ಹೈದರಾಬಾದ್ ಕರ್ನಾಟಕವೆಂದು ಹಂಚಿಹೋಗಿದೆ)ದಲ್ಲಿದ್ದಿತು. ಅಲ್ಲಿ ವೈದ್ಯ ಶಿಕ್ಷಣದ ಮಾಧ್ಯಮ ಉರ್ದು ಆಗಿದ್ದಿತು. ಅದಕ್ಕೆ ಬೇಕಾದ ಪಠ್ಯಪುಸ್ತಕಗಳು ಲಭ್ಯವಿದ್ದವು. ಎರಡು ತಲೆಮಾರುಗಳ ಹಿಂದೆ ಉಸ್ಮಾನಿಯ ವಿಶ್ವವಿದ್ಯಾಲಯದಿಂದ ವೈದ್ಯ ಪದವಿ ಪಡೆದವರೆಲ್ಲ ಉರ್ದು ಮಾಧ್ಯಮದಲ್ಲಿ ಓದಿದವರು.

ಇಂದಿನ ವಿಷಯಕ್ಕೆ ವೈದ್ಯ ವಿಜ್ಞಾನದ ಉದಾಹರಣೆಯನ್ನೇ ತೆಗೆದುಕೊಳ್ಳೋಣ. ವೈದ್ಯ ವಿದ್ಯಾರ್ಥಿಗಳ ಆಯ್ಕೆ ದೇಶವ್ಯಾಪಿಯಾಗಿ ಜರುಗುವುದರಿಂದ ಮತ್ತು ಹೊರ ರಾಜ್ಯಗಳಿಂದ ಕರ್ನಾಟಕಕ್ಕೆ ಶಿಕ್ಷಣ ಪಡೆಯಲು ಬರುವುದರಿಂದ ಕನ್ನಡದಲ್ಲಿ ವೈದ್ಯ ಬೋಧನೆಯನ್ನು ಊಹಿಸಲಾಗದು ಮತ್ತು ಆ ದಿಶೆಯಲ್ಲಿ ಪ್ರಯತ್ನವನ್ನೂ ಮಾಡಬಾರದು. ಇಂಗ್ಲಿಷ್ ಅಂತಾರಾಷ್ಟ್ರೀಯ ಮನ್ನಣೆ ಪಡೆದಿದ್ದು ವೈದ್ಯಕೀಯ ಬೋಧನೆ ಅದೇ ಭಾಷೆಯಲ್ಲಿ ಜರುಗಬೇಕು.

ವೈದ್ಯ ವಿದ್ಯಾರ್ಥಿ ರೋಗಿಯೊಡನೆ ಮಾತನಾಡುವ ಅವಕಾಶವನ್ನು ಕಾಲೇಜು ಸೇರಿದ ವರುಷದಿಂದಲೇ ಇನ್ನು ಮುಂದೆ ಪಡೆಯಲಿದ್ದಾನೆ. ಆಸ್ಪತ್ರೆಯಲ್ಲಿನ ಹೊರ ಮತ್ತು ಒಳರೋಗಿಗಳು ತಮ್ಮ ಕಾಯಿಲೆಯ ವಿವರಗಳನ್ನು ತಾವಾಡುವ ಭಾಷೆಯಲ್ಲಿ

(ಕನ್ನಡ) ನೀಡುತ್ತಾರೆ. ಆ ವಿವರಗಳನ್ನು ಮತ್ತಷ್ಟು ಆಳವಾಗಿ ಪ್ರಶ್ನಿಸಿ ರೋಗಿಯ ಇತಿಹಾಸ, ಕೌಟುಂಬಿಕ ಇತಿಹಾಸ, ವೈಯಕ್ತಿಕ ಇತಿಹಾಸವನ್ನು ದೊರಕಿಸಿ ಅದನ್ನು ಕೇಸ್ ಶೀಟ್‌ನಲ್ಲಿ ಬರೆಯಬೇಕಾಗುತ್ತದೆ. ಹಾಗೆ ಮಾಡಬೇಕಾದರೆ ರೋಗಿ ಬಳಸುವ ಪ್ರಚಲಿತವಿರುವ ಕನ್ನಡ ಶಬ್ದಗಳು (ಇದು ಕರ್ನಾಟಕದಲ್ಲಿನ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಬದಲುಗೊಳ್ಳುತ್ತದೆ) ಪರಿಚಿತವಿರಬೇಕು.

ಕೆಲವೊಮ್ಮೆ ಮಾತುಗಳು ಅಪಾರ್ಥಕ್ಕೆಡೆ ಮಾಡಿಕೊಡಬಹುದು. ಮೈಸೂರಿನಲ್ಲಿ ರೋಗಿಗೆ ಆತ ಕಾಯಿಲೆಯಿಂದ ಚೇತರಿಸಿಕೊಂಡು ಆರೋಗ್ಯವಂತನಾಗುತ್ತಾನೆ ಎಂಬ ಭರವಸೆಯನ್ನು ನೀಡಲು 'ಎಲ್ಲ ಸರಿ ಹೋಗುತ್ತೆ' ಎಂದು ಹೇಳಿ ಭರವಸೆ ನೀಡುತ್ತಾರೆ. ಅದೇ ಮಾತನ್ನು ಬೀದರ್‌ನಲ್ಲಿ ಆಸ್ಪತ್ರೆ (ದವಾಖಾನೆ)ಯ ರೋಗಿಗೆ ಹೇಳಿದರೆ ಕೂಡಲೇ ಆತ ಮತ್ತು ಆತನ ಕುಟುಂಬ ವರ್ಗ ಆಕಾಶವೇ ತಮ್ಮ ಮೇಲೆ ಕಳಚಿ ಬಿದ್ದವರಂತೆ ರೋದಿಸತೊಡಗುತ್ತಾರೆ. ಅದನ್ನು ಹೇಳಿದ ವ್ಯಕ್ತಿ ಕಕ್ಕಾಬಿಕ್ಕಿಯಾಗುತ್ತಾನೆ. ಅಲ್ಲಿ ಅದರ ಅರ್ಥ 'ನೀನು ತೀರಿಹೋಗುತ್ತೀಯಾ' ಎಂದು.

ಈ ವಿಷಯದಲ್ಲಿ 'ಮಾತನಾಡುವ ಕನ್ನಡ" ಎಂಬ ಪುಸ್ತಕ ತುಂಬ ಉಪಯುಕ್ತ. ಕನ್ನಡದಲ್ಲಿ ಬಳಕೆಯಲ್ಲಿರುವ ಕಾಯಿಲೆಗಳು, ಅವುಗಳ ಲಕ್ಷಣಗಳನ್ನು ಸೂಚಿಸುವ ಶಬ್ದಗಳ ಪಟ್ಟಿ ಮಾಡಿ ಅವುಗಳ ಉಚ್ಚಾರವನ್ನು ಮಾಡುವ ಬಗೆ ಮತ್ತು ಅವುಗಳ ಅರ್ಥವನ್ನು ಇಂಗ್ಲಿಷಿನಲ್ಲಿ ಕೊಟ್ಟಿರುವ ಈ ಲೇಖಕರ ಪುಸ್ತಕವನ್ನು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ ಪ್ರಕಟಿಸಿದೆ.

ವೈದ್ಯ ವಿದ್ಯಾರ್ಥಿಗಳು ಸಮುದಾಯ ಆರೋಗ್ಯ ವಿಷಯವನ್ನು ಅಭ್ಯಸಿಸುತ್ತಾರೆ. ಮುಂದೆ ಅವರು ಅನೇಕ ರೋಗಗಳ ಬಗ್ಗೆ ಜನಸಾಮಾನ್ಯರು ತಿಳಿದುಕೊಳ್ಳುವಂತೆ ವಿವರಣೆ ನೀಡಬೇಕಾಗುತ್ತದೆ. ಅದಕ್ಕಾಗಿ ವಾರಕ್ಕೆ ಎರಡು ಪೀರಿಯಡ್ ಇರಿಸಿ ಅಲ್ಲಿ ಸಾಮಾನ್ಯ ಕಾಯಿಲೆಗಳ ಬಗ್ಗೆ (ಹೃದಯಾಘಾತ, ರಕ್ತ ಏರೊತ್ತಡ, ಹೃದಯ ಸೋಲುವಿಕೆ, ಡಯಬಿಟಸ್, ಇನ್‌ಫ್ಲುಯಂಜಾ, ಮಲೇರಿಯಾ, ಕ್ಷಯ, ವಾಂತಿ-ಭೇದಿ, ಆಸ್ತಮಾ, ಲಕ್ವ ಪಿಡುಗುಗಳ ಬಗ್ಗೆ (ಕಾಲರಾ, ಡೆಂಗ್ಯೂ, ಚಿಕನ್‌ಗುನ್ಯ, ಸೋಂಕಿನ ಕಾಯಿಲೆ) ಮತ್ತು ವೈದ್ಯಕೀಯ ಸಾಧನಗಳ ಬಗ್ಗೆ (ಗರ್ಭಕೋಶ ನಾಟಿ, ವಿದುಳಿನೊಳಗೆ ದಿಕ್ಸೂಚಿ, ದೇಹದ ಆಂತರಿಕ ಗಡಿಯಾರ, ನೆನಪು ಕಳೆಯುವ ಆಲ್ಲೀಮರ್ ರೋಗ) ತಿಳಿವಳಿಕೆಯನ್ನು ಕನ್ನಡದಲ್ಲಿ ಕೊಡಬೇಕು. ಅದರಿಂದ ಅವರು ಕನ್ನಡದಲ್ಲಿ ಜನಸಾಮಾನ್ಯರೊಂದಿಗೆ ವ್ಯವಹರಿಸಬಲ್ಲರು ಮತ್ತು ವಿವರಗಳನ್ನು ನೀಡಿ ಅವರ ಪ್ರಶ್ನೆಗಳಿಗೆ ಪರಿಹಾರ ನೀಡಬಲ್ಲರು.

## ೧. ದೈನಂದಿನ ಜೀವನ :

ಆರೋಗ್ಯ ಪ್ರತಿಯೊಬ್ಬ ವ್ಯಕ್ತಿಯ ದೈಹಿಕ, ಮಾನಸಿಕ, ಸಾಮಾಜಿಕ, ಬೌದ್ಧಿಕ ಮತ್ತು ಆಧ್ಯಾತ್ಮಿಕ ಸುಸ್ಥಿತಿಯಾಗಿದೆ. ಆರೋಗ್ಯ ನಮ್ಮ ಎಲ್ಲ ಸಾಮಾಜಿಕ ಗುಣಧರ್ಮಗಳಿಗೆ ಮತ್ತು ಜೀವನದ ಸುಖ-ಸಂತೋಷಕ್ಕೆ ಬುನಾದಿಯನ್ನು ಒದಗಿಸುತ್ತದೆ. ಆರೋಗ್ಯ



ಇದ್ದಾಗ ಗೊತ್ತಾಗದ ಮತ್ತು ಇಲ್ಲದಾಗ ತನ್ನ ಮಹತ್ವವನ್ನು ತೋರಿಸುವ ಸ್ಥಿತಿ. ರೋಗ ನಮ್ಮ ಅರಿವಿಗೆ ಬಂದಂತೆ ಆರೋಗ್ಯ ಬಾರದು. ಆರೋಗ್ಯವನ್ನು ಭಾಗ್ಯವೆಂದು ಎಲ್ಲ ಜನಪದಗಳು ಗುರುತಿಸಿದ್ದು ಅದನ್ನು ರಕ್ಷಿಸಿಕೊಳ್ಳಲು ಪ್ರಯತ್ನಿಸುತ್ತಿವೆ.

ಜನಸಾಮಾನ್ಯರಿಗೆ ಸಮೀಪವಾದ ವಿಷಯಗಳ ಬರವಣಿಗೆಯೇ ಸಾಹಿತ್ಯ. ಇಂದು ಜನರು ತಮ್ಮ ಆರೋಗ್ಯದ ಬಗ್ಗೆ ತಿಳಿದುಕೊಳ್ಳಬೇಕೆಂಬ ಹಂಬಲವುಳ್ಳವ ರಾಗಿದ್ದಾರೆ. ಅವರ ಮುಂದೆ ಯಾವುದಾದರೂ ವೈದ್ಯಕೀಯ ವಿಷಯವನ್ನು ಪ್ರಸ್ತಾಪಿಸಿದರೆ ಅದರ ಬಗ್ಗೆ ಅವರಲ್ಲಿ ಹತ್ತಾರು ಪ್ರಶ್ನೆಗಳು ಮೂಡುತ್ತವೆ. ಅದನ್ನು ಪರಿಹರಿಸಿಕೊಳ್ಳಲು ಇಂದು ಅಂತರ್ಜಾಲ ಎಲ್ಲ ವಿಷಯಗಳನ್ನು ಅವರ ಸಮೀಪಕ್ಕೆ ತಂದಿದೆ. ಆದರೆ ಕನ್ನಡವನ್ನೇ ಮಾತೃಭಾಷೆಯಾಗಿ ಉಳ್ಳವರಿಗೆ ಎಲ್ಲ ವಿಷಯಗಳ ವಿವರಗಳನ್ನು ಅರ್ಥವಾಗುವ ರೀತಿ ದೊರಕಿಸಿಕೊಳ್ಳುವುದು ಕಷ್ಟ. ಹೀಗಾಗಿ ಅವರು ವೈದ್ಯ ವಿಷಯಗಳ ಬಗ್ಗೆ, ವಿಜ್ಞಾನ ವಿಷಯಗಳ ಬಗ್ಗೆ ತಿಳಿದುಕೊಳ್ಳಲು ಲೇಖನಗಳು, ಪುಸ್ತಕಗಳತ್ತ ಧಾವಿಸಬೇಕಾಗಿದೆ.

೧೯೯೫ರವರೆಗೆ ವಿಜ್ಞಾನಕ್ಕೆ ಸಂಬಂಧಿಸಿದ ೩೫೦೦ ಪುಸ್ತಕಗಳು ಪ್ರಕಟಗೊಂಡಿವೆ. ಅವುಗಳಲ್ಲಿ ವೈದ್ಯ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳು ಪ್ರಥಮ ಸ್ಥಾನದಲ್ಲಿದೆ. ಅವುಗಳ ಸಂಖ್ಯೆ ಸಾವಿರ ಸಮೀಪ, ನಂತರದ್ದು ವ್ಯವಸಾಯಕ್ಕೆ ಸಂಬಂಧಿಸಿದ ಪುಸ್ತಕಗಳು. ಕನ್ನಡದಲ್ಲಿ ವೈದ್ಯಕೀಯ ಸಾಹಿತ್ಯ ಕಳೆದ ದಶಕದಿಂದ ಹೇರಳವಾಗಿ ಸೃಷ್ಟಿಯಾಗುತ್ತಿದೆ. ವೈದ್ಯ ವಿಜ್ಞಾನದ ವಿಷಯಗಳಿಗೆ ಸಂಬಂಧಿಸಿದ ನಿಯತ ಕಾಲಿಕೆಗಳಿವೆ (ಸಂಜೀವಿನಿ, ಆರೋಗ್ಯ ವಿಜ್ಞಾನ, ಆರೋಗ್ಯ ವಿಭಾಗ, ಗಂಡ-ಹೆಂಡತಿ), ಪತ್ರಿಕೆಗಳಲ್ಲಿ ಬರೆಯುವವರು, ಪುಸ್ತಕ ಬರೆಯುವವರೂ ಹೆಚ್ಚಾಗುತ್ತಿದ್ದಾರೆ. ಪ್ರತಿಯೊಂದು ದಿನಪತ್ರಿಕೆ, ವಾರಪತ್ರಿಕೆಗಳು, ವೈದ್ಯ ವಿಷಯಗಳಿಗೆ ಸಂಬಂಧಿಸಿದ ಲೇಖನಗಳನ್ನು ಪ್ರಕಟಿಸಿ ಜನರ ಜ್ಞಾನದ ದಿಗಂತವನ್ನು ವಿಸ್ತರಿಸಲು ನೆರವಾಗುತ್ತಿವೆ.

ಕೃಷಿಗೆ ಸಂಬಂಧಿಸಿದಂತೆ ೬೫ ಪತ್ರಿಕೆಗಳು ಕನ್ನಡದಲ್ಲಿ ಪ್ರಕಟವಾಗುತ್ತಿವೆ ಎಂದರೆ ಆಶ್ಚರ್ಯವಾದೀತು. ಅದರಲ್ಲಿ ತೆಂಗಿಗೆ, ಅಡಿಕೆಗೆ, ಬಾಳೆಗೆ ಎಂದು ಪತ್ರಿಕೆಗಳಿವೆ.

ವಿಜ್ಞಾನಕ್ಕೆ ಸಂಬಂಧಿಸಿದ ನಿಯತಕಾಲಿಕೆಗಳು ಹಿಂದೆ ಹೆಚ್ಚು ದಿನ ಬಾಳದಿದ್ದುದು ವಿಷಾದಕರ ಸಂಗತಿ. ಮೈಸೂರು ವಿಶ್ವವಿದ್ಯಾನಿಲಯ ಪ್ರಕಟಿಸುತ್ತಿದ್ದ ವಿಜ್ಞಾನ ಕರ್ನಾಟಕ, ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸುತ್ತಿದ್ದ ವಿಜ್ಞಾನ ಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಿಸುತ್ತಿದ್ದ ಜಯಪ್ರಿಯ ವಿಜ್ಞಾನ ಹೆಚ್ಚು ವರುಷಗಳು ಉಳಿಯಲಿಲ್ಲ. ಕನ್ನಡ ವಿಶ್ವವಿದ್ಯಾಲಯದ ಆರೋಗ್ಯ ಸಂಗತಿ ಬದುಕಿಕೊಂಡು ಬರುತ್ತಿದೆ. ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಬಾಲ ವಿಜ್ಞಾನ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ವಿಜ್ಞಾನಲೋಕ, ವೈಮಾನಿಕ ಅಂತರಿಕ್ಷ ಸಂಸ್ಥೆಯ ಕಣಾದ ವಿಜ್ಞಾನ ಪತ್ರಿಕೆ ನಿರಂತರವಾಗಿ ಹತ್ತರಿಂದ ಮೂವತ್ತು ವರುಷಗಳ ಕಾಲ ಪ್ರಕಟವಾಗುತ್ತ ಬಂದಿರುವುದು ಶ್ಲಾಘನೀಯ



ವಿಚಾರ. ಇಂದು ಭೌತ-ರಸಾಯನ-ಜೀವ ವಿಜ್ಞಾನಗಳ ಬಗ್ಗೆ, ಕಂಪ್ಯೂಟರ್ ತಂತ್ರಜ್ಞಾನದ ಬಗ್ಗೆ ಅನೇಕರು ಬರೆಯುತ್ತಿದ್ದರೂ ಅವರ ಸಂಖ್ಯೆ ಹೆಚ್ಚುತ್ತಿಲ್ಲ.

ಈ ಬರಹಗಳಲ್ಲಿ, ನಮ್ಮಲ್ಲಿ ಆಗಲೇ ಬಳಕೆಯಲ್ಲಿರುವ ಕನ್ನಡ ಶಬ್ದಗಳನ್ನು ಬಿಟ್ಟು ಇಂಗ್ಲಿಷ್ ಶಬ್ದಗಳನ್ನು ಬಳಸುತ್ತ ಕನ್ನಡ ಶಬ್ದಗಳು ನಶಿಸಿ ಹೋಗುವಂತೆ ಮಾಡುತ್ತಿರುವುದು ನಿಜಕ್ಕೂ ಖೇದಕರ. ಉದಾಹರಣೆಗೆ ಮೂತ್ರಪಿಂಡ (ಕಿಡ್ನಿ), ಕಲ್ಲು (ಸ್ಟೋನ್), ಆಘಾತ (ಅಟ್ಯಾಕ್), ಭೇದಿ (ಡಯರಿಯ), ವಿಷ (ಪಾಯಿಸನ್), ಮಿದುಳು (ಬ್ರೇನ್), ನೋವು (ಪೇನ್), ಕಾಮಾಲೆ (ಜಾಂಡೀಸ್).

ಅಡುಗೆ ಮನೆಯಲ್ಲಿ ದಿನಬಳಕೆಯ ಅನೇಕ ತರಕಾರಿ ವಸ್ತುಗಳು ಇಂಗ್ಲಿಷ್‌ಯವಾಗಿದೆ. ಉದಾಹರಣೆಗೆ ಈರುಳ್ಳಿ (ಆನಿಯನ್), ಮೆಣಸು (ಪೆಪ್ಪರ್), ಗಜ್ಜರಿ (ಕ್ಯಾರಟ್), ಸಕ್ಕರೆ (ಶುಗರ್), ಉಪ್ಪು (ಸಾಲ್ಟ್), ಕತ್ತರಿಸು (ಕಟ್ ಮಾಡು), ಹುರಿಯುವುದು (ಫ್ರೈ ಮಾಡು), ಚಮಚ (ಸ್ಪೂನ್), ಅಡುಗೆಮನೆಯಲ್ಲಿ ಎಲ್ಲಿಯವರೆಗೆ ಕನ್ನಡ ಇರುತ್ತದೆಯೋ ಅಲ್ಲಿಯವರೆಗೆ ಕನ್ನಡಕ್ಕೆ ಅಳಿಗಾಲವಿಲ್ಲ ಎಂಬುದನ್ನು ಮರೆಯುತ್ತಿದ್ದೇವೆ.

ಇಂದು ಜನಸಾಮಾನ್ಯರಲ್ಲಿ ಎಷ್ಟೋ ಇಂಗ್ಲಿಷ್ ಶಬ್ದಗಳು ಬಳಕೆಯಲ್ಲಿದ್ದು ಅವು ನಮ್ಮ ಶಬ್ದಗಳೇ ಆಗಿವೆ. ಉದಾಹರಣೆಗೆ ಡಾಕ್ಟರ್ (ವೈದ್ಯ ), ಪೇಶಂಟ್ (ರೋಗಿ), ಇಂಜೆಕ್ಷನ್ (ಚುಚ್ಚುಮದ್ದು), ಹಾಸ್ಪಿಟಲ್ (ಆಸ್ಪತ್ರೆ), ನರ್ಸ್ (ದಾದಿ), ಬಿಪಿ (ಬ್ಲಡ್ ಪ್ರೆಶರ್), ಟಿಬಿ (ಕ್ಷಯ), ಔಟ್ ಪೇಶಂಟ್ (ಹೊರರೋಗಿ) ಈ ಬಗೆಯ ಇಂಗ್ಲಿಷ್ ಶಬ್ದಗಳಿಗೆ ಕನ್ನಡ ಶಬ್ದಗಳನ್ನು ಪರ್ಯಾಯವಾಗಿ ಬಳಸುತ್ತ ಕನ್ನಡ ಶಬ್ದಗಳನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಬೇಕು.

ಅನೇಕ ಶಬ್ದಗಳು ಮೂಲತಃ ಇಂಗ್ಲಿಷ್ ಅಲ್ಲವಾದರೂ ಅವು ಬೇರೆ ಬೇರೆ ಭಾಷೆಗಳಿಂದ ಇಂಗ್ಲಿಷ್‌ನಲ್ಲಿ ಸೇರ್ಪಡೆಯಾಗಿವೆ. ಅವುಗಳನ್ನು ನಾವು ಲೀಲಾಜಾಲವಾಗಿ ಬಳಸುತ್ತೇವೆ. ಉದಾಹರಣೆಗೆ ಮಲೇರಿಯ (ಇಟಾಲಿಯ), ಇನ್‌ಫ್ಲುಯಂಜಾ (ಇಟಾಲಿಯ), ಡೆಂಗ್ಯು (ಸ್ಪಾನಿಶ್), ಕಾಷಿಯೋರ್ಕರ್ (ಸ್ವಾಹಿಲಿ), ಚಿಕನ್‌ಗುನ್ಯ (ಆಫ್ರಿಕ ಬುಡಕಟ್ಟು, ಮತ್ತು ಕೆಲವು ಶಬ್ದಗಳು ಒಂದು ಪ್ರದೇಶಕ್ಕೆ, ನಗರಕ್ಕೆ, ಹಳ್ಳಿಗಾಡಿಗೆ ಸಂಬಂಧಿಸಿ ಹೆಸರು ಪಡೆದಿವೆ. ಉದಾಹರಣೆಗೆ ಕ್ಯಾಸನೂರು ಕಾಡಿನ ಕಾಯಿಲೆ, ಹಂದಿಗೋಡು ಲಕ್ಷಣಕೂಟ, ಮಧುರಾ ಪಾದ, ದಿಲ್ಲಿ ಕೀವುಗಂಟು, ದಿಲ್ಲಿ ಹೊಟ್ಟೆ ದಂದಂ ಜ್ವರ.

**೩. ಬರವಣಿಗೆ :**

ವೈದ್ಯರು ರೋಗಿಗೆ ತಮ್ಮ ಅನುಪಾನ (ಪ್ರಿಸ್ಕ್ರಿಪ್ಷನ್) ಸೂಚಿಸುವಾಗ ಅವರಿಗೆ ತಿಳಿಯುವಂತೆ ಬರೆದರೆ ಎಷ್ಟು ಚೆನ್ನ, ಒಂದೊಂದು ಗುಳಿಗೆ (ಮಾತ್ರೆ)ಯನ್ನು ದಿನಕ್ಕೆ



ಮೂರು ಸಲ ತೆಗೆದುಕೊಳ್ಳಬೇಕು. ಒಂದು ಚಮಚ ಪುಡಿಯನ್ನು ಒಂದು ಲೋಟ ನೀರಿನಲ್ಲಿ ಕರಗಿಸಿ, ದಿನಕ್ಕೆ ಐದಾರು ಸಲ ಕುಡಿಯಬೇಕು- ಇದು ರೋಗಿಗೆ ಸುಲಭವಾಗಿ ಅರ್ಥವಾಗುತ್ತದೆ.

**೪. ಸಂಶೋಧನೆ :**

ಪಾಶ್ಚಿಮಾತ್ಯ ಮತ್ತು ಪೌರಾತ್ಯ ರಾಷ್ಟ್ರಗಳಲ್ಲಿರುವ ವಿಜ್ಞಾನಿಗಳು ತಾವು ಮಾಡಿದ ಸಂಶೋಧನೆಗಳನ್ನು ತಮ್ಮ ಮಾತೃಭಾಷೆಯಲ್ಲಿ ಬರೆದು ಪ್ರಕಟಿಸುವುದು ಸಾಮಾನ್ಯ. ಪ್ರಾಚೀನ ಕಾಲದಿಂದ ಕ್ಷಯರೋಗದ ಕಾರಣ ನಿಗೂಢವಾಗಿ ಉಳಿದಿದ್ದಿತು. ತನ್ನ ಬಳಿಯಿದ್ದ ಸಾಮಾನ್ಯ ಸೂಕ್ಷ್ಮದರ್ಶಕವನ್ನು ಬಳಸಿ ೧೮೮೨ರ ಮಾರ್ಚ್ ೨೪ರಂದು ಕ್ಷಯರೋಗಕ್ಕೆ ಕಾರಣವಾದ ಮೈಕೋಬ್ಯಾಕ್ಟಿರಿಯಂ ಟ್ಯೂಬರ್‌ಕ್ಯುಲೋಸಿಸ್ ಸೂಕ್ಷ್ಮಜೀವಿಯನ್ನು ಕಂಡು ಬರ್ಲಿನ್ನಿನಲ್ಲಿ ರಾಬರ್ಟ್ ಕಾಕ್ ಅದರ ಇರುವಿಕೆಯ ಬಗ್ಗೆ ಜರ್ಮನ್ ಭಾಷೆಯಲ್ಲಿ ಬರೆದು ಪ್ರಕಟಿಸಿದರು. ಅದು ತುಂಬ ಮಹತ್ವ ಪೂರ್ಣವಾದ ಶೋಧವಾದುದರಿಂದ ಜಗತ್ತು ಅದನ್ನು ಕೂಡಲೇ ಸ್ವೀಕರಿಸಿತು.

ಎಕ್ಸ್ ಕಿರಣಗಳ ಆವಿಷ್ಕಾರ ಮಾಡಿದ ರಾಂಜೆನ್ ಜರ್ಮನ್ ಭಾಷೆಯಲ್ಲಿ ಅದನ್ನು ಬರೆದು ಪ್ರಕಟಿಸಿದರು. ದೂರದೂರ ದೇಶಗಳಿಗೆ ವರ್ತಮಾನದಲ್ಲಿ ವೇಗಗತಿಯಿಂದ ತಲುಪಿರುವ ಸಾಧನಗಳಾವುವೂ ಇಲ್ಲದಿದ್ದ ಕಾಲದಲ್ಲಿ ರಾಂಜೆನ್ ಲೇಖನ ಇಂಗ್ಲಿಷಿಗೆ ತರ್ಜುಮೆಗೊಂಡು ಇಂಗ್ಲೆಂಡಿನ 'ನೇಚರ್' ಪತ್ರಿಕೆಯಲ್ಲಿ ೧೮೯೬ರ ಜನವರಿ ೨೬ರಂದು ಪ್ರಕಟವಾಯಿತು. ಅಮೆರಿಕನ್ ಸೈನ್ಸ್ ಜರ್ನಲ್‌ನಲ್ಲಿ ೧೮೯೬ರ ಫೆಬ್ರವರಿ ೧೪ರಂದು ಪ್ರಕಟವಾಯಿತು.

ಜಗತ್ತಿನಾದ್ಯಂತ ಈ ರಶ್ಮಿಗಳ ಉಪಯುಕ್ತತೆ ಬಗ್ಗೆ ವ್ಯಾಪಕವಾಗಿ ಕುತೂಹಲವನ್ನು ಕೆರಳಿಸಿತು. ಅಲ್ಲಿ ಭಾಷೆಗಿಂತ ವಿಷಯ ಮುಖ್ಯವಾಗಿದ್ದಿತು. ಅದರ ಉಪಯುಕ್ತತೆಯ ಲಾಭವನ್ನು ಜಗತ್ತಿನಾದ್ಯಂತ ಪಡೆದುಕೊಳ್ಳಲಾಯಿತು. ಬಹುಶಃ ಅಂತಹ ಲೇಖನ ಕನ್ನಡದಲ್ಲಿ ಪ್ರಕಟವಾಗಿದ್ದರೂ ಅದು ಮಹತ್ವ ಪಡೆದುಕೊಳ್ಳುತ್ತಿದ್ದಿತು.

ಲೂಯಿಪಾಶ್ಚರ್‌ನ ಜೀವಿಶುದ್ಧಿ ಕಾರ್ಯ, ಹುದುಗೇಳಿಕೆ ಮತ್ತು ಹುಚ್ಚು ನಾಯಿ ಕಡಿತಕ್ಕೆ ಲಸಿಕೆ ಪಟಕವಾದುದು ಫ್ರೆಂಚ್‌ನಲ್ಲಿ, ಸೂಕ್ಷ್ಮದರ್ಶಕದ ಶೋಧಕ ಲೂವೆನ್ ಹಾನಿಗೆ ಡಚ್ ಭಾಷೆ ಹೊರತುಪಡಿಸಿ ಬೇರಿನ್ನಾವ ಭಾಷೆಯೂ ಬರುತ್ತಿರಲಿಲ್ಲ, ಕ್ಷಯದ ವಿರುದ್ಧ ರೋಗ ನಿರೋಧಕ ಶಕ್ತಿಯನ್ನು ಉದ್ದೀಪನಗೊಳಿಸಲು ಬಳಸುವ ಬಿಸಿಜಿ ಅಕ್ಷರಗಳ ವಿಸ್ತಾರ ಫ್ರೆಂಚ್ ಭಾಷೆಯಲ್ಲಿದ್ದರೂ ಅದನ್ನು ಬಳಸಲು ನಮಗೆ ಯಾವುದೇ ತೊಂದರೆಯಿಲ್ಲ.

ಹೀಗೆ ಆ ದೇಶದ ವಿಜ್ಞಾನಿಗಳು ತಾವು ಮಾಡಿದ ಶೋಧಗಳನ್ನು ತಮ್ಮ ಭಾಷೆಯಲ್ಲಿ ಬರೆದು ಪ್ರಕಟಿಸಿದರು. ಅವರಿಗೆ ಇಂಗ್ಲಿಷ್ ಪರಕೀಯ ಭಾಷೆಯಾಗಿದ್ದಿತು. ಅವರ ಶೋಧ ಜಾಗತಿಕ ಮಹತ್ವ ಮತ್ತು ಉಪಯುಕ್ತತೆಯನ್ನು ಪಡೆದಿದ್ದುದರಿಂದ ಅವು



ಇಂಗ್ಲಿಷಿಗೆ ಭಾಷಾಂತರಗೊಂಡು ಅಲ್ಪಾವಧಿ ಕಾಲದಲ್ಲಿ ಅವುಗಳ ಮಹತ್ವವನ್ನು ಮನಗಾಣಲಾಯಿತು.

೨೦೦೭ರಲ್ಲಿ ವೈದ್ಯಕೀಯಕ್ಕೆ ಸಂಬಂಧಿಸಿದ ನೊಬಲ್ ಪ್ರಶಸ್ತಿ ಪಡೆದ ಮೂವರಲ್ಲಿ ಒಬ್ಬರು ಇಟಲಿ ದೇಶದವರು. ಅನಾಥರಾಗಿ, ನಿರ್ಗತಿಕರಾಗಿ ಬೆಳೆದ ಆತನಿಗೆ ಇಟಾಲಿಯನ್ ಭಾಷೆ ಬಿಟ್ಟು ಬೇರೊಂದು ಭಾಷೆ ಅಪರಿಚಿತವಾಗಿದ್ದಿತು. ತನ್ನ ಹನ್ನೊಂದನೇ ವರ್ಷ ವಯಸ್ಸಿಗೆ ಅಮೇರಿಕಾಗೆ ಹೋದ ಮೇಲೆಯೇ ಇಂಗ್ಲಿಷ್ ಭಾಷೆ ಕಲಿತು ಆಕರ ಕೋಶಗಳ ಶೋಧ ಮಾಡಿದ. ನಮ್ಮ ರಾಜ್ಯದ ನಾಮಾಂಕಿತ ವಿಜ್ಞಾನಿಗಳೆಲ್ಲರೂ ಕನ್ನಡದಲ್ಲಿ ಅಧ್ಯಯನ ಮಾಡಿ ಮುಂದೆ ಇಂಗ್ಲಿಷ್ ಕಲಿತವರು.

ವೈಜ್ಞಾನಿಕ ಶೋಧಗಳು ಅವರವರ ಭಾಷೆಯಲ್ಲಿ ಜರುಗುತ್ತಿರುವುದು ನಮಗೆಲ್ಲ ಮಹತ್ವದ್ದೆನಿಸಿದರೂ ಆ ಅವಕಾಶದಿಂದ ಕನ್ನಡವೇಕೆ, ಭಾರತದ ಎಲ್ಲ ಭಾಷೆಗಳು ವಂಚಿತವಾಗಿವೆ. ಹೀಗಾಗಿ ನಾವು ಕನ್ನಡದಲ್ಲಿ ವಿಜ್ಞಾನದ ವಿಚಾರ ಮಾಡಿ ಕನ್ನಡದ ಮೂಲಕವೇ ಅದರ ಮೇಲೆ ಪ್ರಯೋಗಗಳನ್ನು ಮಾಡಿ ಫಲಿತಾಂಶ ಪಡೆದು ಅವುಗಳನ್ನು ಕ್ರೋಢೀಕರಿಸಿ ಕನ್ನಡದಲ್ಲಿ ಸಂಶೋಧನ ಲೇಖನಗಳನ್ನು ಬರೆದು ಪ್ರಕಟಿಸುವುದು ಅಸಾಧ್ಯವೆನಿಸಿದೆ. ಹೀಗಾಗಿ ಸಂಶೋಧನೆಯಲ್ಲಿ ನಾವು ಕನ್ನಡವನ್ನು ಮಾಧ್ಯಮವಾಗಿ ಬಳಸದಿದ್ದರೂ, ಕನ್ನಡದ ಮೂಲಕ ಜನಸಾಮಾನ್ಯರಿಗೆ ಉಪಯುಕ್ತವಾದ ವಿಜ್ಞಾನ- ತಂತ್ರಜ್ಞಾನದ, ವೈದ್ಯವಿಜ್ಞಾನದ ವಿಷಯಗಳ ಪರಿಚಯ ಮಾಡಿಕೊಡುವುದು ಸಾಧ್ಯವಿದೆ.

**೫. ಅನುವಾದ :**

ಮನುಷ್ಯ - ಮನುಷ್ಯರ ನಡುವೆ ಸಂಪರ್ಕ ಉಂಟಾಗುವುದು ಭಾಷೆಯ ಮೂಲಕ. ವಿಜ್ಞಾನ ಮತ್ತು ತಾಂತ್ರಿಕತೆ ದಿಗ್ಭ್ರಮೆಗೊಳಿಸುವಂತೆ ಮಾಡಿರುವ ಸಾಧನೆಯ ಜ್ಞಾನವನ್ನು ದೊರಕಿಸಲು ನಾವು ಬೇರೆ ಭಾಷೆಗಳಿಗೆ ಮೊರೆ ಹೋಗುತ್ತೇವೆ. ಬೇರೆಲ್ಲ ಭಾಷೆಗಳಿಗಿಂತ ವಿಜ್ಞಾನದ ನಿಧಿ ಹುದುಗಿರುವುದು ಇಂಗ್ಲಿಷ್ ಭಾಷೆಯಲ್ಲಿ. ಹೀಗಾಗಿ ಅದನ್ನು ನಾವು ನಮ್ಮ ಭಾಷೆಗೆ ತರಬೇಕಾದರೆ ಅನುವಾದ ಇಲ್ಲವೆ ಭಾಷಾಂತರದ ಮುಖಾಂತರ ದೊರಕಿಸಿಕೊಳ್ಳಬೇಕು. ಭಾಷಾಂತರದಲ್ಲಿ ಒಂದು ಭಾಷೆಯಲ್ಲಿ ಹೇಳಿದ ವಿಷಯವನ್ನು ಮತ್ತೊಂದು ಭಾಷೆಯಲ್ಲಿ ವಿವರಿಸುತ್ತೇವೆ. ಅದನ್ನೇ ಅನುವಾದ ಎಂಬ ಶಬ್ದದ ಮೂಲಕ ವಿವರಿಸಬೇಕೆಂದರೆ ಅಲ್ಲಿ ಮೂಲ ಭಾಷೆಯ ವಿಷಯವನ್ನು ಉದ್ದಿಷ್ಟ ಭಾಷೆಯ ವಿಷಯವನ್ನಾಗಿ ಪರಿವರ್ತಿಸುವುದಾಗಿದೆ.

ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಬರವಣಿಗೆಯನ್ನು ಭಾಷಾಂತರ ಮಾಡುವಲ್ಲಿ ಭಾಷಾಂತರಕಾರ ತಾನು ಮಾಡಬೇಕೆಂದಿರುವ ವಿಷಯದ ಜ್ಞಾನವನ್ನು ಪಡೆದಿರಬೇಕು. ಆತ ಮೂಲ ಭಾಷೆ ಮತ್ತು ಉದ್ದಿಷ್ಟ ಭಾಷೆಗಳ ಜ್ಞಾನವನ್ನು ಮತ್ತು ಭಾಷಾರಚನೆಯನ್ನು ಪಡೆದಿರಬೇಕು. ಹಾಗಿದ್ದಲ್ಲಿ ಮಾತ್ರ ಭಾಷಾಂತರ ಸಮರ್ಪಕ



ವಾಗುತ್ತದೆ. ವಿಜ್ಞಾನ ವಿಷಯ ಭಾಷಾಂತರದಲ್ಲಿ ನಾವು ಮುಖ್ಯವಾಗಿ ವಿಷಯವನ್ನು ಭಾಷಾಂತರ ಮಾಡಬೇಕಾಗಿರುವುದರಿಂದ ಭಾಷಾಂತರಕಾರ ವಿಷಯದ ಒಳಹೊಕ್ಕು ಅಲ್ಲಿ ಮೂಲ ಲೇಖಕ ವ್ಯಕ್ತಪಡಿಸಿದ ವಿಷಯವನ್ನು ಸಮರ್ಪಕವಾಗಿ ತಿಳಿದುಕೊಂಡು ಅದನ್ನು ನಮ್ಮ ಭಾಷೆಯಲ್ಲಿ ಸರಳವಾಗಿ ವಿವರಿಸುವ ಸಾಮರ್ಥ್ಯವನ್ನು ಸಾಧಿಸಬೇಕು.

ಪರಕೀಯ ಭಾಷೆಯನ್ನು ಬಳಸಿ ನಮ್ಮ ಅಭಿಪ್ರಾಯವನ್ನು ಸಮರ್ಪಕವಾಗಿ ವ್ಯಕ್ತಗೊಳಿಸುವುದು ಕಷ್ಟಸಾಧ್ಯವಾದುದು. ಅದನ್ನು ನಾವು ತಿಳಿಯುವ ಭಾಷೆಯಲ್ಲಿ ಹೇಳುವುದರಿಂದ ಅಂತರಾಳವನ್ನು ತಲುಪುತ್ತದೆ. ಕವಿ ರವೀಂದ್ರನಾಥ ಠಾಕೂರರ ಮಾತುಗಳಲ್ಲಿ ಹೇಳಬೇಕಾದರೆ ಅದನ್ನು ಹೀಗೆ ವಿವರಿಸಬಹುದು: ನಿಮ್ಮ ಅಂತರಾಳದ ಭಾವನೆಗಳನ್ನು ಮತ್ತು ವಿಚಾರಗಳನ್ನು ಪರಭಾಷೆಯಲ್ಲಿ ತಿಳಿಸಲು ಪ್ರಯತ್ನಿಸುವುದು ಪ್ರಿಯತಮೆಗೆ ನಿಮ್ಮ ಮುಗುಳ್ನಗೆಯನ್ನು ವಕೀಲನ ಮೂಲಕ ಕಳುಹಿಸಿ ಕೊಡಲು ಪ್ರಯತ್ನಿಸುವ ಹಾಗೆ".

ವಿಜ್ಞಾನ ವಿಷಯಗಳ ಬಗೆಗೆ ಸ್ವತಂತ್ರ ರಚನೆಯೊಟ್ಟಿಗೆ ಆ ವಿಷಯದ ಅಪೂರ್ವ ಕೃತಿಗಳ ಭಾಷಾಂತರವೂ ಅತ್ಯಗತ್ಯ. ಬೇರೊಂದು ಭಾಷೆಯಲ್ಲಿ ಪ್ರಕಟವಾದ ಉತ್ತಮ ಕೃತಿಗಳು ನಮ್ಮ ಭಾಷೆಯಲ್ಲೂ ಬರಬೇಕೆನ್ನುವುದು ನಮ್ಮ ಆಶೆ. ಜ್ಞಾನ ದಿಗಂತಗಳ ವಿಸ್ತರಣೆಗೆ, ಜ್ಞಾನ ಪ್ರಸಾರಕ್ಕೆ ಇದು ಅತ್ಯಗತ್ಯ. ವೇಗ ಗತಿಯಲ್ಲಿ ವಿಜ್ಞಾನದ ಪ್ರಗತಿಯನ್ನು ಈ ಶತಮಾನದಲ್ಲಿ ಕಾಣುತ್ತಿದ್ದೇವೆ. ಅದರ ಸಾಧನೆಗಳು ನಮ್ಮ ದೈನಂದಿನ ಜೀವನಕ್ಕೆ ಹೊಸ ತಿರುವು ತಂದುಕೊಟ್ಟಿವೆ. ಪರಭಾಷೆಯಲ್ಲಿ ಎಲ್ಲವನ್ನೂ ಕಲಿಯುವುದು ಅನೇಕರಿಗೆ ಸಾಧ್ಯವಿಲ್ಲ. ಅದರಿಂದ ಜನರಿಗೆ ಆ ಕೃತಿ ಅಲಭ್ಯವಾಗುತ್ತದೆ. ಆ ಭಾಷೆ ಮತ್ತು ವಿಷಯ ತಿಳಿದವರು ಭಾಷಾಂತರ ಕಾರ್ಯ ಕೈಕೊಂಡರೆ ಎಲ್ಲರಿಗೂ ಉಪಯುಕ್ತ.

ಮೂಲ ಭಾಷೆಯಲ್ಲಿರುವ ವಿಷಯಗಳನ್ನು ಉದ್ದಿಷ್ಟ ಭಾಷೆಗೆ ತರುವುದು 'ಅವಳ ಉಡುಗೆಯನ್ನು ಇವಳಿಗೆ ತೊಡಿಸಿದಂತೆ. ಉದ್ದಿಷ್ಟ ಭಾಷೆಗೆ ಅನುವಾದಗೊಂಡ ಕೃತಿ ಮೂಲಭಾಷೆಯಲ್ಲಿ ಅದು ಪಡೆದಿರುವಷ್ಟೇ ಮಹತ್ವವಿರುತ್ತದೆ. ಭಾಷಾಂತರವೆಂದರೆ ಕೇವಲ ಶಬ್ದಗಳ ಪರಿವರ್ತನೆಯಲ್ಲ. ಉದ್ದಿಷ್ಟ ಭಾಷೆಯಲ್ಲಿನ ಸೊಬಗು, ಭಾವ, ಶೈಲಿ ಮತ್ತು ವಿಚಾರಗಳನ್ನು ಪ್ರತಿಬಿಂಬಿಸಬೇಕಾಗಿರುವುದರಿಂದ ಅದು ಮೂಲ ರಚನೆಗಿಂತಲೂ ಕ್ಲಿಷ್ಟಕರ. ಯಾವುದೇ ಅನುವಾದ ಕೃತಿಯನ್ನು ನಾವು ಓದುವಾಗ ಅದು ನಮಗೆ ಸ್ವಾಭಾವಿಕವಾಗಿ ಕಾಣಬೇಕು ಮತ್ತು ಮೂಲದ ಮೆರುಗು ಅಲ್ಲಿ ತೋರಿಬರಬೇಕು. ಮೂಲ ರಚನೆಯನ್ನೇ ನಾವು ಓದುತ್ತಿರುವ ಅನುಭವವನ್ನು ಮತ್ತು ಆನಂದವನ್ನು ಅದು ನಮಗೆ ತಂದುಕೊಡಬೇಕು. ನಮ್ಮ ಭಾಷೆಯಲ್ಲಿನ ಸ್ವತಂತ್ರ ಕೃತಿಗೆ ಇರುವಷ್ಟೇ ಮಹತ್ವವನ್ನು ಭಾಷಾಂತರಿಸಿದ ಕೃತಿಯೂ ಹೊಂದಿರುತ್ತದೆ.

ಹಾಗೆ ಮಾಡುವ ಭಾಷಾಂತರ ನಮ್ಮ ಭಾಷೆಯ ರೀತಿ ನೀತಿಗಳಿಗೆ ಸಮರ್ಪಕವಾಗಿ ಹೊಂದಿಕೊಳ್ಳಬೇಕು. ಮೂಲ ಕೃತಿಕಾರನ ಭಾವನೆಗಳನ್ನು, ಶೈಲಿಯನ್ನು ನಮ್ಮ ಭಾಷೆಯಲ್ಲಿ

ಪ್ರತಿಬಿಂಬಿಸಬೇಕು. ದೊಡ್ಡ ದೊಡ್ಡ ವಾಕ್ಯಗಳನ್ನು ಹಾಗೆಯೇ ಭಾಷಾಂತರಿಸಿದರೆ ಅದು ನೀರಸವೂ, ಕೃತಕವೂ ಆಗಿ ಪರಿಣಮಿಸುತ್ತದೆ. ಅಗತ್ಯವಿರುವ ಸಂದರ್ಭ ಮತ್ತು ಸನ್ನಿವೇಶಗಳಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡುವ ಸ್ವಾತಂತ್ರ್ಯವಿದ್ದರೆ ಭಾಷಾಂತರ ಸಹಜವೂ, ಸ್ವಾರಸ್ಯಕರವೂ ಆಗುತ್ತದೆ. ಕೇವಲ ನಿಯಮಗಳಿಗೆ ಅಂಟಿಕೊಳ್ಳುವುದು ಸರಿಯಲ್ಲ. ಪ್ರತಿವಾಕ್ಯ, ಶಬ್ದವನ್ನು ಗ್ರಹಿಸಿ, ಆಯಾ ಭಾಷೆಯ ಜಾಯಮಾನಕ್ಕೆ ತಕ್ಕಂತೆ ನಾವು ಭಾಷಾಂತರಿಸಬೇಕು. ಅಂತರ ರಾಷ್ಟ್ರೀಯ ವ್ಯಾಪ್ತಿಯಲ್ಲಿನ ವಿಶಿಷ್ಟ ಪದಗಳನ್ನು ಭಾಷಾಂತರಿಸದೆ ಹಾಗೆಯೇ ಬಳಸಿಕೊಳ್ಳಬೇಕು. ಅವುಗಳ ಪರಿವರ್ತನೆ ಗಲಿಬಿಲಿ ಯನ್ನುಂಟುಮಾಡುತ್ತದೆ. ವಿಜ್ಞಾನದಲ್ಲಿ ನಿಖರತೆಗೆ ಹೆಚ್ಚು ಮಹತ್ವ. ನಾವು ಟಂಕಿಸುವ ಸಮಾನ ಪದ ನಿಖರವಾದ ಅರ್ಥವನ್ನು ನೀಡಬೇಕು. ಆಗ ಭಾಷಾಂತರ ಎಲ್ಲರಿಗೂ ತಿಳಿದು ಉಪಯುಕ್ತವಾಗುತ್ತದೆ.

ವಿಜ್ಞಾನ ವಿಷಯಗಳನ್ನು ನಮ್ಮ ಭಾಷೆಗೆ ತರುವಾಗ ನಾವು ಮುಖ್ಯವಾಗಿ ಪಾರಿಭಾಷಿಕ ಪದಗಳ ಸಮಸ್ಯೆಯನ್ನು ಎದುರಿಸುತ್ತೇವೆ. ಆ ಕ್ಷೇತ್ರದಲ್ಲಿ ವಿಶೇಷ ಅರ್ಥ ನೀಡುವ ಶಬ್ದಗಳನ್ನು ಪಾರಿಭಾಷಿಕ ಪದಗಳೆಂದು ಕರೆಯಲಾಗುತ್ತದೆ. ಆ ಕ್ಷೇತ್ರದಲ್ಲಿ ಕಾರ್ಯಮಾಡುತ್ತಿರುವ ವ್ಯಕ್ತಿಗಳಿಗೆ ಆ ಶಬ್ದ ನಿರ್ದಿಷ್ಟ ಅಂಶದ ತಿಳುವಳಿಕೆಯನ್ನುಂಟು ಮಾಡುತ್ತದೆ. ಮೂಲ ಭಾಷೆಯ ಪದಕ್ಕೆ ಸಂವಾದಿಯಾದ ಅರ್ಥವನ್ನು ಕೊಡುವ ಮತ್ತು ಮೂಲದ ಭಾವನೆಗೆ ಸರಿಹೊಂದುವ ಶಬ್ದಗಳನ್ನು ನಾವು ಬಳಸಬೇಕು. ವಿಷಯ ಜ್ಞಾನವಿಲ್ಲದ ವ್ಯಕ್ತಿ ಕೇವಲ ತನ್ನ ಭಾಷಾಜ್ಞಾನದಿಂದ ಭಾಷಾಂತರಿಸಿದ ಕೃತಿಗೂ, ವಿಷಯ ಜ್ಞಾನವಿದ್ದು ಪರಿಮಿತ ಭಾಷಾಜ್ಞಾನವನ್ನು ಹೊಂದಿದ ವ್ಯಕ್ತಿ ಭಾಷಾಂತರಿಸಿದ ಕೃತಿಗೂ ಮತ್ತು ವಿಷಯಜ್ಞಾನ ಹಾಗೂ ಭಾಷಾಜ್ಞಾನ ಎರಡನ್ನೂ ಹೊಂದಿದ ವ್ಯಕ್ತಿ ಭಾಷಾಂತರ ಮಾಡುವ ಕೃತಿಗೂ ತುಂಬ ವ್ಯತ್ಯಾಸವಿರುವುದನ್ನು ಕಾಣುತ್ತೇವೆ. ಉಭಯ ಭಾಷೆಗಳಲ್ಲಿನ ಪರಿಣಿತಿ ಮತ್ತು ವಿಷಯ ಜ್ಞಾನದಿಂದ ಭಾಷಾಂತರ ಕರಾರುವಾಕ್ಕಾಗಿ ಜರುಗುತ್ತದೆ. ವಿಷಯ ಜ್ಞಾನ ಹೊಂದಿದ ವ್ಯಕ್ತಿ ಮೂಲ ಬರಹಗಾರ ವ್ಯಕ್ತಪಡಿಸಿದ ಭಾವನೆಗಳನ್ನು ತಿಳಿಯಬಲ್ಲ.

ವಿಜ್ಞಾನ ಕ್ಷೇತ್ರದಲ್ಲಿ ಬಳಸುವ ಪಾರಿಭಾಷಿಕ ಪದಗಳು ಸಾಮಾನ್ಯ ಬಳಕೆಯಲ್ಲಿರಬಹುದು ಇಲ್ಲವೆ ಬೇರೆ ಭಾಷೆಗಳಿಂದ ತೆಗೆದುಕೊಂಡು ಅದೇ ರೂಪದಲ್ಲಿ ಇಲ್ಲವೆ ಮಾರ್ಪಾಟು ಮಾಡಿ ಬಳಸುತ್ತಿರಬಹುದು. ಪಾರಿಭಾಷಿಕ ಪದಗಳು ಸಂದರ್ಭಕ್ಕನುಗುಣವಾಗಿ ಸೃಷ್ಟಿಯಾಗುತ್ತಿರುತ್ತವೆ. ಅಂತಹ ಪದಗಳು ಹಿಂದೆ ಬಳಕೆಯಲ್ಲಿರುವುದಿಲ್ಲ. ವೈಜ್ಞಾನಿಕ ಕ್ಷೇತ್ರದಲ್ಲಿ ಜರುಗುವ ಆವಿಷ್ಕಾರ ಹೊಸ ಶಬ್ದ ಸೃಷ್ಟಿಗೆ ಅನಿವಾರ್ಯವೆನಿಸುತ್ತದೆ. ಉದಾಹರಣೆಗೆ ಪೆನಿಸಿಲಿನ್, ಅಪೆಂಡಿಕ್ಸ್, ನ್ಯಾನೋ, ಡಯಲಿಸಿಸ್, ಲೇಸರ್, ಏಡ್ಸ್, ವಿಟಾಮಿನ್, ಜೀನ್, ಕ್ರೋಮೊಸೋಂ, ಡಿಎನ್ಎ, ಆರ್ಎನ್. ಹಿಂದೆ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ವೈದ್ಯಕೀಯ ಶೋಧಗಳ ಪ್ರಕಟಣೆ

ಗ್ರೀಕ್, ಲ್ಯಾಟಿನ್ ಭಾಷೆಗಳಲ್ಲಿ ಜರುಗುತ್ತಿದ್ದಿತು. ಸಾಂಸ್ಕೃತಿಕ ಕ್ರಾಂತಿಯ ನಂತರ ಇಂಗ್ಲಿಷ್, ಫ್ರೆಂಚ್, ಜರ್ಮನ್ ಮೊದಲಾದ ಭಾಷೆಗಳಲ್ಲಿ ಅದರ ಪ್ರಕಟಣೆ ಜರುಗತೊಡಗಿತು. ಹೀಗಾಗಿ ಆ ಪದಗಳು ಗ್ರೀಕ್ ಮತ್ತು ಲ್ಯಾಟಿನ್ ಶಬ್ದಕಾಂಡಗಳು ಹಾಗೂ ಪ್ರತ್ಯಯಗಳನ್ನು ಬಳಸಿಕೊಂಡು ಸೃಷ್ಟಿಯಾಗಿವೆ. ಅಂತಹ ಚಟುವಟಿಕೆಗಳು ಕನ್ನಡದ ವೈಜ್ಞಾನಿಕ ರಂಗದಲ್ಲಿ ಜರುಗಿಲ್ಲವಾದುದರಿಂದ ನಾವು ಸಂಸ್ಕೃತ ಇಲ್ಲವೇ ಇಂಗ್ಲಿಷ್ ಮೂಲದಿಂದ ದೊರಕಿಸಿದ ಶಬ್ದಗಳನ್ನು ಉಪಯೋಗಿಸುತ್ತಿದ್ದೇವೆ.

ವೈಜ್ಞಾನಿಕ ವಿಷಯಗಳನ್ನು ಕುರಿತ ಬರವಣಿಗೆ ನಮ್ಮ ಭಾಷೆಯಲ್ಲಿ ಹೊಸದು. ಪದಶಃ ಭಾಷಾಂತರಕ್ಕಿಂತ ಭಾವಾನುವಾದ ನಮ್ಮ ಭಾಷೆಗೆ ಸರಿಹೋಗುತ್ತದೆ ಎಂಬ ಅಭಿಪ್ರಾಯ ಇದೆ. ಆಗ ಅಲ್ಲಿ ನಾವು ಮೂಲ ಭಾವನೆಯನ್ನು ಕೆಡಿಸದೆ, ಅದನ್ನು ವಿಸ್ತರಿಸಲು ಅವಕಾಶವಿದೆ. ಅನೇಕ ವಿವರಗಳನ್ನು ಸೇರಿಸಬಹುದು. ಮೂಲ ಲೇಖಕನ ಉದ್ದೇಶವೇನು ಎಂಬುದನ್ನು ಗಮನದಲ್ಲಿಟ್ಟುಕೊಂಡು ನಾವು ಭಾಷಾಂತರಿಸಬೇಕು. ಅಲ್ಲಿ ಮೂಲ ಲೇಖಕನ ಭಾವನೆಗಳನ್ನು ವಿಸ್ತರಿಸಿ ಹೇಳುವ ಸ್ವಾತಂತ್ರ್ಯ ದೊರೆತರೂ ಅದನ್ನು ಬದಲಾಯಿಸುವ ಸ್ವಾತಂತ್ರ್ಯವಿಲ್ಲ. ಅದರೊಳಗೆ ಅಡಕವಾಗಿರುವ ಭಾವನೆಗಳನ್ನು ವಿಸ್ತರಿಸಿ, ಸರಳವಾಗಿ ಅರ್ಥವಾಗುವಂತೆ ಹೇಳಬಹುದು. ಮೂಲದಲ್ಲಿ ವ್ಯಕ್ತಪಡಿಸಿದ ಎಲ್ಲ ಭಾವನೆಗಳನ್ನು ನಮ್ಮ ಭಾಷೆ ಪ್ರತಿಬಿಂಬಿಸಬೇಕು. ಸುದೀರ್ಘವಾದ ಪದಗಳನ್ನು ಸರಳ ವಾಕ್ಯಗಳನ್ನಾಗಿ ಮಾಡಿ, ಕ್ಲಿಷ್ಟ ಪದಗಳನ್ನು ಸುಲಭವಾಗಿ ಅರ್ಥವಾಗುವ ಪದಗಳನ್ನಾಗಿ ಬಳಸಿ ನಾವು ಭಾಷಾಂತರ ಮಾಡಬೇಕು.

ವಿಜ್ಞಾನ ವಿಷಯಗಳನ್ನು ವಿವರಿಸುವಾಗ ನಾವು ಕೇವಲ ಶಬ್ದಗಳ ಮೇಲೆ ಗಮನವಿಡದೆ ಅಲ್ಲಿನ ವಿಚಾರಗಳ ಮೇಲೆ ಮುಖ್ಯ ಗಮನವಿಡಬೇಕು. ಉದ್ದಿಷ್ಟ ಭಾಷೆಯಲ್ಲಿ ಸಮಾನ ಪಾರಿಭಾಷಿಕ ಶಬ್ದ ದೊರೆಯದಿದ್ದರೆ ಅದನ್ನು ವಿವರಿಸಿ ಖಚಿತ ಜ್ಞಾನವನ್ನು ದೊರಕಿಸಿಕೊಡಬೇಕು.

ವಿಜ್ಞಾನ ವಿಷಯಗಳಿಗೆ ವಿಶಿಷ್ಟವಾದ ಪಾರಿಭಾಷೆಯ ಶಬ್ದಗಳನ್ನು ಬಳಸುವಾಗ ನಾವು ಅವುಗಳ ಅರ್ಥವನ್ನು ತಿಳಿದು ಬಳಸಬೇಕು. ಭಾಷೆಗೆ ಹೊಸ ಶಬ್ದಗಳನ್ನು ತೆಗೆದುಕೊಳ್ಳುವ ಕ್ರಮ ಎಲ್ಲ ಭಾಷೆಗಳಲ್ಲಿ ಎಲ್ಲ ಕಾಲದಲ್ಲೂ ಜರುಗುತ್ತಿರುತ್ತದೆ. ಭಾಷಾಂತರಿಸಿದಾಗ ಆ ಶಬ್ದಗಳು ಎಲ್ಲರ ಒಪ್ಪಿಗೆ ಪಡೆಯಲಿಕ್ಕಿಲ್ಲ. ಬರವಣಿಗೆಯಲ್ಲಿ ಬರೆದರೂ ಅವು ಸಾಮಾನ್ಯ ಬಳಕೆಯಿಂದ ಬೇರೆಯಾಗಿರಬಹುದು. ಸ್ಟೆಥೋಸ್ಕೋಪ್ - ಎದೆದರ್ಶಕ, ಇಸಿಜಿ ಎಲೆಕ್ಟ್ರೋಕಾರ್ಡಿಯೋಗ್ರಾಂ-ವಿದ್ಯುತ್ ಹೃದಯ ಚಿತ್ರ ಎದೆಪಟ್ಟಿ, ಬಿಪಿ-ರಕ್ತ ಒತ್ತಡ, ಟಿಬಿ -ಕ್ಷಯ, ಕ್ಯಾನ್ಸರ್- ಗಂತಿ, ಥೈರಾಯಿಡ್ - ಗುರಾಣಿಕ, ಬೇರೆ ಭಾಷೆಯಿಂದ ತಂದ ಶಬ್ದವನ್ನು ಹಾಗೆಯೇ ಅಥವಾ ಅಲ್ಪ ಬದಲಾವಣೆ ಮಾಡಿ ಬಳಸಿದಲ್ಲಿ ಅದೇ ರೂಢಿಯಾಗಿಬಿಡುತ್ತದೆ.

ವಿಷಯ ಜ್ಞಾನವನ್ನು ಜನಕ್ಕೆ ದೊರಕಿಸಿಕೊಡುವುದು ನಮ್ಮ ಮುಖ್ಯ ಉದ್ದೇಶ. ಆಧುನಿಕ ವಿಜ್ಞಾನ, ತಾಂತ್ರಿಕ ಶಾಸ್ತ್ರ ಅಪರಿಚಿತವಾಗಿದ್ದು, ಅನೇಕ ಬಾರಿ ಪಾರಿಭಾಷಿಕ ಶಬ್ದಗಳ ಅರ್ಥ ವಿವರಣೆಯನ್ನು ಮಾಡಿಕೊಡಬೇಕಾಗುತ್ತದೆ. ಆ ಶಬ್ದಗಳ ಉತ್ಪತ್ತಿ ಶಾಸ್ತ್ರಕ್ಕೆ ನಾವು ಮೊರೆ ಹೋಗಬೇಕಾದ ಸಂದರ್ಭಗಳೂ ಉಂಟು. ಕೆಲವು ಕಡೆ ಅಲ್ಪ ಸ್ವಲ್ಪ ಬದಲಾವಣೆ ಮಾಡಿ ಸ್ವೀಕರಿಸಿದರೂ ಮೂಲ ಶಬ್ದ ಉಳಿದಿರುತ್ತದೆ. ಉದಾಹರಣೆಗೆ ಬಸ್-ಬಸ್ಸು, ಕಾರ್-ಕಾರು, ಮೈಲ್-ಮೈಲು, ಕಪ್-ಕಪ್ಪು, ಟ್ರೇನ್-ಟ್ರೇನು, ರೂಮ್- ರೂಮು, ಫೋನ್-ಫೋನು, ಪಿನ್-ಪಿನ್ನು, ಚೆಕ್-ಚೆಕ್ಕು, ಬ್ಯಾಂಕ್-ಬ್ಯಾಂಕು, ಸ್ಕೂಲ್- ಸ್ಕೂಲು ಈ ಪಾರಿಭಾಷಿಕ ಶಬ್ದಗಳಿಗೆ ಜನ್ಯ ಶಬ್ದಗಳನ್ನು ನಿರ್ಮಿಸುವ ಅಗತ್ಯವಿರಲಿ ಇಲ್ಲದಿರಲಿ ಅವುಗಳನ್ನು ಹಾಗೆಯೇ ಇಲ್ಲವೆ ಚಿಕ್ಕ ಬದಲಾವಣೆಯೊಂದಿಗೆ ಉಳಿಸಿ ಕೊಂಡಿದ್ದೇವೆ.

ಸಮಾನ ಶಬ್ದವನ್ನು ನಾವು ಹೊಸದಾಗಿ ನಿರ್ಮಿಸಬೇಕಾದ ಸಂದರ್ಭದಲ್ಲಿ ಸಂಸ್ಕೃತ ಅಥವಾ ಇತರ ಭಾರತೀಯ ಭಾಷೆಗಳಲ್ಲಿ ದೊರೆತಿರುವ ಪದಗಳನ್ನು ಬಳಸಿಕೊಂಡು ನಮ್ಮ ಪದವನ್ನು ಸೃಷ್ಟಿಸಬೇಕು. ಇಂಗ್ಲಿಷ್ ಶಬ್ದ ಸಂಯುಕ್ತ ಪದವಾಗಿರದೆ ಒಂಟಿ ಪದವಾಗಿದ್ದರೆ ನಾವು ನಿರ್ಮಿಸುವ ಸಮಾನ ಶಬ್ದವು ಹಾಗೆಯೇ ಒಂಟಿ ಪದವಾಗಿರಬೇಕು. ಇಂಗ್ಲಿಷ್ ಶಬ್ದದಿಂದ ಸಂಪಾದಿಸಿದ ಪದವನ್ನು ನಿರ್ಮಿಸುವಾಗ ಸಂಸ್ಕೃತ ಪ್ರತ್ಯಯಗಳು ಹೊಂದಿಕೆಯಾಗದಿದ್ದರೆ ಇಂಗ್ಲಿಷ್ ಪ್ರತ್ಯಯಗಳನ್ನೇ ಬಳಸಬಹುದು (ಅಯೊನೈಜೇಶನ್, ಅಯೋನೀಕರಣ).

ನಾವು ಭಾಷಾಂತರ ಮಾಡಿದ ವಿಷಯವನ್ನು ಸ್ಪಷ್ಟವಾಗಿ ಮತ್ತು ಖಚಿತವಾಗಿ ನಿರೂಪಿಸಬೇಕು. ಅನೇಕ ಬಾರಿ ಮೂಲ ಪದಕ್ಕೆ ಸಮಾನವಾದ ಪದವನ್ನು ರಚಿಸಲಾಗದಿದ್ದರೆ ಅದನ್ನು ವಿವರಿಸುವುದರ ಮೂಲಕ ನಾವು ವಿಷಯವನ್ನು ವ್ಯಕ್ತಪಡಿಸಬೇಕಾಗುತ್ತದೆ. ಅದಕ್ಕಾಗಿ ಭಾಷಾಂತರಕಾರ ತಾನು ಅನುವಾದ ಮಾಡುತ್ತಿರುವ ಭಾಷೆಯ ಜ್ಞಾನವನ್ನು ಹೊಂದಿರಬೇಕು.

# ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡದ ಬಳಕೆ

## -ಉದಯಶಂಕರ ಪುರಾಣಿಕ

ನಿರಂತರ ಸಂಶೋಧನೆ ಮತ್ತು ಆವಿಷ್ಕಾರಗಳಿಂದಾಗಿ ತಂತ್ರಜ್ಞಾನ ಕ್ಷೇತ್ರದಲ್ಲಿ ಮಹತ್ವಪೂರ್ಣ ಬದಲಾವಣೆಗಳಾಗುತ್ತಿವೆ. ಹೊಸ ಸಂಶೋಧನೆಗಳು, ಆವಿಷ್ಕಾರಗಳು ಮತ್ತು ತಂತ್ರಜ್ಞಾನಾಧಾರಿತ ಸೇವೆಗಳನ್ನು ಕನ್ನಡ ಭಾಷೆಯಲ್ಲಿ ನೀಡುವುದರಿಂದ

೧) ಮಾತೃಭಾಷೆ ಕನ್ನಡದಲ್ಲಿ ಗುಣಮಟ್ಟದ ಶಿಕ್ಷಣವನ್ನು ರಾಜ್ಯದ ಎಲ್ಲಾ ಶಾಲೆಗಳಲ್ಲಿ ನೀಡಬಹುದು.

೨) ಕರ್ನಾಟಕದ ಅರಣ್ಯ ಸಂರಕ್ಷಣೆ ಮಾಡಬಹುದು.

೩) ಕರ್ನಾಟಕ ಎದುರಿಸುತ್ತಿರುವ ದೀರ್ಘ ಕಾಲದ ಅಂತರ ರಾಜ್ಯ ಜಲವಿವಾದ ಗಳನ್ನು ಪರಿಹರಿಸಿಕೊಳ್ಳಬಹುದು.

೪) ಮಳೆ, ಬೆಳೆ, ಪಶುರೋಗ ಮುನ್ಸೂಚನೆ ಮೊದಲಾದ ಮಾಹಿತಿಯನ್ನು ನಿಖರವಾಗಿ ಕರ್ನಾಟಕದ ರೈತರಿಗೆ ನೀಡಬಹುದು.

೫) ಕನ್ನಡಿಗರಿಗೆ ಹೆಚ್ಚಿನ ಉದ್ಯೋಗವಕಾಶಗಳು ದೊರೆಯುವಂತೆ ಮಾಡಬಹುದು.

ಈ ೫ ಪ್ರಮುಖ ವಿಷಯಗಳನ್ನು ಕುರಿತು ಚರ್ಚಿಸುವ ಮೊದಲು, ಇದುವರೆಗೆ ತಂತ್ರಜ್ಞಾನ ಮತ್ತು ಸೇವೆಗಳಲ್ಲಿ ಇರುವ ಕನ್ನಡದ ಸೌಲಭ್ಯ ಕುರಿತು ತಿಳಿದುಕೊಳ್ಳೋಣ.

೧) ಕನ್ನಡ ಸಾಹಿತ್ಯ ಪರಿಷತ್ತು ವಿಜ್ಞಾನ ಕುರಿತು ಕನ್ನಡದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸಿದೆ ಮತ್ತು ಪುಸ್ತಕಗಳನ್ನು ಪ್ರಕಟಿಸಿದೆ. ಡಾ.ಮನು ಬಳಿಗಾರರವರು ಅಧ್ಯಕ್ಷರಾದ ನಂತರ, ಅಭಿವೃದ್ಧಿಯಾಗಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧಿಕೃತ ಜಾಲತಾಣದಲ್ಲಿ ಕೆಲವು ಕನ್ನಡ ಪುಸ್ತಕಗಳ ಡಿಜಿಟಲ್ ಆವೃತ್ತಿಯನ್ನು ಉಚಿತವಾಗಿ ನೀಡಲಾಗುತ್ತಿದೆ.

ಇದೇ ರೀತಿ ರಾಜ್ಯ ಸರ್ಕಾರ ಮತ್ತು ಕೆಲವು ಖಾಸಗಿ ಸಂಸ್ಥೆಗಳು ಹಲವು ಕನ್ನಡ ಪುಸ್ತಕಗಳ ಡಿಜಿಟಲ್ ಆವೃತ್ತಿಯನ್ನು ಅಂತರಜಾಲದಲ್ಲಿ ನೀಡುತ್ತಿವೆ.

೨) ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಲೇಖನಗಳನ್ನು ಕಳೆದ ೧೦ ವರ್ಷಗಳಿಂದ ಇ-ಜ್ಞಾನ ಜಾಲತಾಣದಲ್ಲಿ ಪ್ರಕಟಿಸಲಾಗುತ್ತಿದೆ. ರಾಷ್ಟ್ರೀಯ ವೈಮಾಂತ್ಯರಿಕ್ಷ ಸಂಶೋಧನೆ ಪ್ರಯೋಗಾಲಯದ

ಕನ್ನಡ ಸಂಘವು ಕಳೆದ ೪೩ ವರ್ಷಗಳಿಂದ 'ಕಣಾದ' ಹೆಸರಿನ ವಿಜ್ಞಾನ ವಾರ್ಷಿಕ ವಿಶೇಷಾಂಕವನ್ನು ಕನ್ನಡದಲ್ಲಿ ಪ್ರಕಟಿಸುತ್ತಿದೆ. ಈ ವರ್ಷದಿಂದ ಕಣಾದ ಆನ್‌ಲೈನ್ ಅವೃತ್ತಿ ಲಭ್ಯವಾಗಿದೆ. ಇದಲ್ಲದೆ ಅನೇಕ ಕನ್ನಡ ಪತ್ರಿಕೆಗಳು, ಬ್ಲಾಗ್‌ಗಳು ಮತ್ತು ಜಾಲತಾಣಗಳಲ್ಲಿ ವಿಜ್ಞಾನ, ತಂತ್ರಜ್ಞಾನ



`ಕುರಿತು ಅಂಕಣಗಳು ಪ್ರಕಟವಾಗುತ್ತಿವೆ. ಕೆಲವು ಪ್ರಕಾಶನ ಸಂಸ್ಥೆಗಳು, ವಿಶ್ವವಿದ್ಯಾಲಯಗಳು, ಕನ್ನಡ ಸಾಹಿತ್ಯ ಪರಿಷತ್ತು ಮತ್ತು ವಿಜ್ಞಾನ ಲೇಖಕರ ಪರಿಶ್ರಮದಿಂದಾಗಿ ಕನ್ನಡದಲ್ಲಿ ವಿಜ್ಞಾನ-ತಂತ್ರಜ್ಞಾನ ಕುರಿತು ಪುಸ್ತಕಗಳು ದೊರೆಯುತ್ತಿವೆ.

೩) ಎಟಿಎಂ, ಮೊಬೈಲ್ ಫೋನ್ ಸೇವೆ ನೀಡುವ ಸಂಸ್ಥೆಗಳ ಕಾಲ ಸೆಂಟರ್‌ಗಳು, ಅಮೆಜಾನ್ ಸಂಸ್ಥೆಯ ಭಾರತಕ್ಕೆ ಮೀಸಲಾದ ಕಾಲ್ ಸೆಂಟರ್, ಮೊಬೈಲ್ ಫೋನ್ ಬಿಲ್‌ಗಳು, ಹಲವು ರಾಜ್ಯ ಸರ್ಕಾರದ ಇ-ಆಡಳಿತ ಸೇವೆಗಳು ಮತ್ತು ಜಾಲತಾಣಗಳಲ್ಲಿ ಕನ್ನಡ ಭಾಷೆಯ ಸೌಲಭ್ಯ ಲಭ್ಯವಿದೆ.

೪) ಸಹಕಾರಿ ಕ್ಷೇತ್ರದ ಬ್ಯಾಂಕು ಮತ್ತು ಸಂಸ್ಥೆಗಳಿಗೆ ಕನ್ನಡ ಬ್ಯಾಂಕಿಂಗ್ ತಂತ್ರಾಂಶ ಲಭ್ಯವಿದೆ, ಖಾಸಗಿ ಕ್ಷೇತ್ರದ ಬ್ಯಾಂಕು ತನ್ನ ಕನ್ನಡಿಗ ಗ್ರಾಹಕರಿಗೆಂದು ಸಂಪೂರ್ಣ ವಾಗಿ ಕನ್ನಡದಲ್ಲಿರುವ ಮೊಬೈಲ್ ಬ್ಯಾಂಕಿಂಗ್ ತಂತ್ರಾಂಶ ನೀಡುತ್ತಿದೆ, ಭೀಮ್ ಮೊದಲಾದ ವ್ಯಾಲೆಟ್‌ಗಳಲ್ಲಿ ಕನ್ನಡ ಭಾಷೆಯ ಸೌಲಭ್ಯ ಲಭ್ಯವಿದೆ, ಮೊಬೈಲ್ ಫೋನ್‌ಗಳಲ್ಲಿ ಬಳಸಲು ಹಲವಾರು ಕನ್ನಡ ಆಪ್‌ಗಳು ಲಭ್ಯವಿದೆ.

೫) ೧೩ ಕನ್ನಡ ವಿಜ್ಞಾನ ಸಮ್ಮೇಳನಗಳನ್ನು ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸ್ವದೇಶಿ ವಿಜ್ಞಾನ ಆಂದೋಳನ ಸಂಸ್ಥೆ ಆಯೋಜಿಸಿದೆ. ಕನ್ನಡ ಮತ್ತು ತಂತ್ರಜ್ಞಾನ ಕುರಿತ ಸಂವಾದ ಮತ್ತು ಗೋಷ್ಠಿಗಳು ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮತ್ತು ಹಲವು ವೇದಿಕೆಗಳಲ್ಲಿ ನಡೆಯುತ್ತಿವೆ.

೬) ಗೂಗಲ್ ಅನುವಾದ ಸೌಲಭ್ಯ, ಗೂಗಲ್ ಮ್ಯಾಪ್, ಗೂಗಲ್ ಸರ್ಚ್ ಹೀಗೆ ಅನೇಕ ಸೌಲಭ್ಯಗಳು ಕನ್ನಡ ಭಾಷೆಯಲ್ಲಿ ದೊರೆಯುತ್ತಿವೆ. ನುಡಿ, ಬರಹ, ಕುವೆಂಪು ಕನ್ನಡ ತಂತ್ರಾಂಶಗಳಲ್ಲದೆ, ಹಲವಾರು ಮುಕ್ತ ತಂತ್ರಾಂಶಗಳು ಕನ್ನಡ ಭಾಷೆಯಲ್ಲಿ ದೊರೆಯುತ್ತಿವೆ.

ಹೀಗೆ ಲಭ್ಯವಿರುವ ಸೌಲಭ್ಯಗಳ ಪಟ್ಟಿಯನ್ನು ಮಾಡುತ್ತ ಹೋಗಬಹುದು. ಆದರೆ ಇಷ್ಟೆಲ್ಲಾ ಸೌಲಭ್ಯಗಳು ಕನ್ನಡ ಭಾಷೆಯಲ್ಲಿ ಲಭ್ಯವಿರುವಾಗ, ಅದನ್ನು ಎಷ್ಟು ಜನ ಕನ್ನಡಿಗರು ಬಳಸಿ ಸದುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎನ್ನುವ ಪ್ರಶ್ನೆ ಎದುರಾಗುತ್ತದೆ.

ಮಾತೃಭಾಷೆಯಲ್ಲಿ ಶಿಕ್ಷಣ ನೀಡಲು ಆದ್ಯತೆ ನೀಡಬೇಕು ಎನ್ನುವ ಕನ್ನಡಿಗರಿಗೆ ಹಕ್ಕೊತ್ತಾಯಕ್ಕೆ ತಂತ್ರಜ್ಞಾನ ಹೇಗೆ ಪೂರಕವಾಗಬಹುದು ಎಂದು ಒಂದು ಉದಾಹರಣೆಯೊಂದಿಗೆ ತಿಳಿದುಕೊಳ್ಳೋಣ.

ಖಾಸಗಿ ಶಿಕ್ಷಣ ಸಂಸ್ಥೆಗಳು, ಸರ್ಕಾರ ನಡೆಸುವ ಶಿಕ್ಷಣ ಸಂಸ್ಥೆಗಳ ನಡುವೆ ದುಬಾರಿ ಯಾದರೂ ಹೆಚ್ಚು ಜನ ಖಾಸಗಿ ಶಿಕ್ಷಣ ಸಂಸ್ಥೆಗಳತ್ತ ಒಲವು ತೋರಿಸುತ್ತಿರುವುದು, ಶಿಕ್ಷಣ ಕ್ಷೇತ್ರದ ವ್ಯಾಪಾರೀಕರಣ, ನಗರ ಮತ್ತು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು, ಬಡವ ಮತ್ತು ಬಲ್ಲಿದರ ನಡುವೆ ಹೆಚ್ಚುತ್ತಿರುವ ಅಂತರ ಹೀಗೆ ಹಲವಾರು ಸಮಸ್ಯೆಗಳನ್ನು ನೋಡುತ್ತೇವೆ.



**ಅಕ್ಷರ ಸಮಾನತೆ :**

ಖಾಸಗಿ, ಸರ್ಕಾರಿ ಅಥವಾ ಗ್ರಾಮೀಣ-ನಗರ, ಬಡವ-ಬಲ್ಲಿದ ಎನ್ನದೆ ಎಲ್ಲರಿಗೂ ಏಕರೂಪವಾದ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಕನ್ನಡದಲ್ಲಿ ನೀಡಲು ತಂತ್ರಜ್ಞಾನವನ್ನು ಬಳಸಬಹುದು.

ಹೀಗೆ ತಂತ್ರಜ್ಞಾನವನ್ನು ಯಶಸ್ವಿಯಾಗಿ ಬಳಸಿ ಮಾತೃಭಾಷೆಯಾದ ಚೀನಾ ಭಾಷೆಯಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ಚೀನಾ ಸರ್ಕಾರ ಯಶಸ್ವಿಯಾಗಿದೆ.

೧) ೧೮ ಕೋಟಿ ೮೦ ಲಕ್ಷ ಶಾಲಾ ವಿದ್ಯಾರ್ಥಿಗಳು ಮತ್ತು ೧ ಕೋಟಿ ೪೦ ಲಕ್ಷ ಶಿಕ್ಷಕರು ತಂತ್ರಜ್ಞಾನ ಬಳಸಿ ಚೀನಾ ಭಾಷೆಯಲ್ಲಿ ನೀಡುವ ಶಾಲಾ ಶಿಕ್ಷಣದ ಪ್ರಯೋಜನ ಪಡೆಯುತ್ತಿದ್ದಾರೆ.

೨) ೭ ಕೋಟಿ ೩೦ ಲಕ್ಷ ಶಾಲೆಗಳಿಗೆ ಅಂತರಜಾಲ ಸಂಪರ್ಕ, ಪಠ್ಯಪುಸ್ತಕಗಳು ಡಿಜಿಟಲ್ ಆವೃತ್ತಿ ಮತ್ತು ಅಧುನಿತ ಮೌಲ್ಯಮಾಪನ ಮೊದಲಾದ ಸೌಲಭ್ಯಗಳನ್ನು ನೀಡಲಾಗಿದೆ.

೩) ಶಾಲೆಗಳಲ್ಲಿ ಕಲಿಸುವ ವಿಜ್ಞಾನ, ಗಣಿತ ಮೊದಲಾದ ಪಠ್ಯಗಳಿಗೆ ಸಂಬಂಧಿಸಿದ ೫೦ ಕೋಟಿ ಪ್ರಶ್ನೆಗಳು, ಉಪ ಪ್ರಶ್ನೆಗಳು ಮತ್ತು ಉತ್ತರಗಳನ್ನು ಡಿಜಿಟಲ್ ಗ್ರಂಥಾಲಯವನ್ನು ಅಭಿವೃದ್ಧಿಪಡಿಸಿ, ಇದನ್ನು ದಿನದ ೨೪ ಗಂಟೆಗಳ ಕಾಲ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ಉಚಿತವಾಗಿ ನೀಡಲಾಗುತ್ತಿದೆ.

೪) ವಿದ್ಯಾರ್ಥಿಗಳ ಮನೆಪಾಠ ಪರಿಶೀಲನೆ, ಉತ್ತರ ಪತ್ರಿಕೆಗಳ ಮೌಲ್ಯಮಾಪನ, ಫಲಿತಾಂಶ ಪ್ರಕಟಣೆ ಮೊದಲಾದ ಕೆಲಸಗಳನ್ನು ಅಧುನಿಕ ತಂತ್ರಜ್ಞಾನ ಬಳಸಿ ಸರಳೀಕೃತಗೊಳಿಸಿರುವುದರಿಂದ ಶಿಕ್ಷಕರ ಮೇಲಿನ ಹೊರೆ ಕಡಿಮೆ ಯಾಗಿದೆ.

ಪ್ರತಿದಿನ ಸರಾಸರಿ ೨ ಗಂಟೆಯಷ್ಟು ಸಮಯ ಶಿಕ್ಷಕರಿಗೆ ಉಳಿತಾಯವಾಗುತ್ತಿದೆ. ಈ ಸಮಯದಲ್ಲಿ ನಗರಪ್ರದೇಶದಲ್ಲಿರುವ ಅನುಭವಿ ಶಿಕ್ಷಕರು, ಇ-ಶಿಕ್ಷಣ ಸೌಲಭ್ಯ ಬಳಸಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಾರೆ.

ಇಂತಹ ಯೋಜನೆಯನ್ನು ಕನ್ನಡ ಭಾಷೆಯಲ್ಲಿ ಶಿಕ್ಷಣ ನೀಡಲು ರೂಪಿಸಿ, ಅನುಷ್ಠಾನಗೊಳಿಸಿದರೆ, ರಾಜ್ಯದಲ್ಲಿರುವ ೧ ರಿಂದ ೧೦ನೇ ತರಗತಿಯವರೆಗಿನ ಶಾಲೆಗಳಲ್ಲಿ (ವಿವರಗಳನ್ನು ಕೆಳಗಿನ ಪಟ್ಟಿಯಲ್ಲಿ ನೀಡಲಾಗಿದೆ) ಕನ್ನಡ ಭಾಷೆಯಲ್ಲಿ ಶಿಕ್ಷಣ ನೀಡಲು ಸಾಧ್ಯವಾಗುತ್ತದೆ ಮತ್ತು ಅಕ್ಷರ ಸಮಾನತೆಯನ್ನು ಸಾಧಿಸಲು ಸಾಧ್ಯವಾಗುತ್ತದೆ.



| | | ಶಾಲೆಗಳ ಸಂಖ್ಯೆ | ವಿದ್ಯಾರ್ಥಿಗಳು |
|---|---|---|---|
| ೧ | ಸರ್ಕಾರಿ ಶಾಲೆಗಳು | ೪೯,೬೩೭ | ೫೨.೮೩ ಲಕ್ಷ |
| ೨ | ಸಮಾಜ ಕಲ್ಯಾಣ ಇಲಾಖೆಯ ಶಾಲೆಗಳು | ೧,೨೧೮ | ೧.೨೫ ಲಕ್ಷ |
| ೩ | ಅನುದಾನಿತ ಶಾಲೆಗಳು | ೬.೮೦೬ | ೧೫ ಲಕ್ಷ |
| ೪ | ಅನುದಾನರಹಿತ ಶಾಲೆಗಳು | ೧೬,೪೮೧ | ೩೨ ಲಕ್ಷ |

**ಪರಿಸರ ಸಂರಕ್ಷಣೆ :**

ಚಿನ್ನದ ನಾಡು, ಸಿರಿಗಂಧದ ನಾಡು ಕನ್ನಡ ನಾಡಿನ ಅರಣ್ಯ ಸಂರಕ್ಷಣೆಯಲ್ಲೂ ತಂತ್ರಜ್ಞಾನವನ್ನು ಯಶಸ್ವಿಯಾಗಿ ಬಳಸಬಹುದಾಗಿದೆ.

ಡೆಮೋಕ್ರಾಟಿಕ್ ರಿಪ್ಲೇಬಿಕ್ ಆಫ್ ಕಾಂಗೋದಲ್ಲಿ ಹೀಗೆ ತಂತ್ರಜ್ಞಾನ ಬಳಸಿದ್ದ ರಿಂದ ಕಾಡಿಚ್ಚು, ಮರಗಳ್ಳತನ, ಒತ್ತುವರಿ ಮೊದಲಾದ ಸಮಸ್ಯೆಗಳಿಂದ ೮,೨೦,೮೮೪ ಎಕರೆ ಅರಣ್ಯವನ್ನು ಸಂರಕ್ಷಿಸಲಾಗಿದೆ.

ಅರಣ್ಯದಲ್ಲಿ ಅತ್ಯಾಧುನಿಕ ಸೆನ್ಸರ್‌ಗಳನ್ನು ಬಳಸಿರುವುದರಿಂದ, ಎಲ್ಲಿಯಾದರೂ ಅಗ್ನಿ ಅವಗಢ ಸಂಭವಿಸಿದರೆ, ಮರಗಳ್ಳತನ ನಡೆಯುತ್ತಿದ್ದರೆ, ಅರಣ್ಯ ಪ್ರದೇಶವನ್ನು ಯಾರಾದರೂ ಅನಧಿಕೃತವಾಗಿ ಪ್ರವೇಶಿದರೆ ಅಥವಾ ಒತ್ತುವರಿ ಮಾಡಿಕೊಳ್ಳಲು ಪ್ರಯತ್ನಿಸಿದರೆ, ತಕ್ಷಣ ಆ ಕುರಿತ ಮಾಹಿತಿ ಸ್ಥಳೀಯ ಭಾಷೆಯಲ್ಲಿ ಅರಣ್ಯ

ಪಾಲಕರು ಮತ್ತು ಹತ್ತಿರದ ಗ್ರಾಮಸ್ಥರಿಗೆ ಮೊಬೈಲ್ ಫೋನ್ ಸಂದೇಶವಾಗಿ ತಲುಪಿಸಲಾಗುತ್ತದೆ. ನಮ್ಮಲ್ಲಿ ಕೂಡ ಅರಣ್ಯಪಾಲಕರು, ಅರಣ್ಯ ಸಂರಕ್ಷಣೆಯಲ್ಲಿ ತೊಡಗಿರುವ ಗ್ರಾಮಸ್ಥರಿಗೆ ಅನುಕೂಲವಾಗುವಂತೆ ಕನ್ನಡ ಭಾಷೆಯಲ್ಲಿ ಈ ತಂತ್ರಜ್ಞಾನವನ್ನು ನೀಡಲು ಸಾಧ್ಯವಿದೆ.

**ಅಂತರ ರಾಜ್ಯ ಜಲವಿವಾದಗಳ ಪರಿಹಾರ :**

ಕಾವೇರಿ, ಮಹದಾಯಿ, ಕೃಷ್ಣಾ ಮೊದಲಾದ ಅಂತರ ರಾಜ್ಯ ಜಲವಿವಾದ ಗಳನ್ನು ಪರಿಹರಿಸಿಕೊಳ್ಳಲು ತಂತ್ರಜ್ಞಾನ ನೆರವಾಗಲಿದೆ.

ಆಫ್ರಿಕಾದ ೩ ದೇಶಗಳ ನಡುವೆ ಸುಮಾರು ೧೦೦ ವರ್ಷಗಳ ಕಾಲದಿಂದ ಇದ್ದ ಕೋಮತಿ ನದಿ ಜಲವಿವಾದವನ್ನು ಯಶಸ್ವಿಯಾಗಿ ಪರಿಹರಿಸಲು ಬಳಸಲಾ ಗಿರುವ ತಂತ್ರಜ್ಞಾನವನ್ನು ನಾವು ಕೂಡಾ ಬಳಸಬಹುದಾಗಿದೆ.

೧) ಜಲಾನಯನ ಪ್ರದೇಶದಲ್ಲಿ ಎಷ್ಟು ಮಳೆಯಾಯಿತು, ಮಳೆಯಿಂದಾಗಿ ಎಷ್ಟು ನೀರು ನದಿ ಪಾತ್ರವನ್ನು ಸೇರಿತು. ನದಿ ನೀರನ್ನು ಯಾವ ಪ್ರದೇಶದಲ್ಲಿ ಸದ್ಬಳಕೆ ಮಾಡಿಕೊಳ್ಳಲಾಗುತ್ತಿದೆ, ಎಲ್ಲಿ ನೀರು ಪೋಲಾಗುತ್ತಿದೆ, ಜಲಾಶಯ ಗಳಲ್ಲಿ ಸಂಗ್ರಹವಾಗಿರುವ ನೀರಿನ ಪ್ರಮಾಣ, ಕುಡಿಯುವ ನೀರಿಗೆ ಮತ್ತು ವ್ಯವಸಾಯಕ್ಕೆ



ಬಿಡುಗಡೆಯಾಗುತ್ತಿರುವ ನೀರಿನ ಪ್ರಮಾಣ ಇಂತಹ ಮಾಹಿತಿಯನ್ನು ಅವರ ಮಾತೃಭಾಷೆಯಲ್ಲಿ ರೈತರಿಗೆ ಪ್ರತಿದಿನವೂ ನೀಡಲು ಸಾಧ್ಯವಾಗುತ್ತದೆ.

೨) ಅನಾವೃಷ್ಟಿ ಸಮಯದಲ್ಲಿ ನೀರಿನ ಕೊರತೆ ಎಷ್ಟಿದೆ, ಹೇಗೆ ಲಭ್ಯವಿರುವ ನೀರನ್ನು ಬಳಸಿಕೊಳ್ಳಬಹುದು ಮೊದಲಾದ ವಿಷಯಗಳನ್ನು ಕೂಡ ರೈತರಿಗೆ ಅವರ ಮಾತೃಭಾಷೆಯಲ್ಲಿ ನೀಡಬಹುದು.

೩) ಜಲಾನಯನ ಪ್ರದೇಶದಿಂದ ಸಮುದ್ರ ಸೇರುವ ತನಕ ನದಿ, ಜಲಾಶಯಗಳು, ನೀರಿನ ಬಳಕೆ ಮತ್ತು ಪೋಲು ಕುರಿತು ಮಾಹಿತಿ ಸಂಬಂಧಪಟ್ಟ ಎಲ್ಲಾ ರಾಜ್ಯಗಳಿಗೆ, ಕೇಂದ್ರ ಸರ್ಕಾರ ಮತ್ತು ನ್ಯಾಯಾಲಕ್ಕೆ ನೀಡಲು ಸಾಧ್ಯವಾಗುತ್ತದೆ. ಮಳೆ, ಬೆಳೆ, ಪಶು ರೋಗ ಮುನ್ಸೂಚನೆ ಕುರಿತು ಮಾಹಿತಿಯನ್ನು ರೈತರಿಗೆ

**ಕನ್ನಡದಲ್ಲಿ ನೀಡಬಹುದು :**

ತಾಲ್ಲೂಕು, ಹೋಬಳಿ ಮಟ್ಟದಲ್ಲಿ ಮಳೆ, ಬೆಳೆ ಮತ್ತು ಪಶು ರೋಗ ಮುನ್ಸೂಚನೆ ಕುರಿತ ಮಾಹಿತಿಯನ್ನು ಹೆಚ್ಚು ಕರಾರುವಕ್ಕಾಗಿ ನೀಡಲು ಸಾಧ್ಯವಿದೆ.

ನೆರೆಯ ಮಹಾರಾಷ್ಟ್ರದಲ್ಲಿ ಇಂತಹ ಯೋಜನೆಯನ್ನು ಜಾರಿಗೊಳಿಸ ಲಾಗುತ್ತಿದೆ. ಕರ್ನಾಟಕದ ರೈತರಿಗೆ ಅನುಕೂಲವಾಗುವಂತೆ ಇಲ್ಲಿ ಕೂಡ ಇಂತಹ ಯೋಜನೆ ರೂಪಿಸಬಹುದಾಗಿದೆ.

ದಕ್ಷಿಣ ಕರ್ನಾಟಕದಲ್ಲಿ ಪ್ರಾಯೋಗಿಕವಾಗಿ ನಡೆದ ಪಶುರೋಗ ಮುನ್ಸೂಚನೆ ಮಾಹಿತಿ ನೀಡುವ ಯೋಜನೆಯಲ್ಲಿ ೩ ತಿಂಗಳು ಮುಂಚಿತವಾಗಿ ಹಸುಗಳನ್ನು ಕಾಡುವ ಸಾಂಕ್ರಮಿಕ ರೋಗವೊಂದರ ಮುನ್ಸೂಚನೆ ನೀಡಲು ಸಾಧ್ಯವಾಗಿದೆ.

ಇದನ್ನು ರಾಜ್ಯಾದ್ಯಂತ ವಿಸ್ತರಿಸಿದರೆ, ಪಶು, ಕುಕ್ಕುಟೋದ್ಯಮ ಮತ್ತು ಕುರಿಗಳನ್ನು ಸಾಕುತ್ತಿರುವ ರೈತರಿಗೆ ಅನುಕೂಲವಾಗಲಿದೆ.

**ಕನ್ನಡಿಗರಿಗೆ ಹೆಚ್ಚಿನ ಉದ್ಯೋಗವಕಾಶ :**

ರಾಜ್ಯದ ಪ್ರತಿಯೊಂದು ಜಿಲ್ಲೆಯಲ್ಲಿರುವ ಉದ್ಯೋಗಕಾಂಕ್ಷಿ ಯುವಕ, ಯುವತಿಯರ ವಿದ್ಯಾರ್ಹತೆ, ಆಸಕ್ತಿ ಕುರಿತು ವೈಜ್ಞಾನಿಕವಾಗಿ ಮಾಹಿತಿ ಸಂಗ್ರಹಿಸಿ, ನವೋದ್ಯಮ, ಸ್ವಯಂ ಉದ್ಯೋಗ, ಖಾಸಗಿ ಮತ್ತು ಸರ್ಕಾರಿ ನೌಕರಿಗಳು ಹೆಚ್ಚು ಕನ್ನಡಿಗರಿಗೆ ಲಭ್ಯವಾಗುವಂತೆ ಮಾಡಬಹುದಾಗಿದೆ.

ಸಿ.ಐ.ಐ.-ಮೆಕೆನ್ಸಿ ಸಹಯೋಗದಲ್ಲಿ ಇಡೀ ರಾಜ್ಯದ ಸಮೀಕ್ಷೆ ನಡೆಸಿ ತಯಾರಿಸಿ ರಾಜ್ಯ ಸರ್ಕಾರಕ್ಕೆ ನೀಡಲಾದ ಯೋಜನಾ ವರದಿಯನ್ನು ಇಂದಿನ ಅಗತ್ಯಗಳಿಗೆ ತಕ್ಕಂತೆ ಮರುಪರಿಶೀಲಿಸಿದರೆ, ಸಾವಿರಾರು ಜನ ಕನ್ನಡ ಮಾಧ್ಯಮದ ವಿಜ್ಞಾನ ಪದವೀಧರರಿಗೆ ಉದ್ಯೋಗ ದೊರೆಯಬಹುದಾಗಿದೆ.

ಡಾ.ಮನು ಬಳಿಗಾರರು ಅಧ್ಯಕ್ಷರಾದ ಮೇಲೆ ಕನ್ನಡ ಸಾಹಿತ್ಯ ಪರಿಷತ್ತು, ಅರ್ಹ ಕನ್ನಡಿಗ ಅಭ್ಯರ್ಥಿಗಳಿಗೆ ಉದ್ಯೋಗವಕಾಶ ದೊರೆಯಲು ರಾಜ್ಯದಲ್ಲಿರುವ ಅನೇಕ ಉದ್ಯಮಗಳಲ್ಲಿ ಪ್ರಯತ್ನಿಸುತ್ತಿರುವುದು ಮಹತ್ವಪೂರ್ಣ ಬೆಳವಣಿಗೆಯಾಗಿದೆ.

ಈ ಚರ್ಚೆ ಈ ಗೋಷ್ಠಿಗೆ ಸೀಮಿತವಾಗದೆ, ಕನ್ನಡ ಸಾಹಿತ್ಯ ಪರಿಷತ್ತು, ಅನುಭವಿ ತಂತ್ರಜ್ಞರು, ವಿಜ್ಞಾನಿಗಳು, ಶಿಕ್ಷಣ ತಜ್ಞರು, ಸಾಹಿತಿಗಳು ಮತ್ತು ಜನಸಾಮಾನ್ಯರ ನಡುವೆ ಮುಂದುವರಿದರೆ, ಮುಂಬರುವ ದಿನಗಳಲ್ಲಿ ತಂತ್ರಜ್ಞಾನ ಕ್ಷೇತ್ರದಲ್ಲಿ ಕನ್ನಡದ ಬಳಕೆ ಬೆಳೆಯಲು ಸಾಧ್ಯವಾಗುತ್ತದೆ ಎಂದು ನನ್ನ ಅಭಿಪ್ರಾಯವಾಗಿದೆ.

## ಸಮಾನಾಂತರ ಗೋಷ್ಠಿ – ೨

### ಗೋಷ್ಠಿ - ೧

## ಮಕ್ಕಳ ಸಾಹಿತ್ಯ ಗೋಷ್ಠಿ

# ಅಧ್ಯಕ್ಷ ಭಾಷಣ

**- ಜಯವಂತ ಕಾಡದೇವರ**

ನನ್ನ ಭಾಷಣದ ವಿಷಯವನ್ನು ನಾನು ನಾಲ್ಕು ಭಾಗಗಳಲ್ಲಿ ವಿಂಗಡಿಸಿ ಕೊಂಡಿದ್ದೇನೆ. ಒಂದನೆಯದು, ೬೦ ವರ್ಷಗಳ ಹಿಂದೆ ನಾನು ಪ್ರಾಥಮಿಕ ಶಾಲಾ ವಿದ್ಯಾರ್ಥಿಯಾಗಿದ್ದಾಗ ಮಕ್ಕಳ ಕಾವ್ಯ ಹೆಂಗಿತ್ತು? ಎರಡನೆಯದು, ನಾನು ಶಿಕ್ಷಕನಾಗಿದ್ದಾಗ ಎಂತಿತ್ತು? ಮೂರನೆಯದು, ನಾನು ನಿವೃತ್ತಿ ಹೊಂದಿದ ಮೇಲೆ ಮಕ್ಕಳ ಕಾವ್ಯದ ಮೇಲೆ ಪರಿಣಾಮಗಳು ಮತ್ತು ಬದಲಾವಣೆಗಳು ಎಂಥವು ಆಗಿದ್ದವು? ನಾಲ್ಕನೆಯದಾಗಿ, ಇಂದು ಕನ್ನಡ ಭಾಷೆಯೇ ಗಂಡಾಂತರದ ಸ್ಥಿತಿಯಲ್ಲಿರುವಾಗ ಅದರ ಉಳಿವಿಗಾಗಿ ನಮ್ಮ ಕರ್ತವ್ಯಗಳೇನು?

೧೯೫೩ರಲ್ಲಿ ನಾನು ೩ನೇ ವರ್ಗದಲ್ಲಿ ಓದುತ್ತಿದ್ದಾಗ ನಮ್ಮ ಪಠ್ಯ ಪುಸ್ತಕದಲ್ಲಿ ಒಂದು ಹಾಡು ಇತ್ತು. "ನನ್ನ ಪಾಟಿ ಕರಿಯದು ಸುತ್ತೂ ಕಟ್ಟು ಬಿಳಿಯದು ಬರೆಯಲಿಕ್ಕೆ ಬರುವುದು! ಬಹಳ ಚೆಂದ ಇರುವುದು ಅಪ್ಪ ದುಡ್ಡು ಕೊಟ್ಟನು ಬಳಪವೊಂದು ತಂದೆನು ಈಕ ಬರೆದೆನು! ಅಪ್ಪನ ಮುಂದೆ ಹಿಡಿದೆನು! ಅವ್ವ ಹಿಗ್ಗಿ ನಲಿದಳು, ತಿನ್ನಲುಂಡಿ ಕೊಟ್ಟಳು! ಗಪಗಪ ತಿಂದೆನು ಥಕ ಥಕ ಕುಣಿದೆನು" ವಿಜಯಪುರದ ಬಡಿಗೇರ ಎಂಬ ಶಿಕ್ಷಕರು ಬರೆದ ಈ ಕವನವನ್ನು ನಾನೊಬ್ಬನೇ ಅಲ್ಲ, ನನ್ನ ಸಹಪಾಠಿಗಳು ಮತ್ತು ಸುತ್ತಲಿನ ಶಾಲೆಗಳ ವಿದ್ಯಾರ್ಥಿಗಳೆಲ್ಲರೂ ಹಾಡುತ್ತಿದ್ದರು. ಕವಿತೆಯ ವಸ್ತುವಾದ ಪಾಟ ಅಂದಿನ ಎಲ್ಲ ವಿದ್ಯಾರ್ಥಿಗಳ ಕೈಯಲ್ಲಿರುತ್ತಿತ್ತು. ಕವಿತೆಯ ಲಯದ ಗತ್ತು ಎಲ್ಲರನ್ನೂ ಕುಣಿಸುತ್ತಿತ್ತು. ಇಂಥದೇ ಲಯಬದ್ಧವಾದ ಕವನ ನಾನು ೪ನೇ ವರ್ಗದಲ್ಲಿ ಓದುವಾಗ ಇತ್ತು. "ನಮ್ಮ ತಾಯಿ ಕನ್ನಡ ನಮ್ಮ ರಕ್ತ ಕನ್ನಡ ನಮ್ಮ ಪ್ರಾಣ ಕನ್ನಡ ನಮ್ಮ ನುಡಿಯು ಕನ್ನಡ ನಮ್ಮ ನಾಡು ಕನ್ನಡ ಚಾಲುಕ್ಯ ರಾಷ್ಟ್ರಕೂಟ ವಿಜಯನಗರ ರಾಜರ ಕಾಳಗದೊಳು ಕೆಚ್ಚಿನಿಂದ ಕಾದಿದಂಥ ವೀರರು ವೀರಮಾತೆ ಕನ್ನಡ ಪಂಪ ರನ್ನ ಹರಿಹರ ಶ್ರೀಷಡಕ್ಷರಾದ್ದರ ಸೋಮ ಭೀಮ ಚಾಮ ಕುಮಾರವ್ಯಾಸರಂಥ ಕವಿಗಳ ಕಾವ್ಯವಾಣಿ ಕನ್ನಡ! ಬಸವ ಚನ್ನಬಸವ ಅಲ್ಲಮಾದಿ ಶಿವನ ಶರಣರು ರಸದ ಭಕ್ತಿಗೀತೆಗಳನ್ನು ಹಾಡಿದಂಥ ದಾಸರ ಪುಣ್ಯಭೂಮಿ ಕನ್ನಡ ಮುತ್ತು ರತ್ನಗಳನ್ನು ಬಳ್ಳದಿಂದ ಅಳೆದು ಮಾರಿದ ದತ್ತಿ ದಾನ ಧರ್ಮಗಳಿಗೆ ತಮ್ಮ ಧನವ ತೂರಿದು ವರ್ಣಿ ನಾಡು ಕನ್ನಡ" ಹುಬ್ಬಳಿಯ ಗಂಗಪ್ಪ ವಾಲಿ ಅವರು ಬರೆದ ಈ ಪದ್ಯ ಇನ್ನೂ ಕರ್ನಾಟಕ ರಾಜ್ಯ ನಿರ್ಮಾಣವಾಗಿರದ ಅಂದಿನ ದಿನಮಾನಗಳಲ್ಲಿ ಕನ್ನಡಿಗರಲ್ಲಿ ಪ್ರೀತಿ ಅಭಿಮಾನಗಳನ್ನು ಉದ್ದೀಪನಗೊಳಿಸವಂತಿತ್ತು. ಅಂದು ನಾವೆಲ್ಲ ಈ ಹಾಡನ್ನು

ಎದೆತುಂಬಿ ಹಾಡುತ್ತಿದ್ದೆವು. ಪಂಜೆ ಮಂಗೇಶರಾಯರು “ಮೂಡುವನು ರವಿ ಮೂಡುವನು! ಕತ್ತಲೊಡನೆ ಜಗಳಾಡುವನು! ಮೂಡಣ ರಂಗಸ್ಥಳದಲ್ಲಿ ನೆತ್ತರು ಮೂಡುವನು! ಕುಣಿದಾಡುವನು” ಇದು ಅಲ್ಲದೆ ಅವರದೇ “ನಾಗರಹಾವೆ ಹಾವೊಳು ಹೂವೆ ಬಾಗಿಲ ಬಿಲದಲಿ ನಿನ್ನಯ ಠಾವೆ ಕೈಗಳ ಮುಗಿವೆ ಹಾಲನ್ನಿವೆ! ಬಾ ಬಾ ಬಾ ಬಾ ಬಾ ಬಾ ಬಾ ಬಾ” ಮಚ್ಚಿಮಲೆ ಶಂಕರನಾರಾಯಣ ರಾವ್ ಅವರ 'ಮಂಗಗಳ ಉಪವಾಸ', ದಿನಕರ ದೇಸಾಯಿ ಅವರ ಗಡಿಯಾರ, ನಿ, ರೇ. ಹಿರೇಮಠರ ಅಂಚೆಯ ಅಣ್ಣ, ಸಿ.ಫ. ಕಟ್ಟಿಮನಿ ಅವರ ಬಣ್ಣದ ಹಕ್ಕಿ ಮುಂತಾದ ಹತ್ತು ಹಲವು ಪದ್ಯಗಳು ನಮ್ಮ ನಾಲಿಗೆಯ ಮೇಲೆ ಕುಣಿದಾಡುತ್ತಿದ್ದವು. ೬೦-೭೦ ವರುಷಗಳ ಹಿಂದೆ ಸಾಹಿತ್ಯದ ಓದೇ ಮನರಂಜನೆಯ ಸಂಗತಿಯಾಗಿತ್ತು. ಅಂದಿನ ಶಿಕ್ಷಕರೂ ಸಾಹಿತ್ಯಪ್ರಿಯರಾಗಿದ್ದರು. ನಾನು ೬ನೆಯ ವರ್ಗದಲ್ಲಿದ್ದಾಗ ನನ್ನ ಶಾಲೆಯ ಡ್ರಾಯಿಂಗ್ ಶಿಕ್ಷಕರಾದ ರಾವಳ ಗುರುಗಳು ಹಾಡಿದ ಒಂದು ಹಾಡು ಇನ್ನೂ ನನ್ನ ಮನದಲ್ಲಿ ಹಚ್ಚಹಸಿರಾಗಿದೆ. ಅದು ಬಿ. ಎ. ಸನದಿ ಅವರ ಬರೆದ “ಬಾ ಬಾರ ಕಂದ ಬಾ ಸುನಾದ ಬ್ಯಾಸರ ಬಂದೈತಿ ಆಡೋಣ ಬಾ। ಅಚಿ ಕೈ ಚಾಡ್ಯ ಇಚಿ ಕೈ ತಾ ಮುಟಿಗ್ಯಾಗೇನೈತಿ ನೋಡೋಣ ಬಾ। ಬಾವ್ಯಾಗ ನೀರ ತುಂಬೇತಿ ಪೂರಾ ಬಿಂದಿಗೆ ತಾರಾ ತರವಾಕ್ಕ ಪ್ಯಾಟಿಗೆ ಹೋಗಿ ಚುರುಮುರಿ ತಂದು | ಕುರುಕುರು ತಿನ್ನುತ ಆಡೋಣ ಬಾ” ಇದನ್ನು ನಾವು ಸುಶ್ರಾವ್ಯವಾಗಿ ಹಾಡುತ್ತಿದ್ದೆವು, ನಲಿದಾಡುತ್ತಿದ್ದೆವು.

ನಾನು ಶಿಕ್ಷಕನಾದ ಮೇಲೆ ಬೇರೆ ಕವಿಗಳ ಕವನಗಳು ಪಠ್ಯಗಳಲ್ಲಿ ವಿಜೃಂಭಿಸ ತೊಡಗಿದವು. ಶಂ.ಗು. ಬಿರಾದಾರರ “ನಾವು ಎಳೆಯರು ನಾವು ಗೆಳೆಯರು! ಹೃದಯ ಹೂವಿನ ಹಂದರ. ನಾಳೆ ನಾವೇ ನಾಡ ಹಿರಿಯರು ನಮ್ಮ ಕನಸದೋ ಸುಂದರ” ಮಕ್ಕಳ ಮನಗೆದ್ದ ಈ ಕವನ ಕರ್ನಾಟಕ ಬಾಲವಿಕಾಸ ಅಕಾಡೆಮಿಯ ಪ್ರಾರ್ಥನಾ ಗೀತೆಯಾಗಿ ಅಳವಡಿಸಲ್ಪಟ್ಟಿದೆ. ಅದರಂತೆ ಜಿ.ಪಿ. ರಾಜರತ್ನಂರ ನಾಯಿಮರಿಗೆ ನಾಯಿಮರಿ। ತಿಂಡಿ ಬೇಕೆ ಮತ್ತು ಬಣ್ಣದ ತಗಡಿನ ತುತ್ತೂರಿ ಕಾಸಿಗೆ ಕೊಂಡನು ಕಸ್ತೂರಿ, ಸಿದ್ದಯ್ಯ ಪುರಾಣಿಕದ ಕರಡಿಯ ಕುಣಿತ, ಸಿದ್ದಣ್ಣ ಮಸಳಿ ಅವರ ಪಂಜರದ ಪಕ್ಷಿ, ಚನ್ನಬಸಪ್ಪ ಹೊಸಮನಿ ಅವರ ಅನ್ನದಾತ ಮುಂತಾದ ಕವನಗಳು ವಿದ್ಯಾರ್ಥಿ ಪ್ರಿಯವಾಗಿದ್ದವು.

೯೦ರ ದಶಕದಲ್ಲಿ ಮಕ್ಕಳ ಕಾವ್ಯದಲ್ಲಿ ದಿಢೀರ್ ಬದಲಾವಣೆ ಕಾಣಿಸಿಕೊಂಡಿತು. ಶಿಶುಪ್ರಾಸಗಳ ಹವಾ ಶುರುವಾಯಿತು. ಇಂಗ್ಲಿಷ್ ಶಬ್ದಗಳು ಕವನಗಳಲ್ಲಿ ನುಸುಳಲಾರಂಭಿಸಿದವು. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಡಾ. ಲಕ್ಷ್ಮೀ ನಾರಾಯಣ ಭಟ್ಟರ ಈ ಕವನ ಭಾಳ ಒಳ್ಳೆಯವರು ನಮ್ಮ ಮಿಸ್ಸು! ಏನ್ ಕೇಳಿದರೂ ಯಸ್ ಯಸ್ಸು ನಗ್ತಾ ನಗ್ತಾ ಮಾತಾಡ್ತಾರೆ! ಸ್ಕೂಲಿಗೆಲ್ಲಾ ಫೇಮಸ್ಸು” . ಮಕ್ಕಳ ಬಾಯಲ್ಲಿ ನೀರೂರಿಸುವ ಜಂಬುನಾಥ ಕಂಚ್ಯಾಣಿ ಅವರ ಈ ಕವನ ಗಮನಿಸಿರಿ: “ಒಂದು ಎರಡು ಜಿಲೇಬಿ ಲಾಡು, ಮೂರು ನಾಲ್ಕು ಮೈಸೂರು ಪಾಕು! ಐದು ಆರು ಚಪಾತಿ

ಬೀರು! ಏಳು ಎಂಟು ಪೆಪ್ಪರಮೆಂಟು ಒಂಬತ್ತು ಹತ್ತು ಕೊಡು ಬಿಸ್ಕತ್ತು!" ಚಂದ್ರಗೌಡ ಕುಲಕರ್ಣಿ ಅವರ "ಸೊಂಯ್ ಸೊಂಯ್ ಸೊಳ್ಳೆ ಮೈತುಂಬ ಗುಳ್ಳೆ ಕೊಚ್ಚೆರಾಡಿ ಹೊಲಸು ಇದ್ದರೆ ನಿನಗೆ ಸೊಗಸು ಸೂಜಿ ಸೊಂಡಿಲೆ ಚುಚ್ಚಿ ರಕ್ತ ಹೀರತಿ ಕಚ್ಚಿ ಥಂಡಿ ಥಂಡಿ ಜ್ವರ ಹಬ್ಬಿಸುವಂಥ ಶರ" ಜಿ.ಪಿ. ರಾಜತರಂರ "ಒಂಟೆಗೆ ಬಾಲ ಒಂದು ಎತ್ತಿಗೆ ಕೋಡು ಎರಡು ಶಿವನಿಗೆ ಕಣ್ಣು ಮೂರು ಮಂಚಕೆ ಕಾಲು ನಾಲ್ಕು ನನ್ನ ಕೈ ಬೆರಳೈದು ಋತುಗಳು ಆರು ವಾರಕ್ಕೆ ದಿನಗಳು ಏಳು ದಿಕ್ಕುಗಳು ಎಂಟು ಗ್ರಹಗಳ ನೋಡು ಒಂಬತ್ತು ರಾವಣನ ತಲೆಗಳು ಹತ್ತುತ್ತ ರಾಮ ಬಾಣ ಬಿಟ್ಟ ರಾವಣ ಸತ್ತಬಿದ್ದು" ಮತ್ತು "ಮಮ್ಮಿ ಡ್ಯಾಡಿ ಬೇಡ ಕಂದ ಅಪ್ಪ ಅವ್ವ ಮಾತೇ ಚೆಂದು ಅಂಕಲ್ ಆಂಟಿ ಬೇಡ ಕಂದು ಚಿಕ್ಕಪ್ಪ ಚಿಕ್ಕಮ್ಮ ಮಾತೇ ಚೆಂದು ಹಲೋ ಹಾಯ್ ಬೇಡ ಕಂಚ ಶರಣು ವಂದನೆ ಮಾತೇ ಚೆಂದ ಟಾಟಾ ಬೈ ಬೈ ಬೇಡ ಕಂದು ಹೋಗಿ ಬಾ ಎಂಬ ಮಾತೇ ಚೆಂದ ಕನ್ನಡ ಮಾತು ಮನಕಾನಂದ ಕನ್ನಡ ನುಡಿ ಸವಿ ಮಕರಂದ" ಇಂಥ ಶಿಶು ಪ್ರಾಸಗಳು ಖಾಸಗಿ ಕನ್ನಡ ನರ್ಸರಿ ಸ್ಕೂಲ್‌ಗಳಲ್ಲಿ ಕಲಿಸತೊಡಗಿದವು., ಇವು ಮಕ್ಕಳನ್ನು ಆ ಶಾಲೆಗಳಿಗೆ ಆಕರ್ಷಿಸುವಲ್ಲಿ ಬಹು ಮುಖ್ಯ ಪಾತ್ರವಹಿಸಿದವು.

ಕಳೆದ ೨೦ ವರ್ಷಗಳಲ್ಲಿ ಶುರುವಾಯಿತು ನೋಡಿ ಹಳ್ಳಿಗಳಿಗೂ ಆಂಗ್ಲ ಮಾಧ್ಯಮ ಶಾಲೆಗಳ ಆಗಮನದ ಭರಾಟೆ. ಕನ್ನಡ ಪ್ರಾಸಗಳಿಗೆ ಬದಲಾಗಿ ಇಂಗ್ಲಿಷ್ ರೈವಲ್ಸ್‌ಗಳ ದಾಂಗುಡಿ ಶುರುವಾಯಿತು. ಜಾಕ್ ಅಂಡ್ ಜಿಲ್ ವೆಂಟ್ ಅಪ್ ಹಿಲ್, ರೈನ್ ರೈನ್ ಗೋ ಅವೇ, ಬ್ಯಾ ಬ್ಯಾ ಬ್ಲಾಕ್ ಶೀಪ್, ಟ್ವಿಂಕಲ್ ಟ್ವಿಂಕಲ್ ಲಿಟ್ಸ್ ಸ್ಟಾರ್, ಜಾನಿ ಜಾನಿ ಯಸ್ ಪಪ್ಪಾ ಮುಂತಾದ ಇಂಗ್ಲಿಷ್ ರೈಮ್ಸ್‌ಗಳು ಮನೆಮನೆಗಳ ಮಕ್ಕಳ ನಾಲಿಗೆಗಳ ಮೇಲೆ ನರ್ತಿಸತೊಡಗಿದವು. ಇವುಗಳನ್ನು ಮನೆಗೆ ಬಂದವರ ಮುಂದೆ ಮಕ್ಕಳಿಂದ ಹೇಳಿಸಿ ತಂದೆ-ತಾಯಿ ಮತ್ತು ಅಜ್ಜ ಅಜ್ಜಿ ಸಂಭ್ರಮಪಡುತ್ತಿದ್ದರು. ಮುಂದೊಮ್ಮೆ ಮಕ್ಕಳು ಹೆಚ್ಚಿನ ತರಗತಿಗಳಿಗೆ ಹೋಗತೊಡಗಿದಂತೆ ಅವರ ಸ್ಥಿತಿ ಅಗಸನ ನಾಯಿಯಂತಾಗುತ್ತದೆಂಬುದು ಪಾಲಕರಿಗೆ ಗೊತ್ತಾಗುವುದೇ ಇಲ್ಲ. ಇತ್ತ ಇಂಗ್ಲಿಷವೂ ಬಾರದೆ, ಅತ್ತ ಕನ್ನಡವೂ ಬಾರದೆ ಮಕ್ಕಳು ಒದ್ದಾಡತೊಡಗುತ್ತಾರೆ. ಯಾಕೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿನ ಈ ಇಂಗ್ಲಿಷ್ ಶಾಲೆಗಳಲ್ಲಿ ಕಲಿಸುವ ಬಹಳಷ್ಟು ಶಿಕ್ಷಕರಿಗೆ ಇಂಗ್ಲಿಷ್ ಮಾಧ್ಯಮದಲ್ಲಿ ಇತಿಹಾಸ, ಭೂಗೋಳ ಮತ್ತು ವಿಜ್ಞಾನ ವಿಷಯಗಳನ್ನು ಕಲಿಸಲೇ ಬರುವುದಿಲ್ಲ. ಈ ಶಾಲೆಗಳಲ್ಲಿ ಕನ್ನಡ ವಿಷಯ ಸಂಪೂರ್ಣ ನಿರ್ಲಕ್ಷ್ಯಕ್ಕೊಳಗಾಗಿರುತ್ತದೆ. ವಾಕ್ಯ ರಚನೆಗಳು, ಅಲ್ಪಪ್ರಾಣ, ಮಹಾಪ್ರಾಣ, ಒತ್ತಕ್ಷರಗಳ ಜ್ಞಾನವೇ ಇರುವುದಿಲ್ಲ. ಇವರು ಮುಂದೆ ಕನ್ನಡದ ಮಕ್ಕಳಾಗಿ ಉಳಿಯಬಲ್ಲರೇ ಎಂಬ ಆತಂಕ ಕನ್ನಡಾಭಿಮಾನಿ ಹಿರಿಯರಿಗೆ ಅನಿಸುತ್ತದೆ.

ಕನ್ನಡ ಭಾಷೆಯ ಉಳಿವಿಗೆ ಏನು ಮಾಡಬೇಕೆಂಬುದರ ಬಗ್ಗೆ ಗಂಭೀರ ಚಿಂತನೆ ಆಗಬೇಕಾಗಿದೆ. ಆಂಗ್ಲಮಾಧ್ಯಮ ಶಾಲೆಗಳಲ್ಲಿನ ಕನ್ನಡ ಶಿಕ್ಷಕರ ಮೇಲೆ ಬಹುದೊಡ್ಡ.

ಜವಾಬ್ದಾರಿ ಇದೆ. ಹಿರಿಯ ಪ್ರಾಥಮಿಕ ಶಾಲೆಯ ಮಕ್ಕಳಿಗೆ ದಿನಪತ್ರಿಕೆಗಳನ್ನು ಓದಲು ಶಿಕ್ಷಕರು ಪ್ರೇರೇಪಿಸಬೇಕು. ತಾವೂ ಓದಬೇಕು. ಯಾವ ಪತ್ರಿಕೆ ಓದಿದಿರಿ, ಏನೇನು ಓದಿದಿರಿ ಎಂದು ವರ್ಗ ಪ್ರಾರಂಭವಾದಾಗ ಎರಡು ಮೂರು ನಿಮಿಷ ಪ್ರಶ್ನಿಸಬೇಕು. ಓದಿದವರನ್ನು ಅಭಿನಂದಿಸಬೇಕು. ಇದು ವಿದ್ಯಾರ್ಥಿಗಳ ಹವ್ಯಾಸವಾಗಬೇಕು. ಇದೇ ಕೆಲಸವನ್ನು ತಾಯಿ ತಂದೆ ಮಾಡಬೇಕು. ಮಕ್ಕಳು ಶಾಲೆಯಿಂದ ಮನೆಗೆ ಬಂದ ಸಂದರ್ಭದಲ್ಲಿ ತಾಯಿ ವಾರಪತ್ರಿಕೆಯನ್ನೋ, ಮಾಸಿಕವನ್ನೋ ಓದುತ್ತ ಕುಳಿತುಕೊಂಡರೆ ಅದು ಮಕ್ಕಳ ಮೇಲೆ ಒಳ್ಳೆಯ ಪರಿಣಾಮ ಬೀರುತ್ತದೆ. ಹೈಸ್ಕೂಲಿನಲ್ಲಿ ಓದುವ ವಿದ್ಯಾರ್ಥಿಗಳಿಗೆ ಪತ್ರಿಕೆಗಳ ಓದು ತುಂಬ ಪ್ರಯೋಜನಕಾರಿ. ಇದರಿಂದ ಅವರ ಭಾಷೆ ಸುಧಾರಿಸುವುದು ಮತ್ತು ಅವರು ಮಹತ್ವಾಕಾಂಕ್ಷಿಗಳೂ ಆಗಬಲ್ಲರು. ವಿಶೇಷವಾಗಿ ತಾಯಂದಿರು ಟೀವಿ ಸೀರಿಯಲ್‌ಗಳನ್ನು ಬಿಟ್ಟು ಪತ್ರಿಕೆಗಳಲ್ಲಿನ ಧಾರಾವಾಹಿಗಳನ್ನು ಓದುವುದಕ್ಕೆ ಮರಳಿ ಬರಬೇಕು. ತಾಯಂದಿರೇ ನೀವು ಏನು ಮಾಡುತ್ತಿರೋ ಹಾಗೆ ನಿಮ್ಮ ಮಕ್ಕಳು ಆಗುತ್ತಾರೆ. ಕನ್ನಡ ಭಾಷೆ ಉಳಿಯುವಲ್ಲಿ ಮೇಲೆ ಹೇಳಿದ ಸಲಹೆಗಳು ತುಂಬ ಉಪಕಾರಿ ಆಗಬಲ್ಲವು ಎಂಬುದು ನನ್ನ ದೃಢವಾದ ನಂಬಿಕೆ.

## ನನ್ನ ದೇಶ - ನನ್ನ ನಾಡು

- ಸಾನಿಯಾ ಜೆ. ಧನ್ನೂರ

ನನ್ನ ದೇಶ ನನ್ನ ನಾಡು

ನನ್ನ ಶಿರ ಕಾಶ್ಮೀರ

ನನ್ನ ಪಾದ ಕನ್ಯಾಕುಮಾರಿ

ನನ್ನೆರಡು ಬಾಹುಗಳು ಹಿಮಾಲಯ ಶ್ರೇಣಿಗಳಿದ್ದಂತೆ

ನನ್ನೆರಡು ತೊಡೆಗಳು

ಪೂರ್ವ ಪಶ್ಚಿಮ ಘಟ್ಟಗಳಿದ್ದಂತೆ

ನಾನು ನುಡಿದರೆ ಭಾರತ ನುಡಿದಂತೆ

ನಾನು ಮೆರೆದರೆ ಭಾರತ ಮೆರೆದಂತೆ

ಎಂಬ ರಾಮತೀರ್ಥರವರ ನುಡಿಗಳ ಮೂಲಕ ನನ್ನ ಮಾತುಗಳನ್ನು ಮುಂದುವರೆಸುತ್ತೇನೆ.

ನನ್ನ ದೇಶ ನನ್ನ ನಾಡು ಆದರೆ ಮೊದಲು ನಾಡಾ ? ಅಥವಾ ದೇಶನಾ? ಎಂಬುದು ಅದೆಷ್ಟೋ ಜನರ ಜಿಜ್ಞಾಸೆ. ನಾವು ಇತ್ತೀಚೆಗೆ ಸಣ್ಣದಾಗಿ ಯೋಚನೆ ಮಾಡಿ ಇಂತಹ ಜಿಜ್ಞಾಸೆಗಳು ಹಬ್ಬಿರಬಹುದು. ಕುವೆಂಪುರವರು ಸ್ಪಷ್ಟವಾಗಿ ಹೇಳುತ್ತಾರೆ, ಮೊದಲು ನಾನು ಭಾರತೀಯ, ಆಮೇಲೆ ಕನ್ನಡಿಗ, ನಮ್ಮ ನಾಡಗೀತೆಯನ್ನೂ ತಾಯಿ ಭಾರತಿಯೊಂದಿಗೆ ಆರಂಭಿಸುತ್ತಾರೆ. ನೋಡಿ "ಜೈ ಭಾರತ ಜನನಿಯ ತನುಜಾತೆ" ಎಂದೇ ಆರಂಭವಾಗುತ್ತದೆ ಅಲ್ಲವೇ? ನಮ್ಮದು ತಿರುಗು ಮುರುಗು ಯೋಚನೆ ಅಲ್ಲವೇ? ಮೊದಲು ಮನೆ, ನಂತರ ಊರು ನಾಡು ದೇಶ ಅನ್ನುವುದೇ ಹೆಚ್ಚು ಸೂಕ್ತ.

ಹಾಗಾದರೆ ದೇಶ ಅಂತ ಹೊರಟರೆ ನಾಡಿನ ಗತಿಯೇನು? ಅಂದುಕೊಂಡವರೆ ಜಾಸ್ತಿ. ಅವರಿಗೊಂದು ಪ್ರಶ್ನೆ: "ದೇಶವನ್ನು ಪ್ರೀತಿಸಲು ಕಲಿಯದವರು ನೀವು ನಾಡನ್ನು ಹೇಗೆ ಪ್ರೀತಿಸುವಿರಿ? ಮನಸ್ಸಿನಲ್ಲಿ ವಿಶಾಲತೆ ಇಲ್ಲದೆ ಹೇಗೆ ಬೆಳೆಯುವಿರಿ? ಎಂದು ಕೇಳುತ್ತೇನೆ.

ಈ ದೇಶ ಹಲವು ನಾಡುಗಳಿಂದ, ಭಾಷೆಗಳಿಂದ, ಕಲೆ ಮತ್ತು ಸಂಸ್ಕೃತಿಗಳ ಸಂಗಮವಾಗಿದೆ. ಅದಕ್ಕೆಂದೇ ತಾಯಿ ಭಾರತಿ ಅಷ್ಟೊಂದು ವೈವಿಧ್ಯತೆಯಿಂದ ಮೆರೆದಿದ್ದಾರೆ.

ಉತ್ತರದಲ್ಲಿ ಹಿಮಾಲಯ ಶ್ರೇಣಿ

ದಕ್ಷಿಣದಲ್ಲಿ ಹಿಂದೂ ಮಹಾಸಾಗರ

ಪೂರ್ವದಲ್ಲಿ ಗಂಗಾ ಸಾಗರ

ಪಶ್ಚಿಮದಲ್ಲಿ ಸಿಂಧೂ ಸಾಗರ



ಇವುಗಳ ನಡುವೆ ಇರುವ ಜಂಬೂದ್ವೀಪವೇ ನಮ್ಮ ಭಾರತ, ಭರತಖಂಡ, ಹಿಂದೂಸ್ತಾನ ಹಾಗೂ ಆಧುನಿಕವಾಗಿ ಇಂಡಿಯಾ ಎಂಬ ಪ್ರಪಂಚದ ನಾಲ್ಕನೇ ಅತಿ ದೊಡ್ಡ ಆರ್ಥಿಕ ವ್ಯವಸ್ಥೆಯನ್ನು ಹೊಂದಿದೆ. ನನ್ನ ಭಾರತ ಪ್ರಾಚೀನ ಸಿಂಧೂ ತಟದ ನಾಗರಿಕತೆಯ ತವರುಮನೆಯಾಗಿದೆ.ಅನೇಕ ಐತಿಹಾಸಿಕ ವಾಣಿಜ್ಯ ಮಾರ್ಗಗಳು ಸಂಧಿಸಿವೆ. ಪ್ರಾಚೀನ ಸಾಮ್ರಾಜ್ಯಗಳು ಭಾರತ ದೇಶದಲ್ಲೇ ನೆಲೆನಿಂತಿವೆ.

ಪ್ರಪಂಚದ ಪ್ರಮುಖ ಧರ್ಮಗಳಾದ ಹಿಂದೂ, ಬೌದ್ಧ, ಜೈನ, ಕ್ರೈಸ್ತ, ಇಸ್ಲಾಂ ಏಳು ಸಹಸ್ರಮಾನಗಳಲ್ಲಿ ಆಗಮಿಸಿ ಈ ಪ್ರದೇಶದ ಸಂಸ್ಕೃತಿಯನ್ನು ವೈವಿಧ್ಯಮಯಗೊಳಿಸಿವೆ.

ಹಿಂದಿನ ಕಾಲದಿಂದಲೇ ಆಚಾರ ಬೋಧಿಸಿದ ವಿಶ್ವಗುರುವಾಗಿ ಉಚ್ಚ ಸಂಸ್ಕೃತಿ, ಕಲೆ, ಧರ್ಮದ ನಾಡಾಗಿ ಅಪಾರ ಸಂಪತ್ತಿನ ಬೀಡಾಗಿತ್ತು.ವಿದೇಶಿ ಆಕ್ರಮಣಕಾರರ ದಾಳಿಯಿಂದಾಗಿ ತನ್ನತನವನ್ನು ಬಿಟ್ಟುಕೊಡದೆ ಕಾಪಾಡಿಕೊಂಡು ಬಂದಿದೆ. ಇನ್ನು ಸ್ವಾಂತಂತ್ರ್ಯದ ನಂತರದಲ್ಲಿ ಬಂದರೆ ವಿವಿಧತೆಯಲ್ಲಿ ಏಕತೆಯನ್ನು ವಿಶ್ವದ ಪ್ರಜಾತಂತ್ರ ರಾಷ್ಟ್ರವಾಗಿ ಈ ದಿನ ೧೩೦ ಕೋಟಿ ಜನಸಂಖ್ಯೆಯನ್ನು ಹೊಂದಿದೆ. ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಸಾಲಿಗೆ ಸೇರುತ್ತಿದೆ.

ಸಾವಿರಾರು ವೇದನೆಗಳು, ಸಾವು-ನೋವುಗಳು, ದು:ಖ-ದುಮ್ಮಾನಗಳು ಎದೆಯೊಳಗೆ ತುಂಬಿಕೊಂಡು ಮತ್ತೆ ಭಾರತ ಜಗದ್ಗುರುವಿನ ಸ್ಥಾನ ಸೇರುತ್ತಿದೆ. ಆದರೆ ಭಾರತ ಎಂದು ಪ್ರೋಟಾನ್ ಅಣುಸ್ಫೋಟಗೊಳಿಸಿತೋ ಅಂದು ವಿಶ್ವದ ಎಲ್ಲಾ ರಾಷ್ಟ್ರಗಳು ಹುಬ್ಬೇರಿಸುವಂತೆ ಮಾಡಿದ ವಿಜ್ಞಾನಿ ಬೇರೆ ಯಾರೂ ಅಲ್ಲ, ಅವರೇ ನಮ್ಮ ನೆಚ್ಚಿನ ಮಾಜಿ ರಾಷ್ಟ್ರಪತಿ ಎ.ಪಿ.ಜೆ.ಅಬ್ದುಲ್ ಕಲಾಮ್. ವಿಶ್ವದ ಹದ್ದಿನ ಕಣ್ಣು ತಪ್ಪಿಸುವ ಕೆಲಸ ಅಂದು ಯಶಸ್ವಿಯಾಗಿ

ನೆರವೇರಿತು. ಅದರರ್ಥ ಭಾರತ ಬಾಹ್ಯಾಕಾಶದಲ್ಲಿ ಮಾಡಿದ ಸಾಧನೆ. ಇದೀಗ ಭಾರತ ಬಾಹ್ಯಾಕಾಶದಲ್ಲಿ ಮತ್ತೊಂದು ಮೈಲುಗಲ್ಲು ಸ್ಥಾಪಸಿದೆ. ಅದೇ ಅತೀ ಕಡಿಮೆ ಖರ್ಚಿನ ಮಂಗಳನ ಅಂಗಳಕ್ಕೆ ಭಾರಿ ಕುತೂಹಲ ಕೆರಳಿಸಿದ ಅನ್ವೇಷಣೆಗೆ ಉಪಗ್ರಹದ ರವಾನೆ. ಜಗತ್ತಿನ ನಾಲ್ಕನೇ ರಾಷ್ಟ್ರವಾಗಿ ಭಾರತದ ಈ ಸಾಧನೆ ಅರ್ಥಪೂರ್ಣ. ಏಕೆಂದರೆ, ಇದು ಮೊದಲ ಯತ್ನದಲ್ಲೇ ಪಡೆದ ಯಶಸ್ಸು. ಶತ್ರು ರಾಷ್ಟ್ರಗಳ ಕಿರುಕುಳ ಅನಕ್ಷರತೆ ಬಡತನ ಕೋಮುವಾದ ಗಲಾಟೆ ಇತ್ಯಾದಿ ಸಮಸ್ಯೆಗಳ ನಡುವೆಯೂ ಬುದ್ಧ, ಬಸವ, ಗಾಂಧಿ ಹಾಕಿ ಕೊಟ್ಟ ಶಾಂತಿಮಂತ್ರದಿಂದ ಸಾಗುತ್ತಾ ವಿಜ್ಞಾನ ಮತ್ತು ತಂತ್ರಜ್ಞಾನಗಳ ಕ್ಷೇತ್ರದಲ್ಲಿ ಇಡೀ ವಿಶ್ವದಲ್ಲಿ ಐದನೇ ಸ್ಥಾನ ಪಡೆದಿದೆ. ಕೃಷಿ ಕೈಗಾರಿಕೆ ಕ್ರೀಡೆ ಮುಂತಾದವುಗಳಲ್ಲಿ ವಿಕ್ರಮಗಳನ್ನು ಸಾಧಿಸಿ ಇಡೀ ವಿಶ್ವ ನಮ್ಮ ಕಡೆ ನೋಡುವಂತೆ ಮಾಡಿದೆ.

ನಮ್ಮ ದೇಶದ ಬಗ್ಗೆ ತಿಳಿಯದವರು ಹಿಂದುಳಿದ ದೇಶ ಅಂತಾರೆ. ಆದರೆ ಗೊತ್ತಿರಲಿ ಜಗತ್ತಿನಲ್ಲಿ ಅತಿ ಶ್ರೇಷ್ಠವಾದ ರಾಷ್ಟ್ರ ಅಂತ ಯಾವುದಾದರೂ ಇದ್ದರೆ, ಅದು ಒಂದೇ ರಾಷ್ಟ್ರ, ಅದೇ ಭಾರತ.



ಜಗತ್ತಿನಲ್ಲಿ ಸೂಪರ್ ಕಂಪ್ಯೂಟ ತಯಾರಿಸುವ ೧೦ ರಾಷ್ಟ್ರಗಳಲ್ಲಿ ಒಂದು ರಾಷ್ಟ್ರ ನನ್ನದು

ಕ್ರಿಯೋಜೆಕ್ ಇಂಜಿನ್ ಡಿಜೈನ್ ಮಾಡುವ ರಾಷ್ಟ್ರಗಳಲ್ಲಿ ಒಂದು ರಾಷ್ಟ್ರ ನನ್ನದು

ಜಗತ್ತಿನಲ್ಲಿ ಅತೀ ಹೆಚ್ಚು ಬಟ್ಟೆ ತಯಾರಿಸುವ ಎರಡನೇ ರಾಷ್ಟ್ರ ನನ್ನದು

ಅತೀ ಹೆಚ್ಚು ಧಾನ್ಯಗಳನ್ನು ಉತ್ಪಾದಿಸುವ ರಾಷ್ಟ್ರಗಳಲ್ಲಿ ಒಂದು ರಾಷ್ಟ್ರ ನನ್ನದು

ಅತ್ಯಂತ ಹೆಚ್ಚು ಹಾಲು ಉತ್ಪಾದಿಸುವ ರಾಷ್ಟ್ರಗಳಲ್ಲಿ ಒಂದು ರಾಷ್ಟ್ರ ನನ್ನದು

ಅತೀ ಹೆಚ್ಚು ಇಂಜಿನಿಯರ್‌ಗಳನ್ನು ಉತ್ಪಾದಿಸುವ ರಾಷ್ಟ್ರ ನನ್ನದು

ಅತೀ ಹೆಚ್ಚು ಡಾಕ್ಟರ್‌ಗಳನ್ನು ಉತ್ಪಾದಿಸುವ ರಾಷ್ಟ್ರ ನನ್ನದು

ಜಗತ್ತಿನಲ್ಲಿ ಅತೀ ಹೆಚ್ಚು ನೌಕರರನ್ನು ಹೊಂದಿರುವ ಸಂಸ್ಥೆ ಇಂಡಿಯನ್ ರೇಲ್ವೆ, ಅದು ಭಾರತದ್ದೆ.

ನಮ್ಮ ಭಾರತ ದೇಶ ಬೇರೆ ದೇಶಕ್ಕೆ ಗುಲಗಂಜಿಯಷ್ಟು ಕಡಿಮೆ ಇಲ್ಲ.

ಪಂಡಿತ ಬಂಕಿಮಚಂದ್ರ ಚಟರ್ಜಿ ಅವರ ವಂದೇ ಮಾತರಂ ಗೀತೆ ಕೇಳಿದಾಗ ಪ್ರತಿಯೊಬ್ಬರ ನರನಾಡಿಗಳಲ್ಲಿ ದೇಶಪ್ರೇಮ ಉಕ್ಕಿಬರುತ್ತದೆ.

ಗಂಗ, ಕದಂಬ, ಚೋಳ, ಚಾಲುಕ್ಯ, ರಾಷ್ಟ್ರಕೂಟ, ಹಕ್ಕ-ಬುಕ್ಕ, ವಿದ್ಯಾರಣ್ಯ, ಕೃಷ್ಣದೇವರಾಯ, ಗಂಡುಗಲಿ ರಾಮ, ಕೆಂಪೇಗೌಡ, ಒಡೆಯರ್, ಹೈದರಾಲಿ, ಟಿಪ್ಪು, ಪುಲಕೇಶಿ, ನೃಪತುಂಗ, ಚಾವುಂಡರಾಯ, ಚೆನ್ನಮ್ಮ, ರಾಯಣ್ಣ, ಅತ್ತಿಮಬ್ಬೆ, ಚಂದ್ರಗುಪ್ತ, ಶಾತವಾಹನ, ವೆಂಕಟಪ್ಪ ನಾಯಕ, ಎಚ್ಚಮ, ಬೆಳವಡಿ ಮಲ್ಲಮ್ಮ, ಚಿಕ್ಕದೇವರಾಯ. ಹೊಯ್ಸಳ, ಓಬವ್ವ, ಬಸವ, ಅಲ್ಲಮ, ಅಕ್ಕ...ಶರಣರ, ಪುರಂದರ, ಕನಕದಾಸರ, ವಿಶ್ವೇಶ್ವರಯ್ಯ, ಪಂಪ, ಜನ್ನ, ರನ್ನ, ಹರಿಹರ, ರಾಘವಾಂಕ, ಮತ್ತನೇಕ ಮಹನೀಯರ ಮತ್ತು ಜ್ಞಾನಪೀಠ ಪುರಸ್ಕೃತರಾದ ಕುವೆಂಪು, ಬೇಂದ್ರೆ, ಕಾರಂತ ಮಾಸ್ತಿ, ಗೋಕಾಕ, ಅನಂತಮೂರ್ತಿ, ಕಾರ್ನಾಡ, ಕಂಬಾರ ಮತ್ತದೆಷ್ಟೋ ಮಹನೀಯರ, ಜನಪದರ, ಜನಸಾಮಾನ್ಯರ, ಹೆಮ್ಮೆಯ ನಾಡು ನುಡಿ ಕನ್ನಡ ಕನ್ನಡ..

ಸದ್ಯಕ್ಕೆ ಎಂಟು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದುಕೊಂಡಿರುವ ನಮ್ಮ ಕನ್ನಡ ಸಾಹಿತ್ಯ ಲೋಕ ಸಮೃದ್ಧವಾಗಿದೆ.ಅದನ್ನು ಇನ್ನಷ್ಟು ಸಮೃದ್ಧಿಗೊಳಿಸುವುದರ ಜೊತೆಗೆ ತಾಯುಡಿಯಾದ ಕನ್ನಡವನ್ನು ಕಾಪಾಡಿಕೊಳ್ಳುವ ಜವಾಬ್ದಾರಿ ಕನ್ನಡಿಗರ ಮೇಲಿದೆ. ನಮ್ಮ ನಾಡಿನ ಜನಪದ, ಸಾಂಸ್ಕೃತಿಕ ಜೀವನದ ಉಸಿರಾಗಿರುವ ಕನ್ನಡದ ಜ್ಞಾನಶಾಖೆ ಪಸರಿಸಬೇಕಾದರೆ ಕನ್ನಡದಲ್ಲೇ ಜ್ಞಾನಾರ್ಜನೆಯಾಗಬೇಕು. ಈ ನಡುವೆ ಕಲಿಕೆಗೆ ಇಂಗ್ಲಿಷ್ ಮಾಧ್ಯಮ ಬೇಕೋ ಬೇಡವೋ? ಕನ್ನಡ ಮಾತ್ರ ಸಾಕೇ? ಎಂಬ ವಿಚಾರದಲ್ಲಿ ಈಗಾಗಲೇ ಸಾಕಷ್ಟು ಚರ್ಚೆಗಳು ನಡೆದಿವೆ. ಈ ಬಗ್ಗೆ ಒಬ್ಬೊಬ್ಬರದ್ದು ಒಂದೊಂದು ನಿಲುವು ಇದ್ದೇ ಇರುವುದು. ಯಾವುದೇ ಭಾಷೆಯಾಗಲಿ ಅದಕ್ಕೆ ಅದರದ್ದೇ ಆದ ಸೌಂದರ್ಯವಿದೆ, ಸತ್ಯವಿದೆ. ಅದನ್ನು ಕಾಪಾಡುವ ಹೊಣೆ ನಮ್ಮದಾಗಿದೆ.

ಒಟ್ಟಿನಲ್ಲಿ ಹೇಳುವುದೇನೆಂದರೆ, ಜ್ಞಾನ ಸಂಪಾದನೆಗೆ ಯಾವ ಭಾಷೆಯಾದ ರೇನಂತೆ, ನಮ್ಮ ನಡೆ ನುಡಿ ಕನ್ನಡವಾಗಿರಲಿ. ನಮ್ಮ ನಾಡು, ನಮ್ಮ ಸಂಸ್ಕೃತಿ ಹಾಗೂ ನಮ್ಮ ಭಾಷೆಯ ಮೇಲಿರುವ ಈ ಪ್ರೀತಿ ಜೀವನದ ಉಸಿರಿರುವವರೆಗೂ ಇರಲಿ.

ಕನ್ನಡ ಎನೆ ಕುಣಿದಾಡುವುದೆನ್ನೆದೆ ಕನ್ನಡ ಎನೆ ಕಿವಿ ನಿಮಿರುವುದು

ಕಾಮನಬಿಲ್ಲನು ಕಾಣುವ ಕವಿಯೊಲು ತೆಕ್ಕನೆ ಮೈ ಮನ ಮರೆಯುವುದು

ರಾಷ್ಟ್ರಕವಿ ಕುವೆಂಪು ಅವರು ರಚಿಸಿದ ಈ ಕವಿತೆ ಓದಿದಾಗಲೊಮ್ಮೆ ಮೈನವಿರೇಳುತ್ತದೆ ಎಂದರೆ ಅದರಲ್ಲಿ ಅತಿಶಯೋಕ್ತಿ ಏನಿಲ್ಲ. ಕನ್ನಡ ನಾಡು ನುಡಿ ಜಲ ನೆಲದ ವಿಷಯದಲ್ಲಿ ಕನ್ನಡಿಗರು ನಿಜಕ್ಕೂ ಹೆಮ್ಮೆಪಡುವಂಥಾ ನಾಡು, ಕಬ್ಬಿಗರುದಿಸಿದ ಮಂಗಳಧಾಮ, ಕವಿ ಕೋಗಿಲೆಗಳ ಪುಣ್ಯಾರಾಮ ಎಂದು ಕವಿ ಕುವೆಂಪು ಅವರೇ ಇನ್ನೊಂದೆಡೆ ಹಾಡಿ ಹೊಗಳಿದ್ದಾರೆ.

"ಎಲ್ಲಾದರೂ ಇರು ಎಂತಾದರೂ ಇರು ಎಂದೆಂದಿಗೂ ನೀ ಕನ್ನಡವಾಗಿರು, ಕನ್ನಡವೇ ಸತ್ಯ ಕನ್ನಡವೇ ನಿತ್ಯ" ಎಂದು ಜನಮನ ಸುರೆಗೊಂಡ ಕವಿತೆಯನ್ನು ರಚಿಸಿ ಆ ಮೂಲಕ ಕನ್ನಡಿಗರ ಆಂತರ್ಯದಲ್ಲಿನ ಭಾಷಾ ಪ್ರೇಮವನ್ನು ಉದ್ದೀಪನಗೊಳಿಸುವ ಕೆಲಸವನ್ನೂ ಕವಿ ಕುವೆಂಪು ಮಾಡಿದ್ದಾರೆ.ಸರ್ವಜನಾಂಗದ ಶಾಂತಿಯ ತೋಟದ ಕರ್ನಾಟಕ ಇಂದು ಒಂದಾದ ನೆಲದಲ್ಲಿ ಕಂಗೊಳಿಸುತ್ತಿದೆ ಎಂದರೆ ಅದಕ್ಕೆ ಹರಿದು ಹಂಚಿಹೋಗಿದ್ದ ರಾಜ್ಯವನ್ನು ಏಕೀಕರಣಗೊಳಿಸಿದ ಕನ್ನಡದ ದಿಗ್ಗಜರಿಗೆ ಆ ಶ್ರೇಯಸ್ಸು ಸಲ್ಲುತ್ತದೆ.

ರಾಯಚೂರಿನಿಂದ ಮೈಸೂರಿನವರೆಗೆ

ಕೋಲಾರದಿಂದ ಕಾರವಾರದವರೆಗೂ

ಹಬ್ಬಿರುವ ನಮ್ಮ ಸುಂದರ ನಾಡಿನ ರಾಜಧಾನಿ

ಬೆಂಗಳೂರು ನಗರ

ಅತ್ತ ರಾಜಾಜಿನಗರ ಇತ್ತ ಶಿವಾಜಿನಗರ

ಅಂದ್ರೆ ಇತ್ತ ಎಕ್ಕಡ ಅತ್ತ ಎನ್ನಡ

ಮಧ್ಯೆ ಕನ್ನಡ

ಅದ್ಯಾಕೆ ಹಂಗೆ ಸುಮ್ಮನೆ ನಿಂತಿದೆ ಕೆಂಪೇಗೌಡ

ಕೆಳಗಿಳಿದು ಕೊರೆದುಬಿಡು ಎಲ್ಲರ

ಎದೆಯ ಮೇಲೂ ಕನ್ನಡ ಕನ್ನಡ ಕನ್ನಡ

ಎಂದು ಕನ್ನಡ ನಾಡಿನ ಅಭಿಮಾನವನ್ನು ಅಸಾದುಲ್ಲಾ ಬೇಗ್ ಅವರು ತಮ್ಮ ಶಾಯಿರಿಯಲ್ಲಿ ವ್ಯಕ್ತಪಡಿಸಿದ್ದಾರೆ.

ನರಕಕ್ಕೆ ಇಳಿಸಿ

ನಾಲಗೆ ಸೀಳಿಸಿ

ಬಾಯಿ ಒಲಿಸಿ ಹಾಕಿದ್ರುನೇ

ಮೂಗನಲ್ ಕನ್ನಡ ಪದವಾಡ್ತೀನಿ

ನನ್ ಮನಸನ್ ನೀ ಕಾಣೆ

೮೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಮೈಸೂರು / ೩೮೩

ಎಂದು ಜಿ.ಪಿ.ರಾಜರತ್ನಂ ಅವರು ತಮ್ಮ ಕನ್ನಡ ಭಾಷಾಭಿಮಾನವನ್ನು ಹಾಡಿನಲ್ಲಿ ತಿಳಿಸಿದ್ದಾರೆ.

ನಮ್ಮ ಮನೆಯಲ್ಲಿರುವ ಮಕ್ಕಳಿಗೆ ನಾವು ಮೊದಲು ಮೂಲಾಕ್ಷರಗಳನ್ನು ಹೇಳಿಕೊಡುತ್ತೇವೆ. ಉದಾಹರಣೆ ಎಂದರೆ, ನಾವು ಮನೆಯಲ್ಲಿ ಮಕ್ಕಳಿಗೆ ಎ ಫಾರ್ ಆಪಲ್,ಬಿ ಫಾರ್ ಬಾಲ್,ಸಿ ಫಾರ್ ಕ್ಯಾಟ್ ಅಂತ ಹೇಳಿಕೊಡತಾ ಇದ್ದರು. ಆದರೆ ಅದು ಈ ದಿನಮಾನಕ್ಕೆ ಏ ಫಾರ್ ಆಂಡ್ರಾಯಿಡ್ ಫಾರ್ ಬ್ಲೂಟೂತ್,ಸಿ ಫಾರ್ ಚಾಟಿಂಗ್,ಡಿ ಫಾರ್ ಡಿಲೀಟ್ ಈ ಫಾರ್ ಈಮೇಲ್, ಎಫ್ ಫಾರ್ ಫೇಸ್ ಬುಕ್ ಅಂತ ಬದಲಾಗಿದೆ.

ನಿಜವಾಗಿಯೂ ನಮ್ಮೆಲ್ಲರಲ್ಲಿ ದೇಶಪ್ರೇಮ ಮೂಡಬೇಕಿದ್ದರೆ ಏ ಫಾರ್ ಅಬ್ಬಕ್ಕಬಿ ಫಾರ್ ಭಗತ್‌ಸಿಂಗ್.ಸಿ ಫಾರ್ ಚಂದ್ರಶೇಖರ್ ಆಜಾದ್,ಡಿ ಫಾರುಕ್ ದಾದಾಬಾಯಿ ನವರೋಜಿ, ಎಫ್ ಫಾರ್ ಫಾರುಕ್ ಉದ್ದೀನ ಅಲಿ ಅಹಮದ್ ಜಿ ಫಾರ್ ಗಫಾರ್‌ಖಾನ್ ಎಚ್ ಫಾರ್ ಹೈದರಾಲಿ, ಅರ್ ಫಾರ್ ಇಂದಿರಾಗಾಂಧಿ,ಜೆ ಫಾರ್ ಜವಹರಲಾಲ ನೆಹರು, ಕೆ ಫಾರ್ ಕಿತ್ತೂರ ಚೆನ್ನಮ್ಮಎಲ್ ಫಾರ್ ಲಾಲಾ ಲಜಪತರಾಯ್, ಎಮ್ ಫಾರ್ ಮಹಾತ್ಮ ಗಾಂಧೀಜಿ,ಎನ್ ಫಾರ್ ನಾನಾಸಾಹೇಬ್ ಪೇಶ್ವ, ಓ ಫಾರ್ ಓಬ್ಬವ್ವ ಪಿ ಫಾರ್ ಪೇಳ್ವೆ ಬಜಿರೊ,ಎಸ್ ಫಾರ್ ಸರದಾರ ವಲ್ಲಭಭಾಯಿ ಪಟೇಲ, ಟಿ ಫಾರ್ ತಾತ್ಯಾಟೋಪಿಯು ಫಾರ್ ಉದಾಮಸಿಂಗ್, ವಿ ಫಾರ್ ವೀರಸಾವರಕರ್, ಡಬ್ಲ್ಯು ಫಾರ್ ಡಬ್ಲ್ಯು, ಸಿ ಬ್ಯಾನರ್ಜಿ,ವಾಯ್ ಫಾರ್ ಯೋಗೇಂದ್ರ ಶುಕ್ಲ, ಜಡ್ ಫಾರ್ ಜಾಕೀರ ಹುಸೇನ. ಆಗ ಮಾತ್ರ ನಮ್ಮೆಲ್ಲರಲ್ಲಿ ದೇಶಪ್ರೇಮ ಮೂಡಲು ಸಾಧ್ಯ.

ದೇಶಪ್ರೇಮ ಮತ್ತು ನಾಡಪ್ರೇಮ ನಮ್ಮ ಜೀವನದ ಉಸಿರಾಗಬೇಕಾದರೆ ನಾವೆಲ್ಲಾ ಟೊಂಕ ಕಟ್ಟಿ ನಿಲ್ಲಬೇಕಾಗಿದೆ. ನಾವು ಕಲಿಯೋ ಭಾಷೆ ಬೇರೆಯಾದರೂ ನಮ್ಮ ಉಸಿರು ಕನ್ನಡವಾಗಬೇಕಿದೆ. ನಮ್ಮ ಜೀವನದ ಕೊನೆ ಉಸಿರು ಇರುವವರೆಗೂ ನಮ್ಮ ಉಸಿರು ಕನ್ನಡವಾಗಿರಲಿ.

೩೮೪ / ನುಡಿಗಂಧ

# ನನ್ನ ನಾಳೆ - ನನ್ನ ಕನಸು

**- ಅಂತಃಕರಣ**

'ಬೆಳಕಿಲ್ಲದ ದಾರಿಯಲ್ಲಿ ನಡೆಯಬಹುದು, ಕನಸಿಲ್ಲದ ದಾರಿಯಲ್ಲಿ ನಡೆಯಲಾಗದು' ಎಂಬ ಮಾತನ್ನು ಎಲ್ಲೋ ಓದಿದ್ದೆ. ಇಲ್ಲಿ 'ನನ್ನ ಕನಸು' ಎನ್ನುವುದನ್ನು ನಾನು ಎರಡು ರೀತಿಯಲ್ಲಿ ನೋಡಲು ಬಯಸುತ್ತೇನೆ. ಒಂದು ನಾನು ಮುಂದೆ ಏನಾಗಬೇಕು ಎಂಬ ನನ್ನ ಕನಸು. ಎರಡನೆಯದು ನಮ್ಮ ಸಮಾಜ ಮತ್ತು ದೇಶದ ಕುರಿತ ನನ್ನ ಕನಸು. ಹೀಗಾಗಿ ನಾನು ಇಲ್ಲಿ ಈ ಎರಡು ರೀತಿಯ ಬಗ್ಗೆಯೂ ಮಾತನಾಡಲಿಚ್ಛಿಸುತ್ತೇನೆ.

ನನಗೆ ಸಣ್ಣವನಿಂದಲೂ ಬಹಳ ಕನಸುಗಳಿದ್ದವು. ಟ್ರಕ್ಕು ಬಸ್ಸುಗಳನ್ನು ನೋಡಿದಾಗ ದೊಡ್ಡ ದೊಡ್ಡ ಲಾರಿ ಮತ್ತು ಟ್ರಕ್ಕುಗಳ ಡ್ರೈವರ್ ಆಗಬೇಕು ಎಂದು ಕನಸು ಕಾಣುತ್ತಿದ್ದೆ. ಚಲನಚಿತ್ರಗಳನ್ನು ನೋಡಿದಾಗ ಅಮೀರ್ ಖಾನನಂತೆ, ಪುನೀತ್ ರಾಜಕುಮಾರನಂತೆ ಹೀರೋ ಆಗಬೇಕೆಂದು ಅನ್ನಿಸುತ್ತಿತ್ತು. ಕ್ರಿಕೆಟ್ ನೋಡಿದಾಗ ಧೋನಿಯಂತೆ ಕ್ರಿಕೆಟರ್ ಆಗಬೇಕು ಅನ್ನಿಸುತ್ತಿತ್ತು. ಈಗ ನನಗೆ ಮುಂದೆ ಕ್ರೀಡಾ ವೀಡಿಯೋ ಅನಾಲಿಸ್ಟ್ ಅಥವಾ ಕ್ರೀಡಾ ಬರಹಗಾರ ಆಗಬೇಕೆಂಬ ಕನಸಿದೆ. ಮುಂದೆ ನನ್ನ ಈ ಕನಸು ಬದಲಾಗಲೂಬಹುದು!

ಇನ್ನು ನನಗೆ ನಾಳೆ ಜಗತ್ತು ಹೇಗಾಗಬೇಕು ಅಥವಾ ನಮ್ಮ ದೇಶ ಹೇಗಾಗಬೇಕು ಎಂಬುದರ ಬಗ್ಗೆ ಬಹಳ ಕನಸುಗಳಿವೆ, ಅವುಗಳನ್ನು ನಾನು ಇಲ್ಲಿ ನಿಮ್ಮೊಂದಿಗೆ ಹಂಚಿಕೊಳ್ಳಲು ಇಚ್ಛಿಸುತ್ತೇನೆ. ನನ್ನ ಕನಸುಗಳು ಶಿಕ್ಷಣ, ಕ್ರೀಡೆ, ಪರಿಸರ, ಸಮಾಜ ಮತ್ತು ಸಾಹಿತ್ಯ ಎಂಬ ಐದು ಕ್ಷೇತ್ರಗಳಿಗೆ ಸಂಬಂಧಿಸಿದ್ದಾಗಿದ್ದು ಅವುಗಳನ್ನು ನಿಮ್ಮ ಮುಂದೆ ಬಿಚ್ಚಿಡುತ್ತೇನೆ.

**ಸಮಾನ ಶಿಕ್ಷಣದ ಕನಸು**

ಈಗ ನಮ್ಮ ದೇಶದಲ್ಲಿ ಮಕ್ಕಳಿಗೆ ಆಗುತ್ತಿರುವ ದೊಡ್ಡ ಮಟ್ಟದ ಅನ್ಯಾಯಗಳಲ್ಲಿ ಒಂದು ಎಂದರೆ ಎಲ್ಲಾ ಮಕ್ಕಳಿಗೂ ಸಹ ಸಮಾನ, ಒಳ್ಳೆಯ ಗುಣಮಟ್ಟದ ಶಿಕ್ಷಣ ಸಿಗದೇ ಇರುವುದು. ವಿಶ್ವದ ಬಹುತೇಕ ರಾಷ್ಟ್ರಗಳಲ್ಲಿ ಖಾಸಗಿ ಶಾಲೆಗಳೇ ಇರುವುದಿಲ್ಲ, ಬರೀ ಸರ್ಕಾರಿ ಶಾಲೆಗಳಿರುತ್ತವೆ. ಆ ಸರ್ಕಾರಿ ಶಾಲೆಗಳು, ನಮ್ಮಲ್ಲಿನ ದುಬಾರಿ ಖಾಸಗಿ ಶಾಲೆಗಳಿಗಿಂತ ಬಹಳ ಗುಣಮಟ್ಟದಾಗಿರುತ್ತವೆ ಮತ್ತು ಎಲ್ಲಾ ಮಕ್ಕಳಿಗೂ ಅಲ್ಲಿ ಒಂದೇ ರೀತಿಯ ಶಿಕ್ಷಣ ಸಿಗುತ್ತದೆ. ಅಲ್ಲಿ ಬಡವರು, ಶ್ರೀಮಂತರ ಮಕ್ಕಳಿಗೆ ಭೇದವಿಲ್ಲದಂತೆ ಶಿಕ್ಷಣ ನೀಡಲಾಗುತ್ತದೆ. ನಮ್ಮ ದೇಶದಲ್ಲೂ ಎಲ್ಲರಿಗೂ ಸಮಾನ



ಶಿಕ್ಷಣ ಸಿಗಬೇಕೆಂಬುದು ನನ್ನ ಆಸೆ. ಸರಕಾರ ಮನಸ್ಸು ಮಾಡಿದರೆ ಸರ್ಕಾರಿ ಶಾಲೆಗಳಲ್ಲಿ ಖಾಸಗಿ ಶಾಲೆಗಳಿಗಿಂತ ಗುಣಮಟ್ಟದ ಶಿಕ್ಷಣ ನೀಡಬಹುದು. ಸರಕಾರ ಅದಕ್ಕೆ ಮನಸ್ಸು ಮಾಡಬೇಕಷ್ಟೇ. ಇದನ್ನು ಬಂಡವಾಳ ಮಾಡಿಕೊಂಡು ಖಾಸಗಿ ಶಾಲೆಗಳು ಶುಲ್ಕವನ್ನು ಜಾಸ್ತಿ ಮಾಡುತ್ತಾ ಪೋಷಕರ ಮೇಲೆ ಒತ್ತಡ ಹಾಕುತ್ತವೆ. ಪೋಷಕರೂ ಸಹ ನಮ್ಮ ಮಕ್ಕಳು ಚೆನ್ನಾಗಿ ಓದಿ, ಒಳ್ಳೆಯ ಶಿಕ್ಷಣ ಪಡೆಯಬೇಕೆಂಬ ಆಸೆಯಿಂದ ಖಾಸಗಿ ಶಾಲೆಗಳಿಗೇ ಸೇರಿಸುತ್ತಾರೆ. ಆದರೆ ಆರ್ಥಿಕವಾಗಿ ತೀರಾ ದುರ್ಬಲರಾಗಿರುವವರು ವಿಧಿಯಿಲ್ಲದೆ ಮಕ್ಕಳನ್ನು ಸರಕಾರಿ ಶಾಲೆಗೆ ಸೇರಿಸು ವಂತಾಗಿದೆ. ಆದ್ದರಿಂದ ಎಲ್ಲ ಮಕ್ಕಳಿಗೂ ಒಂದೇ ರೀತಿಯ ಶಾಲೆಗಳಲ್ಲಿ, ಒಂದೇ ಗುಣಮಟ್ಟದ ಶಿಕ್ಷಣ ದೊರಕಬೇಕು ಎನ್ನುವುದು ನನ್ನ ಕನಸು.

**ಪೋಷಕರ ಒತ್ತಡವಿಲ್ಲದ ಮಕ್ಕಳ ಸಮಾಜದ ಕನಸು**

ಭಾರತದಲ್ಲಷ್ಟೇ ಅಲ್ಲ, ವಿಶ್ವದ ಹಲವೆಡೆ ನಾವು ಕಾಣಬಹುದಾದ ವಿಷಯ ವೆಂದರೆ ಮಕ್ಕಳಿಗೆ ಅವರ ಆಸಕ್ತಿಯ ಕ್ಷೇತ್ರದಲ್ಲಿ ಮುಂದುವರೆಯಲು ಅದಕ್ಕೆ ತಕ್ಕ ಬೇಕಾದ ಪ್ರೋತ್ಸಾಹ ಸಿಗದೇ ಇರುವುದು. ಇದಕ್ಕೆ ಮುಖ್ಯ ಕಾರಣ ಬಹುತೇಕ ಪೋಷಕರು ತಮ್ಮ ಆಸೆಯನ್ನು ಮಕ್ಕಳ ಮೇಲೆ ಹೇರುವುದು. ಉದಾಹರಣೆಗೆ, ಒಬ್ಬ ಹುಡುಗನಿಗೆ ರೈತನಾಗಬೇಕೆಂಬ ಆಸೆ ಇರುತ್ತದೆ. ಆದರೆ ಅವನ ಅಪ್ಪ ಅಮ್ಮನಿಗೆ ಅವನು ಎಂಜಿನಿಯರ್ ಆಗಬೇಕೆಂಬ ಆಸೆ ಇರುತ್ತದೆ. ಅದಕ್ಕಾಗಿ ಅವರು ಅವನನ್ನು ಕೃಷಿಯಲ್ಲಿ ಮುಂದುವರೆಯಲು ಬಿಡದೆ ಎಂಜಿನಿಯರ್ ಆಗೆಂಬ ಒತ್ತಡವನ್ನು ಅವನ ಮೇಲೆ ಹೇರುತ್ತಾರೆ. ಇಂತಹ ಸನ್ನಿವೇಶಗಳಲ್ಲಿ ಪೋಷಕರದ್ದೂ ಸಹ ಪೂರ್ಣ ತಪ್ಪು ಎನ್ನುವುದಕ್ಕಾಗುವುದಿಲ್ಲ. ಅವರು ತಮ್ಮ ಮಗನನ್ನು ಉತ್ತಮ ಜಾಗದಲ್ಲಿ ನೋಡಲಿಚ್ಛಿಸಿರುತ್ತಾರೆ. ರೈತನಾದರೆ ಎಲ್ಲಿ ಆತ ಬೇರೆಯವರಿಗಿಂತ

ಹಿಂದುಳಿದು ಉತ್ತಮ ಜೀವನ ನಡೆಸಲಾಗುವುದಿಲ್ಲವೋ? ಎಂಬ ಯೋಚನೆ ಯಿಂದ ಅವರು ಅವನನ್ನು ಎಂಜಿನಿಯರ್ ಮಾಡುತ್ತಾರೆ. ಆದರೆ ಇದರಿಂದ ಮಕ್ಕಳು ಖುಷಿಯಾಗಿರುವುದಿಲ್ಲ ಎಂಬುದನ್ನು ಪೋಷಕರು ಕಂಡುಕೊಳ್ಳಬೇಕಾಗಿದೆ. ಆರ್ಥಿಕವಾಗಿ ಅವರು ಸುಖವಾಗಿದ್ದರೂ ಸಹ ಮಾನಸಿಕವಾಗಿ ಮಕ್ಕಳು ಬಹಳವಾಗಿ ಬಳಲುತ್ತಿರುತ್ತಾರೆ. ಇದಕ್ಕಾಗಿ ನಾನು ಪೋಷಕರಲ್ಲಿ ಕೇಳಿಕೊಳ್ಳುವುದೇನೆಂದರೆ ದಯವಿಟ್ಟು ನಿಮ್ಮ ಮಕ್ಕಳನ್ನು ಅವರ ಆಸಕ್ತಿಯ ಕ್ಷೇತ್ರದಲ್ಲಿ ಮುಂದುವರೆಯಲು ಬಿಡಿ ಎಂದು.

**ಪಾಠಿ ಚೀಲ ಹಗುರಾಗುವ ಕನಸು**

ನಮಗೆ ಅಂದರೆ ಮಕ್ಕಳಿಗೆ ಹೊರೆಯಾಗುತ್ತಿರುವ ವಿಷಯವೇನೆಂದರೆ ನಮ್ಮ ಬ್ಯಾಗ್ ಜಾಸ್ತಿ ಭಾರವಾಗುತ್ತಿರುವುದು. ಹೌದು !! ನಮ್ಮ ಬ್ಯಾಗ್‌ಗಳು ನಮ್ಮ ಬೆನ್ನುಗಳನ್ನು ಕೆಳಕ್ಕೆ ಎಳೆದು ಎಳೆದು, ಸಣ್ಣ ವಯಸ್ಸಿನಲ್ಲಿಯೇ ಮೈಕೈ ನೋವು ಶುರುವಾಗುತ್ತಿದೆ.



ಶಾಲೆಗೆ ಒಮ್ಮೆ ಭಾರದ ಬ್ಯಾಗ್ ಹಾಕಿಕೊಂಡು ಹೋಗಿ ವಾಪಾಸ್ ಬಂದರೆ ಸಂಜೆ ಆಟವಾಡುವುದಕ್ಕೆ ಹೋಗುವುದಕ್ಕೂ ಆಗುವುದಿಲ್ಲ ! ಅಷ್ಟು ಸುಸ್ತಾಗುತ್ತದೆ. ಈ ವಿಷಯದ ಮೇಲೆ ನನ್ನ ಕನಸು ಏನೆಂದರೆ ಮಕ್ಕಳಿಗೆ ಬ್ಯಾಗ್ ಎನ್ನುವ ವಸ್ತುವೇ ಇರಬಾರದು. ಪುಸ್ತಕಗಳನ್ನು ತರಗತಿಯಲ್ಲಿಯೇ ಇಟ್ಟುಕೊಳ್ಳು ವಂತಹ ಪದ್ಧತಿ ಜಾರಿಗೆ ಬರಬೇಕು. ಹೋಮ್‌ವರ್ಕ್ ಕೊಟ್ಟ ಪುಸ್ತಕಗಳನ್ನು ಮನೆಗೆ ತೆಗೆದುಕೊಂಡು ಹೋಗಿ ಬರುವುದು ಮಕ್ಕಳಿಗೆ ಇನ್ನೂ ಬಹಳ ಖುಷಿಯಾಗುತ್ತದೆ. ಹಾಗೆಯೇ ಪರೀಕ್ಷಾ ಸಮಯದಲ್ಲಿ ಪರೀಕ್ಷೆಗೆ ಇದ್ದ ನೋಟ್ಸ್‌ಗಳನ್ನು ಮನೆಗೆ ತೆಗೆದುಕೊಂಡು ಹೋಗಿಬರುವ ಹಾಗಿರಬೇಕು ಹಾಗೂ ಮಕ್ಕಳಿಗೂ ಬೇರೆ ಚಟುವಟಿಕೆಗಳಿಗೆ ಬೇಕಾದ ಪುಸ್ತಕಗಳನ್ನು ಅವರಿಗೇ ತೆಗೆದುಕೊಂಡು ಹೋಗಲು ಸ್ವಾತಂತ್ರ್ಯ ಇರಬೇಕು.

**ಶಾಲೆಗಳಲ್ಲಿ ಕನಿಷ್ಟ ದಿನಕ್ಕೆ ಒಂದು ಗಂಟೆ ಆಟದ ಕನಸು**

ಹಿಂದೆಲ್ಲಾ ಸ್ಕೂಲುಗಳಲ್ಲಿ ದೊಡ್ಡ ದೊಡ್ಡ ಆಟದ ಮೈದಾನಗಳಿರುತ್ತಿದ್ದವು. ಅದರ ಜೊತೆಗೆ ಆ ಆಟದ ಮೈದಾನ ಮಕ್ಕಳಿಂದ ತುಂಬಿ ಹೋಗಿರುತ್ತಿತ್ತು. ಆದರೆ ಈಗಿನ ಸ್ಥಿತಿಯೇ ಬೇರೆ. ದೊಡ್ಡ ದೊಡ್ಡ ಆಟದ ಮೈದಾನಗಳು ಸ್ಕೂಲಿನಲ್ಲಿದ್ದರೂ ಸಹ ಖಾಲಿ ಖಾಲಿಯಾಗಿ ಬಿಕೋ ಎನ್ನುತ್ತಿರುತ್ತವೆ. ಇದಕ್ಕೆ ಕಾರಣ ಶಾಲೆಯಲ್ಲಿ ಈಗ ಭಾರೀ ಕಡಿತವಾಗಿರುವ ಆಟದ ಪಿರಿಯಡ್ಡುಗಳು! ರೈತರಿಗೆ ಮಳೆ ಬಂದರೆ ಖುಷಿ, ಆದರೆ ಶಾಲಾ ವಿದ್ಯಾರ್ಥಿಗಳಾದ ನಮಗೆ ಮಳೆ ಬರದೇ ಇದ್ದರೆ ಖುಷಿ, ಯಾಕೆಂದರೆ ಮಳೆ ಬಂದರೆ ಆಟದ ಪಿರಿಯಡ್ಡು ಹೋಗುತ್ತದೆ. ಆಟದ ಪಿರಿಯಡ್ಡಿರುವ ದಿನ

ಮಾತ್ರ ಮಳೆ ಬರದಿದ್ದರೆ ಸಾಕಾಗುವುದಿಲ್ಲ, ಆಟದ ಪಿರಿಯಡ್ಡಿನ ಹಿಂದಿನ ದಿನ ಕೂಡ ಮಳೆ ಬರಬಾರದೆಂದು ದೇವರಲ್ಲಿ ವಿದ್ಯಾರ್ಥಿಗಳ ಪ್ರಾರ್ಥನೆಯಿರುತ್ತದೆ. ಯಾಕೆಂದರೆ ಹಿಂದಿನ ದಿನ ಮಳೆಬಂದು ಮೈದಾನ ಒದ್ದೆಯಾಗಿದ್ದರೆ ಸಿ.ಇ, ಮಿಸ್ಸು ಮೈದಾನ ಒದ್ದೆಯಾಗಿದೆ, ಜಾರಿ ಬೀಳುತ್ತೀರಾ ಎಂದು ಪಿ.ಇ. ಪಿರಿಯಡ್ಡಿನಲ್ಲಿ ಪಾಠ ಮಾಡುತ್ತಾರೆ.

ದೇವರ ಕೃಪೆಯಿಂದಲೋ ಏನೋ ಪಾಠ ಮಾಡುವ ಪಿರಿಯಡ್ಡಿನಲ್ಲಿ ಆಟವಾಡಲು ತಕ್ಕ ವಾತಾವರಣವಿರುತ್ತದೆ. ಆದರೆ ಆಟಕ್ಕೆ ಬಿಡುವ ಪಿರಿಯಡ್ಡಿನಲ್ಲಿ ಮಳೆ ಬಂದು ಆಡಲು ಬಿಡದೇ ಇರುವಂತಹ ವಾತಾವರಣವೇ ಎದುರಾಗುತ್ತದೆ.

ನಾನು ಇತ್ತೀಚೆಗೆ ಒಂದು ಸಿನಿಮಾ ನೋಡಿದೆ. ಅದು ಹಿಂದಿಯ “ಓಹ್ ಮೈ ಗಾಡ್'. ಈ ಚಿತ್ರದ ಒಂದು ಸನ್ನಿವೇಶದಲ್ಲಿ ಭೂಕಂಪವಾಗುತ್ತದೆ. ಆಗ ಎಲ್ಲರಂತೆ ಒಬ್ಬ ವ್ಯಾಪಾರಿಯ ಅಂಗಡಿಯೂ ಭೂಕಂಪದಿಂದ ಬಿದ್ದುಹೋಗುತ್ತದೆ. ಆತ ಪರಿಹಾರ ಪಡೆಯಲು ಇನ್ಸೂರೆನ್ಸ್ ಕಂಪನಿಗೆ ಹೋದರೆ ಅವರು ಈ ಭೂಕಂಪ ಆ್ಯಕ್ಟ್ ಆಫ್ ಗಾಡ್' ನಿಂದ ಆದದ್ದು, ಅದಕ್ಕೆ ನಮ್ಮ ಕಂಪನಿ ವಿಮೆ ಕೊಡುವುದಿಲ್ಲ, ಹಾಗೆಂದು ಪಾಲಿಸಿಯಲ್ಲಿಯೇ ಇದೆ ಎನ್ನುತ್ತಾರೆ. ಆಗ ಆ ವ್ಯಾಪಾರಿ 'ಭೂಕಂಪ ಮಾಡಿ ನಮಗೆ



ನಷ್ಟ ಮಾಡಿದ ದೇವರಿಗೆ ಶಿಕ್ಷೆ ಕೊಡಿ' ಎಂದು ನ್ಯಾಯಾಲಯದಲ್ಲಿ ಕೇಸ್ ಹಾಕುತ್ತಾನೆ. ಈ ಸಿನಿಮಾದ ವ್ಯಾಪಾರಿಯಂತೆ ಗೇಮ್ಸ್ ಪಿರಿಯಡ್ಡಿನಲ್ಲಿ ಮಳೆ ಬರಿಸುವ ದೇವರನ್ನು ಶಿಕ್ಷಿಸಿ ಎಂದು ಮಕ್ಕಳಾದ ನಾವೂ ದೇವರ ವಿರುದ್ಧ ಕೇಸ್ ಹಾಕಬೇಕಾಗಿದೆ ಎಂದು ಅನ್ನಿಸುತ್ತದೆ!

ಈಗ ಶಾಲೆಗಳಲ್ಲಿ ೨ ಕಿರು ಪರೀಕ್ಷೆಗಳ ನಂತರ ಒಂದು ಮೊದಲ ಸೆಮಿಸ್ಟರ್ ಪರೀಕ್ಷೆ ಹಾಗೂ ನಂತರದ ೨ ಕಿರು ಪರೀಕ್ಷೆಗಳ ನಂತರ ಎರಡನೇ ಸೆಮಿಸ್ಟರ್ ಪರೀಕ್ಷೆ ಇರುತ್ತದೆ. ಈ ಪರೀಕ್ಷೆಗಳ ಒಂದು ವಾರದ ಹಿಂದಿನ ಎಲ್ಲಾ ಆಟದ ಪಿರಿಯಡ್ಡುಗಳೂ ಓದುವುದಕ್ಕೆ ಮೀಸಲಿಡಲಾಗುತ್ತವೆ. ಸೆಮಿಸ್ಟರ್‌ನ ಮುಖ್ಯ ಪರೀಕ್ಷೆಗಳ ಸಂದರ್ಭದಲ್ಲಂತೂ ಮೂರ್ನಾಲ್ಕು ವಾರಗಳ ಹಿಂದಿನ ಆಟದ ಪಿರಿಯಡ್ಡುಗಳೂ ಕಟ್ ಆಗಿಬಿಡುತ್ತವೆ.

ಇನ್ನು ಕೆಲವು ಶಾಲೆಗಳ ಕಥೆ ಕೇಳಿ, ಅಲ್ಲಿ ಆಟದ ಮೈದಾನವೇ ಇರುವುದಿಲ್ಲ. ಇದ್ದರೂ ಆಡಲು ಬಿಡುವುದಿಲ್ಲ. ಮನೆಗೆ ಹೋಗುವಾಗಲಾದರೂ ಆಡಿಕೊಂಡು ಹೋಗೋಣವೆಂದರೆ ಅಲ್ಲಿನ ವಾಚ್‌ಮನ್‌ಗಳು ಹಾಗೂ ಮುಖ್ಯೋಪಾಧ್ಯಾಯರುಗಳು ಬಿಡುವುದಿಲ್ಲ. ಈ ಸಮಯದಲ್ಲಿ ಮನೆಗೆ ಹೋಗಿ ಓದಿದರೆ ಹೆಚ್ಚು ಅಂಕಗಳು

ಬರುವುದಲ್ಲಾ ಎಂದು ಹೇಳುತ್ತಾರೆ. ಇಲ್ಲವಾದಲ್ಲಿ ಶಾಲೆಯಲ್ಲಿ ನಿಧಾನವಾಗಿ ಓದುವವರಿಗೆ ನಡೆಯುವ ಹೆಚ್ಚುವರಿ ಕ್ಲಾಸಿಗೆ ಹೋಗಿ ಕುಳಿತುಕೊಳ್ಳಿ ಎಂದು ಕಳುಹಿಸುತ್ತಾರೆ.

ಇನ್ನು ಮನೆಯ ಸ್ಥಿತಿಗೆ ಬಂದರೆ ಹೆಚ್ಚಿನ ಮಕ್ಕಳ ದಿನಚರಿಯಲ್ಲಿ ಆಟದ ಅವಧಿಯೇ ಇರುವುದಿಲ್ಲ. ಶನಿವಾರದಲ್ಲಿ ಒಂದೆರಡು ಗಂಟೆ ಹಾಗೂ ಭಾನುವಾರದಲ್ಲಿ ಒಂದೆರಡು ಗಂಟೆ ಹೊರಗೆ ಹೋಗಿ ಸ್ನೇಹಿತರ ಜೊತೆ ಆಡಲು ಮೀಸಲಾಗಿರುತ್ತದೆ. ಕೆಲವು ಮಕ್ಕಳಿಗೆ ಆ ಭಾಗ್ಯವೂ ಇರುವುದಿಲ್ಲ. ಮನೆಗೆ ಬಂದು ಒಂದು ಗಂಟೆ ಹೋಮ್‌ವರ್ಕ್ ಮಾಡಿ, ಎರಡು ಗಂಟೆ ಓದಿ. ಊಟ ಮಾಡುತ್ತಾ ಟೀವಿ ನೋಡಿ ಮಲಗುವುದೇ ಅವರ ಕೆಲಸವಾಗಿರುತ್ತದೆ. ಕೆಲವೊಂದು ಮನೆಗಳಲ್ಲಿ ಶನಿವಾರ ಭಾನುವಾರಗಳಂದು ಮಕ್ಕಳು ಆಡಬಾರದೆಂದು ಆ ಎರಡು ದಿನಕ್ಕೆಂದೇ ಮೂರ್ನಾಲ್ಕು ಚಟುವಟಿಕೆಗೆ ಸೇರಿಸಿರುತ್ತಾರೆ. ಮಕ್ಕಳೇ ಸೇರಿಸಿ ಎಂದು ಸೇರಿಸಿದ್ದರೆ ಅದು ಮಕ್ಕಳು ತಮ್ಮ ಸ್ವಇಚ್ಛೆಯಿಂದ ಕಲಿಯುತ್ತಿದ್ದಾರೆ ಎನ್ನಬಹುದು. ಆದರೆ ಮಕ್ಕಳ ಆಟವನ್ನು ತಡೆಯಲು ಈ ರೀತಿ ಮಾಡುತ್ತಿದ್ದರೆ ಅದು ನಿಜಕ್ಕೂ ಒಳ್ಳೆಯದಲ್ಲ. ಮಕ್ಕಳು ಒಳಗೊಳಗೇ ಒಂದು ರೀತಿ ಸಂಕಟ ಪಡುತ್ತಿರುತ್ತಾರೆ. ಅವರು ಇಷ್ಟಪಡುವ ಚಟುವಟಿಕೆಗಳಿಗೆ ಸೇರಿಸಿದರೆ ಅಲ್ಲಿನ ಚಟುವಟಿಕೆಗಳನ್ನು ಅವರು ಇಷ್ಟಪಟ್ಟು ಮಾಡುತ್ತಾರೆ. ಆಟ ಆಡುವಲ್ಲಿನ ಈ ಸಮಸ್ಯೆಗಳೆಲ್ಲಾ ಬಗೆಹರಿದು ನಾವು ಮಕ್ಕಳು ದಿನವೂ ಆಟ ಆಡುವಂತಾಗಬೇಕೆಂಬುದು ನನ್ನ ಕನಸು.

೩೮೮ / ನುಡಿಗಂಧ

**ಸ್ಪರ್ಧೆಯಿಲ್ಲದ ಜಗತ್ತಿನ ಕನಸು**

ಇತ್ತೀಚೆಗೆ ಕನ್ನಡವಷ್ಟೇ ಅಲ್ಲದೇ ಹಿಂದಿ, ತೆಲುಗು, ತಮಿಳು ಭಾಷೆಗಳಲ್ಲಿಯೂ ರಿಯಾಲಿಟಿ ಶೋಗಳು ಹೆಚ್ಚಾಗುತ್ತಿವೆ. ಚಾನೆಲ್‌ಗಳ ಟಿಆರ್‌ಪಿ ರೇಟ್ ಹೆಚ್ಚಿಸಲು ರಿಯಾಲಿಟಿ ಶೋಗಳು ಪ್ರತಿ ಚಾನೆಲ್‌ಗಳಲ್ಲೂ ಬರುತ್ತಿವೆ. ಕೆಲವು ಟಿವಿ ಕಾರ್ಯಕ್ರಮಗಳು ಅಲ್ಲಿ ಭಾಗವಹಿಸುವ ಚಿಕ್ಕ ಸ್ಪರ್ಧಿಗಳಲ್ಲಿ "ನೀನು ಎಲಿಮಿನೇಟ್ ಆಗುತ್ತೀಯಾ" ಎಂದ ತಕ್ಷಣ ಮಕ್ಕಳಲ್ಲಿ ಒಂದು ವಿಚಿತ್ರ ಮನೋಭಾವ ಹುಟ್ಟಿಸಿಬಿಡುತ್ತದೆ. ೧೦, ೧೧ನೇ ಸ್ಥಾನ ಬಂದೆ ಎಂದರೆ 'ಇವಿಷ್ಟೇ ಜಗತ್ತು, ನಾನು ಸೋತುಬಿಟ್ಟೆನೆಲ್ಲಾ ಎಂದು ಅಂದುಕೊಂಡು ಬೇಜಾರಾಗುತ್ತಾರೆ. ಅವರು ತಾನು ಆಡಿಷನ್‌ನಿಂದ ಗೆದ್ದು ಬಂದು, ಮೆಗಾ ಆಡಿಷನ್‌ನಲ್ಲೂ ಗೆದ್ದು ಇಲ್ಲಿ ತನಕ ಬಂದೆನೆಲ್ಲಾ ಎಂಬುದಕ್ಕೆ ಖುಷಿ ಪಡುವುದಿಲ್ಲ. ೨, ೩ನೇ ಸ್ಥಾನ ಬಂದವರೂ ಸಹ ನಾವು ಉಳಿದವರಿಗಿಂತ ಚೆನ್ನಾಗಿ ಹಾಡಿ ಇಲ್ಲಿಗೆ ಬಂದಿದ್ದೇವಲ್ಲಾ ಎಂದು ಖುಷಿ ಪಡುವುದಿಲ್ಲ. ನೀನು ಗೆದ್ದುಕೊಂಡು ಬರಲೇಬೇಕು ಎಂದು ಕೆಲವು ಮನೆಗಳಲ್ಲಿ ಅವರ ತಂದೆ ತಾಯಿ ಹೇಳಿ ಕಳಿಸಿರುತ್ತಾರೆ. ಇದರಿಂದ ಸೋತ ತಕ್ಷಣ ಮಕ್ಕಳು ಹಾಗೆ ಅಳುತ್ತಾರೆ. ಆದ್ದರಿಂದ ಎಲ್ಲದನ್ನೂ ಸ್ಪರ್ಧಾತ್ಮಕವಾಗಿ ತೆಗೆದುಕೊಳ್ಳಬೇಕಾದರೂ ನಾವು ಅದನ್ನು ಆರೋಗ್ಯಕರವಾಗಿ ತೆಗೆದುಕೊಳ್ಳಬೇಕು. ಮಕ್ಕಳಿಗೆ ಈ ರೀತಿ ನೀನು

ಎಲಿಮಿನೇಟ್ ಆಗಿದೀಯಾ ಎಂದಾಗ ಅವರು ತಮ್ಮ ಜೀವನವೇ ಮುಗಿದುಹೋಯಿತು ಬೇರೆ ಜೀವನವೇ ಇಲ್ಲಾ ಎಂದುಕೊಂಡುಬಿಡುತ್ತಾರೆ. ಇದು ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರುತ್ತದೆ ಅಲ್ಲವಾ?

ಈಗ ನಾನು ಒಂದು ಘಟನೆಯನ್ನು ಹೇಳುತ್ತೇನೆ. ಅದು ಒಂದು ಒಲಿಂಪಿಕ್ಸ್ ಕ್ರೀಡಾಕೂಟ. ಯಾವುದೆಂದು ನನಗೆ ಸರಿಯಾಗಿ ಗೊತ್ತಿಲ್ಲ. ಗೂಗಲ್‌ನಲ್ಲಿ ಹುಡುಕಿದರೂ ಸಿಗಲಿಲ್ಲ. ಅದು ದೇಹದ ಎಲ್ಲಾ ಭಾಗಗಳು ಸರಿಯಾಗಿರುವವರ ಕ್ರೀಡಾಕೂಟವಲ್ಲ. ಬದಲಿಗೆ ವಿಕಲಚೇತನರ ಒಲಿಂಪಿಕ್ಸ್ ಕ್ರೀಡಾಕೂಟ. ಅಂದರೆ ಪ್ಯಾರಾಲಿಂಪಿಕ್ಸ್, ಆ ಕ್ರೀಡಾಕೂಟದಲ್ಲಿ ೧೦೦ ಮೀಟರ್ ಓಟದ ಸ್ಪರ್ಧೆ. ಆ ಓಟದ ಸ್ಪರ್ಧೆಯಲ್ಲಿ ಒಂದು ದೇಶ ಪ್ರತಿನಿಧಿಸುತ್ತಿರುವವರಿಗೆ ಒಂದು ಕಾಲಿಲ್ಲ, ಮತ್ತೊಂದು ದೇಶದವರಿಗೆ ಎರಡು ಕಾಲಿಲ್ಲ, ಅವರು ಕೃತಕ ಕಾಲಿನಲ್ಲಿ ಓಡಬೇಕು. ಮಗದೊಂದು ದೇಶವನ್ನು ಪ್ರತಿನಿಧಿಸುತ್ತಿರುವವರಿಗೆ ಕಣ್ಣು ಕಾಣುತ್ತಿಲ್ಲ. ಮತ್ತೊಬ್ಬರಿಗೆ ಕಿವಿ ಕೇಳಿಸುತ್ತಿಲ್ಲ. ಮತ್ತೊಂದು ದೇಶದವರಿಗೆ ಕೈಯಿಲ್ಲ. ಒಂದು ದೇಶದವರು ಮಾನಸಿಕ ವಿಕಲಚೇತನರು, ಹೀಗೆ ಎಲ್ಲರೂ ಬೇರೆ ಬೇರೆ ರೀತಿ ವಿಕಲಚೇತನರು. ಎಲ್ಲರ ಪೋಷಕರು, ಸ್ನೇಹಿತರೆಲ್ಲರೂ ನೀನು ಗೆದ್ದುಕೊಂಡು ಬಾ, ನೀನು ಗೆಲ್ಲು ಎಂದು ಹುರಿದುಂಬಿಸಿ ರೆಫ್ರಿ ವಿಶಲ್ ಹಾಕಿದ ತಕ್ಷಣ ಅವರನ್ನು ಶುರು ಮಾಡುವ ಗೆರೆಯ ಹತ್ತಿರ ತಂದು ಗೆಲ್ಲು ಎಂದು ಹೇಳಿ ಕಳುಹಿಸಿದರು.



ಎಲ್ಲರೂ ಗನ್ ಶೂಟ್ ಮಾಡಿದ ತಕ್ಷಣ ಓಡಲು ಶುರು ಮಾಡಿದರು. ಎರಡು ಕಾಲಿಲ್ಲದೇ ಕೃತಕ ಕಾಲಿನಲ್ಲಿ ಓಡುವವನು ಮೊದಲಿಗನಾಗಿದ್ದ. ಸ್ವಲ್ಪ ಹೊತ್ತಿನಲ್ಲೇ ಗುರಿ ಮುಟ್ಟಲಿದ್ದ. ಎರಡನೆಯವರಾಗಿದ್ದುದು ಕೈಯಿಲ್ಲದವನು. ಮೂರನೆಯವನು ಒಂದು ಕಾಲು ಮಾತ್ರ ಇದ್ದವನು. ಉಳಿದವರೆಲ್ಲಾ ಕೊನೆಗೆ ನಿಧಾನಕ್ಕೆ ಓಡಿಕೊಂಡು ಬರುತ್ತಿದ್ದರು. ಈ ಸಮಯದಲ್ಲಿ ಮಾನಸಿಕ ವಿಕಲಚೇತನ ನಾಗಿದ್ದವನು ಇದ್ದಕ್ಕಿದ್ದಂತೆ ಅಮ್ಮಾ ! ಎಂದು ಕೂಗಿಕೊಂಡು ಬಿದ್ದುಬಿಟ್ಟ, ಗುರಿ ಇನ್ನೇನು ಮುಟ್ಟಲಿದ್ದವನು ತಕ್ಷಣ ಹಿಂದಿರುಗಿ ನೋಡಿದ. ಅವನು ಬಿದ್ದಿದ್ದು ನೋಡಿ ಅವನ ಕಡೆ ಓಡಿಹೋದ. ಎರಡನೇ ಮೂರನೆಯವರೆಲ್ಲಾ ಅವನ ಹಿಂದೆಯೇ ಓಡಿಹೋದರು. ಕಣ್ಣು ಕಾಣದವನು ಸಹ ಕೂಗನ್ನು ಗ್ರಹಿಸಿ ಅವನು ಬಿದ್ದ ಜಾಗಕ್ಕೆ ಬಂದ. ಮೊದಲಿದ್ದ ಎರಡು ಕಾಲಿಲ್ಲದವನು ಅವನನ್ನು ಎತ್ತಿದ. ಕಿವಿ ಕೇಳಿಸದವನು ನಿಧಾನವಾಗಿ ಅವನಿಗೆ ಶುಶ್ರೂಷೆ ಮಾಡಿದ. ನಂತರ ಎಲ್ಲರೂ ಕೈ ಕೈ ಹಿಡಿದುಕೊಂಡು ಒಟ್ಟಿಗೆ ಗುರಿ ಮುಟ್ಟಿದರು. ಕ್ರೀಡಾಂಗಣದಲ್ಲಿ ಒಂದು ಕ್ಷಣ ಮೌನ ಆವರಿಸಿತು. ನಂತರ ಎಲ್ಲರೂ ಎದ್ದುನಿಂತು ಜೋರಾಗಿ ಚಪ್ಪಾಳೆ ತಟ್ಟಿದರು. ಪೋಷಕರು, ಗೆಳೆಯರು, ರೆಫ್ರಿಗಳೆಲ್ಲಾ ದಂಗಾಗಿ ನಿಂತಿದ್ದರು. ಮರುಕ್ಷಣ ಅವರೂ ಸಹ ಜೋರಾಗಿ ಚಪ್ಪಾಳೆ ತಟ್ಟತೊಡಗಿದರು. ಎಲ್ಲಾ ಸ್ಪರ್ಧಿಗಳ ಮುಖದಲ್ಲೂ ಒಂದು ರೀತಿಯ ವಿಶೇಷ ಖುಷಿಯಿತ್ತು. ಎಲ್ಲರೂ ಒಬ್ಬರನ್ನೊಬ್ಬರು ತಬ್ಬಿಕೊಂಡರು.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಎಲ್ಲರಿಗೂ ಮೊದಲನೇ ಬಹುಮಾನ ನೀಡಲಾಯಿತು. ಅಂದು ಎಲ್ಲರೂ ಒಂದು ವಿಶೇಷ ಕಂಡಿದ್ದರು. ಇಂತಹ ಸ್ಪರ್ಧೆಯಿಲ್ಲದ, ಯಾರೂ ಸೋಲದ, ಎಲ್ಲರೂ ಗೆಲ್ಲುವ ಜಗತ್ತಿನ ಕನಸು ನನ್ನದಾಗಿದೆ.

**ಬಾಲಕಾರ್ಮಿಕರಿಲ್ಲದ ಭಾರತದ ಕನಸು**

ಅದೊಂದು ರೈಲು ನಿಲ್ದಾಣ. ಬೆಳಗಿನ ಜಾವ ೫.೩೦. ಸ್ವಲ್ಪ ಹೊತ್ತು ಅಲ್ಲಿ ನೀರು ಇಟ್ಟರೆ ಮಂಜುಗಡ್ಡೆ ಆಗುತ್ತದೇನೋ ಎನ್ನುವ ಹೆಪ್ಪುಗಟ್ಟಿಸುವ ಚಳಿ, ಎಲ್ಲರೂ ದಪ್ಪ ದಪ್ಪದ ಜಾಕೆಟ್, ಶಾಲುಗಳನ್ನು ಹೊದ್ದುಕೊಂಡು ಬರಲಿರುವ ತಮ್ಮ ಊರುಗಳಿಗೆ ಹೋಗುವ ರೈಲುಗಳಿಗೆ ಕಾಯುತ್ತಾ ನಿಂತಿದ್ದಾರೆ. ಈ ಸಮಯದಲ್ಲಿ ರೈಲು ನಿಲ್ದಾಣದ ಪ್ರವೇಶಭಾಗಿಲಿನಲ್ಲಿ ಒಬ್ಬ ಹುಡುಗ "ಪೇಪರ್ ಪೇಪರ್" ಎಂದು ಕೂಗುತ್ತಿದ್ದಾನೆ. ಶಾಲು, ಜಾಕೆಟ್‌ಗಳಿರಲಿ - ಅವನ ಅಂಗಿ ಚಡ್ಡಿಯೇ ಅಲ್ಲಲ್ಲಿ ಹರಿದುಹೋಗಿದೆ. ಹುಡುಗ ಅಷ್ಟು ನಡುಗುತ್ತಿಲ್ಲವಾದರೂ ಸಹ ನೋವು ಅವನ ಮುಖದ ಮೇಲಿದೆ. ಆ ನೋವನ್ನು ಮರೆಮಾಚುತ್ತಾ ಆತ ಮುಗುಳ್ನಗೆ ಯಿಂದಲೇ ಪೇಪರ್ ಮಾರುತ್ತಿದ್ದಾನೆ..

ಬೆಳಗಿನ ಹೆಪ್ಪುಗಟ್ಟಿಸುವ ಚಳಿಯನ್ನು ಲೆಕ್ಕಿಸದೆ ಪೇಪರ್ ಮಾರುವ ಹುಡುಗನ ಈ ಸ್ಥಿತಿಗೆ ಕಾರಣವಾದ ಬಡತನ, ಶಾಲೆಗೆ ಹೋಗಲಾಗದ ಅವನ ಕಷ್ಟ, ಅವನ ಮೇಲಿರುವ ಜವಾಬ್ದಾರಿಗಳು, ಅವನಿಗೆ ಕೆಲಸದ ಮೇಲಿರುವ ಪ್ರೀತಿ, ಜವಾಬ್ದಾರಿ,



ಚಳಿಯಲ್ಲಿಯೂ ಕೆಲಸ ಮಾಡುತ್ತಿರುವ ಅವನ ಕಾರ್ಯದಕ್ಷತೆ ಹೀಗೆ ಹಲವು ವಿಷಯಗಳು ನಮ್ಮನ್ನು ತಟ್ಟುತ್ತವೆ.

ಎಲ್ಲಾ ದೇಶಗಳಲ್ಲಿ ಕಾಡುತ್ತಿರುವ ದೊಡ್ಡ ಸಮಸ್ಯೆ, ಅದರಲ್ಲೂ ಏಷ್ಯಾದ ರಾಷ್ಟ್ರಗಳಲ್ಲಿ ಬಹುದೊಡ್ಡ ಸಮಸ್ಯೆಯೆಂದರೆ ಬಾಲಕಾರ್ಮಿಕರದು. ಬಾಲಕಾರ್ಮಿಕ ಸಮಸ್ಯೆಗೆ ಮುಖ್ಯ ಕಾರಣ ಬಡತನ, ಬಾಲಕಾರ್ಮಿಕ ಸಮಸ್ಯೆ ಅವಿದ್ಯಾವಂತರನ್ನು ಸೃಷ್ಟಿಸುತ್ತದೆ. ಆದರೆ ಆ ಬಾಲಕಾರ್ಮಿಕರಿಗೆ ದೊಡ್ಡವರಾದ ಮೇಲೆ ವಿದ್ಯಾರ್ಹತೆ ಇಲ್ಲದ ಕಾರಣ ಒಳ್ಳೆಯ ಕೆಲಸ ಸಿಗುವುದಿಲ್ಲ. ಬಾಲಕಾರ್ಮಿಕರಾಗಿ ಮಾಡುತ್ತಿದ್ದ ಕೆಲಸಗಳನ್ನೇ ಮುಂದುವರೆಸಿಕೊಂಡು ಹೋಗಬೇಕಾಗುತ್ತದೆ.

ಈಗ ಸರ್ವಶಿಕ್ಷಣ ಅಭಿಯಾನ ಕೂಡ ಬಂದಿದೆ. ಮಕ್ಕಳನ್ನು ಕರೆದುಕೊಂಡು ಹೋಗಿ ಶಾಲೆಗೆ ಸೇರಿಸಿದರೂ ಅವರು ಓಡಿಬಂದು ಅಪ್ಪ ಅಮ್ಮನ ಆದೇಶದಂತೆ ಕೆಲಸ ಮಾಡಲು ಹೋಗುವುದು. ಕೈಲಾಶ್ ಸತ್ಯಾರ್ಥಿಯಂಥವರು ಎಲ್ಲರೂ ಒಂದು ಶಪಥ ಮಾಡಬೇಕೆಂದಿದ್ದಾರೆ. ಅದೇನೆಂದರೆ, ಯಾವ ಮನೆಯಲ್ಲಿ ಬಾಲಕಾರ್ಮಿಕರು ಕೆಲಸ

ಮಾಡುತ್ತಾರೆಯೋ ಅಲ್ಲಿ ನಾವು ನೀರು ಕುಡಿಯಬಾರದು ಎಂದು. ಇದನ್ನು ನಾವು ಪಾಲಿಸಿಕೊಂಡು ಹೋಗಬೇಕು. ಇದರಿಂದ ಮುಂದಾದರೂ ನಮ್ಮ ದೇಶದಲ್ಲಿ ಬಾಲಕಾರ್ಮಿಕರ ಸಂಖ್ಯೆ ಕಡಿಮೆಯಾಗಬಹುದು.

ಪಾಕಿಸ್ತಾನದಲ್ಲೂ ಸಹ ಮಲಾಲಾ ಯೂಸುಫ್ ಜಾಯ್‌ರಂತಹವರು ತಮ್ಮ ದೇಶದಲ್ಲಿ ತಾಲಿಬಾನ್ ಉಗ್ರರ ದಾಳಿಯ ನಡುವೆಯೂ ಮಕ್ಕಳನ್ನು ಶಾಲೆಗೆ ಸೇರಿಸಲು ಸ್ಫೂರ್ತಿಯಾಗಿದ್ದಾರೆ. ಕೈಲಾಶ್ ಸತ್ಯಾರ್ಥಿ ಹಾಗೂ ಮಲಾಲಾ ಯೂಸುಫ್ ಜಾಯಿಗೆ ಒಂದೇ ವರ್ಷ ನೊಬೆಲ್ ಸಿಕ್ಕಿರುವುದು ಒಂದು ಕಾಕತಾಳೀಯ ಎನ್ನಬಹುದು. ಭಾರತ - ಪಾಕಿಸ್ತಾನ ಎರಡೂ ದೇಶಗಳೂ ಕ್ರಿಕೆಟ್‌ನಲ್ಲೋ, ಯುದ್ಧದಲ್ಲೋ ಎದುರಾಳಿಯಾದಾಗ ಎರಡೂ ದೇಶಗಳು ಸಂಭ್ರಮಿಸು ವಂತಾಗುವುದಿಲ್ಲ. ಆದರೆ ಈ ಇಬ್ಬರೂ ಸಾಧಕರು ಬಾಲಕಾರ್ಮಿಕ ಸಮಸ್ಯೆಯ ವಿರುದ್ಧ ಶಾಂತಿಯಿಂದ ಹೋರಾಡಿ ಎರಡೂ ದೇಶಗಳೂ ಒಂದೇ ದಿನ ಖುಷಿಪಡುವ ಹಾಗೆ ಮಾಡಿರುವುದು ಒಂದು ವಿಶೇಷವೆಂದೇ ಹೇಳಬಹುದು. ನಾನು ನಮ್ಮ ದೇಶದ ಬಗ್ಗೆ ಕಂಡಿರುವ ಬಹುಮುಖ್ಯ ಕನಸುಗಳಲ್ಲಿ ಬಾಲಕಾರ್ಮಿಕರಹಿತ ಭಾರತ ಮುಖ್ಯವಾದುದು.

**ಕನ್ನಡನಾಡಿನ ಮಕ್ಕಳೆಲ್ಲ ಸಾಹಿತ್ಯ ರಚಿಸುವ ಕನಸು**

ಇಂದು ನಮಗೆ ಎಂದರೆ ಮಕ್ಕಳಿಗೆ ಓದಲು ಆಸಕ್ತಿ ಕಡಿಮೆಯಾಗುತ್ತಿದೆ. ಇದರಲ್ಲಿ ಮಕ್ಕಳ ಭಾಗ ಎಷ್ಟು ಇದೆಯೋ ಪೋಷಕರ ಹಾಗೂ ಶಿಕ್ಷಕರ ಭಾಗವೂ ಸಹ ಅಷ್ಟೆಯೇ ಇದೆ. ಮಕ್ಕಳಲ್ಲಿ ಓದುವ ಆಸಕ್ತಿ ಕಡಿಮೆಯಾಗುತ್ತಿರುವುದಕ್ಕೆ ಪಠ್ಯಪುಸ್ತಕಗಳು ಮುಖ್ಯ ಕಾರಣವಾಗಿ ಹೋಗಿದೆ. ಕೆಲವೊಂದು ಶಾಲೆಗಳಲ್ಲಿ ದಿನಕ್ಕೆ ಎಲ್ಲಾ ವಿಷಯಗಳನ್ನು

ಸೇರಿಸಿ ಸುಮಾರು ೨೦ ಪುಟಗಳಷ್ಟು ಬರೆದುಕೊಂಡು ಬನ್ನಿ ಎಂದು ಮನೆಗೆಲಸ ಕೊಡುತ್ತಾರೆ. ಸಂಜೆ ೪.೩೦ರ ಹೊತ್ತಿಗೆ ಮನೆಗೆ ಬಂದ ಮಕ್ಕಳು ಕನಿಷ್ಟ ಅರ್ಧಗಂಟೆಯಲ್ಲಿ ಮುಖ ತೊಳೆದು, ತಿಂಡಿ ತಿಂದು ಅದನ್ನು ಮಾಡುವುದಕ್ಕೆ ಸುಮಾರು ೧ ಗಂಟೆ ಸಮಯ ಹಿಡಿಯುತ್ತದೆ. ಅದರ ಜೊತೆಗೆ ಪಠ್ಯಪುಸ್ತಕಗಳನ್ನು ಓದುವುದು ಸಹ ಗಂಟೆಯಾಗುತ್ತದೆ. ಇನ್ನು ೧ ಗಂಟೆ ಸಹಜವಾಗಿ ಮಕ್ಕಳು ಆಟವಾಡುತ್ತಾರೆ. ಇದರ ಮಧ್ಯೆ ಒಂದು ಗಂಟೆ ಟ್ಯೂಷನ್‌ಗೋ, ಸಂಗೀತಕ್ಕೋ, ಆಟಕ್ಕೋ ಕಳೆದುಹೋಗುತ್ತದೆ. ಇಷ್ಟು ಹೊತ್ತಿಗೆ ರಾತ್ರಿ ೯ ಗಂಟೆ ಆಗಿಹೋಗುತ್ತದೆ. ಈ ಸಮಯದಲ್ಲಿ ಮಕ್ಕಳು ಟೀವಿ ನೋಡಿ ಊಟ ಮಾಡಿ ಮಲಗಿಕೊಳ್ಳುತ್ತಾರೆ. ಬೆಳಗ್ಗೆ ಎದ್ದು ಮತ್ತೊಂದು ಗಂಟೆ ಓದಿ ಸ್ಕೂಲಿಗೆ ಹೋಗುತ್ತಾರೆ. ಇದೇ ಸಾಮಾನ್ಯ ಮಕ್ಕಳ ದಿನಚರಿಯಾಗಿರುತ್ತದೆ.

ಮಕ್ಕಳಿಗೆ ಒಂದನೇ ತರಗತಿಯಿಂದಲೇ ಪಠ್ಯೇತರ ಸಾಹಿತ್ಯ ಪುಸ್ತಕಗಳನ್ನು ಓದುವ ಅಭಿರುಚಿಯನ್ನು ಪೋಷಕರು ಬೆಳೆಸಬೇಕು. ಅದನ್ನು ಹೇಗೆ ಬೆಳೆಸಬೇಕ ಎಂದರೆ ಅದನ್ನು ಅವರ ಮೇಲೆ ಒತ್ತಡ ಹಾಕಿ ಬೆಳೆಸಬಾರದು. ಮೊದಮೊದಲಿಗೆ ನೀವು ಮನೆಯಲ್ಲಿ ಒಂದು ಹತ್ತು ಮಕ್ಕಳ ಪುಸ್ತಕ ತಂದು ಆ ಮಗುವಿನ ಹಾಸಿಗೆಯ ಮೇಲೆ ಇಡಿ. ಆ ಮಗುವು ಮಲಗುವುದಕ್ಕೆ ಹೋದಾಗ ಅದನ್ನು ನಿಧಾನವಾಗಿ ತೆಗೆದು ಚಿತ್ರಗಳನ್ನು ನೋಡಿ ಖುಷಿಪಡುತ್ತದೆ. ನಿಧಾನವಾಗಿ ಒಂದೊಂದೇ ಸಾಲುಗಳನ್ನು ಓದಲು ಶುರುಮಾಡುತ್ತದೆ. ಕೆಲವೊಮ್ಮೆ ನೀವು ಸಹ ಮಕ್ಕಳಿಗೆ ಆ ಪುಸ್ತಕದ ಕಥೆ ಅಥವಾ ಕವಿತೆಯನ್ನು ಓದಿ ಹೇಳಿ, ಆವಾಗ ಮಗು ಆಸಕ್ತಿಯಿಂದ ಕೇಳುತ್ತದೆ. ಹೀಗೆಯೇ ಪುಸ್ತಕದ ಅಂಗಡಿಗೆ ಕರೆದುಕೊಂಡು ಹೋಗಿ ಅಂಗಡಿಯನ್ನು ಮಗುವಿಗೆ ನೋಡಲು ಬಿಟ್ಟು ಅದಕ್ಕೆ ಇಷ್ಟವಾದ ಪುಸ್ತಕವನ್ನು ಆ ಮಗುವಿಗೆ ತೆಗೆಸಿಕೊಡಿ. ಹೀಗೆಯೇ ಆ ಮಗು ಓದುವ ಹವ್ಯಾಸವನ್ನು ಬೆಳೆಸಿಕೊಂಡು ಹೋಗುತ್ತದೆ. ಇದಕ್ಕೆ ಉದಾಹರಣೆಯಾಗಿ ನಾನೇ ಇದ್ದೇನೆ. ನನ್ನ ಅಪ್ಪ ಅಮ್ಮ ಸಹ ನನ್ನನ್ನು ಇದೇ ರೀತಿ ಬೆಳೆಸಿದ್ದರು.

ಇತ್ತೀಚೆಗಷ್ಟೇ ಹಿರಿಯ ಲೇಖಕರು ಮತ್ತು ಚಿಂತಕರಾದ ಬರಗೂರು ರಾಮಚಂದ್ರಪ್ಪರವರ ನೇತೃತ್ವದ ಸಮಿತಿ ಸಾಂಸ್ಕೃತಿಕ ನೀತಿ'ಯ ಒಂದು ವರದಿಯನ್ನು ಸರ್ಕಾರಕ್ಕೆ ಒಪ್ಪಿಸಿದರು. ಅದರಲ್ಲಿರುವ ಒಂದು ಮುಖ್ಯ ಸಂಗತಿ ಏನೆಂದರೆ ಸರ್ಕಾರಿ ಪ್ರೌಢಶಾಲೆಗಳಲ್ಲಿ ರಂಗ ಶಿಕ್ಷಕರ ಜೊತೆ ಸಾಂಸ್ಕೃತಿಕ ಶಿಕ್ಷಕರನ್ನೂ ಸಹ ನೇಮಿಸಬೇಕೆಂಬುದು. ಇದು ನಿಜಕ್ಕೂ ಸಹ ಒಂದು ಒಳ್ಳೆಯ ಕ್ರಮವೆಂದು ನಾವು ಹೇಳಬಹುದಾಗಿದೆ. ಇದರೊಂದಿಗೆ ನನ್ನ ಸಲಹೆ ಏನೆಂದರೆ ಸರ್ಕಾರ ಪ್ರೌಢಶಾಲೆಗಳಿಗೆ ಒಬ್ಬರು ಸಾಹಿತ್ಯ ಶಿಕ್ಷಕರನ್ನು ನೇಮಿಸಬೇಕೆಂಬುದು. ಇಲ್ಲಿ ಒಂದು ಪ್ರಶ್ನೆ ಬರಬಹುದು, ಕನ್ನಡ ಶಿಕ್ಷಕರಿಗೇ ಸಾಹಿತ್ಯವನ್ನು ಕಲಿಸಲು ಹೇಳಬಹುದಲ್ಲಾ ಎಂದು. ಇದನ್ನು ಕನ್ನಡದ ಶಿಕ್ಷಕರಿಗೆ ಕೊಟ್ಟರೆ ಇದು ಜಾಸ್ತಿ ಪರಿಣಾಮಕಾರಿಯಾಗಿರುವುದಿಲ್ಲ. ಯಾಕೆಂದರೆ ಸಾಹಿತ್ಯ ಒಂದು ವಿಷಯ ಅಲ್ಲದೇ ಇರುವುದ ಕಡ ಶಿಕ್ಷಕರು ಸಾಹಿತ್ಯದ ಬದಲಿಗೆ ಮಕ್ಕಳು

ಹೆಚ್ಚು ಅಂಕ ತೆಗೆದುಕೊಳ್ಳಲಿ ಎಂದು ಸಾಹಿತ್ಯದ ಪಿರಿಯಡ್ಡುಗಳಲ್ಲಿ ಕನ್ನಡ ಪಠ್ಯಪುಸ್ತಕದ ಬೋಧನೆಯನ್ನೇ ಮಾಡಬಹುದು.

ಎಲ್ಲರನ್ನೂ ಸಮಾನವಾಗಿ ಕಾಣುವ ಭಾರತದ ಕನಸು

ಪ್ರತಿಯೊಂದು ಕೆಲಸಕ್ಕೂ ಅದರದ್ದೇ ಆದ ಮಹತ್ವವಿದೆ. ನಮ್ಮ ಶಾಲೆಗಳಲ್ಲಿ ಶಿಕ್ಷಕ ಶಿಕ್ಷಕಿಯರು ಎಷ್ಟು ಮುಖ್ಯವೋ, ಶಾಲೆಯ ಎಲ್ಲಾ ಕೆಲಸ ಮಾಡುವ ಅಟೆಂಡರ್, ಆಯಾಗಳು ಅಷ್ಟೇ ಮುಖ್ಯ. ಅಟೆಂಡರ್ ಆಯಾಗಳಿಲ್ಲದಿದ್ದರೆ ಶಾಲೆಯಲ್ಲಿ ಎಲ್ಲಾ ಮೆಮೋ ನೋಟಿಸ್‌ಗಳು ಇಡೀ ಶಾಲೆಗೆ ಗೊತ್ತಾಗಲು ಒಂದು ಗಂಟೆ ಬೇಕು ಮತ್ತು ಶಾಲೆಯಲ್ಲಿ ಟೀಚರ್‌ಗಳಿಲ್ಲದಿದ್ದಾಗ ಮಕ್ಕಳನ್ನು ಅಕ್ಕರೆಯಿಂದ ನೋಡಿಕೊಂಡು ಶಾಲೆ ಸ್ವಚ್ಛವಾಗಿರಿಸುವುದು ಆಯಾಗಳು. ಹೀಗೆಯೇ ಎಲ್ಲಾ ಕೆಲಸ ಮಾಡುವವರಿಗೂ ನಾವು ಮಹತ್ವ ಕೊಡಬೇಕು. ಎಲ್ಲಾ ಕೆಲಸ ಮಾಡುವವರಿಗೂ ಗೌರವ ಕೊಟ್ಟಾಗ ಆ ಕೆಲಸ ಮಾಡುವವರೂ ನಮಗೆ ಅದಕ್ಕಿಂತ ದುಪ್ಪಟ್ಟು ಗೌರವ ಕೊಡುತ್ತಾರೆ. ಜಗತ್ತಿನ ಕೆಲವು ದೇಶಗಳಲ್ಲಿ ಎಲ್ಲಾ ಕೆಲಸಗಳನ್ನೂ ಸಮಾನಭಾವದಲ್ಲಿ ನೋಡುತ್ತಿದ್ದರೂ ಸಹ ನಮ್ಮ ಭಾರತದಲ್ಲಿ ಎಲ್ಲಾ ಕೆಲಸ ಮಾಡುವವರಿಗೆ ಸಮಾನತೆ ಸಿಗುತ್ತಿಲ್ಲ ಎಂಬುದು ನನ್ನ ಭಾವನೆ. ಇದೂ ಸಹ ನಮ್ಮ ದೇಶ ಹಿಂದುಳಿಯುವುದರಲ್ಲಿ ಒಂದು ಕಾರಣ ಎಂದೇ ಹೇಳಬಹುದು. ಸದ್ಯದ ಜಗತ್ತಿನಲ್ಲಿ ನಾವು ಎಲ್ಲರಿಗೂ ಸಮಾನ ಸಂಬಳ ಕೊಡುವಂತೆ ಕೇಳಲಾಗುವುದಿಲ್ಲ. ಆದರೆ ಒಬ್ಬರಿಗೆ ಲಕ್ಷ ಸಂಬಳ ಇನ್ನೊಬ್ಬರಿಗೆ ಸಾವಿರ ರೂಪಾಯಿ ಸಂಬಳ ಕೊಡುವ ವ್ಯವಸ್ಥೆ ಸರಿಯಲ್ಲ. ಎಲ್ಲರಿಗೂ ಜೀವನ ಮಾಡುವಷ್ಟು ಸಂಬಳ ಕೊಡುವಂತಹ ದಿನಗಳು ಬರಬೇಕು ಎನ್ನುವುದು ನನ್ನ ಕನಸು.

**ಸ್ವಚ್ಛ ಭಾರತದ ಕನಸು**

ಸ್ವಚ್ಛ ಭಾರತ ಆಂದೋಲನದ ಬಗ್ಗೆ ನಿಮಗೆಲ್ಲಾ ತಿಳಿದಿದೆ. ಈ ಸ್ವಚ್ಛ ಭಾರತ ಆಂದೋಲನವನ್ನು ಇಡೀ ಭಾರತದೆಡೆ ವ್ಯಾಪಿಸಿದರೆ ಭಾರತ ನಂಬರ್ ಒನ್ ಸ್ವಚ್ಛ ದೇಶವಾಗುವುದರಲ್ಲಿ ಸಂದೇಹವಿಲ್ಲ. ಇನ್ನು ನಾವು ಹೇಗೆ ಸ್ವಚ್ಛ ಭಾರತವನ್ನು ಮೈಗೂಡಿಸಿಕೊಳ್ಳುವುದೆಂದರೆ ಕೇಳಿ, ನಾವು ಬೇರೆ ಯಾರಿಗೂ ಸ್ವಚ್ಛ ಭಾರತವನ್ನು ಕಲಿಸಲು ಹೋಗುವುದು ಬೇಡ. ನಾವು ತಿನ್ನುವ ಚಾಕಲೇಟಿನ ರಾಪರನ್ನು ಡಸ್ಟ್ ಬಿನ್ ನಲ್ಲಿಯೇ ಹಾಕೋಣ. ಊಟ ಮಾಡುತ್ತ ಅನ್ನ ಕೆಳಗೆ ಬಿದ್ದರೆ ಅದನ್ನು ತೆಗೆದುಕೊಂಡು ಹೋಗಿ ಡಸ್ಟ್‌ಬಿನ್‌ನಲ್ಲಿ ಹಾಕೋಣ. ಆನಂತರ ನಮ್ಮ ಮನೆಯ ಕಸವನ್ನು ರಸ್ತೆಬದಿಯಲ್ಲಿ ಹಾಕುವುದು ಬೇಡ, ಕಸದ ಗಾಡಿಗೆ ಕೊಡೋಣ ಅಥವಾ ನಮ್ಮ ಮನೆಯ ಹೊರಗಿರುವ ದೊಡ್ಡ ಡಸ್ಟ್ ಬಿನ್‌ನಲ್ಲಿ ಹಾಕೋಣ. ಹೀಗೆ ಈ ವಿಧಾನಗಳನ್ನು ಹಾಗೂ ಇನ್ನೂ ಅನೇಕ ವಿಧಾನಗಳನ್ನು ಅನುಸರಿಸಿ ನಾವು ಸ್ವಚ್ಛವಾಗಿದ್ದರೆ ನಮ್ಮನ್ನು ನೋಡಿ ಇನ್ನೊಬ್ಬರು ಕಲಿಯಬಹುದು. ಅವರನ್ನು ನೋಡಿ ಮತ್ತಿಬ್ಬರು ಕಲಿಯಬಹುದು.

**ಕಡು ಹಸಿರು ಭಾರತದ ಕನಸು**

ಅದು ಯಾಕೋ ಗೊತ್ತಿಲ್ಲ, ನನಗೆ ಪರಿಸರ ಎಂದರೆ ಬಹಳ ಇಷ್ಟ. ಪರಿಸರ ನೋಡುವುದು, ಪರಿಸರದಲ್ಲಿ ನಡೆದಾಡುವುದು, ಅದನ್ನು ಅನುಭವಿಸುವುದು ನನಗೆ ಏನೋ ಒಂದು ರೀತಿಯ ಖುಷಿ ಕೊಡುತ್ತದೆ. ಅದಕ್ಕೆ ನನಗೆ ಪ್ರವಾಸ ಹೋಗುವುದೆಂದರೆ ಬಹಳ ಇಷ್ಟ. ಪ್ರವಾಸ ಹೋಗುವ ಸ್ಥಳಕ್ಕಿಂತ, ಪ್ರವಾಸ ಹೋಗುವಾಗ ಮಧ್ಯೆ ಸಿಗುವ ಕಾಡುಗಳು, ಹಳ್ಳಿಗಳನ್ನು ನೋಡಿಕೊಂಡು ಹೋಗುವುದೇ ಒಂದು ಚೆಂದದ ಅನುಭವ !! ಆದರೆ ಇತ್ತೀಚೆಗೆ ನಮ್ಮ ಸುತ್ತಮುತ್ತಲಿನ ಪರಿಸರ ಹಾಳಾಗುತ್ತಿದೆ. ತಂಪುಗಾಳಿ ಹಾಗೂ ನೆರಳನ್ನು ನೀಡುವ ಮರಗಳನ್ನು ಈಗ ಎಲ್ಲೆಡೆಯಿಂದ ಕಡಿಯಲಾಗುತ್ತಿದೆ. ಎಲ್ಲೆಡೆ ಮಾನವ ಕಟ್ಟಡಗಳನ್ನು, ಕಾರ್ಖಾನೆಗಳನ್ನು ಕಟ್ಟುವ ಸಲುವಾಗಿ ಅಥವಾ ರಸ್ತೆಗಳನ್ನು ಅಗಲಿಸುವ ಅಥವಾ ನಿರ್ಮಾಣದ ಸಲುವಾಗಿ ಮರಗಳನ್ನು ಕಡಿಯುತ್ತಿದ್ದಾನೆ! ಇದರಿಂದಾಗಿ ಹಾನಿಯಾಗುತ್ತದೆ ಎಂದು ಗೊತ್ತಿದ್ದರೂ ಈ ಕಾರ್ಯವನ್ನು ಮುಂದುವರೆಸಿಕೊಂಡು ಹೋಗುತ್ತಿರುವುದು ಬಹಳ ವಿಷಾದದ ಸಂಗತಿಯಾಗಿದೆ. ಹಲವೆಡೆ ವಿರೋಧವಿದ್ದರೂ ಮರಗಳನ್ನು ಕಡಿಯುತ್ತಿದ್ದಾರೆ. ಅದನ್ನು ವಿರೋಧ ಮಾಡಿದವರನ್ನೂ ಲೆಕ್ಕಿಸದೆ ಈ ಕಾರ್ಯ ಮುಂದುವರೆಯುತ್ತಿದೆ. ನನಗೂ ಸಹ ಒಮ್ಮೆ ಈ ರೀತಿಯ ಅನುಭವವಾಗಿತ್ತು.

ನಮ್ಮ ಮನೆಯ ಎದುರೇ ಆರಕ್ಷಕ ಠಾಣೆಯಿದೆ. ಅಂದರೆ ಪೊಲೀಸ್ ಸ್ಟೇಷನ್ ಇದೆ. ಒಂದೆರಡು ವರ್ಷಗಳ ಹಿಂದೆ ಅದರಲ್ಲಿ ೨ ಬೃಹತ್ ಮರಗಳನ್ನು ಕಡಿಯಲು ಯೋಜನೆ ಹಾಕಿದ್ದರು. ಅದನ್ನು ನೋಡಿದ ನನಗೆ ಆ ಮರವನ್ನು ನೋಡಿ ಪಾಪ ಎನ್ನಿಸಿತು. ನಮ್ಮ ಮನೆಗೆ ನೆರಳನ್ನು ನೀಡುತ್ತಿದ್ದ ಆ ಮರವನ್ನು ಕಡಿಯಲು ಪ್ಲಾನ್ ಮಾಡಿದ್ದರು. ಅದು ಪೊಲೀಸ್ ಕಾಂಪೌಂಡ್ ಒಳಗೆ ಇದ್ದುದರಿಂದ ಅದನ್ನು ಕಡಿದು ಹೊಸ ಪೊಲೀಸ್ ಸ್ಟೇಷನ್‌ನ್ನು ಮರದ ಜಾಗದಲ್ಲಿ ಕಟ್ಟಲು ಯೋಜನೆ ಹಾಕಿದ್ದರು. ಇದಕ್ಕಾಗಿ ನಾನು ಆ ಸಮಯದ ಶಿವಮೊಗ್ಗದ ಪೊಲೀಸ್ ವರಿಷ್ಠಾಧಿಕಾರಿಗಳಿಗೆ ಹೋಗಿ ಒಂದು ಮನವಿಯನ್ನು ಕೊಟ್ಟೆ. ಅವರು ಮರ ಕಡಿಯುವುದನ್ನು ನಿಲ್ಲಿಸುವುದಾಗಿ ಹೇಳಿದರು. ಆದರೆ ಒಂದೆರಡು ದಿನದ ನಂತರ ನಮ್ಮ ಮೊಬೈಲಿಗೆ ಕರೆ ಮಾಡಿ ಕಟ್ಟಡ ಕಟ್ಟುವುದನ್ನು ನಿಲ್ಲಿಸಲಾಗುವುದರಿಂದ ಮರ ಕಡಿಯಲೇಬೇಕಾಗಿದೆ. ಆ ಮರದ ಬದಲು ೧೦೦ ಗಿಡಗಳನ್ನು ನೆಟ್ಟು ಬೆಳೆಸುವುದಾಗಿ ಹೇಳಿದರು. ಅವರು ೧೦೦ ಗಿಡಗಳನ್ನು ನೆಟ್ಟ ಬಗ್ಗೆ ಯಾವ ಮಾಹಿತಿಯೂ ಇಲ್ಲ.

ನಮ್ಮ ಗಾಜನೂರು ಹಾಗೂ ಆಗುಂಬೆ ನಡುವಿನ ರಸ್ತೆಯಲ್ಲಿ ವಾಹನಗಳು ವೇಗವಾಗಿ ಚಲಿಸುವಂತೆ ಮಾಡುವುದಕ್ಕಾಗಿ ೩೫೦೦ ಮರಗಳನ್ನು ಕಡಿದಿದ್ದಾರೆ. ಆಗಲೂ ನಾನು ಈ ಮರಗಳನ್ನು ಕಡಿಯಬಾರದೆಂದು ಅರಣ್ಯ ಇಲಾಖೆಗೆ ಮನವಿ ಕೊಟ್ಟಿದ್ದೆ. ಆದರೂ ಕಡಿದರು. ನನ್ನ ಊರು ತೀರ್ಥಹಳ್ಳಿ ತಾಲ್ಲೂಕು ಹರಳಿಮಠ,

ನಾನು ಬಹಳ ಸಲ ಇಲ್ಲಿಗೆ ಹೋಗುತ್ತಿರುತ್ತೇನೆ. ಶಿವಮೊಗ್ಗದಿಂದ ತೀರ್ಥಹಳ್ಳಿಗೆ ಹೋಗಲು ಒಂದೂಕಾಲು ಗಂಟೆ ಸಾಕು. ರಸ್ತೆ ಅಗಲ ಮಾಡಿ ಇನ್ನೂ ಬೇಗ ಹೋಗುವುದೆಂದರೆ ಅದು ಅಪಘಾತಗಳಿಗೆ ಕಾರಣವಾಗುತ್ತದೆ. ವಾಹನ ಚಲಾಯಿಸುವವರು ಗಾಡಿಯನ್ನು ನಿಧಾನಕ್ಕೆ ಓಡಿಸಿದರೆ ಏನೂ ತೊಂದರೆಯಾಗುವುದಿಲ್ಲ. ಆದರೆ ಮರಗಳನ್ನು ಕಡಿದರೆ ಮಾನವ ಅದರ ಪರಿಣಾಮವನ್ನು ಮತ್ತೆ ಎದುರಿಸಬೇಕಾಗುತ್ತದೆ.

ಈಗ ಅನೇಕ ನಗರಗಳನ್ನು ಸ್ಮಾರ್ಟ್ ಸಿಟಿ ಮಾಡುತ್ತಿದ್ದಾರೆ. ಸ್ಮಾರ್ಟ್ ಸಿಟಿ ಎಂದರೆ ಸಾವಿರಾರು ಮರಗಳನ್ನು ಕಡಿಯುವುದೇ? ಸ್ಮಾರ್ಟ್ ಸಿಟಿ ಎಂದರೆ ಟೆಕ್ನಾಲಜಿಯಲ್ಲಿ ಮಾತ್ರ ಮುಂದೆ ಹೋಗುವುದು ಎಂದಲ್ಲ. ಎಲ್ಲಾ ವಿಷಯಗಳಲ್ಲಿ ಮುಂದೆ ಹೋಗುವುದು. ಟೆಕ್ನಾಲಜಿಗೆ ಕೊಟ್ಟ ಪ್ರಾಮುಖ್ಯತೆ ಪರಿಸರ ಹಾಗೂ ಪ್ರಕೃತಿಗೆ ಸಹ ನೀಡಬೇಕು.

ನಾನು ಈ ವಿಷಯವನ್ನು ಏಕೆ ಇಲ್ಲಿ ಪ್ರಸ್ತಾಪಿಸಿದೆ ಎಂದರೆ ನಾವು ಮಕ್ಕಳಿಗೆ ಪ್ರಕೃತಿಯ ಮಡಿಲಲ್ಲಿ ಬೆಳೆಯುವುದು ಬಹಳ ಅಗತ್ಯವಾಗಿರುತ್ತದೆ. ನಾವು ಚಿಕ್ಕಂದಿನಿಂದಲೇ ಪ್ರಕೃತಿಯ ಮಧ್ಯೆ ಬೆಳೆದರೆ ನಮಗೆ ಪ್ರಕೃತಿಯ ಬಗ್ಗೆ ಪ್ರೀತಿಯೂ ಸಹ ಹೆಚ್ಚಾಗುತ್ತದೆ. ಬರೀ ಕಟ್ಟಡಗಳ ಮಧ್ಯೆ ಇದ್ದರೆ ಪ್ರಾಕೃತಿಕ ಸೌಂದರ್ಯವನ್ನು ನಾವು ಸವಿಯಲಾಗುವುದಿಲ್ಲ. ಹೀಗೆ ಆಗದೆ ಇದ್ದಾಗ ಮಕ್ಕಳಿಗೆ ಪ್ರಕೃತಿಯ ಬೆಲೆ ಹಾಗೂ ಅದರ ಸೌಂದರ್ಯ ತಿಳಿಯುವುದಿಲ್ಲ. ಕಟ್ಟಡಗಳೇ ಸರ್ವಸ್ವ ಎಂದುಕೊಂಡು ಅವರು ಮುಂದೆ ಹಿರಿಯರಾದ ಮೇಲೆ ಪ್ರಕೃತಿಗೆ ಬೆಲೆ ನೀಡುವುದಿಲ್ಲ. ಇದೇ ಕಾರಣಕ್ಕಾಗಿ ಈಗ ಮರಗಳು ಕಾಣೆಯಾಗುತ್ತಿರುವುದು ಮತ್ತು ಮನುಷ್ಯನಿಗೆ ಪ್ರಕೃತಿಯ ಬೆಲೆ ತಿಳಿಯದೇ ಇರುವುದು. ಪ್ರಕೃತಿಯ ಬುನಾದಿಯೇ ಇಲ್ಲದಿರುವಾಗ ಹೀಗಾಗುವುದು ಸಹಜ. ನಾವು ಮರವನ್ನು ಉಳಿಸಲಿಲ್ಲ ಎಂದರೆ ಇಂದಿನ ದೊಡ್ಡವರೇ ಅದಕ್ಕೆ ಕಾರಣರಾಗುತ್ತಾರೆ. ಆದುದರಿಂದ ನಾನು ಹಿರಿಯರಲ್ಲಿ ಕೇಳಿಕೊಳ್ಳುವುದು ಏನೆಂದರೆ ದಯವಿಟ್ಟು ಮಕ್ಕಳಿಗೆ ಪ್ರಕೃತಿಯ ಮಹತ್ವವನ್ನು ತಿಳಿಸಿಕೊಡಿ ಹಾಗೂ ಪ್ರಕೃತಿಯ ಜೊತೆ ಸಮಯ ಕಳೆಯುವಂತೆ ಅವಕಾಶ ಮಾಡಿಕೊಡಿ. ಮರಗಳನ್ನು ಕಡಿಯುವುದನ್ನು ನಿಲ್ಲಿಸಿ, ಕಡು ಹಸಿರು ಜಗತ್ತು ನನ್ನ ಕನಸು.

ಪ್ರೀತಿಯ ಕನ್ನಡಾಭಿಮಾನಿಗಳೇ, ನನಗೆ ಈ ಸಮಾಜದ ಕುರಿತಂತೆ ಇನ್ನೂ ಹಲವಾರು ಕನಸುಗಳಿವೆ. ಆದರೆ ಸಮಯದ ಮಿತಿಯಿಂದಾಗಿ ನನ್ನ ಹತ್ತು ಕನಸುಗಳನ್ನು ಮಾತ್ರ ನಿಮ್ಮೊಂದಿಗೆ ಹಂಚಿಕೊಂಡಿದ್ದೇನೆ. ನನ್ನ ಈ ಕನಸುಗಳು ನಿಮ್ಮ ಕನಸುಗಳೂ ಕೂಡ ಹೌದು ಎಂದು ನಾನು ಭಾವಿಸಿದ್ದೇನೆ. ಈ ಕನಸುಗಳು ನನಸಾಗಲು ನಾವೆಲ್ಲರೂ ಕೆಲಸ ಮಾಡೋಣ ಎಂದು ಹೇಳುತ್ತಾ ನಿಮಗೆಲ್ಲರಿಗೂ ಮತ್ತೊಮ್ಮೆ ವಂದಿಸುತ್ತಾ ನನ್ನ ಮಾತುಗಳಿಗೆ ವಿರಾಮ ಹೇಳುತ್ತೇನೆ.

## ಗೋಷ್ಠಿ - ೧

## ಕರ್ನಾಟಕ ಕಲಾ ಜಗತ್ತು

# ಕನ್ನಡ ರಂಗಭೂಮಿ

**ಡಾ. ನಾ.ದಾಮೋದರ ಶೆಟ್ಟಿ**

ಭಾರತೀಯ ರಂಗಭೂಮಿಯ ಇತಿಹಾಸದಲ್ಲಿ ಕರ್ನಾಟಕದ ರಂಗಭೂಮಿ ತನ್ನದೇ ಆದ ಘನತೆಯನ್ನು ಕಾಯ್ದುಕೊಂಡು ಬಂದಿದೆ. ಕರ್ನಾಟಕವು ಜಾನಪದ ಕಲೆಗಳ ಸಮೃದ್ಧ ನೆಲೆ. ಶಾಸ್ತ್ರೀಯ ಸಂಗೀತ, ಜನಪದ ಸಂಗೀತ ಹಾಗೂ ಇತರ ಕಲೆಗಳೂ ಇಲ್ಲಿ ಆದಿಮ ಕಾಲದಿಂದಲೇ ಬೆಳೆದುಕೊಂಡು ಬಂದವು. ಕರ್ನಾಟಕದ ಕರಾವಳಿಯ ಯಕ್ಷಗಾನವು ನಿಜವಾದ ಕುರಿತೋದದವರ ಕಾವ್ಯ ಪ್ರಯೋಗಗಳ ಶಕ್ತಿಯನ್ನು ಆರ್ಜಿಸಿತ್ತು. ಇವೆಲ್ಲವುಗಳ ಮಧ್ಯೆ ಯುರೋಪಿನ ಸಂಸರ್ಗದಿಂದ ಹುಟ್ಟಿಕೊಂಡ ರಾಷ್ಟ್ರೀಯ ರಂಗಭೂಮಿಯು ಇಲ್ಲಿನ ಪ್ರಾದೇಶಿಕ ರಂಗಭೂಮಿಯ ಅನೇಕ ಅಂಶಗಳನ್ನು ಅಳವಡಿಸಿಕೊಂಡು ನಮ್ಮ ನಡುವೆ ಬೇರೂರತೊಡಗಿತು. ಚಂದ್ರಶೇಖರ ಕಂಬಾರರಂಥ ನಾಟಕಕಾರರು ವೃತ್ತಿರಂಗಭೂಮಿಯ ಪ್ರಸಿದ್ಧ ಜೋಕುಮಾರಸ್ವಾಮಿ, ಸಂಗ್ಯಾ ಬಾಲ್ಯಾದಂತಹ ನಾಟಕಗಳನ್ನು ಆಧುನಿಕ ರಾಷ್ಟ್ರೀಯ ರಂಗಭೂಮಿಯ ಪರಿಕಲ್ಪನೆಗೆ ಹೊಂದುವ ರೀತಿಯಲ್ಲಿ ಮರುರಚನೆ ಮಾಡಿದರು.

ರಾಷ್ಟ್ರೀಯ ರಂಗಭೂಮಿಯ ಭಾರತೀಯ ತವರಾದ ದೆಹಲಿಯ ನೇಷನಲ್ ಸ್ಕೂಲ್ ಆಫ್ ಡ್ರಾಮಾಕ್ಕೆ ಕರ್ನಾಟಕದ ಬಿ.ವಿ. ಕಾರಂತರು ಪ್ರವೇಶ ಮಾಡಿದ್ದೇ ಕನ್ನಡ ರಂಗಭೂಮಿಗೆ ವಿಶಿಷ್ಟವಾದೊಂದು ರಾಜಮಾರ್ಗವನ್ನು ತೆರೆದುಕೊಟ್ಟಿತು. ವೃತ್ತಿರಂಗಭೂಮಿಯನ್ನು ಅದಾಗಲೇ ಅರಗಿಸಿಕೊಂಡಿದ್ದ ಕಾರಂತರು ನಿರ್ದೇಶಿಸಿದ ನಾಟಕಗಳಲ್ಲಿ ಜಾನಪದವಿತ್ತು, ಕಂಪೆನಿಯಿತ್ತು, ರಾಷ್ಟ್ರೀಯತೆಯಿತ್ತು, ಅಂತಾರಾಷ್ಟ್ರೀಯತೆಯೂ ಇತ್ತು. ಒಟ್ಟಾರೆಯಾಗಿ ಕಾರಂತರ ನಾಟಕಗಳು ಉತ್ಸವದ ಕಳೆಯಿಂದಲೂ ವಸ್ತುವಿನ ವಿಡಂಬನೆಯಿಂದಲೂ ಯಕ್ಷಗಾನದ ಗತ್ತಿನಿಂದಲೂ ರಾಷ್ಟ್ರೀಯ ರಂಗಭೂಮಿಯ ವೈಜ್ಞಾನಿಕತೆಯಿಂದಲೂ ಕೂಡಿಕೊಂಡು ವಿಶಿಷ್ಟ ವಾದೊಂದು ರಂಗಸಂಗಮವನ್ನು ನಿರ್ಮಿಸಿತ್ತು.

ಅದಕ್ಕೂ ಪೂರ್ವದಲ್ಲಿ ಅಂದರೆ ನವೋದಯ ಕಾಲಘಟ್ಟದಲ್ಲಿ ಕನ್ನಡದ ಕೈಲಾಸಂ, ಆ ಬಳಿಕ ಶ್ರೀರಂಗರು ಯುರೋಪಿನ ರಂಗಭೂಮಿಯನ್ನು ಅಧ್ಯಯನ ಮಾಡಿ ಬಂದು ಅದನ್ನು ಕರ್ನಾಟಕದ ರಂಗಭೂಮಿಗೆ ಅಳವಡಿಸಿದರಾದರೂ ಅಂಥ ಯಶಸ್ಸನ್ನೇನೂ ಕಾಣಲಿಲ್ಲ. ಕೈಲಾಸಂ ಕೊಟ್ಟ ಟೊಳ್ಳುಗಟ್ಟಿಯಾಗಲೀ ಶ್ರೀರಂಗರು ಕೊಟ್ಟ ಹರಿಜನ್ವಾರವಾಗಲೀ ಆ ಕಾಲಕ್ಕೆ ವಸ್ತು ಹಾಗೂ ಆಶಯ ಪ್ರಧಾನವಾದ ನಾಟಕಗಳಾಗಿ ಅದ್ಭುತವಾದ ಹೊಸನೋಟಗಳನ್ನು ಕೊಟ್ಟಿದ್ದಂತೂ ನಿಜ. ಕೈಲಾಸಂ ನಾಟಕಗಳಲ್ಲಿನ ಕನ್ನಡಾಂಗ್ಲೊ ಸಂಭಾಷಣೆಗಳಾಗಲೀ ಶ್ರೀರಂಗರ ನಿರ್ದಿಷ್ಟ

'ರಂಗನಿಯಂತ್ರಣ'ಗಳಾಗಲೀ ಹೆಚ್ಚುಕಾಲ ಪ್ರೇಕ್ಷಕರ ಜೊತೆ ಬಾಳಲಿಲ್ಲ. ಆಯಾಕಾಲಕ್ಕೆ ಅವು ಶ್ರೇಷ್ಠವೆನಿಸಿಕೊಂಡ ಕಾರಣದಿಂದ ಕರ್ನಾಟಕದ ರಂಗಚರಿತ್ರೆಯಲ್ಲಿ ಇಂದಿಗೂ ಆ ನಾಟಕಗಳಿಗೆ ಸ್ಥಾನವಿದೆ. ನವೋದಯ ಕಾಲಘಟ್ಟದ ರಮ್ಯತೆಯನ್ನು ಮೀರಿದ ಸಾರ್ವಕಾಲಿಕ ಸತ್ಯಗಳನ್ನು ಬೆಳಕಿಗೆ ತರುವುದು ಕುವೆಂಪು, ಕಾರಂತ, ಮಾಸ್ತಿ ಮೊದಲಾದವರಿಗೆ ತಕ್ಕಮಟ್ಟಿಗೆ ಸಾಧ್ಯವಾಯಿತು. ಕುವೆಂಪು ಅವರ 'ಜಲಗಾರ', 'ಶೂದ್ರ ತಪಸ್ವಿ', ಕಾರಂತರ 'ಗರ್ಭಗುಡಿ', ಮಾಸ್ತಿಯವರ 'ಕಾಕನಕೋಟೆ'ಗಳಂತಹ ನಾಟಕಗಳನ್ನು ಇಂದಿಗೂ ಎಂದಿಗೂ ಸಕಾಲಿಕವೆಂದು ಒಪ್ಪಿಕೊಳ್ಳಲೇಬೇಕು. ಒಂದೆಂದರೆ ಆ ಕಾಲಘಟ್ಟವು ನಿರ್ದೇಶಕರ ಮಹತ್ವವನ್ನು ಸಾಬೀತುಗೊಳಿಸಿ ಕೊಂಡಿರಲಿಲ್ಲ. ನಾಟಕಗಳ ನಿಜವಾದ 'ರಂಗಶ್ರೀಮಂತಿಕೆ'ಯನ್ನು ಉದ್ದೀಪನ ಗೊಳಿಸುವುದಕ್ಕೆ ಎಪ್ಪತ್ತರ ದಶಕದ ಆದಿಯಲ್ಲಿ ಬಿ.ವಿ. ಕಾರಂತರಂತಹ ನಿರ್ದೇಶಕರೇ ಬರಬೇಕಾಯಿತು!

'ರಂಗ ಶ್ರೀಮಂತಿಕೆ' ಎನ್ನುವುದು ನಾಟಕದ ಅನಿವಾರ್ಯತೆಯೂ ಹೌದು, ಪ್ರೇಕ್ಷಕರ ಅನಿವಾರ್ಯತೆಯೂ ಹೌದು. ಒಂದೊಂದು ನಾಟಕವನ್ನು ಕೈಗೆತ್ತಿ ಕೊಂಡಾಗಲೂ ಕಾರಂತರು ಅದನ್ನು ಯಾವ ಚೌಕಟ್ಟಿನಲ್ಲಿಟ್ಟು ನೋಡಬಹು ದೆಂದು ಯೋಚಿಸುವರು. ಕಾರಂತರು ಕಂಪೆನಿ ನಾಟಕಗಳ ಮೂಲಕ ಹಾದು ಬಂದವರಾದ್ದರಿಂದ ಮುಂದೆ ದೆಹಲಿಯ ಎನ್.ಎಸ್.ಡಿ.ಯಲ್ಲಿ ತರಬೇತು ಪಡೆದರೂ ಅಲ್ಕಾಜಿಯವರ ರಾಷ್ಟ್ರೀಯ ರಂಗಭೂಮಿಯಲ್ಲಿ ಕೊಚ್ಚಿಹೋಗಲಿಲ್ಲ. ಕರ್ನಾಟಕದ ಹೆಚ್ಚಿನ ರಂಗಕರ್ಮಿಗಳು ದೆಹಲಿಯಿಂದ ರಂಗಪದವಿ ಪಡೆದು ಕರ್ನಾಟಕಕ್ಕೆ ಮರಳಿಬಂದಾಗ ಅವರು ರಾಷ್ಟ್ರೀಯ ರಂಗಭೂಮಿಯ ನಿರ್ದೇಶಕರಾದರೇ ಹೊರತು ಕರ್ನಾಟಕದ ಪ್ರಾದೇಶಿಕ ರಂಗಭೂಮಿಯ ನಿರ್ದೇಶಕರಾಗಲಿಲ್ಲ. ಕಾರಂತ, ಬಿ.ಜಯಶ್ರೀಯವರಂಥ ಕೇವಲ ಕೆಲವರು ಮಾತ್ರ ಇದಕ್ಕೆ ಅಪವಾದ. ರಂಗ ಸಂಗೀತದಲ್ಲಿ ಕಾರಂತರು ಗೈದ ದುಡಿಮೆ ನಿಮಿತ್ತವಾಗಿ ಕರ್ನಾಟಕದಲ್ಲಿ 'ರಂಗಸಂಗೀತ'ದ ಹೊಸ ಪರ್ವವೇ ನಿರ್ಮಾಣವಾಯಿತು. ಅದು ವೃತ್ತಿರಂಗಭೂಮಿ ಯನ್ನೂ ಜನಪದ ರಂಗಭೂಮಿಯನ್ನೂ ಇತರ ಆಧುನಿಕ ಆವಿಷ್ಕಾರಗಳನ್ನೂ ಬಳಸಿಕೊಂಡು ಜನ್ಮತಾಳಿತು. ಸರಳವೂ ನಾದಭರಿತವೂ ಭಾವಭರಿತವೂ ಆದ ಸಂಗೀತ ಕನ್ನಡ ರಂಗಭೂಮಿಗೆ ಒದಗಿಬಂತು.

ಕಾರಂತರ ಅಭಿರುಚಿಗೆ ಪೂರಕವಾಗಿ ಗಿರೀಶ್ ಕಾರ್ನಾಡ್, ಪಿ.ಲಂಕೇಶ್, ಜಡಭರತ ಹಾಗೇನೇ ಹಿಂದಿಯ, ಮರಾಠಿಯ ಮೋಹನ್ ರಾಕೇಶ್, ವಿಜಯ್ ತೆಂಡೂಲ್ಕರ್ ಮೊದಲಾದವರ ನಾಟಕಗಳೂ ಒದಗಿಬಂದವು. ಪು.ತಿ.ನ.ರ ಗೋಕುಲ ನಿರ್ಗಮನದಂತಹ ಗೀತರೂಪಕಗಳೂ ಅವರಿಗೆ ಇಷ್ಟವಾದುವು. ಕಾರಂತರ ಆಲೋಚನೆಗಳು ಪೌರಾಣಿಕ, ಚಾರಿತ್ರಿಕ, ಜನಪದೀಯ ಹಾಗೂ ಕಂಪೆನಿತ್ವಗಳ ಹಿನ್ನೆಲೆಯಿಂದ ಕೂಡಿದ್ದುದಾಗಿ ಸಮಕಾಲೀನ ನಾಟಕಕಾರರ ಆಲೋಚನೆಗಳಿಗೆ ಬಹುವಾಗಿ ಹೊಂದಿಕೊಂಡಿದ್ದುವು. ಅವರು ತಮ್ಮ ಪ್ರಾದೇಶಿಕತೆಯ ಕೈಚಳಕವನ್ನೂ

ಬೆರೆಸಿ, ಆಧುನಿಕ ರಂಗಭೂಮಿಗಾಗಿಯೇ ಕಂಡುಕೊಂಡ ರಂಗಧಾಟಿಗಳನ್ನೂ ದೇಸೀ ಅಡವುಗಳನ್ನೂ ಬಳಸಿ, ಆಪ್ಯಾಯಮಾನ ರಂಗಗೀತೆಗಳನ್ನೂ ಅಳವಡಿಸಿ, ವಾತಾವರಣಕ್ಕೆ ಹೊಂದುವ ಪ್ರಚ್ಛನ್ನ ಬೆಳಕನ್ನೂ ಬಳಸಿ ಪರಿಪೂರ್ಣ ನಾಟಕ ಗಳನ್ನು ಸಿದ್ಧಪಡಿಸಿದರು. ಇವೆಲ್ಲವೂ ಆಧುನಿಕ ರಂಗಭೂಮಿಯ ಬೆಳವಣಿಗೆಯ ಮೊದಲ ಮೆಟ್ಟಿಲುಗಳಾದುವು.

* ಮುಂದುವರಿದು, ಆಧುನಿಕ ಕನ್ನಡ ರಂಗಭೂಮಿಗೆ ಪ್ರಸನ್ನ, ಸಿಜಿಕೆ, ಜಂಬೆ, ಆರ್.ನಾಗೇಶ, ಜಯತೀರ್ಥ ಜೋಷಿ, ಬಸವಲಿಂಗಯ್ಯ, ಸುರೇಶ ಆನಗಳ್ಳಿ, ನಟರಾಜ ಹೊನ್ನವಳ್ಳಿ, ಅಶೋಕ್ ಬಾದರದಿನ್ನಿಯವರಂಥ ನಿರ್ದೇಶಕರೂ

*ಸಿ.ಆರ್. ಸಿಂಹ, ಶಂಕರನಾಗ್, ಉಮಾಶ್ರೀ, ಮೈಕೋ ಸತ್ಯ, ಸತ್ಯಸಂಧ, ನಟರಾಜ ಏಣಗಿ, ಲಕ್ಷ್ಮೀ ಚಂದ್ರಶೇಖರ್, ಅರುಂಧತಿ ನಾಗ್, ಬಿ. ಜಯಶ್ರೀ, ಹುಲಿಗೆಪ್ಪ ಕಟ್ಟಿಮನಿ, ಕಾಸರಗೋಡು ಚಿನ್ನಾರಂತಹ ನಟನಟಿಯರೂ

*ಚಂದ್ರಶೇಖರ ಕಂಬಾರ, ಚಂದ್ರಶೇಖರ ಪಾಟೀಲ, ಟಿ.ಎನ್. ಸೀತಾರಾಮ್, ಎಚ್.ಎಸ್. ಶಿವಪ್ರಕಾಶ್, ಪ್ರಸನ್ನ, ವೆಂಕಟೇಶಮೂರ್ತಿ, ವೇಣುಗೋಪಾಲ ಕಾಸರಗೋಡು, ಕೆ.ವೈ.ನಾರಾಯಣಸ್ವಾಮಿ, ಕೆ.ವಿ.ಅಕ್ಷರ, ಡಿ.ಎಸ್. ಚೌಗಲೆ, ಬಿ.ಸುರೇಶ, ರಾಮನಾಥ್ ಮೊದಲಾದ ನಾಟಕಕಾರರೂ ಒದಗಿಬಂದರು.

*ವಿ.ರಾಮಮೂರ್ತಿ, ಶ್ರೀನಿವಾಸ್ ಜಿ. ಕಪ್ಪಣ್ಣ, ಮುದ್ದಣ್ಣ ಮೊದಲಾದ ರಾಷ್ಟ್ರಮಟ್ಟದ ಬೆಳಕಿನ ತಜ್ಞರೂ ಮುನಿರಂಗಪ್ಪ, ಎ.ಎಸ್. ಮೂರ್ತಿ, ಕೆ.ವಿ.ಸುಬ್ಬಣ್ಣ, ಕಪ್ಪಣ್ಣ, ನಾಗರಾಜಮೂರ್ತಿ, ಶಶಿಧರ್ ಭಾರಿಘಾಟ್, ಬಸವಲಿಂಗಯ್ಯ ಮೊದಲಾದ ರಂಗಸಂಘಟಕರೂ

*ವೆಂಕಟಸುಬ್ಬಯ್ಯ, ಸಿ.ಜಿ.ಕೆ. ಶಶಿಧರ ಅಡಪ, ಪ್ರಮೋದ್ ಶಿಗ್ಗಾಂವ್, ಮಾಲತೇಶ ಬಡಿಗೇರ, ದಿನೇಶ ಮಂಗಳೂರು, ದ್ವಾರಕಿ ಮೊದಲಾದ ರಂಗ ವಿನ್ಯಾಸಕರೂ

*ಚೀನಿ, ಗಜಾನನ ಟಿ, ನಾಯಕ್, ರಾಮಚಂದ್ರ ಹಡಪದ್, ರಾಜಗುರು, ಪ್ರವೀಣ್ ಡಿ. ರಾವ್ ಮೊದಲಾದ ಸಂಗೀತ ನಿರ್ದೇಶಕರೂ ಕನ್ನಡ ರಂಗಭೂಮಿ ಯನ್ನು ರಾಷ್ಟ್ರಮಟ್ಟದಲ್ಲಿ ಬಿಂಬಿಸಿದ್ದಾರೆ.

ಇವರು ಪ್ರಾತಿನಿಧಿಕ ವ್ಯಕ್ತಿಗಳೇ ಹೊರತು ಇವರಷ್ಟೇ ಅಲ್ಲ; ಇಂತಹ ಅನೇಕಾನೇಕ ಹೆಸರುಗಳು ನಮ್ಮ ಕನ್ನಡ ರಂಗಭೂಮಿಯನ್ನು ಶ್ರೀಮಂತಗೊಳಿಸುತ್ತಲಿವೆ. ಮೈಸೂರಿನ ರಂಗಾಯಣದ ಪ್ರತಿಯೊಬ್ಬ ಕಲಾವಿದರೂ ಒಬ್ಬೊಬ್ಬ ಮರಿ ಕಾರಂತರಾಗಿ ರೂಪುಗೊಂಡಿದ್ದಾರೆ. ಧಾರವಾಡ, ಶಿವಮೊಗ್ಗ ಮುಂತಾದ ಕಡೆಯ ರಂಗಾಯಣಗಳೂ ದೇಶದ ಗಮನ ಸೆಳೆಯುವ ಪ್ರಯತ್ನದಲ್ಲಿವೆ. ಕರ್ನಾಟಕ ನಾಟಕ ಅಕಾಡೆಮಿ ರಂಗಭೂಮಿಯನ್ನು ವಿಕೇಂದ್ರೀಕರಿಸುವ

ನಿಟ್ಟಿನಲ್ಲಿ ಅನೇಕ ಮಹತ್ವದ ಹೆಜ್ಜೆಗಳನ್ನಿರಿಸಿದೆ. ಹೆಗ್ಗೋಡಿನ ನೀನಾಸಂ ಕಳೆದ ಮೂರು ದಶಕಗಳ ಅಹರ್ನಿಶಿ ಪ್ರಯತ್ನದಿಂದ ರಾಜ್ಯದಲ್ಲೇ



ಅತ್ಯುತ್ತಮ ರೆಪರ್ಟರಿ ಅನ್ನಿಸಿಕೊಂಡಿದೆ. ತುಮರಿಯ ಕಿನ್ನರ ಮೇಳವಾಗಲೀ ಸಾಣೆಹಳ್ಳಿಯ ಶಿವಸಂಚಾರವಾಗಲೀ ಕುಂದಾಪುರದ ರಂಗ ಅಧ್ಯಯನ ಕೇಂದ್ರವಾಗಲೀ ಎನ್.ಎಸ್.ಡಿ.ಯ ಬೆಂಗಳೂರು ಘಟಕವಾಗಲೀ ರಂಗಕೈಂಕರ್ಯದಲ್ಲಿ ತಮ್ಮ ಅಸ್ತಿತ್ವವನ್ನು ಈಗಾಗಲೇ ಸ್ಥಾಪಿಸಿವೆ. ಉಡುಪಿಯ ರಂಗಭೂಮಿ ಕಳೆದ ಮೂರು ದಶಕಗಳಿಂದ ರಾಜ್ಯಮಟ್ಟದ ನಾಟಕ ಸ್ಪರ್ಧೆ ನಡೆಸುತ್ತಿದೆ. ಹಲವಾರು ರಂಗತಂಡಗಳು ರಾಜ್ಯಮಟ್ಟದಲ್ಲಿ ನಾಟಕ ರಚನಾ ಸ್ಪರ್ಧೆಗಳನ್ನು ಆಯೋಜಿಸುತ್ತಲಿವೆ. ರಾಜ್ಯದ ವಿವಿಧ ಭಾಗಗಳಲ್ಲಿ ರಂಗ ತರಬೇತಿ ಶಿಬಿರಗಳು, ನಾಟಕದ ತಯಾರಿ, ಉತ್ಸವಗಳು ನಡೆಯುತ್ತಲೇ ಇವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕಳೆದ ವರ್ಷ ಮಹಿಳಾ ಮತ್ತು ಮಕ್ಕಳ ಮೇಲಿನ ದೌರ್ಜನ್ಯದ ಕುರಿತಾದ ನಾಟಕಗಳನ್ನು ರಚಿಸುವ, ರಂಗಕ್ಕೆ ಅಣಿಗೊಳಿಸುವ ಹಾಗೂ ರಾಜ್ಯಾದ್ಯಂತ ಪ್ರದರ್ಶಿಸುವ ಬಹುದೊಡ್ಡ ಯೋಜನೆಯನ್ನು ಅನುಷ್ಠಾನಗೊಳಿಸಿದೆ. ಅದು ಈ ವರ್ಷಕ್ಕೂ ಮುಂದುವರಿದಿದೆ. ಆ ಮೂಲಕ ಅನೇಕ ನಟರು, ನಾಟಕಕಾರರು ಹಾಗೂ ನಿರ್ದೇಶಕರು ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದಾರೆ.

ತುಮಕೂರು ವಿಶ್ವವಿದ್ಯಾಲಯದ ಅನುಮೋದನೆಯೊಂದಿಗೆ ಈ ವರ್ಷದಿಂದ ನಾಟಕದ ಡಿಗ್ರಿ ತರಗತಿಯನ್ನು ಗುಬ್ಬಿಯಲ್ಲಿ ಪ್ರಾರಂಭಿಸಲು ಖ್ಯಾತ ರಂಗಕರ್ಮಿ ಬಿ.ಜಯಶ್ರೀ ಅವರು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ರೂಪಿಸಿ ಪೂರಕ ವ್ಯವಸ್ಥೆಗಳನ್ನು ಮಾಡಿದ್ದರು. ಹಿಂದಿನ ವೈಸ್ ಚಾನ್ಸೆಲ್ಲ ಮುತುವರ್ಜಿ ವಹಿಸಿ ಅದಕ್ಕೆ ಅನುಮೋದನೆಯನ್ನೂ ನೀಡಿದ್ದರು. ಆದರೆ ಪ್ರಸ್ತುತ ಕುಲಪತಿಯವರು ಬಹುದೊಡ್ಡ ಮೊತ್ತವನ್ನು ಕಟ್ಟಿಸಿಕೊಳ್ಳಲು ಹೊರಡಿಸಿದ ಆದೇಶದಿಂದಲಾಗಿ ಇಡಿಯ ರಂಗಪ್ರಯತ್ನವನ್ನೇ ಮೂಲೆಪಾಲಾಗಿಸಿದ್ದಾರೆ. ಇದು ನಿಜವಾಗಿಯೂ ಖಂಡನೀಯ. ಈ ಕುರಿತು ತುಮಕೂರು ವಿ.ವಿ.ಯ ಕುಲಪತಿಗಳು ಮರುಚಿಂತನೆ ನಡೆಸಲೇಬೇಕು.

ಇಷ್ಟರಲ್ಲಿ ಎಲ್ಲವೂ ಆಗಿಬಿಟ್ಟಿತು ಎಂದಲ್ಲ. ಕರ್ನಾಟಕಕ್ಕೆ ರಂಗ ಅಧ್ಯಯನ ಕೇಂದ್ರಗಳು ಇನ್ನಷ್ಟು ಬೇಕು. ಇನ್ನಷ್ಟು ರಂಗಭೂಮಿಯ ಸಾಧ್ಯತೆಯ ಕಡೆಗೆ ನಾವು ಗಮನ ಹರಿಸಬೇಕು. ಪ್ರಾಥಮಿಕ, ಪ್ರೌಢಶಾಲಾ ಮಟ್ಟದಲ್ಲಿ ರಂಗಭೂಮಿಯನ್ನು ಪಠ್ಯದ ಭಾಗವಾಗಿ ಕಲಿಸುವ ಕ್ರಮವನ್ನು ಸರಿಯಾದ ನಿಟ್ಟಿನಲ್ಲಿ ಅನುಷ್ಠಾನ ಗೊಳಿಸಬೇಕು. ಪಿ.ಯು. ಹಾಗೂ ಪದವಿ ತರಗತಿಗಳಲ್ಲಿ ನಾಟಕವನ್ನು ಐಚ್ಛಿಕವಾಗಿ ಕಲಿಸುವ ವ್ಯವಸ್ಥೆ ಗಟ್ಟಿಯಾಗಿ ಜಾರಿಗೆ ಬರಬೇಕು. ನಾಟಕ ಕಲೆ ಪತ್ಯೇತರವಾಗಿ ಕಲಿಸಲ್ಪಡಬೇಕಾದ ವಿಷಯವಲ್ಲ.

ಕರ್ನಾಟಕದಲ್ಲಿ ವಿದ್ಯಾರ್ಥಿಗಳಿಗಾಗಿಯೇ ಕಲೋತ್ಸವ ಹಾಗೂ ಪ್ರತಿಭಾಕಾರಂಜಿ ಗಳೆಂಬ ಎರಡು ಮಹತ್ವದ ರಾಜ್ಯಮಟ್ಟದ ಕಾರ್ಯಕ್ರಮಗಳಿವೆ. ನಾಟಕ ಅದರ ಅವಿಭಾಜ್ಯ ಅಂಗ ನಾಟಕ ಸಿದ್ಧಪಡಿಸಿ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಬೇಕು. ನಾಟಕ ಕಲಿಕೆಗೆ ಅವರು ಯಾರನ್ನು ಆಶ್ರಯಿಸಬೇಕು? ಜಿಲ್ಲೆಗೆ ಒಂದಿಬ್ಬರು ಅಧ್ಯಾಪಕರಿದ್ದಾರೆ ಎಂದರೆ ಅದು ತೇಪೆಯ ಮಾತಾಗುತ್ತದೆ. ಇದನ್ನು ಗಮನಿಸಿದಾಗ ನಮ್ಮ ಸರಕಾರ ಶಾಲಾಮಟ್ಟದಲ್ಲೂ



ರಂಗಭೂಮಿಗೆ ಮಹತ್ವ ಕೊಡಲೇಬೇಕೆಂಬುದು ಅರಿವಿಗೆ ಬರುತ್ತದೆ. ಯುರೋಪಿನಲ್ಲಿ ಎಳೆಯ ಕೂಸಿನಿಂದ ಮೊದಲ್ಗೊಂಡು ರಂಗಭೂಮಿಯನ್ನು ಐಚ್ಛಿಕವಾಗಿ ಕಲಿಸಲಾಗುತ್ತದೆ. ಇಲ್ಲಿ ಕೂಡ ಅಂಥ ಕ್ರಮ ಜಾರಿಗೊಳ್ಳಬೇಕು.

ಇಂದೀಗ ಯುರೋಪಿನ ಅನೇಕ ನಗರಗಳಲ್ಲಿ ಹಿಂದೆ ಇದ್ದ ಸಿನಿಮಾ ಮಂದಿರಗಳಿಲ್ಲ. ಅವೆಲ್ಲ ಕಾಂಪ್ಲೆಕ್ಷುಗಳಾಗಿ ಬದಲಾಗಿವೆ. ನಾಟಕದ ಥಿಯೇಟರುಗಳು ಮಾತ್ರ ಅಸಂಖ್ಯವಾಗಿ ಬೆಳೆಯುತ್ತಲಿವೆ. ಇಂಗ್ಲೆಂಡಿನ ಸಸೆಕ್ಸ್‌ನ ಚಿಚೆಸ್ಟರ್ ಎಂಬ ಹಳ್ಳಿಯ ಒಂದು ಉದಾಹರಣೆ ನೀಡಬಯಸುತ್ತೇನೆ. ಆ ಹಳ್ಳಿ ಪ್ರದೇಶದಲ್ಲಿ ಮುಖಾಮುಖಿಯಾಗಿ ವಿಶಾಲವಾದ ಮೂರು ಥಿಯೇಟರುಗಳಿವೆ. ನಿತ್ಯವೂ ಮಧ್ಯಾಹ್ನ ಪ್ರೇಕ್ಷಕರಿಂದ ತುಂಬಿದ ಮಂದಿರ. ಇದರ ಗುಟ್ಟೇನು ಎಂಬುದನ್ನು ಹುಡುಕುತ್ತ ಹೋದರೆ ಹೆಚ್ಚಿನ ಹಳ್ಳಿಗಳಲ್ಲಿ ಯುವಕ, ಯುವತಿಯರಿರುವುದಿಲ್ಲ; ಅವರೆಲ್ಲ ನಗರಗಳಲ್ಲಿ ವಿದ್ಯೆ ಉದ್ಯೋಗಗಳಲ್ಲಿ ತೊಡಗಿರುತ್ತಾರೆ. ಹಳ್ಳಿಯಲ್ಲಿ ಇರುವವರೆಲ್ಲ ಸಾಮಾನ್ಯವಾಗಿ ವಯಸ್ಕರೆ. ಸಿನಿಮಾ, ಬೇಕಿದ್ದರೆ ಅವರ ಮನೆಯೊಳಗೆ ಬೇಕಾದಷ್ಟು ಚಾನಲ್‌ಗಳಲ್ಲಿ ಹರಿದು ಬರುತ್ತದೆ. ಅವರ ಆಸಕ್ತಿಯಿರುವುದು ಜೀವಂತವಾಗಿರುವ ನಾಟಕಗಳ ಕಡೆಗೆ ತಮ್ಮ ಬದುಕಿನ ಅಳಿದುಳಿದ ಅಮೂಲ್ಯ ಸಮಯವನ್ನು ಅವರು ಥಿಯೇಟರಿಗೆ ಮುಡಿಪಿಡುತ್ತಾರೆ. ಪ್ರತಿನಾಟಕದ ಬಗ್ಗೆ ಕೊನೆಯಲ್ಲಾಗಲೀ ಇಂಟರ್‌ವೆಲ್ಲಿನ ವೇಳೆಯಲ್ಲಾಗಲಿ ಚರ್ಚೆ ನಡೆಸುತ್ತಾರೆ. ತಮ್ಮ ಅಭಿಪ್ರಾಯವನ್ನು ಸಂಬಂಧಪಟ್ಟವರಿಗೆ ರವಾನಿಸುತ್ತಾರೆ. ನಮ್ಮ ದೇಶದಲ್ಲೂ ದಿನದಿಂದ ದಿನಕ್ಕೆ ಹಿರಿತಲೆಮಾರು ಹೀಗೆ ಅನಾಥವಾಗುತ್ತಿರುವುದು ಕಾಣುವಾಗ ಇಲ್ಲೂ ರಂಗಭೂಮಿ ಇನ್ನಷ್ಟು ಬಲಿಷ್ಠವಾಗಬೇಕಾದ ಅಗತ್ಯವಿದೆ ಎಂದು ಅನ್ನಿಸಿತ್ತದೆ.

ಅಲ್ಲಿನ ಕಮರ್ಶಿಯಲ್ ನಾಟಕದವರು ನಮ್ಮ ವೃತ್ತಿರಂಗಭೂಮಿಯವರ ಹಾಗೆ ಆರ್ಥಿಕ ಸಂಕಷ್ಟದಲ್ಲಿದ್ದುಕೊಂಡು ನಾಟಕ ನಡೆಸುತ್ತಿಲ್ಲ. ಒಂದೊಂದು ನಾಟಕ ಸಿದ್ಧತೆಗೂ ಅವರು ಸಾವಿರಾರು ಪೌಂಡು, ಡಾಲರ್ ಪ್ರೊಡಕ್ಷನ್ ವೆಚ್ಚ ಭರಿಸುತ್ತಾರೆ. ಅಷ್ಟೇ ಸಂಪಾದನೆಯನ್ನೂ ಮಾಡುತ್ತಾರೆ. ಲಂಡನ್ನಿನ ಒಂದೇ ಸ್ಟೇಟಿನಲ್ಲಿ ಇಪ್ಪತ್ತೈದರಷ್ಟು ನಾಟಕ ಮಂದಿರಗಳಿವೆ. ಅಗಾಥಾ ಕ್ರಿಸ್ತಿಯ ಕಾದಂಬರಿಯಾದ 'ದ ಮೌಸ್ ಸ್ಟ್ರಾಪನ್ನು ಕಳೆದ

ಅರುವತ್ತಾರು ವರ್ಷಗಳಿಂದ ನಿರಂತರ ಆಡುತ್ತಿದ್ದಾರೆ ಹಾಗೂ ಹೌಸ್‌ಫುಲ್ ಶೋಗಳನ್ನು ನೀಡುತ್ತಿದ್ದಾರೆ ಅಂದಾಗ, ವೃತ್ತಿರಂಗಭೂಮಿಯ ಬಗ್ಗೆ ಜನರಿಗಿರುವ ಆಸಕ್ತಿಯನ್ನು ಅಧ್ಯಯನಕ್ಕೆ ಗುರಿಪಡಿಸಬೇಕು ಅನ್ನಿಸುತ್ತದೆ. ಇಂಗ್ಲೆಂಡಿನ 'ಫಾರ್ಟಿ ಸೆಕೆಂಡ್ ಸ್ಟ್ರೀಟ್''  ಎಂಬ ನಾಟಕದ ಸಿದ್ಧತೆಗೆ ಕೋಟಿಗಳು ಖರ್ಚಾಗಿರ ಬಹುದು. ಅಲ್ಲಿನ ಮ್ಯೂಸಿಕಲ್ ಪ್ಲೇಗಳು ಇರುವುದೇ ಹಾಗೆ, ನಮ್ಮ ವೃತ್ತಿರಂಗ ಭೂಮಿಯಂತೆ ಅವು ಕೂಡ ಪೂರ್ಣ ಪ್ರಮಾಣದ ವೃತ್ತಿನಾಟಕಗಳೆ, ವ್ಯತ್ಯಾಸವೆಂದರೆ ನಮ್ಮ ಕಮರ್ಶಿಯಲ್ ಸಿನಿಮಾವೊಂದರ ಪ್ರೊಡಕ್ಷನ್ ವೆಚ್ಚದಲ್ಲಿ ಅವರು ಕಮರ್ಶಿಯಲ್ ನಾಟಕವೊಂದನ್ನು ಸಿದ್ಧಪಡಿಸುತ್ತಾರೆ.



ನಿಮಗಿದು ನೆನಪಿರಬಹುದು; ಮಾನ್ಯ ಗುಂಡೂರಾಯರು ಮುಖ್ಯಮಂತ್ರಿ ಗಳಾಗಿದ್ದಾಗ 'ಜಿಲ್ಲೆಗೊಂದು ರಂಗಮಂದಿರ' ಎಂಬ ಯೋಜನೆಯನ್ನು ಹುಟ್ಟು ಹಾಕಿದರು. ಕೆಲವು ಜಿಲ್ಲೆಗಳಲ್ಲಿ ಆ ಪ್ರಯುಕ್ತ ರಂಗಮಂದಿರಗಳೂ ಆದುವು. ಮಂಗಳೂರಿನಂತಹ ಜಿಲ್ಲಾ ಕೇಂದ್ರದಲ್ಲಿ ದಶಕ ನಾಲ್ಕು ಸಂದರೂ ಇಂದಿಗೂ ರಂಗಮಂದಿರ ನಿರ್ಮಾಣವಾಗಲಿಲ್ಲ. ಆ ಪ್ರಯುಕ್ತ ಸಂಗ್ರಹವಾದ ಕೋಟಿ ಮೊತ್ತವನ್ನಿಟ್ಟು ಕುಳಿತಿದ್ದಾರೆ. ಮಂಗಳೂರಿಗೆ ಬರುವ ಪ್ರತಿ ಜಿಲ್ಲಾಧಿಕಾರಿಗಳ ಅಟಾಟೋಪ ನೋಡಿ! ಮಂಗಳೂರು ಅಂತಲ್ಲ; ಎಲ್ಲೆಡೆ ನಮಗೆ ರಂಗಮಂದಿರಗಳು ಬೇಕು. ನಮ್ಮ ರಾಜ್ಯದ ಪ್ರತಿ ಜಿಲ್ಲಾ/ ತಾಲೂಕು ಕೇಂದ್ರಗಳಲ್ಲಿ ರಂಗಮಂದಿರಗಳು ಬೇಕು. ಜಾಗತಿಕ ಮಟ್ಟದಲ್ಲಿ ನಮ್ಮನ್ನು ನಾವು ಸ್ಥಾಪಿಸಹೊರಟ ಪ್ರಸ್ತುತ ಕಾಲಘಟ್ಟದಲ್ಲಿ ನಮ್ಮ ಸಾಂಸ್ಕೃತಿಕ ಹಿನ್ನೆಲೆ ಪ್ರಜ್ವಲಿಸಿ ಕಾಣಬೇಕು.

ಈ ಎಲ್ಲಾ ಕಾರಣಗಳಿಂದ ಯಾಕೆ ರಂಗಭೂಮಿಯನ್ನು 'ಮಂದಿಯ ಮನೋಸಾಮ್ರಾಜ್ಯದ ಅತ್ಯುತ್ತಮ ವೈದ್ಯ' ಎಂದು ರಾಜ್ಯಮಟ್ಟದಲ್ಲಿ ಪರಿಗಣಿಸಬಾರದು? ಯಾಕೆ ಕರ್ನಾಟಕದ ಪ್ರತಿ ಶಾಲೆಗಳಲ್ಲಿ ರಂಗ ಅಧ್ಯಯನವನ್ನು ಪಠ್ಯದ ಭಾಗವನ್ನಾಗಿಸ ಬಾರದು? ಥಿಯರಿ ಹಾಗೂ ಪ್ರಾಕ್ಟಿಕಲ್ ಎರಡರ ಅಧ್ಯಯನಕ್ಕೂ ಅವಕಾಶ ಮಾಡಿಕೊಡಬೇಕು. ನಮ್ಮ ಸಾಂಸ್ಕೃತಿಕ ನೀತಿಯನ್ನು ರಂಗಭೂಮಿಗೆ ಸಂಬಂಧಪಟ್ಟ ಹಾಗೆ ಮರುಪರಿಶೀಲನೆಗೆ ಒಡ್ಡಬೇಕು. ರಂಗಾಯಣಗಳ ಮೂಲಕ ಸಾರ್ವಜನಿಕರತ್ತ ಮುಖಮಾಡಿರುವ ರಂಗಭೂಮಿಯು ವಿಕೇಂದ್ರೀಕೃತ ರೂಪದಲ್ಲಿ ಹರಡ ತೊಡಗಿರುವುದು ನಮ್ಮ ರಾಜ್ಯ ಸರಕಾರದ ಮುಂಗಾಣೆಯೇ ಸರಿ. ರಂಗಾಯಣದ ಇನ್ನಷ್ಟು ಶಾಖೆಗಳು ರಾಜ್ಯದ ಉದ್ದಗಲಗಳಲ್ಲಿ ಹುಟ್ಟಿಕೊಳ್ಳಬೇಕು. ಮಕ್ಕಳ ನಾಟಕಗಳಿಗೆ ಅಲ್ಲಿ ಆದ್ಯತೆ ಸಿಗುವಂತಾಗಬೇಕು. ಪ್ರತಿಘಟಕಗಳು ಆರ್ಥಿಕವಾಗಿ ಸಂಪನ್ನಗೊಳ್ಳುವ ಹಾದಿಯನ್ನು ಆಯಾ ಘಟಕಗಳೇ ಕಂಡುಕೊಳ್ಳಬೇಕು. ಹತ್ತಿರದ ಶಾಲೆಗಳನ್ನು ರಂಗಾಯಣವು ಕೋ-ಆಪ್ಸ್ ಮಾಡಿಕೊಳ್ಳಬೇಕು. ಆ ಮೂಲಕ ನಟನಟಿಯರ ಕೊರತೆಯಾಗಲೀ ಪ್ರೇಕ್ಷಕರ ಕೊರತೆಯಾಗಲೀ ಉಂಟಾಗದಂತೆ ನೋಡಿಕೊಳ್ಳುವುದು ಸಾಧ್ಯ.

ಕಳೆದೊಂದು ಶತಕದಿಂದ ವೃತ್ತಿ ರಂಗಭೂಮಿ ತನ್ನದೇ ಆದ ಏಳುಬೀಳು ಗಳೊಂದಿಗೆ ಸಾಗುತ್ತ ಬಂದಿದೆ. ಅದರ ಬಗ್ಗೆ ಪತ್ರಿಕೆಗಳಾಗಲೀ ವಿಮರ್ಶಕರಾಗಲೀ ಹೆಚ್ಚಿಗೆ ಮಾತನಾಡುವುದಿಲ್ಲ. ಅಂತೆಯೇ ಕರಾವಳಿಯಲ್ಲಿ ಬಹು ಜನಪ್ರಿಯವಾಗಿರುವ ತುಳು ರಂಗಭೂಮಿಯ ಬಗ್ಗೆಯಾಗಲೀ ಯಕ್ಷಗಾನದ ಬಗ್ಗೆಯಾಗಲೀ ವಿಮರ್ಶಕರು ಹೆಚ್ಚಿಗೆ ಮಾತನಾಡುವುದಿಲ್ಲ. ಹಾಗೆಂದು ಈ ಮೂರೂ ಜನಪ್ರಿಯ ರಂಗ ಘಟಕಗಳು ವಿಮರ್ಶೆಗೆ ಒಳಪಡುವುದಿಲ್ಲ ಎಂದಲ್ಲ. ಇವುಗಳೊಳಗಿರುವ ಅನ್ನದ ಪ್ರಶ್ನೆ ಹವ್ಯಾಸಿ ರಂಗಭೂಮಿಯಲ್ಲಿಲ್ಲ. ಹೀಗೊಂದು ವಿಚಿತ್ರವಾದ ವ್ಯತ್ಯಾಸ ಬಹುಕಾಲದಿಂದ ಚಾಲ್ತಿಯಲ್ಲಿದೆ. ಕಲಾತ್ಮಕ ನಾಟಕಗಳಿರಲಿ, ಕಲಾತ್ಮಕ ಸಿನಿಮಾಗಳಿರಲಿ, ಅವು



ಮೌಲ್ಯಾಧಾರಿತಗಳೆಂದೂ ಅಂಥವುಗಳನ್ನು ನಿಕಷಕ್ಕೊಡ್ಡಬೇಕಾದ ಅಗತ್ಯವುಂಟೆಂದೂ ವೃತ್ತಿನಾಟಕಗಳು, ಯಕ್ಷಗಾನ, ಇತರ ಜನಪದ ಕಲೆಗಳು ಜನಸಾಮಾನ್ಯರ ರಂಜನೆಗೆ ಇರುವಂಥವುಗಳೆಂದೂ ಅವನ್ನು ವಿಮರ್ಶಿಸುವ ಅಗತ್ಯವಿಲ್ಲವೆಂದೂ ಬಹುಕಾಲದಿಂದ ನಂಬಿಕೊಂಡು ಬರಲಾಗಿದೆ. ಕೆಲವು ಪತ್ರಿಕೆಗಳಂತೂ ಹವ್ಯಾಸಿ ನಾಟಕಗಳ ಕುರಿತ ವಿಮರ್ಶೆಯನ್ನು ಪ್ರತಿವಾರವೂ ಪ್ರಕಟಿಸುತ್ತವೆ. ಕೆಲವು ನಿಯತಕಾಲಿಕಗಳು ಇಂತಹ ರಂಗಭೂಮಿಗಾಗಿಯೇ ಹುಟ್ಟಿಕೊಂಡಿವೆ. ಇದರ ಜೊತೆಗೆ ವೃತ್ತಿರಂಗಭೂಮಿಯನ್ನೂ ಯಕ್ಷಗಾನಾದಿ ಕಲೆಗಳನ್ನೂ ಪ್ರೇಕ್ಷಕರ ಹತ್ತಿರಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿಯೂ ಪತ್ರಿಕೆಗಳು ಕೆಲಸ ಮಾಡಬೇಕು. (ಇತ್ತೀಚೆಗಿನ 'ರಂಗ ನೇಪಥ್ಯ' ಎಂಬ ರಂಗಪತ್ರಿಕೆಯೊಂದು ವೃತ್ತಿರಂಗಭೂಮಿಯನ್ನೂ ಯಕ್ಷಗಾನವನ್ನೂ ಗಮನಿಸುತ್ತಿದೆ ಎಂಬುದು ಆಶಾದಾಯಕ. ಹಿಂದೆ ಈ ಕೆಲಸವನ್ನು 'ಈ ಮಾಸ ನಾಟಕ' ಪತ್ರಿಕೆ ಮಾಡಿತ್ತು.

ಒಂದೊಮ್ಮೆ ಕಲಾತ್ಮಕ, ಪ್ರಯೋಗಾತ್ಮಕ ಹಾಗೂ ಅಸಂಗತ ನಾಟಕಗಳ ಹೆಸರಿನಲ್ಲಿ ಕನ್ನಡ ರಂಗಭೂಮಿ ಸಾಕಷ್ಟು ಹಿನ್ನಡೆಯನ್ನು ಅನುಭವಿಸಿತ್ತು. ಅಡಿಗರ ನವ್ಯಕಾವ್ಯದ ಮಾದರಿಯಲ್ಲಿ ಸಾಗಲು ಹೊರಟ ಅನೇಕ ಕವಿಗಳು ಓದುಗರನ್ನು ಅಡಕತ್ತರಿಯಲ್ಲಿ ಸಿಕ್ಕಿಸಿದ ಹಾಗೆ ರಂಗಭೂಮಿಯೂ ಅಪರಿಮಿತ ಸಾಂಕೇತಿಕತೆಯಿಂದ ಸೊರಗಿತ್ತು. ಇಂದೀಗ ಕಾಳಿಕೆ ಕಳೆದ ಚಿನ್ನದಂತೆ ದಿನದಿಂದ ದಿನಕ್ಕೆ ಸ್ಪರ್ಧಾತ್ಮಕ ರೂಪದಲ್ಲಿ ಕನ್ನಡ ನಾಟಕಗಳು ಮೇಲೆದ್ದು ಬರುತ್ತಲಿವೆ. ಇಂದೀಗ ಉನ್ನತ ಉದ್ಯೋಗದಲ್ಲಿರುವವರು, ಐಟಿ ಬಿಟಿಯವರು ನಾಟಕದತ್ತ ಆಕರ್ಷಿತರಾಗುತ್ತಿದ್ದಾರೆ. ಬಿವಿ ಕಾರಂತರು ಹೇಳಿದ 'ಯಾವ ಧಾರಾವಾಹಿಯೂ ಯಾವ ಸಿನಿಮಾವೂ ಜೀವಂತವಲ್ಲ. ಜೀವಂತವಿರುವುದು ರಂಗಭೂಮಿ ಮಾತ್ರ' ಎಂಬುದನ್ನು ಅರಿತು ಕೊಳ್ಳತೊಡಗಿದ್ದಾರೆ. ಒಟ್ಟಾರೆಯಾಗಿ ಎಲ್ಲ ಟೀಕೆಗಳ ನಡುವೆಯೂ ರಂಗಭೂಮಿಯ ಕುರಿತು ನಾಳೆ ಓದುವ ವರದಿ ಅತ್ಯಂತ ಚೇತೋಹಾರಿಯಾಗಿರುತ್ತದೆ ಎಂಬ ಆಶಾದಾಯಕ ಮಾತಿನೊಂದಿಗೆ ವಿರಮಿಸುತ್ತೇನೆ.

# ಸಂಗೀತ

**ಡಾ. ಆರ್.ಎನ್. ಶ್ರೀಲತಾ**

ಸಂಗೀತವು ಒಂದು ಗಂಧರ್ವಕಲೆ. ಭಾರತದಲ್ಲಿ ವಿಕಾಸಗೊಂಡು ಯುಗ ಯುಗಗಳಲ್ಲಿ ವಿಭಿನ್ನ ರೀತಿಯಲ್ಲಿ ಅಭಿವೃದ್ಧಿಗೊಂಡು ಧಾರ್ಮಿಕ ಮತ್ತು ಆಧ್ಯಾತ್ಮಿಕ ವಾತಾವರಣದಲ್ಲಿ ಪೋಷಣೆಗೊಂಡ ಸಂಗೀತವನ್ನು ಭಾರತೀಯ ಸಂಗೀತವೆಂದು ಕರೆಯುತ್ತೇವೆ. ಮಾನವನ ಅಂತರಂಗದಲ್ಲಿ ಸ್ಫುರಿಸುವ ಭವ್ಯ ಭಾವನೆಗಳಿಗೆ ಹಿಡಿದ ಕನ್ನಡಿ, ಮಾನವ ಮೊದಲು ಹಾಡಿದನೋ ಅಥವಾ ಮಾತನಾಡಿದನೋ ಹೇಳಲಾಗದು. ಆದರೆ ಮೊದಲು ಪ್ರಕೃತಿಯಿಂದ ಪ್ರೇರಿತನಾಗಿ ಹಾಡಿದನೆಂಬುದನ್ನು ಊಹಿಸಬಹುದು.

ಸಂಗೀತ ಎಂಬ ಪದಕ್ಕೆ ಚೆನ್ನಾಗಿ ಹಾಡುವುದು ಎಂಬ ಅರ್ಥವಿದೆ. "ಗೀತ ವಾದ್ಯ ನೃತ್ಯತ್ರಯಂ ಸಂಗೀತಮುಚ್ಯತೆ" ಹೀಗೆ ಸಂಗೀತ ಎಂಬ ಪದದಲ್ಲಿ ಅದರ ಸಂಯುಕ್ತಾರ್ಥವು ಅಡಗಿದೆ. ಶಾಸ್ತ್ರೀಯ ಸಂಗೀತವು ವೇದಕಾಲದಲ್ಲಿ ಆರಂಭವಾಯಿ ತೆಂದು ಹೇಳಬಹುದು. ಭರತನ ನಾಟ್ಯಶಾಸ್ತ್ರವು ಸಂಗೀತಕ್ಕೆ ಸಂಬಂಧಿಸಿದ ಮೊದಲ ಗ್ರಂಥ. ಅನಂತರ ಕಾಲಕಾಲಕ್ಕೆ ತಕ್ಕ ಹಾಗೆ ಅನೇಕ ಲಾಕ್ಷಣಿಕರು ಸಂಗೀತದ ಬೆಳವಣಿಗೆಗೆ ಕಾರಣರಾಗಿದ್ದಾರೆ. ನಾಟ್ಯಶಾಸ್ತ್ರದ ನಂತರ ಬಂದ 'ಬೃಹದ್ದೇಶಿ' ಗ್ರಂಥವು ಸಂಗೀತದ ಮಹತ್ವದ ಗ್ರಂಥ, ಸಂಗೀತಕ್ಕೆ ಸಂಬಂಧಪಟ್ಟ ಸೂಕ್ಷ್ಮ ವಿಷಯಗಳನ್ನು ಇದರಲ್ಲಿ ವಿವರಿಸಲಾಗಿದೆ. ಶಾರ್ಙ್ಗದೇವನ 'ಸಂಗೀತ ರತ್ನಾಕರ'ವು ಭಾರತೀಯ ಸಂಗೀತದ ಆಕರಗ್ರಂಥವೆಂದೇ ಹೇಳಬಹುದು. ಇದು ಸುಮಾರು ೧೨ನೇ ಶತಮಾನದಲ್ಲಿ ಬರೆದ ಗ್ರಂಥ.

ಸುಮಾರು ೧೩ನೇ ಶತಮಾನದಲ್ಲಿ ಮುಸಲ್ಮಾನರ ಪ್ರಭಾವದಿಂದಾಗಿ ಭಾರತೀಯ ಸಂಗೀತವು ಎರಡಾಗಿ ಕವಲೊಡೆಯಿತು. ಉತ್ತರಾದಿ ಮತ್ತು ದಕ್ಷಿಣಾದಿ ಸಂಗೀತ ಎಂದು ಹೆಸರಾಯಿತು. ಕಾಲಕ್ರಮೇಣ ಇದು ಹಿಂದೂಸ್ಥಾನಿ ಸಂಗೀತ ಅಥವಾ ಉತ್ತರಾದಿ ಸಂಗೀತ ಮತ್ತು ಕರ್ನಾಟಕ ಸಂಗೀತ ಅಥವಾ ದಕ್ಷಿಣಾದಿ ಸಂಗೀತ ಎಂದಾಯಿತು.

ಚಾಲುಕ್ಯ ಸೋಮೇಶ್ವರನು ತನ್ನ 'ಮಾನಸೋಲ್ಲಾಸ' ಎಂಬ ಗ್ರಂಥದಲ್ಲಿ ಕರ್ನಾಟಕ ಸಂಗೀತ ಎಂಬ ವಿಶೇಷಣದಿಂದ ಕರೆದಿರುತ್ತಾನೆ. ಹರಿಸಾಲನು (೧೩೦೯ ಕ್ರಿ.ಶ.) ತನ್ನ 'ಸಂಗೀತ ಸುಧಾಕರ' ಗ್ರಂಥದಲ್ಲಿ ಭಾರತೀಯ ಸಂಗೀತ ಎರಡು ಶಾಖೆಗಳಾದ ವಿಷಯವನ್ನು ವಿವರಿಸುತ್ತಾನೆ. "ತ್ವದಪಿ ದ್ವಿವಿಧಂ ಜ್ಞೇಯಂ ದಕ್ಷಿಣೋತ್ತರ ಭೇದತಃ ಕರ್ನಾಟಕಂ ದಕ್ಷಿಣೆ ಸ್ವಾದ್ಧಿಂದೂಸ್ತಾನಿ ತದೋತ್ತರೆ" ಎಂದು ಹೇಳಿರುತ್ತಾನೆ. ಎರಡು ಸಂಗೀತ ಪದ್ಧತಿಯಲ್ಲೂ ಸಾಮ್ಯಗಳಿವೆ. ರಾಗಗಳಲ್ಲಿ, ವಾದ್ಯಗಳಲ್ಲಿ ಹೆಚ್ಚಿನ ವ್ಯತ್ಯಾಸವು ಕಾಣುವುದಿಲ್ಲ. ಇವೆರಡು ಸಂಗೀತ ಪದ್ಧತಿಗೂ ಶಾಸ್ತ್ರಗ್ರಂಥಗಳು ಬಹುಮಟ್ಟಿಗೆ ಸಮಾನವಾದುವು. ಆದರೆ ಪ್ರಾಯೋಗಿಕ ಸಾಧನೆಯಲ್ಲಿ ಮತ್ತು ಅಭಿವ್ಯಕ್ತಿಯಲ್ಲಿ ಭಿನ್ನತೆಯು

ಕಾಣುತ್ತದೆ. ಇದಕ್ಕೆ ಕಾರಣ ಮುಸ್ಲಿಮರ ಪ್ರಭಾವದಿಂದಾಗಿ ಬದಲಾವಣೆ ತಲೆದೋರಿರಬೇಕು. ದಕ್ಷಿಣ ಭಾರತದಲ್ಲಿ ಪ್ರಾಚೀನ ಭಾರತೀಯ ಸಂಗೀತ ಪದ್ಧತಿ ಶುದ್ಧರೂಪದಿಂದ ಉಳಿದುಬಂದಿದೆ. ಇವೆರಡು ಸಂಗೀತದ ಮುಖ್ಯವಾದ ವ್ಯತ್ಯಾಸವೆಂದರೆ ಕರ್ನಾಟಕ ಸಂಗೀತ ನಾದ ಮತ್ತು ಸಾಹಿತ್ಯಗಳೆರಡನ್ನು ಸುಂದರವಾದ ರೀತಿಯಲ್ಲಿ ಸಮನ್ವಯಗೊಳಿಸಿ ಅಭಿವ್ಯಕ್ತವಾಗುತ್ತದೆ. ಪ್ರಾರಂಭದ ಆಲಾಪನೆ ನಾದರೂಪದಲ್ಲಿ ಆಯಾ ರಾಗದ ಸೂಕ್ಷ್ಮ ಭಾವನೆಗಳನ್ನು ಹೊಮ್ಮಿಸಿ, ರಸತ್ವ ಸೇರಿಸಿ ಕಲಾತ್ಮಕವಾದ ರಂಜನೆಯಿಂದ ಪರವಶಗೊಳಿಸುತ್ತದೆ. ಅದರೊಡನೆ ಸಾಹಿತ್ಯ ಶುದ್ಧಿ ಎಂಬ ಮಾತು ವಿಶೇಷವಾಗಿ ಅನ್ವಯಿಸುತ್ತದೆ. ಸಂಗೀತದ ಕಲ್ಪನಾ ಸೃಷ್ಟಿಗೆ ಅವಕಾಶವನ್ನು ಒದಗಿಸುತ್ತದೆ.

ಹಿಂದೂಸ್ತಾನಿ ಸಂಗೀತದಲ್ಲಿ ಶ್ರುತಿಗೆ ಹೆಚ್ಚು ಮಹತ್ವವೆಂಬ ಭಾವನೆಯಿದೆ. ಒಂದೊಂದು ಸ್ವರವನ್ನು ಎಳೆದೆಳೆದು ಹಾಡಿ ಆಧಾರ ಶ್ರುತಿಯಲ್ಲಿ ಅಡಗಿಸಿ ವಿವಿಧ ವಿನ್ಯಾಸವನ್ನು ತೋರಿಸುತ್ತಾ ನಾದದ ಹೊಳೆ ತುಂಬಿ ಭೋರ್ಗರೆದು ಹರಿಯುವಂತೆ ಮಾಡುತ್ತಾರೆ. ವಾಸ್ತವವಾಗಿ ಶ್ರುತಿ ಮತ್ತು ತಾಳಗಳು ಎರಡೂ ಸಂಗೀತಕ್ಕೆ ಅನಿವಾರ್ಯದ ಅಂಗಗಳು. “ಶ್ರುತಿರ್ಮಾತಾ ಲಯಃ ಪಿತಾ” ಎಂಬಂತೆ ಶ್ರುತಿ ಮತ್ತು ತಾಳ ಒಂದಕ್ಕೊಂದು ಪೂರಕವಾದ ವಿಷಯ.

ಸುಮಾರು ೧೪-೧೫ನೇ ಶತಮಾನದಲ್ಲಿ ಹರಿದಾಸ ಪಂಥವು ಆರಂಭಗೊಂಡಿತು, ಅಂದರೆ ವಿಜಯನಗರ ಸಾಮ್ರಾಜ್ಯದ ಕಾಲದಲ್ಲಿ. ಈ ಕಾಲದಲ್ಲೇ ಸಂಗೀತದ ಅಭ್ಯಾಸಗಾನವನ್ನು ವ್ಯವಸ್ಥಿತವಾಗಿ ರೂಪಿಸಿದವರು ಶ್ರೀ ಪುರಂದರದಾಸರು. ಈ ಅಭ್ಯಾಸಗಾನ ಪದ್ಧತಿಯೇ ಎರಡು ಸಂಗೀತ ಪದ್ಧತಿಯಲ್ಲೂ ಕಂಡುಬರುತ್ತದೆ. ಇವರನ್ನು 'ಕರ್ನಾಟಕ ಸಂಗೀತ ಪಿತಾಮಹ' ಎಂದು ವಿದ್ವಾಂಸರು ಕರೆದಿದ್ದಾರೆ. ಎಲ್ಲ ಹರಿದಾಸರು ಉಗಾಭೋಗ, ದೇವರನಾಮಗಳು, ಸುಳಾದಿಗಳನ್ನು ರಚಿಸಿದ್ದಾರೆ. ಕನಕದಾಸರು ಮುಂಡಿಗೆ ಎಂಬ ವಿಶೇಷ ಹಾಡುಗಳನ್ನು ರಚಿಸಿದ್ದಾರೆ.

ಸಂಗೀತದಲ್ಲಿ ಕಾಲಕಾಲಕ್ಕೆ ಬದಲಾವಣೆಗಳಾಗುತ್ತಾ ಬಂದವು. ಕರ್ನಾಟಕ ಸಂಗೀತದಲ್ಲಿ ೧೭-೧೮ನೇ ಶತಮಾನವು ಸುವರ್ಣಯುಗವಾಯಿತು. ಸಂಗೀತ ತ್ರಿಮೂರ್ತಿಗಳಾದ ಶ್ರೀ ತ್ಯಾಗರಾಜರು, ಶ್ರೀ ಮುತ್ತುಸ್ವಾಮಿ ದೀಕ್ಷಿತರು, ಶ್ರೀ ಶ್ಯಾಮಾಶಾಸ್ತ್ರಿಗಳು ಅಪಾರ ಕೊಡುಗೆ ನೀಡಿದ್ದಾರೆ. ಹೊಸಹೊಸ ರಚನೆಗಳು, ಹೊಸಹೊಸ ರಾಗಗಳು ಆವಿಷ್ಕಾರವಾದುವು. ಇವರ ಮಾರ್ಗವನ್ನನುಸರಿಸಿ ಮುಂದೆ ಅನೇಕ ವಾಗ್ಗೇಯಕಾರರು ಸಂಗೀತ ಕ್ಷೇತ್ರಕ್ಕೆ ಕೊಡುಗೆಯನ್ನು ನೀಡಿದ್ದಾರೆ.

ಅದರಂತೆಯೇ ಹಿಂದೂಸ್ತಾನಿ ಸಂಗೀತ ಪದ್ಧತಿಯಲನ್ನು ವಾಗ್ಗೇಯಕಾರರು, ಅನೇಕ ಸಂಗೀತ ವಿದ್ವಾಂಸರು ಸಮೃದ್ಧಗೊಳಿಸಿದ್ದಾರೆ. ದ್ರುಪದ ಗಾಯನದ ಜನಕನಾದ ಭಾನಿಪಂಡಿತ ಮೊದಲಾದವರು ಅಕ್ಬರ್‌ನ ಆಸ್ಥಾನದಲ್ಲಿದ್ದರು.



ಮುಂದೆ ಸಂಗೀತ ಕಲಿಕೆಯಲ್ಲಿ ಬದಲಾವಣೆಗಳಾದವು. ಸಂಗೀತ ಶಿಕ್ಷಣವು ಗುರುಕುಲ ಪದ್ಧತಿಯಲ್ಲಿ ನಡೆಯುತ್ತಿದ್ದುದು, ಆಧುನಿಕ ಕಾಲದಲ್ಲಿ ಶಾಲಾ ಕಾಲೇಜುಗಳಲ್ಲಿ ಕಲಿಯುವಂತಾಯಿತು. ಏತನ್ಮಧ್ಯೆ ಸಂಗೀತವನ್ನು ಕೇಳಬೇಕಾದರೆ ದೇವಸ್ಥಾನ, ರಾಜದರ್ಬಾರ್‌ನಲ್ಲಿ ನಡೆಯುತ್ತಿದ್ದ ಕಾರ್ಯಕ್ರಮಗಳಿಗೆ ಹೋಗಬೇಕಾಗಿತ್ತು. ಸಂಗೀತ ಪೋಷಣೆಯು ರಾಜರು, ಜಮೀನ್ದಾರರಿಂದ ಆಗುತ್ತಿತ್ತು. ಮೈಸೂರರಸರು, ತಂಜಾವೂರು, ತಿರುವನಂತಪುರ, ಅಕ್ಬರ್‌ನ ಆಸ್ಥಾನ ಹೀಗೆ ಬಹಳಷ್ಟು ರಾಜರ ಆಶ್ರಯ ಅನೇಕ ವಿದ್ವಾಂಸರಿಗೆ ದೊರಕಿತ್ತು. ಅಲ್ಲದೆ ರಾಜರುಗಳು ಸ್ವತಃ ಸಂಗೀತ ವಿದ್ವಾಂಸರೂ, ವಾಗ್ಗೇಯಕಾರರೂ ಆಗಿದ್ದರು.

ಮೈಸೂರು ಸಂಸ್ಥಾನದಲ್ಲಿ ಕರ್ನಾಟಕ ಸಂಗೀತ ವಿದ್ವಾಂಸರೂ ಹಿಂದೂಸ್ತಾನಿ ಸಂಗೀತ ವಿದ್ವಾಂಸರೂ ಇದ್ದರು. ಮುಮ್ಮಡಿ ಕೃಷ್ಣರಾಜ ಒಡೆಯರ್, ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಆಸ್ಥಾನವು ಸಂಗೀತ ವಿದ್ವಾಂಸರಿಂದ ತುಂಬಿ ತುಳುಕುತಿತ್ತು. ಇವರ ಕಾಲದಲ್ಲಿ ಬಾಲಕ ಬಾಲಕಿಯರಿಗೆ ಸಂಗೀತ ಕಲಿಯಲು ವಿದ್ಯಾರ್ಥಿವೇತನ ನೀಡಿ, ಗುರುಗಳನ್ನು ನೇಮಿಸಿ ಪ್ರೋತ್ಸಾಹಿಸುತ್ತಿದ್ದರು.

ಪಾಶ್ಚಾತ್ಯ ವಾದ್ಯವಾದ ಸಾಕ್ಸೊಫೋನ್ ವಾದ್ಯವು, ಜಲತರಂಗ್ ವಾದ್ಯವು ಕರ್ನಾಟಕ ಸಂಗೀತಕ್ಕೆ ಪ್ರವೇಶವಾಗಿದ್ದು ನಾಲ್ವಡಿ ಒಡೆಯರ್‌ರಿಂದಲೇ, ಇಲ್ಲಿಯ ವಿದ್ವಾಂಸರು ಕಲಿತು ಕರ್ನಾಟಕ ಸಂಗೀತ ನುಡಿಸಿದರು. 'ವೀಣೆಯ ಬೆಡಗಿದು ಮೈಸೂರು' ಎಂಬ ನಾಣ್ಣುಡಿ ಮನೆ ಮಾತಾಗಿದ್ದು ವೀಣೆ ಶೇಷಣ್ಣನವರಿಂದ, "ನಾಲ್ವಡಿ ಭೂಪ ಮನೆ ಮನೆ ದೀಪ" ಎಂಬ ಉಕ್ತಿಯನ್ನು ನಾಲ್ವಡಿ ಕೃಷ್ಣರಾಜ ಒಡೆಯರ್‌ಗೆ ಹೇಳುತ್ತಿದ್ದರು. ನಾಲ್ವಡಿಯವರು ಸಂಗೀತರಾಜರೆನಿಸಿದ್ದರು. ಇವರು ಕನ್ನಡ ಭಾಷೆಯ ಬೆಳವಣಿಗೆಗೆ ನೆರವಾಗಲು ಸರ್ಕಾರದ ಬೆಂಬಲದಿಂದ ೧೯೧೫ರಲ್ಲಿ 'ಕನ್ನಡ ಸಾಹಿತ್ಯ ಪರಿಷತ್ತು' ಸ್ಥಾಪಿಸಿದರು. ಮೈಸೂರು ವಿಶ್ವವಿದ್ಯಾನಿಲಯವು ಇವರಿಂದಲೇ ಆರಂಭಗೊಂಡಿದ್ದು,

ನಂತರ ಆಡಳಿತಕ್ಕೆ ಬಂದ ಜಯಚಾಮರಾಜೇಂದ್ರ ಒಡೆಯರ್‌ರವರು ಕಲಾಪೋಷಕರು, ಸ್ವತಃ ಗ್ರಂಥಕರ್ತರು, ಸಂಗೀತ ವಿದ್ವಾಂಸರು, ವಾಗ್ಗೇಯಕಾರರು, ಶ್ರೀವಿದ್ಯಾ ಉಪಾಸಕರು. ಇವರು ಪಿಯಾನೋ

ವಾದ್ಯವನ್ನು ನುಡಿಸುತ್ತಿದ್ದರು. ಕರ್ನಾಟಕ ಸಂಗೀತದಷ್ಟೆ ಹಿಂದೂಸ್ತಾನಿ ಸಂಗೀತದಲ್ಲೂ ವಿಶೇಷ ಆಸಕ್ತಿಯನ್ನು ಹೊಂದಿದ್ದರು. ಮೈಸೂರು ವಾಸುದೇವಾಚಾರ್ಯರು ಸಂಗೀತ ಗುರುಗಳು, ವೀಣೆ ವೆಂಕಟಗಿರಿಯಪ್ಪನವರು ವೀಣಾಗುರುಗಳಾಗಿದ್ದರು. ಒಡೆಯರ್‌ರವರು ೯೭ ಕೃತಿಗಳನ್ನು ರಚಿಸಿದ್ದಾರೆ. ಇವರ ಅಂಕಿತ ಶ್ರೀವಿದ್ಯಾ. ಇವರ ಆಸ್ಥಾನದಲ್ಲೂ ಶೋಭಿಸಿದ ಪಿಟೀಲು ಚೌಡಯ್ಯನವರು ಏಳುತಂತಿ ಪಿಟೀಲನ್ನು ಆವಿಷ್ಕರಿಸಿ ಮೈಸೂರಿಗೆ ಕೀರ್ತಿ ತಂದವರು.

'ಮೈಸೂರು ಸಾಂಸ್ಕೃತಿಕ ರಾಜಧಾನಿ' ಎಂಬ ಮಾತಿಗೆ ಅನುಗುಣವಾಗಿದೆ. ಇದಕ್ಕೆ ಪೂರಕವಾಗಿ ನಮ್ಮ ಕರ್ನಾಟಕ ಸರ್ಕಾರದಿಂದ ಸಂಗೀತಾದಿ ಕಲೆಗಳಿಗೆ ಹೆಚ್ಚಿನ



ಪ್ರೋತ್ಸಾಹವು ದೊರೆತಿದೆ. ಶಾಲಾಕಾಲೇಜುಗಳಲ್ಲಿ ಸಂಗೀತವನ್ನು ಒಂದು ವಿಷಯವಾಗಿ ಪಠ್ಯದಲ್ಲಿ ಸೇರಿಸಿರುವುದು ಶ್ಲಾಘನೀಯ. ಅಲ್ಲದೆ ಖಾಸಗಿಯಾಗಿ ಸಂಗೀತ ಕಲಿಯುವ ವಿದ್ಯಾರ್ಥಿಗಳಿಗೆ ಜೂನಿಯರ್, ಸೀನಿಯರ್ ಮತ್ತು ವಿದ್ವತ್ ಮಟ್ಟದಲ್ಲಿ ವಾರ್ಷಿಕ ಪರೀಕ್ಷೆಗಳನ್ನು ನಡೆಸಿ ಪ್ರಮಾಣಪತ್ರವನ್ನು ನೀಡುತ್ತಿದೆ. ವಿದ್ವತ್ ಪರೀಕ್ಷೆ ಮುಗಿಸಿದವರಿಗೆ ಶಾಲೆಗಳಲ್ಲಿ ಸಂಗೀತ ಅಧ್ಯಾಪಕರಾಗುವ ಅವಕಾಶವನ್ನು ಕಲ್ಪಿಸಿದೆ.

# ಯಕ್ಷಗಾನ

- ಡಾ. ಕಬ್ಬಿನಾಲೆ ವಸಂತ ಭಾರದ್ವಾಜ

ಕವಿರಾಜಮಾರ್ಗದಲ್ಲಿ ಹೇಳಲಾದ ಬೆದಂಡೆ, ಪಗರಣಗಳಿಂದಲೇ ಯಕ್ಷಗಾನವನ್ನು ಗುರುತಿಸುವ ಕೆಲಸವನ್ನು ಕನ್ನಡದ ಹಿರಿಯ ವಿದ್ವಾಂಸರು ಮಾಡಿದ್ದಾರೆ. ಕುಮಾರವ್ಯಾಸ, ಕನಕದಾಸಾದಿ ಕವಿಗಳ ಕಾವ್ಯಗಳಲ್ಲಿ ತಾಳಮದ್ದಳೆಯ ಉಲ್ಲೇಖ ಇರುವುದರಿಂದಲೂ, ಪುರಂದರದಾಸರೇ ಯಕ್ಷಗಾನ ಕೃತಿಯೊಂದನ್ನು ಬರೆದಿರುವ ರೆಂಬ ಹೇಳಿಕೆಯಿರುವುದ ರಿಂದಲೂ, ಐದಾರು ಶತಮಾನಗಳಷ್ಟು ಅದರ ಹಳಮೆ ಯೆಂಬುದು ಸ್ಪಷ್ಟ ಅಷ್ಟೇ ಅಲ್ಲದೆ, ಅದು ಕನ್ನಡನಾಡಿನ ಮೂಲೆಮೂಲೆಗಳಲ್ಲಿ ಪ್ರಾದೇಶಿಕ ಪ್ರಭೇದಗಳಿಂದ ಜನಪ್ರಿಯವಾಗಿತ್ತೆಂಬುದೂ ಗಮನಾರ್ಹ. ಪಡುವಲಪಾಯದ ತೆಂಕುತಿಟ್ಟು, ಬಡಗುತಿಟ್ಟು, ಬಡಾಬಡಗುತಿಟ್ಟು, ಮೂಡಲಪಾಯದ ಸಣ್ಣಾಟ, ದೊಡ್ಡಾಟ, ಕೇಳಿಕೆ, ಘಟ್ಟದಕೋರೆ ಇತ್ಯಾದಿ ಸ್ವರೂಪಗಳಿಂದ ಅದು ಜನಮನವನ್ನು ಸೂರೆಗೊಂಡ ಕಲೆ, ಇದುವರೆಗೆ ಸುಮಾರು ಸಾವಿರದ ಐದುನೂರರಷ್ಟು ಕವಿಗಳು ಐದುಸಾವಿರಕ್ಕಿಂತಲೂ ಹೆಚ್ಚು ಯಕ್ಷಗಾನ ಪ್ರಸಂಗಗಳನ್ನು ಬರೆದಿರುವುದು ಕನ್ನಡ ಸಾಹಿತ್ಯದ ಹೆಮ್ಮೆಯ ವಿಚಾರ.

ನಮ್ಮ ಪಡುವಲಪಾಯದ ಯಕ್ಷಗಾನವಂತೂ ಇತ್ತೀಚೆಗೆ ಒಂದು ಅಭಿಜಾತ ಕಲೆಯಾಗಿ ಬೆಳೆದುನಿಂತಿದೆ. “ಗೀತಂ ವಾದ್ಯಂ ತಥಾ ನೃತ್ಯಂ ತ್ರಯಂ ಸಂಗೀತ ಮುಚ್ಯತೇ” ಎಂಬ ಸಂಗೀತಶಾಸ್ತ್ರದ ಉಲ್ಲೇಖವನ್ನು ಯಕ್ಷಗಾನಕ್ಕೆ ಮಾತ್ರ ಸಮರ್ಪಕವಾಗಿ ಅನ್ವಯಿಸಬಹುದು. ಆಹಾರ್ಯ, ಆಂಗಿಕ, ವಾಚಿಕ ಮತ್ತು ಸಾತ್ವಿಕಗಳೆಂಬ ಚತುರ್ವಿಧಾಭಿನಯವು ಯಕ್ಷಗಾನದಲ್ಲಿ ಮಾತ್ರ ಪೂರ್ಣ ಸ್ವರೂಪದಲ್ಲಿದೆ ಎಂಬುದು ಮಹತ್ವದ ಸಂಗತಿ. ಉಚ್ಚಸ್ವರದ ಗಾಯನ, ಶೈಲೀಕೃತ ಸಂಭಾಷಣೆ, ರಮ್ಯಾದ್ಭುತ ವೇಷಭೂಷಣ, ನೃತ್ಯ-ನೃತ್ಯಗಳ ಸಮನ್ವಯ, ಭರತೋಕ್ತ ಅಂಗಕರಣಾದಿ ಗಳಿಂದ ಯಕ್ಷಗಾನಕಲೆ ಇಡೀ ಭಾರತೀಯ ಕಲಾಪ್ರಪಂಚದಲ್ಲೇ ಒಂದು ವಿಶೇಷವಾದ ಸ್ಥಾನವನ್ನು ಪಡೆದಿದೆ. ಆಶು ಸ್ವರೂಪದ ವಾಚಿಕಾಭಿನಯದಿಂದ ಸಾಧ್ಯವಾಗುವ ಸನ್ನಿವೇಶ ಚಿತ್ರಣ ಹಾಗೂ ಅದು 'ತಾಳಮದ್ದಳೆ'ಯ ಮಾತಿನಮಂಟಪದಲ್ಲಿ ಪೌರಾಣಿಕ ಪಾತ್ರಗಳ ಅಂತರಂಗದರ್ಶನವಾಗಿ ಮೂಡಿನಿಲ್ಲುವ ಬಗೆ ಯಕ್ಷಗಾನದ ಅನನ್ಯತೆಗೆ ಸಾಕ್ಷಿ.ಇಂತಹ ಕಲಾಮಾಧ್ಯಮವೊಂದು ಪರಂಪರೆ ಮತ್ತು ಪ್ರಯೋಗಭೂಮಿಕೆ ಎರಡರಲ್ಲೂ ಅರಳಿನಿಂತು ವಿಶ್ವದ ವಿಮರ್ಶಕ ವಲಯವನ್ನು ಸೆಳೆಯುತ್ತಿರುವುದು ಕನ್ನಡಿಗರಿಗೆ ಅಭಿಮಾನದ ಸಂಗತಿ. ಭಾಷೆಯ ಕಾವ್ಯಾತ್ಮಕ ಶುದ್ಧಸ್ವರೂಪವನ್ನು ಕಾಯ್ದು ಕೊಂಡು, ಹೊಸ ಪರಿಭಾಷಾ ಪ್ರಯೋಗದ ಸಾಧ್ಯತೆಗಳನ್ನೂ ಅನ್ವೇಷಿಸುತ್ತಿರುವ ಈ ಕಲೆ ಕನ್ನಡದ ಸೃಜನಶೀಲತೆಗೆ ಸಾಕ್ಷಿಯಾಗಿದೆ.ನಮ್ಮ ಶಿಕ್ಷಣ, ಮಾಧ್ಯಮ, ಸಂಗೀತ, ಕಲೆ ಇತ್ಯಾದಿಗಳಲ್ಲಿ ಕನ್ನಡಭಾಷೆ ಶಿಥಿಲವಾಗುತ್ತಿದ್ದರೆ, ಯಕ್ಷಗಾನದ ಮೂಲಕ ಅದು ಸಂಪದ್ಭರಿತವಾಗುತ್ತಿದೆ ಎನ್ನಬಹುದು.

ಡಾ. ಶಿವರಾಮ ಕಾರಂತರು ನಡೆಸಿದ ಪ್ರಯೋಗಗಳಿಂದ ಯಕ್ಷಗಾನಕಲೆ ವಿಶ್ವದ ಗಮನವನ್ನು ಸೆಳೆಯಿತು ಎಂಬುದು ಐತಿಹಾಸಿಕ ಸತ್ಯ. ನಿರ್ದೇಶನ, ರಂಗತಾಲೀಮುಗಳ ಹಿನ್ನೆಲೆಯಿಂದ ಮೂಡಿದ ಕಾರಂತರ ಬ್ಯಾಲೆಗಳು ಯಕ್ಷಗಾನ ಪ್ರೇಕ್ಷಕರನ್ನು ಹೊಸ ಸಾಧ್ಯತೆಗಳ ಕಡೆಗೆ ಯೋಚಿಸುವಂತೆ ಮಾಡಿದವು. ಆಹಾರ್ಯ, ರಂಗಚಲನೆ, ಸಂಗೀತ, ಪ್ರವೇಶ, ನಿರ್ಗಮನ ಮುಂತಾದ ಹತ್ತು ಹಲವು ದೃಷ್ಟಿಗಳಿಂದ ಕಾರಂತರ ಬ್ಯಾಲೆಗಳು ಯಕ್ಷಗಾನಕ್ಕೆ ಹೊಸ ಆಯಾಮವನ್ನು ನೀಡಿದವು. ಇದರಿಂದ ಕಲಾಮೀಮಾಂಸೆಗೆ ಹೊಸ ಪರಿಪ್ರೇಕ್ಷ್ಯವೇ ದೊರೆಯಿತೆಂದು ಹೇಳಬಹುದು. ಇದರ ಪರಿಣಾಮವೋ ಎಂಬಂತೆ ಯಕ್ಷಗಾನದಲ್ಲಿ ಪ್ರಸಂಗ ರಚನೆ, ಪಾತ್ರಶಿಲ್ಪದ ಚಿಂತನೆ, ಮೇಳಗಳ ಪ್ರದರ್ಶನ ವ್ಯವಸ್ಥೆ ಮುಂತಾದ ಅನೇಕ ಬದಲಾವಣೆಗಳು ಉಂಟಾದವು. ಪೌರಾಣಿಕ ಪ್ರಸಂಗಗಳಿಗೆ ಆಧುನಿಕ ಆಶಯಗಳ ಆವಾಹನೆ, ಐತಿಹಾಸಿಕ- ಜಾನಪದೀಯ-ಸಾಮಾಜಿಕ-ಕಾಲ್ಪನಿಕ ಹೀಗೆ ಪ್ರಸಂಗಗಳ ರೂಪರೇಖೆಗಳು ವಿಭಿನ್ನವಾಗ ತೊಡಗಿದವು. ಪರಂಪರೆಯ ಮೂಲಧಾತುಗಳು ಯಾವುವು? ಆಧುನಿಕತೆಯನ್ನು ಅಳವಡಿಸುವುದು ಹೇಗೆ? ಪ್ರಯೋಗನಾವೀನ್ಯ ಹೇಗಿರಬೇಕು? ಎಂಬಿತ್ಯಾದಿ ಚಿಂತನೆಗಳು ಕಲಾಭಿಜ್ಞರನ್ನು ಕಾಡತೊಡಗಿದವು.

**ವಿಶ್ವವಿದ್ಯಾಲಯದ ಮಾನ್ಯತೆ :**

ಡಾ. ಶಿವರಾಮ ಕಾರಂತರ 'ಯಕ್ಷಗಾನ ಬಯಲಾಟ' ಕೇಂದ್ರ ಸಾಹಿತ್ಯ ಅಕಾಡೆಮಿಯ ಗೌರವಕ್ಕೆ ಪಾತ್ರವಾದ ಮೊತ್ತಮೊದಲ ಯಕ್ಷಗಾನ ಗ್ರಂಥ(೧೯೫೭), ಅದರ ಇಂಗ್ಲಿಷ್ ಅವತರಣಿಕೆಯಿಂದಾಗಿ ಕರ್ನಾಟಕದ ಹೊರಗಿನ ವಿದ್ವಾಂಸರೂ ಈ ಕಲೆಯ ಕುರಿತು ತಿಳಿದುಕೊಳ್ಳುವ ಹಾಗಾಯಿತು. ಮಾರ್ತಾ ಆಶ್ಟನ್‌ರಂತಹ ವಿದೇಶೀ ವಿದ್ವಾಂಸರು ಭಾರತಕ್ಕೆ ಬಂದು ಯಕ್ಷಗಾನದ ಅಧ್ಯಯನವನ್ನು ಕೈಗೊಳ್ಳುವುದು ಸಾಧ್ಯವಾಯಿತು.ಮುಂದೆ ಅನೇಕ ವಿದ್ಯಾವಂತರು ಯಕ್ಷಗಾನ ಕಲೆಯತ್ತ ಆಕರ್ಷಿತರಾಗಿ ವಿವಿಧ ರೀತಿಯ ಸಂಶೋಧನಾತ್ಮಕ ಅಧ್ಯಯನಗಳನ್ನು ಮಾಡಿದರು.ನಮ್ಮ ಅನೇಕ ವಿಶ್ವವಿದ್ಯಾಲಯಗಳಲ್ಲಿ ಯಕ್ಷಗಾನದ ಸಾಹಿತ್ಯ, ಸಂಗೀತ, ಮೇಳಗಳು, ಕಲಾವಿದರು ಮುಂತಾದ ವಿಚಾರಗಳ ಕುರಿತು ಗಂಭೀರ ಅಧ್ಯಯನಗಳು ನಡೆದಿವೆ. (ಆನಂದರಾಮ ಉಪಾಧ್ಯ, ಪ್ರಭಾಕರಜೋಷಿ, ಪಾದೇಕಲ್ಲು ವಿಷ್ಣುಭಟ್ಟ, ನಾರಾಯಣಶೆಟ್ಟಿ, ಶ್ರೀಧರ ಉಪ್ಪರು ಇತ್ಯಾದಿ ಮಹನೀಯರು) ಇದರಿಂದ ಕನ್ನಡ ಸಂಶೋಧನೆಯ ಮಹತ್ವ ಇನ್ನಷ್ಟು ಹೆಚ್ಚಿದೆ ಎಂದು ಧಾರಾಳವಾಗಿ ಹೇಳಬಹುದು. ಯಕ್ಷಗಾನ ಕಲಾವಿದರಿಗೆ ಇದರಿಂದ ಶೈಕ್ಷಣಿಕವಾದ ಸ್ಥಾನಮಾನಗಳೂ ಪ್ರಾಪ್ತವಾಗಿವೆ. ನಮ್ಮ ಪ್ರತಿಭಾವಂತ ಕಲಾವಿದರಿಗೆ ವಿಶ್ವವಿದ್ಯಾಲಯಗಳಿಂದ ಗೌರವ ಡಾಕ್ಟರೇಟ್ ಪದವಿಗಳೂ (ಕೆರೆಮನೆ ಮಹಾಬಲ ಹೆಗಡೆ, ಶೇಣಿ ಗೋಪಾಲಕೃಷ್ಣ ಭಟ್, ಕೋಳ್ಯೂರು ರಾಮಚಂದ್ರರಾವ್ ಮುಂತಾದವರು) ಕೇಂದ್ರ ಸಂಗೀತ ಮತ್ತು ನೃತ್ಯ ಅಕಾಡೆಮಿಯಿಂದ ಪುರಸ್ಕಾರಗಳೂ (ಕೆರೆಮನೆ ಶಿವರಾಮ ಹೆಗಡೆ, ಹಾರಾಡಿ

ರಾಮಗಾಣಿಗ, ಕೆರೆಮನೆ ಶಂಭು ಹೆಗಡೆ, ಗೋವಿಂದ ಭಟ್ ಇತ್ಯಾದಿ) ಬಂದಿವೆ. ಇತ್ತೀಚೆಗೆ ದಿ. ಚಿಟ್ಟಾಣಿ ರಾಮಚಂದ್ರ ಹೆಗಡೆ ಅವರಿಗೆ ಸಂದ ಪದ್ಮಶ್ರೀ ಗೌರವವನ್ನೂ ಇಲ್ಲಿ ನೆನಪಿಸಿಕೊಳ್ಳಬಹುದು. (ಈ ಗೌರವಕ್ಕೆ ಅರ್ಹರಾದ ಇನ್ನೂ ಹಲವು ಕಲಾವಿದರು, ಕವಿಗಳು, ವಿದ್ವಾಂಸರು ಯಕ್ಷಗಾನ ಕ್ಷೇತ್ರದಲ್ಲಿ ಇದ್ದಾರೆ ಎನ್ನುವುದು ಸತ್ಯ.)

**ಕನ್ನಡದ ಭಾಷಾಭಿಮಾನ :**

ಪಶ್ಚಿಮದ ಸಾಹಿತ್ಯದ ಪ್ರೇರಣೆಯಿಂದ ಕನ್ನಡದಲ್ಲಿ ನವೋದಯ ಪ್ರಜ್ಞೆ ಮನೆಮಾಡಿತೆಂಬುದು ನಿಜವಾದರೂ, ಅದು ಪೂರ್ಣ ಸತ್ಯವಲ್ಲ. ಭಾಷಾಭಿಮಾನದ ದೃಷ್ಟಿಯಿಂದ ನೋಡಿದರೆ, ಕನ್ನಡ ಪ್ರಜ್ಞೆಯಕ್ಷಗಾನ ಕವಿಗಳಲ್ಲಿ ಅದಕ್ಕಿಂತ ಮೊದಲೇ ಇತ್ತು! ಉದಾಹರಣೆಗೆ ಪಾರ್ತಿ ಸುಬ್ಬನ (೧೫೭೦-೧೬೨೦) 'ಪಂಚವಟಿ' ಪ್ರಸಂಗದಲ್ಲಿ ಕಂಡುಬರುವ ಒಂದು ಪದ್ಯ:

ತರಬೇಕು ತರುಣಿಯಳ | ಕಾಮನ ಮುಂಗೈ |

ಅರಗಿಣಿಯಂತಿರ್ಪಳ 1

ಪನ್ನಗನಿಭವೇಣಿಯ | ಪಂಕಜದೆಸಳ್ |

ಗಣ್ಣಕನ್ನಡಜಾಣೆಯ

ಇಲ್ಲಿ ಪ್ರಯುಕ್ತವಾದ 'ಕನ್ನಡಜಾಣೆ' ಯಕ್ಷಗಾನಕವಿಯ ಕನ್ನಡ ಭಾಷಾಭಿಮಾನದ ಫಲ, ಸೀತೆಯನ್ನು ಕನ್ನಡಜಾಣೆಯೆಂದು ಶೂರ್ಪನಖಿಯ ಮೂಲಕ ಹೇಳಿಸುವ ಕವಿ ನಮ್ಮ ಹೃದಯದಲ್ಲಿ ವಿಶೇಷವಾದ ಮನ್ನಣೆಗೆ ಅರ್ಹನಾಗುತ್ತಾನೆ. 'ಕನ್ನಡಜಾಣೆ' ಎಂಬುದು “ಶುಕವಾಣಿ'ಎಂಬ ಶಬ್ದಕ್ಕೆ ಪರ್ಯಾಯವಾದರೂ, ಅದರ ಹಿನ್ನೆಲೆಯಲ್ಲಿ ಭಾಷೆಯ ಅಭಿಮಾನವಿರುವುದು ಸ್ಪಷ್ಟ ಈ ನುಡಿಪ್ರೀತಿ ಮುದ್ದಣಕವಿಯಲ್ಲಿ ಚಿಗುರಿ ಹೂವಾಯಿತು. ಕುಮಾರವಿಜಯ ಪ್ರಸಂಗದ ಮಂಗಳದಲ್ಲಿ “ಕನ್ನಡಿಗರನು ಪೊರೆವ ಶಂಕರ ಕನ್ನಡಿಗನು” ಎಂದು ಹೇಳಿರುವುದು ಕನ್ನಡ ಭಾಷೆಯ ಮೇಲೆ ಅವನಿಗಿದ್ದ ಅಭಿಮಾನವನ್ನು ಸೂಚಿಸುತ್ತದೆ. ಈ ಹಿನ್ನೆಲೆಯಲ್ಲಿ ಅವನು ಕನ್ನಡ ಸಾಹಿತ್ಯದ 'ನವೋದಯದ ಮುಂಗೋಳಿ'ಯೆನಿಸಿದ್ದು ಅರ್ಥಪೂರ್ಣ.

**ಮೈಸೂರಿನ ಯಕ್ಷಗಾನ ಕವಿಗಳು :**

ಕರಾವಳಿ ಮತ್ತು ಮಲೆನಾಡು ಪ್ರದೇಶಗಳಿಂದ ಪಾರ್ತಿಸುಬ್ಬ, ದೇವಿದಾಸ, ಹಟ್ಟಿಯಂಗಡಿ ರಾಮಭಟ್ಟ, ಹಲಸಿನಹಳ್ಳಿ ನರಸಿಂಹಶಾಸ್ತ್ರಿ ಮುಂತಾದ ನೂರಾರು ಕವಿಗಳು ಯಕ್ಷಗಾನಕಾವ್ಯವನ್ನು ಶ್ರೀಮಂತಗೊಳಿಸಿದ್ದಾರೆ.

ಪ್ರತಿವರ್ಷವೂ ಯಕ್ಷಗಾನ ಕವಿಗಳ ಸಂಖ್ಯೆ ಹೆಚ್ಚುತ್ತಿದೆ ಎಂಬುದೂ ಸಂತೋಷದ ಸಂಗತಿ. ಮೈಸೂರಿನ ಮಹಾರಾಜರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರೂ (೧೭೯೪-೧೮೬೮) ಯಕ್ಷಗಾನ



ಕವಿಗಳೆಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು. ಅವರು ಭಾಮಾಕಥೆ, ದಕ್ಷಾಧ್ವರ, ಸಹಸ್ರಾಯುಚರಿತ್ರೆ, ಶ್ರೀ ಪ್ರಸನ್ನ ಕೃಷ್ಣಕೊರವಂಜಿ ಮುಂತಾದ ಯಕ್ಷಗಾನ ಕೃತಿಗಳನ್ನು ರಚಿಸಿದ್ದಾರೆ. ಧರ್ಮಸ್ಥಳದ ಹೆಗ್ಗಡೆಯವರಿಗೆ ಪತ್ರವನ್ನು ಬರೆದು ಒಂದು ಯಕ್ಷಗಾನ ಮೇಳವನ್ನೇ ಮೈಸೂರಿಗೆ ಕರೆಸಿಕೊಂಡು ನಿರಂತರ ಯಕ್ಷಗಾನ ಪ್ರದರ್ಶನಕ್ಕೆ ವ್ಯವಸ್ಥೆ ಮಾಡಿದವರು ಅವರು. ಹಾಗೆ ಬಂದು ಬಿಡಾರ ಹೂಡಿದ ಮನೆತನದಲ್ಲಿಯೇ ಬಿಡಾರಂ ಕೃಷ್ಣಪ್ಪರೆಂಬ ಪ್ರಸಿದ್ಧ ಸಂಗೀತ ವಿದ್ವಾಂಸರು ಜನಿಸಿದರು. ಮುಮ್ಮಡಿ ಒಡೆಯರ ಅಳಿಯಂದಿರಾದ ಅಳಿಯ ಲಿಂಗರಾಜರ (೧೮೨೩-೧೮೭೪) ಯಕ್ಷಗಾನಕವಿಯೆಂಬುದು ಮುಖ್ಯಸಂಗತಿ. ಅವರು ರಚಿಸಿದ ಅಂಗದ ಸಂಧಾನ, ಇಂದ್ರಕೀಲ, ಗಿರಿಜಾಕಲ್ಯಾಣ, ಜಲಂಧರನ ಕಾಳಗ, ಸುಧನ್ವಕಾಳಗ ಮುಂತಾದ ನಲುವತ್ತರಷ್ಟು ಯಕ್ಷಗಾನ ಪ್ರಸಂಗಗಳು ಪ್ರತ್ಯೇಕ ಅಧ್ಯಯನವನ್ನು ಅಪೇಕ್ಷಿಸುತ್ತವೆ. ಅರಸು ಮನೆತನದವರಾದ ಶಾಲ್ಯದ ಕೃಷ್ಣರಾಜರು ಧರ್ಮಗುಪ್ತಚರಿತ್ರೆ ಎಂಬ ಯಕ್ಷಗಾನ ಕೃತಿಯನ್ನು ರಚಿಸಿದ್ದಾರೆ. ಕೆಂಪಣ್ಣಗೌಡ (ಕರಿಬಂಟನಕಥೆ), ನಂಜುಂಡ ಭಾಗವತ (ವೃಷಭೇಂದ್ರ ವಿಲಾಸ), ವೀರನಗೆರೆ ಪುಟ್ಟಣ್ಣಯ್ಯ, ಮೋಟಗಾನಹಳ್ಳಿ ರಾಮಶೇಷಶಾಸ್ತ್ರಿ, ದಾಸಯ್ಯ ಭಾಗವತ ಮುಂತಾಗಿ ಸುಮಾರು ಇಪ್ಪತ್ತಕ್ಕಿಂತಲೂ ಹೆಚ್ಚು ಯಕ್ಷಗಾನ ಕವಿಗಳು ಮೈಸೂರು ಪ್ರದೇಶದವರೆಂದು ತಿಳಿದುಬರುತ್ತದೆ. ಆಧುನಿಕ ಕನ್ನಡದ ಹಿರಿಯ ಕವಿಗಳಾದ ಪು.ತಿ.ನರಸಿಂಹಾಚಾರ್ಯ ಅವರೂ 'ರಾವಣ ಬಂದು ಹೋದುದು ಎಂಬ ಯಕ್ಷಗಾನ ಕೃತಿಯನ್ನು ರಚಿಸಿದ್ದಾರೆ. ಗಂಗಾಧರ ಶಾಸ್ತ್ರಿ (ಶನಿಮಹಾತ್ಮ), ಕೈ.ಕೃಷ್ಣಕುಮಾರಾಚಾರ್ಯ (ಪೂರ್ಣಪ್ರಜ್ಞ ವಿಜಯ) ಮೈಸೂರಿನವರೆಂಬುದು ಗಮನಾರ್ಹ.

**ಸರಕಾರ ನೀಡಬೇಕಾದ ಮೂರು ವರಗಳು :**

ಕನ್ನಡನಾಡಿನಲ್ಲಿ ಯಕ್ಷಗಾನಕಲೆಯು ಎಷ್ಟು ಮಹತ್ವದ ಸ್ಥಾನವನ್ನು ಹೊಂದಿದೆ ಎಂಬುದು ಈ ವಿವೇಚನೆಯಿಂದ ತಿಳಿಯುತ್ತದೆ. ಆದರೆ ಈ ಕಲೆ ರಾಜಾಶ್ರಯವಿಲ್ಲದೆ ಸೊರಗಿದೆ ಎಂದು ಹೇಳಲೇಬೇಕಾಗಿದೆ. ಕನಿಷ್ಠಪಕ್ಷ ಉಳಿದ ಕಲೆಗಳ ಸಾಲಿನಲ್ಲಾದರೂ ಈ ಕಲೆಗೆ ಪೀಠ ನೀಡುವುದು ಬೇಡವೆ? ಈ ಸಾಹಿತ್ಯ ಸಮ್ಮೇಳನದಲ್ಲಿ ವ್ಯಕ್ತವಾಗುವ ವಿಷಯಗಳ ಕುರಿತು ಗಂಭೀರವಾಗಿ ಚಿಂತಿಸಲಾಗುತ್ತದೆ ಎಂದು ಸಮ್ಮೇಳನವನ್ನು ಉದ್ಘಾಟಿಸುತ್ತಾ ಸನ್ಮಾನ್ಯ ಕರ್ನಾಟಕದ ಮುಖ್ಯಮಂತ್ರಿಗಳು ಭರವಸೆ ನೀಡಿರುವುದು ನಮಗೆ ಉತ್ಸಾಹವನ್ನು ಉಂಟುಮಾಡಿದೆ. ಯಕ್ಷಗಾನಕ್ಕೆ ಸಂಬಂಧಪಟ್ಟು ಮೂರು ಮುಖ್ಯ ಬೇಡಿಕೆಗಳನ್ನು ಇಲ್ಲಿ ಮಂಡಿಸಲಾಗಿದೆ.

**ಒಂದು :**

ಯಕ್ಷಗಾನಕ್ಕೆ ಪ್ರತ್ಯೇಕ ಅಕಾಡೆಮಿ ಬೇಕೆಂಬ ಕೂಗು ಅನೇಕ ವರ್ಷಗಳದ್ದು. ಅದನ್ನು ಯಾವ ಸರಕಾರಗಳೂ ಕೇಳಿಸಿಕೊಂಡೇ ಇಲ್ಲ. ಆದರೆ ಇತ್ತೀಚೆಗೆ ಯಕ್ಷಗಾನ



ಮತ್ತು ಬಯಲಾಟ ಅಕಾಡೆಮಿಯಿಂದ ಬಯಲಾಟವನ್ನು ಪ್ರತ್ಯೇಕಿಸಿ ಎರಡು ಸ್ವತಂತ್ರ ಅಕಾಡೆಮಿಗಳನ್ನು ಸ್ಥಾಪಿಸಲಾಗುವುದೆಂದು ಸರಕಾರ ಹೇಳಿದೆ. ಯಕ್ಷಗಾನದ ತಾಳ ಮದ್ದಳೆ ಚೆಂಡೆಗಳ ನಿನಾದ ಈಗಲಾದರೂ ಈ ಸರಕಾರಕ್ಕೆ ಕೇಳಿಸಿತಲ್ಲ! ಅದಕ್ಕಾಗಿ ಹಾರ್ದಿಕ ಅಭಿನಂದನೆಗಳು. ಆದರೆ ಈ ಘೋಷಣೆ ಇನ್ನೂ ಕಾರ್ಯಗತವಾಗಿಲ್ಲ. ಚುನಾವಣೆಯು ಸಮೀಪಿಸುತ್ತಿರುವುದರಿಂದ ಪ್ರತ್ಯೇಕ ಯಕ್ಷಗಾನ ಅಕಾಡೆಮಿಯನ್ನು ಅತ್ಯಂತ ಶೀಘ್ರವಾಗಿ ಕಾರ್ಯಾರಂಭಗೊಳಿಸಬೇಕೆಂದು ಕಳಕಳಿಯ ವಿನಂತಿ.

**ಎರಡು :**

ಕರ್ನಾಟಕ ಸರಕಾರವು ಪ್ರತಿವರ್ಷ ಇಪ್ಪತ್ತಕ್ಕೂ ಹೆಚ್ಚು ಪ್ರಶಸ್ತಿಗಳನ್ನು ವಿವಿಧ ಕಲೆಗಳಿಗೆ ನೀಡಿ ಪ್ರೋತ್ಸಾಹಿಸುತ್ತದೆ. ಇವುಗಳಲ್ಲಿ ಪಂಪ ಪ್ರಶಸ್ತಿ, ಬಸವ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿ, ಕನಕಶ್ರೀ ಪ್ರಶಸ್ತಿ (ಸಾಹಿತ್ಯ), ಗುಬ್ಬಿ ವೀರಣ್ಣ ಪ್ರಶಸ್ತಿ, ಬಿ.ವಿ.ಕಾರಂತ ಪ್ರಶಸ್ತಿ (ರಂಗಭೂಮಿ), ಕನಕ ಪುರಂದರ ಪ್ರಶಸ್ತಿ (ಸಂಗೀತ), ಕುಮಾರವ್ಯಾಸ ಪ್ರಶಸ್ತಿ (ಗಮಕ), ಸಂತ ಶಿಶುನಾಳ ಪ್ರಶಸ್ತಿ (ಸುಗಮ ಸಂಗೀತ), ಶಾಂತಲಾ ಪ್ರಶಸ್ತಿ (ನೃತ್ಯ), ಜಕಣಾಚಾರಿ ಪ್ರಶಸ್ತಿ (ಶಿಲ್ಪ), ವರ್ಣಶಿಲ್ಪಿ ವೆಂಕಟಪ್ಪ ಪ್ರಶಸ್ತಿ (ಚಿತ್ರಕಲೆ), ಜಾನಪದಶ್ರೀ ಪ್ರಶಸ್ತಿ (ಜಾನಪದ) ಇತ್ಯಾದಿ. ಇವುಗಳು ಅಕಾಡೆಮಿಗಳನ್ನು ಹೊರತುಪಡಿಸಿ ಸರಕಾರವೇ ನೇರವಾಗಿ ನೀಡುವ ಪ್ರಶಸ್ತಿಗಳಾಗಿವೆ. ಈ ಕಲೆಗಳ ಸಾಲಿನಲ್ಲಿ ಯಕ್ಷಗಾನಕ್ಕೆ ಏಕೆ ಸ್ಥಾನವಿಲ್ಲ? ಈ ಪ್ರಶಸ್ತಿ ಪ್ರದಾನ ಸಮಾರಂಭದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಾಹೀರಾತಿನಲ್ಲಿ ಮಾತ್ರ ಯಕ್ಷಗಾನದ ಚಿತ್ರವಿರುವುದು ಕ್ರೂರವ್ಯಂಗ್ಯವಲ್ಲವೆ? ಈ ಮಲತಾಯಿ ಧೋರಣೆಯನ್ನು ತಾಳದೆ ನಮ್ಮ ಸರಕಾರ ಇತರ ಕಲೆಗಳಂತೆಯೇ ಯಕ್ಷಗಾನಕಲೆಯನ್ನೂ ಗುರುತಿಸಿ ಗೌರವಿಸಬೇಕು. ದೇವಿದಾಸ, ಮುದ್ದಣ ಅಥವಾ ಡಾ. ಶಿವರಾಮ ಕಾರಂತರ ಹೆಸರಿನಲ್ಲಿ ಈ ಪ್ರಶಸ್ತಿಯನ್ನು ನೀಡಬಹುದು.

**ಮೂರು :**

ಕರ್ನಾಟಕ ರಾಜ್ಯವು 'ಜಯಭಾರತ ಜನನಿಯ ತನುಜಾತೆ' ಎಂಬ ಕುವೆಂಪು ವಿರಚಿತ ಗೀತೆಯನ್ನು ನಾಡಗೀತೆ ಎಂದು ಘೋಷಿಸಿದೆ. ಹಾಗೆಯೇ ಪ್ರತ್ಯೇಕ 'ನಾಡಧ್ವಜ'ವನ್ನು ಸ್ವೀಕರಿಸುವುದರಲ್ಲಿ ತಪ್ಪೇನಿಲ್ಲ ಎಂದು

ಹೇಳುತ್ತಿದೆ. ಇದರೊಂದಿಗೆ ಸಮಗ್ರ ಕರ್ನಾಟಕವನ್ನು ಸಮರ್ಥವಾಗಿ ಪ್ರತಿನಿಧಿಸುವ ಯಕ್ಷಗಾನಕಲೆಗೆ 'ನಾಡಕಲೆ' ಎಂಬ ಮನ್ನಣೆಯನ್ನು ನೀಡಬೇಕು. ಯಕ್ಷಗಾನಕಲೆಯನ್ನು ಕರ್ನಾಟಕದ ಪ್ರಾತಿನಿಧಿಕ ಕಲೆಯೆಂದು ಘೋಷಿಸಿ ಶತಮಾನಗಳ ಕನ್ನಡ ಪರಂಪರೆಯನ್ನು ಗೌರವಿಸಬೇಕು ಎಂದು ಒತ್ತಾಯಿಸುತ್ತೇವೆ.

ಸಿರಿಗನ್ನಡಂ ಗೆಲ್ಗ! ಯಕ್ಷಗಾನಂ ಬಾಳೆ!

೮೩ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಮೈಸೂರು | ೪೧೩

## ಲಲಿತಕಲೆಗಳಿಗೆ ಪ್ರಾಮುಖ್ಯತೆ ದೊರೆಯಬೇಕು (ಪ್ರತಿಕ್ರಿಯೆ)

**- ಡಾ. ಜಿ.ಎಸ್. ಭೂಸಗೊಂಡ**

ಪ್ರಾಚೀನ ಕಾಲದಿಂದಲೂ ಕನ್ನಡ ಸಾಹಿತ್ಯದ ಜೊತೆಜೊತೆಗೆ ಚಿತ್ರಕಲೆ ಕೂಡ ಬೆಳೆದುಬಂದಿರುವುದನ್ನು, ಒಂದರ್ಥದಲ್ಲಿ ಭಾಷೆಗಿಂತ ಮುಂಚೆಯೇ ಚಿತ್ರಕಲೆ ಜನಿಸಿದ್ದು ಗುಹೆಗಳಲ್ಲಿನ ಅನೇಕ ಚಿತ್ರಗಳಿಂದ ತಿಳಿದುಬರುತ್ತದೆ.

ಚಿತ್ರಕಲೆಗೆ ಕರ್ನಾಟಕದಲ್ಲಷ್ಟೇ ಅಲ್ಲ ಎಲ್ಲಿ ಕಲೆ ಅಭಿವೃದ್ಧಿ ಪಡೆದಿದೆಯೋ ಅಲ್ಲೆಲ್ಲ ರಾಜಾಶ್ರಯವೇ ಅದಕ್ಕೆ ಪೂರಕವಾಗಿ ನಿಂತಿದ್ದು ಇತಿಹಾಸದಿಂದ ತಿಳಿದುಬರುತ್ತದೆ. ಕರ್ನಾಟಕದ ಮಟ್ಟಿಗೆ ಚಿತ್ರಕಲೆಗೆ ವಿಶೇಷ ಸ್ಥಾನಮಾನವಿದೆ ಎಂಬುದು ನಾವೆಲ್ಲಾ ಹೆಮ್ಮೆಪಡುವಂತಹದು. ಪ್ರಮುಖವಾಗಿ ಕರ್ನಾಟಕದಲ್ಲಿ ಚಿತ್ರಕಲೆಯಲ್ಲಿ ೨ ಪಂಥಗಳನ್ನು ನಾವು ಗುರುತಿಸಬಲ್ಲೆವು. ೧. ದಖ್ಖನಿ ಶೈಲಿಯ ಚಿತ್ರಕಲೆ, ೨. ಮೈಸೂರು ಶೈಲಿಯ ಚಿತ್ರಕಲೆ, ದಖ್ಖನಿ ಶೈಲಿಯ ಚಿತ್ರಕಲೆ ಕಾಲಾಂತರದಲ್ಲಿ ಅದರ ಬಳಕೆ, ಕಲಿಕೆ ಕಡಿಮೆಯಾದ್ದರಿಂದ ನೇಪಥ್ಯಕ್ಕೆ ಸರಿಯಿತು. ಆದರೆ ದುಂಡನೆಯ ಶರೀರ, ಮುಖವರ್ಣಿಕೆ, ಅಲಂಕಾರಯುಕ್ತ ತಂಪುವರ್ಣಗಳೊಂದಿಗೆ ಆನಂದವನ್ನು ನೀಡುವಂತ ಚಿತ್ರಶೈಲಿ ಹಾಗೇ ಮುಂದುವರೆದು ಬಂತು. ಇದನ್ನೇ ನಾವು ಮೈಸೂರು ಶೈಲಿ ಎಂದು ಕರೆಯುತ್ತೇವೆ. ಇಂದಿಗೂ ಅದು ಮುಂದುವರೆದುಕೊಂಡು ಬಂದಿದೆ. ಕನ್ನಡ ಸಾಹಿತ್ಯದ ಜೊತೆಜೊತೆಯಾಗಿಯೇ ಬೆಳೆದುಬಂದಿದೆ ಈ ಚಿತ್ರಕಲೆ. ಆದರೆ ಸಾಹಿತ್ಯಕ್ಕೆ ಸಿಕ್ಕ ಮನ್ನಣೆ ಚಿತ್ರಕ್ಕೆ ಸಿಗದಿದ್ದುದು ವಿಷಾದನೀಯ ಎನಿಸುತ್ತದೆ. ಸಾಹಿತ್ಯಕ್ಕೆ ಮಾತ್ರ ಹೆಚ್ಚು ಒತ್ತುಕೊಟ್ಟು ಎಲ್ಲಾ ಲಲಿತಕಲೆಗಳನ್ನು ಕಡೆಗಣಿಸಿದರೆ ಅಥವಾ ಕೊಡಬೇಕಾದಷ್ಟು ಮನ್ನಣೆ ಕೊಡದೇ ಹೋದರೆ ಒಂದರ್ಥದಲ್ಲಿ ಸಾಹಿತ್ಯದ ಬೆಳವಣಿಗೆಗೆ ಹಿನ್ನಡೆ ಎಂದೇ ಹೇಳಿದರೆ ತಪ್ಪಾಗದು. ಇಂದು ಎಲ್ಲ ಮಳಿಗೆಗಳಲ್ಲಿರುವ ಪುಸ್ತಕಗಳನ್ನು ಒಂದು ಬಾರಿ ಕಣ್ಮುಂದೆ ತಂದುಕೊಂಡರೆ, ಯಾವುದೇ ಒಂದೇ ಒಂದು ಗ್ರಂಥ ಕೂಡ ಚಿತ್ರಕಲೆಯಿಲ್ಲದೇ ಮುದ್ರಿತವಾಗಿಲ್ಲ. ಅದರ ಅಂದ ಚೆಂದ ವರ್ಣವೈವಿಧ್ಯದಿಂದ ಓದುಗರು ಮೊದಲು ಮನಸೋಲುವುದು ಆ ಗ್ರಂಥದ ಮುಖಪುಟಕ್ಕೆ,ಗ್ರಂಥದ ಆಕರ್ಷಣೆಯಲ್ಲಿ ಅದರ ಕಲಾ ರಚನೆಯೇ ಪ್ರಮುಖ. ಹೀಗಿರುವಾಗ ಲಲಿತಕಲೆಯ ಪ್ರಮುಖ

ಭಾಗವಾದ ಚಿತ್ರಕಲೆಗೆ ತುಂಬಾ ವರ್ಷಗಳ ನಂತರ ೮೩ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ 'ಕರ್ನಾಟಕ ಕಲಾಜಗತ್ತು' ಎಂಬ ಶೀರ್ಷಿಕೆಯಡಿ ಸಂಗೀತ, ನೃತ್ಯ, ನಾಟಕ ಸೇರಿದಂತೆ ಚಿತ್ರಕಲೆ ವಿಷಯಕ್ಕೂ ವೇದಿಕೆ ಕಲ್ಪಿಸಿದ್ದು, ಆ ಮೂಲಕ ಹೊಸದೊಂದು ಪರಂಪರೆಯನ್ನು ಹುಟ್ಟುಹಾಕಿದ ಕೀರ್ತಿ ಕ.ಸಾ.ಪ. ಅಧ್ಯಕ್ಷರಾದ ಶ್ರೀ ಮನು ಬಳಿಗಾರ ಅವರಿಗೆ ಸಲ್ಲುತ್ತದೆ.

**ಚಿತ್ರಕಲೆ ಮತ್ತು ಸಾಹಿತ್ಯ**

ಈ ನಾಡಿನ ಕಲಾ ಚರಿತ್ರೆಯು ಅಲ್ಲಲ್ಲಿಯ ಜನಾಂಗದ ಚಿತ್ರಶಾಲೆಯ ಅಂತಃಕರಣದ



ತರಂಗಮಾಲೆಯ, ಮನದ ಉಯ್ಯಾಲೆಯ, ಬುದ್ಧಿಯ ನಿಶ್ಚಲತೆಯ ಚರಿತ್ರೆಯೇ ಆಗಿರುವುದು. ಹೀಗೆ ಕಲೆಗಳು ನಾಡಿನ ಮನಶ್ಚಂದ್ರನ ಕಲೆಗಳಿದ್ದಂತೆ. ಬಾದಾಮಿಯ ಚಾಲುಕ್ಯ ಇಮ್ಮಡಿ ಪುಲಕೇಶಿಯಿಂದ ಮೊದಲ್ಗೊಂಡು ಕಲ್ಯಾಣದ ವಿಕ್ರಮನವರೆಗೂ, ಲೇಪಾಕ್ಷಿಯಿಂದ ಅಜಂತಾ ಗುಹೆಗಳವರೆಗೂ ಕನ್ನಡ ಚಿತ್ರಶಿಲ್ಪಿಗಳು ತಮ್ಮ ಕಲಾಕೌಶಲ್ಯ ಮೆರೆದಿದ್ದಾರೆ. ನಮ್ಮ ಕನ್ನಡ ಸಾಹಿತ್ಯದಲ್ಲಿ ಪಂಪ, ಅಭಿನವ ಪಂಪ, ಚಾಮರಸ, ಸೋಮರಾಜ, ನಾಗರಾಜ, ನೇಮಿಚಂದ್ರ, ಹರಿಹರ, ೨ನೇ ನಾಗವರ್ಮ, ಜನ್ನ, ಪೊನ್ನ, ಲಕ್ಷ್ಮೀಶ, ರುದ್ರಭಟ್ಟ ಮುಂತಾದ ಕವಿಗಳ ಕೃತಿಗಳಲ್ಲಿಯೂ ಸಂದರ್ಭೋಚಿತವಾಗಿ ಚಿತ್ರ ನಿರ್ಮಿತಿಯನ್ನು ಮಾಡಿರುವುದುಂಟು. ಹೀಗೆ ಎಲ್ಲ ಕಲೆಗಳ ಮೂಲ ಉದ್ದೇಶ ಸಂವಹನವೇ.ಆದರೆ ಇತ್ತೀಚೆಗೆ ಚಿತ್ರಕಲಾ ಕ್ಷೇತ್ರದಲ್ಲಿ ನಡೆಯುತ್ತಿರುವ ಹೊಸ ಪ್ರಯೋಗಗಳು ಹೆಚ್ಚು ಜನರಿಗೆ ತಲುಪುತ್ತಿಲ್ಲ. ಸಾಹಿತ್ಯ ಹೇಗೆ ಜನಸಮೂಹಕ್ಕೆ ಹತ್ತಿರವಾಗಿದೆಯೋ ಅದೇ ಪ್ರಮಾಣದಲ್ಲಿ ಚಿತ್ರಕಲೆ ಹತ್ತಿರವಾಗುತ್ತಿಲ್ಲ. ಇದಕ್ಕೆ ಕಾರಣ ಅದರ ಅಭಿವ್ಯಕ್ತಿ ಮಾಧ್ಯಮದ ನೆಲೆಯಲ್ಲಿ ಇರುವ ಇತಿಮಿತಿಗಳು ಎನ್ನಬಹುದು.ಕಲಾ ಪ್ರಕಾರಗಳಿಗೂ ಸಾಹಿತ್ಯಕ್ಕೂ ಅಭಿವ್ಯಕ್ತಿ ಮಾಧ್ಯಮದ ನೆಲೆಯಲ್ಲಿ ಮೂಲಭೂತ ವ್ಯತ್ಯಾಸಗಳಿವೆ. ಜನರ ಹೃದಯವನ್ನು ಸುಲಭವಾಗಿ ತಟ್ಟಬಲ್ಲ ಶಕ್ತಿ ಸಾಹಿತ್ಯಕ್ಕಿದೆ. ಈ ದೃಷ್ಟಿಯಿಂದ ಸಾಹಿತ್ಯ ಶಕ್ತಿಯುತವಾದುದು. ಚಿತ್ರಕಲೆ ಗೋಚರ ಜಗತ್ತಿಗೆ ಸಂಬಂಧಿಸಿದ ಒಂದು ಮಾಧ್ಯಮ.ಇದಕ್ಕೆ ಭಾಷೆಗೆ ಇರುವ ಇತಿಮಿತಿಗಳು ಇಲ್ಲ. ಒಂದು ಕಲಾಕೃತಿಯನ್ನು ಯಾವುದೇ ದೇಶದ ಸಹೃದಯನೊಬ್ಬ ಹೆಚ್ಚೇನು ಶ್ರಮವಿಲ್ಲದೇ ನಮ್ಮಂತೆಯೇ ನೋಡಿ ಗ್ರಹಿಸಬಲ್ಲ, ಆನಂದಿಸಬಲ್ಲ. ಚಿತ್ರಕಲೆಯ ವೈಶ್ಯಾಲ್ಯತೆ ಇರುವುದು ಇಲ್ಲಿಯೇ. ಆದ್ದರಿಂದಲೇ ಕಲೆ ಭಾಷಾತೀತವಾದುದು, ದೇಶಾತೀತವಾದದು.ಆದರೆ ಸಾಹಿತ್ಯದಲ್ಲಿ ಇದು ಸಾಧ್ಯವಾಗುವುದಿಲ್ಲ. ಅಲ್ಲಿ ಭಾಷೆಯ ಜ್ಞಾನ ಅನಿವಾರ್ಯ.

ಸಾಹಿತ್ಯವು ಭಾಷೆಯ ಮೂಲಕ ತೋಡಿಕೊಳ್ಳುವ ಮಾಧ್ಯಮ. ಸಾಹಿತ್ಯದ ಉದ್ದೇಶ ಹಾಗೂ ಅದರ ಅಭಿವ್ಯಕ್ತಿ ಮಾಧ್ಯಮದ ಭಾಷೆಯ ಉದ್ದೇಶ ಒಂದೇ, ಎರಡರ ಉದ್ದೇಶವೂ ಸಂವಹನವೇ. ಸಾಹಿತ್ಯದ ಮಾಧ್ಯಮವಾದ ಭಾಷೆಯು ಸಾಮಾಜಿಕ ಮಾಧ್ಯಮವೂ ಹೌದು. ನಮ್ಮ ದೈನಂದಿನ ವ್ಯವಹಾರಗಳಲ್ಲಿ ನಮ್ಮ ಎಲ್ಲ ಬಗೆಯ ಸಂವಹನ ಸಂವಾದಗಳಿಗೂ ಬಳಕೆಯಾಗುವ, ಭಾಷೆಯ ಪ್ರಾಯೋಜನಿಕ ಸ್ವರೂಪ ನಮಗೆಲ್ಲ ತಿಳಿದೇ ಇದೆ. ಹೀಗಾಗಿ ಸಾಹಿತ್ಯದಲ್ಲಿ ಒಂದು ವಾಕ್ಯದಲ್ಲಿ ವಾಸ್ತವತೆ ತಾಗಿಸುವ ಒಂದೆರಡು ಪದಗಳೋ ರಚನಾ ವೈಶಿಷ್ಟ್ಯವೋ ಲಯವೋ ಇದ್ದರೆ ಸಾಕು. ಅದು ಸಂಪೂರ್ಣ ವಾಸ್ತವತೆಯ ಭಾಸ ಕೊಟ್ಟುಬಿಡುತ್ತದೆ. ಹೀಗಾಗಿ ಸಾಹಿತ್ಯಕ್ಕಿರುವ ಸ್ಪಷ್ಟತೆ (Clarity) ಚಿತ್ರಕಲೆಗೆ ಬರುವುದಿಲ್ಲ.

ಭಾಷೆಯೊಳಗೆ ಪ್ರತಿಯೊಂದು ಶಬ್ದಕ್ಕೂ ಒಂದು ಸ್ವತಂತ್ರ ಅರ್ಥ ಅಥವಾ ಕಲ್ಪನೆಯಿದೆ.ಕೆಲವು ಶಬ್ದಗಳಿಗೆ ಹಲವಾರು ಅರ್ಥಗಳಿರಬಹುದು.ಸಂದರ್ಭಾನುಸಾರ ಅರ್ಥಗಳು ಬದಲಾಗಬಹುದು.ಚಿತ್ರಕಲೆಯ ಮಾಧ್ಯಮಗಳಾದ ರೇಖೆ ಬಣ್ಣಗಳಿಗೆ



ನಿಶ್ಚಿತವಾದ ಅರ್ಥವಿಲ್ಲ. ಅವು ಪರಿಸ್ಥಿತಿಗೆ ತಕ್ಕಂತೆ ಅರ್ಥ ವ್ಯತ್ಯಾಸವಾಗುತ್ತಾ ಹೋಗುತ್ತವೆ. ಮಾಧ್ಯಮದ ವಿಷಯದಲ್ಲಿಯೂ ಹಾಗೇ, ಇಂದಿನ ಕಲಾವಿದ ರೇಖೆ ಬಣ್ಣಗಳನ್ನಷ್ಟೇ ತನ್ನ ಮಾಧ್ಯಮವನ್ನಾಗಿ ಇಟ್ಟುಕೊಂಡಿಲ್ಲ, ಕೊಲಾಜ್ ಮಾಧ್ಯಮದಲ್ಲಿ ಕಾಗದದ ಚೂರುಗಳನ್ನು, ಬಣ್ಣದ ವಸ್ತುಗಳ ಚೂರುಗಳನ್ನು ಬಳಸಿ ಹೊಸ ಪ್ರಯೋಗಗಳನ್ನು ಮಾಡಲು ನಮಗೆ ವಿಶಾಲವಾದ ಮಾರ್ಗವಿದೆ. ಸಾಹಿತ್ಯಕ್ಕೆ ಇಲ್ಲಿಯೂ ಮಿತಿಗಳಿವೆ.

ಸಾಹಿತ್ಯಕೃತಿಯಲ್ಲಿ ಸಮಸ್ತ ಅರ್ಥವೂ ಭಾಷೆಯೊಂದರಲ್ಲೇ ಮೈದಾಳಿಕೊಳ್ಳಬೇಕು. ಭಾಷೆಯೊಂದೇ ಅದರ ಸಾಧನ ಸಾಮಗ್ರಿಯಾದುದರಿಂದ ಅಲ್ಲಿ ಅದು 'ಧ್ವನಿ' ಪೂರ್ಣವಾಗಿರಬೇಕಾಗುತ್ತದೆ. ಚಿತ್ರಕಲೆಯಲ್ಲಿ ಹಾಗಿಲ್ಲ. ಶಾಕ ಅಭಿವ್ಯಕ್ತಿಗೆ (Verbal Expression) ಹೆಚ್ಚಾಗಿ ಅಂಟಿಕೊಂಡಿರುವ ನಮ್ಮ ಸಮಾಜ ಅಶಾಬ್ಲಿಕ ಅಭಿವ್ಯಕ್ತಿಯ (Nonsleybal Expression) ಮಹತ್ವವನ್ನು ಹೆಚ್ಚಾಗಿ ಗಮನಿಸುವುದಿಲ್ಲ. ಇದಕ್ಕೆ ನಮ್ಮ ಶಿಕ್ಷಣ ಪದ್ಧತಿಯೇ ಕಾರಣ ಎನ್ನಬಹುದು. ಸಾಹಿತ್ಯದಲ್ಲಿ ಭಾಷೆಯ ಬಳಕೆಯನ್ನು ಮೂರು ವಿಧವಾಗಿ ವಿಂಗಡಿಸಬಹುದು. ಒಂದು ವ್ಯಾವಹಾರಿಕ, ನಂತರ ಶಾಸ್ತ್ರೋಕ್ತ, ಕೊನೆಯದಾಗಿ ಭಾವೋಪಯೋಗಿ, ಈ ಮೂರನೆಯ ಹಂತದ ಭಾಷಾ ಬಳಕೆಯಲ್ಲಿ ಕವಿ ಹೇಳುವಾಗ ಕಣ್ಣಿಗೆ ಕಟ್ಟುವಂತೆ ಚಿತ್ರಗಳ ಮೂಲಕ ಅಭಿವ್ಯಕ್ತಿಯನ್ನು ಪಡೆಯುತ್ತದೆ. ಭಾವತೀವ್ರತೆಗೆ ಅಥವಾ ಅಮೂರ್ತಭಾವಗಳಿಗೆ ಅಭಿವ್ಯಕ್ತಿಯನ್ನು ಕೊಡುವಾಗ ಅಮೂರ್ತಪ್ರಪಂಚದ ಚಿತ್ರಗಳನ್ನೇ ಆಶ್ರಯಿಸಬೇಕಾಗುತ್ತದೆ.

ಇತ್ತೀಚೆಗೆ ಸಾಹಿತ್ಯ ಕಲೆಯ ವ್ಯಾಪ್ತಿಯಲ್ಲಿ 'ಇಮೇಜ್' ಎಂಬ ಶಬ್ದ ಹೆಚ್ಚು ಪ್ರಚಲಿತ. ಕನ್ನಡ ಭಾಷೆಯಲ್ಲಿ ಇದಕ್ಕೆ ಸಮನಾಗಿ 'ಪ್ರತಿಮೆ' ಎಂದು ಬಳಸುವುದು (Poetic Image) ಕವಿಯ ಭಾವನುಭಾವಗಳನ್ನು ಶಬ್ದಚಿತ್ರಗಳ ಮೂಲಕ ಸಂವಹನಗೊಳಿಸುವ ಉದ್ದೇಶದ್ದಾಗಿರುತ್ತದೆ. ಹೀಗೆ ಎಷ್ಟೋ ಸಂದರ್ಭಗಳಲ್ಲಿ ಕವಿಯ ಉದ್ದೇಶ ಕಲಾವಿದನಂತೆ ಚಿತ್ರಸೃಷ್ಟಿಯೇ ಆಗಿರುತ್ತದೆ.ಸಾಹಿತ್ಯವನ್ನು ತೆಗೆದು ನೋಡಬಹುದು.ಅದರ ರೂಪನಿಷ್ಪತ್ತಿ ಹೇಗೆ ಎಂಬುದನ್ನು ಪರಿಶೀಲಿಸಬಹುದು, ನಮ್ಮ ವ್ಯವಹಾರದಿಂದಲೂ ತಿಳಿಯಬಹುದು. ಆದರೆ ಚಿತ್ರಕಲೆಯಲ್ಲಿ ಸಾಹಿತ್ಯದಂತೆ ನಿಘಂಟು ನೋಡಲು ಸಾಧ್ಯವಿಲ್ಲ. ನೋಡುಗನ ಚಿತ್ತವೈಶಾಲ್ಯತೆಯೇ ಅವನ ನಿಘಂಟು. ಸಾಹಿತ್ಯದಲ್ಲಿ ಅರ್ಥವಿಲ್ಲದ ಕಾವ್ಯ, ಲೇಖನ ಇರುವುದು ಸಾಧ್ಯವಿಲ್ಲ. ಆದರೆ ಚಿತ್ರಕಲೆಯಲ್ಲಿ ಇದು ಸಾಧ್ಯ.ನಮ್ಮ ಎಲ್ಲ ಕಲಾಕೃತಿಗಳಲ್ಲಿ ಅರ್ಥವೇ ಮುಖ್ಯವಲ್ಲ, ಕೆಲ ಕೃತಿಗಳಲ್ಲಿ ಅರ್ಥ ಹುಡುಕುತ್ತಾ ಹೋದರೆ ಸಿಗುವುದೇ ಇಲ್ಲ.

ಚಿತ್ರ ಹಾಗೂ ಕಾವ್ಯದ ನಡುವಿನ ಭೇದವನ್ನು ಲೇಸಿಂಗ್ ಎಂಬ ಜರ್ಮನ್ ವಿಮರ್ಶಕ ತನ್ನ ಲಕೂನ್' ಗ್ರಂಥದಲ್ಲಿ ಹೀಗೆ ವಿವರಿಸಿದ್ದಾನೆ. “ಕಾವ್ಯ ಸಂಗೀತದಂತೆ ಶೃತಿಗಮ್ಯ ಕಲೆ, ಚಿತ್ರ ದೃಷ್ಟಿಗಮ್ಯ ಕಲೆ. ಆದರೆ ವ್ಯಕ್ತಿಯ ಮನಸ್ಸಿನ ಕ್ರಿಯಾಶೀಲತೆಯನ್ನು ವಿವರಿಸುವಾಗ ಸಾಹಿತ್ಯ ಮೇಲುಗೈ ಪಡೆಯುತ್ತದೆ. ನಿಶ್ಚಲ ವಸ್ತುವಿನ ಚಿತ್ರಣದಲ್ಲಿ ಚಿತ್ರಕಲೆಯೇ ಮೇಲುಗೈ ಪಡೆಯುತ್ತದೆ.ಅಂದರೆ ಒಂದು ರಮಣೀಯ ದೃಶ್ಯವನ್ನು



ತರಂಗಮಾಲೆಯ, ಮನದ ಉಯ್ಯಾಲೆಯ, ಬುದ್ಧಿಯ ನಿಶ್ಚಲತೆಯ ಚರಿತ್ರೆಯೇ ಆಗಿರುವುದು. ಹೀಗೆ ಕಲೆಗಳು ನಾಡಿನ ಮನಶ್ಚಂದ್ರನ ಕಲೆಗಳಿದ್ದಂತೆ. ಬಾದಾಮಿಯ ಚಾಲುಕ್ಯ ಇಮ್ಮಡಿ ಪುಲಕೇಶಿಯಿಂದ ಮೊದಲ್ಗೊಂಡು ಕಲ್ಯಾಣದ ವಿಕ್ರಮನವರೆಗೂ, ಲೇಪಾಕ್ಷಿಯಿಂದ ಅಜಂತಾ ಗುಹೆಗಳವರೆಗೂ ಕನ್ನಡ ಚಿತ್ರಶಿಲ್ಪಿಗಳು ತಮ್ಮ ಕಲಾಕೌಶಲ್ಯ ಮೆರೆದಿದ್ದಾರೆ.ನಮ್ಮ ಕನ್ನಡ ಸಾಹಿತ್ಯದಲ್ಲಿ ಪಂಪ, ಅಭಿನವ ಪಂಪ, ಚಾಮರಸ, ಸೋಮರಾಜ, ನಾಗರಾಜ, ನೇಮಿಚಂದ್ರ, ಹರಿಹರ, ೨ನೇ ನಾಗವರ್ಮ, ಜನ್ನ, ಪೊನ್ನ, ಲಕ್ಷ್ಮೀಶ, ರುದ್ರಭಟ್ಟ ಮುಂತಾದ ಕವಿಗಳ ಕೃತಿಗಳಲ್ಲಿಯೂ ಸಂದರ್ಭೋಚಿತವಾಗಿ ಚಿತ್ರ ನಿರ್ಮಿತಿಯನ್ನು ಮಾಡಿರುವುದುಂಟು. ಹೀಗೆ ಎಲ್ಲ ಕಲೆಗಳ ಮೂಲ ಉದ್ದೇಶ ಸಂವಹನವೇ.ಆದರೆ ಇತ್ತೀಚೆಗೆ ಚಿತ್ರಕಲಾ ಕ್ಷೇತ್ರದಲ್ಲಿ ನಡೆಯುತ್ತಿರುವ ಹೊಸ ಪ್ರಯೋಗಗಳು ಹೆಚ್ಚು ಜನರಿಗೆ ತಲುಪುತ್ತಿಲ್ಲ. ಸಾಹಿತ್ಯ ಹೇಗೆ ಜನಸಮೂಹಕ್ಕೆ ಹತ್ತಿರವಾಗಿದೆಯೋ ಅದೇ ಪ್ರಮಾಣದಲ್ಲಿ ಚಿತ್ರಕಲೆ ಹತ್ತಿರವಾಗುತ್ತಿಲ್ಲ. ಇದಕ್ಕೆ ಕಾರಣ ಅದರ ಅಭಿವ್ಯಕ್ತಿ ಮಾಧ್ಯಮದ ನೆಲೆಯಲ್ಲಿ ಇರುವ ಇತಿಮಿತಿಗಳು ಎನ್ನಬಹುದು.ಕಲಾ ಪ್ರಕಾರಗಳಿಗೂ ಸಾಹಿತ್ಯಕ್ಕೂ ಅಭಿವ್ಯಕ್ತಿ ಮಾಧ್ಯಮದ ನೆಲೆಯಲ್ಲಿ ಮೂಲಭೂತ ವ್ಯತ್ಯಾಸಗಳಿವೆ. ಜನರ ಹೃದಯವನ್ನು ಸುಲಭವಾಗಿ ತಟ್ಟಬಲ್ಲ ಶಕ್ತಿ ಸಾಹಿತ್ಯಕ್ಕಿದೆ. ಈ ದೃಷ್ಟಿಯಿಂದ ಸಾಹಿತ್ಯ ಶಕ್ತಿಯುತವಾದುದು. ಚಿತ್ರಕಲೆ ಗೋಚರ ಜಗತ್ತಿಗೆ

ಸಂಬಂಧಿಸಿದ ಒಂದು ಮಾಧ್ಯಮ.ಇದಕ್ಕೆ ಭಾಷೆಗೆ ಇರುವ ಇತಿಮಿತಿಗಳು ಇಲ್ಲ. ಒಂದು ಕಲಾಕೃತಿಯನ್ನು ಯಾವುದೇ ದೇಶದ ಸಹೃದಯನೊಬ್ಬ ಹೆಚ್ಚೇನು ಶ್ರಮವಿಲ್ಲದೇ ನಮ್ಮಂತೆಯೇ ನೋಡಿ ಗ್ರಹಿಸಬಲ್ಲ, ಆನಂದಿಸಬಲ್ಲ. ಚಿತ್ರಕಲೆಯ ವೈಶ್ಯಾಲ್ಯತೆ ಇರುವುದು ಇಲ್ಲಿಯೇ. ಆದ್ದರಿಂದಲೇ ಕಲೆ ಭಾಷಾತೀತವಾದುದು, ದೇಶಾತೀತವಾದದು.ಆದರೆ ಸಾಹಿತ್ಯದಲ್ಲಿ ಇದು ಸಾಧ್ಯವಾಗುವುದಿಲ್ಲ. ಅಲ್ಲಿ ಭಾಷೆಯ ಜ್ಞಾನ ಅನಿವಾರ್ಯ.

ಸಾಹಿತ್ಯವು ಭಾಷೆಯ ಮೂಲಕ ತೋಡಿಕೊಳ್ಳುವ ಮಾಧ್ಯಮ. ಸಾಹಿತ್ಯದ ಉದ್ದೇಶ ಹಾಗೂ ಅದರ ಅಭಿವ್ಯಕ್ತಿ ಮಾಧ್ಯಮದ ಭಾಷೆಯ ಉದ್ದೇಶ ಒಂದೇ, ಎರಡರ ಉದ್ದೇಶವೂ ಸಂವಹನವೇ. ಸಾಹಿತ್ಯದ ಮಾಧ್ಯಮವಾದ ಭಾಷೆಯು ಸಾಮಾಜಿಕ ಮಾಧ್ಯಮವೂ ಹೌದು. ನಮ್ಮ ದೈನಂದಿನ ವ್ಯವಹಾರಗಳಲ್ಲಿ ನಮ್ಮ ಎಲ್ಲ ಬಗೆಯ ಸಂವಹನ ಸಂವಾದಗಳಿಗೂ ಬಳಕೆಯಾಗುವ, ಭಾಷೆಯ ಪ್ರಾಯೋಜನಿಕ ಸ್ವರೂಪ ನಮಗೆಲ್ಲ ತಿಳಿದೇ ಇದೆ. ಹೀಗಾಗಿ ಸಾಹಿತ್ಯದಲ್ಲಿ ಒಂದು ವಾಕ್ಯದಲ್ಲಿ ವಾಸ್ತವತೆ ತಾಗಿಸುವ ಒಂದೆರಡು ಪದಗಳೋ ರಚನಾ ವೈಶಿಷ್ಟ್ಯವೋ ಲಯವೋ ಇದ್ದರೆ ಸಾಕು. ಅದು ಸಂಪೂರ್ಣ ವಾಸ್ತವತೆಯ ಭಾಸ ಕೊಟ್ಟುಬಿಡುತ್ತದೆ. ಹೀಗಾಗಿ ಸಾಹಿತ್ಯಕ್ಕಿರುವ ಸ್ಪಷ್ಟತೆ (Clarity) ಚಿತ್ರಕಲೆಗೆ ಬರುವುದಿಲ್ಲ.

ಭಾಷೆಯೊಳಗೆ ಪ್ರತಿಯೊಂದು ಶಬ್ದಕ್ಕೂ ಒಂದು ಸ್ವತಂತ್ರ ಅರ್ಥ ಅಥವಾ ಕಲ್ಪನೆಯಿದೆ.ಕೆಲವು ಶಬ್ದಗಳಿಗೆ ಹಲವಾರು ಅರ್ಥಗಳಿರಬಹುದು.ಸಂದರ್ಭಾನುಸಾರ ಅರ್ಥಗಳು ಬದಲಾಗಬಹುದು.ಚಿತ್ರಕಲೆಯ ಮಾಧ್ಯಮಗಳಾದ ರೇಖೆ ಬಣ್ಣಗಳಿಗೆ



ನಿಶ್ಚಿತವಾದ ಅರ್ಥವಿಲ್ಲ. ಅವು ಪರಿಸ್ಥಿತಿಗೆ ತಕ್ಕಂತೆ ಅರ್ಥ ವ್ಯತ್ಯಾಸವಾಗುತ್ತಾ ಹೋಗುತ್ತವೆ. ಮಾಧ್ಯಮದ ವಿಷಯದಲ್ಲಿಯೂ ಹಾಗೇ, ಇಂದಿನ ಕಲಾವಿದ ರೇಖೆ ಬಣ್ಣಗಳನ್ನಷ್ಟೇ ತನ್ನ ಮಾಧ್ಯಮವನ್ನಾಗಿ ಇಟ್ಟುಕೊಂಡಿಲ್ಲ, ಕೊಲಾಜ್ ಮಾಧ್ಯಮದಲ್ಲಿ ಕಾಗದದ ಚೂರುಗಳನ್ನು, ಬಣ್ಣದ ವಸ್ತುಗಳ ಚೂರುಗಳನ್ನು ಬಳಸಿ ಹೊಸ ಪ್ರಯೋಗಗಳನ್ನು ಮಾಡಲು ನಮಗೆ ವಿಶಾಲವಾದ ಮಾರ್ಗವಿದೆ. ಸಾಹಿತ್ಯಕ್ಕೆ ಇಲ್ಲಿಯೂ ಮಿತಿಗಳಿವೆ.

ಸಾಹಿತ್ಯಕೃತಿಯಲ್ಲಿ ಸಮಸ್ತ ಅರ್ಥವೂ ಭಾಷೆಯೊಂದರಲ್ಲೇ ಮೈದಾಳಿಕೊಳ್ಳಬೇಕು. ಭಾಷೆಯೊಂದೇ ಅದರ ಸಾಧನ ಸಾಮಗ್ರಿಯಾದುದರಿಂದ ಅಲ್ಲಿ ಅದು 'ಧ್ವನಿ' ಪೂರ್ಣವಾಗಿರಬೇಕಾಗುತ್ತದೆ. ಚಿತ್ರಕಲೆಯಲ್ಲಿ ಹಾಗಿಲ್ಲ. ಶಾಕ ಅಭಿವ್ಯಕ್ತಿಗೆ (Verbal Expression) ಹೆಚ್ಚಾಗಿ ಅಂಟಿಕೊಂಡಿರುವ ನಮ್ಮ ಸಮಾಜ ಅಶಾಬ್ಲಿಕ ಅಭಿವ್ಯಕ್ತಿಯ (Nonsleybal Expression) ಮಹತ್ವವನ್ನು ಹೆಚ್ಚಾಗಿ ಗಮನಿಸುವುದಿಲ್ಲ. ಇದಕ್ಕೆ ನಮ್ಮ ಶಿಕ್ಷಣ ಪದ್ಧತಿಯೇ ಕಾರಣ

ಎನ್ನಬಹುದು. ಸಾಹಿತ್ಯದಲ್ಲಿ ಭಾಷೆಯ ಬಳಕೆಯನ್ನು ಮೂರು ವಿಧವಾಗಿ ವಿಂಗಡಿಸಬಹುದು. ಒಂದು ವ್ಯಾವಹಾರಿಕ, ನಂತರ ಶಾಸ್ತ್ರೋಕ್ತ, ಕೊನೆಯದಾಗಿ ಭಾವೋಪಯೋಗಿ, ಈ ಮೂರನೆಯ ಹಂತದ ಭಾಷಾ ಬಳಕೆಯಲ್ಲಿ ಕವಿ ಹೇಳುವಾಗ ಕಣ್ಣಿಗೆ ಕಟ್ಟುವಂತೆ ಚಿತ್ರಗಳ ಮೂಲಕ ಅಭಿವ್ಯಕ್ತಿಯನ್ನು ಪಡೆಯುತ್ತದೆ. ಭಾವತೀವ್ರತೆಗೆ ಅಥವಾ ಅಮೂರ್ತಭಾವಗಳಿಗೆ ಅಭಿವ್ಯಕ್ತಿಯನ್ನು ಕೊಡುವಾಗ ಅಮೂರ್ತಪ್ರಪಂಚದ ಚಿತ್ರಗಳನ್ನೇ ಆಶ್ರಯಿಸಬೇಕಾಗುತ್ತದೆ.

ಇತ್ತೀಚೆಗೆ ಸಾಹಿತ್ಯ ಕಲೆಯ ವ್ಯಾಪ್ತಿಯಲ್ಲಿ 'ಇಮೇಜ್' ಎಂಬ ಶಬ್ದ ಹೆಚ್ಚು ಪ್ರಚಲಿತ. ಕನ್ನಡ ಭಾಷೆಯಲ್ಲಿ ಇದಕ್ಕೆ ಸಮನಾಗಿ 'ಪ್ರತಿಮೆ' ಎಂದು ಬಳಸುವುದು (Poetic Image) ಕವಿಯ ಭಾವನುಭಾವಗಳನ್ನು ಶಬ್ದಚಿತ್ರಗಳ ಮೂಲಕ ಸಂವಹನಗೊಳಿಸುವ ಉದ್ದೇಶದ್ದಾಗಿರುತ್ತದೆ. ಹೀಗೆ ಎಷ್ಟೋ ಸಂದರ್ಭಗಳಲ್ಲಿ ಕವಿಯ ಉದ್ದೇಶ ಕಲಾವಿದನಂತೆ ಚಿತ್ರಸೃಷ್ಟಿಯೇ ಆಗಿರುತ್ತದೆ.ಸಾಹಿತ್ಯವನ್ನು ತೆಗೆದು ನೋಡಬಹುದು.ಅದರ ರೂಪನಿಷ್ಪತ್ತಿ ಹೇಗೆ ಎಂಬುದನ್ನು ಪರಿಶೀಲಿಸಬಹುದು, ನಮ್ಮ ವ್ಯವಹಾರದಿಂದಲೂ ತಿಳಿಯಬಹುದು. ಆದರೆ ಚಿತ್ರಕಲೆಯಲ್ಲಿ ಸಾಹಿತ್ಯದಂತೆ ನಿಘಂಟು ನೋಡಲು ಸಾಧ್ಯವಿಲ್ಲ. ನೋಡುಗನ ಚಿತ್ತವೈಶಾಲ್ಯತೆಯೇ ಅವನ ನಿಘಂಟು. ಸಾಹಿತ್ಯದಲ್ಲಿ ಅರ್ಥವಿಲ್ಲದ ಕಾವ್ಯ, ಲೇಖನ ಇರುವುದು ಸಾಧ್ಯವಿಲ್ಲ. ಆದರೆ ಚಿತ್ರಕಲೆಯಲ್ಲಿ ಇದು ಸಾಧ್ಯ.ನಮ್ಮ ಎಲ್ಲ ಕಲಾಕೃತಿಗಳಲ್ಲಿ ಅರ್ಥವೇ ಮುಖ್ಯವಲ್ಲ, ಕೆಲ ಕೃತಿಗಳಲ್ಲಿ ಅರ್ಥ ಹುಡುಕುತ್ತಾ ಹೋದರೆ ಸಿಗುವುದೇ ಇಲ್ಲ.

ಚಿತ್ರ ಹಾಗೂ ಕಾವ್ಯದ ನಡುವಿನ ಭೇದವನ್ನು ಲೇಸಿಂಗ್ ಎಂಬ ಜರ್ಮನ್ ವಿಮರ್ಶಕ ತನ್ನ ಲಕೂನ್' ಗ್ರಂಥದಲ್ಲಿ ಹೀಗೆ ವಿವರಿಸಿದ್ದಾನೆ. “ಕಾವ್ಯ ಸಂಗೀತದಂತೆ ಶೃತಿಗಮ್ಯ ಕಲೆ, ಚಿತ್ರ ದೃಷ್ಟಿಗಮ್ಯ ಕಲೆ. ಆದರೆ ವ್ಯಕ್ತಿಯ ಮನಸ್ಸಿನ ಕ್ರಿಯಾಶೀಲತೆಯನ್ನು ವಿವರಿಸುವಾಗ ಸಾಹಿತ್ಯ ಮೇಲುಗೈ ಪಡೆಯುತ್ತದೆ. ನಿಶ್ಚಲ ವಸ್ತುವಿನ ಚಿತ್ರಣದಲ್ಲಿ ಚಿತ್ರಕಲೆಯೇ ಮೇಲುಗೈ ಪಡೆಯುತ್ತದೆ.ಅಂದರೆ ಒಂದು ರಮಣೀಯ ದೃಶ್ಯವನ್ನು



ಎಷ್ಟು ಯಶಸ್ವಿಯಾಗಿ ಚಿತ್ರಿಸಬಹುದೋ, ಅಷ್ಟೇ ಯಶಸ್ವಿಯಾಗಿ ಸಾಹಿತ್ಯದಲ್ಲಿ ವರ್ಣಿಸಲಾಗುವುದಿಲ್ಲ. ಆದ್ದರಿಂದಲೇ “ಒಂದು ಚಿತ್ರ ನೂರು ವಾಕ್ಯಗಳಿಗಿಂತ ಮಿಗಿಲು” ಎಂದು ಹೇಳುತ್ತಾರೆ.ಚಿತ್ರಕಲಾ ಮಾಧ್ಯಮ ಇರುವುದು ನೋಡುವುದಕ್ಕೆ ನೋಡಿ ಅನುಭವಿಸುವುದಕ್ಕೇ ಹೊರತು ಓದುವುದಕ್ಕಲ್ಲ. ಕಲಾಕೃತಿಯನ್ನು ಪೂರ್ಣವಾಗಿ ಸವಿಯುವುದಕ್ಕೂ ವೀಕ್ಷಕರಿಗೆ ಶಕ್ತಿ ಬೇಕು, ಸಿದ್ಧತೆ ಬೇಕು. ಕಲಾವಿದನ ಭಾವನೆ ಅರ್ಥಮಾಡಿ ಕೊಳ್ಳಬೇಕಾದ ವೀಕ್ಷಕನು ತನ್ನ ಅಂತಃದೃಷ್ಟಿಯನ್ನು ಹರಿತ ಮಾಡಿಕೊಳ್ಳಲೇಬೇಕು.

ಸಾಹಿತ್ಯದ ಪ್ರೌಢಿಮೆಯ ಅಂತಃಸತ್ವ ತಿಳಿಯಬೇಕಿದ್ದರೆ, ಭಾಷೆಯ ಪ್ರೌಢತೆ ಬೆಳೆಸಿಕೊಂಡರೆ ಮಾತ್ರ ಸಾಧ್ಯ. ಹಾಗೆಯೇ ಕಲಾಕೃತಿಯನ್ನು ಅರ್ಥ ಮಾಡಿಕೊಳ್ಳ ಬೇಕಿದ್ದರೆ, ಚಿತ್ರಕಲೆಯ ಭಾಷಾಪ್ರೌಢಿಮೆ ತಿಳಿದಿರಲೇಬೇಕು. ಇಲ್ಲದೇ ಹೋದರೆ ಸಾಮಾನ್ಯರಲ್ಲಿ ನಾವೂ ಒಬ್ಬರು ಸಾಮಾನ್ಯರಾಗಿ ಉಳಿಯುತ್ತೇವೆ.

ಸಾಹಿತ್ಯ ಜನರನ್ನು ತಲುಪುವುದಕ್ಕೆ ಸುಲಭಸಾಧ್ಯವಾದ ಹಲವಾರು ಮಾರ್ಗಗಳಿವೆ. ಸಾಹಿತ್ಯಕೃತಿಯ ಸಹಸ್ರಾರು, ಲಕ್ಷಾಂತರ ಪ್ರತಿಗಳನ್ನು ಮುದ್ರಿಸಿ ಕಡಿಮೆ ಬೆಲೆಯಲ್ಲಿ ಮಾರಾಟ ಮಾಡಿ ಜನತೆಗೆ ತಲುಪಿಸಬಹುದು.ಸಾಹಿತ್ಯಕ್ಕೆ ಇರುವ ಇಂಥ ಸೌಲಭ್ಯ ಚಿತ್ರಕ್ಕಿಲ್ಲ. ದೈನಂದಿನ ವ್ಯವಹಾರದಲ್ಲೂ ಅಷ್ಟೇ, ಸಾಹಿತ್ಯದಷ್ಟು ವಿಸ್ತೃತ ಪಾತ್ರ ಚಿತ್ರಕಲೆ ವಹಿಸುವುದಿಲ್ಲ. ಇಂದಿನ ಶಿಕ್ಷಣದ ವ್ಯವಸ್ಥೆಯಲ್ಲೇ ಕಲೆಗೆ ಪ್ರಾಧ್ಯಾನ್ಯತೆ ಇಲ್ಲ. ಹೀಗಾಗಿ ಚಿತ್ರಕಲೆ ಸಂವಹನದ ದೃಷ್ಟಿಯಿಂದ ದೂರವೇ ಉಳಿದಿದೆ. ರಾಷ್ಟ್ರೀಯ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕೆಲವು ಸಮಕಾಲೀನ ಕಲಾ ಚಳುವಳಿಗಳು ಸಾಹಿತ್ಯದ ಮೇಲೆ ನೇರವಾದ ಪ್ರಭಾವವನ್ನು ಬೀರಿವೆ. ಆದ್ದರಿಂದಲೇ ಇಂಪ್ರೆಷನಿಸಂ, ನ್ಯಾಚುರಲಿಸಂ ಮುಂತಾದ ಇಸಂಗಳು ಹುಟ್ಟಿಬೆಳೆದವು. ಅದೆಷ್ಟೋ ಸಲ ಸಾಹಿತಿಗಳೇ ಚಿತ್ರಕಲೆಯ ಚಳುವಳಿಗಳನ್ನು ಬೆಳೆಸಿದ್ದಾರೆ. ಉದಾ : ಚಿತ್ರಕಲೆಯ ಫ್ಯೂಚರಿಸಂ ಚಳುವಳಿಯ ನೇತೃತ್ವ ವಹಿಸಿದ್ದು ಇಟಲಿಯ ಸಾಹಿತಿ ಮಾರಿನೆಟ್ಟಿ.

ಹೀಗೆ ಸಾಹಿತ್ಯ ಮತ್ತು ಕಲೆಗಳು ಬೇರೆ ಬೇರೆ ಮಾಧ್ಯಗಳಾದರೂ ಕೆಲವು ಸಂದರ್ಭಗಳಲ್ಲಿ ಒಂದಾಗಿ ಸಾಗಿದ್ದು ಇತಿಹಾಸದಿಂದ ತಿಳಿದುಬರುತ್ತದೆ. ಸಾಹಿತ್ಯ ಭಾಷೆಯನ್ನು ಸಂಕೇತವನ್ನಾಗಿ ಮಾಡುವ ಕ್ರಿಯೆಯಂತೆ, ಚಿತ್ರಕಲೆಯಲ್ಲಿ ಸಂಕೇತವನ್ನು ಭಾಷೆಯನ್ನಾಗಿ ಪರಿವರ್ತಿಸುವ ಪ್ರಕ್ರಿಯೆ ನಡೆಯುತ್ತದೆ. ಒಟ್ಟಿನಲ್ಲಿ ಅಭಿವ್ಯಕ್ತಿ ಮಾಧ್ಯಮದ ನೆಲೆಯಲ್ಲಿರುವ ರೀತಿಗಳಿಂದಾಗಿ ಅದು ಸಂವಹನದ ದೃಷ್ಟಿಯಿಂದ ಸಾಹಿತ್ಯದಷ್ಟು ಸುಲಭವಾಗಿ ಜನರನ್ನು ತಲುಪಲು ಸಾಧ್ಯವಾಗಿಲ್ಲ, ಸಾಧ್ಯವಾಗುವುದೂ ಇಲ್ಲ.

**ಸರಕಾರದ ನಿರ್ಲಕ್ಷ್ಯ ಧೋರಣೆ :**

ಬ್ರಿಟಿಷ್ ಆಳ್ವಿಕೆಗೆ ಮುಂಚೆ ಅಲ್ಲಲ್ಲಿ ದೇಶದ ತುಂಬ ಚಿಕ್ಕಚಿಕ್ಕ ರಾಜರುಗಳು ಸಾಮ್ರಾಜ್ಯ ಕಟ್ಟಿಕೊಂಡು ರಾಜ್ಯವಾಳುವಾಗ ಲಲಿತಕಲೆಗಳಿಗೆ ರಾಜಾಶ್ರಯ ನೀಡಿದ್ದು ತಿಳಿದುಬರುತ್ತದೆ. ನಂತರದಲ್ಲಿ ಬಂದ ಬ್ರಿಟಿಷರು ಕೂಡಾ ಲಲಿತಕಲೆಗಳಿಗೆ ಪ್ರೋತ್ಸಾಹ



ನೀಡಲು ಅನೇಕ ಕಲಾಶಾಲೆಗಳನ್ನು ತೆರೆದು ಆ ಮೂಲಕ ಪಾಶ್ಚಿಮಾತ್ಯ ಕಲಾ ಶಿಕ್ಷಣವನ್ನು ದೇಶೀಯ ಕಲಾ ಶಿಕ್ಷಣದ ಜೊತೆ ಕಲಿಯಲು ಅವಕಾಶ ಮಾಡಿಕೊಟ್ಟರು. ಬೇರೆ ರಾಜ್ಯಗಳಿಗೆ ಕರ್ನಾಟಕವನ್ನು ಹೋಲಿಕೆ ಮಾಡಿದಾಗ ಲಲಿತಕಲೆ ವಿಷಯ ಶಿಕ್ಷಣದಲ್ಲಿ ಒಂದು ಸ್ಥಾನ ಪಡೆಯುವಲ್ಲಿ ವಿಫಲವಾಗಿದ್ದು ತಿಳಿದುಬರುತ್ತದೆ. ಅದಕ್ಕೆ ಪ್ರಮುಖ ಕಾರಣ, ನಮ್ಮ

ರಾಜಕೀಯ ನಾಯಕರ ಇಚ್ಛಾಶಕ್ತಿಯ ಕೊರತೆ. ಕರ್ನಾಟಕದಲ್ಲಿ ಸಂಗೀತಕ್ಕೊಂದು ವಿ.ವಿ. ಪ್ರಾರಂಭಿಸಿದರು. ಅದರ ಕೆಳಗೆ ಬರತಕ್ಕ ಸಂಗೀತ ಕಾಲೇಜುಗಳು ಬೆರಳೆಣಿಕೆಯಷ್ಟು, ಹೀಗಿದ್ದಾಗ್ಯೂ ಅದಕ್ಕೊಂದು ವಿವಿ ಮಾಡಿದ್ದು ಸಂತಸದ ವಿಚಾರ. ಆದರೆ ಕರ್ನಾಟಕದ ಉದ್ದಕ್ಕೂ ನೂರಕ್ಕಿಂತ ಹೆಚ್ಚು ಲಲಿತಕಲಾ ಬೋಧನೆಯ ಕಾಲೇಜುಗಳಿದ್ದರೂ ಅದಕ್ಕಾಗಿ ಒಂದು ವಿ.ವಿ. ಇಲ್ಲದಿರುವುದು ಕರ್ನಾಟಕದ ಮಟ್ಟಿಗೆ ತುಂಬಾ ಶೋಚನೀಯ. ಇತ್ತೀಚೆಗೆ ಬಾದಾಮಿಯ ಐತಿಹಾಸಿಕ ವ್ಯಾಪ್ತಿಯಲ್ಲಿ ೪೦೦ ಎಕರೆ ಸ್ಥಳ ಗುರುತಿಸಿ ಅದಕ್ಕೆ ಡಾ. ಎಸ್.ಸಿ. ಪಾಟೀಲ ಎಂಬುವರನ್ನು ವಿಶೇಷಾಧಿಕಾರಿಯಾಗಿ ನೇಮಿಸಿದ್ದರು. ಅವರು ಸಾಕಷ್ಟು ಅಧ್ಯಯನ ಮಾಡಿ ವಿ.ವಿ. ಅವಶ್ಯಕತೆ ಕುರಿತು ವರದಿ ಸಲ್ಲಿಸಿದರು. ಇತ್ತೀಚೆಗೆ ನಿವೃತ್ತಿಯನ್ನೂ ಹೊಂದಿದರು. ದೃಶ್ಯಕಲಾ ವಿ.ವಿ. ಸಲುವಾಗಿ ಸಾಕಷ್ಟು ಹೋರಾಟಗಳು ನಡೆದರೂ ಸರಕಾರದವರು ಅದಕ್ಕೆ ಬಜೆಟ್ ಬಿಡುಗಡೆ ಮಾಡಿ ವಿ.ವಿ. ಕಾರ್ಯರೂಪಕ್ಕೆ ಬರುವಂತೆ ಮಾಡಲಿಲ್ಲ. ಈ ವಿ.ವಿ. ಸಲುವಾಗಿ ಯಾವ ಶಾಸಕರೂ ಸಚಿವರೂ ಗಂಭೀರವಾದ ಇಚ್ಛಾಶಕ್ತಿ ಪ್ರದರ್ಶಿಸಿ ಕಾರ್ಯರೂಪಕ್ಕೆ ಬರುವಂತೆ ಮಾಡಲಿಲ್ಲ.

ನಿರ್ಲಕ್ಷಿತ ಅಭಿವ್ಯಕ್ತಿ ಕ್ಷೇತ್ರವಾದ ಲಲಿತಕಲೆಗೆ ಪ್ರಾಮುಖ್ಯತೆ ದೊರೆಯಬೇಕು. ಪ್ರತಿ ಜಿಲ್ಲೆಯಲ್ಲಿಯೂ ಲಲಿತಕಲಾ ಪ್ರದರ್ಶನದ ಗ್ಯಾಲರಿಗಳಾಗಬೇಕು. ಶಾಲೆ ಕಾಲೇಜುಗಳಲ್ಲಿ ಚಿತ್ರಕಲೆ ಪಠ್ಯ ಜಾರಿಗೆ ಬರಬೇಕು. ಚಿತ್ರಕಲೆ ಬೋಧನೆ ಮಾಡಲು ರಾಜ್ಯಾದ್ಯಂತ ಪ್ರಾಥಮಿಕ ಹಂತದಿಂದ ಕಾಲೇಜು ಹಂತದವರೆಗೆ ಶಿಕ್ಷಕರನ್ನು ಭರ್ತಿಮಾಡಬೇಕು. ಆಗ ಮಾತ್ರ ಲಲಿತಕಲೆಗೆ ಒಂದು ಪ್ರಾಮುಖ್ಯತೆ ಬರುತ್ತದೆ.

**ಕನ್ನಡದ ಕಲಾವಿದರು :**

ಕರ್ನಾಟಕದಲ್ಲಿ ಕಲಾವಿದರಿಗೇನು ಕೊರತೆಯಿಲ್ಲ. ಅಜಂತಾದಲ್ಲಿ ವೀರ ಪುಲ ಕೇಶಿಯ ಚಿತ್ರ ರಚಿಸಿದವರಿಂದ ಹಿಡಿದು ಮುಮ್ಮಡಿ ಕೃಷ್ಣರಾಜರ ಕಾಲದ ಆಸ್ಥಾನ ಕಲಾವಿದ ತಿಪ್ಪಣ್ಣನವರೆಗೆ ಅನೇಕ ಸುಪ್ರಸಿದ್ಧ ಕಲಾವಿದರು ಜನಿಸಿ ಲಲಿತಕಲಾ ಕ್ಷೇತ್ರವನ್ನು ಉಳಿಸಿ ಬೆಳೆಸಿದವರಿದ್ದಾರೆ.ಕೆ. ವೆಂಕಟಪ್ಪ. ರವಿವರ್ಮ, ಅನಕ್ಷರಸ್ಥ ಕಲಾವಿದ ಬಿ.ಆರ್. ಕೊಟ್ಯಾಳಕರ, ಆರ್.ಜಿ.ರಾಯಕರ, ವಾಯ್. ಸುಬ್ರಮಣ್ಯಂರಾಜು, ಪಿ.ಆರ್.ತಿಪ್ಪೇಸ್ವಾಮಿ, ಎನ್.ಜಿ. ಪಾವಂಜಿ, ಮಂಜಯ್ಯ, ಯು.ಪಿ. ರಾಮ, ಎಫ್.ಬಿ. ಯಲವಟ್ಟಿ, ವ್ಯಂಗ್ಯಚಿತ್ರ ರಚನೆಯಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಿದ ಆರ್.ಕೆ. ಲಕ್ಷ್ಮಣ, ಪಿ.ಎಸ್. ರಾಯ್, ಎಮ್.ವಿ. ಮಿಣಜಗಿ, ಡಿ.ಯು. ಹಾಲಬಾವಿ, ಟಿ.ಪಿ. ಅಕ್ಕಿ, ಎಸ್.ಎನ್.

ಸ್ವಾಮಿ, ಕೇಶವಯ್ಯ, ಎನ್. ಹನುಮಯ್ಯ, ಎಫ್.ಎಮ್. ಸೂಫಿ, ಎಸ್.ಎಸ್. ಕುಕ್ಕೆ, ರುಮಾಲೆ ಚನ್ನಬಸವಯ್ಯ, ಎಮ್.ಟಿ.ವಿ. ಆಚಾರ್ಯ, ಎಮ್.ಬಿ. ಪಾಟೀಲ ಇತ್ತೀಚೆಗೆ ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಮೈಸೂರಿನವರೇ ಆದ ಜಿ.ಎಲ್.ಎನ್. ಸಿಂಹ ಇವರಲ್ಲದೆ ಸಾವಿರಾರು ಜನ ಚಿತ್ರಕಲಾವಿದರು ಈ ನಾಡಿನಲ್ಲಿ ಜನಿಸಿ ಕಲಾಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ.

**ಮೈಸೂರು ಚಿತ್ರ ಶೈಲಿ :**

ದೇಶದ ಇತಿಹಾಸದಲ್ಲಿ ಕಾಂಗ್ರಾ, ರಜಪೂತ, ಪಾಲಿ, ಪಹಾಡಿ ಮುಂತಾದ ಶೈಲಿಗಳಂತೆ ಕರ್ನಾಟಕದಲ್ಲಿ ಪ್ರಮುಖವಾಗಿ ಎರಡು ಶೈಲಿಗಳು ಮುಂಚೂಣಿ ಯಲ್ಲಿದ್ದದ್ದನ್ನು ಕಾಣಬಹುದು. ೧) ದಖ್ಖನಿ ಶೈಲಿ ೨) ಮೈಸೂರು ಶೈಲಿ. ಮೊದಲನೆಯದು ಮೊಘಲ್ ಅರಸರ ಸಾಂಪ್ರದಾಯಿಕ ಶೈಲಿಯದ್ದಾದರೆ, ಎರಡನೆಯದ್ದು ಮೈಸೂರು ಅರಸರ ಸಾಂಪ್ರದಾಯಿಕತ್ವದ್ದು, ಮೈಸೂರು ಶೈಲಿಯ ಚಿತ್ರಗಳ ಪ್ರಮುಖ ಲಕ್ಷಣಗಳಾದ ದುಂಡನೆಯ ಮೈಕಟ್ಟು, ತುಂಬುಗಲ್ಲದ ದುಂಡನೆಯ ಮುಖ, ಉದ್ದನೆಯ ಮೂಗು, ವಿಶಾಲವಾದ ಉದ್ದನೆಯ ಕಣ್ಣು, ದಪ್ಪದಾದ ಕಣ್ಣುಗುಡ್ಡೆಗಳು, ಕೈ ಕಾಲುಗಳಲ್ಲಿ ಬಿಗಿದಾದ ಅಲಂಕೃತ ಆಭರಣಗಳು, ಮಂದ ಮತ್ತು ತಂಪಾದ ವರ್ಣ ಬಳಕೆ, ಆಕೃತಿಗಳ ಹಿಂದೆ ತಂಪಾದ ಸಮತಟ್ಟು ಬಣ್ಣದ ಬಳಕೆ, ದೇವ-ದೇವತೆಗಳ ಚಿತ್ರಗಳನ್ನು ಭಾವಪ್ರಧಾನದ ಜೊತೆ ಅಲಂಕಾರ ಪ್ರಧಾನವಾಗಿಯೂ ರಚಿಸಿದ್ದು ತುಂಬಾ ಆಕರ್ಷಣೀಯವಾಗಿ ಕಾಣುತ್ತವೆ. ಇಲ್ಲಿನ ಸೋಮವಂಶದ ಕ್ಷತ್ರಿಯ ಕಲಾವಿದರೂ ಅಲ್ಲದೆ ಅವಧೂತ ಪಾಪಣ್ಣ, ಗೋಪಾಲಯ್ಯ, ತಿಮ್ಮರಾಯಪ್ಪ, ರಂಗಯ್ಯ ಮೇಸ್ತ್ರಿ, ಲಕ್ಷ್ಮಯ್ಯ, ವೆಂಕಟಸುಬ್ಬ, ಸೀತಾರಾಮಯ್ಯ, ಸುಬ್ಬಯ್ಯ, ದುರ್ಗದ ಕೃಷ್ಣಪ್ಪ, ವಾಯ್, ಸುಬ್ರಮಣ್ಯಂರಾಜು, ರಾಮನರಸಯ್ಯ ಇವರೊಂದಿಗೆ ಶ್ರೀಮತಿ ಸುಶೀಲಾದೇವಿ, ಹೇಮಲತಾ, ಉಷಾರಾಜ, ರೇಣುಕಾ ಮುಂತಾದ ಮಹಿಳಾ ಕಲಾವಿದರ ಕೊಡುಗೆ ಕೂಡಾ ಸ್ಮರಣೀಯ.

**ನಮ್ಮ ನಾಡಿನ ಕಲಾ ಸಾಹಿತಿಗಳು :**

ನಮ್ಮ ನಾಡಿನ ಸಾಹಿತ್ಯ ಕ್ಷೇತ್ರದಲ್ಲಿ ಕಲಾಸಾಹಿತ್ಯದ ಪಾತ್ರ ತುಂಬಾ ಕಡಿಮೆ.ಅದಕ್ಕೆ ಕಾರಣವೆಂದರೆ ಚಿತ್ರಕಲಾವಿದರಾದವರೆಲ್ಲರೂ ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡಲು ಸಾಧ್ಯವಾಗಿಲ್ಲ. ಕಲಾವಿದರಲ್ಲಿ ಸಾಹಿತ್ಯ ಅಧ್ಯಯನದಿಂದ ದೂರ ಉಳಿದವರೇ ಹೆಚ್ಚು. ಕೆಲವೇ ಕೆಲ ಜನರು ಕಲಾವಿದರಾಗಿ ಕಲಾಕೃತಿ ರಚನೆಯೊಂದಿಗೆ ಕಲಾ ಸಾಹಿತ್ಯ ರಚನೆಯಲ್ಲಿಯೂ ಕ್ರಿಯಾಶೀಲರಾಗಿ ಕೆಲಸ ಮಾಡಿದ್ದು ತಿಳಿದು ಬರುತ್ತದೆ. ಪಿ.ಆರ್.ತಿಪ್ಪೇಸ್ವಾಮಿ, ಆರ್.ಜಿ. ರಾಯಕರ, ಎಸ್.ಕೆ. ರಾಮಚಂದ್ರರಾವ್, ಬಿ.ವಿ.ಕೆ. ಶಾಸ್ತ್ರಿ, ಅ.ಲ. ನರಸಿಂಹನ್, ಡಿ.ಎನ್. ಮರಿಶಾಮಾಚಾರ್, ಡಿ.ವಿ. ಹಾಲಭಾವಿ, ಮಿಣಜಗಿ, ದಂಡಾವತಿಮಠ, ಡಾ. ಎಸ್.ಸಿ. ಪಾಟೀಲ, ಚಿ.ಸು.ಕೃಷ್ಣಶೆಟ್ಟಿ, ಎಸ್. ಧನಲಕ್ಷ್ಮೀ, ವಿ.ಜಿ. ಅಂದಾನಿ ಮುಂತಾದವರು ಕಲಾ ಸಾಹಿತಿಗಳು.

ಲಲಿತಕಲಾ ಕ್ಷೇತ್ರದ ಕುರಿತು ವಿಶ್ವಾಸಾರ್ಹ ಅಧ್ಯಯನಶೀಲ ಬರವಣಿಗೆಗಳಿಂದ ಕನ್ನಡದಲ್ಲಿ ಒಂದಿಷ್ಟು ಗ್ರಂಥಗಳು ಹೊರಬಂದು ಕನ್ನಡ ಸಾಹಿತ್ಯ ಶ್ರೀಮಂತ ಗೊಂಡಿದೆ. ಇಲ್ಲಿಯವರೆಗೆ ಸುಮಾರು ೭೦೦ ಗ್ರಂಥಗಳು ಬಂದಿವೆ. ೧೦೦ ಕ್ಕೂ ಮಿಕ್ಕಿ ಪಿಎಚ್.ಡಿ., ೧೦೦ ಕ್ಕೂ ಮಿಕ್ಕಿ ಎಂಫಿಲ್, ನಾಲ್ಕಾರು ಡಿ.ಲಿಟ್. ಗ್ರಂಥಗಳು ದೃಶ್ಯಕಲೆಯ ಮೇಲೆ ಹೊರಬಂದಿವೆ. ಮೈಸೂರಿನವರೇ ಆದ ಡಿ.ಎ. ಉಪಾಧ್ಯಾಯರು - ४೦ ಕ್ಕೂ ಹೆಚ್ಚು, ಎಲ್. ಶಿವಲಿಂಗಪ್ಪನವರು ३೦ ಕ್ಕೂ ಹೆಚ್ಚು ಗ್ರಂಥಗಳನ್ನು ರಚಿಸಿದ್ದು ತಿಳಿದುಬರುತ್ತದೆ. ಇದೇ ನೆಲದಲ್ಲಿ ನವನಿಧಿ, ಶ್ರೀತತ್ವನಿಧಿ ಎಂಬ ಕಲಾಸಾಹಿತ್ಯದಂತಹ ಅನೇಕ ವಿಶೇಷ ಗ್ರಂಥಗಳು ಹೊರಬಂದಿದ್ದು ಇತಿಹಾಸದಿಂದ ತಿಳಿದುಬರುತ್ತದೆ. (ಸ್ಥಳಾಭಾವದಿಂದ ಎಲ್ಲ ಕಲಾವಿದರನ್ನು ಹೆಸರಿಸಲಾಗಿಲ್ಲ).

**ಆಗಬೇಕಾದದ್ದು :**

ಕರ್ನಾಟಕದಲ್ಲಿನ ಚಿತ್ರಕಲೆ ದೇಶವಿದೇಶಗಳಲ್ಲಿ ಹಬ್ಬಿ ಹೆಮ್ಮರವಾಗಿ ಬೆಳೆಯ ಬೇಕಾದರೆ ಸರಕಾರದವರು ಮತ್ತು ಕ.ಸಾ.ಪ.ದವರು ಈ ಕೆಳಗಿನ ಒಂದಿಷ್ಟು ಅಂಶಗಳನ್ನು ಜಾರಿಗೆ ತರಬೇಕಾದ ಅವಶ್ಯಕತೆಯಿದೆ.

- ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕಲಾಸಾಹಿತ್ಯ ಪ್ರಕಟನೆಗೆ ಪ್ರತಿ ವರ್ಷ ಒಂದಷ್ಟು ಬಜೆಟ್ ಮೀಸಲಾತಿ ಇಟ್ಟುಕೊಳ್ಳಬೇಕು. ಸಂಶೋಧನಾ ಪ್ರಬಂಧಗಳನ್ನು ಪ್ರಕಟಿಸುವ ಕೆಲಸ ಗಂಭೀರವಾಗಿ ನಡೆಯಬೇಕು.
- ಕ.ಸಾ.ಪ. ಕೂಡಾ ತನ್ನ ವಾರ್ಷಿಕ ಪ್ರಕಟಣೆಯಲ್ಲಿ ದೃಶ್ಯಕಲಾ ಸಾಹಿತ್ಯ ಪ್ರಕಟನೆಗೆ ಮನಸ್ಸು ಮಾಡಬೇಕು.
- ಶಿಕ್ಷಣದಲ್ಲಿ ದೃಶ್ಯಕಲಾ ಬೋಧನೆ ಪ್ರೌಢಶಿಕ್ಷಣದವರೆಗೆ ಕಡ್ಡಾಯವಾಗ ಬೇಕು.
- ದೃಶ್ಯಕಲಾ ವಿಶ್ವವಿದ್ಯಾಲಯ ಬಾದಾಮಿಯಲ್ಲಿ ತುರ್ತಾಗಿ ಸ್ಥಾಪನೆಯಾಗ ಬೇಕು.
- ಪ್ರತಿ ಜಿಲ್ಲೆಯಲ್ಲಿ ಕಲಾ ಪ್ರದರ್ಶನಕ್ಕಾಗಿ ಒಂದು ಆರ್ಟ್ ಗ್ಯಾಲರಿ ನಿರ್ಮಾಣ ವಾಗಬೇಕು.
- ಕಲಾಸಾಹಿತಿಗಳಿಗೆ ಕಾರ್ಯಾಗಾರ ಏರ್ಪಡಿಸುವುದು, ಕನ್ನಡ ಕಲಾಸಾಹಿತ್ಯ ಬೇರೆಬೇರೆ ಭಾಷೆಗಳಲ್ಲಿ ಪ್ರಕಟವಾಗುವಂತೆ ಮಾಡುವುದು.
- ಕಲಾವಿದರಿಗೆ ಪ್ರಶಸ್ತಿ ನೀಡುವಂತೆ ಕಲಾಸಾಹಿತಿಗಳಿಗೂ ಪ್ರಶಸ್ತಿ ನೀಡಿ ಪ್ರೋತ್ಸಾಹಿಸಬೇಕು.
- ನಾಡಿನ ಪಾರಂಪರಿಕ ಕಲೆಗಳ ರಕ್ಷಣೆ ಮತ್ತು ಅಭಿವೃದ್ಧಿಗೆ ಯೋಜನೆ ರೂಪುಗೊಳ್ಳಬೇಕು.

# ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

## ಕಾರ್ಯಕಾರಿ ಸಮಿತಿ


ನಾಡೋಜ ಡಾ. ಮನು ಬಳಿಗಾರ್, ಅಧ್ಯಕ್ಷರು

ಡಾ. ರಾಜಶೇಖರ ಹತಗುಂದಿ, ಗೌರವ ಕಾರ್ಯದರ್ಶಿ

ಶ್ರೀ ವ.ಚ. ಚನ್ನೇಗೌಡ, ಗೌರವ ಕಾರ್ಯದರ್ಶಿ

ಶ್ರೀ ಪಿ. ಮಲ್ಲಿಕಾರ್ಜುನಪ್ಪ, ಗೌರವ ಕೋಶಾಧ್ಯಕ್ಷರು

ಶ್ರೀ ಮಾಯಣ್ಣ, ಬೆಂಗಳೂರು ನಗರ
ಶ್ರೀ ಚಿ.ಮಾ.ಸುಧಾಕರ, ಬೆಂ. ಗ್ರಾಮಾಂತರ
ಶ್ರೀ ಸಿಂ.ಲಿಂ. ನಾಗರಾಜ್, ರಾಮನಗರ
ಶ್ರೀ ನಾಗಾನಂದ ಕೆಂಪರಾಜ್, ಕೋಲಾರ
ಶ್ರೀ ಕೈವಾರ ಎನ್. ಶ್ರೀನಿವಾಸ, ಚಿಕ್ಕಬಳ್ಳಾಪುರ
ಶ್ರೀಮತಿ ಬಾ.ಹ. ರಮಾಕುಮಾರಿ, ತುಮಕೂರು
ಡಾ. ದೊಡ್ಡಮಲ್ಲಯ್ಯ, ಚಿತ್ರದುರ್ಗ
ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ, ದಾವಣಗೆರೆ
ಶ್ರೀ ಡಿ.ಬಿ. ಶಂಕರಪ್ಪ, ಶಿವಮೊಗ್ಗ
ಡಾ. ವೈ.ಡಿ. ರಾಜಣ್ಣ, ಮೈಸೂರು
ಶ್ರೀ ಬಿ.ಎಸ್. ವಿನಯ್, ಚಾಮರಾಜನಗರ
ಶ್ರೀ ಸಿ.ಕೆ. ರವಿಕುಮಾರ ಚಾಮಲಾಪುರ, ಮಂಡ್ಯ
ಶ್ರೀ ನಾಯಕರಹಳ್ಳಿ ಮಂಜೇಗೌಡ, ಹಾಸನ
ಶ್ರೀ ಬಿ.ಎಸ್. ಲೋಕೇಶ ಸಾಗರ್, ಕೊಡಗು
ಶ್ರೀ ಕುಂದೂರು ಅಶೋಕ, ಚಿಕ್ಕಮಗಳೂರು
ಶ್ರೀ ನೀಲಾವರ ಸುರೇಂದ್ರ ಅಡಿಗ, ಉಡುಪಿ
ಶ್ರೀ ಎಸ್.ಪ್ರದೀಪಕುಮಾರ ಕಲ್ಕೂರ, ದಕ್ಷಿಣ ಕನ್ನಡ
ಶ್ರೀಮತಿ ಮಂಗಲಾ ಶ್ರೀಶೈಲ್ ಮೆಟಗುಡ್ಡ, ಬೆಳಗಾವಿ
ಶ್ರೀ ಮಲ್ಲಿಕಾರ್ಜುನ ಅಯ್ಯಪ್ಪ ಯಂಡಿಗೇರಿ, ವಿಜಯಪುರ
ಶ್ರೀ ಶ್ರೀಶೈಲ ಈರಪ್ಪ ಕರಿಶಂಕರಿ, ಬಾಗಲಕೋಟೆ
ಡಾ. ಲಿಂಗರಾಜ ರು. ಅಂಗಡಿ, ಧಾರವಾಡ
ಶ್ರೀ ಲಿಂಗಯ್ಯ ಬಿ. ಹಿರೇಮಠ, ಹಾವೇರಿ
ಶ್ರೀ ಶರಣು ಗೋಗೇರಿ, ಗದಗ
ಶ್ರೀ ಅರವಿಂದ ಕರ್ಕಿಕೋಡಿ, ಉತ್ತರ ಕನ್ನಡ
ಶ್ರೀ ವೀರಭದ್ರ ಸಿಂಪಿ, ಗುಲ್ಬರ್ಗ
ಶ್ರೀ ಸಿದ್ಧಪ್ಪ ಎಸ್. ಹೊಟ್ಟಿ, ಯಾದಗಿರಿ

ಶ್ರೀ ಸುರೇಶ ಚನಶೆಟ್ಟಿ, ಬೀದರ್
ಡಾ.ಬಸವಪ್ರಭು ಪಾಟೀಲ ಬೆಟ್ಟದೂರು,ರಾಯಚೂರು
ಶ್ರೀ ರಾಜಶೇಖರ ಗು. ಅಂಗಡಿ, ಕೊಪ್ಪಳ
ಶ್ರೀ ಸಿದ್ಧರಾಮ ಕಲ್ಮಠ, ಬಳ್ಳಾರಿ
ಶ್ರೀ ಬಸವರಾಜ ಸಿದ್ರಾಮಪ್ಪ ಮಸೂತಿ, ಮಹಾರಾಷ್ಟ್ರ
ಶ್ರೀ ಎಚ್.ಬಿ. ಶಿವಕುಮಾರ್, ಆಂಧ್ರ ಪ್ರದೇಶ
ಡಾ. ತಮಿಳ್ ಸೆಲ್ವಿ, ತಮಿಳುನಾಡು
ಶ್ರೀ ಸುಬ್ರಹ್ಮಣ್ಯ ವಿ.ಭಟ್, ಕೇರಳ
ಶ್ರೀ ಮಲ್ಲಿಕಾರ್ಜುನ ಬದಾಮಿ, ಗೋವಾ

೮೪ನೆಯ ಅ.ಭಾ. ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷರು :
ಡಾ. ಚಂದ್ರಶೇಖರ ಕಂಬಾರ

ವಿಶ್ವವಿದ್ಯಾಲಯ ಪ್ರತಿನಿಧಿ, ತುಮಕೂರು ವಿ.ವಿ. :
ಡಾ. ಗೀತಾ ವಸಂತ

ವಿಶ್ವವಿದ್ಯಾಲಯ ಪ್ರತಿನಿಧಿ, ಕಲಬುರಗಿ ವಿ.ವಿ. :
ಡಾ. ರಮೇಶ ಲಂಡನಕರ

ಸರ್ಕಾರದ ಪ್ರತಿನಿಧಿ :
ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮಹಿಳಾ ಪ್ರತಿನಿಧಿಗಳು :
ಡಾ. ವಸುಂಧರಾ ಭೂಪತಿ ಮತ್ತು
ಡಾ. ಎಸ್.ಪಿ. ಉಮಾದೇವಿ

ಪರಿಶಿಷ್ಟ ಜಾತಿ ಪ್ರತಿನಿಧಿಗಳು :
ಶ್ರೀಮತಿ ಬಿ.ಟಿ. ಲಲಿತಾ ನಾಯಕ್ ಮತ್ತು
ಶ್ರೀ ಪಿ.ಎ. ಮೇಘಣ್ಣನವರ

ಪರಿಶಿಷ್ಟ ಪಂಗಡ ಪ್ರತಿನಿಧಿ :
ಡಾ. ನೀಲಗಿರಿ ತಳವಾರ

ಸಂಘಸಂಸ್ಥೆಗಳ ಪ್ರತಿನಿಧಿ :
ಶ್ರೀ ಶೇಖರಗೌಡ ಮಾಲಿಪಾಟೀಲ

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಚರ್ಚೆಯಾದ ಅನೇಕ ವಿಷಯಗಳು ಗಾಳಿಯಲ್ಲಿ ತೇಲಿ ಹೋಗಬಾರದು ಎಂದು ಈ ಸಂಪುಟದಲ್ಲಿ ಸಂಗ್ರಹಿಸಿದ್ದೇವೆ. ಸಮ್ಮೇಳನದಲ್ಲಿ ನಡೆಯುವ ಚಿಂತನ, ಮಂಥನ ಸಮ್ಮೇಳನ ಮುಗಿದ ನಂತರ ಮರೆತು ಹೋಗಬಾರದು, ಅದು ದಾಖಲಾಗಿ ಇರಬೇಕು ಹಾಗೂ ಮತ್ತೆ ಮತ್ತೆ ಚರ್ಚೆಗೆ ಒಳಗಾಗಬೇಕು ಎಂಬುದು ಸಮ್ಮೇಳನ ಸಂಪುಟಗಳನ್ನು ಪ್ರಕಟಿಸುವ ಹಿಂದಿರುವ ಮುಖ್ಯ ಕಾಳಜಿ. ಮತ್ತು ಸಮ್ಮೇಳನದಲ್ಲಿ ಎಷ್ಟು ಮಹತ್ವ ಪೂರ್ಣ ಚರ್ಚೆಯಾಗುತ್ತದೆ ಎಂಬುದನ್ನು ತಿಳಿಸಲು ಇದು ಒಂದು ಅವಕಾಶ. "ನುಡಿಗಂಧ" ಸಂಪುಟವು ೮೩ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದಲ್ಲಿ ಮಂಡಿಸಿದ ಪ್ರಬಂಧಗಳನ್ನು ಶಾಶ್ವತಗೊಳಿಸುತ್ತದೆ ಎಂಬ ನಂಬಿಕೆ ನನ್ನದು.

ನಾಡೋಜ ಡಾ.ಮನು ಬಳಿಗಾರ್
ಅಧ್ಯಕ್ಷರು

ಕನ್ನಡ ಸಾಹಿತ್ಯ ಪರಿಷತ್ತು
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ,
ಬೆಂಗಳೂರು – ೫೬೦ ೦೧೮